ಮನುಷ್ಯ ಜಾತಿ ತಾನೊಂದೆ ವಲಂ

# ಕಲ್ಯಾಣ ಕಿರಣ

## ೮೫ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕಲಬುರ್ಗಿ


ಪ್ರಧಾನ ಸಂಪಾದಕರು


ಕಲ್ಯಾಣ ಕಿರಣ-85ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕಲಬುರ್ಗಿ

JNANA002102



ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.

# ಕಲ್ಯಾಣ ಕಿರಣ

## ೮೫ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

## ದಿನಾಂಕ ೫, ೬ ಹಾಗೂ ೭ ಫೆಬ್ರವರಿ ೨೦೨೦

## ಸ್ಥಳ : ಗುಲಬರ್ಗಾ ವಿಶ್ವವಿದ್ಯಾಲಯ ಆವರಣ, ಕಲಬುರಗಿ


ಪ್ರಧಾನ ಸಂಪಾದಕರು

**ನಾಡೋಜ ಡಾ. ಮನು ಬಳಿಗಾರ್**

ಸಂಪಾದಕರು

**ಡಾ. ಪದ್ಮರಾಜ ದಂಡಾವತಿ**



**ಕನ್ನಡ ಸಾಹಿತ್ಯ ಪರಿಷತ್ತು**

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

KALYANA KIRANA - (A collection of papers submitted at 85th Akhila Bharatha Kannada Sahitya Sammelana, Kalburgi) Chief Editor: Nadoja Dr. Manu Baligar, Edited by: Dr. Padmaraj Dandavati Published by: Kannada Sahitya Parishattu, Pampa Mahakavi Road, Chamarajapete, Bengaluru-560018 Pages: xii +506 Price: Rs.350-00: 2021

ಪ್ರಥಮ ಮುದ್ರಣ: ೨೦೨೧

ಪ್ರತಿಗಳು : ೫೦೦

ಬೆಲೆ : ಮುನ್ನೂರ ಐವತ್ತು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

**ಪ್ರಕಟಣಾ ಸಮಿತಿ**

# ನಾಡೋಜ ಡಾ. ಮನು ಬಳಿಗಾರ್

ಅಧ್ಯಕ್ಷರು

| | |
|---|---|
| ಸಮ್ಮೇಳನಾಧ್ಯಕ್ಷರು | ಡಾ. ಎಚ್.ಎಸ್. ವೆಂಕಟೇಶಮೂರ್ತಿ |
| | ೮೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ |
| ಗೌರವ ಕಾರ್ಯದರ್ಶಿಗಳು ಹಾಗೂ | |
| ಪ್ರಕಟಣಾ ವಿಭಾಗದ ರಾಜ್ಯ ಸಂಚಾಲಕರು | ಡಾ.ಪದ್ಮರಾಜ ದಂಡಾವತಿ |

**ಸದಸ್ಯರು**

| | |
|---|---|
| ಶ್ರೀ ಜರಗನಹಳ್ಳಿ ಶಿವಶಂಕರ್ | ಶ್ರೀ ಎ.ಆರ್. ಉಜ್ಜನಪ್ಪ |
| ಡಾ. ಮೂಡಾಕೂಡು ಚಿನ್ನಸ್ವಾಮಿ | ಶ್ರೀ ಸಂಜಯ ಅಡಿಗ |
| ಪ್ರೊ ಧರಣೇಂದ್ರ ಕುರಕುರಿ | ಶ್ರೀ ಪಾರಂಪಳ್ಳಿ ನರಸಿಂಹ ಐತಾಳ್ |
| ಶ್ರೀ ರಂಜಾನ್ ದರ್ಗಾ | ಗೌರವ ಕಾರ್ಯದರ್ಶಿಗಳು |

ಡಾ. ಬಿ.ಕೆ. ರವಿ

ಶ್ರೀ ಕೆ. ರಾಜಕುಮಾರ್

ಡಾ. ತಮಿಳ್ ಸೆಲ್ವಿ

ಡಾ. ದೊಡ್ಡಮಲ್ಲಯ್ಯ

ಡಾ. ಎಚ್.ಎಲ್. ಪುಷ್ಪ

ಗೌರವ ಕೋಶಾಧ್ಯಕ್ಷರು

ಶ್ರೀ ಪಿ. ಮಲ್ಲಿಕಾರ್ಜುನಪ್ಪ

**ನಿರ್ದೇಶಕರು**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮುಖಪುಟ ಕಲಾವಿನ್ಯಾಸ: ಚಂದ್ರಕಾಂತ ಪಟ್ಟಣ

ಮುದ್ರಣ : ಬಿ.ಎಂ.ಶ್ರೀ. **ಆಫ್‌ಸೆಟ್ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು**

## ಅಧ್ಯಕ್ಷರ ಮಾತು

ಕರ್ನಾಟಕ ಏಕೀಕರಣ ಸಾಧನೆಯ ಜೊತೆಗೆ ಕನ್ನಡ ಭಾಷೆ ಮತ್ತು ಸಾಹಿತ್ಯ ಹಾಗೂ ಸಂಸ್ಕೃತಿಗಳ ಸಂವರ್ಧನೆಯನ್ನೂ ಧ್ಯೆಯವಾಗಿಸಿಕೊಂಡು ಕನ್ನಡ, ಕನ್ನಡಿಗ, ಕರ್ನಾಟಕದ ಏಳಿಗೆಯನ್ನು ಗುರಿಯಾಗಿಸಿಕೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತಿಗೆ ಇದಿಗ ೧೦೩ ವರ್ಷಗಳು ತುಂಬುತ್ತಿವೆ. ಶತಮಾನವನ್ನು ದಾಟಿ ಹೊಸಕಾಲ ಮಾನಗಳಿಗೆ ಅನುಗುಣವಾಗಿ 'ಕನ್ನಡ-ಕನ್ನಡಿಗ-ಕರ್ನಾಟಕತ್ವ'ವನ್ನು ಬಲಿಷ್ಠಗೊಳಿಸುವ ಸವಾಲುಗಳನ್ನು ಸ್ವೀಕರಿಸುತ್ತಲೇ ಹೊಸ ಹೊಸ ಕಾರ್ಯಯೋಜನೆ ಗಳನ್ನು ರೂಪಿಸಿಕೊಳ್ಳುತ್ತಾ, ಅವುಗಳನ್ನು ಕಾರ್ಯರೂಪಕ್ಕೆ ತರುತ್ತಾ, ಮುನ್ನಡೆಯುತ್ತಿರುವ ಪರಿಗೆ ವಿಶ್ವದಾದ್ಯಂತ ಇರುವ ಕನ್ನಡಿಗರು ಸ್ಪಂದನೆ ನೀಡುತ್ತಿರುವುದು ನಮಗೆ ಹರ್ಷ ತಂದಿದೆ. ಇನ್ನಷ್ಟು ಇಂಥ ಕಾರ್ಯಯೋಜನೆಗಳನ್ನು ಕೈಗೊಳ್ಳಲು ಹುರುಪು ತುಂಬುತ್ತಿದೆ ಎಂಬುದು ನನ್ನ ಭಾವನೆ.

ಮೊದಲಿನಿಂದ ಕನ್ನಡ ಸಾಹಿತ್ಯ ಪರಿಷತ್ತು ಹಲವಾರು ಅಖಿಲ ಭಾರತ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸಿಕೊಂಡು ಬರುತ್ತಿರುವುದು ನಿಮ್ಮೆಲ್ಲರಿಗೂ ತಿಳಿದಿರುವ ಸಂಗತಿ. ಅಲ್ಲಿ ಕನ್ನಡ ನಾಡು, ನುಡಿ, ಗಡಿ, ಜಲ, ಕೃಷಿ, ವಿಜ್ಞಾನ ಮುಂತಾದ ಸಾಂಸ್ಕೃತಿಕ ಸಂಗತಿಗಳನ್ನು ಕುರಿತಂತೆ ನಾಡಿನ ಖ್ಯಾತ ವಿದ್ವಾಂಸರು, ತಜ್ಞರು ಮಂಡಿಸುವ ವಿಚಾರಗಳನ್ನು ಕನ್ನಡ ಜನಸ್ತೋಮ ಆಲಿಸಿ ತಲೆದೂಗಿ ಮೆಚ್ಚುಗೆ ವ್ಯಕ್ತಪಡಿಸುವುದೂ ಉಂಟು. ಆದರೆ ಆ ರೀತಿಯ ಚರ್ಚೆ, ಸಂವಾದಗಳು ಗಾಳಿಯಲ್ಲಿ ತೇಲಿ ಮಾಯವಾಗ ಬಾರದು ಎಂಬುದು ನಮ್ಮ ಅಂಬೋಣ. ಸಮ್ಮೇಳನದಲ್ಲಿ ಮಂಡಿತವಾದ ವಿಚಾರಗಳನ್ನು ಲೇಖನಗಳಾಗಿಸಿ ಪುಸ್ತಕ ರೂಪದಲ್ಲಿ ಹೊರತರುವ ಸಂಪ್ರದಾಯವನ್ನು ಪರಿಷತ್ತು ಅನುಸರಿಸಿಕೊಂಡು ಬರುತ್ತಿದ್ದು, ಇತ್ತೀಚಿನ ವರ್ಷಗಳಲ್ಲಿ ನಿಂತು ಹೋಗಿದ್ದ ಆ ಪರಿಪಾಠವನ್ನು ಪುನರಾರಂಭಿಸಿ ಪ್ರಬಂಧಗಳನ್ನು ಸಂಕಲಿಸಿ ಪ್ರಕಟಿಸಿ ಸಹೃದಯರಿಗೆ ನೀಡುವ ಕಾರ್ಯ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಇದರ ಮೂಲಕ ಸಮ್ಮೇಳನಗಳಲ್ಲಿ ಕಂಡುಕೊಂಡ ಫಲಿತವನ್ನು ಶಾಶ್ವತಗಳಿಸುವ ಉದ್ದೇಶ ನಮ್ಮದು.

ಕಲಬುರಗಿಯಲ್ಲಿ ಜರುಗಿದ ೮೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಮ್ಮ ನಿರೀಕ್ಷೆಗೂ ಮೀರಿ ಯಶಸ್ಸು ಕಂಡಿದೆ. ಕನ್ನಡ ಸಾಹಿತ್ಯ, ಸಂಸ್ಕೃತಿ, ನೆಲ, ಜಲ, ಭಾಷೆ ಕುರಿತಾದ ಗೋಷ್ಠಿಗಳಿಗೆ ಜನಸಾಮಾನ್ಯರು ಸ್ಪಂದಿಸಿದ ರೀತಿ ಅನನ್ಯವಾದದ್ದು.

ಸಮ್ಮೇಳನದ ಮುಖ್ಯ ವೇದಿಕೆ ಹಾಗೂ ಸಮಾನಾಂತರ ವೇದಿಕೆಗಳಲ್ಲಿನ ಗೋಷ್ಠಿಗಳು ಜನಮನವನ್ನು ಆಕರ್ಷಿಸಿದವು. ಅರ್ಥಪೂರ್ಣ ಸಂವಾದಕ್ಕೆ ಹಾದಿಮಾಡಿಕೊಟ್ಟ ಕನ್ನಡದ ಜಾತ್ರೆ, ಜನಸಾಮಾನ್ಯರ ಕ್ರಿಯಾಶೀಲ ಭಾಗವಹಿಸುವಿಕೆಯ ಮೂಲಕ ಕನ್ನಡದ ಬಗೆಗಿನ ನಮ್ಮ ಗೌರವಾಭಿಮಾನಗಳು ಮತ್ತಷ್ಟು ಹೆಚ್ಚುವಂತೆ ಮಾಡಿತು. ಸಾಹಿತ್ಯ ಸಮ್ಮೇಳನದ ಯಶಸ್ಸಿಗೆ ಕರ್ನಾಟಕ ಸರ್ಕಾರದ ಆರ್ಥಿಕ ನೆರವು, ಕಲಬುರಗಿ ಜಿಲ್ಲಾಡಳಿತದ ತೊಡಗಿಸಿಕೊಳ್ಳುವಿಕೆ ಕಾರಣವಾಯಿತು. ಇಂಥ ಅಭೂತಪೂರ್ವ ಸಮಾರಂಭಕ್ಕೆ ಕಾರಣವಾದವರೆಲ್ಲರನ್ನೂ ಕನ್ನಡ ಸಾಹಿತ್ಯ ಪರಿಷತ್ತು ಕೃತಜ್ಞತಾಪೂರ್ವಕವಾಗಿ ನೆನಪಿಸಿಕೊಳ್ಳುತ್ತದೆ.

ಸಮ್ಮೇಳನದಲ್ಲಿ ಆಯೋಜಿಸಿದ್ದ ಸುಮಾರು ೨೨ ಗೋಷ್ಠಿಗಳಲ್ಲಿ ಕನ್ನಡ ನಾಡಿನ ಖ್ಯಾತ ವಿದ್ವಾಂಸರೂ, ಸಾಹಿತಿಗಳೂ, ಹೋರಾಟಗಾರರೂ, ಕೃಷಿ ತಜ್ಞರೂ, ವಿಷಯ ಪರಿಣತರೂ ಭಾಗವಹಿಸಿ ವಿದ್ವತ್ಪೂರ್ಣವಾದ ಪ್ರಬಂಧ ಮಂಡಿಸಿದ್ದಾರೆ. ಇವೆಲ್ಲವೂ ಕನ್ನಡ ಹಾಗೂ ಕರ್ನಾಟಕದ ಜನರ ಭವಿಷ್ಯದ ಬದುಕಿಗೆ ದಿಕ್ಸೂಚಿಯಾಗಬಲ್ಲಂಥವು.

ಹೀಗೆ ಶ್ರಮವಹಿಸಿ ನಡೆಸಿದ ಮಹತ್ವಪೂರ್ಣವಾದ ಚಿಂತನ, ಮಂಥನದ ಸಾರ ವ್ಯರ್ಥ ವ್ಯಯವಾಗಬಾರದು ಅಲ್ಲಿ ಆಡಿದ ಮಾತುಗಳನ್ನು, ಮಂಡಿಸಲಾದ ವಿಚಾರಗಳನ್ನು ತಕ್ಷಣದ ಚಪ್ಪಾಳೆ, ಮೆಚ್ಚುಗೆಗಳಿಗೆ ಮಾತ್ರ ಸೀಮಿತವಾಗಿಸದೆ ಅವುಗಳನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತಿರಬೇಕು, ಉಲ್ಲೇಖಿಸುತ್ತಿರಬೇಕು ಮತ್ತು ಅವುಗಳಿಂದ ಎಚ್ಚರಗೊಳ್ಳುತ್ತಿರಲೂ ಇರಬೇಕು ಎನ್ನುವ ಉದ್ದೇಶದಿಂದ ಕೃತಿ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ತಮ್ಮೆಲ್ಲ ಒತ್ತಡಗಳ ಮಧ್ಯೆ ಸಕಾಲಕ್ಕೆ ಪ್ರಬಂಧಗಳನ್ನು ಕಳಿಸಿಕೊಟ್ಟು ಕೃತಿ ಹೊರಬರಲು ಕಾರಣಕರ್ತರಾದ ಎಲ್ಲಾ ವಿದ್ವಾಂಸರಿಗೂ ನಾನು ಆಭಾರಿಯಾಗಿದ್ದೇನೆ.

೮೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿಚಾರ ಮಂಡನೆ ಮಾಡಿ ಅದನ್ನು ಯಶಸ್ವಿಯಾಗಿಸಿದ ಎಲ್ಲರಿಗೂ ಹಾಗೂ ಸಮ್ಮೇಳನದ ಮಾತು, ಚರ್ಚೆ, ವಿಚಾರ ನಿರೂಪಣೆಗಳಿಗೆ ಕೃತಿರೂಪ ಧಾರಣೆ ಮಾಡಿದ ಡಾ. ಪದ್ಮರಾಜ ದಂಡಾವತಿ ಅವರಿಗೂ ಪರಿಷತ್ತು ಕೃತಜ್ಞವಾಗಿದೆ.

ದಿನಾಂಕ : ೦೧-೦೨-೨೦೨೧

**ನಾಡೋಜ ಡಾ. ಮನು ಬಳಿಗಾರ್**

ಅಧ್ಯಕ್ಷರು

## ಸಂಪಾದಕರ ನುಡಿ

ಈಗ ಕಲ್ಯಾಣ ಕರ್ನಾಟಕ ಎಂದು ಹೆಸರು ಪಡೆದಿರುವ ಹೈದರಾಬಾದ್ ಕರ್ನಾಟಕ ಕಲಬುರಗಿಯಲ್ಲಿ ನಡೆದ ೮೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಂದೆ ನಡೆಯುವ ಸಾಹಿತ್ಯ ಸಮ್ಮೇಳನಗಳಿಗೆ ಒಂದು ಅನನ್ಯ ಎನ್ನುವಂಥ ಮಾದರಿಯನ್ನು ಹಾಕಿದೆ. ಕಲಬುರಗಿ ಸಮ್ಮೇಳನ ಹೇಗೆ ಆಗುತ್ತದೆಯೋ ಎಂದು ಎಲ್ಲರೂ ಅನುಮಾನ ಪಡುತ್ತಿದ್ದಾಗಲೇ ಕನ್ನಡ ಸಾಹಿತ್ಯ ಪರಿಷತ್ತಿನ ಮಾರ್ಗದರ್ಶನದಲ್ಲಿ ಅಲ್ಲಿನ ಜಿಲ್ಲಾ ಆಡಳಿತ ಅತ್ಯಂತ ಅಪೂರ್ವ ರೀತಿಯಲ್ಲಿ ಸಮ್ಮೇಳನವನ್ನು ಸಂಘಟಿಸಿತು. ಇದು ನಾನು ನೋಡಿದ ಎಲ್ಲ ಸಾಹಿತ್ಯ ಸಮ್ಮೇಳನಗಳಲ್ಲಿ ಅತ್ಯುತ್ತಮವಾಗಿ ಸಂಘಟಿತವಾದ ಸಮ್ಮೇಳನ.

೨೦೨೦ರ ಫೆಬ್ರುವರಿ ಮೊದಲ ವಾರ ಕಲಬುರಗಿಯ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ೮೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಒಟ್ಟು ೨೨ ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಪ್ರಧಾನ ವೇದಿಕೆಯಲ್ಲಿ ೧೦ ಗೋಷ್ಠಿಗಳು ನಡೆದರೆ ಇನ್ನು ಎರಡು ಕಡೆಗಳಲ್ಲಿ ನಡೆದ ಸಮಾನಾಂತರ ಗೋಷ್ಠಿಗಳಲ್ಲಿ ಕ್ರಮವಾಗಿ ಏಳು ಮತ್ತು ಐದು ಗೋಷ್ಠಿಗಳು ನಡೆದುವು. ಪ್ರಧಾನ ವೇದಿಕೆಯಲ್ಲಿ ನಡೆದ ಒಂದು ವಿಶೇಷ ಉಪನ್ಯಾಸ ಇದರಲ್ಲಿ ಸೇರಿಲ್ಲ. ಸನ್ಮಾನ, ಬಹಿರಂಗ ಅಧಿವೇಶನಗಳು ಕೂಡ ಪ್ರತ್ಯೇಕವೇ.

ಕಲಬುರಗಿಯಲ್ಲಿ ಹಿಂದೆ ೧೯೮೭ ರಲ್ಲಿ ಸಾಹಿತ್ಯ ಸಮ್ಮೇಳನ ನಡೆದಿತ್ತು. ಆ ಸಮ್ಮೇಳನದ ಅಧ್ಯಕ್ಷರಾಗಿದ್ದವರು ಡಾ. ಸಿದ್ದಯ್ಯ ಪುರಾಣಿಕರು. ಸರಿಯಾಗಿ ೩೩ ವರ್ಷಗಳ ನಂತರ ಮತ್ತೆ ಕಲಬುರಗಿಯಲ್ಲಿ ಸಮ್ಮೇಳನ ಸಂಘಟಿತವಾಗಿತ್ತು. ಈ ಸಮ್ಮೇಳನದ ಬಗೆಗೆ ಜನರ ಹಸಿವು, ನಿರೀಕ್ಷೆ ಎಷ್ಟು ಇತ್ತು ಎಂದರೆ ನಿತ್ಯವೂ ಲಕ್ಷಗಟ್ಟಲೇ ಜನರು ವಿವಿಧ ಕಾರ್ಯಕ್ರಮಗಳಿಗೆ ಬಂದರು. ಅವರ ಉತ್ಸಾಹ ಮೇಲೆ ಅರಿಯದ್ದು, ಸಾಹಿತ್ಯ ಸಮ್ಮೇಳನ ಕುರಿತು ಲಘುವಾದ ಮಾತು ಆಡುವವರು ಇಂಥ ಸಮ್ಮೇಳನಗಳಲ್ಲಿ ಯಾವ ಪೂರ್ವಗ್ರಹಗಳೂ ಇಲ್ಲದೇ ಕುಳಿತು ನೋಡಬೇಕು. ಬಹುಶಃ ಇನ್ನು ಎಷ್ಟು ವರ್ಷ ಕಳೆದರೂ, ಎಷ್ಟೇ ಅನನಕೂಲಗಳು ಇದ್ದರೂ ಜನರು ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುವ ಆಸಕ್ತಿಯನ್ನು ಕಳೆದುಕೊಳ್ಳುವುದಿಲ್ಲ ಎಂದು ನನಗೆ ಖಚಿತವಾಗಿ ಅನಿಸುತ್ತದೆ.

ಸಮ್ಮೇಳನ ನಡೆಯುವಾಗಲೆಲ್ಲ ಅಲ್ಲಿ ಮೂರು ದಿನಗಳ ಕಾಲ ಏನೆಲ್ಲ ಚರ್ಚೆಯಾಗಬೇಕು ಎಂಬ ಕುರಿತು ಸಾಹಿತ್ಯ ಪರಿಷತ್ತು ಬಹಳ ಸಮಾಲೋಚನೆ ಮಾಡುತ್ತದೆ. ಗೋಷ್ಠಿಯ ವಿಷಯಗಳು, ಅವುಗಳನ್ನು ಕುರಿತು ಯಾರು ಮಾತನಾಡಬೇಕು ಎಂಬ ಕುರಿತೂ ತಲೆ ಕೆಡಿಸಿಕೊಳ್ಳಬೇಕಾಗುತ್ತದೆ. ಹೀಗೆ ಮೂರು ದಶಕಗಳ ನಂತರ ಒಂದು ಸಮ್ಮೇಳನ ನಡೆಯುವಾಗ ತಮ್ಮ ಕಡೆಯವರು ಹೆಚ್ಚು ಜನ ವೇದಿಕೆಯ ಮೇಲೆ ಇರಲಿ

ಎಂಬ ಒತ್ತಡಗಳೂ ಸಹಜ. ಹಾಗೆಂದು ಇಂಥ ಅಖಿಲ ಭಾರತ ಸಮ್ಮೇಳನಗಳನ್ನು ಜಿಲ್ಲೆ ಅಥವಾ ತಾಲ್ಲೂಕು ಮಟ್ಟಕ್ಕೆ ಇಳಿಸಲು ಆಗದು. ಈ ಸಮತೋಲ ಸಾಧಿಸುವುದು ದೊಡ್ಡ ಕಸರತ್ತಿನ ಕೆಲಸ.

ಪ್ರತಿ ಸಮ್ಮೇಳನ ನಡೆಯುವಾಗಲೂ ಆಯಾ ಭಾಗದ ವಿಚಾರಗಳಿಗೆ, ಸಮಸ್ಯೆಗಳಿಗೆ ಆದ್ಯತೆ ಸಿಗಬೇಕು ಎನ್ನುವುದೂ ಪರಿಷತ್ತಿನ ಮೇಲಿನ ಆಗ್ರಹವಾಗಿರುತ್ತದೆ. ಹೈದರಾಬಾದ್ ಕರ್ನಾಟಕ ಹೇಳಿ ಕೇಳಿ ಹಿಂದುಳಿದ ಪ್ರದೇಶ. ಅಭಿವೃದ್ಧಿಯಿಂದ ವಂಚಿತವಾದ ಪ್ರದೇಶ. ಇಂಥ ವಿಚಾರಗಳೂ ಸಾಹಿತ್ಯ ಸಮ್ಮೇಳನದ ವೇದಿಕೆ ಮೇಲೆ ಚರ್ಚೆಯಾಗಬೇಕು ಎಂಬ ಬಯಕೆಯೂ ಸಹಜವೇ. ಬದುಕು ಬಿಟ್ಟು ಸಾಹಿತ್ಯ ಇರುತ್ತದೆಯೇ? ಕಲಬುರಗಿಯ ಸಾಹಿತ್ಯ ಸಮ್ಮೇಳನದ ಪ್ರಧಾನ ವೇದಿಕೆಯಲ್ಲಿ ನಡೆದ ಮೊದಲ ಗೋಷ್ಠಿಯ ಹೆಸರು ಕಲ್ಯಾಣ ಕರ್ನಾಟಕ : ಅಂದು-ಇಂದು-ಮುಂದು ಎನ್ನುವುದು ಆಗಿತ್ತು ಎಂಬುದು ಈ ದೃಷ್ಟಿಯಿಂದಲೇ ಅರ್ಥಪೂರ್ಣವಾದುದು. ಪ್ರತಿ ಸಮ್ಮೇಳನಗಳ ಹಾಗೆಯೇ ಈ ಸಮ್ಮೇಳನದಲ್ಲಿಯೂ ನೆಲ, ಜಲ, ಜನ ಕುರಿತ ಗೋಷ್ಠಿಗಳು ಇದ್ದುವು.

ಪ್ರಧಾನ ವೇದಿಕೆಯ ಮೇಲೆ ಕನ್ನಡ ಉಳಿಸಿ ಬೆಳೆಸುವ ಬಗೆ ಎಂಬ ವಿಷಯ ಕುರಿತು ಕನ್ನಡದ ಪ್ರಸಿದ್ಧ ಸಂಶೋಧಕರಾದ ಡಾ.ಷ.ಶೆಟ್ಟರ್ ಅವರು ವಿಶೇಷ ಉಪನ್ಯಾಸ ಮಾಡಿದರು. ನಂತರ ಕೆಲವೇ ದಿನಗಳಲ್ಲಿ ಅವರು ನಿಧನರಾದರು. ತಮ್ಮ ಆರೋಗ್ಯ ಅಷ್ಟೇನೂ ಚೆನ್ನಾಗಿ ಇಲ್ಲದೇ ಇದ್ದಾಗಲೂ ಪರಿಷತ್ತಿನ ಆಹ್ವಾನದ ಮೇಲೆ ಪ್ರೊ.ಶೆಟ್ಟರ್ ಅವರು ಕಲಬುರಗಿಗೆ ಸಕಾಲದಲ್ಲಿ ಬಂದು ಉಪನ್ಯಾಸ ನೀಡಿದರು. ಅದು ಅವರ ಕೊನೆಯ ಬಹಿರಂಗ ಭಾಷಣವೂ ಆಗಿತ್ತು ಎಂಬುದು ದುರದೃಷ್ಟಕರ. ಅವರ ಧ್ವನಿಮುದ್ರಿತ ಭಾಷಣವನ್ನು ಲಿಪಿಬದ್ಧಗೊಳಿಸಿ ಕೊಟ್ಟವರು ಅಭಿನವ ಪ್ರಕಾಶನದ ನರವಿಕುಮಾ ಅವರು. ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಧಾರವಾಡ ಸಾಹಿತ್ಯ ಸಮ್ಮೇಳನದ ಉಪನ್ಯಾಸಗಳನ್ನು ಸಂಕಲನಗೊಳಿಸಿ ತರಲು ನನಗೆ ವಹಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರು ಕಲಬುರಗಿ ಸಾಹಿತ್ಯ ಸಮ್ಮೇಳನದ ಭಾಷಣಗಳನ್ನೂ ಸಂಗ್ರಹಿಸಿ ಸಂಪಾದಿಸುವ ಹೊಣೆಯನ್ನೂ ನನಗೇ ವಹಿಸಿದರು.

ಕಲಬುರಗಿ ಸಾಹಿತ್ಯ ಸಮ್ಮೇಳನ ಆಗುತ್ತಿದ್ದಂತೆಯೇ ಕೆಲವೇ ದಿನಗಳಲ್ಲಿ ಕೊರೊನಾ ಎಂಬ ಮಹಾಮಾರಿ ಜಗತ್ತನ್ನು ಆವರಿಸಿ ಹಿಂಡಿ ಹಿಪ್ಪೆ ಮಾಡಿತು. ಹೀಗಾಗಿ ಈ ಸಂಕಲನ ತರುವುದು ತಡವಾಯಿತು. ಎಲ್ಲ ಸಾಹಿತ್ಯ ಸಮ್ಮೇಳನಗಳ ಹಾಗೆಯೇ ಕಲಬುರಗಿ ಸಾಹಿತ್ಯ ಸಮ್ಮೇಳನಕ್ಕೆ ಆಮಂತ್ರಿತರಾದ ಎಲ್ಲರಿಗೂ ತಮ್ಮ ಭಾಷಣ ಮುಗಿಯುತ್ತಿದ್ದಂತೆಯೇ ತಮ್ಮ ಉಪನ್ಯಾಸದ ಪ್ರತಿಯನ್ನು ಪರಿಷತ್ತಿನ ಸಿಬ್ಬಂದಿ ಕೈಗೆ ಕೊಡಬೇಕು ಎಂದು ಕೋರಿಕೊಂಡಾಗಲೂ ಅನೇಕರು ಅದನ್ನು ಪಾಲಿಸಲಿಲ್ಲ. ಹೀಗಾಗಿ ೮೫ನೇ ಸಾಹಿತ್ಯ ಸಮ್ಮೇಳನದಲ್ಲಿ ಆದ ಎಲ್ಲ ಉಪನ್ಯಾಸಗಳು ಇಲ್ಲಿ ಇಲ್ಲ. ಅದಕ್ಕೆ ಪರಿಷತ್ತು ಅಥವಾ ನಾನು ಕಾರಣವಲ್ಲ. ಕೊರೊನಾ ರಜೆ ಮುಗಿದ ನಂತರವೂ, ತಮ್ಮ ಪ್ರಬಂಧ ಕಳಿಸದ ಎಲ್ಲ ಉಪನ್ಯಾಸಕರಿಗೆ ಪತ್ರ ಬರೆದೆವು. ಅದಕ್ಕೆ ಕೆಲವರು ಸ್ಪಂದಿಸಿದರು. ಇನ್ನು ಕೆಲವರು ಸ್ಪಂದಿಸಲಿಲ್ಲ. ಹೀಗಾಗಿ ಕೆಲವು ಉಪನ್ಯಾಸಗಳು ಇಲ್ಲಿ ಇಲ್ಲ ಎಂದು ಅನಿಸಬಹುದು.

ಆದರೆ, ಅವರ ಉಪನ್ಯಾಸದ ಪ್ರತಿಯನ್ನು ತರಿಸಿಕೊಳ್ಳಲು ನಾನು ಮತ್ತು ಪರಿಷತ್ತಿನ ಸಿಬ್ಬಂದಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ ಎಂದು ಮಾತ್ರ ಇಲ್ಲಿ ತಿಳಿಸಲು ಬಯಸುವೆ.

ನಮ್ಮ ಕೋರಿಕೆಯಂತೆ ತಮ್ಮ ಪ್ರಬಂಧಗಳ ಪ್ರತಿಯನ್ನು ಕೊಟ್ಟ ಎಲ್ಲ ವಿದ್ವಾಂಸರಿಗೆ ಪರಿಷತ್ತಿನ ಪರವಾಗಿ ನಾನು ಕೃತಜ್ಞತೆಗಳನ್ನು ಸಲ್ಲಿಸುವೆ. ನಾಡು, ನುಡಿ ಮತ್ತು ಜನರ ಕುರಿತು ಇಲ್ಲಿ ಅನೇಕ ಮಹತ್ವದ ಮಾತುಗಳು ಇವೆ ಎಂದು ಮಾತ್ರ ತಮ್ಮ ಗಮನಕ್ಕೆ ತರಲು ಬಯಸುವೆ. ಉಳಿದುದಕ್ಕೆ ತಮ್ಮ ಕೈಯಲ್ಲಿ ಬೃಹತ್ ಕೃತಿಯೇ ಇದೆ.

ನನ್ನ ಮೇಲೆ ವಿಶ್ವಾಸವಿಟ್ಟು ಈ ಕೆಲಸ ವಹಿಸಿದ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮನು ಬಳಿಗಾರ್ ಅವರಿಗೆ ನಾನು ಋಣಿಯಾಗಿರುವೆ. ಅವರು ನನ್ನ ಮೇಲೆ ಇಟ್ಟಿರುವ ವಿಶ್ವಾಸ, ಪ್ರೀತಿ ಸಾಟಿಯಿಲ್ಲದ್ದು ಎಂದು ಇಲ್ಲಿ ತಿಳಿಸಲು ಬಯಸುವೆ. ಪರಿಷತ್ತಿನ ಕೋಶಾಧ್ಯಕ್ಷರೂ, ನನ್ನ ಹಿತೈಷಿಗಳೂ ಆದ ಪಿ.ಮಲ್ಲಿಕಾರ್ಜುನಪ್ಪ, ಗೌರವ ಕಾರ್ಯದರ್ಶಿಗಳಾದ ಕೆ. ರಾಜಕುಮಾರ್, ಪ್ರಕಟಣ ವಿಭಾಗದ ಬಿ.ಎಂ.ನಾಗರತ್ನ ಮತ್ತು ಬಿ.ಎಂ.ಶ್ರೀ ಅಚ್ಚುಕೂಟದ ಗೆಳೆಯರಿಗೆ ನನ್ನ ವಂದನೆಗಳು ಮತ್ತು ಕೃತಜ್ಞತೆಗಳು ಸಲ್ಲುತ್ತವೆ.

ದಿ: ೧೫-೦೨-೨೦೨೧ **ಡಾ. ಪದ್ಮರಾಜ ದಂಡಾವತಿ**

**ಪರಿವಿಡಿ**

ಕಲ್ಯಾಣ ಕರ್ನಾಟಕ ಅಂದು, ಇಂದು-ಮುಂದು

೧. ೩೭೧ ಜೆ ಅನುಷ್ಠಾನ ಮತ್ತು ಅಡಚಣೆಗಳು

- ಶ್ರೀನಿವಾಸ ಸಿರನೂರಕರ ೩

೨. ಅಧ್ಯಕ್ಷ ಭಾಷಣ: ಕಲ್ಯಾಣ ಕರ್ನಾಟಕ ಆಗಬೇಕಾದುದೇನು?

- ಬಸವರಾಜ ಪಾಟೀಲ ಸೇಡಂ ೧೦

**ಸಮಕಾಲೀನ ಸಾಹಿತ್ಯ : ಚಹರೆ ಮತ್ತು ಸವಾಲುಗಳು**

೩. ಸಾಹಿತ್ಯ ವಿಮರ್ಶೆ

- ವಿ. ಚಂದ್ರಶೇಖರ ನಂಗಲಿ ೧೪

೪. ಸೃಜನಶೀಲ ಸಾಹಿತ್ಯ

- ಡಾ. ಪದ್ಮನಿ ನಾಗರಾಜು ೧೯

೫. ಅನುವಾದ ಸಾಹಿತ್ಯ

- ಕಾಶಿನಾಥ ಅಂಬಲಗೆ ೪೧

೬ ಅಧ್ಯಕ್ಷರ ಭಾಷಣ: ಸತ್ಯಶೋಧನೆಯೇ ಸಂಶೋಧನೆ

- ಡಾ. ವಸಂತ ಕುಷ್ಟಗಿ ೫೩

**ಸ್ತ್ರೀಲೋಕ : ತಲ್ಲಣಗಳು**

೭. ಮಹಿಳೆ ಮತ್ತು ಪ್ರಭುತ್ವ

- ಡಾ. ಆರ್. ಪೂರ್ಣಿಮಾ ೭೨

೮. ಲೋಕದೃಷ್ಟಿ ಮತ್ತು ಮಹಿಳೆ

- ಪ್ರೊ. ಶಿವಗಂಗಾ ರುಮ್ಮಾ ೭೭

೯. ಅಧ್ಯಕ್ಷ ಭಾಷಣ : ಬದಲಾಗುತ್ತಿರುವ ಮಹಿಳಾ ಸಂವೇದನೆಗಳು

- ಡಾ. ಬಿ.ಟಿ. ಲಲಿತಾನಾಯಕ್ ೮೬

**ವಿಶೇಷ ಉಪನ್ಯಾಸ**

೧೦. ಕನ್ನಡ ಉಳಿಸಿ ಬೆಳೆಸುವ ಬಗೆ

- ಡಾ. ಷ. ಶೆಟ್ಟರ್ ೯೨

**ದಲಿತ ಬಂಡಾಯ : ಸ್ಥಿತ್ಯಂತರದ ನೆಲೆಗಳು**

೧೧. ಶೋಷಣೆ ಮತ್ತು ಬಿಡುಗಡೆ

- ಡಾ. ಸುಬ್ರಾವ ಎಂಟೆತ್ತಿನವರ ೧೦೦



೧೨. ಕಲೆ ಮತ್ತು ಸಂಸ್ಕೃತಿ

- ಡಾ. ಕೆ.ಕೃಷ್ಣಪ್ಪ ೧೧೧

೧೩. ಚಳುವಳಿಗಳು

- ಡಾ. ಡಿ.ಜಿ. ಸಾಗರ ೧೨೦

೧೪. ಅಧ್ಯಕ್ಷರ ಭಾಷಣ: ಸಾಹಿತ್ಯ ಮತ್ತು ಸಮಾಜ

- ಪ್ರೊ. ಎಚ್.ಟಿ. ಪೋತೆ ೧೨೮

**ವಚನ - ಕೀರ್ತನ ಸಾಹಿತ್ಯ**

೧೫. ವಚನ ಸಾಹಿತ್ಯ

- ಡಾ. ಕೆ.ರವೀಂದ್ರನಾಥ ೧೩೬

೧೬. ಕೀರ್ತನ - ದಾಸಸಾಹಿತ್ಯ

- ಅರಳುಮಲ್ಲಿಗೆ ಪಾರ್ಥಸಾರಥಿ ೧೪೨

೧೭. ಕಿದಲಿತ ವಚನಕಾರರು

- ಡಾ. ಶರಣಪ್ಪ ಎಸ್. ಮಾಳಗಿ ೧೪೮

೧೮. ಅಧ್ಯಕ್ಷರ ಭಾಷಣ: ವಚನ ಸಾಹಿತ್ಯ - ಕೀರ್ತನೆ ಗೋಷ್ಠಿ

- ಅಪ್ಪಾರಾವ ಅಕ್ಕೋಣ ೧೫೮

**ಕನ್ನಡ ಮಾಧ್ಯಮ ಮತ್ತು ಶಿಕ್ಷಣ**

೧೯. ಕನ್ನಡ ಪಠ್ಯಗಳ ಪ್ರಸ್ತುತತೆ

- ಡಾ. ಬಿ.ವಿ. ವಸಂತಕುಮಾ ೧೬೪

೨೦. ಕನ್ನಡ ಮಾಧ್ಯಮ ಮತ್ತು ಉದ್ಯೋಗ

- ಶ್ರೀ ಆನಂದ್ (ಬನವಾಸಿ ಬಳಗ) ೧೭೦

೨೧. ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮ

- ಡಾ ಹೆಚ್.ಎನ್. ಮುರಳೀಧರ ೧೭೪

೨೨. ಅಧ್ಯಕ್ಷರ ಭಾಷಣ: ಸಮಾನ ಶಿಕ್ಷಣದ ಅಗತ್ಯ

- ಡಾ. ನಿರಂಜನಾರಾಧ್ಯವಿ.ಪಿ ೧೮೫

**ಚಲನಚಿತ್ರ: ಕನ್ನಡ ಸಾಹಿತ್ಯ**

೨೩. ಕನ್ನಡ ಚಲನಚಿತ್ರ : ಮೌಲ್ಯ ಪರಂಪರೆ

- ಕೆ.ಎಂ. ಚೈತನ್ಯ ೧೯೬

೨೪. ಕಿರುತೆರೆ-ಸಾಮಾಜಿಕ ಜವಾಬ್ದಾರಿ

- ಬಿ. ಸುರೇಶ್ ೨೦೬

**ಮಾಧ್ಯಮ : ಸವಾಲುಗಳು**

೨೫. ಮಾಧ್ಯಮಗಳ ಸವಾಲುಗಳು

- ರವೀಂದ್ರ ಭಟ್ಟ ೧೧೪

೧೬ ದೃಶ್ಯ - ಶ್ರವ್ಯ ಮಾಧ್ಯಮ

- ರಮಾಕಾಂತ ಎ.ಎಸ್. ೧೧೬

೧೭. ಅಂತರ್ಜಾಲ ಮಾಧ್ಯಮ

- ಕೋಡಿಬೆಟ್ಟು ರಾಜಲಕ್ಷ್ಮಿ ೧೨೩

೧೮. ಸಾಮಾಜಿಕ ಜಾಲತಾಣ

- ಸುಭಾಷ್ ಹೂಗಾರ್ ೧೨೯

**ಕನ್ನಡ ಭಾಷೆ : ಹೊಸ ತಂತ್ರಜ್ಞಾನ**

೧೯. ಸಾಹಿತ್ಯ ಮತ್ತು ತಂತ್ರಜ್ಞಾನ

- ಟಿ.ಜಿ. ಶ್ರೀನಿಧಿ ೧೩೬

೨೦. ಕನ್ನಡ ತಂತ್ರಜ್ಞಾನದಲ್ಲಿ ಅಳವಡಿಕೆಯ ಸಮಸ್ಯೆಗಳು

- ಬೇಳೂರು ಸುದರ್ಶನ ೧೪೦

೨೧. ಅಧ್ಯಕ್ಷರ ಭಾಷಣ: ಭಾಷೆ-ತಂತ್ರಜ್ಞಾನ: ಕಡಿಮೆಯಾಗಬೇಕಾದ ಕಂದಕ

- ಸುಧೀಂದ್ರ ಹಾಲ್ದೊಡ್ಡೇರಿ ೧೪೬

**ಪುಸ್ತಕ ಲೋಕ**

೨೨. ಕನ್ನಡ ಪುಸ್ತಕೋದ್ಯಮ-ಸವಾಲು

- ಪ್ರಕಾಶ್ ಕಂಬತ್ತಳ್ಳಿ ೧೫೨

೨೩. ಲೇಖಕ-ಓದುಗ ಲೋಕ

- ಡಾ. ಗಾಯತ್ರಿ ನಾವಡ ೧೫೮

೨೪. ಅಧ್ಯಕ್ಷ ಭಾಷಣ: ಮನುಷ್ಯ ಪುಸ್ತಕದೊಂದಿಗೆ ಬೆಳೆಯಬೇಕು

- ಡಾ. ಸತೀಶಕುಮಾರ್ ಹೊಸಮನಿ ೧೬೪

**ಕಲಬುರಗಿ ಜಿಲ್ಲಾ ದರ್ಶನ**

೩೫. ಐತಿಹಾಸಿಕ ಪರಂಪರೆ

- ಡಾ. ಶಂಭುಲಿಂಗ ಎಸ್. ವಾಣಿ ೧೮೦

೩೬. ಪ್ರವಾಸೋದ್ಯಮ ತಾಣಗಳು ಮತ್ತು ಅಭಿವೃದ್ಧಿ

- ಡಾ. ಶಶಿಶೇಖರ ರೆಡ್ಡಿ ೧೮೮

೩೭. ಸಾಹಿತ್ಯ ಮತ್ತು ಸಂಸ್ಕೃತಿ

- ಡಾ. ಅಮೃತಾ ಆರ್. ಕಟಕೆ ೨೦೪

೩೮. ಭಾವೈಕ್ಯತೆಯ ನೆಲೆಗಳು

- ಬೋಡೆ ರಿಯಾಜ್ ಅಹ್ಮದ ೨೧೫

ಕನ್ನಡ ನಾಡು-ನುಡಿ ಮತ್ತು ಯುವ ಕರ್ನಾಟಕ

೩೯. ಯುವಕರ್ನಾಟಕ ಒಂದು ಅವಲೋಕನ

- ಶೋಭಾ ಎಚ್.ಜಿ. ೨೨೪

೪೦, ಕರ್ನಾಟಕದ ಯುವ ಸಮುದಾಯದ ಸವಾಲು ಮತ್ತು ಸಾಧ್ಯತೆಗಳು

- ಅಪ್ಪಗೆರೆ ಸೋಮಶೇಖರ್ ೨೩೧

**ಕೃಷಿ ಮತ್ತು ನೀರಾವರಿ**

೪೧. ಭೂಮಿ-ಬೀಜ-ಬೆಳೆ ಸದ್ಬಳಕೆ

- ರಾಜಶೇಖರ ನಿಂಬರಗಿ ೩೪೦

೪೨. ಜಲಸಂವರ್ಧನೆ ಮತ್ತು ನಿರ್ವಹಣೆ

- ಶಿವಾನಂದ ಕಳವೆ ೩೪೫

೪೩. ಪ್ರಾಕೃತಿಕ ವಿಕೋಪ

- ಸುಮಂಗಲ ಮುಮ್ಮಿಗಟ್ಟಿ

೪೪. ಅಧ್ಯಕ್ಷ ಭಾಷಣ: ರೈತ ಮತ್ತು ಮಾರುಕಟ್ಟೆ

- ಹನುಮನಗೌಡ ಬೆಳಗುರ್ಕಿ ೩೬೧

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ

೪೫. ವೈದ್ಯ ವಿಜ್ಞಾನ

- ಡಾ|| ಎಸ್.ಎಸ್. ಪಾಟೀಲ್ ಮಂದರವಾಡ ೩೭೨

೪೬ ಪರಿಸರ ವಿಜ್ಞಾನ

- ಡಾ|| ಹೆಚ್.ಎಸ್.ಎಂ. ಪ್ರಕಾಶ್ ೩೭೭

೪೭. ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ

- ಡಾ. ಟಿ.ಆರ್. ಅನಂತರಾಮು ೩೮೭

**ಜಾನಪದ ಜಗತ್ತು**

೪೮. ಜನಪದ ಸಾಹಿತ್ಯ

- ಡಾ. ಶೈಲಜಾ ಎನ್. ಬಾಗೇವಾಡಿ ೪೦೪

೩೭. ಸಾಹಿತ್ಯ ಮತ್ತು ಸಂಸ್ಕೃತಿ

- ಡಾ. ಅಮೃತಾ ಆರ್. ಕಟಕ ೩೦೪

೩೮.	ಭಾವೈಕ್ಯತೆಯ ನೆಲೆಗಳು

- ಬೋಡೆ ರಿಯಾಜ್ ಅಹ್ಮದ 	೩೧೫

ಕನ್ನಡ ನಾಡು-ನುಡಿ ಮತ್ತು ಯುವ ಕರ್ನಾಟಕ

೩೯.	ಯುವಕರ್ನಾಟಕ - ಒಂದು ಅವಲೋಕನ

- ಶೋಭಾ ಎಚ್.ಜಿ. 	೩೨೪

೪೦.	ಕರ್ನಾಟಕದ ಯುವ ಸಮುದಾಯದ ಸವಾಲು ಮತ್ತು ಸಾಧ್ಯತೆಗಳು

- ಅಪ್ಪಗೆರೆ ಸೋಮಶೇಖ 	೩೩೧

**ಕೃಷಿ ಮತ್ತು ನೀರಾವರಿ**

೪೧.	ಭೂಮಿ-ಬೀಜ-ಬೆಳೆ ಸದ್ಬಳಕೆ

- ರಾಜಶೇಖರ ನಿಂಬರಗಿ 	೩೪೦

೪೨.	ಜಲಸಂವರ್ಧನೆ ಮತ್ತು ನಿರ್ವಹಣೆ

- ಶಿವಾನಂದ ಕಳವೆ 	೩೪೫

೪೩.	ಪ್ರಾಕೃತಿಕ ವಿಕೋಪ

- ಸುಮಂಗಲ ಮುಮ್ಮಿಗಟ್ಟಿ 	೩೫೪

೪೪.	ಅಧ್ಯಕ್ಷ ಭಾಷಣ: ರೈತ ಮತ್ತು ಮಾರುಕಟ್ಟೆ

- ಹನುಮನಗೌಡ ಬೆಳಗುರ್ಕಿ 	೩೬೧

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ

೪೫.	ವೈದ್ಯ ವಿಜ್ಞಾನ

ಡಾ|| ಎಸ್.ಎಸ್. ಪಾಟೀಲ್ ಮಂದರವಾಡ 	೩೭೨

೪೬	ಪರಿಸರ ವಿಜ್ಞಾನ

- ಡಾ|| ಹೆಚ್.ಎಸ್.ಎಂ. ಪ್ರಕಾಶ್ ೩೭೭

೪೭. ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ

- ಡಾ. ಟಿ.ಆರ್. ಅನಂತರಾಮು ೩೮೭

**ಜಾನಪದ ಜಗತ್ತು**

೪೮. ಜನಪದ ಸಾಹಿತ್ಯ

- ಡಾ. ಶೈಲಜಾ ಎನ್. ಬಾಗೇವಾಡಿ ೪೦೪





೪೯. ಜನಪದ ಕಲೆಗಳು

- ಡಾ. ಹನುಮಂತರಾವ್ ಬಿ. ದೊಡ್ಡಮನಿ ೪೧೪

೫೦. ಅಧ್ಯಕ್ಷ ಭಾಷಣ : ಬಯಲಾಟ ಮತ್ತು ಯಕ್ಷಗಾನ

- ಬಿ. ಆರ್. ಪೊಲೀಸ ಪಾಟೀಲ ೪೨೪

**ಮಕ್ಕಳ ಸಾಹಿತ್ಯ ಗೋಷ್ಠಿ**

೫೧. ಮಕ್ಕಳ ಸಾಹಿತ್ಯದಲ್ಲಿ ಹೊಸ ಆಯಾಮಗಳು

- ಎ. ಕೆ. ರಾಮೇಶ್ವರ ೪೩೦

೫೨. ಮಕ್ಕಳ ಮೇಲೆ ತಂತ್ರಜ್ಞಾನದ ಪ್ರಭಾವ

- ರಾಜಶೇಖರ ಕುಕ್ಕುಂದ ೪೩೮

೫೩ ಮಕ್ಕಳ ಸಾಹಿತ್ಯ ಸಮೀಕ್ಷೆ

- ಜಂಬುನಾಥ ಕಂಚ್ಯಾಣ ೪೪೧

೫೪. ಅಧ್ಯಕ್ಷ ಭಾಷಣ: ಭವಿಷ್ಯದ ಮಕ್ಕಳು ಮತ್ತು ಸಾಹಿತ್ಯ

- ಡಾ. ಮಾಲತಿ ಪಟ್ಟಣಶೆಟ್ಟಿ ೪೫೦

**ತತ್ವಪದ – ಸೂಫಿ-ಬೌದ್ಧ ಸಾಹಿತ್ಯ**

೫೫. ತತ್ವಪದ ಸಾಹಿತ್ಯ

- ಮಲ್ಲಿಕಾರ್ಜುನ ಕಡಕೊಳ ೪೫೮

೫೬ ಬೌದ್ಧ ಸಾಹಿತ್ಯ ಮತ್ತು ನೆಲೆಗಳು

- ಕಲಾ ಸಂಗಮ

**ಬುದ್ಧಘೋಷ್ ದೇವೇಂದ್ರ ಹೆಗ್ಗಡೆ ೪೬೬**

೫೭. ಸಂಗೀತ ಮತ್ತು ಗಮಕ

- ಡಾ. ಸರ್ವಮಂಗಳಾ ಶಂಕರ್ ೪೮೧

೫೮. ನೃತ್ಯ ಕಲೆ

- ನಾಟ್ಯಾಚಾರ್ಯ ಎ. ಅಶೋಕ್‌ಕುಮಾರ್ ೪೯೦

೫೯. ಅಧ್ಯಕ್ಷ ಭಾಷಣ: “ಕಲ್ಯಾಣ ಕರ್ನಾಟಕದ ಚಿತ್ರ-ಶಿಲ್ಪ-ವಾಸ್ತುಶಿಲ್ಪ ಪರಂಪರೆ”

- ಡಾ. ಅಂದಾನಿ ವಿ.ಜಿ. ೪೯೬

**೩೭೧ ಜೆ ಅನುಷ್ಠಾನ ಮತ್ತು ಅಡಚಣೆಗಳು**

- **ಶ್ರೀನಿವಾಸ ಸಿರನೂರಕರ**

ಸರ್ವಭವಂತು ಸುಖಿನಃ | ಸರ್ವಸಂತು ನಿರಾಮಯಃ

ಸರ್ವಭದ್ರಾಣಿ ಪಶ್ಯಂತು | ಮಾ ಕಶ್ಚಿದ್ ದುಃಖ ಭಾಗ್ ಭವೇತ್

ಎಲ್ಲರೂ ಸುಖವಾಗಿರಲಿ; ಎಲ್ಲರೂ ಆರೋಗ್ಯವಾಗಿರಲಿ; ಎಲ್ಲರೂ ಒಳ್ಳೆಯದನ್ನೇ ನೋಡುವಂತಾಗಲಿ; ಯಾರಿಗೂ ದುಃಖವಾಗದಿರಲಿ,

ಸಾವಿರಾರು ವರುಷಗಳ ಸನಾತನ ಭಾರತದ ಈ ಶಾಂತಿ ಮಂತ್ರ ಸರ್ವಕಾಲಕ್ಕೂ, ಸರ್ವಜನಾಂಗಕ್ಕೂ, ಸರ್ವದೇಶಗಳಿಗೂ ಅನ್ವಯವಾಗುವಂತಹುದು. ಈ ಮಂತ್ರದ ಮೂಲ ಯಾವ ಶಾಸ್ತ್ರ ಸಾಹಿತ್ಯ ಎಂಬುದು ಗೊತ್ತಿಲ್ಲದಿರಬಹುದು. ಆದರೆ ಮನುಕುಲದ ಕಲ್ಯಾಣವನ್ನು ಇಷ್ಟೊಂದು ಉದಾತ್ತವಾಗಿ ಆಶಿಸುವ ಮತ್ತೊಂದು ಮಂತ್ರ ಪ್ರಾಯಃ ಇರಲಾರದು.

ಈ ಮಂತ್ರದ ಉಲ್ಲೇಖ ಇಲ್ಲಿ ಬಹಳಷ್ಟು ಪ್ರಸ್ತುತವೆನಿಸುತ್ತದೆ. ಯಾವುದೇ ರಾಜ್ಯಕ್ಕಾಗಲೀ, ದೇಶಕ್ಕಾಗಲೀ, ಜನಾಂಗಕ್ಕಾಗಲೀ ಅವುಗಳ ಅಭಿವೃದ್ಧಿ, ಪ್ರಗತಿ, ಸಮೃದ್ಧಿಯ ಬಗ್ಗೆ ಒಂದು ಸ್ಪಷ್ಟವಾದಂತಹ ದೃಷ್ಟಿಕೋನವಿರುತ್ತದೆ. ಅದಕ್ಕೆ ಇಂಗ್ಲಿಷ್‌ನಲ್ಲಿ ವಿಷನ್ (Vision) ಎನ್ನುತ್ತಾರೆ. ಸಂತಸದ ಸಂಗತಿ ಎಂದರೆ ಕರ್ನಾಟಕ ಸರಕಾರದ ಅಭಿವೃದ್ಧಿಯ ಘೋಷಿತ ದೃಷ್ಟಿಕೋನ ಈ ಮೇಲಿನ ಮಂತ್ರವೇ ಆಗಿದೆ! ರಾಜ್ಯ ಸರಕಾರದ ಯೋಜನೆ, ಕಾರ್ಯಕ್ರಮ ಅನುಷ್ಠಾನ ಮತ್ತು ಸಾಂಖ್ಯಿಕ ಇಲಾಖೆ ಒಂದು ಮಹತ್ವದ ಇಲಾಖೆಯಾಗಿದ್ದು ರಾಜ್ಯದ ಒಟ್ಟಾರೆ ಅಭಿವೃದ್ಧಿ ಮತ್ತು ಜನಕಲ್ಯಾಣದ ಎಲ್ಲ ವಿಷಯಗಳು ಇದರ ವ್ಯಾಪ್ತಿಗೆ ಒಳಪಡುತ್ತವೆ. ಈ ಇಲಾಖೆಯ ದೃಷ್ಟಿಕೋನ ಅಥವಾ ದಾರ್ಶನಿಕ ಘೋಷಣೆ ಈ ಮೇಲಿನ ಮಂತ್ರವಾಗಿದ್ದು ಈ ಕಾರಣಕ್ಕಾಗಿ ಕರ್ನಾಟಕ ಸರಕಾರ ಅಭಿನಂದನೆಗೆ ಅರ್ಹವಾಗಿದೆ.

ಈ ದೃಷ್ಟಿಕೋನದೊಂದಿಗೆ ಸರಕಾರವು ಐದಂಶಗಳ ಒಂದು ವಿಷನ್ ಕೂಡ ಇಟ್ಟುಕೊಂಡಿದೆ. ಅದು ಕೆಳಗಿನಂತಿದೆ.

೧. ಎಲ್ಲಾ ನಾಗರಿಕರ ಸುರಕ್ಷತೆ ಮತ್ತು ಭದ್ರತೆಯನ್ನು ಖಾತ್ರಿ ಪಡಿಸಿಕೊಳ್ಳುವುದು ಹಾಗೂ ಶಾಂತಿ ಮತ್ತು ಕೋಮು ಸಾಮರಸ್ಯವನ್ನು ಎತ್ತಿಹಿಡಿಯುವುದು.

೨. ಎಲ್ಲಾ ಹಂತಗಳಲ್ಲಿ ಬಡತನ ಮತ್ತು ನಿರುಪಯುಕ್ತತೆಯನ್ನು ನಿವಾರಿಸಿ ಸಹಸ್ರಮಾನದ ಅಭಿವೃದ್ಧಿ ಗುರಿಗಳನ್ನು ಸಾಧಿಸುವುದು.

೩. ರಾಜ್ಯದಲ್ಲಿನ ಎಲ್ಲಾ ವಿಭಾಗಗಳು ಮತ್ತು ಪ್ರದೇಶಗಳನ್ನು ಒಳಗೊಂಡಂತೆ ಸರಿಯಾದ ಬೆಳವಣಿಗೆಯನ್ನು ಉತ್ತೇಜಿಸಲು ಮಾನವ ಸಾಮರ್ಥ್ಯಗಳನ್ನು ವರ್ಧಿಸುವುದು.

೪. ಕರ್ನಾಟಕವನ್ನು ಜಾಗತಿಕವಾಗಿ ಸ್ಪರ್ಧಾತ್ಮಕ ತಾಣವನ್ನಾಗಿ ಮಾಡುವುದು ಮತ್ತು ಭಾರತ ಒಕ್ಕೂಟದ ರಾಜ್ಯಗಳ ನೇತಾರನನ್ನಾಗಿ ಮಾಡುವುದು.

೫. ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಭಾಗವಹಿಸುವಿಕೆಯ ಮೂಲಕ ರಾಜ್ಯದಾದ್ಯಂತ ಉತ್ತಮ ಆಡಳಿತವನ್ನು ಸ್ಥಾಪಿಸುವುದು.

ಈ ಪಂಚಸೂತ್ರಗಳು ಇಡೀ ಅಖಂಡ ಕರ್ನಾಟಕಕ್ಕೆ ಸಮಾನವಾಗಿ ಅನ್ವಯವಾಗುತ್ತವೆ. ನಿಜ. ಆದರೆ ಅಧಿಕ ಸಮಾನವಾಗಿ ಅನ್ವಯವಾಗುವಂತಹ ರಾಜ್ಯದ ಯಾವುದಾದರೂ ಒಂದು ಪ್ರದೇಶವಿದ್ದರೆ ಚಾರಿತ್ರಿಕವಾಗಿ, ಐತಿಹಾಸಿಕವಾಗಿ ಹೈದ್ರಾಬಾದ್ ಕರ್ನಾಟಕ ಪ್ರದೇಶ ಎಂದೇ ಕರೆಯಲಾಗುತ್ತಿದ್ದು ಇತ್ತೀಚೆಗಷ್ಟೇ ಕಲ್ಯಾಣ ಕರ್ನಾಟಕವೆಂದು ಪುನ ನಾಮಕರಣಗೊಂಡಿರುವ ಆರು ಜಿಲ್ಲೆಗಳನ್ನು -ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಒಳಗೊಂಡ ಕಲಬುರಗಿ ಕಂದಾಯ ವಿಭಾಗ ಎಂಬುದು ನಿರ್ವಿವಾದ. ಇದೇ ಹಿನ್ನೆಲೆಯಲ್ಲಿ ಇನ್ನೂ ಖಚಿತವಾಗಿ ಹೇಳುವುದಾದರೆ ಮೂರನೇ ಸೂತ್ರವಾದ 'ರಾಜ್ಯದಲ್ಲಿನ ಎಲ್ಲ ವಿಭಾಗಗಳು ಮತ್ತು ಪ್ರದೇಶಗಳನ್ನು ಒಳಗೊಂಡಂತೆ ಸರಿಯಾದ ಬೆಳವಣಿಗೆಯನ್ನು ಉತ್ತೇಜಿಸಲು ಮಾನವ ಸಾಮರ್ಥ್ಯಗಳನ್ನು ವರ್ಧಿಸುವುದು' ಅತಿ ಹೆಚ್ಚು ಪ್ರಸ್ತುತವೂ, ಮಹತ್ವದ್ದೂ ಎಂದೆನಿಸುತ್ತದೆ.

ಸರಕಾರದ ಧ್ಯೆಯೋದ್ದೇಶವೇನೋ ಆದರ್ಶ ಪ್ರಾಯವಾದದ್ದೇ ಆದರೆ ವ್ಯಾವಹಾರಿಕ ನೆಲೆಯಲ್ಲಿ ಅಷ್ಟು ಪರಿಣಾಮಕಾರಿಯಾಗಿದೆ ಎಂಬುದು ಬಹುಮುಖ್ಯವೆನಿಸುತ್ತದೆ. ಈಗಾಗಲೇ ಸಾರ್ವತಿಕವಾಗಿ ಒಪ್ಪಿಕೊಂಡಿರುವಂತೆ ಸ್ವಾತಂತ್ರ್ಯಕ್ಕಿಂತಲೂ ಪೂರ್ವದಲ್ಲಿ ಹೈದ್ರಾಬಾದ್ ಪ್ರಾಂತ್ಯದ ಭಾಗವಾಗಿದ್ದು, ನಿಜಾಂ ಕರ್ನಾಟಕವೆಂದು ಕರೆಯಲ್ಪಡುತ್ತಿದ್ದ ಬೀದರ, ಕಲಬುರಗಿ (ಯಾದಗಿರಿ ಸೇರಿ), ಮತ್ತು ರಾಯಚೂರು (ಕೊಪ್ಪಳ ಸೇರಿ) ಮೂರು ಜಿಲ್ಲೆಗಳು ಎಲ್ಲ ದೃಷ್ಟಿಯಿಂದಲೂ ಅತ್ಯಂತ ಹಿಂದುಳಿದ ಜಿಲ್ಲೆಗಳಾಗಿದ್ದು ೧೯೫೬ರಲ್ಲಿ ಕರ್ನಾಟಕ ರಾಜ್ಯ ಉದಯವಾದ ನಂತರ ಅದರಲ್ಲಿ, ವಿಲೀನಗೊಂಡ ಈ ಪ್ರದೇಶ ತನ್ನೊಂದಿಗಿದ್ದ ಪ್ರಾದೇಶಿಕ ಅಸಮತೋಲನವನ್ನು ಹೊತ್ತುಕೊಂಡು ಮುನ್ನಡೆಯಿತು. ಈ ಅಸಮಾನತೆಯನ್ನು ಹೊಡೆದು ಹಾಕುವ ನಿಟ್ಟಿನಲ್ಲಿ ಗಂಭೀರವಾದ ಮತ್ತು ಕಾಳಜಿಪೂರ್ವಕ ಪ್ರಯತ್ನಗಳು ನಡೆಯದೇ ಇದ್ದುದರಿಂದ ಈ ಪ್ರದೇಶವು ಅಭಿವೃದ್ಧಿ ಮತ್ತು ಪ್ರಗತಿಯ ಮುಖ್ಯವಾಹಿನಿಯಿಂದ ಮೂಲೆಗೆ ತಳ್ಳಲ್ಪಟ್ಟಿತು.

ಅಭಿವೃದ್ಧಿ ಹೊಂದಿದ ರಾಜ್ಯಗಳು ಹಾಗೂ ಆರ್ಥಿಕವಾಗಿ ಹಿಂದುಳಿದ ರಾಜ್ಯಗಳು ಅಥವಾ ಯಾವುದೇ ರಾಜ್ಯದಲ್ಲಿ ಆ ರಾಜ್ಯದ ಕೆಲವು ಭಾಗಗಳು ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿ ಕೆಲವು ಭಾಗಗಳು ಪ್ರಗತಿ ಕಾಣದೆ ಒಟ್ಟಾಗಿ ಇರುವ ಸ್ಥಿತಿಯನ್ನು ಪ್ರಾದೇಶಿಕ ಅಸಮತೋಲನ ಎಂದು ಕರೆಯಬಹುದು.

ರಾಜ್ಯದ ವಿವಿಧ ಪ್ರದೇಶಗಳ ನಡುವೆ ಮತ್ತು ವಿಭಿನ್ನ ಜಿಲ್ಲೆಗಳ ವಿಭಿನ್ನ ಭಾಗಗಳ ನಡುವೆ ಆರ್ಥಿಕ ಅಸಮತೋಲನ ಮತ್ತು ಅಭಿವೃದ್ಧಿ ಸಂಬಂಧಿ ಗಂಭೀರ ವ್ಯತ್ಯಾಸಗಳು ಕಂಡು ಬರಬಹುದು ಕೆಲವು ಪ್ರದೇಶಗಳು ಉತ್ತಮವಾಗಿ ಅಭಿವೃದ್ಧಿ ಹೊಂದಿ ಇನ್ನು ಕೆಲವು ಪ್ರದೇಶಗಳು ತೀರಾ ಹಿಂದುಳಿದಿರುವುದನ್ನು ಕೂಡ ಕಾಣಲು ಸಾಧ್ಯವಿದೆ. ಆದ್ದರಿಂದ ಪ್ರಾದೇಶಿಕ ಅಸಮಾನತೆಯನ್ನು ಅಭಿವೃದ್ಧಿ ನೆಲೆಯಿಂದ ಕಾಣುವುದು, ವಿವರಿಸುವುದು, ವಿಶ್ಲೇಷಿಸುವುದು ಅಗತ್ಯವೆಂದು ಕಂಡುಬರುತ್ತದೆ.

೩೨೧ ಜೆ ಅನುಷ್ಠಾನ ಮತ್ತು ಅಡಚಣೆಗಳು ೫

ಕಲ್ಯಾಣ ಕರ್ನಾಟಕದ ಹಿಂದುಳಿದಿರುವಿಕೆಯನ್ನು ಪ್ರಾದೇಶಿಕ ಅಸಮಾನತೆಯನ್ನು ಹಲವಾರು ತಜ್ಞರ ಸಮಿತಿಗಳ ವರದಿಗಳ ಮೂಲಕ ಮನಗಾಣಲಾಗಿದೆ. ಏಕೀಕರಣಕ್ಕಿಂತ ಪೂರ್ವದಲ್ಲೇ, ಅಂದರೆ ೧೯೫೪ ರಲ್ಲೇ ಈ ಪ್ರಯತ್ನ ಆರಂಭವಾಗಿ ಅಂದಿನ ಮೈಸೂರು ಸರಕಾರ ಬೀದರ, ಕಲಬುರಗಿ, ರಾಯಚೂರು ಜಿಲ್ಲೆಗಳನ್ನು ಸಂಪೂರ್ಣ ಹಿಂದುಳಿದ ಜಿಲ್ಲೆಗಳೆಂದು ಪತ್ತೆ ಮಾಡಿರುವುದು ಗಮನಾರ್ಹವಾದದ್ದು. ಏಕೀಕರಣದ ನಂತರ- ೧೯೬೦ರಿಂದ ೨೦೦೦ದ ವರೆಗೆ ಸುಮಾರು ಹತ್ತು ಸಮಿತಿಗಳು ಈ ಭಾಗದ ಹಿಂದುಳಿದಿರುವಿಕೆಯನ್ನು ಅಭಿವೃದ್ಧಿ-ಪ್ರಗತಿಯಿಂದ ವಂಚಿತವಾಗಿರುವುದನ್ನು ದಾಖಲಿಸಿವೆ. ಈ ಸರಣಿಯಲ್ಲಿ ತೀರಾ ಇತ್ತೀಚಿನದು ಮತ್ತು ಬಹು ಮುಖ್ಯವಾದದ್ದು ಎಂದರೆ ವರ್ಷ ೨೦೦೦ರಲ್ಲಿ ರಚಿಸಲಾದ ಖ್ಯಾತ ಅರ್ಥಶಾಸ್ತ್ರಜ್ಞ ಡಾ. ಡಿ. ಎಂ. ನಂಜುಂಡಪ್ಪ ನೇತೃತ್ವದ 'ಕರ್ನಾಟಕ ಪ್ರಾದೇಶಿಕ ಅಸಮಾನತೆ ನಿವಾರಣಾ ಉನ್ನತಾಧಿಕಾರ ಸಮಿತಿ', ಇದು ೨೦೦೨ರಲ್ಲಿ ಸಲ್ಲಿಸಿದ ವರದಿ ಇದುವರೆಗೆ ಸಲ್ಲಿಸಲಾದ ಎಲ್ಲ ವರದಿಗಳ ಪೈಕಿ ಅತ್ಯಂತ ವಿಸ್ತ್ರತವಾದದ್ದು ಮತ್ತು ವೈಜ್ಞಾನಿಕವಾದದ್ದು ಆಗಿದೆ. ಇದು ಕರ್ನಾಟಕದ ಪ್ರಾದೇಶಿಕ ಅಸಮಾನತೆಯ ಮೇಲೆ ಸಮಗ್ರವಾದ ಬೆಳಕು ಚೆಲ್ಲುತ್ತದೆ ಮತ್ತು ಈ ವಿಷಯದಲ್ಲಿ ಕೈಗನ್ನಡಿಯಾಗಿದೆ ಎಂದರೆ ಉತ್ತೇಕ್ಷೆಯಾಗಲಾರದು. ಅದರಲ್ಲೂ ಕಲ್ಯಾಣ ಕರ್ನಾಟಕದ ದುಃಸ್ಥಿತಿಯ ಸಂದರ್ಭದಲ್ಲಂತೂ ಕಣ್ಣು ತೆರೆಸುವಂತಹ ವರದಿಯಾಗಿದೆ.

**ನಂಜುಂಡಪ್ಪ ವರದಿಯ ಕ್ಷ-ಕಿರಣ (ಅಂಶಿಕವಾಗಿ)**

ಕಲ್ಯಾಣ ಕರ್ನಾಟಕ ಪ್ರದೇಶದ ಹಿಂದುಳಿದಿರುವಿಕೆಯ ಮಾಪನವನ್ನು ನಂಜುಂಡಪ್ಪ ಸಮಿತಿ ವಿಶ್ವತವಾಗಿ ಅಧ್ಯಯನ ಮಾಡಿದ್ದು ಅದರ ಕೆಲವು ಅಂಶಗಳನ್ನು ಸ್ಥೂಲವಾಗಿ ಈ ಕೆಳಗಿನಂತೆ ಗುರುತಿಸಬಹುದು.

- ಕರ್ನಾಟಕದ ಜನಸಂಖ್ಯೆಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ (ಕಕಪ) ಜನ ಸಂಖ್ಯೆಯ ಪ್ರಮಾಣ ಶೇ. ೧೮.೩೬

- ರಾಜ್ಯದ ಒಟ್ಟು ಅಕ್ಷರಸ್ಥರಲ್ಲಿ ಕ.ಕ.ಪ್ರದ. ಅಕ್ಷರಸ್ಥರ ಪಾಲು ಶೇ. ೧೫.೨೩ ಕರ್ನಾಟಕದ ಒಟ್ಟು ರಾಜ್ಯ ಆಂತರಿಕ ಉತ್ಪನ್ನದಲ್ಲಿ ಈ ಪ್ರದೇಶದ ಪಾಲು ಶೇ. ೧೩.೨೩ (೨೦೧೨-೧೩ನೇ ಸಾಲಿನ ಚಾಲ್ತಿ ಬೆಲೆಗಳಲ್ಲಿ).

- ರಾಜ್ಯದ ಒಟ್ಟು ಸಾಕ್ಷರತೆಯ ಪ್ರಮಾಣ ಶೇ. ೭೫.೩೬ ಆಗಿದ್ದರೆ ಕ.ಕ.ಪ್ರ ಸಾಕ್ಷರತೆಯ ಪ್ರಮಾಣ ಶೇ. ೬೪.೪೫(೨೦೧೧ ರ ಜನಸಂಖ್ಯೆ ಆಧಾರ).

- ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆಯ ಪ್ರಮಾಣ ಶೇ. ೨೪.೦೧ ಆದರೆ ಕ.ಕ.ದ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಂಖ್ಯೆಯ ಪ್ರಮಾಣ ಶೇ.೩೫.೦೩

- ಕರ್ನಾಟಕದಲ್ಲಿ ೩೯ ಅತ್ಯಂತ ಹಿಂದುಳಿದ ತಾಲೂಕುಗಳಲ್ಲಿ ೨೧ ತಾಲೂಕುಗಳು (ಅಂದರೆ ಶೇಕಡಾ ೫೩.೮೪) ಕ-ಕ ಪ್ರದೇಶದಲ್ಲಿವೆ.

- ರಾಜ್ಯದಲ್ಲಿನ ಒಟ್ಟು ಹಿಂದುಳಿದಿರುವಿಕೆಯಲ್ಲಿ ಈ ಭಾಗದ ಪಾಲು ಶೇ.೪೦

- ರಾಜ್ಯಮಟ್ಟದಲ್ಲಿ ೨೦೦೧ರಿಂದ ೨೦೧೧ರ ದಶಕದ ಅವಧಿಯಲ್ಲಿ ಜನಸಂಖ್ಯಾ



ಬೆಳವಣಿಗೆ ಪ್ರಮಾಣ ಶೇ. ೧೫.೬೭ರಷ್ಟಿದ್ದರೆ ಕಕ ದಲ್ಲಿ ಈ ಪ್ರಮಾಣ ಶೇ. ೧೭-೭೩ರಷ್ಟಿದೆ.

- ಕರ್ನಾಟಕದ 'ಜಿಲ್ಲಾ ಮಾನವ ಅಭಿವೃದ್ಧಿಗಳ ವರದಿ ೨೦೧೪ರ ಪ್ರಕಾರ ಮಾನವ ಅಭಿವೃದ್ಧಿ ಸೂಚ್ಯಂಕ ೦.೪೦೦ ಕ್ಕಿಂತ ಕಡಿಮೆ ಇರುವ ಜಿಲ್ಲೆಗಳ ಸಂಖ್ಯೆ ಎಂಟು. ಅವುಗಳಲ್ಲಿ ನಾಲ್ಕು ಜಿಲ್ಲೆಗಳು ಕ-ಕ ಪ್ರದೇಶಕ್ಕೆ ಸೇರಿವೆ.

- ರಾಜ್ಯದ ಒಟ್ಟು ೧೭೬ ತಾಲೂಕುಗಳ ಪೈಕಿ ಮಾನವ ಅಭಿವೃದ್ಧಿ ಸೂಚ್ಯಂಕ ೦.೫೦೦ ಕ್ಕಿಂತ ಕಡಿಮೆ ಇರುವ ತಾಲೂಕುಗಳ ಸಂಖ್ಯೆ ೧೧೫ ಅವುಗಳಲ್ಲಿ ೨೮ (ಶೇ.೨೪.೩೫) ಕ-ಕ ಪ್ರದೇಶದಲ್ಲಿ ಬರುತ್ತವೆ.

- ರಾಜ್ಯದಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಪ್ರಮಾಣ ೨೦೧೧ರಲ್ಲಿ ಶೇ.೪೯.೨೪ ರಷ್ಟಿದ್ದರೆ ಕ-ಕ ಪ್ರದೇಶದಲ್ಲಿ ಅವರ ಪ್ರಮಾಣ ಶೇ.೬೩.೫೨

ಈ ಮೇಲಿನ ಕೆಲವು ಸೂಚಿಗಳು ಕಲ್ಯಾಣ ಕರ್ನಾಟಕ ಪ್ರದೇಶದ ಹಿಂದುಳಿದಿರುವಿಕೆಯನ್ನು ಖಂಡಿತವಾಗಿ ಮನದಟ್ಟು ಮಾಡಿಸುತ್ತವೆ.

**ಜಾರಿಯಾಗದ ಶಿಫಾರಸುಗಳು**

ಪ್ರಾದೇಶಿಕ ಅಸಮಾನತೆಯ ತ್ವರಿತ ನಿವಾರಣೆಗೆ ಮತ್ತು ಅಭಿವೃದ್ಧಿಗೆ ನಂಜುಂಡಪ್ಪ ಸಮಿತಿ ಮಾಡಿರುವ ಕೆಲವು ಶಿಫಾರಸುಗಳನ್ನು ರಾಜ್ಯ ಸರಕಾರ ಅನುಷ್ಠಾನ ಮಾಡಿದೆ. ಆದರೆ ಕೆಲವು ಪ್ರಮುಖ ಶಿಫಾರಸುಗಳು ಹಾಗೆಯೇ ಉಳಿದು ಕೊಂಡಿವೆ. ಅವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು. ಅವುಗಳ ಜಾರಿಗೆ ಸರಕಾರ ತುರ್ತುಕ್ರಮ ಕೈಕೊಳ್ಳುವುದು ಅಗತ್ಯವಾಗಿದೆ.

೧. ರಾಜ್ಯದಲ್ಲಿ ನಿರೀಕ್ಷಿತ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಮತ್ತು ಅದು ಸುಸ್ಥಿರಗೊಳ್ಳಬೇಕಾದರೆ ಸಾಮಾಜಿಕ ನ್ಯಾಯವನ್ನೊಳಗೊಂಡ ಬೆಳವಣಿಗೆಯನ್ನು ಕಡೆಗಾಣಿಸಬಾರದು. ಅಭಿವೃದ್ಧಿಯ ಸೌಲಭ್ಯಗಳನ್ನು ಸಮಾನವಾಗಿ ಸೃಷ್ಟಿಸಬೇಕು. ಈ ಉದ್ದೇಶಕ್ಕಾಗಿ ಒಂದು ಪ್ರಾದೇಶಿಕ ಅಭಿವೃದ್ಧಿ ನೀತಿಯನ್ನು ರಾಜ್ಯವು ರೂಪಿಸಬೇಕು.

೨. ಯೋಜನೆಗಳನ್ನು ಸಿದ್ಧಗೊಳಿಸುವಾಗ ಪ್ರಸ್ತಾವನೆಗಳ ಪರಿಕಲ್ಪನೆ ಹಾಗೂ ಸುಧಾರಣೆ ಎರಡರ ದೃಷ್ಟಿಯಿಂದಲೂ ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡುವ ಬಗ್ಗೆ ಸೂಕ್ತ ಗಮನ ನೀಡಬೇಕು.

೩. ಅಭಿವೃದ್ಧಿ ಕಾರ್ಯ ತಂತ್ರವನ್ನು ರೂಪಿಸುವುದಕ್ಕೆ ತಾಲ್ಲೂಕು ಪ್ರಾಥಮಿಕ ಘಟಕವಾಗಿರಬೇಕು.

೪. ಕಲಬುರಗಿಯಲ್ಲಿ ಕೇಂದ್ರ ಸ್ಥಾನವಿರುವಂತೆ ಉತ್ತರ ಕರ್ನಾಟಕಕ್ಕಾಗಿ ಒಂದು ಪ್ರತ್ಯೇಕ ಕೃಷಿ ಹಣಕಾಸು ಮತ್ತು ಅಭಿವೃದ್ಧಿ ಕಂಪನಿಯನ್ನು ಸ್ಥಾಪಿಸಬೇಕು.

೫. ರಾಯಚೂರು ಜಿಲ್ಲೆಯಲ್ಲಿ ಒಳನಾಡು ಮೀನುಗಾರಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಬೇಕು.

೬. ರಾಯಚೂರಿನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐ.ಐ.ಟಿ) ಸ್ಥಾಪಿಸಬೇಕು.

೭. ವಿವಿಧ ಸಾರ್ವಜನಿಕ ಉದ್ಯಮಗಳು, ನಿಗಮಗಳು, ಕರ್ನಾಟಕ ಲೋಕ ಸೇವಾ ಆಯೋಗ, ರಾಜ್ಯ ಯೋಜನಾ ಮಂಡಳಿ, ವಿಶ್ವವಿದ್ಯಾಲಯಗಳ ಉಪಕುಲಪತಿಗಳು, ಸಮಿತಿಗಳು, ಕಾರ್ಯಪಡೆಗಳು ಮುಂತಾದವುಗಳಲ್ಲಿ ಉತ್ತರ ಕರ್ನಾಟಕಕ್ಕೆ ಶೇ. ೫೦ ರಷ್ಟು ಪ್ರಾತಿನಿಧ್ಯ ನೀಡಬೇಕು. ಹಾಗೆಯೇ ಸಚಿವ ಸಂಪುಟದಲ್ಲಿಯೂ ಶೇ. ೫೦ ಪ್ರಾತಿನಿಧ್ಯ ನೀಡಬೇಕು.

೮. ವಿವಿಧ ಅಕಾಡೆಮಿಗಳ ಅಧ್ಯಕ್ಷರು, ಸದಸ್ಯರ ನೇಮಕಾತಿಯಲ್ಲಿ, ಪ್ರಶಸ್ತಿ ನೀಡಿಕೆ, ಗೌರವ ಧನ ನೀಡಿಕೆಯಲ್ಲಿ ಉತ್ತರ ಕರ್ನಾಟಕಕ್ಕೆ ಶೇ.೫೦ ರಷ್ಟು ಮೀಸಲಾತಿ ನೀಡಬೇಕು.

೯. ಕಲಬುರಗಿಯಿಂದ ಬೆಂಗಳೂರು, ಮೈಸೂರು, ಹಾಸನ, ಮಡಿಕೇರಿ, ಚಿಕ್ಕಮಗಳೂರುಗಳಿಗೆ ನೇರ ರೈಲು ಸಂಪರ್ಕ ಕಲ್ಪಿಸಬೇಕು.

೧೦. ಉತ್ತರ ಕರ್ನಾಟಕಕ್ಕಾಗಿಯೇ ಕಲಬುರಗಿಯಲ್ಲಿ ರೈತ ಬ್ಯಾಂಕ್ ಸ್ಥಾಪನೆ ಯಾಗಬೇಕು.

**ಮಾನವ ಅಭಿವೃದ್ಧಿಯೇ ಮೂಲಮಂತ್ರ**

ಮಾನವ ಅಭಿವೃದ್ಧಿ ಪರಿಕಲ್ಪನೆಯ ಆರೋಗ್ಯ, ಶಿಕ್ಷಣ ಹಾಗೂ ಜೀವನ ಮಟ್ಟಗಳ ಆಯಾಮಗಳಲ್ಲದೆ ಮಹಿಳೆಯರು (ಲಿಂಗ ಸಮಾನತೆ), ಮಕ್ಕಳು, ಬಡತನ, ಆಹಾರ ಭದ್ರತೆ, ಪ್ರಾದೇಶಿಕತೆ, ಧರ್ಮ, ಜಾತಿ, ಜೈವಿಕ ಪರಿಸರ, ಜೀವನ ಚಕ್ರ ಮತ್ತು ಜೀವನದುದ್ದಕ್ಕೂ ಇರುವ ಮಾನವ ಅಭಿವೃದ್ಧಿ, ಇತ್ಯಾದಿಗಳನ್ನೊಳಗೊಂಡ ಬಹುಮುಖಿ ಆಯಾಮಗಳನ್ನು ತನ್ನಲ್ಲಿ ಅಂತರ್ಗತಗೊಳಿಸಿಕೊಂಡಿರುತ್ತದೆ. ಆದ್ದರಿಂದ, ಮಾನವ ಅಭಿವೃದ್ಧಿಯ ಪರಿಕಲ್ಪನೆಯು ಏಕಮುಖೀ ಆರ್ಥಿಕ ಅಭಿವೃದ್ಧಿಯ ಪರಿಕಲ್ಪನೆಯಿಂದ ಈಗ ಬಹಳ ವಿಭಿನ್ನವಾದ ವಿಶಾಲ ವ್ಯಾಪ್ತಿಯ ಮತ್ತು ಆಳವಾದ ತಳಹದಿಯ ಬಹುಮುಖಿ ಆಯಾಮಗಳ ಪರಿಕಲ್ಪನೆಯಾಗಿ ವಿಕಾಸಗೊಂಡಿದೆ.

ಮಾನವ ಅಭಿವೃದ್ಧಿಯ ಸೂಚ್ಯಂಕವು, ಅಭಿವೃದ್ಧಿಯ ವ್ಯಾಪಕ ಪರಿಕಲ್ಪನೆಯ ಮಾಪನವಾಗಿರುತ್ತದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಆರ್ಥಿಕ ಬೆಳವಣಿಗೆಗಿಂತ ಆರ್ಥಿಕ ನೆಮ್ಮದಿ ಮತ್ತು ಕಲ್ಯಾಣಗಳಿಗೆ ಹೆಚ್ಚು ಮಹತ್ವ ನೀಡಲಾಗುತ್ತದೆ. ಇದು, ದೇಶದ ಅಭಿವೃದ್ಧಿಯ ಮೌಲ್ಯಮಾಪನದ ಸಂದರ್ಭದಲ್ಲಿ ವ್ಯಕ್ತಿಯ ಸಾಮರ್ಥ್ಯಗಳೇ ಅಂತಿಮ ಮಾನದಂಡಗಳಾಗಿರಬೇಕು ಎಂಬುದರ ಮೇಲೆ ಒತ್ತು ನೀಡುತ್ತದೆ.

ಪ್ರಪಂಚದ ರಾಷ್ಟ್ರಗಳ ಸಾಲಿನಲ್ಲಿ ಭಾರತದ ಮಾನವ ಅಭಿವೃದ್ಧಿಯ ಸೂಚ್ಯಂಕ (Human Development Index - HDI) ಕೆಳಮಟ್ಟದಲ್ಲಿರಲು ಕಾರಣವೇನೆಂದರೆ ಉತ್ತರ ಭಾರತದ ನಾಲ್ಕು ಪ್ರಮುಖ ರಾಜ್ಯಗಳಾದ ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ಉತ್ತರ ಪ್ರದೇಶಗಳು ಪ್ರಗತಿ ಮತ್ತು ಅಭಿವೃದ್ಧಿಯಲ್ಲಿ ಕಳಪೆ ಸಾಧನೆ ಮಾಡಿರುವುದೇ ಆಗಿದೆ. ಈ ನಾಲ್ಕು ರಾಜ್ಯಗಳನ್ನು 'ಬಿಮಾರು' (BIMARU) ರಾಜ್ಯಗಳೆಂದು ಅನ್ವರ್ಥಕವಾಗಿ ಕರೆಯಲಾಗುತ್ತದೆ. ಅದೇ ರೀತಿಯಾಗಿ ಭಾರತದ ಪ್ರಮುಖ ರಾಜ್ಯಗಳ ಪೈಕಿ ಕರ್ನಾಟಕದ



ಮಾನವ ಅಭಿವೃದ್ಧಿ ಉನ್ನತ ಮಟ್ಟದಲ್ಲಿ ಇಲ್ಲದಿರುವುದಕ್ಕೆ ಕಲ್ಯಾಣ ಕರ್ನಾಟಕದ ಆರು ಜಿಲ್ಲೆಗಳು ಅಭಿವೃದ್ಧಿಯನ್ನು ಸಾಧಿಸುವಲ್ಲಿ ವಿಫಲವಾಗಿರುವುದೇ ಆಗಿದೆ. ಭಾರತದ ಪ್ರಮುಖ ರಾಜ್ಯಗಳ (ಅವು ೧೫ ರಾಜ್ಯಗಳು) ೨೦೧೨ರ ಮಾನವ ಅಭಿವೃದ್ಧಿಯಲ್ಲಿ ಕರ್ನಾಟಕ ಮಧ್ಯಮ ಗತಿಯಲ್ಲಿ ಅಂದರೆ ಎಂಟನೇ ಶ್ರೇಣಿಯಲ್ಲಿದೆ. "ಕರ್ನಾಟಕವು ಆಂಧ್ರಪ್ರದೇಶಕ್ಕಿಂತ (ತೆಲಂಗಾಣ ರಾಜ್ಯ ರಚನೆಗೆ ಮುನ್ನ) ಕೊಂಚ ಉತ್ತಮ ಸ್ಥಿತಿಯಲ್ಲಿದೆ. ಆಂಧ್ರ ಪ್ರದೇಶ ೧೧ನೇ ಶ್ರೇಣಿಯಲ್ಲಿದೆ. ಆದರೆ, ಕರ್ನಾಟಕವು ಮೊದಲನೇ ಶ್ರೇಣಿಯಲ್ಲಿರುವ ಕೇರಳ ಮತ್ತು ಐದನೇ ಶ್ರೇಣಿಯಲ್ಲಿರುವ ತಮಿಳುನಾಡು ರಾಜ್ಯಗಳಿಗಿಂತ ಸಾಕಷ್ಟು ಕೆಳಮಟ್ಟದಲ್ಲಿದೆ. ಕರ್ನಾಟಕದ ಪರಿಸ್ಥಿತಿ ಉತ್ತಮವಾಗಬೇಕಾದರೆ ಕಲ್ಯಾಣ ಕರ್ನಾಟಕದ ಪರಿಸ್ಥಿತಿ ಉತ್ತಮವಾಗುವುದು ಅಗತ್ಯವೂ, ಅನಿವಾರ್ಯವೂ ಆಗಿದೆ.

ಕಲ್ಯಾಣ ಕರ್ನಾಟಕದ ಮಾನವ ಅಭಿವೃದ್ಧಿಯ ಕೆಲವು ಅಂಶಗಳ ಮೇಲೆ ಕಣ್ಣು ಹಾಯಿಸಿದರೆ ಸ್ಪಷ್ಟ ಚಿತ್ರಣ ದೊರೆಯಬಲ್ಲದು. ರಾಜ್ಯದ ೩೦ ಜಿಲ್ಲೆಗಳ ಪೈಕಿ ಮೊದಲ ಐದು ಶ್ರೇಣಿಗಳ ಜಿಲ್ಲೆಗಳು ಹಾಗೂ ಕಲ್ಯಾಣ ಕರ್ನಾಟಕ ಜಿಲ್ಲೆಗಳ ಶ್ರೇಣಿಗಳು ಈ ಕೆಳಗಿನಂತಿವೆ.

**ಮೂಲ ಕರ್ನಾಟಕ ಆರ್ಥಿಕ ಸಮೀಕ್ಷೆ ೨೦೧೭-೧೮**

| | ಹೆಚ್.ಡಿ.ಐ. | ಜಿ.ಐ.ಐ. | ಸಿ.ಡಿ.ಐ. | ಎಫ್.ಎಸ್.ಐ. | ಡಿ.ಸಿ.ಡಿ.ಐ. |
|---|---|---|---|---|---|
| ಮೊದಲ ಐದು ಶ್ರೇಣಿ ಪಡೆದ ಜಿಲ್ಲೆಗಳು | ಬೆಂ.ನಗರ<br>ದಕ್ಷಿಣ ಕನ್ನಡ<br>ಉಡುಪಿ<br>ಕೊಡಗು<br>ಚಿಕ್ಕಮಗಳೂರು | ಉಡುಪಿ<br>ದಕ್ಷಿಣ ಕನ್ನಡ<br>ಬೆಂ.ನಗರ<br>ಚಿಕ್ಕಮಗಳೂರು<br>ಕೊಡಗು | ದಕ್ಷಿಣ ಕನ್ನಡ<br>ಚಿಕ್ಕಮಗಳೂರು<br>ಉಡುಪಿ<br>ಶಿವಮೊಗ್ಗ<br>ಉತ್ತರಕನ್ನಡ | ಧಾರವಾಡ<br>ದಕ್ಷಿಣ ಕನ್ನಡ<br>ಉಡುಪಿ<br>ಬೆಂ.ನಗರ<br>ಬೀದರ | ಬೆಂ.ನಗರ<br>ಶಿವಮೊಗ್ಗ<br>ಬೆಂ.ಗ್ರಾಂ<br>ದಕ್ಷಿಣ ಕನ್ನಡ<br>ಮಂಡ್ಯ |

| | | | | | |
|---|---|---|---|---|---|
| ಕಲ್ಯಾಣ ಕರ್ನಾಟಕದ ಜಿಲ್ಲೆಗಳು ಶ್ರೇಣಿಗಳು | ರಾಯಚೂರು-೩೦<br>ಯಾದಗಿರಿ-೧೯<br>ಕೊಪ್ಪಳ-೧೮<br>ಬಳ್ಳಾರಿ-೧೫<br>ಕಲಬುರಗಿ-೧೦<br>ಬೀದರ-೧೯ | ಕೊಪ್ಪಳ-೩೦<br>ಬಳ್ಳಾರಿ-೧೯<br>ರಾಯಚೂರು-೧೮<br>ಕಲಬುರಗಿ-೧೬<br>ಬೀದರ-೧೩<br>ಯಾದಗಿರಿ-೧೮ | ರಾಯಚೂರು-೩೦<br>ಕೊಪ್ಪಳ-೧೯<br>ಕಲಬುರಗಿ—೧೮<br>ಯಾದಗಿರಿ-೧೭<br>ಬೀದರ-೧೧<br>ಬಳ್ಳಾರಿ-೧೭ | ರಾಯಚೂರು-೧೯<br>ಕೊಪ್ಪಳ-೧೮<br>ಯಾದಗಿರಿ-೧೩<br>ಬಳ್ಳಾರಿ-೧೨<br>ಕಲಬುರಗಿ-೧೨<br>ಬೀದರ-೫ | ಯಾದಗಿರಿ-೩೦<br>ಕಲಬುರಗಿ--೧೮<br>ರಾಯಚೂರು-೧೭<br>ಕೊಪ್ಪಳ-೧೫<br>ಬೀದರ-೧೩<br>ಬಳ್ಳಾರಿ-೧೨ |

ಹೆಚ್.ಡಿ.ಐ-ಮಾನವ ಅಭಿವೃದ್ಧಿ ಸೂಚ್ಯಂಕ, ಜಿ.ಐ.ಐ.-ಲಿಂಗ ಅಸಮಾನತಾ ಸೂಚ್ಯಂಕ, ಸಿಡಿಐ-ಮಕ್ಕಳ ಅಭಿವೃದ್ಧಿ ಸೂಚ್ಯಂಕ; ಎಫ್ ಎಸ್. ಐ-ಆಹಾರ ಭದ್ರತಾ ಸೂಚ್ಯಂಕ ಡಿ.ಸಿ.ಡಿ.ಐ. -ಜಿಲ್ಲಾ ಸಂಯುಕ್ತ ಅಭಿವೃದ್ಧಿ ಸೂಚ್ಯಂಕ.

ಒಟ್ಟಾರೆ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ರಾಯಚೂರು, ಯಾದಗಿರಿ, ಕೊಪ್ಪಳ ಜಿಲ್ಲೆಗಳು, ಲಿಂಗ ಅಸಮಾನತಾ ಸೂಚ್ಯಂಕದಲ್ಲಿ ಕೊಪ್ಪಳ, ಬಳ್ಳಾರಿ, ರಾಯಚೂರು ಜಿಲ್ಲೆಗಳು ಮತ್ತು ಮಕ್ಕಳ ಅಭಿವೃದ್ಧಿ ಸೂಚ್ಯಂಕದಲ್ಲಿ ರಾಯಚೂರು, ಕೊಪ್ಪಳ, ಕಲಬುರಗಿ ಜಿಲ್ಲೆಗಳು ಅನುಕ್ರಮವಾಗಿ ಕೊನೆಯ ಮೂರು ಸ್ಥಾನಗಳಲ್ಲಿ ಭದ್ರವಾಗಿ ನೆಲೆಯೂರಿರುವುದನ್ನು ಕಾಣಬಹುದು. ಈ ಪರಿಸ್ಥಿತಿ ಲಾಗಾಯ್ತಿನಿಂದಲೂ ಮುಂದುವರಿದುಕೊಂಡು ಬಂದಿದೆ.



ಈ ಎಲ್ಲ ಐದು ಸೂಚ್ಯಂಕಗಳಲ್ಲಿ ಕಲ್ಯಾಣ ಕರ್ನಾಟಕದ ಬೀದರ ಜಿಲ್ಲೆ ಮಾತ್ರ ಆಹಾರ ಭದ್ರತಾ ಸೂಚ್ಯಂಕದಲ್ಲಿ ಮೊದಲ ಐದು ಶ್ರೇಣಿಗಳ ಜಿಲ್ಲೆಗಳಲ್ಲಿ ಐದನೆಯ ಶ್ರೇಣಿಯಲ್ಲಿರುವುದೊಂದೇ ಅಪರೂಪದ ಸಮಾಧಾನಕರ ಅಂಗವಾಗಿದೆ.

ವಿವಿಧ ಮಾನವ ಅಭಿವೃದ್ಧಿ ಸೂಚ್ಯಂಕಗಳು ಮತ್ತು ಶ್ರೇಣಿಗಳ ಆಧಾರದ ಮೇಲೆ ಜಿಲ್ಲೆಗಳ ವಿಭಾಗ ವಾರು ವರ್ಗೀಕರಣವನ್ನು ಮಾಡಲಾಗಿದೆ. ಜಿಲ್ಲೆಗಳ ಸಾಧನೆಯ ಆಧಾರದ ಮೇಲೆ ೧-೧೦ ಸ್ಥಾನ ಪಡೆದ ಜಿಲ್ಲೆಗಳನ್ನು ಉತ್ತಮ ಸಾಧನೆಯ ಗುಂಪು ಎಂದೂ, ೧೧-೨೦ ಸ್ಥಾನ ಪಡೆದ ಜಿಲ್ಲೆಗಳನ್ನು ಮಧ್ಯಮ ಸ್ಥಾನದ ಗುಂಪು ಎಂದೂ ಮತ್ತು ೨೧- ೩೦ ಸ್ಥಾನ ಪಡೆದ ಜಿಲ್ಲೆಗಳನ್ನು ಕೆಳಮಟ್ಟದ ಸಾಧನೆಯ ಗುಂಪು ಎಂದು ವಿಂಗಡಿಸಲಾಗಿದ್ದು ಕಲ್ಯಾಣ ಕರ್ನಾಟಕದ ಎಲ್ಲ ಆರು ಜಿಲ್ಲೆಗಳು ಕೆಳಮಟ್ಟದ ಸಾಧನೆಯ ಗುಂಪಿನಲ್ಲಿ ಬರುತ್ತವೆ.

### ತಲಾವಾರು ಆದಾಯ

ತಲಾವಾರು ಆದಾಯ ಮಾನವ ಅಭಿವೃದ್ಧಿಯನ್ನು ನಿರ್ದೇಶಿಸುವ ಬಹುಮುಖ್ಯ ಸೂಚಿಗಳಲ್ಲಿ ಒಂದಾಗಿದೆ. ಈ ಕೆಳಗಿನ ಕೋಷ್ಟಕ ಈ ವಿಷಯದಲ್ಲಿ ಕಲ್ಯಾಣ ಕರ್ನಾಟಕದ ದಾರುಣ ಸ್ಥಿತಿಯ ಚಿತ್ರಣ ನೀಡುತ್ತದೆ. ರಾಜ್ಯದ ತಲಾವಾರು ಆದಾಯ ೧೪-೨೨೬೭ ಆಗಿದ್ದು ಕಲ್ಯಾಣ ಕರ್ನಾಟಕದ ಎಲ್ಲ ಆರು ಜಿಲ್ಲೆಗಳ ತಲಾವಾರು ಆದಾಯ ರಾಜ್ಯದ ಸರಾಸರಿಗಿಂತ ದೊಡ್ಡ ಪ್ರಮಾಣದಲ್ಲಿ ಕಡಿಮೆ ಇರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

| **ತಲಾವಾರು ಆದಾಯ (ರೂಪಾಯಿಗಳಲ್ಲಿ)** | | | | |
|---|---|---|---|---|
| **ಮೊದಲ ಐದು ಸ್ಥಾನದ ಜಿಲ್ಲೆಗಳು** | | | **ಕಡೆ ಜಿಲ್ಲೆಗಳು** | |
| ಬೆಂಗಳೂರು (ನಗರ) | ೩,೨೦,೩೪೬ | (೧) | ಕಲಬುರಗಿ | ೬೫,೪೯೩ (೩೦) |
| ದಕ್ಷಿಣ ಕನ್ನಡ | ೨,೪೦,೪೪೮ | (೨) | ಯಾದಗಿರಿ | ೬೮,೯೨೮ (೨೯) |
| ಉಡುಪಿ | ೨,೦೨,೬೧೮ | (೩) | ಬೀದರ | ೭೩,೮೯೨ (೨೮) |
| ಚಿಕ್ಕಮಗಳೂರು | ೧,೭೫,೧೭೯ | (೪) | ಕೊಪ್ಪಳ | ೭೪,೧೩೪ (೨೭) |
| ಶಿವಮೊಗ್ಗ | ೧,೪೮,೯೭೯ | (೫) | ರಾಯಚೂರು | ೭೮,೦೫೭(೨೫) |
| ಬಳ್ಳಾರಿ | ೧,೧೬,೮೦೭ | | | |
| ಕರ್ನಾಟಕ:೧೪೨೨೬೭ | | | | |

ಮೂಲ ; ಕರ್ನಾಟಕ ಆರ್ಥಿಕ ಸಮೀಕ್ಷೆ ೨೦೧೭-೧೮

ಕೊನೆಯ ೩೦ನೇ ಸ್ಥಾನದಲ್ಲಿರುವ ಕಲಬುರಗಿ ಜಿಲ್ಲೆ ಮತ್ತು ಅದರ ನಂತರ ೨೯ನೇ ಸ್ಥಾನದಲ್ಲಿರುವ ಯಾದಗಿರಿ ಜಿಲ್ಲೆಗಳ ತಲಾವಾರು ಆದಾಯ ರಾಜ್ಯದ ಸರಾಸರಿಯ ಅರ್ಧಕ್ಕಿಂತಲೂ ಕಡಿಮೆ ಇದೆ. ಕೇವಲ ಬಳ್ಳಾರಿ ಜಿಲ್ಲೆ ಮಾತ್ರ ತಲಾವಾರು ಆದಾಯದಲ್ಲಿ ಒಂದು ಲಕ್ಷ ರೂಪಾಯಿಯ ಗಡಿಯನ್ನು ದಾಟಿದೆ.

ಮಾನವ ಅಭಿವೃದ್ಧಿಯ ವಿಷಯದಲ್ಲಿ ಇದಿಷ್ಟು ಕೇವಲ ಪ್ರಾತಿನಿಧಿಕ ಚಿತ್ರಣ ಮಾತ್ರ. ಇನ್ನೂ ಸಾಕಷ್ಟು ವಿವರಗಳನ್ನು ನೀಡಬಹುದು. ಆದರೆ ಸ್ಥಳಾಭಾವದಿಂದ ಅದು ಸಾಧ್ಯವಾಗಲಾರದು. ಈ ಪ್ರಾತಿನಿಧಿಕ ಚಿತ್ರಣವೊಂದೇ ಕಲ್ಯಾಣ ಕರ್ನಾಟಕದ ಮಾನವ ಅಭಿವೃದ್ಧಿಯ ದಾರುಣತೆಯನ್ನು ನಿವೇದಿಸುತ್ತದೆ.

**ಅಧ್ಯಕ್ಷ ಭಾಷಣ:**

**ಕಲ್ಯಾಣ ಕರ್ನಾಟಕ ಆಗಬೇಕಾದುದೇನು?**

**ಬಸವರಾಜ ಪಾಟೀಲ ಸೇಡಂ**

೮೫ನೆಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಕಲ್ಯಾಣ ಕರ್ನಾಟಕದ ಕಲಬುರಗಿ ವಿಶ್ವವಿದ್ಯಾಲಯದ ಪರಿಸರದಲ್ಲಿ ನಡೆಯುತ್ತಿರುವುದು ಸಂತಸದ ಸಂಗತಿ. ವೇದಿಕೆ ಮೇಲೆ ಆಸೀನರಾದ ಮೊದಲನೆಯ ಗೋಷ್ಠಿಯ ಎಲ್ಲ ಹಿರಿಯರಿಗೆ ಮತ್ತು ಆತ್ಮೀಯ ಕನ್ನಡದ ಅಭಿಮಾನಿ ಬಂಧುಗಳಿಗೆ ಶರಣು ಶರಣಾರ್ಥಿಗಳು.

ಕಲ್ಯಾಣ ಕರ್ನಾಟಕ ಅಂದು, ಇಂದು, ಮುಂದು (ನಾಳೆ) ಎಂಬ ವಿಷಯದ ಮೇಲೆ ಮಾನ್ಯ ಅತಿಥಿಗಳು ತಮ್ಮ ಅಮೂಲ್ಯವಾದ ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಕನ್ನಡ ನಾಡಿನ ಸಾಮಾಜಿಕ ಕಾರ್ಯಕರ್ತನಾದ ನಾನು ಅವುಗಳ ಬಗ್ಗೆ ಅಂದು ಮತ್ತು ಇಂದಿನ ಬೆಳಕಿನಲ್ಲಿ ಮುಂದೆ ಏನು ಎನ್ನುವ ಬಗ್ಗೆ ನನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದೇನೆ.

ರಾಷ್ಟ್ರಕವಿ ಕುವೆಂಪು ಅವರ ನಾಡಗೀತೆಯಲ್ಲಿ ಬರುವ ಭಾರತ ಮಾತೆಯ ತನುಜಾತೆಯಾದ ಕನ್ನಡಾಂಬೆಯ ಮಕ್ಕಳು ನಾವು. ನಾಡಿನ ಶ್ರೇಷ್ಠ ವರಕವಿ ದ.ರಾ. ಬೇಂದ್ರೆಯವರು ತಮ್ಮ ಕವಿತೆಯಲ್ಲಿ ಹೇಳಿದಂತೆ 'ಜೈನರ ಕಾವ್ಯದ, ಶರಣರ ವಚನದ, ದಾಸರ ಹಾಡಿನ' ನಾಡು ನಮ್ಮದು. ಇತ್ತೀಚಿನ ದಿನಗಳಲ್ಲಿ ಸೂಫಿಸಂತರ ಪ್ರಭಾವವೂ ಈ ನಾಡಿನ ಮೇಲೆ ಆಗಿದೆ. ಚಾಲುಕ್ಯ, ರಾಷ್ಟ್ರಕೂಟ ಮತ್ತು ವಿಜಯನಗರ ಸಾಮ್ರಾಜ್ಯಗಳ ಪ್ರಭಾವಗಳ ಮುಖಾಂತರ ಒಂದು ವಿಶಿಷ್ಟವಾದ ಸಂಸ್ಕೃತಿ ರೂಪಗೊಂಡಿದೆ. ಅದುವೇ ಕಲ್ಯಾಣ ಕರ್ನಾಟಕದ ಸಂಸ್ಕೃತಿ ಆಗಿದೆ.

ಮುಂದಿನ ನಮ್ಮ ಕಲ್ಯಾಣ ಕರ್ನಾಟಕವು ಹೇಗಿರಬೇಕು ಎಂಬುದು ಮುಖ್ಯವಾದ ವಿಷಯ. ಅದಕ್ಕಾಗಿ ನಾವೇನು ಮಾಡಬೇಕು? ಭಾರತದ ಸಂವಿಧಾನದ ೩೭೧ ಜೆ ತಿದ್ದುಪಡಿಯು ಕೆಲವು ನ್ಯೂನತೆಗಳನ್ನು ಒಳಗೊಂಡಿದೆಯಾದರೂ ಕೆಲವೊಂದು ಅನುಕೂಲತೆಗಳನ್ನು ನೀಡಿದೆ. ಅದರಲ್ಲಿನ ಕೊರತೆಗಳನ್ನು ತುಂಬಿಕೊಳ್ಳಬೇಕು. ಘನ ಕರ್ನಾಟಕ ಸರ್ಕಾರವು ಈ ವರ್ಷ ಈ ಭಾಗಕ್ಕೆ ನಾಡಿನ ಶ್ರೇಷ್ಠ ಸಾಹಿತಿಗಳಾದ ಶ್ರೀ ಎಸ್.ಎಲ್. ಭೈರಪ್ಪ, ದಿ. ಶ್ರೀ ಚಿದಾನಂದಮೂರ್ತಿ, ಶರಣ ಸಾಹಿತಿ ಶ್ರೀ ಗೊ.ರು. ಚನ್ನಬಸಪ್ಪ ಮತ್ತು ವಿಜಯಪುರದ ಜ್ಞಾನಯೋಗ ಆಶ್ರಮದ ಪರಮ ಪೂಜ್ಯಶ್ರೀ ಸಿದ್ಧೇಶ್ವರ ಸ್ವಾಮಿಗಳ ಆಶಯದಂತೆ ಹಾಗು ನಮ್ಮೆಲ್ಲರ ಬೇಡಿಕೆಯಂತೆ 'ಕಲ್ಯಾಣ ಕರ್ನಾಟಕ ಎಂಬ ನಾಮಕರಣ ಮಾಡಿದೆ. ಘನ ಸರಕಾರಕ್ಕೆ ಧನ್ಯವಾದಗಳು.

ಹೆಸರು ಶಬ್ದಗಳಿಂದ ಏನಾಗುವುದು ಎಂಬ ಕಲ್ಪನೆ ಬಹಳಷ್ಟು ಜನರಲ್ಲಿದೆ.



ಅಂಥವರು ದಾಸರ ಹಾಡಾದ 'ನೀನ್ಯಾಕೊ ನಿನ್ನ ಹಂಗ್ಯಾಕೊ ನಿನ್ನ ನಾಮದ ಬಲವೊಂದಿದ್ದರೆ ಸಾಕೊ' ನೆನಪಿಸಿಕೊಳ್ಳಬೇಕು. ಹಾಗೇನೆ ಕಲ್ಯಾಣ ಕರ್ನಾಟಕ ಅನ್ನುವ ಶಬ್ದದ ಬೆಲೆಯನ್ನು ಯಾರೂ ಕಟ್ಟಲಾಗದು. ಬದುಕಿಗೆ ಭೌತಿಕ ವಿಕಾಸವೇ ಮುಖ್ಯ. ಅದಕ್ಕಾಗಿ ಸರಕಾರ ಏನು ಮಾಡಿದೆ ಎನ್ನುವುದು ಅನೇಕರ ಶಂಕೆ. ಆ ದಿಕ್ಕಿನಲ್ಲಿ ಈ ಭಾಗದ ಆರ್ಥಿಕ ಸಂಪನ್ನತೆಗಾಗಿ ಸರಕಾರಗಳು ತಮ್ಮ ಕರ್ತವ್ಯವನ್ನು ಮಾಡೇ ಮಾಡುತ್ತವೆ ಎಂಬುದು ನನ್ನ ನಂಬಿಕೆ. ಆದರೆ ಎಲ್ಲವನ್ನು ಸರಕಾರದ ಮೇಲೆ ನಂಬಿಕೆ ಇಟ್ಟು ನಮ್ಮ ಕರ್ತವ್ಯಗಳನ್ನು ನಾವು ಮರೆತರೆ

ಸ್ಪರ್ಧಾತ್ಮಕವಾದ ಈ ಜಗತ್ತಿನಲ್ಲಿ ಮುಂದೆ ಬರಲು ಸಾಧ್ಯವಿಲ್ಲ. ನೀರಾವರಿ ಮತ್ತು ಈ ಪ್ರದೇಶದ ಖನಿಜ ಸಂಪನ್ಮೂಲಗಳ ಆಧಾರಿತ ಉದ್ದಿಮೆಗಳು ಈ ಪ್ರದೇಶದ ಸಮೃದ್ಧಿಯ ಜೀವನಾಡಿಯಾಗಬೇಕು. ಅದರ ಜೊತೆಯಲ್ಲಿ ಸಮಗ್ರ ದೇಶ ಮತ್ತು ಈ ನಾಡು ಕೇವಲ ಬೃಹತ್ ಉದ್ಯಮಗಳಿಂದಲೇ ವಿಕಾಸ ಸಾಧ್ಯ ಎಂಬ ಭಾವನೆಯಿಂದ ಹೊರಬರಬೇಕು. ಸಮೃದ್ಧಿ, ಸಂಪತ್ತಿನಿಂದ ಬರುವ ಭೌತಿಕ ಸುಖವು ಮಾನವ ಸಮುದಾಯವನ್ನು ರಾಕ್ಷಸರನ್ನಾಗಿ ಮಾಡುತ್ತದೆ. ಆ ದೃಷ್ಟಿಯಿಂದ ಸಮಗ್ರ, ಸುಸ್ಥಿರ ವಿಕಾಸಕ್ಕಾಗಿ ನನ್ನ ಕೆಲವು ಸಲಹೆಗಳು.

ದೀರ್ಘ ಕಾಲದ ಸುಸ್ಥಿರ ಸಮೃದ್ಧಿಗಾಗಿ, ಸುಸಂಸ್ಕೃತ ಸಮಾಜಕ್ಕಾಗಿ 'ಬಾಹ್ಯ ಮತ್ತು ಆಂತರಿಕ ವಿಕಾಸ' ಇವು ಎರಡೂ ಅನಿವಾರ್ಯ. ಬಾಹ್ಯ ವಿಕಾಸಕ್ಕಾಗಿ ಕೃಷಿ ಮತ್ತು ಕೃಷಿ ಆಧಾರಿತ ಉತ್ಪನ್ನಗಳು, ದಿನನಿತ್ಯ ಬಳಕೆಯ ವಸ್ತುಗಳು, ದೈನಂದಿನ ಸೇವಾ ಕಾರ್ಯಗಳು ಇವುಗಳ ಮುಖಾಂತರ ಅನೇಕ ಗೃಹ, ಸಣ್ಣ ಸಣ್ಣ ಕೈಗಾರಿಕೆಗಳು ಬೆಳೆದು ಗ್ರಾಮ-ತಾಲೂಕು-ಜಿಲ್ಲೆ-ಕಲ್ಯಾಣ ಕರ್ನಾಟಕವು ಶೇಕಡ ೮೦ರಷ್ಟು ಸ್ವಾವಲಂಬಿಯಾಗಬೇಕು. ಸ್ಥಳೀಯ ಉತ್ಪನ್ನಕ್ಕೆ ಅಭಿಮಾನದ ಪ್ರೋತ್ಸಾಹ ನೀಡುವ ಸಂಸ್ಕೃತಿ ಬರಬೇಕು. ಶ್ರದ್ಧೆಯ ದುಡಿಮೆ, ಕಾಯಕ ನಮ್ಮ ಜೀವನದ ಮಂತ್ರ ಆಗಬೇಕು. ಪ್ರತಿಯೊಂದಕ್ಕೆ ಸರಕಾರಕ್ಕೆ ಕೈಚಾಚುವ ಸಂಸ್ಕೃತಿಯಿಂದ ಹೊರಬರಬೇಕು.

ಸೃಜನಾತ್ಮಕ ಸಾಹಿತ್ಯ, ಸಂಗೀತ, ಕಲೆ, ಶಿಕ್ಷಣ, ಸೇವೆ ಇತ್ಯಾದಿಗಳ ಮುಖಾಂತರ ಬಂದಿರುವ ನಮ್ಮ ಸಂಸ್ಕೃತಿ ದಿನನಿತ್ಯದ ವ್ಯವಹಾರಗಳಲ್ಲಿ ಅರ್ಥಪೂರ್ಣವಾಗಿರಬೇಕು. ಹನುಮನ ನಾಡು, ಶರಣರ ಸಂಸ್ಕೃತಿ, ದಾಸರ ಬದುಕು ನಮ್ಮ ಆಂತರಿಕ ವಿಕಾಸಕ್ಕೆ ಶಕ್ತಿಯಾಗಿ ನಿಲ್ಲಬೇಕು. ಅದಕ್ಕೆ ಬೇಕಾದ ಯುವ ಸಾಹಿತ್ಯ ಸಂಘಟನೆಗಳು ಮತ್ತು ಮಹಿಳಾ ಸಂಘಟನೆಗಳಾದ ಅಕ್ಕನ ಬಳಗ ಮುಂತಾದ ಸಂಘಟನೆಗಳ ಮುಖಾಂತರ ಈ ಭಾಗವನ್ನು ಸಮೃದ್ಧಿಭರಿತ ಭಾಗವನ್ನಾಗಿ ಮಾಡಲು ಸತತವಾದ ಕಾರ್ಯ ನಡೆಯುತ್ತಿರಬೇಕು. ಇನ್ನು ಅನಿವಾರ್ಯವಾದಲ್ಲಿ ಹೊರಜಗತ್ತಿನೊಂದಿಗೆ ಶೇ. ೨೦ರಷ್ಟು ಕೊಡು-ಕೊಳ್ಳುವುದು ಇದ್ದೇ ಇರುತ್ತದೆ. ಅಂತಹದಕ್ಕೆ ಗೃಹ, ಸಣ್ಣ ಕೈಗಾರಿಕೆ ಅನಿವಾರ್ಯ ಎನಿಸಿದಲ್ಲಿ ಒಂದೆರಡು ಕ್ಷೇತ್ರಗಳಲ್ಲಿ ಬೃಹತ್ ಕೈಗಾರಿಕೆಗಳು ನಮ್ಮ ಭಾಗದ ವಿಕಾಸಕ್ಕೆ ಇಂಬು ನೀಡಬೇಕು.

ಕಿಷ್ಕಿಂದೆ, ಸಜ್ಜಲಗುಡ್ಡ, ಸನ್ನತಿ, ಮಾನ್ಯಖೇಡ, ಯಾನಾಗುಂದಿ, ಬಜನಹಳ್ಳಿ, ಚಳಕಾಪುರ, ಕೊಪ್ಪಳ, ಬಸವಕಲ್ಯಾಣ ಮುಂತಾದವು ಸಾಂಸ್ಕೃತಿಕ ಯಾತ್ರಾ ಕೇಂದ್ರಗಳು, ಬಸವಕಲ್ಯಾಣವು ಸಾಮಾಜಿಕ ಸಾಮರಸ್ಯದ ಆದರ್ಶ ಶರಣ ಸಂಸ್ಕೃತಿಯ ಕನ್ನಡ ನಾಡಿನ ಸಾಂಸ್ಕೃತಿಕ ರಾಜಧಾನಿಯಾಗಬೇಕು. ನಮ್ಮ ನಡೆ-ನುಡಿ ಮತ್ತು ವ್ಯವಹಾರಗಳ ಮುಖಾಂತರ ಸಮಗ್ರ ಕರ್ನಾಟಕವೇ ತನ್ನನ್ನು ತಾನು ಕಲ್ಯಾಣ ಕರ್ನಾಟಕವೆಂದು ಕರೆದುಕೊಳ್ಳಲು

ಅಭಿಮಾನ ಪಡುವಂತೆ ಆಗಬೇಕೆಂಬುದು ನನ್ನ ಆಶಯ. ಕರ್ನಾಟಕ-ಕಲ್ಯಾಣ ಕರ್ನಾಟಕ ಇದರಲ್ಲಿ ಬಹು ದೊಡ್ಡ ಅಂತರ ಮತ್ತು ಶಕ್ತಿ ಅಡಗಿದೆ. ಅದರ ಮರ್ಮವನ್ನರಿತು ಈ ಭಾಗದ ಜನತೆ ಧಾರ್ಮಿಕ, ಸಾರ್ವಜನಿಕ, ರಾಜಕೀಯ, ದೂರದೃಷ್ಟಿಯ ಸೃಜನಾತ್ಮಕ ನೇತೃತ್ವದ ಮುಖಾಂತರ ಈ ಗುರಿಯತ್ತ ಸಾಗಲು ಮುನ್ನಡೆಯಬೇಕು. ಇಲ್ಲಿ ಯಾರೂ ನಿರುದ್ಯೋಗಿಗಳಾಗಿ ಉಳಿಯಬಾರದು. ದುಡಿದು ಬದುಕುವ ಸಂಸ್ಕೃತಿ ನಾಲ್ಕು ನಿಟ್ಟಿನಲ್ಲಿ ಗೌರವದಿಂದ ಎದ್ದು ಕಾಣಬೇಕು. ವಿಕಲಚೇತನರ, ಅಸಹಾಯಕರ, ವಯೋವೃದ್ಧ ಇತರ ಸುಮಾರು ಶೇ.೩ರಷ್ಟು ಜನರ ಸುಖ-ದುಃಖ ನೋಡಿಕೊಳ್ಳುವ ಜವಾಬ್ದಾರಿ ನಮ್ಮದಾಗಿರಬೇಕು. ಬೇಡಿಕೆಗಳ ಸುರಿಮಳೆಯಲ್ಲಿ ನಮ್ಮ ಕರ್ತವ್ಯ ಮತ್ತು ಕರ್ತವ್ಯಪ್ರಜ್ಞೆ ಮರೆಯಬಾರದು. 'ಕೂತು ಉಂಡರೆ ಕುಡಿಕೆ ಹೊನ್ನು ಸಾಲದು' ಎಂಬ ಗಾದೆ ಮಾತು ನಮಗೆಲ್ಲರಿಗೂ ಪಾಠ ಕಲಿಸಲಿ, ದುಡಿಮೆ ಮಾನವನನ್ನು ಅನೇಕ ಅನಿಷ್ಟಗಳಿಂದ ಕಾಪಾಡುತ್ತದೆ.

ಜನಜೀವನ ಮತ್ತು ನಾಡಿನ ಸಂಸ್ಕೃತಿಯ ಮೇಲೆ ಭಾಷೆಯ ಪ್ರಭಾವ ಅತ್ಯಂತ ಪರಿಣಾಮಕಾರಿಯಾಗಿರುತ್ತದೆ. ಕನ್ನಡ ಭಾಷೆಯನ್ನು ನಮ್ಮ ಮಕ್ಕಳು ಕಳೆದುಕೊಂಡರೆ ಭಾಷೆಯ ಜೊತೆಗೆ ನಮ್ಮ ಸಂಸ್ಕೃತಿಯನ್ನು ಕಳೆದುಕೊಂಡಂತೆ, ಮುಂದೆ ಅದು ನಾಡಿಗೂ, ದೇಶಕ್ಕೂ ಹಾನಿ. ಆ ನಿಮಿತ್ಯ ಕನ್ನಡ ನಾಡಿನ ಎಲ್ಲ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ವಾರದಲ್ಲಿ ಎರಡು ದಿನ ಮಕ್ಕಳು ಕನ್ನಡದಲ್ಲಿ (ಸ್ಥಳೀಯ ಭಾಷೆ) ಮಾತನಾಡುವಂತೆ ಆದೇಶ ನೀಡಬೇಕು. ಅದೇ ರೀತಿ ಮಾತೃಭಾಷೆಯ (ಕನ್ನಡ) ಮಕ್ಕಳು ಇಂಗ್ಲೀಷ್ ಕೀಳರಿಮೆಯ ಭಾವನೆಯಿಂದ ಹೊರಬರಲು ವಾರದಲ್ಲಿ ೨ ದಿನ ಮಕ್ಕಳು, ಶಿಕ್ಷಕರು ಇಂಗ್ಲಿಷಿನಲ್ಲಿ ಮಾತನಾಡಬೇಕು. ಜೊತೆಯಲ್ಲಿ ಆಂಗ್ಲ ಮಾಧ್ಯಮದ ಎಲ್ಲ ಶಿಕ್ಷಣ ಸಂಸ್ಥೆಗಳು ಮತ್ತು ಪಾಲಕರು, ಮಕ್ಕಳು ನಾಡಿಗೆ ಮತ್ತು ಪರಿವಾರಕ್ಕೆ ಋಣಿಯಾಗಿರಬೇಕಾದರೆ ಈ ಮೇಲಿನ ವಿಷಯಕ್ಕೆ ಎಲ್ಲರೂ ಒತ್ತಾಯ ತರಬೇಕು. ಈಗಾಗಲೇ ಆಂಗ್ಲ ಭಾಷೆಯ ಹುಚ್ಚಿನಲ್ಲಿ ಸಾಕಷ್ಟು ಕಳೆದುಕೊಂಡಿದ್ದೇವೆ. ಇನ್ನೂ ಹೆಚ್ಚಿಗೆ ಕಳೆದುಕೊಳ್ಳುವುದು ಬೇಡ. ಇದರಿಂದ ಮಕ್ಕಳ ಮೇಲೆ ಮಾನಸಿಕ ಒತ್ತಡವೂ ಕಡಿಮೆಯಾಗುತ್ತದೆ. ಮಕ್ಕಳ ಸ್ವತಂತ್ರ ಸ್ವಸ್ಥ ಬೆಳವಣಿಗೆಗೆ ಸಹಾಯಕವಾಗುತ್ತದೆ.

ಒಟ್ಟಾರೆ ಮಾನವನ ಮೊದಲನೆಯ ಸಂಸ್ಕೃತಿ ನೀಡಿರುವ ಹನುಮನ ಈ ಭೂಮಿ, ಶರಣರ-ದಾಸರ ಈ ಭೂಮಿ, ಆದರ್ಶ ರಾಜಮನೆತನಗಳ ಈ ನಾಡು, ತುಂಗಭದ್ರಾ, ಕೃಷ್ಣಾ, ಕಾರಂಜಾ, ಭೀಮಾ ನದಿಗಳ ದಂಡೆಯಲ್ಲಿ ಅರಳಿದ ನಮ್ಮ ಸಂಸ್ಕೃತಿಯು ಕಲ್ಯಾಣ ಕರ್ನಾಟಕ ನಾಡಿಗೆ ಸಮೃದ್ಧಿಯನ್ನು ನೀಡಿ ಸಮಗ್ರ ಕರ್ನಾಟಕದ ಗೌರವದ ಭಾಗವಾಗಿ ತಾಯಿ ಭಾರತಿಯ ಒಡಲಿಗೆ ಶ್ರದ್ಧೆಯ ದುಡಿಮೆ ಮತ್ತು ಸೇವೆಯಿಂದ ಅತ್ಯಂತ ಮುಂದುವರೆದ ಪ್ರದೇಶವಾಗಲು ಈ ಭಾಗದ ನಾವೆಲ್ಲರೂ ಶ್ರಮಿಸೋಣ. ಈ ಮಹತ್ಕಾರ್ಯಕ್ಕೆ ಶಕ್ತಿ ಈ ನೆಲ, ಕನ್ನಡಾಂಬೆ ಮತ್ತು ಭಾರತಮಾತೆ ನಮಗೆ ಕೊಡಲೆಂದು ಪ್ರಾರ್ಥಿಸುತ್ತ ನನ್ನ ಮಾತಿಗೆ ವಿರಾಮ ನೀಡುತ್ತೇನೆ.

ಸಮಕಾಲೀನ ಸಾಹಿತ್ಯ : ಚಹರೆ ಮತ್ತು ಸವಾಲುಗಳು

## ಸಾಹಿತ್ಯ ವಿಮರ್ಶೆ

· ವಿ. ಚಂದ್ರಶೇಖರ ನಂಗಲ

### ಸಾಹಿತ್ಯ ವಿಮರ್ಶೆ ಎಂದರೇನು?

ಸಾಹಿತ್ಯ ವಿಮರ್ಶೆಯ ಪ್ರಯೋಗ ಮತ್ತು ತಾತ್ವಿಕತೆಯಲ್ಲಿ ಪ್ರಯೋಗಕ್ಕಿರುವ ಆಸಕ್ತಿ ತಾತ್ವಿಕತೆಗಿಲ್ಲ! ಸಮಕಾಲೀನ ಕನ್ನಡದ ಸಾಹಿತ್ಯ ವಿಮರ್ಶೆಯಲ್ಲಿ ಪ್ರಯೋಗ ಪ್ರವೃತ್ತಿ ಸಮೃದ್ಧವಾಗಿದೆ. ಆದರೆ ಈ ಎಲ್ಲಾ ಪ್ರಯೋಗಗಳ ಚಾಲಕಶಕ್ತಿಯಾದ ತಾತ್ವಿಕತೆ ಬಗ್ಗೆ ತೀವ್ರವಾದ ನಿರಾಸಕ್ತಿಯಿದೆ. ಆದ್ದರಿಂದ ನನ್ನ ಲೇಖನದಲ್ಲಿ ಕನ್ನಡದ ಸಾಹಿತ್ಯ ವಿಮರ್ಶೆಯ ತಾತ್ವಿಕತೆ ಕುರಿತು ಚರ್ಚೆಯನ್ನು ಮಾಡಿದ್ದೇನೆ. ಈ ಚರ್ಚೆಗೆ ಹಿನ್ನೆಲೆಯಾಗಿ ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯ ಪ್ರಯೋಗಗಳು ಲಕ್ಷದಲ್ಲಿವೆ ಎಂಬುದನ್ನು ಸಹೃದಯರು ಗಮನಿಸಬೇಕು.

ಸಾಹಿತ್ಯ ಕೃತಿ ಚಿರಾಯು, ಸಾಹಿತ್ಯ ವಿಮರ್ಶೆ ಅಲ್ಪಾಯು! ಕಾಲಪ್ರವಾಹದಲ್ಲಿ ಎದುರೀಜುವ ಹತ್ತುಮೀನುಗಳಂತೆ ಸಾಹಿತ್ಯ ಕೃತಿ ಸದೃಢವಾಗಿ ಚಲಿಸುತ್ತದೆ. ಆದರೆ ಸಾಹಿತ್ಯ ವಿಮರ್ಶೆ ಕಸಕಡ್ಡಿಗಳಂತೆ ಕೊಚ್ಚಿಹೋಗುತ್ತದೆ. ಏಕೆಂದರೆ ಕಸಕಡ್ಡಿಗಳು ಸ್ಥಾವರ ಹತ್ತುಮೀನುಗಳು ಜಂಗಮ! “ಸ್ಥಾವರಕ್ಕೆ ಅಳಿವುಂಟು ಜಂಗಮಕ್ಕೆ ಅಳಿವಿಲ್ಲ” ಎಂಬ ಬಸವಣ್ಣನ ವಚನವನ್ನಿಲ್ಲಿ ಸ್ಮರಿಸಬಹುದು. ಸಾಹಿತ್ಯ ವಿಮರ್ಶೆಯು ಜಂಗಮವಾಗಬೇಕಾದರೆ, ಅದರ ತಾತ್ವಿಕತೆಯ ನೆಲೆ ಬದಲಾಗಬೇಕು. ಈ ದೃಷ್ಟಿಯಿಂದ ಮುಂದಿನ ವಿಚಾರವನ್ನು ಆಲಿಸಲು ಕೋರುತ್ತೇನೆ.

ಸಾಹಿತ್ಯ ಕೃತಿಯನ್ನು ಕೃತಿಕಾರನಿಂದ, ನಿರ್ದಿಷ್ಟ ಸಾಮಾಜಿಕ ಅಥವಾ ಚಾರಿತ್ರಿಕ ಸಂದರ್ಭಮೂಲಗಳಿಂದ, ಪ್ರತ್ಯೇಕ ಕಾಲಘಟ್ಟಗಳಿಂದ ಪಾರುಮಾಡುವುದೇ 'ಸಾಹಿತ್ಯ ವಿಮರ್ಶೆ' ಎಂದು ತಿಳಿಯಬೇಕು.

ಸಾಹಿತ್ಯ ವಿಮರ್ಶೆಯ ನಿರ್ದೇಶಕ ಸೂತ್ರಗಳು ಅಥವಾ ಅಧಿಕಾರ ಕೇಂದ್ರಗಳಲ್ಲಿ ಬಹುಮುಖ್ಯವಾದವು- ಮೂರು!

(೧) **ಕೃತಿಕಾರನ ಅಧಿಕಾರ ಕೇಂದ್ರ :** ಇದು ಕೃತಿ ಮತ್ತು ಕೃತಿಕಾರನ ನಡುವೆ ಅಭೇದ ಕಲ್ಪನೆಯನ್ನು ಬಲವಾಗಿ ಪ್ರತಿಪಾದಿಸುತ್ತದೆ. ಕೃತಿಕಾರನ ಅಧಿಕೃತ ಮುದ್ರೆ ಮತ್ತು ಕಾವ್ಯಾರ್ಥದ ವಾರಸುದಾರಿಕೆ ಇಲ್ಲಿ ಮುಖ್ಯ.

(೨) **ನಿರ್ದಿಷ್ಟ ಸಾಮಾಜಿಕ ಅಥವಾ ಚಾರಿತ್ರಿಕ ಸಂದರ್ಭಮೂಲಗಳ ಅಧಿಕಾರ ಕೇಂದ್ರ :** ಇದು

ಕೃತಿ ಮತ್ತು ಅದು ಹುಟ್ಟಿದ ನಿರ್ದಿಷ್ಟ ಸಾಮಾಜಿಕ ಅಥವಾ ಚಾರಿತ್ರಿಕ ಸಂದರ್ಭ ಮೂಲಗಳ ಮಧ್ಯೆ ಅಭೇದ ಕಲ್ಪನೆಯನ್ನು ಬಲವಾಗಿ ಪ್ರತಿಪಾದಿಸುತ್ತದೆ. ಸಾಹಿತ್ಯ



ಕೃತಿ + ನಿರ್ದಿಷ್ಟ ಸಮಾಜ + ನಿರ್ದಿಷ್ಟ ಚರಿತ್ರೆಗಳ ಜನ್ಯ ಜನಕ ಸಂಬಂಧ ಇಲ್ಲಿ ಮುಖ್ಯ! ಇದನ್ನು ಸಾಹಿತ್ಯ ಕೃತಿಗಳ ವಂಶವಾಹಿ ಅಧ್ಯಯನ (=ಜೆನೆಟಿಕಲ್ ಸ್ಟಡೀಸ್) ಎನ್ನುತ್ತಾರೆ.

(೩) ಪ್ರತ್ಯೇಕ ಕಾಲಘಟ್ಟದ ಅಧಿಕಾರ ಕೇಂದ್ರ : ಇದು ಕೃತಿ ಮತ್ತು ನಿರ್ದಿಷ್ಟ ಕಾಲಘಟ್ಟದ ನಡುವೆ ಅಭೇದ ಕಲ್ಪನೆಯನ್ನು ಬಲವಾಗಿ ಪ್ರತಿಪಾದಿಸುತ್ತದೆ. ಸಾಹಿತ್ಯ ಕೃತಿಗಳೆಂಬ “ಕಾಮಿತಾರ್ಥ ಪ್ರದಾಯಕ”

ಕಾಮಧೇನುಗಳ ಕಾಲಘಟ್ಟದ ಕೊಟ್ಟಿಗೆಯಲ್ಲಿ ಶಾಶ್ವತವಾಗಿ ಕಟ್ಟಿಹಾಕುತ್ತದೆ. ಕನ್ನಡದಲ್ಲಿ ವಿಸ್ತ್ರತವಾಗಿ ಬಳಕೆಯಲ್ಲಿರುವ 'ಚಾರಿತ್ರಿಕ ವಿಧಾನ' ಎಂಬ ಸಾಹಿತ್ಯ ವಿಮರ್ಶೆ ಇದಕ್ಕೆ ನಿದರ್ಶನ!

ಕೃತಿಕಾರ + ನಿರ್ದಿಷ್ಟ ಸಾಮಾಜಿಕ ಅಥವಾ ಚಾರಿತ್ರಿಕ ಸಂದರ್ಭ + ಪ್ರತ್ಯೇಕ ಕಾಲಘಟ್ಟ ಎಂಬ 'ಅಧಿಕಾರ ತ್ರಿಕೋನ ಕೇಂದ್ರ'ಗಳಿಂದ ಸಾಹಿತ್ಯ ವಿಮರ್ಶೆ ಪಾರಾಗಬೇಕು. ನಮ್ಮಲ್ಲಿ ಸಾಹಿತ್ಯ ವಿಮರ್ಶೆಯು ಮೇಲ್ಕಂಡ ಅಧಿಕಾರ ತ್ರಿಕೋನ ಕೇಂದ್ರಕ್ಕೆ ಬದ್ಧವಾದ ಪಂಜರದ ಪಕ್ಷಿಯಾಗಿದೆ.

ತ್ರಿಕೋನ ಅಧಿಕಾರ ಕೇಂದ್ರಗಳಿಂದ ಪಾರಾಗದ ಸಾಹಿತ್ಯ ವಿಮರ್ಶೆಯು ಸಂಪೂರ್ಣವಾಗಿ ಊಳಿಗಮಾನ್ಯ ಪದ್ಧತಿಯ ಜಮೀನ್ದಾರಿ ಬಿಗಿಹಿಡಿತದ ವ್ಯವಸ್ಥೆಗೆ ಬಲಿಯಾಗುತ್ತದೆ.

ಸಾಹಿತ್ಯ ವಿಮರ್ಶೆಯು ಪ್ರಜಾಸತ್ತಾತ್ಮಕ ಆಗಬೇಕಾದರೆ, ಮೇಲ್ಕಂಡ ತ್ರಿಕೋನ ಅಧಿಕಾರ ಕೇಂದ್ರಗಳಿಂದ ಪಾರಾಗಬೇಕು. ಸಾಹಿತ್ಯ ಕೃತಿಯು ಬೀಜರೂಪಿಯಾದ ವಸ್ತು! ಬೀಜವಸ್ತುವಿಗೆ ಗತಿಶೀಲತೆಯಿದೆ. ಅಂದರೆ ಬೀಜವು ಭೂತಕಾಲ > ವರ್ತಮಾನಕಾಲ > ಭವಿಷ್ಯತ್ ಕಾಲಗಳ ಕೂಡಲಸಂಗಮ! ಈ ದೃಷ್ಟಿಯಿಂದಲೇ ಅಲ್ಲಮಪ್ರಭು ಕಾಲಗತಿಯನ್ನು ಸಂಕೀರ್ಣ ಸಮಾವಿಷ್ಟಕ ನೆಲೆಯಲ್ಲಿ ನಿರೂಪಿಸಿದ್ದಾನೆ. “ಹಿಂದಣ ಅನಂತವನೂ ಮುಂದಣ ಅನಂತವನೂ ಒಂದುದಿನ ಒಳಕೊಂಡಿತ್ತು ನೋಡಾ” ಎಂಬ ನುಡಿ ಗತಿಶೀಲವಾದುದು! ಇದರಿಂದಾಗಿ ಸಾಹಿತ್ಯವಸ್ತು ಕೂಡಾ ಕುವೆಂಪು ಹೇಳಿರುವಂತೆ ಅನವರತ ಅಶೃಂಖಲೆ'ಯಾಗಿ ಸದಾಕಾಲ ಗತಿಶೀಲವಾಗಿರುತ್ತದೆ. “ಇದು ನಿಚ್ಚಂ ಪೊಸತು” (=ಆದಿಕವಿ ಪಂಪ) ಎಂಬುದರ ಅರ್ಥವೂ ಇದೇ ಆಗಿದೆ.

**ಸಾಹಿತ್ಯ ವಿಮರ್ಶೆಯ ಸಂವಿಧಾನ**

೧) ಒಳಮುಖಿ ವಿಮರ್ಶೆ Intrinsic Approach ಮತ್ತು ಹೊರಮುಖಿ ವಿಮರ್ಶೆ Extrinsic Approach - Theory Of Literature ರೆನಿ ವೆಲೆಕ್ ಮತ್ತು ಆಸ್ಟಿನ್ ವಾರೆನ್

೨) Five Approaches Of Literary Criticism - Wilber Scott [ವಿಮರ್ಶೆಯ ಪಂಚಪ್ರಕಾರಗಳು - ವಿಲ್ಬರ್ ಸ್ಕಾಟ್ ]

೧. ನೈತಿಕ ದೃಷ್ಟಿಯ ವಿಮರ್ಶೆ

೨. ಮನೋವೈಜ್ಞಾನಿಕ ದೃಷ್ಟಿಯ ವಿಮರ್ಶೆ

೩. ಸಾಮಾಜಿಕ ದೃಷ್ಟಿಯ ವಿಮರ್ಶೆ

೪. ರೂಪನಿಷ್ಠ ದೃಷ್ಟಿಯ ವಿಮರ್ಶೆ


೫. ಆರ್ಕಿಟೈಪಲ್ ದೃಷ್ಟಿಯ ವಿಮರ್ಶೆ

**ವಿಧ ವಿಧ ಓದುಗಳ ಗತಿಶೀಲತೆಯ ತತ್ವ**

ಇಂಗ್ಲಿಷ್‌ನಲ್ಲಿ ಪ್ರೊ ಡೇವಿಡ್ ಲಾಡ್ಜ್ ಸಂಪಾದನೆಯ 20th Century Literary Criticism ತರಹದ ಗ್ರಂಥಗಳಿವೆ. ಇವುಗಳಲ್ಲಿ ಬಯಾಗ್ರಫಿಕಲ್ ವಿಮರ್ಶೆ, ಹಿಸ್ಟಾರಿಕಲ್ ವಿಮರ್ಶೆ, ಎಂಪೆರಿಕಲ್ ವಿಮರ್ಶೆ, ರೂಪನಿಷ್ಠ ವಿಮರ್ಶೆ, ಸಾಮಾಜಿಕ ವಿಮರ್ಶೆ, ತಾತ್ವಿಕ ವಿಮರ್ಶೆ, ಪುರಾಣೀಯ ವಿಮರ್ಶೆ ಮುಂತಾದ ವಿಮರ್ಶೆಗಳ ನಿರೂಪಣೆಯಿದೆ. ನಮ್ಮ ದೇಶದ ಸಂದರ್ಭದಲ್ಲಿ ರಸವಿಮರ್ಶೆ, ಧಾರ್ಮಿಕ ವಿಮರ್ಶೆ, ಪ್ರಾಯೋಗಿಕ ವಿಮರ್ಶೆ ಇತ್ಯಾದಿ ವಿಧ ವಿಧ ಓದುಗಳನ್ನು ಗುರುತಿಸಬಹುದು. ಮೇಲ್ಕಂಡ ಓದುಗಳಲ್ಲದೆ ರಚನಾವಾದಿ, ರಚನೋತ್ತರವಾದಿ, ನಿರಚನಾವಾದಿ ಮುಂತಾದ ಓದುಗಳಿವೆ. ಇದಲ್ಲದೆ ಪುರುಷವಾದಿ, ಸ್ತ್ರೀವಾದಿ, ಜಾತಿವಾದಿ, ಸಂಘರ್ಷವಾದಿ ಓದುಗಳೂ ಇವೆ.

ಮೇಲ್ಕಂಡ ಎಲ್ಲಾ ಓದುಗಳನ್ನು ಮಾನವಕೇಂದ್ರಿತ ಓದು (Anthropo Centric Reading) ಎಂದು ಕರೆಯಬಹುದು. ಸಾಹಿತ್ಯ ಕೃತಿಗಳ ರೂಪ (Form) ಮಾತ್ರ ಗಮನಿಸಿ ನಡೆಸುವ ವಿಮರ್ಶೆಯನ್ನು 'ರೂಪನಿಷ್ಠ ವಿಮರ್ಶೆ' ಎನ್ನಬಹುದು. ಇದು ೪೫೦ ಓದಿನ ಅಧ್ಯಯನವಾಗಿದೆ. ಪುರುಷವಾದಿ ಓದುಗಳು ಮತ್ತು ಸ್ತ್ರೀವಾದಿ ಓದುಗಳು ಅವರವರ ಮೂಗಿನ ನೇರಕ್ಕೆ ನೋಡುತ್ತಾ ಬರೆದ ವಿಮರ್ಶೆಗಳಾದ್ದರಿಂದ ಇವನ್ನು ೯೦° ಓದುಗಳು ಎಂದು ಕರೆಯಬೇಕು. ಮನುಷ್ಯರ ಕಣ್ಣಳತೆಯು ೧೮೦೦ ಆಗಿದೆ. ಇದಕ್ಕನುಗುಣವಾಗಿ ಮನುಷ್ಯ ಕೇಂದ್ರಿತ ಓದುಗಳು ೧೮೦೦ ವಿಸ್ತಾರವನ್ನು ಹೊಂದಿರುತ್ತವೆ. ಈ ಭೂಮಿಯಲ್ಲಿರುವ ಸಕಲ ಜೀವರಾಶಿಯನ್ನು ಪರಿಗಣಿಸದೆ, ಮನುಷ್ಯರನ್ನಷ್ಟೇ ಲಕ್ಷದಲ್ಲಿಟ್ಟುಕೊಂಡು ನಡೆಸುವ ಎಲ್ಲಾ ಓದುಗಳು ೧೮೦೦ ಮೀರುವುದಿಲ್ಲ. ಮನುಷ್ಯರಿಂದ ಮನುಷ್ಯರಿಗಾಗಿ ಮನುಷ್ಯರೇ ನಡೆಸುವ ಓದುಗಳೇ ಮನುಷ್ಯ ಕೇಂದ್ರಿತ ಓದುಗಳು.

45%





೧) ರೂಪನಿಷ್ಠ ದೃಷ್ಟಿಕೋನ ೪೫° ಓದು



೨) ಪುರುಷವಾದಿ ಮತ್ತು ಸ್ತ್ರೀವಾದಿ ದೃಷ್ಟಿಕೋನ ೯೦° ಓದು

೩) ಮನುಷ್ಯ ಕೇಂದ್ರಿತ ದೃಷ್ಟಿಕೋನ ೧೮೦° ಓದು

೪) ಜೀವಕೇಂದ್ರಿತ ದೃಷ್ಟಿಕೋನ ೩೬೦೦ ಓದು



ಜೀವಕೇಂದ್ರಿತ ಓದು ೩೬೦೦ ಪೂರ್ಣದೃಷ್ಟಿ (=ಭೂಮಿತಾಯಿ ತತ್ವದ ಅಧ್ಯಯನ)

**ಜೀವಕೇಂದ್ರಿತ ಓದುಗಳು**

ಆದರೆ ಜೀವಕೇಂದ್ರಿತ ಓದುಗಳ (Bio Centric)ವ್ಯಾಪ್ತಿ ತುಂಬಾ ದೊಡ್ಡದು! ಪೂರ್ಣವೃತ್ತಾಕಾರದ ೩೬೦ ವ್ಯಾಪ್ತಿಯ ಪೂರ್ಣದೃಷ್ಟಿಯ ಓದುಗಳು ಅತ್ಯಂತ ಪ್ರಸ್ತುತವಾದುದು! ಯಾವುದೇ ಭೇದಭಾವವಿಲ್ಲದ ಭೂಮಿತಾಯಿ ಮಕ್ಕಳಿಂದ, ಭೂಮಿತಾಯಿ ಉಳಿವಿಗಾಗಿ, ಭೂಮಿತಾಯಿ ಮಕ್ಕಳೇ ನಡೆಸುವ ಓದುಗಳೇ ಜೀವ ಕೇಂದ್ರಿತ ಓದುಗಳು! ಭೂಮಿತಾಯಿಯಲ್ಲಿ ಸಸ್ಯಪರಿಸರ + ಪ್ರಾಣಿಪರಿಸರ + ಮನುಷ್ಯಪರಿಸರ ಎಂಬ ಹಸಿರು ಪಿರಮಿಡ್ ಇದೆ. ಇವುಗಳ ನಡುವಣ ಸಹಜೀವನ (Symbiosis) ಕೂಡಾ ಜೀವಕೇಂದ್ರಿತ ದೃಷ್ಟಿಯ ಅಧ್ಯಯನವಾಗಿದೆ.

ಜೀವಮುಖಿ ಅಥವಾ ಜೀವಕೇಂದ್ರಿತ ದೃಷ್ಟಿಯ ವಿಮರ್ಶೆ ಇಂದು ಬೇಕಾಗಿದೆ:

೧) ಕೃತಿಯ ಜೀವಕ್ಕೆ ಮುಖಾಮುಖಿ

೨) ಸಕಲ ಜೀವಕೇಂದ್ರಿತ ಮುಖಾಮುಖಿ

ಇದನ್ನು "ಹಸಿರು ಕಾಳಜಿಯ ಓದು (=ಗ್ರೀನ್ ರೀಡಿಂಗ್) ಅಥವಾ



ಭೂಮಿತಾಯಿ ತತ್ವದ ಓದು (=ಮದರ್ ಅರ್ತ್ ಫಿಲಾಸಫಿ) ಎಂದೂ ಕರೆಯುತ್ತಾರೆ.

ಸಹಜೀವನದ (=ಸಿಂಬಿಯಾಸಿಸ್) ಓದು

ಇಪ್ಪತ್ತನೇ ಶತಮಾನದಲ್ಲಿ ಸಮೃದ್ಧವಾಗಿ ವಿಶ್ಲೇಷಣೆ (Analysis) ಸಂಶ್ಲೇಷಣೆಯ (Synthesis) ಸಾಹಿತ್ಯ ವಿಮರ್ಶೆ ರಾಶಿ ರಾಶಿಯಾಗಿ ಬಂದುಬಿಟ್ಟಿದೆ. ಇದನ್ನು ಕ್ರಮವಾಗಿ ಸೂಕ್ಷ್ಮ (Micro) ಮತ್ತು ಸಮಗ್ರ (Macro) ಎಂದು ಕರೆಯಬಹುದು. ಈಗ ಇಪ್ಪತ್ತೊಂದನೇ ಶತಮಾನ. ಪ್ರಸ್ತುತ ಒಬ್ಬೊಬ್ಬ ಕವಿಯ ಸಮಗ್ರಕಾವ್ಯಗಳು ಬಂದಿವೆ. ಇವುಗಳ ನಡುವೆ ಎಂತಹ ಸಹಜೀವನವಿದೆ? ಎಂಬುದನ್ನು ಸ್ವಂತ ಸಮಗ್ರಕಾವ್ಯ ದೃಷ್ಟಿಯಿಂದ ಪರಸ್ಪರ ತೌಲನಿಕ ಅಧ್ಯಯನ ನಡೆಸಬಹುದು. ಈ ವಿಧಾನವನ್ನೇ ನಾನು 'ಸಹಜೀವನ' (Symbiosis) ಎಂದು ಕರೆದಿದ್ದೇನೆ. ಇಂದು ನಮಗೆ ಪ್ರಸ್ತುತವಾದ ಅಧ್ಯಯನ ಕ್ರಮವೆಂದರೆ ಸಹಜೀವನದ ಓದುಗಳೇ ಆಗಿದೆ. ಇದು ಜೀವಕೇಂದ್ರಿತ ಅಧ್ಯಯನ!

# ಸೃಜನಶೀಲ ಸಾಹಿತ್ಯ

· ಡಾ. ಪದ್ಮನಿ ನಾಗರಾಜು

ಮನುಷ್ಯನ ಮನಸ್ಸು ಬದುಕಿಗೆ, ಅದು ಧ್ವನಿಸುವ ಸತ್ಯಗಳಿಗೆ, ಸೌಂದರ್ಯಕ್ಕೆ, ನೋವು-ನಲಿವುಗಳಿಗೆ ಹಾಗೂ ಕಾಲಾತೀತವೆನಿಸುವ ದಾರ್ಶನಿಕ ಕಾಣೆಗಳಿಗೆ ತೆರೆದುಕೊಳ್ಳುವ ರೀತಿಯಲ್ಲಿಯೇ ಸಾಹಿತ್ಯದ ಸೃಜನಶೀಲತೆಯ ಹುಟ್ಟನ್ನು ನಾವು ಗುರುತಿಸಬಹುದು. ಸಾಹಿತ್ಯದ ಸೃಜನಶೀಲ ಪ್ರಕ್ರಿಯೆ ಸಾಧ್ಯವಾಗುವುದು ವಿಸ್ತ್ರತ ಜೀವನದ ಅನುಭವವುಳ್ಳ ಭೂತ, ವರ್ತಮಾನ ಹಾಗೂ ಭವಿಷ್ಯತ್ತುಗಳನ್ನು ಬೆಸೆಯುವ ಕೊಂಡಿಗಳನ್ನು ತನ್ನ ಅಂತರಂಗದಲ್ಲಿಯೇ ಆ ಕಾಲ ಘಟ್ಟಕ್ಕೆ ಸ್ಪಂದಿಸುವ ಪ್ರಜ್ಞೆಯುಳ್ಳ ಕ್ರಿಯೆಯಿಂದ ಮಾತ್ರ.

ಸಾಹಿತ್ಯ ಸೃಷ್ಟಿಯೆಂಬುದು ಎಲ್ಲಿಂದಲೋ ತೆಗೆದ ಹೊರಹಾಕಿದ ಮಾಯಾವಸ್ತು ವೇನಲ್ಲ. ಸಾಹಿತ್ಯ ರಚನೆಯೆಂಬುದು ಈ ಜಗತ್ತಿನಲ್ಲಿ ಯಾರೂ ಅರಿಯದ್ದನ್ನು, ಯಾರಿಗೂ ಅನುಭವ ಆಗದ್ದನ್ನು ಅನ್ವೇಷಿಸುವುದಲ್ಲ. ಅದು ಸಾಕ್ಷಾತ್ಕಾರ. ನಮ್ಮನ್ನು ನಾವೇ ಗುರುತಿಸಿಕೊಳ್ಳುತ್ತಲೇ, ಅನುಭವವನ್ನು ವಿಸ್ತರಿಸಿಕೊಳ್ಳುತ್ತಲೇ ತಾದಾತ್ಮದಲ್ಲಿ ಸ್ವೀಕರಿಸುವ, ವಿಮರ್ಶಿಸುವ ದೃಷ್ಟಿ ಬೇಕಾಗುತ್ತದೆ. ಎಲ್ಲಾ ಬರಹವೂ ಸೃಜನಶೀಲವೇ ಎಂದು ಪ್ರಶ್ನೆ ಎದುರಾಗುತ್ತದೆ. ಸೃಜನಶೀಲ ಸಾಹಿತ್ಯದ ಪ್ರಮುಖ ಅಂಶಗಳು ಹಲವು ಬರಹದ ಪ್ರಕಾರದಲ್ಲಿ ದೊರೆಯುವುದಿಲ್ಲ. ವಿಚಾರವನ್ನು ದಾಖಲಿಸುವ, ಯಾರೋ ಹೇಳಿದ್ದನ್ನು ನಮೂದಿಸುವ, ಅದಕ್ಕೆ ಆ ಲೇಖಕನ ವಿಶ್ಲೇಷಣೆ ಸೇರಿಸುವಂತಹ ಕ್ರಿಯೆ ಸೃಜನಶೀಲ ಸಾಹಿತ್ಯವಾಗಲು ಸಾಧ್ಯವೇ? ಸೃಜನಶೀಲ ಸಾಹಿತ್ಯದ ಮೂಲ ಬೇರಿರುವುದೇ ಜೀವನದ ಅಂತಃದೃಷ್ಟಿಯಲ್ಲಿ. ಅದು ಕವನವಾಗಲಿ, ಕತೆಯಾಗಲಿ, ಕಾದಂಬರಿಯಾಗಲಿ, ನಾಟಕವಾಗಲಿ ಅಲ್ಲಿ ಲೇಖಕ ತನ್ನದೇ ಆದ ಅನುಭವ, ಜೀವನ ದೃಷ್ಟಿ, ಸಾಮಾಜಿಕ ಪ್ರಜ್ಞೆ, ತನ್ನ ಸಮಾಜದಲ್ಲಿ ಆಗುತ್ತಿರುವ ಸಮಸ್ಯೆಗಳನ್ನು ವಸ್ತುನಿಷ್ಠವಾಗಿ ನೋಡುವ, ವಿಮರ್ಶಿಸುವ, ತನ್ನ ಕೃತಿಯಲ್ಲಿ ಪರಿಹಾರವನ್ನೋ, ಅದಕ್ಕೊಂದು ಸ್ಪಂದನೆಯನ್ನು ಲೇಖಕ ನೀಡಿದ್ದೇ ಆದರೆ ಅದು ಸೃಜನಶೀಲ ಸಾಹಿತ್ಯವೆನ್ನಬಹುದು.

"ಇಂದು ಸಾಹಿತ್ಯದ ಸೃಜನಶೀಲತೆ ಒಂದು ಭಾಷೆಯ, ಒಂದು ಪ್ರದೇಶದ ಅಥವಾ ಒಂದು ದೇಶದ ಪರಿಧಿಯಲ್ಲಿ ಇರಬಹುದಾದರೂ ಅದು ಇಂಗ್ಲೀಷ್ ಭಾಷೆಯ ಪ್ರಭಾವದ ಜಾಗತೀಕರಣದ ವರ್ಚಸ್ಸಿನಿಂದ ಹೊರಗುಳಿಯಲು ಸಾಧ್ಯವಿಲ್ಲ. ರಾಮಾಯಣ, ಮಹಾಭಾರತಗಳು ಶತಶತಮಾನಗಳ ಕಾಲ ಭಾರತದ ಎಲ್ಲ ಭಾಷೆಗಳ ಸೃಜನಶೀಲ ಪ್ರಕ್ರಿಯೆಯ ಮೇಲೆ ತಮ್ಮ ವರ್ಚಸ್ಸನ್ನು ಕೆಡವಿದೆ ಎಂದು ನಾವು ಹೆಮ್ಮೆಪಟ್ಟುಕೊಳ್ಳ ಬಹುದಾದರೂ ಪಾಶ್ಚಾತ್ಯ ಸಾಹಿತ್ಯಕ ಚಿಂತನೆಯಿಂದ ಬಿಡಿಸಿಕೊಳ್ಳಲಾಗದ ನಮ್ಮ ಸಾಹಿತ್ಯಕ

ಪ್ರಜ್ಞೆ, ಆಧುನಿಕತೆ ವಿಶ್ವವ್ಯಾಪಿ ಸಮುದಾಯವನ್ನು ಅತ್ಯಂತ ವೇಗದಿಂದ ಪರಿವರ್ತಿಸುತ್ತಿರುವ ರೀತಿ, ವಿಜ್ಞಾನ ಹಾಗೂ ತಂತ್ರಜ್ಞಾನ ನಮ್ಮೆಲ್ಲರ ಜೀವನದಲ್ಲಿ ನಮ್ಮ ಮೌಲ್ಯಪ್ರಜ್ಞೆಯಲ್ಲಿ ತರುತ್ತಲೇ ಇರುವ ಬದಲಾವಣೆಗಳು, ಅಲುಗಾಡಿಸುತ್ತಿರುವ ಪರಂಪರಾಗತ ನಂಬಿಕೆಗಳು ಇವುಗಳೆಲ್ಲ ಮುಂದಿನ ಸಹಸ್ರಮಾನದ ಸಾಹಿತ್ಯಕ ಸೃಜನಶೀಲತೆಗೆ ಸ್ಪಂದಿಸದೇ ಇರಲಾಗುವುದಿಲ್ಲ. ಹೀಗಾಗಿ ರಾಮಾಯಣ, ಮಹಾಭಾರತಗಳು ನಮ್ಮ ಸಾಹಿತ್ಯಕ ಪರಂಪರೆಯ ಮೇರುಕೃತಿಗಳಾಗಿ ಭಾರತೀಯವೆನಿಸುವ ಸಾಹಿತ್ಯಕ ಸೃಜನಶೀಲತೆಗೆ ಇನ್ನೂ ಪರಿಕರಗಳನ್ನೂ ಒದಗಿಸುತ್ತಿವೆಯಾದರೂ ನಮ್ಮ ಕಥಾ ಪರಂಪರೆ ಪಂಚತಂತ್ರದ ಕಥೆಗಳಿಂದ ಹಾಗೆಯೇ ಮೌಖಿಕ ಹಾಗೂ ಲಿಖಿತ ಜಾನಪದ ಸಾಹಿತ್ಯ ಪರಂಪರೆಯಿಂದ ಪ್ರಭಾವಿತವಾಗಿರುವ ವಸ್ತು ಹಾಗೂ ಅಭಿವ್ಯಕ್ತಿ ಮಾಧ್ಯಮಗಳನ್ನು ಶೋಧಿಸುತ್ತಿವೆಯಾದರೂ ಮುಂದೆ ಇವುಗಳಿಂದ ಪ್ರಭಾವಿತವಾಗಲೀ ಆಗಿರದೆ ಇರಲಿ ನಮ್ಮ ಸೃಜನಶೀಲ ಕ್ರಿಯೆ ಇವುಗಳ ಎಚ್ಚರ ತಂದುಕೊಂಡೆ. ಇಲ್ಲಿ ಅಭಿಮಾನದ ಮಾತೆಂದರೆ ನಾವು ಭಾರತೀಯರು ಪರಿಸರದಲ್ಲಿ ನಮ್ಮ ಸಾಹಿತ್ಯಕ ಪರಂಪರೆಯನ್ನು ಸಾರಾ ಸಗಟಾಗಿ ತಿರಸ್ಕರಿಸಿಲ್ಲ. ನಮ್ಮ ಸಾಹಿತ್ಯದ ಇತಿಹಾಸವನ್ನು ಆಧುನಿಕ ಮೌಲ್ಯಪ್ರಜ್ಞೆಯ ಒರೆಗಲ್ಲಿಗೆ ಹಚ್ಚಿ ನೋಡಿ ವಸ್ತು ವಿಚಾರಗಳನ್ನು ವರ್ತಮಾನದ ಸಾಮಾಜಿಕ ಬದುಕಿಗೆ ಅನ್ವಯಿಸಿ ನೋಡ ಬಯಸುವ ವಿಧಾನವನ್ನು ಕೈಬಿಟ್ಟಿಲ್ಲ. ಹಲವಾರು ಸಹಸ್ರಮಾನಗಳ ಸಾಹಿತ್ಯಕ ಪರಂಪರೆ ನಮ್ಮದು. ಹೀಗಿದ್ದೂ ನಮ್ಮ ಸಾಹಿತ್ಯಕ ಪರಿಕಲ್ಪನೆಗಳನ್ನು ಬದಲಾಗುತ್ತಲೇ ಇರುವ ಪರಿಸರದಲ್ಲಿ ಸೃಜನಶೀಲ ಚಿಂತನೆಗೆ ಹೊಂದಿಕೊಳ್ಳುತ್ತಿರುವುದು ಅಭಿಮಾನದ ಸಂಗತಿ" ಎಂದು ಹಿರಿಯ ಲೇಖಕ ವ್ಯಾಸರಾಯ ಬಲ್ಲಾಳರು ಅಭಿಪ್ರಾಯಿಸಿದ್ದಾರೆ.

ಹತ್ತನೇ ಶತಮಾನದ ಪ್ರಮುಖ ಕವಿಗಳಲ್ಲಿ ಮೊದಲಿಗನಾದ ಆದಿಕವಿ ಪಂಪ ತನ್ನ 'ವಿಕ್ರಮಾರ್ಜುನ ವಿಜಯಂ' ಕೃತಿಯನ್ನು ಬರೆಯಲು ಮಹಾಭಾರತವನ್ನೇ ಆಯ್ದುಕೊಂಡಿದ್ದಾನೆ. ಸಾವಿರಾರು ವರ್ಷದ ಆ ಕಥೆಯನ್ನು ಪಂಪ ತನಗೆ ಆಶ್ರಯ ನೀಡಿದ್ದ ಅರಿಕೇಸರಿಯನ್ನು ಮಹಾಭಾರತದ ನಾಯಕ ಅರ್ಜುನನಿಗೆ ಸಮೀಕರಿಸುವುದರ ಮೂಲಕ ತನ್ನ ಸೃಜನಶೀಲತೆಯನ್ನು ಮೆರೆದಿದ್ದಾನೆ. 'ಮಹಾಭಾರತ'ದ ಸಂಸ್ಕೃತಿಯ ಸಿರಿಯನ್ನು ಜೊತೆಗೆ ಹತ್ತನೇ ಶತಮಾನದ ಕರ್ನಾಟಕ ಸಂಸ್ಕೃತಿ, ಸಾರ್ವಕಾಲಿಕ ಅಂಶಗಳನ್ನು ಚಿತ್ರಿಸಿದ್ದಾನೆ. ಪಂಪ ಪಂಪಭಾರತವನ್ನು ಬರೆದದ್ದೇ ತನಗೆ ಆಶ್ರಯ ನೀಡಿದವನಿಗಾಗಿ ಎಂದು ಸ್ಪಷ್ಟಪಡಿಸಿದ್ದಾನೆ. "ದೂರದ ಕುರುಕ್ಷೇತ್ರದ ಮೇಲೆ ಜರುಗಿದ ಮಹಾಭಾರತವನ್ನು ಕರ್ನಾಟಕ ತನ್ನ ನೆಲದ ಮೇಲೆ ಅಳವಡಿಸಿಕೊಂಡಿತು. ಇದರಿಂದ ಹಲವಾರು ಭೌಗೋಳಿಕ (ವ್ಯಾಸ ಭಾರತದಲ್ಲಿಲ್ಲದ ಬನವಾಸಿ, ಗೋಕರ್ಣ, ನಾಗರಖಂಡಗಳ ವರ್ಣನೆ) ಚಾರಿತ್ರಿಕ ಸಾಮಾಜಿಕ ಮೊದಲಾದ ಸ್ವರೂಪ ಕರ್ನಾಟಕತ್ವ ವಿಕ್ರಮಾರ್ಜುನ ವಿಜಯದ ಮಾಧ್ಯಮದಿಂದ ಮಹಾಭಾರತವನ್ನು ಪ್ರವೇಶಿಸಿತು" ಎಂಬ ಡಾ. ಕಲಬುರ್ಗಿಯವರ ಅರ್ಥಪೂರ್ಣ ಮಾತುಗಳ ಸತ್ಯತೆಯನ್ನು ನಾವಿಲ್ಲಿ ನೋಡಬಹುದು.

ಪಂಪ ತನ್ನ ಕಾವ್ಯದಲ್ಲಿ ರಾಜರ ಗುಣಶೀಲಗಳನ್ನು ಹೊಗಳುತ್ತಲೇ ಅರ್ಜುನನ ಬಾಯಲ್ಲಿ ಆದರ್ಶ ರಾಜ ಹೇಗಿರಬೇಕೆಂದು ವಿವರಿಸುತ್ತಾ ಇಲ್ಲಿನ ವೀರರ ಆದರ್ಶ, ಸಾಹಸ, ಛಲ, ಬಲ, ನನ್ನಿ, ಧರ್ಮ, ತ್ಯಾಗ, ಅಭಿಮಾನ, ಶೌಚ ಇವೆಲ್ಲವುಗಳೂ ಆ



ಕಾಲದ ಸಮಾಜದ ಮೌಲ್ಯಗಳೇ ಆಗಿದ್ದವು. ಸಮಯ ನೋಡಿ ರಾಜರ ಅವಗುಣಗಳನ್ನು ಕವಿ ಎತ್ತಿ ತೋರಿಸಿದ್ದಾನೆ. ಕರ್ಣನಿಗೆ ಅಗ್ರಪಟ್ಟ ಕಟ್ಟುವಾಗ ಅಶ್ವತ್ಥಾಮ "ನಿಜದೊಳೆ ಭೂಪರೆಂಬರವಿವೇಕಿಗಳ್" ಎಂದು ದುರ್ಯೋಧನನನ್ನು ತೆಗಳಿದ್ದಾನೆ. ರಾಜರಿಂದ ಕಡೆಗಣಿಸಲ್ಪಟ್ಟು ಕೊನೆಗೆ ಅದನ್ನು ಸಹಿಸಲಾಗದೆ ಸಿಡಿದೆದ್ದ ಪ್ರಜಾ ಪ್ರತಿನಿಧಿಯಂತೆ ಶಲ್ಯನ ಬಾಯಲ್ಲಿ ದೋಷಾರೋಪ ಮಾಡಿದ್ದಾನೆ. ರಾಜರೆಂಬುವರು ಅವಿವೇಕಿಗಳು ಅವರನ್ನು ಸೇವಿಸಿ ಬಾಳುವುದು ಕಷ್ಟ, ಅವರಲ್ಲಿ ವಂಶ ಮದ, ಅಹಂಕಾರ ಇವೆಲ್ಲಕ್ಕಿಂತಲೂ ಮಿಗಿಲಾಗಿ ತೊತ್ತಿನ ಮೊಲೆಯ ಹಾಲನ್ನುಂಡ ಕೀಳುಣಗಳು ಮನೆ ಮಾಡಿಕೊಂಡಿರುತ್ತವೆ. ಎಂದು ಪಂಪ ಸ್ಪಷ್ಟವಾಗಿ ಅಭಿಪ್ರಾಯಿಸುತ್ತಾನೆ. "ಬೆಳಗುವೆನಿಲ್ಲಿ ಲೌಕಿಕಮನ್" ಎಂದು ಹೇಳುವ ಕವಿ ಪಂಪಭಾರತದ ಪ್ರಮುಖ ಪಾತ್ರಗಳನ್ನೆಲ್ಲಾ ತನ್ನ ಕಾಲದ ಮೌಲ್ಯ ವಿಶೇಷಗಳಿಗೆ ಮುಖ ಮಾಡುವಂತೆ ಮಾಡಿರುವುದು ಆತನ ಸೃಜನಶೀಲತ್ವಕ್ಕೆ ಸಾಕ್ಷಿಯಾಗಿದೆ.

ರನ್ನ ತನ್ನ 'ಸಾಹಸಭೀಮ ವಿಜಯ'ಕ್ಕೆ ವಸ್ತುವನ್ನು ಮೂಲದಿಂದ ತೆಗೆದುಕೊಂಡಿದ್ದರೂ ತನ್ನ ಕಾವ್ಯವನ್ನು ಸಮಸ್ತ ಭಾರತವನ್ನು ಸಿಂಹಾವಲೋಕನ ಕ್ರಮದಿಂದ ನಿರೂಪಿಸಿದ್ದಾನೆ. ಭೀಮ ದುರ್ಯೋಧನರ ಗದಾಯುದ್ಧವನ್ನು ತನ್ನ ಕಾವ್ಯಕ್ಕೆ ವಸ್ತುವಾಗಿ ಆಯ್ದುಕೊಂಡಿದ್ದರೂ ತನ್ನ ಸೃಜನಶೀಲತೆಯನ್ನು ಅನೇಕ ಪ್ರಸಂಗಗಳನ್ನು ಮೂಲದಲ್ಲಿ ಇಲ್ಲದ್ದನ್ನು ತನ್ನ ಕೃತಿಯಲ್ಲಿ ಅಳವಡಿಸಿದ್ದಾನೆ. ಭೀಮನನ್ನು ಕುರಿತ ಮೂದಲಿಕೆ, ಭೀಮನ ಪ್ರತಿಜ್ಞೆ, ಸುಯೋಧನನಿಂದ ಅಭಿಮನ್ಯುವಿನ ಪ್ರಶಂಸೆ, ಮಗ ಲಕ್ಷಣಕುಮಾರನಿಗಾಗಿ ಕಣ್ಣೀರು ಸುರಿಸುವುದು ಮುಂತಾದ ಸನ್ನಿವೇಶಗಳನ್ನು ರನ್ನ ಹೊಸದಾಗಿ ಸೇರಿಸಿದ್ದಾನೆ. ಪ್ರತಿನಾಯಕನನ್ನು ಮೆಚ್ಚಿಕೊಂಡಿರುವ ಕವಿ ದುರ್ಯೋಧನನ ಸ್ವಭಾವ, ಸ್ವಾಭಿಮಾನ, ಆತ್ಮವಿಶ್ವಾಸ, ಗಟ್ಟಿ ನಿರ್ಧಾರ, ಆದರ್ಶ ಸ್ನೇಹ, ಪುತ್ರ ವಾತ್ಸಲ್ಯ, ಕಡುಹಗೆಯ ಮಗನನ್ನೂ ಮನಸಾರೆ ಹೊಗಳುವ ಗುಣವನ್ನು ರನ್ನ ಕವಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ. ವೈಶಂಪಾಯನ ಸರೋವರದಲ್ಲಿ ಅಡಗಿ ಕುಳಿತಿದ್ದ ದುರ್ಯೋಧನನನ್ನು ಭೀಮ ಹೊರಗೆಳೆಯಲು ಮಾಡಿದ ಸಿಂಹನಾದಕ್ಕೆ

ಅರೇಸೀದವು ತಾವರೆ ಖಗ

ಮರೆಬೆಂದವು ಭೀಮಕೋಪಶಿಖಿ

ವರದ ಮಳಲ್ ಪುರಿಗಡಲೆಗೆ

ಪುರಿದ ಮಳಲ್ ಕಾಯ್ದು ತೆರದೆ ಕಾಯ್ದುತ್ತೆತ್ತಂ

ಎನ್ನುವಲ್ಲಿ ಹಾಗೇಯೇ 'ನೀರೊಳಗಿರ್ದುಂ ಬೆಮರ್ತನುರಗಪತಾಕಂ' ಎಂಬಲ್ಲಿ ಅವನ ಸೃಜನಶೀಲತೆಯ ಪರಾಕಾಷ್ಠೆಯನ್ನು ಕಾಣಬಹುದು. ಮರಣದ ಸಮಯದಲ್ಲಿ ದುರ್ಯೋಧನನನ್ನು ತೊರೆದು ಪಾಂಡವರ ಕಡೆಗೆ ಹೋಗುತ್ತಿದ್ದ ರಾಜ್ಯಲಕ್ಷ್ಮಿಯನ್ನು ತಡೆದು ನಿಲ್ಲಿಸಿದ ಅಶ್ವತ್ಥಾಮ, ದಿಗ್ಧಮೆಗೊಂಡ ಅವಳ ಪರಿಸ್ಥಿತಿಯನ್ನು ರನ್ನ.

ಅತ್ತಲ್ ಅಸುರಾರಿ ಬೆಸಸಿದ

ನ್ ಇತ್ತಲ್ ರುದ್ರಾವತಾರಂ ಎಳದೊಯಪ್ಪಂ ಎಂ

ದು ಅತ್ತ ಪುಲಿ ಇತ್ತ ದರಿಯೆಂ

ದು ಅತ್ತಿತ್ತ ಅಡಿಯಿಡದೆ ಲಕ್ಷ್ಮಿ ತಳವೆಳಗಾದಳ್



ಹೀಗೆ ಅನೇಕ ಕಡೆ ರನ್ನ ತನ್ನ ಸೃಜನಶೀಲತೆಯನ್ನು ಭಾಷೆಯಲ್ಲಿ, ವರ್ಣನೆಗಳಲ್ಲಿ, ಪ್ರಸಂಗಗಳಲ್ಲಿ ಕಡೆದಿಟ್ಟಿರುವುದನ್ನು ಕಾಣಬಹುದು.

ಇದನ್ನೇ ಮುಂದೆ ಬಂದಂತಹ ಅನೇಕ ಕವಿಗಳು ತಮ್ಮ ಕೃತಿಗಳಲ್ಲಿ ಸೃಜನಶೀಲತೆಯನ್ನು ಅಳವಡಿಸಿಕೊಂಡರು. ಇವುಗಳಲ್ಲಿ ಪ್ರಮುಖವಾದದ್ದು ೧೯೪೮ ರಲ್ಲಿ ಕುವೆಂಪುರವರ 'ಶ್ರೀರಾಮಾಯಣ ದರ್ಶನಂ'. ಈ ಕೃತಿ ಆಧುನಿಕ ಕಾಲಘಟ್ಟದಲ್ಲಿ ಹೊಸ ದೃಷ್ಟಿಕೋನದಲ್ಲಿ ರಚನೆಯಾಯಿತು. ಹತ್ತನೇ ಶತಮಾನದಲ್ಲಿ ಪ್ರಾರಂಭಗೊಂಡ ರಾಮಾಯಣ, ಮಹಾಭಾರತ ಕೃತಿಗಳು ಕುವೆಂಪು ಕಾಲಘಟ್ಟಕ್ಕೆ 'ಶ್ರೀರಾಮಾಯಣ ದರ್ಶನಂ' ನಂತಹ ಕೃತಿ ರಚಿಸಲು ಪ್ರೇರಣೆಯಾಯಿತು. ತಮ್ಮ ತಮ್ಮ ಕೃತಿಗಳಲ್ಲಿ ಆಯಾ ಕಾಲಘಟ್ಟದಲ್ಲಿ ರಚಿಸಿದ ಕೃತಿಕಾರರು ಮೂಲ ಭಾರತ, ರಾಮಾಯಣವನ್ನು ಆಯ್ಕೆ ಮಾಡಿಕೊಂಡರೂ ತಮ್ಮದೇ ಆದ ಸೃಜನಶೀಲತೆಯನ್ನು ಪಾತ್ರಗಳ ಮೂಲಕ, ಆಶಯಗಳ ಮೂಲಕ ಕಟ್ಟಿಕೊಡುವ ಕಾರ್ಯ ಮಾಡಿದ್ದಾರೆ. ಕುವೆಂಪುರವರು ತಮ್ಮ ಕಾಲಘಟ್ಟದಲ್ಲಿ ರಾಮಾಯಣದಲ್ಲಿ ಮಂಥರೆ, ಊರ್ಮಿಳೆ ಮುಂತಾದ ಪಾತ್ರಗಳನ್ನು ಮನೋವಿಶ್ಲೇಷಣೆ ಮಾಡುವ ಮೂಲಕ ಇನ್ನೂ ಏನೋ ಹೇಳಬೇಕಿದೆ ಎಂಬುದನ್ನು ನಿರೂಪಿಸಿದ್ದಾರೆ. ಕಳೆದ ಕನಿಷ್ಠ ಎರಡು ಸಾವಿರ ವರ್ಷಗಳಿಂದಲೂ ರಾಮನ ಕಥೆಯನ್ನು ಹಲವು ರೀತಿಗಳಲ್ಲಿ, ಹಲವು ಭಾಷೆಗಳಲ್ಲಿ ಮರು ಕಥಿಸಲಾಗುತ್ತ ಬರಲಾಗಿದೆ. ಕವಿ ನಾಗಚಂದ್ರನಿಂದ

'ರಾಮಚಂದ್ರಚರಿತ ಪುರಾಣ' ರೂಪುಗೊಂಡಿತು. ಇಪ್ಪತ್ತನೆಯ ಶತಮಾನದಲ್ಲಿ ರಾಮಕಥಾ ವಸ್ತುವನ್ನೇ ಮರುಕಥಿಸಿದ ಕಾವ್ಯಗಳು ಕಳೆದ ಶತಮಾನದಲ್ಲಿ ಸೃಷ್ಟಿಯಾಗಿವೆ. ವೀರಪ್ಪ ಮೊಯ್ಲಿಯವರ ಮಹಾಕಾವ್ಯ 'ಶ್ರೀ ರಾಮಾಯಣ ಮಹಾನ್ವೇಷಣಂ' ಬೃಹತ್ ಕಾವ್ಯವಾದ ಇದು ಐದು ಸಂಪುಟದಲ್ಲಿದೆ. ರಾಮಾಯಣದಂತಹ ಅಭಿಜಾತ ಕೃತಿಯನ್ನು ಸಮೀಕ್ಷಿಸುವ, ವಿಶ್ಲೇಷಿಸುವ ಹಾಗೂ ಅದನ್ನು ಪುನರ್ ಅಭಿವ್ಯಕ್ತಿಸುವ ಕಾರ್ಯವನ್ನು ಅಹಲ್ಯ, ಶೂರ್ಪನಖಿ, ಲಕ್ಷ್ಮಣ, ಸೀತೆಯ ಪಾತ್ರಗಳನ್ನು ಇಂದಿನ ಆಲೋಚನೆಗೆ ಮತ್ತೊಮ್ಮೆ ವಿಶ್ಲೇಷಿಸುವಂತೆ ಚಿತ್ರಿಸಲಾಗಿದೆ. ಸೀತಾ ಪರೀಕ್ಷಣ ಪ್ರಸಂಗವು ಈ ಕೃತಿಯಲ್ಲಿ ಹೊಸ ದೃಷ್ಟಿಕೋನದಲ್ಲಿ ರಚನೆಯಾಯಿತು. ವೀರಪ್ಪ ಮೊಯ್ಲಿಯವರ ಮಹಾಕಾವ್ಯವೆಂದರೆ 'ಶ್ರೀ ರಾಮಾಯಣ ಮಹಾನ್ವೇಷಣಂ' ಬೃಹತ್ ಕಾವ್ಯವಾದ ಇದನ್ನು ಆಧುನಿಕ ದೃಷ್ಟಿಕೋನದಲ್ಲಿ ನಿರೂಪಿಸಲಾಗಿದೆ. ತನ್ನ ಪಟ್ಟಾಭಿಷೇಕದ ಸಂದರ್ಭದಲ್ಲಿ ರಾಮನ ಬಾಯಲ್ಲಿ ಮೊಯ್ಲಿಯವರು ಆಡಿಸಿರುವ ಮಾತುಗಳು ಹೀಗಿವೆ, ಜಾತಿ ಪಂಥಗಳ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಉತ್ತಮ ಗುಣಮಟ್ಟದ ಶಿಕ್ಷಣ ನೀಡಿಕೆಯೇ ನನ್ನ ಗುರಿ. ನನ್ನ ಆಡಳಿತದಲ್ಲಿ ಯಾವುದೇ ತೆರದ ಪಕ್ಷಪಾತವೂ ಇರುವುದಿಲ್ಲ. ಪೂರ್ವಾಗ್ರಹವೂ ಇರಲಾರದು" ಇದು ರಾಮನ ಕನಸು. ಮುಖ್ಯಮಂತ್ರಿಯಾಗಿದ್ದಾಗ ಮೊಯ್ಲಿಯವರು ಇಂತಹ ಸಾರ್ಥಕ ಕೆಲಸವನ್ನು ಕರ್ನಾಟಕಕ್ಕೆ ಮಾಡಿದರೋ ಇಲ್ಲವೋ ಆದರೆ ಅವರ ಕೃತಿಯಲ್ಲಿ ಶ್ರೀರಾಮ ಅಂತಹ ಕನಸನ್ನಾದರೂ ಕಂಡಿದ್ದಾನೆ ಎನ್ನುವುದು ಸಾಹಿತ್ಯ ಕೃತಿಯೊಂದರಲ್ಲಿ ಕಾಲ-ದೇಶಗಳಿಗೆ ಅನುಗುಣವಾಗಿ ಆಯಾ ಕಾಲಘಟ್ಟಕ್ಕೆ ಒಬ್ಬ ಕೃತಿಕಾರ ಸ್ಪಂದಿಸುವುದು ಸೃಜನಶೀಲತೆ.

ಇಪ್ಪತ್ತೊಂದನೆ ಶತಮಾನದ ಕೊನೆಯಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂ

ಪ್ರಮುಖ ಬರಹಗಾರರು ಇಂದಿಗೂ ತಮ್ಮ ಬರಹಗಳನ್ನು ಮುಂದುವರೆಸಿರುವುದನ್ನು ಗಮನಿಸಬಹುದು. ನವೋದಯ, ನವ್ಯ, ದಲಿತ, ಬಂಡಾಯ ಕಾಲಘಟ್ಟಗಳು ಹಿಂದೆ ಸರಿದಂತೆ ಹೊಸ ಕಾಲದ ಅವಲೋಕನ ವಿಮರ್ಶೆ ಹಾಗೇ ಜೊಳ್ಳು ಎನ್ನುವ ಅಪವಾದವನ್ನು ಹೊತ್ತು ಮುನ್ನುಗುತ್ತಿದೆ. ಇಂದು ಹಳೆಯ ತಲೆಮಾರಿನ ಬರಹಗಾರರೊಂದಿಗೆ ಹೊಸ ತಲೆಮಾರಿನವರು ಅವರದ್ದೇ ಆದ ಶಕ್ತಿ ಹಾಗೂ ಮಿತಿಯೊಂದಿಗೆ ಕೃತಿಗಳನ್ನು ರಚಿಸುತ್ತಿದ್ದಾರೆ. ಇಂದಿನ ಕಾಲಘಟ್ಟದಲ್ಲಿ ಮಾಹಿತಿ ತಂತ್ರಜ್ಞಾನದ ಪ್ರಗತಿಯಿಂದಾಗಿ ಸಾವಿರಾರು ಬರಹಗಾರರು ಈಗ ಕೃತಿಗಳನ್ನು ರಚಿಸುತ್ತಿದ್ದಾರೆ. ಪತ್ರಿಕೆಗಳು, ಆನ್‌ಲೈನ್ ಪತ್ರಿಕೆಗಳು, ಇಂಟರ್‌ನೆಟ್, ಫೇಸ್‌ಬುಕ್, ವಾಟ್ಸಪ್, ವೆಬ್‌ಪೇಜ್ ಮುಂತಾದ ಜಾಲತಾಣಗಳಲ್ಲಿ ಬರೆಯುತ್ತಿದ್ದಾರೆ. ಇಲ್ಲಿ ಬರೆಯುವ ಬರಹಗಾರರಿಗೆ ತಮ್ಮ ಮನದ ಅನಿಸಿಕೆಗಳನ್ನು ಹೊರ ಹಾಕುವ, ತಮ್ಮ ತಲೆಮಾರಿನ ಸಂಕಟಗಳನ್ನು ಹೇಳಿಕೊಳ್ಳುವ, ತಮ್ಮ ಸಮುದಾಯದಲ್ಲಿನ ತಲ್ಲಣಗಳು, ಸವಾಲುಗಳು, ಮುಂತಾದವಕ್ಕೆ ಜಾಲತಾಣಗಳು ವೇದಿಕೆಯಾಗಿವೆ.

ಇಂದು ಬದುಕು ಸರಳರೇಖೆಯಲ್ಲ. ಅಂದಿನ ಸಮಸ್ಯೆಗಳ ಸ್ವರೂಪ ಇಂದು ಬೇರೆಯದೆ ಮುಖ ಹೊತ್ತಿದೆ. ಅಂದಿನ ವಿಶ್ವವಿದ್ಯಾಲಯಗಳಲ್ಲಿ ಇದ್ದ ಶೈಕ್ಷಣಿಕ ವಾತಾವರಣ ಬದಲಾಗಿ ಅಲ್ಲಿ ಜಾತಿ, ರಾಜಕೀಯ, ಲೈಂಗಿಕ ಪ್ರಕರಣ ಮುಂತಾದವು ರಾರಾಜಿಸುತ್ತಿವೆ. ಶಿಕ್ಷಣ ಸಂಶೋಧನೆಗೆ ಮಹತ್ವಗಳು ತಗ್ಗಿ ಬೇರೆಯದೇ ಆದ ಲೆಕ್ಕಾಚಾರಗಳು ವಿಜೃಂಭಿಸುತ್ತಿರುವುದನ್ನು ಕಾಣಬಹುದು. ವಿಶ್ವವಿದ್ಯಾಲಯಗಳು ಹಾಗೂ ಅಲ್ಲಿನ ಸ್ನಾತಕೋತ್ತರ ವಿಭಾಗಗಳ ಅಧ್ಯಯನ ಸಂಸ್ಥೆಗಳು ಅಂದು ಸಾಹಿತ್ಯಕ ಹಾಗೂ ಬೌದ್ಧಿಕ ಕೇಂದ್ರವಾಗಿದ್ದವು. ಪ್ರಸಾರಾಂಗಗಳು ಮಹತ್ತರ ಪುಸ್ತಕಗಳನ್ನು ಪ್ರಕಟಿಸುತ್ತಿದ್ದವು. ಪ್ರತಿ ವಿಶ್ವವಿದ್ಯಾಲಯಗಳೂ ಕನ್ನಡದ ಅಂದಿನ ಪ್ರಸಿದ್ಧ ಬರಹಗಾರರನ್ನು, ವಿಮರ್ಶಕರನ್ನು, ನಾಟಕಕಾರರನ್ನು, ಭಾಷಾಶಾಸ್ತ್ರಜ್ಞರನ್ನು ಒಳಗೊಂಡು ಕನ್ನಡ ಸಾಹಿತ್ಯ ಸಮೃದ್ಧವಾಗಿತ್ತು. ಆದರೆ ಇಂದು ವಿಶ್ವವಿದ್ಯಾಲಯಗಳಲ್ಲಿ ಅಂತಹ ಬರಹಗಾರರ ಸಂಖ್ಯೆ ಬೆರಳೆಣಿಕೆಯಷ್ಟಿದೆ. ವಿಶ್ವವಿದ್ಯಾಲಯದ ಪರಿಣಿತರ ಕೊರತೆ ಕನ್ನಡವನ್ನು ಎರಡು ದಶಕದಲ್ಲಿ ಕಾಡಿದೆ. ಆದರೆ ಇಂದಿನ ಕನ್ನಡ ಬರಹಗಾರರು ಕಾರ್ಪೋರೇಟ್ ವಲಯ, ಇಂಜಿನಿಯರ್, ವಿಜ್ಞಾನದ ವಿದ್ಯಾರ್ಥಿಗಳು, ವ್ಯಾಪಾರಿಗಳು ಹೀಗೆ ಬೇರೆ ಬೇರೆ ವಲಯದಲ್ಲಿ ಕನ್ನಡ ಸಾಹಿತ್ಯದ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಈ ಕಾಲಘಟ್ಟದಲ್ಲಿ ಗುರುತಿಸಬಹುದು. ಆದರೆ ಇಂದು ನಾನ್ ಅಕಾಡೆಮಿಕ್ ಬರಹಗಾರರೇ ಹೆಚ್ಚು ಕ್ರಿಯಾಶೀಲರಾಗಿ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವುದನ್ನು ಕಾಣಬಹುದು.

ಅಂದಿನ ಕಾಲದಲ್ಲಿದ್ದ ದಲಿತ, ಬಂಡಾಯ, ಸ್ತ್ರೀ ಮುಂತಾದ ಚಳುವಳಿಗಳಿಗಳು ಇಲ್ಲದ ಕಾಲಘಟ್ಟವಿದು. ಇಂದಿನ ಲೇಖಕರು ಮುಕ್ತವಾಗಿ ಬರೆಯುತ್ತಿದ್ದಾರೆ. ಇದು ಒಂದು ರೀತಿಯಲ್ಲಿ ಬರಹಗಾರನಿಗೆ ಅನುಕೂಲವೂ ಹೌದು. ಚಳುವಳಿಗಳಿದ್ದಾಗ ಆಯಾ ಚಳುವಳಿಗಳ ಆಶಯಗಳಿಗೆ ಅನುಗುಣವಾಗಿ ಬರೆಯಬಹುದಿತ್ತು. ಚಳುವಳಿ ಇಲ್ಲದಾಗ ಬರವಣಿಗೆಗೆ ಮಾದರಿಗಳೆಂಬುದಿಲ್ಲ. ಬರಹಗಾರರೇ ತಮ್ಮ ದಾರಿಯ ಜಾಡನ್ನು ಕಂಡುಕೊಂಡು ಬರೆಯಬೇಕು. ವಿವಿಧ

ಸಮುದಾಯಗಳಿಗೆ ಸೇರದೆ ಇಂದಿನ ತಲೆಮಾರಿನ ಲೇಖಕರು ಸೃಷ್ಟಿಸುತ್ತಿರುವ ಕನ್ನಡ ಸಾಹಿತ್ಯವು ಮುಕ್ತ ಛಂದಸ್ಸಿನ ಕಾಲವಾಗಿದೆ. ಒಣ



ಹಾಗೂ ಕೃತಕ ತಾರ್ಕಿಕ ಸಿದ್ಧಾಂತಗಳ ಸಂಕೋಲೆಗಳಿಂದ ಲೇಖಕರು ನಿಧಾನವಾಗಿ ಹೊರ ಬರುತ್ತಿದ್ದಾರೆ. ಬರಹಗಾರರು ತಮ್ಮ ಸಮುದಾಯದ, ತನ್ನ ಹಳ್ಳಿ-ನಗರಗಳ ದನಿಯಾಗಲು ಪ್ರಯತ್ನಿಸುತ್ತಿದ್ದಾರೆ. ಇಂದಿನ ರಾಜಕೀಯ ಪರಿಸ್ಥಿತಿಗೆ ತಕ್ಷಣ ಸ್ಪಂದಿಸುತ್ತಿದ್ದಾರೆ. ಹೊಸ ಮಾರ್ಗವನ್ನು ತಾವೇ ಕಂಡುಕೊಳ್ಳುವ ತಹತಹಿಕೆಯಲ್ಲಿದ್ದಾರೆ. ಬದುಕಿನ ಕುರಿತು ಪ್ರೀತಿಯನ್ನು, ಕಳೆದುಕೊಳ್ಳುತ್ತಿರುವ ಮೌನವನ್ನು ದಾಖಲಿಸಲು ತಮ್ಮ ಕೃತಿಗಳಲ್ಲಿ ಪ್ರಯತ್ನಿಸುತ್ತಿದ್ದಾರೆ.

ಎರಡು ದಶಕಗಳಲ್ಲಿ ಮಾಹಿತಿ ತಂತ್ರಜ್ಞಾನ ಅದ್ಭುತವಾಗಿ ಬೆಳೆದಿದೆ. ಪತ್ರಿಕೆಗಳಲ್ಲಿ ಬರೆಯುವ ಲೇಖನಗಳಿಗೆ ಇಂದು ಮಿತಿಯಿದೆ. 'ಸಣ್ಣದು ಮಹತ್ವದ್ದು' ಎಂಬ ಮಾತಿನಂತೆ ಚಿಕ್ಕದಾಗಿ ಬರೆಯುವಂತೆ ಲೇಖಕರಿಗೆ ಮಿತಿ ಹಾಕಲಾಗುತ್ತಿದೆ. ಇದು ಬಹಳ ಕಷ್ಟ ಐದು ನೂರು ಪದಗಳಲ್ಲಿ ಕತೆಗಳನ್ನು ಹೆಣೆಯುವ, ಆಯಾ ಪತ್ರಿಕೆಯ ಮಿತಿ ಅರಿತು ಲೇಖನಗಳನ್ನು ಕಳಿಸುವ ಅನಿವಾರ್ಯತೆಯನ್ನು ಇಂದಿನ ಯುವ ಬರಹಗಾರರು ಎದುರಿಸುತ್ತಿದ್ದಾರೆ. ಪದಗಳ ಮಿತಿಯಲ್ಲಿ ಬರೆಯುವ, ಎಡಿಟ್ ಮಾಡಿಕೊಡುವ ಒತ್ತಡದ ಸಂದರ್ಭದಲ್ಲಿ ತಮ್ಮ ವಿಚಾರಗಳನ್ನು ಮುಗಿಸಬೇಕಾದ ಅನಿವಾರ್ಯತೆಯಿದೆ. ಇದು ಆಳವಾದ ಅಧ್ಯಯನಕ್ಕೆ, ವಿಷಯವನ್ನು ವಿಸ್ತಾರವಾಗಿ ಹೇಳುವುದಕ್ಕೆ ಅಡ್ಡಿಯಾಗುತ್ತಿದೆ.

ಯಾರು ತಂತ್ರಜ್ಞಾನದಲ್ಲಿ ಹಿಂದುಳಿದಿದ್ದಾರೋ ಅವರು ಅವಕಾಶಗಳಿಂದಲೂ ವಂಚಿತರಾಗುತ್ತಿದ್ದಾರೆ. ಕೈ ಬರಹಗಳ ಲೇಖನಗಳು ಹಿಂದೆ ಸರಿದಿವೆ. ಟೈಪ್ ಮಾಡಿ ಮೇಲ್ ಮಾಡಲು ಬರದಿದ್ದರೆ ಇಂದಿನ ಕಾಲದ ಬರಹಗಾರ ಔಟ್ ಡೇಟೆಡ್ ಆಗುತ್ತಿದ್ದಾನೆ. ಜಾಲತಾಣಗಳಲ್ಲಿ ಬರೆಯುವ ಯುವ ಬರಹಗಾರರು ತಮ್ಮ ಅನಿಸಿಕೆಗಳನ್ನು ತುರ್ತಾಗಿ ಹಂಚಿಕೊಳ್ಳುತ್ತಿದ್ದಾರೆ. ಅಲ್ಲಿ ಅವರ ಲೇಖನ, ಕವಿತೆ, ಕತೆಗೆ ಸಿಕ್ಕುವ ಲೈಕ್, ಕಮೆಂಟ್‌ಗಳಿಂದ ಜನಪ್ರಿಯರಾಗುತ್ತಿರುವುದನ್ನು ಕಾಣಬಹುದು. ಸಮಾನ ಮನಸ್ಥಿತಿಯ ವಾಟ್ಸಪ್ ಗುಂಪುಗಳಲ್ಲಿ ದಿನನಿತ್ಯ ನೂರಾರು ಕವಿತೆಗಳು ಪ್ರಕಟವಾಗುತ್ತಿವೆ. ಅವುಗಳ ಬಗ್ಗೆ ಚರ್ಚೆಗಳಾಗುತ್ತಿವೆ. ಈ ಗುಂಪಿನ ಸದಸ್ಯರು ಒಬ್ಬರನ್ನೊಬ್ಬರು ನೋಡಿರದಿದ್ದರೂ, ಪರಿಚಿತರಲ್ಲದಿದ್ದರೂ ದೇಶದ, ವಿದೇಶದ ಯಾವುದೋ ಒಂದು ಕೊಂಡಿ ಅವರನ್ನು ಒಟ್ಟಾಗಿ ಬೆಸೆಯುವ ಕಾರ್ಯ ಮಾಡುತ್ತಿದೆ. ಅದು ಸಾಹಿತ್ಯದ ಮೇಲಿನ ಆಸಕ್ತಿ ಎಂಬುದು ಕುತೂಹಲದ ವಿಷಯ.

ಲಂಕೇಶ, ಕಿ.ರಂ. ನಾಗರಾಜರಂತಹ ಮೇರು ಲೇಖಕರು ಇಂದು ಇಲ್ಲದಿದ್ದರೂ ಪ್ರತಿವರ್ಷ ಅವರ ನೆನಪಿನಲ್ಲಿ ಸಾಹಿತ್ಯದ ಕಾರ್ಯಕ್ರಮಗಳು ನಡೆಯುತ್ತಿವೆ. ಅವರ ಅನುಪಸ್ಥಿತಿಯಲ್ಲಿಯೂ ಅವರ ಬರಹಗಳು, ಮಾತುಗಳು ಅಂದಿಗಿಂತ ಇಂದು ಹೆಚ್ಚು ಪ್ರಸ್ತುತ ಎನಿಸುತ್ತಿವೆ. ಇನ್ನು ಕೆಲವು ಹಿರಿಯ ಸಾಹಿತಿಗಳು ಹೊಸ ತಲೆಮಾರಿನ ಲೇಖಕರ

ಕೃತಿಗಳನ್ನು ಓದದೆ ಮಾತನಾಡುತ್ತಿದ್ದಾರೆ. ತಮ್ಮ ಕಾಲಘಟ್ಟದ್ದೇ ಕತೆಗಳನ್ನು ಕನವರಿಸುತ್ತಿರುವ ಅವರ ಕಣ್ಣಿಗೆ ಹೊಸ ತಲೆಮಾರಿನ ಯಾವ ಕೃತಿಗಳೂ ರುಚಿಸುತ್ತಿಲ್ಲ. ಇದು ಅಪಾಯ. ಮರವೊಂದು ಪ್ರತಿವರ್ಷವೂ ತನ್ನ ಒಣ ಎಲೆಗಳನ್ನು ಉದುರಿಸಿ ಹೊಸ ಎಲೆಗಳನ್ನು ಚಿಗುರಿಸಿ ಸಂಭ್ರಮಿಸುವಂತೆ ಹಳೇ ಬೇರು ಹೊಸ ಚಿಗುರು ಕೂಡಿರಲು ಮರ ಸೊಬಗೆಂಬಂತೆ ಪರಂಪರೆಯ ಸಂವೇದನೆಗಳನ್ನು, ಸೂಕ್ಷ್ಮತೆಗಳನ್ನು ಜೀರ್ಣಿಸಿಕೊಂಡೇ ಹೊಸ ತಲೆಮಾರು ಚಿದುರೊಡೆಯುತ್ತದೆ.



ಹೊಸ ತಲೆಮಾರಿನ ಯುವ ಮನಸ್ಸುಗಳು, ತಳ ಸಮುದಾಯಗಳಿಂದ ಬಂದವರು ಇಂದು ಹೆಚ್ಚು ಬರೆಯುತ್ತಿದ್ದಾರೆ. ಇಲ್ಲಿನ ಬರವಣಿಗೆಯಲ್ಲಿ ಶಾಸ್ತ್ರೀಯ ಓದಾಗಲಿ, ಪರಂಪರೆಯ ಲೇಖಕರ ಕೃತಿಗಳನ್ನು ಅರಗಿಸಿಕೊಂಡ, ರೂಪಕ, ಭಾಷೆ, ರಸ, ಧ್ವನಿ ಮುಂತಾದವುಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಕೆಲವರು ಹವ್ಯಾಸವಾಗಿ ಸಾಹಿತ್ಯವನ್ನು ಸಂಭ್ರಮಿಸುತ್ತಿದ್ದಾರೆ. ಕನ್ನಡ ಸಾಹಿತ್ಯದ ಪರಂಪರೆಯನ್ನು ಕೃತಿಗಳನ್ನು ಓದದೆ ಬರೆಯಬಾರದೆಂದು ೮೯೧೦ರಲ್ಲಿ ಯುವ ಕವಿಗಳನ್ನು ಕುರಿತು ಮಾತನಾಡುವಾಗ ಕುವೆಂಪು ಆಕ್ಷೇಪಣೆಯೆತ್ತಿದ್ದರು. "ಹಿರಿಯರು ನಿಮ್ಮ ಕವಿತೆಗಳನ್ನು ಓದದಿದ್ದರೂ ಪರವಾಗಿಲ್ಲ, ನೀವು ಹಿರಿಯರ ಕವಿತೆಗಳನ್ನು ಓದದೆ ಕವಿಯಾಗಲು ಸಾಧ್ಯವೇ ಇಲ್ಲ" ಎನ್ನುವ ಮಾತಿಗೆ ಅಂದು ರಾಮಚಂದ್ರಶರ್ಮ ವಿರೋಧ ವ್ಯಕ್ತಪಡಿಸುತ್ತಾ "ಹಾಗೆ ನಾನು ಹಿರಿಯರೆಲ್ಲರ ಕಾವ್ಯವನ್ನೆಲ್ಲಾ ಓದಿ ಆಮೇಲೆ ಬರೆಯಬೇಕೆಂದರೆ ನನ್ನ ಆಯುಸ್ಸೇ ಮುಗಿದಿರುತ್ತದೆ" ಎಂಬ ಅವರ ಮಾತಿಗೆ ಇಂದಿನ ಅನೇಕ ಲೇಖಕರು ದನಿಗೂಡಿಸುತ್ತಾರೆ. ಹಿಂದಿನ ಕವಿಗಳ ಪ್ರಭಾವಕ್ಕೆ ಒಳಗಾದ ಕವಿ ಅನುಕರಣೆಗೆ ಒಳಗಾಗುವ ಭೀತಿಯನ್ನು ವ್ಯಕ್ತಪಡಿಸಿ ತಮಗೆ ಅನಿಸಿದ್ದನ್ನು, ತೀವ್ರವಾಗಿ ಬರೆಯಲೇಬೇಕೆಂಬ ತುಡಿತವನ್ನು ಮೂಡಿಸಿದ್ದನ್ನು ಬರೆದಾಗ ಮಾತ್ರ ಆ ಕತೆ, ಕವಿತೆ ಗಟ್ಟಿಯಾಗಲು ಸಾಧ್ಯ. ಇಲ್ಲವಾದಲ್ಲಿ ಜೊಳ್ಳಾಗುತ್ತವೆ.

ಸೃಜನಶೀಲ ಸಾಹಿತ್ಯ ಮುಕ್ಕಾಗದಂತೆ ಬರೆಯಬೇಕಾದರೆ ಲೇಖಕ ಯಾವುದೇ ಚೌಕಟ್ಟನ್ನು ಹಾಕಿಕೊಳ್ಳದೆ, ಸಮಾಜವನ್ನು ಬದಲಾಯಿಸಲು ತಾನು ಸಾಹಿತ್ಯ ಬರೆಯುತ್ತಿದ್ದೇನೆ ಎಂಬ ಭ್ರಮೆಗಳಿಗೆ ಒಳಗಾಗದೆ ಬರೆಯಬೇಕು. ಇತ್ತೀಚೆಗೆ ಒಬ್ಬ ಲೇಖಕ ತಾನು ಪತ್ರಿಕೆಗಳು ನಡೆಸುವ ಕಥಾಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಪಡೆಯುತ್ತಿರುವುದಕ್ಕೆ ಕಾರಣಗಳನ್ನು ಹೇಳುತ್ತಾ, " ನಾನು ಯಾವ ಪತ್ರಿಕೆ ಕಥಾಸ್ಪರ್ಧೆಗೆ ಕತೆಗಳನ್ನು ಆಹ್ವಾನಿಸಿದ್ದಾರೆ ಎಂಬುದನ್ನು ತಿಳಿದು, ಆ ಪತ್ರಿಕೆಯ ಮನೋಧರ್ಮ, ರಾಜಕೀಯ ಪಕ್ಷದ ಬೆಂಬಲ, ನಿಲುವು, ಸಿದ್ಧಾಂತಗಳಿಗೆ ಅನುಗುಣವಾಗಿ ಕತೆಗಳನ್ನು ರಚಿಸುತ್ತಿದ್ದೇನೆ" ಎಂದು ಸಂದರ್ಶನದಲ್ಲಿ ಹೇಳಿದ ಮಾತು ಆಘಾತಕಾರಿ. ಇದು ಅಪಾಯಕರವಾದದ್ದು ಕೂಡ. ಸಾಹಿತ್ಯ ರಚನೆಯೇ ಸೃಜನಶೀಲವಾದದ್ದು. ಅದು ಅಂಗಡಿಯಲ್ಲಿ ಸಿಗುವ ಮಾರಾಟದ ವಸ್ತುವಲ್ಲ.

ಸಂವೇದನೆಗಳು, ತಳಮಳಗಳು ಪ್ರಸ್ತುತ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸುವ, ಪರರ ನೋವನ್ನು ತನ್ನ ನೋವೆಂದು ಮನಗಾಣಿಸಿಕೊಳ್ಳುವ ವ್ಯಕ್ತಿ ಮಾತ್ರ ಸೃಜನಶೀಲ ಸಾಹಿತ್ಯ ರಚಿಸಬಲ್ಲ ಎಂಬ ಮಾತನ್ನು ಅಲ್ಲಗಳೆಯುವಂತೆ ಇಂತಹ ಬರಹಗಾರರ ಮಾತುಗಳನ್ನು ಹೇಗೆ ಜೀರ್ಣಿಸಿಕೊಳ್ಳಬಹುದು?

ಈ ಶತಮಾನದಲ್ಲಿ ಬಂಡವಾಳದ ಮುಕ್ತ ಹರಿವು ಸಾಮಾಜಿಕ ನೀತಿ ನಿರೂಪಣೆಯ ಶಾಸನಗಳನ್ನು ರೂಪಿಸುತ್ತಿದೆ. ಖಾಸಗೀಕರಣ, ಜಾಗತೀಕರಣ, ಬಂಡವಾಳಶಾಹಿ ಎಲ್ಲವೂ ಇಡೀ ಶಾಸಕಾಂಗ, ನ್ಯಾಯಾಂಗಗಳನ್ನೇ ಅಲ್ಲಾಡಿಸುತ್ತಿರುವ ಕಾಲವಿದು. ಬಂಡವಾಳದ ಉದ್ಯಮವು ಸಾಹಿತ್ಯ-ಕಲೆಗಳನ್ನು ತನ್ನ ಅಧೀನದಲ್ಲಿರುವಂತೆ ಪ್ರಯತ್ನಿಸುತ್ತಿದೆ. ಬರಹವು ಪ್ರಾಮಾಣಿಕತೆಗೆ, ಕಾಲಸೂಕ್ಷ್ಮತೆಗೆ ಅಣಿಗೊಳ್ಳುತ್ತಿರುವ ದಿನಗಳಿವು. ಲೇಖಕ ತನ್ನ ಬದುಕಿನ ವಿಪ್ಲವಗಳನ್ನು, ತನ್ನ ಮನಸ್ಸಿನಲ್ಲಿ ಕೊರೆಯುತ್ತಿರುವ ಪ್ರಶ್ನೆಗಳನ್ನು, ಮೌಲ್ಯಗಳನ್ನು ತನ್ನ



ಕೃತಿಗಳಲ್ಲಿ ಪ್ರಶ್ನಿಸುವ ಇಲ್ಲವೆ ಅದಕ್ಕೊಂದು ತನ್ನದೇ ಪರಿಹಾರವನ್ನು ನೀಡುವ ಮೂಲಕ ಹಗುರಾಗುತ್ತಾನೆ. ಇಂದಿನ ಕಾಲದಲ್ಲಿ ಆಹಾರ ಪದ್ಧತಿ, ಜಾತಿ-ಧರ್ಮ, ರಾಜಕೀಯ ಎಲ್ಲವೂ ಬೃಹದಾಕಾರದ ಪ್ರಶ್ನೆಗಳಾಗುತ್ತಿವೆ. ಅವುಗಳನ್ನು ಪ್ರಶ್ನಿಸುವ ಬರಹಗಾರರನ್ನು ಎಡ-ಬಲಗಳಿಗೆ ಲೇಬಲ್ ಹಚ್ಚಿ ಕೂರಿಸುವ ಕಾಲವಿದು. ನೂರಾರು ವರ್ಷಗಳಿಂದ ಒಂದಾಗಿ ಸಾಮರಸ್ಯದಿಂದ ಬಾಳುತ್ತಿದ್ದ ಸಂದರ್ಭಗಳನ್ನು ಕಲಕುವ ಘಟನೆಗಳು ಘಟಿಸುತ್ತಿವೆ. ಕೃಷ್ಣಮೂರ್ತಿ ಹನೂರರ 'ದೇವಮೂಲೆಯ ಮಳೆ' ಕಥೆಯ ಪಾತ್ರವೊಂದು ಹಳ್ಳಿಗಳ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳೇ ಬುಡಮೇಲಾಗುವ ಚಿತ್ರಣ ನೀಡುತ್ತಾ, 'ನಾನೀಗ ದನದ ಯಾಪಾರ ನಿಲ್ಲಿಸಿದ್ದೀನಿ ಜನರನ್ನು ಪೇಟೆಗೆ ಕಳಿಸೋದನ್ನಷ್ಟೇ ಮಾಡ್ತಿದೀನಿ' ಎನ್ನುವ ಮಾತಿನಲ್ಲಿ ಮಾರಾಟದ ಸರಕನ್ನು ಲೋಕಕ್ಕೆ ಮಾರುವ ಹಾಗೂ ಮಾರುವುದನ್ನೇ ಬಂಡವಾಳವಾಗಿಸುತ್ತಿರುವ ವಿವರಗಳನ್ನು ಕಾಣಬಹುದು. ಸಮಕಾಲೀನ ವಿದ್ಯಮಾನಗಳು ಮನುಷ್ಯನನ್ನು ಹಿಂಸೆಗೆ ಪ್ರಚೋದಿಸುತ್ತಿವೆ. ತನ್ನ ನಾಯಿಯನ್ನು ಮುದ್ದಿನಿಂದ ನೋಡುವ ಮನುಷ್ಯನಿಗೆ ಮತ್ತೊಬ್ಬ ಮನುಷ್ಯ ಸಾಯುತ್ತಿರುವುದು ಏನೂ ಅನಿಸುತ್ತಿಲ್ಲ ಎನ್ನುವುದು ವಿಷಾದ. ಸಾವನ್ನೇ ಬಂಡವಾಳವಾಗಿಸಿ ಕೃತಿ ರಚಿಸಿ ಹಣ ಮಾಡುವ ಪ್ರವೃತ್ತಿ ಬೆಳೆಯುತ್ತಿದೆ.

ತನ್ನ ಹಳ್ಳಿಗಳನ್ನು ಚಿತ್ರಿಸುವಂತೆ ಹೊಸ ತಲೆಮಾರಿನ ಲೇಖಕರು ನಗರಗಳ, ಐಟಿ ಕಂಪನಿಗಳ, ವಿದೇಶಗಳ ಸಮಸ್ಯೆ, ಚಿಂತನೆಗಳನ್ನು ತಮ್ಮ ಕೃತಿಗಳಲ್ಲಿ ಪರಿಚಯಿಸುತ್ತಿದ್ದಾರೆ. ಒಂದು ಅಂದಾಜಿನಂತೆ ಕನ್ನಡದಲ್ಲಿ ವರ್ಷಕ್ಕೆ ಸುಮಾರು ೭,೫೦೦ ಪುಸ್ತಕಗಳು ಪ್ರತಿವರ್ಷ ಅಚ್ಚಾಗುತ್ತಿವೆ. ಆನ್‌ಲೈನ್‌ನಲ್ಲಿ ಪುಸ್ತಕಗಳು ಸಿಗುತ್ತಿವೆ. ಬೇರೆ ಬೇರೆ ಭಾಷೆಗೆ ಅನುವಾದಗೊಳ್ಳುತ್ತಿವೆ. ಬೌದ್ಧಿಕತೆ ಈ ಕಾಲದ ಪ್ರಧಾನ ಲಕ್ಷಣವಲ್ಲ. ಜನಪ್ರಿಯತೆ ಹಾಗೂ ಅಧಿಕ ಜನರನ್ನು

ತಲುಪಬೇಕೆನ್ನುವ ಸಂಖ್ಯಾಬಲ ಲೇಖಕರನ್ನು ಆಕರ್ಷಿಸುತ್ತಿದೆ. ಪ್ರಶಸ್ತಿ, ಪದವಿಗಳನ್ನು ಹೊಂದಲು ಹಾಗೂ ಸರ್ಕಾರದ ಅಧಿಕಾರದ ಆಸೆಯೂ ಹಿನ್ನೆಲೆಯಲ್ಲಿರುವುದನ್ನು ಕಾಣಬಹುದು.

"ಹೆಣ್ಣಿನ ಮಟ್ಟಿಗೆ ಮಹಾ ಕೋಲಾಹಲದ ಕಾಲ ಇದು. ಅರಿವು ಮತ್ತು ವಾಸ್ತವದ ನಡುವಿನ ಹೊಯ್ದಾಟದ ಈ ಸನ್ನಿವೇಶದಲ್ಲಿ ಹೆಣ್ಣು ತನ್ನನ್ನು, ತನ್ನ ಜಾಗವನ್ನು, ತನ್ನ ಪಾತ್ರವನ್ನು ಇರುವ ಮತ್ತು ಇರಬೇಕಾದ ಅವಸ್ಥೆಗಳಲ್ಲಿನ ಮಹಾ ಕಂದರವನ್ನು ಮುಖಾಮುಖಿಯಾದಳು. ಮೊದಲ ಘಟ್ಟದ ಲೇಖಕಿಯರ ಒಟ್ಟೂ ನಿಲುವನ್ನು ಸತಿ ಶಿರೋಮಣಿಯಿಂದ ಸಹಧರ್ಮಿಣಿಯ ಕಡೆಗಿನ ಚಲನೆ ಎಂದು ಗುರುತಿಸಬಹುದು. ಗಾಂಧಿವಾದದ ಜೊತೆಗೆ ತಮ್ಮನ್ನು ಸಮೀಕರಿಸಿಕೊಂಡರು. ಕೊಡಗಿನ ಗೌರಮ್ಮ, ಕಲ್ಯಾಣಮ್ಮ, ತಿರುಮಲಾಂಬ, ಬೆಳಗಾವಕರ್ ಮುಂತಾದ ಲೇಖಕಿಯರೆಲ್ಲರೂ ಹೆಣ್ಣಿನ ಸ್ಥಿತಿಗತಿಗಳಲ್ಲಾಗಬೇಕಾದ ಬದಲಾವಣೆಗಳನ್ನು ಇಟ್ಟುಕೊಂಡೇ ಹೊಸ ಮೌಲ್ಯ ವ್ಯವಸ್ಥೆಯೊಂದರ ರೂಪುಗೊಳ್ಳುವಿಕೆಗೆ ಹಾತೊರೆಯುತ್ತಿದ್ದರು. ಎರಡನೆಯ ಘಟ್ಟದ ಲೇಖಕಿಯರು ಅಸ್ಮಿತೆಯನ್ನು ಕುರಿತು ಹೋರಾಟವನ್ನು ಭಿನ್ನ ರೀತಿಯಲ್ಲಿ ಎದುರಾದರು. ಹೊಸ ಹೆಣ್ಣು ಎನ್ನುವವಳು ಸೃಷ್ಟಿಯಾಗಬೇಕೋ, ಅನಾವರಣಗೊಳ್ಳಬೇಕೋ ಎನ್ನುವ ಮೂಲಭೂತವಾದ ಪ್ರಶ್ನೆಯನ್ನು ಇವರು ಹಾಕಿಕೊಂಡಂತೆ ಬರೆದ ತ್ರಿವೇಣಿ, ಎಂ.ಕೆ. ಇಂದಿರಾ ಅವರಲ್ಲಿ ನೋಡಬಹುದು. ಇಂದಿರಾ ಅವರ 'ಫಣಿಯಮ್ಮ', 'ತಗ್ಗಿನ ಮನೆ ಸೀತೆ', 'ತುಂಗಭದ್ರೆ' ಮೊದಲಾದ ಕಾದಂಬರಿಗಳ ನಾಯಕಿಯರು ಹೊಸ ದಿಕ್ಕಿಗೆ



ಮುಖವಿಟ್ಟವರು. ಮೂರನೇ ಘಟ್ಟವು ಪ್ರಖರ ಸ್ವಪ್ರಜ್ಞೆಯ ಘಟ್ಟ, ಕುಂದಿಲ್ಲದ ಆತ್ಮವಿಶ್ವಾಸದಲ್ಲಿ ಈ ಸಂದರ್ಭದ ಲೇಖಕಿಯರು ಮೌಲ್ಯವ್ಯವಸ್ಥೆಯನ್ನು ಮುಖಾಮುಖಿಯಾಗಿಸಿದರು. ವೀಣಾ ಶಾಂತೇಶ್ವರ, ವೈದೇಹಿ ಮುಂತಾದವರು ಭಿನ್ನ ದಾರಿಗಳಲ್ಲಿ ಹೆಣ್ಣನ್ನು ಪ್ರಸ್ತುತಪಡಿಸುತ್ತಾ ಹೋದರು. ನಾಲ್ಕನೆಯ ಘಟ್ಟದ ಲೇಖಕಿಯರು ಆಯ್ಕೆಯ ಕಷ್ಟದಿಂದ ಬಿಡುಗಡೆ ಪಡೆಯುತ್ತಾ ಆಯ್ಕೆಯ ಬದುಕಿನ ಕಷ್ಟ ಸುಖಗಳ ಕಡೆಗೆ, ರೂಪರೂಪಾಂತರಗಳಲ್ಲಿ ನಮಗೆದುರಾಗುತ್ತಿರುವ ಪಿತೃಸಂಸ್ಕೃತಿಯ ಹೊಸ ಅವತಾರಗಳ ಜೊತೆಗೆ ಮುಖಾಮುಖಿಯಾಗುವವರು, ಸ.ಉಷಾ, ಪ್ರತಿಭಾ ನಂದಕುಮಾರ, ಸವಿತಾ ನಾಗಭೂಷಣ, ಹೆಚ್.ನಾಗವೇಣಿ, ಬಾನು ಮುಷ್ತಾಕ್, ಸಾರಾ ಅಬೂಬಕರ್, ಬಿ.ಟಿ.ಜಾಹ್ನವಿ, ಬಿ.ಟಿ. ಲಲಿತಾ ನಾಯಕ ಮೊದಲಾದವರು ಮಹಿಳಾ ಸಾಹಿತ್ಯವನ್ನು ಇನ್ನೊಂದು ಆಯಾಮಕ್ಕೆ ಹೊರಳಿಸಿದರು. ಈ ಘಟ್ಟದ ಇನ್ನೊಂದು ಮಹತ್ವದ ಬೆಳವಣಿಗೆ ಎಂದರೆ ಮಹಿಳಾ ಸಂಕಥನವು ತನ್ನ ಹೋರಾಟವನ್ನು ರಾಜಕೀಯಗೊಳಿಸಲು ನಡೆಸಿದ, ಆದರೆ ಸಾಂಸ್ಕೃತಿಕ ಚಹರೆಗಳನ್ನು ಮುನ್ನೆಲೆಗೆ ತರಲು ಪ್ರಯತ್ನಿಸಿದ ನೆಲೆಗಳನ್ನು ಸಾಹಿತ್ಯದಲ್ಲೂ ತರಲು ಸಜ್ಜಾಗುತ್ತಾ ಹೋದದ್ದು. ಹೆಣ್ಣಿನ ಹೋರಾಟವು ಮೂರ್ತವಾದ ಲಿಂಗ ರಾಜಕಾರಣದ

ವಾಸ್ತವವನ್ನು ಮಾತ್ರವಲ್ಲ, ಅಮೂರ್ತವಾದ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಗತಿಗಳನ್ನೂ ಗ್ರಹಿಸುವುದು ಮುಖ್ಯವಾದುದು. ಇದು ಮುಖ್ಯವಾಗಿ ಸಾಧ್ಯವಾದದ್ದು ಬದುಕಿನ ಭಿನ್ನ ವರ್ಗಗಳಿಂದ ಅದೂ ಮುಖ್ಯವಾಗಿ ಅಲಕ್ಷಿತ ಸಮುದಾಯಗಳಿಂದ ಬಂದ ಮಹಿಳೆಯರು ತಮ್ಮನ್ನು ಹೋರಾಟ ಮತ್ತು ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದರಿಂದ, ಈ ಬೆಳವಣಿಗೆ ಸಮಕಾಲೀನ ಸಂದರ್ಭದಲ್ಲಿ ಇನ್ನಷ್ಟು ಪ್ರಖರವಾಗಿದೆ. ಎಲ್ಲ ಕ್ಷೇತ್ರಗಳ, ವರ್ಗಗಳ ಹಿನ್ನೆಲೆಯ ಮಹಿಳೆಯರು ಇಂದು ಬರವಣಿಗೆಯೂ ಸೇರಿದಂತೆ ವಿಭಿನ್ನ ಅಭಿವ್ಯಕ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ದು.ಸರಸ್ವತಿ, ವಿನಯಾ ವಕ್ಕುಂದ, ಅಕ್ಷತಾ ಹುಂಚದಕಟ್ಟೆ, ಸಿ.ಮಂಗಳಾ, ಸುಮಂಗಲಾ, ಸುನಂದಾ ಕಡಮೆ, ಭಾರತೀದೇವಿ, ರೇಣುಕಾ ಹೆಳವರ್, ಮಂಜುಳಾ ಹುಲಿಕಂಟಮೂರ್ತಿ, ಜಯಶ್ರೀ ಕಾಸರವಳ್ಳಿ ಮೊದಲಾದವರ ಬರವಣಿಗೆಗಳು ಕನ್ನಡ ಸಾಹಿತ್ಯದ ಸಮಕಾಲೀನ ವಿನ್ಯಾಸವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ" ಎಂಬುದಾಗಿ ವಿಮರ್ಶಕಿ ಡಾ. ಎಂ.ಎಸ್. ಆಶಾದೇವಿ ಗುರುತಿಸುತ್ತಾರೆ.

**ಕಾವ್ಯ:** ನಮ್ಮ ಹಿರಿಯ ಕವಿಗಳು ಜನಪದ, ಭಾರತೀಯ ತತ್ತ್ವ ಹಾಗೂ ಸ್ವ ಅನುಭವದಿಂದ ತಮ್ಮ ಕವಿತೆಗಳನ್ನು ಬರೆಯುತ್ತಿದ್ದರು. ತಮ್ಮ ಸುತ್ತಲ ಬದುಕು, ಪರಿಸರವೂ ಅವರ ಕಾವ್ಯದಲ್ಲಿ ಮಿಳಿತವಾಗುತ್ತಿತ್ತು. ಆದರೆ ಇಂದಿನ ಕವಿತೆಗಳಿಗೆ ಮೂಲ ಯಾವುದು ಎಂದು ಹುಡುಕುವುದು ಕಷ್ಟ. ಸಮಕಾಲೀನ ಘಟನೆಗಳು, ನೋವಿನ ನೆಲೆಗಳು, ತಾವೇ ಅನುಭವಿಸಿದ ತರತಮಗಳು, ಆರ್ಥಿಕ, ಸಾಮಾಜಿಕ ಪಲ್ಲಟಗಳು, ಕುಟುಂಬ ವಂಚಿತ ಪ್ರೀತಿ ಹೀಗೆ ನಮ್ಮ ಬದುಕಿನಲ್ಲಿಯೇ ನಡೆಯುತ್ತಿರುವ ಸಂಗತಿಗಳನ್ನು ಕವಿತೆಯ ಮಾಧ್ಯಮದಲ್ಲಿ ಹೊಸ ತಲೆಮಾರಿನ ಕವಿಗಳು ಹಿಡಿದಿಡುತ್ತಿದ್ದಾರೆ. 'ಬಹುತ್ವ ಮತ್ತು ಹೊಸ ರಾಷ್ಟ್ರೀಯತೆಗಳು ನಮ್ಮ ಚಿಂತನೆಯ ಕ್ರಮಗಳನ್ನು ಅಲ್ಲಾಡಿಸುತ್ತಿವೆ.

ಹಳೆಯ ತಲೆಮಾರಿನ ಕೆ.ವಿ. ತಿರುಮಲೇಶ್, ಚಂದ್ರಶೇಖರ ಕಂಬಾರ, ಎಸ್.ಜಿ. ಸಿದ್ಧರಾಮಯ್ಯ, ಎಚ್.ಎಸ್. ವೆಂಕಟೇಶಮೂರ್ತಿ, ಬಿ.ಟಿ. ಲಲಿತಾನಾಯಕ್ ಮುಂತಾದವರು ಇಂದಿಗೂ ಸಕ್ರಿಯವಾಗಿ ಬರವಣಿಗೆಯಲ್ಲಿ ತೊಡಗಿಕೊಂಡಿದ್ದಾರೆ.

“ಯಾವುದು ಕಾವ್ಯ ಯಾವುದು ಅಲ್ಲ ಎನ್ನುವ ಜಿಜ್ಞಾಸೆ ಎಲ್ಲಾ ಕಾಲದಲ್ಲೂ ಇರುತ್ತದೆ. ಹಾಗೆಯೇ ಆಯಾ ಕಾಲಕ್ಕೆ ತಕ್ಕಂತೆ ಕಾವ್ಯದ ವ್ಯಾಖ್ಯಾನ ಬದಲಾಗುತ್ತಲೇ ಇರುತ್ತದೆ. ಅದಕ್ಕೆ ಸರಿಸಮನಾಗಿ ಕಾವ್ಯದ ಒಂದು ಧಾರೆ ಸದಾಕಾಲ ಗುಪ್ತಗಾಮಿನಿಯಾಗಿ ಹರಿಯುತ್ತಲೇ ಇದ್ದು ಹಿಂದಿನ ಕಾವ್ಯ ಪರಂಪರೆಗೆ ಮುಂದಿನ ಕಾವ್ಯವನ್ನು ತಳಕು ಹಾಕುತ್ತಲೇ ಇರುತ್ತದೆ. ಅದಕ್ಕೆ ಪ್ರತೀ ಐದು ಪೀಳಿಗೆಗೆ ಕಾವ್ಯದ ಸ್ವರೂಪ ಬದಲಾಗುತ್ತಿದ್ದರೂ ಅದರೊಳಗೆ ಸಾಮ್ಯ ಹಾಗೂ ವೈರುಧ್ಯಗಳನ್ನು ಗುರುತಿಸಬಹುದು. ಹಾಗೆಯೇ ಪ್ರತೀ ಪೀಳಿಗೆಯೂ ಕೆಲವೊಂದು ಸಾರ್ವತ್ರಿಕ ಸತ್ಯಗಳನ್ನು ಹೊಸದಾಗಿ ತಾನೇ ಕಂಡುಕೊಂಡಂತೆ ಸಂಭ್ರಮಪಡುತ್ತದೆ. ಅದು ಹೊಸದು ಎಂದು ಭಾಸವಾಗಲು ಕಾರಣ ಆ ಸಾರ್ವತ್ರಿಕ ಸತ್ಯ ಕಾಲಕಾಲಕ್ಕೆ ಹೊಸ ವೇಷ ತೊಟ್ಟು ಮುಂದೆ ಬರುವುದು” ಎಂದು ಕವಯಿತ್ರಿ ಪ್ರತಿಭಾ ನಂದಕುಮಾರ ಅಭಿಪ್ರಾಯಿಸುತ್ತಾರೆ.

ಗೋಪಾಲಕೃಷ್ಣ ಅಡಿಗರು ಇದೇ ಪರಂಪರೆಯ ಬೇರಿನಿಂದಲೇ ಬೆಳೆದ ಕವಿಯಾಗಿ ಹೊಸಕಾವ್ಯ ಪದ್ಧತಿಯ ಸ್ಥಾಪಕರಾಗಿದ್ದು ತಮ್ಮದೇ ವಿಶಿಷ್ಟ ಚಿತ್ರಣಗಳಿಂದ, ವಿಲಕ್ಷಣ ಕಾವ್ಯಶೈಲಿ, ಪುರಾಣ ಪರಂಪರೆಯಿಂದ ತೆಗೆದುಕೊಂಡು ಪ್ರಚಲಿತ ವಿಷಯಗಳನ್ನು ಬಿಂಬಿಸುವ ಚಿತ್ರಣಗಳಿಂದಾಗಿ ಗಮನ ಸೆಳೆಯುತ್ತಾರೆ. 'ಅನ್ಯರೊರೆದುದನೆ ಬರೆದುದನೆ ಬರೆಬರೆದು ಬಿನ್ನಗಾಗಿದೆ ಮನವು' ಎನ್ನುತ್ತಲೇ “ನಮ್ಮ ಹಿರಿಯ ಕವಿಗಳ ದಾರಿಯಲ್ಲಿ ನಡೆಯುವುದರಿಂದಲೂ ಅಷ್ಟು ಕವಿತೆ ಬಂದೀತು. ಆದರೆ ಅದಕ್ಕೆ ಹೊಸ ಸಮಾಜದ ವಾಣಿಯಾಗುವ ಸಾಮರ್ಥ್ಯ ಖಂಡಿತ ಬರಲಾರದು. ಗತಕಾಲದ ಭಾಷೆ, ಭಾವವನ್ನು ಕೊಲ್ಲುತ್ತದೆ. ಮನಸ್ಸನ್ನು ಮಂಕಾಗಿಸುತ್ತದೆ. ಅರ್ಥಕ್ಕಿಂತ ಶಬ್ದಗಳ ಹಾರಾಟವೇ ಹೆಚ್ಚಿ ಅರ್ಥ ಮರೆಯಾಗುತ್ತದೆ. ಇಂಥ ಕಾಲದಲ್ಲಿ ಕಾವ್ಯಕ್ಕೆ ಮತ್ತೆ ವಾಸ್ತವದ ರಕ್ತದಾನ ನಡೆಯಬೇಕು. ಕಾವ್ಯದಲ್ಲಿ ಮತ್ತೆ ಮಣ್ಣಿನ ವಾಸನೆ ಹೊಡೆಯಬೇಕು. ಈ ಜಗತ್ತನ್ನು ಬಿಟ್ಟು ಕಾವ್ಯ ಬದುಕಲಾರದು ಎಂಬುದನ್ನು ಮತ್ತೆ ಕವಿಗಳು ಅರಿಯಬೇಕಾಗುತ್ತದೆ” ಎನ್ನುವ ಅವರ ಮಾತುಗಳು ಇಂದಿನ ಕಾಲಕ್ಕೂ ಪ್ರಸ್ತುತ ಎಂಬುದನ್ನು ಮನಗಾಣಬಹುದು.

ಅಡಿಗರ ಕಾವ್ಯದ ತುಂಬೆಲ್ಲಾ ಹೊಸ ಪ್ರಯೋಗಗಳನ್ನು ನೋಡಬಹುದು. ಅವರ ಗೊಂದಲಪುರ ಕವನದ ಸಾಲಲ್ಲಿ 'ಕಾರ್ಮೋಡ ಕುಡಿದುಬಿಟ್ಟದೆ ಕಣೋ/ ಕಡಲ ಪಡಖಾನೆಯಲಿ ನೊರೆಗರೆವ ವಿಸ್ಕಿ ಸೋಡಾ' ಇಲ್ಲಿ ಕಾರ್ಮೋಡದ ಹುಚ್ಚುತನಕ್ಕೆ ವಿಸ್ಕಿ ಸೋಡಾವಾದ ಕಡಲೆಂಬ ಹೆಂಡದಂಗಡಿಯ ನೀರನ್ನು ಚಿತ್ರಿಸಿರುವುದನ್ನು ನೋಡಬಹುದು. ಹಾಗೆಯೇ 'ಹಿಮಗಿರಿಯ ಕಂದರ' ಕವಿತೆಯಲ್ಲಿ 'ಮಿದುಳು ಬಚ್ಚಲ ಹಂಡೆಯಲ್ಲಿ ಬೇಯುವ ಆಮೆ ಎದ್ದೆದ್ದು ಬಿದ್ದು ಒದ್ದಾಡುತ್ತಿತ್ತು. ಕಿಟಕಿಯ ಮೇಲೆ ಉರಿಕೆಂಡ, ಮೇಜು ಅಗ್ನಿಯ ಕುಂಡ' ದಂತಹ ಪ್ರತಿಮೆಗಳನ್ನು ಅವರ ಕವನಗಳಲ್ಲಿ ಕಾಣಬಹುದು.

ಕುವೆಂಪು ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ವಿಶ್ವಮಾನವ ಸಂದೇಶಗಳನ್ನು ಬಿತ್ತಿದರು. 'ನೀರಡಿಸಿ ಬಂದ ಸೋದರಗೆ ನೀರನು ಕೊಡಲು/ ಮನುಧರ್ಮಶಾಸ್ತ್ರವೆನಗೊರೆಯಬೇಕೆನು? ಎಂದು ಪ್ರಶ್ನಿಸುವ ಕವಿ

ನೂರು ದೇವರನ್ನೆಲ್ಲ ನೂಕಾಚೆ ದೂರ ಭಾರತಾಂಬೆಯ ದೇವಿ ನಮಗಿಂದು ಪೂಜಿಸುವ ಬಾರ' ಎಂದು ಸಮನ್ವಯದ ಮಂತ್ರ ಜಪಿಸುತ್ತಾರೆ.



ದ.ರಾ. ಬೇಂದ್ರೆ ಹೊಸ ಪ್ರತಿಮೆಗಳನ್ನು ಬೆಳೆಸಿದ ಕವಿ. ಅವರ 'ಚಳಿಯಾಕೆ ಕವನದಲ್ಲಿ 'ಸೀಗೆ ಹುಣ್ಣಿವೆ ಮುಂದೆ/ಸೋಗಿನ ಚಂದ್ರಮ/ಸಾಗಿ ಬರುವೊಲು ಬರುವ ಚಳಿಯಾಕೆ' ಎನ್ನುವಲ್ಲಿ ಧಾರವಾಡವನ್ನು ಚಳಿ ತಬ್ಬಿದ್ದನ್ನು ವರ್ಣಿಸುತ್ತಾರೆ. ಪ್ರಕೃತಿ ಹಾಗೂ ದೇಹದಲ್ಲಿ ರತಿ ಅಪೇಕ್ಷೆ ಮಿಡುಕಾಡಿದ್ದನ್ನು ಕವಿ ಗಮಗಮಾ ಗಮಾಡಸತಾವ ಮಲ್ಲಿಗಿ/ನೀ ಹೊರಟಿದ್ದೀಗ ಎಲ್ಲಗೀ? ತುಳುಕ್ಯಾಡತಾವ ತೂಕಡಿಕೆ/ಎವಿ ಅಪ್ಪತಾವ ಕಣ್ಣ ದುಡುಕಿ/ಕನಸು ತೇಲಿ ಬರತಾವ ಹುಡುಕಿ/ನೀ ಹೊರಟಿದ್ದೀಗ ಎಲ್ಲಿಗೆ?' ಎಂದು 'ಗಂಗಾವತರಣ' ಕವಿತೆಯಲ್ಲಿ ಕಟ್ಟಿಕೊಡುವ ಪ್ರಯೋಗ ಅನನ್ಯವಾದದ್ದು. 'ನಾನು ಕಾಲುಮಣೆಯು ತಮ್ಮ ಮಹಾಪಾದ ಪೀಠಕೆ/ತಮ್ಮಡಿಗಳು ಮುಟ್ಟಿದೊಡನೆ ಅರಳಿ ಕಮಲವಾದೆನು' ಎಂದು ರೂಪಾತ್ಮಕವಾಗಿ ಭಗವಂತನನ್ನು ನೆನೆಯುತ್ತಾರೆ.

ಹೊಸ ತಲೆಮಾರಿನ ಹಲವು ಕವಿಗಳು ಇಂದಿನ ಬದಲಾಗುತ್ತಿರುವ ಆಶಯಕ್ಕನುಗುಣವಾಗಿ ಬರೆಯುತ್ತಿರುವುದನ್ನು ಗುರುತಿಸಬಹುದು. ರಾಜೇಂದ್ರ ಪ್ರಸಾದ ತಮ್ಮ 'ಪ್ರಣಪ್ರಣಯ' ಕವಿತೆಯನ್ನು ಪ್ರಾರಂಭಿಸುವುದು 'ಹಗಲುಗಳು ಸತ್ತಿರುವ ಈ ದಿನಗಳಲ್ಲಿ/ರಾತ್ರಿಗಳು ರಣಬೇನೆಯ ವ್ರಣಗಳು' ಎನ್ನುವಲ್ಲಿನ ಪ್ರಯೋಗ ಗಮನ ಸೆಳೆಯುತ್ತದೆ. ಅವರ 'ನೇತ್ರೋಲನ' ಕವಿತೆ 'ರಾತ್ರಿಗಳು ಒಣಗಿ ಬಿಗಿಯಾಗಿ ಬಿಗಡಾಯಿಸಿ/ ವೋಮತಂತುಗಳು ಸುರಿದು ಉರುವಲು ಕಾಯ್ದು/ಉಸಿರ ಉರಿಯೆಲ್ಲಾ ಬೆವರ ಹಬೆಯಾಗಿ ಹರಡಿ/ದೇಹವೆಂಬುದು ಕುಲುಮೆಯಾಗಿಕಾಣದ ಕೈ, ಸುತ್ತಿಗೆಯಲ್ಲಿ ನೆತ್ತಿಯ ಬಡಿಯಲು/ ಸಹಸ್ರಾರ ದಳ ಬಿಚ್ಚಿ ಹರಡಿಕೊಳ್ಳಲು/ಕಣ್ಣು ತೆರೆದುವು, ಡ್ರಾಗನ್ನಿನ ಬಾಯಿಯಂತೆ' ಅನೇಕ ತಂತ್ರದ ಪರಿಭಾಷೆಯನ್ನು ಇವರ ಕವನಗಳು ಕಟ್ಟಿಕೊಡುತ್ತವೆ. ಇವತ್ತು ಕವಿತೆ ಕಟ್ಟಬೇಕಿರುವುದು ಕುಣಿದು ಹಾಡುವುದಕ್ಕಲ್ಲ; ಎದೆಯಲ್ಲಿ ಮನುಷ್ಯನನ್ನು ಮನುಷ್ಯನಾಗೇ ಉಳಿಸಿಕೊಳ್ಳಲು ಎಂದು ಹೇಳಿಕೊಳ್ಳುವ ರಾಜೇಂದ್ರರ ಮಾತು ಹೊಸ ತಲೆಮಾರಿನ ಬಹುತೇಕ ಅಂತಹ ಆಶಯವುಳ್ಳ ಕವಿಗಳಿಗೆ ಅನ್ವಯಿಸಬಹುದು.

**ಕಥೆಗಳು:** ಕತೆಗಳನ್ನು ಕೇಳದೆ ಬೆಳೆದವರಿಲ್ಲ. 'ವಡ್ಡಾರಾಧನೆ' ಕತೆಗಳು ಅಂದಿನ ಚಿತ್ರಣವನ್ನು ಕಟ್ಟಿಕೊಟ್ಟರೂ ಇಂದಿಗೂ ಸಮಕಾಲೀನವಾದ ವಿಷಯಗಳಿವೆ. ಮೌಖಿಕ ಪರಂಪರೆಯಲ್ಲಿ ಅಜ್ಜಿಕತೆಗಳು, ಜನಪದ ಕತೆಗಳು, ಕಟ್ಟುಕತೆಗಳು, ನಮ್ಮನ್ನು ಸದಾ ಕುತೂಹಲಿಗಳನ್ನಾಗಿ ಮಾಡಿವೆ. ಬರವಣಿಗೆಯಲ್ಲಿ ದಕ್ಕುವ ಗುಣಾಢ್ಯನ

ಬೃಹತ್ಕಥೆ, ರಾಮಾಯಣ, ಮಹಾಭಾರತ, ಭಾಗವತ, ನಯಸೇನನ ಧರ್ಮಾಮೃತ ಮುಂತಾದ ಕೃತಿಗಳನ್ನು ಗಮನಿಸಬಹುದು.

ಆಧುನಿಕರಲ್ಲಿ ಮೊದಲಿಗನಾದ ಮುದ್ದಣ ತನ್ನ 'ರಾಮಾಶ್ವಮೇಧ' ಕೃತಿಯಲ್ಲಿ ಓದುಗರಿಗೆ ಎಂತಹ ಕತೆ ಬೇಕೆಂಬ ಪ್ರಶ್ನೆ ಕೇಳುತ್ತಲೇ ಮನೋರಮೆ ತನಗೆಂತಹ ಕತೆ ಬೇಕೆಂದು ತಿಳಿಸುತ್ತಾ ಪರಂಪರೆಯ ಕತೆಯನ್ನು ಕೇಳುವುದಿಲ್ಲ ಎಂಬ ಸಣ್ಣ ಪ್ರತಿಭಟನೆಯನ್ನು ಇಲ್ಲಿ ಕಾಣಬಹುದು. ಸಣ್ಣ ಕತೆಗಳ ಜನಕ ಎಂದೇ ಪ್ರಖ್ಯಾತರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು ೧೯೧೦ರಲ್ಲಿ 'ರಂಗನ ಮದುವೆ' ಎಂಬ ಸಣ್ಣಕತೆಯನ್ನು ಬರೆದರು. ಬದಲಾಗುತ್ತಿರುವ ಪರಿಸರ ಹಾಗೂ ಮನುಷ್ಯನ ಮನೋಧರ್ಮದಲ್ಲಿ ಉಂಟಾಗುತ್ತಿದ್ದ ತಲ್ಲಣಗಳನ್ನು ಕತೆ ಹಿಡಿದಿಟ್ಟಿತ್ತು. ಆರು ದಶಕಗಳ ಕಾಲ ತೊಂಬತ್ತಕ್ಕೂ ಹೆಚ್ಚು ಕತೆಗಳನ್ನು



ಬರೆದು ಸಣ್ಣಕತೆ ತನ್ನ ಚಹರೆಯನ್ನು ಖಚಿತಪಡಿಸಿಕೊಂಡು ಜೀವಶೋಧನೆಯ ಪ್ರಮುಖ ರೂಪಕವಾಗಿ ಆಕಾರ ಪಡೆಯಲು ಕಾರಣವಾದವರು ಮಾಸ್ತಿಯವರು. ನಂತರದಲ್ಲಿ ಸತ್ಯಕಾಮ, ಸಿದ್ಧಯ್ಯ ಪುರಾಣಿಕ, ಎಂ.ಕೆ. ಇಂದಿರಾ, ಅ.ನ. ಕೃಷ್ಣರಾಯರು, ಚದುರಂಗ, ವಾಣಿ ಮುಂತಾದವರು ಬರೆಯಲಾರಂಭಿಸಿದರು. ನವ್ಯಕಾಲಘಟ್ಟದಲ್ಲಿ ಅನಂತಮೂರ್ತಿ, ಜಿ.ಎಸ್. ಸದಾಶಿವ, ಶಿವರಾಮ ಕಾರಂತ, ಪೂರ್ಣಚಂದ್ರ ತೇಜಸ್ವಿ, ಲಂಕೇಶ, ದೇವನೂರು ಮಹಾದೇವ, ಡಾ. ಬೆಸಗರಹಳ್ಳಿ ರಾಮಣ್ಣ ಮುಂತಾದವರು ಕಥಾಪರಂಪರೆಗೆ ದೊಡ್ಡ ಕೊಡುಗೆಯನ್ನು ನೀಡಿದರು.

ಸಮಕಾಲೀನ ಕಾಲಘಟ್ಟದಲ್ಲಿ ಹಿರಿಯ ಬರಹಗಾರರು ತಮ್ಮ ಕತೆಗಳನ್ನು ಪ್ರಕಟಿಸಿದ್ದಾರೆ. ಯು.ಆರ್. ಅನಂತಮೂರ್ತಿಯವರು 'ಪಚ್ಚೆ ರೆಸಾರ್ಟ್', ಕೆ.ವಿ. ತಿರುಮಲೇಶರ 'ಮಾರ್ಜಿನಲ್ ಮ್ಯಾನ್', ವೈದೇಹಿಯವರ 'ಕೌಂ' ಪಕ್ಷಿ', ಕುಂ. ವೀರಭದ್ರಪ್ಪನವರ 'ಸೂರ್ಯನ ಕೊಡೆ', ಬಿ.ಟಿ. ಲಲಿತಾ ನಾಯಕರ 'ಹಬ್ಬ ಮತ್ತು ಬಲಿ', ಬೋಳುವಾರು ಮಹಮದ್ ಕುಂಞರವರ 'ಒಂದು ತುಂಡುಗೋಡೆ' ಮುಂತಾದ ಹಿರಿಯರು ಇಂದಿಗೂ ಬರೆಯುತ್ತಿದ್ದಾರೆ. ಇವರುಗಳ ನಂತರದ ದಶಕಗಳಲ್ಲಿ ಬರೆಯುತ್ತಿರುವ ಪ್ರಮುಖ ಲೇಖಕರಾದ ರಾಘವೇಂದ್ರ ಪಾಟೀಲ, ಜಯಂತ ಕಾಯ್ಕಿಣಿ, ಮೊಗಳ್ಳಿ ಗಣೇಶ, ವಿವೇಕ ಶಾನಭಾಗ, ಎಸ್. ದಿವಾಕರ್, ಜೋಗಿ, ಸಾರಾ ಅಬೂಬಕರ್, ಚೆನ್ನಣ್ಣ ವಾಲಿಕಾರ, ಟಿ.ಜಿ. ರಾಘವ, ಬಾನು ಮುಷ್ತಾಕ್, ಬಿ.ಟಿ. ಜಾಹ್ನವಿ, ಹೆಚ್. ನಾಗವೇಣಿ, ನೇಮಿಚಂದ್ರ, ಸತೀಶ ಚಪ್ಪರಿಕೆ, ಧರಣಿದೇವಿ ಮಾಲಗತ್ತಿ, ಗೀತಾ ಬಿ.ಯು, ಇಂದುಮತಿ ಲಮಾಣಿ ಮುಂತಾದ ಲೇಖಕರು ಬರೆಯುತ್ತಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರರು ಓದಿದ್ದು ಕಾನೂನಾದರೂ ಕರ್ನಾಟಕ ಆಡಳಿತ ಸೇವೆಯನ್ನು ನಡೆಸಿದವರು. ಅಧಿಕಾರಿಯಾದರೂ, ಕವನ, ಕತೆ, ನಾಟಕ, ಜೀವನಚರಿತ್ರೆಗಳು, ಲಲಿತ ಪ್ರಬಂಧಗಳನ್ನು ಇಂದಿಗೂ ಬರೆಯುತ್ತಿದ್ದಾರೆ. ಅವರ 'ಅವ್ಯಕ್ತ', 'ಋಣ', 'ಬದುಕು ಮಾಯೆಯ ಮಾಟ', 'ದ ಡೆಟ್ ಅಂಡ್ ಅದರ್ ಸ್ಟೋರಿಸ್' ಮುಂತಾದ ಕಥಾಸಂಕಲನಗಳನ್ನು ಹೊರತಂದಿದ್ದಾರೆ.

ಸಮಕಾಲೀನ ಸಂದರ್ಭದಲ್ಲಿ ಪಿ.ಲಂಕೇಶರ "ನಿಮ್ಮ ಕತೆಯಾಗಲಿ, ಕವನವಾಗಲಿ, ನಾಟಕವಾಗಲಿ ಚೆನ್ನಾಗಿರಬೇಕಾದರೆ ಸಹಜ ಕಾಗದಗಳ ಜೀವ ಪಡೆದಿರಬೇಕು; ನಿಮ್ಮ ಕತೆಯನ್ನು ನೀವೆಷ್ಟೇ ತಿಣುಕಿ ಬರೆದರೂ ಅದರಲ್ಲಿ ಪ್ರೇಯಸಿಯೊಬ್ಬಳು ತನ್ನ ಪ್ರಿಯಕರನಿಗೆ ಗುಟ್ಟಾಗಿ ಬರೆಯುವ ಕಾಗದದ ಜೀವ ಇರಬೇಕು; ಗೋಪ್ಯ ಇರಬೇಕು, ಅರ್ಥ ಇರಬೇಕು. ಇಲ್ಲದಿದ್ದರೆ ನಿಮ್ಮದು ಕತೆಯಾಗುವುದಿಲ್ಲ. ವೇದಿಕೆಯಿಂದ ಚೀರಿಕೊಂಡಾಗಿನ ಜಡತೆ ಪಡೆದುಬಿಡುತ್ತದೆ" ಎಂಬ ಮಾತುಗಳು ಎಲ್ಲಾ ಕಾಲದ ಲೇಖಕರಿಗೂ ಅನ್ವಯಿಸುವಂತಹದ್ದು.

ವಿಚಿತ್ರ ಸನ್ನಿವೇಶಗಳ ಕಾಲಘಟ್ಟವಿದು. ಸರಕು ಸಂಸ್ಕೃತಿಯಾಗಿ ಬದಲಾಗಿ ಇಡೀ ಬದುಕು ಅರ್ಥಹೀನವಾಗುತ್ತಿದೆ. ಕೊಂಡುಕೊಳ್ಳುವ ಸಂಸ್ಕೃತಿ ಬಾಹ್ಯವಷ್ಟೇ ಅಲ್ಲದೆ ಅಂತರಂಗಕ್ಕೂ ಇಳಿದಿದೆ. ಮೌಲ್ಯಗಳಲ್ಲಿ ವ್ಯತ್ಯಾಸಗಳಾಗಿವೆ. ಕೋಮುವಾದಿ ಸ ಭಯ-ಆತಂಕದ ವಾತಾವರಣದಲ್ಲಿ ಏನನ್ನು ಮಾತಾಡುವ ಬರೆಯುವ ಮುನ್ನ ಬಹು ಎಚ್ಚರಿಕೆಯಿಂದ ಇರಬೇಕಾದ ಕಾಲಘಟ್ಟವಿದು. ಕಾರ್ಪೊರೇಟ್ ಸಂಸ್ಕೃತಿಯು ಏನನ್ನೋ



ಪಡೆದುಕೊಳ್ಳುತ್ತಾ ಕಳೆದುಕೊಳ್ಳುತ್ತಿರುವ ಲೆಕ್ಕಾಚಾರಗಳನ್ನು ಹಿಡಿದಿಡುವ ಸಂದರ್ಭಗಳು ದಾಖಲಾಗುತ್ತಿವೆ. ಚಳುವಳಿಗಳಲ್ಲಿ ಭಾಗವಹಿಸಿ, ದೂರನಿಂತು ತಮ್ಮ ಕಾಲದ ವಿಚಿತ್ರ ಸನ್ನಿವೇಶಗಳಿಗೆ ಮುಖಾಮುಖಿಯಾಗುತ್ತಿರುವ ಕತೆಗಾರರು ಇಂದು ಕಾಣುತ್ತಿದ್ದಾರೆ. ಬಡತನ, ಜಾತೀಯತೆ, ವಿಘಟಗೊಳ್ಳುತ್ತಿರುವ ಕುಟುಂಬ, ನಿರುದ್ಯೋಗ, ಸಂವೇದನೆ, ಕಳೆದುಕೊಳ್ಳುತ್ತಿರುವ ಮನುಷ್ಯತ್ವದ ಸಂಧಿಕಾಲದಲ್ಲಿ ಇಂದಿನ ಕತೆಗಾರರು ಅವುಗಳನ್ನು ತಮ್ಮ ಕತೆಗಳಲ್ಲಿ ಸಮರ್ಥವಾಗಿ ದಾಖಲಿಸುತ್ತಿದ್ದಾರೆ.

"ಕಥೆ ಎನ್ನುವುದು ಕಾಲಕಥನ. ನೆಲದಲ್ಲಿ ಬಿದ್ದ ಬೀಜ ತನ್ನ ನೆತ್ತಿಯ ಮೇಲಿನ ಮಣ್ಣನ್ನು ಎಬ್ಬಿಯೇ ಏಳಬೇಕು. ಹಾಗೆ ಕಥೆಯೂ ತನ್ನ ಸುತ್ತಲ ಲೋಕ ಮೀಮಾಂಸೆಯನ್ನು ನಿಭಾಯಿಸಬೇಕು. ಈ ಕಾಲ ಹೀಗಿರದಿದ್ದರೆ ಈ ಕಥೆಯೂ ಹೀಗಿರುತ್ತಿರಲಿಲ್ಲ ಎಂದು ನಿಖರವಾಗಿ ಹೇಳಿಬಿಡಬಹುದಾದಷ್ಟು ಯಶಸ್ವಿ ಕತೆಯ ಒಡಲು ಸೆರಗೆಲ್ಲ ಈ ದೇಶಕಾಲವೇ ಆಗಿರುತ್ತದೆ" ಎಂದು ಕತೆಗಾರ್ತಿ ವಿನಯಾ ಒಕ್ಕುಂದ ಗುರುತಿಸುತ್ತಾರೆ.

“ವಿವಿಧ ಸಮುದಾಯಗಳಿಗೆ ಸೇರಿದ ಹೊಸ ತಲೆಮಾರಿನ ತಾರುಣ್ಯವು ಸೃಷ್ಟಿಸುತ್ತಿರುವ ಇಂದಿನ ಕನ್ನಡ ಸಾಹಿತ್ಯವು ಹೊಸ ಬೈಗಿನ ನವಿರು ಬಿಸಿಲಿನ ಬೆಳಗಿನಂತೆ ಗೋಚರಿಸುತ್ತಿದೆ” ಎಂಬುದಾಗಿ ಕತೆಗಾರ ಕೇಶವ ಮಳಗಿ ಅಭಿಪ್ರಾಯಿಸುತ್ತಾರೆ.

ಇಂದಿನ ಕತೆಗಳಲ್ಲಿ ಹಳ್ಳಿಗಳ ಬದುಕು ಶಿಥಿಲಗೊಂಡು ನಗರದತ್ತ ಬರುತ್ತಿರುವ ಸಮಸ್ಯೆಗಳು, ನಗರದ ಸಮಸ್ಯೆಗಳು, ಇವುಗಳನ್ನು ಚಿತ್ರಿಸುವ ಸಾಕಷ್ಟು ಕತೆಗಳು ಹೊರಬಂದಿವೆ. ಜಾಗತೀಕರಣದ ಪ್ರಭಾವದಿಂದ ಹಳ್ಳಿಯ ಜನರ ಮುಗ್ಧತೆಗಳು ನಾಶವಾಗಿ ಹಣದ ಥೈಲಿ ಸೃಷ್ಟಿಸುತ್ತಿರುವ ವಿವಿಧ ಮುಖಗಳ ಅನಾವರಣವನ್ನು ಪ್ರಹ್ಲಾದ ಅಗಸನಕಟ್ಟೆ, ಸರಜೂ ಕಾಟ್ಕರ್, ಡಾ. ರಾಜಶೇಖರ ಹತಗುಂದಿ, ಶ್ರೀಧರ ಬಳಿಗಾರ, ಲೋಕೇಶ ಅಗಸನಕಟ್ಟೆ, ದಾದಪೀರ್ ಜೈಮನ್, ಟಿ.ಎಸ್. ಗೊರವರ, ಸಬೀಹಾ ಭೂಮಿಗೌಡ, ಶ್ರೀಧರ ಬನವಾಸಿ ಮುಂತಾದವರು ತಮ್ಮ ಕತೆಗಳಲ್ಲಿ ಸಮರ್ಥವಾಗಿ ಕಟ್ಟಿಕೊಡುತ್ತಾರೆ.

ಕಾರ್ಪೊರೇಟ್ ಸಂಸ್ಕೃತಿಯಿಂದಾಗುತ್ತಿರುವ ಜೀವನ ಶೈಲಿಯಲ್ಲಿನ ಪಲ್ಲಟಗಳನ್ನು ಹಿಡಿದಿಡುವ ಕತೆಗಾರರಾದ ವಸುಧೇಂದ್ರ, ನಾಗರಾಜ ವಸ್ತಾರೆ, ವಿಕ್ರಂ ಹತ್ವಾರ, ವಿವೇಕ ಶಾನಭಾಗ ಮುಂತಾದವರು ತಮ್ಮ ಕತೆಗಳಲ್ಲಿ ಪರಂಪರೆಯಿಂದ ಬಿಡಿಸಿಕೊಂಡ, ಬಿಡಿಸಿಕೊಳ್ಳಲಾಗದ ತಲ್ಲಣಗಳನ್ನು ತೆರೆದಿಟ್ಟಿದ್ದಾರೆ. ತಮ್ಮ ಪ್ರದೇಶಗಳಲ್ಲಿ ಆಗುತ್ತಿರುವ ಪಲ್ಲಟಗಳು, ವಿಘಟನೆಗಳನ್ನು ಸಮರ್ಥವಾಗಿ ಕಟ್ಟಿಕೊಡುತ್ತಿರುವ ಸುನಂದಾ ಪ್ರಕಾಶ ಕಡಮೆ, ಡಾ. ಪದ್ಮನಿ ನಾಗರಾಜು, ಪ್ರಜ್ಞಾ ಮತ್ತಿಹಳ್ಳಿ, ಕೆ.ಎ. ಶಾಂತಿ, ದೀಪ್ತಿ ಭದ್ರಾವತಿ, ಸಂಗನಗೌಡ ಹಿರೇಗೌಡ ಮುಂತಾದವರನ್ನು ಹೆಸರಿಸಬಹುದು. ಕೊಟ್ಟೂರಿನ ಅರುಣ್ ಜೋಳದಕೂಡ್ಲಿಗಿ ತಮ್ಮ ಕತೆಗಳಲ್ಲಿ ದಾರಿದ್ರ ಮತ್ತು ಗುಡ್ಡೆ ಬಿದ್ದಿರುವ ಸಂಪತ್ತುಗಳ ಬಗ್ಗೆ ಸೂಕ್ಷ್ಮ ಮನಸ್ಸಿನ ಲೇಖಕ ಪ್ರತಿಕ್ರಿಯಿಸಿದ್ದಾರೆ. ಹಳ್ಳಿಯಿಂದ ಮಹಾನಗರಕ್ಕೆ ಬಂದು ನಾನಾ ಕಾರಣಗಳಿಂದ ಮೊದಲು ಸೋಜಿಗವಾಗಿ ನೋಡಿ ನಗರ ಬೆಚ್ಚಿ ಬೀಳಿಸಿದ್ದನ್ನು ಕಂಡು ಹೆದರಿ ಮರಳಿ ಮನೆಗೆ ಬಂದು ಬರೆಯುತ್ತಿರುವ ಲೇಖಕರಲ್ಲಿ ಲಕ್ಷ್ಮಣ ಬದಾಮಿ, ಸರ್ಜಾಶಂಕರ್ ಹರಳಿಮಠ ಕೂಡ ಇದ್ದಾರೆ.

**ನಾಟಕಗಳು:** ಜನಪದ, ಯಕ್ಷಗಾನ, ಬಯಲಾಟ ಮುಂತಾದ ಪ್ರಕಾರಗಳಲ್ಲಿ ನಾಟಕಗಳನ್ನು ನೋಡಬಹುದು. ಅದರಲ್ಲೂ ವೃತ್ತಿ ರಂಗಭೂಮಿ, ಹವ್ಯಾಸಿ ರಂಗಭೂಮಿ ಎನ್ನುವ ಪ್ರಧಾನ ಪ್ರಕಾರಗಳು ಇಂದಿಗೂ ಮಹತ್ವವನ್ನು ಗಳಿಸಿದೆ. ಕನ್ನಡ ವೃತ್ತಿ ರಂಗಭೂಮಿಗೆ ೧೫೦ ವರ್ಷಗಳ ಇತಿಹಾಸವಿದೆ. ಕ್ರಿಶ.೧೮೭೨ರಲ್ಲೇ ವೃತ್ತಿ ರಂಗಭೂಮಿ ಸ್ಥಾಪನೆಗೊಂಡು ಪ್ರಚಲಿತವಿದ್ದ ವಿಷಯ ತಿಳಿಯುತ್ತದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರಾಷ್ಟ್ರೀಯತೆ, ದೇಶಭಕ್ತಿಯನ್ನು ತೋರಿಸಲು ನಾಟಕಗಳು ಮಹತ್ತರ ಪಾತ್ರ ವಹಿಸಿವೆ.

ವೃತ್ತಿ ರಂಗಭೂಮಿಯಲ್ಲಿ ಅಭಿನಯಿಸುವುದು ಅಂದು ಕೀಳರಿಮೆಯಾಗಿ ಕಾಣುತ್ತಿದ್ದ ಕಾಲವೊಂದಿತ್ತು. ನಾಟಕ ಮಾಡಿಕೊಂಡು ಬದುಕುವವರನ್ನು ಕೀಳಾಗಿ ಕಾಣಲಾಗುತ್ತಿತ್ತು. ಅದರಲ್ಲೂ ಮಹಿಳೆಯರನ್ನು ನಾಟಕದವಳು ಎಂದು ಜರಿಯುತ್ತಿದ್ದ ಕಾಲಘಟ್ಟದಲ್ಲಿ ಬೇರೆಲ್ಲೋ ಹೊಟ್ಟೆಪಾಡಿಗೆ ದುಡಿದು ನಾಟಕದಂತಹ ಕಲಾ ಪ್ರಕಾರವನ್ನು ಹವ್ಯಾಸಿಯಾಗಿ ತೆಗೆದುಕೊಂಡು ಅಭಿನಯಿಸುವ ಕಾಲಘಟ್ಟವೊಂದು ಅರವತ್ತರ ದಶಕದಲ್ಲಿ ಪ್ರಾರಂಭವಾದ ನಂತರ ಇವೆರಡರ ಭೇದ ಇನ್ನಷ್ಟು ಹೆಚ್ಚಾಯಿತು.

ಇಂದಿಗೂ ನಾಟಕಗಳಲ್ಲಿ ಈ ಎರಡು ಪ್ರಕಾರಗಳಿವೆ. ಇಂದಿನ ಕಾಲಘಟ್ಟಕ್ಕೆ ತಕ್ಕಂತೆ ವೃತ್ತಿ ನಾಟಕಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ಡೈಲಾಗು, ಚಲನಚಿತ್ರದ ಹಾಡುಗಳು, ಡಬಲ್ ಮೀನಿಂಗ್, ಸಾಮಾಜಿಕ ಕಳಕಳಿಯ ನಾಟಕಗಳು ಇಂದಿಗೂ ಬರುತ್ತಿವೆ. ಪೌರಾಣಿಕ, ಐತಿಹಾಸಿಕ ಘಟನೆಗಳನ್ನು ನಾಟಕ ಮಾಡುತ್ತಿದ್ದ ಕಾಲದೊಂದಿಗೆ ಸಾಮಾಜಿಕ ನಾಟಕಗಳೂ ವೃತ್ತಿ ರಂಗಭೂಮಿಯನ್ನು ಶ್ರೀಮಂತಗೊಳಿಸಿದವು. ಅನೇಕ ಕಂಪನಿಗಳು ಹೊಸ ಹೊಸ ನಾಟಕಗಳನ್ನು ಬರೆಸಿ ಅಭಿನಯಿಸಿದರು. ಬಿ.ಪುಟ್ಟಸ್ವಾಮಯ್ಯ, ಹಿರಣ್ಣಯ್ಯ, ಜಿ.ವಿ.ಅಯ್ಯರ್, ವಾಸುದೇವಾಚಾರ್ಯ, ಶ್ರೀರಂಗ ಮುಂತಾದವರು ವೃತ್ತಿ ರಂಗಭೂಮಿಗಾಗಿ ನಾಟಕಗಳನ್ನು ಬರೆದರು.

ಆಧುನಿಕ ಕನ್ನಡ ನಾಟಕಗಳ ಜನಕ ಎಂದು ಕೈಲಾಸಂರವರನ್ನು ಕರೆಯಲಾಗುತ್ತದೆ. ಅವರ 'ಟೊಳ್ಳುಗಟ್ಟಿ' ಮುಂತಾದ ನಾಟಕಗಳನ್ನು ಗಮನಿಸಬಹುದು. ನಂತರ ನವೋದಯಕ್ಕೆ ಕಾರಣರಾದ ಬಿ.ಎಂ.ಶ್ರೀಯವರು ದುರಂತ ನಾಟಕವನ್ನು ಪರಿಚಯಿಸಿದರು. ಅವರ "ಅಶ್ವತ್ಥಾಮನ್' ಅನ್ನು ಅನುಸರಿಸಿ ಮುಂದೆ ಮಾಸ್ತಿಯವರು 'ಸಾವಿತ್ರಿ', 'ಶಾಂತಾ', 'ಉಷಾ' ನಾಟಕಗಳನ್ನು ಪ್ರಾರಂಭದಲ್ಲಿ ರಚಿಸಿದರು. ಕುವೆಂಪುರವರು 'ಯಮನ ಸೋಲು', 'ಶೂದ್ರ ತಪಸ್ವಿ', 'ಜಲಗಾರ', 'ಬೆರಳ್‌ಗೆ ಕೊರಳ್', 'ಸ್ಮಶಾನ ಕುರುಕ್ಷೇತ್ರ' ಮುಂತಾದ ನಾಟಕಗಳನ್ನು ರಚಿಸಿದರು. ಬೇಂದ್ರೆಯವರ 'ಜಾತ್ರೆ', ಗಿರೀಶ್ ಕಾರ್ನಾಡರ 'ಯಯಾತಿ', 'ತುಘಲಕ್', 'ಹಯವದನ', 'ನಾಗಮಂಡಲ', 'ತಲೆದಂಡ', 'ಅಗ್ನಿ ಮತ್ತು ಮಳೆ', 'ಮಾ ನಿಷಾಧ' ಎಂಬ ಏಕಾಂಕ ನಾಟಕಗಳನ್ನು ರಚಿಸಿದರು. ಐತಿಹಾಸಿಕ ವಿಷಯವನ್ನು ತೆಗೆದುಕೊಳ್ಳುವುದರ ಮೂಲಕ ಮನುಷ್ಯನ ಸಾರ್ವಕಾಲಿಕ ಅನುಭವಕ್ಕೆ ರೂಪು ಕೊಟ್ಟ ನಾಟಕಕಾರರಲ್ಲಿ ಗಿರೀಶ್ ಕಾರ್ನಾಡ್ ಪ್ರಮುಖರು. ಲಂಕೇಶರ 'ಸಂಕ್ರಾಂತಿ', 'ತೆರೆಗಳು', 'ಗುಣಮುಖ', 'ದೊರೆ ಈಡಿಪಸ್ ಮತ್ತು ಅಂತಿಗೊನೆ', 'ಕ್ರಾಂತಿ ಬಂತು ಕ್ರಾಂತಿ' ಮುಂತಾದ ನಾಟಕಗಳನ್ನು ರಚಿಸಿದ್ದಾರೆ.

ಹೊಸ ತಲೆಮಾರಿನ ಲೇಖಕರೊಟ್ಟಿಗೆ ಆ ಕಾಲದಿಂದಲೂ ಇಂದಿಗೂ ಹೊಸ



ಹೊಸ ನಾಟಕಗಳನ್ನು ಚಂದ್ರಶೇಖರ ಕಂಬಾರರು ರಚಿಸುತ್ತಿದ್ದಾರೆ. ಜನಪದ ವಸ್ತುವನ್ನು ಸಶಕ್ತವಾಗಿ ದುಡಿಸಿಕೊಂಡ ಪ್ರಮುಖರಲ್ಲಿ ಕಂಬಾರರು ಒಬ್ಬರು. (ಅವರ 'ಬೋಳೆ ಶಂಕರ', 'ಮಹಾಮಾಯಿ', 'ನೆಲಸಂಪಿಗೆ', 'ಶಿವರಾತ್ರಿ', 'ಸಿಂಗಾರವ್ವ ಮತ್ತು ಅರಮನೆ' ಕತೆಯನ್ನು ನಾಟಕವಾಗಿ ಅಳವಡಿಸಿಕೊಳ್ಳಲಾಗಿದೆ). ಕಂಬಾರರು ತಮ್ಮ ನಾಟಕಗಳಲ್ಲಿ ಕಾಮ, ನಿಸರ್ಗದ ಬಗ್ಗೆ ಸದಾ ಶೋಧನೆ ನಡೆಸಿದ್ದಾರೆ. 'ಜೋಕುಮಾರಸ್ವಾಮಿ' ನಾಟಕದಲ್ಲಿ ಭಾಷೆ ಹಾಗೂ ನಿರೂಪಣಾ ಶೈಲಿಯನ್ನು ವಿಶಿಷ್ಟವಾಗಿ ಬಳಸಿಕೊಳ್ಳಲಾಗಿದೆ. ಅವರ ಇತ್ತೀಚಿನ ನಾಟಕಗಳಾದ 'ಗುಳ್ಳಕಾಯಜ್ಜಿ', 'ಮಹಮೂದ್ ಗವಾನ್' ಗಮನಸೆಳೆಯುತ್ತವೆ.

ಎಚ್.ಎಸ್. ವೆಂಕಟೇಶಮೂರ್ತಿಯವರು 'ಚಿತ್ರಪಟ', 'ಉರಿಯ ಉಯ್ಯಾಲೆ', 'ಅಗ್ನಿವರ್ಣ', 'ಅಹಾತ', 'ಸ್ವಯಂವರ' ಮುಂತಾದ ನಾಟಕಗಳನ್ನು ರಚಿಸಿದ್ದಾರೆ. ಅವರ ನಾಟಕಗಳು ಸಾರ್ವಕಾಲೀಕ ಪ್ರಸ್ತುತತೆಯನ್ನು ಪಡೆದಿವೆ.

ಸಮಕಾಲೀನ ಸಂದರ್ಭದಲ್ಲಿ ಅನೇಕ ನಾಟಕಕಾರರನ್ನು ಗಮನಿಸಬಹುದು. ಲೋಕಾನುಭವ, ವಿಷಯ ಸಂಗ್ರಹ, ತಮ್ಮನ್ನು ತೀವ್ರವಾಗಿ ಕಾಡಿದ ವಿಷಯವನ್ನು ಬಹುಶುತ್ರರು ಮೆಚ್ಚಿಕೊಳ್ಳುವಂತಹ ವೀಕ್ಷಕರಿಗೆ ರಸಭಿನ್ನತೆ ನೀಡಿದಾಗ ಮಾತ್ರ ಧ್ವನಿಪೂರ್ಣ ನಾಟಕಗಳು ಗಟ್ಟಿಯಾಗಿ ನಿಲ್ಲಲು ಸಾಧ್ಯ. ಅನೇಕ ಕತೆಗಳು, ಪ್ರಸಂಗಗಳು ಇಂದು ನಾಟಕಗಳಾಗುತ್ತಿವೆ. ಇಂದಿನ ಲೇಖಕರು ಪುರಾಣ, ಐತಿಹಾಸಿಕ, ಜಾಗತಿಕ ವಿಷಯಗಳನ್ನು ನಾಟಕ ಮಾಡುತ್ತಿರುವಂತೆಯೇ ಇಲ್ಲಿನ ದೇಸಿ ಜಾನಪದ ವಸ್ತುಗಳನ್ನೂ ರಂಗಭೂಮಿಗೆ ಅಳವಡಿಸುವ ಪ್ರಯೋಗ ಮಾಡುತ್ತಿದ್ದಾರೆ. ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿ ನಾಟಕವಾಗಿದೆ ದೀರ್ಘಕಾಲದ ನಾಟಕವಾಗಿ ಮೂರು ನಾಲ್ಕು ಜಾಗಗಳಲ್ಲಿ ಒಂದೇ ನಾಟಕ ಪ್ರಯೋಗವಾಗುವಂತಹ ಪ್ರಯೋಗಗಳನ್ನು ಜನ ಮೆಚ್ಚುತ್ತಿದ್ದಾರೆ. ಮುಖ್ಯಮಂತ್ರಿ ನಾಟಕ ಗಿನ್ನೀಸ್ ದಾಖಲೆಯತ್ತ ಮುನ್ನುಗುತ್ತಿದೆ.

ಕೆ.ವೈ. ನಾರಾಯಣಸ್ವಾಮಿ ಪಂಪನ ವಿಕ್ರಮಾರ್ಜುನ ವಿಜಯ ಕೃತಿಯನ್ನು 'ಪಂಪಭಾರತ' ಎಂಬ ನಾಟಕವನ್ನು ಬರೆದಿದ್ದಾರೆ. ಇದಲ್ಲದೆ 'ಅನಭಿಜ್ಞ ಶಾಕುಂತಲ', 'ಕಳವು', 'ಚಕ್ರರತ್ನ', 'ಹುಲಿಸೀರೆ', 'ವಿನುರ ಮೇಮು' ಇವರ ಕನ್ನಡ ಪ್ರಸಿದ್ಧ ನಾಟಕಗಳು. ಕುವೆಂಪುರವರ 'ಶೂದ್ರತಪಸ್ವಿ' ನಾಟಕವನ್ನು ತೆಲುಗಿಗೆ ಭಾಷಾಂತರಿಸಿದ್ದಾರೆ.

ಕುವೆಂಪುರವರ ಬೃಹತ್ ಕಾದಂಬರಿ 'ಮಲೆಗಳಲ್ಲಿ ಮದುಮಗಳು' ಒಂಬತ್ತು ಗಂಟೆಗಳ ರಂಗರೂಪಗೊಳಿಸಿದ್ದಾರೆ. ಇದು ಭಾರತೀಯ ರಂಗಭೂಮಿ ಕ್ಷೇತ್ರದಲ್ಲಿ ಹೊಸ ದಾಖಲೆಯಾಗಿದೆ.

ಸಮಕಾಲೀನ ಕಾಲಘಟ್ಟದಲ್ಲಿ ಬರೆಯುತ್ತಿರುವ ಮತ್ತೊಬ್ಬ ಭರವಸೆಯ ನಾಟಕಕಾರ ಬೇಲೂರು ರಘುನಂದನರವರು. ಅವರ 'ಭೂಮಿ', 'ರಕ್ತವರ್ಣೆ', 'ರೂಪರೂಪಗಳನು ದಾಟಿ', 'ಮೋಹನ ತರಂಗಿಣಿ' ಮುಂತಾದ ನಾಟಕಗಳು ಯಶಸ್ವಿ ಪ್ರಯೋಗಗಳನ್ನು ಕಾಣುತ್ತಿವೆ.

ಕಾದಂಬರಿ: ಇಂದಿನ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಅತ್ಯಂತ ಮಹತ್ವವೂ ಪ್ರಭಾವಶಾಲಿಯೂ ಜನಪ್ರಿಯವೂ ಆಗಿವೆ. ಬಾಣಭಟ್ಟನ 'ಕಾದಂಬರಿ'ಯಿಂದ ಕಾದಂಬರಿ



ಹೆಸರು ಮುಂಚೂಣಿಗೆ ಬಂದಿತು. ಕುವೆಂಪು, ಕಾರಂತರು, ಅನಕೃ, ರಾವಬಹದ್ದೂರ, ಮಾಸ್ತಿ ಮುಂತಾದವರು ಈ ಕ್ಷೇತ್ರದಲ್ಲಿ ವಿಫುಲವಾಗಿ ದುಡಿದಿದ್ದಾರೆ. ಕಳೆದ ಅನೇಕ ವರ್ಷಗಳಲ್ಲಿ ಕಾದಂಬರಿ ಕ್ಷೇತ್ರದಲ್ಲಿಯೂ ಬಹಳಷ್ಟು ಪ್ರಯೋಗಗಳಾಗಿವೆ. ಕಟ್ಟಿಮನಿ, ನಿರಂಜನ, ತರಾಸು, ಭೈರಪ್ಪ, ಚಿತ್ತಾಲ, ತೇಜಸ್ವಿ ಮುಂತಾದವರು ಕಾದಂಬರಿಗಳನ್ನು ರಚಿಸಿದವರಲ್ಲಿ ಪ್ರಮುಖರು.

ಅರವತ್ತರ ದಶಕದಲ್ಲಿ ಅನೇಕ ಮಹಿಳಾ ಲೇಖಕಿಯರು ಜನಪ್ರಿಯ ಮನರಂಜನಾ ಕಾದಂಬರಿಗಳನ್ನು ಬರೆದರು. ಅಲ್ಲಿ ಮನರಂಜನೆಯಿದ್ದರೂ ಆ ಕಾಲಘಟ್ಟದ ಮಹಿಳೆಯರ ನೋವು, ಹೆಣ್ಣಿನ ವಿಶಿಷ್ಟ ಜೀವನಾನುಭವ, ಅನೇಕ ಪ್ರಶ್ನೆಗಳು, ಪಲ್ಲಟಗಳನ್ನೂ ದಾಖಲಿಸಿದವು. ಅವರಲ್ಲಿ ಉಷಾ ನವರತ್ನರಾಮ್, ಎಂ.ಕೆ. ಇಂದಿರಾ, ಸಿ.ಎನ್. ಮುಕ್ತಾ, ಎಚ್.ಎಸ್. ಪಾರ್ವತಿ, ಈಚನೂರು ಶಾಂತ ಮುಂತಾದ ಮಹಿಳೆಯರು ಕಾದಂಬರಿಗಳನ್ನು ಬರೆದರು. ಅವುಗಳನ್ನು ಅಡಿಗೆಮನೆಯ ಸಾಹಿತ್ಯ ಎಂದು ಮೂದಲಿಸಿದರೂ ಎಂ.ಕೆ.ಇಂದಿರಾ ಮತ್ತು ಅನುಪಮಾ ನಿರಂಜನ ಹಾಗೂ ತ್ರಿವೇಣಿಯವರು ಭಿನ್ನವಾದ ಮಹಿಳಾ ಜಗತ್ತನ್ನು ಕಟ್ಟಿಕೊಟ್ಟರು. ಗ್ರಾಮೀಣ ಬದುಕು, ನಗರದ ಸಂಘರ್ಷ, ಮನೋವೈಜ್ಞಾನಿಕ ಹಿನ್ನೆಲೆಯ ಮೂಲಕ ಚರ್ಚಿಸಲಾಯಿತು.

ನವ್ಯ ಕಾಲಘಟ್ಟದ ತರಾಸುರವರು ಐತಿಹಾಸಿಕ ವಿಷಯಗಳನ್ನಿಟ್ಟುಕೊಂಡು ಕಾದಂಬರಿಗಳನ್ನು ಮೊದಲು ರಚಿಸಿದರು. 'ಕಂಬನಿಯ ಕುಯಿಲು', 'ರಕ್ತರಾತ್ರಿ', 'ತಿರುಗುಬಾಣ' ಇವು ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದ ಕಾದಂಬರಿಗಳಾಗಿವೆ. 'ನಾಗರಹಾವು', 'ಗಾಳಿಮಾತು', 'ದುರ್ಗಸ್ತಮಾನ', 'ನೃಪತುಂಗ', 'ಬಿಡುಗಡೆಯ ಬೇಡಿ, 'ಹಂಸಗೀತೆ', 'ಚಂದವಳ್ಳಿಯ ತೋಟ' ಮುಂತಾದ ಕಾದಂಬರಿಗಳು ಚಲನಚಿತ್ರವಾಗಿಯೂ ಗಮನಸೆಳೆದವು.

ಅನಂತಮೂರ್ತಿಯವರ 'ಸಂಸ್ಕಾರ', 'ಭಾರತೀಪುರ', 'ಬರ', 'ಅವಸ್ಥೆ', 'ಮೌನಿ', 'ಘಟಶ್ರಾದ್ಧ' ಮುಂತಾದ ಕೃತಿಗಳು ಚಲನಚಿತ್ರಗಳಾಗಿ ವಿಮರ್ಶಕರ, ಪ್ರೇಕ್ಷಕರ ಗಮನ ಸೆಳೆದವು. ಶಿವರಾಮ ಕಾರಂತರ 'ಮೂಕಜ್ಜಿಯ ಕನಸುಗಳು', 'ಮರಳಿ ಮಣ್ಣಿಗೆ', 'ಮೈ ಮನಗಳ ಸುಳಿಯಲ್ಲಿ', 'ಅಳಿದ ಮೇಲೆ', 'ಗೊಂಡಾರಣ್ಯ ಮುಂತಾದ ಕಾದಂಬರಿಗಳನ್ನು ಬರೆದರು. ಅವರ 'ಮೂಕಜ್ಜಿಯ ಕನಸು' ಇತ್ತೀಚೆಗೆ ಚಲನಚಿತ್ರವಾಗಿ ಸದಭಿರುಚಿಯ ಪ್ರೇಕ್ಷಕರನ್ನು ಸೆಳೆಯುತ್ತಿದೆ. 'ಚಿಗುರಿದ ಕನಸು', 'ಚೋಮನ ದುಡಿ' ಕೂಡ ಚಲನಚಿತ್ರಗಳಾಗಿ ಗೆದ್ದಿವೆ. ಜನಪದ ಹಿನ್ನೆಲೆಯಲ್ಲೇ ಕೃತಿಗಳನ್ನು ವಿಶಿಷ್ಟವಾಗಿ ಕಟ್ಟಿಕೊಡುತ್ತಿರುವ ಚಂದ್ರಶೇಖರ ಕಂಬಾರರು 'ಕರಿಮಾಯಿ', 'ಜಿ.ಕೆ. ಮಾಸ್ತರರ ಪ್ರಣಯ ಪ್ರಸಂಗ', 'ಸಿಂಗಾರವ್ವ ಮತ್ತು ಅರಮನೆ', 'ಶಿಖರ ಸೂರ್ಯ', 'ಶಿವನ ಢಮರುಗ' ಮುಂತಾದ ಕಾದಂಬರಿಗಳನ್ನು ಬರೆದಿದ್ದಾರೆ. ಅವುಗಳು ನಾಟಕ, ಚಲನಚಿತ್ರಗಳಾಗಿವೆ.

ಭೂಮಿ ಮತ್ತು ಹೆಣ್ಣು ಇಂದು ತೀವ್ರವಾಗಿ ಆಕ್ರಮಣಕ್ಕೆ ಒಳಗಾಗುತ್ತಿದ್ದಾರೆ. ಗ್ರಾಮ ಜಗತ್ತಿನ ಒಳಸುಳಿಗಳು, ಸಂಘರ್ಷ, ಸಂಕಟಗಳನ್ನು ಡಾ.ಬಾಳಸಾಹೇಬ ಲೋಕಾಪುರರ



ಕಾದಂಬರಿಗಳು ಮುಖಾಮುಖಿಯಾಗಿಸುತ್ತವೆ. ಅವರ 'ಕೃಷ್ಣ ಹರಿದಳು', 'ನೀಲಗಂಗಾ', 'ಹುತ್ತ', 'ಬಿಸಿಲಪುರ' ಮುಂತಾದ ಕಾದಂಬರಿಗಳು ಸ್ಥಳೀಯ ಭಾಷೆಯಲ್ಲಿ ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ.

ಮರಾಠಿ ಮನೆಭಾಷೆಯಾದರೂ ಕನ್ನಡ ನೆಲದವರಾಗಿ ಬೆಳೆದ ಡಾ. ಸರಜೂ ಕಾಟ್ಕರ್ ಪತ್ರಕರ್ತನಾಗಿ, ಕವಿಯಾಗಿ ಸಾಹಿತ್ಯ ಲೋಕಕ್ಕೆ ಅನನ್ಯ ಕೊಡುಗೆಯನ್ನು ನೀಡಿದ್ದಾರೆ. 'ದೇವರಾಯ', 'ಜುಲೈ ೨೨', 'ಸಾವಿತ್ರಿಬಾಯಿ ಫುಲೆ', 'ಗೌರಿಪುರ', '೧೯೪೮' ಮುಂತಾದ ಕಾದಂಬರಿಗಳನ್ನು ಬರೆದಿದ್ದಾರೆ. 'ಸಾವಿತ್ರಿಬಾಯಿ ಫುಲೆ', 'ಜುಲೈ ೨೨', 'ಗೌರಿಪುರ' ಚಲನಚಿತ್ರಗಳಾಗಿವೆ. ಅವರ 'ಬಾಜಿರಾವ್ ಮಸ್ತಾನಿ' ಹಿಂದಿ ಸಿನಿಮಾದಲ್ಲಿ ಕೆಲವು ಸನ್ನಿವೇಶಗಳಲ್ಲಿ ಕಾಣಿಸಿಕೊಂಡಿದೆ.

ಸಮಕಾಲೀನ ಕಾಲಘಟ್ಟದಲ್ಲಿ ಕಾದಂಬರಿ ಬರೆಯುವವರ ಸಂಖ್ಯೆಯೂ ಅಧಿಕವಾಗುತ್ತಿದೆ. ಜಾಗತಿಕವಾಗಿ ನೂರಾರು ತಲ್ಲಣಗಳಿಗೆ ಮುಖವಾಗಿರುವ ಯುವಪಡೆ ಮಹತ್ವದ ಕಾದಂಬರಿಗಳನ್ನು ಸೃಷ್ಟಿ ಮಾಡುತ್ತಿದ್ದಾರೆ. ಟಾಲ್‌ಸ್ಟಾಯ್ ಕಾಲದಲ್ಲಿ ತಾನು ನೋಡಿದ, ತನ್ನ ಕಣ್ಣ ಮುಂದೆ ನಡೆಯುತ್ತಿದ್ದ ಘಟನೆಗಳಿಗೆ ಮುಖಾಮುಖಿಯಾದ್ದರಿಂದ ಮಹಾನ್ ಕೃತಿಗಳನ್ನು ಬರೆಯುವಂತಾಯಿತು. ಸಮಸ್ಯೆಗಳು ಸಂಕೀರ್ಣಗೊಳ್ಳುತ್ತಿರುವ, ಸಮಸ್ಯೆಗಳನ್ನು ಕತೆಗಳಲ್ಲಿ ಮುಗಿಸಲಾಗದೆ ಇದ್ದಾಗ ಬಹುದೊಡ್ಡ ಕ್ಯಾನವಾಸ್ ಅನ್ನು ಕಾದಂಬರಿ ನೀಡುತ್ತದೆ. ಹೊಸ

ವಿಷಯಗಳು, ಕಾಡುತ್ತಿರುವ ಘಟನೆಗಳು, ಮಾನವೀಯತೆಯ ಕಗ್ಗೋಲೆ, ಜಾತೀಯತೆ, ಪರಿಸರ ಇವೆಲ್ಲವೂ ಕಾದಂಬರಿಗಳ ವಸ್ತುಗಳಾಗಿವೆ.

"ಕಾದಂಬರಿಗಳನ್ನು ಓದುವವರಿಲ್ಲ, ಅತೀ ಹೆಚ್ಚಿನ ಪುಟಗಳ ಕಾದಂಬರಿಯನ್ನು ಬರೆಯುವವರು ಯಾರು? ಓದುಗರು ಯಾರು ಎನ್ನುವಾಗಲೇ ಅತೀ ಹೆಚ್ಚಿನ ಕಾದಂಬರಿಗಳು ಕನ್ನಡದಲ್ಲಷ್ಟೇ ಅಲ್ಲದೆ ಎಲ್ಲಾ ಭಾಷೆಗಳಲ್ಲೂ ಬರುತ್ತಿವೆ. ಜಾಗತಿಕ ಮಟ್ಟದಲ್ಲಿಯೂ ಕತೆ, ಕಾವ್ಯಕ್ಕಿಂತಲೂ ಕಾದಂಬರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿವೆ ಎಂಬುದು ಚರ್ಚೆಯಾಯಿತು" ಎಂಬುದಾಗಿ ವಿಮರ್ಶಕ ಕಾರ್ಲೋಸ್ ಗುರುತಿಸುತ್ತಾರೆ. ಹಿರಿಯ ಲೇಖಕರಾದ ಎಸ್.ಎಲ್.ಭೈರಪ್ಪನವರ ಕಾದಂಬರಿಗಳು ಹಾಟ್ ಕೇಕ್‌ನಂತೆ ಓದುಗರನ್ನು ಸೆಳೆಯುತ್ತಿವೆ. 'ಆವರಣ', 'ಪರ್ವ', 'ಮಂದ್ರ', 'ಯಾನ', 'ಗೃಹಭಂಗ', ತಂತು' ಮುಂತಾದ ಕೃತಿಗಳು ಮತ್ತೆ ಮತ್ತೆ ಪ್ರಿಂಟ್ ಆಗುತ್ತಿವೆ.

ಡಾ. ಕೆ.ಎನ್. ಗಣೇಶಯ್ಯ ಕೃಷಿವಿಜ್ಞಾನಿಯಾಗಿದ್ದರೂ ಸಂಶೋಧನಾತ್ಮಕವಾಗಿ ಕಾದಂಬರಿಗಳನ್ನು ಬರೆಯುತ್ತಿದ್ದಾರೆ. 'ಕನಕ ಮುಸುಕು', 'ಕರಿಸಿರಿಯಾನ', 'ಏಳು ರೊಟ್ಟಿಗಳು, 'ಬಳ್ಳಿಕಾಳ ಬೆಳ್ಳಿ', 'ಚಿತಾದಂತ', 'ರಕ್ತಸಿಕ್ತ ರತ್ನ' ಮುಂತಾದ ಕಾದಂಬರಿಗಳನ್ನು ರಚಿಸಿದ್ದಾರೆ. ಇವರ ಚಾರಿತ್ರಿಕ ನೀಳತೆ 'ಶಾಲಭಂಜಿಕೆ'ಯನ್ನು ಅನೇಕ ವಾಸ್ತವಿಕ, ಚಾರಿತ್ರಿಕ ಘಟನೆಗಳನ್ನಾಧರಿಸಿ ತುಸು ಕಲ್ಪನೆ, ಕುತೂಹಲ ಬೆರೆಸಿ ಸರಳ ಭಾಷಾಶೈಲಿಯಲ್ಲಿ ಬರೆಯುವುದು ಇವರ ವಿಶೇಷ.

ಇದುವರೆಗೂ ಇತರೆ ಸಾಹಿತ್ಯ ಪ್ರಕಾರದಲ್ಲಿ ಬರೆಯುವವರೂ ಕಾದಂಬರಿಗಳನ್ನು ಬರೆಯುತ್ತಿದ್ದಾರೆ. ಕೃಷ್ಣಮೂರ್ತಿ ಹನೂರರ 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಕನ್ನಡದಲ್ಲಿ

ಬಂದ ವಿಶಿಷ್ಟ ಕಾದಂಬರಿ. ವಿವೇಕ ಶಾನಭಾಗರ 'ಒಂದು ಬದಿ ಕಡಲು' ವಾಸ್ತವದ ನೆಲೆಯಲ್ಲಿ ಕುಮಟಾ, ಹೊನ್ನಾವರ ಪ್ರದೇಶದ ಪ್ರಾದೇಶಿಕ ಘಟನೆಗಳನ್ನು ಬೆಸೆಯುವ ಕಾದಂಬರಿ, ಸಲಿಂಗಕಾಮದ ಬಗ್ಗೆ ಈ ಕಾಲಘಟ್ಟದಲ್ಲಿ ಬಹಳಷ್ಟು ಕತೆ, ಕಾದಂಬರಿಗಳು ರಚನೆಯಾಗುತ್ತಿವೆ. ವಸುಧೇಂದ್ರರ 'ಮೋಹನಸ್ವಾಮಿ' ಇಂತಹದ್ದೇ ವಿಷಯವುಳ್ಳ ಕಾದಂಬರಿಯಾಗಿದೆ. ಕಾವ್ಯಾ ಕಡಮೆಯವರು ಕೂಡ 'ಪುನರಪಿ' ಎಂಬ ಇಂತಹದ್ದೇ ಕತೆಯನ್ನು ಕಾದಂಬರಿಗೆ ಆಯ್ದುಕೊಂಡಿದ್ದಾರೆ. ವಸ್ತು ವೈವಿಧ್ಯದ ದೃಷ್ಟಿಯಿಂದ ಹಾಗೂ ತೃತೀಯ ಲಿಂಗಿಗಳ ಬಗ್ಗೆ ಕಾದಂಬರಿ ಅನೇಕ ಒಳನೋಟಗಳನ್ನು ನೀಡುತ್ತದೆ. ವಸುಧೇಂದ್ರದ ಇತ್ತೀಚಿನ ಕಾದಂಬರಿ 'ತೇಜೋ ತುಂಗಭದ್ರಾ' ಗಮನ ಸೆಳೆಯುತ್ತಿದೆ.

ರೇಖಾ ಕಾಖಂಡಕಿಯವರ 'ವೈವಸ್ವತ', ಬೊಳುವಾರರ 'ಓದಿರಿ', ಜನಾರ್ಧನ ಭಟ್‌ರ 'ಮೂರು ಹೆಜ್ಜೆ ಭೂಮಿ', ಡಾ.ಶಿವರುದ್ರ ಕೆ.ಕಲ್ಲೋಳಿಕರರ 'ಹೊಲಗೇರಿಯ ರಾಜಕುಮಾರ', ವ್ಯಾಸರಾವ್ ನಿಂಜೂರರ 'ತೆಂಕನಿಡಿಯೂರಿನ ಕುಳುವಾರಿಗಳು', ಅನುಷ್ ಶೆಟ್ಟಿಯವರ 'ಜೋತ್ಸ್ವಾಲ್, ಶಶಿಧರ ವಿಶ್ವಾಮಿತ್ರರ 'ಚಿಲ, ಶ್ರೀಧರ ಬಳಿಗಾರರ 'ಆಡುಕಳ' ಮುಂತಾದವರನ್ನು ಪ್ರಸ್ತಾಪಿಸಬಹುದು. ಚೀಮನಹಳ್ಳಿ ರಮೇಶರ 'ಬಲಿಹಾರ', ಶ್ರೀಧರ ಬನವಾಸಿಯವರ 'ಬೇರು', ಎಚ್.ನಾಗವೇಣಿಯವರ 'ಗಾಂಧಿ ಬಂದ' ಈ ಕಾಲಘಟ್ಟದ ಮಹತ್ವದ ಕಾದಂಬರಿಗಳಲ್ಲೊಂದು. ಈ ಕಾದಂಬರಿಯು ಸಮುದಾಯ ಹಾಗೂ ಹೆಣ್ಣಿನ ಸಂಘರ್ಷಗಳನ್ನು ಹೆಣೆದಿದೆ. ಕಾದಂಬರಿ ಹೆಣ್ಣಿನ ಅಪಾರ ಶಕ್ತಿಯನ್ನು ಗಾಂಧಿಯನ್ನು ಆ ಸ್ತ್ರೀತ್ವದ ದೃಷ್ಟಿಕೋನದಿಂದ ನೋಡಿರುವುದನ್ನು ಕಾದಂಬರಿ ಧ್ವನಿಪೂರ್ಣವಾಗಿ ಕಟ್ಟಿಕೊಡುತ್ತದೆ. ಜಯಶ್ರೀ ದೇಶಪಾಂಡೆಯವರು 'ದೂರ ದಾರಿಯ ತೀರ', 'ಕಾಳಿಂದಿ', 'ಚಕ್ರವಾತ', 'ಬೇವು', 'ಧರಾಶಯ್ಯ' ಮುಂತಾದ ಕಾದಂಬರಿಗಳನ್ನು ಬರೆದಿದ್ದಾರೆ.

ಕನ್ನಡ ಕಾದಂಬರಿ ತನ್ನ ನೂರು ವರ್ಷಗಳ ಇತಿಹಾಸದುದ್ದಕ್ಕೂ ಸಮೃದ್ಧವಾಗಿ ಬೆಳೆದಿದೆ. ಇಂತಹದ್ದೇ ವಿಷಯವೊಂದು ಕಾದಂಬರಿಗೆ ಸೂಕ್ತ ಎಂದು ಹೇಳಲು ಬರುವುದಿಲ್ಲ. ಇತಿಹಾಸ, ಸಾಮಾಜಿಕ, ಕೌಟುಂಬಿಕ, ಫ್ಯಾಂಟಸಿ ಮುಂತಾದ ಕಲೆಗಾರಿಕೆಯನ್ನು ಸೇರಿಸಿ ಆಕರ್ಷಕ ಕಾದಂಬರಿಯಾಗಿ ರೂಪಿಸಬಹುದು. ಆದರೆ ಎಲ್ಲಾ ಕಾಲಘಟ್ಟದಲ್ಲಿಯೂ ಚರ್ಚೆಯಾಗುತ್ತಿರುವುದು ಅದರ ಗಾತ್ರದ ಬಗ್ಗೆ, ಬೃಹತ್ ಕಾದಂಬರಿಗಳನ್ನು ಇಂದು ಓದಲು ಸಾಧ್ಯವೇ? ಅಷ್ಟು ವ್ಯವಧಾನ ಓದುಗರಿಗಿದೆಯೇ? ಎಂಬ ಅನುಮಾನಗಳು ಸದಾ ಕಾಡುತ್ತಿರುತ್ತವೆ. ಕತೆಗೆ ಪೂರಕವಾಗಿ ಅಷ್ಟು ದೊಡ್ಡ ಪ್ರಮಾಣ ಬೇಕೆಂದು ವಾದಿಸುವವರು ಇದ್ದಾರೆ. ಕಾದಂಬರಿ ರಚಿಸುವುದು ಕೃತಿಕಾರನ ತೃಪ್ತಿಗೋ? ಅಥವಾ ಓದುಗನನ್ನು ತೃಪ್ತಿಪಡಿಸಲೋ ಎಂಬ ಚರ್ಚೆಗಳು ಮುನ್ನಲೆಗೆ ಬರುತ್ತಲೇ ಇವೆ. ಸದಭಿರುಚಿಯನ್ನು ಉಣಬಡಿಸಿದರೆ ಓದುಗರು ಖಂಡಿತ ಸ್ವೀಕರಿಸುತ್ತಾರೆ ಎನ್ನುವ ನಿಲುವು ಲೇಖಕರದ್ದು. ಹೊಸ ಹೊಸ ಪ್ರಯೋಗಗಳನ್ನು ಇಂದು ಕಾಣಬಹುದು. ಉದಾಹರಣೆಯಾಗಿ ಇತ್ತೀಚೆಗೆ ಬಿಡುಗಡೆಯಾದ ಜೋಗಿಯವರ ಪುಟ್ಟ ಕಾದಂಬರಿ ೧೩೨ ಪುಟಗಳದ್ದು. 'ಎಲ್' ನಾಯಕ ಲಕ್ಷ್ಮಣ ನೀಲಂಗಿಯೋ, ಕಥಾನಾಯಕಿ ಲೀಲಾವತಿಯೋ ಆಗಿ

ಕಾದಂಬರಿ ತೆರೆದುಕೊಂಡರೂ ಇಲ್ಲಿನ ಕವಿತೆಗಳು ನಮ್ಮನ್ನು ಆವರಿಸಿಕೊಳ್ಳುತ್ತವೆ. ಕವಿಯಾದ ನಾಯಕ ಬರೆಯುವ ಕವಿತೆಗಳು ಕತೆಯ ಓಟಕ್ಕೆ ಒಮ್ಮೊಮ್ಮೆ ಅಡ್ಡಿಪಡಿಸಿದರೂ ಕಾದಂಬರಿ ಗಮನಸೆಳೆಯುತ್ತದೆ. ಎಲ್ ನಾಯಕ ನಾಯಕಿಯ ಹೆಸರು ಅಂದುಕೊಂಡರೂ ಅದು



ಕತೆಯಲ್ಲಿ ಲವ್, ಲೈಫ್, ಲರ್ನಿಂಗ್ ಮುಂತಾದ ವಿಷಯಗಳನ್ನು ಕಾಡಿಸುತ್ತದೆ. ಇಂಗ್ಲೀಷ್‌ನ ಎಲ್ ಶೀರ್ಷಿಕೆಯೇ ಕಾದಂಬರಿಯನ್ನು ಓದುಗ ಹೇಗೆ ಬೇಕಾದರೂ ಊಹಿಸಿಕೊಳ್ಳಿ ಎನ್ನುವಂತಿದೆ.

ಮೇಲಿನ ಅಂಶಗಳನ್ನೆಲ್ಲಾ ಗಮನಿಸಿದ ನಂತರ ಸಮಕಾಲೀನ ಚಹರೆ ಮತ್ತು ಸವಾಲುಗಳನ್ನು ಹೀಗೆ ಪಟ್ಟಿ ಮಾಡಬಹುದು:

* ಹೊಸ ತಲೆಮಾರಿನವರು ಹಲವು ತಲ್ಲಣಗಳ ಕಾಲಮಾನದಲ್ಲಿ ಜೀವಿಸುತ್ತಿದ್ದಾರೆ.
* ಜಗತ್ತು ಏಕಮುಖಿ ಜೀವನಶೈಲಿಯತ್ತ ಹೊರಳುತ್ತಿರುವ ಸಂದಿಗ್ಧತೆಯನ್ನು ಎದುರಿಸುತ್ತಿರುವಂತೆಯೇ ಇಲ್ಲಿ ಏಕತ್ವಕ್ಕಿಂತ ಬಹುತ್ವದ ಬೆಳೆಯನ್ನು ನೋಡುತ್ತಿದ್ದೇವೆ.
* ನಗರ ಮತ್ತು ಗ್ರಾಮ ಭಾಗಗಳಲ್ಲಿ ಆಗುತ್ತಿರುವ ತೀವ್ರತರವಾದ ಬದಲಾವಣೆಗೆ ಮುಖಾಮುಖಿಯಾಗುತ್ತಿದ್ದಾರೆ.
* ಕೃಷಿಯ ಅವನತಿ, ಭೂಮಿಯ ಮೇಲಿನ ಒಡೆತನ, ಹೆಣ್ಣಿನ ಮೇಲಿನ ನಿರಂತರ ದಾಳಿ, ಹಣದ ಥೈಲಿ, ರಾಜಕಾರಣದ ಒಳನೋಟ, ಪರಿಸರದಿಂದ ಆಗುತ್ತಿರುವ ಹಾನಿ ಮುಂತಾದವು ಇಂದಿನ ಬರಹಗಾರರ ವಿಷಯಗಳಾಗುತ್ತಿವೆ. ವಿಜ್ಞಾನ, ಪತ್ತೆದಾರಿ ಮುಂತಾದ ವಿಷಯಗಳು ಹೊಸ ತಲೆಮಾರಿನ ಕೃತಿಗೆ ವಸ್ತುಗಳಾಗುತ್ತಿವೆ.
* ಯಾವುದೇ ರೀತಿಯ ಚಳುವಳಿಗಳಿಲ್ಲದ ಕಾಲಘಟ್ಟವಿದು. ಇಲ್ಲಿ ದಲಿತ, ಬಂಡಾಯ, ಮಹಿಳಾ ಮುಂತಾದ ಚಳುವಳಿಗಳಿಲ್ಲ.
* ಜೀವಪರ ಕಾಳಜಿ ಇಂದಿನ ಬರಹಗಾರರ ಪ್ರಮುಖ ಆಶಯವಾಗಿದೆ.
* ಬೇರೆ ಬೇರೆ ವೃತ್ತಿಯಲ್ಲಿರುವವರೂ ಗಂಭೀರವಾಗಿ ಬರೆಯುತ್ತಿದ್ದಾರೆ.

* ಹೊಸ ತಲೆಮಾರಿಗೆ ಇಂತಿಷ್ಟೇ ವಯಸ್ಸನ್ನು ನಿಗದಿಗೊಳಿಸುವುದು ಅಪರಾಧವಾಗುತ್ತದೆ. ಇಲ್ಲಿ ವಯಸ್ಸಿನ ಭೇದವಿಲ್ಲದೆ ಲೋಕವನ್ನು ನೋಡುವ ಹೊಚ್ಚ ಹೊಸ ಕ್ರಮ ಮತ್ತು ಅದನ್ನು ತಮ್ಮ ಕೃತಿಗಳಲ್ಲಿ ಕಟ್ಟಿಕೊಡುವುದೇ ಮುಖ್ಯವಾಗುತ್ತದೆ.

* ಸಾಹಿತ್ಯದ ಪ್ರಮುಖ ಪ್ರಕಾರಗಳಾದ ಕತೆ, ಕವನ, ಕಾದಂಬರಿ, ನಾಟಕವಲ್ಲದೆ ಪ್ರವಾಸ ಸಾಹಿತ್ಯ, ಅನುಭವ ಕಥನ, ತಮ್ಮದೇ ಚಿಂತನೆ, ಬ್ಲಾಗ್ ಬರಹ, ಆ ಜಾಲತಾಣಗಳು 'ಅಭಿವ್ಯಕ್ತಿಸುವ ತಾಣಗಳಾಗಿವೆ.

* ಹೊಸ ತಲೆಮಾರು ತಾನು ಕಂಡ, ಅನುಭವಿಸುತ್ತಿರುವ ಅನುಭವಗಳ ಹಿನ್ನೆಲೆಯಲ್ಲಿ ಹೊಸ ವಿಷಯಗಳು, ಹೊಸ ಗ್ರಹಿಕೆಗಳು ಸೃಜನಶೀಲ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುತ್ತಿವೆ.

* ತೃತೀಯ ಲಿಂಗಿಗಳು, ಸಲಿಂಗರು ತಮ್ಮದೇ ಅನುಭವಗಳನ್ನು ಕೃತಿಗಳ ಮೂಲಕ ಹೊರಹಾಕುತ್ತಿದ್ದಾರೆ. ಜೊತೆಗೆ ಹೊಸ ಬರಹಗಾರರು ತಾವು ಕಂಡು, ನೋಡಿದ ಅಂತಹ ಜಗತ್ತನ್ನು ಅನಾವರಣಗೊಳಿಸುತ್ತಿದ್ದಾರೆ.

* ಪ್ರತಿ ಕಾಲಘಟ್ಟದಲ್ಲಿಯೂ ಭಾಷೆಯನ್ನು ಮುರಿದುಕಟ್ಟುವ ಪ್ರಯೋಗಗಳು ಆಗುತ್ತಲೇ



ಬಂದಿವೆ. ಅದು ಸಮಕಾಲೀನ ಸಂದರ್ಭದಲ್ಲಿಯೂ ಆಗುತ್ತಿದೆ. ಸ್ಥಳೀಯ ಭಾಷೆಗಳಲ್ಲಿ ಕೃತಿಗಳು ಹೊರಬರುತ್ತಿವೆ. ಕುಂದಾಪುರ ಕನ್ನಡ, ಸಂಕೇತಿಗಳ ಭಾಷೆ, ತುಳು, ಉರ್ದು, ಮರಾಠಿ, ತಮಿಳು, ಇಂಗ್ಲೀಷ್, ಹಿಂದಿ ಮಿಶ್ರಿತ ಭಾಷೆಗಳ ಕೃತಿಗಳು ಕೈ ಸೇರುತ್ತಿವೆ. ಇದರೊಂದಿಗೆ ಕೆಳವರ್ಗದವ ಭಾಷೆಯಲ್ಲಿಯೇ ಕೃತಿ ರಚನೆಯಾಗುತ್ತಿರುವುದೊಂದು ಮಹತ್ವದ ಬೆಳವಣಿಗೆ,

* ಯಾರೋ ತೋರಿಸಿದ್ದನ್ನು ಒಪ್ಪದೇ ತಾವೇ ನೋಡುವ, ಕಾಣುವ ತುಡಿತ ಈ ತಲೆಮಾರಿನದ್ದು.

* ಹಲವು ರಾಜಕಾರಣ, ಗುಂಪುಗಾರಿಕೆಗಳ ಮಧ್ಯೆ ಇಂದಿನ ತಲೆಮಾರು ಉಸಿರಾಡುತ್ತಿದೆ. ತಮ್ಮ ಗುರು ತೋರಿದ್ದನ್ನೇ ನಂಬುವ ಅದನ್ನೇ ನಿಜವೆಂದು ಬರೆಯುವ ಯುವಪಡೆ ಒಂದು ಕಡೆಯಾದರೆ, ಅವರು ತೋರಿದ ದಾರಿಯನ್ನು ಹಿಡಿದು ಕೊಂಚ ದೂರ ಸಾಗಿ ತಮ್ಮದೇ ಹೊಸ ಮಾರ್ಗ ಹಿಡಿದ ದೊಡ್ಡ ಯುವಪಡೆ ಇಲ್ಲಿದೆ.

* ಗಝಲ್, ಖಂಡಕಾವ್ಯ, ಮಹಾಕಾವ್ಯ, ಮಿನಿ ಕಾದಂಬರಿಗಳ ಪ್ರಯೋಗಶೀಲತೆಗೂ ಹೊಸ ತಲೆಮಾರು ಗಮನಹರಿಸಿದೆ.

* ತತ್‌ಕ್ಷಣದ ಸಂತೋಷವೇ ಪ್ರಮುಖವಾಗುತ್ತಿದೆ. ತಮಗನಿಸಿದ್ದನ್ನು ತಕ್ಷಣಕ್ಕೆ ಬರೆಯುವ, ಅದನ್ನು ಹತ್ತಾರು ಸಲ ಧ್ಯಾನಿಸದೆ ತಕ್ಷಣ ವಾಟ್ಸ್ ಆಪ್ ಗುಂಪುಗಳಿಗೋ, ಫೇಸ್‌ಬುಕ್‌ಗಳಿಗೋ ಅಥವಾ ಬ್ಲಾಗ್‌ಗಳಲ್ಲಿ ಬರೆದುಕೊಳ್ಳುವುದು ಹೆಚ್ಚುತ್ತಿದೆ. ಅಲ್ಲಿ ಬರುವ ನೂರಾರು ಲೈಕು, ಕಾಮೆಂಟ್‌ಗಳೇ ಮುಖ್ಯವಾಗಿ ಸೃಜನಶೀಲತೆ ಸಾಯುತ್ತದೆ.

* ಇನ್ನು ಕೆಲವರು ಜಾಲತಾಣಗಳಲ್ಲಿನ ಅವರಿವರ ಕವನದ ಸಾಲುಗಳನ್ನೋ, ಕತೆಗಳ ಸಾಲುಗಳನ್ನೋ ಕದ್ದು ತಮ್ಮದಾಗಿ ಮಾಡಿಕೊಂಡು ಅವುಗಳಲ್ಲಿ ಪ್ರಶಂಸೆ ಗಿಟ್ಟಿಸಿಕೊಳ್ಳುವ ಕೆಟ್ಟ ಪರಂಪರೆಗೂ ನಾಂದಿಯಾಗಿದೆ.

* ಅನೇಕ ಪತ್ರಿಕೆಗಳು, ಮ್ಯಾಗಜೀನ್‌ಗಳು ಒಂದು ಪಕ್ಷದ ಮುಖವಾಣಿಯಂತೆ ವರ್ತಿಸುವಾಗ ಅಂತಹ ವಿಷಯಗಳನ್ನು ತಮ್ಮದೇ ಬ್ಲಾಗ್, ಜಾಲತಾಣಗಳಲ್ಲಿ ಪ್ರಕಟಿಸುವ ಲೇಖಕರಿದ್ದಾರೆ. ಆ ಮೂಲಕ ಅವರು ತಮ್ಮ ನಿಲುವುಗಳನ್ನು ವ್ಯಕ್ತಪಡಿಸಲು ಯಾರ ಮರ್ಜಿಗೂ ಕಾಯಬೇಕಾಗಿಲ್ಲ ಎಂಬ ಸಂದೇಶಗಳನ್ನು ನೀಡುತ್ತಿದ್ದಾರೆ. ಉದಾಹರಣೆಗೆ ಪೌರತ್ವ, ಕಾಶ್ಮೀರ, ಗೋಮಾಂಸ, ದಲಿತರ ಮೇಲಿನ ದಾಳಿ, ಹಿಂದೂ ಪರ-ವಿರೋಧ ಮುಂತಾದ ವಿಚಾರಗಳನ್ನು ಹಂಚಿಕೊಳ್ಳುವ ಸುಲಭದ ವೇದಿಕೆ ಜಾಲತಾಣಗಳು.

* ಇಂದು ಚಿಕ್ಕ ಲೇಖನಗಳಿಗೆ ಬೇಡಿಕೆ. ಪತ್ರಿಕೆಗಳೂ ಕೂಡ ಐನೂರು ಪದಮಿತಿಯಲ್ಲಿ ಕತೆ ಕೇಳುತ್ತವೆ. ಕವನಗಳು ಮುಟ್ಟದಿದ್ದಷ್ಟು ಬೇಡಿಕೆ. ಲೇಖನಗಳೂ ಕೂಡ ಚಿಕ್ಕದಿರುವ ಕಾಲವಿದು. ಇಂತಹ ಲೇಖನಗಳಿಗೆ ಸಂಶೋಧನೆಯ ಹರಿವು ಇರುವುದಿಲ್ಲ. ಮಿತಿಯಾಗಿ ಕತೆ ಬರೆಯಲಾಗುವುದಿಲ್ಲ. ಸೃಜನಶೀಲ ಸಾಹಿತ್ಯವೆನ್ನುವುದು ಪದಗಳ ಮಿತಿಯಲ್ಲಿರುವುದಿಲ್ಲ.

* ಲೇಖನಗಳು ಕತೆಗಳು, ಕವಿತೆಗಳು ಪ್ರಕಟಗೊಳ್ಳುತ್ತಿದ್ದಂತೆ ಅದು ಜಾಲತಾಣವಿರಲಿ, ಪತ್ರಿಕೆ ಇರಲಿ ಅದಕ್ಕೆ ಆಕ್ರೋಶ, ಅಸಹಿಷ್ಣುತೆ, ವ್ಯಕ್ತಿಗತ ಹಲ್ಲೆ, ಇಲ್ಲವೆ ಕೊಂದು ಹಾಕುವ ಮಟ್ಟಕ್ಕೆ ಇಂದಿನ ಪರಿಸ್ಥಿತಿಯಿದೆ.

* ಅನೇಕತೆಯಲ್ಲಿ ಏಕತೆಯನ್ನು ಜಗತ್ತಿಗೆ ಸಾರಿದ ಈ ದೇಶದಲ್ಲಿ ಹೊಸ ತಲೆಮಾರನ್ನು ಅರ್ಥೈಸಿಕೊಳ್ಳಬೇಕು ಎಂಬ ದ್ವಂದ್ವವಿದೆ.

* ತಕ್ಷಣದ ಪ್ರತಿಕ್ರಿಯೆ, ಪ್ರಶಸ್ತಿ, ಪ್ರಸಿದ್ಧಿ, ಲಾಬಿ ಇಂದು ಹೆಚ್ಚಾಗಿ ಕಾಣಿಸುತ್ತಿದೆ. ಅನೇಕ ವೇಳೆ ಗಟ್ಟಿಕಾಳಿಗಿಂತಜೊಳ್ಳೆ ಮುನ್ನಲೆಯಲ್ಲಿ ಮಿಂಚುತ್ತಿರುವುದನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಎಂಬ ಸಂದಿಗ್ಧತೆ ಎದುರಾಗುತ್ತದೆ.

* ಜಾಲತಾಣದಲ್ಲಿ ಪ್ರಕಟವಾದದ್ದೆಲ್ಲಾ ಸತ್ಯ ಎಂದು ನಂಬಿಸುವ ಕಾಲವಿದು.

"ಸಾಹಿತ್ಯದ ಹೊಸ ತಲೆಮಾರು ಮಿಶ್ರ ಅಭಿರುಚಿಯದು. ಒಂದು ಸಾಮಾನ್ಯ ಮನೋಧರ್ಮವನ್ನು ಸಮುದಾಯವೊಂದು ಏಕ ಪ್ರಕಾರವಾಗಿ ಪರಿಭಾವಿಸುವುದು ಸಾಧ್ಯವಿಲ್ಲ. ಒಂದು ನಿರ್ದಿಷ್ಟ ಕಾಲದ ತಲ್ಲಣಗಳನ್ನು ಸಮುದಾಯವೊಂದು ಒಂದೇ ತೆರನಾಗಿ ಧ್ವನಿಸುವುದೆಂಬ ನಿರೀಕ್ಷೆ ಯಾವ ಕಾಲಕ್ಕೂ ತಕ್ಕುದಲ್ಲ ಎನ್ನಿಸುತ್ತದೆ. ಸಾಹಿತ್ಯ ಚರಿತ್ರೆಯನ್ನು ಕಟ್ಟಲು ಯತ್ನಿಸಿದ ವಿದ್ವಾಂಸರು, ಮನೋಧರ್ಮ ಹಾಗೂ ಯುಗಧರ್ಮಗಳನ್ನು ಒಂದಾಗಿ ಕಟ್ಟಲು ಪ್ರಯತ್ನಿಸಿದರು ಅಷ್ಟೇ! ಮತಧರ್ಮದ ಹೆಸರಿನಲ್ಲಿ, ಪ್ರಮುಖ ಕವಿಗಳ ಹೆಸರಿನಲ್ಲಿ, ತಾತ್ವಿಕತೆಯ ಹೆಸರಿನಲ್ಲಿ ಕಾಲಘಟ್ಟವನ್ನು ಅರಿಯಲು ಅವರು ಪ್ರಯತ್ನಿಸಿದರು. ಸೃಜನಶೀಲತೆ ಎಂಬುದು ಈ ಎಲ್ಲಾ ಸ್ವಯತ್ತತೆಯನ್ನು ಕಾಪಿಟ್ಟುಕೊಳ್ಳುತ್ತದೆ. ಸ್ಥಾಪಿತ ವ್ಯವಸ್ಥೆ ಹಾಗೂ ಸ್ಥಾಪಿತ ಗ್ರಹಿಕೆಗಳನ್ನು ಪಲ್ಲಟಿಸುವುದಕ್ಕಾಗಿ ಬಂಡೇಳುವ ಗುಣ ಬರಹಕ್ಕಿದೆ. ಅದು ಕಾಲದೊಂದಿಗಿನ ತಾಧ್ಯಾತ್ಮವನ್ನು ಕದಡಿ ತನ್ನ ಧ್ವನಿಯನ್ನು ತೀವ್ರವಾಗಿ ಕೇಳಿಸುವ ಹಂಬಲವನ್ನು ಸದಾ ಒಡಲಲ್ಲಿ ಇರಿಸಿಕೊಂಡಿರುತ್ತದೆ" ಎಂದು ಅಭಿಪ್ರಾಯಿಸುವ ಡಾ.ಗೀತಾ ವಸಂತರವರ ಮಾತು ಸಮಕಾಲೀನ ಸಂದರ್ಭದಲ್ಲಿನ ಚಹರೆ ಹಾಗೂ ಸವಾಲುಗಳನ್ನು ಇಂದಿನ ಸೃಜನಶೀಲ ಬರಹಗಳು ಹೇಗೆ ಎದುರಿಸುತ್ತಿವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಸಹಾಯಕವಾಗುತ್ತದೆ.

ಇಂದು ಸೃಜನಶೀಲ ಸಾಹಿತ್ಯ ರಚಿಸುವುದು ಸುಲಭವಲ್ಲ. ಇಂದು ಒಬ್ಬ ಒಳ್ಳೆಯ ಬರಹಗಾರನನ್ನು ಹುಟ್ಟು ಹಾಕುವ ಪರಿಸರವಿಲ್ಲ. ಇಂದು ಸೃಜನಶೀಲ ಸಾಹಿತಿ ಜಾತಿ, ಧರ್ಮ, ದೇವರ ಬಗ್ಗೆ ಮುಕ್ತವಾಗಿ ಬರೆಯಲಾಗುತ್ತಿಲ್ಲ. ಕುವೆಂಪುವಿನಂತಹ ಅಥವಾ ಬೇಂದ್ರೆಯವರಂತಹ ಒಬ್ಬ ಸೃಜನಶೀಲ ಸಾಹಿತಿ ಹುಟ್ಟುವ ಕಾಲವಲ್ಲವಿದು. ಕಾಲವೇ ಸೃಜನಶೀಲ ಸಾಹಿತ್ಯದ ವಿರುದ್ಧ ನಿಂತಿದೆ. ಸೃಜನಶೀಲ ಸಾಹಿತಿಯ ಬದುಕು, ಬರಹಗಳು ಅಸಹಾಯಕ ಸ್ಥಿತಿಯಲ್ಲಿವೆ. ಇಂದು ಬೃಹತ್ ಪ್ರಮಾಣದಲ್ಲಿ ಕೃತಿಗಳು ಬರುತ್ತಿವೆ. ಅವುಗಳು ಸೃಜನಶೀಲತೆಯನ್ನು ಉಳಿಸಿಕೊಂಡಿದ್ದಾವೆಯೇ ಎನ್ನುವುದು ಬಹುಮುಖ್ಯ. ಆಯಾ ಕಾಲಕ್ಕೆ ಸೃಜನಶೀಲ ಸಾಹಿತಿ ಹೇಗೆ ಸ್ಪಂದಿಸುತ್ತಾನೆ ಎನ್ನುವುದು ಬಹು

ಮುಖ್ಯವಾಗುತ್ತದೆ. ಇಂತಹ ಸಂದರ್ಭದಲ್ಲಿ ಸೃಜನಶೀಲ ಸಾಹಿತ್ಯ ರಚಿಸಿದವರನ್ನು ಜೈಲಿಗೆ ಕಳುಹಿಸುವ, ಹೆದರಿಸುವ, ಕೊಂದು ಹಾಕುವ ಕಾಲವಿದು. ಉದಾಹರಣೆಗೆ ಇತ್ತೀಚೆಗೆ ಪತ್ರಕರ್ತ, ಕವಿ



ಸಿರಜ್ ಬಿಸರಳ್ಳಿ ಬರೆದು ಓದಿದ ಕವಿತೆಗೆ ದೇಶದ್ರೋಹದ ಪಟ್ಟಕಟ್ಟಿ ಎಫ್.ಐ.ಆರ್ ದಾಖಲಿಸಲಾಗಿದೆ. ಸೈದ್ಧಾಂತಿಕ ಭಿನ್ನ ನಿಲುವು ಹೊಂದಿದ್ದಾರೆ ಎನ್ನುವ ಕಾರಣಕ್ಕೆ ಶೃಂಗೇರಿಯಲ್ಲಿ ಸಮ್ಮೇಳನಕ್ಕೆ ಪೆಟ್ರೋಲ್ ಬಾಂಬ್ ಹಾಕುವ ಬೆದರಿಕೆಯೊಡ್ಡುತ್ತಾರೆ. ಮಕ್ಕಳ ನಾಟಕದಲ್ಲಿ ಪ್ರಭುತ್ವದ ವಿರುದ್ಧದ ಸಂಭಾಷಣೆಗಾಗಿ ಶಿಕ್ಷಕರು ಹಾಗೂ ಪಾಲಕರ ವಿರುದ್ಧ ಕೇಸು ದಾಖಲಿಸುತ್ತಾರೆ. ಇಂತಹ ಅತ್ಯಂತ ಸಂದಿಗ್ಧ ಸಂದರ್ಭದಲ್ಲಿ ಒಬ್ಬ ಸೃಜನಶೀಲ ಸಾಹಿತಿ ಸೃಜನಶೀಲ ಸಾಹಿತ್ಯವನ್ನು ಸೃಷ್ಠಿಸಲು ಸಾಧ್ಯವೇ? ಇದು ಒಂದು ಘಟನೆಯಲ್ಲ. ಇಂತಹ ಪ್ರಕರಣಗಳ ಮೂಲಕ ಬೇರೆ ಸೃಜನಶೀಲ ಸಾಹಿತಿಗಳಿಗೆ ಎಚ್ಚರಿಕೆ ನೀಡುತ್ತಿರುವುದನ್ನು ಗಮನಿಸಬೇಕಾಗಿದೆ. ಇಂತಹ ಕಠಿಣ ಸಂದರ್ಭದಲ್ಲಿಯೂ ಕೆಲವೇ ಕೆಲವರಾದರೂ ಸೃಜನಶೀಲ ಸಾಹಿತ್ಯವನ್ನು ರಚಿಸುತ್ತಿದ್ದಾರಲ್ಲ ಎಂದು ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಇಂದು ಅನೇಕ ಸೃಜನಶೀಲ ಲೇಖಕರು ಬರಹಕ್ಕಷ್ಟೇ ಸೀಮಿತವಾಗದೆ ಚಳುವಳಿಗಳಲ್ಲೂ ಧುಮುಕುತ್ತಿರುವುದನ್ನು ಗಮನಿಸಬಹುದು. ಈ ಪರಿಸ್ಥಿತಿ ಕೇವಲ ಕನ್ನಡದ ಸೃಜನಶೀಲ ಸಾಹಿತ್ಯ, ಸಾಹಿತಿಗೆ ಮಾತ್ರ ಸೀಮಿತವಿರದೆ ಅದು ಮಲೆಯಾಳಂ, ತಮಿಳು, ತೆಲುಗು ಮುಂತಾದ ಭಾಷೆಗಳಿಗೂ ವ್ಯಾಪಿಸಿದೆ. ಉಸಿರಾಡಲು ಕಷ್ಟದಾಯಕವಾದ, ನಾಲಿಗೆಗೆ, ಬರವಣಿಗೆಗೆ ಸೆನ್ಸಾರ್ ಹಾಕಿಕೊಳ್ಳಬೇಕಾದ ಕಾಲಘಟ್ಟವಿದು. ಸೃಜನಶೀಲ ಸಾಹಿತ್ಯವನ್ನು ಇಂದಿನ ತರುಣ ಸಮುದಾಯ ಹೇಗೆ ಎದುರಿಸಬೇಕೆಂಬುದು ಬಹು ಮುಖ್ಯ ಪ್ರಶ್ನೆಯಾಗಿದೆ.

# ಅನುವಾದ ಸಾಹಿತ್ಯ

**- ಕಾಶಿನಾಥ ಅಂಬಲಗೆ**

ಇತ್ತೀಚೆಗೆ ನಾವೊಮ್ಮೆ ಒರಿಸ್ಸಾದ ಭುವನೇಶ್ವರದಲ್ಲಿ 'Kuvempu Heritage ಎಂದು 'ಕುವೆಂಪು ಅವರ ಸಮಗ್ರ ಸಾಹಿತ್ಯ: ಚಿಂತನ ಮಂಥನ' ವಿಚಾರ ಸಂಕಿರಣ ಹಿಂದಿ ಭಾಷೆಯಲ್ಲಿ ಏರ್ಪಡಿಸಿ ಅನೇಕ ಲೇಖಕರು ಭಾಗವಹಿಸಿದ್ದೆವು. ಹಿಂದಿಯ ಸಮಕಾಲಿನ ಮಹತ್ವದ ಹಿರಿ ಕಿರಿಯ ಬರಹಗಾರರು ಅಲ್ಲಿದ್ದರು. ಅವರು ಇಂತಹ ಮೇರು ಪರ್ವತದೆತ್ತರದ ಲೇಖಕ ನಮ್ಮ ಪಕ್ಕದ ಭಾರತೀಯ ಭಾಷೆಯಾದ ಕನ್ನಡ ಸಾಹಿತ್ಯ ಲೋಕದಲ್ಲಿದ್ದಾರೆ ಎಂಬ ವಿಷಯ ನಮಗೆ ಗೊತ್ತೇ ಇರಲಿಲ್ಲ ಎಂದು ಆಶ್ಚರ್ಯ ವ್ಯಕ್ತಪಡಿಸಿದರು. ಅವರು ರವೀಂದ್ರನಾಥ ಟ್ಯಾಗೋರರ ಸಮಕ್ಕೆ ನಿಲ್ಲಬಲ್ಲ, ಅವರಿಗಿಂತಲೂ ಒಂದಾಣೆ ಹೆಚ್ಚಿಗೇ ತೂಗಬಲ್ಲ ಸಾಹಿತ್ಯ ವ್ಯಕ್ತಿತ್ವದವರು ಎಂದು ಪ್ರತಿಸ್ಪಂದಿಸಿದರು.

ಇದಕ್ಕೆ ನನ್ನ ಪ್ರೀತಿಯ ಸಮ್ಮತಿ ಇದ್ದೇ ಇದೆ. ಇದು ಅನುವಾದದ ಮಹತ್ವ ಹಾಗೂ ಅದರ ಅವಶ್ಯಕತೆ ಕುರಿತು ಸಂವಾದ ನಡೆಸುತ್ತಲಿದೆ ಎಂದು ನನ್ನ ಸ್ಪಷ್ಟ ಅನಿಸಿಕೆ.

ಸಂಗಾತಿಗಳೇ,

ಅನುವಾದ ಎನ್ನುವುದು ಒಂದು ಸಮಾಜವಾದೀ ಸಮಾಜದ ಸಾಂಸ್ಕೃತಿಕ ಪ್ರಕ್ರಿಯೆಯಾಗಿದೆ. ಸಮ ಸಮಾಜದ ಸಾಮಾಜಿಕ ಹೊಣೆಗಾರಿಕೆಯ ಬರಹಲೋಕವಾಗಿದೆ. ಇಲ್ಲಿ ಪರರನ್ನು ಅರಿಯುವ, ಪ್ರೀತಿಸುವ, ಪರಧರ್ಮ ಸಹಿಷ್ಣು ಆಗುವ ಆ ಮೂಲಕ ನಾವು ನಿಜದ ಮನುಷ್ಯರಾಗುವ ವಿನಯವಿರುತ್ತದೆ. ಒಂದು ಮೂಲಭೂತವಾದೀ ಮಾನಸಿಕತೆಯ ಸಮಾಜದಲ್ಲಿ ಅನುವಾದವು ಎರಡನೆ, ಮೂರನೆಯ ಆದ್ಯತೆಗಳ ಪ್ರಕ್ರಿಯೆ ಆಗಿದ್ದದ್ದು ನಮ್ಮ ಗಮನಕ್ಕೆ ಬಂದದ್ದಿದೆ. ಏಕಲವ್ಯನ ಬೆರಳು ಕಿತ್ತುಕೊಂಡ, ಶಂಭೂಕನ ತಲೆ ಉರುಳಿಸಿದ ಪರಂಪರೆಯಲ್ಲಿ ಅನುವಾದ ಹಾಗೂ ಸರ್ವರಿಗೂ ಶಿಕ್ಷಣದ ಅರಿವು ಸಾಧ್ಯವಿತ್ತೇ ಹಾಗಾಗಿ ನಮ್ಮ ದೇಶದಲ್ಲಿ ಸರ್ವೋಪರಿಯಾಗಿ ಅನುವಾದಗಳು ಜರುಗಲಿಲ್ಲ. ಸರ್ವರಿಗೂ ಓದುಬರಹದ ಸಹಜ ಸವಲತ್ತುಗಳು ಸಿಗಲಿಲ್ಲ. ಸಾವಿರಾರು ಭಾಷೆಗಳು, ಜೀವನ ರೀತಿ ನೀತಿಗಳು, ಧರ್ಮ ಹಾಗೂ ನಂಬಿಕೆಗಳು ಇರುವ ನಮ್ಮ ಬಹುತ್ವ ಭಾರತಕ್ಕೆ ಅನುವಾದದ ಅನುಪಸ್ಥಿತಿ-ಭಾರತೀಯ ಸಂಸ್ಕೃತಿಗೆ ಎಷ್ಟೊಂದು ಹಾನಿ ಆಗಿರಲಿಕ್ಕಿಲ್ಲ-ಇದೊಂದು ಪ್ರಶ್ನೆ ಇರಲಿ,

ಅನುವಾದವು ಮಾನವ ಜನಾಂಗದ ತೀರ ಸಹಜ ಸ್ವಭಾವವೇ ಆಗಿದೆ, ಮನುಷ್ಯ ವ್ಯಕ್ತಿತ್ವದ ಅನಿವಾರ್ಯ ಅಂಗವಾಗಿದೆ, ನ್ಯಾಚುರಲ್ ಇನ್‌ಸ್ಟಿಂಕ್ಸ್ ಆಗಿದೆ. ಮನುಷ್ಯ

ಪ್ರತಿಯೊಂದನ್ನೂ ತನ್ನ ಸಂಸ್ಕೃತಿ ಯೋಗ್ಯತೆ, ಪರಿಸರ ಹಾಗೂ ತನ್ನೆಲ್ಲ ರೀತಿಯ ಹಿನ್ನೆಲೆಯಲ್ಲಿ ಅನುವಾದಿಸಿಕೊಳ್ಳುತ್ತಲೇ ಸ್ವೀಕರಿಸುತ್ತಾನೆ, ಪರಿಭಾವಿಸಿಕೊಳ್ಳುತ್ತಾನೆ ಹಾಗೂ ಅಭಿವ್ಯಕ್ತಿಸಿಕೊಳ್ಳುತ್ತಾನೆ. ಅಬ್‌ಸ್ಟ್ರಾಕ್ಟನ್ನು ಚಿತ್ರಕವಾಗಿಯೂ, ಗದ್ಯವನ್ನು ಪದ್ಯವಾಗಿಯೂ ದೂರವಾಗಿದ್ದದ್ದು ಸಾಮಿಪ್ಯದಲ್ಲಿಯೂ, ಸಂಕೀರ್ಣವಾದದ್ದು ಸರಳವಾಗಿಯೂ ಅನುವದಿಸಿಕೊಂಡು ತನ್ನದಾಗಿ ಸ್ವೀಕರಿಸುತ್ತಾನೆ. ಹೀಗಾಗಿ ಪ್ರತಿಯೊಬ್ಬರೂ ಒಂದು ರೀತಿಯಿಂದ ಅನುವಾದಕರೇ ಹೌದು.

ಭಿನ್ನ ಭಿನ್ನ ಭಾಷಾ ನೆಲೆಗಳ ಅನುವಾದಕ ಅನುವಾದ ಕುರಿತು ಒಂದಿಷ್ಟು ರಂಜನೀಯವಾದ ನಿಲುವುಗಳನ್ನು ಇಲ್ಲಿ ನೆನೆದು ಪ್ರಸ್ತಾಪಿಸಿಕೊಂಡು ವಿಷಯ ಪ್ರವೇಶ ಮಾಡಬಹುದಾಗಿದೆ.

ಸಾಹಿತ್ಯಾನುವಾದದ ಕೆಲಸವು ಕೊಲೆಗಾರನ ಕೆಲಸ ಎಂದು ಹೇಳಲಾಗಿದೆ. ಅಂದರೆ; ಒಂದು ಭಾಷೆಯ ನೆಲೆಗಟ್ಟು ಒಳಗುಟ್ಟು ಹಾಗೂ ಅದರದೇ ಆದ ವಿಶಿಷ್ಟ ಚಹರೆಯಿಂದ ಹೊರ ತೆಗೆದು ಅದರದೇ ವಿಶೇಷತೆಗಳು ಮರೆಸುವ ಹಾಗೆ ಮಾಡಿ, ಅನುವಾದಗೊಳ್ಳುತ್ತಿರುವ ಭಾಷೆಯ ಪಠ್ಯವೋ ಎನ್ನುವಂತೆ ಅನುವಾದಿಸಿಕೊಳ್ಳುವುದು ಮೂಲಭಾಷೆಯ ಪಠ್ಯ ಅದರ ಜನ್ಮಭೂಮಿಯ ನೆಲದಿಂದ ಮುಗಿಸಿಬಿಟ್ಟಂತೆಯೇ ಸರಿ. ಹಾಗಾಗಿ ಪ್ರಾಮಾಣಿಕ ಅನುವಾದವು ಒಳ್ಳೆಯ ಅನುವಾದವಲ್ಲ ಹಾಗೂ ಒಳ್ಳೆಯ ಅನುವಾದವು ಪ್ರಾಮಾಣಿಕ ಅನುವಾದವಲ್ಲ' ಎಂಬ ವಿಚಾರವೂ ಅನುವಾದದ ಓಣಿಯಲ್ಲಿ ಗಾಸಿಪ್‌ನಂತೆ ಚರ್ಚೆಯಾಗುವ ಮಾತುಕತೆಗಳಾಗಿವೆ.

ಎಂತಹದೇ ಅನುವಾದವಾಗಿರಲಿ, ಆ ಅನುವಾದದಲ್ಲಿ ಒಂದಿಷ್ಟು ಲೀಕೇಜ್ ಅಥವಾ 'ಸೋರಿಕೆ' ಅನಿವಾರ್ಯವೇ ಆಗಿರುತ್ತದೆ. ರಸದ ಸೋರಿಕೆಯಾಗಬಹುದು, ಭಾವದ ಸೋರಿಕೆಯಾಗಬಹುದು, ಅಥವಾ ಪಠ್ಯದ ಸೋರಿಕೆಯೂ ಆಗಿರಬಹುದು. ವಿಚಿತ್ರ ಹಾಗೂ ಖುಷಿಯ ಮಾತೆಂದರೆ ಒಂದು 'ವಿಚಾರ' ಅನುವಾದಗೊಂಡು ಹೊಸರಸ, ಭಾವ, ಭಂಗಿ, ಪಠ್ಯ ಸೃಜಿಸಿಕೊಳ್ಳಬಹುದು ಕೂಡ. ಆ ಕಾರಣವಾಗಿ ಅನುವಾದ 'ಕಲೆ' ಹಾಗೂ 'ವಿಜ್ಞಾನ' ಎರಡೂ ಆಗಿರುತ್ತದೆ. ಅನುವಾದಕ್ಕೆ ತನ್ನದೇ ಶಿಸ್ತು ಇದೆ, ಕ್ರಮಗಳಿವೆ, ಹಂತಗಳಿವೆ, ಅದರದೇ ಆದ ವಿಜ್ಞಾನವಿದೆ. ಅಲ್ಲಿ ತೀವ್ರವಾದ ಸೃಜನ ಶೀಲತೆಯೂ ಇದೆ.

ಅನುವಾದ ಎನ್ನುವುದು ಒಂದು ಭಾಷೆಯ 'ಶಬ್ದ'ಗಳೊಡನೆ ನಡೆಯುವ ಒದ್ದಾಟವಾಗಿದೆ, ಗುದ್ದಾಟವಾಗಿದೆ, ಅನುವಾದಕ ಎರಡು ಭಾಷೆಗಳ ಶಬ್ದಸಂಪತ್ತಿನೊಡನೆ ಕಬಡ್ಡಿ ಆಡಬೇಕಾಗಿರುತ್ತದೆ. 'ಶಬ್ದ' ಎನ್ನುವುದು ಒಂದು ಬೆರಗು, ಬೆಡಗು, ಅದೊಂದು ಮಾಯೆ! ಮುಟ್ಟಿದರೆ ಮುನ! ತಟ್ಟಿದರೆ ಶನ! ಪ್ರತಿ ಶಬ್ದಕ್ಕೆ ತನ್ನದೇ ಆದ History ಇರುತ್ತದೆ, Geography ಇರುತ್ತದೆ, ಅದಕ್ಕೊಂದು ಸಂಸ್ಕೃತಿ ಸುಗಂಧ ಇರುತ್ತದೆ. ಅದೊಂದು 'ಪರ್ವತ' ಅದೊಂದು “ಅಣು! ಒಂದು ಅರ್ಥ ಭಯ ಬೀಳುತ್ತದಂತೆ. ಏಕೆಂದರೆ, ಈ ಶಬ್ದಕ್ಕೆ ಈ ಅರ್ಥ ಎಂದ ಕೂಡಲೆ ಅದರರ್ಥದ ವಿಸ್ತಾರಗಳ ಸಾಧ್ಯತೆ ಕುಂಠಿತಗೊಳ್ಳುತ್ತದೆ. ಅದೊಂದು ಹೊಳೆಯುವ 'ಇಬ್ಬ' ಇದ್ದಂತೆ. ಅದರಲ್ಲಿ ಸೂರ್ಯ, ಆನೆ ಕಾಣಬಹುದು

ಆದರೆ ಒಂದಿಷ್ಟು ಧಕ್ಕೆ ತಗುಲಿದರೆ ಮಟಾಮಾಯೆ! ಅದು ಒಂದು ವಾಕ್ಯದಲ್ಲಿ ಅಥವಾ ಒಂದು ಸಂದರ್ಭದಲ್ಲಿ ಕೂತಾಗ ಮಾತ್ರ 'ನಡಿಯುತ್ತದೆ' ಅದಕ್ಕೆ ತನ್ನದೇ ಆದ ಒಂದು 'ಸ್ವತಂತ್ರ ವ್ಯಕ್ತಿತ್ವ' ಇಲ್ಲ. ಜಗದ ಮಹಾನ್ ಕವಿ ಪಾಬ್ಲೊ ನೆರೂದಾ ಹೇಳುತ್ತಾನೆ ನಾನು ಶಬ್ದಗಳನ್ನು ಹಿಚುಕುತ್ತೇನೆ, ಕಿವುಚುತ್ತೇನೆ, ಮುರಿಯುತ್ತೇನೆ, ಹರಿಯುತ್ತೇನೆ, ಕಿತ್ತಾಡಿಸಿ, ಒದ್ದಾಡಿಸಿ, ಬಂದು ದಾರಿಗೆ ತರುತ್ತೇನೆ ಎಂದು. ಈ ಇಂತಹ ಶಬ್ದಗಳೊಡನೆ ಒಡನಾಟ ಇಟ್ಟುಕೊಳ್ಳಬೇಕಾಗಿರುತ್ತದೆ ಒಬ್ಬ ಅನುವಾದಕನಿಗೆ.

**ಅನುವಾದ ಅರ್ಥ ವಿಸ್ತಾರ:**

ಅನುವಾದ ಕ್ಷೇತ್ರದ ಕೆಲ ತಜ್ಞರ ವ್ಯಾಖ್ಯೆಗಳು ಇಲ್ಲಿ ಗಮನಿಸೋಣ, ಅನುವಾದದ ಅರ್ಥ, ನೆಲೆ, ಬೆಲೆ, ವಿಶೇಷತೆ ಉಪಯುಕ್ತತೆ ಸ್ಪಷ್ಟವಾಗಬಹುದು.

A.H. Smith ಹೇಳುತ್ತಾರೆ 'ಯಥಾ ಸಾಧ್ಯವಾಗಿ ಅರ್ಥವನ್ನು ಉಳಿಸಿಕೊಂಡು ಒಂದು ಭಾಷೆಯಿಂದ ಇನ್ನೊಂದು ಭಾಷೆಯಲ್ಲಿ ಅವತಾರ ಎತ್ತುವ ಪ್ರಕ್ರಿಯೆಯೇ ಅನುವಾದವಾಗಿದೆ.

Peter New Mark ಹೇಳೋದು, "ಅನುವಾದದ ಸಂದರ್ಭದಲ್ಲಿ ಅರ್ಥ ಹಾನಿ ಸಂಭವಿಸುತ್ತದೆ. ಅದರ ಪ್ರಕ್ರಿಯೆ ಹಿಗ್ಗುತ್ತ ಕುಗ್ಗುತ್ತ ಹೋಗುತ್ತದೆ. ಕೆಲವುಸಲ ಹೆಚ್ಚು ಅರ್ಥವ್ಯಾಪ್ತಿ ಪಡೆದರೆ, ಕೆಲವು ಸಲ ಅರ್ಥ ಸಂಕುಚಿತವೂಗೊಳ್ಳುತ್ತದೆ.'

James Holms ಅವರ ಪ್ರಕಾರ 'ಎಲ್ಲ ತರಹದ ಅನುವಾದ ಕಾರ್ಯ ಆಲೋಚನಾತ್ಮಕ ವ್ಯಾಖ್ಯೆಯಾಗಿದೆ."

Catford ರಂತೆ, ಒಂದು ಭಾಷೆಯ ಪಠ್ಯ ಸಾಮಗ್ರಿಯನ್ನು ಬೇರೆ ಭಾಷೆಯ ಸಮಾನಾರ್ಥಕವಾದ ಪಠ್ಯ ಸಾಮಗ್ರಿಯಾಗಿ ಪ್ರತಿಜ್ಞಾಪಿಸುವುದು ಅನುವಾದವಾಗಿದೆ.

ಪ್ರಸ್ತುತ ಸಮ್ಮೇಳನದ ಸರ್ವಾಧ್ಯಕ್ಷರ ಅಧ್ಯಕ್ಷೀಯ ಭಾಷಣ ಅನುವಾದ ಕಾರ್ಯ ಕುರಿತು ಹೀಗೆ ಸಂವಾದ ನಡೆಸಿದೆ, ನಮಗೆ ಅನುವಾದ ಎನ್ನುವುದು ಮೂಲಕ್ಕೆ ಧಕ್ಕೆಯಾಗದಂತೆ ನಮ್ಮ ಭಾಷೆಗೆ ಬಗ್ಗಿಸಿಕೊಂಡು ಬೆಳೆಯುವುದೇ ಆಗಿದೆ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳು ಬೇರೆ ಭಾಷೆಗಳಿಗೆ ಹೋಗಬೇಕು. ಇದು ಕನ್ನಡಗಟ್ಟಿಗೊಳ್ಳಲು ತುಂಬ ಸಹಾಯಕ ಈ ವಿಚಾರ ಜಗತ್ತಿನ ಎಲ್ಲ ಭಾಷೆಗಳ ಸಾಹಿತ್ಯ ಕುರಿತೂ ನಿಜವೇ ಆಗಿದೆ. ಒಂದು ಭಾಷೆ ಗಟ್ಟಿಗೊಳ್ಳಲು ಅದು ಬೇರೆ ಭಾಷೆಗಳಿಗೆ ಅನುವಾದದ ಮೂಲಕ ಪಯಣಿಸುವುದು ಹಾಗೂ ಬೇರೆ ಭಾಷೆಗಳ ಸಾಹಿತ್ಯ ತನ್ನ ಭಾಷೆಗೆ ಬರಮಾಡಿಕೊಳ್ಳುವುದೂ ಅವಶ್ಯಕವಾಗಿರುತ್ತದೆ.

ಒಟ್ಟು ಇಲ್ಲಿನ ಕೆಲ ಅನುವಾದ ಕುರಿತ ವ್ಯಾಖ್ಯೆಗಳು, ಕೆಲ ಚಿಂತಕರ ಅನಿಸಿಕೆಗಳು, ಅನುವಾದವೆಂದರೆ ಒಂದು ಸಲ ಒಂದು ಭಾಷೆಯಲ್ಲಿ ಹೇಳಿದ್ದನ್ನು ಮತ್ತೊಂದು ಸಲ ಬೇರೆ ಭಾಷೆಯಲ್ಲಿ ಅಥವಾ ತನ್ನದೇ ಭಾಷೆಯ ಬೇರೆ

ಪ್ರಕಾರಗಳಲ್ಲಿ ಹೇಳುವುದೇ ಆಗಿರುತ್ತದೆ. ಅದು ಸರಳವೂ, ಸಂಕೀರ್ಣವೂ, ಅನಿವಾರ್ಯವೂ, ಮಹತ್ವಪೂರ್ಣವಾದದ್ದೂ,



ಬಹುಭಾಷೆಗಳೊಡನೆ ಒಡನಾಟ ನಡೆಸಿಕೊಂಡು ಬಹುತ್ವದ ಜನಪರ ಜೀವಪರ ಸಾಂಸ್ಕೃತಿಕ ಮನಸುಗಳನ್ನು ಕಟ್ಟುವ ಕಾಯಕವಾಗಿದೆ' ಎಂದು ಸ್ಪಷ್ಟಪಡಿಸುತ್ತವೆ. ಇದೇ ದೃಷ್ಟಿಕೋನದಿಂದಲೇ ಕನ್ನಡ ಸಾಹಿತ್ಯದಲ್ಲಿ ಅನುವಾದ ಕುರಿತು ಮಾತುಕತೆ ನಡೆಸಬಹುದಾಗಿದೆ.

ಕನ್ನಡದ ಸಮಕಾಲೀನ ಅನುವಾದದ ನೆಲೆಬೆಲೆ ಫಲಿತಗಳು ಗಮನಿಸೋಣ ಕೇಂದ್ರ ಸಾಹಿತ್ಯ ಅಕಾಡೆಮಿ ದೆಹಲಿ ಭಾರತೀಯ ಸುಮಾರು ೨೩ ಭಾಷಾ ಸಾಹಿತ್ಯ ಕುರಿತು ಅಧ್ಯಯನ, ಪ್ರಚಾರ ಪ್ರಸಾರ, ಪ್ರಕಟನೆಗಳ ಮೂಲಕ ಗಂಭೀರವಾಗಿ ಕೆಲಸ ಮಾಡುತ್ತ ಬರುತ್ತಿದೆ. ಅನುವಾದಕ್ಕಾಗಿ ಈ ಅಕಾಡೆಮಿ ಪುರಸ್ಕಾರ ಕೊಟ್ಟು ಪ್ರೋತ್ಸಾಹಿಸುತ್ತದೆ. ಪುರಸ್ಕೃತ ಕೃತಿಗಳು ಭಾರತೀಯ ಎಲ್ಲ ಭಾಷೆಗಳಿಗೆ ಅನುವಾದಿಸಿ, ಎಲ್ಲ ಭಾಷೆಗಳ ಸಾಹಿತ್ಯ ಎಲ್ಲ ಭಾಷೆಗಳ ಓದುಗರಿಗೆ ಒದಗಿಸುವ ಮೂಲಕ ಒಂದು ಪ್ರಾದೇಶಿಕ ಭಾಷೆಯ ಓದುಗ ಭಾರತೀಯ ಎಲ್ಲ ಭಾಷಾ ಸಾಹಿತ್ಯದ ಓದುಗನಾಗುವ ಹಾಗೂ ಭಾರತೀಯ ಓದುಗ ಏನೆಲ್ಲ ಪ್ರಾದೇಶಿಕ ಭಾಷೆಗಳ ಮನಸುಗಳಿಗೆ ಸ್ಪಂದಿಸಲು ಹಪಹಪಿಸುವ ನಡೆ ಅನುವಾದದ ಮೂಲಕ ಎಲ್ಲರ ಸಹೃದಯಗಳು ಎಲ್ಲರ ಸಹೃದಯಕ್ಕಾಗಿ ಕಾಯುವ ಪ್ರಕ್ರಿಯೆ ಬಲು ರೋಚಕವಾಗಿರುತ್ತದೆ. ಎಸ್ಟೀಮ್ ಪ್ರಾದೇಶಿಕತೆ ಪ್ರೀತಿವವನು ಮಾತ್ರ ಎಸ್ಟೀಮ್ ವಿಶ್ವಮಾನವನಾಗಲು ಸಾಧ್ಯ ಎಂಬ ವಿಚಾರ ಅನುವಾದವು ಸಾಕ್ಷಾತ್ಕಾರಗೊಳಿಸುತ್ತದೆ. ಕೇಂದ್ರ ಸಾಹಿತ್ಯ ಅಕಾಡೆಮಿ 'ಸಮಕಾಲೀನ ಭಾರತೀಯ ಸಾಹಿತ್ಯ' ಎಂಬ ತ್ರೈಮಾಸಿಕ ಸಾಹಿತ್ಯ ಸಂಕಲನ ಹೊರತರುತ್ತದೆ. ಅಲ್ಲಿ ಭಾರತೀಯ ಎಲ್ಲ ಭಾಷೆಗಳ ಸಾಹಿತ್ಯ ಹಿಂದಿಗೆ ಅನುವಾದಗೊಂಡು ಒಂದು ಸಂಕಲನದಲ್ಲಿ ಇಡೀ ದೇಶದ ಎಲ್ಲ ಭಾಷೆಗಳ ಸಾಹಿತ್ಯದ ಎಲ್ಲ ಪ್ರಕಾರಗಳು ಓದಲು ಸಾಧ್ಯವಾಗುತ್ತದೆ. ಕೆಲವು ಸಲ ಯಾವುದೋ ಒಂದು ಭಾಷಾ ಸಾಹಿತ್ಯಕ್ಕೆ ಸಂಕಲನ ಮೀಸಲಾಗಿದ್ದು ಅಲ್ಲಿ ಆ ಭಾಷೆಯ ಸಮಕಾಲೀನ ಕಥೆ, ಕಾವ್ಯ, ನಾಟಕ, ರೇಖಾಚಿತ್ರ, ಜೀವನ ಚರಿತ್ರೆ, ವಿಮರ್ಶೆ, ಚರ್ಚೆ ಎಲ್ಲವೂ ಅವತರಿಸಿ ದೇಶದ ಹಾಗೂ ವಿದೇಶದ ಓದುಗರಿಗೂ ಮುಟ್ಟಿ ಮಾತಾಡಿಸುತ್ತದೆ. ದಶಕದ ಹಿಂದೆ ಇಲ್ಲಿ ನಾನು ಅನುವಾದಿಸಿದ ಲಂಕೇಶ್‌ರ 'ಕ್ರಾಂತಿ ಬಂತು ಕ್ರಾಂತಿ', ಸಾರಾ ಅಬೂಬಕರ್ ಅವರ 'ಚಂದ್ರಗಿರಿ ನದಿಯ ತೀರದಲ್ಲಿ' ಜಿಎಸ್ ಶಿವರುದ್ರಪ್ಪ, ಚಂಪಾ, ಕಣವಿ, ಅಲ್ಲಮಪ್ರಭು ಬೆಟ್ಟದೂರ ಹಾಗೂ ನನ್ನ ಕವಿತೆಗಳು ಪ್ರಕಟವಾಗಿ; ಚಂದ್ರಗಿರಿ ನದಿಯ ತೀರದಲ್ಲಿ 'ದೆಹಲಿಯ ಕಿತಾಬ್‌ದಿಂದ ಪ್ರಕಟವಾಗಿದೆ, ಎರಡು ಮೂರು ಮುದ್ರಣ ಕಂಡಿದೆ. ಲಂಕೇಶ್ ನಾಟಕ ಅಸ್ಸಾಮಿ ಭಾಷೆಗೂ ಅನುವಾದವಾಗಿದೆ. ಒರಿಯಾದಲ್ಲಿ ಸಾರಾಳ ಕಾದಂಬರಿ ಟೆಲಿಫಿಲಂ ಆಗಿದೆ.

ನಮ್ಮ ನಾಡಿನ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಅನುವಾದಕ್ಕಾಗಿಯೇ ಜನ್ಮ ತಳೆದ ಕರ್ನಾಟಕ ಸರಕಾರದ ಪ್ರಾಧಿಕಾರ ಅನುವಾದ ಕೈಕೊಳ್ಳುವ ಮೂಲಕ ಭಾರತವನ್ನು ಸರ್ವ ಜನಾಂಗದ ಶಾಂತಿಯ ತೋಟ ಮಾಡಲು ಹೊರಟಿದೆ. ಅದು ಇತ್ತೀಚೆಗೆ ಬರಹದ ಮೇರು ವ್ಯಕ್ತಿತ್ವ ಕುವೆಂಪು ಅವರ ಸಮಗ್ರ ಸಾಹಿತ್ಯ ಎನ್ನಬಹುದಾದ ನಾಲ್ಕು ಬೃಹತ್ ಸಂಪುಟಗಳು ಹಿಂದಿಯಲ್ಲಿ ಪ್ರಕಟಿಸಿದೆ. ಅದರ ಪ್ರಧಾನ ಸಂಪಾದಕರಾದ ಎಚ್.ವಿ. ರಾಮಚಂದ್ರರಾವ್ ಅವರು ಕುವೆಂಪು ಅವರನ್ನು ಭಾರತೀಯ ಹಾಗೂ



ವಿಶ್ವದ ಓದುಗರ ಮುಂದೆ ನಿಲ್ಲಿಸಿದ್ದಾರೆ. ಈ ಸಂಪುಟಗಳು ವಿಶ್ವ ಸಾಹಿತ್ಯದ ಸಾಲಿನಲ್ಲಿ ಕನ್ನಡದ ಬೆಳಕಾಗಿ ನಿಲ್ಲಬಹುದು.

ಪ್ರಾಧಿಕಾರದ ಇತ್ತೀಚಿನ ಎಚ್. ದುಂಡಪ್ಪ ಅವರು ಸಂಪಾದಿಸಿದ 'ಜಾಗತಿಕ ವಿಚಾರ ಸಾಹಿತ್ಯ' ಎಂಬ ಗ್ರಂಥ ವಿಶಿಷ್ಟವಾದದ್ದು ಹಾಗೂ ಕನ್ನಡದ ಓದುಗರಲ್ಲಿ ವೈಚಾರಿಕತೆ ಬೆಳೆಸುವ ಕೈದೀವಿಗೆಯಾಗಬಹುದು. ಅಂತೆಯೇ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಅನುವಾದ ಕ್ಷೇತ್ರದಲ್ಲಿ ಕೆಲಸ ಮಾಡಿದ ಗಮನಾರ್ಹ ಬರಹಗಾರರಿಗೆ ಗೌರವ ಪ್ರಶಸ್ತಿ ಕೊಡುವುದರ ಜೊತೆಗೆ ಅವರ ಒಂದು ಅನುವಾದಿತ ಪ್ರಕಟಿತ ಅಥವಾ ಅಪ್ರಕಟಿತ ಗ್ರಂಥ ಪ್ರಕಟಿಸುತ್ತದೆ. ಹಾಗಾಗಿ ಈ ಚಿಂತನೆಯ ಕಾರಣವಾಗಿ ನನ್ನ ೧೪ ಅನುವಾದಿತ ಕಾವ್ಯ ಸಂಕಲನದಿಂದ ಆಯ್ದ ೧೬೧ ಕವಿತೆಗಳ ಕಾವ್ಯಾನುವಾದ ಓದಿನ ಸುಖ ಎಂಬ ಗ್ರಂಥ ಪ್ರಕಟವಾದದ್ದಕ್ಕೆ ನಾನು ಪ್ರಾಧಿಕಾರಕ್ಕೆ ಕಾವ್ಯಾನುವಾದ ಓದುಗರ ಪರವಾಗಿ ಧನ್ಯವಾದ ಹೇಳಬೇಕು.

**ವಚನ ಸಾಹಿತ್ಯ ೨೫೦೦ ವಚನ ೨೩ ಭಾಷೆಗಳಿಗೆ**

ಸಮತೆ ಎಂಬುದೇ ಯೋಗ ನೋಡ' ಎಂದು ಹೇಳಿದ, ಬರೆದ ಅದರಂತೆ ನಡೆದುಕೊಂಡ ಬಹುತ್ವ ಹಾಗೂ ಪ್ರಶ್ನಾತೀತ ಜನಪರ ನಿಲುವಿನ ವಚನ ಸಾಹಿತ್ಯದ ಅನುವಾದ ಕುರಿತ ಕಥನ ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಪ್ರೊ. ಎಂ.ಎಂ. ಕಲಬುರ್ಗಿ ಅವರ ಮಾರ್ಗದರ್ಶನದಲ್ಲಿ, ಬಸವ ಸಮಿತಿಯು ೨೫೦೦ ವಚನಗಳ ಅನುವಾದ ಕಾರ್ಯ ಕೈಗೆತ್ತಿಕೊಂಡಿತು. ಮೊದಲಿಗೆ ಹಿಂದಿ ಹಾಗೂ ಇಂಗ್ಲಿಷ್‌ನಲ್ಲಿ ಅನುವಾದಗಳಾದವು. ಮತ್ತೆ ಮತ್ತೆ ಚರ್ಚೆ ನಡೆಸಿ, ಹಿಂದಿಯ ವಿದ್ವಾಂಸರಿಂದ ಪರಿಶೀಲಿಸಿ, ಅನುವಾದ ಆದಷ್ಟು ಹಿಂದೀಕರಣವಾಗುವಂತೆ ನೋಡಲಾಯಿತು. ಈ ಅನುವಾದ ಯೋಜನೆಯಲ್ಲಿ ಬಸವಣ್ಣನವರ ೪೩೦ ವಚನಗಳು ಹಿಂದಿಗೆ ಅನುವಾದಿಸುವ ಸದಾವಕಾಶ ನನಗೆ ದೊರೆತದ್ದು ನೆನಯುವೆ. ಈ ೨೫೦೦ ವಚನಗಳು ಹಿಂದಿ ಹಾಗೂ ಇಂಗ್ಲಿಷ್ ಮೂಲಕ ಭಾರತೀಯ ಹಾಗೂ ವಿದೇಶದ

೨೩ ಭಾಷೆಗಳಿಗೆ ಅನುವಾದಗೊಂಡಿವೆ. ದಶಕಗಳ ಹಿಂದೆ ಪಂಜಾಬಿನಲ್ಲಿ ಸಪ್ರೆಟಿಸ್ಟ್ ಆತಂಕವಾದವು ಅಲ್ಲಿ ರಕ್ತದೊಕುಳಿಯೇ ನಡೆಸಿದ್ದು ನಾವು ಬಲ್ಲೆವು. ಆ ಆತಂಕವಾದದ ಮುಖಾಮುಖಿ ಅಲ್ಲಿಯ ಬರಹಗಾರರು ಅದು ಹೇಗೆ ಅನುಸಂಧಾನ ನಡೆಸಿದರು ಎಂದು ಓದುವುದೇ ಖುಷಿಯ ಮಾತಾಗಿದೆ. ಅದು ಕುರಿತು ಒಬ್ಬ ಪಂಜಾಬಿ ಕವಿ ಬರೆಯುತ್ತಾರೆ.

ನನ್ನ ಹೆಗಲ ಮೇಲೊಂದು ಕಂಬಳಿ ಇತ್ತು

ನನ್ನ ಕೈಯಲ್ಲೊಂದು ಕೊಳಲು ಇತ್ತು

ನಾನು ಮಲಗಿರಲೂ ಇಲ್ಲ, ಎಲ್ಲಿಯೂ ಹೊರಗೆ ಹೋಗಿರಲಿಲ್ಲ

ನನ್ನ ಕೈಯಲ್ಲಿ ಬಂದೂಕು ಕೊಟ್ಟವರಾರು

ನನ್ನ ಹೆಗಲ ಮೇಲೆ ನನ್ನ ಹೆಣವನ್ನಿಟ್ಟವರಾರು

ಹೀಗೆ ಸಮಕಾಲೀನ ಸಮಾಜದ ತವಕ ತಲ್ಲಣಗಳು ಹಾಗೂ ಲೇಖಕರ ಅಭಿವ್ಯಕ್ತಿಯ ಓದು ಒಂದು ನಾಡಿನ ವಿವೇಕದ ವಿಕಾಸಕ್ಕೆ ತುಂಬ ಇತ್ಯಾತ್ಮಕ ಲಾಭ ತಂದು ಕೊಡುತ್ತದೆ.



ಈ ಅಧ್ಯಯನ ಕುರಿತು ಅಂದಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಪಂಜಾಬಿ ಕಾವ್ಯ ಕಥೆಯ ಒಂದು ವಾರದ ಅನುವಾದ ಕಮ್ಮಟ ನಡೆಸಿ 'ಸಮಕಾಲೀನ ಪಂಜಾಬಿ ಕಾವ್ಯ' ಎಂಬ ಸಂಕಲನ ಹೊರತಂದಿತು. ಆ ಯೋಜನೆ ಅಕಾಡೆಮಿಯ ಮುಂದೆ ಸಲ್ಲಿಸಿ ಅನುವಾದ ಹಾಗೂ ಸಂಪಾದನೆ ಕಾರ್ಯ ಕಾಶೀನಾಥ ಅಂಬಲಗೆ ನಡೆಸಿ ಕೊಟ್ಟರು. ವ್ಯಕ್ತಿಗತವಾಗಿಯೂ 'ಕೋಗಿಲೆ ಅಳುತಿದೆ' ಎಂಬ ೧೦೦ ಮಿನ ಕವಿತೆಗಳ ಸಂಕಲನವೂ ಬೆಳಕು ಕಾಣುವಂತಾಯಿತು. ಕನ್ನಡದ ಪ್ರಜ್ಞಾವಂತ ಕಾವ್ಯ ಓದುಗರು ಇದು ಬಹಳ ಇಷ್ಟಪಟ್ಟರು, ಪ್ರಭಾವಿತರಾದರು. ಸುಮಾರು ೩೦ಕ್ಕೂ ಮೇಲ್ಪಟ್ಟು ಪಂಜಾಬಿ ಕವಿಗಳು ಅನುವಾದದ ಮೂಲಕ ಕನ್ನಡ ಓದಿಗರಿಗೆ ದಕ್ಕದ್ದಾರೆ ರಾಮಸಿಂಹ ಚಾಹಲ್ ಎಂಬ ಪಂಜಾಬಿನ ಅತ್ಯಂತ ಸಂವೇದನಾಶೀಲ ಕವಿ ಕಾವ್ಯ ಹಿಂದಿಗೆ ಅನುವಾದಿಸಿಕೊಟ್ಟು ಕನ್ನಡದ ಅನುವಾದಕ್ಕೂ ಸಹಕರಿಸಿದರು. ಸಮಕಾಲೀನ ಪಂಜಾಬಿ ಕಾವ್ಯ ಹಾಗೂ ಕೋಗಿಲೆ ಅಳುತಿದೆ' ಹಲವು ಮುದ್ರಣ ಕಂಡಿವೆ.

**ಹೈದ್ರಾಬಾದ ಕರ್ನಾಟಕ (ಕಲ್ಬುರ್ಗಿ)**

ಅನುವಾದದ ಹುಡುಕಾಟಕ್ಕಾಗಿ ಕಲ್ಬುರ್ಗಿಗೆ ಬಂದರೆ ಒಂದು ರೋಚಕ ಅನುಭವವೇ ಆದೀತು. ಇಡೀ ದೇಶಕ್ಕಿಂತ ಒಂದು ವರ್ಷ ಒಂದು ತಿಂಗಳು ಲೇಟಾಗಿ ಹೈದ್ರಾಬಾದ ಕರ್ನಾಟಕ ಪ್ರದೇಶ ಸ್ವಾತಂತ್ರ್ಯದ ಗಾಳಿ ಉಸಿರಾಡುತ್ತದೆ. ನೈಜಾಮನ ಆಡಳಿತಕ್ಕೆ ಒಳಗಾಗಿರಲಾಗಿ ಈ ಪ್ರದೇಶದ ಆಡಳಿತ ಭಾಷೆ, ಶಿಕ್ಷಣ ಭಾಷೆ ಉರ್ದು ಆಗಿತ್ತು. ಈ ಪ್ರದೇಶ ಕನ್ನಡ, ಮರಾಠಿ, ಉರ್ದು, ಹಿಂದಿ ಹಾಗೂ ಇಂಗ್ಲಿಷ್‌ನ ಓದು ಬರಹಕ್ಕೆ ತೆರೆದುಕೊಂಡ ನಾಡು.

**ಕನ್ನಡದ ನವೋದಯ ಕಾಲ ಉಚ್ಛಾಯ ಸ್ಥಿತಿಯಲ್ಲಿದ್ದಾಗ ಇಲ್ಲಿ ಕನ್ನಡ ಅಆ...**

ಕಾಲ. ಬೀದರನಲ್ಲಿ ನವೋದಯ ಆಶ್ರಯದ ಮೊದಲ ಕವನ ಸಂಕಲನ ೧೯೭೫ರಲ್ಲಿ ಬೆಳಕು ಕಂಡರೆ, ಕಲಬುರ್ಗಿಯಲ್ಲಿ ಇದಕ್ಕಿಂತ ಹತ್ತು ವರ್ಷ ಮೊದಲಿಗೆ, ರಾಯಚೂರನಲ್ಲಿ ಇದಕ್ಕಿಂತ ಹತ್ತು ವರ್ಷ ಮೊದಲಿಗೆ, ಈ ಭಾಗದ ಮೊದಲ ಘಟ್ಟದ ಲೇಖಕರ ಸರ್ವೆ ಸಾಮಾನ್ಯ ಲಕ್ಷಣವೆಂದರೆ, ಸ್ವಾತಂತ್ರ ಪೂರ್ವದಲ್ಲಿ ಒಂದಿಷ್ಟು ಕನ್ನಡ ಸಾಹಿತ್ಯ ಕಟ್ಟುವವರೂ ಸಹ ಉರ್ದು ಮಾಧ್ಯಮದಲ್ಲಿ ಶಿಕ್ಷಣ ಪಡೆದವರೇ ಆಗಿದ್ದು ಪ್ರಯತ್ನ ಪೂರ್ವಕವಾಗಿ ಹಾಗೂ ಕನ್ನಡ ಪ್ರೀತಿಯಿಂದ ಕನ್ನಡ ಕಲಿತು ಕನ್ನಡದಲ್ಲಿ ಬರೆಯುವ ಲೇಖಕರಾಗಿದ್ದರು. ಹಲವು ಸಲ ಅವರು ತ್ರಿಭಾಷಿಕ (ಕನ್ನಡ, ಮರಾಠಿ, ಉರ್ದು)ರಾಗಿದ್ದರು. ಅವರು ಅತ್ಯಂತ ಪ್ರೀತಿಯಿಂದ ಅನುವಾದ ಕಾರ್ಯ ಕೈಗೊಂಡರು. ರೋಚಕ ವಿಷಯವೆಂದರೆ ಈ ಕಾಲಘಟ್ಟದ ಅನುವಾದಗಳು ಕನ್ನಡದಿಂದ ಮರಾಠಿ ಹಾಗೂ ಹಿಂದಿಗೆ ಹಿಂದಿಯಿಂದ ಕನ್ನಡಕ್ಕೆ ನಡೆಯುತ್ತವೆ. ಸುಮಾರು ೧೯೩೦ರಲ್ಲಿಯೇ ಶ್ರೀ ದತ್ತಾತ್ರಯ ಹೇರೂರ ಅವರು ಹಿಂದಿಯ ಮಹಾಕಾವ್ಯಗಳಾದ ತುಲಸೀದಾಸ ಅವರ 'ರಾಮಚರಿತ ಮಾನಸ”  ಸೂರದಾಸ ಅವರ 'ಸೂರ ಸಾಗರ' ಕನ್ನಡಕ್ಕೆ ಅನುವಾದಿಸುತ್ತಾರೆ. ಇವು ಹಿಂದಿ ಸಾಹಿತ್ಯದಲ್ಲಿ ಭಕ್ತಿ ಕಾಲದ ಮೇರು ಗ್ರಂಥಗಳು, ಸರ್ವಜ್ಞನ ವಚನಗಳು ಮರಾಠಿ ಭಾಷೆಗೆ ಅನುವಾದಿಸಿದ್ದು ತೀರ ಮಹತ್ವ ಸಾಹಿತ್ಯ ಸಾಂಸ್ಕೃತಿಕ ಕೊಡುಗೆಯಾಗಿದೆ. ಪ್ರೊ. ದೇವುಳಗಾಂವರ್ ಅವರು

ಶಿವರಾಮ ಕಾರಂತರ 'ಯಕ್ಷಗಾನ' ಬೀಚಿ ಸರಿತಾ ಕುಸುಮಾ ದೇಸಾಯಿ, ಹಾಗೂ ಜಯ ತೀರ್ಥ ರಾಜ ಪುರೋಹಿತ ಅವರ ಕಥೆಗಾರು ಮತ್ತು ಸಿದ್ದಯ್ಯ ಪುರಾಣಿಕ ಅವರ ಕವಿತೆಗಳು ಮರಾಠಿ ಭಾಷೆಗೆ ಅನುವಾದಿಸಿದ್ದಾರೆ. ಪ್ರೊ. ಕೇಶವರಾವ್ ಮಹಾಗಾಂವಕರ್ ಅವರು ಯಶಸ ಚಿತ್ತಾಲ ಅವರ 'ಶಿಕಾರಿ' ಕಾದಂಬರಿ ಹಿಂದಿಗೆ ಅನುವಾದಿಸಿದ್ದಾರೆ. (ಅದೂ ಮರಾಠಿಯಿಂದ ಹಿಂದಿಗೆ ಬಹಳ ಮಜಾ! ಅಲ್ಲವೇ ಸಂಗಾತಿಗಳೇ!) ಚಂದ್ರಕಾಂತ ಕುಸನೂರ ಅವರು ಮೊದಲಿಗೆ ಹಿಂದಿಯಲ್ಲಿಯೇ ಬರೆಯಲು ಪ್ರಾರಂಭಿಸಿ ನಂತರ ಕನ್ನಡಕ್ಕೆ ಸಿಫ್ಟ್ ಆದ ಕನ್ನಡದ ಪ್ರಮುಖ ಬರಹಗಾರರು. ಪ್ರೊ. ರಣಸುಭೆ ಅವರು ಕಲ್ಬುರ್ಗಿಯಲ್ಲಿ ಜನಸಿ ಶಿಕ್ಷಣ ಪಡೆದು ಲಾತುರನಲ್ಲಿ ವಾಸಿಸುತ್ತಿರುವ ನಿವೃತ್ತ ಹಿಂದಿ ಪ್ರಾಧ್ಯಾಪಕರು ಮರಾಠಿ ಹಿಂದಿಯ ಪ್ರಮುಖ ಅನುವಾದಕರು, ರಾಘವೇಂದ್ರ ರಾವ್ ಅವರು 'ಜಜ್ಜ ಆಲಂಪುರಿ' ಎಂಬ ಹೆಸರಿನಿಂದ ಹಲವು ಉರ್ದು ರೂಬಾಯಿಗಳು ಕನ್ನಡಕ್ಕೆ ಅನುವಾದಿಸಿದ್ದಾರೆ. ಶ್ರೀ ರೇವಣಸಿದ್ದಯ್ಯ ರುದ್ರಸ್ವಾಮಿಯ ಅವರು ಕನ್ನಡದ ಕವಿ-ನಾಟಕಕಾರರು. ಉರ್ದು ಚನ್ನಾಗಿ ಬಲ್ಲವರು, ಉರ್ದುವಿನಲ್ಲಿ ನಾಟಕ ರಚಿಸಿದ್ದಾರೆ ಅಲ್ಲದೆ, ಉರ್ದು ಕನ್ನಡದ ಹಲವು ಅನುವಾದ ಕೈಗೊಂಡಿದ್ದಾರೆ. ಡಾ. ಮಾಣಿಕರಾವ ಧನಶ್ರೀ ಅವರು ಉರ್ದು ಬಲ್ಲ ಕನ್ನಡ ಕವಿ ಹಲವು ವಚನಗಳು ಉರ್ದು ಭಾಷೆಗೆ ಅನುವಾದಿಸಿದ್ದಾರೆ. ಬಿಎಂಶ್ರೀ ಕವಿತೆ ಕನ್ನಡಕ್ಕೆ ಅನುವಾದಿಸಿದ್ದಾರೆ.

ಈ ಹಿಂದೆ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಪ್ರೊ. ಸಿ.ಎನ್. ಹಿರೇಮಠ ಅವರು ಇಂಗ್ಲಿಷ್ ಅನುವಾದಕ್ಕೆ ದೊಡ್ಡ ಕೊಡುಗೆ. ಅವರು ತಿಪ್ಪೇ ರುದ್ರಸ್ವಾಮಿ ಅವರ ಕಾದಂಬರಿಗಳು ಇಂಗ್ಲಿಷ್‌ಗೆ ಅನುವಾದಿಸಿದ ಹಿರಿಯರು. 'ಕರ್ತಾರನ ಕಮ್ಮಟ'ವನ್ನು 'ಮೇಕರ್ಸ್ ಮಿಂಟ್' ಎಂಬ ಹೆಸರಿನಿಂದ ಇಂಗ್ಲಿಷ್‌ಗೆ ಅನುವಾದಿಸಿದರೆ, 'ಕದಳಿ-ಕರ್ಪೂರ ಪರಿಪೂರ್ಣದೆಡೆಗೆ' ಮುಂತಾದ ಬೃಹತ್ ಕಾದಂಬರಿಗಳು ಇವರಿಂದ ಇಂಗ್ಲಿಷ್ ಭಾಷೆಗೆ ತರ್ಜುಮೆಗೊಂಡಿವೆ. ಈ ಎತ್ತರದ ಅನುವಾದ ಕುರಿತು ಕನ್ನಡದಲ್ಲಿ ಚರ್ಚೆಯೇ ನಡೆದಿಲ್ಲ, ವಿಮರ್ಶಕರು ಗಮನವೇ ಹರಿಸಿಲ್ಲ. ಇದಾಗಬಾರದು, ಪ್ರೊ, ಎಸ್. ಅಪ್ತದೊಳ್ಳೆಗೌಡರು ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದು ಡಾ. ಶರಣಬಸವಪ್ಪ ಅವರ ದಾಸೋಹ ಚಿಂತನೆಯ ಸಂಪುಟಗಳು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಮಹಾ ದಾಸೋಹ ಸಂಪುಟ ೨ರ ಅನುವಾದ ಪ್ರಮುಖವಾಗಿದೆ.

ಪ್ರೊ. ಬಾಲಚಂದ್ರ ಜಯಶಟ್ಟಿ ಪ್ರೊ. ಆರ್.ಕೆ. ಹುಡಗಿ ಹಾಗೂ ಕಾಶೀನಾಥ ಅಬಲಗೆ ಕೈಕೊಂಡ ಅನುವಾದ ಕಾರ್ಯ ಕುರಿತು ಪ್ರಸ್ತಾಪಿಸಲೇಬೇಕಾದ ಪ್ರಸಂಗವಿದೆ. ಬಾಲಚಂದ್ರ ಜಯಶಟ್ಟಿ ಅವರು ಕನ್ನಡ-ಹಿಂದಿ-ಮರಾಠಿ ಭಾಷಿಕ ಅನುವಾದಗಳಿಗೆ ಎತ್ತಿದ ಕೈ. ಡಾ. ಯು.ಆರ್. ಅನಂತಮೂರ್ತಿ, ಎಸ್.ಎಲ್. ಭೈರಪ್ಪ, ಶ್ರೀಕೃಷ್ಣ ಆಲನಹಳ್ಳಿ ಅವರ ಕಾದಂಬರಿಗಳಲ್ಲದೆ ವೀಣಾರಾಯೇಶ್ವರ ಅವರ ಕಥಾಸಂಕಲನ ಹಿಂದಿಗೆ ಅನುವಾದಿಸಿದಾದ್ದರೆ, ಅನಂತಮೂರ್ತಿ ಅವರ ಭಾರತೀಪುರಾವಸ್ಥೆ, ಆಲನಹಳ್ಳಿ ಅವರ ಪದಸಂಗದ ಗೆಂಡೆತಿಮ್ಮ (ದುಃಖ ಭರಾರಾಗ) ಭೈರಪ್ಪ ಅವರ ಅಂಚು (ಮೋಡ್) ಟಿ. ನರಶ್ರೀ ಅವರ 'ಭಾರತೀಯ ಕಾವ್ಯಮೀಮಾಂಸ ಪ್ರಮುಖವಾದವುಗಳಾಗಿವೆ.

ವಚನಗಳು ಹಿಂದಿಗೆ ಅನುವಾದಿಸಿದ್ದಾರೆ. ಜೇಡರ ದಾಸಿಮಯ್ಯ ಕೆ ವಚನ ಇದು ಹಲವು ದರ್ಶಿಗಳ ಹಿಂದೆಯೇ ಅನುವಾದಿಸಿದ್ದು, ಕರ್ನಾಟಕ ಸುಹಿತ್ಯ ಅಕಾಡೆಮಿ ಅ ವಚನಗಳ ಹಿಂದಿ ಅನುವಾದ "ದಲ್ಲಿ ಇವರ ಪ್ರಮುಖ ಭಾಗೀ ದಾರೀ ಇದೆ. ಬೀದರ ಜಿಲ್ಲೆ ಬಾಲ್ಕಿ ಹಿರೇಮಠ ಸಂಸ್ಥಾನವು ಕೈಗೊಂಡ ಶರಣರ ವಚನ ಸಾಹಿತ್ಯ ಹಾಗೂ ಜೀವನ ಚರಿತ್ರೆಗಳು ಮರಾಠಿಯಲ್ಲಿ ಅನುವಾದ ಪ್ರಸ್ತುತಪಡಿಸುವ ಹಿರಿಯ ಯೋಜನೆಯ ರೂವಾರಿ ಇವರಾಗಿದ್ದಾರೆ. ಕನ್ನಡ ಸಾಹಿತ್ಯ ಹಿಂದಿಗೆ ಅನುವಾದಿಸುವ ಮಹತ್ವದ ಸಾಂಸ್ಕೃತಿಕ ಕೊಡುಗೆ ಇವರಾಗಿದ್ದಾರೆ. ಇವರ ಅನುವಾದಗಳೇ ನನ್ನನು 'ಜಾನಪೀಠ ಪ್ರಶಸ್ತಿಯ ಹತ್ತಿರಕ್ಕೆ ತೆಗೆದುಕೊಂಡು ಹಓಗಿವೆ' ಎಂಬ ಅನಂತಮೂರ್ತಿ ಅವರ ಪ್ರತಿಕ್ರಿಯೆ ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ.

ಪ್ರೊ. ಆರ್.ಕೆ. ಹುಡಗಿ ಅವರು ಎಡವಾದಿ ವಿಚಾರಧಾರೆಯ ಚಿಂತಕರಾಗಿಯೂ ಕನ್ನಡ ಇಂಗ್ಲಿಷ್ ಭಾಷೆಗಳ ಮಹಾಪ್ರಜ್ಞರಾಗಿಯೂ ಇರುವ ಡೆವಿಲ್ ಸಾಧ್ಯತೆಗಳ ಅನುವಾದಕರು. ಪ್ರಗತಿಪರ ಹಆಗೂ ಜನಪರವಾದ ಸಾಹಿತ್ಯ ಮಾತ್ರ ಅನುವಾದಕ್ಕೆ ಎತ್ತಿಕೊಳ್ಳುತ್ತಾರೆ. ಅನೇಕ ಸಲ ಜನಪರ ಹೋರಾಟಗಳಿಗೆ ಬೇಕಾದ ಅನವಾರ್ಯದ ಸಾಹಿತ್ಯ ತಕ್ಷಣ ಅನುವಾದಿಸಿ ಪ್ರಕಟಪಡಿಸುತ್ತಾರೆ. ಭಗತ್‌ಸಿಂಗ್ ಅವರ 'ನಾನೇಕೆ ನಾಸ್ತಿಕ?' ಮೈಥಿಲಿಶಿವರಾಮನ್ ಅವರ 'ವಿಮೋಚನೆ ಯೆಡೆಗೆ' ಡಾ. ಬಿ.ಆರ್. ಅಂಬೇಡ್ಕರ್ ಅವರ ರಾಮಕೃಷ್ಣ ಭಾನಗಡಿ' 'ಸಮಾಜವಾದೀ ದೇಶಗಳಲ್ಲಿ ಮಹಿಳೆಯ ಸ್ಥಿತಿ, ಗತಿಗಳು' 'ಸಾಮ್ಯಾವಾದಿ ದೇಶಗಳಲ್ಲಿ ಮಹಿಳೇಯ ಸ್ಥಿತಿಗತಿಗಳು' 'ಆದರ್ಶ ಕಮ್ಯುನಿಷ್ಠನಾಗುವ ಬಗೆ' ಮುಂತಾದವುಗಳು ಈ ತರಹದ ಅನುವಾದದ ಚಿಕ್ಕ ಚಿಕ್ಕ ಮೈಲಿಗಲ್ಲುಗಳು.

ಪಾಕಿಸ್ತಾನ ವಿಭಜನೆಯ ನೋವಿನ ಕಥೆಯಾದ ದೇಶದ ಪ್ರಮುಖ ಕಥೆಗಾರರು ಬರೆದ ಎಪ್ಪತ್ತು (೭೦) ಕಥೆಗಳ ಮೂರು ಸಂಪುಟಗಳು 'ಧರೆಹತ್ತಿ ಉರಿದಾಗ' ಅನುವಾದ ಮಾಡಿದ್ದಾರೆ. ಇದು ಭೂಮಿ ಆಕಾಶ ಅಂಗೈಯಲ್ಲೇ ಹಿಡಿದು ನೋಡಲು ಪ್ರಯತ್ನ.

ಇದೂ ಅಲ್ಲದೆ ಸುರಭಿ ಬ್ಯಾನರ್ಜಿ ಅವರ 'ಜ್ಯೋತಿ ಬಸು' ಜೀವನ ಚರಿತ್ರೆ, ಮಣಿಶಂಕರ್ ಐಯರ್ ಅವರ ಕಟ್ಟಾ ಸೆಕ್ಯುಲರ್ ವಾದಿಯ ಆತ್ಮಚರಿತ್ರೆ' ಆನಂದ ತೇಲತುಂಬೆ ಅವರ 'ದಲಿತ ಸಂಘರ್ಷ: ದಾರಿದಿಕ್ಕು ಕನಕ ಮುಖರ್ಜಿ ಅವರ 'ಮಹಿಳಾ ವಿಮೋಚನೆ" ಹೋರಾಟ ನಡೆದು ಬಂದ ದಾರಿ' ತರುಣ ತೇಜಪಾಲ್ ಅವರ ಕಾದಂಬರಿ 'ಕಾಮರ ನಾಯನ' ಸೈಯದ್ ಅಖರ್ ವಾರ್ತಾ

ಕಾದಂಬರಿ 'ಅಮ್ಮಿ' ಮೊಹಸಿನ್ ಹಮಿದ್ ಅವರ ಕಾದಂಬರಿ 'ಅನಾಸಕ್ತ ಆತಂಕವಾದಿ' ಅಮಿತ್ ಭಾದುರಿ ಅವರ ಅಭಿವೃದ್ಧಿ ಆತ್ಮ ಘನತೆ ಯಾಮಾಗೂಚಿ ಹೀರೋಯಿಚಿ ಅವರ 'ಸಮಸ್ಯೆ ಸವಾಲು' ತೆಹಮಿನಾದುರಾನಿ ಅವರ ಆತ್ಮ ಚರಿತ್ರೆ' ನನ್ನ ತಾಳೆಗಾರಿ ಪ್ರಭು' ಹಾಗೂ ಅವರದೇ 'ದೇವದೂಷಣೆ' ಇವಲ್ಲದೆ ಮತ್ತೊಂದು ಪ್ರಮುಖಗ್ರಂಥ

ಮ್ಯಾಕ್ಸಿಂಗಾರ್ಕಿ ಅವರ 'ವ್ಯಕ್ತಿತ್ವ ವಿಕ್ಷಟನೆ (ಡಿಸ್ ಇಂಟಿಗ್ರೇಶನ್ ಆಫ್ ಪರ್ಸ್ನಾ ಲಿಟಿ) ಮತ್ತು 'ಆರನೆ ಹೆಂಡತಿಯ ಆತ್ಮಕಥೆ' (ಮೈ ಮ್ಯೂಡಲ್' ಲಾರ್ಡ್)



'ಪೀಠಾಧಿಪತಿಯ ಪತ್ನಿ' ದಂತಹ ಅನುವಾದಗಳು ಕನ್ನಡ ಸಾಹಿತ್ಯ ಓದುಗರು ಓದಿ ಚಿತ್ತಚಂಚಲತೆಯ ಹಸಿವು ಹಿಂಗಿಸಿಕೊಳ್ಳಬಹುದಾಗಿದೆ.

ಕಾಶೀನಾಥ ಅಬಲಗೆ ಅನುವಾದಗಳೆಂದರೆ, 'ಸಫರ್ ಹಾಡ್ಮಿಯವರ ಐದು ಮಕ್ಕಳ ನಾಟಕಗಳು' ೪೫, ಪ್ರಗತಿಪರ ಹಿಂದಿ-ಕವಿತೆಗಳ ಅನುವಾದ ಓದಿರುವುದು ಪಂಜಾಬಿ ಒರಾ ಮಿನಕವಿತೆಗಳು 'ಕೋಗಿಲೆ ಅಳುತಿದೆ' ಕರ್ನಾಟಕ ಲಲಿತಕಲಾ ಅಕಾಡೆಮಿಗಾಗಿ ೩೦೦ ಪುಟಗಳ ಸೌಂದರ್ಯಶಾಸ್ತ್ರ' (ಮೂರು ಮುದ್ರಣ ಕಂಡಿದೆ)

'ರಾಮಜಿ ಜಾಗ್ರತನಾದ' (NBTಗಾಗಿ) ಲಂಕೇಶ್‌ರ ಕ್ರಾಂತಿ ಬಂತು ಕ್ರಾಂತಿ' ಸಾರಾ ಅಬೂಬಕರ 'ಚಂದ್ರಗಿರಿ ನದಿಯ ತೀಯದಲ್ಲಿ (೩ ಮುದ್ರಣ ಕಂಡಿದೆ), ರಂಜಾನ ದರ್ಗಾ ಅವರ 'ಬಸವ ಚೇತನಾ' (ಬಸವ ಪ್ರಜ್ಞೆ) ಸಿದ್ಧರಾಮೇಶ್ವರ ಚುತಿ ಹುಲೆ ೧೦೮ ವಚನ' ಅಲ್ಲದೆ ಬಿದ್ದಲ ಡಜನ್ ಮೇಲೊಂದು ಅನುವಾದ ಕೃತಿಗಳ

ಅದರಲ್ಲಿ ೪ ಗಜಲ್ ಸಂಕಲನಗಳು ೬ ಗಜಲ್ ಫಲ್ ಫಳ್, ಗಜಲೋತ್ಸವ, ರಂಗುರಂಗಿನ ಗಜಲ್ಗಳು ಬಿರುಗಾಳಿಗಳೇ ಶಾಂತರಾಗಿರಿ. ಇವು ಕನ್ನಡ ಗಜಲ್ ಕಾವ್ಯ ಓದುಗರ ಹಸಿವು ಹಿಂಗಿಸುತ್ತವೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಹಿಂದಿ ಕವಿಗಳಾದ ದಿನಕರ್, ಸುಮಿತ್ರಾ ನಂದನಪಂತ, ಮಹಾದೇವಿವರ್ಮಾ, ಅಜ್ಞೇಯ, ಹಾಗೂ ಗುಜರಾತಿ ಕವಿ ಉಮಾಶಂಕರ್ ಜೋಶಿ ಅವರ ಕವಿತೆಗಳು ಎಂಬ ಅನುವಾದಗಳು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಕಾವ್ಯಕ್ಕೆ ಕನ್ನಡ ಓದುಗರನ್ನು ಮುಖಾಮುಖಿಯಾಗಿಸುತ್ತವೆ. ಈ ಕವಿಗಳೆಲ್ಲರೂ ತಾವು ಜ್ಞಾನಪೀಠ ಪ್ರಶಸ್ತಿ ಪುರಸ್ಕಾರ ಸ್ವೀಕರಿಸುವ ಸಂದರ್ಭದಲ್ಲಿ ತಮ್ಮ ಕಾವ್ಯದ ಪ್ರೇರಣೆ-ಧೋರಣೆಗಳ ಕುರಿತು ಮನ ತುಂಬಿ ಬರೆದುಕೊಂಡಿರುತ್ತಾರೆ. ಈ ಬರಹಗಳೂ ಈ ಅನುವಾದ ಕಾವ್ಯ ಸಂಕಲನಗಳಲ್ಲಿ ಒಳಗೊಂಡಿವೆ. 'ರಘುವೀರ ಸಹಾಯ ಕವಿತೆಗಳು' ಪತ್ರಕರ್ತನ ಕಾವ್ಯ ಎಂಬ ಕಾವ್ಯದ ಹೊಸ ಮುಖ ಪರಿಚಯಿಸುತ್ತವೆ. “ಪಾಕ್ ಕವಿತೆಗಳು' ಪಂಜಾಬಿ ಕಾವ್ಯದ ಪ್ರತಿಭಟನಾ ಕಾವ್ಯಕ್ಕೆ ಸುಂದರ ಮಾದರಿ. “ಅಂಧೇರ ನಗರಿ-ಕುರುಡರ ಆನೆ” ಎಂಬ ಎರಡು ಹಿಂದಿ ನಾಟಕಗಳ ಅನುವಾದ ಹಾಗೂ ಅಂಬೇಡ್ಕರ್ ಕವಿತೆಗಳು' ಕನ್ನಡ ಓದಿಗೆ ಪ್ರಮುಖ ಪ್ರವೇಶಗಳಾಗಿವೆ. ಅಂಧೇರನಗರಿ, ಕುರುಡರ ಆನೆ ರಂಗ ನಿರ್ದೇಶಕರಿಗೆ ಖುಷಿ ಕೊಡುವ ಹಾಗೂ ರಂಗ ಪ್ರಯೋಗಕ್ಕೆ ಪಂಥಾಸ್ಥಾನ ಕೊಡುವ ನಾಟಕಗಳು.

ಕಲ್ಬುರ್ಗಿಯ ಸಾಹಿತ್ಯ ಶ್ರೀಮಂತಿಕೆ ಹಾಗೂ ಅನುವಾದ ಸಿರಿತನ ಕುರಿತು ಬಂದು ಧಮಾಕಾ ವಿಚಾರ ಈ ನಾಲ್ಕೈದು ದಿವಸಗಳ ಹಿಂದೆ ಕಲ್ಬುರ್ಗಿಯಲ್ಲಿ ಜರುಗಿದ 'ವಿಶ್ವಕನ್ನಡ ಸಾಹಿತ್ಯ' ಸಮ್ಮೇಳನ ಕುರಿತ ಪ್ರಜಾವಾಣಿ ೩-೨-೨೦೨೦ರ ವರದಿಯಲ್ಲಿ ಓದಲು ದೊರೆಯಿತು. ಅದು ಈ ಲೇಖನದ ಮೂಲಕ ತಮ್ಮೊಡನೆ ಹಂಚಿಕೊಳ್ಳಬೇಕು.

ಸಂಸ್ಕೃತದ ಮೊದಲ ವಿಶ್ವಕೋಶವಾದ 'ಅಭಿಶಾಸ್ತ್ರ ಚಿಂತಾಮಣಿ'ಯನ್ನು ಬರೆದಿರುವವರು ೧೨ನೇ ಶತಮಾನದ ವಿದ್ವಾಂಸ ಮನಸೋಲ್ಲಾಸ ಅವರು ಕಲಬುರ್ಗಿಯವರಾಗಿದ್ದರು. ಸಂಸ್ಕೃತ ವಿಶ್ವವಿದ್ಯಾಲಯದಿಂದ ಅದು ಕನ್ನಡಕ್ಕೆ ಅನುವಾದ ಆಗಿದೆ. ಹೀಗೆಂದು ಪ್ರೊ, ಮಲ್ಲೇಪುರಂ ಜಿ. ವೆಂಕಟೇಶ್ ಅವರು ಗೋಷ್ಠಿಯೊಂದರಲ್ಲಿ



ತಿಳಿಸಿದ್ದಾರೆ. ಈ ವಿಶ್ವಕೋಶವು ಆಯುರ್ವೇದದಿಂದ ಖಗೋಳ ಭೌತಶಾಸ್ತ್ರದವರೆಗಿನ ವಿವಿಧ ವಿಷಯಗಳ ಬಗ್ಗೆ ಹಾಗೂ ಭೂಮಿಯ ವಿಶಿಷ್ಟ ಪಾಕಶಾಲೆಯನ್ನು ನಿರ್ವಹಿಸುವ ವಿಷಯ ತಿಳಿಸುತ್ತದೆ.

ಇಲ್ಲೊಂದು ಸ್ಪಷ್ಟ ಟಿಪ್ಪಣಿ ಮಂಡಿಸುತ್ತಿದ್ದೇನೆ. 'ಶ್ರೀದತ್ತಾತ್ರಯ ಹೇರೂರ, ಪ್ರೊ. ದೇವುಳಗಾಂವರ್, ಪ್ರೊ. ಕೇಶವರಾವ ಮಹಾಗಾಂವಕರ್, ಚಂದ್ರಕಾಂತ ಕುಸನೂರ, ಶಾಂತರಸ, ಪ್ರೊ, ರಣಸುಭೆ, ರಾಘವೇಂದ್ರರಾವ್, ಶ್ರೀ ರೇವಣಸಿದ್ದಯ್ಯ ರುದ್ರಸ್ವಾಮಿಮಠ, ಪ್ರೊ. ಮಾಣಿಕರಾವ ಧನಶ್ರೀ, ಪ್ರೊ. ಬಾಲಚಂದ್ರ ಜಯಶಟ್ಟಿ, ಪ್ರೊ. ಆರ್.ಕೆ. ಹುಡಗಿ, ಪ್ರೊ. ಕಾಶೀನಾಥ ಅಂಬಲಗೆ, ವಿಶ್ವಕೋಶದ ಮೌನಸೋಲ್ಲಾಸ ಅವರಂತಹ ಡೆವಿಲ್ ಅನುವಾದಕರು-ಅನುವಾದ 'ಇರುವ ಇದ್ದ ಕಲ್ಬುರ್ಗಿಯನ್ನು ಅನುವಾದದ ಶಕ್ತಿ ಕೇಂದ್ರ' ಎಂದೇಕೆ ಕರೆಯಬಾರದು? Politics of Translation: ಅನುವಾದದ ರಾಜಕಾರಣವು ಸಾಹಿತ್ಯ ಲೋಕದಲ್ಲಿ ಕೆಲಸ ಮಾಡಿರುತ್ತದೆ. ಅಂದರೆ ತನಗೆ ಬೇಕಾದವರ ತನ್ನ ಹಿತಾಸಕ್ತಿ ಕಾಯುವ ಸಾಹಿತ್ಯ ಸಾಹಿತಿಯ ಅನುವಾದ ಮಾಡುವುದು-ಯಾರನ್ನೋ ಖುಷಿ ಪಡಿಸುವುದಕ್ಕಾಗಿ ಅನುವಾದ ಮಾಡುವುದು ಮುಂತಾದ ರಾಜಕಾರಣವೂ ಅನುವಾದ ಪ್ರಕ್ರಿಯೆಯಲ್ಲಿ ನಡೆದಿರುತ್ತವೆ. ಇದು ಕಾಣುವ ಹಾಗೂ ಸದಾಕಾಲ ಜನಪರವಾಗಿ ಗುಣಾತ್ಮಕತೆ ಪರವಾಗಿ ನಿಲ್ಲುವ ಅನುವಾದ ಕೈಗೆತ್ತಿಕೊಳ್ಳಬೇಕಾದುದು ಒಬ್ಬ ಪ್ರಜ್ಞಾವಂತ ಲೇಖಕ-ಅನುವಾದಕನ ಕರ್ತವ್ಯ ಇರಬೇಕಾಗಿದೆ. ಈ ರಾಜಕಾರಣದಿಂದಾಗಿ ಮುಂಚೂಣಿಯಲ್ಲಿ ಇರಬೇಕಾದ ಲೇಖಕ ಮೂಲೆ ಸೇರುವುದು, ಅರ್ಹನಲ್ಲದ ಲೇಖಕ ಮುಂಚೂಣಿಯಲ್ಲಿ ಕಂಡು ಬರುವ ಹುನ್ನಾರ ತಪ್ಪಿಸಬೇಕಾಗಿರುತ್ತದೆ.

ಅನುವಾದದ ಅರ್ಥಶಾಸ್ತ್ರವೂ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಬೇಕಾಗಿದೆ. ಹಾಗೆ ನೋಡಿದರೆ ಅನುವಾದ ಕಾರ್ಯ ಆರ್ಥಿಕವಾಗಿ ಬಹಳ ಲಾಭದಾಯಕವೂ ಆಗಿರಬಲ್ಲದು. ಆದರೆ ಆರ್ಥಿಕ ಲಾಭದ ಬೆನ್ನು ಬಿದ್ದ ಅನುವಾದ ಆರೋಗ್ಯಕರ ಓದುಗರನ್ನು ಕಟ್ಟಿ ನಿಲ್ಲಿಸದು.

**ಇಂಡಿಯಾ Biggest Market:**

ಜಾಹೀರಾತಿನ ಭರಾಟೆಯ ಈ ಕಾಲಘಟ್ಟದಲ್ಲಿ ವಸ್ತುಗಳ ಮಾರಾಟಕ್ಕೆ ಜಾಹೀರಾತಿಗಾಗಿ ಅನುವಾದ ಮಾರ್ಕೆಟಿಗೆ ಬೇಕಾಗಿರುತ್ತದೆ. ಇಂದು ಭಾರತದ Market ವಿಶ್ವದಲ್ಲಿಯೇ ದೊಡ್ಡದು. ಈ ಮಾರ್ಕೆಟ್‌ನಲ್ಲಿ ತನ್ನ ಸರಕು, ತನ್ನ ವಿಚಾರ ಮಾರಾಟ ಮಾಡಲು ವಿಶ್ವವೇ ಬಿರುಕಾಲ ಮೇಲೆ ನಿಂತಿರುತ್ತದೆ. ಕಾರಣ ವಿಶ್ವದ ಹಲವರು ಹಿಂದಿ ಕಲಿತು ದೇಶದ ಮಾರ್ಕೆಟ್‌ಗೆ ಪ್ರವೇಶಿಸಲು ಹವಣಿಸುತ್ತಾರೆ. ಇದು ಅನುವಾದದ ಅರ್ಥಶಾಸ್ತ್ರ.

ಮಾರ್ಕ್ಸ್ ಲೆನಿನ್, ಕಾವ್ಕಾ, ಕಾಮೂ, ಪಾಲ್ಗೊನೆರೂಡಾ ಆಫ್ರಿಕನ್ ಕಪ್ಪು ಕಾವ್ಯ, ತೆಲುಗಿನ ದಿಗಂಬರ್ ಕಾವ್ಯ, ಮರಾಠಿ ದಲಿತ ಪ್ಯಾಂಥರ್ ಹಾಗೂ ದಲಿತ ಆತ್ಮ ಚರಿತ್ರೆಗಳು ಕನ್ನಡ ಓದುಗರಿಗೆ ತಲುಪಿದ್ದು ಅನುವಾದಗಳ ಮೂಲಕವೇ ಅಲ್ಲವೇ?



ಶೇಕ್ಸ್‌ಪಿಯರ್‌ನನ್ನು ಎಷ್ಟು ಜನ ಎಷ್ಟು ರೀತಿಯಿಂದ, ಎಷ್ಟು ಸಲ ಅನುವಾದಿಸಿಲ್ಲ. ಡಾ. ಕೆ.ಎಸ್. ಭಗವಾನ್ ಅವರು ಎಷ್ಟೊಂದು ಶ್ರಮವಹಿಸಿ ಎಷ್ಟೊಂದು ಪ್ರೀತಿಯಿಂದ ಶೆಕ್ಸ್‌ಪಿಯರ್‌ನನ್ನು ಅನುವಾದಿಸಿದ್ದಾರೆ. ನಾಡಿನ ಅನೇಕ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ತಮ್ಮ ಸೆಲೆಬಸ್‌ನಲ್ಲಿ ಈ ಮಹಾ ನಾಟಕಕಾರನನ್ನು ಇವರ ಅನುವಾದಗಳ ಮೂಲಕ ತಮ್ಮ ನಾಟಕಕಾರನಾಗಿ ಮಾಡಿಕೊಂಡಿದ್ದಾರೆ. ಕೆಲ ನಾಟಕಗಳು ೧೫, ೨೦ ಮುದ್ರಣ ಕಂಡಿವೆ. ಶೇಕ್ಸ್‌ಪಿಯರ್‌ನ ಜುಲಿಯಸ್ ಸೀಜರ್, ಮ್ಯಾಕ್ಬೆತ್, ಬಫೆಲೊ, ಹ್ಯಾಬ್ಲೆಟ್, ರೋಮಿಯೊ ಜ್ಯುಲಿಯಟ್ ನಂತಹ ನಾಟಕಗಳು ದೇಶೀ ಭಾಷೆಯ ಸೊಗಡಿನೊಂದಿಗೆ ಅವರ ಮೂಲಕ ಕನ್ನಡಕ್ಕೆ ಬಂದಿವೆ. ಹೀಗೆ ಹಲವು ಇಂಗ್ಲಿಷ್ ಪ್ರಮುಖ ಲೇಖಕರನ್ನು ತನ್ನ ಮೈಮೇಲೆ ಎಳೆದುಕೊಂಡಂತೆ ಕನ್ನಡಕ್ಕೆ ಅನುವಾದಿಸಿದ ಲೇಖಕರಿಗೆ ನನ್ನದೊಂದು ಪುಟ್ಟ ಹಾಗೂ ದಿಟ್ಟ ಪ್ರಶ್ನೆ! ನೀವೇಕೆ ವಚನ ಸಾಹಿತ್ಯ ಇಂಗ್ಲಿಷ್‌ಗೆ ಅನುವಾದಿಸಲಿಲ್ಲ. ಅದರ 'ಸಮತೆ ಎಂಬುದೇ ಯೋಗ ನೋಡ'ವನ್ನು ಜಾಗತಿಕ ಓದುಗರಿಗೆ ತಲುಪಿಸಲಿಲ್ಲ

ಯಾವ ಭಾಷೆಯ ಸಾಹಿತ್ಯವೇ ಆಗಲಿ ಎಂದಿಗೂ ಅನುವಾದದ ಮೂಲಕವೇ ಆಧುನಿಕತೆಗೆ ಮುಖಮಾಡಿದೆ. ಈ ದಾರಿಯಿಂದಲೇ ಕನ್ನಡವೂ ಕೂಡ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ತನ್ನನ್ನೂ ಅಭಿವ್ಯಕ್ತಿಗೊಳಿಸಿಕೊಳ್ಳಲು ಸಾಧ್ಯವಾಯಿತು.

ನವೋದಯದ ಕುವೆಂಪು, ಬೇಂದ್ರೆಗಳಾದಿಯಾಗಿ ಎಲ್ಲ ಪ್ರಮುಖ ಬರಹಗಾರರು ಅನುವಾದಕ್ಕೆ ಮಾರು ಹೋದವರೇ, ಅನುವಾದ ಕಾರ್ಯ ಕೈಕೊಂಡವರೇ ಆಗಿದ್ದಾರೆ. ಆಶ್ಚರ್ಯವೆಂದರೆ ಕುವೆಂಪು ಅವರು ಮೊದಲಿಗ 'ಇಂಗ್ಲಿಷ್ ಗೀತೆಗಳು' ಮೂಲಕವೇ ಸಾಹಿತ್ಯ ಲೋಕಕ್ಕೆ ಕಾಲಿಟ್ಟವರು ಎಂದು ನಾವೆಲ್ಲ ಬಲ್ಲೆವು.

ತೆಲುಗು, ಮರಾಠಿ, ಮಲಯಾಳಿ, ಬಂಗಾಳಿ ಮುಂತಾದ ಭಾಷಿಕ ಸಾಹಿತ್ಯವು ಅನುವಾದದ ಮೂಲಕವೇ ಕನ್ನಡಕ್ಕೆ ದಕ್ಕಿದೆ. ನವಕರ್ನಾಟಕ, ಲಡಾಯಿ ಪ್ರಕಾಶನಗಳಂತಹ ಅನೇಕ ಪ್ರಕಾಶನ ಸಂಸ್ಥೆಗಳು ಹಲವು ಅಧ್ಯಯನ ಶಿಸ್ತಿನ ಅನುವಾದಗಳು ಕೊಡುತ್ತಲೇ ಬಂದಿವೆ. ನವಕರ್ನಾಟಕವು 'ವಿಶ್ವಕಥಾಕೋಶ್' ಯೋಜನೆಯಲ್ಲಿ ಜಾಗತಿಕ ಕಥೆಗಳ ಕನ್ನಡ ಅನುವಾದದ ೧೫ ಸಂಪುಟಗಳು ಕನ್ನಡ ಓದಿನ ಖಜಾನೆಗೆ ಪ್ರಮುಖ ಕೊಡುಗೆಯಾಗಿವೆ.

ಪಿ. ಲಂಕೇಶ್, ಗಿರಡ್ಡಿ ಗೋವಿಂದರಾಜ, ಸಿದ್ಧಲಿಂಗ ಪಟ್ಟಣಶೆಟ್ಟಿ ಪ್ರಧಾನ ಗುರುದತ್ತ, ತಿಪ್ಪೇಸ್ವಾಮಿ, ಪ್ರಭಾಶಂಕರ್ ಪ್ರೇಮಿ, ಬಿ.ವೈ. ಲಲಿತಾಂಬ, ಕುಮಾರಸ್ವಾಮಿ, ಆರೋರಾ ಹಾಗೂ ಹೊಸ ತಲೆಮಾರಿನ ಕುಂ.ವಿ., ಸರಜೂ ಕಾಟ್ಕರ್, ಓ.ಎಲ್. ನಾಗಭೂಷಣಸ್ವಾಮಿ, ಎಚ್.ಎಸ್. ಅನುಪಮಾ ಮುಂತಾದವರು ಅನುವಾದದ ತೇರು ಯಶಸ್ವಿಯಾಗಿಯೇ ಎಳೆಯುತ್ತಿದ್ದಾರೆ, ತಾವು ಓದುವ ಬರೆಯುವ ಭಾಷೆಯ ನಿಜದ ಸಾಂಸ್ಕೃತಿಕ ರಾಮಭಾರಿಗಳಾಗಿ ಮುನ್ನಡೆಯುತ್ತಿದ್ದಾರೆ. ಹೆಚ್ಚೇನು? ಮುಕ್ತ ಮನಸಿನ, ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ನಂಬಿಕೆ ಇರುವ, ಸಮಸಮಾಜದ ಕನಸು ಕಾಣುವ ಲೇಖಕರೆಲ್ಲರೂ ಅನುವಾದಕ್ಕೆ ಪ್ರೀತಿಯಿಂದಲೇ ಪ್ರತಿಸ್ಪಂದಿಸುತ್ತ ಬರುತ್ತಿದ್ದಾರೆ. ಸಾಧ್ಯವಾದರೆ ಅದರಲ್ಲಿ



ತಮ್ಮನ್ನು ತೊಡಗಿಸಿಕೊಂಡಿದ್ದಾರೆ, ಅದರ ಓದಿನ ಮೂಲಕ ತಮ್ಮನ್ನು ವಿಸ್ತಾರಗೊಳಿಸಿಕೊಂಡಿದ್ದಾರೆ.

ಹೆಚ್ಚು ಭಾಷೆ ಬಲ್ಲ ಬರಹಗಾರ ಹೆಚ್ಚು ಮಾನವೀಯನಾಗಿರಲು ಸಾಧ್ಯ, ಹೆಚ್ಚು ಡೆಮಾಕ್ರಾಟ್ ಆಗಿರಲು ಸಾಧ್ಯ ಅನುವಾದವು ಒಬ್ಬ ಲೇಖಕನಿಗೆ ಹೇಗೆ ಮಾನವೀಯ ಹಾಗೂ ಜೀವಪರವಾಗಿರಲು, ಹಾಗೆ ಬರೆಯಲು ಕಲಿಸುತ್ತಿರುತ್ತದೆ. ಕೊನೆಗೆ ನನ್ನದೊಂದು ಕವಿತೆಯ ಕೆಲ ಸಾಲು ಕಾಣಿಸಿ ಲೇಖನ ಕೊನೆಗೊಳಿಸಬಹುದೆನಿಸುತ್ತಲಿದೆ.

ಪ್ರೀತಿ ಪ್ರೇಮಗಳ ಅನುವಾದ

ಎಂದಿಗೂ ಸಾಧ್ಯವಿಲ್ಲ ಗೆಳತಿ

ಅದು ಸಾಧ್ಯವಾದರೆ ಪ್ರೀತಿ ಪ್ರೇಮ

ಎಂದಿಗೂ ಪ್ರೀತಿಪ್ರೇಮವಾಗಿ

ಉಳಿಯಲಾರದು ಗೆಳತಿ !

## ಅಧ್ಯಕ್ಷ ಭಾಷಣ:

## ಸತ್ಯಶೋಧನೆಯೇ ಸಂಶೋಧನೆ

**- ಡಾ. ವಸಂತ ಕುಷ್ಟಗಿ**

ಪ್ರಕೃತಿಯು ಆಸ್ಫೋಟಗೊಂಡು ಸೃಷ್ಟಿಗೊಂಡ ವಸ್ತುಗಳೆಲ್ಲ ನೆಲ ಜಲ ಆಕಾಶಗಳಲ್ಲೆಲ್ಲ ಚೆಲ್ಲುವರೆದು ಕ್ರಿಯಾತ್ಮಕತೆಯಲ್ಲಿ ಸ್ಥಿತಿಗೊಂಡು, ಕಾಲಸನ್ನಿಹಿತವಾದಾಗ ಆ ವಸ್ತುಗಳೆಲ್ಲ ಜಡವೇ ಇರಲಿ ಚೇತನವೇ ಇರಲಿ, ಎಲ್ಲ ಎಲ್ಲವೂ ಲಯವಾದಂತೆ ಆಗಿ ರೂಪಾಂತರಗೊಳ್ಳುವುದರ ಮೂಲಕ ಮನಃಸೃಷ್ಟಿಯ ಆವೃತ್ತತೆಯಲ್ಲಿ ಸ್ಥಿತಿ ಲಯವಾಗಿ ಲೀನವಾಗುತ್ತ ಕರಗಿ ರೂಪಾಂತರದ ಕ್ರಮದಲ್ಲಿ ಬದುಕು ನಡೆದೇ ಇರುತ್ತದೆಂಬ ನಂಬಿಕೆ. ಆ ನಂಬಿಕೆಯು ಸತ್ಯದತ್ತ ನಮ್ಮನ್ನು ಸೆಳೆದೊಯ್ಯುತ್ತಿರುತ್ತದೆ. ಹೀಗೆ ಆವೃತ್ತತೆಯ ನಡೆ, ಪ್ರಕೃತಿಯ ಸ್ವಭಾವ ನಿತ್ಯತೆಯಾಗಿರುವುದರಿಂದ ಬದುಕನ್ನು ಸಾಧಿಸಿಕೊಳ್ಳಲು ಕಾಲಕಾಲಕ್ಕೆ ಪರಿಸರವನ್ನು ಬಳಸಿಕೊಳ್ಳಲು ತಮ್ಮ ಹೊರರೂಪವನ್ನು ಜೀವಜಡ ಚೇತನಗಳೆಲ್ಲ ಆಗಾಗ ಬದಲಿಸಿಕೊಂಡಂತೆ ಸಾಧಿತವಾಗುತ್ತವೆ. ಆ ಬದಲಾವಣೆಗಳಿಂದ ಚಹರೆಗಳಲ್ಲಿ ಸಹಜ ಸ್ವಭಾವಗಳ ಭಾರವನ್ನು ಒತ್ತಿಟ್ಟುಕೊಂಡು ವರ್ತಮಾನದ ಗತಿಯ ಪ್ರಾಪ್ತಿಯಲ್ಲಿ, ಆಯಾ ವಸ್ತು ವಿಶೇಷಗಳಲ್ಲಿಯ ಕಣಕಣಗಳಲ್ಲಿ ತಾನು, ಉಳಿದೆಲ್ಲವುಗಳಿಗಿಂತ ಸುಂದರವಾಗಿ ಬದುಕಬೇಕೆಂಬ ಚಪಲತೆಯಲ್ಲಿ ಸಾಧಿತವಾಗಿರುತ್ತವೆ. ಆದರೆ ಕಾಲಬಂದಾಗ ರೂಪಾಂತರವಾದಾಗ ಹೊಸ ಬದುಕು ಆರಂಭವಾಯಿತು ಎಂಬ ಮನೋಭಾವವು ಸ್ಥಿತ್ಯಂತರದಲ್ಲಿ ತನ್ನ ಮಜಲುಗಳನ್ನು ಕಟ್ಟಿಕೊಳ್ಳುತ್ತಾ ಸಾಗುತ್ತಿರುತ್ತದೆ. ಚಲನವಲನಗಳನ್ನು, ಅವರವರ ಚಹರೆಗಳನ್ನು ಲಕ್ಷಿಸುವುದರಿಂದ ಪತ್ತೆ ಮಾಡಬಹುದು.

ಚಹರೆಯ ಲಕ್ಷಣಗಳಲ್ಲಿಯ ಎಲ್ಲ ಏರಿಳಿತಗಳು ಸಮಸ್ಥಿತಿಯಲ್ಲಿ ನೆಲಗೊಂಡಾಗ ಪ್ರಕೃತಿಯ ಮೂ ಮೌಲ್ಯದಲ್ಲಿರುವ ಅಂತಃಕರುಣೆಯು ದ್ರವಿಸಿ ಸೃಷ್ಟಿ ಸ್ಥಿತಿ ಲಯಾಂತರದಲ್ಲಿ ರೂಪಾಂತರವು ಸಮಸ್ಥಿತಿಯತ್ತ ನಿರುಂಬಳವಾಗಿ ಚಲಿಸುತ್ತಿರುವುದನ್ನು ಲಕ್ಷಕ್ಕೆ ತಂದುಕೊಳ್ಳಲು ಸಾಧ್ಯವಿದೆ. ಆ ಸಾಧ್ಯತೆಯಲ್ಲಿ ಸ್ವರೂಪ ದರ್ಶನವಾಗಿ ಸ್ವಾನಂದವು ತೃಪ್ತಿಯನ್ನು ತಂದುಕೊಟ್ಟಿರುತ್ತದೆ. ಇದಕ್ಕೆಲ್ಲ ವ್ಯಷ್ಟಿವ್ಯಷ್ಟಿಯಲ್ಲಿರುವ ವಿವೇಕಪೂರ್ಣ ನಡೆಯೇ ಕಾರಣವಾಗುತ್ತದೆ. ಈ ವಿವೇಕಪೂರ್ಣ ನಡೆಯೆಂದರೆ ಬಾಳ್ವವರ ಕೂಡ ಬಾಳುವ ಕಲೆಯನ್ನು ಸಾಧಿಸಿಕೊಳ್ಳುವುದು. ನೆಲಜಲ ಆಕಾಶಗಳಲ್ಲಿ ರೂಪಾಂತರವಾಗುತ್ತಿರುವ ಜೀವ ಜಡ ಚಏತನಗಳೆಲ್ಲ ಮನುಷ್ಯ ಪ್ರಾಣಿಗೆ ಮನಸ್ಸು ಇರುವುದರಿಂದ, ಆ ಜೀವ ಸಂಕುಲವೆಲ್ಲ ಪ್ರಜ್ಞಾವಂತರಾಗಿ ಬದುಕು ಸಾಧಿಸಿಕೊಳ್ಳುತ್ತಾರೆಂಬ ನಂಬಿಕೆಯು ಮನುಷ್ಯನಲ್ಲಿ ಜಾಗೃತವಾಗಿರುತ್ತದೆಂಬ ವಿಶ್ವಾಸವು ಸಾಮಾನ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಕೃತಿಗಿರುವ ಆವೃತ್ತತೆಯ ಮೂಲ ಸ್ವಭಾವವನ್ನು ಹಾಗೆಯೇ ಇಟ್ಟುಕೊಂಡು, ಮೇಲಿನ ಬೆಳವಣಿಗೆಯಲ್ಲಿ ಚಹರೆಯ ನಿಲುವುಗಳನ್ನು ವ್ಯತ್ಯಾಸಗೊಳಸಿಕೊಂಡು ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಮನುಷ್ಯನು ಧಾವಿಸುತ್ತಿರುವುದು, ಅವನ ಬಹು ಮುಖ್ಯ ಚರಿತವಾಗುತ್ತದೆ. ಅದು ಸಂಜ್ಞಾರೂಪದಲ್ಲಿ ಚಹರೆಯಲ್ಲಿ ಕಾಣಿಸಿಕೊಂಡು ತೇಲಿ ಮಾಯವಾಗುತ್ತಿರುತ್ತದೆ.

ಇಲ್ಲಿ ಬಳಕೆಯಾಗಿರುವ 'ಚಹರೆ' ಎಂಬ ಪದವು ಈಗ ಕನ್ನಡದಲ್ಲಿ ಚೇರೆ, ಚಹರಾ ಎಂಬ ರೂಪದಲ್ಲಿ ಬಹಳಷ್ಟು ಚಾಲ್ತಿಯಲ್ಲಿದೆ. ಇದಕ್ಕೆ ಪುರಾವೆಯಾಗಿ ಚಹರಾ ಬದಲಾದರೇನಾಯ್ತು ಅಸಲ್ ಸ್ವಭಾವ ಬದಲಾಗುತ್ತದೆಯೇ?' ಎಂಬ ಅಭಿಪ್ರಾಯದ ಒಂದು ಲೋಕೋ ಮನುಷ್ಯನು ತಆನು ಹೇಗಾದರೂ ಮಾಡಿ ಬದುಕಬೇಕೆಂದಾಗ ವಿವಿಧಾರ್ಥದ ರೂಪಧ್ವನಿಯಲ್ಲಿ ಆತನು ತನ್ನ “ನಾಟಕದ ಚಹರೆ” ಸಾಮಾನ್ಯ ನಡವಳಿಕೆಯಲ್ಲಿಯೂ ಅನಿವಾರವಾಗಿ ಅಳವಡಿಸಿಕೊಳ್ಳಬೇಕಾಯಿತು. “ಈ ಬಂದೂಕಿನ ಚಹರೆಯೂ ನಿನ್ನ ಬದುಕಿನ ಚಹರೆಯೂ ಒಂದೇ ಆಗಿದೆ. ಆರು ತಿಂಗಳ ಕೂಸು ಚೇಹರಾ ಬದಲಾಯಿಸಿತು; ನಮಗೆ ಮೊದಲು ಚೇಹಣ ಮಾತ್ರ ತೋರಿಸಬೇಕು” . ಇತ್ಯಾದಿ ಪ್ರವೇಗಗಳು ೨೧ನೇಯ ಶತಮಾನದ ಕನ್ನಡ ಭಾಷೆಯಲ್ಲಿ ಧಾರಾಳವಾಗಿ ಸಿಗುತ್ತವೆ. ಇದೇ ಪದದ ಆಲಂಬನದಲ್ಲಿ ಚಹರಾಪಟ್ಟಿ ಎಂಬ ನಾಮಪದ ಈಗ ಬಳಕೆಯಲ್ಲಿದೆ. ಅದರ ಅರ್ಥ, ಆಕಾರ, ಲಕ್ಷಣ ಮುಖ ಮುದ್ರೆ ಮೊದಲಾದುವುಗಳ ವಿವರ ತಪಶೀಲು; ಇಂದಿನ ಸಮಯದಲ್ಲಿ ಆ ಪದದ ಬಳಕೆಯಾದ ಒಂದು ಸಾಮಾನ್ಯವಾಕ್ಯವು “ಸಾಹಿತಿಯ ಚಹರೆಪಟ್ಟಿಯನ್ನು ಬರೆಯ ಹೊರಟವನು ಅವನ ಬಡತನವನ್ನು ಕಾಣಿಸದೆ ವಿಧಿಯಿಲ್ಲ' ಇಂತೆಂದು ಇಲ್ಲಿ ಸತ್ಯಚಿತ್ರಕ್ಕೆ ಚೌಕಟ್ಟ ಹಾಕಲಾಗಿದೆ.

'ಚಹರೆ' ಎಂದರೆ ಚರಿತೆಯನ್ನು ಹಿಡಿದುಕೊಂಡು ಹೊರಟಾಗ ಅದು, ಆ ಚಹರೆಯಲ್ಲಿ ಆತನ ನಡವಳಿಕೆ, ಆಚಾರ, ಶೀಲ, ಚರಿತ್ರೆಗಳೆಲ್ಲ ಹಣಕಿಕ್ಕುತ್ತವೆ ಎಂಬ ಚಿತ್ರಣಕ್ಕೆ ಎಡಕೊಡುತ್ತದೆ. ಹಿಂದಿ ಭಾಷೆಯಲ್ಲಿ ಚರಿತವೆಂದರೆ 'ಶೀಕತ' “ಚಹರೇಮೋ ಶೀರತ ನಜರ್ ಆತಾಹೈ; ಇಂಗ್ಲಿಷಿನಲ್ಲಿ Face is the Index of mind” ಹೀಗೆ ಮುಖವೆಂಬುದು ಮನಸ್ಸಿನ ಕನ್ನಡಿ ಎಂಬ ಸ್ವಭಾವೋಕ್ತಿಯನ್ನು ಧ್ವನಿಗೊಳಿಸುತ್ತದೆ. ಆದ್ದರಿಂದ ಚಹರೆಗಳಲ್ಲಿ ನಾಟಕೀಯತೆ ಬಹಳ ಹೊತ್ತು ನಿಲ್ಲುವುದಿಲ್ಲ, ಶಿವನಾದರೇನಾಯಿತು ಠಕ್ಕು ಬಹಳ ಹೊತ್ತು ಉಳಿಯಲಾರದು; ಠಕ್ಕಳಿದು ಅಲ್ಲಿಯೂ ಸತ್ಯದ ಅನಾವರಣ. ಆದ್ದರಿಂದ ಸಮಕಾಲೀನದ ಪರಿಸರದಲ್ಲಿ ಅದಕ್ಕೆ ತಕ್ಕಂತೆ ವೇಷತೊಟ ಹೆಜ್ಜೆ ಹಾಕಿದರೂ, ಆ ಹೆಜ್ಜೆಯ ಕುಣಿತವು ತಾಳಿ ತಾಳಿ ಮತ್ತೆ ಮೂಲ ಸ್ವಭಾವೋಕ್ತಿಯಲ್ಲಿ ಸತ್ಯದ ಅಭಿವ್ಯಕ್ತಿಗೆ ಅನುವಾಗಿ ನಿಲ್ಲುತ್ತದೆ. ಈ ಮಾತು ಕಾವ್ಯ (ಪದಪದ್ಯ, ಗಪದ್ಯ, ಗದ್ಯ) ಮೊದಲಾದ ಸೃಜನ ಶೀಲಸಾಹಿತ್ಯ, ವಿಮರ್ಶೆ ಮೊದಲಾದ ಸೃಜನೇತರ ಸಾಹಿತ್ಯ ಮತ್ತೆ ಅನುವಾದ ಸಾಹಿತ್ಯ ಇತ್ಯಾದಿ ವಿವಿಧ ಪ್ರಕಾರಗಳಿಗೆ ಪ್ರಕಾರಗಳಿಗೆ ಅನ್ವಯವಾಗುವಂತೆ ಸಂಶೋಧನಾ ಸಾಹಿತ್ಯಕ್ಕೂ ಅನ್ವಯವಾಗುತ್ತದೆ.

ಈ ಹಿಂದೆ 'ಸಂಶೋಧನೆ' ಎಂದರೆ ಸಾಹಿತ್ಯ ಮತ್ತು ಇತಿಹಾಸದ ಪರಿಧಿಯಲ್ಲಿಯೇ ಶಿಸ್ತಿನ ವಿಷಯವಾಗಿ ಬೆಳೆಯಿತು. ಇನ್ನಿತರ ಕ್ಷೇತ್ರಗಳಲ್ಲಿಯ ಸಂಶೋಧನೆ, ಸಾರ್ವತ್ರಿಕವಾಗಿ



ಪ್ರಚುರವಾಗದೆ ಕೇವಲ ಆಯಾ ಕ್ಷೇತ್ರಕ್ಕೆ ಸೀಮಿತಗೊಂಡು ನಿಂತವೇನೋ ಎನ್ನಿಸುತ್ತದೆ. ಆದರೆ ಇಂದು ವಿಜ್ಞಾನ ತಂತ್ರಜ್ಞಾನಗಳ ವಿಶಿಷ್ಟ ಸಾಧನೆಯಿಂದಾಗಿ ಪ್ರಪಂಚವನ್ನು ಅಂಗೈ ಹಿಡಿಗೆ ತಂದಿರುವ ಸಮಯ. ಹೀಗಾಗಿ ಸಂಶೋಧನೆಯೆಂದರೆ, “ಭಾಷೆಯ ಜ್ಞಾನ ಶಾಖೆಗಳಲ್ಲಿ ನಡೆಯುವ ಉನ್ನತ ಅಧ್ಯಯನದ ಒಂದು ಪ್ರಕ್ರಿಯೆ. ಸಾಹಿತ್ಯ, ಸಂಗೀತ ಶಿಲ್ಪ ಚಿತ್ರ ಮುಂತಾದ ಕಲಾಪ್ರಕಾರಗಳಾಗಲೀ, ಸಮಾಜಶಾಸ್ತ್ರ ಇತಿಹಾಸ, ರಾಜ್ಯಶಾಸ್ತ್ರ ಮಾನವಶಾಸ್ತ್ರ, ಅರ್ಥಶಾಸ್ತ್ರ ಮುಂತಾದ ಮಾನವಿಕಗಳಾಗಲೀ, ವಿಜ್ಞಾನ ಸಂಖ್ಯಾಶಾಸ್ತ್ರ ಮನಶ್ಯಾಸ್ತ್ರ, ಭಾಷಾ ವಿಜ್ಞಾನ ಮುಂತಾದ ವೈಜ್ಞಾನಿಕ ವಿಷಯಗಳಾಗಲೀ ಎಲ್ಲದರಲ್ಲಿಯೂ ಸಂಶೋಧನೆ ಇರುತ್ತದೆ. ಅಂತರ ಶಾಸ್ತ್ರೀಯ ಸಂಶೋಧನ ವಿಧಿವಿಧಾನಗಳ ಸಂ. ನಾ. ಗೀತಾಚಾರ್ಯ ಪೀಠಿಕೆ” ಜಗತ್ತಿನ ಎಲ್ಲ-ಸಾಹಿತ್ಯ ಕಲೆ, ಮಾನವಿಕ, ವೈಜ್ಞಾನಿಕ, ತತ್ತ್ವಜ್ಞಾನಗಳೆಲ್ಲದರ ಗುರಿ ಆನಂದ ಪ್ರಾಪ್ತಿ. ಇದನ್ನು ತಡೆಯುವುದೇ ಸತ್ಯ ಸೋಧನೆ, ಸತ್ಯಾನ್ವೇಷಣೆ.

ಇಂದು ಸಂಶೋಧನೆ ಶಿಸ್ತು-ಶಿಸ್ತುಗಳ ಗಡಿದಾಟಿ (ಕ್ಷಿತಿಜದಾಚೆಯೇ) ಬೆಳೆಯುತ್ತಿರುವುದರಿಂದ, ಜ್ಞಾನಿಗಳಿಗೂ, ಸಂಶೋಧಕರಿಗೂ ಅಂತರ ಶಿಸ್ತುಗಳ ಸ್ಪಷ್ಟ ತಿಳಿವಳಿಕೆ ಅಗತ್ಯ. ಇದನ್ನು ಒತ್ತಡವೆಂದು ಬಗೆಯಬಾರದು. ಏಕೆಂದರೆ ಅಧ್ಯಯನದ ಕ್ರಮಗಳು ಎಲ್ಲ ಶಿಸ್ತುಗಳಿಗೆ ಒಂದೇ ಪ್ರಕಾರವಾಗಿರುತ್ತವೆ. ಎಲ್ಲಿಯೋ ಒಂದೆರಡು ಕಡೆ ವ್ಯತ್ಯಾಸಗಳಿರಬಹುದು. ಆದರೆ ಎಲ್ಲ ಶಿಸ್ತುಗಳಲ್ಲಿರುವ ಅಧ್ಯಯನ ಕ್ರಮವು ವ್ಯಕ್ತಪಡಿಸುವ ಫಲಿತಾಂಶದ ಗುರಿಯು ಕೇವಲ ಸತ್ಯಾನ್ವೇಷಣೆ ಸತ್ಯಶೋಧನೆ ಇರುವುದರಿಂದ ಸಂಶೋಧನೆಯ ಸ್ವರೂಪದ ಬಗ್ಗೆ ಪ್ರತ್ಯೇಕ ಗ್ರಹಿಕೆಯನ್ನು ಮಾಡಿಕೊಳ್ಳುವ ಅಗತ್ಯವಿಲ್ಲ. ಆದ್ದರಿಂದ ನಿರ್ದಿಷ್ಟ ಸಂಶೋಧನೆ ಹಾಗು ಅಂತರ ಶಿಸ್ತೀಯ ಸಂಶೋಧನೆಗಳೆರಡಕ್ಕೂ ಅನ್ವಯವಾಗುವಂತೆ ಸಂಶೋಧನೆಯ ಪರಿಕಲ್ಪನೆಗಳನ್ನು ಮೂಲಭೂತವಾಗಿ ತಿಳಿದುಕೊಂಡಿರಬೇಕು.

ಸಂಶೋಧನೆ ಎಂದರೆ “ಸತ್ಯ ಸಂಶೋಧನೆಯ ಸಂಶೋಧನೆ. ಸತ್ಯಾನ್ವೇಷಣೆಯೇ ಸಕಲ ಜ್ಞಾನಗಳ ಲಕ್ಷ್ಯ. ಅದು ಸತ್ಯಾನ್ವೇಷಣೆಯ ಫಲ” (ಸಂಶೋಧನೆ: ಎಂ. ಚಿದಾನಂದಮೂರ್ತಿ; ಮುನ್ನುಡಿ ದೇಜಗೌ), ಪ್ರಕೃತಿಯಲ್ಲಿ ಎಲ್ಲವೂ ಅನಾದಿ ಮೂಲದಿಂದಲೇ ಇರುವ ಜ್ಞಾನದಾಹಿ ವಸ್ತುಗಳು, ಅಲ್ಲಿ ಇದ್ದೇ ಇರುತ್ತವೆ. ಅವು ಮನುಷ್ಯನ ವಿವೇಕಪೂರ್ಣ ಸಂಶೋಧನಾ ಜಿಜ್ಞಾಸೆಯಿಂದ ಶೋಧಿತವಾಗಿ ಅವು ಆತನ ಬಾಳ್ವೆಯಲ್ಲಿ ಆನಂದ ಪ್ರಾಪ್ತಿಗೆ ಈಡಾಗಿ ಕಾಲಕಾಲಕ್ಕೆ ರೂಪಾಂತರವಾಗಿ ಬಿಡುತ್ತವೆ. ಆ ಮೂಲಕ ನಾಗರಿಕತೆ-ಸಂಸ್ಕೃತಿಗಳ ಸೊಬಗು ವಿಸ್ತ್ರತವಾಗ

ತೊಡಗುತ್ತದೆ. ಇದನ್ನೆಲ್ಲ ಪಡೆದುಕೊಳ್ಳಲು ದಾರಿಗಳು ಬೇರೆಯಾದರೂ ಕೂಡುದಾಣವೊಂದೆ. ಅದೇ ಸತ್ಯಾನ್ವೇಷಣೆಯು ನೀಡುವ ಆನಂದ ಪ್ರಾಪ್ತಿ. "ಊಹೆ ವೀಕ್ಷಣೆ, ಸಾಮಗ್ರಿ ಸಂಗ್ರಹ ಮತ್ತು ಪ್ರಯೋಗ. ಇವು ಸಂಶೋಧನ ತೇರಿನ ನಾಲ್ಕು ಚಕ್ರಗಳು, ಪ್ರತಿಭೆ ಕಲ್ಪನೆ, ಪಾಂಡಿತ್ಯ ಮತ್ತು ಸತತ ಪ್ರಯತ್ನಗಳು ಅದರ ಚಾಲಕ ಶಕ್ತಿ. ವಿಶ್ಲೇಷಣೆ ವಿವರಗಳು ಅದಕ್ಕೆ ಮಾಡುವ ಅಲಂಕಾರಗಳು." (ದೇಜಗೌ ಮುನ್ನುಡಿ); ಎಂ. ಚಿದಾನಂದಮೂರ್ತಿ ಅವರ ಸಂಶೋಧನೆಗೆ).



ಈ ಮಾತು ಅತ್ಯಂತ ಸುಂದರವಾದ ಸಮರ್ಪಣ ವ್ಯಾಖ್ಯೆ ಮತ್ತು ವ್ಯಾಖ್ಯಾನ. ಇದನ್ನು ಬೇರೆ ಬೇರೆ ರೀತಿ ಹೇಳಿದರೆ ಇದಕ್ಕಿಂತ ಅವುಗಳಾವುವು ಸಮರ್ಥ ಧ್ವನಿಯನ್ನು ನೀಡಲಾರವು. ಏಕೆಂದರೆ ಸಾಮನ್ಯರು ಅಸಾಮಾನ್ಯರು ಒಂದಿಲ್ಲ ಒಂದು ಬಗೆಯಲ್ಲಿ ಎಲ್ಲರೂ ಸಂಶೋಧಕರಾಗಿಯೇ ಇರುತ್ತಾರೆ. ಈ "ಗ್ರಂಥ ಸಂಪಾದನೆಯಲ್ಲಂತೂ ಸಂಶೋಧನೆಯ ಪಾತ್ರ ಪ್ರಾಧಾನ, ಸ್ಥನ ಶಕ್ತಿಯ ಜೊತೆಗೆ ಪಾಂಡಿತ್ಯವು ನಿಶಿತವಾಗಿರಲ ಬೇಕು. ವಸ್ತು ನಷ್ಠ ದೃಷ್ಟಿಯು ಸಂಶೋಧನೆಯ ಆದ್ಯ ಹಾಗೂ ಪರಮುಖ ಲಕ್ಷಣವಾದರೂ ಪ್ರತಿಭೆ ಮತ್ತು ಕಲ್ಪನೆಗಳಿಗೆ ಅಲ್ಲಿ ತಮ್ಮದೇ ಆದ ಸ್ಥಿತಗೊಂಡ ಸ್ಥಾನವಿದೆ. "ಆದರೆ ಸಂಶೋಧಕ ಭಾವುಕನಾಗಬಾರದು. ಏಕೆಂದರೆ ಅವನೂ ಮನುಷ್ಯ ಹೀಗಾಗಿ ಅವನು ಕಲ್ಪನಾ ರಹಿತನಾಗರಲಾರ. ಭೂಮಿಗೆ ಬಿದ್ದ ಸೇಬನ್ನು ಕಂಡ ನ್ಯೂಟನ್ ಅಸಾಧಾರಣ ಕಲ್ಪನಾಶೀಲನಾಗದಿದ್ದಿದ್ದರೆ ವಿಶ್ವತತ್ವ ಅಲ್ಲಿಯೇ ಮಾಯವಾಗುತ್ತಿತ್ತು. ಫ್ಯಾರಡೆ, ಕಡಲಿನ ಮಿಂಚು ಮೀನುಗಳ ಮೂಲಕ ವಿದ್ಯುತ್ ಶಕ್ತಿಯ ಸೆರಗನ್ನು ಕಂಡು ವಿಶ್ಲೇಷಣೆ ಮಾಡಿ ಲೋಕಹಿತವನ್ನು ತನ್ನ ಅಸದೃಶ ಕಲ್ಪನಾಶಕ್ತಿಯಿಂದಲೇ ಮಾಡಲಿಲ್ಲವೇ? ಆದರೆ ಸಂಶೋಶನೆಯಲ್ಲಿ ಕಲ್ಪನೆಯ ಹಿನ್ನೆಲೆಯಲ್ಲಿದ್ದ ವಸ್ತುನಿಷ್ಟ ದೃಷ್ಟಿ ಮುನ್ನೆಲೆಯಲ್ಲಿರುವುದು ಅತ್ಯಗತ್ಯ" .

ಮತ್ತೆ ಸತ್ಯವೆನ್ನುವುದು ವಸ್ತು ನಷ್ಟವಾದದ್ದಷ್ಟೇ ಅಲ್ಲ, ಆತ್ಮ ನಷ್ಟವೂ ಹೌದು. ಸಂಶೋಧಕ ವಸ್ತು ನಿಷ್ಠ ಸತ್ಯದ ಅವಿಷ್ಕಾರದಲ್ಲಿ ತೊಡಗಿದ್ದರೆ, ಕವಿ ಋಷಿಗಳು, ಆತ್, ನಷ್ಟ ಸತ್ಯದ ಅನುಭೂತಿಯಲ್ಲಿ ನಿರತರು. ಪರಯೋಗ ಎಂದಾಗ ನಮಗೆ ಗಾಂಧೀಜಿ ನೆನಪಾಗುತ್ತಾರೆ. ಗಾಂಧೀಜಿ ತಮ್ಮ ಜೀವನವನ್ನೆಲ್ಲಾ ಸತ್ಯ ಶೋಧನವೆಂದೇ ಬಗೆದರು. ತಮ್ಮ ಆತ್ಮಕಥನವನ್ನು ಸತ್ಯ ಪ್ರಯೋಗಾನುವವೆಂದೇ ಭಾವಿಸಿದರು, ಕಾಲಪಠಾರ್ಥ ನಿರ್ಣಯಕಾರರಂತೆ ಅವ್ಯಕ್ತವಾದ ಚರಂತನ ಸತ್ಯದ ಅವಿಷ್ಕಾರದಲ್ಲಿ ತೊಡಗಿರುವ ಕವಿ ರುಷಿಗಳಾಗಲಿ, ಅವರ ಕೃತಿಗಳಲ್ಲಡಗಿರುವ ನಿಜಾರ್ಥವನ್ನು ಹೊರಗೆಡಹುವ ವಿಮರ್ಶಕ- ವ್ಯಾಖ್ಯಾನಕಾರರಾಗಲೀ ಸತ್ಯಸಂಶೋಧಕರೆಂಬ ಹೆಸರಿಗೆ ಪಾತ್ರರಾಗಿದ್ದಾರೆ" ಹೀಗಾಗಿ ಮಹಾತ್ಮ ಗಾಂಧೀಜಿ ಅವರು ಕೂಡ ಸತ್ಯಶೋಧಕರ ಶ್ರೇಣಿಯಲ್ಲಿ ಪ್ರಮುಖರು.

ಈ ಮಾತನ್ನು ಉಲ್ಲೇಖಿಸುವಾಗ ಕ್ರಿಶ.1944ರಲ್ಲಿ ಐನ್‌ಸ್ಟೈನ್‌ರು ಮಹಾತ್ಮ ಗಾಂಧೀಜಿ ಅವರನ್ನು ಕುರಿತು ಹೇಳಿದ ಮಾತು ನೆನಪಾಗಿ ಜುಮ್ಮೆನ್ನುತ್ತದೆ. “ಅಧಿಕಾರದ ಬೆಂಬಲವಿಲ್ಲದೆ ಜನತಾ ಮುಖಂಡ, ತಾಂತ್ರಿಕ, ಯಾಂತ್ರಿಕ ಸಾಧನೆಗಳ ಸಹಾಯವಿಲ್ಲದೆ ತನ್ನ ವ್ಯಕ್ತಿತ್ವದ ಬಲದಿಂದಲೇ ಯಶ ಪಡೆದ ರಾಜಕಾರಣಿ. ಬಲದ ಪ್ರಯೋಗವನ್ನು ದೂರ ತಳ್ಳಿ ವಿಜಯಿಯಾದ ಹೋರಾಟಗಾರ, ಜ್ಞಾನ ಮತ್ತು ಅಚಲ ಶ್ರದ್ಧೆಯ ಬಲದಿಂದ ತನ್ನ ಜನರ ಉದ್ಧಾರಕ್ಕೆ ಶ್ರಮಿಸಿದ ಸರ್ದಾರ, ಯೂರೋಪಿನ ಕ್ರೌರ್ಯವನ್ನು, ಒಬ್ಬ ಸಹಜ ಮಾನವನ ಘನತೆ ಗೌರವಗಳ ದಟ್ಟ ಅಡಿಪಾಯದಲ್ಲಿ, ದಿಟ್ಟತನದಿಂದ ಎದುರಿಸಿ, ಸದಾ ಕಾಲದಲ್ಲಿ ಎತ್ತರವಾಗಿ ಏರಿದ ಶ್ರೇಷ್ಠ ಮಾನವ - ಇಂತಹವನೊಬ್ಬ ರಕ್ತ ಮಾಂಸವುಳ್ಳ ಶರೀರಿ, ಈ ನೆಲದಲ್ಲಿ ಅಡ್ಡಾಡಿದ ಉಸಿರಾಡಿದ ಎಂಬ ಮಾತನ್ನು ಮುಂದಿನ ಪೀಳಿಗೆ ನಂಬುವುದೇ ಕಷ್ಟ... ಆ ಅವರೇ ಮನಸ್ಸಾಕ್ಷಿಯಾಗಿ ಭಾರತ ಸ್ವಾತಂತ್ರ್ಯ ಸಾಧನೆಗಾಗಿ, “ಏಕಲಾ ಚಲೋರೆ' ಎಂದು ಸಾಗಿ ಜನಬಲ ಪಡೆದು ಸಕಲ ವಿಶ್ವ ಜನತೋ ಎಂದು



ಹಾಡುತ್ತಾ ಶಾಂತಿ ಯಂತ್ರದ ಪ್ರಯೋಗಾತ್ಮರಾಗಿ, ಆ ಸಂಶೋಧನೆಯ ಸಂಫಲವನ್ನು ಜನತಾ ಜನಾರ್ಧನ ವಾಗಿಸಿದರು” ಅವರೇ ಬರೆದ 'ನನ್ನ ಆತ್ಮ ಕಥೆ ಅಥವಾ ಸತ್ಯಾನ್ವೇಷಣೆ' ಎಂಬುದು ಅವರ ಬದುಕಿನ ಪ್ರಯೋಗದಲ್ಲಿ ಗುರಿ ಮುಟ್ಟಿದ ಸತ್ಯಾನ್ವೇಷಣೆಯ ಅನಾವರೆಗೊಂಡು ಸಂಶೋಧಕರಿಗೆ ಮಾರ್ಗದರ್ಶಿಯಾಗಿರುವ ಚಿರಂಜೀವಿ ಬೆಳಕು. (ಗಾಂಧಿ ಸ್ಮೃತಿ ಕಿರಣಗಳು - ಪ್ರೊ| ವಸಂತ ಕುಷ್ಠಗಿ, ಪುಟ 147, ಕಿರಣ 4, ಆ ಅವರೇ ಗಾಂಧೀಜಿ, ಸತ್ಯ ಸಂಶೋಧನೆಗೆ ತಾವೇ ಪ್ರಯೋಗಶಾಲೆಗೆ ಬೆಳಕಾದವರು.

ಶೋಧ-ಸಂಶೋದನೆಗಳಿಲ್ಲದೆ ಲೌಕಿಕ ಅಲೌಕಿಕ ಕ್ಷೇತ್ರದ ಅಂತಿಮ ಗುರಿಯಾದ ಸತ್ಯಾಸಷಾತ್ತಾದಾಗ ಸ್ವಾನಂದಪ್ರಾಪ್ತಿ, ಅರ್ಥಾತ್ ಅನ್ವೇಷಣೆಯಾಗದೆ ಸತ್ಯಾನಂದನಾಭವವು ಆಗುವುದೇ ಇಲ್ಲ? ಅದಿಲ್ಲದೆ ಅನುಭಾವದ ದಿಸೆಯ ಬಾಗಿಲು ತೆರೆಯಲಾರದು. ಈ ಸ್ಥಿತಿ ಸಂಪಾದನೆಗಾಗಿ ಸಂಶೋಧನೆಯ ಕುರಿತು ಜ್ಞಾನಗಳು ಆಡಿರುವ ಮಾತುಗಳಲ್ಲಿರುವ ಸತ್ಯಾರ್ಥವನ್ನು ತಿಳಿದುಕೊಳ್ಳುವುದು ಅನಿವಾರವಾಗಿದೆ. ಆಯ್ದ ಅಂತಹ ಸೂತ್ರರೂಪಿ ಮಾತುಗಳು: 'ಸಂಶೋಣದ' ಎಂದರೆ ಶುದ್ಧಿಗೊಳಿಸು, ತಿದ್ದು(ವ) ಎಂದರ್ಥ ಪರ್ಯಾಯವಾಗಿ ಇದಕ್ಕೆ ಹುಡುಕು' ಎಂಬರ್ಥ ಈಗ ಇದೇ ದೇಸಿ ಪದ ಎಲ್ಲರ ನಾಲಿಗೆಗಳಲ್ಲಿ ನಿಸ್ಸಂಶಯವಾಗಿಯೂ ಉಲಿದು ನಲಿದಾಡುವ ಶಬ್ದ, ಹುಡುಕಾಡುವುದೇ ಸಂಶೋಧಕನ ಪ್ರಧಾನ ಕಾರ್ಯ, ತನಗೆ ಗೊತ್ತಿಲ್ಲದೆ ಇದ್ದುದನ್ನು, ಗೊತ್ತಿದ್ದ ವಿಷಯಗಳಲ್ಲಿಯೂ ಇನ್ನಷ್ಟು ಹೊಸಹೊಸತನ್ನು ಕಂಡುಕೊಳ್ಳುವುದನ್ನು, ಗೊತ್ತಾದದನ್ನೆಲ್ಲ ಪುನಃ ಪುನಃ ವಿಶ್ಲೇಷಣೆಗೆ ಒಳಪಡಿಸಿ ವಿಮರ್ಶಿಸಿ ಸತ್ಯವನ್ನು ಪ್ರಕಟಿಸುವುದೇ ಆಗಿದೆ” . “ಕವಿ ತನ್ನ ಕಲ್ಪನೆಯಲ್ಲಿ ತನ್ನದೇ ಆದ ಒಂದು ಸಂಗತಿಯನ್ನು ಕಟ್ಟಿ

ಚಿತ್ರಿಸಬಹುದು. ಆದರೆ ಸಂಶೋಧಕ ತನ್ನಿಂದ ಮಾತ್ರ ಹೇಲಬೇಕು” . ಅದನ್ನೇ ಹೇಳುತ್ತಾನೆ. “ವಾಸ್ತವ ಸಂಗತಿ ಅವನ ಮೂಲಕ ಪ್ರಕಾಶಕ್ಕೆ ಬರುತ್ತದೆ” ಹಾಗಾಗಿ “ಸಂಶೋಧನೆಯೆಂದರೆ ಒಂದು ಪ್ರಮಾಣಿಕ ಪ್ರಯತ್ನ ಅದರಲ್ಲಿ ಸತ್ಯದ ದರ್ಶನವಾಗದೆ ಹೋಗಬಹುದು. ಆದರೆ ಮುಂದಿನ ಯಶಸ್ಸಿನಲ್ಲಿ ಹಿಂದಿನ ಪ್ರಯತ್ನಗಳೂ ದಾರಿದೀಪವಾಗಿರುತ್ತವೆ. ಜಯಾಪಜಯಗಳು ಮಧ್ಯದಲ್ಲಿ ಸತ್ಯದರ್ಶನವಾಗುವುದು ನಿಶ್ಚಿತ. ಏಕೆಂದರೆ ಈ ಕಡಲಿನಲ್ಲಿ ಈಜಬೇಕು, ಈಜಿ, ಈಜುತ್ತಾ ಗೆಲ್ಲಬೇಕು. ಗೆಲುವು ನಡೆದು ಬಂದ ದಾರಿಯ ಮುಖಾಂತರ. ಸಂಶೋಧನೆ ಎನ್ನುವುದು ಜ್ಞಾನದ ಹುಡುಕುದೀಪ. (Search light) ಆ ಬೆಳಕಿನಲ್ಲಿ ಸಂಶೋಧಕನು ಸತ್ಯವನ್ನು ಕಾಣುವ ಉತ್ಕಟ ಇಚ್ಛೆಯಿಂದ ಸಾಗುತ್ತಾನೆ. ಅಲ್ಲಿ ಆತನ ಪ್ರಾಮಾಣಿಕ ಪ್ರಯತ್ನವೇ, ಗುಡಿಗಟ್ಟುತ್ತದೆ. ಅತನಿಗೆ ಅಂತಿಮ ಗುರಿ ಸತ್ಯದರ್ಶನವಾಗಿರುವುದರಿಂದ, ಸಂಶೋಧಕನು ತಾನೇ ಮೂಲ ಆದರ್ಶಗಳಿಗೆ ಹೋಗುವುದು ಶ್ರೇಷ್ಠ ಅದು ಸಾಧ್ಯವಾಗದೇ ಇದ್ದರೆ ಆ ವಿಷಯಕ್ಕೆ ಸಂಬಂಧಪಟ್ಟಂತೆ ಇತರ ಬರಹಗಳನ್ನು ಓದಿ, ಆ ಸಾಮಗ್ರಿಯನ್ನು ತೀವ್ರ ಚಿಂತನೆಗೆ ಒಳಮಾಡಿ, “ಒಂದು ವಿಷಯದ ಸಂಗತಿಗೆ ಸಂಬಂಧಿತ ಹೊಸ ಬೆಳಕನ್ನು ಬೀರಿದರೆ ಆ ಮೂಲಕ, ಸರ್ವಸಮ್ಮತವಾದ ವ್ಯಾಖ್ಯಾನವೊಂದನ್ನು ನೀಡಿದರೆ ಅಂತಹ ಕಾರ್ಯವು ಮಾತ್ರ ಸಂಶೋಧನೆ, ಈ ದಿಸೆಯಲ್ಲಿ ಸಂಶೋಧಕನು ತನ್ನ ಸ್ವಂತ ಅನುಭವದ ಶ್ರಮದಿಂದ ತನ್ನ ಮಾರ್ಗವನ್ನು ತಾನೇ ಕಂಡುಕೊಳ್ಳುತ್ತಾನೆ” (ಡಾ. ಎಂ.ಚಿದಾನಂದಮೂರ್ತಿ ಸಂಶೋಧನೆ 1967)

ಜಲ ಕಲ್ಯಾಣ ಕಿರಣ

"Research Simply put is in endeavour to problems through the application of scientific methods to the knowable universe" ( ಭಂಡಾರಕರ; ಮೆಥಡಾಲಜಿ ಟೆಕ್ನಿಕ್ ಆಫ್ ಸಫಷಿಯಲ್ ರೋಸರ್ಚ್, ಪುಟ 1; ಸಂಶೋಧನ ವಿಧಾನ, ಪ್ರಭಸ ಬಿಡುಗಡೆ 1989)

“ಜನಪ್ರಿಯವಾಗಿರುವ ನಂಬಿಕೆ, ಕಲ್ಪನೆ, ಸುದ್ದಿಗಳನ್ನು ತಲಸ್ಪರ್ಶಿಯಾಗಿ ಶೋಧಿಸಿ ಆಧಾರಸಹಿತವಾಗಿ ಸಮರ್ಥಿಸುವ ಅಥವಾ ನಿರಾಕರಿಸುವ ಪ್ರಕ್ರಿಯೆಯನ್ನು ಸಂಶೋಧನೆಯೆನ್ನಬಹುದು' (ಮಹಾಬಲೇಶ್ವರರಾವ್ ಸಂಶೋಧನ ಮಾರ್ಗ 1996 ಪುಟ 10)

“ಅಜ್ಞಾತವಾಗಿರುವುದನ್ನು ವೈಜ್ಞಾನಿಕವಾಗಿ ಜ್ಞಾತವಾಗಿರುವುದು, ಜ್ಞಾತವಾಗಿರುವುದನ್ನು ಪುನರ್ ವಿವೇಚನೆಯ ಮೂಲಕ ಸ್ಪಷ್ಟ ಪಡಿಸುವುದು ಅಥವಾ ವ್ಯವಸ್ಥಿತಿ ರೂಪದಲ್ಲಿ ಜೋಡಿಸುವುದೇ ಸಂಶೋಧನೆ” (ಡಾ. ಬಿ.ವಿ.ಶಿರೂರ, ಶ್ರೀಮುಖ ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರಿ ಅಭಿನಂದನಾ ಗ್ರಂಥ 1999 (ಪುಟ 50)

ಸಂಶೋಧನೆಗೆ ಕುರಿತಂತೆ ಕ್ಷಿತಿಜವು ವಿಸ್ತಾರವಾಗುತ್ತಿರುವುದಕ್ಕೆ ಮುನ್ನ, ಅಂತರ ಶಿಸ್ತೀಯ ಪರಿಕಲ್ಪನೆ ರೂಪುತಾಳುವ ಮುನ್ನ ಕಾವ್ಯ ಸಾಹಿತ್ಯ ಕಲೆ ಕುರಿತ-ಸಂಶೋಧನೆ ನಡೆಸಿ ಮೀಮಾಂಸಕರು ನಿರ್ದಿಷ್ಟ ವಿಷಯವನ್ನು ಹೇಳಲು ಪ್ರಯತ್ನಿಸಿದ್ದಾರೆ. "ಬ್ರಹ್ಮ ಸೃಷ್ಟವಾದ ಜಗತ್ತಿನಲ್ಲಿ ಸ್ವತಸಿದ್ಧವಾಗಿರಬಹುದಾದ ಲತೆ ಪುಷ್ಪ ಪಕ್ಷಿಗಳ ಗಾನ, ಬೆಳದಿಂಗಳ ಜೀವನ ಸಮಸ್ಯೆ, ಸಂಸಾರ ಮಾಯೆ, ಬಾಲರೀತಿ, ವಿಷಯ ಸುಖ ಮುಂತಾದವುಗಳಲ್ಲಿ ಸುಖ ಮುಂತಾದವುಗಳಲ್ಲಿ ಸುಖ ಕೊಡತಕ್ಕಂತಹ ಅಂಶವು ಒಂದಿದೆ" ಕನ್ನಡ ಕೈಪಿಡಿ ಸಂಪುಟ-1, ಪುಟ 318, 317, ಮೈಸೂರು ವಿಶ್ವ ವಿದ್ಯಾಲಯ ಪ್ರಕಟಣೆ- 2016) ಇದನನು ರಮಣೀಯತೆ, ರಮನೇಯತೆ ಎಂದು ಕರೆಯಬಹುದು. ಈ ಸುಖ ಪ್ರಾಪ್ತಿಯಲ್ಲಿರುವ ರಮಣೀಯತೆಯನ್ನು ಬ್ರಹ್ಮಸ್ಪಷ್ಟವಾದ ಪ್ರಪಂಚದಲ್ಲಿಯೇ ತತ್ಸದೃಷವಾದ ಕಲ್ಪಿತ ಪ್ರಪಂಚವನ್ನೇ ಶಬ್ದ ರೇಖೆ ಬಣ್ಣ ಮುಂತಾದವುಗಳಿಂದ ಕಲಾನಿಪುಣನು ರಚಿಸಿದ ಕುಶಲ ಕರ್ಮದಲ್ಲಿ ಕಾಣಬಹುದು. ಈ ರಮಣೀಯತೆಯುಳ್ಳ ಸಂಗತಿಯನ್ನು ಶಬ್ದಗಳಿಂದ ರಮಣೀಯವಾಗಿ ರಚಿಸಿದರೆ ಅದು ಕಾವ್ಯವಾಗುತ್ತದೆ. ಇದನ್ನು ಭಾಷೆಯಲ್ಲಿ ಇಳಿಸಬಲ್ಲವ ಕವಿ, ಅವನ ಕುಶಲ ಕರ್ಮವೇ ಕಾವ್ಯ. ಕಾವ್ಯಗಳ ಸಮುದಾಯವೇ ಸಾಹಿತ್ಯ ಈ ಕುರಿತು ಬೇರೆ ಬೇರೆ ವಿಮರ್ಶಕರು ತಮ್ಮ ತಮ್ಮ ಜ್ಞಾನದ ಪ್ರಕಾರ ಲಕ್ಷಣಗಳನ್ನು ಹೇಳಿದ್ದಾರೆ. ಈ ಲಕ್ಷಣಗಳನ್ನು ಆಧರಿಸಿ ಕಾವ್ಯ ವಿಮರ್ಶೆ ಬೆಳೆದಿದೆ. ಇದೇ ನೆಲೆಯಿಂದ ಸಂಶೋಧನೆಯು ತನ್ನ ಆಯಾಮಗಳನ್ನು ವಿಸ್ತರಿಸಿಕೊಂಡು ಎಲ್ಲೆಡೆಯೂ ಸತ್ಯಾನ್ವೇಷಣೆ ನಡೆಸಿ ಜೀವನ ಕಾವ್ಯದ ಉದ್ದೇಶವಾದ ಕ್ರಿಯಾಶೀಲ ಬದುಕಿನಲ್ಲಿ ನೆಮ್ಮದಿಯನ್ನು ಹುಡುಕಿ ಕೊಡಲು ಮುಂದಾಗಿದೆ. ಕಾವ್ಯದ ಉದ್ದೇಶದ ಗುರಿ ಆನಂದ ಪ್ರಾಪ್ತಿ ಎಂಬುದನ್ನು ನೆನಪಿಸಿಕೊಳ್ಳೋಣ. ಈ ದಿಸೆಯಲ್ಲಿ ನಮ್ಮ ಸಹಾಯಕ್ಕೆ ಬರುವ ಸಂಸ್ಕೃತ ಮತ್ತು ಕನ್ನಡ ಮೀಮಾಂಸಕಾರರ ವಿಭಿನ್ನ ನೆಲೆಯಿಂದ ಬರುವ ಸೂತ್ರಗಳನ್ನು ಗಮನಿಸಿದಾಗ, ಆ ಸೂತ್ರಗಳ ಅಂತಃಕರುಣೆಯಲ್ಲಿ ರಮನೀಯತೆಯು ಆನಂದವನ್ನುಂಟು ಮಾಡಿದ್ದು

ತತ್ಫಲವಾಗಿ ಜೀವನ ಭವಿಷ್ಯವು ಸುಂದರ ವರ್ತಮಾನವಾಗುತ್ತಾ ನಡೆದದ್ದು ಅಂತಹ ಪ್ರಮುಖರು ನೀಡಿದ ಸೂತ್ರಗಳ ಪಾಠ,

ಭರತನು ಕಾವ್ಯದಲ್ಲಿ ರಸಕ್ಕೆ ಪ್ರಾಶಸ್ತ್ಯ ನೀಡಿದ್ದಾನೆ. ಭಾಮಹನು ಶಬ್ದಾರ್ತ ಸಹಿತೌ ಕಾವ್ಯಂ ಎಂದಿದ್ದಾನೆ; ದಂಡಿಯು ಇಷ್ಟಾರ್ಥದಿಂದ ಕೂಡಿದ ಪದಸಮೂಹವೇ ಕಾವ್ಯ ಶರೀರ, ಹತ್ತು ಗುಣಗಳೇ ಪ್ರಾಣವೆಂದು ಯೋಚಿಸಿದ್ದಾನೆ, ವಾಮನನು ಗುಣಾಲಂಕಾರಗಳಿಂದ ಶೋಭಿತವಾದ ಶಬ್ದಾರ್ಥಗಳೇ ಕಾವ್ಯ. ಕಾವ್ಯವು ಅಲಂಕಾ ಅಲಂಕಾರವೆಂದರೆ ಸೌಂದರ್ಯ ರೀತಿಯು ಕಾವ್ಯದ ಆತ್ಮ; ಮಮ್ಮಟನು ದೋಷವಿಲ್ಲದೆಯೂ ಗುಣಾಲಂಕಾರಗಳಿಂದ ಕೂಡಿಯೂ ಇರುವ ಶಬ್ದಾರ್ಥಗಳೆ ಕಾವ್ಯ. ಕೆಲವು ಕಡೆ ಅಲಂಕಾರಗಳಿಲ್ಲದೆಯೂ ಕಾವ್ಯವಾಗುತ್ತದೆ. ಕುಂತಕನು ವಕ್ರೋಕ್ತಿಯುಳ್ಳ ಪಾರ್ಶ್ವ ವಿನ್ಯಾಸದಲ್ಲಿ ಶಬ್ದಾರ್ಥಗಳು ಒಟ್ಟಿಗೆ ಕಾವ್ಯ; ಆನಂದವರ್ಧನನ ಕಾವ್ಯಕ್ಕೆ ಧ್ವನಿಯೇ ಆತ್ಮ, ರಸವೇ ತಾಣ. ಕವಿರಾಜ ಮಾರ್ಗದಲ್ಲಿ ಧ್ವನಿಯೆಂಬುದು ಅಲಂಕಾರಕ್ಕೆ ಬಂದಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬು. ವಿಶ್ವನಾಥನು ರಸಾತ್ಮಕವಾದ ವಾಕ್ಯವು ಕಾವ್ಯ. ಅದು ದೋಷದಿಂದ ಕೀಳೂ, ಗುಣಾಲಂಕಾರ ರೀತಿಗಳಿಂದ ಮೇಲೂ ಆಗಿರುತ್ತದೆ. ನೃಪತುಂಗನಾಸಾನದ ಶ್ರವಿಜಯನು ಕಾವ್ಯಂ'ಸವಿಶೇಷ ಶಬ್ದ ರಚನಂ ವಿವಿಧಾರ್ಥ ವ್ಯಕ್ತಿ ವರ್ತಿತಾಲಂಕಾರಂ (1.22); ಎಂದು ವಿಶ್ಲೇಷಿಸಿದರೆ, ನಾಗವರ್ಮನು ಇತಿ ಶಬ್ದಾರ್ಥಂಗಳ್ ತತ್ವರತೆಯನದು ಕಾವ್ಯಮದ ರರರಳುಚಿ ಕಾರ್ಥಾಂ ತರವಾಚಿಸಭ್ರಮವಬಾ! ಸರೂಪಮಾಹ್ಲಾಕಾರಿಯಪ್ಪುದರ್ಥಂ॥ (2-40) ಎಂದು ತಿಳಿಸಿದ್ದಾನೆ. ಉದಯಾದಿತ್ಯನು "ಪಡೆದರ್ಥಮನಳವಡಿಸಿದ ಪದಾಳಿ ಕಾವ್ಯದ ಶರೀರಮೆನಕುಂ॥ ಅಸುಗಳೆನಕ್ಕು, . . . .ಈರೈದು ಗುಣ, (ಪುಟ 3.14) (ಕನ್ನಡ ಕೈಪಿಡಿ ಸಂಪುಟ 1; ಮೈಸೂರು ವಿ.ವಿ. 2019; ಪುಟ 316)

ಬಹುತೇಕ ಲಾಕ್ಷಣಿಕರೆಲ್ಲರೂ ಕಾವ್ಯ ಶಬ್ದ ರೂಪವೆಂದು ಅದಕ್ಕೆ ಅರ್ಥವುಂಟೆಂದೂ ಒಪ್ಪುತ್ತಾರೆ. ಆದರೆ ಅರ್ಥ ಮುಖ್ಯವೆಂದು, ಶಬ್ದ ಮುಖ್ಯವೆಂದು, ಎರಡೂ ಮುಖ್ಯವೆಂದು ಕೆಲವರು ಹೇಳಿದರೆ, ಅಲಂಕಾರದ ಬಗ್ಗೆಯೂ ಈ ಮೂರು ಅಭಿಪ್ರಾಯದವರೂ ಒಂದೇ ಬಾವವಾಗಿ ಕಾಣುತ್ತಾರೆ. ಕಾವ್ಯ ಶರೀರ ಪ್ರಾಣಗಳ ಕುರಿತು ಇದೆ ಬಗೆಯ ಅಭಿಪ್ರಾಯದತ್ತ ಒಲವನ್ನು ಹೊಂದಿದ್ದಾರೆ. ಆದರೆ ಕಾವ್ಯದ ಆತ್ಮದ ಕುರಿತು ಇರುವ ಭಿನ್ನ ನಿಲುವಿನಲ್ಲಿ, ಧ್ವನಿ, ರೀತಿ, ವಕ್ರೋಕ್ತಿ, ರಸಗಳು ಸ್ಥಾನ ಪಡೆದಿವೆ. ಒಟ್ಟಾರೆ ಶಬ್ದಾರ್ಥಗಳು ಒಂದಕ್ಕೊಂದು ಪೂರಕ. ಶಬ್ದದ ಅಸ್ಫೋಟದಿಂದಲೇ ಅರ್ಥ ಪ್ರಾಪ್ತಿ, ಹೀಗೆ ಇವೆರಡೂ ಮುಖ್ಯವೇ ಹೌದು.

ಈ ವಿವೇಚನೆಯಲ್ಲಿ ಕಾವ್ಯಾರ್ಥದ ಬದುಕು ಸಾಗಿದಂತೆ, ವಿಚಾರ ವ್ಯಾಪ್ತಿಯಲ್ಲಿ ವಿಜ್ಞಾನದ ಕೌತುಕಗಳು ನಿಜ ಬದುಕಿನಲ್ಲಿಯೂ ಬಹಳಷ್ಟು ಪ್ರಭಾವ ಬೀರಿ, ಜೀವನವು ಸರ್ವತೋಮುಖವಾಗಿ ಬೆಳೆಯಲು ಜ್ಞಾನಪ್ರದಾನದ ಎಲ್ಲಾ ಶಿಸ್ತುಗಳು, ಅಪ್ಯಾಯಮಾನವಾಗ ತೊಡಗಿದವು. ಆಗ ಸಂಶೋಧನೆಯ ವ್ಯಾಖ್ಯೆ ಮತ್ತು ಸಂಶೋಧಕನ ಕೆಲಸದ

ವ್ಯಾಪ್ತಿಯಲ್ಲಿ ಹೊಸತನವು ರೋಚಕವಾಗಿ ಸ್ಪಂದಿಸತೊಡಗಿತು. ಮನುಷ್ಯ ಸಮಾಜವು ವಿಸ್ತ್ರತ ಆಯಾಮಗಳನ್ನು ಐಕತಗೊಳಿಸಿಕೊಂಡು ಅಂತಿಮ ಗುರಿಯಾದ ಆನಂದ ಪ್ರಾಪ್ತಿಗೆ



ಸತ್ಯಾನ್ವೇಷಣೆ ನಡೆಸಿತು. ಆಗ ಎಲ್ಲಾ ಶಿಸ್ತುಗಳು ಏಕೋರಸವಾಗಿ ಆನಂದವನ್ನೇ ಧಾರೆಯೆರೆಯತೊಡಗಿ ಪ್ರಪಂಚದ ವ್ಯಾಪ್ತಿಯನ್ನು ಅರ್ಥಾತ್ ಸೃಷ್ಟಿಯ ವ್ಯಾಪ್ತಿಯನ್ನು ಹಿಗ್ಗಿಸಿ ಹಿಗ್ಗಿಸಿ ರೂಪಾಂತರವಾಗಿಸಿಕೊಂಡು ತೃಪ್ತಿಯನ್ನು ಪಡೆಯಲು ಧಾವಿಸಿತು.

ಎಲ್ಲ ಭಾಷಾ ಸಾಹಿತ್ಯ ಸಂಸ್ಕೃತಿಯಲ್ಲಿರುವಂತೆ ಕನ್ನಡದಲ್ಲಿಯೂ ಅಂತಹ ಶಿಸ್ತೀಯ ಸಂಶೋಧನೆಗಳು ಅಧಿಕಗೊಂಡು ಒಂದಕ್ಕೊಂಡ ಪೂರಕವಾಗಿ ಒಂದು ನೂತನ ಅಧ್ಯಯನದ ಶಿಸ್ತು ಆಯುಷ್ಕಾರ ಪಡೆದು ವಿಕಾಸವಾಗುತ್ತ ಸಾಗಿದೆ. ಸೃಷ್ಟಿಯನ್ನು ಅಂಗೈನಲ್ಲಿಯಾಗಿಸಿಕೊಂಡು ಸಮನ್ವಯ ಸಾಧನೆಯಲ್ಲಿ ಅಪರೂಪವಾದ ರಮಣೀಯವವಾದ ಕ್ಷಿತಿಜದ ಅಂಚನ್ನು ಸಾಧಿಸಿಕೊಳ್ಳಲು ಕೌಶಲ ತೆರೆದುಕೊಂಡಿದೆ. ಈ ಹಿಂದೆ “ಕನ್ನಡ ಸಾಹಿತ್ಯ ಸಂಸ್ಕೃತಿ ಭಾಷೆ ಜಾನಪದ ಶಾಸನ ಇತ್ಯಾದಿ ಅಧ್ಯಯನಗಳು ಆಳವಾದ ಪರಿವೀಕ್ಷಣೆಗೆ ಒಳಗಾದಂತೆ ಅವುಗಳು ಅನ್ಯ ಶಿಸ್ತುಗಳ ಮೇಲೆ ಬೀರುತ್ತಿರುವ ಪ್ರಭಾವ ಮತ್ತು ಅವುಗಳೊಂದಿಗೆ ಹೊಂದಿರುವ ಅವಲಂಬನೆಗಳು ಗೋಚರವಾಗಿ ಅತ್ತಲೂ ದೃಷ್ಟಿ ಹಾರಿಯಿಸುವ ಸಂಶೋಧನೆಯ ಫಲವಾಗಿ ಅಂತರ ಶಿಸ್ತೀಯ ಅಧ್ಯಯನ ರೂಪುಗೊಂಡಿದೆ” (ಅಂತರ ಶಿಸ್ತೀಯ ಸಂಶೋಧನಾ ವಿಧಿ ವಿಧಾನಗಳು ಸಂ. ನಾ.ಗೀತಾಚಾರ್ಯ; ಪೀಠಿಕೆ) ಇದರಿಂದ ಭಿನ್ನ ವಿಭಿನ್ನ ಫಲಿತಾಂಶಗಳು ಈಡಾಗಿ ಧಾವಿಸತೊಡಗಿವೆ. ಅವೆಲ್ಲಾ ಮನುಷ್ಯನ ಬದುಕನ್ನು ಮೂಲ ಸ್ವರೂಪಕ್ಕೆ ಪೂರಕವಾಗಿಯೋ, ಅವೇ ಪರತ್ಯೇಕವೋ ಎಂಬಂತೆ ರುಚಿ ನೀಡತೊಡಗಿವೆ. ದೂರ ಸಂಬಂಧದಲ್ಲಿರುವ “ಸಾಮಾಜಿಕ, ಆರ್ಥಿಕ ಮನೋವೈಜ್ಞಾನಿಕ, ರಾಜಕೀಯ, ಭಾಷಿಕ, ಸಾಂಖ್ಯಿಕ, ಐತಿಹಾಸಿಕ, ವೈಜ್ಞಾನಿಕ, ತಾಂತ್ರಿಕ, ಶಾರೀರಿಕ, ಹೀಗೆ ಹಲವಾರು ಪರಿಣಾಮವನ್ನು ಬೀರುತ್ತಾ ಅಂತರ ಶಿಸ್ತೀಯ ಅಧ್ಯಯನದ ಕ್ಷಿತಿಜವು ಬಹುದೂರ ಚಾಚತೊಡಗಿದೆ. ಸಾಹಿತ್ಯದೊಂದಿಗಷ್ಟೇ ಅಲ್ಲದೆ ಪರಸ್ಪರ ಅಧ್ಯಯನಕ್ಕೂ ಇದು ನಾಂದಿಯಾಗಿದೆ. “ಕನ್ನಡ ಸಂಶೋಧನೆಯ ಆಯಾಮಗಳು ವಿಸ್ತರಿಸುತ್ತಿದ್ದಂತೆ, ಭಾಷಾಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ, ಮಾನವ ಶಾಸ್ತ್ರ, ಜಾನಪದಗಳ ನೆರವು ಪಡೆಯುವುದು ಅಧಿಕವಾಗಿದೆ. ಸಾಹಿತ್ಯ ಸಂಶೋಧಕರು ಇತಿಹಾಸವನ್ನು ಸಾಹಿತ್ಯಕ್ಕೆ ಅನ್ವಯಿಸಿ ಬರೆಯುವುದು ಹೆಚ್ಚಾಗಿದೆ. ಜೊತೆಗೆ ಇತರ ಅಧ್ಯಯನ ವಿಭಾಗಗಳ ಸಹಯೋಗದೊಂದಿಗೆ ಅಂತರ್ವಿಭಾಗೀಯ ಸಂಶೋಧನೆಯು ತುರಿಸಿನಿಂದ ಸಾಗಿದೆ. ಇದು ಮುಂದೆ ಕನ್ನಡದಲ್ಲಿ ಹೊಸ ತಿರುವು ಪಡೆಯುತ್ತದೆ. (ಆಶ್ವಿ ಎಸ್. ಸುಂದರಂ ಶ್ರೀಮುಖ ಪುಟ 583)

ನನಗನ್ನಿಸಿದ ಪ್ರಕಾರ ಇಂದಿನ ತಂತ್ರಜ್ಞಾನ ವಿಜ್ಞಾನ ಅಗಾಧವಾದ ಸಂಶೋಧನೆಗಳಿಂದಾಗಿ ಅಂತರಗ್ರಹ, ಅಂತರ ವಿಶ್ವಗಳ ಚಲನವಲನಗಳ ಕುರಿತು ಅಧ್ಯಯನ ನಡೆದು ಅಲ್ಲೆಲ್ಲಾ ಮಾನವ ತನ್ನ ವಿಜಯೀ ಬಾವುಟವನ್ನು ಹಾರಿಸುವ ದಿನ ದೂರವಿಲ್ಲ. ಹೀಗೆ ಈ ಎಲ್ಲ ಮುಂದುನ ಹೆಜ್ಜೆಗಳು ಶಿಸ್ತುಗಳ ಗುಂಪಾಗಿ ಶೋಧನಡೆಸಿ ಮನುಷ್ಯನ ಬದುಕಿನ ಹೆಜ್ಜೆಗಳಿಗೆ ವಿಸ್ತಾರವಾದ ಪರಿಧಿಯನ್ನು ನಿರ್ಮಿಸಿಕೊಡುತ್ತದೆ. ಹಕ್ಕಿ ಹಾರುತ್ತಲೇ ಇರುತ್ತದೆ. ತನ್ನ ಗೂಡುಗಳನ್ನು ಪ್ರಕೃತಿಯಾದ್ಯಂತ ಸೃಷ್ಟಿಸಿಕೊಂಡು, ಸ್ಥಿರತೆಯನ್ನು ತಂದುಕೊಂಡು ರೂಪಾಂತರ ವಿಶೇಷತೆಯೂ ಸಂಶೋಧನೆ ವಿಸ್ತಾರಗೊಳಿಸುತ್ತಲೇ ಸಾಗಿ ಆನಂದದ ಬ್ರಹ್ಮಾಂಡವು ಹಿಗ್ಗುತ್ತಲೇ ಹೋಗುತ್ತದೆ.



ಈ ವಿಸ್ತೃತ ಚಿಂತನಾ ವಿಶ್ಲೇಷಣೆಗೆ ಡಾ. ನಾ.ಗೀತಾಚಾರ್ಯರು ಹೇಳುವ ಮಾತುಗಳು ಅರ್ಥಪೂರ್ಣವಾಗುತ್ತವೆ. ಅವರು ಸಮರ್ಥವಾಗಿ ಹೇಳುವುದು ಹೀಗೆ: ಸಂಶೋಧನೆ ಎನ್ನುವುದು ಸಂಶೋಧಕ ಮತ್ತು ವಿಧಿ ವಿಧಾನ ಎಂಬ ಎರಡು ದೃಷ್ಟಿ ಮೈ ಮಾಟ ಹೊಂದಿರುವ ಸಮನ್ವಯ ನಾಣ್ಯ. ಕನಿಷ್ಟ ಮಟ್ಟದ ಊಹೆ ಗರಿಷ್ಟ ಮಟ್ಟದ ವಿಶ್ಲೇಷಣೆಯಿಂದ ಸತ್ಯಾನ್ವೇಷಣೆಗೆ ಮಾಡಬೇಕಾದ ಸತ್ಯಶುದ್ಧಕಾಯಕ – ಈ ಸಂಶೋಧನೆ- ಸಂಶೋಧನೆ- ಅಂಥಶಿಸ್ತೀಯ ಸಂಶೋಧನೆ ಎರಡರಲ್ಲಿ ಭಿನ್ನತೆ ಇಲ್ಲ. ಸಂಶೋಧನೆಯ ಮುಂದುವರೆದ ವಿಸ್ಕೃತ ಅಧ್ಯಯನವೇ ಅಂತರ ಶಿಸ್ತೀಯ ಸಂಶೋಧನೆ. "ಅಂತರಶಿಸ್ತೀಯ ಸಂಶೋಧನೆ ವಿಧಿ ವಿಧಾನಗಳು; ಸಂ. ನಾ.ಗೀತಾಚಾರ್ಯ; xvi ;19999) ಈ ಒರೆಗಲ್ಲಿಗೆ ಇಂದಿನ ವೈವಿಧ್ಯತೆಯ ಸಂಶೋಧನಾ ಲಕ್ಷಣಗಳನ್ನು ಸಾಧ್ಯವಾದ ಮಟ್ಟಿಗೆ ಅರ್ಥೈಸಿಕೊಳ್ಳೋಣ. ಈ ಅರ್ಥಪ್ರಕಾಶದಲ್ಲಿ ಸಹಕಾರಗೊಂಡು ಕೈಜೋಡಿಸುವ ಜಂಟಿ ಶಿಸ್ತುಗಳ ಪೂರಕಕ್ಕೆ ಸಾಧ್ಯವಾಗುವ ಸಂಶೋಧನೆ ಕುರಿತು ಕನ್ನಡದಲ್ಲಿಯೂ ನೇರ ಹಾಗೂ ಅನ್ವಯಿಕ ಸಾಹಿತ್ಯ ರಚನೆಗಳಿಎ ವಿಶೇಷ ಪ್ರೇರಣೆ-ಸ್ಫೂರ್ತಿಗಳು ದೊರೆಯಬಹುದು.

**ಸಮಾಜ ವಿಜ್ಞಾನ:** ಸಮಾಜ ಕಾರ್ಯ ಕ್ಷೇತ್ರಕ್ಕೆ ಬಂದಾಗ ಶಾಸ್ತ್ರಜ್ಞರ ಪ್ರಕಾರ ಮನುಷ್ಯನು ಅನ್ಯಪ್ರಾಣಿಗಳಿಂದ ಭಿನ್ನವಾಗಿರುವುದು ಆತನು ಪಡೆದ ಸಂಸ್ಕೃತಿಯ ಕಾರಣದಿಂದ. ಅದು ಅವನಿಗಷ್ಟೇ ಸೀಮಿತವಾದ್ದು. ಇಲ್ಲದಿದ್ದರೆ ಅವನು ಭೌತ ಆಕೃತಿಯಲ್ಲಿ ಮಾತ್ರ ಮಾನವನಾಗಿ ತೋರುತ್ತಾನೆ. ಆದರೆ ಅವನಿಗೆ ಒಂದು ಮನಸ್ಸು, ಒಂದು ಭಾಷೆ ಇರುವುದರಿಂದ ಆ ಮೂಲಕ ಸಾಹಿತ್ಯವನ್ನು ಸೃಷ್ಟಿಸಿ, ಸಂಗ್ರಹಿಸಿ, ಸಂಸ್ಕರಿಸಿ, ಸಂಸ್ಕೃತಿ ಮನೋಭಾವದ ಅನುಸೂಚನೆಯಲ್ಲಿ ವಿಶ್ವವ್ಯಾಪಾರವನ್ನು ಸಂಗ್ರಹಿಸಿ, ಸಂಸ್ಕರಿಸಿ, ಬಾಳ್ವವರ ಕೂಡ ಬಾಳುವ ಜೀವನ ಕಲಾ ಸಾಹಿತ್ಯವನ್ನು ರೂಢಿಸಿಕೊಂಡು, ಬದುಕಿನ ಮೌಲ್ಯಗಳಿಗೆ ಶಾಸ್ತ್ರೀಯ ನಿಷ್ಠೆಯನ್ನು ಬಾಳಿಸಿಕೊಂಡು ತಾನೇ ಆಕರವಾಗಿ ನಿಲ್ಲುತ್ತಾನೆ. ವಿಶೇಷತಃ ಆತನೇ ತಾನು ಪ್ರಯೋಗಕ್ಕೆ ಒಳಗಾದಾಗ ಆ

ಅನುಭವವನ್ನು ಇತರರ ಮೇಲೆ ಪ್ರಯೋಗಿಸಿ ಸಾಮ್ಯತೆ ಪಡೆದು ಅನಂತರ ಆ ಬೆಳಕಿನಲ್ಲಿ ಸುಂದರ ಸಮಾಜ ನಿರ್ಮಿತಿಗೆ ಸಾಜ ಕಾರ್ಯವು ನೆಮ್ಮದಿಯ ಸಮಾಜವನ್ನು ಕಟ್ಟಿಕೊಳ್ಳಲು ಪರಸ್ಪರ ಗೌರವಾನ್ವಿತೆಯಲ್ಲಿ ಸಾಧ್ಯವಾಗುತ್ತದೆ. ಇಂಥ ಪ್ರಯೋಗಗಳಿಂದ ಗುರಿ ಮುಟ್ಟಿದ ವರದಿಗಳ ಅಭಿವ್ಯಕ್ತಿ ಭಾಷೆಯ ಅಡಕವಾಗಿ ಮೊನಚಾಗಿ ಪರಿಣಾಮಕಾರಿಯಾಗಿ ವಿಷಯವನ್ನು ಅಭಿವ್ಯಕ್ತಿಪಡಿಸಬೇಕು. ಏಕೆಂದರೆ ಈ ಮನುಷ್ಯನ ಬದುಕು ಕೇವಲ ಸೀಮಿತ ವಲಯದಲ್ಲಿ ಉಳಿದಿಲ್ಲ. ಅದರ ರೇಖೆಗಳು ಆಲದ ಬಿಳಿಲುಗಳಾಗಿ ಪ್ರಪಂಚದ ಈ (ಇ) ವಸ್ತುಗಳ ಜೊತೆ ಸಮೀಕರಿಸಿಕೊಂಡು ಮಾನವನು ಸಂತೃಪ್ತಿಯಿಂದ ಜೀವನೋಲ್ಲಾಸವನ್ನು ಹೆಚ್ಚಿಸಿಕೊಳ್ಳಬೇಕಾಗಿದೆ.

ಸಮಕಾಲೀನ ಸಾಹಿತ್ಯದ ಚಹರೆಗಳನ್ನು ಗುರುತಿಸುವಾಗ ಸಾಹಿತ್ಯ ಸಂಶೋಧನೆಯ ಸ್ಪಷ್ಟ ಕಲ್ಪನೆಗೆ ಬರಬೇಕಾದರೆ, ವಿಜ್ಞಾನ ಸಂಶೋಧನೆ, ಸಾಮಾಜಿಕ ಶಾಸ್ತ್ರ ಸಂಶೋಧನೆ, ಮಾನವಿಕ ಶಾಸ್ತ್ರಗಳ ಸಂಶೋಧನೆಗಳು ಸಾಹಿತ್ಯದ ವಿಕಾಸಕ್ಕೆ ನೀಡುವ ಸಂವೇದನೆಗಳ ಜಾಗೃತಿಯ ಬೆಳಕಿನಲ್ಲಿ ಒರೆಗೆ ಹಚ್ಚಿದಾಗ ಬರುವ ಉತ್ತರವೇ ಸಾಹಿತ್ಯ ಸಂಶೋಧನೆಯು, ಇತರ ಯಾವುದೇ ಶಾಸ್ತ್ರಗಳಿಂದ ಭಿನ್ನವಾದದ್ದು ಎಂದು. ಹೇಗೆಂದರೆ ಪ್ರತಿ ಶತ ನೂರರಷ್ಟು



ಕೃತಿ ಮೂಲ ನಿಷ್ಕ್ರಿಯ ಆದರೆ ಅನುಷಂಗಿಕವಾಗಿ ಕವಿಯ ಕೌಟುಂಬಿಕವಾದ ವಿಷಯಗಳೂ ಅಲ್ಲಿ ಶ್ರುತಗೊಳ್ಳುತ್ತವೆ. ಹೀಗಿರುವುದರಿಂದ ಕೃತಿಯ ಮೌಲ್ಯವನ್ನು ಕಟ್ಟವಾಗ ರಸಗ್ರಹಣದಲ್ಲಿ ವಿಮರ್ಶಾದೃಷ್ಟಿಯ ಸಂಶೋಧನೆಗೆ ಅವಕಾಶ ಉಂಟಾಗುತ್ತದೆ. ಆಗ ಪೂರಕ ಗ್ರಂಥಗಳ ಅಧ್ಯಯನ ನೀಡಿದ ಬೆಳಕು ಸಂಶೋಧನಾತ್ಮಕ ವಿಮರ್ಶೆಗೆ ನೆರವು ನೀಡುತ್ತದೆ. ಈಗ ಅನೇಕ ಭಾಷೆಗಳ ಸಂಪರ್ಕದಲ್ಲಿ ಆ ಭಾಷಾ ಸಂಸ್ಕೃತಿಗಳು ಲೌಕಿನೀಕರಣ ತೊಡಗಿ ಅನೇಕ ಸಾಮಾನ್ಯ ಸ್ವಭಾವಗಳು ಅಲ್ಲಿ ಉದ್ದೀಪನಗೊಳ್ಳುವುದರಿಂದ ವಿಶ್ವಕುಟುಂಬದ ನಿಲುವಿಗೆ ಸಂವೇದನೆಗಳನ್ನು ಅವು ಒದಗಿಸುತ್ತವೆ. ಆ ಹಿನ್ನೆಲೆಯಲ್ಲಿ ಕೃತಿಕಾರನ ಕಾಲ, ನಿರಪಿತವಾಗಿರುವ ವಸ್ತುವಿನ ಕಾಲದೇಶಮಾನಗಳು, ಎಲ್ಲವೂ ನಿಷ್ಕರ್ಷಕ್ಕೆ ಬರಬೇಕಾಗುತ್ತದೆ. ಹೀಗಾಗಿ ಇಂದಿನ ನಿಲುವಿನಲ್ಲಿ ಮುಂದಿನ ನೆಲೆಗಳ ದಾಂಗುಡಿಯ ಸುಳಿವು ದೊರೆಯುತ್ತದೆ. ಹಾಗಾಗಿ ಇಂದಿನ ಕಂಪ್ಯೂಟರ್‌ಕರಣೀಯ ಕ್ಷಿಪ್ರ ಗತಿಯ ಕಾಲದಲ್ಲಿ, ಸ್ಥೂಲವಾಗಿ ಆರು ದೃಷ್ಟಿಗಳಿಂದ ಸಾಹಿತ್ಯ ಸಂಶೋಧನೆಯನ್ನು ವೃತ್ತಿಯಾಗಿ ಗುರುತಿಸಬಹುದು. ಚಾರಿತ್ರಿಕ ದೃಷ್ಟಿ (ಕನಕದಾಸರು ಕಂಡ ವಿಜಯನಗರ) ಬೆಟಗೇರಿ ಕೃಷ್ಣಶರ್ಮರ ಸಂಶೋಧನೆ ಇದು ಅಪ್ಪಟ ಸಂಶೋಧನೆಗೆ ಒಂದು ಮಾದರಿ) 2. ತೌಲನಿಕ ದೃಷ್ಟಿ (ಎರಡು ಕೃತಿಗಳ ಹೋಲಿಕೆ ಬೇರೆ ಬೇರೆ ಭಾಷೆಗಳಲ್ಲಿ ಬಂದಿರುವುದನ್ನು ಹೋಲಿಕೆ) 3. ಪುನರ್ ಮೌಲ್ಯಮಾಪನ (ಈವರೆಗೂ ನಡೆದ ಸಂಶೋಧನೆಗಳ' ವಿಮರ್ಶೆಗಳ ಮರು ಮೌಲ್ಯಮಾಪನ ಮಾಡುವುದು. ಇಂದಿನ ಮನುಷ್ಯನ ಸ್ವಭಾವದ ಕಸಿತದಲ್ಲಿ ಅಲ್ಲಿ ಇನ್ನೇನನ್ನೋ ಪಡೆಯಬಹುದೆಂಬ ವಿವೇಚನೆ, ಒಳೆಯ ನಿರ್ಧಾರಗಳು ಈಗಿನ ಕಾಲಮಾನದಲ್ಲಿ ಪುನರ್ ವಿಮರ್ಶೆಯಾದಾಗ ಹೊಸ ದಿಸೆ ಕಾಣಲು ಸಾಧ್ಯ) 4. ಸಂಕ್ಯಾನ್ವಯ

ದೃಷ್ಟಿ (ಡಾ. ಹಿರೇಮಲ್ಲೂರ ಈಶ್ವರನ್) ಅವರು ಹರಿಹರ ರಗಳೆಗಳ ಸಂಖ್ಯೆಯನ್ನು ನಿರ್ಣಾಯ ಮಾಡಿದ ವಿಷಯ: "ಷೇಕ್ಸ್ಪಿಯರನ ನಾಟಕಗಳೆಷ್ಟು; ಕೈಲಾಸಂ ನಾಟಕಗಳೆಷ್ಟು ಇತ್ಯಾದಿಯಾಗಿ ಚೀಮತನಗಳು) 5. ಶಬ್ದ ಮೂಲಕ ಶೋಧ (ಮೊದಲು ನಿಘಂಟಿನ ಶಬ್ದಾರ್ಥಗಳು ಇಂದು ಅರ್ಥ ವ್ಯತ್ಯಾಸ ಹೊಂದಿರುವುದನ್ನು ಗಮನಿಸಿ ಹೊಸ ಅರ್ಥಗಳನ್ನು ನೀಡು ಸಾಧ್ಯ). 6. ಸಾಹಿತ್ಯ ಸಂಶೋಧನೆ (ಇದುವರೆಗಿನ ಕಾಲಘಟ್ಟಗಳಲ್ಲಿ ಬಂದಿರುವ ಸಾಹಿತ್ಯಗಳ ಅಧ್ಯಯನದ ಜೊತೆಗೆ ಸಮಕಾಲೀನ ಕೃತಿಗಳ ಅನುಚಿಂತನೆಯ ಮೇಳವಿಸಿದಾಗ ಸಾಹಿತ್ಯದ ಮೂಲ ಸಂವೇದನೆಯಲ್ಲಿ ಬದುಕಿನ ಬೆಡಗುಗಳೆಲ್ಲ ಸ್ಪಷ್ಟಗೊಂಡು ಕಾಲಕಾಲಕ್ಕೆ ತೊಟ್ಟಿ ತೊಡವುಗಳ ಒಳ ಚೆಲುವಿನಲ್ಲಿ ಶಿವಸೌಂದರ್ಯದ ಪ್ರಕಾಶವನ್ನು ಕಾಣಲು ನಿರ್ಧರಿತ ಹೆಜ್ಜೆಗಳ ಮೂಲಕ ನುಡಿ ತಾಳಗಳನ್ನು ಅರ್ಥೈಸಿಕೊಳ್ಳಬಹುದು.

ಇದಕ್ಕೆ ಪೂರಕವಾಗಿ ಮಾನವಿಕದ ವಿಷಯಗಳನ್ನು ತಿಳಿದುಕೊಂಡಾಗ ಹೊಸ ಚೆಲುವು ಜೀವನೋತ್ಸಾಹಕ್ಕೆ ಸ್ಫೂರ್ತಿದಾಣವಾಗುತ್ತದೆ. ಈ ಬದುಕಿನ ಕಣಜದಲ್ಲಿ ಎಲ್ಲಾ ಇದೆ. ಅದನ್ನೆಲ್ಲಾ ಬಗೆದು ನೋಡುವ ಕುತೂಹಲ ಕೆರಳುತ್ತದೆ. ಮತ್ತೆ What, How, Why, When, Where ಎಂಬ ಪ್ರಶ್ನಾವಳಿಗಳಲ್ಲಿ ಯಾವುದು? ಎಲ್ಲಿ ಎನ್ನುವುದು ಮುಖ್ಯವಲ್ಲ, ಇದು ಏನು? (What) ಇದು ಏಕೆ? (How)ಇದು ಹೇಗೆ (Why) ಈ ಮೂರು ಸದಾ ನಮ್ಮಲ್ಲಿ ಜೀವಂತ ಪ್ರಜ್ಞೆಯಾಗಿರಬೇಕು. ಉಪನಿಷತ್ತುಗಳು ಕೂಡ ಇದೇ ರೀತಿ ಪ್ರಕಾಶ ನೀಡಿವೆ.



ಈ ಚಿಂತನೆಯ ತಳಪ್ರಾಯದಲ್ಲಿ ಕನ್ನಡ ಸಾಹಿತ್ಯ ಸಂಶೋಧನೆಯು ವಿಶ್ವ ಸಾಹಿತ್ಯ ಸಂಶೋಧನೆಗೆ ಪುಣ್ಯಕೋಟಿ ಅಸಾದೃಶ್ಯಕ ಮೂಲಕ ನೀಡಿದ ಸಂದೇಶವು ಬಹು ಮಹತ್ವದ್ದು ಮತ್ತು ಅದರಲ್ಲಿರುವ ವಿಶ್ವಮಾನವತ್ವದಲೋಲಿಯ ಪುರುಷಾರ್ಥ ಸಾಧನೆಗೆ ಪ್ರಯೋಗವಾಗಿ ತಾನೇ ನೀಡಿದ ವಿಶ್ವ ಮಾನವ ಕುಟುಂಬ ಸಂದೇಶವನ್ನು ಧರಣಿಮಂಡಲದಲ್ಲಿ ಮತ್ತೆ ಧ್ವನಿತವಾಗಬೇಕಿದೆ. ಇನ್ನು ಮುಂದೆಯೂ ಹುಲುಸಾಗಿ ಬರಬೇಕಾದ ಕನ್ನಡ ಸಾಹಿತ್ಯದ ನೆಲೆಯಲ್ಲಿ ಆದಿಶಕ್ತಿ ಭುವನೇಶ್ವರಿಯು ಎಲ್ಲರ ಹೃದಯದಲ್ಲಿ ಪುಣ್ಯಕೋಟಿಯ, ಮಾನವ ಪ್ರೀತಿಯ ನಂದಾದೀಪವನ್ನು ಪ್ರಜ್ವಲಿಸುವಂತೆ ಮಾಡಲಿ. ನಾವೆಲ್ಲಾ ಆ ಎಳಕಿನಲ್ಲಿ ಮುಂದುವರೆಯಬೇಕಗಿದೆ.

ಆದ್ದರಿಂದ ನಮ್ಮ ಸಂಶೋಧನಾ ಕ್ಷೇತ್ರವು ವಿಶ್ವ ಸಾಹಿತ್ಯ ಭಾಷೆಗೆ ಮಾದರಿಯಾಗಲು ಧಾವಿಸುತ್ತಿದೆ. ಅಂತೆಯೇ ಸ್ವಂತಿಕೆಯ ಅಭಿಜಾತತೆಯಲ್ಲಿ ನಾವೆಲ್ಲ ಹೆಜ್ಜೆಯೊಳಗೆ ಹೆಜ್ಜೆಯನ್ನು ಜೋಡು ಜೋಡಾಗಿ ಜಾಗೃತದಿಂದ ಜಾಗ್ರತೆಯಾಗಿ ಜಾಗತಿಕವಾಗಿ ಜೋಡಾಗಿ ಹೋಗೋಣ.

ಈ ಸಾಧನೆಗಾಗಿ ಸಮಕಾಲೀನ ಅರ್ಥಶಾಸ್ತ್ರವು-ಅರ್ಥನೀತಿಯೂ ಅರ್ಥವಂತ ಅರ್ಥಾತ್ ಗುಣವಂತೆ ಅರ್ಥ ಸಾಹಿತ್ಯವೂ ಆಗಿ ಕನ್ನಡ ಸಾಹಿತ್ಯ ಸಂವರ್ಧನೆಯಲ್ಲಿ ಅದರ ಸೇರ್ಪಡೆಯನ್ನು ಗುರುತಿಸಿಕೊಂಡು ಸಾಗಿದರೆ ಸಮಕಾಲೀನ ಕನ್ನಡ ಸಾಹಿತ್ಯದ ಸಂಶೋಧನೆಯ ಮಾಹಿತಿಯು ಅರ್ಥಪೂರ್ಣವಾಗುತ್ತದೆ. ಇಲ್ಲಿ ಸಂಶೋಧನೆಯೆಂದರೆ ಸತ್ಯಾನ್ವೇಷಣೆ. ಆದರೆ ಸುಳ್ಳಿಗೆ ವಿರುದ್ಧ ಅರ್ಥವಲ್ಲ. ಸತ್ಯ ಎಂದರೆ ವಾಸ್ತವಿಕತೆಯನ್ನು ಅರ್ಥ ಮಾಡಿಕೊಳ್ಳುವುದು ಎಂದು ವಿಶಿಷ್ಟಾರ್ಥ. ಇದರ ಸ್ವಾದದಲ್ಲಿ ಸಾಹಿತ್ಯ ಚಿತ್ರಣಗಳ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಧ್ವನ್ಯಾರ್ಥದ ಪ್ರಜಾ ಸಾಮ್ರಾಜ್ಯವನ್ನು ಧನ್ಯತೆಯಲ್ಲಿ ನಿರ್ಮಿಸಬಲ್ಲವು. ಆ ಸಾರಾಜ್ಯದಲ್ಲಿ ಮೂಲ ಕಾರಣನಾದ ಸೃಷ್ಟಿಯ ಸಮಷ್ಟಿಯಲ್ಲಿ ಹಿತಕಾರಿಯಾಗುತ್ತಾನೆ. ಆ ಮೂಲಕ ಪ್ರತಿಬಿಂಬಿತವಾದ ಸಾಹಿತ್ಯವು ಸ್ವಾವಲಂಬಿ ಜೀವನದ ಅನುಷ್ಠಾನಕ್ಕೆ ಕಾರಣವಾಗುತ್ತದೆ. ಇಲ್ಲಿ ಸಾಲಿ ರಾಮ ಚಂದ್ರರಾಯರ ಉದುಪತಿ ಕಾದಂಬರಿ ಒಂದು ನಿದರ್ಶನ; ತರಾಸು ಅವರ 'ಮಸಣದ ಹೂ' ಮತ್ತೊಂದು ನಿದರ್ಶನ; ಇಂತಹವು ಇನ್ನೂ ಇವೆ.

ಇಂಥ ಸಾಹಿತ್ಯವು ಬದುಕನ್ನು ಕಟ್ಟಿಕೊಡುತ್ತದೆ. ಅಲ್ಲಿ ರಯೋಗಾತ್ಮಕ ಬದುಕು ಸಂಸ್ಕೃತಿಯ ಸಂವೇದನೆಯಾಗಿ ಸಾಹಿತ್ಯ ನಿರ್ಮಿತಿಗೆ ಪ್ರೇರಣೆಯಾಗಿ ನಿಲ್ಲುತ್ತದೆ. ಸಾಮಾನ್ಯತೆಯು ಒಂದರ್ಥದಲ್ಲಿ ಸಂಸ್ಕೃತಿಯು ಸಾಹಿತ್ಯದ ಪ್ರತಿಬಿಂಬವೂ ಹೌದೇನೋ ಎನ್ನಿಸುತ್ತದೆ. ಇನ್ನಷ್ಟು ಒಳಹೊಕ್ಕರೆ ಬದುಕೇ ಸಾಹಿತ್ಯ, ಸಾಹಿತ್ಯವೇ ಬದುಕಿನ ಸಂಸ್ಕೃತಿಯ ಪ್ರತಿಬಿಂಬ ಎನ್ನುತ್ತಾ ಹೋದಾಗ ಬದುಕಿಗೆ ಸಂಸ್ಕೃತಿ ಸಾಹಿತ್ಯಗಳು ಒಂದಕ್ಕೊಂದು ಪೂರಕ; ಬದುಕು ಮತ್ತು ಸಾಹಿತ್ಯ ಒಂದೇ ನಾಣ್ಯದ ಎರಡು ಮೂಕಗಳಾದರೆ, ಸಂಸ್ಕೃತಿಯು ಅವುಗಳನ್ನು ಜೋಡಿಸುವ ಜೀವಾಳ. ಈ ಚಿಂತನೆಯನ್ನು ಸೂಕ್ಷ್ಮವಾಗಿ ಹಿಂಜುತ್ತಾ ಸಾಗಿದಾಗ ಇತಿಹಾಸವೂ ಬದುಕಿನ ಸಾಹಿತ್ಯವನ್ನು ಕಟ್ಟಿಕೊಡುವಲ್ಲಿ ತನ್ನ ಪ್ರಾಯೋಗಿಕ ಸತ್ಯಗಳನ್ನು ಬೆಂಬಲಕ್ಕೆ ನಿಲ್ಲಿಸುತ್ತದೆ. ಮತ್ತು ಇತಿಹಾಸದಲ್ಲಿ ಆ ಘಟನೆಗಳು ಸಮಕಾಲೀನ

ಬದುಕಿನ ಮೌಲ್ಯಮಾಪನಕ್ಕೆ ಒರೆಗಲ್ಲಾಗಿ ನಿಲ್ಲುತ್ತವೆ. ಭೂತದ ನೆನಪಿಲ್ಲದ ವರ್ತಮಾನದ ನಡೆ ಎಂದಿಗೂ ಸುಂದರ ಭವಿಷ್ಯಕ್ಕೆ ಬುನಾದಿಯಗಿ ನಿಲ್ಲಲಾರದು. ಭೂತದ ನೆನಪುಗಳೆಲ್ಲ ಸಮಕಾಲೀನ ನಡೆಯ ಪ್ರತಿಯೊಂದ ಹೆಜ್ಜೆಗೆ ಪ್ರಸ್ತುತವಾಗುವುದಿಲ್ಲ. ಆದರೆ ಯಾವ ಪ್ರಸಂಗಗಳಲ್ಲಿ ಅವುಗಳ ಬೆಂಬಲ ಬೇಕೇಂಬುದನ್ನು ಕುರಿತು ನಿರ್ಧರಿಸಲು ಪ್ರಸಂಗಿಕ ವಿವೇಕವು ಸಾಥ್ ಕೊಡುತ್ತದೆ. ಆಗ ಅದನ್ನು ಬಳಸಿಕೊಂಡು ಬದುಕನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಇದರ ಮಾಹಿಮೆಯನ್ನು ಅರಿತ ಸಾಹಿತ್ಯಕಾರ, ಆ ಇತಿಹಾಸವನ್ನು ಬಳಸಿಕೊಂಡು ಸುಂದರ ಬದುಕನ್ನು ಸೃಷ್ಟಿಸಿಕೊಡಲು ಸಾಹಿತ್ಯದ ಪ್ರಕಾರಗಳಲ್ಲಿ ಆ ಎಲ್ಲ ಘಟನಾವಳಿಗಳು ಪ್ರತಿಭೆಯ ಬಲದಲ್ಲಿ ಪ್ರತಿಫಲನವಾಗಿ, ಆನಂದ ಪ್ರಾಪ್ತಿಯನ್ನುಂಟು ಮಾಡುತ್ತವೆ.

ಇಂದು ಬದುಕು, ದೇಶ ದೇಶಗಳ ಸಾಮಾನ್ಯ ಸಂಬಂಧಗಳಲ್ಲಿ ಅಸಮಾನ್ಯತೆಯನ್ನು ಮೀರಿ ಏಕೋರಸವಾಗಿ ಬದುಕುವ ಭಾಷೆಗಳ ಪರ್ಯಾವರಣದಲ್ಲಿ ವಿಕಸನಶೀಲವಾಗಿ ಬೆಳೆಯತೊಡಗಿದೆ. ಪಂಚಾಮೃತದಿಂದ ನವರಸವಾಗಿ ಬದುಕಿನ ನವ ನವ ಚೆಲುವುಗಳ ಧ್ವನಿಯಿಂದ ಶೃಂಗಾರಗೊಳ್ಳುತ್ತಿದೆ. ಹಾಗಾಗಿ ಆಧುನಿಕ ಕಾಲದ ಕನ್ನಡ ಸಾಹಿತ್ಯದ ನಡೆಯಲ್ಲಿ ಸಂಪರ್ಕಕ್ಕೆ ಬರುವ ಆಯಾ ದೇಶ ವಿದೇಶಿ ಭಾಷೆಗಳಲ್ಲಿಯ ಮಣ್ಣ ವಾಸನೆಯ ಧ್ವನಿಯ ಸೊಗಡನ್ನು ತನ್ನದಾಗಿಸಿಕೊಂಡೇ ಹೊಸ ಹೊಳಲು ಪರಿ ಪರಿಯಾಗಿ ನಮ್ಮನ್ನು ಕೂಡಲಸಂಗಮವಾಗಿಸತೊಡಗಿದೆ. ಹಾಗಾಗಿ ಅಲ್ಲೆಲ್ಲಾ ಇಂತಹ ಸಂಪರ್ಕಕ್ಕೆ ಬರುತ್ತಿರುವ ನಮಗೆ, ಆ ಎಲ್ಲಾ ಭಾಷೆಯಲ್ಲಿಯ ಬದುಕಿನ ಅಗ್ಗ ನಿಷ್ಟವದ ರೀತಿ ನೀತಿಗಳೆಲ್ಲ ನಮಗರಿಯದಂತೆ ನಮ್ಮಲ್ಲಿ ಪಂಚಾಮೃತವಾಗಿ, ನವರಸವಾಗಿ ಬಿಟ್ಟಿರುತ್ತವೆ. ಹಾಗಾಗಿ ಚರಿತ್ರೆಕಾರರಿಗೂ ಸಾಹಿತ್ಯ ರಚನಕಾರರಿಗೂ, ತಿಳಿವಳಿಕೆಯ ವಿಕಸನಕ್ಕಾಗಿ, ನೇರ ಸಾಹಿತ್ಯ ಸೃಷ್ಟಿ ಮಾಡಲು, ವಿಜ್ಞಾನ, ತಂತ್ರಜ್ಞಾನಗಳನ್ನು ಅರ್ಥಮಾಡಿಕೊಳ್ಳಲು ಆ ದಿಸೆಯಲ್ಲಿ ಮುಂದುವರೆಯಲು ಪರರಾಜ್ಯ ಹಗೂ ಪರ ದೇಶಗಳ ಭಾಷೆಗಳ ಜ್ಞಾನ ಬೇಕೇ ಬೇಕು ಸಮಯದ ಹಕ್ಕಿ ನಮ್ಮನ್ನು ಅಂತರಗೃಹಿ, ಅಂತರ ವಿಶ್ವಿಯನ್ನಾಗಿಸುತ್ತದೆ. ಇದರಿಂದ ಜೀವನ ವಿಕಾಸವಷ್ಟೇ ಅಲ್ಲ ನಮ್ಮ ನಮ್ಮ ಭಾಷಾ ಶ್ರೀಮಂತಿಕೆಯು ಔಚಿತ್ಯಪೂರ್ಣವಾಗಿ ಬೆಳೆಯುತ್ತದೆ. ಅಲ್ಲದೆ ಅಂತರಶಿಸ್ತೀಯ ಅಧ್ಯಯನದಲ್ಲಿ ಇತಿಹಾಸವಿಲ್ಲದೆ, ಕನ್ನಡ ಸಾಹಿತ್ಯವಷ್ಟೇ ಅಲ್ಲ, ಇತರ ಸಾಹಿತ್ಯಗಳು ನಿರೀಕ್ಷಿತ ಸಂವೇದನಾ ಶೀಲ ವರ್ತಮಾನದ ನಡೆಯಲ್ಲಿ ಎಲ್ಲರ ಜೊತೆ ಹೆಜ್ಜೆ ಹಾಕಲು ತುಸು ಕಷ್ಟವೇ ಹೌದು. ಅಲ್ಲದೆ ಇತಿಹಾಸ ಬಿಟ್ಟು ಸಾಹಿತ್ಯ ರಚನೆ, ಸಾಹಿತ್ಯ ಸಂಹನವಾದ ಭಾಷೆ ಬಿಟ್ಟು ಇತಿಹಾಸ ರಚನೆ ಗಟ್ಟಿಯಾಗಿ ಜನಮಾನಸದಲ್ಲಿ ಮಿಂಚಿನ ಹೊಳೆಯನ್ನು ಹರಿಸಲಾರದು. ಹೀಗಾಗಿ ಇವು ಒಂದನ್ನೊಂದು ಬಿಟ್ಟಟು ಸಪ್ಪೇ ಸಪ್ಪೇ. ಅಲ್ಲದೇ ಉಳಿದೆಲ್ಲ ಶಿಸ್ತುಗಳ ಸಮ್ಮಿಳನದ ಅಧ್ಯಯನಕ್ಕೆ ಭಾಷಾ ಸಾಹಿತ್ಯ ಇತಿಹಾಸಗಳು ಜೋಡಾಗಿಯೇ ಇರಬೇಕಾದ ಪ್ರಾಣಾಯಾಮ, ತರಾಸು ದುರ್ಗಾಸ್ತಮಾನ, ಬಂಕಿಂಚಂದ್ರರ ಆನಂದಮಠ, ಸಂವೇದನಾತ್ಮಕವಾಗಿ ಆಯಾ ದಶಕದಲ್ಲಿ ಬಂದಿರುವ ಸಾಹಿತ್ಯ ಪ್ರಕಾರಗಳಲ್ಲಿ ವೈವಿಧ್ಯತೆಯ

ಅನಂತತೆಯಲ್ಲಿ ಏಕೋದರ್ಶನ-ಅದು ಮಾನವಾಂತಃಕರುಣೆಯನ್ನು ತಂಪಾಗಿಸುವ ವ್ಯವಧಾನ (ಮಾನವಿಕ ಹಾಗೂ ಇನ್ನಿತರ ಶಾಸ್ತ್ರಗಳಿಂದ ದೂರವಿರಲು ಸಾಧ್ಯವಿಲ್ಲ)



ಇದು ನಿರ್ಧಾರವೆಂದು ಗಟ್ಟಿಯಾಗಿ ಒಪ್ಪಿದ ನಾವಬು ಇನ್ನಿತರ ಶಾಸ್ತ್ರಗಳಿಂದ ದೂರವಿರಲು ಸಾಧ್ಯವಿಲ್ಲ. ರಾಜ್ಯ ಶಾಸ್ತ್ರವನ್ನು ಕೂಡ. ಇಂದಿನ ಸಮಕಾಲೀನ ಸ್ಥಿತಿಯಲ್ಲೇಕೆ ಎಂದಿನಂದಲೂ ರಾಜನೀತಿ ಅರ್ಥಾತ್ ರಾಜ್ಯಶಾಸ್ತ್ರ ಪರ್ಯಾವರಣವಿಲ್ಲದೆ, ಬದುಕು ಅರ್ಥವತ್ತಾಗಿಯೇ ಇಲ್ಲ. ಈಗಂತೂ ಬದುಕಿನ ವಿಶ್ವವು ಸಂಕಿರಣದ ಸಂಬಾರ. ಒಗರಿನ ಅಮೃತ, ಅದಿಲ್ಲದೆ ಬದುಕಿನ ಹೋರಾಟ ನಿರ್ಧನಿ, ನಿರ್ಧಯಿಯೂ ಕೂಡ. ಇದು ಸಾಹಿತ್ಯ ಸೃಷ್ಟಿಗಷ್ಟೇ ಅಲ್ಲ ತನ್ನ ಮೈಯನ್ನು ಹಿಗ್ಗಿಸಿಕೊಂಡು, ಮನಸ್ಸನ್ನೂ ವಿಕಾಸ ಮಾಡಿಕೊಳ್ಳಲೇ ಬೆಳೆಯಬೇಕಾದ ಈಗಿನ ಸಂಕಿರಣ ಪರಿಸ್ಥಿತಿಯ ಅನವಾರ್ಯತೆಯಲ್ಲಿ ರಾಜ್ಯಶಾಸ್ತ್ರ ಅರ್ಥಾತ್ ರಾಜನೀತಿಯು ಸಮಾಜ ಶಾಸ್ತ್ರ, ಅರ್ಥ ಶಾಸ್ತ್ರ, ಮತ್ತೆ ಮತ್ತೆ ಇತಿಹಾಸ ಮತ್ತು ಇನ್ನಿತರ ಬೇರೆ ಬೇರೆ ಶಿಸ್ತುಗಳ ಸಹಾಯವನ್ನೂ ಪಡೆಬೇಕಾಗುತ್ತದೆ. ವಿಶೇಷತಃ ಭಾಷಾ ಸಾಹಿತ್ಯ, ಶಿಸ್ತುಗಳ ಉದಾರ ಹಸ್ತಗಳ ಜೋಡು ಬೆಂಬಲ, ಇನ್ನಷ್ಟು ಕೂಡು ಬೆಂಬಲಗಳಿಗೆ

ಶಕ್ತಿ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವತ್ತ ಯಾವಾಗಲೂ ಪ್ರಯೋಜನಕಾರಿ. ರಾಜಕೀಯವನ್ನು ಬಳಸಿಕೊಂಡಿರುವ ಅನೇಕ ಅಂತರರಾಜ್ಯ, ಅಂತರರಾಷ್ಟ್ರದ ಸಮಸ್ಯೆಗಳನ್ನು, ಅಂತರಶಿಸ್ತೀಯ ಅಧ್ಯಯನದಲ್ಲಿ ರಾಜನೀತಿಯು ಸಮರ್ಥವಾಗಿ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಿದೆ. ಅಂತೆಯೇ ವಿಶ್ವ ಸಂಸ್ಥೆಯವರು (UNO) - ಈ ದಿಸೆಯಲ್ಲಿ ರಾಜಕೀಯ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವಲ್ಲಿ ಪರಿಹಾರಗಳನ್ನು ಕಂಡುಕೊಳ್ಳಲು ಸ್ಥಾಪಿಸಿರುವ ಈ ಸಂಸ್ಥೆ, ಈಗಾಗಲೇ ಸಾಕಷ್ಟು ಈ ನಿಟ್ಟಿನಲ್ಲಿ ನಿದರ್ಶನಗಳಿಂದ ಇತಿಹಾಸದ ಪುಟಗಳನ್ನು ಸ್ಥಾಯಿಗೊಳಿಸಿದೆ. ಆದ್ದರಿಂದ ಭ್ರಷ್ಟಾರ, ಕೋಮುಗಲಭೆ, ಜನಾಂಗೀಯ ಗಲಭೆ, ಯುದ್ಧ, ಚುನಾವಣೆ, ಮಧ್ಯಪಾನ ನಿಷೇದ, ನದಿನದವಾದ ಕಡಲು ಗಡಿ ವಿವಾದ, ದೇಶ ದೇಶಗಳ ನೆಲ ಗಡಿ ವಿವಾದ, ಪ್ರಕೃತಿ ವಿಶೇಷ, ಅಂತರಿಕ್ಷದಲ್ಲಿಯ ಸೋಜಿಗಗಳು, ಅಂತರ ವಿಶ್ವಗಳಲ್ಲಿಯೂ ಈ ಜಗದಗಲ ನೆಲದ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಅಂತರ ಶಿಸ್ತೀಯ ಸಹಾಯದಲ್ಲಿ ನಡೆಯುವ ಅಧ್ಯಯನ ಸಂಶೋಧನೆಗಳ ಫಲಿತಾಂಶಗಳು ಜಗದ ಪಿಡುಗುಗಳನ್ನು ನವಾರಿಸಲು ಮುಂದಾಗುವುದರಲ್ಲಿ ಸಂಶಯವಿಲ್ಲ. ಈ ನಿಟ್ಟಿನ ಅನ್ವಯಿಕ ಅಧ್ಯಯನಕ್ಕೆ ಪೂರಕವಾಗುವ ಸಾಹಿತ್ಯ ನಿರ್ಮಿತಿಯು ವೈಜ್ಞಾನಿಕ ಸ್ಥರದ ಮೇಲೆ ಹೆಚ್ಚು ಹೆಚ್ಚು ಪ್ರಕಟಗೊಳ್ಳುತ್ತಲೇ ಸಾಗಬೇಕಾದುದು ಇಂದಿನ ಅನವಾರತೆ.

ಇಲ್ಲಿ ಸಂಶೋಧಕರು ಒಂದು ಎಚ್ಚರಿಕೆ ವಹಿಸಬೇಕಾದೀತು. ಅದೇನೆಂದರೆ ಬೇರೆಯವರಿಗೆನೂ ಗೊತ್ತಿಲ್ಲವೆಂದೂ ತನಗೇ ಎಲ್ಲಾ ಗೊತ್ತಿದೆಯೆಂದು ಹೊರಡುವುದು ಅಪಾಯಕಾರಿ ಲಕ್ಷಣ, ತನಗೇನೂ ಗೊತ್ತಿಲ್ಲವೆಂದು

ಭಾವಿಸಿ ಈಜು ಬಂದರೂ, ಈಜುಗುಂಬುಳವನ್ನು ಕಟ್ಟಿಕೊಂಡೇ ಸಂಶೋಧನೆಯ ಕಡಲಿನಲ್ಲಿ ಧುಮ್ಮಿಕ್ಕಬೇಕು ಮತ್ತು ಸಣ್ಣ ಸಣ್ಣ ವಿಷಯಗಳಲ್ಲಿಯೂ ತುಂಬಿಕೊಂಡ ಅಗಾಧವಾದ ಜ್ಞಾನಕ್ಕೆ ತಲೆಬಾಗಿ ಅದೆಲ್ಲ ತನ್ನದಾಗಿಸಿಕೊಂಡು ಸಾಗಬೇಕು. ಆದ್ದರಿಂದ ಇಲ್ಲಿ ತನ್ನ ವಿದ್ಯೆಗೆ ವಿನಯವು ಮೇಳವಿಸಿಕೊಂಡಾಗ ರಸವರಕ್ಕೆ ಪರಿಮಳವು ಅವಿರ್ಭವಿಸಿದಂತೆ ಆ ದಿವ್ಯದರ್ಶನ. ಅದಕ್ಕಾಗಿ ಆ ದಿವ್ಯ ದರ್ಶನವನ್ನು ಸಾಧಿಸಬೇಕಾದರೆ, ಸಂಶೋಧನಾ ಸಾಹಿತ್ಯಕ್ಕೆ ಕಾಣೆಯಾಗಬೇಕಾದವರೆಲ್ಲ, ಪಾಲ್ಕುರಿಕಿ ಸೋಮನಾಥ ಕವಿಯ ಸೋಮೇಶ್ವರ ಶತಕದಲ್ಲಿರುವ

ನಿರ್ಮಿಸಿ ಕೊಡುತ್ತಿರುವ ಸಾರಾಸಾರವನ್ನೆಲ್ಲ ಎಲ್ಲರೂ ಬಗೆದುಕೊಳ್ಳುವಂತೆಯಾಗಿದೆ. ಭಾಷೆಯ ಈ ಸ್ಥರದ ಪ್ರಕಾಶದಲ್ಲಿ ಜಗತ್ತು-ಜಗತ್ತಿನ ಜ್ಞಾನವೆಲ್ಲ ಒಂದೇ ಹಿಡಿತಕ್ಕೆ ಬಂದಿದೆ.

ಇನ್ನು ಮುಂದೇನು ಎಂದಾಗ ಅಂತಿಮದಲ್ಲಿರುವ ಗೃಹಗೃಹಗಳನ್ನೆಲ್ಲ ಬೆಸುಗೆಗೊಳಿಸುತ್ತಾ ನಕ್ಷತ್ರಗಳನ್ನೆಲ್ಲ ಬಗೆದುಕೊಳ್ಳುವ ಧಾವಂತ ನಮ್ಮ ಮುಂದಿದೆ.

ಜ್ಞಾನ ವಿಜ್ಞಾನ ತಂತ್ರಜ್ಞಾನಗಳೆಲ್ಲ ಅವನ ಸಾಹಸಕ್ಕೆ ನೆರವ ನಿಂತು ಅವನಿಗೆ ಅವನ ಧಾವಂತಕ್ಕೆ ಪ್ರೋತ್ಸಾಹಿಸುತ್ತಿವೆ. ಹಾಗಾಗಿ ಈಗ ಅಂತರ ಬಹುಶಿಸ್ತೀಯ ಬದುಕು ಸಾಧ್ಯವಾಗುತ್ತಿರುವಲ್ಲಿ ಭಾಷೆಯು ವಿಜ್ಞಾನವಾಗಿ, ಸಮಯಕ್ಕೆ ಸಾಥಾಗಿ ವಿಶಿಷ್ಟ ಶಬ್ದಗಳು ಭಾಷಾಪರಿಭೇದವನ್ನು ತೊರೆದು ಪೋಣಿಕೆಯಾಗಿ ಪಂಚಾಮೃತದ ಬೆಳಕು ಕೂಡಲ ಸಂಗಮವಾಗಿದೆ. ದಿನದಿನಕ್ಕೆ ಕ್ಷಣಕ್ಷಣಕ್ಕೆ ಹೊಸಹೊಸ ಭಾವಗಳನ್ನು ತುಂಬಿಕೊಳ್ಳುತ್ತ, ಅರ್ಥವನ್ನು ಸರ್ವತ್ರ ತಿಳಿಗೊಳಿಸುತ್ತ, ಪಾರಿಭಾಷಿಕ ಶಬ್ದಗಳು, ತಾ ಮುಂದು ನಾ ಮುಂದು ಎಂದು ಸವ್ಯಸಾಚಿಯಾಗಿ ದಿನಕ್ಕೊಂದು ಹೊಸ ಶಬ್ದಾರ್ಥಗಳು ಮುಂದೆ ಬಂದು ನಿಲ್ಲುತ್ತವೆ. ಈ ಎಲ್ಲ ಶಬ್ದಗಳು, ಕು ತೋದೆಯುಂ ಎಲ್ಲರ ಅಂತಃಕರುಣೆಯಲ್ಲಿ ನದಿನದಗಳೆಲ್ಲ ಉಕ್ಕಿ, ಜ್ಞಾನದ ಕಡಲೇ ಆಗತೊಡಗಿವೆ. ಈ ಕಡಲು ಪ್ರತಿಯೊಬ್ಬ ಮನುಷ್ಯನ ಹೃದಯದಾಳಕ್ಕೆ ಲಗ್ಗೆಯಿಟ್ಟಿದೆ.

ಹಾಗಾಗಿ ಜಗತ್ತಿನ ಎಲ್ಲ ಶಿಸ್ತುಗಳನ್ನು ಬೆಸೆಯುವ ಭಾಷಾ ವಿಜ್ಞಾನವೇ ಇಂದು ಜಗತ್ತಿನ ಎಲ್ಲ ಶಿಸ್ತುಗಳ ಸಾಧನೆಗೆ, ಧರ್ಮಾರ್ಥ ಕಾಂವೇಷಗಳನ್ನು ಅನಾವರಣಗೊಳಿಸುವ ಗುರಿಯನ್ನೆಲ್ಲ ಅಂಗೈನೆಲ್ಲಿಯಾಗಿಸುವ - ಕಾಯಕ ನಿಷ್ಠೆಯಲ್ಲಿಯೇ ತೊಡಗಿರುವುದನ್ನು ಕಾಣುತ್ತಿದ್ದೇವೆ. ಅದೆಲ್ಲವನ್ನು ಜಗತ್ತಿನ, ಸಮಕಾಲೀನ ಸಾಹಿತ್ಯದಲ್ಲಿ ಹಿಡಿದಿಡುವುದು ವರ್ತಮಾನ ಮತ್ತು ಭವಿಷ್ಯದ ದೃಷ್ಟಿಯಿಂದ ತೀರ ಆದ್ಯತೆಯ ಕ್ರಿಯಾಶೀಲತೆಯನ್ನು ಹೊಂದಿದೆ. ಇಂಥ ವಿಸ್ತಾರದಲ್ಲಿ

ದಿನ ಬೆಳಗು ಸರ್ವಭಾಷಾ ಪತ್ರಿಕೆಗಳು ಸಾಮಾನ್ಯವಾದ ಶಬ್ದ ಸಂಪದವನ್ನು ಶಬ್ದಕೋಶದಲ್ಲಿ ಹಿಡಿದಿಡಲು ಪ್ರೇರಣೆಯಾಗಿ ನಿಲ್ಲುತ್ತಿದೆ ಅದು ಹೊಂದಿರುವ ಸಾಮಾನ್ಯಾರ್ಥದಲ್ಲಿರುವ ವಿಶೇಷಾರ್ಥಗಳನ್ನು ಲೋಕ ಕಲ್ಯಾಣಾರ್ಥ ಇರುವ ಸಮಗ್ರ ಅಂತರ ಬಹು ಶಿಸ್ತೀಯ ಅಧ್ಯಯನಕ್ಕೆ ಅಧ್ಯಾಪನಕ್ಕೆ, ಶೋಧ ಪರಿಶೋಧಗಳಿಗೆ ಬೆನ್ನೆಲುವಾಗಿ ಸಂಗ್ರಹಿಸಿ ಸಂಪಾದಿಸಿ ಪರಿಷ್ಕಣೆ ಗೊಳಿಸಿಕೊಡಬೇಕಾದುದು ಅರ್ಥಾತ್ ಆ ಚಹರೆಯನ್ನು ಅರ್ಥೈಸಿ ಕೊಡಬೇಕಾದ ಕೆಲಸ ಸಂಶೋಧನಾ ಸಾಹಿತ್ಯ ರಚನೆಕಾರರ ಹೊಣೆಯಾಗಿದೆ. ಈ ಸವಾಲನ್ನು ಬಿಡಿಸಲು ಭಾಷಾ ಸಾಹಿತ್ಯ ಸಂಶೋಧಕರು ಮುಂದಾಗಬೇಕು ಏಕೆಂದರೆ ಕಾಲ ನಿಲ್ಲುವುದಿಲ್ಲ, ಕಾಲದ ಜೊತೆಯಲ್ಲಿಯೇ ಈ ಕಾರ್ಯಾನುಗ್ರಹಕ್ಕೆ ಹೆಜ್ಜೆ ಹಾಕಿದಾಗ ಮಾತ್ರ ಜಗತ್ತಿನ ಕಲ್ಯಾಣ-ಜನಹಿತ ಸಾಧನೆ ಇಲ್ಲದೇ ಹೋದರೆ, ಜಗತ್ತಿನ ಬದುಕಿನ ಭಾಷೆಗಳಲ್ಲಿರುವ ಶಬ್ದಾರ್ಥಗಳೆಲ್ಲ, ಎಲ್ಲ ಭಾಷೆಗಳವರಿಗೂ ಅರ್ಥವಾಗುತ್ತಿರುವ ಈ ಸಂದರ್ಭದಲ್ಲಿ ಏಕತ್ರವಾಗಿ

ಭಾಷಾ ಸಾಹಿತ್ಯ ಸಂಶೋಧಕರು ಟೊಂಕ ಕಟ್ಟಿ ನಿಲ್ಲಬೇಕು ಮತ್ತು ಈ ಕಾರ್ಯಕ್ಕೆ ಪೂರಕವಾಗಿ ಬಹುಶಿಸ್ತೀಯ (ಮಾನವಿಕ, ಚಾರಿತ್ರಿಕ, ಭಾಷಿಕ, ಜ್ಞಾನವಿಜ್ಞಾನ, ಪರಿಜ್ಞಾನ-ಪರಮಜ್ಞಾನ) ಅಧ್ಯಯನದಲ್ಲಿ ಜ್ಞಾನನಿಧಿಯಾಗಿರುವುದಿಲ್ಲ -



ಅರ್ಥವಾಗುವಂತೆ ಪರಿಪರಿಷ್ಕೃತ ಶಬ್ದಕೋಶಗಳ ವಿಶ್ವಕೋಶಗಳ, ವಸ್ತು, ವಿಶ್ವ ಕೋಶಗಳು, ಸಮರೋವಾದಿಯಲ್ಲಿ ಬರಬೇಕು. ಇಲ್ಲದೆ ಹೋದರೆ ಸರ್ವಭಾಷಾ ಸರಸ್ವತಿಯು ಸಮರರ ಬದುಕಿನಿಂದ ಭಿನ್ನಭಿನ್ನವಾಗಿ ಸಿಡಿದು ಒಳಗಣ್ಣು ಮುಚ್ಚಿಕೊಂಡು ಹೊರಗಣ್ಣಿಗೆ ತಿಳಿಯದಂತೆ ಪರದೆ ಹಾಕಿದ ನಡೆದೆ, ಕೊಡುಕೊಳ್ಳುವಿಕೆಗಳಲ್ಲಿ ಕುಸಿಯುವಂತೆ ಮಾಡೀತು! ಅಂತಹ ಒಂದು ಸಂದೇಶವನ್ನು ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಈ ಗೋಷ್ಠಿಯಿಂದ ನಿಡಬೇಕಾದುದು ಬಹು ಮುಖ್ಯವಾಗಿದೆ.

ಇಲ್ಲದೆ ಹೋದರೆ, ನಮ್ಮ ವಶಕ್ಕೆ ಬಂದಿರುವ ಅಣು-ಪರಿಮಾಣ ಶಕ್ತಿ ಆಸ್ಫೋಟಗೊಂಡು ಚದುರು ಚದುರಾಗಿ ಸಿಡಿದು, ಅರ್ಥವಾಗದೆ ಹರಡಿ, ಬಹುಭಾಷೆಗಳು, ಸಂವಹನವಿಲ್ಲದೆ ತಮ್ಮಷ್ಟಕ್ಕೆ ತಾವು ಸ್ಪರ್ಶ ಜ್ಞಾನವನ್ನು ಕಳೆದುಕೊಂಡು ಮೂಕದಾನ,

ಕುರುಡರಾಗಿ, ಕೋಲುಹಿಡಿದೂ ನಡೆಯದಂತಹ ಹೆಳತರಾಗಿ, ಅಂತರಂಗ ಬಹಿರಂಗದ ಅರಿವನ್ನೇ ಕಳೆದುಕೊಮಡ ಅರಿವುಗೇಡಿ ಪ್ರಪಮಚದ ಆವಿಷ್ಕಾರಕ್ಕೆ ಕಾರಣರಾಗುತ್ತೇವೆ ಎಂಬುದನ್ನು ಮರೆಯಬಾರದು.

ಅದಕ್ಕಾಗಿ ನಾವು ಆದಿಮೂಲದಿಂದ ಶೋಧ ಪರಿಶೋಧಲ್ಲಿ ಸಂಶೋಧನೆ ನಡೆಸಿ ಒಳ್ಳೆಯ ಬದುಕನ್ನು ಸಾಧಿಸಿಕೊಂಡಿದ್ದೇವೆ. ಅದಕ್ಕಗಿ ಒಂದೊಮ್ಮೆ ಸಿಂಹಾವಲೋಕನ ಮಾಡಿಕೊಂಡಾಗ, ಕನ್ನಡದ ಸಂಶೋಧಕರೂ ಕೂಡ ಈ ಬೆಳವಣಿಗೆಯಲ್ಲಿ ಪಾಲುಗೊಂಡಿದ್ದಾರೆಂಬ ನೆನಪು ನಮ್ಮ ಮುಂದಿನ ನಡೆಗೆ ಸಹಸ್ರಬಲದ ಅಂತಃ ತೇಜವು ನಮ್ಮನ್ನು ಕಾಪಾಡುತ್ತದೆ. ರಾ.ಬಾ.ಆರ್. ನರಸಿಂಹಾಚಾರ್ಯ ರಾದಿಯಾಗಿ ಇಂದಿನ ಯುವ ಸಂಶೋಧಕರವರೆಗೆ ಎಲ್ಲರಿಗೂ ಅಭಿನಂದನವನ್ನು ಹೇಳುತ್ತ, ಕಲಬುರಗಿಯಲ್ಲಿ ಅಖಿಲಭಾರತ ಕನ್ನಡ ಸಮ್ಮೇಳನ ಆಯೋಜಿಸಿರುವುದರಿಂದ ಈ ಸಂದರ್ಭದಲ್ಲಿ ಪ್ರಸಿದ್ಧ ಸಂಶೋಧಕರಾದ ಕಪಟರಾಳ ಕೃಷ್ಣರಾಯನನ್ನು ನೆನಿಸಿಕೊಳ್ಳಬೇಕಾದುದು ಈ ಗೋಷ್ಠಿಗೆ ಹೆಚ್ಚು ಬಲವನ್ನು ತಂದುಕೊಟ್ಟಂತೆಯೇ ಸರಿ.

ಇಂದು, ಹಿಂದಿನಿಂದಲೂ ಬಹುಸಸಕ್ತವಾದ ಭದ್ರವಾದ ಬೌದ್ಧರ ನೆಲೆ ನಮ್ಮ ಚಿತ್ತಾಪುರ ತಾಲ್ಲೂಕಿನ ಸನ್ನತಿ ಎಂಬುದು ಎಲ್ಲರಿಗೂ ಗೊತ್ತಿದೆ. ಬೌದ್ಧಧರ್ಮದ ಹರಿಕಾರ ಅಶೋಕ ಚಕ್ರವರ್ತಿಯರ ಪ್ರಿಯಾನಾಮ ಅಶೋಕನ ಶಿಲ್ಪ

ಹಾಗೂ ಶಾಸನಗಳೂ ಅಲ್ಲಿರುವುದು ನಮ್ಮ ಭಾಗ್ಯ 20ನೇ ಶತಮಾನದಲ್ಲಿರುವ ಅದನ್ನು ಕಂಡು ಹಿಡಿದವರು ನಮ್ಮ ಕಪಟರಾಳ ಕೃಷ್ಣರಾಯರು. (ಆ ದಿವಸ 9-8 ವರ್ಷದ ಬಾಲಕನಾದ ನಾನು ಅಲ್ಲಿ ಇದ್ದೆನೆಂಬ ಹೆಮ್ಮೆ ನನ್ನದು) ಅವರು ಕರ್ನಾಟಕ, ಭಾರತ ಹಾಗೂ ವಿಶ್ವ ಸಂಸ್ಕೃತಿಯ ಕುರಿತು ಅನೇಕ ಸಂಶೋಧನಾತ್ಮಕ ಲೇಖನಗಳನ್ನು ಬರೆದರು. ಸಾಧ್ಯವಾದಷ್ಟು ಆಗಿನ ನಿಯತಿಕಾಲಿಕೆಗಳಲ್ಲಿ ಆ ಲೇಖನಗಳಲ್ಲಿ ಅನೇಕವು ಪ್ರಕಟವಾದವು. ಅವುಗಳೆಲ್ಲ, ಹೃದಯ ಹಾಗೂ ದೃಷ್ಟಿ ಪವಿತ್ರ್ಯದಿಂದ ಕೂಡಿದ ಲೇಖನಗಳು ಹೊಸ ಹೊಸ ಹೊಳಲುಗಳನ್ನು ನೀಡುವ, ಮುಂದೆ ಸಂಶೋಧನೆ ಮಾಡುವವರಿಗೆ ಮುಂದುವರೆಯಲು, ಹೆಬ್ಬಾಗಿಲಿನಲ್ಲಿ ಸಾಗಲು ಕೈದೀವಿಗೆ.



ಈ ರೀತಿ ಮಹತ್ತರ ಸಂಶೋಧನಾ ಸಾಹಿತ್ಯವನ್ನು ಕಪಟರಾಳರಂತೆ ಕನ್ನಡದಲ್ಲಿ ನಿರ್ಮಾಣ ಮಾಡಿಕೊಟ್ಟವರಲ್ಲಿ ಸರ್ವಶ್ರೀ ಆರ್. ನರಸಿಂಹಾಚಾರ್ಯ, ರೆವರೆಂಡ್ ಎಫ್ ಕಿಟೆಲ್, ರಸೆಲ್, ಟಿ.ಎಸ್. ವೆಂಕಣ್ಣಯ್ಯ, ಗೋವಿಂದ ಪೈ, ಬಿ.ಎಂ. ಶ್ರೀಕಂಠಯ್ಯ, ಫ.ಗು. ಹಳಕಟ್ಟಿ, ಗೋರೆಬಾಳ ಹನುಮಂತರಾವ್, ಡಿ.ಎಲ್. ನರಸಿಂಹಚಾರ್ಯ, ಡಿ.ಕೆ. ಭೀಮಸೇನರಾವ್, ತಿ.ತಾ. ಶರ್ಮಾ, ಜಿ.ಪಿ. ರಾಜರತ್ನಂ, ಆರ್.ಎಸ್. ಪಂಚಮುಖಿ, ಬಸವನಾಳ, ರಂ. ಶ್ರೀ ಮುಗಳಿ, ದ.ರಾ. ಬೇಂದ್ರೆ, ಕುವೆಂಪು, ನಂದೀಮಠ, ಉಪಾಧ್ಯ, ತೀ.ನಂ. ಶ್ರೀ. ಮಾಸ್ತಿ ನರಸಿಂಹರಾವ್ ಇನ್ನೂ ಅನೇಕರ ಹೆಸರುಗಳನ್ನು ಉಲ್ಲೇಖ ಮಾಡಬೇಕಾಗುತ್ತದೆ.

ಕ್ರಿ.ಶ. ೨೧ನೇಯ ಶತಮಾನದ ಈ ಕ್ರಿ.ಶ. ೨೦೨೦ನೆಯ ವರ್ಷದ ೫ನೆಯ ಫೆಬ್ರವರಿಯ ಈ ಕ್ಷಣವನ್ನೊಳಗೊಂಡು ಸಮಕಾಲೀನ ಸಂಶೋಧನಾ ಸಾಹಿತ್ಯವನ್ನು ಕುರಿತು ಚಿಂತನ ಮಂಥನಗಳು ನಡೆದೆ ಇವೆ. ಆಯಾ ಕಾಲಘಟ್ಟಗಳಲ್ಲಿ ಸವಾಲುಗಳನ್ನು ನಿಭಾಯಿಸಿಕೊಂಡ ಸಾಹಿತ್ಯ ಸಂಶೋಧನಾ ವಿಮರ್ಶಾ ಚರಿತ್ರೆಯನ್ನು ಕಟ್ಟಿಕೊಡುವ ಗ್ರಂಥಗಳು, ಸಾಕಷ್ಟು ಬಂದಿವೆ. ಆದರೆ ೨೧ನೆಯ ಶತಮಾನದ ಮೊದಲ ಭಾಗದ ಈವರೆಗಿನ ಕ್ರಮಬದ್ಧ ಅಧ್ಯಯನ ನಡೆಸಿ ಲೆಕ್ಕವನ್ನು ಕೊಡಬೇಕಾಗಿದೆ. ಆ ದಿಸೆಯಲ್ಲಿ ಇಂದು ಬಹುಶಿಸ್ತಿಯ ಅಧ್ಯಯನಕ್ಕೆ ಸಂಬಂಧ ಪಟ್ಟ ಕೃತಿಗಳು ಹಾಗೂ ಕೃತಿಕಾರರ ಕುರಿತು ಪರಾಮರ್ಶಕ ಗ್ರಂಥ ರಚನೆಯು ನಿಖರವಾದ ವೈಜ್ಞಾನಿಕ ಹಾಗು ವೈಚಾರಿಕ ನೆಲೆಯಲ್ಲಿ ಕಟ್ಟಿಕೊಡಬೇಕಾಗಿದೆ. ಈ ದಿಸೆಯಲಿ ವಿದ್ವಾಂಸರೂ, ವಿಶ್ವವಿದ್ಯಾಲಯಗಳೂ, ಕನ್ನಡ ಸಂಸ್ಕೃತಿ ಇಲಾಖೆ, ಅಕಾಡೆಮಿಗಳೂ, ಪ್ರಾಧಿಕಾರಗಳು, ಭಾಷಾ ಸಂಸ್ಥಾನಗಳು ಮುತವರ್ಜಿಯನ್ನು ಇನ್ನಷ್ಟು ತೀವ್ರಗತಿಯಲ್ಲಿ ವಹಿಸಬೇಕಿದೆ. ಆದ್ದರಿಂದ ಈ ಕಾಲಘಟ್ಟದಲ್ಲಿಯ ಸೃಜನಶೀಲ ಹಾಗೂ ಸೃಜನೇತರ ಬಹುಶಿಸ್ತೀಯ ಕೃತಿಗಳ ಅಧ್ಯಯನವನ್ನು ಶಾಸ್ತ್ರೋಕ್ತ ನಡೆಸಲು ನಮಗೆ ಈ ಕಾಲದ ಕನಿಷ್ಠ ಪ್ರಕಟಿತ ಗ್ರಂಥಗಳಲ್ಲಿಯ ಮುನ್ನುಡಿ ಪ್ರಸ್ತಾವನೆ,

ಪೀಠಿಕೆಗಳನ್ನು ಶೋಭಿಸಿ ಸಂಶೋಧನೆಗೊಳಪಟಿಸಿ ಮುಂದುವರೆದ ಕನ್ನಡ ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯ ಸಂಶೋಧನೆಗೆ ಪೂರಕವಾದ ಗ್ರಮಥಗಳು ನಿಷ್ಕರ್ಷೆಯಾಗಿ ಬರಲು ಸಾಧ್ಯ.

ಇದಲ್ಲದೆ ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಗೊಂಡ ಈ ನಿಟ್ಟಿನ ಇಂಥ ಸೃಜನೇತರ ಕೃತಿಗಳ ಕನ್ನಡ ಅನುವಾದಗಳು ಬರಬೇಕು. ಅದಕ್ಕೆ ಅನ್ವಯಿಸಕವಾಗಿ ಮಹತ್ತದ ಸೃಜನಶೀಲ ಕೃತಿಗಳೂ ಬೇರೆ ಬೇರೆ ಭಾಷೆಗಳಿಂದ ಕನ್ನಡಕ್ಕೆ ಬರಬೇಕಾದುದು ಪ್ರಮುಖವಾಗಿರುತ್ತದೆ. ಅದರಿಂದಾಗಿ ಬಹುಭಾಷಾ ಶಾಸ್ತ್ರೀಯ ಅಧ್ಯಯನ ಅಧ್ಯಾಪನಗಳು ಸಂಶೋಧನೆಗೆ, ಶಬ್ದಾರ್ಥದ ತಿರುಳನ್ನು ಸ್ವಾದಗೊಳಿಸಿ ಮಾನವ ಸಂಪನ್ಮೂಲವನ್ನು ಸಶ್ಯಕ್ತವಾಗಿ ವಿಕಸನಗೊಳಿಸುವಂತೆ, ಸುಂದರ ಭವಿಷತ್ತನ್ನು ವರ್ತಮಾನಗೊಳಿಸಲು ಪ್ರೇರಣಾ ಕೌಶಲ ವಾನಿಸಿಕೊಳ್ಳಬೇಕು.

ಹೇಗೂ ಮಾನ್ಯ ಎನ್.ಧರ್ಮಸಿಂಗ ಅವರು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಾಗ 'ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಸ್ಥಾಪಿಸಿ ಕಾರ್ಯನಿರ್ವಹಿಸುವಂತೆ ಮಾಡಿ ದೇಶಕ್ಕೆ ಮಾದರಿಯಾಗಿದ್ದಾರೆ. ಮೇಲೆ ಚರ್ಚಿಸಿದ



ದೃಷ್ಟಿಯಿಂದಲೂ ಕರ್ನಾಟಕ ಅನುವಾದ ಅಕಾಡೆಮಿಯು ಕೆಲಸ ಮಾಡಿದಲ್ಲಿ ನಮ್ಮ ಯೋಜನೆಯು ನವಯುಗ ನಿರ್ಮಾಣದಲ್ಲಿ ದೇಶದಲ್ಲಿಯೇ ಕನ್ನಡವು ಮುಂಚೂಣಿಯಲ್ಲಿ ಬರುತ್ತದೆ.

ಈ ದೃಷ್ಟಿಯಿಂದ ಕನ್ನಡವು ಇನ್ನಷ್ಟು ಮುಂಚೂಣಿಯಲ್ಲಿ ಬರುವಂತೆ ನೋಡಿಕೊಳ್ಳಲು, ೨೧ನೇ ಶತಮಾನದ ಪರಿಸರದ ವಿಶಿಷ್ಟತೆಗೆ ತಕ್ಕಂತಹ ಚಹರೆಯೊಡನೆ ಸಾಹಿತ್ಯದ ಎಲ್ಲ ಘಟ್ಟಗಳ ರಚನೆಗಳನ್ನು ಮರು ಪರಿಶೀಲನೆಗೆ ಒಳಪಡಿಸಿ ಅದರ ತಿರುಳನ್ನೆಲ್ಲ ಸಾರ್ವತ್ರಗೊಳಿಸಿದಾಗ ಹೊಸ ಪಾಶ ಸಿದ್ಧವಾಗಿ ಇನ್ನಷ್ಟು ಸುಮಧುರಗೊಂಡು ಅಲ್ಲಿ ಇಂದಿನ ಮತ್ತು ಮುಮದಿನ ಬದುಕು ಸ್ವಾದಿಷ್ಟ. ಆ ಮೂಲಕ ಪುರುಷಾರ್ಥ ಸಾಧನೆಯ ಅನಾವರಣ. ಆ ದರ್ಶನದಲ್ಲಿ ಪರಮಾನಂದ ಸ್ಥಿತಿ ಗತಿ- ಸಾಮಾಜಿಕರದ್ದು. ಇದನ್ನೇ ಸತ್ಯಶೋಧದ ಪರಿವ್ಯಾಪ್ತಿ ಎಂದು ಗುರುತಿಸಿ ಅಲ್ಲಿ ಅಂತ್ಯೋದಯವನ್ನು ಕಾಣುವುದು.

ಈ ನಿಟ್ಟಿನ ಅಧ್ಯಯನ ಮತ್ತು ಅಧ್ಯಾಪನಕ್ಕೆ ವಿಶಿಷ್ಟ ಪ್ರೇರಣೆಯಾಗಿ ನಿಲ್ಲಲು ಈಗ ಚಾಲ್ತಿಯಲ್ಲಿರುವ ಪತ್ರಿಕೆಗಳು ಸಾಲವು. ಇನ್ನಷ್ಟು ಪತ್ರಿಕೆಗಳು ಹೆಬ್ಬಾಗಬೇಕು, ಅವುಗಳಲ್ಲಿ ಸಮಕಾಲೀನ ಸಂಶೋಧನಾ ಸಾಹಿತ್ಯದ ಲೇಖನಗಳಿಗೆ ಆದ್ಯತೆ ಇರಬೇಕು. ವಿಶೇಷತ: ಯುವ ಸಂಶೋಧಕರ ಲೇಖನಗಳು ಪ್ರಕಟಗೊಂಡು, ಅವುಗಳ ಕುರಿತು

ವಿಶೇಷ ಚರ್ಚೆ ನಡೆದು ಆ ಚರ್ಚಾಸಾವರೂ ಆ ಪತ್ರಿಕೆಗಳಲ್ಲಿ ಪ್ರಕಟಗೊಂಡು - ಯುವ ಸಂಶೋಧಕರು ಪ್ರವರ್ಧಮಾನರಾಗಬೇಕು.

ಜೊತೆಗೆ, ಸಂಶೋಧನಾ ಸಾಹಿತ್ಯ ಕ್ಷೇತ್ರದಲ್ಲಿ ಆಕರವಾಗಿರುವ ಅಲಭ್ಯ ಗ್ರಂಥಗಳ ಮರು ಮುದ್ರಣವಾಗಿ ಸುಲಭವಾಗಿ ಲಭ್ಯವಾದರೆ, ಯುವ ಸಂಶೋಧಕರು ಸಿಂಹಾವಲೋಕನ ಕ್ರಮದಲ್ಲಿ ಮುಂದಿನ ಬೆಳೆಯನ್ನು ಸದೃಢಗೊಳಿಸಲು ಸಾಧ್ಯವಾಗುತ್ತದೆ.

## ಸ್ತ್ರೀಲೋಕ : ತಲ್ಲಣಗಳು

## ಮಹಿಳೆ ಮತ್ತು ಪ್ರಭುತ್ವ

**· ಡಾ. ಆರ್. ಪೂರ್ಣಿಮಾ**

ಮಹಿಳೆ ಮತ್ತು ಪ್ರಭುತ್ವ - ಇವೆರಡೂ ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ನಿಂತಿರುವ ಪದಗಳು, 'ಎತ್ತಣಿಂದೆತ್ತ ಸಂಬಂಧ' ಎಂದು ಮೊದಲ ನೋಟಕ್ಕೆ ಅನ್ನಿಸಬಹುದು. ಏಕೆಂದರೆ ಜಗತ್ತಿನಲ್ಲಿ ಇತಿಹಾಸ ಎಂದರೆ, ಬರೀ ಪ್ರಭುಗಳ ಇತಿಹಾಸ, ಪ್ರಭುಗಳು ಕಟ್ಟಿ ಮೆರೆದ ಪ್ರಭುತ್ವದ ಇತಿಹಾಸ. ಈ ಇತಿಹಾಸದಲ್ಲಿ, ಅಂದರೆ, 'ಹಿಸ್ಟರಿ'ಯಲ್ಲಿ, ತುಂಬಿರುವುದು ಬರೀ 'ಹಿಸ್ ಸ್ಟೋರಿ'ಯೇ ಹೊರತು 'ಹರ್ ಸ್ಟೋರಿ' ಅಲ್ಲ. ಇತಿಹಾಸದಲ್ಲಿ ಕಿಕ್ಕಿರಿದಿರುವುದು 'ಅವನ' ಕಥೆಗಳೇ ಹೊರತು 'ಅವಳ' ಕಥೆಗಳಲ್ಲ. ಆದರೆ ವಾಸ್ತವವಾಗಿ ಇತಿಹಾಸ ಎಂದರೆ ಬರೀ ಪ್ರಭುಗಳ, ಅವರ ಸಾಮ್ರಾಜ್ಯದಾಹದ ನಿರಂತರ ಯುದ್ಧೋನ್ಮಾದದ ಕಥೆಯಲ್ಲ, ಇತಿಹಾಸ ಎಂದರೆ ಪ್ರಭುಗಳು ತಮ್ಮ ಸಾಮ್ರಾಜ್ಯ ರಕ್ಷಣೆ ಮತ್ತು ಯುದ್ಧೋನ್ಮಾದಕ್ಕಾಗಿ ನಿರಂತರವಾಗಿ ಬಳಸಿಕೊಂಡವರ ಕಥೆ ಕಾದು ಸತ್ತ ಸೈನಿಕರ, ದನಿಯಿಲ್ಲದ ಮಹಿಳೆಯರ, ಬಿಟ್ಟಿ ದುಡಿದ ತಳ ಸಮುದಾಯಗಳ, ತೆರಿಗೆ ತೆತ್ತ ಕಾಯಕಜೀವಿಗಳ ವ್ಯಥೆಯ ಕಥೆ. ಇತಿಹಾಸದಲ್ಲಿ ಅಟ್ಟಹಾಸ ಎಷ್ಟು ತುಂಬಿದೆಯೋ ಅದಕ್ಕಿಂತ ಹೆಚ್ಚು ನಿಟ್ಟುಸಿರು ತುಂಬಿದೆ. ಈ ಕಟುಸತ್ಯದ ಹಿನ್ನೆಲೆಯಲ್ಲಿ 'ಮಹಿಳೆ ಮತ್ತು ಪ್ರಭುತ್ವ' ಅನ್ನುವುದಕ್ಕಿಂತ 'ಪ್ರಭುತ್ವ ಮತ್ತು ಮಹಿಳೆ' ಎಂದು ಹೇಳುವುದೇ ಸೂಕ್ತ; ಅದು ಯಾರು ಯಾರನ್ನು ನಿಯಂತ್ರಿಸಿದರು ಎಂಬುದನ್ನು ಬಹಳ ವಾಚ್ಯವಾಗಿ ಹೇಳುತ್ತದೆ!

ಪ್ರಭುತ್ವ ಎಂದರೆ ಆಯಾ ಕಾಲಘಟ್ಟದ ಆಳುವ ವರ್ಗ ಮಾತ್ರ ಎಂದಲ್ಲ. ರಾಜಕೀಯ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ ಮತ್ತು ಮುಖ್ಯವಾಗಿ ಧಾರ್ಮಿಕ ವ್ಯವಸ್ಥೆ ಇವು ಮುಪ್ಪುರಿಗೊಂಡ ನಿಯಂತ್ರಕ ಶಕ್ತಿಯೇ 'ಪ್ರಭುತ್ವ'. ಅದು ಮಹಿಳೆಯನ್ನು ಸಮಾಜದಲ್ಲಿ ಮತ್ತು ಇತಿಹಾಸದಲ್ಲಿ ಎಲ್ಲಿಡಬೇಕು ಎಂದು ಬಯಸಿದೆಯೋ ಅಲ್ಲೇ ಇಟ್ಟಿದೆ. ಶತಮಾನಗಳು ಉರುಳಿದರೂ ಹಾಗೇ ಇಟ್ಟಿದೆ. ಈ ನಿಯಂತ್ರಕ ಪ್ರಭುತ್ವ, ಸಮಾಜದಲ್ಲಿ ಹೆಣ್ಣೆಂದರೆ ಹೀಗಿರಬೇಕು, ಹೆಣ್ಣೆಂದರೆ ಹೇಗಿರಬೇಕು, ಹೆಣ್ಣೆಂದರೆ ಹಾಗಿರಬೇಕು ಎಂದು ರೂಪಿಸಿರುವ ನೀತಿನಿಯಮಗಳೇ ಲಿಂಗ ರಾಜಕಾರಣದ, ಜೆಂಡರ್ ಪಾಲಿಟಿಕ್ಸ್‌ನ ಮೂಲತತ್ವ, ಧಾರ್ಮಿಕ ಪ್ರಭುತ್ವ ಹೇಳುವ ತಾಯಿ, ಮಾತೆ ಎಂಬ, ಲಕ್ಷ್ಮಿ, ಸರಸ್ವತಿ, ಪರಾಶಕ್ತಿ, ಚಂಡಿಚಾಮುಂಡಿ ಎಂಬ ಹೆಣ್ಣಿನ ಪೂಜೆ, ಆರಾಧನೆಯ ಮಾತುಗಳ ನಿಜಸ್ವರೂಪ ಏನು ಎನ್ನುವುದು ಎಲ್ಲರಿಗೂ ಗೊತ್ತು. ಜೀವ ಪರಂಪರೆ ಮುಂದುವರೆಯಲು ಅಂದರೆ ಮಕ್ಕಳನ್ನು ಹೆರಲು ಹೆಣ್ಣು ಬೇಕೇಬೇಕು. ಆ ಜವಾಬ್ದಾರಿ ನಿರ್ವಹಿಸುವ ತಾಯಿಗೆ ಕೃತಜ್ಞತೆ ಎನ್ನುವುದೇನು ಇಡೀ ಜೀವಮಾನದ ಬಳುವಳಿಯಾಗಿ ಇರುವುದಿಲ್ಲ. ಇನ್ನು ಹೆಣ್ಣು ಲಕ್ಷ್ಮಿ ಎಂದು ಕರೆಸಿಕೊಂಡರೂ ಹಣ ಮತ್ತು ಸಂಪತ್ತಿನ ಮೇಲೆ ಅವಳಿಗೆಷ್ಟು ಅಧಿಕಾರವಿದೆ ಎನ್ನುವುದನ್ನು, ಸರಸ್ವತಿ ಎಂದು ಅವಳನ್ನು ಕರೆದರೂ

ದೇಶದ ಅನಕ್ಷರತೆಯಲ್ಲಿ ಹೆಣ್ಣುಮಕ್ಕಳ ಪಾಲು ಎಷ್ಟು ಎಂಬುದನ್ನು, ಪರಾಶಕ್ತಿ ಎಂದು ಕರೆಸಿಕೊಳ್ಳುವ ಅವಳಿಗೆ ಯಾವ ವಿಚಾರದಲ್ಲಿ ಎಷ್ಟು ಶಕ್ತಿ ಇದೆ ಎನ್ನುವುದನ್ನು ಪ್ರತ್ಯೇಕವಾಗಿ ವಿವರಿಸಬೇಕಿಲ್ಲ. "ಎಲ್ಲಿ ನಾರಿಯರನ್ನು ಪೂಜ್ಯಭಾವದಿಂದ ನೋಡಲಾಗುತ್ತದೋ ಅಲ್ಲಿ ದೇವತೆಗಳು ಸಂತೋಷಗೊಳ್ಳುತ್ತಾರೆ" ಎಂಬ ಮಾತಿದೆ. ಪ್ರಭುತ್ವದ ಅತ್ಯುನ್ನತ ವ್ಯವಸ್ಥೆ ಇರುವ ಸ್ವರ್ಗಲೋಕದಲ್ಲಿ ದೇವೇಂದ್ರ ಸೇರಿ ಎಲ್ಲ ದೇವತೆಗಳು ಮಹಿಳೆಯರಿಗೆ ಎಷ್ಟು ಮರ್ಯಾದೆ ಕೊಡುತ್ತಾರೆ ಎನ್ನುವುದನ್ನು ತಿಳಿಸಲು ಅಸಂಖ್ಯಾತ ಕಥೆಗಳಿವೆಯಲ್ಲ!

ಒಟ್ಟಿನಲ್ಲಿ ಸ್ವರ್ಗಲೋಕದಿಂದ ಪಾತಾಳಲೋಕದವರೆಗೆ ಹರಡಿಕೊಂಡಿರುವ ನಮ್ಮ ಪರಂಪರೆಯಲ್ಲಿ, ಪ್ರಭುತ್ವದ ದೃಷ್ಟಿಯಲ್ಲಿ ಮಹಿಳೆಗೆ ಇರುವುದು ಎರಡನೆಯ ಅಥವಾ ಅದಕ್ಕೂ ಕೆಳಗಿನ ಸ್ಥಾನವೇ ಹೊರತು ಸಮಾನ ಸ್ಥಾನ ಅಲ್ಲ. ಪ್ರಭುತ್ವ ಎನ್ನುವುದು ಪುರುಷ ಪ್ರಧಾನ- ಪಿತೃ ಪ್ರಧಾನ ಚಿಂತನೆಯ ವ್ಯಕ್ತರೂಪ ಆಗಿರುವುದರಿಂದ ಮತ್ತು ಅದರ ಅಧಿಕಾರ ಚಾಲನೆಯ ಕೇಂದ್ರ ಆಗಿರುವುದರಿಂದ ಮಹಿಳೆಗೆ ಈ ಪ್ರಭುತ್ವದ, ಅರ್ಥಾತ್ ಪುರುಷ ಪ್ರಧಾನ ವ್ಯವಸ್ಥೆಯ ಸೇವೆಯೇ ಅವಳ ಶಾಶ್ವತ ಕರ್ತವ್ಯ ಆಗಿರುತ್ತದೆ. ಮಹಿಳೆ ಮತ್ತು ಶೂದ್ರ ಇಬ್ಬರೂ ಒಂದೇ ಎಂದು ಸಾಮಾಜಿಕ ವ್ಯಾಖ್ಯಾನದಲ್ಲಿ ಹೇಳುವುದುಂಟು. ಆದರೆ ಪ್ರಭುತ್ವ, ವರ್ಗ, ವರ್ಣ ಇವುಗಳು ಶೂದ್ರ ಪುರುಷನನ್ನು ಹಣಿದರೆ, ಈ ಮೂರರ ಜೊತೆ ಪುರುಷ ಅಹಂಕಾರವೂ ಸೇರಿ ಶೂದ್ರ ಮಹಿಳೆಯನ್ನು ದಮನಿಸುತ್ತವೆ. ಶೂದ್ರಾತಿಶೂದ್ರ ಪುರುಷನಿಗೆ ಕೂಡ ಸಮಾಜದಲ್ಲಿ ಬೇರೆಲ್ಲೂ ದಕ್ಕದ ಅಧಿಕಾರವು ಕುಟುಂಬ, ಸಂಸಾರ, ದಾಂಪತ್ಯದಲ್ಲಿ ದಕ್ಕುತ್ತದೆ. ಒಟ್ಟಿನಲ್ಲಿ ಸಾರ್ವತ್ರಿಕ ಮತ್ತು ವೈಯಕ್ತಿಕ ಎರಡೂ ನೆಲೆಗಳಲ್ಲಿ ಪ್ರಭುತ್ವದ ಎಲ್ಲ ಸಾಕಾರ ರೂಪಗಳೂ ಮಹಿಳೆಯನ್ನು ನಾನಾ ರೀತಿಯಲ್ಲಿ ಬಾಧಿಸುತ್ತವೆ ಎನ್ನುವುದು ಲೋಕವಾಸ್ತವ.

ಪ್ರಭುತ್ವ ಹಾಗಾದರೆ ಮಹಿಳೆಗೆ ಏನೂ ಒಳ್ಳೆಯದನ್ನು ಮಾಡಿಲ್ಲವೇ ಯಾವ ಅವಕಾಶವನ್ನೂ ಕೊಟ್ಟಿಲ್ಲವೇ ಎಂಬ ಪ್ರಶ್ನೆ ಇದ್ದೇ ಇರುತ್ತದೆ. ಆದರೆ ಅಲ್ಲೊಬ್ಬ ಗಾರ್ಗಿ, ಇಲ್ಲೊಬ್ಬ ಮೈತ್ರೇಯಿ, ಅಲ್ಲೊಬ್ಬ ಝಾನ್ಸಿ ರಾಣಿ, ಇಲ್ಲೊಬ್ಬ ಕಿತ್ತೂರು ಚೆನ್ನಮ್ಮ ಮೊದಲಾದವರಿಗೆ ಕೊಟ್ಟಿರುವ ಅವಕಾಶದ ಉದಾಹರಣೆಗಳು, ನಮ್ಮ ಪರಂಪರೆ ಮಹಿಳೆಯರಿಗೆ ಕೊಡದೆ ಕಿತ್ತುಕೊಂಡಿರುವ ಅಪಾರ ಅವಕಾಶಗಳಿಗೆ ಎಂದೆಂದಿಗೂ ಸಮನಾಗಲಾರವು. ಬೆಟ್ಟದ ಮುಂದಿನ ಧೂಳು ಅನ್ನಿಸುವ ಈ ಉದಾಹರಣೆಗಳನ್ನು ಕೊಡುವ ಮೂಲಕ 'ಪ್ರಭುತ್ವ ಮತ್ತು ಮಹಿಳೆ' ಇವೆರಡರ ನಡುವೆ ಇರುವ ಅಗಾಧ ಕಂದರವನ್ನು ತುಂಬುವ ವ್ಯರ್ಥ ಪ್ರಯತ್ನ ಮಾಡುವುದು ಬೇಡ. ಹಾಗೆಯೇ ಪ್ರಭುತ್ವವನ್ನು ಮಹಿಳೆ ಪ್ರಶ್ನೆ ಮಾಡಿರುವ, ಪ್ರತಿರೋಧ ತೋರಿರುವ ಪ್ರಸಂಗಗಳನ್ನೂ ನಮ್ಮ ಪರಂಪರೆಯಲ್ಲಿ ನೋಡಿದ್ದೇವೆ. ರಾಜಕಾರಣದಲ್ಲಿ ತಮ್ಮ ನಿಲುವನ್ನು ಮುಜುಗರವಿಲ್ಲದೆ ಹೇಳುತ್ತಿದ್ದ ಕುಂತಿ, ಗಾಂಧಾರಿ, ದ್ರೌಪದಿಯರನ್ನು ನಾವು ಮೆಚ್ಚಿದ್ದೇವೆ. ಗರ್ಭಿಣಿಯಾದ ತನ್ನನ್ನು ಕಾಡಿಗೆ ಅಟ್ಟಿದ ಎಷ್ಟೋ ವರ್ಷಗಳ ಮೇಲೆ ಮತ್ತೆ ಬಂದು ಅರಮನೆಗೆ ಮರಳುವಂತೆ ಶ್ರೀರಾಮ ನೀಡಿದ ಆಹ್ವಾನವನ್ನು ನಿರಾಕರಿಸಿ ಭೂಮಾತೆಯ ಒಡಲು ಸೇರಿದ (ಅಥವಾ ಇತಿಹಾಸದಲ್ಲಿ ಮಹಿಳೆ ನೀಡಿದ ಪ್ರಥಮ ವಿಚ್ಛೇದನ ಎಂದು ಕರೆಯಬಹುದಾದ) ಸೀತೆಯ ದಿಟ್ಟತನಕ್ಕೆ ಬೆರಗಾಗಿದ್ದೇವೆ. "ನನಗೆ ಯಾರೂ ಇಲ್ಲ ಎಂದು

ಅಂದುಕೊಳ್ಳಬೇಡ, ನಾನು ಯಾರಿಗೂ ಅಂಜುವವಳಲ್ಲ" ಎಂದು ಸವಾಲು ಹಾಕಿದ ವಚನಕಾರ್ತಿಯನ್ನು ಪ್ರಶಂಸೆ ಮಾಡಿದ್ದೇವೆ. ಅಂಥ ಇನ್ನೂ ಎಷ್ಟೋ ಉದಾಹರಣೆಗಳು ನಮ್ಮ ಪುರಾಣ, ಚರಿತ್ರೆ, ಸಾಹಿತ್ಯಗಳಲ್ಲಿ ಇವೆ. ಇವೆಲ್ಲ ಕ್ವಚಿತ್ತಾಗಿ ಕಾಣಿಸಿದರೂ ಮಹಿಳೆಯ ಮತ್ತು ತಳಸಮುದಾಯದ ಶಕ್ತಿಸಾಮರ್ಥ್ಯಗಳ ದಮನ ಇವುಗಳೇ ಪ್ರಭುತ್ವದ ಮಹಾರಥಕ್ಕೆ ಚಕ್ರಗಳು. ಚರಿತ್ರೆಯುದ್ದಕ್ಕೂ ಪ್ರಭುತ್ವಕ್ಕೆ ಸಮಾನತೆ ಎಂಬ ಪದವೇ ಗೊತ್ತಿಲ್ಲ. ಮೇಲು ಕೀಳು ಎನ್ನುವುದೇ ಪ್ರಭುತ್ವದ ಮೂಲ ಮಹಾಮಂತ್ರ ಎಂಬಲ್ಲಿಗೆ ಪ್ರಭುತ್ವ ಮತ್ತು ಮಹಿಳೆ ಎಂಬುವೆರಡರ ನಡುವಿನ ಸಂಬಂಧ ನಮಗೆ ಅರ್ಥವಾಗುತ್ತವೆ.

ರಾಜಪ್ರಭುತ್ವ ಹೋಗಿ ಪ್ರಜಾಪ್ರಭುತ್ವ ಬಂದ ಮೇಲೆ ಮಹಿಳೆಯ ಸ್ಥಾನಮಾನ ಬದಲಾದ ಅಥವಾ ಬದಲಾಗದ ಬಗೆಯೇ ಕುತೂಹಲಕರ ಅಧ್ಯಯನಕ್ಕೆ ತಕ್ಕ ವಿಷಯ. ಬ್ರಿಟಿಷ್ ಸಾಮ್ರಾಜ್ಯಶಾಹಿ ತೊಲಗಿಸಲು ನಮ್ಮ ದೇಶದಲ್ಲಿ ಬೆಳೆದ ರಾಷ್ಟ್ರೀಯವಾದಿ ಚಳವಳಿಯಲ್ಲಿ ಮಹಿಳೆಯರೂ ಹೆಜ್ಜೆ ಹಾಕಿದರು ಎನ್ನುವುದು ಬಹಳ ಗಮನಾರ್ಹ. ಅಂದಿನ ಮಹಿಳೆಯರ ಹೋರಾಟದಲ್ಲಿ ದೇಶಕೋಶ ಮಾತ್ರವಲ್ಲ, ಅವರ ಭಾವಕೋಶವೂ ಸೇರಿತ್ತು. ದೇಶದ ಜೊತೆಗೆ ಅವರ ಸಂಕೋಲೆಗಳೂ ಕಳಚುವುದು ಮುಖ್ಯವಾಗಿತ್ತು. "ಭಾರತ ಬಿಟ್ಟು ತೊಲಗಿ" ಎಂದು ಮಹಿಳೆಯರು ಬ್ರಿಟಿಷರ ವಿರುದ್ಧ ಗಟ್ಟಿಯಾಗಿ ಕೂಗಿದರೆ, ಅದರೊಳಗೆ ಅವರ ಇನ್ನಿತರ ಬಿಡುಗಡೆಯ ಹಂಬಲದ 'ಆಜಾದಿ' ಕೂಗುಗಳೂ ಅನುರಣಿಸುತ್ತಿದ್ದವು. ಪ್ರಭುತ್ವದ ಶಾಪಗಳಾದ ಅಸಮಾನತೆ, ಅನಕ್ಷರತೆ, ಅಧಿಕಾರಹೀನತೆ ಇವುಗಳಿಂದಲೂ ಅವರಿಗೆ ಬಿಡುಗಡೆ ಬೇಕಿತ್ತು. ಆಳುವ ವರ್ಗ ಬದಲಾಗುವುದರೊಂದಿಗೆ ತಮ್ಮ ಬದುಕೂ ಬದಲಾಗಬೇಕು ಎನ್ನುವ ಆಸೆ ಈಡೇರಲು ಇದೊಂದು ಸುವರ್ಣ ಅವಕಾಶ ಎಂದು ಮಹಿಳೆಯರು ಆಗ ನಂಬಿದ್ದರೆ ಅದರಲ್ಲಿ ತಪ್ಪೇನಿಲ್ಲ. ಏಕೆಂದರೆ 'ಬೇಡಿ' ಅನ್ನುವುದು ಏಕತ್ರವಾಗಿ ಏಕರೂಪದಲ್ಲಿ ಇರುವುದಿಲ್ಲ, ಮಹಿಳೆಯರ ಪಾಲಿಗಂತೂ ಅದು ಸರ್ವತ್ರ ಇದ್ದ ಬಹುರೂಪದ ಬೇಡಿ. ಅದು ಕಳಚುವುದೆಂದರೆ ಹಲವು ಸಂಕೋಲೆಗಳಿಂದ ಹಲವು ಬಗೆಯಲ್ಲಿ ಬಿಡುಗಡೆ ಸಿಕ್ಕಿದಂತೆ ಎಂದು ಅವರು ಭಾವಿಸಿದ್ದರೆ ಅದನ್ನು ಯಾರಾದರೂ ನಂಬಬಹುದು.

ಈಗ ನಮ್ಮ ಭಾರತ ಸ್ವತಂತ್ರವಾಗಿ ಏಳು ದಶಕಗಳೇ ಕಳೆದಿವೆ. ಪ್ರಜಾಪ್ರಭುತ್ವ ಮತ್ತು ಭಾರತೀಯ ಮಹಿಳೆ ಎಂಬ ವಿಶಾಲ ಸ್ತರ ದೊರೆತಿದೆ. ನಮ್ಮ ಸಂವಿಧಾನ 'ಗಂಡು ಹೆಣ್ಣು ಸಮಾನ' ಎಂದು ಘೋಷಿಸಿತು. ಮತದಾನ ಸೇರಿ ಅನೇಕ ಹಕ್ಕುಗಳನ್ನು ಅವನ ಹಾಗೆ ಅವಳಿಗೂ ಉದಾರವಾಗಿ ಕೊಟ್ಟಿತು. ಆದರೆ ಸಮಾಜ ಮತ್ತು ಸಂಸಾರ ಆ ಹಕ್ಕುಗಳನ್ನು ಅವಳಿಗೆ ತಟ್ಟೆಯಲ್ಲಿಟ್ಟು ಕೊಡಲಿಲ್ಲ. ಶಿಕ್ಷಣ ಮತ್ತು ಉದ್ಯೋಗದ ಬಾಗಿಲುಗಳೇನೋ ಅರ್ಧಂಬರ್ಧ ತೆರೆದವು. ಅನೇಕ ಹಕ್ಕುಗಳನ್ನು ದಕ್ಕಿಸಿಕೊಳ್ಳಲು ಸುಪ್ರೀಂ ಕೋರ್ಟ್‌ವರೆಗೆ ಹೋರಾಟ ಮಾಡುತ್ತಲೇ

ಇರಬೇಕಾಯಿತು. ಹಕ್ಕು ಎನ್ನುವುದು ಅವಳ ಬದುಕಿಗೆ ಪೂರ್ಣ ದಕ್ಕಿದಾಗ ಮಾತ್ರ ಹಕ್ಕು, ಸಂವಿಧಾನ ಅವಳಿಗೆ ಹಕ್ಕು ಕೊಟ್ಟಿರಬಹುದು, ಆದರೆ ಅದಕ್ಕೆ ತಕ್ಕ ಅವಕಾಶಗಳನ್ನು ಆಳುವ ಸರ್ಕಾರಗಳು ಕೊಟ್ಟಿವೆಯೇ? ಸೂಕ್ತ ಅವಕಾಶಗಳನ್ನು ಕೊಡುವ ಮೂಲಕ ಪ್ರಭುತ್ವ ಅವಳಿಗೆ ಅಧಿಕಾರವನ್ನು ಕೊಟ್ಟಿದೆಯೇ? ಈ ದೃಷ್ಟಿಯಿಂದ ಭಾರತೀಯ ಮಹಿಳೆಯರ ಪಾಲಿಗೆ ಪ್ರಜಾಪ್ರಭುತ್ವವೂ ಪರಂಪರಾಗತ ಪ್ರಭುತ್ವದ ಪ್ರತಿನಿಧಿಯಲ್ಲದೆ ಬೇರೆಯಲ್ಲ.

ಹೀಗೆ ಅಂದೊಡನೆ ಪ್ರಜಾಪ್ರಭುತ್ವದಲ್ಲಿ ಮಹಿಳೆಗೆ ಏನೂ ಸಿಕ್ಕಿಲ್ಲ ಎಂದು



ಭಾವಿಸಬೇಕಿಲ್ಲ. ಸರ್ಕಾರಗಳು ಅವಳಿಗೆ ಕೊಡುತ್ತಿರುವ ಸವಲತ್ತು, ಸಹಾಯ, ಸೌಲಭ್ಯಗಳು ಅವಳ ಸಂಕಷ್ಟವನ್ನು ತುಸುವಾದರೂ ನೀಗಿರಬಹುದು. ಎಷ್ಟೊಂದು ಸರ್ಕಾರಗಳು ಜಾರಿ ಮಾಡಿದ ಎಷ್ಟೊಂದು ಯೋಜನೆಗಳು ಅವಳ ಹೆಸರಿನಲ್ಲಿವೆ. ಅವಳ ಸಬಲೀಕರಣಕ್ಕೆ ಎಷ್ಟೊಂದು ಯೋಜನೆಗಳನ್ನು ಜಾರಿ ಮಾಡಲಾಗಿದೆ. ಆದರೆ ಕಟುವಾಸ್ತವಗಳು ಬೇರೆಯೇ ಇವೆ. ಮೊದಲು ಹೆಣ್ಣಿಗೆ ಹುಟ್ಟುವ ಹಕ್ಕಾದರೂ ಇರುತ್ತಿತ್ತು; ಈಗ ಅವಳು ಹುಟ್ಟದಂತೆ ಹೊಟ್ಟೆಯಲ್ಲೇ ಹೊಸಕಿ ಹಾಕಲು ವಿಜ್ಞಾನ- ತಂತ್ರಜ್ಞಾನ ನೆರವಾಗುತ್ತಿದೆ. ಇಂಥ 'ಬೇಟಿಯ ಬೇಟೆ' ನಿಲ್ಲಿಸಲು ಕೂಡ ಸರ್ಕಾರಿ ಯೋಜನೆಗಳಿವೆ. ಅವಳ ಹುಟ್ಟು, ಅವಳ ಓದು, ಅವಳ ತಾಳಿ, ಅವಳ ಮದುವೆ ಎಂದೆಲ್ಲಾ ಕೊಟ್ಟ ಸೌಲಭ್ಯಗಳು ಮಾತ್ರವಲ್ಲ, ಮದುವೆ ನಂತರ ಗಂಡನ ಮನೆಯಲ್ಲಿ ಸಲೀಸಾಗಿ ಅಡುಗೆ ಮಾಡಲು ಅವಳಿಗೆ ಗ್ಯಾಸ್ ಸಿಲಿಂಡರ್ ಕೂಡ ಕಡಿಮೆ ದರದಲ್ಲಿ ಕೊಡಲಾಗುತ್ತಿದೆ. ಮಹಿಳೆಯ ಸಬಲೀಕರಣ ಎಂದರೆ ಇಷ್ಟೇ ಅಲ್ಲ. ಹೆಣ್ಣಿಗೆ ಶೌಚಾಲಯವೂ ಬೇಕು, ಶೌಚಾಲಯ ಯೋಜನೆಯನ್ನು ರೂಪಿಸುವ ರಾಜಕೀಯ ಅಧಿಕಾರವೂ ಬೇಕು, ಗಂಡು ಹೆಣ್ಣಿನ ಸಮಾನತೆ ಬೆಳೆಸಲು ಸಾಮಾಜಿಕ ಅಡಿಪಾಯ ಮಾತ್ರವಲ್ಲ, ಧಾರ್ಮಿಕ ಸ್ವಾತಂತ್ರ್ಯ ಮಾತ್ರವಲ್ಲ, ರಾಜಕೀಯ ನೆಲೆಗಟ್ಟೂ ಅತ್ಯಗತ್ಯ. ಆದರೆ ಸರ್ಕಾರದ ರೂಪದಲ್ಲಿರುವ ಪ್ರಭುತ್ವ ಅವಳಿಗೆ ಬರೀ ಸವಲತ್ತುಗಳನ್ನು ಕೊಡುತ್ತಾ ನಿಜವಾದ ಸಮಾನತೆಯ ಸೂತ್ರಗಳನ್ನು ಮರೆಮಾಚುತ್ತಿದೆ. ಸರ್ಕಾರಗಳು ಮಹಿಳೆಯರಿಗೆ ಕೊಡುವ ಸವಲತ್ತುಗಳು, ಅವರ ಮುಂದಿಡುವ ಸಮಾಧಾನಗಳು, ಎಂದೆಂದಿಗೂ ಅಧಿಕಾರ ಹಂಚಿಕೊಳ್ಳುವ ಸಮಾನತೆಯ ಸಿದ್ಧಾಂತಕ್ಕೆ ಸಾಟಿಯಲ್ಲ. ಹೆಣ್ಣಿಗೆ ಕೊಡುವ ಒಂದಷ್ಟು ರಿಯಾಯಿತಿಗಳು, ವಿನಾಯಿತಿಗಳು ಅವಳ ನಿಜವಾದ ಉನ್ನತಿಗೆ ಮೆಟ್ಟಿಲುಗಳಾಗುವುದೇ ಇಲ್ಲ. ಏಕೆಂದರೆ ಜಗತ್ತಿನಲ್ಲಿ ಸಮಾನತೆ ಎಂದರೆ ರಾಜಕೀಯ ಅಧಿಕಾರವೂ ಸೇರಿ ಎಲ್ಲದರ ಸಮಾನ ಹಂಚಿಕೆ ಎಂದೇ ಅರ್ಥ.

ಮಹಿಳೆಯರಿಗೆ ಮತದಾನದ ಹಕ್ಕು ಇರುವಂತೆ ಚುನಾವಣೆಗೆ ಸ್ಪರ್ಧಿಸುವ ಹಕ್ಕೂ ಇದೆಯಲ್ಲ, ಅದನ್ನು ಬಳಸಿಕೊಂಡು ತಾಕತ್ತಿದ್ದರೆ ಗೆದ್ದು ಬರಲಿ ಎನ್ನುವುದು ಪುರುಷರ ಸವಾಲು ಆಗಿರುವಂತೆ, ಸರ್ಕಾರ ಎಂಬ ಪ್ರಭುತ್ವದ

ಇರಾದೆಯೂ ಆಗಿರಬಹುದೇ? ಇಲ್ಲದಿದ್ದರೆ, ಮಹಿಳಾ ಮೀಸಲಾತಿ ಮಸೂದೆ ಎಂಬ ಸಂವಿಧಾನದ 108 ನೇ ತಿದ್ದುಪಡಿ ಮಸೂದೆ 1996 ರಲ್ಲಿ ಮೊದಲು ಮಂಡನೆಯಾಗಿ, 1999, 2002, 2003 ರಲ್ಲಿ ಮರುಮಂಡನೆಯಾದರೂ ಇನ್ನೂ ಸಂಸತ್ತಿನಲ್ಲೇ ಕೊಳೆಯುತ್ತಿರುವುದೇಕೆ? ಬಹುಮತ, ಸಹಮತ ಇಲ್ಲದೆ ಬೇರೆ ಅನೇಕ ಮಸೂದೆಗಳು ಸ್ವೀಕೃತವಾಗಿ ಕಾಯಿದೆಗಳಾದರೂ ಮಹಿಳೆಯರು ಶಾಸನ ಸಭೆಗಳು ಮತ್ತು ಸಂಸತ್ತನ್ನು ಪ್ರವೇಶಿಸಲು ರಾಜಕೀಯ ಮೀಸಲಾತಿ ಕೊಡುವ ಈ ಮಸೂದೆಯತ್ತ ಏಕೆ ಗಮನ ಹರಿಸಿಲ್ಲ? ನಮ್ಮ ರಾಜಕೀಯ ಪ್ರಭುತ್ವದ ಅತಿ ಕ್ಷುಲ್ಲಕ ಲಿಂಗ ರಾಜಕಾರಣಕ್ಕೆ, ಮೀಸಲಾತಿ ಮಸೂದೆಗೆ ಅದು ತೋರುತ್ತಿರುವ ನಿರ್ಲಕ್ಷ್ಯವೇ ಅತಿ ಪ್ರಬಲ ನಿದರ್ಶನ. ಸಂಸತ್ತಿನಲ್ಲಿ ಬಹುಮತ ಪಡೆದಿದ್ದ ಹಿಂದಿನ- ಇಂದಿನ ಎಲ್ಲ ಸರ್ಕಾರಗಳೂ 'ಮಹಿಳಾ ಮೀಸಲಾತಿ' ವಿಚಾರ ಮರೆಮಾಚಿ 'ಮಹಿಳಾ ರಿಯಾಯಿತಿ' ವಿಚಾರ ಮಾತ್ರ ಮುಂದಿಡುತ್ತಿರುವುದು ನಿಜಕ್ಕೂ ಒಂದು ರಾಜಕೀಯ ಕುತಂತ್ರ ಈಗ ನಮ್ಮ ಪ್ರಭುತ್ವದ 'ಭಾರತ ಮಾತೆಗೆ ಜಯವಾಗಲಿ!' ಎಂಬ



ಘೋಷಣೆಗೆ ನಿಜವಾದ ರಾಜಕೀಯ ಶಕ್ತಿಯನ್ನು ತುಂಬುವುದು ಎಂದಿಗೆ? ಮಹಿಳೆಯರಿಗೆ ರಾಜಕೀಯ ಮೀಸಲಾತಿ ಕೊಟ್ಟು ಬಿಟ್ಟರೆ ಎಲ್ಲ ಸಮಸ್ಯೆಗಳ ಪರಿಹಾರ ಆಗುತ್ತದೆ ಎಂಬ ನಂಬಿಕೆ ಯಾರಿಗೂ ಇಲ್ಲ; ಆದರೆ ಅದು ಸಮಾನತೆಯ ದಾರಿಯಲ್ಲಿ ಇಡುವ ಒಂದು ದೃಢ ಹೆಜ್ಜೆ ಎಂಬ ನಂಬಿಕೆಯಂತೂ ಇದೆ.

ಪ್ರಭುತ್ವದ ಹೊಸ ಧಾರ್ಮಿಕ ಅವತಾರ ಇಂದಿನ ದಿನಗಳಲ್ಲಿ ಕಾಣುತ್ತಿರುವ ಬಗೆಯಂತೂ ಆತಂಕ ತರುವಂತಿದೆ. ಶತಮಾನಗಳಿಂದ ಮಹಿಳೆಗೆ ಏನೇನು ಧಾರ್ಮಿಕ ನಿರ್ಬಂಧಗಳನ್ನು ಹೇರಲಾಗಿತ್ತೋ ಅವೆಲ್ಲವೂ 'ನಮ್ಮ ಪರಂಪರೆ ಮತ್ತು ಭಾರತೀಯ ಸಂಸ್ಕೃತಿ' ಯ ಹೆಸರಿನಲ್ಲಿ ಸಾಮಾಜಿಕ, ಸಾಂಸ್ಕೃತಿಕ ಶಾಸನಗಳೇ ಆಗುತ್ತಿವೆ. ಅವುಗಳನು ಪ್ರಶ್ನಿಸದೆ ಉಳಿಸುವುದೇ 'ಸಂಸ್ಕೃತಿಯ ರಕ್ಷಣೆ' ಎಂಬ ವಾದ ಬಲವಾಗುತ್ತಿದೆ. ಕೇರಳದ ಶಬರಿಮಲೆಯ ದೇಗುಲ ಪ್ರವೇಶ, ಮಸೀದಿ ಪ್ರವೇಶ ಸೇರಿ ಹಲವಾರು ಧಾರ್ಮಿಕ ನಿರ್ಬಂಧಗಳನ್ನು ಮಹಿಳೆಯರು ಪ್ರಶ್ನಿಸುತ್ತಿದ್ದಾರೆ. ಆದರೆ ಕೆಲವೊಮ್ಮೆ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಪ್ರಭುತ್ವಗಳ ಪುರುಷಾಧಿಕಾರವನ್ನು ಎತ್ತಿ ಹಿಡಿಯುವ ನ್ಯಾಯಾಂಗದ ವ್ಯವಸ್ಥೆಯ ಧೋರಣೆಗಳೂ ಕೂಡ ಕಳವಳ ಹುಟ್ಟಿಸುತ್ತಿವೆ. ಸರ್ವಾಂತರ್ಯಾಮಿಯಾದ ಪ್ರಭುತ್ವದ ನೆರಳು ಎಲ್ಲೆಲ್ಲೂ ಚಾಚಿಕೊಂಡಿರುವುದರ ಜೊತೆಗೆ ಮಹಿಳೆಯ ಮಿದುಳಿನಲ್ಲೂ ಹುದುಗಿಬಿಟ್ಟಿದೆ. ಪ್ರಭುತ್ವಕ್ಕೆ ಪ್ರಶ್ನೆ ಎಸೆಯುವುದನ್ನು ಹೆಣ್ಣುಮಗುವಿಗೆ ಎಳೆತನದಲ್ಲೇ ಕಲಿಸುವ ಅವಶ್ಯಕತೆ ಹಿಂದೆಂದಿಗಿಂತಲೂ ಇನ್ನಷ್ಟು ಎದ್ದು ಕಾಣುತ್ತದೆ. ಭಾರತೀಯ ಸಂಸ್ಕೃತಿ ತಿಯ ರಕ್ಷಣೆ ತಮ್ಮದೇ ಹೊಣೆ' ಎಂದು ಮಹಿಳೆಯರು ನಂಬುವುದಕ್ಕಿಂತ, 'ಸಮಾನತೆಯ ಸಂರಕ್ಷಣೆಯಲ್ಲಿ ತಮಗೂ ಮುಖ್ಯಪಾತ್ರವಿದೆ' ಎಂದು ನಂಬುವುದು ಮುಖ್ಯವಾಗಿದೆ.

ಇಂದಿನ ದಿನಗಳಲ್ಲಿ 'ಪ್ರಭುತ್ವ ಮತ್ತು ಮಹಿಳೆ' ಯ ಸಂಬಂಧಕ್ಕೆ ಹೊಸ ವ್ಯಾಖ್ಯಾನ ದೊರೆಯುತ್ತಿದೆ. ಹುಡುಗ ಹುಡುಗಿಯರು, ಯುವಕ ಯುವತಿಯರು, ಪ್ರಜ್ಞಾವಂತರು, ಜನಪರ ಹೋರಾಟಗಾರರು, ಸಾಮಾನ್ಯ ವರ್ಗಗಳ, ಅಲ್ಪ ಸಂಖ್ಯಾತ ವರ್ಗಗಳ ಹೆಂಗಸರು, ಗಂಡಸರು ಬೀದಿ ಬೀದಿಗಳಲ್ಲಿ, ಮೈದಾನಗಳಲ್ಲಿ, ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳಲ್ಲಿ ಪ್ರಭುತ್ವದ ಹಳೆಯ ಅಜೆಂಡಾದ ಹೊಸ ಅವತಾರಗಳ ವಿರುದ್ಧ ದೇಶದಾದ್ಯಂತ ಪ್ರತಿಭಟನೆ ಮಾಡುತ್ತಿದ್ದಾರೆ. ಸರ್ಕಾರ ತರಲು ಉದ್ದೇಶಿಸಿರುವ ಹೊಸ ಕಾನೂನುಗಳ ವಿರುದ್ಧ ನಡೆಯುತ್ತಿರುವ ಮತ್ತು ಬೆಳೆಯುತ್ತಿರುವ ಪ್ರತಿಭಟನೆಯಲ್ಲಿ ಎಷ್ಟೊಂದು ಸಾವಿರ ಸಂಖ್ಯೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಅಭೂತಪೂರ್ವ ಸಂಗತಿಯಾಗಿದೆ. ಹಾಗೆ ನೋಡಿದರೆ ರಾಜಕೀಯ ಸಿದ್ಧಾಂತಗಳ ನೆರವಿಲ್ಲದೆ, ರಾಜಕೀಯ, ಪಕ್ಷಗಳ ಬಲವಿಲ್ಲದೆ ಕೇವಲ ಪ್ರಜಾಸತ್ತಾತ್ಮಕ ಮೌಲ್ಯಗಳ ರಕ್ಷಣೆಗಾಗಿ ಮಹಿಳೆಯರು ದನಿಯೆತ್ತಿರುವುದು ಒಂದು ವಿಶೇಷ ಬೆಳವಣಿಗೆ, ಮತಧಾರ್ಮಿಕ ದ್ವೇಷ, ಬಹುತ್ವದ ನಾಶ ಮುಂತಾದ ಜನವಿರೋಧಿ ಕ್ರಮಗಳ ವಿರುದ್ಧ ಪ್ರಶ್ನೆ ಮತ್ತು ಪ್ರತಿರೋಧ ಇನ್ನಿಲ್ಲದಂತೆ ಭುಗಿಲೇಳುತ್ತಿದೆ. ಪ್ರಜಾಪ್ರಭುತ್ವವನ್ನು ಉಳಿಸಲು ಬದ್ಧರಾದ ಮಹಿಳೆಯರು ರಾಜಕೀಯ, ಧಾರ್ಮಿಕ ಪ್ರಭುತ್ವಕ್ಕೆ ಸವಾಲು ಹಾಕುತ್ತಿದ್ದಾರೆ; ಈ ಅಸಾಮಾನ್ಯ ಚಿಂತನೆಯ ಮೂಲಸೆಲ್, ಎಂದರೆ ಅವರ ಕರುಳಿನಲ್ಲಿ ಬೇರೂರಿರುವ ಸಮಾನತೆಯ ಆಶಯ.

## ಲೋಕದೃಷ್ಟಿ ಮತ್ತು ಮಹಿಳೆ

• ಪ್ರೊ. ಶಿವಗಂಗಾ ರುಮ್ಮಾ

ಲೋಕದೃಷ್ಟಿ ಎನ್ನುವುದು ನಮ್ಮ ಸುತ್ತಲಿನ ಪರಿಸರದಿಂದ ಪಡೆದುಕೊಂಡ ಬಳುವಳಿಯಾಗಿರುತ್ತದೆ. ನಾವು ಉಸಿರಾಡಿದಷ್ಟೇ ಸಹಜವಾಗಿ ಲೋಕದೃಷ್ಟಿಗಳನ್ನು ನಾವು ನಮ್ಮ ದಿನನಿತ್ಯದ ಬದುಕಿನಲ್ಲಿ ಅಭಿವ್ಯಕ್ತಿಸುತ್ತಿರುತ್ತೇವೆ. ಇದರಲ್ಲಿ ವಂಶವಾಹಿಯ ಪಾಲಿಗಿಂತ ಸಾಮಾಜಿಕ ಪರಿಸರದ ಪಾಲೇ ಹೆಚ್ಚಾಗಿರುತ್ತದೆ ಎಂದು ಮನಶ್ಶಾಸ್ತ್ರಜ್ಞರು ಹೇಳುತ್ತಾರೆ. ಲೋಕದೃಷ್ಟಿಯ ಆರಂಭವನ್ನು ಆದಿಮ ಕಾಲದ ಜನರೊಂದಿಗೇ ಗುರುತಿಸಬಹುದಾಗಿದೆ. ಅವರು ಅನಾಗರಿಕಾವಸ್ಥೆಯಿಂದ ನಾಗರಿಕ ಅವಸ್ಥೆಗೆ ಬರುತ್ತ ಇಡೀ ಮನುಷ್ಯ ಕುಲವು ತಮ್ಮ ತಮ್ಮ ಅನುಭವಕ್ಕೆ ದಕ್ಕಿದ ವಿಷಯಗಳನ್ನು ತಮ್ಮ ತಮ್ಮ ಲೋಕದೃಷ್ಟಿಯಾಗಿ ಬೆಳೆಸಿಕೊಂಡಿದೆ. ಹೀಗಾಗಿ ಆದಿಮ ಕಾಲದ ಜನರ ಚರಿತ್ರೆಯೊಂದಿಗೆ ಲೋಕದೃಷ್ಟಿಯ ಚರಿತ್ರೆಯೂ ಬೆಸೆದುಕೊಂಡಿದೆ. ಇತಿಹಾಸ ಪೂರ್ವ ಕಾಲದಲ್ಲಿ ಜನರು ಹೆಚ್ಚು ಹೆಚ್ಚು ಪ್ರಕೃತಿಯ ಜೊತೆಯಲ್ಲಿ ಬದುಕುತ್ತಿದ್ದುದರಿಂದ ಅವರ ಲೋಕದೃಷ್ಟಿಯನ್ನು ರೂಪಿಸುವಲ್ಲಿ ಮಧ್ಯವರ್ತಿಗಳ ಪಾತ್ರ ಇರುತ್ತಿರಲಿಲ್ಲ. ಅವರು ನೇರವಾಗಿ ಪ್ರಕೃತಿಯ ಜೊತೆಗೆ ನಡೆಸಿದ ಸಂಘರ್ಷ, ಸಂವಾದ, ಶ್ರಮ, ಅದರಿಂದ ಪಡೆದ ತಿಳುವಳಿಕೆ, ತಮ್ಮ ಅಸ್ತಿತ್ವಕ್ಕಾಗಿ ನಡೆಸಿದ ಚಟುವಟಿಕೆಗಳ ಮೂಲಕ ಪಡೆದ ನೇರ ಅನುಭವ ಇತ್ಯಾದಿಗಳ ಮೂಲಕ ಅವರ ಲೋಕದೃಷ್ಟಿಯು ರೂಪುಗೊಳ್ಳುತ್ತಿತ್ತು. ತಮ್ಮ ಪ್ರಾಥಮಿಕ ಜರೂರಿಗಳಾದ ಹೊಟ್ಟೆ ಮತ್ತು ದೇಹದ ಹಸಿವು, ರೋಗ, ಮುಪ್ಪು, ಸಾವು, ಪ್ರಾಕೃತಿಕ ವಿಕೋಪಗಳಾದ ಮಳೆ, ಬೆಂಕಿ, ಸುನಾಮಿ, ಭೂಕಂಪ, ಋತುಗಳ ಬದಲಾವಣೆ ಮುಂತಾದವುಗಳನ್ನು ವಿಶ್ಲೇಷಿಸುತ್ತ, ಅವುಗಳನ್ನು ಎದುರಿಸುತ್ತ, ಗೆಲ್ಲುತ್ತ, ಸೋಲುತ್ತ ಅವರು ತಮ್ಮ ಲೋಕದೃಷ್ಟಿಯನ್ನು ಬೆಳೆಸಿಕೊಂಡರು. ಅವುಗಳಲ್ಲಿ ಎಲ್ಲವೂ ವೈಜ್ಞಾನಿಕ ನೆಲೆಗಟ್ಟಿನ ಮೇಲೆ : ಇರದೇ ಇದ್ದರೂ ಬದುಕಿಗಂತೂ ಸಮೀಪವಾಗಿದ್ದವು. ಆಧುನಿಕರೆಂದು ಕರೆದುಕೊಂಡ ನಾವು ಕಟ್ಟಿಕೊಂಡಿರುವ ಭ್ರಮೆಗಳಿಗೆ ಹೋಲಿಸಿದರೆ ಆದಿಮ ಜನರೇ ಕಡಿಮೆ ಭ್ರಮೆಗಳೊಂದಿಗೆ ಹೆಚ್ಚು ವಾಸ್ತವಗಳೊಂದಿಗೆ ಬದುಕುತ್ತಿದ್ದರು. ಒಂದು ಒರಟು ಒರಟಾದ ಉದಾಹರಣೆ ಕೊಡಬಹುದಾದರೆ ಬೆಣ್ಣೆ ಎಂದರೆ ಏನೆಂದು, ಹೇಗೆ ತಯಾರಾಗುತ್ತದೆಂದು ಹೇಳುವ ಹಳ್ಳಿಯ ಮಗುವಿಗೂ ಮೆಟ್ರೊಪೊಲಿಟನ್ ಮಗುವಿಗೂ ಲೋಕದೃಷ್ಟಿಯಲ್ಲಿ ವ್ಯತ್ಯಾಸವಿರುತ್ತದೆ. ಹಳ್ಳಿಯ ಮಗು ನೇರವಾಗಿ ಬೆಣ್ಣೆ ತಯಾರಾಗುವ ಬಗೆಯನ್ನು ಕಂಡು, ಅನುಭವದಿಂದ ಹೇಳುವುದರಿಂದ ಬೆಣ್ಣೆಗೆ ಸಂಬಂಧಿಸಿದಂತೆ ಹಳ್ಳಿ ಮಗುವಿನ ಲೋಕದೃಷ್ಟಿಯು ವಿಶ್ವಾಸನೀಯವಾಗಿರುತ್ತವೆ. ಹಾಗೆಯೇ ನಗರದ ಮಗುವಿನ ಲೋಕದೃಷ್ಟಿಯು ಮಗುವಿನ ಅನುಭವದ ದೃಷ್ಟಿಯಿಂದ ಸರಿಯಾದುದಾದರೂ ಅದು ವಾಸ್ತವಕ್ಕೆ ಹೆಚ್ಚು ಸಮೀಪವಾಗಿರುವುದಿಲ್ಲ. ಹೀಗಾಗಿ

ಆದಿಮ ಜನರು ಪಡೆದ ಲೋಕದೃಷ್ಟಿಯು ರೂಢಿಸಿಕೊಂಡ ಆಚರಣೆಗಳ ಆಳದಲ್ಲಿ ಪ್ರಾಯೋಗಿಕತೆಯ ಅಂಶಗಳು ಉಳಿದಿರುವುವೆಂಬುದಕ್ಕೆ ಅಂತಹ ಆಚರಣೆಗಳಲ್ಲಿ ಅಡಗಿರುವ ಮೂಲ ಆಶಯಗಳನ್ನು ನೋಡಬಹುದಾಗಿದೆ. ಆದರೆ ಮುಂದೆ ಬಂದ ಮಹಾನ್ ತತ್ತ್ವಜ್ಞಾನಿಗಳು ಜನರ ಈ ತಿಳುವಳಿಕೆಯನ್ನು 'ಪ್ರಾಕೃತ ಜನರ ವಿಚಾರ', 'ವಿವೇಚನೆಯಿಲ್ಲದ ಜನರ ವಿಚಾರ', 'ಜನಜಂಗುಳಿಯ ವಿಚಾರಗಳೆಂದು, ಬದಿಗೆ ಸರಿಸಿರುವುದನ್ನು ನೋಡುತ್ತೇವೆ.

ಹೀಗೊಂದು ಘಟನೆಯನ್ನು ನೋಡೋಣ.

“ಬಾರ್ಥಲೋಮ್ಯೋ ಕೊಲಂಬಸ್, ಕೊಲಂಬಸ್‌ನ ತಮ್ಮ ಮೊದಲ ನರಮೇಧವನ್ನು ವೀಕ್ಷಿಸಿದ್ದಾನೆ. ಆರು ಜನ ಇಂಡಿಯನ್‌ರನ್ನು (ರೆಡ್) ಮರಕ್ಕೆ ಕಟ್ಟಿ ಜೀವಂತ ಸುಡಲಾಗುತ್ತಿದೆ. ಹಸಿಮಾಂಸ ಬೇಯುವ ಕಮಟು ವಾಸನೆ ಮೂಗಿಗೆ ಬಡಿಯುತ್ತಿದೆ. ಇಂಡಿಯನ್‌ರಿಗೆ ಇದೊಂದು ಶಿಕ್ಷೆ ಮಾತ್ರವಲ್ಲ ಪಾಠ ಕೂಡ. ಜೋಪಾನವಾಗಿ ಕಾಪಿಟ್ಟು, ಮಂಡಿಯೂರಿ ಪ್ರಾರ್ಥಿಸಿ ಎಂದು ಪಾದ್ರಿ ನೀಡಿದ್ದ ಏಸುಕ್ರಿಸ್ತ ಮತ್ತು ಮೇರಿ ಪ್ರತಿಮೆಗಳನ್ನು ಈ ಆರು ಮಂದಿ ಇಂಡಿಯನ್ನರು ನೆಲದಲ್ಲಿ ಹೂತಿದ್ದರು. ಧರ್ಮವನ್ನು ಅವಹೇಳನೆಗೊಳಿಸಿದ ಅಪರಾಧಕ್ಕೆ ಅವರನ್ನು ಜೀವಂತ ಸುಡಲಾಗುತ್ತಿದೆ.

ಯಾಕೆ ಹೂತಿರಿ ಎಂದು ಯಾರೂ ಅವರನ್ನು ಕೇಳಿರಲಿಲ್ಲ. ಈ ಹೊಸ ದೇವರು ನಮ್ಮ ನೆಲವನ್ನು ಫಲವತ್ತಾಗಿಸಲಿ, ಜೋಳ ಕಾಳು, ಗೆಡ್ಡೆ-ಗೆಣಸು ಸಮೃದ್ಧವಾಗಲಿ ಎಂಬ ಆಸೆಯ ಪ್ರಾರ್ಥನೆಯೊಂದಿಗೆ ಅವರು ಈ ಪ್ರತಿಮೆಗಳನ್ನು ಹೂತಿದ್ದರು. ಎಡುವರ್ಡೊ ಗೆಲಿಯಾನೋ ಈ ಕತೆ (ಚರಿತ್ರೆ)ಯಲ್ಲಿ ಅಮೇರಿಕಾದ ಮೂಲನಿವಾಸಿಗಳ ಮೇಲೆ ನಡೆದ ಹಿಂಸೆಯನ್ನು ಹೇಳುತ್ತಿದ್ದಾನೆ. ಅದನ್ನು ಕಿಕ್ಕೇರಿ ನಾರಾಯಣ ಅವರು “ಲೋಕದೃಷ್ಟಿಗಳು ಹಲವಿರುತ್ತವೆ. ಆದರೆ, ಅಧಿಕಾರ ಅವೆಲ್ಲವನ್ನು ಧ್ವಂಸಗೊಳಿಸಿ ತನ್ನ ಲೋಕದೃಷ್ಟಿಯೇ ಸೈ ಎಂಬ ಅಹಂ ಹೊಂದಿರುತ್ತದೆ” ಎನ್ನುತ್ತಾರೆ. ಮಹಿಳೆಯನ್ನು ಕುರಿತ ಲೋಕದೃಷ್ಟಿಗಳು ಕೂಡ ಹೀಗೆಯೇ ಆದಿಮ ಕಾಲದಿಂದ ಇಲ್ಲಿಯವರೆಗೂ ತಿರುಚಲ್ಪಟ್ಟಿವೆ.

ಯಾವುದೇ ರೀತಿಯ ಲೋಕಗ್ರಹಿಕೆಗಳು ಇಡೀ ಜಗತ್ತಿನಲ್ಲಿ ಒಂದೇ ರೀತಿಯಲ್ಲಿ ಇರುವುದಿಲ್ಲ. ಇವು ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ, ಸಮುದಾಯಗಳಿಂದ ಸಮುದಾಯಕ್ಕೆ, ತಲೆಮಾರಿನಿಂದ ತಲೆಮಾರಿಗೆ ಅಷ್ಟೇ ಏಕೆ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತಿರುತ್ತವೆ. ಹೀಗಾಗಿ ಲೋಕದೃಷ್ಟಿಗಳಿಗೆ ಕಾಲದೇಶ ಇತ್ಯಾದಿ ಗಡಿಗಳಿಲ್ಲ. ಇವುಗಳಿಗೆ ವೈಜ್ಞಾನಿಕ ಆಧಾರಗಳಿಂದಾಗಲಿ, ಐತಿಹಾಸಿಕ ದಾಖಲೆಗಳಿಂದಾಗಲಿ ಸಿದ್ಧಮಾಡಿ ತೋರಿಸಬೇಕೆಂಬ ನಿಯಮವಿಲ್ಲ. ಯಾರೂ, ಯಾವುದನ್ನು, ಎಲ್ಲಿಯೂ ಹೀಗೊಂದು ಲೋಕದೃಷ್ಟಿಯನ್ನು ಹೇಳಿಬಿಡಬಹುದಾಗಿದೆ. ಹೀಗಾಗಿ ಆದಿಮ ಕಾಲದಿಂದಲೂ ಲೋಕ ದೃಷ್ಟಿಯನ್ನು ಕುರಿತು ಹೀಗೆಯೇ ಎಂದು ಹೇಳುವ ವ್ಯಾಖ್ಯಾನಗಳು ನಮಗೆ ಸಿಗುವುದಿಲ್ಲ.

ಅಧ್ಯಯನದ ಅನುಕೂಲಕ್ಕಾಗಿ ಈ ಕೆಳಗಿನ ಕೆಲವೊಂದು ಲಕ್ಷಣಗಳನ್ನು ಪಟ್ಟಿ ಮಾಡಬಹುದಾಗಿದೆ.

೧. ಲೋಕದೃಷ್ಟಿಗಳಿಗೆ ಕಾರ್ಯಕಾರಣ ಸಂಬಂಧಗಳಿರುವುದಿಲ್ಲ. ಉದಾಹರಣೆಗೆ ದೀಪ ಹಚ್ಚಿದರೆ, ಚಪ್ಪಾಳೆ ತಟ್ಟಿದರೆ, ಲಿಂಗ ಪೂಜೆ ಮಾಡಿದರೆ, ನಮಾಜ್ ಮಾಡಿದರೆ ಕೊರೋನಾ ರೋಗ ಹೋಗುತ್ತದೆ ಎಂಬುದು.

೨. ಲೋಕದೃಷ್ಟಿಯನ್ನು ಹೇಳುವಾಗ ಸಾಕ್ಷಿ ಪುರಾವೆಗಳ ಅಗತ್ಯವಿಲ್ಲ. ಉದಾಹರಣೆಗೆ 'ಗಣಪತಿ ಹಾಲು ಕುಡಿದನು' ಎಂಬುದು ಯಾರು ನೋಡಿದ್ದಾರೆ. ಯಾವಾಗ? ಎಂಬುದನ್ನು ಕುರಿತು ತಲೆಕೆಡಿಸಿಕೊಳ್ಳಬೇಕಾಗಿಲ್ಲ.

೩. ಸಾಬೀತು ಪಡಿಸಲಾಗದ ಸತ್ಯಗಳಾಗಿ ಅವು ನಮ್ಮನ್ನು ಮುನ್ನಡೆಸುತ್ತಿರುತ್ತವೆ. ಉದಾಹರಣೆಗೆ 'ಮನೆಯ ಕಸವನ್ನು ಪುರುಷರು ಹೊಡೆದರೆ ಅವರ ಆಯಸ್ಸು ಕಡಿಮೆಯಾಗುತ್ತದೆ.

೪. ತಮ್ಮ ಅಸ್ತಿತ್ವಕ್ಕೆ ವಿರುದ್ಧವಾಗಿದ್ದರೂ ಅನೇಕ ಸಮುದಾಯಗಳು ಅವುಗಳನ್ನು ವ್ರತದಂತೆ ಪಾಲಿಸುತ್ತಿರುತ್ತವೆ. ಉದಾಹರಣೆಗೆ 'ಮಾರಿಗೆ ಕೋಣನ ಬಲಿ ಕೊಡದೇ ಇದ್ದರೆ ಅವಳು ಮುನಿಯುತ್ತಾಳೆ. ದಲಿತನ ಪ್ರತೀಕ ಕೋಣವಾಗಿದ್ದು ಸ್ವತಃ ದಲಿತನೇ ಅದನ್ನು ಆಚರಿಸುತ್ತಿರುತ್ತಾನೆ'.

೫. ಕೆಲವೊಂದು ನಿರ್ದಿಷ್ಟ ಸಾಮಾಜಿಕ ಸಂದರ್ಭದ ಅವಶ್ಯಕತೆಯಾಗಿ ಹುಟ್ಟಿದ ಇವು ಮುಂದೊಂದು ಕಾಲಕ್ಕೆ ಮೌಢ್ಯಗಳಾಗುವುದೂ ಉಂಟು. ಉದಾಹರಣೆಗೆ ಜಾವಳ ತೆಗೆಯುವುದು.

೬. ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಜನರು ಹುಟ್ಟಿನಿಂದಲೇ ಬದುಕಿಗೆ ಮುಖಾಮುಖಿಯಾದ ಅನುಭವಗಳ ಕಾರಣವಾಗಿ ಇವುಗಳನ್ನು ದತ್ತವಾಗಿ ಪಡೆದಿರುತ್ತಾರೆ. ಉದಾಹರಣೆಗೆ ರಾಕೆಟ್ ಹಾರಿಸುವಾಗ ತೆಂಗಿನಕಾಯಿ ಒಡೆಯುವುದು.

೭. ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಒಬ್ಬನೇ ವ್ಯಕ್ತಿಯೂ ಲೋಕಗ್ರಹಿಕೆಯಲ್ಲಿ ದ್ವಂದ್ವಾತ್ಮಕ ನಿಲುವುಗಳನ್ನು ಹೊಂದಿರುವ ಸಾಧ್ಯತೆಗಳಿರುತ್ತವೆ. ಉದಾಹರಣೆಗೆ ಗಾಂಧೀಜಿ ವರ್ಣಾಶ್ರಮವನ್ನು ಒಪ್ಪುತ್ತಲೇ ಅಸ್ಪೃಶ್ಯತೆಯನ್ನು ಆಳದಲ್ಲಿ ವಿರೋಧಿಸಿ, ಅದರಂತೆ ಬದುಕಿದ್ದರು.

೮. ಕೆಲವು ಲೋಕಗ್ರಹಿಕೆಗಳು ಅಸಂಗತವಾಗಿರುತ್ತವೆ: ಪೂಜಾರಿ, ದೇವರು ಮುಂತಾದವರ ಹರಕೆಯಿಂದ ಮಕ್ಕಳಾಗುತ್ತವೆ ಎಂಬುದು.

೯. ಕೆಲವು ಅಸಂಭವವಾಗಿರುತ್ತವೆ ಆದರೂ ಅವುಗಳನ್ನು ಸಹಜವೆಂದೇ ನಂಬುತ್ತೇವೆ. ಕುಂಭದಲ್ಲಿ, ಪಾತ್ರೆಯಲ್ಲಿ, ಲಿಂಗದಲ್ಲಿ, ಕಿವಿಯಲ್ಲಿ, ಕಾಲಲ್ಲಿ, ತೊಡೆಯಲ್ಲಿ ಮನುಷ್ಯರು ಹುಟ್ಟುತ್ತಾರೆನ್ನುವುದು.

೧೦. ಬೇರೆ ಬೇರೆ ಕಾರಣಗಳಿಗಾಗಿ ಬೇರೆ ಬೇರೆ ಸಂದರ್ಭಗಳಲ್ಲಿ ಹುಟ್ಟಿದ ಲೋಕಗ್ರಹಿಕೆಗಳು ಬೇರೆ ಬೇರೆ ಕಾರಣಗಳಿಗಾಗಿ ಬಳಕೆಯಾಗುತ್ತಿರುತ್ತವೆ. ಉದಾಹರಣೆಗೆ ಪ್ರಾಚೀನ ಕಾಲದಲ್ಲಿ ಮದುಮಕ್ಕಳು ಮದುವೆಯ ದಿನ



ಸುಂದರವಾಗಿ ಕಾಣಲು ಮದುವೆಯ ಹಿಂದಿನ ದಿನ ಅರಿಶಿಣ ಹಚ್ಚಿ ಮೈ ತೊಳೆಯುತ್ತಿದ್ದರು. ಇಂದಿನ ಮದುಮಕ್ಕಳು ಬ್ಯೂಟಿ ಪಾರ್ಲರ್‌ಗೆ ಹೋಗಿ ಬರುವುದರ ಜೊತೆಗೆ ಅರಿಶಿಣ ಹಚ್ಚುವ ಸಂಪ್ರದಾಯವನ್ನೂ ಪಾಲಿಸುತ್ತಾರೆ. ಹಾಗೆಯೇ ಜಾತಿ ಎಂಬುದೊಂದು ಮಿಥ್ಯಾ ಸೃಷ್ಟಿ, ಅದು ಇಂಗ್ಲೀಷರ ಕೊಡುಗೆ, ಅದಕ್ಕಿಂತ ಮೊದಲು ಜಾತಿಯೆಂಬುದು ಭಾರತದಲ್ಲಿ ಇರಲೇ ಇಲ್ಲ ಎಂಬ ನಂಬಿಕೆಗಳು.

೧೧. ಲೋಕಗ್ರಹಿಕೆಗಳು ಅಲಿಖಿತ ಶಾಸನಗಳಾಗಿರುತ್ತವೆ. ಯಾವ ಕಾನೂನಿನ ಪುಸ್ತಕಗಳು ಹಾಗೂ ಕಾನೂನಿನ ವಕ್ತಾರರು ಅವುಗಳನ್ನು ಬರೆದಿಡದಿದ್ದರೂ ಅವು ಅಲಿಖಿತ ಮೀರಲಾಗದ ಕಾನೂನುಗಳನ್ನಾಗಿ ಜನರು ಸ್ವೀಕರಿಸಿರುತ್ತಾರೆ. ಉದಾಹರಣೆಗೆ ಪಾಶ್ಚಾತ್ಯರಲ್ಲಿ ಕಪ್ಪು ವರ್ಣದವರು ಹಾಗೂ ಭಾರತದಲ್ಲಿ ದಲಿತರು ಶೂದ್ರರು ಮಹಿಳೆಯರು, ಹುಟ್ಟುತ್ತಲೇ ದಡ್ಡರಿರುತ್ತಾರೆ ಎಂಬ ನಂಬಿಕೆ ಸರ್ವವ್ಯಾಪಿಯಾಗಿದೆ.

ಇಂತಹ ಬಹುತೇಕ ಲೋಕಗ್ರಹಿಕೆಗಳು ನಿರ್ದಿಷ್ಟ ಸಾಮಾಜಿಕ ಸಂದರ್ಭದಲ್ಲಿ ಹುಟ್ಟಿ ಅವೇ ಮುಂದೆ ಜನತೆಯ ಕಾಮನ್‌ಸೆನ್ಸ್ ಆಗಿ ಪರಿವರ್ತಿತವಾಗುತ್ತವೆಂದು ಆಂಟೋನಿಯೊ ಗ್ರಾಂಸಿ ಹೇಳುತ್ತಾನೆ.

"Common sense, the bourgeoisi develop a hegemonic culture which propagated its own values and norms so that they because the common values of all people in the working class (and other classes) identified their own good with the good of the bourgeois and helped to maintain status quo rather than revolting (selections from the prison note boots by-Antorio Gramsci)^.

ಹೀಗಾಗಿ ಇಂತಹ ಲೋಕಗ್ರಹಿಕೆಗಳನ್ನು ಬಹಳಷ್ಟು ಸಲ ಮೂಢನಂಬಿಕೆಗಳೆಂದು ಕರೆದು ನಿರ್ಲಕ್ಷಿಸಿಬಿಡುತ್ತೇವೆ. ಆದರೆ ಆಳುವ ವರ್ಗಗಳು ಇವುಗಳನ್ನೇ ತಮಗೆ ಅನುಕೂಲವಾಗುವಂತೆ ಬಳಸಿಕೊಳ್ಳುತ್ತಿರುತ್ತವೆ. ಈ ಗ್ರಹಿಕೆಗಳೇ ಸಾಮಾನ್ಯ ಜನರು ಗುಲಾಮಗಿರಿಯಲ್ಲೇ ಬದುಕಲು ಅವರನ್ನು

ಮಾನಸಿಕವಾಗಿ ತಯಾರು ಮಾಡುವ ಹತಾರಗಳಾಗಿರುತ್ತವೆ. 'ಅಲ್ಲಿರುವದು ನಮ್ಮನೆ ಇಲ್ಲಿರುವುದು ಸುಮ್ಮನೆ' 'ಬೊಂಬೆ ಆಡೋನು ಮೇಲೆ ಕುಂತವೆ' ಇತ್ಯಾದಿ ಗ್ರಹಿಕೆಗಳು ಮನುಷ್ಯರಿಗೆ ಸಾಮಾಜಿಕ ವ್ಯವಸ್ಥೆಯೆನ್ನುವುದು ಮನುಷ್ಯರೇ ನಿರ್ಮಿಸಿಕೊಂಡ ಒಂದು ಸಂಸ್ಥೆ. ಮನುಷ್ಯರೇ ಅದನ್ನು ಬದಲಾಯಿಸಬಹುದೆನ್ನುವ ಸಾಧ್ಯತೆಗಳಿಂದ ಬಹುದೂರ ಕೊಂಡೊಯ್ದು 'ಇಸ್ಲಾಂಗ ಇರುವೆ' ಎಂಬ ಸ್ಥಾಯೀ ನಿಲುವನ್ನು ಅಪ್ಪಿಕೊಂಡು ಬದುಕಲು ಕಲಿಸುತ್ತವೆ. ಪ್ರಶ್ನಿಸುವ ಮತ್ತು ತರ್ಕಕ್ಕೆ ಹಚ್ಚುವ ಮನಸ್ಥಿತಿಯ ಬದಲಿಗೆ ಜನರು ಒಪ್ಪಿಕೊಂಡು, ಹೊಂದಿಕೊಂಡು ಹೋಗುವದೇ ಜೀವನ ಎಂಬ ನೆಲೆಗೆ ಬಂದು ತಲುಪಿರುತ್ತಾರೆ. ಇಂತಹ ಜೀವನ ವಿರೋಧಿ ಲೋಕಗ್ರಹಿಕೆ (ಕಾಮನ್‌ಸೆನ್ಸ್)ಗಳನ್ನು ಜೀವನ ಪರವಾದ ಲೋಕಗ್ರಹಿಕೆ (ಗುಡ್‌ಸೆನ್ಸ್)ಗಳಾಗಿ ಪರಿವರ್ತಿಸಿ ಜನರನ್ನು ತಿಳುವಳಿಕೆಯೆಡೆಗೆ ಕೊಂಡೊಯ್ಯುವುದು ಸಾಧ್ಯ ಎಂಬುದನ್ನು



ಗ್ರಾಂಸಿ ಹೇಳುತ್ತಾನೆ. ಉದಾಹರಣೆಗೆ ೫೦ ವರ್ಷಗಳ ಹಿಂದೆ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆಯು ದೇವ ವಿರೋಧಿ ಎಂಬ ನಂಬಿಕೆಯಿತ್ತು. ದೇವರು ಕೊಟ್ಟ ಮಕ್ಕಳನ್ನು ಸಾಯಿಸಬೇಕೇ ಎಂಬ ಪಾಪಪ್ರಜ್ಞೆಯನ್ನು ಜನರು ಅನುಭವಿಸುತ್ತಿದ್ದರು. ಆದರೆ ಈಗ ಸ್ವಇಚ್ಛೆಯಿಂದ ತಾವೇ ಮುಂದೆ ಬಂದು ಸಂತಾನ ಶಕ್ತಿ ಹರಣ ಶಸ್ತ್ರ ಚಿಕಿತ್ಸೆ ಮಾಡಿಕೊಳ್ಳುತ್ತಾರೆ.

ಹೀಗಾಗಿ ನಾಗರಿಕತೆಯ ಬೆಳವಣಿಗೆಯೊಂದಿಗೆ ಇಡೀ ಜಗತ್ತಿನ ಅನೇಕ ಸಮುದಾಯಗಳು ಅನೇಕ ರೀತಿಯಲ್ಲಿ ತಮ್ಮ ತಮ್ಮ ಲೋಕದೃಷ್ಟಿಯನ್ನು ಆಯಾ ಸಂದರ್ಭಕ್ಕೆ ತಕ್ಕಂತೆ ಬೆಳೆಸಿಕೊಂಡವು. ವಿವಿಧ ರೀತಿಯ ಆಚರಣೆ, ಸಿದ್ಧಾಂತ, ನಂಬಿಕೆ, ವಿಧಿ ವಿಧಾನಗಳು, ಸಂಸ್ಕಾರಗಳು, ಆಹಾರ ಸಂಸ್ಕೃತಿ, ಕಾನೂನು ವ್ಯವಸ್ಥೆ, ನ್ಯಾಯ ವಿತರಣಾ ನಿಯಮಗಳು ಶಿಕ್ಷಣದ ಸ್ವರೂಪ, ಸಾಮಾಜಿಕ ಸಂಸ್ಥೆಗಳಾದ ಕುಟುಂಬ, ವಿವಾಹ, ಧರ್ಮ, ದೇವರು, ರಾಜ್ಯ, ರಾಜ, ಮಾರುಕಟ್ಟೆ, ಸೌಂದರ್ಯವನ್ನು ಕುರಿತ ವಿಚಾರಗಳು, ಆರೋಗ್ಯ ರಕ್ಷಣೆಯ ವಿಧಾನಗಳು, ಯುದ್ಧದ ರೀತಿಗಳು, ಪ್ರಾದೇಶಿಕ ವೈಶಿಷ್ಟ್ಯಗಳು ಹವಾಮಾನ ಕುರಿತ ನಿಲುವುಗಳು ಒಂದೇ ಎರಡೇ ಸಾವಿರಾರು ಅಂಶಗಳು ಆಯಾ ಸಮುದಾಯಗಳ ಲೋಕದೃಷ್ಟಿಯ ನಿರ್ಮಾಣದಲ್ಲಿ ಹಾಸುಹೊಕ್ಕಾಗಿವೆ.

ಹೀಗಾಗಿ ಅನಾಗರಿಕ ಸಮುದಾಯಗಳಿಗಿಂತ ನಾಗರಿಕ ಸಮುದಾಯಗಳ ಲೋಕದೃಷ್ಟಿಗಳು ಹೆಚ್ಚೆಚ್ಚು ಜನರ ಪರವಾಗಿರುವುದಕ್ಕಿಂತ ಆಳುವವರ, ಶ್ರೀಮಂತರ, ಅಧಿಕಾರ ಕೇಂದ್ರದಲ್ಲಿರುವವರಿಗೆ ಅನುಕೂಲವಾಗುವಂತಹ ಲೋಕದೃಷ್ಟಿಯಾಗಿ ಬದಲಾದವು. ಆದಿಮ ಕಾಲದ ಪ್ರಾಕೃತಿಕ ಲೋಕದೃಷ್ಟಿಗಳು ಹಲವು ಬದಲಾವಣೆಗಳ ಮೂಲಕ ಪ್ರಭುತ್ವಕ್ಕೆ ಪೂರಕವಾಗಿರುವಂತಹ, ಅನುಕೂಲವಾಗುವಂತಹ ಅಥವಾ ವ್ಯವಸ್ಥೆಯನ್ನು ಯಥಾಸ್ಥಿತಿಯಾಗಿ

ಕಾಯ್ದುಕೊಳ್ಳುವುದಕ್ಕೆ ನೆರವಾಗುವಂತಹ ಹಾಗೂ ತಮ್ಮ ಅಧಿಕಾರವನ್ನು ಮುಂದುವರಿಸುವುದಕ್ಕೆ ಸಹಕಾರಿಯಾದಂತಹ ದೃಷ್ಟಿಗಳನ್ನು ಚಾಲ್ತಿಗೆ ತಂದರು. ಆರಂಭ ಕಾಲದಲ್ಲಿದ್ದ ಆದಿಮ ತಿಳುವಳಿಕೆಗಳಲ್ಲೂ ಕೆಲವು ಲೋಕಗ್ರಹಿಕೆಗಳು ಜನರೇ ತಮ್ಮ ತಮ್ಮ ಲೌಕಿಕ ಬದುಕಿಗಾಗಿ ಬೆಳೆಸಿಕೊಂಡವುಗಳಾದರೆ ನಂತರದಲ್ಲಿ ಅವು ಅಧಿಕಾರ ವರ್ಗಕ್ಕೆ, ಯಾಜಮಾನ್ಯಕ್ಕೆ, ಪುರುಷ ಪ್ರಭುತ್ವಕ್ಕೆ ಪೂರಕವಾದ ಲೋಕದೃಷ್ಟಿಯಾಗಿ ಮಾರ್ಪಟ್ಟವು. ಇವುಗಳೇ ಇಂದಿನ ನಾಗರಿಕ ಸಮಾಜವನ್ನು ಆಳುತ್ತಿರುವ ಲೋಕದೃಷ್ಟಿಗಳಾಗಿವೆ.

**ಹೆಣ್ಣು ಮಕ್ಕಳ ಬುದ್ಧಿ ಮೊಳಕಾಲ ಕೆಳಗೆ :**

ಈ ಹೇಳಿಕೆಯನ್ನು ಸರ್ವೇಸಾಮಾನ್ಯವಾಗಿ ಎಲ್ಲರೂ ನಂಬಿದ್ದಾರೆ. ಮಹಿಳೆಯರನ್ನು ಕುರಿತ ಲೋಕದೃಷ್ಟಿಗಳ ಗ್ರಹಿಕೆಗಳನ್ನು ಕೂಡ ಹೀಗೆಯೇ ನಾಗರಿಕತೆಯ ಚರಿತ್ರೆಯಲ್ಲಿ ತಿರುಚಲಾಗಿದೆ. ಆದಿಮ ಕಾಲದಲ್ಲಿ ಮಹಿಳೆಯೇ ಎಲ್ಲ ಸಂಪತ್ತನ್ನು ಒದಗಿಸುವಳೆಂದು ನಂಬಿ ಅವಳನ್ನೇ ಜ್ಞಾನ, ಸಮೃದ್ಧಿ, ಸಂಪತ್ತು, ಸಂತಾನ ಮುಂತಾದವುಗಳನ್ನು ಕೊಡುವವಳು ಎಂದಿದ್ದ ಕಾಲದಲ್ಲಿ ಅವಳೇ ಜ್ಞಾನಕ್ಕೆ ಒಡತಿಯಾಗಿದ್ದಳು. ಆದ್ದರಿಂದಲೇ ಅವಳನ್ನು ಹಣೆಬರಹ ಬರೆಯುವ ಸೆಟವಿ ಎಂದು ಕರೆದರು. (ಗಂಡಸಾದ ಬ್ರಹ್ಮ ನಮ್ಮ ಹಣೆಬರಹವನ್ನು ಬರೆಯಲು ಶುರು ಮಾಡಿದ್ದು



ಕ್ರಿಸ್ತಶಕದ ಆಸುಪಾಸಿನಲ್ಲಿ.) ಹೀಗೆ ಪೂಜಿಸಿದ ಅದೇ ನಾಗರಿಕತೆಯು ಕ್ರಮೇಣ ಅವಳನ್ನು ಜ್ಞಾನದ ಒಡತಿಯ ಸ್ಥಾನದಿಂದ ಕೆಳಗಿಳಿಸಿತು. ಇವತ್ತು ಈ ಗಾದೆಯನ್ನು ಉಸಿರಾಡುವಷ್ಟೇ ಸಹಜವಾಗಿ ಜಗತ್ತಿನ ಅತಿ ಹೆಚ್ಚು ಸಮುದಾಯಗಳು ನಂಬಿವೆ ಹಾಗೂ ಅದರಂತೆಯೇ ಬದುಕುತ್ತಿವೆ. 'ಪುರುಷ ಪ್ರಧಾನವಾದ ಸಂಸ್ಕೃತಿಯೊಂದರಲ್ಲಿ ಗಾದೆಗಳ ಉತ್ಪಾದಕರು ಪುರುಷರಾಗಿದ್ದು ಪುರುಷರ ಅಧಿಕಾರ ಮತ್ತು ಧೋರಣೆಗಳನ್ನು ಮೌಲ್ವಿಕರಣ ಗೊಳಿಸುವುದರಲ್ಲಿ ಅವು ಪುರುಷ ಪರವಾಗಿರುತ್ತವೆ. ಇಂತಹ ಪರಿಸರದಲ್ಲಿ ಸಾಂಸ್ಕೃತಿಕ ಮೌಲ್ಯಗಳ ರಚಕರು ಮತ್ತು ನಿಯಂತ್ರಕರು ಪುರುಷರಾಗಿರುವುದು ಹಾಗೂ ಗಾದೆಗಳ ಪ್ರಧಾನ ಉದ್ದೇಶವೇ ಇಂತಹ ಸಾಮಾಜಿಕ ಸಾಂಸ್ಕೃತಿಕ ಮೌಲ್ಯಗಳನ್ನು ನಿರಂತರಗೊಳಿಸುವುದು ಆಗಿರುವುದು. ಮಹಿಳೆಯರು ಗಾದೆಮಾತುಗಳನ್ನು ಬಳಸಿದರೂ ಅವರು ಪುರುಷ ದನಿಯಲ್ಲಿ ಆಡುತ್ತಿರುತ್ತಾರೆ ಎನ್ನುವ ಸೂಕ್ಷ್ಮವನ್ನು ತಿಳಿಯಬೇಕಾಗಿದೆ. ಏಕೆಂದರೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪುರುಷ ಹಿತಾಸಕ್ತಿಗಳು ಮೌಲ್ಯವಾಗಿವೆ. ಅದನ್ನು ಸ್ತ್ರೀ ಪುರುಷರಿಬ್ಬರೂ ರೂಢಿಸಿಕೊಂಡವರಾಗಿರುತ್ತಾರೆ.

ಭಾರತದಲ್ಲಂತೂ ಪ್ರತಿಯೊಬ್ಬ ಗಂಡನ ಉವಾಚ 'ಅಕೀಗೇನೂ ತಿಳಿಯೂದಿಲ್ಲ ಎಲ್ಲ ನಾನೇ ಹೇಳೇಕು. ಅದಕ್ಕಾಗಿಯೇ ಅವಳ ಬುದ್ಧಿ ಮೊಳಕಾಲ ಕೆಳಗೆ ಎಂಬ ಲೋಕಗ್ರಹಿಕೆಯನ್ನು ಸಾಮಾಜೀಕರಣಗೊಳಿಸಲಾಯಿತು. ಮತ್ತು ಅದನ್ನು ಮಹಿಳೆಯರು ಕೂಡ ನಂಬಿ ಅದರಂತೆಯೇ ಬದುಕುತ್ತಾರೆ, ಬದುಕುತ್ತಿದ್ದಾರೆ ಕೂಡ. ಪುರುಷರಿಗಿಂತ ಮಹಿಳೆ ಕಡಿಮೆ ಬುದ್ಧಿವಂತಿಕೆಯಿರುವವಳು ಎಂದು ಇಂದು ಭಾರತೀಯರಲ್ಲಿ ೯೯.೯೯% ಜನ ಗಂಡಸರು ಹಾಗೂ ಹೆಂಗಸರು ಒಪ್ಪಿದ್ದಾರೆ. ಆದರೆ ವಾಸ್ತವ ಸತ್ಯ ಬೇರೆಯೇ ಇದೆ ಎಂದು ನೇಮಿಚಂದ್ರ ಅವರು ತಮ್ಮ 'ಮಹಿಳೆ ಮಿದುಳು ಪೂರ್ವಗ್ರಹ' ಎಂಬ ಲೇಖನದಲ್ಲಿ ಉದಾಹರಣೆ ಸಹಿತ ವಿವರಿಸುತ್ತಾರೆ. ಹೆಣ್ಣುಮಕ್ಕಳ ಮಿದುಳು ಪುರುಷರ ಮೆದುಳಿಗೆ ಹೋಲಿಸಿದರೆ ಚಿಕ್ಕದು ಆದುದರಿಂದ ಅವರು ಪುರುಷರಷ್ಟು ಬುದ್ಧಿವಂತರಲ್ಲ ಎಂದು ಸಂಶೋಧನೆ ಮಾಡಿದ, ಬೀಗಿದ ವಿಜ್ಞಾನಿಗಳನ್ನು ಹೆಸರಿಸುತ್ತಾರೆ. ಇನ್ನೂ ಮುಂದೆ ಹೋಗಿ ಇ. ಎಚ್, ಕ್ಲಾರನ್ ಎಂಬ ವಿಜ್ಞಾನಿ ಮಹಿಳೆಯ ಉನ್ನತ ವ್ಯಾಸಂಗವು ಅವಳ ಸಂತಾನೋತ್ಪತ್ತಿಗೆ ಮಾರಕ ಎಂಬ ಹಾಸ್ಯಾಸ್ಪದ ಸಂಗತಿಯನ್ನು ಹೇಗೆ ಸಂಶೋಧನೆಯ ಹೆಸರಿನಲ್ಲಿ ಪ್ರಚುರ ಪಡಿಸಿದ ಎಂಬುದನ್ನು ಅನಾವರಣಗೊಳಿಸಿದ್ದಾರೆ. ಹಾಗೆಯೇ ಇದುವರೆಗೂ ನಡೆದ ಸಂಶೋಧನೆಗಳನ್ನು ಆಧರಿಸಿ ಮಹಿಳೆ ಇರಬಹುದು. ಪುರುಷ ಇರಬಹುದು ಅವರ ಮೆದುಳಿನ ವಿಕಾಸ ಪರಿಸರದಿಂದಲೇ ಹೊರತು ಹುಟ್ಟಿನಿಂದಲ್ಲ ಎನ್ನುವ ಕ್ಯಾಲಿಫೋರ್ನಿಯಾದ ನರವಿಜ್ಞಾನಿ ಡಾ. ಫ್ರೆಡ್ ಎಚ್. ಗೇಲ್ ಅವರ ಸಂಶೋಧನೆಯನ್ನು ನಮ್ಮ ಮುಂದಿಡುತ್ತಾರೆ ನೇಮಿಚಂದ್ರ ಅಂದರೆ ಬುದ್ಧಿಮತ್ತೆಯು ಜೈವಿಕ ಸಂಗತಿಯಲ್ಲ ಅದು ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂಗತಿಯೆನ್ನುವುದನ್ನು ವೈಜ್ಞಾನಿಕವಾಗಿ ವಿವರಿಸುತ್ತಾರೆ. ಹಾಗೆ ನೋಡಿದರೆ ಹೆಚ್ಚು ಕ್ರಿಯಾಶೀಲರಾಗಿರುವವರು ಹೆಚ್ಚು ಸೃಜನಶೀಲರಾಗಿರುತ್ತಾರೆ. ತಮ್ಮ ನಿರಂತರ ಬೆಂಕಿ, ಕೃಷಿ ಕ್ರಿಯಾಶೀಲತೆ ಮುಂತಾದವುಗಳನ್ನು ಈ ನಾಗರಿಕ ಜಗತ್ತಿಗೆ ನೀಡಿದ ಮಹಿಳೆಯರು ಇನ್ನೂ ಕತ್ತಲನ್ನು ಹೊದ್ದುಕೊಂಡೇ ಬದುಕುತ್ತಿದ್ದಾರೆ. ಬುದ್ಧಿಮತ್ತೆ ಎನ್ನುವುದು ಲಿಂಗ, ಪ್ರದೇಶ, ಜಾತಿ, ಧರ್ಮಗಳನ್ನು ಆಧರಿಸಿರುವುದಿಲ್ಲ ಎನ್ನುವುದನ್ನು ಅವರು ವಿವರಿಸುತ್ತಾರೆ. ನಮ್ಮ

ಜನಪದ ಕತೆಗಳಲ್ಲಿ ಬರುವ ಕುಂಟಿಣಿಯರು, ಮುದುಕಿಯರು, ಮಹಿಳೆಯರು, ಗಂಡಿಗಿಂತ ಒಂದು ಹೆಜ್ಜೆ ಮುಂದೆಯೇ ಎಂಬುದನ್ನು ಅನೇಕ ಕಡೆ ಕಾಣುತ್ತೇವೆ. "ಬೌದ್ಧಿಕ ಶಕ್ತಿ ಗಂಡಿನದು, ದೈಹಿಕ ಶ್ರಮವಷ್ಟೇ ಹೆಣ್ಣಿನದು ಎಂಬ ದುಡಿಮೆಯ ಲಿಂಗನೀತಿ ಹೆಣ್ಣಿನ ಶಕ್ತಿಯನ್ನು ಅಲ್ಲಗಳೆದು ಆಕೆಯ ದುಡಿಮೆಯನ್ನು ಮೌಲ್ಯರಹಿತವಾಗಿ ಮಾಡಿದೆ. ಇದಕ್ಕೆ ಪ್ರತಿಯಾಗಿ ಜನಪದ ಕತೆಯೊಳಗಿನ ಹೆಣ್ಣುಗಳು ಬುದ್ಧಿವಂತರು, ಧೈರವಂತರು, ಜಾಣೆಯರು, ಸಾಹಸಿಗಳು, ಸ್ವಾಭಿಮಾನಿಗಳು ತನ್ನ ಬುದ್ಧಿವಂತಿಕೆಯಿಂದಲೇ ರಾಕ್ಷಸನನ್ನು ಪ್ರತಿನಾಯಕನನ್ನು ಮಣ್ಣು ಮುಕ್ಕಿಸುವ ತನಗೆ ಒಲ್ಲದ ಏನನ್ನು ತಂತ್ರಹೂಡಿ ಮೋಸಗೊಳಿಸುವ ಮೂಲಕ ಗೆಲುವು ಸಾಧಿಸುತ್ತಾಳೆ. ಈಕೆ ಮುಂದಾಗುವ ಘಟನೆಯನ್ನು ತಿಳಿಯಬಲ್ಲ ಅತೀಂದ್ರಿಯ ಶಕ್ತಿವಂತೆ, ಗಂಡಿಗೆ ಸಾಧ್ಯವಾಗದ ಒಗಟನ್ನು ಬಿಡಿಸುವ ಜಾಣೆ, ಅಂದರೆ ಯಾವ ತಾತ್ವಿಕತೆಗಳು ಪುರುಷ ವ್ಯವಸ್ಥೆಯ ನೇರಕ್ಕೆ ಸಿದ್ಧಾಂತಗಳನ್ನು ರೂಪಿಸಿವೆಯೋ ಆ ತಾತ್ವಿಕತೆಗಳು ಮುಟ್ಟಲಾಗದ ಜನಪದ ಕತೆಗಳಲ್ಲಿ ಬರುವ ಮಹಿಳೆಯರು ಪುರುಷರಿಗಿಂತಲೂ ಜಾಣೆಯರಾಗಿದ್ದಾರೆ. ಈ ಕತೆಗಳೊಳಗೆ ಆದಿಮ ಸಂಸ್ಕೃತಿಯ ಪಳೆಯುಳಿಕೆಗಳು ಜೀವಂತವಾಗಿದ್ದು ನಾಗರಿಕತೆಯ ಆರಂಭ ಕಾಲದ ವಾಸ್ತವ ಲೋಕಗ್ರಹಿಕೆಗಳನ್ನು ಒಡಲಲ್ಲಿಟ್ಟುಕೊಂಡಿದೆ. ಆರಂಭಕಾಲದಲ್ಲಿ ಹೆಣ್ಣು ಬುದ್ಧಿವಂತಳು ಎಂಬ ಲೋಕಗ್ರಹಿಕೆಯು ನಾಗರಿಕತೆ ಬೆಳೆದಂತೆಲ್ಲ ಅವಳ ಬುದ್ಧಿ ಮೊಳಕಾಲ ಕೆಳಗೆ ಎಂಬ ಮಿಥ್ ಅನ್ನು ಸೃಷ್ಟಿಸಿ ಅದು ಆಳುವ ವರ್ಗಕ್ಕೆ ಅನುಕೂಲ ವಾಗುವಂಥ ಲೋಕಗ್ರಹಿಕೆಯನ್ನಾಗಿ ಸಾಮಾಜೀಕರಣಗೊಳಿಸಿದೆ.

ಕನ್ನಡ ಸಾಹಿತ್ಯವು ಪುರುಷ ಪ್ರಧಾನ ಸಾಹಿತ್ಯವಾದರೂ ಅಲ್ಲಲ್ಲಿ ಕೃತಿಕಾರರಿಗೆ ಗೊತ್ತಿಲ್ಲದೆ ಆ ಕಾಲದ ಜನಮಾನಸದಲ್ಲಿ ಇದ್ದ ಕೆಲವು ಸಂಗತಿಗಳು ನುಸುಳಿವೆ. ವಡ್ಡಾರಾಧನೆಯ ಚಾಣಕ್ಯರಿಷಿಯ ಕತೆಯಲ್ಲಿ ಪುರುಷ ತಾತ್ವಿಕತೆಯನ್ನು ಕಂಡರೂ ಕೃತಿಕಾರನ ಒಳಗಿನ ಸೃಜನಶೀಲತೆಯ ಮೂಸೆಯಲ್ಲಿ ಈ ಕತೆ ಹೆಣ್ಣು ಬುದ್ಧಿವಂತಳು ಎನ್ನುವುದನ್ನು ಒಪ್ಪಿಕೊಳ್ಳುತ್ತದೆ. ಚಾಣಕ್ಯ ರಿಷಿಯು ಎಷ್ಟು ದಡ್ಡನಾಗಿದ್ದ ಎಂಬುದನ್ನು ಆ ಹಳ್ಳಿಯ ಮುದುಕಿ ತೋರಿಸಿಕೊಡುತ್ತಾಳೆ.

'ಧರ್ಮಾಮೃತ'ದಲ್ಲಿ ಕೂಡ ಮಹಿಳೆಯರು ಅತ್ಯಂತ ಜಾಣತನದಿಂದ ಮನೆಯನ್ನು ನಡೆಸಿಕೊಂಡು ಹೋಗುತ್ತಿದ್ದರೆಂಬುದನ್ನು ಕವಿ ಚಿತ್ರಿಸಿದ್ದಾನೆ. "ಕೇಡಿಂಗಂ ಬಡತನಕ್ಕಮಪ್ಪ ಪೆಂಡತಿಗೆ ಮನೆವಾರ್ತೆಯ ನುಡಿವಂರ್ತೆ" , ಅಂದರೆ ಕಷ್ಟಕಾಲದಲ್ಲಿ ಅವಳು ಬುದ್ಧಿವಂತಿಕೆಯಿಂದ ಮನೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದಳು ಎಂಬುದನ್ನು ನೋಡುತ್ತೇವೆ. ಅಲ್ಲದೆ 'ಪೆಂಡತಿ ಕುತ್ತದೊಳ್ ಫಲಮಂ ತೋಳ್ಪಂತೆ ಎಂದು ಕಷ್ಟಕಾಲದಲ್ಲಿ ಹೆಂಡತಿಯೇ ದಾರಿ ತೋರುವಳೆಂಬುದನ್ನು ಒಪ್ಪಿಕೊಳ್ಳುತ್ತದೆ.

ವಚನಕಾರರಲ್ಲಿ ವಿಚಾರಪತ್ನಿಯ ಮಾತು ಬರುತ್ತದೆ. ಇಂದಿನ ಕಾಲದಲ್ಲಿಯೂ ಕೂಡ ತನಗಿಂತ ಹೆಂಡತಿ ಸುಂದರವಾಗಿದ್ದರೆ ಹೆಮ್ಮೆಪಡುವ ಗಂಡಸರು ತನಗಿಂತ ತನ್ನ ಹೆಂಡತಿ ಬುದ್ಧಿವಂತೆ ಎಂದು ಯಾರಾದರೂ ಹೇಳಿದಾಗ

ಕಸಿವಿಸಿಗೊಳ್ಳುತ್ತಾರೆ. ತಾನು ಪಡೆದ ಪದವಿಗಳಿಗಿಂತ ಸ್ವಲ್ಪವಾದರೂ ಕಡಿಮೆ ಪದವಿ ಪಡೆದವಳಾಗಿರಬೇಕು ಎಂಬುದನ್ನು ಬಹಿರಂಗವಾಗಿಯೇ ಹೇಳುತ್ತಾರೆ. ಹೆಣ್ಣುಮಕ್ಕಳು ತಮಗಿಂತ ಹೆಚ್ಚು



ಬುದ್ಧಿವಂತರೆಂದು ಗೊತ್ತಿರುವುದರಿಂದಲೇ ಅದನ್ನು ಮುಚ್ಚಿಡುವ ಪ್ರಯತ್ನಗಳು ಚರಿತ್ರೆಯುದ್ದಕ್ಕೂ ನಡೆಯುತ್ತಲೇ ಬಂದಿವೆ. 'ಮೊಲೆಮೂಡಿ ಬಂದರೆ ಹೆಣ್ಣೆಂಬರು, ಮೀಸೆ ಕಾಸೆ ಬಂದರೆ ಗಂಡೆಂಬರು ಈ ಉಭಯದ ಜ್ಞಾನ ಗಂಡೇ ಹೆಣ್ಣೋ ನಾಸ್ತಿನಾಥ ಎಂದು ಗೊಗ್ಗವ್ವ ಕೇಳುತ್ತಾಳೆ.

ಬಂದುದನರಿದು ಬಳಸುವಳು

ಬಂದುದ ಪರಿಣಾಮಿಸುವಳು

ಬಂಧು ಬಳಗವ ಮರಸುವಳು

ದುಗ್ಗಳೆಯ ತಂದು ಬದುಕಿದೆನು ಕಾಣಾ ರಾಮನಾಥ ೧೧

ಎಂದು ಜೇಡರ ದಾಸಿಮಯ್ಯ ಹೇಳುತ್ತಾನೆ. ಜಗತ್ತಿನ ಬಹುದೊಡ್ಡ ತತ್ತ್ವಜ್ಞಾನಿ ಅಲ್ಲಮ. ಎಲ್ಲರೂ ಅವನ ಮಾತಿಗೆ ತಲೆದೂಗುತ್ತಿದ್ದರು. ಅವನನ್ನು ಅರಿವಿನ ತರ್ಕದಿಂದ ನಿರುತ್ತರರಾಗಿಸಿದವರು ಅಕ್ಕಮಹಾದೇವಿ ಮತ್ತು ಮುಕ್ತಾಯಕ್ಕ ಎನ್ನುವುದನ್ನು ನೋಡುತ್ತೇವೆ. ಹೆಚ್ಚಿನ ವಿವರಗಳಿಗೆ ಹೋಗದೆ ಇಲ್ಲೆಲ್ಲಾ ಮಹಿಳೆಯರೇ ಬುದ್ಧಿವಂತರಾಗಿದ್ದರೆಂಬುದನ್ನು ನಾವು ಕಾಣುತ್ತೇವೆ.

'ರಮಣಿಯೊಳೆ ಬುದ್ಧಿ ನಾಲ್ಕುಮಡಿಯಪ್ಪುದರಿಂ' ಎಂದು ನಳಚಂಪು ಹೇಳುತ್ತದೆ.

'ನೆಲೆದಪ್ಪಿದೆಡೆಗೆ ಮತಿ ಸಂ

ಚಲಿಸಿರ್ದೆಡೆಗೆ ಅನ್ಯದೇಶಮಾದೆಡೆಗೆ ಬಳ

ಮುಳಿದೆಡೆಗೆ ಬುದ್ಧಿವೇಳಲ್

ಕುಲವಧುವೇ ಕಾರಣಂ ಪರೀಕ್ಷೆಯಿಂದ' ಎಂದು

ದಶಕುಮಾರ ಚರಿತೆ ಹೇಳುತ್ತದೆ. ಕಠಿಣ ಸಂದರ್ಭದಲ್ಲಿ ಹೆಂಡತಿಯೇ ಗಂಡನಿಗೆ ಬುದ್ಧಿವಾದ ಹೇಳಬಲ್ಲಳು ಎಂಬುದು ಪರೀಕ್ಷೆಯಿಂದ ಸಿದ್ಧವಾದ ಸಂಗತಿ ಎಂದು ಇದು ಹೇಳುತ್ತಿದೆ. ಗಂಡನಿಗೆ ಮಂತ್ರಿಯಾಗಿ ಹೆಂಡತಿ ಇರಬೇಕು, ಇರುತ್ತಾಳೆಂಬುದನ್ನು ಪುರುಷ ಪ್ರಧಾನ ಸಮಾಜದ ದೃಢ ನಂಬಿಕೆಯಾಗಿದೆ. ಅದಕ್ಕಾಗಿಯೇ ತಿಳಿದೋ ತಿಳಿಯದೆಯೋ ಹೆಂಡತಿಯಾದವಳು 'ಕಾರೇಷು ಮಂತ್ರಿ'ಯಾಗಿದ್ದಾಳೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಹೀಗೆ ತನ್ನ ಅಧಿಕಾರವನ್ನು ಸ್ಥಾಪಿಸುತ್ತಲೇ ಅಪ್ರಜ್ಞಾಪೂರ್ವಕವಾಗಿ ಹೆಣ್ಣು ರಾಜನಿಗೆ ಬುದ್ಧಿ ಹೇಳುವ ಮಂತ್ರಿಯಂತೆ ಹೆಚ್ಚಿನ ಬುದ್ಧಿಯುಳ್ಳವಳೆಂಬುದನ್ನು ಒಪ್ಪಿಕೊಳ್ಳುತ್ತಾರೆ.

ಹೀಗೆ ವೈಜ್ಞಾನಿಕವಾಗಿ ಸಾಬೀತುಪಡಿಸಲಾದ ಸಂಗತಿಗಳನ್ನು ಅತ್ಯಂತ ಸಹಜವೆಂಬಂತೆ ಗ್ರಹಿಸುವ ಲೋಕಗ್ರಹಿಕೆಗಳು ಜನರಿಗೆ ಗೊತ್ತಿಲ್ಲದೆಯೇ ಜನರನ್ನು ಆಳುತ್ತಿರುತ್ತವೆ. ಅವುಗಳಲ್ಲಿ 'ಹೆಣ್ಣು ಮಕ್ಕಳ ಬುದ್ಧಿ ಮೊಳಕಾಲ ಕೆಳಗೆ ಎನ್ನುವುದು ಕೂಡ ಒಂದು. ಇಂತಹ ನೂರಾರು ಲೋಕಗ್ರಹಿಕೆಗಳನ್ನು ಪಟ್ಟಿ ಮಾಡಬಹುದಾಗಿದೆ. ಮಹಿಳೆಯರ ಬಗ್ಗೆ ಈಗಾಗಲೇ ಬೇರೂರಿರುವ ಇಂತಹ ಲೋಕಗ್ರಹಿಕೆಗಳು ಆದಿಮ ಕಾಲದಲ್ಲಿ ವಾಸ್ತವಕ್ಕೆ ಸಮೀಪವಾಗಿದ್ದವು. ಆದರೆ ನಾಗರಿಕತೆ ಬೆಳೆದಂತೆ ಪುರುಷ ಪ್ರಧಾನ ವ್ಯವಸ್ಥೆಗೆ ಪೂರಕವಾಗುವಂತೆ ಬದಲಾಗಿವೆ. ಇವುಗಳನ್ನು ಮಹಿಳೆಯರು ಕೂಡ ಒಪ್ಪಿಕೊಂಡು ಪುರುಷ ವ್ಯವಸ್ಥೆಯ ಅಡಿಪಾಯವನ್ನು ಗಟ್ಟಿ ಮಾಡುತ್ತಿರುತ್ತಾರೆ. ಆರ್ಥಿಕ,



ಸಾಮಾಜಿಕ, ರಾಜಕೀಯ, ಧಾರ್ಮಿಕ, ಕಲಾತ್ಮಕತೆ ಇತ್ಯಾದಿಗಳ ಮುಖಾಂತರ ಕಟ್ಟಿಕೊಂಡಿರುವ ಅಥವಾ ಕಟ್ಟಿಕೊಟ್ಟಿರುವ ಈ ರಚನೆಗಳನ್ನು ಮರುರೂಪಿಸುವದು ಇಂದಿನ ಅಗತ್ಯವಾಗಿದೆ. ಅವಳ ಗುಣ ವಿಶೇಷಣಗಳೇ ಅವಳ ದೌರ್ಬಲ್ಯಗಳೆಂದು ಮಂಡಿಸುತ್ತಿರುವ ಪುರುಷ ಪ್ರಧಾನ ವ್ಯವಸ್ಥೆಗೆ ಆ ವಿಶಿಷ್ಟ ಗುಣಗಳೇ ಅವಳ ಶಕ್ತಿ ಎಂಬುದನ್ನು ಪರಿಚಯಿಸಿಕೊಡಬೇಕಾಗಿದೆ.

## ಅಧ್ಯಕ್ಷ ಭಾಷಣ :

## ಬದಲಾಗುತ್ತಿರುವ ಮಹಿಳಾ ಸಂವೇದನೆಗಳು

· ಡಾ.ಟಿ.ಟಿ.ಲಲಿತಾನಾಯಕ್

ಮಹಿಳೆಯ ಬಗ್ಗೆ ಸಂದರ್ಭಾನುಸಾರವಾಗಿ ಹೀಗೆ ಹೇಳಲಾಗುತ್ತದೆ. 'ಪಾನಿ ತೇರಾ ರಂಗ್ ಕೈಸಾ?' 'ಜೈಸೇ ತುಮ್ ಡಾಲೆ ಜೈಸೇ' (ನೀರೇ, ನಿನ್ನ ಬಣ್ಣವೆಂಥದ್ದು? ನೀನು ಯಾವುದರಲ್ಲಿ ಹಾಕುತ್ತೀಯೋ, ನನ್ನ ಬಣ್ಣ ಅಂತಹದ್ದು!) ಈ ಮಾತು ಪುರುಷನಿಗೆ ಅನ್ವಯಿಸುವುದಿಲ್ಲ, ಮಹಿಳೆಗೆ ಮಾತ್ರ ಎಲ್ಲಿ ಬೇಕಾದರೂ, ಹೇಗೆ ಬೇಕಾದರೂ ಹೊಂದಿಕೊಳ್ಳುವ ಮೇರುಗುಣವಿದೆ, ಅಂತಲೇ ಆಕೆ ಭೂಮಿ ತೂಕದವಳು ಎಂದು ತಾವು ಬುದ್ಧಿವಂತರೆಂದು ಭಾವಿಸಿರುವ ಜನ ಹೇಳಿಕೊಳ್ಳುತ್ತಾರೆ. ಗಂಡು ಹುಟ್ಟಿನಿಂದಲೇ ಬಲಶಾಲಿ, ಜ್ಞಾನಿ ಅವನು ವಿದ್ಯೆ ಕಲಿಯದಿದ್ದರೂ ವಿದ್ಯಾವಂತ, ಪೌರುಷವಂತ ಅದಕ್ಕೇ ಆತ ಪುರುಷ, ಹೆಣ್ಣು ಹುಟ್ಟಿನಿಂದಲೇ, ಅಜ್ಞಾನಿ, ಅಬಲೆ, ಒಂದು ವೇಳೆ ವಿದ್ಯೆ ಕಲಿತವಳಾದರೂ ಅವಿದ್ಯಾವಂತೆ, ಅವಳಿಗೆ ಸ್ವಂತಬುದ್ಧಿ ಇಲ್ಲ. ಯಾರು ಏನು ಹೇಳುತ್ತಾರೋ ಅದರಂತೆ, ಹೆಜ್ಜೆ ಹಾಕುವಳು, ಹೆಣ್ಣು ಎಡವಟ್ಟು, ಅವಳು ಬಾಲ್ಯದಲ್ಲಿ ತಂದೆಯ ಹಿಡಿತದಲ್ಲಿ, ಯೌವ್ವನದಲ್ಲಿ-ಗಂಡನ ಹಿಡಿತದಲ್ಲಿ, ವೃದ್ಧೆಯಾದಾಗ-ಮಗನ ಹಿಡಿತದಲ್ಲಿ ಜೀವಿಸಬೇಕು ಎಂದು ಕಾನೂನು ಮಾಡಿದರು ಆಗಿನ ಕಾಲದ ಬುದ್ಧಿವಂತರು. ಹೆಣ್ಣು-ಗಂಡು ಪ್ರೇಮಿಸಿ, ಹಿರಿಯರ ಭಯದಿಂದಾಗಿ ಎಲ್ಲಾದರೂ ದೂರ ಹೋಗಿ ತಲೆ ಮರೆಸಿಕೊಂಡರೆ, ಜನ ಹೇಳುವುದು 'ಆ ಹುಡುಗ ಹುಡುಗಿಯ ತಲೆ ಕೆಡಿಸಿ ಓಡಿಸಿಕೊಂಡು ಹೋಗಿ ಬಿಟ್ಟಿದ್ದಾನೆ! ಇತ್ತೀಚೆಗೆ ಮಾಧ್ಯಮಗಳಂತು ಇಂತಹ ಮಾತುಗಳನ್ನು ಸಾವಿರ ಸಾವಿರ ಬಾರಿ ಹೇಳಿ 'ಸತ್ಯ ಸುದ್ದಿ'ಯೂ ತಲೆ ಕೆಟ್ಟು ಅಯೋಮಯ ಸ್ಥಿತಿಗೆ ತಲುಪುವಂತೆ ಮಾಡಿ ಬಿಟ್ಟಿವೆ.

ಆದರೆ ದೈಹಿಕವಾಗಿ ಮಾತ್ರ ಸ್ತ್ರೀ-ಪುರುಷರ ನಡುವೆ ವ್ಯತ್ಯಾಸವಿರುವುದನ್ನು ಬಿಟ್ಟರೆ, ಬುದ್ಧಿಶಕ್ತಿ-ವಿಚಾರಶಕ್ತಿಯಲ್ಲಿ ಗಂಡು-ಹೆಣ್ಣು ಎಂಬ ಯಾವುದೇ ಭೇದವಿಲ್ಲ ಎಂಬುದನ್ನು ನಮ್ಮ ಸಮಾಜ ಈ ಕಾಲದಲ್ಲಿಯೂ ಒಪ್ಪಿಕೊಳ್ಳಲು ಸಾಧ್ಯವಾಗಿಲ್ಲ, ಕಾರಣ-ಮನುವಾದಿ ಚಿಂತನೆಗಳು ಸಮಾಜದ ಅಂದರೆ, ಸ್ತ್ರೀ ಪುರುಷರ ಎದೆ ಗೂಡಿನಲ್ಲಿ ಬೆಚ್ಚಗೆ ಬಚ್ಚಿಟ್ಟುಕೊಂಡು ಕುಳಿತಿವೆ.

ಆಗಿನ ಕಾಲದಲ್ಲಿ ಮಹಿಳೆಯರಿಗೆ ಶಿಕ್ಷಣವೆಂಬುದು ಗಗನ ಕುಸುಮವಾಗಿತ್ತು. ವೈದಿಕ ವಟುಗಳಿಗೆ ಜಾತಿ ಶ್ರೇಷ್ಠತೆಗಾಗಿ ಧಾರ್ಮಿಕ ಶಿಕ್ಷಣವನ್ನು ಕಲಿಸಲಾಗುತ್ತಿತ್ತ ಅದಕ್ಕಾಗಿ ಅಗ್ರಹಾರಗಳು, ಬ್ರಹ್ಮಪುರಿಗಳು (ಬ್ರಾಹ್ಮಣರ ವಾಸಸ್ಥಳ), ಶಿಕ್ಷಣ

ಕೇಂದ್ರಗಳಾಗಿದ್ದವು. ಮೌರ್ಯರ ಕಾಲದಿಂದ ರಾಷ್ಟ್ರಕೂಟರ ಕಾಲದವರೆಗೆ ಬೌದ್ಧ, ವೈದಿಕ ಮತ್ತು ಜೈನ ಶಿಕ್ಷಣ ಪದ್ಧತಿಗಳು ಜೊತೆ ಜೊತೆಗೆ ಅಸ್ತಿತ್ವದಲ್ಲಿದ್ದವು.

ಬ್ರಹ್ಮಪುರಿ ಮತ್ತು ಘಟಿಕಾಗಳು ಉನ್ನತ ಶಿಕ್ಷಣಕೇಂದ್ರಗಳಾಗಿದ್ದು ಅವುಗಳ ವ್ಯವಸ್ಥೆಯ ಜವಾಬ್ದಾರಿ ಹೊತ್ತವರಿಗೆ 'ಮಹಾಜನ'ರೆಂದು ಕರೆಯಲಾಗುತ್ತಿತ್ತು. ಕರ್ನಾಟಕದ ನಾಗಾಯಿ, ಕಾಡಿಯೂರು, ಕುಕನೂರು, ಹೆಂಜೇರು ಮತ್ತು ರಾಯಬಾಗ್ ಗಳಲ್ಲಿ ಘಟಿಕಾಗಳಿದ್ದವು. ಇವುಗಳಲ್ಲೆಲ್ಲಾ ಪ್ರಮುಖವಾದುದು ಗುಲ್ಬರ್ಗಾದಲ್ಲಿದ್ದ ನಾಗಾಯಿ ಘಟಿಕಸ್ಥಾನ, ಅದು ೨ ಕೇಂದ್ರಗಳನ್ನು ಹೊಂದಿ ೪೦೦ ಮತ್ತು ೨೫೭ ಸದಸ್ಯರಿದ್ದರು. ದಲಿತರು, ಹಿಂದುಳಿದವರು, ಮಹಿಳೆಯರು, ಜನಸಾಮಾನ್ಯರು ಒಂದೆಡೆ ವರ್ಣಾಶ್ರಮ ಧರ್ಮ, ಮತ್ತೊಂದೆಡೆ ಆಳರಸರು, ಪಾಳೇಗಾರರಂಥಹ ಸರ್ವಾಧಿಕಾರಿಗಳ ನಡುವೆ ಸಿಲುಕಿ ಮಾನಸಿಕ, ದೈಹಿಕ ದಾಸ್ಯಕ್ಕೆ ತುತ್ತಾಗಿದ್ದರು. ಪಂಡಿತೋತ್ತಮರ ಪಾಲಿಗೆ ಈ ಜನ ವಿದ್ಯಾಹೀನ ಪಶುಗಳು ಅಷ್ಟೆ.

ಹನ್ನೆರಡನೇ ಶತಮಾನದ ಬಸವಾದಿ ಶರಣರು ಇಂತಹ ಅಂಧಕಾರದ ನಡುವೆ ಅರಿವಿನ ಬೆಳಕಾಗಿ ಮೂಡಿಬಂದು ಕ್ರಾಂತಿಯ ಕಹಳೆಯೂದಿದ್ದು, ಆ ಶತಮಾನದ ವೈಶಿಷ್ಟ್ಯ "ಶೆಟ್ಟಿ ಎಂಬೆನೇ ಮಡಿವಾಳನೆಂಬೆನೇ | ಮಾಚಯ್ಯನ ಡೋಹರನೆಂಬೆನೆ ಕಕ್ಕಯ್ಯನ ಮಾದಾರನೆಂಬೆನೆ ಚನ್ನಯ್ಯನ ಆನು ಹಾರುವನೆಂದಡೆ ಕೂಡಲ ಸಂಗನಲ್ಲಿ ನಗುವನಯ್ಯಾ" ಜಾತಿ ಲಿಂಗಭೇದ, ವರ್ಗ-ವರ್ಣ ಅಸಮಾನತೆಯ ಭೂತವನ್ನು ಮೆಟ್ಟಿ ಸರ್ವರೂ ಸಮಾನರೆಂದು ಸಾರಿದರು. ನೂರಾರು ಕೆಳವರ್ಗದ ಕಾರ್ಯಜೀವಿ ಮಹಿಳೆಯರು ತಮ್ಮ ಕಾಯಕದ ನಡುವೆಯೇ ಶಿಕ್ಷಣ ಪಡೆದು ಪುರುಷ ವಚನಕಾರರಷ್ಟೇ ಸಮರ್ಥವಾಗಿ ಜನಪರವಾದ ವಚನಗಳನ್ನು ರಚಿಸಿ ಮನುಷ್ಯ ಬದುಕಿನ ಘನತೆಯನ್ನು ಎತ್ತಿ ಹಿಡಿದರು.

ಯಾರು ಯಾವ ಕಸುಬನ್ನೇ ಕೈಗೊಂಡರೂ ಸಾಮಾಜಿಕವಾಗಿ, ಧಾರ್ಮಿಕವಾಗಿ ಎಲ್ಲರೂ ಸಮಾನ ಶರಣತತ್ತಿಗಳೆಂದೇ ಪರಿಗಣಿಸಲ್ಪಟ್ಟರು. ತಮ್ಮ ನಡೆ-ನುಡಿಗಳನ್ನು ಒಂದಾಗಿಸಿ, ಕಾಯಕದ ಮೂಲಕ, ವಚನಗಳ ಮೂಲಕವೇ ಸಮಾಜ ಪರಿವರ್ತನೆಯ ಚಳುವಳಿಯನ್ನು ಹುಟ್ಟು ಹಾಕಿ ವಿಶ್ವಕ್ಕೆ ಮಾದರಿಯಾಗುವ ಮಾನವೀಯ ಧರ್ಮವನ್ನು ಈ ನೆಲದಲ್ಲಿ ಬಿತ್ತಿ ಹೋದರು. 'ದೇವ ಭಾಷೆ' ನಮಗೆ ಬೇಡ ನಮ್ಮ 'ಮಾನವ ಭಾಷೆ ನಮಗೆ ಸಾಕು ಎಂದು ತಮ್ಮ ಅನುಭವವನ್ನು ಅಚ್ಚ ಕನ್ನಡದಲ್ಲಿ ಅಭಿವ್ಯಕ್ತಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು.

"ಊರ ಒಳಗಣ ಬಯಲು ಊರ ಹೊರಗಣ ಬಯಲು ಎಂಬುದುಂಟೆ? ಊರೊಳಗೆ ಬ್ರಾಹ್ಮಣ ಬಯಲು ಊರ ಹೊರಗೆ ಹೊಲೆ ಬಯಲೆಂಬುದುಂಟೆ? ಎಲ್ಲೆಲ್ಲಿ ನೋಡಿದಡೆ ಬಯಲೊಂದೇ!" ಎಂದು ಜಾತೀಯತೆಯನ್ನು ಸಂಪೂರ್ಣವಾಗಿ ನಿರಾಕರಿಸಿದ ವಚನಕಾರ್ತಿ ಬೋಂತಾದೇವಿ ಪ್ರಸ್ತುತ ಸಂದರ್ಭದಲ್ಲಿ ಮಹಿಳೆಯರ ಆದರ್ಶವಾಗಬೇಕು.

ದಲಿತಶೂದ್ರ ಮಹಿಳಾಪಡೆ ಯಾರ ಹಂಗಿಗೂ ಒಳಗಾಗದೆ ಸತ್ಯ ಶುದ್ಧ ಕಾಯಕದಲ್ಲಿ ತೊಡಗಿ ತಮ್ಮ ಜ್ಞಾನ ಚಿಂತನೆಯ ಸಂಪತ್ತನ್ನು ನಿರ್ಭೀತಿಯಿಂದ



ಸಮಾಜಕ್ಕೆ ಧಾರೆ ಎರೆದರು. ಆದರೆ ಪುರೋಹಿತ ಶಾಹಿಗಳು ಜನತೆಯಲ್ಲಿ ವೈಚಾರಿಕ, ವೈಜ್ಞಾನಿಕ ಪ್ರಜ್ಞೆಯನ್ನು ಮೂಡಿಸಬಲ್ಲ ಸಾಮರ್ಥ್ಯಉಳ್ಳ ಶರಣ ಚಳುವಳಿಯನ್ನು ತಮ್ಮ ಬದುಕಿನ ಸ್ವಾರ್ಥಕ್ಕಾಗಿ ನಾಶಗೊಳಿಸಿ ಸಮಾಜದಲ್ಲಿ ಮೌಢ್ಯ ಬಿತ್ತುವಿಕೆಯ ನೀಚತನವನ್ನು ಮುಂದುವರಿಸಿದರು ಕೇವಲ ಮನಃಶಾಂತಿಗಾಗಿ, ಆತ್ಮ ಸಂವಾದ ರೂಪದಲ್ಲಿ ಇರಬೇಕಾದ ದೇವರು - ಧಾರ್ಮಿಕತೆಗಳಂತಹ ಭಾವಾತ್ಮಕ ವಿಚಾರಗಳು, ಸಂವಿಧಾನವನ್ನು ಮೀರಿಸಿ ಮೇಲುಗೈ ಪಡೆದು ಮೌಢ್ಯದ ಬೇರನ್ನು ಗಟ್ಟಿಗೊಳಿಸುತ್ತಿವೆ. ಜಾತಿವಾದ, ಕೋಮುವಾದಗಳು ಧರ್ಮದ ಹೆಸರಿನಲ್ಲಿ ರಾಜಕೀಯಕ್ಕೆ ತಳುಕು ಹಾಕಿಕೊಂಡು ಸಮಾಜವನ್ನು ಛಿದ್ರಗೊಳಿಸಿ ಪ್ರಜೆಗಳನ್ನು ಮಾನಸಿಕ ಗುಲಾಮಗಿರಿಗೆ ತಳ್ಳುವಲ್ಲಿ ಯಶಸ್ವಿಯಾಗುತ್ತವೆ. ಪುರಾಣ ನಮ್ಮನ್ನು ಆಳುತ್ತಿದೆ, ಸಂವಿಧಾನ ಆಳಬೇಕು, ಇತಿಹಾಸದಿಂದ ನಾವು ಪಾಠ ಕಲಿಯಬೇಕಾಗಿದೆ. ಪುರಾಣಗಳಲ್ಲಿ ಬರುವ ಅಮಾನವೀಯ ಕಥೆಗಳು ನಮ್ಮ ಆದರ್ಶವಾಗಬಾರದು.

ವಿದ್ಯೆಯಿಂದ ವಂಚಿತವಾದ ಮಹಿಳಾ ಸಂಕುಲ ಬಲುಬೇಗ ಪುರೋಹಿತ ಶಾಹಿಗಳ ಕುತಂತ್ರಕ್ಕೆ ಬಲಿಯಾಗಿ, ಮನುವಾದವನ್ನು ಒಪ್ಪಿ ಅಪ್ಪಿಕೊಂಡಿತು. ಒಂದು ದೇಶದ ಉನ್ನತಿ ಎಂದರೆ, ಅಲ್ಲಿಯ ಮಹಿಳೆಯರ ಚಿಂತನಾಶೀಲತೆ, ಕಾಯಕ ನಿಷ್ಠೆ, ಘನತೆಯಿಂದ ಕೂಡಿದ ಬದುಕು ಎಂಬುದನ್ನು ಹೊರದೇಶದಿಂದ ಬಂದ ಬ್ರಿಟಿಷರೇ ನೆನಪು ಮಾಡಿಕೊಡಬೇಕಾಯಿತು. ಭಾರತದಲ್ಲಿ ಸಾರ್ವಜನಿಕ ಶಿಕ್ಷಣದ ಕಲ್ಪನೆ ಪ್ರಾರಂಭವಾಗಿದ್ದು ೧೮೫೭ರ ಮೊದಲ ಸ್ವಾತಂತ್ರ್ಯ ಸಂಗ್ರಾಮದ ನಂತರದಲ್ಲಿ, ಲಾರ್ಡ್ ಮೆಕಾಲೆ, ಈ ದೇಶದ ಪ್ರಜ್ಞಾವಂತ ಜನಪರ ಕಾಳಜಿಯುಳ್ಳ ಮಹನೀಯರ ಸಹಕಾರ ಪಡೆದು ಇದನ್ನು ಜಾರಿಗೆ ತರಲು ಶ್ರಮಿಸಿದನು. ಇದರ ಫಲವಾಗಿ ದೇಶದ ಕೆಲವು ಭಾಗಗಲ್ಲಿ ಮೇಲು ವರ್ಗದ ಸ್ತ್ರೀಯರೂ ಸೇರಿದಂತೆ ಶಾಲಾ ಶಿಕ್ಷಣ ಲಭ್ಯವಾಯಿತು. ೧೮ನೇ ಶತಮಾನದ ಕೊನೆಯಲ್ಲಿ ಸಾವಿತ್ರಿಬಾಯಿ ಫುಲೆ ದಂಪತಿಗಳು ಪ್ರಬಲ ವಿರೋಧದ ನಡುವೆಯೂ ದಲಿತ, ಶೂದ್ರ, ದುರ್ಬಲ ವರ್ಗದ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡುವ ಕಾಯಕದಲ್ಲಿ ತೊಡಗಿದರು.

೧೯ನೇ ಶತಮಾನದಲ್ಲಿ ಸಾಮಾಜಿಕ ನ್ಯಾಯ ಪ್ರವರ್ತಕ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಹಿಂದುಳಿದ ವರ್ಗದ ಮಕ್ಕಳಿಗೆ ಶಿಕ್ಷಣದಲ್ಲಿ ಮೀಸಲಾತಿ ತರುವಷ್ಟು ಶಿಕ್ಷಣ ಪ್ರೇಮ ತೋರಿದರು. ನವಯುಗದ ಪ್ರವಾದಿ ರಾಮಸ್ವಾಮಿ ಪೆರಿಯಾರ್ ಮುಂತಾದವರ ಶ್ರಮದ ಫಲವಾಗಿ, ದೇಶವನ್ನು ಆವರಿಸಿದ್ದ ಅಜ್ಞಾನ, ಮೌಢ್ಯದ ಬೇರನ್ನು ಸ್ವಲ್ಪ ಮಟ್ಟಿಗಾದರೂ ಅಲುಗಾಡಿಸಲು ಸಾಧ್ಯವಾಯಿತು.

ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಾತ್ಮ ಗಾಂಧೀಜಿಯವರಿಂದ ಸ್ಫೂರ್ತಿ ಪಡೆದ ದೇಶದ ಸಾವಿರಾರು ಮಹಿಳೆಯರು ಪ್ರಪ್ರಥಮ ಬಾರಿಗೆ ಮನೆಯಿಂದ ಹೊರಬಂದು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡರು. ಬಡವರು, ಶ್ರೀಮಂತ ಮನೆತನದವರು ಎಂಬ ಭೇದ ಭಾವವಿಲ್ಲದೆ ದೇಶದ ಸ್ವಾತಂತ್ರ್ಯಗಳಿಕೆಯನ್ನೇ ತಮ್ಮ ಗುರಿಯಾಗಿಸಿಕೊಂಡು ಭಾರತವನ್ನು ಗುಲಾಮಗಿರಿಯಿಂದ ಮುಕ್ತಗೊಳಿಸುವ ಪಣ ತೊಟ್ಟರು, ಗಾಂಧೀಜಿಯವರ ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತಿದ್ದ ಕಸ್ತೂರ ಬಾ ಹಾಗೂ ಇನ್ನಿತರ ಸತ್ಯಾಗ್ರಹಿ ಮಹಿಳೆಯರು ಇವರಿಗೆ ಮಾದರಿಯಾದರು. ಆದರೆ ಇದು ಇಡೀ ದೇಶದ ಮಹಿಳೆಯರ



ಚಿಂತನೆಯಾಗಲು ಸಾಧ್ಯವಿರಲಿಲ್ಲ. ಗಾಣದೆತ್ತಿನಂತೆ ಹಗಲಿರುಳು ದುಡಿಮೆಯಲ್ಲಿ ತೊಡಗಿರುವ ಗ್ರಾಮೀಣ ಮಹಿಳೆಗೆ ಇದಾವುದರ ಪರಿವೆಯೂ ಇರಲಿಲ್ಲ. ಭಾರತೀಯ ಮಹಿಳೆಯನ್ನು ಮನುಷ್ಯಳಾಗಿ ಪರಿಗಣಿಸುವುದಕ್ಕಿಂತಲೂ ದಾಸಿಯಾಗಿಯೋ ದೇವತೆಯಾಗಿಯೋ ಕಾಣಲು ಆಗಿನ ಸಮಾಜ ಬಯಸುತ್ತಿತ್ತು. ಹೆಣ್ಣು ಹುಟ್ಟಿರುವುದೇ ತ್ಯಾಗ ಬಲಿದಾನಕ್ಕೆ ಎಂಬ ನಂಬಿಕೆ ಆಳವಾಗಿ ಬೇರೂರಿತ್ತು.

" ಹೆಣ್ಣು ಹುಟ್ಟಿದ ಮನಿ ಹೆಗ್ಗಣತ್ತಿದ್ದಾಂಗ

ಗಂಡು ನಮಗ ಗಜಭೀಮ ಹುಟ್ಟಿದರ

ಚಿಲಕ ಚಿತ್ತಾರ ನಗುತಾವ" ಎಂಬಂತಹ ಕೀಳು ಮನೋಭಾವ ಇಡೀ ದೇಶವನ್ನು ರೋಗದಂತೆ ಆವರಿಸಿತ್ತು.

ಇಂತಹ ಸಂದರ್ಭದಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಭಾರತೀಯ ಮಹಿಳೆಯರ ಸಮಸ್ಯೆ ಸ್ಥಿತಿ-ಗತಿಗಳನ್ನು ಕುರಿತು ಆಳವಾದ ಅಧ್ಯಯನ ನಡೆಯಿಸಿ, ಅವುಗಳಿಗೆ ಕಾನೂನಿನ ಮೂಲಕ ಪರಿಹಾರ ಒದಗಿಸಿಕೊಡುವ ಏಕೈಕ ಮಹಿಳಾ ಸ್ನೇಹಿ ಚಿಂತನಕಾರರಾಗಿ ಕಾಣಿಸಿಕೊಂಡರು. ೧೯ಳಳರ ಹಿಂದು ಕೋಡ್ ಬಿಲ್‌ನಲ್ಲಿ ಭಾರತೀಯ ಮಹಿಳೆಗೆ ವಿಚ್ಛೇದನದ ಹಕ್ಕು ಇರಬೇಕು, ಎಂದು ಅಂಬೇಡ್ಕರರು ನಡೆಸಿದ ಪ್ರಯತ್ನಕ್ಕೆ ಪಂಡಿತ್ ಜವಹರಲಾಲ ನೆಹರು ಸರ್ವ ಸಮ್ಮತಿ ವ್ಯಕ್ತ ಪಡಿಸಿದರೆ ಡಾ. ಸರೋಜಿನಿ ನಾಯ್ಡು ಅವರು ಆ ಹಕ್ಕನ್ನು ತೀವ್ರವಾಗಿ ವಿರೋಧಿಸಿದರು. ಇಂತಹ ಅದೆಷ್ಟೋ ವಿರೋಧಗಳನ್ನು ಲೆಕ್ಕಿಸದೆ ಡಾ. ಅಂಬೇಡ್ಕರರು ಮಹಿಳಾ ಸುಧಾರಣಾ ಕಾರ್ಯದಲ್ಲಿ ಮಗ್ನರಾದರು. ಹೆಣ್ಣಿನ ವಿವಾಹದ ಬಗ್ಗೆ ಮೂರು ಮುಖ್ಯ ಬದಲಾವಣೆಗಳನ್ನು ತಂದರು. ಶಾಸ್ತ್ರೋಕ್ತ ವಿವಾಹ, ನಾಗರಿಕ ವಿವಾಹ, ಅಂತರ್‌ಜಾತಿ ವಿವಾಹ, ಇವುಗಳಲ್ಲಿ ಶಾಸ್ರೋಕ್ತ ವಿವಾಹಕ್ಕೆ ನೋಂದಣಿ

ಕಡ್ಡಾಯವಿಲ್ಲ ಆದರೆ ಉಳಿದೆರಡು ರೀತಿಯ ವಿವಾಹಗಳಿಗೆ ನೋಂದಣಿ ಆಗಲೇಬೇಕೆಂಬ ಕಾನೂನು ತಂದರು. 'ಮದುವೆಗಳು ಸ್ವರ್ಗದಲ್ಲಿ ಆಗಿರುತ್ತವೆ' ಎಂಬ ಭಾರತೀಯರ ನಂಬಿಕೆಗಳನ್ನು ನಿರಾಕರಿಸಿ ಬಹು ಪತ್ನಿತ್ವವನ್ನು ತೆಗೆದು ಹಾಕಿದರು.

ಡಾ|| ಅಂಬೇಡ್ಕರ್‌ರವರು ಸಾಮಾಜಿಕ ಸುಧಾರಣೆಗಳನ್ನು ೨ ವಿಭಾಗಗಳಾಗಿ ವಿಂಗಡಿಸಿದರು. ಒಂದು- ಹಿಂದೂ ಕುಟುಂಬ ಸುಧಾರಣೆ, ಮತ್ತೊಂದು ಹಿಂದೂ ಸಮಾಜ ಪುನ (ರಚನೆ)ರ್ ಸಂಘಟನೆ ಮತ್ತು ಪುನರ್ ನಿರ್ಮಾಣ. ಸತಿ ಸಹಗಮನ, ವಿಧವಾ ವಿವಾಹ, ಬಾಲ್ಯ ವಿವಾಹ, ದೇವದಾಸಿ ಪದ್ಧತಿ ಇತ್ಯಾದಿ ಸಮಸ್ಯೆಗಳನ್ನು ಪರಿಹರಿಸುವುದು ಹಿಂದೂ ಕುಟುಂಬ ಸುಧಾರಣೆಗೆ ಸಂಬಂಧಿಸಿದವು. ಜಾತಿ ಪದ್ಧತಿ ನಿರ್ಮೂಲನೆ, ಅಸ್ಪೃಶ್ಯತಾ ನಿವಾರಣೆ, ವಿವಾಹದತ್ತು ಸ್ವೀಕಾರ ಮತ್ತು ಉತ್ತರಾಧಿಕಾರ ಕಾನೂನುಗಳ ಬದಲಾವಣೆ. ಇವುಗಳು ವ್ಯಾಪಕವಾದ ಸಾಮಾಜಿಕ ಸುಧಾರಣೆಗಳು. ೧೯೫೬ರಲ್ಲಿ ಜೀವನಾಂಶ ಹಕ್ಕು, ತಂದೆಯ ಆಸ್ತಿಯಲ್ಲಿ ಹೆಣ್ಣು ಮಗಳಿಗೆ ಪಾಲು ಇಂತಹ ಮಾನವೀಯ ಕ್ರಾಂತಿಕಾರಿ ಕಾನೂನುಗಳು ಭಾರತೀಯ ಮಹಿಳೆಯ ಬದುಕಿನ ಭದ್ರತೆಗೆ, ಬದಲಾವಣೆಗೆ ಕಾರಣವಾದವು.

ಕಾಲಕಾಲಕ್ಕೆ ಇಂತಹ ಹಲವು ನೂರು ಸುಧಾರಣೆಗಳನ್ನು ಕಂಡ ಭಾರತೀಯ



ಮಹಿಳೆ ಇನ್ನಾದರೂ ತನ್ನ ಮೌಢ್ಯದ ಕನ್ನಡಕವನ್ನು ಕಿತ್ತೊಗೆದು ವಿಶಾಲ ಜಗತ್ತಿನ ನಿಜವಾದ ಬಣ್ಣವನ್ನು ಅರಿಯುವ ಪ್ರಯತ್ನ ಮಾಡಬೇಕಾಗಿದೆ. ನೂರಾರು ವರುಷಗಳ ಹಂತ ಹಂತದ ಹೋರಾಟದ ತ್ಯಾಗದ ಫಲವಾಗಿ ಲಭ್ಯವಾಗಿರುವ ಈ ಅಮೂಲ್ಯ ಪ್ರಜಾ ಪ್ರಭುತ್ವವು ಅಳಿವಿನ ಅಂಚಿನಲ್ಲಿರುವುದನ್ನು ನಾವು ಗುರುತಿಸಲು ಅಸಮರ್ಥರಾದರೆ, ಇದುವರೆಗಿನ ನಮ್ಮ ಕಲಿಕೆ, ಸಾಧನೆ, ಅನುಭವ ಇತ್ಯಾದಿಗಳನ್ನು ನಿರರ್ಥಕವೆಂದೇ ಭಾವಿಸಬೇಕಾಗುತ್ತದೆ.

ನಮ್ಮ ತಾಯಿನುಡಿಯು ಮಕ್ಕಳಿಂದಲೇ ತಿರಸ್ಕಾರಕ್ಕೆ ಒಳಗಾಗಿ ಅನ್ಯ ಭಾಷೆಯ ಗುಲಾಮಗಿರಿಗೆ ಒಗ್ಗಿಕೊಳ್ಳುತ್ತಿದ್ದೇವೆ. ಇದಕ್ಕೆ ಮಹಿಳೆ ಹೊಣೆಗಾರಳಲ್ಲ ಎಂದು ನಾವು ನುಣುಚಿಕೊಳ್ಳಬಹುದೇ? ಈ ದಿಶೆಯಲ್ಲಿ ನಮ್ಮ ಹೋರಾಟವೇನು? ಪಾತ್ರವೇನು? ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕಾಗಿದೆ. ಪುರುಷ ಪ್ರಧಾನ ಮೌಲ್ಯಗಳ ಗುಂಗಿನಲ್ಲೇ ಉಳಿದಿರುವ ಮಹಿಳೆ ಇನ್ನಾದರೂ ಸ್ತ್ರೀ ಸಂವೇದನಾಶೀಲತೆಯ ಬಗ್ಗೆ ಆಳವಾಗಿ ಚಿಂತಿಸುವ ಅಗತ್ಯವಿದೆ.

ಸ್ತ್ರೀವಾದವೆಂದರೆ - ಪುರುಷ ದ್ವೇಷವಲ್ಲ; ವಿಜ್ಞಾನವೆಂದರೆ ಧರ್ಮವನ್ನು ನಿಂದಿಸುವುದಲ್ಲ; ಸಮಸ್ತ ಜೀವರಾಶಿಯನ್ನು ಪ್ರೀತಿಯಿಂದ ಘನತೆ ಗೌರವದಿಂದ ಕಾಣುವ ಒಂದು ಸೃಜನಶೀಲ ಮಾನವೀಯ ಮೌಲ್ಯ

ಎಂಬುದನ್ನು ನಾವು ನಮ್ಮ ಕಾವ್ಯ ಸಾಹಿತ್ಯದಲ್ಲಿ ಬಿಂಬಿಸುತ್ತಾ, ನಮ್ಮ ಕ್ರಿಯೆಯಲ್ಲಿ ಅಳವಡಿಸಿಕೊಳ್ಳುತ್ತಾ, ಈ ನೆಲದ ಋಣವನ್ನು ತೀರಿಸುವ ದಿಕ್ಕಿನಲ್ಲಿ ದಾಪುಗಾಲಿಕ್ಕುವುದೇ ಆಗಿದೆ.

# ವಿಶೇಷ ಉಪನ್ಯಾಸ

## ಕನ್ನಡ ಉಳಿಸಿ ಬೆಳೆಸುವ ಬಗೆ

· ಡಾ. ಷ. ಶೆಟ್ಟರ್

ಅಪಾರಸಂಖ್ಯೆಯಲ್ಲಿ ನೆರೆದಿರುವ ನಿಮ್ಮನ್ನು ಕಂಡಾಗ ಕನ್ನಡ ಉಳಿಸು'ವ ಪ್ರಶ್ನೆಯೇ ಬರುವುದಿಲ್ಲ. 'ಬೆಳೆಸುವ ಪ್ರಶ್ನೆ ಮಾತ್ರ ಉಳಿಯುತ್ತದೆ. ಕನ್ನಡವನ್ನು ಬೆಳೆಸುವ ಪ್ರಶ್ನೆ ನಮ್ಮ ಮುಂದಿದ್ದಾಗ, ಯಾವ ಯಾವ ಬಗೆಯಲ್ಲಿ ಬೆಳೆಸಬೇಕು ಎಂಬುದರ ಕುರಿತು ಚಿಂತನೆ ನಡೆಸಿದಾಗ ಅದನ್ನು ಹಂಚಿಕೊಳ್ಳಬೇಕಾಗುತ್ತದೆಯೇ ಹೊರತು ಉಪನ್ಯಾಸದ ಮೂಲಕ ತಿಳಿಸಲು ಸಾಧ್ಯವಿಲ್ಲ. ಅಂದರೆ ನಾನು ಈ ವೇದಿಕೆಯಲ್ಲಿ ತಮ್ಮ ಮುಂದೆ ನಿಂತಿರುವುದು ವಿಚಾರಗಳನ್ನು ಹಂಚಿಕೊಳ್ಳುವುದಕ್ಕೇ ಹೊರತು ಉಪನ್ಯಾಸದ ಮೂಲಕ ತಮಗೆ ಬೋಧನೆ ಮಾಡಲಿಕ್ಕಲ್ಲ ಎಂಬುದನ್ನು ತಮಗೆ ಹೇಳಲು ಇಚ್ಛಿಸುತ್ತೇನೆ. ೮೫ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ನಾಡಿನ ಗಣ್ಯ ಕವಿಗಳು, ನನ್ನ ಪರಮ ಸ್ನೇಹಿತರಾದ ಎಚ್‌ಎಸ್ ಅವರ ಸಮ್ಮುಖದಲ್ಲಿ ಕೆಲವು ಮಾತುಗಳನ್ನು ಹಂಚಿಕೊಳ್ಳಲು ನನಗೆ ಬಹಳ ಸಂತೋಷವಾಗುತ್ತದೆ. ಅಷ್ಟೇ ಸಂತೋಷವಾಗುವುದು ಅಧಿವೇಶನವನ್ನು ಭದ್ರವಾಗಿ ನಡೆಸುತ್ತಿರುವ, ಪರಿಷತ್ತಿಗೆ ಹೊಸ ಅರ್ಥವನ್ನು ನೀಡಿದ ಡಾ. ಮನು ಬಳಿಗಾರ್ ಅವರಿಗೆ ವಂದಿಸುತ್ತೇನೆ. ಡಾ. ಬಳಿಗಾರ್ ಅವರ ಒತ್ತಾಯಕ್ಕೆ ಮಣಿದು ನಾನು ನಿಮ್ಮ ಮುಂದೆ ನಿಂತಿರುವೆ. ಕನ್ನಡ ನಾಡಿನ ಬಗ್ಗೆ ಈ ವೇದಿಕೆಯಲ್ಲಿ ಉಪನ್ಯಾಸ ಮಾಡಿದ ಎಲ್ಲರೂ ಕವಿರಾಜಮಾರ್ಗಕಾರನ ಹೆಸರನ್ನು ಹೇಳದೆಯೇ ತಮ್ಮ ಭಾಷಣವನ್ನು ಆರಂಭ ಮಾಡಿರಲಿಕ್ಕಿಲ್ಲ. ನಾನೂ ಸಹ ಕವಿರಾಜಮಾರ್ಗಕಾರನ ನೆನಪಿನಲ್ಲಿ ನಿಂತು ಈ ೮೫ನೆಯ ಅಧಿವೇಶನದೊಳಗೆ ೮೫ ವಯಸ್ಸನ್ನು ಅನುಭವಿಸಿದ ನನಗೆ ವಿಶೇಷವಾದ ಆನಂದ ಉಂಟಾಗುತ್ತದೆ ಎಂದು ಹೇಳಲು ಇಷ್ಟಪಡುತ್ತೇನೆ.

ಕನ್ನಡವನ್ನು ಉಳಿಸುವ ಪ್ರಶ್ನೆಯೇ ಬರುವುದಿಲ್ಲ ಎಂದು ಮೊದಲು ಹೇಳಿದೆ. ಏಕೆಂದರೆ ಈ ಉಳಿಸುವ ಹಪಾಹಪಿ ಈಗ ನಮಗೆ ಪ್ರಾರಂಭವಾಗಿಲ್ಲ; ಎರಡು ಸಾವಿರ ವರ್ಷಗಳ ಹಿಂದೆಯೇ ಪ್ರಾರಂಭವಾಗಿತ್ತು. ಎರಡು ಸಾವಿರ ವರ್ಷಗಳ ಅವಧಿಯೊಳಗೆ ಕನ್ನಡ ಉಳಿದುಬಂದ ಮೇಲೆ ಅದು ಮುಂದೆ ಉಳಿಯುತ್ತದೋ ಇಲ್ಲವೋ ಎಂಬ ಪ್ರಶ್ನೆ ಬರುವುದಕ್ಕೆ ಸಂಭವವೇ ಇಲ್ಲ. ಆದರೆ, ಬೆಳೆಸುವ ಬಗ್ಗೆ ನಾವು ಬಹಳ ಚಿಂತನೆಯನ್ನು ನಡೆಸಬೇಕಿದೆ. ಆದರೂ, ಇತಿಹಾಸದ ವಿದ್ಯಾರ್ಥಿಯಾಗಿ ನಾನು ಒಂದೆರಡು ವಿಷಯಗಳ ಬಗ್ಗೆ ತಮ್ಮೊಂದಿಗೆ ಹಂಚಿಕೊಳ್ಳುವೆ. ಈ ಎರಡು ಸಾವಿರ ವರ್ಷಗಳಲ್ಲಿ ಕನ್ನಡ ಹೇಗೆ ಉಳಿದುಬಂದಿದೆ ಎಂಬುದನ್ನು ನಾವು ಕಂಡುಕೊಂಡರೆ, ಮುಂದೆ ಅನೇಕ ಸಾವಿರ ವರ್ಷಗಳವರೆಗೂ ಈ ಕನ್ನಡ ಉಳಿದುಕೊಳ್ಳುತ್ತದೆ. ಅನೇಕ ಘಟ್ಟಗಳಲ್ಲಿ ಕನ್ನಡ ಆಪತ್ತನ್ನು ಎದುರಿಸಿ, ಉಳಿದುಬಂದಿದೆ. ಇವುಗಳಲ್ಲಿ ಸುಮಾರು ಸಂಗತಿಗಳು ನಿಮಗೆಲ್ಲರಿಗೂ ತಿಳಿದಿರುವಂಥವೇ. ಕನ್ನಡ ಆರಂಭ

ಕಾಲದೊಳಗೆ ಪ್ರಾಕೃತದ ಪ್ರಭಾವಕ್ಕೆ ಒಳಗಾಗಿತ್ತು. ಆನಂತರದ ಕಾಲದೊಳಗೆ ಸಂಸ್ಕೃತದ ಪ್ರಭಾವಕ್ಕೆ ಒಳಗಾಗಿತ್ತು. ಆಗ ಪಂಡಿತರೆಲ್ಲ



ಸಂಸ್ಕೃತದಲ್ಲಿ ಮಾತನಾಡಿದರೆ ಕನ್ನಡ ಉಳಿಯುತ್ತೋ ಇಲ್ಲವೋ ಎಂಬ ಅನುಮಾನ ಹುಟ್ಟಿಕೊಂಡಿತ್ತು. ಆ ಅನುಮಾನವನ್ನು ತಾನೇ ಬಗೆಹರಿಸಿಕೊಂಡು ಸಂಸ್ಕೃತದ ಸತ್ತ್ವವನ್ನು ಹೀರಿಕೊಂಡು ಕನ್ನಡ ದಷ್ಟಪುಷ್ಟವಾಗಿ ಬೆಳೆಯಿತು. ಅಂದರೆ ಕನ್ನಡ ಭಾಷೆಗೆ ಇರುವ ಮಹಾಶಕ್ತಿ ಎಂದರೆ ಎಂತಹ ಅವಘಡ, ಆಪತ್ತು, ಆತಂಕ ಬರಲಿ, ಅದನ್ನು ಜೀರ್ಣಿಸಿಕೊಂಡು ತಾನು ಬೆಳೆಯುವ ಶಕ್ತಿ ಕನ್ನಡ ಭಾಷೆಯಲ್ಲಿದೆ ಎಂಬುದನ್ನು ನಾವು ಮೊದಲು ಕಂಡುಕೊಳ್ಳಬೇಕಿದೆ.

ಕ್ರಿಸ್ತಶಕ ನಾಲ್ಕನೆಯ ಶತಮಾನದಲ್ಲಿ ಈ ಪ್ರದೇಶದ ನೆಲದ ಭಾಷೆಯಾಗಿ ಕನ್ನಡ ಬೆಳೆಯುತ್ತಿರುವಾಗ ಸಂಸ್ಕೃತದ ಪ್ರಭಾವ ಬಹಳ ಆಯಿತು. ಆಗ ನಮ್ಮ ಅರಸರೂ ಅನೇಕ ಸಂಸ್ಕೃತ ಪಂಡಿತರನ್ನು ಪೋಷಿಸಿ; ತಮ್ಮ ಆಸ್ಥಾನದಲ್ಲಿ ಅವರಿಗೆ ಬೇಕಾದಂಥ ಸವಲತ್ತುಗಳನ್ನು ನೀಡಿ, ಆಸ್ಥಾನದ ವ್ಯವಹಾರವನ್ನೂ ಸಂಸ್ಕೃತದಲ್ಲಿ ಮಾಡಿದರು. ಆದರೆ, ಅದರಿಂದ ಕನ್ನಡಕ್ಕೆ ಏನೂ ಆಪತ್ತು ಬರಲಿಲ್ಲ. ಕನ್ನಡವು ತನ್ನ ಸ್ವಶಕ್ತಿಯಿಂದ ಸಂಸ್ಕೃತವನ್ನು ಜೀರ್ಣಿಸಿಕೊಂಡು ಬೆಳೆಯಿತೇ ಹೊರತು, ಅಳಿಯಲು ಯಾವ ಆತಂಕವೂ ಆಗಲಿಲ್ಲ. ಮುಂದೆ ಅಕ್ಕಪಕ್ಕದ ರಾಜರುಗಳು ನಮ್ಮಲ್ಲಿಗೆ ದಂಡೆತ್ತಿ ಬಂದಾಗ, ಅವರ ಭಾಷೆಯನ್ನು ನಮ್ಮ ಮೇಲೆ ಹೇರಿದಾಗ ವಿಶೇಷವಾಗಿ ತಮಿಳುರಾಜರು ಕನ್ನಡ ನೆಲದ ಮೇಲೆ ದಂಡೆತ್ತಿ ಬಂದು (೯, ೧೦ನೆಯ ಶತಮಾನದಲ್ಲಿ ತಮಿಳನ್ನು ಹೇರಲು ಪ್ರಯತ್ನಪಟ್ಟಾಗ ಇದೇ ರೀತಿಯಲ್ಲಿ ತಮಿಳನ್ನು ಜೀರ್ಣಿಸಿಕೊಂಡು ಕನ್ನಡವು ಬೆಳೆಯಿತು. ಕನ್ನಡ ಭಾಷೆಯ ಮೇಲೆ ನಡೆದ ಅವಘಡಗಳು ನಿಮಗೆ ಗೊತ್ತಿರುವಷ್ಟು ನನಗೂ ತಿಳಿದಿವೆ. ಮುಂದೆ ಮರಾಠಿಯ ಪ್ರಭಾವಕ್ಕೆ ಬಂದಾಗ, ಪರ್ಷಿಯನ್ ಮತ್ತು ಅರೇಬಿಕ್ ಪ್ರಭಾವಕ್ಕೆ ಬಂದಾಗ, ಇಂಗ್ಲಿಷ್, ಫ್ರೆಂಚ್ ಪ್ರಭಾವಕ್ಕೆ ಬಂದಾಗ ಕನ್ನಡವು ಅಳಿದು ಹೋಗಲಿಲ್ಲ; ಉಳಿದುಕೊಂಡಿತು. ಈ ಎಲ್ಲ ಭಾಷೆಗಳನ್ನು ಜೀರ್ಣಿಸಿಕೊಂಡಿತು. ಇದರಿಂದಾಗಿ ಕನ್ನಡ ಭಾಷೆಯು ಹೆಚ್ಚು ಬೆಳೆಯಿತೇ ಹೊರತು, ಅದಕ್ಕೆ ಬಲಹೀನತೆ ಉಂಟಾಗಲಿಲ್ಲ.

ಈ ಮಾತನ್ನು ಯಾವುದಕ್ಕೆ ಹೇಳುತ್ತೇನೆಂದರೆ ನಾವು ಭಾಷೆಯನ್ನು ಬೆಳೆಸಬೇಕೆಂದಾಗ, ಉಳಿಸಬೇಕೆಂದಾಗ, ಯಾವ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಳ್ಳಬೇಕು ಅಂದರೆ, ಮತ್ತೊಂದು ಭಾಷೆಯನ್ನು ನಾವು ದ್ವೇಷಿಸುವುದಕ್ಕಿಂತ ಮತ್ತೊಂದು ಭಾಷೆಯನ್ನು ಬರಮಾಡಿಕೊಂಡು ಅದನ್ನು ಜೀರ್ಣಿಸಿಕೊಳ್ಳುವ ಶಕ್ತಿಯನ್ನು ಪಡೆದುಕೊಳ್ಳಬೇಕಿತ್ತು. ಇಂತಹ ಅನೇಕ ಘಟ್ಟಗಳಲ್ಲಿ ಅನುಭವವನ್ನು ಪಡೆದುಕೊಂಡಂಥ ಕನ್ನಡ ಭಾಷೆ ಬೆಳೆದು ಇಂದು ೨೧ನೆಯ ಶತಮಾನದಲ್ಲಿ ನಮ್ಮ ಮುಂದೆ ನಿಂತಿದೆ. ಹೀಗಾಗಿ ನಮ್ಮ ಬೆನ್ನನ್ನು ನಾವೇ ತಟ್ಟಿಕೊಳ್ಳಬೇಕಾದ ಅದ್ಭುತ ಪ್ರಮೇಯ ನಮಗೆ ಉಂಟಾಗಿದೆ. ಆದರೂ ಒಂದು ಭಾಷೆಯನ್ನು ಬೆಳೆಸುವುದು, ಆ ಭಾಷೆಯ ಪ್ರಜೆಗಳ ಕರ್ತವ್ಯ. ಒಂದು ವಿಷಯ ನಿಮ್ಮೊಂದಿಗೆ ಹಂಚಿಕೊಳ್ಳಬಯಸುವೆ. ಕಲಬುರಗಿ ಜಿಲ್ಲೆಯ ಒಂದು ಹಳ್ಳಿ, ಅದರ ಹೆಸರು

ಹಂದರಗಿ, ಇಲ್ಲಿ ೧೨ನೆಯ ಶತಮಾನದಲ್ಲಿ ವಿಕ್ರಮಾದಿತ್ಯನ ಕಾಲಘಟ್ಟದಲ್ಲಿ ಒಂದು ದತ್ತಿಯನ್ನು ಸ್ಥಳೀಯ ನಾಯಕರು ಹಾಕಿಕೊಡುತ್ತಾರೆ. ೧೧೧೮ ಮತ್ತು ೧೧೨೨ ಶಾಸನಗಳಲ್ಲಿ ಈ ವಿಷಯವಿದೆ. ಆ ದತ್ತಿಯ ವಿಶೇಷವಿದು: ಪ್ರೀತಿಯಿಂದ ಕನ್ನಡವನ್ನು ಕಲಿಯುವ ಮಾಣಿಗಳಿಗೆ ಅಂದರೆ ವಿದ್ಯಾರ್ಥಿಗಳಿಗೆ, ಪ್ರೀತಿಯಿಂದ ಕನ್ನಡವನ್ನು ಬೋಧಿಸುವ ಅಧ್ಯಾಪಕರಿಗೆ ವಿಶೇಷ ಸೌಲಭ್ಯ ಹಾಕಿಕೊಟ್ಟಿದ್ದೇವೆ. ಇದು ಬಸವಣ್ಣನವರಿಗಿಂತ ಮುಂಚಿತವಾಗಿ ಬಂದ ಕಳಕಳಿಯ ಮನವಿ. ಅಂದರೆ ಈ ಪ್ರದೇಶದ ಜನರು ಕೇವಲ ಕವಿರಾಜಮಾರ್ಗದ ಕವಿಯನ್ನು ಮಾತ್ರ ಸೃಷ್ಟಿಸಿರಲಿಲ್ಲ, ಈ ಭೂಮಿ



ಅವನಿಂದ ಮಾತ್ರ ಸ್ಪರ್ಶಕ್ಕೆ ಒಳಗಾಗಿರಲಿಲ್ಲ. ಆನಂತರದ ಕಾಲದಲ್ಲಿ ಬಂದ ಅನೇಕ ಅರಸರು ಕನ್ನಡವನ್ನು ಉಳಿಸಲು, ಬೆಳೆಸಲು ನೆರವಾದ ನಿದರ್ಶನಗಳು ನಮ್ಮ ಮುಂದಿವೆ. ಇಂಥ ಸಂದರ್ಭದಲ್ಲಿ ಒಂದು ಆತಂಕದ ವಿಷಯ ಇದೆ. ನಿನ್ನೆ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ ಇದು: 'ಬೆಂಗಳೂರಿನ ಒಂದು ಶಾಲೆಯಲ್ಲಿ ಕನ್ನಡವನ್ನು ಮಕ್ಕಳು ಮೊದಲ ಬಾರಿಗೆ ಮಾತನಾಡಿದರೆ ೫೦ ರೂ. ದಂಡವನ್ನು ಹಾಕುತ್ತೇವೆ, ಎರಡನೆಯ ಸಲ ಮಾತನಾಡಿದರೆ ೧೦೦ ರೂ. ದಂಡವನ್ನು ಹಾಕುತ್ತೇವೆ' ಎಂದು ಶಾಲೆಯ ಆಡಳಿತ ವರ್ಗ ಹೇಳಿರುವುದು. ಇದು ನಮ್ಮ ಇಂದಿನ ಪರಿಸ್ಥಿತಿ. ೧೨ನೆಯ ಶತಮಾನದ ಇಲ್ಲಿನ ಆಳರಸರು ಕನ್ನಡದ ಶಾಲೆಗಳಿಗೆ ಕನ್ನಡದ ಉಳಿವಿಗಾಗಿ ಕನ್ನಡವನ್ನು ಪ್ರೀತಿಯಿಂದ ಕಲಿಯುವ ಮಕ್ಕಳಿಗೆ ವಿಶೇಷವಾದ ಅನುಕೂಲವನ್ನು ಮಾಡಿಕೊಟ್ಟಿದ್ದರು. ನಮ್ಮ ಇಂದಿನ ಸ್ಥಿತಿಯನ್ನು ಕಂಡಾಗ, ನಾವು ಕನ್ನಡಿಗರು ಎಂಥ ಒಂದು ಪರಿಸ್ಥಿತಿಯನ್ನು ತಲುಪಿದ್ದೇವೆ ಎಂಬ ಆತಂಕ ಉಂಟಾಗುತ್ತದೆ. ಯಾವುದೇ ವ್ಯಕ್ತಿ, ಸಮಾಜವು ತನ್ನ ಭಾಷೆಯನ್ನು ಬೆಳೆಸದಿದ್ದರೆ ಅಥವಾ ತನ್ನ ಭಾಷೆಯ ಬಗ್ಗೆ ಕೀಳರಿಮೆ ಉಂಟಾದಾಗ ಇಂಥ ಆತಂಕಗಳು ಬರುತ್ತವೆ. ಆದರೆ, ಅವರು ಯಾವಾಗಲೂ ಅಲ್ಪಸಂಖ್ಯೆಯಲ್ಲಿ ಇರುತ್ತಾರೆ; ದೊಡ್ಡ ಸಂಖ್ಯೆಯಲ್ಲಿ ಇರಲು ಸಾಧ್ಯವೇ ಇಲ್ಲ. ನಮ್ಮ ಕನ್ನಡವನ್ನು ಉಳಿಸಿ, ಬೆಳೆಸುವ ಶಕ್ತಿ ಇರುವವರು ಗ್ರಾಮೀಣ ಪ್ರದೇಶದ ಜನರು, ಕವಿಗಳ ಕೊಡುಗೆ ಸ್ವಲ್ಪಮಟ್ಟಿಗೆ ಇದ್ದರೂ ಮುಖ್ಯವಾಗಿ ಗ್ರಾಮೀಣರ ಕೊಡುಗೆ ಹೆಚ್ಚು. ನಮ್ಮ ಗ್ರಾಮೀಣ ಪ್ರದೇಶದ ಜನರು ಎಲ್ಲಿಯವರೆಗೆ ಕನ್ನಡವನ್ನು ಮಾತನಾಡುತ್ತಾರೋ, ಕನ್ನಡವನ್ನು ಜೀರ್ಣಿಸಿಕೊಳ್ಳುತ್ತಾರೋ, ಕನ್ನಡದ ಬಗ್ಗೆ ಅಭಿಮಾನವನ್ನು ಹೊಂದಿರುತ್ತಾರೋ ಅಲ್ಲಿಯವರೆಗೆ ಕನ್ನಡಕ್ಕೆ ಯಾವ ರೀತಿಯಲ್ಲೂ ಆಪತ್ತು ಇಲ್ಲ.

೧೯ನೆಯ ಶತಮಾನದಲ್ಲಿ ಮರಾಠಿ ಪ್ರಭಾವ ಜಾಸ್ತಿಯಾದಾಗ, ಅದೇ ಕಾಲಾವಧಿಯಲ್ಲಿ ಪರ್ಶಿಯನ್ ಮತ್ತು ಅರೇಬಿಕ್ ಪ್ರಭಾವ ಜಾಸ್ತಿಯಾದಾಗ; ವಿಶೇಷವಾಗಿ ಈ ಪ್ರದೇಶದಲ್ಲಿ ಕನ್ನಡ ಅಳಿದು ಹೋಗುತ್ತದೆ ಎಂಬ ಆತಂಕ ಉಂಟಾಗಿತ್ತು. ಅದು ಅಳಿಯಲಿಲ್ಲ, ಬೆಳೆಯಿತು. ಪರ್ಶಿಯನ್ ಶಬ್ದಗಳನ್ನು ಜೀರ್ಣಿಸಿಕೊಂಡು, ಮರಾಠಿ ಪದಗಳನ್ನು ಜೀರ್ಣಿಸಿಕೊಂಡು, ಕನ್ನಡಕ್ಕೆ ಅಪಾರವಾದ ಕೊಡುಗೆ ನೀಡಿದ ಹೆಮ್ಮೆ, ಈ ಪ್ರದೇಶದ ಜನರದು. ಈ ನೆಲದ ಪ್ರಜೆಗಳು

ಮರಾಠಿಯನ್ನೂ ಮತ್ತು ಪರ್ಶಿಯನ್, ಅರೆಬಿಕ್ ಭಾಷೆಗಳನ್ನು ಹೇಗೆ ಜೀರ್ಣಿಸಿಕೊಂಡರು ಎಂಬುದುಕ್ಕೆ ಇಂದಿನ ಈ ಅಧಿವೇಶನವೇ ಸಾಕ್ಷಿ.

ಇಂತಹ ಭವ್ಯವಾದ ಅಧಿವೇಶನವನ್ನು ನಡೆಸಲು ನಾವೆಲ್ಲ ಹುಮ್ಮಸ್ಸಿನಿಂದ ನೆರೆದಿರುವುದನ್ನು ಗಮನಿಸಿದರೆ ಕನ್ನಡಕ್ಕೆ ಅಳಿಗಾಲದ ಯಾವೊಂದು ಸಂಕೇತವೂ ನಮ್ಮ ಮುಂದೆ ಕಾಣುವುದಿಲ್ಲ. ಆದರೂ ಕೂಡ ನಮ್ಮ ಎಚ್ಚರಿಕೆಯಲ್ಲಿ ಇರಬೇಕಾಗಿದ್ದು ನಮ್ಮ ಕರ್ತವ್ಯ. ಈ ಎಚ್ಚರಿಕೆ ಕುರಿತು ನನಗನ್ನಿಸಿದ್ದು ಹೀಗೆ: ಎಲ್ಲರೂ ತಮ್ಮ ತಮ್ಮ ಕ್ಷೇತ್ರದೊಳಗೆ ಕನ್ನಡವನ್ನು ಬೆಳೆಸಿದರೆ ನಮ್ಮ ಭಾಷೆ ದಷ್ಟಪುಷ್ಟವಾಗಿ ಬೆಳೆಯುತ್ತದೆ. ಇದರ ಅರ್ಥ: ಕವಿಗಳಾದವರು ಕವಿತೆಯನ್ನು ಮುಂದುವರಿಸಲಿ. ಸಂಶೋಧಕರು ಸಂಶೋಧನೆಯನ್ನು ಮುಂದುವರಿಸಲಿ. ನಾಡಿನ ಪ್ರಜೆಗಳು ತಮ್ಮ ತಾಯಿಭಾಷೆಯನ್ನು ಮುಂದುವರಿಸಿಕೊಂಡು ಸಾಗಲಿ ಎಂಬುದು. ಇದಕ್ಕೆ ಮುಖ್ಯವಾದ ಕಾರಣವನ್ನು ನಾನು ಕೊಟ್ಟೆ: ೧೨ನೆಯ ಶತಮಾನದ ವಿಕ್ರಮಾದಿತ್ಯನ ಕಾಲದ ನಿದರ್ಶನವನ್ನು ನೀಡಿದೆ. 'ಕನ್ನಡವಂ ಅಳ್ಕೆಯಿಂದ ಓದುವ ಮಕ್ಕಳಿಗೆ' ಅಂದರೆ ಕನ್ನಡ ಕಲಿಯುವ ಮಕ್ಕಳಿಗೆ



ವಿಶೇಷವಾದ ಸೌಲಭ್ಯವನ್ನು ಒದಗಿಸಿ ಕೊಡುವುದು, ಕನ್ನಡವನ್ನು ಪ್ರೀತಿಯಿಂದ ಬೋಧಿಸುವ ಅಧ್ಯಾಪಕರಿಗೆ ಅಗತ್ಯವಾದ ಸೌಲಭ್ಯವನ್ನು ಮಾಡಿಕೊಡುವುದು. ಜೊತೆಜೊತೆಗೆ ತಾಯಿ ಭಾಷೆಯ ಪ್ರೀತಿಯ ಜೊತೆಗೆ ತಮ್ಮ ಭವ್ಯವಾದ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವುದು. ಇಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸರ್ಕಾರ ನಡೆಸುವವರು- ಮೂವರೂ ಮುಖ್ಯ ಸಾಧನಗಳು. ಅಧ್ಯಾಪಕರ ಬಗ್ಗೆ ನನಗೆ ಸ್ವಲ್ಪ ಸಮಸ್ಯೆಗಳಿವೆ. ಇಂದಿನ ಕನ್ನಡ ಶಾಲೆಯ ಮಾಸ್ತರುಗಳು ಕನ್ನಡವನ್ನು ಸರಿಯಾಗಿ ಬೋಧಿಸಬೇಕಾದ ಅವಶ್ಯಕತೆ ಇದೆ. ಅವರು ೧೨ನೆಯ ಶತಮಾನದ ಕನ್ನಡದ ಅಧ್ಯಾಪಕರಂತೆ ತಮ್ಮನ್ನು ತಾವು ಪರೀಕ್ಷೆ ಮಾಡಿಕೊಂಡು, ಬೋಧನೆಯಲ್ಲಿ ಸಮರ್ಥರಾಗಿದ್ದೇವೆ ಎಂಬುದನ್ನು ತಿಳಿದುಕೊಳ್ಳಬೇಕಿದೆ. ಇನ್ನು ಮಕ್ಕಳ ಬಗ್ಗೆ, ಯಾವ ಸಂಕೋಚವೂ ಇಲ್ಲ. ನಾವೆಲ್ಲ ಮುಂದೆ ದೊಡ್ಡ ದೊಡ್ಡ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಿದರೂ; ವೈಯಕ್ತಿಕವಾಗಿ ಪ್ರಪಂಚದ ಶ್ರೇಷ್ಠ ವಿಶ್ವವಿದ್ಯಾಲಯದಲ್ಲಿ ನನಗೆ ಅವಕಾಶ ಸಿಕ್ಕಿದರೂ, ಇಂಗ್ಲಿಷ್ ಮೋಹಿತನಾಗಿ ಅನೇಕ ಗ್ರಂಥಗಳನ್ನು ಬರೆದಿದ್ದರೂ ನನಗೆ ನೆನಪಿರುವುದು ಒಂದೇ ಒಂದು ವಿಷಯ: ನಾನು ಆರಂಭದಲ್ಲಿ ಓದಿದ್ದು ಮುನ್ಸಿಪಲ್ ಹೈಸ್ಕೂಲಿನಲ್ಲಿ (ಶಾಲೆಯಲ್ಲಿ). ಆಗ ಇಂಗ್ಲಿಷ್ ಮಾಧ್ಯಮದ ಶಾಲೆಗಳು ಇರದೆ; ಕನ್ನಡ ಮಾಧ್ಯಮದ ಶಾಲೆಗಳೇ ಇದ್ದವು. ಆಗ ನಮಗೆ ಕಲಿಸುವ ಕನ್ನಡ ಮಾಸ್ತರು ಅದ್ಭುತವಾಗಿ ಪಾಠ ಮಾಡುತ್ತಿದ್ದರು. ಅವರು ಕನ್ನಡ ಪಂಡಿತರಾಗಿದ್ದರು. ಅವರನ್ನು ನೋಡಿದರೆ ನಮಗೆ ಭಕ್ತಿಭಾವ ಉಂಟಾಗುತ್ತಿತ್ತು. ಅಂದರೆ ೧೯೪೦ರ ಆ ವೇಳೆಯಲ್ಲಿ ಇಂಗ್ಲಿಷ್ ಶಾಲೆಗಳೇ ಇಲ್ಲದಿದ್ದ

ಸಂದರ್ಭದಲ್ಲಿ ನಾವು ಕನ್ನಡದಲ್ಲೇ ಕಲಿತು, ಕನ್ನಡ ಮಾಧ್ಯಮದ ಮೂಲಕವೇ ಬೆಳೆದು, ನಾಡಿನಲ್ಲಿ ಮಾತ್ರವಲ್ಲ ವಿಶ್ವದಲ್ಲಿ ಸ್ವಲ್ಪಮಟ್ಟಿಗೆ ಹೆಸರನ್ನು ಗಳಿಸಲು ಸಾಧ್ಯವಾಗಿದ್ದು ನಮ್ಮ ಕನ್ನಡ ಪ್ರೀತಿಯಿಂದ ಮತ್ತು ತಾಯಿಭಾಷೆ ಮೇಲಿನ ಅಭಿಮಾನದಿಂದ. ಈ ಅಭಿಮಾನವನ್ನು ಯಾರೂ ಕಳೆದುಕೊಳ್ಳಬಾರದು. ಆದರೆ, ಒಂದು ವಿಷಯವನ್ನು ನಾನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುವೆ. ಯಾವ ಅಭಿಮಾನವು ಆರಾಧನೆಯಾಗಬಾರದು. ಅಭಿಮಾನ ಬೇರೆ, ಆರಾಧನೆ ಬೇರೆ. ಕನ್ನಡವನ್ನು ಆರಾಧಿಸುವುದರಿಂದ ಏನೂ ಲಾಭವಾಗುವುದಿಲ್ಲ. ಅಭಿಮಾನದಿಂದ ಅದನ್ನು ತಿಳಿಯುವುದರಿಂದ, ಬೆಳೆಸುವುದರಿಂದ ಭಾಷೆ ಬೆಳೆಯಲು ಸಾಧ್ಯವಾಗುತ್ತದೆ. ಅನೇಕ ಸಮಸ್ಯೆಗಳು, ಹೊಸ ಹೊಸ ಸವಾಲುಗಳು ನಮ್ಮ ಮುಂದೆ ಇವೆ. ಕನ್ನಡದ ಅಧ್ಯಾಪಕರ ಬಗ್ಗೆ ಹೇಳಿರುವೆ, ವಿದ್ಯಾರ್ಥಿಗಳ ಬಗ್ಗೆ ಹೇಳಿರುವೆ. ಕನ್ನಡದ ವಿದ್ಯಾರ್ಥಿಗಳ ಸಂಖ್ಯೆ ಯಾವತ್ತೂ ಕಡಿಮೆಯಾಗಿಲ್ಲ. ಅವರ ಗುಣಮಟ್ಟ ಸ್ವಲ್ಪ ಕಡಿಮೆಯಾಗಿದೆ. ಇದು ಕಳವಳಕಾರಿ ಆದರೆ, ನಮ್ಮ ನಾಡಿನ ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಇರುವ ವಿದ್ಯಾರ್ಥಿಗಳನ್ನು ಗಣನೆಗೆ ತೆಗೆದುಕೊಂಡರೆ ಅವರ ಸಂಖ್ಯೆ ಕಡಿಮೆಯಾಗಿಲ್ಲ. ಮಂದೆಯೂ ಈ ಸಂಖ್ಯೆ ಕಡಿಮೆಯಾಗುವುದೂ ಇಲ್ಲ. ಪ್ರಾಧ್ಯಾಪಕರ ಗುಣಮಟ್ಟ ಕಡಿಮೆಯಾಗಿದೆ. ಆ ಬಗ್ಗೆಯೂ ಕಳವಳ ಇದೆ. ಪ್ರಾಧ್ಯಾಪಕರು ತಮ್ಮ ವೃತ್ತಿಯನ್ನು ಸರಿಯಾಗಿ ಮಾಡಿಕೊಂಡು ಹೋದರೆ, ಅದಕ್ಕಿಂತಲೂ ಶ್ರೇಷ್ಠವಾದ ಕೊಡುಗೆಯನ್ನು ಕೊಡಲು ಸಾಧ್ಯವೇ ಇಲ್ಲ.

ಒಂದು ಸಮಾಜವನ್ನಾಗಲೀ, ಭಾಷೆಯನ್ನಾಗಲೀ, ಸಂಸ್ಕೃತಿಯನ್ನಾಗಲೀ ಬೆಳೆಸಬೇಕಾದರೆ ಅದರಲ್ಲಿ ಮುಖ್ಯವಾದ ಪಾತ್ರ ಇಬ್ಬರದು. ಒಂದು ಮನೆಯಲ್ಲಿರುವ ತಂದೆ-ತಾಯಿ ಪಾತ್ರ ಎರಡನೆಯದು, ಶಾಲೆಯಲ್ಲಿರುವ ಗುರುಗಳ ಪಾತ್ರ ಜೊತೆಗೆ



ಮೂರನೆಯ ಪಾತ್ರವನ್ನೂ ನಾವು ಸೇರಿಸಬಹುದು; ಅದು ಸ್ನೇಹಿತ ವರ್ಗದ ಪಾತ್ರ ನಮ್ಮ ಪಟ್ಟಣ ಪ್ರದೇಶದಲ್ಲಿ ಇತ್ತೀಚೆಗೆ ನಡೆಯುತ್ತಿರುವುದು; ಮನೆಯಲ್ಲಿ ತಾಯಿ, ತಂದೆ ಜೊತೆಗೆ ಕನ್ನಡದಲ್ಲಿ ಮಾತನಾಡುವ ಹುಡುಗ-ಹುಡುಗಿಯರು ರಸ್ತೆ ಮೇಲೆ ಬಂದಕೂಡಲೇ ಇಂಗ್ಲಿಷ್‌ನಲ್ಲಿ ಮಾತನಾಡಲು ಶುರು ಮಾಡುತ್ತಾರೆ. ಕೀಳರಿಮೆಯ ಪ್ರತಿಬಿಂಬವಿದು. ಇದು ಮೇಲಂತಸ್ತಿನ ಪ್ರತಿಬಂಬವಲ್ಲ, ಕೀಳರಿಮೆಯ ಪ್ರತಿಬಿಂಬ, ಇಂಗ್ಲಿಷ್ ನನಗೆ ಗೊತ್ತಿದೆ ಎಂದು ತೋರಿಸಿಕೊಳ್ಳಲು ರಸ್ತೆಯ ಮೇಲೆ ಮಾತನಾಡುವ ಭಾಷೆಯಿಂದ ಇಂಗ್ಲಿಷ್‌ನ್ನು ಕಲಿತುಕೊಳ್ಳಲು ಸಾಧ್ಯವಿಲ್ಲ, ಕನ್ನಡವನ್ನು ಬೆಳೆಸಲೂ ಸಾಧ್ಯವಿಲ್ಲ. ನಿಮಗೆ ಇಂಗ್ಲಿಷನ್ನು ಸರಿಯಾಗಿ ಕಲಿಯಬೇಕು ಎಂಬ ಆಶಯವಿದ್ದರೆ ಶಾಲೆಯಲ್ಲಿ ಸರಿಯಾಗಿ ಅಧ್ಯಯನ ಮಾಡಿ, ಇಂಗ್ಲಿಷನ್ನು ಶುದ್ಧವಾಗಿ ಬರೆದು ನಿಮ್ಮ ಪ್ರತಿಭೆಯನ್ನು ಪ್ರತಿಬಿಂಬಿಸಬೇಕು. ಆಗ

ಮಾತ್ರ ಆ ಭಾಷೆಯನ್ನು ಜೀರ್ಣಿಸಿಕೊಳ್ಳಲು ಸಾಧ್ಯ. ನೀವು ಆ ಕರ್ತವ್ಯವನ್ನು ಮಾಡಿದಾಗ, ಇಂಗ್ಲಿಷನ್ನು ಜೀರ್ಣಿಸಿಕೊಳ್ಳುವ ಶಕ್ತಿ ನಿಮ್ಮಲ್ಲಿ ಬಂದಾಗ, ನೀವು ಕನ್ನಡವನ್ನೂ ಬೆಳೆಸುತ್ತೀರಿ ಎಂಬ ಭರವಸೆ ಮೂಡುತ್ತದೆ.

೧೯೬೦ರಿಂದ ಕನ್ನಡ ಸಾಹಿತ್ಯದ ದೃಶ್ಯವನ್ನು ಗಮನಿಸಿ. ೬೦ರ ದಶಕದಿಂದ ಇತ್ತೀಚಿನವರೆಗೂ ಅನೇಕ ಪ್ರಾಧ್ಯಾಪಕರು, ಕವಿಗಳು, ಸಾಹಿತಿಗಳು ತಾವು ಇಂಗ್ಲಿಷ್ ಮಾಧ್ಯಮದಲ್ಲಿ ಓದಿದ್ದರೂ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರೂ ಕನ್ನಡ ಭಾಷೆಯಲ್ಲಿಯೇ ಬರೆದು ಕನ್ನಡವನ್ನು ಸಮೃದ್ಧಗೊಳಿಸಿದ್ದಾರೆ. ಅಂದರೆ ಮತ್ತೊಂದು ಬಗೆಯಲ್ಲಿ ಜೀರ್ಣಿಸಿಕೊಂಡಂಥ ವಸ್ತು ಎಂದರೆ ಭಾಷೆ, ಅವರು ಇಂಗ್ಲಿಷ್ ಭಾಷೆಯಲ್ಲಿ ಬರೆದರೆ ಸಾಧ್ಯವಾಗುತ್ತಿರಲಿಲ್ಲವೇನೋ ಎಂಬುದು ಬೇರೆ ಮಾತು. ಅದು ಸಾಧ್ಯವಾಗುತ್ತಿತ್ತೋ, ಸಾಧ್ಯವಾಗುತ್ತಿರಲಿಲ್ಲವೇನೋ ಎಂಬುದನ್ನು ನಾವಿಲ್ಲಿ ಪ್ರಶ್ನೆ ಮಾಡಬೇಕಿಲ್ಲ, ಅದರ ಅವಶ್ಯಕತೆಯೂ ಇಲ್ಲ. ಆದರೆ, ಪ್ರಪಂಚದಲ್ಲಿರುವ ಎಲ್ಲ ಇಂಗ್ಲಿಷ್ ಸಾಹಿತ್ಯವನ್ನು ಜೀರ್ಣಿಸಿಕೊಂಡು ಇಂಗ್ಲಿಷ್ ಸಾಹಿತ್ಯವನ್ನು ಜೀರ್ಣಿಸಿಕೊಳ್ಳುವುದೆಂದರೆ ಇಂಗ್ಲಿಷ್, ಗ್ರೀಕ್, ಪರ್ಶಿಯನ್, ಅರೆಬಿಕ್ ಮತ್ತು ಲ್ಯಾಟಿನ್ ಈ ಎಲ್ಲ ಭಾಷೆಯ ಸಾಹಿತ್ಯವನ್ನು ಜೀರ್ಣಿಸಿಕೊಂಡ ಹಾಗೆ- ಕನ್ನಡವನ್ನು ಸಂಪದ್ಭರಿತವಾಗಿ ಮಾಡಿದಂಥ ಈ ಕವಿಗಳ ಬಗ್ಗೆ, ಬರಹಗಾರರ ಬಗ್ಗೆ, ಸಂಶೋಧಕರ ಬಗ್ಗೆ ಅತ್ಯಂತ ಹೆಮ್ಮೆ ಪಡಬೇಕಿದೆ. ಇದರರ್ಥ ಏನೇ ಅವಘಡಗಳು ಬಂದರೂ ಜೀರ್ಣಿಸಿಕೊಳ್ಳುವ ಶಕ್ತಿ ಕನ್ನಡಿಗರಿಗೆ ಇದೆ ಎನ್ನುವುದು.

ಇನ್ನು ಸರ್ಕಾರದ ಕುರಿತು ಕೆಲ ಮಾತುಗಳನ್ನು ಹೇಳಬೇಕು. ರಾಜರುಗಳ ಕಾಲದಲ್ಲಿ ಕನ್ನಡಕ್ಕೆ ನೀಡಿದ ಪೋಷಣೆ ಈಗಿನ ಸರ್ಕಾರಕ್ಕೆ ಹೆಚ್ಚು ಇದೆ ಎಂದು ಭಾವಿಸುವೆ. ನಮ್ಮ ಸರ್ಕಾರ ಕನ್ನಡಕ್ಕೆ ಏನೂ ಮಾಡುತ್ತಿಲ್ಲ ಎಂದರ್ಥವಲ್ಲ. ಬಹುಶಃ ನಮ್ಮ ಸಮಾಜ ಕಂಡಂಥ ಈ ಪ್ರೋತ್ಸಾಹ ಹಿಂದಿನ ಯಾವ ಸರ್ಕಾರವೂ ಕೊಟ್ಟಿರಲಿಲ್ಲ. ಆ ಬಗ್ಗೆ ನನಗೆ ಹೆಮ್ಮೆ ಇದೆ. ಸರ್ಕಾರ ಕೈಗೊಂಡ ಅನೇಕ ಯೋಜನೆಗಳಿಂದ ಕನ್ನಡದ ಅಭಿವೃದ್ಧಿಯಾಗಲು ಸಾಧ್ಯವಿದೆ. ಆದರೆ, ಅದನ್ನು ಅರ್ಥಪೂರ್ಣವಾಗಿ ಜಾರಿಗೊಳಿಸುವ ಅವಶ್ಯಕತೆ ಇದೆ. ಕೇವಲ ಅನುದಾನ ಕೊಟ್ಟರೆ ಕನ್ನಡ ಬೆಳೆಯದು, ಕೇವಲ ಶಾಲೆಗಳನ್ನು ನಿರ್ಮಾಣ ಮಾಡುವುದರಿಂದ ಕನ್ನಡ ಬೆಳೆಯದು, ಯಾವುದೇ ಆಪತ್ತುಗಳು ಬಂದರೂ ಕನ್ನಡವನ್ನು ಕಡೆಗಣಿಸುವುದು ನಮ್ಮ ಸರ್ಕಾರಕ್ಕೆ ಇಂದು, ಮುಂದು ಮತ್ತು ಎಂದೆಂದೂ ಸಾಧ್ಯವೇ ಇಲ್ಲ. ಆದರೂ, ಆಲಸ್ಯ, ಅಚಾತುರ್ಯದಿಂದಾಗಿ ಕೆಲವು ಅವಘಡಗಳು ನಡೆದು ಹೋಗಿವೆ. ಒಂದು ಉದಾಹರಣೆಯನ್ನು ನೀಡುವೆ: ಕನ್ನಡ ಶಾಸ್ತ್ರೀಯ ಭಾಷೆ ಆಗಬೇಕೆಂದು ಹಲವು ವಿದ್ವಾಂಸರು ಶ್ರಮಿಸಿದರು. ಹಲವು ದಶಕಗಳ ಕಾಲ

ಹೋರಾಟವನ್ನು ನಡೆಸಿದರು. ಯಾತಕ್ಕಾಗಿ ಕನ್ನಡ ಶಾಸ್ತ್ರೀಯ ಭಾಷೆ ಆಗಬೇಕಿತ್ತು ಎಂದರೆ, ದಕ್ಷಿಣದ ಭಾಷೆಗಳಲ್ಲಿ ಕನ್ನಡ ಅತಿ ಪುರಾತನವಾದ ಭಾಷೆಗಳಲ್ಲಿ ಒಂದು. ತಮಿಳು ಜೊತೆ ಪ್ರತಿಸ್ಪರ್ಧಿಯಾಗಿ ನಿಂತು, ತನ್ನತನ ಉಳಿಸಿಕೊಂಡ ಭಾಷೆ ನಮ್ಮ ಕನ್ನಡ ಎಂಬುದನ್ನು ನಾಲ್ಕನೆಯ ಶತಮಾನದ ಸಂದರ್ಭದಲ್ಲಿ ಕಾಣುತ್ತೇವೆ. ಅಂತಹ ಹೋರಾಟವನ್ನು ಮಾಡಿ ನಮ್ಮ ನಾಡಿನ ಅನೇಕ ಪಂಡಿತರು, ಕವಿಗಳು ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನವನ್ನು ತಂದುಕೊಟ್ಟರು. ಆ ಸ್ಥಾನಮಾನ ದೊರೆತು ಆರೇಳು ವರ್ಷಗಳು ಕಳೆದಿವೆ. ಆದರೆ. ಆ ಶಾಸ್ತ್ರೀಯ ಭಾಷೆಯ ಸಂಸ್ಥೆ ಯಾವ ಕೆಲಸವನ್ನೂ ಮಾಡುತ್ತಿಲ್ಲ. ಇಂಥ ಸಂದಿಗ್ಧ ಸ್ಥಿತಿಯಲ್ಲಿ ಮಾಣಿಕ್ಯವನ್ನು ಕೊಟ್ಟಾಗ ನಮಗೆ ಅದರ ಪೂರ್ಣ ಸದುಪಯೋಗ ಪಡೆಯಲು ಅಸಾಧ್ಯವಾಗಿ ಸ್ವಲ್ಪಮಟ್ಟಿಗೆ ಎದೆಗುಂದುತ್ತೇವೆ. ಕನ್ನಡಕ್ಕೆ ಆಪತ್ತು ಬಂತೇನೋ ಎಂದೆನಿಸುತ್ತದೆ. ಆ ಆಪತ್ತು ಬರಲು ನಾವು ಬಿಡಕೂಡದು. ದಶಕಗಳ ಕಾಲ ಹೋರಾಟ ಮಾಡಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ತಂದುಕೊಟ್ಟ ಗಣ್ಯರು ನಮ್ಮ ನಡುವೆ ಇದ್ದಾರೆ, ಅವರೂ ಇಂದು ಮೌನವಾಗಿ ಇದ್ದಾರೆ. ಸರ್ಕಾರವೂ ಮೌನವಾಗಿದೆ. ಈ ಆರು ವರ್ಷಗಳಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಅನುಷ್ಠಾನಕ್ಕೆ ಸಂಸ್ಥೆ ಆರಂಭಿಸುವ ಕುರಿತು ಸರ್ಕಾರವು ಉತ್ಸಾಹವನ್ನು ತೋರಿಸಿಲ್ಲ. ಇದರಿಂದಾಗಿ ಅತ್ಯುನ್ನತ ಮಟ್ಟದಲ್ಲಿ ನಡೆಯುತ್ತಿರುವ ಸಂಶೋಧನೆಗಳಿಗೆ ಬಹಳ ಕುಂದುಂಟಾಗಿದೆ.

ಕನ್ನಡವನ್ನು ಉಳಿಸಿ, ಬೆಳೆಸಲು ಯಾರಾರು ತಮ್ಮ ಕರ್ತವ್ಯವನ್ನು ಮಾಡಬೇಕಿದೆ ಎಂದು ಮೊದಲಿಗೆ ಹೇಳಿದ್ದೇನೆ. ಕವಿಗಳು ಕವಿತೆಯನ್ನು ಬರೆಯಬೇಕು, ಸಂಶೋಧಕರು ಸಂಶೋಧನೆಯನ್ನು ಮಾಡಬೇಕು. ಭಾಷಾ ಸಂಶೋಧನೆ ನಡೆಯದ ಹೊರತು ಭಾಷೆಯ ಬಗ್ಗೆ ನಮಗೆ ಅರಿವು ಮೂಡಲು ಸಾಧ್ಯವಿಲ್ಲ. ಇಂಥ ಭಾಷಾ ಸಂಶೋಧನೆ ಆಗಬೇಕಾದಾಗ, ಭಾಷಾ ಸಂಶೋಧನಾ ಸಂಸ್ಥೆಯನ್ನು ನಾವು ಪ್ರೋತ್ಸಾಹಿಸಬೇಕಿದೆ. ಕನ್ನಡ ಭಾಷೆಗೆ ದೊರೆತ ಶಾಸ್ತ್ರೀಯ ಸ್ಥಾನಮಾನವನ್ನು ಉಳಿಸಿಕೊಳ್ಳುವ ಹೊಣೆಗಾರಿಕೆಯನ್ನು ನಾವು ನಿರ್ವಹಿಸದಿದ್ದರೆ ಅದು ನಮ್ಮಲ್ಲಿನ ಬಲಹೀನತೆಯನ್ನು ಮತ್ತು ನಮಗೆ ನಮ್ಮ ಭಾಷೆ ಕನ್ನಡಕ್ಕಿರುವ ತಾತ್ಸಾರ ಭಾವನೆಯನ್ನು ತೋರಿಸಿಕೊಡುತ್ತದೆ. ಆದರೆ, ಇದು ಬಹುಕಾಲ ನಡೆಯದು. ಏಕೆಂದರೆ ಕನ್ನಡಿಗರು ಸದಾ ಎಚ್ಚರಿಕೆಯಿಂದ ಇರುತ್ತಾರೆ. ಸರ್ಕಾರ ಈ ಕೆಲಸವನ್ನು ಮಾಡದಿದ್ದರೆ, ಸರ್ಕಾರದ ಮೇಲೆ ಒತ್ತಡವನ್ನು ತಂದು ಕಾರ್ಯರೂಪಕ್ಕಿಳಿಸುವ ಶಕ್ತಿ ಕನ್ನಡಿಗರಲ್ಲಿದೆ. ಆ ಶಕ್ತಿಯನ್ನು ನೀವು ಪ್ರದರ್ಶಿಸಬೇಕು. ಈ ಕಾರಣದಿಂದಾಗಿ ನಮ್ಮ ಸಂಸ್ಥೆಗಳು, ನಮ್ಮ

ಸಮಾಜ, ಸಮುದಾಯ ತನ್ನ ಕರ್ತವ್ಯವನ್ನು ನಿರ್ವಹಿಸಿದಾಗ ಕನ್ನಡ ಎಷ್ಟು ಸಮೃದ್ಧವಾಗಿ ಬೆಳೆಯುತ್ತದೆ ಎಂಬುದಕ್ಕೆ ಬೇರೆ ನಿದರ್ಶನಗಳನ್ನು ಕೊಡಬೇಕಾಗುವುದಿಲ್ಲ. ಇದನ್ನು ಹೇಳುವಾಗ ಒಂದು ಮಾತು ನನಗೆ ನೆನಪಾಗುತ್ತದೆ. ಯಾವುದೇ ಒಂದು ಭಾಷೆಯನ್ನು ಬೆಳೆಸಬೇಕಾದಾಗ ಮಡಿವಂತಿಕೆ ಬೇಕಾಗಿಲ್ಲ. ಆರಾಧನೆ ಎಷ್ಟು ಅವಘಡಕಾರಿಯೋ, ಅಪಾಯಕಾರಿಯೋ ಅದೇ ರೀತಿಯಾಗಿ ಈ ರೀತಿಯ ಆತಂಕಗಳು ಬೇಕಾಗಿಲ್ಲ. ಪರಿಶುದ್ಧವಾದ ಭಾಷೆ ಎಂಬುದು ಯಾವುದಾದರೂ ಇದ್ದರೆ, ಅದು ಈ ಜಗತ್ತಿನಲ್ಲಿ ಇಲ್ಲ. ಎಲ್ಲ ಭಾಷೆಗಳೂ ಬೇರೆ ಭಾಷೆಗಳನ್ನು ಒಳಗೊಂಡು ಬೆಳೆದ ಭಾಷೆಗಳಾಗಿವೆ. ಇವತ್ತು ಇಂಗ್ಲಿಷ್ ಭಾಷೆ ವಿಶ್ವಭಾಷೆಯಾಗಿದ್ದರೆ ಕನ್ನಡದಲ್ಲಿ ಇರುವ, ಸಂಸ್ಕೃತದಲ್ಲಿರುವ ಶಬ್ದಗಳನ್ನೂ ಅದು ತನ್ನದಾಗಿ ಮಾಡಿಕೊಂಡಿದೆ. 'ಘೇರಾವ್' ಎಂಬ ಪದ ಇಂದು ಇಂಗ್ಲಿಷ್ ಡಿಕ್ಷನರಿಯಲ್ಲಿ ಸೇರಿಕೊಂಡಿದೆ. ಹೀಗಾಗಿ ಕನ್ನಡವನ್ನು ಬೆಳೆಸುವಾಗ



ಮಡಿವಂತಿಕೆ ಅನಗತ್ಯ. ಹಾಗೆಂದು ಬೇರೆ ಬೇರೆ ಭಾಷೆಯ ಶಬ್ದಗಳನ್ನು ನೀವು ಬಳಸಬೇಕು ಎಂದು ನಾನು ಹೇಳುತ್ತಿಲ್ಲ. ಎಲ್ಲಿ ಬಳಸಲು ನಿಮಗೆ ಅನಿವಾರ್ಯವಾಗುತ್ತೋ ಅಲ್ಲಿ ಬಳಸಿ. ಎಲ್ಲಿ ಬಳಸಿದರೆ ಅನುಕೂಲವಾಗುತ್ತೋ ಅಲ್ಲಿ ಬಳಸಿ, ಆ ಶಬ್ದವನ್ನು, ಆ ಚಿಂತನೆಯನ್ನು ನಮ್ಮ ಶಬ್ದವಾಗಿ, ನಮ್ಮ ಚಿಂತನೆಯಾಗಿ ಮಾಡಿಕೊಳ್ಳಬೇಕಿದೆ. ಮಡಿವಂತಿಕೆ ಬೇಡ, ಆರಾಧನೆ ಬೇಡ, ಅರಿವು ಬೇಕು. ಶ್ರೀಮಂತಿಕೆ ಬೇಕು. ಸಹೃದಯತೆ ಬೇಕು. ಇಂಗ್ಲಿಷ್ ಮಿಶ್ರಣ ಮಾಡಿದ ಕನ್ನಡ ಭಾಷೆ ಕೆಲವರಿಗೆ ಆತಂಕವನ್ನುಂಟುಮಾಡುತ್ತದೆ. ಈ ತರಹದ ಆತಂಕಗಳು ಹಿಂದೆ ಎಷ್ಟೋ ಆಗಿವೆ. ಸಂಸ್ಕೃತ ಮತ್ತು ಕನ್ನಡ ಮಿಶ್ರಿತ ಭಾಷೆಯ ಬಗೆಗೂ ಆತಂಕ ಇತ್ತು. ಅದನ್ನು ಸಂಸ್ಕೃತ ಪಂಡಿತರು 'ಅರಿಸಮಾಸ' ಎಂದು ಟೀಕಿಸಿದರು. ಇದು ಅರಿಸಮಾಸ, ಇದನ್ನು ಹೀಗೆ ಬಳಸಬಾರದು ಎಂದರು. ಈ ಅರಿಸಮಾಸವೇ ಮುಂದೆ 'ಹರಸಮಾಸ'ವಾಯಿತು. ಅದನ್ನು ಮುಂದೆ ಸಮಾಜ ಬೆಳೆಸಿಕೊಂಡು ಸಾಗಿತು. ಬುದ್ಧನ ಕಾಲದಲ್ಲಿ- ೩, ೪ನೆಯ ಶತಮಾನದ ಅವಧಿಯಲ್ಲಿ ಈ ಅರಿಸಮಾಸ ಹೊಂದಿದ ಒಂದು ಭಾಷೆ ಬೃಹತ್ ಪ್ರಮಾಣದಲ್ಲಿ ಬೆಳೆಯಿತು. ಪಾಕೃತ ಮತ್ತು ಸಂಸ್ಕೃತ ಕೂಡಿ ಬೆಳೆದ ಭಾಷೆ ಅದು. ಅದ್ಭುತವಾದ ಸಾಹಿತ್ಯ ಮೂಡಿತು. ಅದು ಮುಜುಗರ ತಂದದ್ದು ಸಂಸ್ಕೃತ ಪಂಡಿತರಿಗೆ, ಅದೇ ರೀತಿ ಪರಿಶುದ್ಧ ಕನ್ನಡದಲ್ಲಿ ಬರೆಯಬೇಕೆನ್ನುವ ಹಪಾಹಪಿ ಹೊಂದಿರುವ ಕನ್ನಡ ಪಂಡಿತರಿಗೆ ಇಂಗ್ಲಿಷ್ ಭಾಷೆಯನ್ನು ಬಳಸುವವರನ್ನು ಕಂಡಾಗ ಸ್ವಲ್ಪ ಆತಂಕ ಆಗುತ್ತದೆ; ಅವರು ಆತಂಕ ಪಡಲಿ, ಅವರ ಎಚ್ಚರಿಕೆಯನ್ನು ಗಮನಿಸೋಣ. ಆದರೆ, ನಮ್ಮ ಭಾಷೆ ಬೆಳೆಯುವುದಾದರೆ ಇಂಗ್ಲಿಷನ್ನು ನಾವು ಜೀರ್ಣಿಸಿಕೊಳ್ಳೋಣ.

ಇಂದಿನ ಆಧುನಿಕ ಯುಗದಲ್ಲಿ ತಂತ್ರಜ್ಞಾನವನ್ನು ಜೀರ್ಣಿಸಿಕೊಳ್ಳಬೇಕಾದಾಗ ನಾವು ಸಹಜವಾಗಿ ಇಂಗ್ಲಿಷ್‌ನ್ನು ಜೀರ್ಣಿಸಿಕೊಳ್ಳಬೇಕಾಗುತ್ತದೆ. ಫ್ರೆಂಚ್, ಜರ್ಮನ್‌ನ್ನು ಜೀರ್ಣಿಸಿಕೊಳ್ಳಬೇಕಾಗುತ್ತದೆ. ನಾವು ಅವರ ಮನೆಗೆ ಹೋಗಿ, ನಮಗೆ 'ಕಡ ಕೊಡಿ' ಎಂದು ಪದಗಳನ್ನು ಕೇಳಬೇಕಾಗಿಲ್ಲ. ನಮ್ಮ ಮನೆ ಎದುರು ನಿಂತ ಪದಗಳನ್ನು ನಾವು ಜೀರ್ಣಿಸಿಕೊಂಡಾಗ ವಿದೇಶದಿಂದ ಬಂದ ತಂತ್ರಜ್ಞಾನವನ್ನೂ ನಾವು ಜೀರ್ಣಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಂದರೆ ಸ್ವಲ್ಪಮಟ್ಟಿಗೆ ಸಹೃದಯತೆಯಿಂದ, ಧಾರಾಳ ಮನಸ್ಸಿನಿಂದ ನಾವು ಹೊಸ ಹೊಸ ಪದಗಳನ್ನು ನಮ್ಮ ಪದಗಳನ್ನಾಗಿ ಮಾಡಿಕೊಳ್ಳುವ ಅತ್ಯಂತ ಅವಶ್ಯಕವಾದ ಸಂದರ್ಭ ನಮ್ಮ ಮುಂದಿದೆ. ಇವನ್ನು ಅರಿತುಕೊಂಡರೆ ಉತ್ತಮ. ಹೆಚ್ಚು ವ್ಯಾಖ್ಯಾನ ಮಾಡಬೇಕಾದಂಥ ಅವಶ್ಯಕತೆ ಇಲ್ಲ; ನನ್ನಂಥ ಉಪನ್ಯಾಸಕರನ್ನು ತಂದು ನಿಲ್ಲಿಸಬೇಕಾದ ಅವಶ್ಯಕತೆ ಇಲ್ಲ. ಬೆಳೆಸುವವರು ನೀವು, ಉಳಿಸುವವರು ನೀವು, ನಿಮ್ಮ ನಿಮ್ಮ ಮನೆಯಲ್ಲಿ ನೀವು ಕನ್ನಡವನ್ನು ಮಾತನಾಡಿದಾಗ ಕನ್ನಡವು ವಿಶ್ವಭಾಷೆಯಾಗುತ್ತದೆ. ಇಂದು ಕನ್ನಡಿಗರು ಕನ್ನಡನಾಡಿಗೆ ಸೀಮಿತವಾಗಿಲ್ಲ. ಕನ್ನಡ ನಾಡಿನ ಜನರು ವಿಶ್ವದ ಸಾಮಾನ್ಯ ಜನರಾಗಿದ್ದಾರೆ, ವಿಶ್ವದ ನಾಗರಿಕರಾಗಿದ್ದಾರೆ. ಅವರಿಗೆ ಕನ್ನಡದ ಬಗ್ಗೆ ಎಷ್ಟು ಕಳಕಳಿ ಇದೆ ಎಂದರೆ, ಹೊರದೇಶದಲ್ಲಿರುವ ಕನ್ನಡಿಗರ ಭಾಷೆಯ ಪ್ರೀತಿ, ಕಳಕಳಿಯನ್ನು ನೋಡಿದಾಗ ಇಲ್ಲಿರುವ ನಮಗೆ ನಾಚಿಕೆಯಾಗುತ್ತದೆ. ಅಂದರೆ ವಿಶ್ವಭಾಷೆಯಾಗಿ ಕನ್ನಡ ಬೆಳೆಯುವ ಸಾಧ್ಯತೆಗಳು ಇವೆ. ಅದನ್ನು ಬೆಳೆಸುವ ಹಠಮಾರಿತನ ಬೇಕಾಗಿದೆ. ಈ ಹಠಮಾರಿತನ ತಮಗೆ ಇದೆ, ಈ ಭವ್ಯ ಕನಸು ನನಸು ಮಾಡುವ ಶಕ್ತಿ ತಮಗಿದೆ.

# ದಲಿತ ಬಂಡಾಯ : ಸ್ಥಿತ್ಯಂತರದ ನೆಲೆಗಳು

## ಶೋಷಣೆ ಮತ್ತು ಬಿಡುಗಡೆ

· ಡಾ. ಸುಬ್ರಾವ ಎಂಟೆತ್ತಿನವರ

ಸ್ವಾತಂತ್ರ್ಯ ಬಂದು ಎಪ್ಪತ್ತೂರು ವರ್ಷಗಳು, ಸಂವಿಧಾನ ಜಾರಿಗೆ ಬಂದು ಎಪ್ಪತ್ತು ವರ್ಷಗಳೇ ಆಗಿವೆ. ಈ ಸಂದರ್ಭದಲ್ಲೂ ಶೋಷಣೆ ಮತ್ತು ಬಿಡುಗಡೆಯ ಬಗ್ಗೆ ಮಾತನಾಡುತ್ತಿದ್ದೇವೆಂದರೆ ಇದು ನಿಜಕ್ಕೂ ಶೋಷಿತ ವರ್ಗಗಳ ದುರಂತ ಮತ್ತು ತಲೆತಗ್ಗಿಸುವುದರೊಂದಿಗೆ ನಾಚಿಕೆ ಪಡುವ ವಿಚಾರ. ಒಂದು ಕಾಲದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಗೋಷ್ಠಿ ಮಾಡಬೇಕೆಂದು ದಲಿತ ಬಂಡಾಯ ಸಾಹಿತಿಗಳು ಒತ್ತಾಯಿಸಿದಾಗ ಒಬ್ಬ ವಿದ್ವಾಂಸರು ಕನ್ನಡ ಸಾಹಿತ್ಯದಲ್ಲಿ 'ದಲಿತ-ಬಲಿತ-ಕಲಿತ' ಯಾವುದೂ ಇಲ್ಲ ಎಂದು ಗೋಷ್ಠಿಗೆ ನಿರಾಕರಿಸಿದರು. ಮುಂದೇ ಇದೇ ವಿದ್ವಾಂಸರು ಬದಲಾದದ್ದು ಗಮನಾರ್ಹ ಆದರೇ ಇಂದು ಡಾ. ಮನುಬಳಿಗಾರ್ ಅವರ ನೇತೃತ್ವದ ಕನ್ನಡ ಸಾಹಿತ್ಯ ಪರಿಷತ್ತು ಕೆಲವೇ ದಿನಗಳ ಹಿಂದೆ ಕೋಲಾರದಲ್ಲಿ ಪ್ರಪ್ರಥಮ ದಲಿತ ಸಾಹಿತ್ಯ ಸಮ್ಮೇಳನವನ್ನು ಮಾಡಿದ ಕೀರ್ತಿಗೆ ಪಾತ್ರವಾಗಿದೆ. ಇಂದು ಕಲಬುರ್ಗಿಯಲ್ಲಿ ನಡೆಯುತ್ತಿರುವ ಸಮ್ಮೇಳನದಲ್ಲಿ ದಲಿತ-ಬಂಡಾಯ ಗೋಷ್ಠಿಯನ್ನು ಪ್ರಧಾನ ವೇದಿಕೆಯಲ್ಲಿಯೇ ಹಮ್ಮಿಕೊಂಡಿದ್ದು ಖುಷಿ ತಂದಿದೆ.

ಒಂದು ಕಾಲದಲ್ಲಿ ಶೋಷಕರನ್ನು ಮತ್ತು ಶೋಷಿತರನ್ನು ಪ್ರತ್ಯೇಕವಾಗಿ ಗುರುತಿಸುವ ಕಾಲವಿತ್ತು. ಆ ಕಾಲದಲ್ಲಿ ಯಾವ ಮನುಷ್ಯನನ್ನು ಮುಖ್ಯ ಕೇಂದ್ರದಿಂದ ದೂರ ಇಟ್ಟಿದ್ದರೋ ಅವರೆಲ್ಲ ಈಗ ಸಮಾಜದ ಮುಖ್ಯವಾಹಿನಿಯಲ್ಲಿ ನಿಧಾನವಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಇದುವೇ ಸ್ಥಿತ್ಯಂತರ ಅಥವಾ ಸಂಕ್ರಮಣಕಾಲ. ಇದಕ್ಕೆ ಮುಖ್ಯ ಕಾರಣ ದಲಿತ ಪ್ಯಾಂಥ, ದಲಿತ ಸಂಘರ್ಷ ಸಮಿತಿ, ಸಮತಾಸೈನಿಕದಳ, ದ್ರಾವಿಡಿಯನ್ ಚಳವಳಿ, ಸ್ವಾಭಿಮಾನ ಚಳವಳಿ, ದಲಿತ-ಬಂಡಾಯ ಸೇರಿದಂತೆ ಮುಂತಾದ ಸಂಘಟನೆಗಳು ಕಾರಣವಾಗಿವೆ. ಜೊತೆಗೆ ಬುದ್ಧ, ಬಸವ ಅಂಬೇಡ್ಕರ್, ಗಾಂಧಿ, ಲೋಹಿಯಾ, ಜಯಪ್ರಕಾಶ ನಾರಾಯಣ, ಶಾಹುಮಹಾರಾಜ್, ಮಹಾತ್ಮ ಜ್ಯೋತಿಬಾ ಫುಲೆ, ಸಾವಿತ್ರಿ ಬಾಯಿ ಫುಲೆ, ಪೆರಿಯಾರ್ ರಾಮಸ್ವಾಮಿ ಫಿಳ್ಳೆ, ನಾಲ್ವಡಿ ಕೃಷ್ಣರಾಜ್ ಒಡೆಯರ್, ನಾರಾಯಣಗುರು, ಕುದ್ಮುಲ್ ರಂಗರಾವ್ ಹಾಗೂ ಚಿಕ್ಕೋಡಿಯ ದೇವರಾಯ ಇಂಗಳೆ ಸೇರಿದಂತೆ ಮುಂತಾದ ಮಹಾನ್ ಚಿಂತಕರು ಕಾರಣರು. ಈ ಮೇಲಿನವರ ಪ್ರಯತ್ನದಿಂದಾಗಿ ಹಾಗೂ ಸಂವಿಧಾನ ಬದ್ಧವಾಗಿ, ಬೇರೆ ಬೇರೆ

ಮಾರ್ಗೋಪಾಯಗಳಿಂದ, ಆಧುನೀಕರಣದಿಂದ ವಿದ್ಯಾಭ್ಯಾಸ, ಸ್ವಾಭಿಮಾನ, ಹೋರಾಟ, ಜನರ ಇಚ್ಛಾಶಕ್ತಿ ಇವೆಲ್ಲ ಕಾರಣವಾಗಿ ಶೋಷಣೆ ಸಂಪೂರ್ಣವಾಗಿ ನಿಂತುಹೋಗಿಲ್ಲ. ಅದು ತನ್ನ ತೀವ್ರತೆಯನ್ನು ಸ್ವಲ್ಪ ಮಟ್ಟಿಗೆ ಕಳೆದುಕೊಂಡಿದೆ. ಜೊತೆಗೆ ಅದು ಈಗ ಬೇರೆ ಬೇರೆ ರೂಪದಲ್ಲಿ ಕಾಣಿಸುತ್ತಿದ್ದು, ಬರುತ್ತಿದ್ದು ನಮಗೆಲ್ಲ ಮತ್ತಷ್ಟು ಆತಂಕವನ್ನುಂಟುಮಾಡಿದೆ.



ಈಗಿನ ಶೋಷಣೆಯ ವಿಧಾನ ಹಾಗೂ ರೀತಿಗೆ ಕಂಚ ಐವಲ್ಯ ಅವರು ಹೇಳಿದ ಎರಡು ಉದಾಹರಣೆಗಳ ಮೂಲಕ ನನ್ನ ಮಾತುಗಳನ್ನು ಆರಂಭಿಸುತ್ತೇನೆ.

ಉದಾ : ೧. ಮಸಾಲೆ ನ್ಯಾಯ ವ್ಯವಸ್ಥೆಯ ವಿರುದ್ಧದ ಪ್ರಶ್ನೆ :

"ಒಂದು ಹೋಟೆಲ್‌ಗೆ ಹೋದರೆ ಅಲ್ಲಿ ಮಸಾಲೆ ದೋಸೆಯ ಬೆಲೆ ದಲಿತರಿಗೂ ಮೇಲ್ವರ್ಗದವರಿಗೂ ಒಂದೇ ಆಗಿರುತ್ತದೆ. ದಲಿತ ನಾನು ಶೋಷಿತ, ದುರ್ಬಲ ನೆಂದು ಕಡಿಮೆ ಬೆಲೆಗೆ ಮಸಾಲೆಯನ್ನು ಕೇಳಲುಸಾಧ್ಯವಿಲ್ಲ" ಈ ಬಗೆಯ ವಾದವನ್ನು ಮುಂದೊಡ್ಡಿ ಇಂದು ಭಾರತದ ಜಾತಿಸಮಾಜ ತನ್ನ ಸುತ್ತ ಇಂಥ ತನ್ನದೇ ಆದ 'ನ್ಯಾಯ' ದ ವ್ಯೂಹವನ್ನು ನಿರ್ಮಿಸುತ್ತಿದೆ. ಇಲ್ಲಿ ಸಮಾಜವನ್ನು ಪ್ರಶ್ನಿಸಲು ಸಾಧ್ಯವಾಗದ ನ್ಯಾಯ ಪದ್ಧತಿರೂಪ ತಾಳಿ ದಲಿತನ ಧ್ವನಿ ಉಡುಗುತ್ತಿದೆ. ಇಂಥ ಮಸಾಲೆ ನ್ಯಾಯದ ವ್ಯವಸ್ಥೆಯ ವಿರುದ್ಧ ತನ್ನ ನ್ಯಾಯಯುತ ಪ್ರಶ್ನೆಗಳನ್ನು ಕೇಳುವ ಶಕ್ತಿಯನ್ನು ದಲಿತ ಸಮುದಾಯ ಕಂಡುಕೊಳ್ಳುವುದು ಅನಿವಾರ್ಯವಾಗಿದೆ.

ಉದಾ : ೨. ಆಧುನಿಕ ಕಾಲದಲ್ಲಿ ಜಾತಿಭಾಷೆಯನ್ನು ಅರ್ಥಮಾಡಿಕೊಳ್ಳುವ ಅಗತ್ಯ:

ಹಿಂದೆ ಒಬ್ಬ ಅಸ್ಪೃಶ್ಯ ತನ್ನ ಮಗುವಿನ ಜೊತೆ ಸಂತೆಯ ಮಧ್ಯೆ ನಿಂತಿದ್ದಾಗ ಅವನ ಸುತ್ತ ಇದ್ದ ಜಾತಿಸಮಾಜ ತಮ್ಮ ತಮ್ಮೊಳಗೆ ಮಾತುಕತೆ ನಡೆಸುತ್ತಿತ್ತು. 'ನಾಳೆ ಬೆಳಗ್ಗೆ ಆ ಅಸ್ಪೃಶ್ಯ ನನ್ನು ಕೊಲ್ಲಬೇಕು ಎಂದು ಪಿಸುಗುಟ್ಟಿಕೊಳ್ಳುತ್ತಿತ್ತು. ಅವರ ಪಿಸುಮಾತು ಸಂತೆಯಲಿ ನಿಂತ ಅಸ್ಪೃಶ್ಯನಿಗೆ ಅರ್ಥವಾಗುತ್ತಿತ್ತು. ಆದ್ದರಿಂದ ಬೆಳಗ್ಗೆ ಕವಚ ಧರಿಸಿ ತಾನೂ ಆಯುಧಹಿಡಿದು ನಿಲ್ಲುತ್ತಿದ್ದ ಜಾತಿ ಸಮಾಜಕ್ಕೆ ಆ ಅಸ್ಪೃಶ್ಯನನ್ನು ಕೊಲ್ಲುವುದು ಕಠಿಣವಾಗುತ್ತಿತ್ತು.

**ಆದರೇ,**

ಇಂದು ಅಸ್ಪೃಶ್ಯ ತನ್ನ ಮಗುವಿನ ಜೊತೆಯಲ್ಲಿ ಸಂತೆಯಲ್ಲಿ ನಿಂತಿದ್ದಾನೆ. ಅವನ ಸುತ್ತ ಇರುವ ಜಾತಿ ಸಮಾಜ ಮಾತನಾಡಿಕೊಳ್ಳುತ್ತಿದೆ. ಆದರೇ ಅಸ್ಪಶ್ಯನಿಗೆ ಅರ್ಥವಾಗುತ್ತಿಲ್ಲ. ಅವರ ಕಡೆ ಬೆರಗುಗಣ್ಣಿನಿಂದ ನೋಡುತ್ತಾನೆ. ಆ ಸಮಾಜ ಮುಗುಲ್ನಗುತ್ತದೆ. ಬೆಳಗಾದರೇ ಆ ಅಸ್ಪಶ್ಯ ಸಲೀಸಾಗಿ ಬಲಿಯಾಗುತ್ತಿದ್ದಾನೆ. ಆ ಬಲಿಗೆ ಕಾರಣ ಇಂದಿನ ಜಾತಿ ಸಮಾಜದ ಭಾಷೆ ಅವನಿಗೆ ಅರ್ಥವಾಗದಿರುವುದು. ಇಂಥ. ಆಧುನಿಕ ಜಾತಿಭಾಷೆಯನ್ನು ಅರಿಯದೇ ಹೋದರೇ ದಲಿತರ 'ಬಲಿ' ಬಹಳ ನಾಜೂಕಾಗಿ ಸಂಭವಿಸುತ್ತಲೆ ಇರುತ್ತದೆ. ಈ ಮೇಲಿನ ಎರಡು ಘಟನೆಗಳನ್ನು ಬಹಳ ತುರ್ತಾಗಿ ನಾವೆಲ್ಲ ಗ್ರಹಿಸಬೇಕಾಗಿದೆ.

**ಶೋಷಣೆ ; ದಬ್ಬಾಳಿಕೆ**

ದೇಶದಾದ್ಯಂತ ದಲಿತರನ್ನು ಜೀವಂತವಾಗಿ ನೇಣು ಹಾಕಿದ, ಬೆಂಕಿ ಇಟ್ಟ ಪ್ರಕರಣಗಳು, ಕೋಮುಗಲಭೆಗಳು, ಬಾಬಾಸಾಹೇಬ ಅಂಬೇಡ್ಕರ್ ಮತ್ತು ಸಂವಿಧಾನದ ಮೇಲಾಗುತ್ತಿರುವ ಅಸಹನೀಯ ಕೃತ್ಯಗಳು ಇವೆಲ್ಲ ಈಗಿನ ರಾಕ್ಷಸಿ ಘಟನಾವಳಿಗಳು. “ಸುಮಾರು ಒಂದು ದಶಕದ ಹಿಂದೆ ಒಂದು ರಾಜ್ಯದಲ್ಲಿ (ಗುಜರಾತ್) ಮುಸ್ಲಿಂ ಸಮುದಾಯದವರನ್ನು ಸದೆ



ಬಡೆದು ಕಡೆಗೆ ಆ ಸಮುದಾಯ ಸದಾಭಯ, ಭೀತಿಯಲ್ಲಿರುವಂತೆ ಮಾನಸಿಕ ಸ್ಥಿತಿಗೆ ತಂದು ನಿತ್ರಾಣಗೊಳಿಸಿದವರೇ ಇಂದು ತಮ್ಮ ಅಸ್ತ್ರಗಳನ್ನು ದಲಿತರ ಮೇಲೆ ತಿರುಗಿಸಿದ್ದಾರೆ. ಪ್ರಾಣಿ ರಕ್ಷಣೆಯ ಹೆಸರಲ್ಲಿ ಕೈಯಲ್ಲಿ ಶಸ್ತ್ರಾಸ್ತ್ರ ಹಿಡಿದು ಹೊರಾಟ ಖಾಸಗಿ ಆರ್ಮಿಗಳು ಸತ್ತ ದನದ ಚರ್ಮ ಸುಲಿಯುವ ಅಸ್ಪೃಶ್ಯರನ್ನ ಅತ್ಯಂತ ಭೀಕರವಾಗಿ ಹಿಂಸಿಸಿ ಅಮಾನುಷವಾಗಿ ಹಲ್ಲೆಗೊಳಿಸಿದ್ದಾರೆ.”

ಈಗ ವಿದೇಶದಲ್ಲಿ ಬಾಬಾಸಾಹೇಬ ಅಂಬೇಡ್ಕರರನ್ನು ಹೊಗುಳುತ್ತಾ ತಿರುಗುವವರಿದ್ದಾರೆ. ಆದರೇ ನಮ್ಮ ದೇಶದಲ್ಲಿ ಅಂಬೇಡ್ಕರ್ ಸ್ಮಾರಕ ಛಿದ್ರಗೊಳಿಸುವುದು; ಸಂವಿಧಾನದ ಬಗ್ಗೆ ಕೆಟ್ಟದಾಗಿ ಮಾತನಾಡುವುದು ನಿರಂತರವಾಗಿ ನಡೆದಿದೆ. ಇಂತವರಿಂದ ಸಮಾನತೆಯ ಸಮಾಜ ನಿರ್ಮಾಣ ಅಸಾಧ್ಯ. ಮುಸ್ಲಿಂ ಹಾಗೂ ದಲಿತರೊಂದಿಗೆ ಆದಿವಾಸಿಗಳ ಮೇಲೂ ಇವರ ಅಟ್ಟಹಾಸ ನಿಲ್ಲುತ್ತಿಲ್ಲ. ಇದಕ್ಕೆ ಕೊನೆ ಎಂದು? ಬಸ್ತರ

ದಂಡಕಾರಣ್ಯದಲ್ಲಿ ಕಳೆದ ಆರು ತಿಂಗಳಲ್ಲಿ ತೊಂಬತ್ತು ಮಂದಿ ಅಮಾಯಕ ಆದಿವಾಸಿಗಳ ಹತ್ಯೆಯಾಗಿದೆ. ಕೇವಲ ಏಳು ತಿಂಗಳ ಅವಧಿಯಲ್ಲಿ ಐವತ್ತು ಆದಿವಾಸಿ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಲಾಗಿದೆ.

ಮೊನ್ನೆ ಮೊನ್ನೆ ಪ್ರಸಿದ್ಧ ಸಾಹಿತಿಗಳು ಪತ್ರಕರ್ತರೂ ದಲಿತ ಪರ ಚಿಂತಕರು ಆದ ಡಾ. ಸರಜೂ ಕಾಟ್ಕರ್ ಅವರು ಕಳಿಸಿದ ವಾಟ್ಸಾಪ್ ಮೆಸೇಜ್ ಉತ್ತರ ಪ್ರದೇಶದ ಒಂದು ಹಳ್ಳಿಯಲ್ಲಿ ದಲಿತ ಹೆಣ್ಣುಮಗಳೊಬ್ಬಳು ಮೇಲ್ವರ್ಗದವರ ಬಾವಿಯಿಂದ ನೀರು ತೆಗೆದುಕೊಂಡು ಕುಡಿದದ್ದು ಅಲ್ಲಿನ ಮೇಲ್ವರ್ಗದವರನ್ನು ಕೆರಳಿಸಿತ್ತು. ಅವರೆಲ್ಲ ಕೂಡಿ ಸಾರ್ವಜನಿಕವಾಗಿಯೇ ಕೈಯಿಂದ, ಕಾಲಿನಿಂದ, ಕಟ್ಟಿಗೆಗಳಿಂದ ಹೊಡೆದ, ಘಾಸಿ ಗೊಳಿಸಿದ್ದಲ್ಲದೇ ಅವಳ ಸೀರೆಯನ್ನು ಹರಿದು ಹಾಕಿ ಅಸಮಾನ ಮಾಡಿದ್ದರು. ಈ ವಿಡಿಯೋ ಕೆಳಗೆ ಹೀಗಾದರೇ ಹೇಗೆ? ಹೋರಾಟ ಅನಿವಾರ್ಯ ಎಂಬ ಸಾಲು ಕಾಣಿಸಿತು. ಹೀಗೆ ದಲಿತರ ಮೇಲೆ, ಮುಸಲ್ಮಾನರ ಮೇಲೆ ಆದಿವಾಸಿಗಳ ಮೇಲೆ ಆಗುತ್ತಿರುವ ದೌರ್ಜನ್ಯವನ್ನು ನೋಡುತ್ತಾ ಮೌನ ವಹಿಸಿರುವ ಪ್ರಜಾಪ್ರಭುತ್ವವಾದಿಗಳಿಗೆ ಅರ್ಥವಾಗಬೇಕು. ಇವರನ್ನು ಮುಗಿಸಿದ ಶಸ್ತ್ರಗಳ ನೆತ್ತರದಾಹ ತೀರಿಸಲು ಮುಂದಿನ ಬಲಿಗಳು ತಾವೇ ಎಂದು, ಇಂದು ಈ ಎಲ್ಲರನ್ನು ರಕ್ಷಿಸಬಲ್ಲ ಅಂಗ 'ಸಂವಿಧಾನ' ಮಾತ್ರ ಎಂಬುದು ತಿಳಿದುಕೊಳ್ಳಬೇಕು.

ಈಗ ದೇಶ ಅತ್ಯಂತ ದಾರುಣವಾದ ಕಾಲಘಟ್ಟದಲ್ಲಿದೆ. ಈ ಕಾರಣಕ್ಕೆ ಇಲ್ಲಿ ಸಾಂವಿಧಾನಿಕ ಮೌಲ್ಯಗಳನ್ನು ರಕ್ಷಿಸಬೇಕಾದ ಧಾವಂತದಲ್ಲಿ ಈ ದೇಶದ ದೇಶವಾಸಿಗಳು ಚಿಂತಿಸಬೇಕಾಗಿದೆ. ಈ ದೇಶದ ಮೂಲ ನಿವಾಸಿಗಳಾದ ನಾವು ಜಾತ್ಯಾಂಧರ, ಮತಾಂಧರ ಪರಹೋಗುವ ಸಾಧ್ಯತೆಯೇ ಇಲ್ಲದ ಕಾರಣ ರಾಜಕೀಯ ಅಧಿಕಾರ ಮತ್ತು ಅಸ್ತ್ರ ಹಿಡಿದು ನಮ್ಮನ್ನೆಲ್ಲಾ ಸದೆ ಬಡೆಯಲು ಹೊರಟಿದ್ದಾರೆ. ಈ ದೇಶದ ಪ್ರಜಾಪ್ರಭುತ್ವವನ್ನು ಉಳಿಸುವ ಶಕ್ತಿಯಿರುವುದು ಈ ದೇಶದ ದಲಿತರಿಗೆ ಮಾತ್ರ, ಈ ಕಾರಣಕ್ಕಾಗಿ ದಲಿತರ ನಾಯಕತ್ವದಲ್ಲಿ ಎಲ್ಲಾ ಬಹು ಜನರ, ಪ್ರಗತಿಪರರು, ಹೋರಾಟಗಾರರು, ಮಾನವತವಾದಿಗಳು ಹಾಗೂ ಶೋಷಿತಾ ಪರವಾದ ಎಲ್ಲ ಸಂಘಟನೆಗಳು ವ್ಯಕ್ತಿ ಪ್ರತಿಷ್ಠೆ ಮರೆತು ಒಂದೇ

ವೇದಿಕೆಗೆ ಬಂದು ಸಮಾನತೆಗಾಗಿ ಸಹೋದರತೆಗಾಗಿ ಹೋರಾಟ ಮಾಡುವ; ಆ ಕುರಿತು ಚಿಂತಿಸುವ ಅಗತ್ಯತೆ ಇದೆ. ಜೊತೆಗೆ ಸಂವಿಧಾನದ ತಳಹದಿಯನ್ನು ಕಾಪಾಡಿಕೊಳ್ಳಬೇಕಿದೆ.

ಎಲ್ಲಿ ದಲಿತರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ, ಎಲ್ಲಿ ವಿದ್ಯಾವಂತರಿದ್ದಾರೆ ಮತ್ತು ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದಾರೆ ಅಂತ ಪರಿಸ್ಥಿತಿಯಲ್ಲಿ ಬೇರೆಯವರು ಪ್ರಯತ್ನಿಸಿದ್ದರೂ ಕೂಡ ದೌರ್ಜನ್ಯ ಎಸಗಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ. "Even if they try to put them down, Even that can not be done" ಎಂಬ ದೇಸತ್ಯ.

ಸಮಾಜದಲ್ಲಿ ಒಬ್ಬ ಸೇವಕ, ಒಬ್ಬ ಬಡಗಿ, ಒಬ್ಬ ಕುಂಬಾರ, ಒಬ್ಬ ಚಪ್ಪಲಿ ಹೊಲಿಯುವವನು ಇರಬೇಕು ಅಂತ ಮಾಡಿ ಬಿಟ್ಟಿದ್ದಾರೆ ಈ ರಚನೆಯನ್ನು ನಾವು ಎಲ್ಲಿ ಒಡೆದಿಲ್ಲವೋ ಅಲ್ಲಿ ದೌರ್ಜನ್ಯ, ದಬ್ಬಾಳಿಕೆ ಮುಂದುವರಿದಿದೆ; ಇದನ್ನು ಹಾಗೂ ಈ ಸಮಾಜ ರಚನೆಯನ್ನು ನಾವು ಒಡೆಯಬೇಕು. ಬಾಬಾಸಾಹೇಬರೇ ಹೇಳಿದಂತೆ ಅಸ್ಪೃಶ್ಯತೆ ಮತ್ತು ದಲಿತರ ಉದ್ದಾರಕ್ಕೆ ಹುಟ್ಟಿದ ಸ್ಥಳ ಬಿಡಬೇಕು, ಕುಲಕಸುಬು ಬಿಡಬೇಕು ಹಾಗೂ ಧರ್ಮ ಪರಿವರ್ತನೆಯಾಗಬೇಕು. ನಾವೇ ಎಡ/ಬಲ (ಹೊಲೇರು, ಮಾದಿಗರು) ಅನ್ನುತ್ತಾ ಕೂತರೆ; ನಾವೇ ಕಚ್ಚಾಡುತ್ತಿದ್ದರೆ ಅದರಿಂದ ಬೇರೆಯವರು ಲಾಭ ಮಾಡಿಕೊಂಡಿದ್ದಾರೆ ಈಗಲೂ ಮಾಡಿಕೊಳ್ಳುತ್ತಿದ್ದಾರೆ. ಈ ಶೋಷಣೆ ಹಿಂಸೆಯಿಂದ ಮುಕ್ತಿ ಪಡೆಯಬೇಕಾದರೇ

೧. ಒಳ್ಳೆಯ ಶಿಕ್ಷಣ ಪಡೆಯಬೇಕು. (ದೇಶಕ್ಕೆ, ರಾಜ್ಯಕ್ಕೆ ಮೊದಲು ಬ್ಯಾಂಕ್ ಬಂದು Gm ಕೋಟಾದಲ್ಲಿ ಸೀಟುಗಿಟ್ಟಿಸಿಕೊಳ್ಳಬೇಕು. IAS, IPS, KAS, ಎಂಜಿನಿಯರ್, ವೈದ್ಯ, ಪ್ರೊಫೆಸರ್ etc.)

೨. ಒಳ್ಳೆಯ ಶಿಕ್ಷಣ ಸಂಸ್ಥೆ ತೆರೆಯಬೇಕು. (ಶಿಕ್ಷಣ ಮಟ್ಟ ಮೇಲಕ್ಕೆ ಹೋಗುವಂತ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಆಧುನಿಕ ತಂತ್ರಜ್ಞಾನದ ಎಲ್ಲಾ ಮಾಹಿತಿ ದೊರಕಬೇಕು)

೩. ಆರ್ಥಿಕ ಸಬಲತೆಯನ್ನು ಕೊಡುವಂತಹ ಉದ್ದಿಮೆಗಳನ್ನು ಸ್ಥಾಪಿಸಬೇಕು.

೪. ಸ್ವಾರ್ಥ ತ್ಯಾಗ, ಮಾನವೀಯತೆ ಇರುವವರು ರಾಜಕೀಯ ನಾಯಕರಾಗಬೇಕು. ೫. ರಾಜಕಾರಣಕ್ಕೆ ಬರದ ಹೊರತು; ನಮ್ಮ ಬದಲಾವಣೆ ಅಸಾಧ್ಯ ಎಂಬ ತಿಳಿವಳಿಕೆ ಮೂಡಿಸುವುದು.

ನಮ್ಮ ಶೋಷಿತರು ಬದಲಾಗ್ತಾರೆ ಆದರೇ ಶೋಷಕರು ಮನಸಾರೆ ಬದಲಾಗುವ ಸಾಧ್ಯತೆ ಕಡಿಮೆ. ಈಗಿನ ದಲಿತ ಮತ್ತಿತರ ಸಂಘಟನೆಗಳು ಹೊಸ ರೀತಿಯ ಅಸ್ಪೃಶ್ಯತೆಯ ಬಗ್ಗೆ ಜನರಲ್ಲಿ ತಿಳಿವಳಿಕೆ ಮೂಡಿಸಿ ಹೋರಾಟಕ್ಕೆ ಅಣಿಯಾಗಬೇಕು ಆದರೇ ಅಸ್ಪೃಶ್ಯರಿಗೆ ದೈಹಿಕ ಹಲ್ಲೆಯಾದಾಗ, ಕೊಲೆಗಳಾದಾಗ, ಆಸ್ತಿಗಳನ್ನು ಕಬಳಿಸಲಿಕ್ಕೆ ಬಂದಾಗ ಇಂಥ ಅನ್ಯಾಯಗಳ ವಿರುದ್ಧ ಒಂದು ದಿನ ಒಂದು ಘಂಟೆ ಪ್ರತಿಭಟಿಸುತ್ತವೆ; ನಂತರ ಸುಮ್ಮನಾಗುತ್ತವೆ. ಇದು ನಿಲ್ಲಬೇಕು ನ್ಯಾಯ ಸಿಗುವವರೆಗೆ ಹೋರಾಟ ಕೈಬಿಡದಂತೆ ಎಚ್ಚರಿಕೆ ವಹಿಸಬೇಕಾದ ಜರೂರತ್ತು ಇಂದು ಬಹಳ ಇದೆ ಎಂಬುದನ್ನು ಅರಿತುಕೊಳ್ಳಬೇಕು. ಇಂದು ನಾವು ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಬಲರಾದರೇ ಅಸ್ಪೃಶ್ಯತೆ, ದೌರ್ಜನ್ಯ ನಮ್ಮಿಂದ ದೂರಾಗುತ್ತವೆ.

ಶಿಕ್ಷಣ : 'ಶಿಕ್ಷಣ ಇದು ಹುಲಿಹಾಲಿದ್ದಂತೆ ಅದನ್ನು ಕುಡಿದವರು ಹುಲಿಯಂತೆ ಗರ್ಜಿಸಲೇಬೇಕು' ಎಂಬ ಬಾಬಾ ಸಾಹೇಬರ ಮಾತು ಎಲ್ಲಾ ದಲಿತರ, ಶೋಷಿತರ,



ಬಡವರ ಧ್ಯೆಯ ವಾಕ್ಯವಾಗಬೇಕು. ಅಂದು ಬಾಬಾ ಸಾಹೇಬರು ಕೇಂದ್ರ ಸಂಪುಟದ ಕಾರ್ಯ ನಿರ್ವಾಹಕ ಪರಿಷತ್ತಿನ ಸದಸ್ಯರಾಗಿ ಆಗಿನ ವೈಸರಾಯರಿಗೆ ಪರಿಶಿಷ್ಠ ಜಾತಿ | ಪರಿಶಿಷ್ಠ ಪಂಗಡದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಅತ್ಯಂತ ಉನ್ನತ ಸ್ಥಾನದಲ್ಲಿರುವಂತಹ ಯುರೋಪ, ಜರ್ಮನಿ, ಪ್ರಾನ್ಸ್, ಅಮೇರಿಕಾ, ಇಂಗ್ಲೆಂಡ್ ದಂತಹ ದೇಶಗಳ ವಿಶ್ವವಿದ್ಯಾಲಯದಲ್ಲಿ ಓದಲು ಅವರಿಗೆ ಸಹಾಯಧನ ನೀಡಬೇಕೆಂದು ಮನವಿ ಸಲ್ಲಿಸಿ ಗೆಲುವನ್ನು ಪಡೆದರು ಅಂದು ರಾಜ ಗೋಪಾಲಚಾರಿಯವರು ಅನೇಕ ಗೊಂದಲ ಸೃಷ್ಟಿಸಿ ವಿರೋಧಿಸಿದರು. ಆದರೇ ಕೊನೆಗೆ ಬಾಬಾ ಸಾಹೇಬರು '೨೬' ವಿದ್ಯಾರ್ಥಿಗಳನ್ನು ವಿದೇಶಕ್ಕೆ ಕಳಿಸುವಲ್ಲಿ ಯಶಸ್ವಿಯಾದರು ಅಂದು ಬಾಬಾಸಾಹೇಬರಿಂದ ಜಾರಿಗೆ ಬಂದ ಸೀಮು ಇಂದು ಸರ್ಕಾರಗಳು ಕೊಟ್ಟಂಗಿರಬೇಕು; ಕೊಟ್ಟಿರಬಾರದು. ಎಂಬಂತೆ ನಡೆದು ಕೊಳ್ಳುತ್ತಿವೆ. ಈಗ ಇಂತಹ ಪ್ರತಿಭಾವಂತ ವಿದ್ಯಾರ್ಥಿಗಳಿಗೆಂದೇ ಕರ್ನಾಟಕ ಸರಕಾರ ವಿದೇಶದಲ್ಲಿ ವ್ಯಾಸಂಗ ಮಾಡುವ ಪ್ರತಿಭಾವಂತ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯಧನ ಎಂಬ ಬೋರ್ಡು ಹಾಕಿದೆ. ಇದು ತನ್ನದೇ ಹೊಸ ಸ್ಕೀಂ ಎಂಬಂತೆ ತೋರಿಸುತ್ತದೆ. ಇದು ಬಾಬಾಸಾಹೇಬರದ್ದು ಎಂಬುದನ್ನು ಮರತಿವೆ. ಈ ಸೀಂ ಪಡೆಯಲು ಅನೇಕ ವಿದ್ಯಾರ್ಥಿಗಳು ಹರಸಾಹಸ ಮಾಡಿ ಸಮಾಜ ಕಲ್ಯಾಣ ಇಲಾಖೆಗೆ ಅಡ್ಡಾಡಿ, ಸುಸ್ತಾಗಿ ತಮ್ಮ ಕನಸನ್ನೇ ಬಿಟ್ಟಿವೆ. ಇತ್ತ 'ದಲಿತರು ಬಳಸಿಕೊಳ್ಳುವುದಿಲ್ಲ, ಅರ್ಹರು ಸಿಗುತ್ತಿಲ್ಲ" ವೆಂಬ ಒಂದೇ ಒಂದು ಸಾಲು ಬರೆದು ಕ್ಕೀಂ ತಲುಪದಂತೆ ನೋಡಿಕೊಳ್ಳುತ್ತಿದ್ದಾರೆ. ಜೊತೆಗೆ ಪ್ರತಿವರ್ಷ ನೂರಾರು ವಿದ್ಯಾರ್ಥಿಗಳು ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ ಎಂತೇ ಹೇಳುತ್ತಿವೆ.

ಈ ಕೆಳಗಿನ ಅಂಕಿ ಅಂಶಗಳನೊಮ್ಮೆ ನೋಡಿ

| ವರ್ಷ | ಉನ್ನತ ವ್ಯಾಸಂಗಕ್ಕೆ ಹೋದ ವಿ.ಸಂಖ್ಯೆ | |
|---|---|---|
| ೨೦೦೨-೦೬ | ೨೦೦೩-೧೬ | ೨೦೦೪-೦೧ |
| ೨೦೦೫-೦೬ | ೨೦೧೬-೦೨ | ೨೦೦೭-೦೩ |
| ೨೦೦೦೪-೦೪ | ೨೦೧೦-೦೧ | ೨೦೧೧-೦೩ |
| ೨೦೧೨-೦೬ | ೨೦೧೩-೦೫ | ೨೦೧೪-೧೪ |

೨೦೧೫-೧೯ಕಳೆದ ೨೦೦೧ ರಿಂದ ೨೦೧೫ ರ ವರೆಗೆ ಕೇವಲ '೭೭' (ಎಪ್ಪತ್ತೇಳು) ಮಾತ್ರ ಇದಕ್ಕೆ ಕಾರಣ ಇಚ್ಛಾಶಕ್ತಿಯ ಕೊರತೆ. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಸಂವಿಧಾನ, ಸಂವಿಧಾನದ ಚಳುವಳಿಕೆ ಹಾಗೂ ಮೀಸಲಾತಿಯ ಅನುಷ್ಠಾನದ ಕಡೆಗೆ ನಮ್ಮೆಲ್ಲರ ಗಮನ ಹರಿಯಬೇಕಿದೆ. ಸಂವಿಧಾನಾತ್ಮಕವಾಗಿ ನಮಗೆ ಸಿಕ್ಕ ಸವಲತ್ತುಗಳನ್ನು ಪಡೆಯುವ ಹಕ್ಕು ನಮಗಿದೆ. ಅದನ್ನು ಮಾತಿನಿಂದ ಪೆನ್ನಿನ ಮೂಲಕ ಇಲ್ಲವೆ ಚಳವಳಿಯ ಮೂಲಕ ಪಡೆಯುವಂತೆ ಹೋರಾಟ ರೂಪಿಸುವ ಅವಶ್ಯಕತೆ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಸಂವಿಧಾನ ವಿರೋಧಿಗಳಿಗೆ ಚಾಟಿಯೇಟು ನೀಡಬೇಕಾಗಿದೆ. ಅಸಮಾನತೆ, ಜಾತೀಯತೆ, ಮತಾಂಧತೆಯನ್ನೇ ಪ್ರತಿಪಾದಿಸುವವರು ಬಾಬಾಸಾಹೇಬ



ಅಂಬೇಡ್ಕರರ ಸಂವಿಧಾನವನ್ನು ಅಂಬೇಡ್ಕರರು ಬರೆಯಲಿಲ್ಲವೆಂದು ಬಿಟ್ಟರೆ ಸಂವಿಧಾನವನ್ನು ವಿರೋಧ ಮಾಡುವುದು ಸುಲಭ ನಂತರ ಅದರ ಮೂಲ ತತ್ವಗಳಾದ ಸಮಾನತೆ ಸಹೋದರತ್ವ, ಪ್ರಜಾಪ್ರಭುತ್ವಗಳನ್ನು ಎದುರಿಸಬಹುದು. ದಲಿತ ಅಸ್ಪೃಶ್ಯರೊಬ್ಬರು ಒಂದು ಮಹತ್ಕಾರವನ್ನು ಮಾಡಿದಾಗ ಅದನ್ನು ಪರಿಗಣಿಸಲು ಈ ದೇಶದ ಸನಾತನ ಸ್ಪಶ್ಯ ಮನಸ್ಸು ಎಷ್ಟೇಲ್ಲಾ ಪರಿದಾಡುತ್ತದೆ. ಅಸಹನೆಯಿಂದ ಒದ್ದಾಡುತ್ತದೆ ಎಂಬುದಕ್ಕೆ ಬಾಬಾಸಾಹೇಬ ಅಂಬೇಡ್ಕರರ ಮಾತುಗಳು ಹೀಗಿವೆ "ಅವರಿಗೆ ಒಂದು ರಾಮಾಯಣದಂತಹ ಎಪಿಕ್ ಬೇಕಿತ್ತು. ಅದಕ್ಕೆ ಶೂದ್ರ ವಾಲ್ಮೀಕಿಯನ್ನು ನಂಬಬೇಕಾಯಿತು. ಅವರಿಗೆ ಮಹಾಭಾರತದಂತಹ ಎಪಿಕ್ ಬೇಕಾದಾಗ ವ್ಯಾಸನಂತಹ ಮತ್ತೊಬ್ಬ ಶೂದ್ರನನ್ನು ಆದರಿಸಬೇಕಾಯಿತು. ಅವರಿಗೆ ಸಂವಿಧಾನ ಬರೆಯ ಬೇಕೆನಿಸಿದಾಗ ಅಸ್ಪೃಶ್ಯನಾದ ನಾನು ಬೇಕಾಯಿತು" ಎಂಬುದು "ಕೆಲಸಕ್ಕೆ ನೀವು ಊಟಕ್ಕೆ ನಾವು" ಎಂಬುದನ್ನೇ ಧೈಯ

ವಾಕ್ಯವನ್ನಾಗಿಸಿಕೊಂಡವರೇ ಸನಾತನ ಸ್ಪಶ್ಯ ಮನಸ್ಸುಗಳು ಎನಿಸದಿರದು. ಶಾಸನ ರೂಪಿಸುವ ಜಾಗಕ್ಕೆ ನಾವು ಹೋದಾಗಲೇ ನಮ್ಮ ಸಮಸ್ಯೆಗಳಿಗೆ ಪರಿಹಾರ ಎಂದರು ಬಾಬಾ ಸಾಹೇಬರು. ಆದರೇ ನಮ್ಮ ದಲಿತ ಪ್ರತಿನಿಧಿಗಳಲ್ಲಿ ಅನೇಕರು ಶಾಸನ ರೂಪಿಸುವ ಪವಿತ್ರ ಜಾಗದಲ್ಲಿದ್ದರೂ ತಾವು ನಡೆದುಬಂದ ಹಾದಿ ಹಾಗೂ ತಮ್ಮವರ ಕಷ್ಟಗಳನ್ನು ಮರೆತು ತಮಗೆ ದಕ್ಕಿಸಿಕೊಳ್ಳಬೇಕಾದ ಭಾಗ್ಯಗಳಲ್ಲೇ ಮುಳುಗಿಹೋದರು; ಇನ್ನೂ ಮುಳುಗುತ್ತಲೆ ಇದ್ದಾರೆ. ಇಂತಹದನ್ನು ನೋಡಿಯೇ ಇದೇನೆಲದ ಡಾ. ಚನ್ನಣ್ಣ ವಾಲೀಕಾರ ಎಂಬ ಕವಿ ಮನಸ್ಸು

ನೀ ಹೋದ

ಮರುದಿನ ಮೊದಲಂತೆ

ನಮ್ಮ ಬದುಕು ಆಗ್ಯದೋ ಬಾಬಾಸಾಹೇಬ

ನಿನ್ನಂಗೆ ದುಡಿವವರು

ಕಳಕಳಿಯ ಪಡುವವರು

ಇನ್ನೂ ತನ ಬರಲಿಲ್ಲ

ಒಬ್ಬ ಎಂದು ಮಮ್ಮಲ ಮರಗುತ್ತದೆ.

ಮೀಸಲಾತಿ ಪಡೆದು ಆರಿಸಿ ಹೋದವರಿಂದಲೇ ಹೀಗಾಗುತ್ತಿದ್ದರೆ ಬೇಲಿಯೇ ಎದ್ದು ಹೊಲ ಮೆಯ್ದಂತೆ, ತಾಯಿಯೇ ತನ್ನ ಮಗನಿಗೆ ವಿಷವುಣಿಸಿದಂತೆ ಆಗುತ್ತಿದೆ. ಅಂದಹಾಗೆ ಮೀಸಲಾತಿ ಎಂದರೇ ಪ್ರಾತಿನಿಧ್ಯ ಬಾಬಾಸಾಹೇಬರೇ ಹೇಳುವಂತೆ "ಮೀಸಲಾತಿ ಎನ್ನುವುದು ಸರ್ಕಾರಿ ನೀತಿಯಲ್ಲ, ರಾಜಕಾರಣದ ಗಿಮಿಕ್ ಅಲ್ಲ ಧರ್ಮಾರ್ಥ ಅನುಕಂಪವೂ ಅಲ್ಲ, ಅದೊಂದು ಸಾಂವಿಧಾನಿಕ ಕರ್ತವ್ಯ" ಎಂದಿದಾರೆ. ಈ ಮೀಸಲಾತಿ ಇದ್ದ ಕಾರಣ ಸರ್ಕಾರಿ ಕ್ಷೇತ್ರದಲ್ಲಿ ಇಲ್ಲಿನ ದಲಿತರು, ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳವರು ಕನಿಷ್ಠ ಪ್ರಾತಿನಿಧ್ಯ ಪಡೆಯಲು ಸಾಧ್ಯವಾಗಿರುವುದು ನಮ್ಮ ಕಣ್ಣ ಮುಂದಿರುವ ವಾಸ್ತವ" ಇದಿಲ್ಲದೇ ಹೋಗಿದ್ದರೇ ಪೇಳ್ವೆಗಳ ಕಾಲದ ಶೋಷಣೆಯೇ ಮುಂದುವರಿಯುತ್ತಿತ್ತಾ ಈ ಕಾರಣಕ್ಕಾದರೂ ನಾವೆಲ್ಲ ಬಾಬಾ ಸಾಹೇಬರಿಗೆ ಋಣಿ ಇರಬೇಕು. ೧೯೯೨ ರಲ್ಲಿ ಕೇಂದ್ರದಲ್ಲಿನ ಅಂದಿನ ಸರ್ಕಾರ "ಖಾಸಗೀಕರಣದ ನೀತಿಯನ್ನು ಜಾರಿಗೆ ತಂದ ಪರಿಣಾಮ ಮೀಸಲಾತಿ ಇದ್ದ ಸರ್ಕಾರಿ ಕ್ಷೇತ್ರವನ್ನು ನಗಣ್ಯ ಮಾಡಿತು.

ಇದರ ಪರಿಣಾಮ ೧೯೯೪ರಲ್ಲಿ ಶೇ. ೧.೫೩ ರಷ್ಟಿದ್ದ ಸರ್ಕಾರಿ ಉದ್ಯೋಗದ ಸ್ಥಾನಗಳು ೧೦೧೦ರ ಹೊತ್ತಿಗೆ ಶೇ.೦.೬೫ ಕ್ಕೆ ಕುಸಿಯಿತು. ಆದರೇ ಇದೇ ಅವಧಿಯಲ್ಲಿನ ಖಾಸಗಿ ಉದ್ಯೋಗದಲ್ಲಿನ ಸ್ಥಾನಗಳು ಶೇ. ೦.೪೪ ರಿಂದ ಶೇ.೧.೭೫ಕ್ಕೆ ಏರಿಕೆಯಾಯಿತು. ಪರಿಣಾಮ ಮೀಸಲಾತಿ ಇದ್ದರೂ ಸರ್ಕಾರದಲ್ಲಿ ಉದ್ಯೋಗಗಳಿಲ್ಲ. ಅತ್ತ ಮೀಸಲಾತಿ ಇಲ್ಲದ ಖಾಸಗಿ ವಲಯದಲ್ಲಿ ಉದ್ಯೋಗಗಳು ಸಾಕಷ್ಟಿದ್ದರೂ SC/ST/OBC ಗಳಿಗೆ ಮೀಸಲಾತಿ ಇಲ್ಲದ ಕಾರಣ ಈ ವರ್ಗಗಳಿಗೆ ಅವಕಾಶಗಳು ಸಿಗದಂತಾದವು, ಸಂವಿಧಾನ ವಿರೋದಿಸುವ ಸ್ವಶ್ಯ ಮನಸ್ಸುಗಳು ಕಳೆದ ೬೦/೭೦ ವರ್ಷಗಳಿಂದಲೂ ಸಾಕಷ್ಟು ಮೀಸಲಾತಿ ನೀಡಿಲ್ಲವೆ, ಇಂತಹವರಿಗೆ ಖಾಸಗಿ ಕ್ಷೇತ್ರದಲ್ಲಿ ಯಾಕೆ ಮೀಸಲಾತಿ? ನೀಡಬೇಕೆಂದು ಮೊತಂಡವಾದ ಮಾಡುತ್ತಾರೆ. ಆದರೇ ಸರ್ಕಾರಿ ಮೀಸಲಾತಿ ನೀಡಿದ್ದರೂ ಅದು ಸಮರ್ಪಕವಾಗಿ ಅನುಷ್ಠಾನಕ್ಕೆ ಬಂದಿಲ್ಲ ಎಂಬುದಕ್ಕೆ ಈ ಕೆಳಗಿನ ಅಂಕಿ ಸಂಖ್ಯೆಗಳೇ ಸಾಕ್ಷಿಯಾಗಿ ನಿಂತಿವೆ.

| ಜಾತಿ | ಜನಸಂಖ್ಯೆ | ಗ್ರೂಪ್ ಎ | ಗ್ರೂಪ್ ಬಿ | ಗ್ರೂಪ್ ಸಿ | ಗ್ರೂಪ್ ಡಿ |
|---|---|---|---|---|---|
| ದಲಿತರು SC<br>ST | ಶೇ ೨೦%<br>ಶೇ ೧೦% | ಶೇ೧೧.೫%<br>ಶೇ೪.೮% | ೧೪.೯%<br>೬.೧% | ೧೬.೪%<br>೭೭% | ೨೩%<br>೬.೮% |
| ಹಿಂದುಳಿದವರು<br>ಅಲ್ಪಸಂಖ್ಯಾತರು<br>(ಧಾರ್ಮಿಕ<br>ಮುಸ್ಲಿಂ)<br>ಮೇಲ್ವರ್ಗ | ಶೇ ೫೫ %<br><br><br><br>ಶೇ ೧೫% | ೬.೯%<br><br><br><br>ಶೇ ೭೬.೮೧% | ೭.೩%<br><br><br><br>೭೧.೮% | ೧೫.೩%<br><br><br><br>೬೦.೬% | ೧೭%<br><br><br><br>೫೩.೨% |

ಈ ಅಂಕಿ ಅಂಶಗಳ ಪ್ರಕಾರ ಜನಸಂಖ್ಯೆಯಲ್ಲಿ

ಶೇ ೧೫ ರಷ್ಟಿರುವ ಮೇಲ್ವರ್ಗ (ಬ್ರಾಹ್ಮಣ ಬನಿಯಾಗಳು) ಎ.ಬಿ.ಸಿ.ಡಿ. ಎಂಬ ನಾಲ್ಕು ಗುಂಪುಗಳಲ್ಲಿ ತಮ್ಮ ಜನಸಂಖ್ಯೆಗಿಂತ ಹೆಚ್ಚು ಪಾಲನ್ನು ಪಡೆದಿದ್ದಾರೆ. SC/ST/ OBC ಮೈನಾರಿಟೀಸ್ ಅಹಿಂದ ವರ್ಗಗಳೇ ಮುಂತಾದ ಬಹುಜನರು ಅವರ ಜನಸಂಖ್ಯೆಗಿಂತ ಗಣನೀಯವಾಗಿ ಕಡಿಮೆ ಪಾಲನ್ನು ಪಡೆದಿದ್ದಾರೆ. ಮೀಸಲಾತಿ ಬಡ್ತಿ ಅಂತು ದೂರದ ಮಾತಾಗಿದೆ. ಈಗ ಮೀಸಲಾತಿ ಪ್ರಮಾಣ ಹೆಚ್ಚಿಗಾಗಿ ಹೋರಾಟ ಮಾಡುತ್ತಿದ್ದರೂ ಅದರಿಂದ ಪ್ರಯೋಜನವೇನು ಆಗಿಲ್ಲ. ಖಾಸಗಿಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಸರಕಾರ ತನ್ನ ಬಂಡವಾಳವನ್ನು ಪ್ರತಿದಿನ ಹಿಂತೆಗೆದು ಕೊಳ್ಳುತ್ತಿದೆ. ಖಾಸಗೀಕರಣವೇ ಈಗ ಹೆಚ್ಚಾಗಿ ವಿಜೃಂಭಿಸುತ್ತಿದೆ.

ಒಂದು ಕಾಲದಲ್ಲಿ ಇದ್ದಷ್ಟು ಸರಕಾರಿ ನೌಕರಿಗಳು ಈಗ ಇಲ್ಲ. ಸರಕಾರ ತನ್ನ ಕೈಯಲ್ಲಿರುವ ಎಲ್ಲಾ ಉದ್ಯೋಗಗಳನ್ನು ವಿವಿಧ ರಂಗಗಳನ್ನು ಒಂದೊಂದಾಗಿ ಬಿಟ್ಟು ಕೊಡುತ್ತಿದೆ. ಅವೆಲ್ಲ ಖಾಸಗಿಯವರ ಪಾಲಾಗುತ್ತಿವೆ. ಇದರಿಂದ ಮೀಸಲಾತಿಗೆ ಹೆಚ್ಚು ಅನಾನುಕೂಲವೇ ಆಗಿದೆ. ಹೀಗೆಯೇ ಮುಂದುವರೆದರೆ ಮಂದಕ್ಕೆ ಸರಕಾರ ಕೇವಲ ಮಹತ್ವದ್ದನ್ನು ಮಾತ್ರ ತನ್ನಲ್ಲಿಟ್ಟುಕೊಳ್ಳುತ್ತದೆ. ಉದಾ. ಸೈನ್ಯ, ಪೊಲೀಸು, ಅಂತರಾಷ್ಟ್ರೀಯ,



ವ್ಯವಹಾರ, ಹಣಕಾಸು, ಕಂದಾಯ, ಇಂತವನ್ನು ಮಾತ್ರ ಇಟ್ಟುಕೊಂಡು ಬೇಕಿಲದನ್ನು ಬಿಟ್ಟು ಕೊಡುತ್ತದೆ. ಈಗ ಜಾಗತಿಕವಾಗಿ ಈ ಬದಲಾವಣೆ ಅತ್ಯಂತ ವೇಗವಾಗಿದೆ.

ಹೀಗಾದಾಗ-

೧. ಮೀಸಲಾತಿಯ ಗತಿ ಏನು?

೨. ಶೋಷಿತ ಜನಾಂಗದ ಗತಿ ಏನು?

೩. ಅಸ್ಪಶ್ಯಜನಾಂಗದ ಗತಿ ಏನು?

೪. ಬುಡಕಟ್ಟು ಜನಾಂಗದ ಗತಿ ಏನು?

೫. ತೀರ ಹಿಂದುಳಿದವರ ಗತಿ ಏನು?

ಇದರ ಕುರಿತು ನಾವೀಗ ಜಾಗೃತರಾಗಿ ಯೋಚನೆ ಮಾಡಬೇಕಿದೆ. ಇದು ಸ್ಥಿತ್ಯಂತರ ಇದರಿಂದ ಬಿಡುಗಡೆ ಹೊಂದುವುದು ಹೇಗೆ? ಇದು ನಮ್ಮನ್ನು ಕಾಡಬೇಕಿರುವ ಪ್ರಶ್ನೆ ಎಲ್ಲಿ ಕಾಡುವಿಕೆಯಿದೆ; ಅಲಿ ಕಟ್ಟುವಿಕೆ ಇದೆ. ಈ

ಮೇಲಿನ ಸಮಸ್ಯೆಗೆ ಸೂಷ್ಮತೆಯನ್ನು ಆಳವನ್ನು ಅರ್ಥಮಾಡಿಕೊಳ್ಳಬೇಕು. ಮತ್ತೊಂದುಕಡೆ ಪರಾಯ ಮಾರ್ಗಗಳ ಶೋಧನೆ ಮಾಡಿಕೊಳ್ಳಬೇಕು. ಒಂದು ಕಡೆ ವಿದ್ಯಾಭ್ಯಾಸ ಮತ್ತು ಹೋರಾಟ ಇದ್ದೇ ಇದೆ. ಇದರ ಜೊತೆಜೊತೆಗೆ

೧. ಪ್ರತಿಯೊಂದರಲ್ಲೂ ಸ್ಪರ್ಧಿಸುವ ಮನೋಭಾವ ಬೆಳೆಸಿಕೊಳ್ಳಬೇಕು.

೨. ಮೊದಲು ನಮಗೆ ಮೀಸಲಾತಿ ಸಿಗುತಿತ್ತು ಎಂಬ ನಂಬಿಕೆ ಇತ್ತು. ಈಗ ಇಲ್ಲ. ಅದಕ್ಕಾಗಿ ಸ್ಪರ್ಧಿಸುವ ಮನೋಭಾವ ಬೆಳೆಸಿಕೊಳ್ಳಬೇಕು.

೩. ಆಧುನಿಕ ತಂತ್ರಜ್ಞಾನದ ಪರಿಣಿತಿಯನ್ನು ಸಾಧಿಸಬೇಕು.

೪. ನಾವು ಮೊದಲು ಹ್ಯಾಗೋ ಇದ್ದರೂ, ಕೆಲಸ ಮಾಡಿದ್ದರೂ ಒಮ್ಮೊಮ್ಮೆ ನಡೀತ್ತಿತ್ತು. ಈಗ ಎಲ್ಲ ಕಡೆ ಟೆಕ್ನಾಲಾಜಿ ಬಂದಿದೆ. ಟೆಕ್ನಾಲಜಿಯ ಮೂಲಕ ನಮಗೆ ಮಾಹಿತಿ ದೊರಕುತ್ತದೆ. ಹಿರಿಯ ಪ್ರಾಧ್ಯಾಪಕರಾದ ಪ್ರೊ. ಎಸ್. ಎಂ. ಕೋರಿಶೆಟ್ಟರ್ ಹೇಳುವಂತೆ "ಹಡದ ತಂದೆ-ತಾಯಿ ಬಿಟ್ಟು ಅಂತರ್ ಜಾಲದಲ್ಲಿ ಎಲ್ಲವೂ ಸಿಗುತ್ತದೆ" , ಕಾರಣ ಟೆಕ್ನಾಲಾಜಿಯ ಮೇಲೆ ಹಿಡಿತ ಸಾಧಿಸಬೇಕು. H.

೫. ಈಗ ನಮ್ಮ ಗುರಿ ರಾಜ್ಯ, ರಾಷ್ಟ್ರ ಅಲ್ಲ ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆ ಇರಬೇಕು. ಅಂದರೇ ಮಾತ್ರ ನಮಗೆನ್ಯಾಯದ ಭರವಸೆ ಸಿಗುತ್ತದೆ.

೬. ವೈದ್ಯಕೀಯ, ಇಂಜನಿಯರಿಂಗ್ ಕ್ಷೇತ್ರದ ಜೊತೆಗೆ ಇನ್ನಿತರ ಕ್ಷೇತ್ರ ಗಳಲ್ಲೂ ಮುನ್ನುಗ್ಗಬೇಕು. ಎಲ್ಲದರಲ್ಲೂ ಅರ್ಹತೆ ಪಡೆಯಲೇಬೇಕು.

೭. ರಾಜ್ಯದ, ದೇಶದ, ಅಂತಾರಾಷ್ಟ್ರೀಯ, ಕಾನೂನು ನಿಯಮ ಬದಲಾವಣೆ, ಹೋರಾಟ ಇದರ ಬಗ್ಗೆ ತಿಳವಳಿಕೆ ಪಡೆಯಬೇಕು.

೮. ಈಗಿರುವ ಸಂಘಟನೆಗಳನ್ನು ಹೊಸ ರೀತಿಯಲಿ ಕಟ್ಟುವ ಹಾಗೂ ಒಂದೇ ವೇದಿಕೆಗೆ ತರುವ ಪ್ರಯತ್ನ ಮಾಡಬೇಕು; ಒಟ್ಟಾರೇ ಸಂಘಟನೆಗಳ ಶಕ್ತಿ ಹೆಚ್ಚಾಗ ಬೇಕು.

೯. ನಮ್ಮಲ್ಲಿಗೆ ವ್ಯಕ್ತಿ ಪ್ರತಿಷ್ಠೆ, ಭಿನ್ನಾಭಿಪ್ರಾಯ, ಒಡಕು ತೊಡಕುಗಳನ್ನು ಮರೆತು ಒಂದಾಗಿ ಹೋರಾಟಕ್ಕಿಳಿಯಬೇಕೆಂಬುದನ್ನು ಮನಗಾಣಬೇಕು. ಕೇವಲ ದಲಿತ ಬಂಡಾಯ ಸಾಹಿತ್ಯಕಷ್ಟೇ ಮಾತ್ರ ಸೀಮಿತಗೊಳಿಸದೇ ಸಾಹಿತ್ಯೇತರ ಎಲ್ಲಾ ಜನರು ಇದರಲ್ಲಿರಬೇಕು. ಉದಾ:- ಕಾರ್ಮಿಕರು, ನೌಕರರು, ರೈತಾಪಿ ವರ್ಗದ

ಜನರು, ಬೇರೆಬೇರೆ ವರ್ಗಕ್ಕೆ ಸೇರಿದ ಸ್ವಯಂ ಉದ್ಯೋಗ ಮಾಡುವವರು, ಉದ್ಯೋಗ ರಹಿತರು, ನಿರಾಶ್ರಿತರು, ಅಲೆಮಾರಿಗಳು ಇವರನ್ನೆಲ್ಲಾ ಒಳಗೊಂಡಂತಹ ಒಂದು ಸಂಘಟನೆಯಾಗಿ ಸಮಷ್ಟಿರೂಪ ಪಡೆಯಬೇಕು. ದೇವನೂರ ಮಹಾದೇವರ ಸಾಬಂಜಾ ಅನ್ನೋದು ದೊಡ್ಡದು ಕಣೋ' ಎಂಬ ಕವಿತೆಯ ಆಶಾಯದಂತಿರಬೇಕು.

ವ್ಯಕ್ತಿ ಕೇಂದ್ರಿತ ಸಂಘಟನೆಯಿಂದ ಸಮಾಜ ಕೇಂದ್ರಿತವಾದ ಸಂಘಟನೆ ಮಾಡುವತ್ತ ಹೆಜ್ಜೆ ಇಡಬೇಕು. ಇದರಲ್ಲಿ ಎಲ್ಲಾ ಶೋಷಿತ ಜಾತಿ ಜನವರ್ಗಗಳ ಬಡರೈತರನ್ನು, ಬಡಜನರನ್ನು, ತುಳಿತಕ್ಕೊಳಗಾದವರನ್ನು ಸೇರಿಸಿ ಶಕ್ತಿಶಾಲಿಯನ್ನಾಗಿಸಬೇಕು. ಒಂದು ಕಾಲಕ್ಕೆ ನಮ್ಮ ವೈರಿ ಮೇಲ್ವರ್ಗದವನು; ಗುರಿಗೊತ್ತಿತ್ತು. ಈಗ ವೈರಿ ಅನ್ನುವವನು ಕಣ್ಮರೆ ಏನು ಬಹುರಾಷ್ಟ್ರೀಯ ಕಂಪನಿಯೋ, ಯಾವುದೇ ದೇಶದಲ್ಲಿರುವ ಮಾಲಿಕನೋ ಏನು ಕಂಪ್ಯೂಟರೋ, ಏನು ತಂತ್ರಜ್ಞಾನವೋ ಏನು ನಮ್ಮ ಜಾತಿಯ ಶ್ರೀಮಂತನೋ ಇವೆಲ್ಲ ತುಂಬ ಸಮಸ್ತಾತ್ಮಕ. ಈ ಬಗ್ಗೆ ಎಚ್ಚರಿಕೆ ಹಾಗೂ ತಿಳುವಳಿಕೆಯನ್ನು ಕೊಡುವುದಕ್ಕೆ ಸೂಕ್ತವಾದಂತಾ ವ್ಯವಸ್ಥೆ ಪರಾಯ ಮಾರ್ಗಗಳ ಶೋಧನೆ, ಅಧ್ಯಯನ, ನಿರಂತರ ಸಂಶೋಧನೆ ಮಾಡಬೇಕು. ಸಾಹಿತ್ಯ, ಕಲೆ, ಲಲಿತಕಲೆ, ನಮ್ಮೆದುರಿಗಿರುವ ವಿದ್ಯೆ, ತಂತ್ರಜ್ಞಾನವನ್ನು ಪೂರಕವಾಗಿ ಬಳಸಿ ಕೊಳ್ಳಬೇಕು. ಕೇವಲ ಸರ್ಕಾರದ ಮರ್ಜಿಗೋ, ನಾಯಕರ ಮರ್ಜಿಗೋ ಕೆಲಸ ಮಾಡುವ ನಾಯಕತ್ವವಿದ್ದರೇ ಪ್ರಯೋಜನವಿಲ್ಲ. ಕಳೆದ ೧೦/೨೦ ವರ್ಷಗಳಲ್ಲಿ ಸಂಘಟನೆಯಲ್ಲಿ ಬಿರುಕುಬಿಟ್ಟು, ಈಗ ಕಳೆಗುಂದಿದೆ ಇದಕ್ಕೆ ಕಾರಣ ಮುಂಚೂಣಿಯಲ್ಲಿದ್ದವರು ಬೇರೆಬೇರೆ ಆಮಿಷಗಳಿಗೆ ಒಳಗಾದದ್ದೇ ಹೆಚ್ಚು. ಇವೆಲ್ಲ ಅಡ್ಡಿ ಆತಂಕಗಳನ್ನು ನಿವಾರಿಸಿಕೊಳ್ಳಬೇಕು.

ಜಾಗತೀಕರಣ, ಉದಾರೀಕರಣವನ್ನು ನಿಲ್ಲಿಸುವ ಸ್ಥಿತಿಯಲ್ಲಿ ನಾವಿಲ್ಲ. ಇದರೊಳಗೂ ಕೂಡ ನಮ್ಮ ಅಸ್ತಿತ್ವ ಉಳಿಸಿ ಕೊಳ್ಳಲು ನಮಗಿರುವುದು ಒಂದೇ ದಾರಿಯೆಂದರೇ ವ್ಯಕ್ತಿತ್ವ ವಿಕಸನ ಹಾಗೂ ಹೋರಾಟ. ಸಮಾಜದಲ್ಲಿ, ರಾಷ್ಟ್ರದಲ್ಲಿ, ರಾಜಕಾರಣದಲ್ಲಿ ಇತ್ತೀಚೆಗೆ ಹಿಂಸೆ ಮತ್ತು ವಿಚಿದ್ರಕಾರಕ ಶಕ್ತಿಗಳ ಮೇಲುಗೈ ಆಗುತ್ತಿರುವುದನ್ನು ನಾವುಸುಮ್ಮನೇ ನಿಂತು ನೋಡಬಾರದು. ಅದನ್ನು ತಪ್ಪಿಸುವ ಪ್ರಯತ್ನ ಮಾಡಬೇಕು. ಎಲ್ಲದರಿಂದ ತಿಳಿವಳಿಕೆ ಪಡೆದು ಮುನ್ನಡೆಯ ಬೇಕು. ಪ್ರಸ್ತುತ ದಲಿತರ ಸಮಸ್ಯೆ ಸವಾಲುಗಳಿಗೆ ಎದೋಟ್ಟು ಅವುಗಳನ್ನು ಬಿಚ್ಚುವ, ಬಗೆಯುವ ಮತ್ತು ಎದುರಿಸುವ ಛಲ ಎದೆಗಾರಿಕೆಯನ್ನು ತೋರಿಸಬೇಕಾಗಿದೆಯೋ ಅವರು ಅಸ್ಟ್ರಿಚ್ ಪಕ್ಷಿಯಂತೆ ತಮ್ಮ ಮುಖ ಹುದುಲಲ್ಲಿ ಹುಗಿಸಿ ಪ್ರಸಕ್ತ ಸಮಸ್ಯೆಗಳ ಸನ್ನಿವೇಶದಿಂದ ವಿಮುಖರಾಗುತ್ತಿದ್ದಾರೆ. ಬಹಳಷ್ಟು ವಿದ್ಯಾವಂತರು ಬದಲಾವಣೆಯ ಒಂದು ಸೊಲ್ಲನ್ನು ಎತ್ತದೆ ಇರುವುದರಿಂದ ನೆಲದಾಚಿನ ಸಮುದಾಯಗಳು 'ಬೆಂಡಿಗೇರಿ ಚಂದ್ರಗುತ್ತಿ, ಖೈರ್ಲಾಂಜಿ, ಕಂಬಾಲಪಲ್ಲಿ, ಕರಂಚೇಡು, ಬಥಾನಿ ತೋಲಗಳಂತಹ ದೌರ್ಜನ್ಯಗಳನ್ನು ಎದುರಿಸಲೇಬೇಕಾಗಿದೆ. ಪರಿಣಾಮ ದಲಿತ ಜನಸಾಮಾನ್ಯ ಮತ್ತು ದಲಿತ ಬುದ್ಧಿ ಜೀವಿಗಳ ಅಂದರೇ ದಲಿತ ಶ್ರಮಿಕರ ಹಾಗೂ ದಲಿತ ಧನಿಕರ ನಡುವಿನ ಕಂದರ ದಿನೇ ದಿನೇ ಹೆಚ್ಚುತ್ತಿದೆ. ನಮ್ಮ ನಡುವಿನ ಬಿರುಕುಮಾಯವಾಗಿ ಪರಸ್ಪರ ಸಮೀಪಿಸಿ

ಒಪ್ಪಿಕೊಳ್ಳುವ, ಅಪ್ಪಿಕೊಳ್ಳುವ ಲಕ್ಷಣಗಳು ಕಂಡುಬರುತ್ತಿಲ್ಲ. ಒಂದು ಸಮುದಾಯದ ಆರ್ಥಿಕ ಸ್ಥಿತಿ ಹದಗೆಟ್ಟರೆ, ಉಳಿದ ಕ್ಷೇತ್ರಗಳಲ್ಲೂ ಅದಕ್ಕೆ ಸಂವಾದಿಯಾದ



ಅವನತಿ ಕಾಣಿಸಿಕೊಳ್ಳುತ್ತದೆ. ಆರ್ಥಿಕ ದುಸ್ಥಿತಿಗೂ ಸಾಮಾಜಿಕ ಅವನತಿಗೂ ನೇರವಾದ ಸಂಬಂದವಿರುತ್ತದೆ.

೨೦೦೭ರಲ್ಲಿ ಉತ್ತರ ಪ್ರದೇಶ (UP) ದಲ್ಲಿ GIM (Global Inv estment Meet) ನಡೆದಾಗ ಆಗಿನ CM ಕುಮಾರಿ ಮಾಯಾವತಿಯವರು ನಾವು ನಿಮಗೆ ಭೂಮಿ ನೀಡುತ್ತೇವೆ. ನೀರು ನೀಡುತ್ತೇವೆ. ಮಾನವ ಸಂಪನ್ಮೂಲ, ವಿದ್ಯುತ್ ರಕ್ಷಣೆಯೊಂದಿಗೆ ಅನೇಕ ರೀತಿಯ ಸಬ್ಸಿಡಿಗಳನ್ನು ನೀಡುತ್ತೇವೆ. ಆದರೇ ನೀವು ನಮಗೇನು ನೀಡುತ್ತೀರಿ? ಎಂಬ ಪ್ರಶ್ನೆಯಿಟ್ಟರು. ಆಗ GIM ನವರು ನಾವೇನು ಮಾಡಬೇಕೆಂದರು? ತಕ್ಷಣ ಮಾಯಾವಲಿ - ೧೦% SC/ST ಗಳಿಗೆ

- ೧೦% OBC ಅಲ್ಪಸಂಖ್ಯಾತರಿಗೆ

೧೦% ಮೇಲ್ಜಾತಿಯ ಬಡವರಿಗೆ

ಮೀಸಲಾತಿ ನೀಡಬೇಕೆಂದರು. ಇದಕ್ಕೆ ಜಿಮ್ ಒಪ್ಪಿತು. ಇದೇ ಮಾದರಿ ಕರ್ನಾಟಕದಲ್ಲಿ ಜಾರಿಯಾಗಬೇಕೆಂದು ಬಹುಜನ ವಿದ್ಯಾರ್ಥಿಸಂಘ ಬೀದಿಗಿಳಿದು ಹೋರಾಟಮಾಡಿದಾಗ ಬೆಂಗಳೂರಿನಲ್ಲಿ

ಅಮಾನುಷವಾಗಿ ಲಾಠಿಚಾರ್ಜ್ ಮಾಡಿಸಲಾಯಿತು. ಇದಕ್ಕೆ ಕಾರಣ ಖಾಸಗಿ ಕಂಪನಿಗಳ ಕಪಿಮುಷ್ಠಿಯಲ್ಲಿರುವ ಎಲ್ಲಾ ರಾಜಕೀಯ ಪಕ್ಷಗಳು ಈ ಹೊಣೆಯನ್ನು ಹೊರಬೇಕಾಗಿದೆ. ಕಾರ್ಪೊರೇಟ್ ಕಂಪನಿಗಳು ಧಾರಾಳವಾಗಿ ಭೂಮಿ, ನೀರು, ವಿದ್ಯುತ್, ರಕ್ಷಣೆ, ಪಡೆವುದರೊಂದಿಗೆ ತೆರಿಗೆ ರಿಯಾಯಿತಿ ಪಡೆದು ಕೊಳ್ಳುತ್ತಿವೆ. ಒಂದು ಸರ್ಕಾರ (೨೦೧೧-೧೨) ಒಂದು ವರ್ಷದಲ್ಲಿ ಖಾಸಗಿ ಕಂಪನಿಗಳಿಗೆ ೦೫ ಲಕ್ಷ ಕೋಟಿ ಧನ ಸಹಾಯ ನೀಡಿದೆ. ಇದು ನಮ್ಮ ತೆರಿಗೆ ಹಣ ವಾಗಿರುವುದರಿಂದ ಸಾಂವಿಧಾನಿಕವಾಗಿ ನಮಗೆ ನೀಡಬೇಕಾದ ಮೀಸಲಾತಿಯನ್ನು ಏಕೆ ನೀಡುತ್ತಿಲ್ಲ? ಕೇಳುವ ಛಾಟಿ ಎದೆಗಾರಿಕೆ ಯಾವುದೇ ಪಕ್ಷಕ್ಕೆ ಇದ್ದಂತೆ ಕಾಣುತ್ತಿಲ್ಲ. ಅಮೇರಿಕಾದಲ್ಲಿರುವ ಮೈಕ್ರೋ ಸಾಫ್ಟ್, ಜನರಲ್ ಮೋಟಾರ್, ಫೋರ್ಡನಂತಹ ಖಾಸಗಿ ಕಂಪನಿಗಳು ತಮ್ಮ ದೇಶದ ಕಪ್ಪು ಜನರಿಗೆ ರೆಡ್ ಇಂಡಿಯನ್‌ರಿಗೆ ಮೀಸಲಾತಿ ನೀಡಿವೆ. ಈ ಸದ್ಗುಣವನ್ನು ನಮ್ಮ ಭಾರತೀಯ ಕಂಪನಿಗಳೇಕೆ ಅನುಸರಿಸುತ್ತಿಲ್ಲ?" ಕೇಳಬೇಕಾದ ಬಾಯಿಗಳು ಹಣದಿಂದ ತಮ್ಮ ಬಾಯನ್ನು ಹೊಲಿದು ಕೊಂಡಿವೆ ಎನಿಸುತ್ತದೆ.

ಹಿಂದೆಂದಿಗಿಂತಲೂ ಇಂದು ಈ ಹೊತ್ತು ಸಮಾಜ, ಧರ್ಮ, ರಾಜಕಾರಣಗಳ ಅಪವಿತ್ರ ಮೈತ್ರಿ ಎಲ್ಲಾ ಭರವಸೆಗಳನ್ನು ಮಾನವೀಯತೆಯ ನಿಜದ ನೆಲೆಗಳನ್ನು ನಾಶಗೊಳಿಸಿವೆ. ಇಂದಿಗಿಂತ ನಿನ್ನೆಗಳಲ್ಲಿ ಈ ನಾಡಿನಲ್ಲಿ ಒಂದಷ್ಟು ಭರವಸೆಗಳಿತ್ತು. ದಲಿತ ಸಂಘರ್ಷಸಮಿತಿ, ಸಮತಾ ಸೈನಿಕದಳ ಬಂಡಾಯದ ಹೊಸ ಭಾಷ್ಯವನ್ನು ಬರೆದಿತ್ತು. ಹೊಸ ಪರಂಪರೆಗೆ ಹಪಹಪಿಸಿ ಒಂದಿಷ್ಟು ಸಾಧನೆಯ ಹಾದಿಯಲ್ಲಿ ಸಾಗಿತ್ತು. ಈಗ ಏನಾಗಿದೆ? ಮತ್ತದೇ ದುರಂತ, ಒಡೆದಾಳುವ ಜಾತಿಪ್ರಜ್ಞೆ ವ್ಯವಸ್ಥಿತ ಪಿತೂರಿ, ದಲಿತ ಚಿಂತಕರ, ಕವಿಗಳು, ಹೋರಾಟಗಾರರು ಅವರ ಸಂವೇದನೆಗಳು ವರ್ತಮಾನ ಭವಿಷತ್ತುಗಳಲ್ಲಿ ಭರವಸೆಯನ್ನೇ ಉಳಿಸಲಿಲ್ಲ. ಸಾಮೂದಾಯಿಕ ಶಕ್ತಿ ಸಮಷ್ಠಿ ಪ್ರಜ್ಞೆಯಾಗಬೇಕಾದದ್ದು ಯಾರದ್ದೋ ಹಿತಾಸಕ್ತಿಗಳ ಭ್ರಮೆಯಲ್ಲಿ ವ್ಯಷ್ಠಿ ಬಲಗಳಾಗಿ ಬಿಟ್ಟವು, ಗುಂಪುಗಳಾಗಿ ಬಿಟ್ಟವು. ಅಧಿಕಾರದ ಆಸೆಯ ರಾಜಕಾರಣ ಸರ್ವಕಾಲಕ್ಕೆ ತಾನೇ ಮೇಲು ಎನ್ನುವುದನ್ನು ಮತ್ತೊಮ್ಮೆ ಸಾಧಿಸಿತು." ಇಲ್ಲಿ ಬಾಬಾಸಾಹೇಬರ ಆಶಯಗಳು ಮಣ್ಣೂಗೂಡಿದಂತಾಗಿವೆ. ಶಿಕ್ಷಣ ಸಂಘಟನೆಯಾಗುವಲ್ಲಿ, ಸಂಘಟನೆ ಹೋರಾಟವಾಗುವಲ್ಲಿ ಸೋತಿತೆಂದೇ ಅರ್ಥ. ಸೋಲಿಗೆ ವ್ಯವಸ್ಥಿತ ಸಂಚೇ ಕಾರಣ ಎಂಬುದನ್ನು ಅಲ್ಲಗಳೆಯಲಾಗದು



ಒಂದು ವಿಶಿಷ್ಟ ಸಂದರ್ಭದಲ್ಲಿ ಆರಂಭವಾಯಿತು. ಎಂದುಕೊಂಡ ಸಂಘಟನೆ ಹೋರಾಟಗಳು ಒಂದಿಷ್ಟು ಸಾಧಿಸುವರೆವಿಗಾದರೂ ಎಲ್ಲಾ ಬಗೆಯ ಸಾಮಾನ್ಯ ರಾಜಕೀಯ ಮತ್ತು ಪಕ್ಷಗಳಿಂದ ಅತೀತವಾಗಬೇಕಾದ ಅಗತ್ಯವಿತ್ತು. ಬದ್ಧತೆಗಳು, ಆಕೃತಿಗಳು ಸ್ಪಷ್ಟವಾಗಬೇಕಿತ್ತು. ವೈಚಾರಿಕತೆ ಎನ್ನುವುದು ಅಂಬೇಡ್ಕರ್ ಸಾಧಿಸಿ ತೋರಿಸಿದ ಚಿಂತನೆಗಳ ಪರವಾಗಿರಬೇಕಿತ್ತು. ಸಾಮಾಜಿಕ ನ್ಯಾಯ, ಸಮುದಾಯದ ಪರ ಪ್ರಜ್ಞೆಗಳು

ಮುಖ್ಯವಾಗಬೇಕಿತ್ತು. ಆದರೇ ಈ ಬಗೆಯ ಇತ್ಯಾತ್ಮಕ ಗುಣಗಳನ್ನೆಲ್ಲಾ ಮೀರಿ ಸ್ವಾರ್ಥವೇ ಪ್ರಧಾನವಾದದ್ದು ಸಾಮೂದಾಯಿಕ ವಿಪರ್ಯಾಸವೂ ಹೌದು. ಚುನಾಯಿತ ಪ್ರತಿನಿಧಿಗಳು, ಶಾಸಕರು, ಮಂತ್ರಿಗಳೇ ತಮ್ಮ ತಮ್ಮ ಜಾತಿ ಸಮಾಜಗಳ ಸ್ಥಿತಿಯನ್ನು ದೈವ ಚಿತ್ತವೆಂದೋ ಸಹಜವೆಂದು ಪ್ರತಿಪಾದಿಸಿಕೊಂಡು ಮೆಲು ಜಾತಿ ಎನ್ನುವ ಭ್ರಮೆಗಳ ಬೆನ್ನು ಹಿಡಿದು ಹೊರಟರೆ ಸಮಾನತೆಯ ನಾಯಕತ್ವದ ತರ್ಕವಾದರೂ ಎಲ್ಲಿ? ಸಮೂದಾಯದ ಒಳಗೇ ಸಮಸ್ಯೆಗಳಿವೆ. ಸಮಾನತೆಯ ವ್ಯಾಪಕತೆಯನ್ನು ಮೊದಲು ಸ್ಪಷ್ಟಪಡಿಸಿಕೊಳ್ಳಬೇಕಿದೆ. ಎಡ ಬಲಗಳ ನಡುವಿನ ಮೇಲುಕೀಳನ್ನು ಮೀರಬೇಕಿದೆ. ಒಳಗೊಳಗೆ ಬಡೆದು ಹೋಗಿ ಒಡೆದಾಳುವವರಿಗೆ ಸರಳವಾಗಿ ಹಾದಿ ತೋರಿಸುವುದು ಈ ನೆಲದ ತಿಳಿಸಮುದಾಯದವರ ಗುಣವಾಗಿಬಿಟ್ಟಿದೆ.

ದಲಿತ ಸಬಲೀಕರಣದ ಚರ್ಚೆಗೆ ನಿಂತಾಗ ಈ ಕೆಳಗಿನ ಅಂಶಗಳಿಗೆ ಹೆಚ್ಚು ಒತ್ತು ನೀಡಬೇಕಾದ ಅವಶ್ಯಕತೆಯಿದೆ.

*ಅಸ್ಪೃಶ್ಯತೆಯ, ನಿಷೇಧ * ದಲಿತ ಧರ್ಮದ ಮಾನ್ಯತೆ * ದಲಿತರು ಕಳೆದುಕೊಂಡ ಭೂಮಿಯ ಪೆನ ಸ್ವಾಧೀನ * ದಲಿತರ ಉದ್ಯೋಗಕ್ಕೆ ಗ್ಯಾರಂಟಿ * ದಲಿತ ಮಹಿಳೆಯರ ರಕ್ಷಣೆ, * ದಲಿತ ಪಂಚಾಯತ್ * ಎಲ್ಲ ಬಗೆಯ ನಿಕೃಷ್ಟ ಕೆಲಸಗಳ ತಿರಸ್ಕಾರ ಮುಂತಾದ ಪ್ರಮುಖ ವಿಷಯಗಳ ಕಡೆಗೆ ಅತಿಹೆಚ್ಚಿನ ಮಹತ್ವ ನೀಡಬೇಕಾದ ಅವಶ್ಯಕತೆಯಿದೆ.

ಆದರ್ಶ ರಾಜಕಾರಣದ ಸಾಧ್ಯತೆಯಿದ್ದ ನಮ್ಮ ನಾಡಿನಲ್ಲಿ ಇಂದು ಒಳಸುಳಿ, ಸ್ವಾರ್ಥ, ಭಿನ್ನಮತ, ಬ್ರಷ್ಟಾಚಾರ, ಅನೈತಿಕತೆ ಮುಂತಾದವುಗಳು ನಿರಾಶೆಯ ಆತಂಕವನ್ನುಂಟುಮಾಡುತ್ತೀವೆ. ಇಂತಲ್ಲಿ ಬಾಬಾಸಾಹೇಬರ ಚಿಂತನೆಗಳು, ಬರಹಗಳ ಕಡೆಗೆ ಗಮನಹರಿಸಿ ಅವರ ಆಶಯಗಳನ್ನು ಮೈಗೂಡಿಸಿಕೊಳ್ಳುವಂತೆ ನೋಡಿಕೊಳ್ಳಬೇಕಾದ ಅತಿ ಜರೂರತ್ತು ಇದೆ.

ಇಂದಿನ ಯುವಕರು ತೆಲುಗಿನ ಮಹಾಕವಿ, ಸಮಾಜ ಸುಧಾರಕ ವೆಂಕಟ ಅಪ್ಪಾರಾವ್ ಗುರುಜಾಡರ "ದೇಶವೆಂದರೆ ಬರೀ ಮಣ್ಣಲ್ಲ, ದೇಶವೆಂದರೇ ಅಲ್ಲಿನ ಮನುಷ್ಯರು" (ದೇಶಮ್ಮಂಟೇ ಮಟ್ಟಿಕಾದೋ; ದೇಶಮ್ಮಂಟೆ ಮನುಷ್ಯಾಲೋ) ಎಂಬ ಮಾತುಗಳು ನಿಜದ ನೆಲೆಯಲ್ಲಿ ಅರ್ಥವಾಗಿ ದೇಶವನ್ನು ಕಟ್ಟುವ ಮುನ್ನಡೆಸುವ ದಾರಿ ತೋರಬೇಕಾಗಿದೆ.

ತಾನೇ ಬದುಕಾಗಿ, ಬದ್ಧತೆಯಾಗಿ, ಮಾದರಿಯಾಗಿ ಹೀಗೆ ಬದುಕಬಹುದು ಎಂದು ಬಾಳಿದ ಸಾಮಾಜಿಕ, ಸಾಂಸ್ಕೃತಿಕ ನಾಯಕನಾದ ಡಾ. ಬಾಬಾ ಸಾಹೇಬ ಅಂಬೇಡ್ಕರರನ್ನು ನಾವು ಉಳಿಸಿಕೊಂಡಿದ್ದು ಹೇಗೆ? ಆತ್ಮಾವಲೋಕನ ಮಾಡಿಕೊಳ್ಳುವ ಸಮಯ ಬಂದಿದೆ.

## ಕಲೆ ಮತ್ತು ಸಂಸ್ಕೃತಿ

· ಡಾ. ಕೆ.ಕೃಷ್ಣಪ್ಪ

ಆಧುನಿಕ ಕರ್ನಾಟಕದಲ್ಲಿ ಸಾಂಸ್ಕೃತಿಕವಾಗಿ ಸಾಮುದಾಯಿಕ ಚಳುವಳಿಗಳು ಉದಯವಾಗಿದ್ದು ದಲಿತ ಬಂಡಾಯ ಚಳುವಳಿಗಳ ಮೂಲಕ ಎಂದರೆ ತಪ್ಪಾಗಲಾರದು. ಚಳುವಳಿಗಳು ಸಂಘಟಿತಗೊಳ್ಳುವುದು ಸಮಾಜ ತನ್ನ ಚಲನಶೀಲತೆಯನ್ನು ಕಳೆದುಕೊಂಡು ಜಡವಾಗಿ ಪರಿಣಮಿಸಿದಾಗ, ಅದರ ವಿರುದ್ಧವಾಗಿ ಹೋರಾಟವನ್ನು ನಡೆಸುವುದು ಒಂದು ಚಾರಿತ್ರಿಕ ಅನಿವಾರ್ಯವಾಗುವುದು. ಈ ಸಂಘರ್ಷದ ಮುಖಾಂತರ ಒಂದು ಚಲನಶೀಲತೆ ಪ್ರಾಪ್ತವಾಗುತ್ತದೆ. ಇಂಗ್ಲೀಷ್‌ನ "Movement" ಎಂಬುದು ಚಲನೆಯನ್ನು ಕುರಿತಾಗಿದ್ದು, ಕನ್ನಡದಲ್ಲಿನ ಚಳುವಳಿ ಅದಕ್ಕೆ ಸಂವಾದಿಯಾಗಿ ಬಳಕೆಯಲ್ಲಿದೆ. ನಿರ್ದಿಷ್ಟವಾದ ಉದ್ದೇಶ ಅಥವಾ ಧ್ಯೆಯವನ್ನು ಗುರಿಯಾಗಿಸಿಕೊಂಡು ಯಾವುದೇ ಒಂದು ಚಳುವಳಿ ಸಕ್ರಿಯವಾಗಿರುತ್ತದೆ ಇದನ್ನೇ ಸಮಾಜಶಾಸ್ತ್ರಜ್ಞರು "A Series of organized activities working towords an objective" ಅಂದರೆ ಒಂದು ಧ್ಯೆಯ ಸಾಧನೆಗಾಗಿ ನಡೆಯುವ ಸಂಘಟಿತ ಹೋರಾಟಗಳ ಸರಣಿ ಎಂಬುದಾಗಿ ಸಮಾಜಶಾಸ್ತ್ರಜ್ಞರು ವ್ಯಾಖ್ಯಾನಿಸಿದ್ದಾರೆ. ಆದರೆ ದಲಿತ-ಬಂಡಾಯ ಚಳುವಳಿಗಳನ್ನು ಒಂದು ನಿರ್ದಿಷ್ಟ ಗುರಿಸಾಧನೆಗೆ ನಡೆಸಿದ ಹೋರಾಟಗಳೆಂದು ತೀರ್ಮಾನಿಸಲಾಗುವುದಿಲ್ಲ. ಇವುಗಳು ಭಿನ್ನವಾದ ಸಂಘರ್ಷಗಳಾಗಿದ್ದು, ಕೇವಲ ಸಾಂಸ್ಕೃತಿಕವಾಗಿ ಮಾತ್ರವಾಗಿರದೆ ಸಾಮಾಜಿಕ, ಆರ್ಥಿಕ, ರಾಜಕೀಯವಾಗಿಯೂ ಪರಿವರ್ತನೆಯನ್ನುಂಟುಮಾಡುವ ಕೆಲಸದಲ್ಲಿ ಸಂಘಟನಾತ್ಮಕವಾಗಿ ಹಾಗೂ ಸೃಜನಶೀಲವಾಗಿಯೂ ಹುಟ್ಟಿಕೊಂಡ ಚಳುವಳಿಗಳಾಗಿವೆ. ಇದೇ ಕಾರಣದಿಂದಾಗಿ ಈ ಚಳುವಳಿಗಳು ಪ್ರಾರಂಭವಾಗಿ ನಲವತ್ತು-ಐವತ್ತು ವರ್ಷಗಳು ಕಳೆದಿದ್ದರೂ ಇಂದಿಗೂ ಪರಿವರ್ತನೆಗಳು ಅಗತ್ಯವೆಂಬುದನ್ನು ಸಾರುತ್ತಾ, ಚಳುವಳಿಯ ಅಗತ್ಯವನ್ನು ಅದರ ವಿಸ್ತಾರವನ್ನು ನಿವೇದಿಸುತ್ತದೆ.

ಸಮಾಜದಲ್ಲಿ ಸಾರ್ವಜನಿಕ ಶಿಕ್ಷಣ ವ್ಯಾಪಕವಾಗಿ ಹರಡಿ ಸಾರ್ವತ್ರಿಕ ಎಚ್ಚರಿಕೆ ತಲೆದೋರಿದಾಗ ಕನ್ನಡದಲ್ಲಿ ದಲಿತ-ಬಂಡಾಯ ಚಳುವಳಿಗಳೂ ಉದಯವಾದವು. ಹೊಸಗನ್ನಡದಲ್ಲಿ ತಲೆದೋರಿದ ನವೋದಯ ಮತ್ತು ನವ್ಯ ಪಂಥಗಳು ಸಮಾಜದಲ್ಲಿ ಬಹುಪಾಲು ಮೇಲ್ಮಧ್ಯಮ ವರ್ಗಗಳಿಂದಲೇ ನಿರ್ವಹಣೆಗೊಂಡು ತನ್ನ ಕೇಂದ್ರ ಪ್ರಜ್ಞೆಯಿಂದ ಸಂಸ್ಕೃತಿಲೋಕವನ್ನು ಬೆಳಗಿದ ದೃಷ್ಟಾಂತಗಳನ್ನು ನಮ್ಮ ಮುಂದಿರಿಸಿವೆ. ಇವು ಒಂದರ್ಥದಲ್ಲಿ ಬೌದ್ಧಿಕ ಅಲ್ಪಸಂಖ್ಯಾತರ ರಚನೆಗಳಾಗಿ ಸಮಷ್ಠಿ ಪ್ರಜ್ಞೆಯನ್ನು ಬೆಳಗಿಸಿದ ಮಾದರಿಗಳಾಗಿವೆ. ಇದೇ ಮಾರ್ಗವನ್ನು ಕ್ರಮಿಸಿದ ಕೆಳ-ಮಧ್ಯಮ ವರ್ಗಗಳು ಸಾಹಿತ್ಯ, ಸಂಸ್ಕೃತಿ ಮತ್ತು ಸಾಮಾಜಿಕ ವಾಸ್ತವಗಳನ್ನು ತಮ್ಮ ಜೀವನದ ಹಿನ್ನೆಲೆಗಳಲ್ಲಿ ಸಾಹಿತ್ಯಾನುಸಂಧಾನವನ್ನು ನಡೆಸಿದ ಕಾರಣವಾಗಿ ಕನ್ನಡ ಸಾಹಿತ್ಯದ ಮಜಲುಗಳು ಭಿನ್ನವಾಗತೊಡಗಿದವು. ಸಾಹಿತ್ಯ

ಮತ್ತು ಸಮಾಜಗಳು ಒಂದಕ್ಕೊಂದು ಪೂರಕ ಪ್ರಕ್ರಿಯೆಗಳೆಂಬಂತೆ ಸಾಂಸ್ಕೃತಿಕವಾಗಿ ಹಾಗೂ ಸಾಮಾಜಿಕ ಮತ್ತು ರಾಜಕೀಯವಾಗಿಯೂ ಕಾಲಾಂತರದಲ್ಲಿ ಪರಿವರ್ತನಾಶೀಲತೆಗೆ ತೆರೆದುಕೊಂಡವು. ಇದರಿಂದಾಗಿ ಕನ್ನಡ ಪರಂಪರೆಯೊಂದು ಹೊಸ ರೀತಿಯ ಪರಾಮರ್ಶನಕ್ಕೊಳಪಟ್ಟು, ತನ್ನ ಕಾಲದ ಸಾಮಾಜಿಕ ಮೌಲ್ಯಗಳನ್ನು ನಿರೂಪಗೊಳಿಸಲು ತೊಡಗಿದವು. ಇದರಿಂದಾಗಿ ಸಹಜವಾಗಿಯೇ ಸಾಹಿತ್ಯ ಮಜಲುಗಳು ಭಿನ್ನವಾಗ ತೊಡಗಿದವು.

ಕನ್ನಡದ ದಲಿತ ಚಳುವಳಿ ಜಾತಿ ಮತ್ತು ಅಸ್ಪೃಶ್ಯತೆಯ ಕಾರಣಕ್ಕಾಗಿ ನಡೆಯುವ ಸಾಮಾಜಿಕ ದಬ್ಬಾಳಿಕೆ, ದೌರ್ಜನ್ಯ, ಕ್ರೌರ್ಯ, ಹಿಂಸೆ, ಅವಮಾನ, ಅಸಮಾನತೆಗಳ ಕಾರಣಕ್ಕೆ ಮೊದಲ ಬಾರಿಗೆ ದಲಿತ ಸಮುದಾಯ ಪ್ರಶ್ನಿಸುವಂತೆ ಮಾಡಿ ಪ್ರತಿಭಟನೆಗಳನ್ನು ಮುಂಚೂಣಿಗೆ ತಂದ ಸಾಮಾಜಿಕ ಚಳುವಳಿ, ಇದೊಂದು ಸಂಘಟಿತ ಸ್ವರೂಪದಲ್ಲಿ ಕರ್ನಾಟಕದಲ್ಲಿ ಸಂಘಟಿತವಾಗಲು ಹಲವಾರು ಪ್ರಭಾವಗಳು ಕಾರಣವಾಗಿದ್ದವು. ನೆರೆಯ ಆಂಧ್ರಪ್ರದೇಶದಲ್ಲಿ ೧೯೬೫ರ ನಂತರದ ದಿಗಂಬರ ಕಾವ್ಯ, ಅಲ್ಲಿನ ಚರಬಂಡರಾಜು, ನಗ್ನಮುನಿ, ನಿಖಿಲೇಶ್ವರ, ಭೈರವಯ್ಯ ಮಹಾಸ್ವಪ್ಪ, ಜ್ವಾಲಾಮುಖಿ ಮೊದಲಾದವರ ಪ್ರೇರಣೆ ಪ್ರಭಾವಗಳು ಇಲ್ಲಿನ ದಲಿತ-ಬಂಡಾಯಗಾರರ ಮೇಲಾಗಿದೆ. ಅಂತೆಯೇ ತಮಿಳುನಾಡಿನ ಪೆರಿಯಾರ್ ಚಳುವಳಿ ಸಹ ಕನ್ನಡದ ದಲಿತ-ಬಂಡಾಯಗಳ ಉಗಮಕ್ಕೆ ಕಾರಣವಾಗಿದೆ. ೧೯೬೭ರಿಂದೀಚೆಗೆ ಮಹಾರಾಷ್ಟ್ರದಲ್ಲಿ ಜನಪ್ರಿಯತೆ ಗಳಿಸಿದ ದಲಿತ ಸಾಹಿತ್ಯವೂ ಹೆಚ್ಚಿನದಾಗಿ ಪ್ರಭಾವಿಸಿದೆ. ಅದರ ಮುಂಚೂಣಿಯಲ್ಲಿದ್ದ ದಯಾ ಪವಾರ್, ಲತೀಫ್, ನಾಮದೇವ ಡಸಾಳ್, ಕೇಶವ ಮೇಶ್ರಾಮ್, ವಾಮನ ನಿಂಬಾಳ, ಅರುಣ್ ಕಾಂಬ್ಳೆ, ಬಾಬುರಾವ್ ಬಾಗುಲ್ ಮೊದಲಾದವರು ಇಲ್ಲಿನ ಲೇಖಕರು ಮತ್ತು ಹೋರಾಟಗಾರರ ಮೇಲೆ ಪ್ರಭಾವ ಬೀರಿದ್ದಾರೆ. ಅಲ್ಲದೆ ಮಹಾರಾಷ್ಟ್ರದ ದಲಿತ ಪ್ಯಾಂಥರ್ ಚಳುವಳಿಯಿಂದಲೂ ಉತ್ತೇಜಿತಗೊಂಡಿದೆ. ಇಷ್ಟೇ ಅಲ್ಲದೆ ಎಡಪಂಥೀಯ ವಿಚಾರಧಾರೆಗಳಿಂದ ರೂಪಿತವಾದ ಜನವಾದಿ ಸಾಹಿತ್ಯ ಅಂತರಾಷ್ಟ್ರೀಯ ಮಟ್ಟದ ಕಪ್ಪು ಸಾಹಿತ್ಯ ಮತ್ತು ಗೆರಿಲ್ಲಾ ಸಾಹಿತ್ಯಗಳು ಕನ್ನಡದ ದಲಿತ-ಬಂಡಾಯ ಚಳುವಳಿಗಳನ್ನು ಗಾಢವಾಗಿ ಪ್ರೇರೇಪಿಸಿವೆ.

ಕರ್ನಾಟಕದಲ್ಲಿ ೧೯೬೯ರಲ್ಲಿಯೇ 'ದಲಿತ ಕ್ರಾಂತಿದಳ' ಉದಯವಾಗುತ್ತದೆ. ನಂತರ ೧೯೭೪ರಲ್ಲಿ ಭದ್ರಾವತಿಯಲ್ಲಿ ಪ್ರಾರಂಭವಾದ ದಲಿತ ಸಂಘರ್ಷ ಸಮಿತಿಯು ೧೯೭೮ರ ಸುಮಾರಿಗೆ ಕರ್ನಾಟಕದ ಉದ್ದಗಲಕ್ಕೂ ವ್ಯಾಪಿಸಿಕೊಳ್ಳುತ್ತದೆ. ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ DSS ಘಟಕಗಳು ಸ್ಥಾಪನೆಯಾಗುತ್ತವೆ. ಪ್ರೊ.ಬಿ. ಕೃಷ್ಣಪ್ಪನವರ ನೇತೃತ್ವದಲ್ಲಿ ಆರಂಭವಾಗಿ ೧೯೮೪ಕ್ಕೆ ಸಂಚಾಲಕರಾಗಿ ಸಾಹಿತಿಗಳಾದ ದೇವನೂರ ಮಹಾದೇವ ಅವರು ನಿಯಮಿತರಾಗುವರು. ಈ ಚಳುವಳಿಯು ಕೇವಲ ಹೋರಾಟಕ್ಕೆ ಮಾತ್ರ ಸೀಮಿತಗೊಳ್ಳದೆ ಸಾಂಸ್ಕೃತಿಕವಾಗಿ

ದಲಿತ ಲೇಖಕರು ಮತ್ತು ಕಲಾವಿದರು ಒಕ್ಕೂಟವಾಗಿ ದಲಿತಾನುಭವಗಳನ್ನು ಹಾಡು, ಕವಿತೆ, ಕಥೆ ಮತ್ತು ದೃಶ್ಯರೂಪಗಳಲ್ಲಿ ಪ್ರಕಟಗೊಳಿಸುವ ವಿಶಿಷ್ಟ ಚಳುವಳಿಯಾಗಿತ್ತು. ಈ ಚಳುವಳಿ ದಲಿತರ ಭೂ ಹೋರಾಟ, ಸವರ್ಣೀಯರ ದೌರ್ಜನ್ಯಗಳು, ನ್ಯೂಡಲ್ ವ್ಯವಸ್ಥೆಯ ದರ್ಪ, ದಬ್ಬಾಳಿಕೆಗಳ ವಿರುದ್ಧ



ಉಗ್ರವಾದ ಹೋರಾಟಗಳನ್ನು ತೊಂಭತ್ತರ ದಶಕದವರೆಗೆ ಸಂಘಟಿಸಿ ಸಮಾಜದ ಕಣ್ಣು ತೆರೆಸಿದ್ದಲ್ಲದೆ, ಆಳುವ ವ್ಯವಸ್ಥೆಯನ್ನು ಚಕಿತಗೊಳ್ಳುವಂತೆ ಮಾಡಿತ್ತು. ಈ ಚಳುವಳಿಯಲ್ಲಿ ದಲಿತೇತರವಾದ ಪ್ರಗತಿಪರರು ತೊಡಗಿಸಿಕೊಂಡಿದ್ದರು. ಕರ್ನಾಟಕದ ರೈತ ಚಳುವಳಿ, ಕಾರ್ಮಿಕ ಚಳುವಳಿ, ವಿದ್ಯಾರ್ಥಿ ಚಳುವಳಿಗಳು ದಲಿತ ಹೋರಾಟಗಳಿಗೆ ಬೆಂಬಲವಾಗಿ ನಿಂತು ಚಳುವಳಿಯ ತೀವ್ರತೆಗೆ ಸಹಕಾರಿಯಾಗಿದ್ದು ಇಂದಿಗೆ ಇತಿಹಾಸ ಮಾತ್ರವಾಗಿದೆ.

ಸಾಂಸ್ಕೃತಿಕವಾಗಿ ಅನೇಕ ಸಾಹಿತಿಗಳು, ಕಲಾವಿದರನ್ನು ಪರಿಚಯಿಸಿದ ಚಳುವಳಿ ಇದಾಗಿದೆ. ಜಿ.ವೆಂಕಟಯ್ಯ, ದೇವಯ್ಯ ಹರವೆ, ಮುನಿವೆಂಕಟಪ್ಪ, ಬಿ.ಕೃಷ್ಣಪ್ಪ, ದೇವನೂರು ಮಹಾದೇವ, ಸಿದ್ಧಲಿಂಗಯ್ಯ, ಚನ್ನಣ್ಣ ವಾಲಿಕಾರ, ಕೋಟಿಗಾನಹಳ್ಳಿ ರಾಮಯ್ಯ, ಅರವಿಂದ ಮಾಲಗತ್ತಿ, ಕೆ.ಬಿ.ಸಿದ್ದಯ್ಯ, ಓ.ರಾಜಣ್ಣ, ಮಳ್ಳೂರು ನಾಗರಾಜ, ಜಂಬಣ್ಣ ಅಮರಚಿಂತ, ಎಲ್.ಹನುಮಂತಯ್ಯ, ಸುಬ್ಬು ಹೊಲೆಯಾರ್, ಗಂಗಾರಾಮ ಚಂಡಾಲ, ಸತ್ಯಾನಂದ ಪಾತ್ರೋಟ ಮೊದಲಾದ ಸಾಹಿತಿಗಳಲ್ಲದೆ, ಜನಾರ್ಧನ(ಜನ್ನಿ), ಬಸವಲಿಂಗಯ್ಯ, ಪಿಚ್ಚಳ್ಳಿ ಶ್ರೀನಿವಾಸ್, ಗೊಲ್ಲಹಳ್ಳಿ ಶಿವಪ್ರಸಾದ್, ಬಾನಂದೂರು ಕೆಂಪಯ್ಯ, ಗಿರೀಶ್ ಮಾಚಳ್ಳಿ, ಶಿವರುದ್ರಯ್ಯ ಮೊದಲಾದ ಕಲಾವಿದರು, ಹೋರಾಟದ

ಹಾಡುಗಾರರು ಸಂಗೀತ ಸಂಯೋಜಕರಾಗಿ ನಾಟಕ, ಸಿನಿಮಾ ಮುಂತಾದ ದೃಶ್ಯಕಲಾ ವಿಭಾಗಗಳಲ್ಲಿ ಚಳುವಳಿಯ ಆಶಯಗಳನ್ನು ಸಾದರ ಪಡಿಸಿದ್ದಾರೆ.

ಕರ್ನಾಟಕದಲ್ಲಿ ದಲಿತ ಚಳುವಳಿಯ ಬೆನ್ನಲ್ಲಿಯೇ ಬಂಡಾಯ ಚಳುವಳಿಯೂ ಪ್ರಾರಂಭವಾಯಿತು. ಎಪ್ಪತ್ತರ ದಶಕವು ಪ್ರಧಾನವಾಗಿ ಚಳುವಳಿಗಳ ಪರ್ವಕಾಲ. ರೈತ, ಕಾರ್ಮಿಕ, ದಲಿತ, ಕೃಷಿ ಕೂಲಿಕಾರರು, ಬೀಡಿಕಟ್ಟುವ ಕಾರ್ಮಿಕರು, ಮಹಿಳಾ ಕಾರ್ಮಿಕರು ಮುಂತಾಗಿ ಹಲವಾರು ಚಳುವಳಿಗಳು ಸಕ್ರಿಯವಾಗಿದ್ದು ವ್ಯವಸ್ಥೆಯನ್ನು ಅಲುಗಾಡಿಸಿದ ಹೋರಾಟಗಳಾಗಿದ್ದವು. ಈ ಚಳುವಳಿಗಳ ಹುಟ್ಟಿಗೆ ೧೯೭೫ರ ರಾಜಕೀಯ ಸರ್ವಾಧಿಕಾರರ ಪ್ರತೀಕವಾದ ತುರ್ತುಪರಿಸ್ಥಿತಿಯ ಹೇರಿಕೆಯೂ ಒಂದು ಕಾರಣವಾಗಿ ಪರಿಣಮಿಸಿತ್ತು. ಸಮಾಜವು ಸಹ ಭೂಮಾಲಿಕ ವ್ಯವಸ್ಥೆಯ ಯಜಮಾನಿಕೆಯನ್ನು ತನ್ನೆಲ್ಲ ಅಂಗ ಸಂಸ್ಥೆಗಳಲ್ಲಿ ಜಾರಿಯಲ್ಲಿಟ್ಟಿದ್ದ ದಿನಗಳಾಗಿದ್ದವು. ಇದೇ ಅವಧಿಯಲ್ಲಿ ಅಂದರೆ ೧೯೭೯ರ ಮಾರ್ಚ್ ೯ ರಿಂದ ೧೧ರವರೆಗೆ ಕನ್ನಡ ಸಾಹಿತ್ಯ ಪರಿಷತ್ತು ಧರ್ಮಸ್ಥಳದಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನವನ್ನು ನಡೆಸಿತು. ಈ ಸಮ್ಮೇಳನದಲ್ಲಿ ದಲಿತ ಗೋಷ್ಠಿಯನ್ನು ನಡೆಸಬೇಕೆಂದು ಒತ್ತಾಯಿಸಿದಾಗ ಪರಿಷತ್ತಿನ ಅಧ್ಯಕ್ಷರಾಗಿದ್ದ ಹಂ.ಪ.ನಾಗರಾಜಯ್ಯನವರು ಸಾಹಿತ್ಯದಲ್ಲಿ ದಲಿತ, ಬಲಿತ, ಕಲಿತ ಎಂಬುದಿಲ್ಲವೆಂದು ನಿರಾಕರಿಸಿದಾಗ ಸಾಹಿತ್ಯ ಪರಿಷತ್ತಿನ ಧೋರಣೆ ಮತ್ತು ಸಮಾಜದಲ್ಲಿನ ಸ್ಥಾಪಿತ ಶಕ್ತಿಗಳ ವಿರುದ್ಧವಾಗಿ, ಸಾಂಸ್ಕೃತಿಕವಾಗಿ ಅನೇಕ ಬರಹಗಾರರು, ಕಲಾವಿದರು, ಪ್ರಗತಿಪರ ಹೋರಾಟಗಾರರು, ದಲಿತರು, ಸಾಹಿತಿಗಳೆಲ್ಲ ಒಗ್ಗೂಡಿ ಅದೇ ೧೯೭೯ ಮಾಚ್ ೯ರಂದು ಬೆಂಗಳೂರಿನಲ್ಲಿ ಪರ್ಯಾಯವಾದ ಸಾಹಿತ್ಯ ಸಮ್ಮೇಳನ ನಡೆಸಿದರು. ಅದೇ ಬಂಡಾಯ ಸಾಹಿತ್ಯದ ಪ್ರಥಮ ಸಮ್ಮೇಳನವಾಗಿ ದಾಖಲಾಗುವುದು. “ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿಯುವ ಪ್ರಾಣಮಿತ್ರ” ಎಂಬ ಘೋಷವಾಕ್ಯವನ್ನು ಬಂಡಾಯ ಸಮ್ಮೇಳನ ತನ್ನ ಆಶಯವಾಗಿ ಮಂಡಿಸುತ್ತದೆ. ಅಲ್ಲಿಯವರೆಗೆ ಸಾಹಿತ್ಯವಲಯದಲ್ಲಿ ಮೌನವನ್ನು ಕಾಯ್ದುಕೊಂಡು, ಕನ್ನಡ ಸಾಂಸ್ಕೃತಿಕ



ಲೋಕದಲ್ಲಿದ್ದ ಏಕತಾನತೆಯನ್ನು ಸಹಿಸಿಕೊಂಡಿದ್ದ. ಮನಸ್ಸುಗಳು ಸಾಮಾಜಿಕವಾಗಿ ಒಂದು ವೇದಿಕೆಯಲ್ಲಿ ಸಂಘಟಿತರಾಗುವರು. ಇದರ ಹಿಂದೆ ಒಂದು ಸೈದ್ಧಾಂತಿಕವಾದ ಸಂಘರ್ಷವೇ ನಿರೂಪಗೊಳ್ಳುತ್ತದೆ. ಜಡತ್ವಕ್ಕೆ ಸಂದಿರುವ ಸಾಹಿತ್ಯದ ಮಾನದಂಡಗಳು ಬದಲಾಗಬೇಕು, ಜನಪರವಾದ ಸಾಹಿತ್ಯ ರಚನೆ, ಸಾಮಾಜಿಕ ಕಾಳಜಿಗಳು, ಮಾನವೀಯತೆ ಒಂದು ಧರ್ಮವಾಗಿ, ಶೋಷಣೆ ಮುಕ್ತ ಸಮಾಜ ನಿರ್ಮಾಣವನ್ನು ಒಂದು ಗುರಿಯಾಗಿಸಿಕೊಂಡು ಸಾಹಿತಿ-ಕಲಾವಿದರು, ಯುವಕರು, ಪ್ರಗತಿಪರರು, ವಿಚಾರವಾದಿಗಳು ನಡೆಸಿದ ಸಮ್ಮೇಳನ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಮೈಲಿಗಲ್ಲು.

ಬಂಡಾಯದ ಪ್ರಣಾಲಿಕೆ ಹಿಂದೆ ಅನೇಕ ಸೈದ್ಧಾಂತಿಕ ಮನಸ್ಸುಗಳ ಒಕ್ಕೂಟವು ಕ್ರಿಯಾಶೀಲವಾಗಿತ್ತು. ಗಾಂಧಿ, ರಾಮಮನೋಹರ ಲೋಹಿಯಾ, ಕಾರ್ಲ್‌ಮಾರ್ಕ್ಸ್, ಮಾವೋ, ಅಂಬೇಡ್ಕರ್ ಮೊದಲಾಗಿ ಪ್ರಗತಿಪರವಾದ ಮತ್ತು ಪ್ರಜಾಸತ್ತಾತ್ಮಕವಾದ ತತ್ವಗಳನ್ನು ಒಪ್ಪಿದ್ದ ಬರಹಗಾರರ, ಕಲಾವಿದರ, ಕವಿಗಳ, ಹೋರಾಟಗಾರರ ಕ್ರಿಯಾಶೀಲ ಚಳುವಳಿಯಾಗಿ ರೂಪಿತಗೊಂಡಿತ್ತು. ಇದರಿಂದಾಗಿ ಹೊಸಗನ್ನಡ ಸಾಹಿತ್ಯ ಚರಿತ್ರೆಗೆ ದಲಿತ-ಬಂಡಾಯಗಳೆಂಬ ಎರಡು ಹೊಸ ಆಖ್ಯಾನಗಳು ಸೇರ್ಪಡೆಯಾದವು. ಇವೆರಡೂ ಒಂದೇ ದೇಹ ಎರಡು ತಲೆಗಳನ್ನು ಹೊಂದಿರುವ ಗಂಡಭೇರುಂಡ ಪಕ್ಷಿಯ ರೀತಿಯಲ್ಲಿ ಕನ್ನಡದ ಸಾಂಸ್ಕೃತಿಕ ಜಗತ್ತಿಗೆ ಬೆರಗನ್ನುಂಟು ಮಾಡಿದ ಚಳುವಳಿಗಳಾಗಿದ್ದವು. ಬಡತನ, ಅಸಹಾಯಕತನ, ಅವಮಾನ, ಅನಾದರಗಳನ್ನು ಹೊತ್ತು ಜೀವಿಸುತ್ತಿದ್ದ ಸಮಾಜಕ್ಕೆ ಹೊಸ ಆಶಾಕಿರಣದಂತೆ ಗೋಚರಿಸಿದವು. ಯಜಮಾನ ಸಂಸ್ಕೃತಿಯನ್ನು ಮೆಟ್ಟಿ ಪರ್ಯಾಯ ಸಂಸ್ಕೃತಿಯನ್ನು ಕಟ್ಟುವ ಎಲ್ಲ ಸಾಧ್ಯತೆಗಳನ್ನು ಮೈಗೂಡಿಸಿಕೊಂಡಿದ್ದವು. ಅದೇ ಮಾರ್ಗದಲ್ಲಿ ಒಂದು ದಶಕದ ಕಾಲ ಮುಂದುವರಿದವು. ಬಂಡಾಯದ ಗುಂಪಿನಲ್ಲಿ ಚಂದ್ರಶೇಖರ ಪಾಟೀಲ, ಬರಗೂರು ರಾಮಚಂದ್ರಪ್ಪ, ದೇವನೂರು ಮಹದೇವ, ಕಾಳೇಗೌಡ ನಾಗವಾರ, ಡಿ.ಆರ್.ನಾಗರಾಜ್, ಸಿದ್ಧಲಿಂಗಯ್ಯ, ಕೆ.ಬಿ.ಸಿದ್ದಯ್ಯ, ಬೆಸಗರಹಳ್ಳಿ ರಾಮಣ್ಣ, ಚನ್ನಣ್ಣ ವಾಲೀಕರ, ಅಲ್ಲಮಪ್ರಭು ಬೆಟ್ಟದೂರು, ಜಂಬಣ್ಣ ಅಮರಚಿಂತ, ಶ್ರೀಕಂಠ ಕೂಡಿಗೆ ಅವರು, ಎಲ್.ಹನುಮಂತಯ್ಯ, ಮ.ನ.ಜವರಯ್ಯ, ಸರಜೂ ಕಾಟ್ಕರ್, ಗೀತಾ ನಾಗಭೂಷಣ, ಬಿ.ಟಿ.ಲಲಿತಾನಾಯಕ್, ಸಿದ್ದನಗೌಡ ಪಾಟೀಲ, ಹಿರೇಮಠ, ತಿಪ್ಪೇಸ್ವಾಮಿ ಮುಂತಾದ ಅನೇಕರು ನಾಡಿನಾದ್ಯಂತ ಎಲ್ಲ ಪ್ರಾಂತ್ಯಗಳ ಲೇಖಕರು, ಹೋರಾಟಗಾರರು ಒಗ್ಗೂಡಿ ನಡೆಸಿದ ಚಳುವಳಿ ಇದಾಗಿತ್ತು. ಇದು ಆ ಕಾಲದ ಚಾರಿತ್ರಿಕ ಒತ್ತಡವೂ ಆಗಿತ್ತು ಎಂದು ತೋರುತ್ತದೆ. ಸಾಮಾಜಿಕ ಶೋಷಣೆ, ಅಸಮಾನತೆಗಳ ವಿರುದ್ಧವಾಗಿ ಸಾಮೂಹಿಕವಾಗಿ ಧ್ವನಿ ಎತ್ತಿದವರಲ್ಲಿ ವಚನಕಾರರನ್ನು ಬಿಟ್ಟರೆ ದಲಿತ-ಬಂಡಾಯಗಳೇ ನಂತರದವರಾಗಿ ತೋರುತ್ತವೆ. ಇಂದಿಗೆ ಇವುಗಳ ಸಂಘಟಿತ ಸ್ವರೂಪ ಏನೇ ಆಗಿರಲಿ ಸಾಮಾಜಿಕವಾಗಿ ಬಹುಸಂಖ್ಯಾತವಾದ ಮನಸ್ಸುಗಳಲ್ಲಿ ಈ ಮನೋಧರ್ಮ ಸ್ಥಾಯಿಯಾಗಿ ಉಳಿದಿದೆ.

**ಸ್ಥಿತ್ಯಂತರಗಳು.**

ದಲಿತ-ಬಂಡಾಯ ಚಳುವಳಿಗೆ ಐವತ್ತರ ಪ್ರಾಯ ಕಳೆದಿದೆ. ಇವು ಹಲವು ಮಜಲುಗಳಲ್ಲಿ ಕ್ರಮಿಸಿ ದಣಿವರಿದಂತೆ ತೋರುತ್ತದೆ. ಆದರೆ ಇಂಥ ಚಳುವಳಿಗಳು ಇಂದಿಗೂ ಅನಿವಾರ್ಯವಾಗಿರುವ ಪ್ರಸಂಗಗಳು ನಮ್ಮೆದುರಿಗಿವೆ. ಯಾವುದೇ ಚಳುವಳಿ

ತನ್ನ ದೀರ್ಘವಾದ ನಡಿಗೆಯನ್ನು ಪ್ರಬಲವಾಗಿ ಮುನ್ನಡೆಸಲು ವ್ಯವಸ್ಥೆಯು ಸಹಕರಿಸುವುದಿಲ್ಲವೆಂಬ ಸತ್ಯವನ್ನು ಅರ್ಥಮಾಡಿಕೊಳ್ಳಬೇಕಿದೆ. ರಾಜಕೀಯೇತರವಾಗಿ ರೂಪುಗೊಂಡ ಚಳುವಳಿಗಳು ರಾಜಕೀಯ ಕಾರಣಗಳಿಂದಾಗಿಯೇ ವಿಘಟಿತಗೊಂಡಿದ್ದು ವಿಪರ್ಯಾಸ. ಆದರೆ ಸಾಂಸ್ಕೃತಿಕವಾಗಿ ಇವುಗಳ ಯಶಸ್ಸನ್ನು ಅಲ್ಲಗಳೆಯುವಂತಿಲ್ಲ. ದಲಿತರ ಬದುಕಿನಲ್ಲಿ ಸ್ವಾಭಿಮಾನ ಕಿರಣಗಳು ಹರಿದು ಶೋಷಣೆಯ ವಿರುದ್ಧ ಪ್ರತಿಭಟಿಸುವ ಧೈರ್ಯವನ್ನು ನೀಡಿದೆ. ಕೀಳರಿಮೆಗಳಲ್ಲಿ ಕೊರಗುವ ಸಮುದಾಯಗಳಲ್ಲಿ ತನ್ನ ಅಸ್ಮಿತೆಯನ್ನು ದೃಢಪಡಿಸಬೇಕೆಂಬ ಮನೋಧರ್ಮ ಬೆಳೆಯುತ್ತಿದೆ. ಅಂತೆಯೇ ಬಂಡಾಯದ ಧ್ವನಿಗಳು ಹಿಗ್ಗುತ್ತಿದ್ದಂತೆ, ಅರಸೊತ್ತಿಗೆಯ ಭಾಗವಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನದಲ್ಲಿ ದಲಿತ ಗೋಷ್ಠಿ ನಡೆಸಲು ನಿರಾಕರಿಸಿದರೂ ೧೯೭೯ ಡಿಸೆಂಬರ್ ೧೬ರ ವೇಳೆಗೆ 'ದಲಿತ ಮಕ್ಕಳ ಕುರಿತಾಗಿ ಪ್ರತ್ಯೇಕವಾದ ವಿಚಾರಸಂಕಿರಣವನ್ನು ನಡೆಸಿ 'ದಲಿತ ಮಕ್ಕಳು' ಎಂಬ ಸ್ಮರಣ ಸಂಚಿಕೆ ಹೊರತರುವ ಮಟ್ಟಿಗೆ ಬದಲಾಯಿತು. ಕ್ರಮೇಣ ಬಂಡಾಯಗಾರರೇ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದರು. ೨೦೧೯ರ ವೇಳೆಗೆ ಪ್ರತ್ಯೇಕ 'ದಲಿತ ಸಮ್ಮೇಳನ ಆಯೋಜಿಸುವಷ್ಟು ಪರಿವರ್ತನೆಯನ್ನು ಸಾಹಿತ್ಯ ಪರಿಷತ್ತು ಕಂಡುಕೊಂಡಿದ್ದು, ಈ ಚಳುವಳಿಗಳು ಸೃಷ್ಟಿಸಿದ ಒತ್ತಡವೇ ಎಂಬುದು ಸ್ಪಷ್ಟವಾಗುತ್ತದೆ.

ಈಗಾಗಲೇ ಸೂಚಿಸಿದಂತೆ ದಲಿತ ಬಂಡಾಯದ ವಿಘಟನೆಗಳ ಹಿಂದೆ ಕಾಲಾಂತರಗಳಲ್ಲಿ ಸೃಷ್ಟಿಯಾದ ಆರ್ಥಿಕ-ರಾಜಕೀಯ ಮತ್ತು ಸಾಮಾಜಿಕ ಸಂಬಂಧಗಳ ಇತಿಹಾಸವಿದೆ. ವ್ಯಕ್ತಿಗಳ ನಡುವಿನ ಸೈದ್ಧಾಂತಿಕ ದ್ವಂದ್ವಗಳು, ಭಿನ್ನಾಭಿಪ್ರಾಯಗಳು, ಅಪನಂಬಿಕೆ, ಸ್ಥಾಪಿತ ಶಕ್ತಿಗಳ ಒಡೆದು ಆಳುವ ನೀತಿಗಳು, ವ್ಯಕ್ತಿಗತ ಮನೋಧರ್ಮಗಳು, ಪಲ್ಲಟಗೊಂಡ ನೈತಿಕ ಮೌಲ್ಯಗಳು, ಆಳುವ ವರ್ಗಗಳ ಪಕ್ಷಪಾತದ ಧೋರಣೆಗಳು ಮುಂತಾದ ಅನೇಕ ಕಾರಣಗಳಿಂದಾಗಿ ಚಳುವಳಿಗಳ ಐಕ್ಯರಂಗದಲ್ಲಿ ಬಿರುಕುಂಟಾಗಿ ಛಿದ್ರಗೊಂಡವು. ಇದು ಒಂದು ಚಾರಿತ್ರಿಕ ವ್ಯಂಗ್ಯ ಚಳುವಳಿಗಳು ಶಕ್ತಿಹೀನವಾದರೂ ಸಮುದಾಯಗಳಲ್ಲಿ ಪ್ರತಿಭಟನೆಯ ಬಿತ್ತಿ ವ್ಯಾಪಕವಾಗಿಯೇ ಉಳಿದಿದೆ. ಇದನ್ನು ಹೊರತಾಗಿಸಿದ ಸಾಂಸ್ಕೃತಿಕವಾದ ಮತ್ತೊಂದು ಪರ್ಯಾಯ ಸಾಧ್ಯವಿಲ್ಲವೆಂಬುದನ್ನು ವರ್ತಮಾನ ಸ್ಪಷ್ಟವಾಗಿ ಖಚಿತಪಡಿಸುತ್ತಿದೆ. ಇದರಿಂದಾಗಿ ಸದರಿ ಚಳುವಳಿಗಳ ಪುನಶ್ಚೇತನದ ಬಗ್ಗೆ ಅನೇಕ ಹೇಳಿಕೆಗಳು ಮತ್ತು ಸಮಾವೇಶಗಳು ನಿರಂತರವಾಗಿ ನಡೆಯುತ್ತಿರುವುದನ್ನು ಗಮನಿಸಬಹುದು.

ಕಳೆದ ಐವತ್ತು ವರ್ಷಗಳಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ರಂಗಗಳಲ್ಲಿ ಅನೇಕ ಅವಸ್ಥಾಂತರಗಳನ್ನು ಕಂಡಿದ್ದೇವೆ. ಜಮೀನ್ದಾರಿ ವ್ಯವಸ್ಥೆ ಮತ್ತು ಜಾಗತೀಕರಣಗಳ ಮೇಲಾಟದಲ್ಲಿ ಎಲ್ಲ ರಂಗಗಳ ಅಡಿಯಲ್ಲಿ ಸಿಕ್ಕ ಸಮೂಹ ದಿವಾಳಿತನವನ್ನು ಅನುಭವಿಸುತ್ತಿರುವ ವರ್ತಮಾನ ನಮ್ಮದಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಸುಳ್ಳು ಮತ್ತು ಸತ್ಯಗಳ ನಡುವಿನ ಅಂತರವೇ ಅಳಿಸಿಹೋಗಿದೆ. ದಲಿತ-ಬಂಡಾಯಗಳ ಉಗಮದ ಸ್ಥಿತಿಯಲ್ಲಿ ಸಮಾನ ದುಃಖಿತರು ಮತ್ತು ನೈಜ್ಯವಾದ ವೈರಿಗಳನ್ನು ಗುರುತಿಸಿಕೊಳ್ಳುವುದು ಸುಲಭವಾಗಿತ್ತು. ಏಕೆಂದರೆ ಈ ಎರಡೂ ಚಳುವಳಿಗಳು ರಾಜಕೀಯದಿಂದ ಅಂತರವನ್ನು ಕಾಯ್ದುಕೊಂಡಿದ್ದವು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ.

ಅಂತೆಯೇ ಅಸಮಾನತೆ, ಶೋಷಣೆಗಳು, ಅಕ್ರಮಗಳು ಅಧಿಕವಾಗಿವೆ. ಇವುಗಳನ್ನು ಎದುರಿಸಿ ನಿಲ್ಲುವ ನೈತಿಕತೆಯಾಗಲಿ, ಸಾಮಾಜಿಕ ಶಕ್ತಿಯಾಗಲಿ, ಆರ್ಥಿಕ ದೃಡತೆಯಾಗಲಿ, ರಾಜಕೀಯ ಸ್ಪಷ್ಟತೆ ಮತ್ತು ಐಕ್ಯತೆಯಾಗಲಿ ನಮ್ಮ ನಡುವೆ ಕಾಣುತ್ತಿಲ್ಲ. ಪ್ರಜಾತಂತ್ರದಲ್ಲಿ ಪ್ರಜೆಗಳೇ ನಗಣ್ಯರಾಗಿ, ಶಕ್ತಿ ಸಂಚಯನಗೊಳಿಸಿಕೊಳ್ಳಲು ಸಂಖ್ಯಾಬಲವನ್ನು ಹೊಂದುವ ತಂತ್ರಗಾರಿಕೆಯ ಕೈಗೊಂಬೆಗಳಾಗಿ ಪರಿವರ್ತನೆಗೊಳಿಸಲಾಗಿದೆ. ಸಮಕಾಲೀನವಾದ ಕೋಭೆಯಿಂದ ಪಾರಾಗುವ ಲಕ್ಷಣಗಳು ಮಸುಕಾಗಲಾರಂಭಿಸಿರುವುದರಿಂದ ದಲಿತ- ಬಂಡಾಯಗಳನ್ನು ಪುನರಾವಲೋಕನ ಗೊಳಿಸಿಕೊಳ್ಳಬೇಕಿದೆ.

ಈ ಮಧ್ಯೆ ದಲಿತ-ಬಂಡಾಯಗಳ ಮಾರ್ಗಗಳು ಒಮ್ಮೆಗೆ ಬದಲಾಯಿತು. ದಲಿತ ಹೋರಾಟಗಾರರು ರಾಜಕೀಯವಾಗಿ ಡಾ. ಬಾಬಾ ಸಾಹೇಬ್ ಅಂಬೇಡ್ಕರರ ತತ್ವಗಳನ್ನು ಅನುಸರಿಸಲು ಪ್ರಾರಂಭಿಸಿದ ಮೇಲೆ ದಲಿತ ಸಂಘಟನೆಗಳು ಛಿದ್ರವಾಗಲಾರಂಭಿಸಿದವು. ದಲಿತೇತರರು ಮತ್ತು ಗಾಂಧಿ ಮಾರ್ಗದ ಹಲವು ದಲಿತನಾಯಕರುಗಳು ದಲಿತ ಸಂಘಟನೆಯಿಂದ ದೂರವಾದರು. ಇಂತಹ ಪ್ರಕ್ರಿಯೆಯನ್ನು ಆಂಟೋನಿಯೋ ಗಾಂಟ್ನ ನಿಷ್ಕ್ರೀಯ ಕ್ರಾಂತಿ' ಎಂದು ಕರೆದಿರುವುದು ಸೂಕ್ತವಾಗಿ ಕಾಣುತ್ತಿವೆ. ನಂತರ ತೊಂಭತ್ತರ ದಶಕ ಮತ್ತು ಇಪ್ಪತ್ತನೇ ಶತಮಾನದ ಅಂತ್ಯದಲ್ಲಿ ಜಾಗತೀಕರಣ ವೇಗವನ್ನು ಪಡೆದುಕೊಂಡಿತು. ಅದರ ಪರ ಮತ್ತು ವಿರುದ್ಧದ ವಾಗ್ವಾದಗಳು ಮುಂಚೂಣಿಗೆ ಬಂದು ಅನೇಕ ಸಾಂಸ್ಕೃತಿಕ ನಾಯಕರು, ಚಿಂತಕರು ವೈಚಾರಿಕವಾಗಿ ವಿರುದ್ಧ ನೆಲೆಗಳಲ್ಲಿ ನಿಂತರು. ಜಾಗತೀಕರಣವು ದೇಶಿ ಸಂಸ್ಕೃತಿ ಮತ್ತು ಉತ್ಪನ್ನಗಳಿಗೆ ಮಾರಕ ಎಂಬ ವಿಚಾರ ಒಂದೆಡೆಯಾದರೆ, ಆಯ್ಕೆ ಮತ್ತು ಅವಕಾಶಗಳು ಹೆಚ್ಚಾಗಿ ಸಾಮಾಜಿಕ ಚಲನೆಗೆ ಅನುಕೂಲಕಾರಿ ಎಂಬ ಮತ್ತೊಂದು ಬಗೆಯ ಚರ್ಚೆಗಳಿಗೆ ಅವಕಾಶವೊಂದು ಒದಗಿಬಂತು. ಅದೇ ರೀತಿ ಸ್ಥಳೀಯ ಭಾಷೆ ಮತ್ತು ಶಿಕ್ಷಣದ ಬಗ್ಗೆಯೂ ಗೊಂದಲಗೊಳಿಸಿದವು. ಇಂದಿಗೂ ಭಾಷಾ ಕಲಿಕೆ ಮತ್ತು ಮಾಧ್ಯಮದ ವಿಚಾರಗಳು ಸಂದಿಗ್ಧದಲ್ಲಿಯೇ ಮುಂದುವರಿದಿದೆ. ಸಾಂಸ್ಕೃತಿಕವಾಗಿ ಗೊಂದಲಗಳ ನಡುವೆ ಜಾಗತಿಕವಾದ ವ್ಯಾಪಾರಿ ಮನೋಭಾವ ಮತ್ತು ಗ್ರಾಹಕ ವ್ಯವಸ್ಥೆ ವ್ಯಾಪಕವಾಗಿ ಸಂಪರ್ಕ ಜಾಲವನ್ನು ವಿಸ್ತರಿಸಿಕೊಂಡವು. ಸಾಹಿತ್ಯ, ಸಂಗೀತ, ನಾಟಕ, ಸಿನಿಮಾ, ಜಾನಪದ, ಉದ್ಯೋಗ, ಆರೋಗ್ಯ, ಆಹಾರ, ಶಿಕ್ಷಣ, ಮನರಂಜನೆ, ಉಡುಪು, ಶೃಂಗಾರ ಮುಂತಾಗಿ ಪ್ರತಿಯೊಂದರಲ್ಲೂ ತೀವ್ರತರವಾದ ಜಾಗತಿಕ ಪ್ರವೃತ್ತಿಗಳು ಆವರಿಸಿಬಿಟ್ಟಿದೆ.

ಇಪ್ಪತ್ತೊಂದನೆ ಶತಮಾನವು ಸಮಾಜವನ್ನು ವಿಭಜನೆಯ ನೆಲೆಗಳಿಗೆ ಕೊಂಡೊಯ್ದಿದೆ. ಸಮ್ಮಿಶ್ರ ಸರ್ಕಾರಗಳು, ಮಿಶ್ರ ಆರ್ಥಿಕ ನೀತಿಗಳು ಅಭದ್ರತೆಯ ಸಂಕೇತಗಳಾಗಿ ಪರಿಣಮಿಸಿ ಪ್ರಜಾತಂತ್ರವನ್ನೇ

ಅಣಕಿಸುವಂತಾಗಿದೆ. ರಾಜಕೀಯ ಸ್ಥಿರತೆ, ಆರ್ಥಿಕ ಸಂಪನ್ನತೆ, ಸಾಂಸ್ಕೃತಿಕ ಶ್ರೀಮಂತಿಕೆಗಳ ಕನಸುಗಳನ್ನು ಭಿತ್ತಿ ರಾಷ್ಟ್ರವಾದ, ರಾಷ್ಟ್ರಧರ್ಮ, ರಾಷ್ಟ್ರಭಕ್ತಿ, ರಾಷ್ಟ್ರೀಯ ಅಭಿವೃದ್ಧಿಯ ನೆರಳಲ್ಲಿ ಸಾರ್ವಜನಿಕ ವ್ಯವಸ್ಥೆಗಳ ಬದಲಾಗಿ ಖಾಸಗೀಕರಣವನ್ನು ಹೆಚ್ಚು ಆಕರ್ಷಣೀಯಗೊಳಿಸಲಾಗಿದೆ. ಸರ್ಕಾರಗಳ ಹಿತದಲ್ಲಿ ದೇಶದ ಹಿತ ಅಡಗಿದೆಯೆಂಬ ಮೌಲ್ಯವನ್ನು ಸೃಷ್ಟಿಸಿರುವ ಆಳುವ ವ್ಯವಸ್ಥೆಯನ್ನು ಪ್ರಶ್ನಿಸುವ ಮತ್ತೊಂದು ವ್ಯವಸ್ಥೆಯ ಗೈರುಹಾಜರಿಯನ್ನು ಇಂದು ದೇಶ ಅನುಭವಿಸುತ್ತಿದೆ. ಪ್ರಜೆಗಳೂ ಸಹ ತನ್ನ ಪರಿಸರ,



ಸಾಮಾಜಿಕ ಬಾಂಧವ್ಯ, ಸಹಕಾರ ತತ್ವಗಳನ್ನು ಕೈಬಿಟ್ಟು ತನ್ನ ಆಚಾರ-ವಿಚಾರ ಮತ್ತು ಅಸ್ಥಿತ್ವವನ್ನು ಉಳಿಸಿಕೊಳ್ಳುವ ಉಮೇದಿನಲ್ಲಿ ತೊಯ್ದಾಡುತ್ತಿರುವುದು ವಿಪರ್ಯಾಸಕರವಾಗಿದೆ.

ದಲಿತ ಚಳುವಳಿ ಡಾ. ಬಾಬಾ ಸಾಹೇಬ್ ಅಂಬೇಡ್ಕರರನ್ನು ಸಮಾಜಕ್ಕೆ ಅರ್ಥೈಸುವಲ್ಲಿ ವಿಫಲವಾಯಿತು. ಅವರನ್ನು ತಮ್ಮ ಶಕ್ತಿಯನ್ನಾಗಿಸಿಕೊಂಡು ನಡೆಸಿದ ಹೋರಾಟಕ್ಕೆ ಪ್ರತಿಯಾಗಿ ಅಂಬೇಡ್ಕರರ ಪ್ರತಿಮೆಗಳು ಮತ್ತು ಭಾವಚಿತ್ರಗಳನ್ನು ಆಧರಿಸಿದ ದಲಿತ ಹೋರಾಟಗಳು ಜಾತಿಗ್ರಸ್ಥ ಸಮಾಜದ ಕಣ್ಣು ಕುಕ್ಕಿದ್ದಷ್ಟೇ ಅಲ್ಲದೆ ಅಸಂಖ್ಯಾತ ಸಂಘಟನೆಗಳ ಪರಿಣಾಮದಿಂದಾಗಿ ಸೋಲನ್ನೇ ಕಂಡವು.

ಅಸ್ಪೃಶ್ಯ ಸಮುದಾಯಗಳು ಹಿಂದೂ ಧಾರ್ಮಿಕ ವ್ಯವಸ್ಥೆಯಿಂದ ಪ್ರತ್ಯೇಕವಾಗಿದ್ದರೂ, ಹಿಂದೂ ಸಮಾಜ ಅವರನ್ನು ಹಿಂದೂ ಅಸ್ಮಿತೆಯಲ್ಲಿ ಗುರುತಿಸುವ ಮತ್ತು ಗುರುತಿಸಿಕೊಳ್ಳುವಂತೆ ಮಾಡಿರುವ ಚಾರಿತ್ರಿಕ ಪ್ರಮಾದಗಳನ್ನು ಮುಂದುವರಿಸಿದ ಫಲವಾಗಿ ಡಾ. ಬಾಬಾ ಸಾಹೇಬ್ ಭೀಮರಾವ್ ಅಂಬೇಡ್ಕರರು ಯಶಸ್ವಿಯಾಗಿ ನಡೆಸಿದ ಹಕ್ಕಿನ ಹೋರಾಟಗಳನ್ನು DSS ಹಿಂದೂ ಸಮಾಜದ ಎದುರು ನಡೆಸಲಾಗಲಿಲ್ಲ. ಈ ವಾಸ್ತವವನ್ನು ಅರಿತ ಬ್ರಾಹ್ಮಣ್ಯದ ವ್ಯವಸ್ಥೆ ಪ್ರಜ್ಞಾಪೂರ್ವಕವಾಗಿ ಅಸ್ಪೃಶ್ಯರನ್ನು ಹಿಂದೂ ಸಮಾಜದ ಭಾಗವಾಗಿರುವಂತೆ

ನೋಡಿಕೊಂಡಿದೆ. ಇದೇ ಕಾರಣವಾಗಿ ದಲಿತ ಸಮಾಜ ಸಂಸ್ಕೃತೀಕರಣಗೊಂಡು ಪುರೋಹಿತಶಾಹಿಯ ಪೈಪೋಟಿಯಲ್ಲಿ ತೊಡಗಿರುವುದು ಕಟು ವಾಸ್ತವ, ಇದೊಂದು ಶಕ್ತಿಶಾಲಿ ಸಾಂಸ್ಕೃತಿಕ ರಾಜಕಾರಣವಾಗಿದೆ. ಕಾಲಕ್ರಮೇಣ ದಲಿತ ರಾಜಕಾರಣದ ಭಾಗವಾಗಿ ಪ್ರಜ್ಞಾವಂತ ದಲಿತ ಸಮಾಜ ಇಂದು ಸ್ಥಾಪಿತ ಸಂಸ್ಕೃತಿಯ ವಿರುದ್ಧವಾಗಿ ಪ್ರತಿಸಂಸ್ಕೃತಿಯ ರಾಜಕಾರಣದಲ್ಲಿ ತೊಡಗಿದೆ. ಇದರಿಂದಾಗಿ ವರ್ತಮಾನದ ದಲಿತ ಚಳುವಳಿಯು ವಿರೋಧಾಭಾಸಗಳಿಂದ ಪರಿತಪಿಸುತ್ತಿದೆ.

ಜಾಗೃತಗೊಂಡ ದಲಿತ ಪ್ರಜ್ಞೆ ಪುರಾಣ, ಇತಿಹಾಸ ಮತ್ತು ವರ್ತಮಾನಗಳನ್ನು ಪುನರಚಿಸಿಕೊಳ್ಳುವ ಸಾಹಸದಲ್ಲಿ ತೊಡಗಿದೆ. ಉದಾ: ಜನವರಿ ೦೧, ೧೮೧೮ರ ಕೇರೆಗಾಂವ್ ವಿಜಯೋತ್ಸವವನ್ನು ಸ್ವಾಭಿಮಾನದ ದಿನವನ್ನಾಗಿ ಸ್ಮರಿಸುವುದು, ಪೌರಾಣಿಕ ರಾಕ್ಷಸ ಪಾತ್ರಗಳನ್ನು ಪ್ರತಿನಾಯಕರನ್ನಾಗಿ ಗ್ರಹಿಸುವುದು, ಮೈಸೂರು ದಸರಾ ಬದಲಿಗೆ ಮಹಿಷ ದಸರಾ ಆಚರಿಸುವುದು, ಮನುಧರ್ಮವನ್ನು ತಿರಸ್ಕರಿಸಿ ಸಂವಿಧಾನ ಮಾರ್ಗದಲ್ಲಿ ನಡೆಯುವುದು, ಬುದ್ಧನನ್ನು ಗುರುವನ್ನಾಗಿ ಸ್ವೀಕರಿಸಿ ನಡೆಯುವುದು, ಚಾರಿತ್ರಿಕವಾಗಿ ಜ್ಯೋತಿ ಬಾ ಫುಲೆ-ಸಾವಿತ್ರಿಬಾಯಿ ಫುಲೆ ಆದಿಯಾಗಿ ಶೂದ್ರಾತಿ ಶೂದ್ರರಿಗೆ ಶಿಕ್ಷಣ ಮತ್ತು ಇನ್ನಿತರ ಅವಕಾಶಗಳನ್ನು ಕಲ್ಪಿಸಿದವರ ಬಗ್ಗೆ ಗೌರವ ತೋರುವುದು, ಎಲ್ಲಾ ಶೋಷಿತಸಮುದಾಯಗಳ ನಡುವೆ ಸಹ-ಸಂಬಂಧಗಳನ್ನು ಕಲ್ಪಿಸುವ ಮೂಲಕ ಚರಿತ್ರೆಯ ಪುನರ್ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಸ್ಥಿತಿಯನ್ನು ಕಾಣಬಹುದು.

ದಲಿತ ಚಳುವಳಿ ಒಂದೆಡೆ ರಾಜಕೀಯ ಇಚ್ಛಾಶಕ್ತಿಯನ್ನು ಪ್ರಕಟಿಸುತ್ತಿರುವ ಸಂದರ್ಭದಲ್ಲಿ DSS ಸಂಘಟನೆಗಳು ಸಹಸ್ರಾರು ಗುಂಪುಗಳಾಗಿ ವಿಭಜನೆಗೊಂಡಿದ್ದು ರಾಜಕೀಯೇತರವಾಗಿಯೇ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತೇವೆಂಬ ಭ್ರಮೆಗಳಲ್ಲಿ ನಿತ್ಯದ ಹೋರಾಟದಲ್ಲಿ ತಮ್ಮ ಜೀವನವನ್ನು ಸವೆಸುತ್ತಿವೆ. ಇಂಥ ಬಿಕ್ಕಟ್ಟುಗಳನ್ನು ದಲಿತ



ಚಳುವಳಿ ಎದುರಿಸುತ್ತಿರುವುದರಿಂದ ಅದೊಂದು ಶಕ್ತಿಯಾಗಿ ಉಳಿದಿಲ್ಲ. ಈ ಮಧ್ಯೆ ಜಾತಿ, ಉಪಜಾತಿಗಳ ನೆಲೆಯಲ್ಲಿ ಅಸ್ಪೃಶ್ಯ ಸಮುದಾಯಗಳ ನಡುವೆ ಅಗಾಧವಾದ ಅಂತರಗಳು ಸೃಷ್ಟಿಯಾಗಿವೆ. ಎಡ-ಬಲ, ಸವರ್ಣ-ಅವರ್ಣ, ಸಂಖ್ಯಾಬಲದಲ್ಲಿ ಹೆಚ್ಚು- ಕಡಿಮೆಯೆಂದು, ಬುಡಕಟ್ಟು, ಅಲೆಮಾರಿ, ಅರೆ-ಅಲೆಮಾರಿ ಎಂದಲ್ಲದೆ ಧರ್ಮಗುರು, ಕುಲಗುರುಗಳ ಅಸ್ಮಿತೆಯಡಿ ಅನಂತ ರೀತಿಯಲ್ಲಿ ದಲಿತ ಸಮಾಜ ಒಡೆದು ಹೋಗಿದೆ. ವಿಭಜಿತಗೊಂಡ ಪ್ರತಿಯೊಂದು ಗುಂಪು ಸಹ ಪ್ರತ್ಯೇಕಗೊಂಡು ಪ್ರಭುತ್ವದ ಮುಂದೆ ತಮ್ಮ ಹಕ್ಕು-ಅಧಿಕಾರಗಳಿಗಾಗಿ ಬೇಡಿಕೆಗಳನ್ನು

ಮಂಡಿಸುತ್ತಿವೆ. ರಾಜಕೀಯವಾಗಿ ಜನಸಂಖ್ಯಾವಾರು ಒಳ ಮೀಸಲಾತಿಗಾಗಿ ಒತ್ತಾಯಿಸುತ್ತಿವೆ, ಉಪಜಾತಿ-ಸಂಸ್ಕೃತಿಗಳ ಹೆಸರಿನಲ್ಲಿ ಐಡೆಂಟಿಟಿ ರಾಜಕಾರಣಕ್ಕೆ ತೊಡಗಿಸಿಕೊಂಡಿವೆ.

ಸಾಮಾಜಿಕ ಅಸಮಾನತೆ, ಕೋಮುವಾದ, ಮತೀಯವಾದಗಳ ವಿರೋಧ, ಕನ್ನಡ ಭಾಷೆ, ಸಂಸ್ಕೃತಿ, ಪರಿಸರಗಳ ಕಾಳಜಿ ಇವುಗಳ ಬಗ್ಗೆ ಪ್ರಖರವಾದ ಅಭಿಪ್ರಾಯಗಳನ್ನು ಮಂಡಿಸಿದೆ. ಬಂಡಾಯ ಚಳುವಳಿ, ಗೋಕಾಕ್ ಚಳುವಳಿ, ಮಹಾಜನ್ ಆಯೋಗದ ವರದಿ ಅನುಷ್ಠಾನ, ಹಾವನೂರು ಆಯೋಗದ ವರದಿ ಕುರಿತಾಗಿ ಬೆಂಬಲಿಸಿ ನಡೆಸಿದ ಹೋರಾಟಗಳು ಬಂಡಾಯ ಚಳುವಳಿಯ ಮೈಲಿಗಲ್ಲುಗಳೇ ಆಗಿವೆ. ಜಾತಿಗಳಲ್ಲಿದ್ದೂ ಜಾತೀಯತೆಯನ್ನು ವಿರೋಧಿಸುವ ವರ್ಗದೊಳಗಿದ್ದು, ವರ್ಗಶೋಷಣೆಯನ್ನು ವಿರೋಧಿಸುವ ಉದಾರವಾದಿ ನಿಲುವುಗಳನ್ನು ಬಂಡಾಯ ಚಳುವಳಿ ವ್ಯಕ್ತಪಡಿಸಿದೆ. ಕಾಲಾಂತರದಲ್ಲಿ ಬದಲಾದ ರಾಜಕೀಯ ಸನ್ನಿವೇಶಗಳಲ್ಲಿ ಬಂಡಾಯಗಾರರಲ್ಲಿಯೇ ಒಳವಿರೋಧಗಳು ಸೃಷ್ಟಿಯಾದುದು ಗುಟ್ಟೇನು ಆಗಿರಲಿಲ್ಲ. ಮಧ್ಯಮ ಜಾತಿಗಳ ಮೂಲದಿಂದ ನಡೆಯುವ ಶೋಷಣೆಯನ್ನು ಪ್ರಕಟಿಸಲಾಗದಷ್ಟು ಮಣವು ಬಂಡಾಯವನ್ನು ಆವರಿಸಿತು. ಸಾಂಸ್ಕೃತಿಕವಾಗಿ ವೈಚಾರಿಕ ಮನೋಧರ್ಮವಾಗಿ ಇಂದಿಗೂ ಬಂಡಾಯದ ಅಂತಃ ಶಕ್ತಿಯೊಂದು ಸಾಹಿತ್ಯ ಮತ್ತು ಸಮಾಜಗಳಲ್ಲಿ ನೆಲೆನಿಂತಿದೆ. ಕಲೆ ಮತ್ತು ಸಂಸ್ಕೃತಿಯಲ್ಲಿ ಸಾಮಾಜಿಕ ನ್ಯಾಯವನ್ನು ಸದಾ ಮಂಡಿಸುತ್ತಾ ಬರಲಾಗಿದೆ. ವರ್ತಮಾನದಲ್ಲಿನ ಸಾಮ್ರಾಜ್ಯಶಾಹಿ ಮನೋಧರ್ಮ ಮತ್ತು ಬಂಡವಾಳಶಾಹಿಯ ಕ್ರೌರ್ಯಗಳನ್ನು ವಿರೋಧಿಸುತ್ತಾ ಬಂಡಾಯ ಚಳುವಳಿಯನ್ನು ಪುನಶ್ಚೇತನಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ.

ವಾಸ್ತವ ಏನೆಂದರೆ ಸರ್ವಾಧಿಕಾರಿ ಶಕ್ತಿಗಳೆದುರು ಸಣ್ಣ-ಸಣ್ಣ ಪ್ರತಿರೋಧಗಳು ಅರಣ್ಯರೋಧನಗಳಾಗಿ ಪರಿಣಮಿಸಿವೆ. ಪ್ರಜಾಪ್ರಭುತ್ವದ ಅಂಗ ಸಂಸ್ಥೆಗಳಲ್ಲಿಯೇ ಸ್ವಾಯತ್ತತೆಗಳನ್ನು ಭಂಗಗೊಳಿಸಿರುವ ಸರ್ವಾಧಿಕಾರಿ ನಿಯಂತ್ರಣಗಳು ಸರ್ವಸಾಮಾನ್ಯ ವಾಗಿದ್ದು ಸಶಕ್ತವಾದ ಚಳುವಳಿಗಳ ಅಗತ್ಯ ಹಿಂದೆಂದಿಗಿಂತಲೂ ಸಮಕಾಲೀನವಾಗಿ ಹೇರಳವಾಗಿದೆ. ಅಧಿಕಾರದಲ್ಲಿನ ಫ್ಯಾಸಿಸ್ಟ್ ಎಲ್ಲ ರೀತಿಯ ಪ್ರತಿರೋಧಗಳನ್ನು ಹತ್ತಿಕ್ಕಿವೆ. ಪ್ರಜಾಪ್ರಭುತ್ವದಲ್ಲಿನ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಧರ್ಮ ನಿರಪೇಕ್ಷತೆ ಮತ್ತು ಸಮಾಜವಾದಿ ವಿಚಾರಗಳು ಇಂದಿನ ಪ್ರಭುತ್ವಗಳಿಗೆ ಶತ್ರುಗಳಾಗಿ ಪರಿಣಮಿಸಿವೆ. ಯಜಮಾನ ಸಂಸ್ಕೃತಿಯನ್ನು ಧಿಕ್ಕರಿಸುವ ಚಳುವಳಿಗಳು, ಚಿಂತನೆಗಳು ಜನಮಾನಸದ ಸಹಜ ಭಾಗವಾಗದೆ ಆಶಯಗಳ ಈಡೇರಿಕೆ ಸಾಧ್ಯವಾಗದು. ಜನಸಾಮಾನ್ಯರ ಹಕ್ಕುಗಳನ್ನು ತನ್ನ ಉಸಿರಾಗಿಸಿಕೊಂಡ ನೈಜ ಪ್ರಜಾಪ್ರಭುತ್ವ, ಸಂವಿಧಾನ ಜಾರಿಯಾದ ಎಪ್ಪತ್ತು ವರ್ಷಗಳ

ಬಳಿಕವೂ ಸಾಧ್ಯವಾಗಿಲ್ಲ. ಅಸಮಾನತೆಯನ್ನು ನಿರಂತರಗೊಳಿಸುವ ಪ್ರಕ್ರಿಯೆಯಲ್ಲಿ ಆಳುವ ವರ್ಗಗಳ ರಾಜಕೀಯ ಆಚರಣೆಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಇವುಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಅದಕ್ಕೆ ಸರಿಸಾಟಿಯಾದ ಪ್ರತಿರಾಜಕಾರಣವನ್ನು ರೂಢಿಸಿಕೊಳ್ಳುವುದು ಪರಿಹಾರವಾಗ ಬಲ್ಲುದೆಂದು 'ಆಂಟೋನಿಯೊ ಗಾಂಮಿ'ಯ ಅಭಿಪ್ರಾಯವಾಗಿದೆ. ಇದನ್ನೇ ಮತ್ತೊಂದು ರೂಪದಲ್ಲಿ ಶೋಷಿತ ವರ್ಗಗಳು ಸಂಘಟಿತರಾಗಿ ರಾಜ್ಯಾಧಿಕಾರದಲ್ಲಿ ನಿರ್ಣಾಯಕ ಪಾತ್ರವಹಿಸಿದಾಗ ಮಾತ್ರ ತಮ್ಮ ವಿಮೋಚನೆ ಸಾಧ್ಯವೆಂಬುದನ್ನು ಡಾ. ಬಾಬಾ ಸಾಹೇಬ್ ಭೀಮರಾವ್ ಅಂಬೇಡ್ಕರರು ನುಡಿದಿದ್ದಾರೆ. ಆದರೆ ಭಾರತದಲ್ಲಿನ ಜಾತಿವ್ಯವಸ್ಥೆಯ ಗೆದ್ದಲನ್ನು ತೊಳೆಯದೆ ಜಾತೀಯ ಅಹಂಕಾರವನ್ನು ಮುರಿಯಲಾಗದು ಇದರಿಂದಾಗಿ ಸ್ಥಿತ್ಯಂತರಗಳ ನಿಡುಗಾಲದ ದಲಿತ ಬಂಡಾಯದ ಆಶಯಗಳು ವರ್ತಮಾನದಲ್ಲಿ ದೈನಂದಿನ ಜಾನಪದವಾಗಿ ಜೀವಿಸುತ್ತಾ ಅಸಮಾನತೆಯಲ್ಲೇ ಕೈತೊಳೆಯಬೇಕಾಗಿದೆ.

## ಚಳುವಳಿಗಳು

**- ಡಾ.ಡಿ.ಜಿ.ಸಾಗರ**

ಈ ಗೋಷ್ಠಿ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವ ನಾಡಿನ ಹೆಸರಾಂತ, ಪ್ರಗತಿಪರ, ದಲಿತ ಬಂಡಾಯ ಸಾಹಿತಿಗಳು, ಆತ್ಮೀಯವರಾದ ಡಾ|| ಎಚ್.ಟಿ. ಪೋತೆಯವರೆ, ಈ ಗೋಷ್ಠಿಯಲ್ಲಿ ನನ್ನ ಜೊತೆಗೆ ವಿಷಯ ಮಂಡನೆ ಮಾಡಲು ಬಂದಿರುವ ಡಾ|| ಸುಬ್ರಾವ ಎಂಟೆತ್ತಿನವರೆ, ಡಾ|| ಕೆ. ಕೃಷ್ಣಪ್ಪನವರೆ, ಮಾಧ್ಯಮದ ಮಿತ್ರರೆ, ಇಲ್ಲಿ ಭಾಗವಹಿಸಿರುವ ಸಹೋದರ, ಸಹೋದರಿಯರೆ ಮತ್ತು ಕನ್ನಡಾಭಿಮಾನಿಗಳೆ, ಇಂದು ಕಲಬುರಗಿಯಲ್ಲಿ ನಡೆಯುತ್ತಿರುವ ೮೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ನಮ್ಮೆಲ್ಲರಿಗೆ ಅತೀವ ಸಂತೋಷವನ್ನುಂಟು ಮಾಡಿದೆ. ಕಲ್ಯಾಣ ಕರ್ನಾಟಕ ನಾಡು, ಕಲೆ, ಸಾಹಿತ್ಯ, ರಾಜಕೀಯದಲ್ಲಿ ನಾಡಿನಲ್ಲೂ ಎದ್ದು ಕಾಣುವಂತದ್ದು ಚಳುವಳಿಗಳು ಪ್ರಾರಂಭವಾಗಿರುವುದು ಈ ನೆಲದಿಂದಲೇ ದಲಿತ ಚಳುವಳಿ, ರೈತ ಚಳವಳಿ, ಮಹಿಳಾ ಚಳವಳಿಗಳು ವಿದ್ಯಾರ್ಥಿ ಚಳುವಳಿಗಳು ನಾಯಕರು ಎಲ್ಲರೂ ಕಲಬುರಿಗಿಯವರೇ ಇದ್ದಾರೆ. ಹೀಗಾಗಿ ನನಗೆ ಕೊಟ್ಟಿರುವ ವಿಷಯ "ಚಳುವಳಿಗಳು" ಈ ಬಗ್ಗೆ ನನ್ನ ಅನುಭವ, ಹೋರಾಟದಿಂದ ಬಂದಿರುವುದರಿಂದ ನನ್ನ ಅಭಿಪ್ರಾಯ ಇಲ್ಲಿ ಮಂಡಿಸುತ್ತಿದ್ದೇನೆ.

## ಚಳುವಳಿಗಳು

೬ನೇ ಶತಮಾನದಲ್ಲಿ ತಥಾಗತ ಗೌತಮ ಬುದ್ಧ, ೧೨ನೇ ಶತಮಾನದಲ್ಲಿ ಬಸವಣ್ಣನವರು, ೨೦ನೇ ಶತಮಾನದಲ್ಲಿ ಡಾ|| ಬಾಬಾಸಾಹೇಬ ಅಂಬೇಡ್ಕರರವರ ಚಳವಳಿ ಗಮನಿಸಿದಾಗ, ಈ ಸಮಾಜದಲ್ಲಿರುವ ಸಾಮಾಜಿಕ ಅಸಮಾನತೆ, ಧಾರ್ಮಿಕ ದಬ್ಬಾಳಿಕೆ, ಮೌಢ್ಯ, ಅಂಧಾನುಕರಣೆ, ಅಂಧಶ್ರದ್ಧೆಗಳ ವಿರುದ್ಧ ಮಾಡಿರುವ ಚಳವಳಿಗಳನ್ನು ನೋಡಿದಾಗ, ೨೦-೨೧ ಶತಮಾನದಲ್ಲಿ ರೈತರ ಮೇಲೆ ಆಗುತ್ತಿರುವ ದೌರ್ಜನ್ಯ ಬೆಳೆದ ಬೆಳೆಗಳಿಗೆ ಸೂಕ್ತವಾದ ಬೆಲೆ ಸಿಗದಿದ್ದಕ್ಕೆ ಸಾಲ ಮಾಡಿ ತೀರಿಸಲು ಸಾಧ್ಯವಾಗದೇ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ, ಕಾರ್ಮಿಕರು ಕಾರ್ಖಾನೆಗಳಲ್ಲಿ ದುಡಿದ ದುಡತಕ್ಕೆ ತಕ್ಕ ಪ್ರತಿಫಲ ಸಿಗದಿದಕ್ಕೆ ಆಡಳಿತ ಮಂಡಳಿಯ ವಿರುದ್ಧ ಚಳವಳಿ ಮಾಡುವುದು. ಮಹಿಳೆಯರ ಮೇಲೆ ಅತ್ಯಾಚಾರ, ವರದಕ್ಷಿಣೆ ಕೊಡದಿದ್ದಕ್ಕೆ ಕೊಲೆ ಮಾಡುತ್ತಿರುವುದು, ಭ್ರೂಣಹತ್ಯೆ, ಇಂತಹ ಅನಿಷ್ಠ ಪದ್ಧತಿಗಳ ವಿರುದ್ಧ ಮಹಾ ಚಳವಳಿಗಳು, ದಲಿತರ ಮೇಲೆ ನಿರಂತರವಾಗಿ ಜಾತಿ ಗಲಭೆಗಳು, ಕೊಲೆ, ದೌರ್ಜನ್ಯ, ಅತ್ಯಾಚಾರ, ನಡೆಯುತ್ತಿರುವುದು ನಾವು ಗಮನಿಸಿದಾಗ ಬುದ್ಧನ ಕಾಲದಲ್ಲಿ ನದಿ ನೀರಿನ ಹಂಚಿಕೆಗಾಗಿ ಪ್ರಾರಂಭವಾದ ಚಳವಳಿ, ಬಸವಣ್ಣನವರ ಕಾಲದಲ್ಲಿ ವಚನ ಚಳುವಳಿ ಮಾಡಿದ್ದು, ಅನುಭವ ಮಂಟಪ ಸ್ಥಾಪನೆ ಮಾಡಿ, ನಾಡಿನ ಎಲ್ಲಾ ಜಾತಿಯ ಶರಣರನ್ನು ಕೂಡಿಸಿ ಕಾಯಕದ ಜೊತೆಗೆ ವಚನಗಳನ್ನು ರಚಿಸಿ ಸಮಾಜದಲ್ಲಿರುವ ಜಾತೀಯತೆ, ಅಸ್ಪೃಶ್ಯತೆ, ಕಂದಾಚಾರ, ಮೌಢ್ಯ ಇವುಗಳ ವಿರುದ್ಧ ಬಹು ದೊಡ್ಡ ಚಳುವಳಿ ಮಾಡಿ ಹೋಗಿದ್ದಾರೆ. ಅಂದಿನಿಂದ ಇಂದಿನವರೆಗೂ ಇಂಡಿಯಾದಲ್ಲಿ ಚಳವಳಿಗಳು ನಡೆಯುತ್ತಲಿದೆ. ಆಯಾ ಕಾಲಘಟ್ಟದಲ್ಲಿ ಸರ್ವಣೀಯರು ದಲಿತರ ಮೇಲೆ



ದೌರ್ಜನ್ಯ ಮಾಡುತ್ತಲೇ ಇರುವ ಸಂದರ್ಭದಲ್ಲಿ ಇವುಗಳ ವಿರುದ್ಧ ಚಳವಳಿಗಳು ನಡೆದಿರುತ್ತಿವೆ.

ಕರ್ನಾಟಕದಲ್ಲಿ ೨೦ನೇ ಶತಮಾನದಲ್ಲಿ ಸಂಭವಿಸಿದ ದಲಿತ ಚಳವಳಿ ಭಾರತೀಯ ಸಾಮಾಜಿಕ ಚರಿತ್ರೆಯಲ್ಲಿ ಮಹತ್ವದ ಮೈಲುಗಲು, "ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು" ಎಂಬ ಡಾ|| ಬಾಬಾಸಾಹೇಬ್ ಅಂಬೇಡ್ಕರ್‌ರವರ ಮಾತಿನಂತೆ ಅಂದು ಸಂಬಂಧಿಸಿದ ದಲಿತ ಚಳವಳಿಯ ಚರಿತ್ರೆಯನ್ನು ಸಮಗ್ರವಾಗಿ ದಲಿತರ ಮೊದಲ ಧ್ವನಿ ದಲಿತ ಸಂಘರ್ಷ ಸಮಿತಿ ಸ್ಥಾಪನೆಯಾಗಿದೆ.

ದಲಿತ ವರ್ಗದವರ ಹಕ್ಕುಗಳಿಗಾಗಿ ಅಂಬೇಡ್ಕರ್‌ರವರ ಹೋರಾಟದ ಹಿನ್ನೆಲೆಯಲ್ಲಿ ಕಾರಣಿಭೂತರಾದ ಬುದ್ಧ, ಬಸವ, ಕಬೀರ್, ಗುರು ನಾನಕ್, ನಾರಾಯಣ ಗುರು, ಮಹಾತ್ಮ ಜ್ಯೋತಿಬಾಯಿ ಫುಲೆ, ಸಯ್ಯಾಜಿರಾವ ಗಾಯಕವಾಡ, ನಾಲ್ವಡಿ ಕೃಷ್ಣರಾಜ ಒಡೆಯರ್, ಸ್ವಾಮಿ ವಿವೇಕಾನಂದ, ಮಿರ್ಜಾ ಇಸ್ಮಾಯಿಲ್ ಈ ಎಲ್ಲಾ ಸುಧಾರಕರು ಸಮಾಜದಲ್ಲಿರುವ ಅಸಮಾನತೆ, ಶೋಷಣೆಗೆ ತುತ್ತಾಗಿ ಮಾನವನ ಹಕ್ಕುಗಳು ಇಲ್ಲದಿರುವುದು ದಲಿತ ವರ್ಗದವರನ್ನು ಗುರುತಿಸಿದರು. ಶರಣರ ಕ್ರಾಂತಿಕಾರ ವಚನಗಳು, ಇವರ ಭೋದನೆಗಳು, ಭಾರತಿಯರಲ್ಲಿ

ರಾಷ್ಟ್ರೀಯ ಪ್ರಜ್ಞೆ, ರಾಜಕೀಯ ಪ್ರಜ್ಞೆ, ಸಂಸ್ಕೃತಿ, ವ್ಯಕ್ತಿ ಸ್ವಾತಂತ್ರ್ಯ, ಸಾಮಾಜಿಕ ಮೌಲ್ಯಗಳು ಬೆಳೆದವು. ಈ ರೀತಿಯಾಗಿ ಚಳವಳಿಗಳು ಹುಟ್ಟಿಕೊಂಡಿವೆ.

### ೧. ಡಾ|| ಬಿ.ಆರ್. ಅಂಬೇಡ್ಕರರ ಸಿದ್ಧಾಂತ

ಆಧುನಿಕ ಸ್ವತಂತ್ರ್ಯ ಭಾರತದ ನಿರ್ಮಾಪಕರಲ್ಲಿ ಶ್ರೇಷ್ಠ ನಾಯಕ, ಡಾ|| ಬಿ.ಆರ್. ಅಂಬೇಡ್ಕರರು, ಜಗತ್ತಿಗೆ ಜ್ಞಾನದ ಸಂಕೇತವಾಗಿದ್ದಾರೆ. ಸಮಗ್ರ ಸಶಕ್ತ ಭಾರತವನ್ನು ನಿರ್ಮಿಸಲು ನಿರಂತರವಾಗಿ ಶ್ರಮಿಸಿದ ಇವರು, ದೇಶದ ಏಕತೆ ಮತ್ತು ಸಮಗ್ರತೆ ಕಾಪಾಡಲು ತನ್ನನ್ನು ತಾನು ಅರ್ಪಿಸಿಕೊಂಡ ಅಪ್ಪಟ ರಾಷ್ಟ್ರ ನಾಯಕರಿದ್ದರು. ಇದರ ಜೊತೆಗೆ ಶೋಷಿತ ಸಮುದಾಯದ ಜೀವನಾಡಿ ಇವರು ಶತಶತ ಮಾನಗಳಿಂದ ಕಳೆದುಕೊಂಡ ಮಾನವ ಹಕ್ಕುಗಳನ್ನು ದೊರಕಿಸಿಕೊಡಲು ತಮ್ಮ ಜೀವನದುದ್ದಕ್ಕೂ ಹೋರಾಡಿ, ಅಂತಿಮವಾಗಿ ಪ್ರಬುದ್ಧ ಭಾರತದ ನಿರ್ಮಾಣಕ್ಕಾಗಿ ಬೇಕಾದ ಎಲ್ಲಾ ಅಂಶಗಳನ್ನು ಸಂವಿಧಾನದಲ್ಲಿ ಸೇರಿಸಿದರು. ಈ ಮೂಲಕ ಡಾ|| ಬಿ.ಆರ್. ಅಂಬೇಡ್ಕರವರ ಒಟ್ಟು ಸಿದ್ಧಾಂತವನ್ನು ಈ ರೀತಿಯಾಗಿ ಗುರುತಿಸಿಕೊಳ್ಳಬಹುದು. ಪ್ರಬುದ್ಧ ಭಾರತದ ನಿರ್ಮಾಣಕ್ಕಾಗಿ, ಈ ದೇಶದ ಶೋಷಿತ ಸಮುದಾಯಕ್ಕೆ ಮೇಲ್ಜಾತಿಯವರ ಕುತಂತ್ರದಿಂದಾಗಿ ಕಳೆದುಕೊಂಡ ಮಾನವೀಯತೆ ಹಕ್ಕುಗಳನ್ನು ದೊರಕಿಸಿ, ದೇಶದ ಎಲ್ಲರಿಗೂ ಸಮಾನ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ಕೊಟ್ಟು ಮತ್ತು ಎಲ್ಲರ ಸ್ವತಂತ್ರ್ಯವನ್ನು ಎತ್ತಿ ಹಿಡಿಯುವುದಾಗಿತ್ತು. ಅಂದರೆ, ಹಸಿವು, ಅಸ್ಪೃಶ್ಯತೆ, ಅನ್ಯಾಯ, ಅತ್ಯಾಚಾರವಿಲ್ಲದ, ಸಮಾನ ಸಮಾಜ ನಿರ್ಮಾಣ, ಇದಕ್ಕೆ ಬೇಕಾದ ಎಲ್ಲಾ ನಿಯಮಗಳನ್ನು ಡಾ|| ಬಿ.ಆರ್. ಅಂಬೇಡ್ಕರರು, ಎಲ್ಲಾ ಜಾತಿ, ಧರ್ಮ, ವರ್ಗ ಮತ್ತು ಲಿಂಗಕ್ಕೆ ಸಮಾನ ಬದುಕಿಗೆ ಬೇಕಾದ ಎಲ್ಲಾ ಅವಕಾಶಗಳನ್ನು ಸಂವಿಧಾನದ ನಿಯಮಗಳಲ್ಲಿ ಸೇರಿಸಿದ್ದಾರೆ.

ಆಳ್ವಿಕೆ ಮಾಡುವ ಸರಕಾರ ನಾಗರೀಕರಲ್ಲಿ ಯಾವುದೇ ತಾರತಮ್ಯ ಮಾಡದೇ ಇವುಗಳನ್ನು ಜಾರಿಗೆ ತರುವ ಜವಾಬ್ದಾರಿ ಹೊತ್ತುಕೊಳ್ಳಬೇಕಾಗಿತ್ತು. ಸುಮಾರು ದಶಕಗಳು



ಕಳೆದರೂ ಬಂಡವಾಳ ಶಾಹಿಗಳು/ಜಾತಿವಾದಿಗಳು, ದೇಶವಾಳುತ್ತಾ ಶೋಷಿತ ದಲಿತರ ಹಿತಕಾಪಾಡದೇ ಇದ್ದಾಗ, ಡಾ|| ಬಿ.ಆರ್. ಅಂಬೇಡ್ಕರರ ಈ ಸಿದ್ದಾಂತ ಜಾರಿಗೆ ತರಲು ದೇಶದ ಮೂಲೆ ಮೂಲೆಗಳಲ್ಲಿ ಅವರ ಅನುಯಾಯಿಗಳು ಸಂಘಟನೆಗಳನ್ನು ಕಟ್ಟಿಕೊಂಡು ಸರಕಾರ ಹಾಗೂ ಬಂಡವಾಳ ಶಾಹಿಗಳ ಮತ್ತು ಕೋಮುವಾದಿಗಳ ವಿರುದ್ಧ ೬೦ರ ದಶಕದಲ್ಲಿಯೇ ಹೋರಾಟ ಪ್ರಾರಂಭಿಸಿದರು. ಕರ್ನಾಟಕ, ತಮಿಳುನಾಡು, ಆಂಧ್ರ

ಪ್ರದೇಶ, ಪಂಜಾಬ, ಹರಿಯಾಣ, ಮಹಾರಾಷ್ಟ್ರ ಇತರ ರಾಜ್ಯಗಳಲ್ಲಿ ಅದು ಅತ್ಯಂತ ಗಟ್ಟಿಯಾಗಿ, ಪರಿಣಾಮಕಾರಿಯಾದ ಹೋರಾಟಗಳು ನಡೆಯುತ್ತಿದ್ದವು. ಈ ನಿಟ್ಟಿನಲ್ಲಿ, ಕರ್ನಾಟಕದ ದಲಿತ ಸಾಹಿತಿಗಳು, ಲೇಖಕರು, ಕಲಾವಿದರು ಸೇರಿಕೊಂಡು ಶೋಷಿತರ ಹಕ್ಕುಗಳನ್ನು ಮತ್ತು ಬೇರೆ ಬೇಡಿಕೆಗಳನ್ನು ದೊರಕಿಸಲು ಡಾ|| ಬಿ.ಆರ್. ಅಂಬೇಡ್ಕರರ ಸಿದ್ಧಾಂತದ ಮೇಲೆ ಮಾತ್ರ ಕರ್ನಾಟಕ ದಲಿತ ಸಂಘರ್ಷ ಸಮಿತಿ ರಚಿಸಿಕೊಂಡು ಕಳೆದ ೪ ದಶಕಗಳಿಂದ ಹೋರಾಟ ಮಾಡುತ್ತಲ್ಲಿದೆ.

**೧. ದಲಿತ ಚಳುವಳಿಯ ಯಶೋಗಾಥೆಗಳು**

ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ದಲಿತ ಚಳುವಳಿಯ ಸಂಸ್ಥಾಪಕರಲ್ಲಿ ಮುಖ್ಯದಾರಿಯಲ್ಲಿರುವವರು, ದಲಿತ ಮತ್ತು ಪ್ರಗತಿಪರ ಲೇಖಕರು ಮತ್ತು ಕಲಾವಿದರಾಗಿದ್ದರು. ಈ ಪ್ರಗತಿಪರ ಮತ್ತು ದಲಿತ ಲೇಖಕರು, ಮೊದಲು ಪ್ರಾರಂಭ ಮಾಡಿದ್ದು, ಕನ್ನಡ ಸಾಹಿತ್ಯ ಲೋಕದಲ್ಲಿ ಬ್ರಾಹ್ಮಣವಾದಿ ಶಕ್ತಿಗಳ ಗುತ್ತಿಗೆಯನ್ನು ಪ್ರಶ್ನಿಸಿ, ಧ್ವನಿ ಎತ್ತಿದ್ದರು. ಇದಕ್ಕಾಗಿ ಇವರು ಮೊದಲು ದಲಿತ ಲೇಖಕರ ಮತ್ತು ಕಲಾವಿದರ ಯುವ ಸಂಘಟನೆ (ದಲೇಕಯುಸಂ) ಪ್ರಾರಂಭಿಸಿದರು. ಈ ಈ ಸಂಘವು ಪ್ರತಿಭೆಯನ್ನು ಅಭಿವ್ಯಕ್ತಿಸುವಲ್ಲಿ ಲೇಖನ, ಕಥೆ-ಕವನ ಕಾದಂಬರಿ ಇತ್ಯಾದಿ ಸೃಜನಶೀಲ ಸಾಹಿತ್ಯ ರಚನೆ ಮಾಡುವಲ್ಲಿ ಅಸ್ಪಶ್ಯರೇನು ಕಡಿಮೆ ಅಲ್ಲವೆಂಬುವುದನ್ನು ಇವರು ನಿಖರವಾಗಿ ಸಾಬೀತು ಪಡಿಸಿದರು. ಶೋಷಿತ ಸಮಾಜ ಅಥವಾ ನಿರ್ಲಕ್ಷಿತ ಲೋಕದ ಅನುಭವವನ್ನೇ ಮೂಲ ದ್ರವ್ಯವಾಗಿಸಿಕೊಂಡು, ಸೃಷ್ಟಿಯಾಗುವ ಸಾಹಿತ್ಯವನ್ನು ವಿಮರ್ಶೆ ಮಾಡಲು ಹೊಸ ಮಾನದಂಡ ಕೂಡಾ ಅಗತ್ಯವೆಂಬುದನ್ನು ಕರ್ನಾಟಕ ಸಾಹಿತ್ಯದಲ್ಲಿ ಮೊದಲು ಪ್ರತಿಪಾದನೆ ಮಾಡಿದರು. ಇವರ ಈ ಸಾಹಿತ್ಯಕ್ಕೆ ಇಡೀ ಸಮಾಜ ಮೆಚ್ಚಿಕೊಂಡು ದೇಶ ವಿದೇಶಗಳಿಂದ ಪಾರಿತೋಷಕಗಳು ದೊರೆಯುತ್ತಲಿದ್ದು, ವಾಸ್ತವಿಕ ಸಾಹಿತ್ಯಕ್ಕೆ ಇದೊಂದು ಮೂಲ ಬುನಾದಿಯಾಗಿತ್ತು. ಅಂದರೆ, ಕಾಗೆ ಗುಬ್ಬಿಯ ಮೇಲೆ ಸಾಹಿತ್ಯ ಬರೆದು ಶ್ರೇಷ್ಠರೆನ್ನಿಸಿ ಕೊಂಡವರಿಗೆ, ಮಾನವನ ನಿಜ ಜೀವನದ ಮೇಲೆ, ಸಮಾಜದ ಅಂಕುಡೊಂಕುಗಳನ್ನು ಸರಿಪಡಿಸಲು ಸಾಹಿತ್ಯ ಶಕ್ತಿಯಾಗಬೇಕೆಂಬ ಅರಿವು ಇದರಿಂದ ಮೂಡಿತ್ತು. ಮೂಲದಲ್ಲಿ, ಇದರ ಹಿನ್ನೆಲೆ ದಲಿತವಾಗಿರದೇ, ಸಮಾಜವಾದಿ ಅಥವಾ ಜನತಾಂತ್ರಿಕ ಹಿನ್ನಲೆಯಾಗಿತ್ತು.

ದಲಿತ ಲೇಖಕರ ಮತ್ತು ಕಲಾವಿದರ ಯುವ ಸಂಘಟನೆ, ಜಾತಿ ಅಸ್ಪೃಶ್ಯತೆ, ಅನ್ಯಾಯ ದಬ್ಬಾಳಿಕೆ ಇತ್ಯಾದಿಗಳನ್ನು ಗಮನಿಸಿ, ಸಾಹಿತ್ಯ ಕಲೆಯ ಮೂಲಕ ಮಾತ್ರವಲ್ಲದೆ, ಸಂಘಟನೆ ರೂಪದಲ್ಲಿಯೂ ದಲಿತರ ಮೇಲಾಗುತ್ತಿದ್ದ ಅನ್ಯಾಯವನ್ನು ಖಂಡಿಸುವ, ಪ್ರಶ್ನಿಸುವ, ಧಿಕ್ಕರಿಸುವ, ಈ ಕುರಿತು ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸುವ ಅವಶ್ಯಕತೆ ಇದೆ ಎಂಬುವುದನ್ನು ತನಗೆ ತಾನೇ ಮನವರಿಕೆ ಮಾಡಿಕೊಂಡು ಈ ಮೂಲಕ ದಲಿತ ಸಮಾಜಕ್ಕೆ ಅವರಿಗಾಗುವ ಅನ್ಯಾಯ ಶೋಷಣೆ, ಅತ್ಯಾಚಾರದ ತಿಳುವಳಿಕೆ

ಮನವರಿಕೆ ಮಾಡಿಕೊಡುವ ಸವಾಲನ್ನು ಕೈಗೆತ್ತಿಕೊಂಡಿತ್ತು. ೧೯೭೯ರ ಭುಸಾ ಚಳುವಳಿಯಲ್ಲಿ ದಲಿತ ಚಳವಳಿಗಾರರೇ ಸಕ್ರೀಯವಾಗಿ ಪಾಲ್ಗೊಂಡರು. ಹೀಗೆ ದಲಿತ ಸಂಘಟನೆಯು ದಲಿತರ ಹಿತರಕ್ಷಕನಾಗಲು, ಅವರು ಕಳೆದುಕೊಂಡ ಹಕ್ಕುಗಳನ್ನು ದೊರಕಿಸಿಕೊಡಲು, ಅವರ ಮೇಲಾಗುವ ಅನ್ಯಾಯ ಅತ್ಯಾಚಾರಗಳನ್ನು ತಡೆದು ಅವರನ್ನು ಅಭಿವೃದ್ಧಿಗೊಳಿಸುವ ಡಾ|| ಬಿ.ಆರ್. ಅಂಬೇಡ್ಕರರವರ ದಿಟ್ಟ ನಿಲುವನ್ನೆ ಶಕ್ತಿಯನ್ನಾಗಿ ಮಾಡಿಕೊಂಡು ೧೯೭೦ರ ದಶಕದಲ್ಲಿ ದಲಿತರ ಕಾವಲುಗಾರನಾಗಲು ದ.ಸಂ.ಸ. ಹುಟ್ಟಿಕೊಂಡಿತ್ತು.

ಇದು ಮೂಲದಲ್ಲಿ ರಾಜಕೀಯೇತರ ಸಂಘಟನೆಯಾಗಿದ್ದು, ದಲಿತ ಮತ್ತು ಪ್ರಗತಿಪರ ಚಿಂತಕರ ಚಿಂತನೆಗಳೇ ಚಳುವಳಿಯ ಶಾಸನಗಳಾದರೆ, ಯುವ ದಲಿತ ವಿದ್ಯಾರ್ಥಿಗಳು ಚಳುವಳಿಯ ಸಕ್ರೀಯ ಕಾರ್ಯಕರ್ತರಾದರು. ಕರ್ನಾಟಕ ರಾಜ್ಯದಲ್ಲಿ ಈ ಚಳುವಳಿ ರಾಜಕಾರಣಿಗಳಿಗೆ, ಬಂಡವಾಳ ಶಾಹಿಗಳಿಗೆ, ಧಾರ್ಮಿಕ ಕಪಟ ಮುಖಂಡರಿಗೆ, ಶೋಷಕರಿಗೆ ಒಂದು ಆಶ್ಚರ್ಯವಾದಂತೆ, ಅವರ ಎಲ್ಲಾ ಶೋಷಣೆಗೆ, ಅಂದರೆ ಮಾನಸಿಕ ಮತ್ತು ದೈಹಿಕ ಶೋಷಣೆಗೆ, ಸವಾಲಾಗಿ ಉದ್ಭವಿಸಿತ್ತು.

ದಲಿತ ಚಳವಳಿಯು ಏಕಕಾಲಕ್ಕೆ ತಾನು ಅಸ್ಪಶ್ಯರ ಪ್ರತಿನಿಧಿಯಾಗಿಯೂ ಅದೇ ಕಾಲಕ್ಕೆ ಎಲ್ಲಾ ಜಾತಿ-ಧರ್ಮಗಳಲ್ಲಿನ ಬಡವರ ನೊಂದವರ ನಿರ್ಲಕ್ಷಿತರ ಪ್ರತಿ ಪ್ರತಿನಿಧಿಯಾಗಿಯೂ ಕೆಲಸ ಮಾಡಿತ್ತು. ಇದಕ್ಕೆ ಸಾಕ್ಷಿ ಎಂಬಂತೆ, ಅಸ್ಪಶ್ಯರ ಮೇಲೆ ಆಗುತ್ತಿದ್ದ ದೌರ್ಜನ್ಯಗಳಷ್ಟೆ ಖಂಡಿಸದೇ, ಇತರ ಜಾತಿ ಧರ್ಮಗಳಲ್ಲಿನ ನಿರ್ಲಕ್ಷಿತರ ಪರವಾಗಿಯೂ ಅದು ಧ್ವನಿ ಎತ್ತಿತ್ತು ಮತ್ತು ಹೋರಾಟಗಳನ್ನು ಹಮ್ಮಿಕೊಂಡಿತ್ತು. ತನ್ನ ವಿಶಾಲ ಮನೋಭಾನೆ ಸಂಶಯಕ್ಕೆ ಎಡೆ ಇಲ್ಲದಂತೆ ಸಿದ್ಧಪಡಿಸಿ ತೋರಿಸಿತ್ತು.

ದಲಿತರ ಹಿತಕ್ಕೆ ಧಕ್ಕೆ ತರುವ ಅವರಿಗೆ ಅನ್ಯಾಯ ಮಾಡುವ, ದಲಿತ ಅಧಿಕಾರಿಗಳನ್ನು ಮತ್ತು ದಲಿತ ಶಾಸಕರ ಮಂತ್ರಿಗಳನ್ನು ತರಾಟೆಗೆ ತೆಗೆದುಕೊಳ್ಳುವ ಈ ಸಂಘಟನೆಯು ದಲಿತ ಮಂತ್ರಿ ಶಾಸಕರಿಗೆ ಹಾಗೂ ಅಧಿಕಾರಿಗಳಿಗೆ ಮೇಲ್ಜಾತಿ, ಸಂಘಟನೆ ವತಿಯಿಂದ ಅವರು ದಲಿತರೆಂಬ ಕಾರಣಕ್ಕೆ ಅನ್ಯಾಯವಾದಾಗ ಅವರ ಪರವಾಗಿ ಹೋರಾಟವನ್ನೂ ಅಥವಾ ಚಳುವಳಿಯನ್ನೂ ಮಾಡಿತ್ತು.

ಬುದ್ಧ, ಬಸವ, ಡಾ|| ಬಿ.ಆರ್. ಅಂಬೇಡ್ಕರ್ ಸಾಮಾಜಿಕ ಪರಿವರ್ತನಾಕಾರರ ಸಿದ್ಧಾಂತವನ್ನು ವಿಶಾಲವಾಗಿ ಹೊಂದಿದ ಈ ಸಂಘಟನೆ, ವಿಚಾರ ಗೋಷ್ಠಿಗಳನ್ನು, ಸಾರ್ವಜನಿಕ ಬಹಿರಂಗ ಸಮಾವೇಶಗಳನ್ನು ಅಧ್ಯಯನ ಶಿಬಿರಗಳನ್ನು ಹಮ್ಮಿಕೊಂಡು ಚಳುವಳಿಗಾರರಲ್ಲಿ ಗೊಂದಲ, ಒಡಕು ಮೂಡದಂತೆ ಹಾಗೂ ವಿಶಾಲ ಭಾವನೆ ಮೂಡುವಂತೆ ಮಾಡುತ್ತಾ ಅದು ಬೆಳೆಯಲು ಪ್ರಾರಂಭಿಸಿತು. ಹಾಗೂ ಕರ್ನಾಟಕ ಸಾಮಾನ್ಯ ಜನರ ಮನೆಯ ಮಾತಾಯಿತು.

ಜಾತಿಯತೆ, ಅಸ್ಪೃಶ್ಯತೆ, ವಿರುದ್ಧ ಮರೆವಣಿಗೆ, ಸತ್ಯಾಗ್ರಹ, ಧರಣಿ ಇತ್ಯಾದಿಗಳನ್ನು ನಡೆಸಿದ ದಲಿತ ಚಳುವಳಿ ಕ್ರಮೇಣ ದಲಿತರಿಗೆ ಭೂಮಿ ಹಂಚಿಕೆಯಾಗಬೇಕು. ದಲಿತರ ಜೀವ ಹಿಂಡುವ ಹೆಂಡ ಮಾರಾಟ ನಿಲ್ಲಬೇಕು. ವಸತಿ ಶಾಲೆಗಳನ್ನು ಪ್ರಾರಂಭಿಸಬೇಕು ಎಂಬ ಹಕ್ಕೊತ್ತಾಯಗಳನ್ನು ಸರಕಾರದ ಮುಂದಿಟ್ಟಿತ್ತು.



ಡಾ| ಬಾಬಾ ಸಾಹೇಬ ಅಂಬೇಡ್ಕರರ ಸಿದ್ಧಾಂತಗಳನ್ನೇ ಮೈಗೂಡಿಸಿಕೊಂಡ ದಲಿತ ಸಂಘರ್ಷ ಸಮಿತಿ ದಲಿತ ಚಳವಳಿಯನ್ನು ಈ ಕೆಳಕಂಡಂತೆ ಹಮ್ಮಿಕೊಳ್ಳಲಾಯಿತು. ರಾಯಚೂರು ಜಿಲ್ಲೆಯ ಮೆದಕಿನಾಳ ಭೂ ಹೋರಾಟ, ಚಿಕ್ಕಮಗಳೂರು ಜಿಲ್ಲೆ ಚಂಡಗೋಡು ಭೂಮಿ ಹೋರಾಟ, ಕೋಲಾರ ಜಿಲ್ಲೆ ನಾಗಸಂದ್ರ ಭೂಮಿ ಹೋರಾಟ, ಶಿವಮೊಗ್ಗ ಜಿಲ್ಲೆ ಚಂದ್ರಗುತ್ತಿ ದಲಿತ ಮಹಿಳೆಯರ ಬೆತ್ತಲೆ ಮೆರವಣಿಗೆ ಸೇವೆ ವಿರೋಧಿಸಿ ಹೋರಾಟ, ಗುಲಬರ್ಗಾ ಜಿಲ್ಲೆ ಚಿಂಚನಸೂರ ಮಾಪುರತಾಯಿ ಜಾತ್ರೆಯಲ್ಲಿ ದಲಿತ ಮಹಿಳೆಯರು ಅರೆ ಬೆತ್ತಲೆ ಮೆರವಣಿಗೆ ವಿರೋಧಿ ಹೋರಾಟ, ಬೀದರ ಜಿಲ್ಲೆ ಪೋಲಿಸ್ ಇನ್ಸ್‌ಪೆಕ್ಟರ್ ಮೇಲಿನ ಹಲ್ಲೆ ಖಂಡಿಸಿ ಹೋರಾಟ, ಇದೇ ಜಿಲ್ಲೆಯ ಶಹಾಪೂರದಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯ ವಿರೋಧಿ ಹೋರಾಟ, ಗುಲಬರ್ಗಾ ಜಿಲ್ಲೆ ಹೇರೂರ ಕಂಟೆಪ್ಪ ಕೊಲೆ ವಿರೋಧಿಸಿ ಹೋರಾಟ, ತುಮಕೂರ ಜಿಲ್ಲೆ ದಾಸನಪುರದ ತಿಮ್ಮಯ್ಯ ಕೊಲೆ ಖಂಡಿಸಿ ನಡೆಸಿದ ಹೋರಾಟ, ಬಾಬಾ ಸಾಹೇಬ ಅಂಬೇಡ್ಕರರ ಪ್ರತಿಮೆಗೆ ರಾಜ್ಯದ ವಿವಿಧ ಭಾಗಗಳಲ್ಲಿ ನಡೆದ ಅಪಮಾನದ ವಿರುದ್ಧ ಹೋರಾಟ, ಹೀಗೆ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯಗಳನ್ನು ದಲಿತ ಚಳುವಳಿಯು ಖಂಡಿಸಿ, ಹೋರಾಟ ಮಾಡಿದೆ.

ದಲಿತ ಸಂಘರ್ಷ ಸಮಿತಿ, ಕೇವಲ ಶೋಷಿತ ಸಮುದಾಯಕ್ಕಾಗಿ ಚಳುವಳಿ ಮಾಡದೇ, ಹಿಂದುಳಿದ ಜಾತಿಯವರನ್ನು ಸಂಘಟಿಸಿದ ಶ್ರೇಯಸ್ಸನ್ನು ತನ್ನದಾಗಿಸಿಕೊಂಡಿದೆ. ೧೯೮೯ರ ಮಂಡಲ ವರದಿ ಜಾರಿಯ ಸಂದರ್ಭದಲ್ಲಿ ಜಾತಿವಾದಿಗಳು ಇದನ್ನು ವಿರೋಧಿಸಿದ ಸಂದರ್ಭದಲ್ಲಿ, ಜಾತಿವಾದಿ ಶಕ್ತಿಗಳ ಹುನ್ನಾರವನ್ನು ಯಶಸ್ವಿಯಾಗಿ ಬಯಲಿಗೆ ಎಳೆದು, ಹಿಂದುಳಿದ ವರ್ಗದ ಜನರ ಹಿತರಕ್ಷಣೆಗಾಗಿ ಹೋರಾಟವನ್ನು ಹಮ್ಮಿಕೊಂಡಿತ್ತು.

ಬುದ್ಧ, ಬಸವ, ಡಾ|| ಬಿ.ಆರ್. ಅಂಬೇಡ್ಕರ್, ಕನಕದಾಸರ ಹಾಗೂ ಸಮಾಜ ಪರಿವರ್ತಕರ ಜಯಂತೋತ್ಸವ ಆಚರಿಸುತ್ತಾ, ಹಿಂದುಳಿದ ವರ್ಗದವರಿಗೂ ತಮ್ಮಿಷ್ಟಕ್ಕೆ ತಾವೇ ಸಂಘಟಿಸಿಕೊಳ್ಳಲು ಹಕ್ಕುಗಳನ್ನು ದೊರಕಿಸಿಕೊಳ್ಳಲು ಸ್ಫೂರ್ತಿಸಿದ್ದು, ದ.ಸಂ.ಸ. ಕನಕದಾಸರ ಜಯಂತೋತ್ಸವದಿಂದ ಕುರುಬ ಸಮಾಜದಲ್ಲಿ ಜಾಗೃತಿ ಮೂಡಿಸಿದ ಹಾಗೆ ಜಗಜ್ಯೋತಿ ಬಸವೇಶ್ವರ ಜಯಂತಿ ಮಾಡುವುದರ ಮೂಲಕ ೮೦ರ ದಶಕದವರೆಗೆ ಬಸವ ಜಯಂತಿಯ ಮೂಲಕ ದನದ ಪೂಜೆ ಮಾಡಿ ತೃಪ್ತಿಪಟ್ಟಿಕೊಳ್ಳುವ ಇಡೀ ಸಮಾಜಕ್ಕೆ ಎಚ್ಚರಿಸಿ, ಬಸವ ತತ್ವವನ್ನು ಬಿತ್ತರಿಸಿದ ಕೀರ್ತಿ ದಸಂಸಗೆ ಹೋಗುತ್ತದೆ.

೧೯೯೨ರಲ್ಲಿ ಬಾಬರಿ ಮಸೂದೆಯನ್ನು ಕೆಡವಿ ಹಾಕಿದಾಗ ದಲಿತ ಚಳವಳಿಯು ಜಾತ್ಯಾತೀತ ನಿಲುವನ್ನು ಕೈಕೊಂಡು ಅಲ್ಪಸಂಖ್ಯಾತರ ಸಂವಿಧಾನದ ಹಕ್ಕುಗಳ ರಕ್ಷಣೆಗಾಗಿ ನಿಂತಿತು ಮತ್ತು ಅಲ್ಪಸಂಖ್ಯಾತರಲ್ಲಿ ತಮ್ಮ ಪರವಾಗಿ ಶೋಷಿತರು ನಿಲ್ಲುವ ಧೈರ್ಯ ನೀಡಿತು. ಅದರಂತೆ ಹೋರಾಟಗಳನ್ನು ಹಮ್ಮಿಕೊಂಡಿತ್ತು. ಇದೇ ಎನ್.ಡಿ.ಎ. ಸರಕಾರ ಸಂವಿಧಾನ ಪರಾಮರ್ಶೆ ಮಾಡಲು ಹೊರಟಾಗ ದ.ಸಂ.ಸ. ಇಡೀ ರಾಜ್ಯಾದ್ಯಂತ ಹೋರಾಟ ಹಮ್ಮಿಕೊಂಡು ಆಳ್ವಿಕೆ ಮಾಡುವ ಸರಕಾರ ಸಂವಿಧಾನ ತಿರುಚುವ ಹುನ್ನಾರವನ್ನು ಬಯಲಿ ಗೆಳೆಯಲು ಯಶಸ್ವಿಯಾಯಿತು ಮತ್ತು ಡಾ|| ಬಿ.ಆರ್. ಅಂಬೇಡ್ಕರ್ ಬರೆದ ಸಂವಿಧಾನ ರಕ್ಷಿಸಿ, ಶೋಷಿತ ಅಲ್ಪಸಂಖ್ಯಾತ ಶ್ರೀ ಸಾಮಾನ್ಯ ಮತ್ತು ಮಹಿಳೆಯರ ಸಮಾನತೆ ಮತ್ತು ಸ್ವಾತಂತ್ರ್ಯದ ರಕ್ಷಣೆ ಮಾಡಿತು.



ರಾಜ್ಯಗಳಲ್ಲಿ ದಲಿತರಿಗಾಗಿ ತುಂಬದೇ ಉಳಿದಿರುವ ಬ್ಯಾಕಲಾಗ್ ಹುದ್ದೆಗಳ ಭರ್ತಿ ವಿಷಯದಲ್ಲಿ ಮತ್ತು ಬಡ್ತಿ ಮೀಸಲಾತಿ ಒದಗಿಸುವ ವಿಷಯದಲ್ಲಿ ದಲಿತ ಚಳವಳಿ ಮುಂಚೂಣಿಯಲ್ಲಿ ಬಂದು ಹೋರಾಟವನ್ನು ಮಾಡಿ, ರಾಜ್ಯ ಸರಕಾರದ ಮೇಲೆ ಒತ್ತಡ ಹೇರೆ ಬ್ಯಾಕ್‌ಲಾಗ ಹುದ್ದೆಗಳನ್ನು ತುಂಬುವಂತೆ ಮಾಡಿತು. ಅದೇ ರೀತಿ ಸರ್ವೋಚ್ಚ ನ್ಯಾಯಾಲಯದ ಕೆಳಪದರಿನ ಮೀಸಲಾತಿಯ ತೀರ್ಪಿನ ವಿರುದ್ಧ ಹೋರಾಟ ಮಾಡಿ, ಈ ವಿಷಯ ದಲಿತರ ಸಮಸ್ಯೆಗೆ ಸಂಬಂಧಿಸಿಲ್ಲ. ದಲಿತರಿಗೆ ನೀಡಿರುವ ಸಂವಿಧಾನಾತ್ಮಕ ಮೀಸಲಾತಿ ಹಕ್ಕನ್ನು ಕಸಿದುಕೊಳ್ಳಲು ಮಾಡಿರುವ ಹುನ್ನಾರವನ್ನು ಬಯಲಿಗೆಳೆದಿತ್ತು.

ದಲಿತ ಚಳವಳಿಯು ಹಲವಾರು ದಶಕಗಳಿಂದ ಹೋರಾಟ ಮಾಡುತ್ತ, ರಾಜಕೀಯವಾಗಿ ತೆಗೆದುಕೊಂಡ ತೀರ್ಮಾನಗಳು ಬಹುಮುಖ್ಯವಾಗಿವೆ. ಮೂಲದಲ್ಲಿ ದಲಿತ ಚಳುವಳಿಯು ರಾಜಕೀಯತೇತರ ಸ್ವಾತಂತ್ರ್ಯ ಸಂಘಟನೆಯಾಗಿ ರೂಪಗೊಂಡ, ಸಾಂಸ್ಕೃತಿಕ ಸಂಘಟನೆಯಾಗಿತ್ತು ಮತ್ತು ಪ್ರಬಲ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಪಕ್ಷಗಳನ್ನು ಒಂದು ಬಂಡವಾಳ ಶಾಹಿ ಪಕ್ಷವಾದರೆ, ಮತ್ತೊಂದು ಕೋಮುವಾದಿ ಪಕ್ಷಗಳು, ದಲಿತರ ದಮನ ಮಾಡುವ ಪಕ್ಷಗಳೆಂದು ದಸಂಸ ಗುರುತಿಸಿ ಕೊಂಡಿತ್ತು. ೧೯೭೭ರಲ್ಲಿ ಇಂದಿರಾ ಗಾಂಧೀಜಿ ಪ್ರಜಾಪ್ರಭುತ್ವದ ಕಗ್ಗೋಲೆ ನಡೆಸಿ, ನಿರಂಕುಶ ರಾಜ್ಯಭಾರ ಮಾಡುವಾಗ, ಕಾಂಗ್ರೆಸ್ ವಿರುದ್ಧ ದ.ಸಂ.ಸ. ಚಳುವಳಿ ಹಮ್ಮಿಕೊಂಡಿತ್ತು. ಅದೇ ರೀತಿ ೧೯೭೯, ೧೯೮೩, ೧೯೮೫ರಲ್ಲಿ ಇದೇ ನಿಲುವನ್ನು ತೆಗೆದುಕೊಂಡಿತ್ತು. ಆದರೆ ೧೯೯೪ರಲ್ಲಿ ಒಮ್ಮೆ ದಲಿತರ ಹಿತಕಾಯುವ ಪಕ್ಷವಾಗಿ ರೂಪಗೊಂಡಿರಬಹುದೆಂಬ ಕಾರಣಕ್ಕಾಗಿ ಬಹುಜನ ಪಕ್ಷವನ್ನು ಮಾತ್ರ ಬೆಂಬಲಿಸಿತ್ತು.

ದಲಿತ ಚಳುವಳಿಯ ಭಾಗವಾಗಿ ಕೆಲಸ ಮಾಡಿದ ಚಳುವಳಿಗಾರರು, ವಿವಿಧ ರಾಜಕೀಯ ಪಕ್ಷ ಸೇರಿ, ಎಂ.ಎಲ್.ಎ. ಮತ್ತು ಮಂತ್ರಿಗಳಾಗಿ ೧೯೮೫ರ ನಂತರ ಕೆಲಸ ಮಾಡಿದರು. ದಲಿತ ಚಳುವಳಿಯ ಒತ್ತಾಸೆಯನ್ನು ಹೊಂದಿರುವ ಶಾಸಕರು ಮತ್ತು ಮಂತ್ರಿಗಳು ಹಿಂದಿನ ಸಿದ್ದರಾಮಯ್ಯ ಸರಕಾರದಲ್ಲಿಯೂ ಇದ್ದರು ದ.ಸಂ.ಸ. ಇದನ್ನು ಒಂದು ಸಾಧನೆಯೆಂದು ಪರಿವಣಿಸಿದೆ. ಕಾರಣ ಚಳವಳಿಯ ಹಿನ್ನಲೆ ಹೊಂದಿರುವ ಇವರು ದಲಿತರ ಹಿತಕಾಪಾಡುತ್ತಾರೆ ಎಂಬ ನಂಬಿಕೆಯಿಂದ, ಆದರೆ ದಲಿತ ಚಳುವಳಿಯನ್ನು ಬಳಸಿಕೊಂಡು ರಾಜಕೀಯ ಹಿತಾಸಕ್ತಿ ಕಾಪಾಡುವ ಕೆಲವು ಮಂತ್ರಿಗಳು/ಶಾಸಕರನ್ನು ದ.ಸಂ.ಸ. ಅತ್ಯಂತ ಎಚ್ಚರಿಕೆಯಿಂದ ಗುರುತಿಸುತ್ತದೆ. ಅ ವರ ಚಾನಾಕ್ಷತೆಯನ್ನು ಪರೀಕ್ಷಿಸುತ್ತದೆ.

**ನಾಲ್ಕು ದಶಕಗಳ ದಲಿತ ಚಳುವಳಿಯ ಸಾಧನೆಗಳು:**

ಡಾ|| ಬಿ.ಆರ್. ಅಂಬೇಡ್ಕರರವರ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡ ದಲಿತ ಸಂಘರ್ಷ ಸಮಿತಿ ದಲಿತರ ಹಿತಕ್ಕೆ ಧಕ್ಕೆ ಬರುವ ಸರಕಾರದ ಎಲ್ಲಾ ಧೋರಣೆಗಳನ್ನು ಮೇಲ್ವರ್ಗದವರ ಎಲ್ಲಾ ಹುನ್ನಾರಗಳನ್ನು ಖಂಡಿಸಿ, ಹೋರಾಟ ಮತ್ತು ಚಳುವಳಿಯನ್ನು ಮಾಡುತ್ತಾ ಬಂದಿದೆ. ಕಳೆದ ನಾಲ್ಕು ದಶಕದ ಈ ಹೋರಾಟದಲ್ಲಿ ತಾನು ಮಾಡಿರುವ ಸಾಧನೆಯಿಂದ ತೃಪ್ತಿಬರುತ್ತದಾದರೂ ಕೂಡಾ ತನ್ನದೇ ಆದ ಬಲಹೀನತೆಗಳನ್ನು ಕೂಡಾ ತನ್ನದೇ ಆದ ಬಲಹೀನತೆಗಳನ್ನು ಕೂಡಾ ಅದು ಒಪ್ಪಿಕೊಳ್ಳುತ್ತದೆ. ಅದರ ಸಾಧನೆಗಳೆಂದರೆ:

೧. ಇಂದಿರಾ ಗಾಂಧಿಜೀ ಮತ್ತು ದೇವರಾಜ ಅರಸುರವರು ಭೂಸುಧಾರಣೆ ಕಾಯ್ದೆ ಜಾರಿಗೆ ತಂದರೂ ಕೂಡಾ, ಭೂಮಿಯನ್ನು ಉಳುಮೆ ಮಾಡಿದ ಬಡ/ಶೋಷಿತ ರೈತರಿಗೆ ಅಕ್ರಮ ಭೂಮಿ ಉಳಿಮೆ ಜಮೀನು ಸಕ್ರಮವಾಗಿ ಮಾಡಲಿಲ್ಲ. ಅದಕ್ಕಾಗಿ ದಲಿತ ಚಳವಳಿ ಹೋರಾಟ ಮಾಡಿ, ಅಕ್ರಮವಾಗಿ ಉಳಿಮೆ ಮಾಡಿದ ಭೂಮಿಯನ್ನು ಆ ಶೋಷಿತ ಬಡರೈತರಿಗೆ ಭೂಮಿ ಪಟ್ಟಾ ಮಾಡಿಸಿ, ಲಕ್ಷಾನುಲಕ್ಷ ಹೆಕ್ಟರ್ ಭೂಮಿಯನ್ನು ಬಡವರಿಗೆ ಸೇರುವಂತೆ ಮಾಡಿದ್ದು ದಲಿತ ಚಳವಳಿಯ ಹೋರಾಟದಿಂದ ಮಾತ್ರ

೨. ದಲಿತ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ವಸತಿ ಶಾಲೆಗಳನ್ನು ಸ್ಥಾಪಿಸಲು ೮೦ರ ದಶಕದಲ್ಲಿ ಕರ್ನಾಟಕ ರಾಜ್ಯದಲ್ಲಿ ಮೊದಲು ಹೋರಾಟ ಮಾಡಿದ್ದು, ದ.ಸಂ.ಸ. ದಲಿತ ಚಳವಳಿಯ ಒತ್ತಾಸೆಯ ಮೇರೆಗೆ ಮಾತ್ರ ಅಂದಿನ ಸರಕಾರ ವಸತಿ ಶಾಲೆಗಳನ್ನು ತೆಗೆಯಬೇಕಾಯಿತು. ಇದರಿಂದ ಮೋರಾರ್ಜಿ ದೇಸಾಯಿ, ರಾಜೀವ ಗಾಂಧಿಯಂತಹ ವಸತಿ ಶಾಲೆಗಳು ಕರ್ನಾಟಕದಲ್ಲಿ ತೆರೆಯಲು ಸಾಧ್ಯವಾಗಿದೆಂದು ಹೇಳಲು ದ.ಸಂ.ಸ.ಗೆ ಹೆಮ್ಮೆ ಎನಿಸುತ್ತದೆ.

೩. ದಲಿತ ವಿದ್ಯಾರ್ಥಿಗಳಿಗೆ ಇರುವ ವಸತಿ ನಿಲಯಗಳಿಗೆ ಸ್ವತಂತ್ರ ಕಟ್ಟಡವಿರಲಿಲ್ಲ. ಯಾವುದೋ ಬಾಡಿಗೆ ಬಿಲ್ಡಿಂಗದಲ್ಲಿ ಅಪರಿಪೂರ್ಣ ಸ್ಥಿತಿಯಲ್ಲಿರುವ ಕಟ್ಟಡಗಳಲ್ಲಿ ವಸತಿ ನಿಲಯಗಳಿದ್ದವು. ಆವಾಗ ದಲಿತ ಸಂಘರ್ಷ ಸಮಿತಿ ಹೋರಾಟ ಮಾಡಿ, ಸ್ವತಂತ್ರವಾದ ಕಟ್ಟಡಗಳನ್ನು ಕಟ್ಟಿಸಲು ಸುಮಾರು ದಿನಗಳವರೆಗೆ ದಸಂಸ, ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಸತ್ಯಾಗ್ರಹ ಮಾಡಿ, ಅಂತಿಮವಾಗಿ ಬೃಹತ ಕಟ್ಟಡ ಕಟ್ಟಿಸಲು ಯಶಸ್ವಿಯಾಯಿತು.

೪. ವಿಶ್ವವಿದ್ಯಾಲಯದಲ್ಲಿರುವ ವಸತಿ ನಿಲಯಗಳನ್ನು ಖಾಸಗಿಯವರಿಗೆ ನೀಡಿ, ಮಕ್ಕಳಿಗೆ ಸಾಕಾಗುವಷ್ಟು ಊಟ ನೀಡದೇ ಶೋಷಣೆ ಮಾಡುವುದನ್ನು ತಪ್ಪಿಸಲು ವಿಶ್ವವಿದ್ಯಾಲಯದ ವಸತಿ ನಿಲಯಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸುವಂತೆ ಮಾಡಿದದು ದ.ಸಂ.ಸ. ಅಲ್ಲದೆ ಯು.ಜಿ.ಸಿ. ನೀಡುವ ವಿದ್ಯಾರ್ಥಿಗಳ ಹಣವನ್ನು ವಿಶ್ವವಿದ್ಯಾಲಯ ಬೇಕಾ ಬಿಟ್ಟಿ ಬಳಸಿ ಹಾಳು ಮಾಡುವಾಗ ಆ ಹಣದಿಂದ ಗ್ರಂಥಾಲಯಕ್ಕೆ ಗುಣಾತ್ಮಕ ಪುಸ್ತಕಗಳನ್ನು ಹಾಕಿ ಗ್ರಂಥಾಲಯದಲ್ಲಿ ಪ.ಜಾ/ಪ.ಪಂ. 'ಬುಕ್ ಬ್ಯಾಂಕ್ ಸ್ಥಾಪಿಸಿದ್ದು ದ.ಸಂ.ಸ.

೫. ೧೯೮೦ರ ದಶಕದಲ್ಲಿ ಕರ್ನಾಟಕದ ತುಂಬೆಲ್ಲಾ ವಿಷದ ಹೆಂಡದ ಮಾರಾಟ ಮಾಡಲಾಗುತ್ತಿತ್ತು. ಇದನ್ನು ಸೇವಿಸುವ ಶೋಷಿತ ಸಮುದಾಯ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಿ ಅವರು ಸಾವನ್ನಪ್ಪುವುದಲ್ಲದೆ, ಆ ಇಡೀ ಕುಟುಂಬ ನಾಶವಾಯಿತು ನಿಲ್ಲದೇ, ಬೀದಿಪಾಲಾಗುವುದನ್ನು ತಪ್ಪಿಸಲು ದಸಂಸ ಚಳವಳಿ ಹಮ್ಮಿಕೊಂಡಿದ್ದು, ಮುಖ್ಯ ಮಂತ್ರಿಗಳಿಗೆ ಹೆಂಡವನ್ನು ಕಳುಹಿಸಿ, ಅದನ್ನು ನೀವು ಕುಡಿಯಿರಿ. ಆದರೆ ಕರ್ನಾಟಕ ಜನತೆಗೆ ಬೇಡವೆಂದು ಚಳವಳಿ ಮಾಡಿದಾಗ ವಿಷಭರಿತ ಹೆಂಡ ಮಾರುವುದನ್ನು ನಿಲ್ಲಿಸಿದ ಕೀರ್ತಿ ದ.ಸಂ.ಸ.ಗೆ ಸಲ್ಲುತ್ತದೆ.

೯. ಕರ್ನಾಟಕದಾದ್ಯಂತ ಚಳುವಳಿಯ ಮೂಲಕ ಹಳ್ಳಿಯ ದಲಿತ ವಿದ್ಯಾರ್ಥಿಗಳು ಪಟ್ಟಣಕ್ಕೆ ಉಚಿತ ವ್ಯಾಸಂಗ ಮಾಡಲು ಪ್ರೋತ್ಸಾಹ ಮಾಡಿದ್ದು ದ.ಸಂ.ಸ. ಇದರಿಂದಾಗಿ ದಲಿತ ವಿದ್ಯಾರ್ಥಿಗಳು ವಿಶೇಷವಾಗಿ ವಿದ್ಯಾರ್ಥಿನಿಯರು ಹೆಚ್ಚು ಹೆಚ್ಚು ಓದುವಂತೆ ಉನ್ನತ ವ್ಯಾಸಂಗ ಮಾಡುವಂತೆ ಪ್ರೋತಾಹಿಸಿದ್ದು ದ.ಸಂ.ಸ.



೭. ಹಳ್ಳಿ ಹಳ್ಳಿಗಳಲ್ಲಿ ದಲಿತರ ಸ್ಥಿತಿ ಅತ್ಯಂತ ಶೋಚನೀಯ ಮತ್ತು ಶೋಷಣೆಯಿಂದ ಕೂಡಿತ್ತು. ಗ್ರಾಮದ ಬಂಡವಾಳಶಾಹಿಗಳು ದಲಿತರನ್ನು ಕೊಂದು ಹಾಕಿದರೂ ಕೇಳವರಾರು ಇರಲಿಲ್ಲ. ಅದೊಂದು ಸಾಮಾನ್ಯ ವಿಷಯವಾಗಿತ್ತು. ದಲಿತ ಹೆಣ್ಣು ಮಕ್ಕಳಂತೂ ಶ್ರೀಮಂತ ಮಕ್ಕಳ ಶೋಷಣೆ/ಅನ್ಯಾಯ ಸಾಮಾನ್ಯವೆಂಬ ಆ ದಿನಗಳಲ್ಲಿ ದಲಿತರಲ್ಲಿ ಜಾಗೃತಿ ಮೂಡಿಸಿ, ಅವರಲ್ಲಿ ಸ್ವಾಭಿಮಾನದ ಕಿಚ್ಚನ್ನು ಹಚ್ಚಿದ್ದು, ದ.ಸಂ.ಸ. ಇದೊಂದು ದಲಿತ ಚಳವಳಿಯ ಬಹುದೊಡ್ಡ ಸಾಧನೆಯಾಗಿದೆ. ರಾಜ್ಯದ ದಲಿತರು ಅನ್ಯಾಯವನ್ನು ನಿಮಿಶಕಾಲವೂ ಸಹಿಸದೇ, ತಕ್ಷಣಕ್ಕೆ ಖಂಡಿಸಲು ಮುಂದಾಗಿದ್ದಾರೆ.

೮. ದೇವರ ಹೆಸರಿನ ಮೇಲೆ ದಲಿತ ಹೆಣ್ಣು ಮಕ್ಕಳನ್ನು ಜೋಗತಿಯಾಗಿ ಬಿಡುವ ಸಂಪ್ರದಾಯ ಅತ್ಯಂತ ಹಳೆಯದು, ಬಹುದಿನಗಳಿಂದ ಬಂದ ಈ ಜೋಗತಿ ಸಂಪ್ರದಾಯಕ್ಕೆ ತಡೆಹಾಕಿ ಚಿಂಚನಸೂರ ಮಹಾಪುರತಾಯಿ, ರೇಣುಕಾಯಲ್ಲಮ್ಮ ನಂತಹ ದೇವರಗಳ ಹೆಸರಿನಲ್ಲಿ ನಡೆಯುವ ಬೆತ್ತಲೆ ಮೆರವಣಿಗೆ, ಆ ಹೆಣ್ಣು ಮಕ್ಕಳಿಗೆ ಸೀರೆ ಉಡಿಸಿ, ಆ ಸಂಪ್ರದಾಯಕ್ಕೆ ತೆರೆ ಎಳೆದದ್ದು ದ.ಸಂ.ಸ. ದಲಿತ ದೊಡ್ಡ ದೊಡ್ಡ ಸರಕಾರಿ ಅಧಿಕಾರಿಗಳ ಹೆಂಡಂದಿರೇ, ಇಂತಹ ಬೆತ್ತಲೆ ಮೆರವಣಿಗೆಯಲ್ಲಿ ಭಾಗವಹಿಸುತ್ತಿದ್ದುದ್ದು ಅಂದಿನ ದುರಂತವಾಗಿತ್ತು.

ಹೀಗೆ ಇನ್ನೂ ಹತ್ತು ಹಲವಾರು ಸಾಧನೆ ಮಾಡಿದ ದಲಿತ ಚಳವಳಿ, ತನ್ನದೇ ಆದ ಮಿತಿಗಳನ್ನು ಹೊಂದಿದೆ ಎಂಬುವುದನ್ನು ಮರೆಯುವುದಿಲ್ಲ. ಅವುಗಳೆಂದರೆ,

೧) ದಲಿತ ಚಳವಳಿಯ ಒಂದು ಪ್ರಬಲ ರಾಜಕೀಯ ಶಕ್ತಿಯಾಗಲು ಸೋತಿದೆ.

೨) ದಲಿತ ಚಳವಳಿಯ ಮುಖಂಡರು ತಮ್ಮದೇ ಒಂದು ಶಕ್ತಿ ಕೇಂದ್ರವನ್ನು ರೂಪಿಸಿಕೊಳ್ಳುವಲ್ಲಿ ಸೋತಿದ್ದಾರೆ.

೩) ಕಂಬಾಲಪಲ್ಲಿ ಇತ್ಯಾದಿ ಘೋರ ದಲಿತ ಹತ್ಯಾಕಾಂಡಗಳಲ್ಲಿ ನಿಖರ ಒತ್ತಡ ಹೇರುವಲ್ಲಿ ಸೋತಿದೆ.

ಇಂತಹ ಕೆಲವು ಮಿತಿಗಳನ್ನು ನಾವೇ ಗುರುತಿಸಿಕೊಳ್ಳಬಹುದು ಇದಕ್ಕೆ ಹಲವಾರು ಕಾರಣಗಳು ಇರಬಹುದು. ಆದರೆ ಇವುಗಳನ್ನು ಮೀರಿ ಬೆಳೆಯುವ ಬಲ ನಮಗೆ ಸಾಧ್ಯವಾಗಬೇಕು. ಅಧಿಕಾರಸ್ಥರ, ರಾಜಕಾರಣಿಗಳ ಹುನ್ನಾರಗಳನ್ನು ಅರ್ಥ ಮಾಡಿಕೊಳ್ಳುವುದು ನಮಗೆ ಸಾಧ್ಯವಾದ್ದುದಾದರೆ, ದಲಿತ ಚಳವಳಿ ತನ್ನ ಗುರಿ ಈಡೇರಿಸಿಕೊಳ್ಳುವಲ್ಲಿ ಸಫಲವಾಗಬಲ್ಲದು.

**ಅಧ್ಯಕ್ಷ ಭಾಷಣ:**

**ಸಾಹಿತ್ಯ ಮತ್ತು ಸಮಾಜ**

**ಪ್ರೊ. ಎಚ್.ಐ. ಪೋತೆ**

ಸಾಹಿತ್ಯ ಮತ್ತು ಸಮಾಜ ಇವೆರಡಕ್ಕೂ ಹೊಕ್ಕಳುಬಳ್ಳಿ ಸಂಬಂಧವಿದೆ. ಹಾಗೆ ಸಂಬಂಧವಿರುವ ಸಾಹಿತ್ಯವು ಒಂದು ಸಾಮಾಜಿಕ ಸಂದರ್ಭದಲ್ಲಿ ಹುಟ್ಟುತ್ತದೆ. ಸಾಹಿತಿಯು ಸಮಾಜದ ಅಂಗವಾಗಿರುವುದರಿಂದ ಸಮಾಜದ ಅನುಭವಗಳನ್ನೆ ಸಾಹಿತ್ಯ ಕೃತಿಯಾಗಿ ಕಂಡರಿಸುತ್ತಾನೆ. ಭಾಷೆ, ಸಮಾಜದ ಸಂಪರ್ಕದ ಮಾಧ್ಯಮ ಅಂತೆಯೇ ಭಾಷೆಯೇ ಸಾಹಿತ್ಯದ ಮಾಧ್ಯಮ. ಆದುದರಿಂದ ಸಾಹಿತಿಯಾದವನು ಸಮಾಜದಲ್ಲಿ ಅನುಭವಿಸಿದ ಎಲ್ಲಾ ಅನುಭವಗಳನ್ನು ತನ್ನ ಕೃತಿಯಲ್ಲಿ ಅಡಕಗೊಳಿಸುತ್ತಾನೆ. ಆದ್ದರಿಂದ ಸಾಹಿತ್ಯ ಬಿಟ್ಟು ಸಮಾಜವಿರುವುದಿಲ್ಲ, ಸಮಾಜ

ಬಿಟ್ಟು ಸಾಹಿತ್ಯವಿರುವುದಿಲ್ಲ. ಸಾಹಿತ್ಯ ಕೃತಿಯೆಂದರೆ ಅದು ಕವಿತೆ, ಕಥೆ, ಕಾದಂಬರಿ ಹೀಗೆ ಸಾಹಿತ್ಯದ ಯಾವುದೇ ಪ್ರಕಾರವಾಗಿರಬಹುದು. ಸಾಹಿತ್ಯವೆಂದರೆ ಅದರಲ್ಲಿ ಸಮಾಜ ಇದ್ದೇ ಇರುತ್ತದೆ.

ಸಾಮಾಜಿಕ ಸೃಷ್ಟಿಯಾದ ಭಾಷೆಯನ್ನು ತನ್ನ ಮಾಧ್ಯಮವನ್ನಾಗಿ ಮಾಡಿಕೊಂಡ ಸಾಹಿತ್ಯವೂ ಸಹ ಒಂದು ಸಾಮಾಜಿಕ ಸಂಸ್ಥೆ, ಜೊತೆಗೆ ಸಾಮಾಜಿಕ ಸತ್ಯವಾದ ಜೀವನವನ್ನು ಸಾಹಿತ್ಯ ಅನುಕರಿಸುತ್ತಿರುತ್ತದೆ. ಎಲ್ಲಕ್ಕೂ ಮುಖ್ಯವಾಗಿ ಸಾಹಿತಿಯೇ ಸ್ವತಃ ಸಮಾಜದ ಸದಸ್ಯನೂ ಆಗಿದ್ದಾನೆ ಎನ್ನುವುದು. ಅಂತಹ ಸದಸ್ಯನಿಗೆ ಸಾಮಾಜಿಕ ಕರ್ತವ್ಯವೂ ಇರುತ್ತದೆ. ಅದರ ನಿರ್ವಹಣೆಗಾಗಿ ಆತ ಸಮಾಜವನ್ನು ಆಶ್ರಯಿಸಿಯೇ ಇರುತ್ತಾನೆ. ಯಾವತ್ತೂ ಹಿಮ್ಮುಖವಾಗಿ ನಡೆಯುವುದಿಲ್ಲ. ಹೀಗಾಗಿ ಸಾಹಿತ್ಯ ಮತ್ತು ಸಮಾಜ ಅನೇಕ ನೆಲೆಗಳಲ್ಲಿ, ಅನೇಕ ಆಯಾಮಗಳಲ್ಲಿ ಅಂತರ್‌ಸಂಬಂಧವನ್ನು ಹೊಂದಿವೆ. ಸಾಹಿತ್ಯ ಮತ್ತು ಸಮಾಜದ ಈ ಸಂಬಂಧಗಳನ್ನು ಸಂಕುಚಿತಗೊಳಿಸಿಯೂ ನೋಡಬಾರದು. ಅಲ್ಲಿ ವಿಶಾಲತೆಯೂ, ಸೂಕ್ಷ್ಮತೆಯೂ ಅತಿಮುಖ್ಯವಾದುದು. ಏಕೆಂದರೆ ಒಬ್ಬ ಸಾಹಿತಿ ತನ್ನ ಕಾಲ ಮತ್ತು ಸಮಾಜಕ್ಕೆ ಪ್ರಾತಿನಿಧಿಕವಾಗಿರಬೇಕು ಎನ್ನುವುದು ಅನೇಕ ಬಾರಿ ಮೌಲ್ಯ ನಿರ್ಣಯಾತ್ಮಕ ಮಾನದಂಡವಾಗುವ ಸಾಧ್ಯತೆಯಿರುತ್ತದೆ. ಅದಕ್ಕೂ ಮುಖ್ಯವಾಗಿ ಪ್ರಾತಿನಿಧಿಕ ಎನ್ನುವಂತಹದ್ದು ವಿಶಾಲ ಅರ್ಥವನ್ನು ಒಳಗೊಂಡದ್ದು. ಏಕೆಂದರೆ ಪ್ರಾಚೀನ ಸಂದರ್ಭದ ಕವಿಗಳು ಅನೇಕ ಸಂದರ್ಭಗಳಲ್ಲಿ ಮತ್ತೊಂದು ವರ್ಗ(ಆಡಳಿತ ವರ್ಗದ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡದ್ದುಂಟು. ಇಂತಹ ಆಸ್ಥಾನ ಕಾವ್ಯ ಕವಿಯ ಲೇಖನಿಯಿಂದ ಸೃಷ್ಟಿಗೊಂಡಿದ್ದರೂ ಆಶ್ರಯದಾತರ ಭಾವನೆಗೆ ಮತ್ತು ಅಭಿರುಚಿಗೆ ಅನುಗುಣವಾಗಿ ರಚನೆಗೊಂಡಿರುತ್ತದೆ. ಅಂತಹ ಸಂದರ್ಭದಲ್ಲಿ ಒಂದು ಕಾವ್ಯದ ಸಾಮಾಜಿಕ



ಸಂಬಂಧವು ಎಂತಹದ್ದು ಎನ್ನುವುದನ್ನು ಮೇಲೆ ಹೇಳಿದಂತೆ ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಬೇಕಾಗುತ್ತದೆ. ಇದನ್ನು ಗುರುತಿಸಬೇಕಾದರೆ ಸಾಹಿತ್ಯಕ ಸಮಾಜಶಾಸ್ತ್ರ ಅಗತ್ಯವಾಗಿ ಬೇಕಾಗುತ್ತದೆ.

ಸಮಾಜವನ್ನು ಸಾಹಿತ್ಯದಲ್ಲಿ ವ್ಯಕ್ತಪಡಿಸುವ ರೀತಿಗೂ ಒಬ್ಬ ಇತಿಹಾಸಕಾರ, ಸಮಾಜವಿಜ್ಞಾನಿ, ಮಾನವವಿಜ್ಞಾನಿ, ಭಾಷಾಶಾಸ್ತ್ರಜ್ಞ ಇವರು ನೋಡುವ ದೃಷ್ಟಿಗೂ ವ್ಯತ್ಯಾಸವಿರುತ್ತದೆ. ಇವರೆಲ್ಲರೂ ಸಮಾಜದ ರೀತಿ-ನೀತಿಗಳನ್ನು ದಾಖಲಿಸುತ್ತಾರೆ. ಆದರೆ ಸಾಹಿತಿಯಾದವನು ಸಾಹಿತ್ಯ ಕೃತಿಯಲ್ಲಿ ಮಾತ್ರ ಸಮಾಜದ ಅಂದಂದಿನ ಬದುಕಿನ ಸಂಗತಿಗಳ ಸ್ವರೂಪವನ್ನು ಅದರ ಸಮಗ್ರ ಬದುಕನ್ನು ತೀವ್ರವಾದ ಸಂವೇದನೆಗೆ ಒಳಗುಪಡಿಸಿ ಸಾಹಿತ್ಯ ಕೃತಿಯಲ್ಲಿ ಚರ್ಚಿಸುತ್ತಾನೆ. ಅಂದರೆ ಸಾಹಿತಿಯಾದವನು ತನ್ನ ಸುತ್ತಣ ಸಮಾಜದ ಆಶೋತ್ತರಗಳನ್ನು ಆಸೆ ಆಕಾಂಕ್ಷೆಗಳ ಹಾಗೂ ನಂಬಿಕೆಗಳ, ಮೌಲ್ಯಗಳ ಒಳಹೊಕ್ಕು ಕಂಡು ತನ್ನ ಸಾಹಿತ್ಯ ಕೃತಿಯಲ್ಲಿ ಕಲಾತ್ಮಕವಾಗಿ

ಸೃಜಿಸುತ್ತಾನೆ. ಈ ರೀತಿಯಾಗಿ ಸೃಜಿಸುವಾಗ ಆ ಸಮಾಜದಲ್ಲಿನ ಜನರ, ನಂಬಿಕೆಗಳು, ಆಚಾರ ವಿಚಾರಗಳು, ಜೀವನ ವಿಧಾನ, ಅವರ ಬಡತನ-ಸಿರಿತನ ಅವರು ಅನುಭವಿಸುವ ನೋವು, ಸಂಕಟ, ಸಾಮಾಜಿಕ ಅಪಮಾನ, ಅಸಮಾನತೆಯ ಸ್ವರೂಪ, ಅದರಿಂದಾಗುವ ಹಿಂಸೆ, ಕ್ರೌರ್ಯ ಇತ್ಯಾದಿಗಳನ್ನು ಸಾಹಿತಿಯಾದವನು ಹಿಡಿದಿಟ್ಟು ಆ ಸಮಾಜ ಶ್ರೇಷ್ಠ ಸಮಾಜ ವಾಗುವುದರ ಕಡೆ ಚಲಿಸಬೇಕೆಂಬ ಆಶಯ ವ್ಯಕ್ತಪಡಿಸಿರುತ್ತಾನೆ.

ಸಾಹಿತ್ಯ ಮತ್ತು ಸಮಾಜದ ಬಗ್ಗೆ ಚರ್ಚಿಸುವಾಗ ಸಾಹಿತಿಯಾದವನು ಸಮಕಾಲೀನ ವಸ್ತುವನ್ನು ಆರಿಸಿಕೊಂಡು ಕೃತಿ ರಚಿಸಿದರೆ ಮಾತ್ರ ಸಮಾಜದ ಸ್ವರೂಪವನ್ನು ವ್ಯಕ್ತಪಡಿಸಬಹುದು. ಆದರೆ ಪುರಾಣ ಇತಿಹಾಸದ ವಸ್ತುವನ್ನು ತೆಗೆದುಕೊಂಡರೆ ಅದರಲ್ಲಿ ಸಮಕಾಲೀನ ಸಮಾಜದ ಸಮಸ್ಯೆಗಳನ್ನು ವ್ಯಕ್ತಪಡಿಸುವುದು ಹೇಗೆ ಎಂಬ ಪ್ರಶ್ನೆ ಎದುರಾಗುತ್ತದೆ. ಹಿಂದೆ, ಪಂಪನಿಂದ ಮುದ್ದಣನವರೆಗಿನ ಸಾಹಿತ್ಯ ಅವಲೋಕನ ಮಾಡಿದರೆ ಪೌರಾಣಿಕ ವಸ್ತು ಆರಿಸಿಕೊಂಡು ಕಾವ್ಯ ಬರೆದದ್ದು ಢಾಳಾಗಿ ಕಾಣಿಸುತ್ತದೆ. ಅದರಲ್ಲಿ ಸಮಾಜದ ಆಗು ಹೋಗುಗಳು ಇವೆಯೇ ಎಂದು ಪ್ರಶ್ನಿಸಬಹುದು. ಹೌದು, ಪಂಪ, ರನ್ನ, ವಚನಕಾರರು ಮುಂತಾದವರಲ್ಲಿ ಸಮಾಜದ ಅನಿಷ್ಟಗಳು, ಸಮಾನತೆ ಚಿಂತನೆ, ಅಸಮಾನತೆ, ಜಾತಿ ವ್ಯವಸ್ಥೆ ನೋವು, ಅಪಮಾನಗಳು ಅಂತರ್ಗತವಾಗಿದ್ದು ಕ್ರೌರ್ಯವಿಲ್ಲದ, ಸಮಾಜದ ಕನಸನ್ನು ಕಂಡಿದ್ದಾರೆ. ಎಲ್ಲಾ ಕವಿಗಳು ಒಂದಲ್ಲಾ ಒಂದು ರೀತಿಯಲ್ಲಿ ಸಮಾಜದ ಸ್ವರೂಪವನ್ನು ಕಂಡಿರಿಸಿದ್ದಾರೆ. ಕೀರ್ತನಕಾರರಾದ ಕನಕ, ಪುರಂದರರು ಕುಲದ ಬಗ್ಗೆ ಜಾತಿ ಬಗ್ಗೆ ತಳೆದ ನಿಲುವು ಮಹತ್ವದ್ದಾಗಿದೆ. ಆದಿಕವಿ ಪಂಪ ತನ್ನ ಕಾವ್ಯದಲ್ಲಿನ ಸಾಮಾಜಿಕ ಅಂಶಗಳು ಅನೇಕ ಮಿತಿಗಳ ಮಧ್ಯದಲ್ಲಿಯೇ 'ಮನುಷ್ಯಜಾತಿ ತಾನೊಂದೆ ವಲಂ' ಎಂದು ಅಭಿವ್ಯಕ್ತಿಸಿದ್ದಾನೆ. ನಂತರದ ಕಾಲದಲ್ಲಿ ಬಂದ ಕನ್ನಡ ಕಾವ್ಯಗಳಲ್ಲಿಯ ಸಾಮಾಜಿಕ ಅಂಶಗಳಿಗೂ ಪಂಪನಲ್ಲಿನ ಸಾಮಾಜಿಕ ಅಂಶಗಳಿಗೂ ವ್ಯತ್ಯಾಸಗಳಿರುವುದನ್ನು ಗಮನಿಸಬಹುದು. ವಚನ ಸಾಹಿತ್ಯ ಸಂದರ್ಭದಲ್ಲಿ ಬಸವಣ್ಣನಾದಿಯಾಗಿ ಕುಲಗೋತ್ರಗಳ ತರತಮ ಭಾವವನ್ನು, ವ್ಯವಸ್ಥೆಯನ್ನು ವಿರೋಧಿಸಿದರು. ಅಷ್ಟೇ ಅಲ್ಲ ಸಮಸಮಾಜದ ಕನಸುಕಂಡರು. ಭೀಕರವಾಗಿದ್ದ ಅಸ್ಪೃಶ್ಯತೆಯನ್ನು ಮೂಲೋತ್ಪಾಟನೆ ಮಾಡಲು, ಅಪ್ಪನು



ನಮ್ಮ ಸಮಗಾರನೆಂಬೆನೆ ಹರಳಯ್ಯ, ಮಾದಾರಚೆನ್ನಯ್ಯ, ಅಪ್ಪನ ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ ಎಂದು ಹೇಳಿದ. 'ಡೋಹರನೆಂಬೆನೆ ಕಕ್ಕಯ್ಯನ, ಮಾದಾರನೆಂಬೆನೆ ಚೆನ್ನಯ್ಯನ', 'ಆನು ಹಾರುವನೆಂದರೆ ನಗುವ ನಮ್ಮ ಕೂಡಲಸಂಗಮ'ನೆಂದು ಹೇಳುವ ಮೂಲಕ ಸಮಾಜಕ್ಕೊಂದು ಹೊಸ ಕಲ್ಪನೆಯನ್ನು, ದರ್ಶನವನ್ನು ನೀಡಿದ. ಅದಕ್ಕೆ ಏನೊ ಸಾಹಿತ್ಯ ಸಮಾಜವನ್ನು ಪ್ರತಿಕೃತಿಸುವುದಿಲ್ಲ. ಬದಲಾಗಿ ಸಮಾಜವನ್ನು ರೂಪಿಸುವ ಪ್ರಯತ್ನ ಮಾಡುತ್ತದೆ. ಈಗಾಗಲೇ ಹೇಳಿದಂತೆ ಸಾಹಿತಿ, ಲೇಖಕನಾದವನು ಚಾಲ್ತಿಯಲ್ಲಿರುವ, ವರ್ತಮಾನದ ಜೊತೆಗೆ ರೂಪುಗೊಳ್ಳಬೇಕಾದ ಭವಿಷತ್‌ನ್ನು ಕುರಿತು ಚಿಂತಿಸುತ್ತಾನೆ. ಅಂದರೆ ಆತ ಸಮಾಜದಿಂದ ಪ್ರಭಾವಿತನಾಗುವುದರ ಜೊತೆಗೆ ತನ್ನ ಪ್ರಭಾವವು ಸಮಾಜದ ಮೇಲಾಗುವಂತೆ ಮಾಡುತ್ತಾನೆ. ಸಮಕಾಲೀನ ಸಾಮಾಜಿಕ ಬದುಕಿನ ಚಿತ್ರಣವನ್ನು ಕಟ್ಟುತ್ತ ಆಗಬೇಕಾದ ಬದಲಾಣೆಗಳನ್ನು, ಸಮಾಕಾಲೀನ

ಮೌಲ್ಯಗಳಿಗೆ ರೂಪುಗೊಳ್ಳಬೇಕಾದ ಹೊಸ ಮೌಲ್ಯಗಳನ್ನು ಧಾರ್ಮಿಕವಾಗಿ, ಆರ್ಥಿಕವಾಗಿ, ಆಗಬೇಕಾದ ರಾಜಕೀಯ, ಸಾಂಸ್ಕೃತಿಕವಾಗಿ ಪಲ್ಲಟಗಳನ್ನು; ಸಾಮಾಜಿಕ ಸಂಬಂಧಗಳಲ್ಲಿನ ಬಿರುಕು ಮುಂತಾದವುಗಳೆಲ್ಲವನ್ನು ಅಲ್ಲಿ ಅಭಿವ್ಯಕ್ತಿಸುವ ಪ್ರಯತ್ನ ಮಾಡುತ್ತಾರೆ. ಇಂಥದೊಂದು ಪ್ರಯತ್ನ ಬಸವಾದಿ ಶರಣರಲ್ಲಿ, ಕಾಣಬಹುದು. ಬಸವೋತ್ತರದ ಪ್ರಮುಖ ಕೀರ್ತನಕಾರಾದ ವಿಶೇಷವಾಗಿ ಕನಕ, ಪುರಂದರರು 'ಕುಲಕುಲವೆಂದು ಹೊಡೆದಾಡುವಿರಿ ನಿಮ್ಮ ಕುಲದ ನೆಲೆಯೇನಾದರು ಬಲ್ಲಿರಾ!, ಹೊಲೆಯ ಊರ ಹೊರಗಿದ್ದಾನೆ ಎನ್ನುತ್ತಿರಲ್ಲ ಹೊಲೆಯನು ಊರೊಳಗಿಲ್ಲವೆ' ಎಂದೆಲ್ಲ ಪ್ರಶ್ನಿಸಿದ್ದಾರೆ.

ಇದೆಲ್ಲ ಏನೇ ಇದ್ದರೂ ಪಾಮರರು, ದಲಿತರು ಇಂದು ಮತಧರ್ಮದ ಆವರಣದಿಂದ ಹೊರಗುಳಿಯಬೇಕಾಯಿತು. ಜನರಿಂದ ಹುಟ್ಟಿ, ಜನಪರವಾಗಿ ನಿಂತ ಜನರಿಗಾಗಿ ಮಾತಾಡಿದ ವಚನ ಸಾಹಿತ್ಯ ಕೂಡ ಧಾರ್ಮಿಕ ನೆಲೆಯಿಂದ ಮುಕ್ತ ಆಗಲಿಕ್ಕೆ ಸಾಧ್ಯವಾಗಲಿಲ್ಲ. ವಚನಕಾರರು ಪ್ರಗತಿಪರರೂ ಹೌದು, ಜಾತಿ ಮೀರಿದವರೂ ಹೌದು. ಆದರೆ, ಧಾರ್ಮಿಕ ಚೌಕಟ್ಟು ರೂಪಿಸಿಕೊಂಡು ಉಳಿಯಬೇಕಾಯಿತು. ಕೀರ್ತನಕಾರರು ಕೂಡ ವೈಚಾರಿಕರಾಗಿದ್ದರೂ ಧಾರ್ಮಿಕ ಚೌಕಟ್ಟಿನ ಆವರಣದಿಂದ ಅವರೂ ಮುಕ್ತರಾಗಲಿಲ್ಲ.

ಸಮಕಾಲಿನ ಸಂದರ್ಭದಲ್ಲೂ ಅಂದರೆ ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭಲ್ಲೂ ಪೌರಾಣಿಕ ಹಾಗೂ ಚಾರಿತ್ರಿಕ ವಸ್ತುಗಳನ್ನು ಆರಿಸಿಕೊಂಡು ಸಾಹಿತ್ಯ ಕೃತಿಗಳನ್ನು ರಚಿಸಿದಿದ್ದಾರೆ. ಸಾಹಿತ್ಯ ಮತ್ತು ಸಮಾಜದ ಸಂಬಂಧದ ಬಗ್ಗೆ ತೀವ್ರವಾಗಿ ಯೋಚಿಸುವ ಸಮಾಜದ ಸಮಸ್ಯೆಗಳ ಬಗ್ಗೆಯೇ ಚಿಂತಿಸುವ ಬಂಡಾಯ ದಲಿತ ಸಾಹಿತ್ಯದ ಲೇಖಕರೂ ಸಹ ಚಾರಿತ್ರಿಕ ಪೌರಾಣಿಕ ವಸ್ತುಗಳನ್ನು ಆರಿಸಿಕೊಂಡು ಕೃತಿಗಳನ್ನು ರಚಿಸಿದ್ದಾರೆ. ಪುರಾಣ ಕಾವ್ಯಗಳಲ್ಲಿ ಅಡಕವಾಗಿರುವ ಸಾಮಾಜಿಕ ಹುನ್ನಾರಗಳನ್ನು ಎತ್ತಿಇ ತೋರಿಸಿದ್ದಾರೆ. ಮನಜ ಅವರ 'ಸೂರಪ್ಪ', ಸಿದ್ದಲಿಂಗಯ್ಯ ಅವರ 'ಏಕಲವ್ಯ, ಕೆ.ಬಿ. ಸಿದ್ದಯ್ಯ ಅವರ 'ಬಕಾಲ', 'ಗಲ್ಲೆಬಾನಿ' ಬರಗೂರ ಅವರ 'ಸೂರ್ಯ' ಇತರೆ ಕೃತಿಗಳನ್ನು ನಾವು ಜ್ಞಾಪಿಸಿಕೊಳ್ಳಬಹುದು. ಕುವೆಂಪು ಅವರಿಂದ



ಮೊದಲ್ಗೊಂಡು ಸಿದ್ಧಲಿಂಗಯ್ಯವನವರೆಗೂ ಚಾರಿತ್ರಿಕ ಮತ್ತು ಪೌರಾಣಿಕ ವಸ್ತುಗಳನ್ನು ಆರಿಸಿಕೊಂಡು ಸಾಹಿತ್ಯಕ್ಕೂ ಮತ್ತು ಸಮಾಜಕ್ಕೂ ಇರುವ ಸಂಬಂಧದ ಸ್ವರೂಪದ ಬಗ್ಗೆ ಅವರು ಬರೆದ ಕೃತಿಗಳಲ್ಲಿ ದಾಖಲಾದ ವಿಷಯಗಳಿಂದ ಖಚಿತ ಪಡಿಸಿಕೊಳ್ಳಬಹುದು.

ಪುರಾಣದ ಕಾಲದಲ್ಲಾದ ಸಾಮಾಜಿಕ ಅಸಮಾನತೆ ಎಂಥಹದು ಎನ್ನುವುದನ್ನು ಶಿಕ್ಷಣ ಮತ್ತು ವೈದಿಕ ಪ್ರಜ್ಞೆಯ ವಿಚಾರ ಬಂದಾಗಲೆಲ್ಲ ರಾಮಕೊಂದ ಶಂಭೂಕ, ದ್ರೋಣನ ವಕ್ರದಷ್ಟಿಗೆ ಬಲಿಯಾದ ಏಕಲವ್ಯ, ಸಾಮಾಜಿಕ ಅವಜ್ಞೆಗೆ ಗುರಿಯಾದ ಗುಣಾಢ್ಯ ನೆನಪಾಗುತ್ತಾರೆ. ಅಕ್ಷರವನ್ನು ಬಯಸಿದ ಕಾರಣಕ್ಕಾಗಿಯೇ ಶಂಭೂಕ, ಏಕಲವ್ಯ, ಗುಣಾಢ್ಯರು ಬಲಿಯಾದದ್ದು ಎಂಬುದು ಪುರಾಣಗಳು ಖಚಿತ ಪಡಿಸುತ್ತವೆ. ಕೆಳಜಾತಿಯವನು ಸಂಸ್ಕೃತ ಅಕ್ಷರಗಳನ್ನು

ಪಠಣ ಮಾಡುವುದು ಕೇಳಿಸಿಕೊಂಡರೆ ಕಿವಿಯಲ್ಲಿ ಕಾದ ಸೀಸ ಹುಯ್ಯಬೇಕು, ಓದಿದರೆ ನಾಲಿಗೆ ಸೀಳಬೇಕು ಎಂಬುವ ಸಾಂಪ್ರದಾಯಿಕತೆಯ ಕ್ರೌರ್ಯ ಇದಾಗಿದೆ. ಇಂಥ ಕ್ರೌರ್ಯದ ವಿರುದ್ಧ ಆಧುನಿಕ ಕಾಲದ ಅಯ್ಯನ್‌ಕಾಳಿ, ನಾರಾಯಣ ಗುರು, ಅಂಬೇಡ್ಕರ್, ಪೆರಿಯಾರ್, ಬಿ. ಶ್ಯಾಮಸುಂದರ್ ಮುಂತಾದವರ ಸಾಮಾಜಿಕ ನ್ಯಾಯದ ಪರವಾದ ಹೋರಾಟಗಳು ನಮ್ಮ ಮುಂದೆ ತೆರೆದುಕೊಳ್ಳುತ್ತವೆ.

ಪುರಾಣ, ಚರಿತ್ರೆಯ ಕಾಲಘಟ್ಟದಲ್ಲಿ ನಡೆದಿರಬಹುದಾದ ಅಕ್ಷರ ದ್ರೋಹಿಗಳ ಹುನ್ನಾರಗಳು ಇವತ್ತಿನ 21ನೆಯ ಶತಮಾನದಲ್ಲಿ ಇಲ್ಲವೆ? ಎಂಬುದು ನಮ್ಮ ನಡುವಿನ ಗಂಭೀರವಾದ ಪ್ರಶ್ನೆ, ಕುವೆಂಪು ಅವರ ಒಟ್ಟು ಬರಹ ಮತ್ತು ಬದುಕು ಒಂದರ್ಥದಲ್ಲಿ ವೈದಿಕ ಪ್ರಜ್ಞೆಯ ವಿರುದ್ಧದ ಸಂಘರ್ಷವೇ ಆಗಿದೆ. ಜಾಡ ಮಾಲಿಯೊಬ್ಬನಿಗೆ ಶಿವನನ್ನು ಸಮೀಕರಿಸಿ 'ಜಲಗಾರ' ನಾಟಕ ಬರೆದಾಗ, ಕುವೆಂಪು ಇತರರ ದೃಷ್ಟಿಯಲ್ಲಿ ಜಾತಿವಾದಿ ಲೇಖಕರಾಗಿ ಬಿಂಬಿತವಾಗುತ್ತಾರೆ, 'ಬೆರಳಗೆ ಕೊರಳ್', 'ಶೂದ್ರ ತಪಸ್ವಿ' ನಾಟಕಗಳು ಸಾಮಾಜಿಕ ಅಸಮಾನತೆಯನ್ನು ಚಿತ್ರಿಸುತ್ತವೆ. ಕುವೆಂಪು ಅವರು 'ಇಂಗ್ಲಿಷ್ ಶಿಕ್ಷಣ ನನಗೆ ದೊರೆಯದಿದ್ದರೆ ನಾನು ಯಾರದೋ ಮನೆಯ ಕೊಟ್ಟಿಗೆಯ ಸಗಣಿ ಬಾಚಬೇಕಾಗಿತ್ತು' ಎಂದಿಲ್ಲವೆ. ಜ್ಯೋತಿಬಾ ಪುಲೆ, ಸಾವಿತ್ರಿ ಬಾಯಿ ಫುಲೆ ಹೋರಾಟ ಮಾಡದಿದ್ದರೆ ಅಂಬೇಡ್ಕರ್ ಅವರು ಅಕ್ಷರವೇತ್ತರಾಗುತ್ತಿರಲಿಲ್ಲ. ಒಂದು ವೇಳೆ ಅಂಬೇಡ್ಕರ್ ಬರುತ್ತರಲಿಲ್ಲವೆಂದರೆ ಬಹುಸಂಖ್ಯಾತ ದಲಿತರ, ಮಹಿಳೆಯರ ಸ್ಥಿತಿಯೇನಾಗುತ್ತಿತ್ತು ನಮನ್ನೇ ಎಂಬುದು ನಾವು ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ.

ಮೊದಲೇ ತಿಳಿಸಿದಂತೆ ಸಾಹಿತ್ಯದ ಮಾಧ್ಯಮ ಭಾಷೆ, ಭಾಷೆ ಸಮಾಜದ ಸೃಷ್ಟಿ, ಆದುದರಿಂದ ಸಮಾಜದ ಸ್ವರೂಪ ಸಾಹಿತ್ಯ ಕೃತಿಯಲ್ಲಿ ಅಂತರ್ಗತವಾಗಿರುತ್ತದೆ. ಆದುದರಿಂದ ಸಾಹಿತ್ಯವು ಸಮಾಜ ಮತ್ತು ಪರಿಸರ, ಸಮಾಜ ಮತ್ತು ಮನುಷ್ಯ, ಮನುಷ್ಯ ಮತ್ತು ಮನುಷ್ಯರ ಸಂಬಂಧಾಂತರಗಳನ್ನು ಒಳಗೊಂಡು ಅದರ ಸ್ವರೂಪವನ್ನು ಹಿಡಿದಿಟ್ಟುಕೊಂಡಿರುತ್ತದೆ. ಈ ರೀತಿ ಹಿಡಿದಿಟ್ಟುಕೊಂಡಾಗ ಅದು ಮನುಷ್ಯನ ಕಷ್ಟ ಕಾರ್ಪಣ್ಯಗಳನ್ನು, ನೋವು, ದುಃಖ ದುಮ್ಮಾನಗಳನ್ನು, ಸಮಾಜದಲ್ಲಿನ ಅಸಮಾನತೆ, ಬಡತನ, ಜಾತಿ ವ್ಯವಸ್ಥೆ, ಅದರಿಂದುಂಟಾಗುವ ಅಪಮಾನ, ಶೋಷಣೆ, ಕ್ರೌರ್ಯ ಇತ್ಯಾದಿಗಳನ್ನು ಸಾಗಿ, ಸಮಾನತಾ ಸಮಾಜದ ಆಶಯಗಳನ್ನು ಒಳಗೊಂಡು,



ಸಮಾನತಾ ಸಮಾಜದ ನಿರ್ಮಾಣದ ಚಲನೆಯ ಕಡೆ, ಪ್ರಗತಿಯ ಕಡೆ, ಮಾನವನ ಅದರಲ್ಲೂ ಎಲ್ಲಾ ಮಾನವನ ಏಳಿಗೆಯ ಬಗ್ಗೆ ಚಿಂತಿಸುವ ಕಡೆ ಚಲಿಸುತ್ತಿರುತ್ತದೆ.

ಪಂಪನಿಂದ ಹಿಡಿದು ಸಿದ್ದಲಿಂಗಯ್ಯ, ಚೆನ್ನಣ್ಣ ಇತ್ಯಾದಿ ಲೇಖಕರ ಇಲ್ಲಿಯವರೆಗಿನ ಸಾಹಿತ್ಯ ಕೃತಿಗಳಲ್ಲಿ ಇದನ್ನು ಕಾಣಬಹುದು. ಹಳಗನ್ನಡ ನಡುಗನ್ನಡ ಕಾವ್ಯ ಘಟ್ಟಗಳಲ್ಲಿದ್ದ ಸಾಹಿತ್ಯ ಮತ್ತು ಸಮಾಜದ ಸಂಬಂಧಗಳ ಸ್ವರೂಪಕ್ಕೂ ಹೊಸಗನ್ನಡ ಸಾಹಿತ್ಯ ಮತ್ತು ಸಮಾಜದ ಸಂಬಂಧದ ಸ್ವರೂಪಕ್ಕೂ ವ್ಯತ್ಯಾಸಗಳಿವೆ. ಹಳಗನ್ನಡ ಮತ್ತು ನಡುಗನ್ನಡ ಸಂದರ್ಭದಲ್ಲಿ ಪ್ರಭುನಿಷ್ಠ, ನೀತಿನಿಷ್ಠ ಆಧ್ಯಾತ್ಮ ನಿಷ್ಠ ಮನುಷ್ಯ ಮತ್ತು ಸಮಾಜದ ಸ್ವರೂಪದ

ಅಭಿವ್ಯಕ್ತಿ ಇದ್ದರೆ ಅದು ನವೋದಯ ಕಾಲಘಟ್ಟದಲ್ಲಿ, ಪಾಶ್ಚಾತ್ಯ ಶಿಕ್ಷಣ ಕ್ರಮದಿಂದಾಗಿ ಹುಟ್ಟಿಕೊಂಡ ಹೊಸ ಸಾಮಾಜಿಕ ಎಚ್ಚರದಿಂದ ಬರೆದ ಸಾಹಿತ್ಯ. ನವೋದಯದ ಸಂದರ್ಭದ ವರ್ಣ, ವರ್ಗ, ಜಾತಿ ವ್ಯವಸ್ಥೆಯನ್ನು ಕುರಿತು ಬರೆದರೂ ಅದು ಸುಧಾರಣೆಯ ಮಟ್ಟದ್ದಾಗಿತ್ತು. ಕುವೆಂಪು ಮತ್ತು ಕಾರಂತರಲ್ಲಿ ಅದು ತೀವ್ರವಾಗಿದ್ದರೂ ಸಮಾಜ ಮತ್ತು ಸಾಹಿತ್ಯದ ಸಂಬಂಧ ನಾನಾ ಮಗ್ಗುಲುಗಳಿಂದ ಅರ್ಥಪೂರ್ಣವಾಗಿ ಮೌಲಿಕವಾಗಿ ಬಂದಿದ್ದು ದಲಿತ ಬಂಡಾಯದ ಸಂದರ್ಭದಲ್ಲಿ, ಬಿ. ಬಸಲಿಂಗಪ್ಪನವರ ಭೂಸಾಪ್ರಕರಣ ನಾಡಿನಾದ್ಯಾಂತ ತಳವರ್ಗದವರಲ್ಲಿ ಒಂದು ಸಂಚಲನವನ್ನುಂಟು ಮಾಡಿತು. ಅದು ಈಗ ಇತಿಹಾಸ. ಈ ಘಟ್ಟದಲ್ಲಿ ಅಂದರೆ 1975ರ ನಂತರ ಸಿದ್ದಲಿಂಗಯ್ಯನವರ ಹೊಲೆ ಮಾದಿಗರ ಹಾಡು, ದೇವನೂರು ಮಹಾದೇವ 'ದ್ಯಾವನೂರು' ಕಥಾ ಸಂಕಲನ ಬಂದ ನಂತರ ಸಾಹಿತ್ಯ ಮತ್ತು ಸಮಾಜದ ಸ್ವರೂಪ ಬದಲಾಯಿತು.

ದಲಿತ ಸಾಹಿತ್ಯದ ಆರಂಭದ ಕಾಲದಲ್ಲಿ ಚಳವಳಿ ನಿಷ್ಠ ಸಾಹಿತ್ಯ ರಚನೆಯಾಗುತ್ತಿತ್ತು. ದಲಿತ ಶೋಷಿತರಲ್ಲಿ ಅರಿವು ಮೂಡಿಸುವ ನೆಲೆಯಲ್ಲಿ, ಸಮುದಾಯವನ್ನು ಸಂಘಟಿಸುವ ಪ್ರಯತ್ನದಲ್ಲಿ ಕಾವ್ಯ ಕಥೆ ರಚನೆಯಾಗುತ್ತಿದ್ದವು. ಅಕ್ಷರದ ಮಹತ್ವ ವಿಶೇಷವಾಗಿ ಪ್ರತಿಪಾದಿಸಲಾಗುತ್ತಿತ್ತು. ಈಗಲೂ ಈ ಪ್ರಯತ್ನ ಇಲ್ಲವೆಂದಿಲ್ಲ. ಆದರೆ ದಲಿತ ಸಾಹಿತ್ಯ, ಚಿಂತನೆಗೆ ಪ್ರಧಾನ ಪ್ರೇರಣೆ ಬಾಬಾಸಾಹೇಬ್ ಅಂಬೇಡ್ಕರ್ ಅವರ ಬದುಕು ಹೋರಾಟ, ಹೀಗಾಗಿ ಜಾತಿಪದ್ಧತಿ ವಿರೋಧಿಸುವುದು, ಚಾಕರಿಗಳನ್ನು ಧಿಕ್ಕರಿಸಿ ಹೊರಬಂದದ್ದಾಗಿದೆ. ಉದಾಹರಣೆಗೆ ಸತ್ತ ಸುದ್ದಿ ಊರಿಂದೂರಿಗೆ ಮುಟ್ಟಿಸುವುದು, ನಾಟಿಕಾರಿಕೆ ಮಾಡುವುದು, ಕಸಗೂಡಿಸುವುದು, ವಾಲೀಕಾರರೆ ಮಾಡುವುದು ಇವೆಲ್ಲ ಗುಲಾಮಿ ಲಕ್ಷಣವೆಂದು ಹೊರಬಂದ ಸಮುದಾಯ ಅಕ್ಷರದ ತೆಕ್ಕೆಗೆ ಸೇರಿತು. ಆ ಮೂಲಕ ಅಸ್ಪೃಶ್ಯತೆ ಅಪಮಾನ, ಬಹಿಷ್ಕಾರಕ್ಕೆ ತುತ್ತಾಗಬೇಕಾಯಿತು. ಇಂಥ ವಿಷಯಗಳು ಸಾಹಿತ್ಯದ ವಸ್ತುವಾದದ್ದು ಕಾಣುತ್ತೇವೆ. ಆದರೆ ಕೆಲವರು ಚಳವಳಿ ನಿಷ್ಠ ಸಾಹಿತ್ಯವನ್ನು ಒಪ್ಪಿಕೊಳ್ಳುತ್ತಿಲ್ಲ. ಕಾರಣ ಅವರಿಗೆ ಸಾಮಾಜಿಕ ಬದುಕಿನಡೆಗಿನ ದೃಷ್ಟಿಕೋನವೇಬೇರೆಯಾಗಿದೆ. ಅಂತಹವರು ಸಂಪ್ರದಾಯವಾದಿಗಳಾಗಿದ್ದು, ಸನಾತನತೆಯನ್ನು ಕಾಪಾಡುವುದಕ್ಕಾಗಿಯೇ ಬರೆಯುತ್ತಾರೆ ಮತ್ತು ಆಲೋಚಿಸುತ್ತಾರೆ. ಆದರೆ ಚಳವಳಿ ನಿಷ್ಠ ಸಾಹಿತ್ಯ ಸದಾ ಸಮಾಜದ ಬಗ್ಗೆ ಆಲೋಚಿಸುತ್ತದೆ. ಮತ್ತು ಸಾಮಾಜಿಕರನ್ನು ಜಾಗೃತಗೊಳಿಸುತ್ತದೆ. ಇಂತಹ ಜಾಗೃತೆಯನ್ನು ಅವರು ಇಷ್ಟಪಡುವುದಿಲ್ಲ. ಏಕೆಂದರೆ ಅವರಿಗೆ ಸಮಾಜ ಪರಿವರ್ತಿತಗೊಳ್ಳಬೇಕೆಂಬ, ಸಾಮಾಜಿಕ

ಬದುಕು ಸುಧಾರಿಸಬೇಕೆಂಬ ಯಾವ ಕಳಕಳಿಯಾಗಲಿ, ಕಾಳಜಿಯಾಗಲಿ ಇಲ್ಲ. ಒಟ್ಟಿನಲ್ಲಿ ಅವರು ಸಾಹಿತ್ಯ ಪಾಂಡಿತ್ಯಪೂರ್ಣವಾಗಿರಬೇಕು, ಸಾಮಾಜಿಕ ಬದುಕಿಗಿಂತ ಮುಖ್ಯವಾಗಿ ಸಾಂಪ್ರದಾಯಿಕವಾಗಿ ಬಂದ ಮೌಲ್ಯಗಳನ್ನು ಪ್ರತಿಪಾದಿಸಬೇಕು ಎಂದು ಬಯಸುತ್ತಾರೆ.

ಇತ್ತೀಚಿನ ದಶಕಗಳ ದಲಿತರು ಬರೆದ ಕಥೆ, ಕಾವ್ಯ ಅಥವಾ ಸಾಹಿತ್ಯದ ಇತರ ಪ್ರಕಾರಗಳಾಗಲಿ ವಾಚ್ಯದಿಂದ ಸೂಕ್ಷ್ಮತೆಯಡೆಗೆ ವಾಲಿದ್ದು ಕಾಣುತ್ತೇವೆ. ಹಾಗೆ ನೋಡಿದರೆ ವಾಚ್ಯವಾಗಿ ಹೇಳೋದಂದ್ರೆ ಸಾಹಿತ್ಯದ ಸೂಕ್ಷ್ಮತೆ ಹಾಳಾದಂತಲ್ಲ. ಜನರದೀಕಾರಣ ಸಾಮಾಜಿಕಗೊಂಡಂತೆ ಹಾಗೆ ನೋಡಿದ್ರೆ ಕನ್ನಡ ಸಾಹಿತ್ಯಕ್ಕೆ ಮಾನವೀಯ ಸಂಬಂಧ ಲೇಪನ ಮಾಡಿದವಲೇ ದಲಿತ-ಬಂಡಾಯದವರು. ಇಲ್ಲಾಂದ್ರೆ ಕನ್ನಡ ಸಾಹಿತ್ಯ ಕೇವಲ ಪಂಡಿತರ ಸಾಹಿತ್ಯವಾಗಿಯೇ ಉಳಿಯುತ್ತಿತ್ತು. ಗಿರಡ್ಡಿ ಗೋವಿಂದರಾಜ ಉಡುಪಿಯಲ್ಲಿ 'ಕನ್ನಡ ಸಾಹಿತ್ಯದ ವೈಚಾರಿಕ ನೆಲೆಗಳು' ಎಂಬ ವಿಷಯ ಕುರಿತು ಮಾತನಾಡುತ್ತ ನವೋದಯ ನವ್ಯ ಸಾಹಿತ್ಯ ಪ್ರಕಾರಗಳಂತಲ್ಲದೇ ದಲಿತ-ಬಂಡಾಯ ಸಾಹಿತ್ಯ ಸಮಾಜದಲ್ಲಿ ಬದಲಾವಣೆಯನ್ನೇ ಪ್ರಮುಖ ಗುರಿಯಾಗಿಸಿಕೊಂಡಿದ್ದವು. ಜನರಿಗೆ ಅರ್ಥವಾಗುವ ಭಾಷೆಯನ್ನು ಒರಟಾಗಿ ಅವರು ಬಳಸಿಕೊಂಡರು. ಆದರೆ ಪ್ರಾಮಾಣಿಕವಾಗಿ ಕೆಲಸ ಮಾಡಿದರು. ಸಮಾಜದಲ್ಲಿ ಅರಿವು ಮೂಡಿಸಲು ಅವರು ಸಮುದಾಯದಂತಹ ತಂಡ ಕಟ್ಟಿ ನಾಟಕ, ಬೀದಿ ನಾಟಕಗಳನ್ನು ಆಡಿದರು ಎಂದು ಹೇಳಿದ್ದಿದೆ. ಆದರೆ ಅವರಿಗೆ ಗೊತ್ತಿಲ್ಲ ಅನ್ನಿಸುತ್ತದೆ. ಕನ್ನಡ ಭಾಷೆಯ ತಾಯಿಯೇ ದಲಿತರು. ಅವರು ಸೂಕ್ಷ್ಮತೆಯನ್ನು ಕಳೆದರು, ಒರಟಾಗಿ ಹೇಳಿದರು ಅನ್ನುವುದು ಸರಿಯಾದುದಲ್ಲ. ಹಾಗೆ ಇತ್ತೀಚೆಗೆ ಬೈರಪ್ಪನವರು ಸಾಹಿತ್ಯದಲ್ಲಿ ಚಳವಳಿ ಇರಬಾರದು ಎಂದಿದ್ದಾರೆ. ವಚನಕಾರರು-ದಾಸರು ತತ್ವಪದಕಾರರು ಮಾಡಿದ್ದೇನು. ಅದು ಚಳವಳಿ ಅಲ್ಲವೆ ಬೌದ್ಧರು ಮಾಡಿದ್ದು, ಅದು ಚಳವಳಿ ಅಲ್ಲವೆ. ದಲಿತ, ಬಂಡಾಯ ಮಾಡಿದ್ದು ಚಳವಳಿ ಅಲ್ಲವೇ? ಅಷ್ಟೇ ಏಕೆ ಸ್ವಾತಂತ್ರ್ಯಕ್ಕಾಗಿ ನವೋದಯ ಕಾಲದಲ್ಲಿ ಇಂಗ್ಲಿಷರ ಬರೆದದ್ದು, ವಿರುದ್ಧ ಬಂಡೆದ್ದದ್ದು ಚಳವಳಿಯಲ್ಲಿವೆ? ಈ ಸಂಪ್ರದಾಯವಾದಿಗಳೇ ಹೀಗೆ ಅವರು ಹೇಳಿದ್ದೂ ಬರದದ್ದೂ ಮಾತ್ರ ಸಾಹಿತ್ಯ ಅದು ಮಾತ್ರ ಉಳಿದವರು ಓದಬೇಕು. ಮೇಲಾಗಿ ಉಳಿದವರು ಪ್ರತಿಭಟಿಸಬಾರದು, ಹಕ್ಕು ಪ್ರತಿಪಾದನೆ ಮಾಡಬಾರದು.

ಬಾಬಾಸಾಹೇಬ್ ಡಾ. ಅಂಬೇಡ್ಕರ್ ಬರಹ ಮತ್ತು ಹೋರಾಟವನ್ನು ಏಕಕಾಲಕ್ಕೆ ದುಡಿಸಿಕೊಂಡರು. ಅದರಿಂದ ತಾನೆ ಸಮಾಜದ ಬಹುಸಂಖ್ಯಾತ ದಲಿತರು, ಮಹಿಳೆಯರು ಬುಡಕಟ್ಟಿನವರು ಅಕ್ಷರದ ತೆಕ್ಕೆಗೆ ಬಂದಿದ್ದು, ಹಾಗೆ ಅಕ್ಷರ ಸಂಸ್ಕೃತಿ ಬಂದವರು ಬರೆದ ಎಷ್ಟೋ ಕೃತಿಗಳು ವಾಚ್ಯ ನೆಲೆಯಿಂದ ದಲಿತ ಸಾಹಿತ್ಯ ಸೂಕ್ಷ್ಮತೆಗೆ ಕಲಾತ್ಮಕತೆಯೆಡೆಗೆವಾಲಿದೆ. ಈ ನೆಲೆಯಲ್ಲಿ ದೇವನೂರರ ಎದೆಗೆ ಬಿದ್ದ ಅಕ್ಷರ, ಮೂಡಾಕೂಡು ಅವರ ನಾನೊಂದು ಮರವಾಗಿದ್ದರೆ, ಎಂ.ಎಸ್. ಶೇಖರ್ ಅವರ ಕಾವ್ಯ, ಸತ್ಯಾನಂದ ಪಾತ್ರೋಟ ಅವರ ನನ್ನಕ್ಕ, ಅರವಿಂದ ಮಾಲಗತ್ತಿಯವರ ಪ್ರಬಂಧಗಳು, ಜಯದೇವಿ ಗಾಯಕವಾಡ ಅವರ ಗಜಲ್‌ಗಳು ಮುಂತಾದ ಲೇಖಕರನ್ನು ಹೆಸರಿಸಬಹುದು.

ಜನಪದ ಕವಿಯೆಂದೇ ಹೆಸರಾದ ಬೇಂದ್ರೆಯಂತಹವರು ಸಾಮಾನ್ಯರನ್ನು ಮುಟ್ಟಲು ಸಾಧ್ಯವಾಗಿಲ್ಲ. ಕುವೆಂಪು ತಮ್ಮ ನಾಕಟಗಳ ಮೂಲಕ ಜನ ಸಾಮಾನ್ಯರನ್ನು ತಲುಪಿದ್ದಾರೆ. ಚೆನ್ನಣ್ಣ ವಾಲೀಕಾರ ಅಂಬೇಡ್ಕರ್ ಅವರ ಕುರಿತು 'ನೀ ಹೋದ ಮರು ದಿನ ಮದಲಂಗ ಆಗ್ಯಾಗೋ ಬಾಬಾಸಾಹೇಬ್' 'ಯಾರಿಗೆ ಹೇಳಲಿ ನನ್ನ ಎದೆಯ ಬ್ಯಾನಿ ಲೂಟಿಕೋರರೆ ತುಂಬಿರುವ ಈ ಜಗದಲಿ' ಎಂಬದು, ಸಿದ್ಧಲಿಂಗಯ್ಯ ಹೊಲೆಮಾದಿಗರ ಹಾಡುಗಳ ಮೂಲ ಜನಮನ ಗೆದ್ದಿದ್ದಾರೆ. ಅಕ್ಷರದಿಂದ ಬದಲಾವಣೆಯನ್ನೇ ಬಯಸುವ ಸಮಾಜ ಸಾಂಪ್ರದಾಯಿಕತೆ ಹೋಗದು. ಚಳವಳಿ ಸಾಹಿತ್ಯ ಅಪಾಯಕಾರಿ ಎನ್ನುವುದಾದರೆ ಭೈರಪ್ಪನವರು ಎಷ್ಟು ಜನರಿಗೆ ಅರ್ಥವಾಗಿದ್ದಾರೆ. ಎಷ್ಟು ಜನರಿ ಮುಟ್ಟಿದ್ದಾರೆ ಎಷ್ಟ ಜನರಿಗೆ ಮಾರ್ಗ ತೋರಿದ್ದಾರೆ. ಸ್ವಾಮಿ ನಾವು 'ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣಿತ ಮತಿಗಳು' ಕಾಯಕ ಹೋರಾಟ ಸಂದರ್ಭವನ್ನೇ ಸಾಹಿತ್ಯವಾಗಿಸುವ ಬುದ್ಧಿವಂತಿಕೆ ದಲಿತ-ಬಂಡಾಯದವರದಾಗಿದೆ.

ದಲಿತ ಸಾಹಿತ್ಯ ಇಂದು ತನಗೆ ಇತಿಹಾಸವಿಲ್ಲವೆನ್ನುವ ಆರೋಪದಿಂದ ಮುಕ್ತವಾಗುವ ಕಡೆ ಹೆಜ್ಜೆ ಇಡುತ್ತಿದೆ. ಮಲೆಯಮಾದೇಶ್ವರ, ಮಂಟೇಸ್ವಾಮಿ ಮೂಲದವರು ನಾವು ಎಂಬ ನೆಲೆಗೆ ಬಂದು ನಿಂತಿದೆ. ಬುದ್ಧನ, ಶಾಕ್ಯ ಕುಲದ ಮೂಲ ಅಂದರೆ ಮನುಷ್ಯ ಕುಲದ ಪರಂಪರೆಯನ್ನು ಹೆಕ್ಕಿತೆಗೆಯುತ್ತಿದೆ. ಜಾನಪದ ಮೂಲದ ಜಾಡನ್ನು ದಲಿತ ಸಾಹಿತ್ಯ ಪುನರ್ ಪರಿಶೀಲಿಸುತ್ತಿದೆ. ಸಾಮಾಜಿಕ ನೆಲೆಯಲ್ಲಿ ಆದ ಆಕ್ರಮಣವನ್ನು ನಿರಾಕರಣೆ ಮಾಡುತ್ತಿದೆ. ಸಾಂಸ್ಕೃತಿಕ ದೋಚುವಿಕೆಯನ್ನು ಪತ್ತೆ ಹಚ್ಚಿದೆ. ಈ ನೆಲದ ಮಹಾಕಾವ್ಯಗಳಲ್ಲಿ ಆದ ಪ್ರಮಾದದ ಬಗ್ಗೆ ಮಾತಾಡುತ್ತಿದೆ. ರಾಮಾಯಣ ಮಹಾಭಾರತದ ಶ್ರೇಷ್ಠತೆ, ಮಾನನೀಯತೆ ಎಂದರೆ ಕರ್ಣ, ಶಂಭೂಕ ಏಕಲವ್ಯರಲ್ಲಿದೆಯೇ ಹೊರತು ಅರ್ಜುನ-ಧರ್ಮರಾಯ, ಭೀಮ, ದೌಪದಿ, ಸೀತೆ ಇವರಲಿಲ್ಲ. ಶಬರಿಯ ಗುಣದಲ್ಲಿ ತಾಯ್ತನವಿದೆ ಅದುವೇ ದಲಿತ-ಬಂಡಾಯದ ಸಾಮಾಜಿಕ ಪ್ರಜ್ಞೆಯಾಗಿದೆ.

ವರ್ತಮಾನದ ಈ ಕಾಲದಲ್ಲಿ ಅಂಬೇಡ್ಕರ್ ವಾದಿಗಳು, ರಾಮಕೊಂದ ಶಂಭೂಕ, ದ್ರೋಣನ ಮೋಸಕ್ಕೆ ಬಲಿಯಾದ ಏಕಲವ್ಯನಂತಾಗುತ್ತಿದ್ದಾರೆ. ಈ ನೆಲದ ಮಾಜಿ ಅಂಬೇಡ್ಕರ್ ವಾದಿಗಳು ಅಧಿಕಾರಕ್ಕಾಗಿ ಏಕಲವ್ಯ, ಶಂಭೂಕನ ಸಮಾಧಿ ಏರಿದ್ದಾರೆ. ಇದು ಆಧುನಿಕ ಕಾಲದ ದುರಂತವಾಗಿದೆ. ಬ್ರಾಹ್ಮಣ್ಯ ಅನ್ನುವುದರ ಕುರಿತು ಮಾತನಾಡುವಾಗ ಒಂದು ಕಾಲದಲ್ಲಿ ವೈದಿಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತಾಡುತ್ತಿದ್ದೆವು. ಆದರೆ ಇಂದು ಅದು ಭಾರತದ ಪ್ರತಿಯೊಂದು ಸಮುದಾಯ ದಲ್ಲಿರುವ ಜಾತಿ, ಅಸಮಾನತೆ ಎಂಬ ಹೇಸಿಗೆ ಬಲಾಢ್ಯ ಸಮುದಾಯದವರಲ್ಲೂ ಸೇರಿಕೊಂಡಿದೆ. ಹಕ್ಕು ಪ್ರತಿಪಾದನೆಯೆಂಬುದು ದೇಶ ವಿರೋಧಿ ಎನ್ನುವ ನೆಲೆಗೆ ತಂದು ನಿಲ್ಲಿಸಿದ್ದೇವೆ. ಇದು ನಮ್ಮ ದೇಶದ ದೊಡ್ಡ ದುರಂತವಾಗಿದೆ. ಪ್ರಶ್ನಿಸುವ, ಪರಿಶೀಲಿಸುವ ಹಕ್ಕನ್ನು ಸಂವಿಧಾನವೇ ನೀಡಿದೆ. ಈ ಹಿನ್ನೆಲೆಯಲ್ಲಿ ದಲಿತ ಬಂಡಾಯ ಸಾಹಿತ್ಯ ಸ್ಥಿತ್ಯಂತರಗೊಳ್ಳುತ್ತಿದೆ.

# ವಚನ ಕೀರ್ತನ ಸಾಹಿತ್ಯ

**ವಚನ ಸಾಹಿತ್ಯ**

**ಡಾ. ಕೆ.ರವೀಂದ್ರನಾಥ**

ಮರ್ತ್ಯಲೋಕದ ಮನದ ಕತ್ತಲೆಯ ಕಳೆಯಬೇಕು

ಕಲ್ಯಾಣದಲ್ಲಿ ನಿರ್ಮಿತವಾಗಿತ್ತು ಮಹಾಮಠವು ||

ಮಹಾಜ್ಞಾನಿ ಚನ್ನಬಸವಣ್ಣನವರ ವಚನದ ಸಾಲುಗಳಿವು. ಕಲ್ಯಾಣದಲ್ಲಿ ನಿರ್ಮಿತವಾದ ಅನುಭವ ಮಂಟಪವನ್ನು ಕುರಿತು, ಅಲ್ಲಿ ನಡೆಯುವ ಶರಣರ ವೈಚಾರಿಕ ಆಲೋಚನೆಗಳನ್ನು ಕುರಿತು ಚನ್ನಬಸವಣ್ಣ ಹೇಳಿದ್ದಾನೆ. ಕೊಲ್ಲದಿರುವುದೇ ಧರ್ಮ, ಕಳ್ಳತನ ಮಾಡದಿರುವುದೇ ಧರ್ಮ, ಸುಳ್ಳು ಹೇಳದಿರುವುದೇ ಧರ್ಮ -ಎಂದು ಧರ್ಮಕ್ಕೆ ಹೊಸ ವ್ಯಾಖ್ಯಾನವನ್ನು ನೀಡಿದ, ವರ್ಗ-ವರ್ಣ-ಲಿಂಗಭೇದ ನಿರಸನವಾದ ಸಮಸಮಾಜದ ಕಲ್ಪನೆಯನ್ನು ಹುಟ್ಟುಹಾಕಿದ, ದಾನಕ್ಕೆ ಬದಲಾಗಿ ದಾಸೋಹ ತತ್ವವನ್ನು, ಸ್ಥಾವರಕ್ಕೆ ಬದಲಾಗಿ ಜಂಗಮತತ್ವವನ್ನು ಪುರಸ್ಕರಿಸಿದ, ಗುರು-ಲಿಂಗ-ಜಂಗಮ- ಕಾಯಕ-ದಾಸೋಹಗಳೆಂಬ ಪಂಚಸೂತ್ರಗಳನ್ನು ಚಲಾವಣೆಗೆ ತಂದ ಶಿವಶರಣರ ಅನುಭಾವದ ಅಭಿವ್ಯಕ್ತಿಯೇ 'ವಚನಸಾಹಿತ್ಯ'.

ಈ ಸಾಹಿತ್ಯದ ಮೂಲ ಆಶಯವೇ ಜನಬದುಕಬೇಕೆಂಬುದು. ಸಕಲಜೀವಾತ್ಮರಿಗೆ ಲೇಸನ್ನೇ ಬಯಸುವುದು ಇದರ ಮೂಲ ಆಶಯ. ಒಂದು ಸಾಹಿತ್ಯ ಪ್ರಕಾರದ ಮೂಲಕ ಸಾಮಾಜಿಕ ಚಳುವಳಿಗೆ ಮುನ್ನುಡಿ ಬರೆದಂಥ ಯಾವುದಾದರೂ ಆಧುನಿಕ ಪೂರ್ವ ಸಾಹಿತ್ಯ ಇದ್ದರೆ ಅದು ವಚನಸಾಹಿತ್ಯ ಈ ಸಾಹಿತ್ಯ ಕುರಿತು ಈಗಾಗಲೇ ಸಾಕಷ್ಟು ಜನ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಆ ಅಧ್ಯಯನಗಳ ಅವಲೋಕನವನ್ನು ಈ ಸಂದರ್ಭದಲ್ಲಿ ಮಾಡುವುದು ಸೂಕ್ತವೆಂದು ನಾನು ಭಾವಿಸುತ್ತೇನೆ.

ವಚನಸಾಹಿತ್ಯ ಅಧ್ಯಯನದ ಅವಲೋಕನವನ್ನು ೧. ವಚನ ಆಶಯದ ಅವಲೋಕನ ೨. ವಚನ ಸಂಗ್ರಹದ ಅವಲೋಕನ ೩. ವಚನ ಸಂಕಲನದ ಅವಲೋಕನ ೪. ವಚನ ಸಂಪಾದನೆಯ ಅವಲೋಕನ ೫. ಚರಿತ್ರೆ ನಿರ್ಮಾಣದ ಅವಲೋಕನ ೬. ಸೃಜನಶೀಲ ಅನುಸಂಧಾನದ ಅವಲೋಕನ ಎಂದು ಆರು ನೆಲೆಗಳಲ್ಲಿ ಗುರುತಿಸಬಹುದಾಗಿದೆ.

**೧. ವಚನ ಆಶಯದ ಅವಲೋಕನ :** ಯಾವುದೇ ಸಾಹಿತ್ಯ ಒಂದು ಉದ್ದೇಶಕ್ಕಾಗಿ ಹುಟ್ಟಿಕೊಂಡಿರುತ್ತದೆ. ಸಾಮಾಜಿಕವಾಗಿ, ಧಾರ್ಮಿಕವಾಗಿ ಸಾಹಿತ್ಯಕವಾಗಿ ಮತ್ತು ರಾಜಕೀಯವಾಗಿ ಸಾಹಿತ್ಯದ ಪ್ರತಿಸ್ಪಂದನೆಯನ್ನು ಅವಲೋಕಿಸಿದರೆ ಆ ಸಾಹಿತ್ಯದ



ಪ್ರಸ್ತುತತೆಯನ್ನು ಒರೆಗೆ ಹಚ್ಚಿದಂತೆ. ಈ ದೃಷ್ಟಿಯಿಂದ ವಚನಸಾಹಿತ್ಯ ಜೀವನಕ್ಕಾಗಿ ಎಂಬ ಆಶಯದಿಂದ ಅಧ್ಯಯನ ಮಾಡಿರುವುದು ಹೆಚ್ಚಾಗಿ ಕಂಡುಬರುತ್ತದೆ. .

ಗಂಡ ಶಿವಭಕ್ತ  ಹೆಂಡತಿ ಮಾರಿಮಸಣಿ ಭಕ್ತಿ

ಗಂಡ ಉಣ್ಣುವುದು ಪಾದೋದಕ ಪ್ರಸಾದ

ಹೆಂಡತಿ ಉಣ್ಣುವುದು ಸುರೆಮಾಂಸ

ಭಾಂಡೆ-ಭಾಜನ ಸಮವಿಲ್ಲದವರ ಭಕ್ತಿ

ಹೆಂಡದ ಮಡಿಕೆಯ ಹೊರತೊಳೆದಂತೆ ಕೂಡಲಸಂಗಮದೇವಾ

ಈ ಮೇಲಿನ ವಚನವನ್ನು ಆಧ್ಯಾತ್ಮಿಕ-ಧಾರ್ಮಿಕ ಪರಿಪೇಕ್ಷೆಯಲ್ಲಿ ಅಧ್ಯಯನ ಮಾಡುವುದಕ್ಕಿಂತ ಸಾಮಾಜಿಕ-ಕೌಟುಂಬಿಕ ಆಶಯದಿಂದ ನೋಡುವುದು ಹೆಚ್ಚು ಸೂಕ್ತವೆನಿಸಿದೆ. ಪುರುಷರಿಗೆ ಮಾತ್ರ ಪ್ರಾಧಾನ್ಯತೆ ಕೊಡುವ ಲಿಂಗಭೇದವನ್ನು ನಿರಾಕರಿಸಿ ಪತಿ-ಪತ್ನಿಯರ ಸಾಮರಸ್ಯದಿಂದ ಕೌಟುಂಬಿಕ ಹಾಗೂ ಸಾಮಾಜಿಕ ಸಾಮರಸ್ಯದ ಸಾಧ್ಯತೆಯನ್ನು ಪ್ರತಿಪಾದಿಸಿದ್ದಾರೆ. ಈ ಸಾಮರಸ್ಯಕ್ಕೆ ವಚನಕಾರ ಬಸವಣ್ಣ ಕೊಡುವ ಭಾಂಡೆ-ಭಾಜನವೆಂಬ ರೂಪಕ ಅತ್ಯಂತ ಜಾನಪದೀಯವಾಗಿದೆ. ಭಾಂಡೆ=ಪಾತ್ರೆ, ಭಾಜನ=ಪಾತ್ರೆಗೆ ಮುಚ್ಚುವ ಮುಚ್ಚಳ ಸಮವಿರಬೇಕು. ಇವು ಸಮವಿರದಿದ್ದರೆ ಹೆಂಡವನ್ನು ತುಂಬಿಟ್ಟ ಮಡಿಕೆಯನ್ನು ಒಳಗೆ ಸ್ವಚ್ಚಗೊಳಿಸದೆ ಹೊರಗೆ ಮಾತ್ರ ತೊಳೆದಂತೆ, ಅಂದರೆ ಸಾಮಾಜಿಕ ಸಮಾನತೆಯನ್ನು ಬಯಸುವವರು ಕೌಟುಂಬಿಕ ಸಾಮರಸ್ಯವನ್ನು ಅನುಷ್ಠಾನಗೊಳಿಸುವುದು ಮುಖ್ಯವಾಗಿದೆ ಎಂಬುದು ವಚನಕಾರರ ಆಶಯವಾಗಿದೆ.

ಹತ್ತು ಮತ್ತರು ಭೂಮಿ ಬತ್ತದ ಹಯನು

ನಂದಾದೀವಿಗೆಯ ನಡೆಸಿವೆಂಬುವವರ ಮುಖವ

ನೋಡಲಾಗದು

ಎನ್ನಿಂದಲೇ ಆಯಿತ್ತು ಎನ್ನಿಂದಲೇ ಹೋಯಿತ್ತು

ಎಂಬುವವರ ಬಾಯಲ್ಲಿ ಮೆಟ್ಟ ಹುಡಿಯ ಹೊಯ್ಯದೆ

ಮಾಣ್ಬನೇ ಕೂಡಲಸಂಗಮದೇವಾ॥

ದಾನದ ಅತಿರೇಕತೆಯನ್ನು ; ಪ್ರತಿಷ್ಠೆಯನ್ನು ಪ್ರಶ್ನಿಸುವ ಈ ವಚನ ಶರಣರ ಆರ್ಥಿಕ ಚಿಂತನೆಯನ್ನು ಅನಾವರಣಗೊಳಿಸುತ್ತದೆ. ದೇವಾಲಯಕ್ಕೆ ಭೂದಾನ, ಗೋದಾನ, ನಂದಾದೀಪಕ್ಕೆ ಎಣ್ಣೆದಾನವೆಂದು ದಾನಮಾಡಿ ಇದೆಲ್ಲವೂ ನನ್ನಿಂದಲೇ ಆಗುತ್ತದೆ ಎಂದು ಹೇಳುವವರ ಬಾಯಲ್ಲಿ ಮೆಟ್ಟುಗಳಿಗೆ ಹತ್ತಿದ ಹುಡಿಯನ್ನು ಹೊಯ್ಯಬೇಕೆಂದು ನಿಷ್ಟುರವಾಗಿ ಹೇಳುವುದರ ಮೂಲಕ ಭಕ್ತಿ ಗುಪ್ತವಾಗಿರಬೇಕು ಎನ್ನುವುದರ ಮೂಲಕ ದಾನಕ್ಕೆ ಪರ್ಯಾಯವಾಗಿ ದಾಸೋಹ ತತ್ವವನ್ನು ಪ್ರತಿಪಾದಿಸಿದರು. ಆದ್ಯವಚನಕಾರ ದೇವರದಾಸಿಮಯ್ಯನವರು

ಇಳೆ ಮೃದಾನ ಬೆಳೆ ನಿಮ್ಮದಾನ

ಸುಳಿದು ಸೂಸುವ ಗಾಳಿ ನಿಮ್ಮದಾನ

ನಿಮ್ಮ ದಾನವನುಂಡು ಅನ್ಯರ ಹೊಗಳುವ

ಕನ್ನಿಗಳನೇನೆಂಬೆ ರಾಮನಾಥ |



ದಾನದ ನಿಜವಾದ ಅರ್ಥವೇನು? ಮಹಾದಾನಿಯಾರು? ಎಂದು ಪ್ರಶ್ನಿಸುವುದರ ಮೂಲಕ ಪ್ರಾಕೃತಿಕ ಒಡೆತನದ ಪ್ರಶ್ನೆಯನ್ನು ಚರ್ಚಿಸುತ್ತಾನೆ. ಹೀಗೆ ವಚನಸಾಹಿತ್ಯದ ಆಶಯವನ್ನು ಕುರಿತು ಸಾಮಾಜಿಕ ಪ್ರಜ್ಞೆಯನ್ನು, ಸಾಹಿತ್ಯಕ ಗುಣವನ್ನು, ಮೀಮಾಂಸತತ್ತ್ವಗಳನ್ನು, ಧಾರ್ಮಿಕ ಸಂಗತಿಗಳನ್ನು ಕುರಿತಂತೆ ಬೇಕಾದಷ್ಟು ಚರ್ಚೆಗಳನ್ನು ವಿದ್ವಾಂಸರು ಮಾಡಿದ್ದಾರೆ.

ವಚನಸಾಹಿತ್ಯ ತನ್ನ ಬಹುತ್ವದ ಆಲೋಚನೆಯ ಮೂಲಕ ಕಾಲದಿಂದ ಕಾಲಕ್ಕೆ ಅಧ್ಯಯನಕ್ಕೆ ಒಳಪಟ್ಟಿರುವುದನ್ನು ಕಾಣುತ್ತೇವೆ. ಇದಕ್ಕೆ ಕಾರಣ ಸಮಷ್ಟಿಪ್ರಜ್ಞೆಯಿಂದ ಹುಟ್ಟಿದ ಸಾಹಿತ್ಯ ಮಾತ್ರ ಅನೇಕ ಉಪಉತ್ಪಾದನೆಯ ಮೂಲಕ ಸ್ವತಂತ್ರ ಸಾಹಿತ್ಯ ಪ್ರಕಾರವಾಗಿ ರೂಪುಗೊಳ್ಳಲು ಸಾಧ್ಯ. ೧೨ನೇ ಶತಮಾನದಲ್ಲಿ ಕಲ್ಯಾಣ ಕರ್ನಾಟಕ ಭಾಗವಾದ ಬಸವಕಲ್ಯಾಣದಲ್ಲಿ ರಚನೆಯಾದ ವಚನಸಾಹಿತ್ಯ ೧೫ನೇ ಶತಮಾನದವರೆಗೆ ಗುಪ್ತಗಾಮಿನಿಯಾಗಿತ್ತು. ಇದನ್ನು ಸಂಗ್ರಹಿಸುವ, ಸಂಕಲಿಸುವ ಮತ್ತು ಸಂಪಾದಿಸುವ ಕಾರ್ಯವನ್ನು ಆಧುನಿಕ ಪೂರ್ವಕಾಲದಲ್ಲಿಯೇ ಮಾಡಿಕೊಂಡು ಬಂದಿದ್ದಾರೆ. ಈ ಕಾರ್ಯವನ್ನು ಒಟ್ಟಾರೆ “ವಚನ ಸಂಯೋಜನ ಕಾರ್ಯ” ಎಂದು ಕರೆಯಲಾಗಿದೆ. ಒಂದು ರೀತಿಯಲ್ಲಿ ವಚನಸಾಹಿತ್ಯವನ್ನು ಅನುಸಂಧಾನಕ್ಕೆ ಒಳಪಡಿಸಿದ ಪ್ರಯತ್ನವಾಗಿದೆ. ಬೇರೆ ಬೇರೆ ಕಾಲಘಟ್ಟದಲ್ಲಿ ಅಧ್ಯಯನಕ್ಕೆ ಒಳಪಟ್ಟರೀತಿಯೇ 'ಅನುಸಂಧಾನ'ವೆನಿಸುತ್ತದೆ. ವಚನಸಾಹಿತ್ಯದ ಅನುಸಂಧಾನದ ಕಾರ್ಯ ನಡೆದದ್ದು ತುಂಗಭದ್ರಾ ನದಿಯ ಈಚೆಗಿನ ದಕ್ಷಿಣ ಕರ್ನಾಟಕ ಭಾಗದಲ್ಲಿ, ಜನಸಮ್ಮುಖವಾದ, ಸಮಸಮಾಜ ನಿರ್ಮಾಣದ ಆಶಯವನ್ನು ತನ್ನ ಉದರದಲ್ಲಿರಿಸಿಕೊಂಡಿದ್ದ ವಚನಸಾಹಿತ್ಯವನ್ನು ಈ ಹೊತ್ತಿನವರೆಗೂ ಅಧ್ಯಯನ ಮಾಡಿದ ಚರಿತ್ರೆಯೇ ಕನ್ನಡದಲ್ಲಿ ಸ್ವತಂತ್ರ ಸಾಹಿತ್ಯ ಚರಿತ್ರೆಯ ವಸ್ತುವಾಗಬಲ್ಲದು.

**೧. ವಚನ ಸಂಗ್ರಹದ ಅವಲೋಕನ :** ಕಲ್ಯಾಣ ಕ್ರಾಂತಿಯಿಂದ ಚಳುವಳಿ ಸ್ಥಗಿತಗೊಂಡಾಗ ಅವರಿಂದ ರಚನೆಯಾದ ವಚನಗಳಿಗೂ ಆಪತ್ತು ಎದುರಾಯಿತು. ಇದರಿಂದ ಅವುಗಳು ಸಂರಕ್ಷಣೆಗಾಗಿ ನಾಡಿನಾದ್ಯಂತ ಚದುರಿಹೋದವು. ಹೀಗೆ ಚದುರಿಹೋದ ವಚನ ಕಟ್ಟುಗಳನ್ನು ಒಂದು ಕಡೆ ಸಂಗ್ರಹಿಸುವ ಕೆಲಸ ನಡೆಯಿತು.

ಇದೊಂದು ರೀತಿಯಲ್ಲಿ ಆಕರ ಸಂಗ್ರಹವಾಗಿದೆ. ಎಳೆಮಲೆಯ ಗುರುಶಾಂತದೇವರು ನಿರೂಪಿಸಿದ ಬಸವಣ್ಣನವರ ವಚನಗಳು ಎಂಬ ಉಲ್ಲೇಖಗಳು ಪ್ರಾಯಶಃ ವಚನಗಳನ್ನು ಸಂಗ್ರಹಿಸಿದ ಗುರುಶಾಂತದೇವರಂಥ ನೂರಾರು ಜನರು ಸಂಗ್ರಹ ಕಾರ್ಯಕ್ಕೆ ಮುಂದಾಗಿರಬೇಕು. ಇಂಥ ಸಂಗ್ರಹಗಳಲ್ಲಿ ಸಕಲ ಪುರಾತನರ ವಚನಕಟ್ಟುಗಳನ್ನು ಹೆಸರಿಸಬಹುದು. ಒಂದು ಸಾವಿರದಿಂದ ಮೂರು ಸಾವಿರದವರೆಗೆ ಸಂಗ್ರಹಗೊಂಡ ಈ ವಚನಕಟ್ಟುಗಳು ಮೂರು ಜನ ವಚನಕಾರರಿಂದ ಆರಂಭವಾಗುತ್ತವೆ. ಕೋಲಶಾಂತಯ್ಯನ ವಚನಗಳಿಂದ ಆರಂಭವಾಗುವ ಕಟ್ಟುಗಳು, ಗೊಗ್ಗವ್ವಯ ವಚನಗಳಿಂದ ಆರಂಭವಾಗುವ ಕಟ್ಟುಗಳು, ಬಸವಣ್ಣನ ವಚನಗಳಿಂದ ಆರಭವಾಗುವ ಕಟ್ಟುಗಳು, ಈ ಕಟ್ಟುಗಳನ್ನು ಹೊರತುಪಡಿಸಿ ಒಬ್ಬೊಬ್ಬ ಶರಣರ ವಚನಗಳು ದೊರೆಯುತ್ತವೆ. ಉದಾಹರಣೆಗೆ ಗಣದಾಸಿ ವೀರಣ್ಣನ ವಚನಗಳು, ಸಿದ್ಧರಾಮನ



ವಚನಗಳು ಇತ್ಯಾದಿ. ಈ ಸಂಗ್ರಹಕಾರರಿಗೆ ವಚನಕಾರರೇ ಮುಖ್ಯರಾದರೇ ಹೊರತು ವಚನಗಳ ತತ್ವಗಳಲ್ಲ. ಹೀಗಾಗಿ ಇಲ್ಲಿ ವಿದ್ವತ್ತಿಗಿಂತಲೂ ಸಂಗ್ರಹಕಾರರ ದೈಹಿಕಶ್ರಮ ಮುಖ್ಯವಾಗುತ್ತದೆ.

**೩. ವಚನ ಸಂಕಲನದ ಅವಲೋಕನ :** ಚದುರಿಹೋದ ವಚನಗಳನ್ನು ಕ್ಷೇತ್ರಕಾರ್ಯ ಮಾದರಿಯಲ್ಲಿ ಒಂದು ಕಡೆ ಸಂಗ್ರಹಿಸಿದ ಮೇಲೆ ಅವುಗಳನ್ನು ತಾತ್ವಿಕತೆಗೆ ಒಳಪಡಿಸುವ ಕೆಲಸವೂ ನಡೆಯಿತು. ವಚನಗಳನ್ನು ಷಟ್ಸ್ಥಲ, ಪಂಚಾಚಾರ, ಅಷ್ಟಾವರಣ, ಅನುಭಾವದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಯಿತು. ಹೀಗೆ ವಚನಗಳ ತಾತ್ವಿಕತೆಯನ್ನು ಕುರಿತು ಮಾಡಿದ ಈ ಕಾರ್ಯವನ್ನು ವಚನಸಂಕಲನ ಕಾರ್ಯ ಎಂದು ಗುರುತಿಸಬಹುದು. ಸಂಗ್ರಹದಲ್ಲಿ ವಚನಗಳನ್ನು ಕೂಡಿಸುವುದಾದರೆ; ಸಂಕಲನದಲ್ಲಿ ವಚನಗಳನ್ನು ಜೋಡಿಸುವುದು. ಈ ಜೋಡಿಸಿ ಸಿದ್ಧಪಡಿಸಿದ ವಚನ ಕೃತಿಗಳಲ್ಲಿ ಬಸವಣ್ಣನವರ ಷಟ್ಸ್ಥಲ ವಚನಗಳು, ವಚನಗಳು, ಏಕೋತ್ತರ ಶತಸ್ಥಲದ ಕಟ್ಟುಗಳು, ಮಹಾಲಿಂಗದೇವ ಸಂಕಲಿಸಿದ ಪ್ರಭುದೇವರ ಟೀಕಿನ ವಚನಗಳ ಕಟ್ಟು, ಕಲ್ಲುಮಠ ಪ್ರಭುದೇವರ ಲಿಂಗಲೀಲಾವಿಲಾಸ ಚಾರಿತ್ರ್ಯ ಕೃತಿಗಳು ವಚನಗಳಿಗೆ ಹಾಡು, ಟಿಪ್ಪಣಿ, ಟೀಕು ಬರೆದು ಅವುಗಳ ಗೂಢಾರ್ಥವನ್ನು ತಿಳಿಸಿಕೊಡುವ ಕೆಲಸ ಮಾಡಿದರು. ಇದರಿಂದ ಸಾಮಾಜಿಕ ಪರಿಪೇಕ್ಷೆಯ ವಚನಗಳು ಗೌಣವಾಗಿ; ಆಧ್ಯಾತ್ಮಿಕ, ಧಾರ್ಮಿಕ ವಚನಗಳು ಮುನ್ನೆಲೆಗೆ ಬಂದವು. ಒಂದರ್ಥದಲ್ಲಿ ವಚನಗಳನ್ನು ಸಾಮಾಜಿಕ ವಲಯದಿಂದ ದೂರೀಕರಿಸಿದರೆಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದರೆ ಕೇವಲ ಸಂಸ್ಕೃತ ಸಾಹಿತ್ಯಕ್ಕೆ ಟೀಕೆ-ವ್ಯಾಖ್ಯಾನಗಳನ್ನು ಬರೆಯುವ ಸಂದರ್ಭದಲ್ಲಿ ವಚನಗಳಿಗೂ ವ್ಯಾಖ್ಯಾನ ಬರೆಯಬಹುದೆಂಬುದನ್ನು ಈ ಸಂಕಲನಕಾರರು ತೋರಿಸಿಕೊಟ್ಟರು. ಮುಖ್ಯವಾಗಿ ವಚನಗಳಿಗೆ ವೈಚಾರಿಕ ಮುಖ ಮತ್ತು ಅನುಭಾವದ ಮುಖ

ಎಂಬ ಎರಡು ಮುಖಗಳಿವೆ. ವಚನ ಸಂಕಲನಕಾರರು ವಚನಗಳಿಗಿರುವ ಅನುಭಾವದ ಮುಖವನ್ನು ಪರಿಚಯಿಸಿದರು. ಇಲ್ಲಿ ವಚನಕಾರರು ಮುಖ್ಯವಲ್ಲ, ವಚನಗಳಲ್ಲಿರುವ ತತ್ವಗಳು ಮುಖ್ಯವಾದವು. ಹೀಗಾಗಿ ಕಲ್ಲುಮಠದ ಪ್ರಭುದೇವರು ಪುರಾತನರ ವಚನ ೭೭೦ ತೆಗೆದುಕೊಂಡು ಷೋಡಶಸ್ಥಲ (೧೬ಸ್ಥಲದಲ್ಲಿ ಸೇರಿಸಿದೆ”  ಎಂದಿದ್ದಾನೆ. ಇಲ್ಲಿಯ ೧೬ ಸ್ಥಲಗಳ ವಚನಗಳೂ ಬೇರೆ ಬೇರೆ ಶರಣರವು. ಲಿಂಗಲೀಲಾವಿಲಾಸದಂಥ ಕಲ್ಲುಮಠದ ಪ್ರಭುದೇವರ ಕೃತಿಯ ಮೂಲದ್ರವ್ಯ ವಚನಗಳೇ ಆಗಿದ್ದರೂ, ಷಟ್ಸ್ಥಲ ಮಾರ್ಗವನ್ನು ಹೇಳುವ ಅಪರೂಪದ ಪಠ್ಯವಾಗಿ ರಚನೆಯಾಯಿತು. ಕರ್ಮಕಾಂಡವನ್ನುಳಿದು ಜ್ಞಾನಮಾರ್ಗದಿಂದುತ್ತರವಾದ ಭಕ್ತಿಕಾಂಡವನ್ನು ನಿರೂಪಿಸುವ ಮಾರ್ಗ ಎಂದಿರುವುದನ್ನು ಗಮನಿಸಿದರೆ ಷಟ್ಸ್ಥಲಮಾರ್ಗವೆಂದರೆ ಶರಣಮಾರ್ಗ ಎಂಬುದನ್ನು ಈ ಕೃತಿ ಪರಿಭಾವಿಸಿದೆ. ಹೀಗಾಗಿ ವಚನಸಾಹಿತ್ಯ ಎಂಬ ಒಂದು ವಿಶಿಷ್ಟ ಪ್ರಕಾರ ತನ್ನ ತಾತ್ವಿಕತೆಯ ನಿಲುವಿನಿಂದ ಮತ್ತೊಂದು ಕೃತಿಯಾಗಿ ಉತ್ಪಾದನೆಗೆ ಕಾರಣವಾದ ರೀತಿಯೇ ಕುತೂಹಲವಾದದ್ದು, ಆ ಕಾಲಕ್ಕೆ ಬಸವಣ್ಣನವರ ವಚನಗಳಿಗೆ ಸೋಮಶೇಖರ ಶಿವಯೋಗಿ, ಗುರುಬಸವದೇವ, ಪರ್ವತಶಿವಯೋಗಿ, ರೇವಣಸಿದ್ದೇಶ್ವರಸ್ವಾಮಿ ಮತ್ತು ಹುಮ್ನಾಬಾದಿನ ನಿರಂಜನಸ್ವಾಮಿ ಎಂಬ ಐದು ಜನ ಮಠಾಧಿಪತಿಗಳು ಟೀಕು- ವ್ಯಾಖ್ಯಾನ ಬರೆದಿದ್ದಾರೆ.



ಕೆಂಡದ ಗಿರಿಯ ಮೇಲೆ ಅರಗಿನ ಕುಂಭವಿತ್ತು ನೋಡಾ

ಅರಗಿನ ಕಂಭದ ಮೇಲೆ ಹಂಸವಿತ್ತು ನೋಡಾ

ಕಂಭ ಬಿದ್ದಿತ್ತು ಹಂಸಹಾರಿತ್ತು ಕೆಂಡ ಉಳಿದಿತ್ತು ಗುಹೇಶ್ವರಾ

ಈ ವಚನಕ್ಕೆ ಟೀಕು ಬರೆಯುವುದರ ಮೂಲಕ ಸಂಸಾರದ ಭಯಾನಕತೆ (ಕೆಂಡದ ಗಿರಿ) ದೇಹದ ನಶ್ವರತೆ (ಅರಗಿನ ಕಂಭ), ಆತ್ಮದ ಶಾಶ್ವತತೆ(ಹಂಸ)ಯನ್ನು ತಿಳಿಸುತ್ತಾರೆ. ಹೀಗೆ ತತ್ವಗಳನ್ನೇ ಗುರಿಯಾಗಿಟ್ಟುಕೊಂಡು " ರಚನೆಯಾಗಲಿಕ್ಕೆ ಕಾರಣಗಳೇನಿರಬೇಕು? ಶರಣರ ತತ್ವಗಳಿಗೆ ಒದಗಿಬಂದ ಆಪತ್ತುಗಳೇನು? ಆ ಹೊತ್ತಿನ ಧಾರ್ಮಿಕ ಪರಿಸರ ಹೇಗಿತ್ತು? ಇತ್ಯಾದಿ ಪ್ರಶ್ನೆಗಳನ್ನು ಹಾಕಿಕೊಂಡು ಈ ಸಂಕಲನ ಕೃತಿಗಳನ್ನು ನೋಡಬೇಕಾಗುತ್ತದೆ. ಬಹುತೇಕ ವಚನಗಳಿಗೆ ಆಗಮಗಳು ಸೇರಿ ವಚನಾಗಮ ಎಂಬ ನಾಮ ನಿರ್ದೇಶನ ಮಾಡಲಾಯಿತು. ಸಂಸ್ಕೃತ ಶ್ಲೋಕಗಳು ಸೇರಿಕೊಂಡವು. ಹೀಗೆ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬ ವಚನಸಾಹಿತ್ಯದ ಮೂಲ ಆಶಯ ಹೋಗಿ ಮತ್ತೇ ವಚನಗಳನ್ನು ಸ್ಥಾವರ ನೆಲೆಯಲ್ಲಿ ಅರ್ಥೈಸುವ ಪ್ರಯತ್ನ ನಡೆದಂತೆ ತೋರುತ್ತದೆ.

**೪. ವಚನ ಸಂಪಾದನೆಯ ಅವಲೋಕನ :** ವಚನ ಸಂಗ್ರಹ ಎಂದರೆ ಕೂಡಿಸುವುದು, ವಚನ ಸಂಕಲನವೆಂದರೆ ಜೋಡಿಸುವುದು ಎಂದಾದರೆ ವಚನ ಸಂಪಾದನೆಯೆಂದರೆ ವಚನಗಳನ್ನು ಪರಾಮರ್ಶಿಸುವುದು ಎಂದರ್ಥ. ವಚನಗಳಲ್ಲಿಯ ಕಾಯಕ-ದಾಸೋಹ, ಸ್ತ್ರೀಸ್ವಾತಂತ್ರ್ಯ, ಪ್ರಭುತ್ವವಿರೋಧಿ ಆಶಯಗಳು ಮರೆಯಾಗಿ ಅಲೌಕಿಕ ನೆಲೆಯಲ್ಲಿ ಅರ್ಥೈಸುವ ಸಂಕಲನಕಾರರ 'ಧಾರ್ಮಿಕ ಕೈಪಿಡಿ' ಕೃತಿಗಳು ಆತ್ಮವಿಲ್ಲದ ದೇಹದಂತಾಗಿದ್ದವು. ಹೀಗಿದ್ದಾಗ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಮುಖಂಡತ್ವದಲ್ಲಿ ವಚನಸಂಪಾದನಯುಗ ಆರಂಭವಾಯಿತು. ಶೂನ್ಯಸಂಪಾದನೆ, ಶೀಲಸಂಪಾದನೆ ಹೆಸರಿನ ಕೃತಿಗಳು, ವಚನಗಳಿಗೆ ದೃಶ್ಯ-ಶ್ರವ್ಯ ಎಂಬ ಪ್ರಸಂಗ ಸಾಹಿತ್ಯವನ್ನು ರಚನೆ ಮಾಡಿಕೊಟ್ಟರು. ಸಂಗ್ರಹಕಾರರಿಗೆ ಪರಿಶ್ರಮ ಮುಖ್ಯವಾದರೆ, ಸಂಕಲನಕಾರರಿಗೆ ಪಾಂಡಿತ್ಯ ಮುಖ್ಯವಾಯಿತು. ಸಂಪಾದನಕಾರರಿಗೆ ಪರಿಶ್ರಮ ಮತ್ತು ಪಾಂಡಿತ್ಯದ ಜೊತೆಗೆ ಸೃಜನಶೀಲ ಗುಣ ಪ್ರಮುಖವಾಯಿತು. ಎಡೆಯೂರು ತೋಂಟದ ಸಿದ್ಧಲಿಂಗ ಯತಿಗಳ ಶಿಷ್ಯಪ್ರಶಿಷ್ಯರಾದ ಶಿವಗಣ ಪ್ರಸಾದಿ ಮಹಾದೇವಯ್ಯ, ಗೋಳೂರು ಸಿದ್ಧವೀರಣ್ಣೊಡೆಯರು, ಗುಮ್ಮಳಾಪುರದ ಸಿದ್ಧಲಿಂಗದೇವರು, ಹಲಗೆಯಾರ್ಯ, ಕೆಂಚವೀರಣ್ಡೆಯ, ಸಂಪಾದನೆಯ ಬೋಳಬಸವೇಶ, ಸಂಪಾದನೆಯ ಪರ್ವತೇಶ, ಸಂಪಾದನೆಯ ಚೆನ್ನಂಜದೇವ ಮುಂತಾದವರು ಶರಣರ ವಚನಗಳನ್ನು ಸಂಪಾದಿಸಿಕೊಟ್ಟರು. ಪ್ರಭುದೇವರ ಪ್ರಶ್ನೆರೂಪದ ವಚನಕ್ಕೆ ಬೇರೆ ಬೇರೆ ಶರಣರ ಉತ್ತರ ರೂಪದ ವಚನಗಳೆಂಬಂತೆ ನಾಟಕೀಯ ಶೈಲಿಯಲ್ಲಿ ವಚನಗಳನ್ನು ಸಂಯೋಜಿಸಿದರು. ನಿಜವಾದ ಶರಣತತ್ವವನ್ನು ಪ್ರಸಾರಿಸುವ ಉದ್ದೇಶದಿಂದ ತೋಂಟದ ಸಿದ್ಧಲಿಂಗಯತಿಗಳು ತಮ್ಮ ೭೭೦ ಅಮರಗಣಂಗಳಿಗೆ ವಚನದೀಕ್ಷೆ ನೀಡಿ ಕಲ್ಯಾಣದಲ್ಲಿ ಕೇಂದ್ರಿಕೃತವಾಗಿದ್ದ ಅನುಭವ ಮಂಟಪವನ್ನು ಎಡೆಯೂರು, ಹಂಪಿ, ಸಿದ್ಧಗಂಗೆ ಮುಂತಾದ ಕಡೆ ವಿಕೇಂದ್ರೀಕರಣಗೊಳಿಸಿದರು. ಹೀಗಾಗಿ ತೋಂಟದ ಸಿದ್ಧಲಿಂಗ ಯತಿಗಳನ್ನು ದ್ವಿತೀಯ ಅಲ್ಲಮನೆಂದು ಕರೆಯುವುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಹೀಗೆ

ವಚನಸಾಹಿತ್ಯ ಮತ್ತೊಂದು ರೀತಿಯ ಅಧ್ಯಯನಕ್ಕೆ ತನ್ನನ್ನು ಒಳಗುಮಾಡಿಕೊಂಡಿತು.

**೫. ಚರಿತ್ರೆ ನಿರ್ಮಾಣದ ಅವಲೋಕನ :** ವಚನಸಾಹಿತ್ಯವನ್ನು ಎದುರಿಗಿಟ್ಟುಕೊಂಡು ಶರಣರ ಕುರಿತಾದ ಕಾವ್ಯ-ಪುರಾಣ ಬರೆದಿರುವುದು ಚರಿತ್ರೆ ನಿರ್ಮಾಣದ ಕಾರ್ಯವೆನಿಸಿದೆ. ಹರಿಹರನ ಬಸವರಾಜದೇವರ ರಗಳೆ, ಅಕ್ಕಮಹಾದೇವಿ ರಗಳೆ, ಪ್ರಭುದೇವರ ರಗಳೆ ಇನ್ನೂ ಮುಂತಾದ ಶಿವಶರಣರ ರಗಳೆಗಳು, ಭೀಮಕವಿಯ ಬಸವಪುರಾಣ, ಸಿಂಗಿರಾಜನ ಸಿಂಗಿರಾಜನ ಪುರಾಣ, ಚನ್ನಪ್ಪಕವಿಯ ಶರಣಲೀಲಾಮೃತ ಯಕ್ಷಗಾನ, ಕೃತಿಗಳು ರಚನೆಯಾಗಿವೆ. ಲಕ್ಕಣ್ಣದಂಡೇಶನ "ಶಿವತತ್ವ ಚಿಂತಾಮಣಿ"ಯಂಥ ತಾತ್ವಿಕ ಸಮ್ಮಿಶ್ರ ಕೃತಿರಚನೆಯಾಯಿತು. ಮೊದಲ ಸಂಧಿಯಿಂದ ೨೫ನೇ ಸಂಧಿಯವರೆಗೆ ಶಿವನ ಪಂಚವಿಂಶತಿಗೆ, ನಂತರದಲ್ಲಿ ಶರಣರ ಕಥೆಗಳಿಗೆ, ಆನಂತರದಲ್ಲಿ ಲಿಂಗಾಂಗ ಸಾಮರಸ್ಯವನ್ನು ಕುರಿತು ವಿವರಿಸುತ್ತದೆ. ಒಟ್ಟಿನಲ್ಲಿ ವಚನಗಳನ್ನೇ ಆಧರಿಸಿ ಶಿವಶರಣರ ಕಾವ್ಯ-ಪುರಾಣಗಳು ರಚನೆಯಾದವು.

**೬. ಸೃಜನಶೀಲ ಅನುಸಂಧಾನ ಅವಲೋಕನ :** ಆಧುನಿಕ ಕಾಲದಲ್ಲಿ ವಚನಸಾಹಿತ್ಯವನ್ನು ವಚನಧರ್ಮಸಾರ, ವಚನಸಾರಸಂಗ್ರಹ ಮುಂತಾದ ಹೆಸರಿನಲ್ಲಿ ಅಧ್ಯಯನ ಮಾಡಿದ ಕೆಲವಾರು ವಿದ್ವಾಂಸರನ್ನು ಬಿಟ್ಟರೂ; ವಚನಗಳನ್ನೇ ಕೇಂದ್ರವಾಗಿಟ್ಟುಕೊಂಡು ಶರಣರ ಕುರಿತಾದ ಕಾದಂಬರಿಗಳು, ನಾಟಕಗಳು, ಕಥೆಗಳು ರಚನೆಯಾಗಿವೆ. ಕರ್ತಾರನ ಕಮ್ಮಟ, ಅಳಿವಿನಿಂದ ಉಳಿವಿಗೆ, ಹೆಪ್ಪಿಟ್ಟಹಾಲು, ಕೆಟ್ಟಿತ್ತು ಕಲ್ಯಾಣ, ಸಂಕ್ರಾಂತಿ, ಶಿವರಾತ್ರಿ, ಮಹಾಚೈತ್ರ ಮುಂತಾದ ಆಧುನಿಕ ಕೃತಿಗಳು ಹುಟ್ಟಿಕೊಂಡಿವೆ. ಇವುಗಳಿಗೆಲ್ಲ ವಚನಗಳ ಆಶಯವೇ ಪ್ರೇರಣೆಯಾಗಿದೆ.

ವಚನಸಾಹಿತ್ಯ ಎಂದಾಕ್ಷಣ ೧೨ನೇ ಶತಮಾನ ನೆನಪಾಗುತ್ತದೆ. ೧೫ನೇ ಶತಮಾನದಲ್ಲಿ ವಚನಸಾಹಿತ್ಯ ರಚನೆಯಾಗಿದೆ. ಆದರೆ ನನ್ನ ಅಧ್ಯಯನದ ತಿಳುವಳಿಕೆಯ ಪ್ರಕಾರ ೧೫ನೇ ಶತಮಾನದ ವಚನಗಳು ಸಹಜ ಅಭಿವ್ಯಕ್ತಿಗಳಿಗಾಗಿ ರಚನೆಯಾಗಲಿಲ್ಲ. ಕಾವ್ಯದ ದೃಷ್ಟಿಯಿಂದ, ಸಾಮಾಜಿಕ ಸಂವೇದನೆಯ ದೃಷ್ಟಿಯಿಂದ ಈ ಯುಗದ ವಚನಗಳು ಮಹತ್ವದ್ದಾಗಿ ವಿದ್ವಾಂಸರ ಗಮನವನ್ನು ಸೆಳೆಯಲಿಲ್ಲವೆನ್ನಬಹುದು. ಒಟ್ಟಾರೆ ವಚನಸಾಹಿತ್ಯ ಕುರಿತು ಆರ್.ಆರ್ ದಿವಾಕರ, ಎಂ.ಆರ್.ಶ್ರೀನಿವಾಸ ಮೂರ್ತಿ, ಹಿರೇಮಲ್ಲೂರ ಈಶ್ವರನ್, ವೀರಭದ್ರಪ್ಪ ಕೊಪ್ಪಳ, ಹರ್ಡೇಕರ ಮಂಜಪ್ಪ, ಜೀರಿಗೆ ಕಟ್ಟಿಬಸಪ್ಪ, ಫ.ಗು.ಹಳಕಟ್ಟಿಯಂಥವರು ವಚನಸಾಹಿತ್ಯವನ್ನು ತೆಕ್ಕೆಯಲ್ಲಿಟ್ಟುಕೊಂಡು ಬೆಳೆಸಿದರು. ಮುಖ್ಯವಾಗಿ ಶ್ರೇಣೀಕೃತ ಸಾಮಾಜಿಕ ಚೌಕಟ್ಟನ್ನು ನಿರಾಕರಿಸುವ ವಚನ ಚಳುವಳಿಗೆ ಒತ್ತಾಸೆಯಾಗಿ ನಿಂತವರು ಕೆಳವರ್ಗದ ಅದೆಷ್ಟೋ ವಚನಕಾರರು ಇದ್ದಾರೆ. ಅವರೆಲ್ಲರ ಸಮಗ್ರ ಅಧ್ಯಯನವಾಗುವುದು ಇಂದಿನ ಅಗತ್ಯವಾಗಿದೆ.

## ಕೀರ್ತನ - ದಾಸಸಾಹಿತ್ಯ

-ಅರಳುಮಲ್ಲಿಗೆ ಪಾರ್ಥಸಾರಥಿ

ದಾಸಸಾಹಿತ್ಯ ಸಂಭ್ರಮಿಸಿದ ಪುರಂದರ, ಕನಕ, ವಿಜಯದಾಸಯುಗ, ಅದೊಂದು ಪರ್ವಕಾಲ ಅದರೆ ಈ ಮೌಲಿಕ ಸಾಹಿತ್ಯ, ಇಂದಿಗೂ ಎಂದೆಂದಿಗೂ ಪ್ರಸ್ತುತವೇ ಆಗಿದೆ. ದಾಸಸಾಹಿತ್ಯವೆಂದರೆ ಅನುಭವದಡುಗೆ, ಭಕ್ತಿಯ ಕಣಜ, ಪರಮಾತ್ಮನ ಸನ್ನಿಧಾನ, ನೊಂದವರ ಭರವಸೆ, ಹರೆಯದವರ ಆದರ್ಶ, ಇದರ ತುಂಬ ತುಂಬಿರುವುದು ಭಗವಂತನಲ್ಲಿ ಭಕ್ತಿ, ಧರ್ಮಶ್ರದ್ಧೆ, ಆತೋದ್ದಾರ, ಸಮಾಜಸ್ಪಂದನ, ಕನ್ನಡನಾಡು ಸೌಭಾಗ್ಯದ ಬೀಡು. ಏಕೆಂದರೆ ಹರಿದಾಸರೆಲ್ಲರೂ ಕನ್ನಡನಾಡಿನವರು. ಆ ಕಾಲಕ್ಕೆ ಕರ್ನಾಟಕದ ಉದ್ದಗಲಕ್ಕೂ ಹಾಡುತ್ತ, ಕುಣಿಯುತ್ತ, ಬದುಕಿನ ಸಂತಸವನ್ನು ಬೆಳಗುತ್ತ ಓಡಾಡಿದವರು. ಅಚ್ಚಕನ್ನಡದಲ್ಲಿ ಪದಪದ್ಯಗಳ ಧಾರೆ ಹರಿಸಿದವರು. ಮೊದಲು ಉಪನಿಷತ್ತುಗಳ ಗಹನತತ್ವಗಳನ್ನು ತಿಳಿಗನ್ನಡದಲ್ಲಿ ಸಾರಿದವರು. ಜ್ಞಾನತೀರ್ಥದಲ್ಲಿ ಸ್ನಾನ ಮಾಡಿದವರು. ಧರ್ಮಜೀವನಮಾರ್ಗವನ್ನು ಅನುಷ್ಠಾನಕ್ಕೆ ತಂದವರು. ಮಾನವೀಯತೆಯ ಮನೋಧರ್ಮವನ್ನು ಮೆರೆಸಿದವರು. ಧರ್ಮಪ್ರವೃತಿಯ ಅಪಾರ ಸಂದೇಶಗಳನ್ನು ಹೆಜ್ಜೆಹೆಜ್ಜೆಗೂ ಕೊಟ್ಟವರು. ಊರೂರಲ್ಲಿ ನೆಟ್ಟವರು. ಅರಿಷಡ್ವರ್ಗಗಳನ್ನು ಬಿಟ್ಟವರು. ಉದಾರಭಾವ, ಉದಾತ್ತ ಚಿಂತನೆ, ಶೀಲಶುದ್ಧಿ, ಸಾಮಾಜಿಕ ಕಳಕಳಿ, ಧರ್ಮಪ್ರವೃತ್ತಿ, ಇವೆಲ್ಲ ದಾಸಸಾಹಿತ್ಯದ ಸೌಂದರ್ಯಕ್ಕೆ ಮುಖ್ಯ ಕಾರಣವಾದುವು. ನಂಬಿಕೆ, ವಿಶ್ವಾಸ, ಭರವಸೆಯ ಬೆಳಕಾಯಿತು ದಾಸಸಾಹಿತ್ಯ.

ವಿಶ್ವಮಾನವ ಧರ್ಮವನ್ನು ಸಾರುವ ಶ್ರೀಜಗನ್ನಾಥದಾಸರ ಎಲ್ಲ ಈ ಹಾಡು 'ಸರ್ವದೇಶವು ಪುಣ್ಯದೇಶವು, ಸರ್ವಕಾಲವು ಪರ್ವಕಾಲವು, ಸರ್ವಜೀವರು ದಾನಪಾತ್ರರು, ಮೂರು ಲೋಕದೊಳು ಸರ್ವ ಮಾತುಗಳೆಲ್ಲ ಮಂತ್ರವು ಸರ್ವಕೆಲಸಗಳೆಲ್ಲ ಪೂಜೆಯು ಶರ್ವವಂದ್ಯನ ವಿಮಲಮೂರ್ತಿ ಧ್ಯಾನವುಳ್ಳವಗೆ' ಎನ್ನುತ್ತಾ ಎಲ್ಲ ಕಾಲದಲ್ಲಿ, ಎಲ್ಲ ಸ್ಥಳದಲ್ಲಿ ಎಲ್ಲರಲ್ಲಿಯೂ ಎಲ್ಲ ಭಾವನೆಯನ್ನು ಬಿತ್ತುವಲ್ಲಿ ಸಾರ್ಥಕವಾಗಿದೆ. ದಾಸರ ಈ ಮಾತು ಕಾಲಕ್ಕೂ ಸಲ್ಲುವಂಥದ್ದು.

ದಾಸಸಾಹಿತ್ಯ ಕೀರ್ತನೆ, ಸುಳಾದಿ, ಉಗಾಭೋಗ, ದಂಡಕ, ಮುಂಡಿಗೆ ಮುಂತಾದ ನಾನಾ ರೀತಿಗಳಲ್ಲಿ ಪ್ರಕಟವಾಯಿತು. ವೃತ್ತನಾಮ, ತ್ರಿಪದಿ, ಚೌಪದಿ, ಷಟ್ಪದಿ, ಸುವ್ವಾಲಿ, ಸಾಂಗತ್ಯ, ಕಂದ, ಸೀಸಪದ್ಯ ಮುಂತಾದ ಕಾವ್ಯಪ್ರಭೇದಗಳಲ್ಲಿ ಅಭಿವೃದ್ಧಿ ಪಡೆಯಿತು. ಮಧುಮಧುರವಾದ ಮೃದುಮಧುರವಾದ ಜೇನಾಯಿತು ದಾಸಸಾಹಿತ್ಯ,

ಸಹಸ್ರಾರು ವರ್ಷಗಳ ಭಾರತದ ಅಖಂಡತೆಗೆ ಮುಖ್ಯವಾಗಿ ಕಾರಣವಾದದ್ದು ಭಕ್ತಿ ಅಂದೋಲನ. ಅದರಲ್ಲಿ ಮಹತ್ವದ ಪಾತ್ರವಹಿಸಿರುವುದು ದಾಸಸಾಹಿತ್ಯ,

ಇಲ್ಲಿ ಸಂತರು ಮಹಂತರು, ಪೀಠಾಧಿಪತಿಗಳು ಮಹಿಳೆಯರು, ಕೀರ್ತನೆ ಬರೆದು ದಾಸರುಗಳಿಂದ ಕೀರ್ತಿತರಾದರು ದಾಸದೀಕ್ಷೆ ಪಡೆದ ಹರಿದಾಸಪಡೆ " ನಾಡಿನೆಲ್ಲೆಡೆ



ಸಂಗೀತ, ಸಂಸ್ಕಾರಗಳ ಹೊಸದೊಂದು ಸಂಸ್ಕೃತಿಯ ಸಂಚಲನ ಮೂಡಿಸಿತು. ಆ ಸಂಸ್ಕೃತಿಯಲ್ಲಿ ಯಾಯಾವರ, ಗೆಜ್ಜೆ, ತುಳಸೀಮಾಲೆ, ಹಣೆಯಲ್ಲಿ ಗೋಪಿಚಂದನ, ದಂಡಿಗೆ, ಬೆತ್ತ, ಗೋಪಾಳಬುಡ್ಡಿ ಚಿಟಕಿ, ಗಾಯನ, ನರ್ತನ ತಾವಾಗಿಯೇ ತಲೆಗೆ ಸುತ್ತಿದ ಕಾವೀಲಪಾಟಿ ಇವು ಎದ್ದು ಕಾಣುತ್ತಿದ್ದವು. ಮುಂದೆ ಯಕ್ಷಗಾನ ಬಯಲಾಟಗಳಲ್ಲೂ ಅದರ ಕುರುಹುಗಳು ಕಾಣಿಸಿಕೊಂಡವು ದಾಸರು ತಮ್ಮ ಹಾಡುಗಳಲ್ಲಿ ಜಾನಪದ ಗತ್ತನ್ನು, ಗಮ್ಮತ್ತನ್ನು ಸಮೃದ್ಧವಾಗಿ ಬೆಳಸಿಕೊಂಡು ಜನಮನಕ್ಕೆ ತುಂಬಾ ಹತ್ತಿರವಾದರು, ಪ್ರಕಾಂಡ ಪಂಡಿತರೆನಿಸಿಕೊಂಡವರಿಗೇ ಸವಾಲಾಗುವಂತೆ ಗೂಢಾರ್ಥಗಳ ಮುಂಡಿಗೆಗಳನ್ನು ರಚಿಸಿದರು.

ಸಂಗೀತ ಸಂಪ್ರದಾಯ ಪ್ರವರ್ತಕರೆನಿಸಿಕೊಂಡ ವ್ಯಾಸರಾಜರು, ಕರ್ನಾಟಕ ಸಂಗೀತ ಪಿತಾಮಹ ಎನಿಸಿಕೊಂಡ ಪುರಂದರದಾಸರು, ಜಾನಪದ ದೇಸೀಸಂಗೀತದ ರಸದೌತಣ ನೀಡಿದ ಕನಕದಾಸರು, ಮುಂದೆ ಸಂಗೀತ ಜಗತ್ತಿನ ಹತ್ತು ಹಲವು ಆಯಾಮಗಳಿಗೆ ಸ್ಪಂದಿಸುತ್ತಾ ಕೀರ್ತನೆಗಳನ್ನು ರಚಿಸಿದ ಅನೇಕ ಹರಿದಾಸರು, ಸಂಗೀತಕ್ಷೇತ್ರವನ್ನು ಸಂಪನ್ನಗೊಳಿಸಿದರು.

ದಾಸರು ಪದಪದ್ಯ ಕೀರ್ತನೆಗಳಷ್ಟೇ ಅಲ್ಲದೇ ಕೀರ್ತನೇತರ ಸಾಹಿತ್ಯವನ್ನೂ ಸಮೃದ್ಧವಾಗಿ ನೀಡಿದ್ದಾರೆ. ವೈಕುಂಠ ವರ್ಣನೆ, ಸ್ವಪ್ನಗದ್ಯ, ಮೋಹನ ತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರ, ತತ್ವಸುವ್ವಾಲಿ ಮುಂತಾದ ಸಾಹಿತ್ಯಗಳೂ ವಿಶೇಷವಾಗಿ ಜನಪ್ರಿಯವಾಗಿವೆ. ಅದರೆ ವಿಜಯದಾಸರ ಸುಳಾದಿಗಳು, ಜಗನ್ನಾಥದಾಸರ ಹರಿಕಥಾಮೃತಸಾರ, ಬರಿಯ ದಾಸಸಾಹಿತ್ಯಕ್ಕಷ್ಟೇ ಅಲ್ಲದೇ ಸಮಗ್ರ ಕನ್ನಡ ಸಾಹಿತ್ಯದ ಉತ್ತುಂಗಶೃಂಗ ಕೃತಿಗಳು. ದಾಸಸಾಹಿತ್ಯದ ಮತ್ತೊಂದು ವೈಶಿಷ್ಟ್ಯವೆಂದರೆ ಅಂಕಿತದ ಸೇತುವೆಯಿಂದಾಗುವ ಗುರುಶಿಷ್ಯ ಪರಂಪರೆ. ಇದು ಜ್ಞಾನದ ನಿರಂತರ ಪ್ರವಾಹವೂ ಆಗಿ ಬಂದಿದೆ.

ಇನ್ನು ಹರಿದಾಸರ ಮುಂಡಿಗೆಗಳಂತೂ ಅಯೋಮಯ. ಅರಿವಾದೊಡೆ ಮಂಡಿಗೆ ತಿಂದಷ್ಟು ಸಂತೋಷ. ಸಮಾಧಿಭಾಷೆ, ದರ್ಶನಭಾಷೆ, ಗುಹ್ಯಭಾಷೆ, ಗೂಢಭಾಷೆ, ಗೂಢನಿಗೂಢಭಾಷೆ ಕೇವಲ ಪಂಡಿತರ ಸ್ವತ್ತಲ್ಲ.

ಸಾಮಾನ್ಯರಾಗಿದ್ದ ಹರಿದಾಸರೂ ಇದರಲ್ಲಿ ಅದ್ಭುತ ವಿಸ್ಮಯ ಮೂಡಿಸಬಲ್ಲರು ಎಂಬುದು ಸಾಬೀತಾದ ದಾಸಸಾಹಿತ್ಯ ಪ್ರಕಾರವೇ ಈ ಮುಂಡಿಗೆಗಳು, ಬೆಡಗು, ಒಗಟು, ಚಮತ್ಕಾರ ಇದರ ವಿಶೇಷ ಅದರೆ ತರ್ಕದ ಕಸರತ್ತು ಶಬ್ದದ ಮೇಲಾಟಗಳಿಗಿಂತ ಪರಮಾತ್ಮನ ಸ್ಮರಣೆ ಹಾಗೂ ಸಮರ್ಪಣೆ ದಾಸರಿಗೆ ಮುಖ್ಯವಾದುವು. ನಾಮಸ್ಮರಣೆ ಅಲೌಕಿಕ ಅನುಭವ ಅನುಭಾವದೆತ್ತರಗಳಿಗೆ ದಾಸರನ್ನು ಕರೆದೊಯ್ದಿತು, ಹಾಗಾಗಿ ಕನ್ನಡ ನಾಡಿನ ಆಧ್ಯಾತ್ಮ ಲೋಕದ ಮಹಾವಿಸ್ತರಣೆ ದಾಸಸಾಹಿತ್ಯದ ಮೂಲಕ ಹರಿದಾಸರಿಂದಾಯಿತು.

ಒಳ್ಳೆ ಭಾವನೆ, ಒಳ್ಳೆ ಮಾತು, ಒಳ್ಳೆ ಬದುಕು ಸಮೃದ್ಧವಾಗಿರುವುದನ್ನು ನೋಡಬೇಕಾದರೆ ದಾಸಸಾಹಿತ್ಯಕ್ಕೆ ಬರಬೇಕು. ಹರಿದಾಸ ಸಾಹಿತ್ಯ, ಸಂಸ್ಕಾರ, ಸಂಸ್ಕೃತಿ, ವಿವೇಕ, ವಿವೇಚನೆಯನ್ನು ಹಿತವಾದ, ಮುದವಾದ ಹಾಡುಭಾಷೆಯಲ್ಲಿ ತಂದುಕೊಡುತ್ತದೆ. ಶ್ರದ್ಧೆಯಿಂದ ಓದುವವರಿಗೆ, ಕೇಳುವವರಿಗೆ, ದಾಸಸಾಹಿತ್ಯ ಬದುಕನ್ನು ಕಟ್ಟಿಕೊಡುವ, ಬದುಕನ್ನು ಕೈಹಿಡಿದು ನಡೆಸುವ ಊರುಗೋಲಾಗುತ್ತದೆ. ಅಂಧಕಾರದಲ್ಲಿ ದಾರಿತೋರಿಸುವ ದೀವಿಗೆಯೇ



ದಾಸಸಾಹಿತ್ಯ, ದೈವಭಕ್ತಿ, ಧರ್ಮಶ್ರದ್ಧೆ, ಸತ್ಯನಿಷ್ಠೆ, ಅಂತಃಕರಣಗಳು ಸಂಪನ್ನವಾಗಬೇಕಾದರೆ ಬನ್ನಿ ದಾಸಸಾಹಿತ್ಯಕ್ಕೆ.

ದಾಸರು ಮಾತುಮಾತಿಗೆ ಪರಮಾತ್ಮನನ್ನು ನೆನೆಯುತ್ತಾರೆ. ಅವರಿಗೆ ವಾರ್ತೆ, ಕೀರ್ತಿ ಎಂದೂ ಪರಮಾತ್ಮನದೇ. ಅವರಿಗೆ ಕಂಡಕಂಡದ್ದೆಲ್ಲಾ ಕಮಲನಾಭನ ಮೂರ್ತಿ, ಉಂಡು ಉಟ್ಟಿದ್ದೆಲ್ಲಾ ಭಗವಂತನ ಕೃಪೆ ಹಾಗೂ ಯಜ್ಞ, ಹರಿದಾಸ ಸಾಹಿತ್ಯ ಎಲ್ಲರಲ್ಲಿ ಎಲ್ಲದರಲ್ಲಿ ದೇವರನ್ನು ಕಾಣುವ ದೂರದೃಷ್ಟಿ ನೀಡುತ್ತದೆ.

ಕರ್ನಾಟಕದ ಸಹಸ್ರಾರು ವರ್ಷಗಳ ಇತಿಹಾಸದಲ್ಲಿ ವಚನಸಾಹಿತ್ಯ ಹಾಗೂ ದಾಸಸಾಹಿತ್ಯ ಎರಡು ಕಣ್ಣುಗಳಿದ್ದಂತೆ, ಕಾಲದ ಅಗ್ನಿಪರೀಕ್ಷೆಯಲ್ಲಿ ಎದ್ದುಬಂದ, ಗೆದ್ದುಬಂದ ಈ ಸಾಹಿತ್ಯ ಸಮಾಜಮುಖಿಯಾಗಿ ಹೊರಟಿದ್ದರಿಂದ ಮೌಲಿಕವಾಗಿ, ಶಾಶ್ವತ ಸ್ಥಾನಮಾನ ಗಳಿಸಿಕೊಂಡಿತು.

ಭಾವಶುದ್ಧಿ, ಬುದ್ಧಿಶುದ್ಧಿ, ಮನೋಶುದ್ಧಿ, ಹೃದಯಶುದ್ಧಿ, ಬೇಕೆನ್ನುವವರು, ದಾಸಸಾಹಿತ್ಯಕ್ಕೆ ಬರಬೇಕು. ಇಲ್ಲಿ ಗುರುವಿನ ಗುರುತಾಗುತ್ತದೆ. ಪರಮಾತ್ಮನನ್ನು ಪ್ರೀತಿಮಾಡುವ ಕಲೆ ಕರಗತವಾಗುತ್ತದೆ.

ಸಹಸ್ರಾರು ವರ್ಷಗಳ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪ್ರಧಾನವಾಗಿ, ಮೌಲಿಕವಾಗಿ, ಹರಿಯುತ್ತ ಬಂದಿರುವ ದಾಸಸಾಹಿತ್ಯ ವಾಹಿನಿಯಲ್ಲಿ ಲಕ್ಷಲಕ್ಷ ಕನ್ನಡ ಜನ ಮಿಂದಿದ್ದಾರೆ, ಸಂಭ್ರಮಿಸಿದ್ದಾರೆ. ಬದುಕನ್ನೂ ಧನ್ಯ ಮಾಡಿಕೊಂಡಿದ್ದಾರೆ ಹಾಗೂ ಇದು ಜನಸಾಮಾನ್ಯರ ಪವಿತ್ರ ಸಾಹಿತ್ಯವಾಗಿಯೇ ಉಳಿದುಬಂದಿದೆ. ಕಾಲದ ಅಗ್ನಿಪರೀಕ್ಷೆಯಲ್ಲಿ ಎದ್ದು ಬಂದಿರುವ ಗೆದ್ದು ಬಂದಿರುವ ದಾಸಸಾಹಿತ್ಯದ ಧ್ಯೆಯವಾಕ್ಯವೇ 'ಮಾನವಜನ್ಮ ದೊಡ್ಡದು'. ನಾವು ಇಲ್ಲಿ ಬಂದಿರುವುದು ಅಳುವುದಕ್ಕಲ್ಲ, ಇನ್ನೊಬ್ಬರನ್ನು ಅಳಿಸುವುದಕ್ಕಲ್ಲ, ನಾವು ನಗುನಗುತ್ತಿರಬೇಕು ಮತ್ತೊಬ್ಬರಿಗೂ ಸಂತೋಷ ಕೊಡಬೇಕು 'ಈಸಬೇಕು ಇದ್ದು ಜೈಸಬೇಕು' ಎನ್ನುವ ಸಕಾರಾತ್ಮಕ ಮನೋಭಾವದ ದಾಸಸಾಹಿತ್ಯವನ್ನು ನಮ್ಮ ನಾಡಿನ ಹೆಣ್ಣುಮಕ್ಕಳು, ಭಜನಮಂಡಳಿಯ, ಸಂಗೀತ ಪರಂಪರೆಯ ಜನ ಜೋಪಾನವಾಗಿ ಕಾಯ್ದುಕೊಂಡು ಬಂದಿದ್ದಾರೆ, ಬಳಸಿದ್ದಾರೆ, ಬೆಳೆಸಿದ್ದಾರೆ, ಬೆಳೆಸುತ್ತಿದ್ದಾರೆ,

ಇದೇ ರೀತಿ ಎಲ್ಲ ದಾಸರುಗಳೂ ಸಮಾಜ ಚಿಂತನೆ ನಡೆಸಿ ಪ್ರಚುರ ಪಡಿಸಿದ ಹಾಡುಗಳು ಇಂದಿಗೂ ಜನಾದರಣೆ ಪಡೆದಿವೆ.

ಶ್ರೀಪಾದರಾಜರಿಂದ ಪ್ರಾರಂಭವಾಗಿ ಎಲ್ಲ ಹರಿದಾಸರು, ಸಂಸ್ಕೃತಕ್ಕಿಂತಲೂ ಮುಖ್ಯವಾಗಿ ಕನ್ನಡಕ್ಕೆ ಮನ್ನಣೆಯ ಮಣೆ ಹಾಕಿದರು. ಬಹಳಷ್ಟು ಗ್ರಂಥ, ವಿಚಾರಗಳು ಆ ಕಾಲಕ್ಕೆ ಸಂಸ್ಕೃತದಲ್ಲಿದ್ದವು. ಹೀಗಾಗಿ ಜನಸಾಮಾನ್ಯರು ಆ ಗ್ರಂಥಗಳಿಗೆ ದೂರದಿಂದಲೇ ಕೈ ಮುಗಿದು ದೂರವಿರುತ್ತಿದ್ದರು. ಹರಿದಾಸರ ಜನಪ್ರೀತಿ ಹಾಗೂ ಕನ್ನಡ ಅಭಿಮಾನ ಈ ಲೋಪವನ್ನು ನಿವಾರಿಸಿತು.

ಅಧೀರರಾಗದ ಧೈರ್ಯದಿಂದ, ಆತ್ಮಸ್ಥೈರ್ಯದಿಂದ ಆತ್ಮವಿಶ್ವಾಸದಿಂದ, ಮುನ್ನಡೆಯಬೇಕು ಎಂಬುದೇ ದಾಸರ ನಿಲುವು ಮನವ ಶೋಧಿಸಬೇಕು ನಿಚ್ಚ, ದಿನದಿನಕೆ ಮಾಡುವ ಪಾಪಪುಣ್ಯದ ವೆಚ್ಚ' ಆತ್ಮಾವಲೋಕನದ ಅಗತ್ಯವನ್ನು ಒತ್ತಿ ಹೇಳುತ್ತಾರೆ. 'ಧರ್ಮವೆ ಜಯವೆಂಬ ದಿವ್ಯಮಂತ್ರ' ಎನ್ನುವ ದಾಸಸಾಹಿತ್ಯ, ಸತ್ಯಧರ್ಮಗಳ ನೆಲೆಯಲ್ಲಿ ಬದುಕನ್ನು ಕಟ್ಟಿಕೊಳ್ಳುವ ಕರೆ ನೀಡುತ್ತದೆ.

ಸತ್ಸಂಗ ಮಾಡುತ್ತಾ, ಸದಾಚಾರ, ಸದ್ವಿಚಾರ, ಚಿಂತನೆಯಲ್ಲಿ ತೊಡಗಿರಲು ದಾಸರು ಕರೆ ನೀಡುತ್ತಾರೆ. ಸಂಗವಾಗಲಿ ಸಾಧು ಸಂಗವಾಗಲಿ ಸಂಗದಿಂದ ಲಿಂಗದೇಹ ಭಂಗವಾಗಲಿ. ವ್ಯರ್ಥವಾಗಿ ಕಾಲಕಳೆಯಬೇಡ ಎನ್ನುವ ದಾಸರು, 'ಎಚ್ಚೆತ್ತು ಇರು ಕಂಡ್ಯ ಮನವೆ, ಹಾಳು ಹರಟೆಗೆ ಹೋಗಬೇಡ, ಕಂಡಕಂಡ ಕೋಳುಗಳನ್ನು ಚಿತ್ರರಂಗ ಕಂಡ ಮನವರಿಕೆಗೆ ಹೊರಡಬೇಡ ಕಂಡಕಂಡ ಕೂಳುಗಳನ್ನು ತಿಂದು ಒಡಲ ಹೊರೆಯಬೇಡ, ಕಾಲ ವ್ಯರ್ಥ ಕಳೆಯಬೇಡ. ಪ್ರಾರಬ್ಧ ಕರ್ಮಕ್ಕೆ ಮನಸೋಲಬೇಡ ಎಂದು ತಿಳಿಹೇಳುತ್ತಾರೆ.

ಸಾಹಿತ್ಯದ ಮಾತುಗಳು, ಸಂಗೀತಕ್ಕೆ ಸ್ಪಂದಿಸಿದಾಗ ಭಾವತರಂಗಗಳು ಸುಪ್ತ ಮನಸ್ಸಿನ ಆಳಕ್ಕೆ ಇಳಿಯುತ್ತವೆ. ಸಮ್ಮೇಳನಾಧ್ಯಕ್ಷರಾದ ಡಾ|| ಎಚ್. ಎಸ್. ವೆಂಕಟೇಶಮೂರ್ತಿ ಅವರು ಹೇಳಿದಂತೆ ಒಂದು ಕೀರ್ತನೆಯ ಸಾಹಿತ್ಯ, ನಾಟಕದ ಹಸ್ತಪ್ರತಿಯಿದ್ದಂತೆ, ಪ್ರಯೋಗದಲ್ಲೇ ತನ್ನ ಪರಿಪೂರ್ಣತೆಯನ್ನು ಸಾಧಿಸಲು ಅದು ಹವಣಿಸುತ್ತದೆ' ಹಾಗಾಗಿ ಹಾಡಿದಾಗ ಕೀರ್ತನ ಸಾಹಿತ್ಯ ಅತ್ಯಂತ ಪರಿಣಾಮಕಾರಿಯಾಗಿ ಬೆಳಗುತ್ತದೆ.

ದಾಸರ ಕೀರ್ತಿಗೆ ಅವರ ಸುಸಂಸ್ಕೃತ ನಡವಳಿಕೆ, ಸಜ್ಜನಿಕೆ, ಅಭಿಮಾನ ಹಾಗೂ ಪಾಂಡಿತ್ಯಗಳ ಸಹಸ್ಪಂದನವೇ ಮುಖ್ಯಕಾರಣ. “ಹಲವಾರು ಜೀವಗಳು ದಾರಿಗಾಣದೆ ಬಳಲುತ್ತಿದ್ದವು, ದಾಸರು ಅನುಕಂಪದಿಂದ ಜನಸಾಮಾನ್ಯನವರೆಗೆ ನಡೆದು ಹೋದರು, ಕೀರ್ತನೆಗಳನ್ನು ಹಾಡಿದರು. ತಮ್ಮ ಅಮೋಘ ಸಂಗೀತದ ನಾದಸಮುದ್ರದಲ್ಲಿ, ಜನಸಾಮಾನ್ಯರನ್ನು ಮೀಯಿಸಿ ಅವರ ಅನುಭವ ಪ್ರಪಂಚವನ್ನು ವಿಸ್ತರಿಸಿದರು, ಬೇರೊಂದು ಬಗೆಯ ಲೋಕವನ್ನೇ ಅವರ ಕಣ್ಣೆದುರು ತೆರೆದರು” ದಾಸರು ಸ್ವಪ್ರತಿಷ್ಠೆ ದೊಡ್ಡಸ್ತಿಕೆಗಳ ನೆರಳನ್ನು ತಮ್ಮ ಸಮೀಪಕ್ಕೆ ಬರಗೊಡಲಿಲ್ಲ. 'ನಡೆದಾಡುವ ನಾರದರಂತೆ' ಅವರು ಜೀವನ್ಮುಕ್ತರಾಗಿದ್ದರು. ಭಗವತ್ಕಾರ್ಯ ಸಾಧಕರಾಗಿ ಪ್ರಚಂಡ ಉತ್ಸಾಹದಿಂದ ಆಧ್ಯಾತ್ಮಿಕ ಸತ್ಯಗಳ ಧ್ವಜವನ್ನು ನಾಡಿನೆಲ್ಲೆಡೆ ಹಾರಿಸಿದರು, ಸತ್ಯದ ಪರಂಜ್ಯೋತಿಯಾಗಿ ಬೆಳಗಿದರು. ನಿಂದಾಸ್ತುತಿಗಳನ್ನು ತಾಳಿದರು. ಇಂದ್ರಿಯಗಳನ್ನು ಆಳಿದರು. ತನುಮನ ಜೀವನಗಳನ್ನು ಪರಮಾತ್ಮನಿಗರ್ಪಿಸಿ ಪಾವನಮಾಡಿಕೊಂಡ ಪತಿತ್ರಾತ್ಮವೆನಿಸಿದರು. “ಮನೋವಿಕಾರಗಳ ಮೊಗವನ್ನು ಕಿತ್ತು ಎಸೆದು ಅವರು ಮುಕ್ತಸಂಗರಾಗಿ ದ್ವಂದ್ವಾತೀತರಾಗಿ ಸಂಚರಿಸಿದರು. ಒಂದು ದೇಷ್ಟಿಯಲ್ಲಿ ಸಾದರು ಅಂದಿನ ಜನಸಾಮಾನ್ಯರ ಎದುರು ಸಂಚರಿಸಿದಾಗ ಭಾಗವತ ಧರ್ಮವೇ ಮೂರ್ತಿಮತ್ತಾಗಿ ಸಂಚರಿಸಿದ ಹಾಗೆ ಭಾಸವಾಗಿರಬೇಕು” .

ದಾಸರ ಸಮಾಜವಾದ, ಬಡವರ ಪಕ್ಷಪಾತಿಗಳು, ದಾಸರು ಪ್ರತಿನಿಧಿಗಳು. “ಬಡತನವಿರಲಿ ಕಡೆತನಕ” ಎಂದು ಬಡವರಿಗೆ ದೀನದಲಿತರಿಗೆ ಮಾನ, ಗೌರವ, ಆತ್ಮವಿಶ್ವಾಸಗಳ ಸಮೃದ್ಧಿ ಶ್ರೀಮಂತಿಕೆಯನ್ನು ಧಾರೆಯೆರೆದ

ದಾರ್ಶನಿಕ ದೊರೆಗಳು, ದಾಸರು ತಂಬೂರಿ ಹಿಡಿದು ಭಿಕ್ಷೆಗೆ ಹೊರಟರೆ, 'ರಾಗಿಯ ತಂದೀರಾ, ಭಿಕ್ಷಕೆ ರಾಗಿಯ ತಂದೀರಾ' ಪ್ರತಿಧ್ವನಿ.

ದಾಸರು ಹರಿದಾಸ ದೀಕ್ಷೆ ಪಡೆದು ಊರುರು ತಿರುಗಾಡಿ ಎಲ್ಲ ಜನರೊಂದಿಗೆ ಬೆರೆತು, ದಿನದಿನವೂ ಅವರಿಗೆಲ್ಲಾ ರಾಮನಾಮಪಾಯಸ ಹಾಗೂ ಸಕ್ಕರೆಯ ಸವಿಯನ್ನು ಮನದಟ್ಟು ಮಾಡಿಕೊಟ್ಟರು. ಹೀಗೆ ಸಮಸ್ತ ಜನಸಾಮಾನ್ಯರ ನಡುವೆಯೇ ಬಂದ ಅವರಿಗೆ 'ಮಾನವ ಜನ್ಮ ದೊಡ್ಡದು' ಇದನ್ನು ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ' ಎಂದು ಆತ್ಮೀಯ ಧ್ವನಿಯಲ್ಲಿ ಹೇಳುವ ಸಾಮರ್ಥ್ಯವಿತ್ತು, ಶಾಸ್ತ್ರ ವಿಚಾರಗಳನ್ನು ಕನ್ನಡದಲ್ಲಿ



ಮೂಡಿಸಿ 'ಧರ್ಮವೆ ಜಯವೆಂಬ ದಿವ್ಯಮಂತ್ರ'ವೆಂದು ಹೇಳಿ ಪಾಮರರ ಉದ್ಧಾರಮಾರ್ಗವನ್ನು ತೋರಿಸಿದರು. 'ಮಡಿಮಡಿ ಮಡಿಯೆಂದು ನಾರ್ಮಡಿ ಹಾರುತಿ ಮಡಿ ಎಲ್ಲಿ ಬಂತೋ ಬಿಕನಾಶಿ, ಮಡಿ ಮಾಡುವ ಬಗೆ ಬೇರುಂಟು' ಎಂದು ಹೇಳಿ ಮಡಿಯೆಂದರೆ ಹೊರಗಿನ ತೋರಣವಲ್ಲ, ಒಳಗಿನ ಹೂರಣ, ಅದೊಂದು ಹೃದಯ ಸಂಸ್ಕಾರ ಎಂಬುದನ್ನು ಸಮರ್ಥವಾಗಿ ಪ್ರತಿಪಾದಿಸಿದರು. ಆಚಾರವಿಲ್ಲದ ನಾಲಿಗೆಯನ್ನು ನೀಚ ಬುದ್ಧಿಯ ನಾಲಿಗೆಯನ್ನು ಹತೋಟಿಗೆ ತೆಗೆದುಕೊಂಡು ಹರಿನಾಮದ ಅಮೃತವನ್ನು ಸವಿಯಲು ಜನತೆಗೆ ತಿಳಿಸಿದರು. 'ಪದುಮನಾಭನಲ್ಲಿ ಲೇಶಭಕ್ತಿಯಿಲ್ಲದ; ಉದರ ವೈರಾಗ್ಯದ ಜನರು ನೀರಿನಲ್ಲಿ ಮುಳುಗಿ ಗಡಗಡ ನಡುಗುತ್ತಾ ಕಂಚುಗಾರನ ಬಿಡಾರದಂತೆ ಹರಡಿಕೊಳ್ಳುವ ಬೂಟಾಟಿಕೆಯನ್ನು ಕಂಡು ನಗುವ ದಾಸರು ಜ್ಞಾನ, ಸ್ನಾನ, ಧ್ಯಾನಗಳ ಸರಿಯಾದ ಅರ್ಥವನ್ನು, ಅದರ ಅನುಸಂಧಾನವನ್ನು ಜನತೆಗೆ ಮಾಡಿಕೊಟ್ಟರು.

ವಿಷಯದ ವಿಚಾರ ಬಿಡು-ವಿಹಿತ ಕರ್ಮವ ಮಾಡು-ವೈರಾಗ್ಯ ಭಾಗ್ಯ ಬೇಡು. ವಿನಯದಿ ಸಜ್ಜನರ ಕೂಡು ಒಳಗಣ್ಣ ತೆರೆದು, ಒಳಗಣ್ಣಿನೊಳಗೇ ಇರುವ ಹರಿಯನ್ನು, ಮೂರ್ಜಗ ದೊರೆಯನ್ನು ನೋಡು ಇದೇ ದಾಸರ ಹಾಡುಗಳ ಜಾಡು- ಈ ಹಾಡುಗಳಿಗೆ ಸಂಭ್ರಮಿಸಿತು ನಮ್ಮ ಕನ್ನಡ ನಾಡು.

**ದಾಸಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ ಅನನ್ಯ ಮಹತ್ವದ್ದು**

ಮಧ್ವಾಚಾರ್ಯರ ಸೋದರಿ ಕಲ್ಯಾಣಿದೇವಿ, ಪುರಂದರದಾಸರ ಪತ್ನಿ ಸರಸ್ವತಿದೇವಿ ಹಾಡುಗಳನ್ನು ರಚಿಸಿದ್ದಾರೆ ಸಂಪ್ರದಾಯದ ಮಾತಿದ್ದರೂ ಸ್ಪಷ್ಟನೆಯಲ್ಲಿ ಅದರ ಗೋಚರವಿಲ್ಲ. ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವ, ಗಲಗಲಿಅವ್ವ ಪ್ರಯಾಗವ್ವ, ಓರೇಬಾಯಿ ಲಕ್ಷ್ಮೀದೇವಮ್ಮ, ತುಳಸಾಬಾಯಿ, ತುರುಡಗಿ

ತಿಮ್ಮಮ್ಮ, ತುಂಗಮ್ಮ, ಅಂಬಾಬಾಯಿ, ಅಮ್ಮಾಳಮ್ಮ, ದೊಡ್ಡಸುಧಾಬಾಯಿ, ಕೋಲಾರ ಪದ್ಮಾಬಾಯಿ, ವಿಜಯಲಕ್ಷ್ಮೀ, ಲಕ್ಷ್ಮೀಬಾಯಿ ಬಡಶೇಷಿ, ಡಾ|| ಜಯಲಕ್ಷ್ಮೀ ಮಂಗಳಾಮೂರ್ತಿ, ರತ್ನಾಮೂರ್ತಿ ಮುಂತಾದ ಹರಿದಾಸಿಯರು ಉತ್ತಮ ರಚನೆಗಳ ಮೂಲಕ ದಾಸಸಾಹಿತ್ಯವನ್ನು ಸಂಪನ್ನಗೊಳಿಸಿದ್ದಾರೆ.

ಕನ್ನಡ ದಾಸಸಾಹಿತ್ಯವನ್ನು ಮುಖ್ಯವಾಗಿ ಉಳಿಸಿ ಬೆಳೆಸಿದವರೇ ಮಹಿಳೆಯರು, ಕೇವಲ ಹಾಡುವುದಷ್ಟೇ ಅಲ್ಲದೆ, ಹಾಡಿನ ರಚನೆಗಳಲ್ಲೂ ಮಹಿಳೆಯರು ಅದ್ಭುತ ಕೊಡುಗೆ ನೀಡಿದರು. ಅವರಲ್ಲಿ ಕೆಲವು ಮಹಿಳೆಯರ ಸ್ಥೂಲ ವಿಚಾರವನ್ನು ಇಲ್ಲಿ ನೀಡಲಾಗಿದೆ. ದಾಸಸಾಹಿತ್ಯ ಇಂದಿಗೂ ಬಹುತೇಕ ಉಳಿದಿರುವುದು ಹೆಣ್ಣುಮಕ್ಕಳಿಂದಲೇ ಗಂಡಸರು ದಾಸಸಾಹಿತ್ಯದ ಬಗ್ಗೆ ಗೌರವಾದರ ಬೆಳೆಸಿಕೊಂಡಿರುವುದಕ್ಕೂ ಅವರ ತಾಯಂದಿರ ಬಾಲ್ಯದಲ್ಲಿ ನೀಡಿದ ಹಾಡುಹಸೆ ಸಂಸ್ಕಾರಗಳೇ ಮುಖ್ಯ ಕಾರಣ. ದಾಸಸಾಹಿತ್ಯದ ಕಾರಣಪುರುಷ ಕರ್ನಾಟಕ ಸಂಗೀತ ಪಿತಾಮಹರೆನಿಸಿದ ಪುರಂದರದಾಸರು ಹರಿದಾಸರಾಗಿದ್ದೇ ಅವರ ಪತ್ನಿಯಿಂದಾಗಿ, ಅದಕ್ಕೆಂದೇ ಅವರು ಮುಕ್ತಕಂಠದಿಂದ "ಈ ಪತ್ನಿಕುಲಸಾವಿರವಾಗಲಿ" ಹೆಂಡತಿ ಸಂತತಿ ಸಾವಿರವಾಗಲಿ" ಎಂದು ಉದ್ಘೋಷಿಸಿದರು. ಈಗಂತೂ ಭಜನಾಮಂಡಳಿಗಳ ಸಂಘಟನೆಯಿಂದಾಗಿ ಹೆಣ್ಣುಮಕ್ಕಳು ಮತ್ತೊಮ್ಮೆ ದಾಸಸಾಹಿತ್ಯಯುಗದ ಪುನರುತ್ಥಾನ ಮಾಡಬಲ್ಲ ಸಾಮರ್ಥ್ಯವನ್ನು ಪಡೆದಿದ್ದಾರೆ. ಸಹಸ್ರಾರು ಜನ ಹೆಂಗಸರು ಹರಿಕಥಾಮೃತಸಾರವನ್ನು ಅಸ್ಖಲಿತ ಹೇಳುವುದಷ್ಟೇ ಅಲ್ಲದೇ, ಅವುಗಳ



ಸರಿಯಾದ ಅರ್ಥವನ್ನು, ಪರಿಪರಿಯಾದ ಅರ್ಥವನ್ನು ಅರ್ಥಪೂರ್ಣವಾಗಿ ಅರ್ಥಮಾಡಿಕೊಂಡು, ಇತರರಿಗೆ ಹೇಳಿಕೊಡುವ ಸ್ಥಿತಿಯಲ್ಲಿದ್ದಾರೆ. ದಾಸಸಾಹಿತ್ಯವನ್ನು ಉಜ್ವಲವಾಗಿ ಬೆಳಗಿದ, ಬೆಳಗುತ್ತಿರುವಂತಹ ಅಂತಹ ಕೆಲವು ಮಹಿಳಾ ಹರಿದಾಸರ ಕುರಿತಾದ ಸಂಕ್ಷಿಪ್ತ ಪರಿಚಯ ಇಲ್ಲಿದೆ.

## ಪ್ರಮುಖ ಸಲಹೆಗಳು

ಹರಿದಾಸರ ಅದರಲ್ಲೂ ವಿಶೇಷವಾಗಿ ಪುರಂದರದಾಸರ ಕೊಡುಗೆ ಕನ್ನಡದ ಪುರಂದರದಾಸರನ್ನು ಕುರಿತಂತೆ ಸಂಸ್ಕೃತಿಯ ಮೇಲೆ ಅಪಾರ, ಅನನ್ಯ ಹಾಗೂ ಅದ್ಭುತ. ಮೂವತ್ತೈದು ವರುಷಗಳ ಹಿಂದೆ ಕರ್ನಾಟಕ ಸರ್ಕಾರ ತಂದಿರುವ ಕೃತಿಗಳನ್ನು ಬಿಟ್ಟರೆ, ಈ ಮೂರು ದಶಕಗಳಲ್ಲಿ ಪುರಂದರದಾಸರ ಅಧ್ಯಯನ, ಸಂಶೋಧನೆ, ಗ್ರಂಥ ಪ್ರಕಟನೆ, ವ್ಯಾಪಕವಾದ ರೀತಿಯಲ್ಲಿ ನಡೆದೇ ಇಲ್ಲ ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ವಿದ್ವಾಂಸರಿಂದ ಅಧ್ಯಯನ, ಹಾಗೂ ಸಂಶೋಧನೆ ಮಾಡಿಸಿ, ಅದರ ಫಲವಾಗಿ ಒಂದು ಇಡೀ ಕನ್ನಡ ಜನಸಮುದಾಯಕ್ಕೆ ಮೆಚ್ಚುಗೆಯಾಗುವಂಥ ಜನಪ್ರಿಯ ಪುರಂದರ ಸಂಪುಟವನ್ನು ಹಾಗೂ ಶಾಸ್ತ್ರೀಯ ಪುರಂದರ ಸಂಗೀತ ಸಂಪುಟವನ್ನು ಹೊರತರಬೇಕಾಗಿ ಈ ಸಮ್ಮೇಳನದ ಮೂಲಕ ವಿನಮ್ರವಾಗಿ ಪ್ರಾರ್ಥಿಸುತ್ತಿದ್ದೇನೆ, ಇದನ್ನು ಸಂಕಲಗಳ ಮೂಲಕ, ಪುಸ್ತಕ ಪ್ರಸರಣಗಳ ಮೂಲಕ, ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಅಥವಾ ಕನ್ನಡ ಸಂಸ್ಕೃತಿ ಇಲಾಖೆಯ ಮೂಲಕ ಸರ್ಕಾರ ಅದಷ್ಟು ಬೇಗನೇ ಈ ಕಾರ್ಯಗತಗೊಳಿಸಬೇಕಾಗಿ ಮತ್ತೊಮ್ಮೆ ಪ್ರಾರ್ಥನೆ.

ಕನಕ ಪ್ರಾಧಿಕಾರದ ರೀತಿಯಲ್ಲೇ ಪುರಂದರ ಪ್ರಾಧಿಕಾರವೊಂದನ್ನು ಸರ್ಕಾರವು ಪ್ರಾರಂಭಿಸಿ ಪುರಂದರ ಸಂಸ್ಕೃತಿ ಹಾಗೂ ಸಾಹಿತ್ಯದ, ಸಂಗೀತದ ವ್ಯಾಪಕ ಅಭಿಯಾನ, ಸಂಶೋಧನೆ ಪರಿಷ್ಕಾರ, ಪ್ರಕಟಣೆ ಹಾಗೂ ಪ್ರಸರಣ ಈ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಶೀಘ್ರಗತಿಯಲ್ಲಿ ಕೈಗೊಳ್ಳಬೇಕು.

ಈಗಾಗಲೇ ಪ್ರಾರಂಭವಾಗಿರುವ ಸಮಗ್ರ ಹರಿದಾಸಸಾಹಿತ್ಯ ಸಂಪುಟಗಳ ಸಂಪೂರ್ಣ ಪರಿಷ್ಕರಣ, ಸಂಪಾದನೆ, ಹಾಗೂ ಪ್ರಕಟಣ ಕಾರ್ಯಗಳನ್ನು ಒಂದು ವಿದ್ವಾಂಸರ ಸಮಿತಿಯನ್ನು ರಚಿಸಿ, ಅದರ ಪುನರ್ ಪ್ರಕಟಣೆಗೆ ಅಗತ್ಯ ಕ್ರಮವನ್ನು ಕೈಗೊಳ್ಳಬೇಕು ಎಂದು ತಮ್ಮಲ್ಲಿ ಪಾರ್ಥಿಸುತ್ತೇನೆ.

## ದಲಿತ ವಚನಕಾರರು

**ಡಾ. ಶರಣಪ್ಪ ಎಸ್. ಮಾಳಗಿ**

೧)	ಮಾದಾರ ಚನ್ನಯ್ಯ

೨)	ಮಾದಾರ ಧೂಳಯ್ಯ

೩)	ಡೋಹಾರ ಕಕ್ಕಯ್ಯಾ

೪)	ಹೊಲೆಯರ ಉರಿಲಿಂಗ ಪೆದ್ದಯ್ಯ

೫)	ಸಮಗಾರ ಹರಳಯ್ಯಾ

೬)	ತೆಲಗು ಬೊಮ್ಮಯ್ಯಾ

**ಪೀಠಿಕೆ :** ನಮ್ಮ ಕನ್ನಡ ಸಾಹಿತ್ಯದ ವ್ಯಾಪ್ತಿ-ವಿಸ್ತಾರ ತುಂಬಾ ವಿಶಾಲವಾದದು ಮತ್ತು ಶ್ರೀಮಂತವಾದುದು. ಅದಕ್ಕಾಗಿಯೇ ನಾವು ಕನ್ನಡ ಸಾಹಿತ್ಯವನ್ನು ಅಧ್ಯಯನ ಅನುಕೂಲತೆಗಾಗಿ ಪ್ರಾಚೀನ ಸಾಹಿತ್ಯ, ಮಧ್ಯಕಾಲೀನ ಸಾಹಿತ್ಯ ಮತ್ತು ಆಧುನಿಕ ಸಾಹಿತ್ಯವೆಂದು ಮೂರು ಭಾಗಗಳನ್ನು ಮಾಡಿಕೊಂಡು ಅಧ್ಯಯನ ಮಾಡುತ್ತಿದ್ದೇವೆ.

ಪ್ರಾಚೀನ ಸಾಹಿತ್ಯವಾದ ಚಂಪೂ ಹೆಚ್ಚಾಗಿ ಜೈನ ಕವಿಗಳಿಂದ ರಚನೆಯಾದರೆ, ಮಧ್ಯ ಕಾಲೀನ ಸಾಹಿತ್ಯವು ಎಲ್ಲಾ ವರ್ಣ ಮತ್ತು ವರ್ಗದವರಿಂದ ರಚನೆಯಾದುದ್ದಾಗಿದೆ. ವಚನ, ರಗಳೆ, ತ್ರಿಪದಿ, ಷಟ್ಪದಿ, ಸಾಂಗತ್ಯ, ಕೀರ್ತನೆ, ಸ್ವರವಚನ ಮತ್ತು ತತ್ವಪದ.... ಹೀಗೆ ಹಲವಾರು ರೂಪ ಮತ್ತು ವೈವಿಧ್ಯಮಯವಾದ ವಸ್ತುವನ್ನು ಒಳಗೊಂಡಿದೆ. ಆಧುನಿಕ ಸಾಹಿತ್ಯ ೪-೫ ಕಾಲ ಘಟ್ಟಗಳಲ್ಲಿ ಬದಲಾವಣೆ ತಾಳುತ್ತಾ, ಬೆಳವಣಿಗೆ ಹೊಂದುತ್ತಾ, ಹೆಮ್ಮರವಾಗಿ ಬೆಳೆದು ದಶದಿಕ್ಕುಗಳನ್ನು ಆವರಿಸಿಕೊಂಡು ಹಸಿದವರಿಗೆ ಆಹಾರವನ್ನಿಕ್ಕುತ್ತಿದೆ.

ಮಧ್ಯಕಾಲೀನ ಕನ್ನಡ ಸಾಹಿತ್ಯ ರಚನೆಯೂ ಹಲವಾರು ರೂಪಗಳಲ್ಲಿ ಮೂಡಿಬಂದರೂ ಅದರಲ್ಲಿ ಮುಖ್ಯವಾಗಿ ವಚನ ಎಂಬ ರೂಪ ನಮಗೆ ಪ್ರಮುಖವಾಗುತ್ತದೆ. ಈ ವಚನ ಎಂಬ ರೂಪದ ರಚನೆಯು ೧೧ನೇ ಶತಮಾನದಿಂದಲೇ ಪ್ರಾರಂಭವಾಗಿ ೨೧ನೇ ಶತಮಾನದವರೆಗೆ ಮುಂದುವರೆದುಕೊಂಡು ಬರುತ್ತಿದೆ. ಅಂದರೆ ಬಸವಪೂರ್ವ ಯುಗದಲ್ಲಿ, ಬಸವ ಯುಗದಲ್ಲಿ, ಬಸವೋತ್ತರ ಯುಗದಲ್ಲಿ ಮತ್ತು ಆಧುನಿಕ ಯುಗದಲ್ಲಿ ವಚನಗಳ ರಚನಾಕಾರ್ಯ ಮುಂದುವರೆದುಕೊಂಡು ಬರುತ್ತಿದೆ.

ಬಸವಪೂರ್ವ ಯುಗದಲ್ಲಿ ಮಾದಾರ ಚನ್ನಯ್ಯಾ, ಡೋಹಾರ ಕಕ್ಕಯ್ಯಾ, ಓಹಲದೇವ, ಉದ್ಭಟಯ್ಯ, ಕೆಂಭಾವಿ ಭೋಗಣ್ಣ, ಕೊಂಡಗುಳಿ ಕೇಶಿರಾಜ, ತೆಲುಗು ಬೊಮ್ಮಯ್ಯಾ, ಬಾವೂರ ಬೊಮ್ಮಯ್ಯಾ, ಕೋವೂರ ಬೊಮ್ಮಯ್ಯಾ, ಡಕ್ಕೆಯ್ಯಾ ಬೊಮ್ಮಣ್ಣ, ಮೆರೆಮಿಂಡದೇವ, ನಿಜಗುಣ, ದೇವರ ದಾಸಿಮಯ್ಯಾ, ಶಂಕರ ದಾಸಿಮಯ್ಯಾ, ವೀರ

ಶಂಕರ ದಾಸಿಮಯ್ಯಾ, ಮಾರುಡುಗೆ ನಾಚಿತಂದೆ, ಅಣ್ಣಂಪುರದ ವರದಾನಿ ಗುಡ್ಡವೆ, ಪರೆಯುಳಿಗೆ ವೈಜ್ಜಕ್ಕವ್ವ, ಚಂದಿಮರಸ ಮತ್ತು ಜೇಡರ ದಾಸಿಮಯ್ಯಾ ಈ ಮುಂತಾದ ಶರಣರು ಬರುತ್ತಾರೆ.

ಬಸವ ಯುಗದಲ್ಲಿ ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಚನ್ನಬಸವಣ್ಣ, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ಮುಕ್ತಾಯಕ್ಕ, ಸತ್ಯಕ್ಕ, ಉರಿಲಿಂಗ ಪೆದ್ದಿ ಈ ಮುಂದಾದ ಶರಣರೆಲ್ಲರೂ ಬಸವ ಯುಗದ ವಚನಕಾರರಾಗಿರುತ್ತಾರೆ. ಬಸವೋತ್ತರ ಯುಗದಲ್ಲಿ ಅಂದರೆ ೧೬ನೇ ಶತಮಾನದಿಂದ ೧೯ನೇ ಶತಮಾನದ ವರೆಗೆ ವಚನಗಳ ರಚನೆ ಮಾಡಿದವರೆಲ್ಲಾ ಬಸವೋತ್ತರ ಯುಗದ ವಚನಕಾರರಾಗುತ್ತಾರೆ. ಅಂದರೆ ಈ ಕಾಲ- ಘಟ್ಟದಲ್ಲಿ ತೋಂಟದ ಸಿದ್ಧಲಿಂಗೇಶ್ವರರಿಂದ ಹಿಡಿದು ಕಡಿಕೋಲ ಮಡಿವಾಳಪ್ಪನವರೆಗೆ ವಚನಗಳ ರಚನೆ ಮಾಡಿದ ನೂರೊಂದು ವಿರಕ್ತರು ಬಸವೋತ್ತರ ಯುಗದ ರಚನಕಾರರಾಗಿರುತ್ತಾರೆ ೨೦ ಮತ್ತು ೨೧ನೇ ಶತಮಾನದ ಆಧುನಿಕ ಯುಗದಲ್ಲಿ ಡಾ. ಸಿದ್ಧಯ್ಯ ಪುರಾಣಿಕ, ಸಿ.ಪಿ. ಕೃಷ್ಣಕುಮಾರ, ಕಕ್ಕಯ್ಯ ಪೋಳ, ಮುಸ್ಲಿಂ ವಚನಕಾರ ಎಲ್.ಬಿ.ಕೆ.ಆದ್ದಾಳ, ಶಿವಲಿಂಗಮ್ಮ ಕಟ್ಟಿ, ಬಸವರಾಜ ಸಬರದ, ಶೋಭಾದೇವಿ ಚೆಕ್ಕಿ... ಹೀಗೆ ಅನೇಕ ವಚನಕಾರರು ವಚನಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಇದನ್ನು ನಾವು ವಚನ ಸಾಹಿತ್ಯದ ನಾಲ್ಕನೇ ಘಟ್ಟವೆನ್ನಬಹುದು. ಅಂದರೆ ಸುಮಾರು ೧೦ ಶತಮಾನಗಳ ಇತಿಹಾಸ ಹೊಂದಿದ್ದ ಈ ನಾಲ್ಕು ಕಾಲ-ಘಟ್ಟಗಳಲ್ಲಿ ಅನೇಕ ವಚನಕಾರರು ವಚನಗಳನ್ನು ರಚನೆ ಮಾಡಿದ್ದಾರೆ.

ವಿಪರ್ಯಾಸವೆಂದರೆ ಈ ನಾಲ್ಕು ಕಾಲ ಘಟ್ಟಗಳಲ್ಲಿ ಬರುವ ಎಲ್ಲ ವಚನಕಾರರ ಪಟ್ಟಿಯನ್ನು ನಾವು ಗಮನಿಸಿದಾಗ ದಲಿತ ವಚನಕಾರರ ಸಂಖ್ಯೆ ಬೆರಳೆಣಿಕೆಗೂ ಬರದಷ್ಟು ಇರುವುದು ಈ ನಮ್ಮ ದೇಶದ ದುರಂತವೇ ಆಗಿದೆ. ಏಕೆಂದರೆ ಕನ್ನಡ ಸಾಹಿತ್ಯದ ಮಧ್ಯಕಾಲೀನ ಯುಗದಲ್ಲಿದ್ದ ೭೭೦ ಅಮರ ಗಣಂಗಳ ಪಟ್ಟಿಯನ್ನು ಗಮನಿಸಿದಾಗ ನಮಗೆ ಕಂಡುಬರುವ ದಲಿತ ವಚನಕಾರರೆಂದರೆ: ಮಾದಾರ ಚನ್ನಯ್ಯ, ಮಾದಾರ ಧೂಳಯ್ಯ, ಡೊಹಾರ ಕಕ್ಕಯ್ಯಾ, ಹೊಲೆಯರ ಉರಿಲಿಂಗ ಪೆದ್ದಯ್ಯಾ, ಸಮಗಾರ ಹರಳಯ್ಯಾ, ತೆಲಗು ಜೊಮಯ್ಯಾ.

ಬಸವಪೂರ್ವ ಮತ್ತು ಬಸವ ಯುಗದ ಶರಣ ಮತ್ತು ವಚನಕಾರರನ್ನು ನಾವು ಅಭ್ಯಾಸ ಮಾಡಲು ಹಲವಾರು ಶಾಸನಗಳು ನಮಗೆ ಪುಷ್ಟಿಯನ್ನು ನೀಡುತ್ತವೆ. ಅವುಗಳ ಪಟ್ಟಿ ಈ ಮುಂದಿನಂತಿದೆ.

**ಶರಣರನ್ನು ಕುರಿತ ಶಾಸನಗಳು:**

'ಬಿದರೆ ಶಾಸನ' (ಕ್ರಿ.ಶ. ೧೦೯೫), 'ಕೊಂಡುಗುಳಿ ಶಾಸನ' (ಕ್ರಿ.ಶ.೧೧೦೭), 'ಕೊಂಡುಗುಳಿ ಇನ್ನೊಂದು ಶಾಸನ' (೧೧೩೨), 'ಗೊಟ್ಟೂರು ಶಾಸನ' (೧೧೪೮), 'ತಾಳಿಕೋಟೆ ಶಾಸನ' (೧೧೮೪), 'ಅಬ್ಬಲೂರು ಶಾಸನ' (೧೦೯೭), 'ಅಬ್ಬಲೂರ ಇನ್ನೊಂದು ಶಾಸನ' (೧೨೦೧), 'ಗಿಜಗನಹಳ್ಳಿ ಶಾನ' (೧೨೦೯), 'ಹಿರಿಯೂರು ಶಾಸನ' (೧೨೫೯), ಬಿಜಾಪೂರ ಶಾಸನ' (೧೨೭೮), 'ಜಗಳೂರು ಕಲ್ಲೇದೇವಪುರದ ಶಾಸನ (೧೨೭೯), 'ಮರಡಿಪುರ ಶಾಸನ' (೧೨೮೦) ಮುಂತಾದವುಗಳು. ಈ ಶಾಸನಗಳ ಜೊತೆಗೆ

ಹಲವಾರು ವೀರಶೈವ ಕಾವ್ಯಕೃತಿಗಳು ಅಧ್ಯಯನ ಕೈಕೊಳ್ಳಲು ನಮಗೆ ಭೂಮಿಕೆಯಾಗಿವೆ. ಅವುಗಲ ಪಟ್ಟಿ ಈ ಮುಂದಿನಂತಿವೆ.

ಶರಣರನ್ನು ಕುರಿತ ವೀರಶೈವ ಕಾವ್ಯ-ಪುರಾಣಗಳು: ೧) ಕೊಂಡುಗುಳಿ ಕೇಶಿರಾಜ ಕೃತಿಗಳು, ೨) ಹರಿಹರನ ನೂತನ ಮತ್ತು ಪುರಾತನರ ರಗಳೆಗಳು, ೩) ಪಾಲ್ಕುರಿಕೆ ಸೋಮನಾಥನ ತೆಲಗು ಬಸವ ಪುರಾಣಮು, ಗಣ ಸಹಸ್ರ ನಾಮವಳಿ, ೪) ಭೀಮಕವಿಯ ಬಸವಪುರಣಮು, ೫) ಲಕ್ಕಣದಂಡೇಶನ ಶಿವತತ್ವ ಚಿಂತಾಮಣಿ, ೬) ವಿರುಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ೭) ಸಿದ್ಧನಂಜೇಶನ ಗುರುರಾಜ ಚಾರಿತ್ರ್ಯ, ೮) ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣ, ೯) ಶಾಂತಲಿಂಗ ದೇಶಿಕನ ಬೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ೧೦) ವಿರಕ್ತ ತೋಂಟದಾರ್ಯನ ಪಾಲ್ಕುರಿಕೆ ಸೋಮನಾಥನ ಪುರಾಣ, ಸಿದ್ದೇಶ್ವರ ಪುರಾಣ, ೧೧) ಅದೃಶ್ಯ ಕವಿಯ ಪ್ರೌಢ ರಾಯನ ಕಾವ್ಯ, ೧೨) ಹಲಗೆ ದೇವನ ಶೂನ್ಯ ಸಂಪಾದನೆ, ೧೩) ಚನ್ನಪ್ಪ ಕವಿಯ ಶರಣ ಲೀಲಾಮೃತ, ೧೪) ಚನ್ನಯ್ಯ ಕವಿಯ ಕೆಂಭಾವಿ ಬೋಗಣ್ಣ ಸಾಂಗತ್ಯ, ೧೫) ಷಡಕ್ಷರ ಕವಿಯ ಬಸವರಾಜ ವಿಜಯಂ, ೧೬) ಚನ್ನಬಸವಾಂಕನ ಮಹಾದೇವಿಯಕ್ಕನ ಪುರಾಣ, ೧೭) ಶಾಂತನಿರಂಜನನ ಅಬ್ಬಲೂರು ಚರಿತೆ, ೧೮) ಉತ್ತರ ದೇಶದ ಬಸವಲಿಂಗನ ಬಸವೇಶ್ವರ ಪುರಾಣದ ಕಥಾಸಾಗರ, * ೭೭೦ ಅಮರ ಗಣಂಗಳಲ್ಲಿ ಮುಖ್ಯರಾದ ಶರಣ-ಶರಣೆಯ ಪಟ್ಟಿ ಈ ಮುಂದಿನಂತೆ ಗಮನಿಸಬಹುದು.

**ಶರಣರ ಪಟ್ಟಿ:**

೧) 'ಜೇಡರ ದಾಸಿಮಯ್ಯ' (ಬಟ್ಟೆನೆಯ್ಯುವ ಕಾಯಕ), ೨) 'ಬಸವಣ್ಣ', ೩) 'ಅಲ್ಲ ಪ್ರಭುದೇವ' (ನಟುವರ್ಗ/ಬೇಡರ), ೪) 'ಅಕ್ಕಮಹಾದೇವಿ', ೫) 'ಚನ್ನಬಸವಣ್ಣ', 'ಅಂಬಿಗರ ಚೌಡಯ್ಯ' (ದೋಣಿ ನಡೆಸುವ), ೭) 'ಸಿದ್ಧರಾಮ' (ಭೋವಿ, ಕಲ್ಲು ಒಡೆಯುವ ಕಾಯಕ), ೮) 'ಮಧುವಯ್ಯ', ೯) 'ಮುಕ್ತನಾಥ', ೧೦) 'ಮನುಮುನಿ ಗುಮ್ಮಟದೇವ', ೧೧) 'ಶಾಂತರಸ' (ವಚನ ಭಂಡಾರಿ), ೧೨) 'ಕಾಮಿ ದೇವಯ್ಯ', ೧೩) 'ಗಾಳದ ಕನ್ನಪ್ಪ', ೧೪) 'ಕೋಲ ಶಾಂತಯ್ಯ', ೧೫) 'ಕೊಲಕೇತ ಶಾಂತಯ್ಯ', ೧೬) 'ನಗೆಯ ಮಾರಿತಂದೆ', ೧೭) 'ಗಜೇಶ ಮಸಣಯ್ಯ',

೧೮) 'ಡಕ್ಕೆಯ ಬೊಮ್ಮಣ್ಣ', ೧೯) 'ವೈದ್ಯ ಸಂಗಣ್ಣ', ೨೦) 'ಬೊಕ್ಕಸದ ಚಿಕ್ಕಣ್ಣ', ೨೧) 'ವೀರಗೊಲ್ಲಾಳ' (ದನಕಾಯುವ), ೨೨) 'ತುರುಗಾಯಿ ರಾಮಣ್ಣ' (ದನಕಾಯುವ), ೨೩) 'ನೂಲಿ ಚಂದಯ್ಯ' (ಹಗ್ಗ ತಯ್ಯಾರಿಸುವ), ೨೪) 'ಸಂಬೋಳಿ ನಾಗಿದೇವ', ೨೫) 'ಕಿನ್ನರಿ ಬೊಮ್ಮಣ್ಣ' (ಅಕ್ಕಸಾಲಿಗ), ೨೬) "ಹಾವಿನಾಳ ಕಲ್ಲಯ್ಯ' (ಅಕ್ಕಸಾಲಿಗ), ೨೭) 'ಚಿಕ್ಕದೇವಯ್ಯ' (ಪಾತ್ರೆ ತಯ್ಯಾರಿಸುವ), ೨೮) 'ಬಸವಪ್ಪ ಬಡಗಿ' (ಬಡಗೇರ), ೨೯) 'ಕಾಮದಾಟದ ಭೀಮಣ್ಣ' (ಮನೆಕಟ್ಟುವ), ೩೦) 'ನಗೆಯ ಮಾರಿತಂದೆ' (ಛತ್ರಿ ತಯ್ಯಾರಿಸುವ), ೩೧) 'ಬಿಬ್ಬಿಬಾಚ್ಚಯ್ಯ' (ಉಂಡು ಬಿಟ್ಟು ಎಲೆ ಗಳಲ್ಲಿಯ ಅನ್ನದಗುಳ ಸಂಗ್ರಹಿಸುವಾತ), ೩೨) 'ಕೂಗಿನ ಮಾರಿತಂದೆ' (ಸುದ್ದಿ ಒಯ್ಯು ವಾತ), ೩೩) 'ಕನ್ನಡಿ ಕಾಯಕದ ಅಮ್ಮಿದೇವ' (ಕ್ಷೌರಿಕ ಕಾಯಕ), ೩೪) 'ರೇವಯ್ಯ' (ಕ್ಷೌರಿಕ ಕಾಯಕ), ೩೫) 'ಹೆಂಡದ ಮಾರಯ್ಯ' (ಈಡಿಗ), ೩೬) 'ಡೆಕ್ಕಯ್ಯ ಬೊಮ್ಮಣ್ಣ' (ದುರುಮುರಿಗಿಯಾತ), ೩೭) 'ಬಹುರುಪಿ ಚೌಡಯ್ಯ' (ಡೊಂಬರಾಟ ಆಡುವಾತ), ೩೮) 'ಕಂಭದ ಮಾರಿತಂದೆ' (ಗಾಣಹೊಡೆಯುವಾತ), ೩೯) ಕನ್ನಪ್ಪ' (ಬೇಸ್ತ, ಅದರೆ ಇತನ ಕಾಯಕ ಗಾಣಹೊಡೆಯುವಾತ), ೪೦) 'ಶಂಕರ ದಾಸಿಮಯ್ಯ' (ಚಿಪ್ಪಿಗಾ), ೪೧)



'ಮೇದಾರ ಕೇತಯ್ಯ' (ಬುಟ್ಟಿ ನೆಯ್ಯುವ ಕಾಯಕ), ೪೨) 'ಮಾರುಡುಗೆ ನಾಚಿತಂದೆ, ೪೩) 'ಹಾವಿನಾಳ ಕಲ್ಲಯ್ಯ' ೪೪) 'ಮಡಿವಾಳ ಮಾಚಿದೇವ' (ಬಟ್ಟೆ ಸ್ವಚ್ಛಗೊಳಿಸುವ), ೪೫) 'ಹೊಡೆಕಲ್ಲ ಬಂಕಣ್ಣ', ೪೬) 'ರಾಮಿದೇವ' (ಸೂಜಿಕಾಯಕ), ೪೭) 'ಭೀಮಣ್ಣ' (ಗೌಳಿಗ), ೪೮) 'ಮರುಳ ಶಂಕರದೇವ', ೪೯) 'ವೀರಶಂಕರ ದಾಸಿಮಯ್ಯ', ೫೦) 'ವೇದಮೂರ್ತಿ ಸಂಗಣ್ಣ' (ವೇದ ಪರಿಣಿತ), ೫೧) 'ಮಾದರ ಚೆನ್ನಯ್ಯ-ಗಂಗಮ್ಮ' (ಚಪ್ಪಲಿ ಕಾಯಕ), ೫೨) 'ಮಾದಾರ ಧೂಳಯ', ೫೩) 'ಡೋಹರ ಕಕ್ಕಯ್ಯ-ಭೀಷ್ಮಾದೇವಿ' (ಚರ್ಮ ಹದಮಾಡುವ), ೫೪) 'ಹೊಲೆಯರ

ಉರಿಲಿಂಗ ಪೆದ್ದಯ್ಯ-ಕಾಳವ್ವ, ೫೫) 'ಸಮಗಾರ ಹರಳಯ್ಯ-ಕಲ್ಯಾಣಮ್ಮ' (ಚರ್ಮದ ಸಾಮಾನು ತಯ್ಯಾರಿಸುವ), ೫೬) 'ತೆಲಗು ಬೊಮ್ಮಯ್ಯ (ಬೇಡ/ಭೇಟೆಯಾಡುವಾತ) ಮುಂತಾದವರು.

**ಶರಣೆಯರ ಪಟ್ಟಿ:**

೧) "ಅಕ್ಕಮಹಾದೇವಿ', ೨) 'ಮುಕ್ತಾಯಕ್ಕ', ೩) 'ನೀಲಾಂಬಿಕೆ, ೪) 'ಗಂಗಾಂಬಿಕೆ, ೫) 'ಅಕ್ಕ ನಾಗಮ್ಮ', ೬) 'ಮೋಳಿಗೆಯ ಮಹಾದೇವಿ', ೭) 'ಬೋಂತಾದೇವಿ', ೮) 'ಕದರಿ ರೆಮ್ಮವ್ವ' (ನೂಲುವ ಕಾಯಕ), ೯) 'ಹುಗ್ಗಿಯ ದುಗ್ಗಳೆ' (ಆಹಾರ ತಯ್ಯರಿಸುವ), ೧೦) 'ಕೇಳಿಕೆಯ ಮಹಾದೇವಿ' (ನರ್ತಕಿ ನರ್ತನ ಮಾಡುವವಳು), ೧೧) 'ಹೂವಿನ ಅಲ್ಲಮ ದೇವಿ', ೧೨) 'ಅಮೂಗೆ ರಾಯಮ್ಮ', ೧೩) 'ಅಕ್ಕಮ್ಮ', ೧೪) 'ಸತ್ಯಕ್ಕ', ೧೫) 'ಕಾಳವ್ವ', ೧೬) 'ಹಡಪದ ಲಿಂಗಮ್ಮ', ೧೭) 'ಆಯ್ದಕ್ಕಿ ಲಕ್ಕಮ್ಮ', ೧೮) 'ಸೂಳೆ ಸಂಕವ್ವ' (ಸಂಕಲ ದೇವಿ), ೧೯) 'ಸೂಳೆ ಬೊಮ್ಮಲದೇವಿ', ೨೦) 'ಸೂಳೆ ಪದ್ಮಲಾದೇವಿ',೨೧) 'ಸೂಳೆ ಕಾಮಲದೇವಿ' ಮುಂದಾದವರು

**೧) ದಲಿತ ವಚನಕಾರರು**

೧) ಮಾದಾರ ಚನ್ನಯ್ಯ: ಕನ್ನಡ ಸಾಹಿತ್ಯದ ಮಧ್ಯಕಾಲೀನ ಯುಗದಲ್ಲಿ ಬರುವ ೭೭೦ ಅಮರ ಗಣಂಗಳಲ್ಲಿ ಅಸ್ಪೃಶ್ಯ ಜನಾಂಗದಿಂದ ಜನಿಸಿ ಬಂದ ಮಾದಾರ ಚನ್ನಯ್ಯನು ಪ್ರಪ್ರಥಮ ದಲಿತ ವಚನಕಾರನಾಗಿದು, ಈತನ ಜನನ ಮತ್ತು ಇತ್ತಿವ್ರತದ ಬಗ್ಗೆ ವಿದ್ವಾಂಸರಲ್ಲಿಯೇ ಹಲವಾರು ಭಿನ್ನಾಭಿಪ್ರಾಯಗಳಿವೆ.

ಈ ಶರಣನ ಇತಿವ್ರತದ ಬಗ್ಗೆ ನಾವು ತಿಳಿದುಕೊಳ್ಳಲು ಈ ಹಿಂದೆ ಪ್ರಸ್ತಾಪಿಸಿದಂತೆ ಹಲವಾರು ಶಾಸನ, ವೀರಶೈವ ಕಾವ್ಯ-ಪುರಾಣಗಳು ನಮಗೆ ದೊರೆತಿವೆ. ಅವುಗಳಲ್ಲಿ ಮುಖ್ಯವಾದ ಶಾಸನ, ಕಾವ್ಯ ಪುರಾಣಗಳೆಂದರೆ ಅಬ್ಬಲೂರು ಶಾಸನ, ಕಲ್ಲೇದೇವಪುರದ ಶಾಸನ, ಹರಿಹರ ದೇವನ ರಗಳೆಗಳು, ಪಾಲ್ಕುರಿಕೆ ಸೋಮನಾಥನ ತೆಲುಗು ಬಸವ ಪುರಾಣಮು, ಭೀಮಕವಿಯ ಕನ್ನಡ ಬಸವ ಪುರಾಣ, ತೋಂಟದ ಸಿದ್ಧಲಿಂಗಯತಿಗಳ ಪುರಣ, ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಕರ, ಬಸವಲಿಂಗ ದೇವರ ಬಸವ ಪುರಾಣ ಇವು ಪ್ರಾಚೀನ ಕಾಲದ ಆಧಾರ ಗ್ರಂಥಗಳಾದರೆ ಸ್ವತಃ ಮಾದಾರ ಚನ್ನಯ್ಯನೇ ರಚಿಸಿದ ವಚನಗಳು, ಆತನ ಸಮಕಾಲಿನ ಮತ್ತು ಹಿರಿಯ ಸಮಕಾಲೀನ ವಚನಕಾರರು ರಚಿಸಿದ 'ಮಾದಾರ ಚನ್ನಯ್ಯನ ರಗಳೆಗಳು' ಮುಖ್ಯವಾಗುತ್ತದೆ. ಜೊತೆಗೆ ಆಧುನಿಕ ಯುಗದಲ್ಲಿ ಎಂ.ಎಂ. ಕಲಬುರರ್ಗಿಯವರು, ಚಿದಾನಂದ ಮೂರ್ತಿಯವರು, ಶೂನ್ಯ ಸಂಪಾದನಕಾರರು, ಕೊಡಗನಹಳ್ಳಿ ರಾಮಯ್ಯ, ಎಸ್.ವಿದ್ಯಾಶಂಕರ, ಹಂಪನಾ, ಡಾ. ಶಿವಾನಂದ ಕೆಳಗಿನಮನಿ ಮುಖ್ಯರಾಗುತ್ತಾರೆ.

ಹೆಚ್ಚಿನ ವಿದ್ವಾಂಸರ ಅಭಿಪ್ರಾಯದಂತೆ ಮಾದಾರ ಚನ್ನಯ್ಯನವರು ಸತ್ತದನದ ಚರ್ಮವನ್ನು ಸುಲಿದು ಬಾರಕೋಲ, ಬಾಣಿ, ಮಿಣಿ ಮತ್ತು ಚಪ್ಪಲಿಗಳನ್ನು ತಯ್ಯಾರಿಸುವ ಕಾಯಕ ಮಾಡುತ್ತಿದ್ದನೆಂದು ತಿಳಿದುಬರುತ್ತದೆ. ಮಾದಾರ ಚನ್ನಯ್ಯ ೧೧ನೇ ಶತಮಾನದಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪೂರ ತಾಲ್ಲೂಕಿನ ಬಳ್ಳಿಗಾವಿಯಲ್ಲಿ ಜನಿಸಿ, ರಾಜಕೀಯ ಸ್ಥಿತ್ಯಂತರದಿಂದ (ಪಲ್ಲವರ ಮತ್ತು ಚಾಲುಕ್ಯರ ಮಧ್ಯೆ ಕಾಳಗ ನಡೆದು) ನೆರೆ ರಾಜ್ಯವಾದ ತಮಿಳುನಾಡಿನ ಕಂಚಿ ಪಟ್ಟಣಕ್ಕೆ ಬಂದು ಕರಿಕಾಲ ಚೋಳರಾಜನ ಕುದುರೆಗಳಿಗೆ ಹುಲ್ಲು ತರುವ ಕಾಯಕದಲ್ಲಿ ತೊಡಗಿ, ತನ್ನ ಇಳಿ ವಯಸ್ಸಿನಲ್ಲಿ ಬಸವಣ್ಣನವರ ಕೀರ್ತಿ ಕೇಳಿ ಕಲ್ಯಾಣಕ್ಕೆ ಬಂದು ೭೭೦ ಅಮರ ಗಣಂಗಳೊಂದಿಗೆ ಒಡಗೂಡಿ ಬಸವ ಕಲ್ಯಣದ ಪರಿಸರದಲ್ಲಿ ಸಮಾಜೋಧಾರ್ಮಿಕ ಕಾರ್ಯದಲ್ಲಿ ತೊಡಗಿ, ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಕುರುಬನ ಕಟ್ಟೆಯಲ್ಲಿ ಕಟ್ಟೆಯಲ್ಲಿ ಸಾವಪ್ಪಿದನೆಂದು ತಿಳಿದುಬರುತ್ತದೆ.

ಈ ಶರಣ ಕಲ್ಯಾಣದಲ್ಲಿದ್ದಾಗ ಶಿವಭಕ್ತಿಯಾದ ಸತಿ ಗಂಗಮ್ಮಳೊಂದಿಗೆ ಸಂಸಾರ ನಡೆಸುತ್ತಾ ೨೦ ವಚನಗಳು ರಚಿಸಿದ್ದಾನೆಂದು ಫ.ಗು. ಹಳಕಟ್ಟಿ ಅವರು ಅಭಿಪ್ರಾಯಪಡುತ್ತಾರೆ. ಆದರೆ, ಸಕಲ ಪುರಾತನರ ವಚನಗಳು ಎಂಬ ಗ್ರಂಥದಲ್ಲಿ ಕೇವಲ ೧೦ ವಚನಗಳು ಮಾತ್ರ ಲಭ್ಯವಾಗಿವೆ. ಈ ಶರಣನ ಅಂಕಿತನಾಮ ಕೈಯ್ಯುಳಿ ಕತ್ತಿ ಅಡಿಗುಂಟಕ್ಕೆಯಡಿಯಾಗಬೇಡ ಅರಿ ನಿಜಾತ್ಮರಾಮರಾಮನ ಎಂಬುದು.

ಈ ಶರಣ ಹೆಚ್ಚೆಚ್ಚು ವಚನಗಳು ರಚಿಸಿ ಶ್ರೇಷ್ಠ ವಚನಕಾರ ಎಂದು ಕರೆಸಿಕೊಳ್ಳದಿದ್ದರೂ ಶ್ರೇಷ್ಠ ಶರಣನೆಂಬುದು ಮಾತ್ರ ಒಪ್ಪಿಕೊಳ್ಳಲೇಬೇಕೆಂಬುದು ಹಲವಾರು ವಿದ್ವಾಂಸರ ನಿಲುವಾಗಿದೆ.

ಮಾದಾರ ಚನ್ನಯ್ಯ ತಾನು ಶ್ರೇಣಿ ಕೃತ ವ್ಯವಸ್ಥೆಯಲ್ಲಿ ಅಂದರೆ ಶೂದ್ರ ಜಾತಿಯಲ್ಲಿ ಹುಟ್ಟಿದಕ್ಕಾಗಿ ಹಲವಾರು ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸಬೇಕಾಯಿತು. ಇವುಗಳಲ್ಲಿ ಈ ಶರಣನಿಗೆ ಹೆಚ್ಚೆಚ್ಚು ಕಾಡಿದ ಸಮಸ್ಯೆ-ಸವಾಲೆಂದರೆ ಜಾತಿಯತೆಯಾಗಿದೆ. ಈ ಶರಣ ಕೆಳ ಜಾತಿಯಲ್ಲಿ ಹುಟ್ಟಿದನೆಂಬ ಒಂದೇ ಕಾರಣಕ್ಕಾಗಿಯೇ ಮೇಲ್ವರ್ಗದವರಿಂದ ಶೋಷಣೆ, ಅನ್ಯಾಯ, ಅತ್ಯಾಚಾರ, ಅವಮಾನಗಳಿಂದ ಹಲವಾರು ತರಹದ ನೋವುಗಳನ್ನು ಅನುಭವಿಸಬೇಕಾಯಿತು.

ಅಂತೆಯೇ ಜಾತಿ ವ್ಯವಸ್ಥೆಯನ್ನು ಕುರಿತು, ವರ್ಗ ವ್ಯವಸ್ಥೆಯನ್ನು ಕುರಿತು, ಚಾತುರ್ವಣ್ಯ ಪದ್ಧತಿಯನ್ನು ಕುರಿತು ಮತ್ತೆ ಮತ್ತೆ ಪ್ರಶ್ನೆಗಳನ್ನು ತನ್ನ ವಚನಗಳಲ್ಲಿ ಎತ್ತಿರುವುದು ಕಂಡುಬರುತ್ತದೆ. ಹೊಲೆ ಕುಲ ಎನ್ನುವುದರಲ್ಲಿ ಏನೂ ಅರ್ಥವಿಲ್ಲ. ಎಲ್ಲರೂ ಹುಟ್ಟಿರುವುದು ಹೊಲೆಯಲ್ಲಿಯೇ. ಅಂದರೆ ಹೊಲಸಿನಲ್ಲಿಯೇ ಎನ್ನುತ್ತಾನೆ. ಉದಾಹರಣೆಗಾಗಿ ನಾವು ಮಾದಾರ ಚನ್ನಯ್ಯನ ಒಂದು ವಚನವನ್ನು ಈ ಮುಂದಿನಂತೆ ಅವಲೋಕಿಸಬಹುದು.

ನಡೆ-ನುಡಿ ಸಿದ್ಧಾಂತವಾದಲ್ಲಿ ಕುಲ-ಹೊಲೆಯೆಂಬ ಸೂತಕವಿಲ್ಲ

ನುಡಿಲೇಸು, ನಡೆಯಧಮವದಲ್ಲಿ ಅದುವೇ ಬಿಡುಗಡೆಯಿಲ್ಲದ ಹೊಲೆ.

ಕಳವು ಪರ ದ್ವಾರಂಗಳಲ್ಲಿ ಹೊಲಬನ್ ಅರಿಯದೆ ಕೆಟ್ಟು ನಡೆಯುತ್ತಾ



ಮತ್ತೇ ಕುಲಜರೆಂಬುವಂಟೆ?

ಆಚಾರವೇ ಕುಲ, ಅನಾಚರವೇ ಹೊಲೆ. ಈ ಉಭಯನ್ನರಿಯಬೇಕು.

ಕಯ್ಯಳಿ ಕತ್ತಿ ಅಡಿಗುಂಟಕ್ಕೆಡೆಯಾಗಬೇಡ ಅರಿನಿಜಾತ್ಮರಾಮರಾಮನ

ವಿಶ್ವಜ್ಯೋತಿ ಬಸವಣ್ಣನವರಿಗೆ ಮಾದಾರ ಚನ್ನಯ್ಯ ಎಷ್ಟು ಹತ್ತಿರವಾಗಿದ್ದಾನೆಂದರೆ ಬಸವಣ್ಣನವರೇ ತಮ್ಮ ೩೩ ವಚನಗಳಲ್ಲಿ ಉಲ್ಲೇಖಿಸಿದ ಶಬ್ದಗಳಿಂದಲೇ ನಾವು ಅರಿತುಕೊಳ್ಳಬೇಕು. ಉದಾಹರಣೆಗೆ ಚನ್ನಯ್ಯನ ಮಗನು, ಕುಲಕ್ಕೆ ತಿಲಕ ಮಾದಾರ ಚನ್ನಯ್ಯ, ಚನ್ನಯ್ಯನ ಮನಯ ಮಗ ನಾನು, ಚನ್ನಯ್ಯನೆತ್ತಿ ಮುದ್ದಾಡಿದಾತ ನಾನು. ಅಯ್ಯಗಳ ಅಯ್ಯ ಮಾದಾರ ಚನ್ನಯ್ಯ, ಚನ್ನಯ್ಯ ನೆನ್ನ ಮುತ್ತಯ್ಯನಜ್ಜಪ್ಪನಯ್ಯ, ದೇವಾದಿದೇವತೆಗಳೆಲ್ಲರೂ ಚನ್ನಯ್ಯನ ಮಕ್ಕಳು.

**೨) ಮಾದಾರ ಧೂಳಯ್ಯ**

ಚಪ್ಪಲಿ ತಯ್ಯಾರಿಸುವ ಕಾಯಕರ ಶರಣರಲ್ಲಿ ಮಾದಾರ ಧೂಲಯ್ಯನು ಒಬ್ಬನಾಗಿದ್ದಾನೆ. ಈ ಶರಣನ ಬಗ್ಗೆ ಹರಿಹರ ತನ್ನ ರಗಳೆಯಲ್ಲಿ ಏನು ಹೇಳಿಕೊಂಡಿಲ್ಲ. ಬಸವ ಪುರಾಣದಲ್ಲಿ ಭೀಮಕವಿ, ರಾಘವಾಂಕ ಚರಿತ್ರೆಯಲ್ಲಿ ಸಿದ್ಧನಂಜೇಶ ಕವಿ, ವೃಷಬೇದ್ರ ವಿಜಯದಲ್ಲಿ ಷಡಕ್ಷರದೇವ ಮತ್ತು ಇತರ ಕೃತಿಗಳಾದ ಪದ್ಮರಾಜ ಪುರಾಣ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಕರಣ, ಶಿವತತ್ವ ಚಿಂತಾಮಣಿ, ಸೋಮನಾಥ ಪುರಾಣ, ತ.ಸು. ಶಾಮರಾಯರ ಶಿವಶರಣರ ಕಥಾರತ್ನಕೋಶ ಮತ್ತು ೭೭೦ ಅಮರ ಗಣಂಗಳ ಚರಿತ್ರೆ ಈ ಮುಂತಾದ ವೀರಶೈವ ಕಾವ್ಯ-ಪುರಾಣಗಳಲ್ಲಿ ಮಾದಾರ ಧೂಳಯ್ಯ ಉಲ್ಲೇಖಿತನಾಗಿದ್ದಾನೆ.

ಮೆಟ್ಟುಗಳನ್ನು ತಯ್ಯಾರಿಸುತ್ತಾ ಸತ್ಯ ಶುದ್ಧ ಕಾಯಕದಿಂದ ಮದಾರ ಧೂಳಯ್ಯ ಜೀವಿಸುತ್ತಿದ್ದಾನೆಂದು, ಬಸವ ಕಲ್ಯಾಣದ ಅನುಭವ ಮಂಟಪದಲ್ಲಿ ಅಲ್ಲಮಪ್ರಭು ಅಧ್ಯಕ್ಷೆಯಲ್ಲಿ ನಡೆಯುವ ಆಧ್ಯಾತ್ಮಿಕ ಗೋಷ್ಠಿಗಳಲ್ಲಿ ಮೂಖ ಪ್ರೇಕ್ಷಕನಾಗಿ ಮಾದಾರ ಧೂಳಯ್ಯ ಭಾಗವಹಿಸುತ್ತಿದ್ದಾನೆಂದು ತಿಳಿದುಬರುತ್ತದೆ.

ತನ್ನ ಅನಿಕೆಗಳನ್ನು ತನ್ನಷ್ಟಕ್ಕೆ ತಾನೇ ತನ್ನ ಅಂತರಾತ್ಮಕ್ಕೆ ಹೇಳುಕೊಳ್ಳುತ್ತಿದ್ದ. ಕೆಲವೊಂದು ಸಲ ಚಪ್ಪಲಿ ಹೊಲೆಯುವಾಗ ತನ್ನ ಭಾವನೆಗಳು ಉಕ್ಕು ಉಕ್ಕಿ ಬಂದಾಗ ಚಪ್ಪಲಿ ಹೊಲೆಯುವುದನ್ನು ನಿಲ್ಲಿಸಿ ತಾಳೆ ಗೆರೆಗಳ ಮೇಲೆ ವಚನಗಳನ್ನು ಬರೆಯುತ್ತಿದ್ದನೆಂದು ತಿಳಿದುಬರುತ್ತದೆ.

ಗುಪ್ತವಾಗಿ ಬರೆದಿಟ್ಟ ಮಾದಾರ ಧೂಳಯ್ಯನ ೧೦೬ ವಚನಗಳು ದೊರೆತಿವೆ. ಕಾಮಧೂಮ ಧೂಳೇಶ್ವರ ಎಂಬುದು ಈತನ ವಚನಗಳ ಅಂಕಿತನಾಮವಾಗಿದೆ. ಕಾಮ ಎಂದರೆ ನೋಡು, ಧೂಮ ಎಂದರೆ ನೋಡುವುದರಿಂದಾದ ಮನಸ್ಸಿನ ತಾಕಲಾಟ. ಇದನ್ನು ನಿಲ್ಲಿಸುವವನೇ ಧೂಳೇಶ್ವರ (ಶಿವ) ಎಂಬ ಅರ್ಥ ಕೊಡುತ್ತದೆ.

ಮಾದಾರ ಚನ್ನಯ್ಯ ಗುಪ್ತ ಭಕ್ತನಾದರೆ, ಮಾದರ ಧೂಳಯ್ಯ ಗುಪ್ತ ವಚನಕಾರನಾಗಿದ್ದ, ಮಾದಾರ ಧೂಳಯ್ಯ ರಚಿಸಿದ ೧೦೬ ವಚನಗಳು ವಚನ ಭಂಡಾರಿ ಶಾಂತರಸನ ಕಣ್ಣಿಗೆ, ಬಿದ್ದರೆ ಮಾದಾರ ಧೂಳಯ್ಯ ಒಬ್ಬ ಶ್ರೇಷ್ಠ ವಚನಕಾರನಾಗುತ್ತಿದ್ದ. ಆತನ ಹೆಸರು ಶೂನ್ಯ ಸಂಪಾದನೆಯಲ್ಲಿಯೂ ಬರುತ್ತಿತ್ತು.



ಏಕೆಂದರೆ ಈತ ಮೋಡದ ಮರೆಯ ಚಂದ್ರರಂತೆ, ನೆಲದ ಮರೆಯ ನಿಧಾನದಂತೆ, ತಿಲದ ಮರೆಯ ತೈಲದಂತೆ, ಕ್ಷೀರದೊಳಗಿನ ತುಪ್ಪದಂತೆ ಗುಪ್ತವಾಗಿ ಉಳಿಯಬಸಿರಬಹುದೆನ್ನುತ್ತದೆ. ಕಾರಣ ಅಂದಿನ ವರ್ಣಾಶ್ರಮ (ಚಾತುರ್ವಣ್ಯ) ಪದ್ಧತಿಯೇ ಮುಖ್ಯ ಕಾರಣವಾಗಿರಬಹುದು.

ಮಹಾತ್ಮನಾದ ಮಾದಾರ ಧೂಳಯ್ಯ ಕಲ್ಯಾಣದಲ್ಲಿದ್ದು ಕೇವಲ ಚಪ್ಪಲಿ ತಯ್ಯಾರಿಸಿ ಅವುಗಳನ್ನು ಮಾರಿ ತನ್ನ ಉಪಜೀವನ ನಡೆಸುವ ನರ ಮನುಷ್ಯನಾಗಿರದೇ ಶರಣನಾದ ತಾನು ತನ್ನ ವ್ಯಕ್ತಿತ್ವದಿಂದ, ತನ್ನ ಸಿದ್ಧಿ ಸಾಧನೆಗಳಿಂದ, ನಿಶ್ವಾರ್ಥ ಕಾಯಕ ಮತ್ತು ಪರಿಶ್ರಮದಿಂದ ಮೇಲ್ವರ್ಗದವರಿಂದ ಪೂಜಿಸಿಕೊಳ್ಳುವ ಮತ್ತು ಅವರ ಪ್ರೀತಿಗೂ ಪಾತ್ರನಾಗಿದ್ದನೆಂದು ತಿಳಿದುಬರುತ್ತದೆ.

**೩) ಡೋಹಾರ ಕಕ್ಕಯ್ಯ:**

೧೨ನೇ ಶತಮಾನದ ಹಿರಿಯ ತಲೆಮಾರಿನ ಶರಣರಲ್ಲಿ ಎದ್ದು ಕಾಣುವ ಹೆಸರೆಂದರೆ ಒಂದು ಮಾದಾರ ಚನ್ನಯ್ಯ, ಇನ್ನೊಂದು ಡೋಹರ ಕಕ್ಕಯ್ಯ ಎಂದು. ದಲಿತ ಜನಾಂಗದಲ್ಲಿ ಜನಿಸಿದ ಮಾದರ ಚನ್ನಯ್ಯ ಚಂದ್ರನಂತೆ ಕಂಡುಬಂದರೆ, ಡೋಹರ ಕಕ್ಕಯ್ಯ ಇಡೀ ಶರಣ ಸಂಕುಲಕ್ಕೆ ಸೂರ್ಯನಂತಿದ್ದ ಎಂದು ಹೇಳಬಹುದು.

ಮಾದಾರ ಚನ್ನಯ್ಯನಂತೆ ಡೋಹರ ಕಕ್ಕಯ್ಯನರನ್ನು ಕುರಿತು ಬಸವಣ್ಣನವರು ತಮ್ಮ ವಚನಗಳಲ್ಲಿ ತುಂಬಾ ಗೌರವದಿಂದ ಬಣ್ಣಿಸಿದ್ದಾರೆ. ಡೋಹರ ಕಕ್ಕಯ್ಯನು ಮಹಾರಾಷ್ಟ್ರದ ಮಾಳವ ಪ್ರದೇಶದಲ್ಲಿ ಜನಿಸಿರಬಹುದೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಈ ಶರಣನ ಕಾಯಕ ಚಮ್ಮ ಹದಗೊಳಿಸುವ ಕಾಯಕ. ಅಂದರೆ ಮಾದಿಗ ಜನಾಂಗದವರು ಸತ್ತ ದನದ ಚರ ಸುಲಿದು ತಂದು ಡೋಹರರಿಗೆ ಕೊಟ್ಟಾಗ. ಅವರು ಚರಹದ ಮಾಡಲು ನಿರ್ಮಿಸಿದ ಡೊಣಿಯಲ್ಲಿ ಹಾಕಿ, ಅದನ್ನು ಹದ ಮಾಡಿ ಕೃಷಿ ಕೆಲಸಕ್ಕೆ ಸಾಧನ-ಸಲಕರಣೆಗಳಿಗೆ ಮಾದಿಗರಿಗೆ ಜೋಡು ಇತ್ಯಾದಿ ತಯ್ಯಾರಿಸಲು ಕೊಡುವ ಕಾಯಕ ಡೋಹರ ಕಕ್ಕಯ್ಯನದಾಗಿದೆ.

ದಿಟ್ಟ, ಧೀರ ಶೂರ ಮತ್ತು ವೀರನಾಗಿದ್ದ ಕಕ್ಕಯ್ಯ ಬಸವಣ್ಣನವರ ಕೀರ್ತಿ ಕೇಳಿ ಕಲ್ಯಾಣಕ್ಕೆ ಬಂದು ಕಲ್ಯಾಣದ ಶರಣ ಸಂಕುಲದೊಮದಿಗೆ ಒಂದಾಗಿ ಬದುಕಿದನೆಂದು ತಿಳಿದು ಬರುತ್ತದೆ. ಈತನ ಪತ್ನಿ ಪುಣ್ಯ ಭೀಷ್ಠಾದೇವಿ. ಈ ಶರಣೆಗೆ ಭೀಷ್ಮಕ, ಭೀಷ್ಟವ್ವ, ಕಕ್ಕಿ ಎಂದು ಜನರು ಕರೆಯುತ್ತಿದ್ದರು. ಈ ಶರಣೆ ಕಲ್ಯಾಣದವಳೇ ಆಗಿರಬಹುದೆನ್ನುವುದು ವಿದ್ವಾಂಸರ ಅಭಿಪ್ರಾಯವಾಗಿದೆ.

ಕಲ್ಯಾಣದಲ್ಲಿ ಬಸವಣ್ಣನವರಿಂದ ವೀರಶೈವ ಲಿಂಗದೀಕ್ಷೆ ಪಡೆದು ಅಭಿನವಮಲ್ಲಿಕಾರ್ಜುನ, ಅಭಿನವ ಚನ್ನಮಲ್ಲಿಕಾರ್ಜುನ ಎಂಬ ವಚನಾಂಕಿತದೊಂದಿಗೆ ರಚಿಸಿದ ಕಕ್ಕಯ್ಯನ ೦೬ ವಚನಗಳು ಲಭ್ಯವಾಗಿವೆ. ಈ ಶರಣನ ಮಾತೃಭಾಷೆಯಾದ ಮರಾಠಿಯೊಂದಿಗೆ ಹಿಂದಿ ಮತ್ತು ಕನ್ನಡವೂ ಚೆನ್ನಾಗಿ ಕಲಿತ್ತಿದ್ದನೆಂದು ತಿಳಿದುಬರುತ್ತದೆ. ಈ ಶರಣನ ತಾಯಿ-ತಂದೆ ಮತ್ತು ಇನ್ನಿತರ ಹೆಚ್ಚಿನ ವಿವರಗಳು ತಿಳಿದು ಬಂದಿರುವುದಿಲ್ಲ. ಕಕ್ಕಯ್ಯನು ಕಲ್ಯಾಣದ ಅನುಭವ ಮಂಟಪದಲ್ಲಿ ನಡೆಯುವ ಶಿವಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದ. ಅಂತೆಯೇ ಈ ಶರಣನನ್ನು ಕುರಿತು ಕಲ್ಯಾಣದ ಅನುಭವ ಮಂಟಪದ

ಚೆನ್ನಯಿ, ಮಹಾಶಿವಭಕ್ತ, ಮಹಾಪ್ರಸಾದಿ, ಗೋತ್ರ ಪುರುಷ ಎಂದು ಜನರು ಕರೆಯುತ್ತಿದ್ದರೆಂದು ತಿಳಿದು ಬರುತ್ತದೆ.

ಕಕ್ಕಯ್ಯ ತನ್ನ ಆತ್ಮ ಗೌರವಕ್ಕೆ ಧಕ್ಕೆ ಬಂದರೆ ಸಹಿಸುತ್ತಿರಲಿಲ್ಲ. ಜೊತೆಗೆ ಶಿವನಂದನೆಯನ್ನು ಎಂದು ಸಹಿಸುತ್ತಿರಲ್ಲವೆಂಬುದಕ್ಕೆ ಈತನು ಮೆರೆದವನೆನ್ನಲಾದ ಹಲವಾರು ಪವಾಡುಗಳು ಸಾಕ್ಷಿ ಹೇಳುತ್ತವೆ.

**೪) ಉರಿಲಿಂಗ ಪೆದ್ದಿ:**

ಹೊಲೆಯರ ಜಾತಿಯಲ್ಲಿ ಜನಿಸಿದ ಉರಿಲಿಂಗ ಪೆದ್ದಿ ಸಾಧನೆಯಿಂದ ಆಧ್ಯಾತ್ಮದ ಶಿಖರವನ್ನೇರಿದ್ದಾರೆ. ಬಸವ ಕಲ್ಯಾಣದ ಸನಿಹದಲ್ಲಿ ಇರುವ ಬೇಲೂರಿನ ಆಸುಪಾಸಿನಲ್ಲಿ ಈತ ಜನಿಸಿರಬಹುದೆಂದು ಹಲವಾರು ವಿದ್ವಾಂಸರ ಅಭಿಪ್ರಾಯವಾಗಿದೆ. ಈತ ೧೨ನೇ ಶತಮಾನದ ಅಂತ್ಯ ೧೩ನೇ ಶತಮಾನದಲ್ಲಿ ಜೀವಿಸಿದಂತೆ ಕಂಡುಬರುತ್ತದೆ.

ಕೆಳಜಾತಿಯಲ್ಲಿ ಅಂದರೆ ಶೂದ್ರ ಜಾತಿಯಲ್ಲಿ ಜನಿಸಿದ ಉರಿಲಿಂಗ ಪೆದ್ದಿಯು ದುಡಿಯುವ ಮಾರ್ಗ ತೋಚದೆ ಇದ್ದಾಗ ಜೀವನೋಪಾಯಕ್ಕಾಗಿ, ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಕಳ್ಳತನ ಮಾಡುವುದೇ ತನ್ನ ಕಾಯಕ ಮಾಡಿಕೊಂಡಿದ್ದ. ಉರಿಲಿಂಗ ಪೆದ್ದಿಗೆ ಆಗಾಗ ಅಪರಾಧ ಭಾವನೆ ಕಾಡುತ್ತಿತ್ತು. ತನ್ನ ಪೂರ್ವ ಜನ್ಮದ ಪುಣ್ಯವೆಂಬಂತೆ ಬೇಲೂರಿನ ಮಠಾಧೀಶರಾದ ಉರಿಲಿಂಗ ದೇವರ ಕೃಪೆ ದೊರೆಯಿತು. ಇವರಿಂದ ದೀಕ್ಷೆ ಪಡೆಯಲು ಪರಿತಪಿಸುತ್ತಾನೆ. ಯೋಗಾ ಯೋಗವೆಂಬಂತೆ ಒಮದು ದಣವಸ ನಂದವಾಡದ ಸುರಪ್ಪನ ಮನೆಯಲ್ಲಿ ರಆತ್ರಿ ಲಿಂಗ ದೀಕ್ಷೆ ಕಾರ್ಯಕ್ರಮವಿತ್ತು. ಕಳ್ಳತನಗೋಸ್ಕರ ಹೋಗಿ ಬೆಳಕಿಂಡಿಯಿಂದ ಗಮನಿಸುತ್ತಿದ್ದ ಉರಿಲಿಂಗ ಪೆದ್ದಿಗೂ ಜ್ಞಾನೋದಯವಾಗಿ ತಾನೂ ಲಿಂಗ ದೀಕ್ಷೆ ಪಡೆಯಬೇಕೆಂಬ ಬಯಕೆಯಾಯಿತು.

ಗುರುವಿನ ಪ್ರೀತಿಗೆ ಪಾತ್ರನಾಗಬೇಕೆಂದು ಮಠಕ್ಕೆ ದಿನಾಲು ಕಟ್ಟಿಗೆಯ ಹೊರೆಯನ್ನು ಒಯ್ದು ಹಾಕುತ್ತಿದ್ದ. ಇದನ್ನರಿತ ಗುರು ಕೂಲಿ ಕೊಡಲು ಹೋದಾಗ ಉರಿಲಿಂಗ ಪೆದ್ದಿ ಹಣ ಪಡೆಯುವುದಿಲ್ಲ. ತನಗೂ ಸೂರಪ್ಪನಂತೆ ಲಿಂಗ ದೀಕ್ಷೆ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತಾನೆ. ಈತನ ಬೇಡಿಕೆಯೂ ಗುರುವಿಗೆ ಹಾಸ್ಯಸ್ಪದವಾಗಿ ಕಂಡುಬಂದು ಪಕ್ಕದಲ್ಲಿದ್ದ ಒಂದು (ದುಂಡಾದ) ಕಲ್ಲನ್ನು ಫ ದಗಡಿ ಜಾ (ತೊಗೊ ಕಲ್ಲು ಹೋಗು) ಎಸೆಯುತ್ತಾನೆ. ಗುರು ಎಸೆದ ಕಲ್ಲನ್ನು ನೆಲಕ್ಕೆ ಬೀಳದಂತೆ ಉರಿಲಿಂತ ಪೆದ್ದಿಯು ಗಪಕ್ಕನೆ ಬುತ್ತಿ ಹಿಡಿಯುತ್ತಾನೆ. ಆ ಕಲ್ಲೆ ಉರಿಲಿಂಗ ಪೆದ್ದಿಗೆ ಇಷ್ಟಲಿಂಗವಾಯಿತು. ಫೇ ದಗಡಿ ಜಾ ಎಂಬುದೇ ಪಂಚಾಕ್ಷರಿ ಮಂತ್ರೋಪದೇಶವಾಯಿತು.

ಗುರು ಕೊಟ್ಟ ಕಲ್ಲೇ ಪ್ರೀತಿಯಿಂದ ಮತ್ತು ಭಕ್ತಿಯಿಂದ ಪೂಜಿಸಲು ಅದು ಆತನಿಗೆ ಲಿಂಗವಾಗಿ ಪರಣಿಮಿಸಿತು. ಎಷ್ಟರಮಟ್ಟಿಗೆ ಎಂದರೆ ಉರಿಲಿಂಗ ಪೆದ್ದಿಗೆ ಆ ಕಲ್ಲು ಸಿದ್ದಿಸಿತೆಂದರೆ ಕಲ್ಲುಗಳಂತಹ ಜಡ ವಸ್ತುಗಳೇ ಅಳ್ಳಾಡತೊಡಗಿದ್ದವು.

ಬಸವಣ್ಣನವರು ಕಲ್ಯಾಣದಲ್ಲಿ ಕುಲ, ಜಾತಿ ಸೂತಕಗಳನ್ನು ಹೊಡೆದುಹಾಕಲು ಬ್ರಾಹ್ಮಣ ಮಧುವರಸ (ಮಗಳು ಲಾವಣ್ಯ) ಸಮಗಾರ ಹರಳಯ್ಯ (ಮಗ ಶೀಲವಂತ) ಇವರ ನೊಡುವೆ ನಡೆದ ವೈವಾಹಿಕ ಸಂಬಂಧ ಏರ್ಪಡಿಸುವ ಮೊದಲೆ ಉರಿಲಿಂಗ ದೇವರು ಕಂದಾರ (ಮಠ)ದಲ್ಲಿ ಹೊಲೆಯ ಜಾತಿಯ ಉರಿಲಿಂಗ ಪೆದ್ದಿಗೆ ತನ್ನ ಅವಸಾನದ



ನಂತರ ಉತ್ತಾರಾಧಿಕಾರಿಯಾಗಿ ಮಠಧೀಶನನ್ನಾಗಿಸಿದ್ದು ಜಾಗತಿಕ ದಾಖಲೆಯಾಗಿದೆ.

ಉರಿಲಿಂಗ ಪೆದ್ದಿಯ ಲಿಂಗದೀಕ್ಷೆಯ ಭಾಷೆ ಮರಾಠಿಯಾದರೂ ಸಂಸ್ಕೃತ ಪಾಂಡತ್ಯ ಹೊಂದಿದ ಉರಿಲಿಂಗ ಪೆದ್ದಿಯು ಕನ್ನಡದಲ್ಲಿ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರ ಎಂಬ ಅಂಕಿತ ನಾಮದಲ್ಲಿ ೩೬೬ ವಚನಗಳನ್ನು ರಚಿಸಿದ್ದಾನೆ. ಈ ಶರಣ ವಚನಗಳಲ್ಲಿ ವೈಚರಿಕ ಮತ್ತು ಪಾಂಡಿತ್ಯ ಎದ್ದು ಕಂಡುಬರುತ್ತದೆ. ಈ ಶರಣ ಅಸ್ಪೃಶ್ಯ ಜಾತಿಯಲ್ಲಿ ಹುಟ್ಟಿದ್ದರು ಬಸವಣ್ಣ, ಅಲ್ಲಮಪ್ರಭು ಮತ್ತು ಚನ್ನಬಸವಣ್ಣ ಇವರನ್ನು ಮೀರಿಸುವಷ್ಟು ಪಾಂಡಿತ್ಯ ಹೊಂದಿದ್ದಾನೆಂಬುವುದು ಇವರ ವಚನಗಳಿಂದ ತಿಳಿದುಬರುತ್ತದೆ. ಈ ಶರಣನ ತನ್ನ ಗುರು ಉರಿಲಿಂಗದೇವ, ಈ ಶರಣನ ಹೆಂಡತಿ ಹೆಸರು ಕಾಳವ್ವ, ಕಾಳವ್ವ ೧೨ನೇ ಶತಮಾನದ ಪ್ರಪ್ರಥಮ ದಲಿತ ವಚನಕಾರಳು ಹೌದು, ಜೊತೆಗೆ ಒಬ್ಬ ಶ್ರೇಷ್ಠ ವಚನಕಾರಳಾಗಿದ್ದಾಳೆಂಬುವುದಕ್ಕೆ ಆಕೆ ರಚಿಸಿದ್ದಾಳೆನ್ನಲಾದ ೧೨ ವಚನಗಳೇ ಸಾಕ್ಷಿಯಾಗಿವೆ.

ಉರಿಲಿಂಗ ಪೆದ್ದಿಯ ವಚನಗಳಲ್ಲಿ ಕಂಡುಬರುವ ಮುಖ್ಯ ವೇದನೆಗಳೆಂದರೆ ಜಾತಿ ಮತ್ತು ವರ್ಗ ಸಂಘರ್ಷ. ಇವುಗಳ ಜೊತೆಗೆ ಮೂಢನಂಬಿಕೆ, ಲಿಂಗ ನಿಷ್ಠೆ ಪುರುಷಾರ್ಥ ಕಲ್ಪನೆ, ವರ್ಣಾಶ್ರಮ ವ್ಯವಸ್ಥೆ, ಲಿಂಗಾಯತ ಧರ್ಮದ ತತ್ವನೀತಿ, ಅರಿವು ಆಚಾರ, ಕಾಯಕ ನಿಷ್ಠೆ, ದಾಸೋಹ ಪ್ರಜ್ಞೆ ಇವುಗಳು ಕಂಡುಬರುತ್ತವೆ.

**೫) ಮಹಾಶಿವಶರಣ, ಮಹಾ ಶಿವಭಕ್ತ ಸಮಗಾರ ಹರಳಯ್ಯ**

ಕನ್ನಡ ಸಾಹಿತ್ಯದ ಮಧ್ಯಕಾಲೀನ ಯುಗದಲ್ಲಿದ್ದ ೭೭೦ ಅಮರ ಗಣಂಗಳಲ್ಲಿ ಸಮಗಾರ ಹರಳಯ್ಯನರವರ ಚರಿತ್ರೆ ಪ್ರಸಿದ್ಧವಾಗಿದೆ. ಈ ಶರಣರ ಜೀವನ ಮತ್ತು ಇತಿವೃತ ಇವುಗಳ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ.

ಆದರೆ ಈ ಶರಣ ಮೆರದನೆನ್ನಲಾದ ಹಲವಾರು ಪವಾಡಗಳಲ್ಲಿ ಚಮ್ಮಾವುಗೆ ಪವಾಡ ಪ್ರಮುಕವಾಗಿದೆ. ಸಮಗಾರ ಹರಳಯ್ಯನವರ ಜನನ ಸ್ಥಳದ ಬಗ್ಗೆ ಕೆಲ ವಿದ್ವಾಂಸರು ವಿಜಯಪೂರ ಜಿಲ್ಲೆಯ ಜೀವರ್ಗಿ ಎಂದು, ಕಲಿಗೂಡು ಎಂದು ಅಭಿಪ್ರಾಯಪಟ್ಟರೆ, ಇನ್ನೂ ಕೆಲವು ವಿದ್ವಾಂಸರು ಈಗಿನ ಯಾದಗಿರ ಜಿಲ್ಲೆಯ ಸುರಪುರ ತಾಲ್ಲೂಕಿನ ಸಗರ ಎಂಬ ಗ್ರಾಮ ಈ ಶರಣನ ಹುಟ್ಟೂರಾಗಿದೆ ಎಂದು ಹೇಳುತ್ತಾರೆ.

ಆದರೆ ಹೆಚ್ಚಿನ ವಿದ್ವಾಂಸರ ಪ್ರಕಾರ ಈಗಿನ ಯಾದಗಿರ ಜಿಲ್ಲೆಯ ಸುರಪುರ ತಾಲ್ಲೂಕಿನ ಸಗರವೇ ಈ ಶರಣನ ಹುಟ್ಟೂರು ಆಗಿರಬಹುದೆಂದು ಎಂದಿರುವುದು ನಾವು ಒಪ್ಪಿಕೊಳ್ಳಬಹುದು. ಈ ಶರಣ ತಾಯಿ ಹೊನ್ನಮ್ಮ. ತಂದೆ ಮಾರಪಯ್ಯಾ, ಮನೆತನ ಅಸ್ಪೃಶ್ಯ ಮನೆತನ. ಜಾತಿ ಚಮ್ಮಾರ. ಪತ್ನಿ ಕಲ್ಯಾಣಮ್ಮ ಇದ್ದೊಬ್ಬ ಮಗನ ಹೆಸರು ಶೀಲವಂತ ಎಂದು ತಿಳಿದುಬರುತ್ತದೆ.

೧೨ನೇ ಶತಮಾನದಲ್ಲಿ ಚಾತುರ್ವರ್ಣ್ಯ ಪದ್ಧತಿ ಎಲ್ಲಾ ಕಡೆಗೂ ತಾಂಡವವಾಡುತ್ತಿತ್ತು. ಇಂಥಹ ಸಂದರ್ಭದಲ್ಲಿ ಬಸವಣ್ಣನವರು ಎಲ್ಲಾ ಜಾತಿ ಜನರನ್ನು ಒಗ್ಗೂಡಿಸಿ ಸಮಾಜದಲ್ಲಿ ಸಮಾನತೆ ತರಲು ಪ್ರಯತ್ನಿಸಿದ್ದಾರೆ. ಅವರು ಅಂದು ಮಾಡಿದ ಪ್ರಯತ್ನವೇ ನಾವು ಇಂದು ಸ್ವತಂತ್ರವಾಗಿ ಬದುಕಲು ಕಾರಣವಾಗಿದೆ.

ಸಮಗಾರ ಹರಳಯ್ಯನ ಹೆಸರು ನೆನೆಸಿಕೊಂಡರೆ ಅವರು ಮೆರೆದ ಪಾದರಕ್ಷೆಯ ಪವಾಡ ಮತ್ತು ಕಲ್ಯಾಣ ಕ್ರಾಂತಿಗೆ ನಾಂದಿಯಾದ ಹರಳಯ್ಯನವರ ಮಗ ಶೀಲವಂತ, ಬ್ರಾಹ್ಮಣ ಮಧುರಸರನ ಮಗಳು ಲಾವಣ್ಯ ಇವರ ಅಂತರ್ಜಾತಿ ವಿವಾಹವೇ ಮುಖ್ಯ ಕಾರಣವಾಗಿದೆ.

ಕಾಡಿನಲ್ಲಿ ಇದ್ದ ಬಂಡೆಯಿಂದ ಒಡೆದು ತಂದ ಕಲ್ಲಿಗೆ ಮೂರ್ತಿಮಾಡಿ ಮಂತ್ರೋಪಚಾರಣೆ ಮಾಡಿಸಿ ದೇವರನ್ನು ಪೂಜಿಸುವುದಕ್ಕಿಂತ ಕಲ್ಲು ಬಂಡೆಯಂತಿದ್ದ ಅಸ್ಪಶ್ಯರಿಗೆ ಮಂತ್ರೋಪಚಾರಣೆ ಮಾಡಿ ಅವರನ್ನೇ ಮೂರ್ತಿಗಳಾಗಿಸಿದ ಕೀರ್ತಿ ವಿಶ್ವಗುರು ಬಸವಣ್ಣನವರಿಗೆ ಸಲ್ಲುತ್ತದೆ.

**ದಲಿತ ಶರಣ ಮತ್ತು ಶರಣ ಧರ್ಮದ ಆಶಯಗಳು:**

ಬ್ರಾಹ್ಮಣ್ಯದ ನಿರಾಕರಣೆ, ಪ್ರಭುತ್ವ ನಿರಾಕರಣೆ, ಜಾತಿ ನಿರಾಕರಣೆ, ದೇವಾಲಯ ನಿರಾಕರಣೆ, ಸಮಾನತೆ ಮತ್ತು ಸ್ವಾತಂತ್ರ್ಯದ ಅವಶ್ಯಕತೆ, ಜಾತಿ, ವರ್ಗ, ವರ್ಣಗಳ ಸಂಘರ್ಷ, ಅಸಂಗ್ರಹ ತತ್ವ ಪ್ರತಿಪಾದನೆ, ಕಾಯಕ-ದಾಸೋಹ ತತ್ವ ಪ್ರತಿಪಾದನೆ, ಆಚಾರಕ್ಕಿಂತ ಅರಿವು ಮುಖ್ಯ. ಆಹಾರ ಪದ್ಧತಿಯ ನಿರಾಕರಣೆ, ಗಂಡು ಹೆಣ್ಣಿನ ತಾರತಮ್ಯ ನಿರಾಕರಣೆ, ಹೆಣ್ಣಿಲ್ಲದೆ ಆತ್ಮವಿಲ್ಲ, ಆತ್ಮವಿಲ್ಲದೆ ಆಧ್ಯಾತ್ಮವಿಲ್ಲ. ಆಧ್ಯಾತ್ಮವಿಲ್ಲದೆ ಮುಕ್ತಿಯಿಲ್ಲ ಎಂದರು. ರತಿಯಿಂದ ರತ್ನ, ಗತಿಯಿಂದ ವಾದ್ಯ ಸತಿಯಿಂದ ಸದ್ಧತಿ, ಹೀಗೆ ಸಾಮಾಜಿಕ, ಧಾರ್ಮಿಕ ಆಧ್ಯಾತ್ಮಿಕ, ಸ್ವಾತಂತ್ರ್ಯಗಳನ್ನು ಪಡೆಯಲು ದಲಿತ ಶರಣರು ಹೆಣಗಾಡಿದರು. ಶರಣರಿಗೆ ಜಾತಿ (ಹುಟ್ಟು) ಮುಖ್ಯವಾಗಿರಲಿಲ್ಲ, ನೀತಿ ಮುಖ್ಯವಾಗಿತ್ತು.

೭೭೦ ಶರಣರಲ್ಲಿ ೩೦ ಜನ ಮಹಿಳೆಯರು ವಚನ ರಚಿಸಿದ್ದಾರೆ. ೩೨೦ ಪುರುಷ ವಚನಗಳನ್ನು ರಚಿಸಿದ್ದಾರೆ. ಇನ್ನುಳಿದ ೪೨೦ ಶರಣರು ಅನಕ್ಷರಸ್ಥರಿದ್ದಿರಬಹುದೇ/ ಅಥವಾ ಅವರು ರಚಿಸಿದ ವಚನಗಳು ಸಿಕ್ಕಿಲ್ಲವೇ? ಹೀಗಿರುವಾಗ ಯಾವುದೇ ಅಸ್ಪಶ್ಯನಿಗೆ ಒಳ್ಳೆಯ ಪರಿಸರ, ಅವಕಾಶ ಸಿಕ್ಕರೆ ಆತ ಪ್ರಯತ್ನ ಮಾಡಿದರೇ ಮೇಲೆ ಬರುತ್ತಾನೆಂದು ಹೇಳುವುದರಲ್ಲಿ ಯಾವ ತಪ್ಪು ಇಲ್ಲ ಎಂಬುದು ದಲಿತ ವಚನಕಾರರು ಸಾಬೀತು ಮಾಡಿ ತೋರಿಸಿದ್ದಾರೆ.

**ಸಮಾರೋಪ:**

ಮೇಲ್ವರ್ಗದ ವಚನಕಾರರ ವಚನಗಳ ಸಂಖ್ಯೆ ಹೆಚ್ಚಿವೆ. ಆದರೆ ಈ ಹಿಂದೆ ಚರ್ಚೆ ಮಾಡಿದ ದಲಿತ ವಚನಕಾರರ ಸಂಖ್ಯೆ ತುಂಬಾ ಕಡಿಮೆ ಇವೆ. ಆದರೆ ಗುಣಮಟ್ಟದ ದೃಷ್ಠಿಯಿಂದ, ಗಟ್ಟಿತನದ ದೃಷ್ಟಿಯಿಂದ, ವಸ್ತುವಿನ ದೃಷ್ಟಿಯಿಂದ, ಭಾಷಾ ದೃಷ್ಟಿಯಿಂದ, ಅಭಿವ್ಯಕ್ತಿ ದೃಷ್ಟಿಯಿಂದ, ಸಾಮಾಜಿಕ ಬದಲಾವಣೆ ದೃಷ್ಟಿಯಿಂದ ಮತ್ತು ಧರ್ಮದ ದೃಷ್ಟಿಯಿಂದ ಇತರೇ ವಚನಕಾರರಿಗಿಂತ ಭಿನ್ನವಾಗಿದ್ದು ವರ್ಗ, ವರ್ಣ, ಜಾತಿ, ಲಿಂಗ ಮತ್ತು ಪ್ರದೇಶಗಳನ್ನು ಮೀರಿ ನಿಲ್ಲುತ್ತವೆಂದು ಹೇಳಬಹುದು.

## ಅಧ್ಯಕ್ಷ ಭಾಷಣ:

## ವಚನ ಸಾಹಿತ್ಯ - ಕೀರ್ತನೆ ಗೋಷ್ಠಿ

- ಅಪ್ಪಾರಾವ ಅಕ್ಕೋಣಿ

ಡಾ.ಎಂ.ಎಂ.ಕಲಬುರಗಿಯವರು ವಚನ ಸಾಹಿತ್ಯದ ಬಗ್ಗೆ ಹೇಳಿದ ಮಾತಿದು.

೧೨ ಶತಮಾನದಲ್ಲಿ ಉದಯಿಸಿದ ವಚನ ಸಾಹಿತ್ಯ ಹಿಂದಿನ ಸಾಹಿತ್ಯ ಪರಂಪರೆಯನ್ನು ಸಂಪೂರ್ಣವಾಗಿ ಕಡಿದುಕೊಂಡು, ಸ್ವತಂತ್ರವಾಗಿ ವಿಕಸನಗೊಂಡು, ಹುಟ್ಟಿದ ಸ್ವಲ್ಪ ಅವಧಿಯಲ್ಲಿ ವಿಜೃಂಭಿಸಿ, ಮುಂದಿನ ಸಾಹಿತ್ಯ ಪರಂಪರೆಗಳ ಮೇಲೆ ಪ್ರಭಾವ ಬೀರಿ, ಇಂದಿಗೂ ಪ್ರಸ್ತುತವಾಗಿ ಉಳಿದಿದೆ ವಚನ ಸಾಹಿತ್ಯ ಕನ್ನಡ ಭಾಷೆಯ ಅಮೂಲ್ಯ ಆಸ್ತಿ ಎಂದೇ ಹೇಳಬೇಕು.

ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವ ಘಟನೆ, ವಚನಗಳ ಸೃಷ್ಟಿ ಒಂದು ಅನನ್ಯ ಪ್ರಯೋಗ, ಸಮಾಜದ ಎಲ್ಲ ವರ್ಗ ಎಲ್ಲ ವರ್ಣಗಳ ಜನ ಸಮುದಾಯ ಬಸವಣ್ಣನವರು ಕೈಕೊಂಡಿದ್ದ ಮಹತ್ವ ಪೂರ್ಣ ಭಾಗವೆನಿಸಿದೆ. ಕನ್ನಡ ಸಾಹಿತ್ಯದ ತಾಯಿಬೇರು ವಚನ ಸಾಹಿತ್ಯ ಎಂದರೆ ತಪ್ಪಾಗಲಾರದು.

'ವಚನ' ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯ ಪ್ರಕಾರವೆಂದು ಅರ್ಥವಲ್ಲ. ಪ್ರತಿಜ್ಞೆ ಆತ್ಮ ಸಾಕ್ಷಿಯ ಮಾತು ಎಂದು ಅರ್ಥ. ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ ವಚನವೆನಿಸುತ್ತದೆ. ವಚನಗಳು ಸ್ವರೂಪದಲ್ಲಿ ಅತ್ಯಂತ ಸಂಕ್ಷಿಪ್ತವಾಗಿರುತ್ತವೆ. ಕೆಲವೊಂದು ವಚನಗಳು ದೀರ್ಘವಾಗಿದ್ದರೂ, ಅವು ಸ್ವರ ವಚನ ತತ್ವಪದ ಅಥವಾ ದಾಸರ ಕೀರ್ತನೆಗಳಷ್ಟು ಉದ್ದವಾಗಿರುವುದಿಲ್ಲ. ಭಾಷಾ ಶಾಸ್ತ್ರಜ್ಞರು ಹೇಳುವಂತೆ ವಚನಗಳು ಕಾವ್ಯದ ಯಾವ ಲಕ್ಷಣಕ್ಕೂ ಕಟ್ಟು ಬೀಳುವುದಿಲ್ಲ. 'ನಾನು ಒಲಿದಂತೆ ಹಾಡುವೆ' ವಚನಗಳ ವೈಶಿಷ್ಟ್ಯ ಸರಳ ಕನ್ನಡ ಭಾಷೆ ಇದರ ವಿಶೇಷತೆ, ವಚನಗಳಲ್ಲಿ ಆಪ್ತತೆ ಇದೆ. ಜೀವನ ಪ್ರೀತಿ ಇದೆ. ಜೀವಪರ ಕಾಳಜಿ ಇದೆ. ಆತ್ಮೋನ್ನತಿ, ಸಮಾಜೋನ್ಮಖಿಯಂಥ ಉದಾತ್ತಧ್ಯೆಯದ ದೇಶಿ ಮಾರ್ಗವಿದೆ. ವಚನವೆಂಬ ಪದವೇ ಅನನ್ಯ ಕನ್ನಡ ಜನತೆಯ ಸಾಹಿತ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ವಚನ ಸಾಹಿತ್ಯ ಕನ್ನಡ ಸಾಹಿತ್ಯದ ಅವಿಭಾಜ್ಯ ಅಂಗ. ಕನ್ನಡ ಸಾಹಿತ್ಯದಲ್ಲಿಯೇ 'ವಚನ' ಪ್ರಕಾರ ಒಂದು ವಿಶಿಷ್ಟ ಪ್ರಕಾರ. ೧೨ನೇ ಶತಮಾನದಲ್ಲಿ ಹುಟ್ಟಿ ಶಿವಶರಣರ ಬದುಕಿನ ಅನುಭವದಿಂದ ಮೂಡಿ ಬಂದ ವಚನ ಸಾಹಿತ್ಯ, ಕನ್ನಡ ಸಾಹಿತ್ಯದ ಹೃದಯ ಭಾಗವೆಂದೇ ಹೇಳಬಹುದು. ಕನ್ನಡ ಸಾಹಿತ್ಯವನ್ನು ವಿಶ್ವ ಸಾಹಿತ್ಯ ಮಟ್ಟಕ್ಕೆ ಹೋಗಬೇಕಾದರೆ ಪ್ರಮುಖವಾಗಿ ವಚನ ಸಾಹಿತ್ಯವೇ ಕಾರಣ ಎಂದು ಹೇಳಿದರೆ ತಪ್ಪಾಗಲಾರದು. ಬಸವಾದಿ ಶರಣ ಶರಣೆಯರು ಜನರಾಡುವ ಮಾತಿನಲ್ಲಿಯೇ ಜನರ

ಜೀವನಾನುಭವದ ಮೂಲ. ದ್ರವ್ಯವನ್ನು ಬಳಸಿಕೊಂಡೇ ಸಾಮನ್ಯ ಜನರಿಗಾಗಿ ಈ ವಚನಗಳನ್ನು ರಚಿಸಿದರು ಸಾಮಾನ್ಯರು ಓದಿ, ಓದಿಸಿ, ಕೇಳಿ ಸುಲಭವಾಗಿ ಅರ್ಥಮಾಡಿಕೊಂಡು, ಸಾರ್ಥಕಜೀವಿಗಳಾಗುವ ಸಹಜ ಸುಂದರವಾಗಿ ರಚಿಸಿರುವುದೇ ವಚನ ಸಾಹಿತ್ಯ ಪ್ರೊ. ಶಿ.ಶಿ. ಬಸವನಾಳರವರು ಹೇಳುವಂತೆ "ದೇವವಾಣಿಗೆ ಜನವಾಣಿಯಾಗುವುದು ಸಾಧ್ಯವಾಗದಿದ್ದಾಗ, ಜನವಾಣಿಯನ್ನೇ ದೇವವಾಣಿಯನ್ನಾಗಿಸಿದ ಪವಾಡ ವಚನಕಾರರದು."

ಈ ಪ್ರಕಾರದ ಸಾಹಿತ್ಯ ಬೇರೆಯಲ್ಲಿಯೂ ಸಿಕ್ಕುವುದಿಲ್ಲ. ವಚನ ಪ್ರಕಾರದ ಮೂಲಗಳನ್ನು ಸಂಸ್ಕೃತದ ದಂಡಕಗಳಲ್ಲಿಯೋ, ತಮಿಳು ತೇವಾರಗಳಲ್ಲಿಯೋ ಕನ್ನಡದ ತ್ರಿಪದಿಗಳಲ್ಲಿಯೋ ಹುಡುಕಲು ಹೊರಟವರಿಗೆ ಅವರ ಪ್ರಯತ್ನಗಳಲ್ಲಿ ಯಶಸ್ಸು ಕಾಣಲಿಲ್ಲ. ಇದೊಂದು ಸ್ವಯಂಭು ಸಾಹಿತ್ಯವೆಂದು ಹೇಳಿದವರು ಶ್ರೀ ಸಿದ್ದಯ್ಯ ಪುರಾಣಿಕರು. ನೂರಾರು ಜನ ಶರಣ ಶರಣೆಯರು ಅನುಭವ ಮಂಟಪದಲ್ಲಿ ಚಿಂತನ ಮಥನಗೊಳಿಸಿ, ತಮ್ಮ ತಮ್ಮ ಸ್ವಾನುಭವಕ್ಕೆ ನಿಷ್ಠರಾಗಿ, ತಮ್ಮ ಅನುಭವ-ಅನುಭಾವಗಳಿಗೆ ಅಭಿವ್ಯಕ್ತಿ ನೀಡಿದ ಕಾರಣ ಇದೊಂದು ಬಗೆಯ ವ್ಯಕ್ತಿ ನಿಷ್ಠೆಯ ಸಮ ಸಾಹಿತ್ಯವಾಗಿ ಪರಿಣಮಿಸಿದೆ. ಅಂತೆಯೇ ಇಂದಿಗೂ ಅದು ಪ್ರಸ್ತುತವಾಗಿದೆ.

ಸಾಹಿತ್ಯದ ಮಾಧ್ಯಮ ಭಾಷೆ, ಭಾಷೆ ಬದುಕಿನ ಜೀವನಾಡಿ, ಹಾಗಾಗಿ ಶರಣರು ಒತ್ತು ಕೊಟ್ಟಿದ್ದು ಭಾಷೆಗೆ, ಅದುವರೆಗೆ ಧಾರ್ಮಿಕ ವಿಚಾರಗಳನ್ನು ಜನರಿಗೆ ಅರ್ಥವಾಗದ ಪಂಡಿತರಿಗೆ ಮಾತ್ರ ಅರ್ಥವಾಗುವ ಸಂಸ್ಕೃತ ಭಾಷೆ ಹಳೆಗನ್ನಡದಲ್ಲಿ ಹೇಳಾಗುತ್ತಿತ್ತು. ಎಲ್ಲರಿಗೂ ಅರ್ಥವಾಗುವ ಭಾಷೆಯಲ್ಲಿ ಮಾತನಾಡಿದರೆ, ಸಾಹಿತ್ಯ ರಚಿಸಿದರೆ ಜನರು ಬೇಗ ಎಚ್ಚರಗೊಳ್ಳಲು ಸಾಧ್ಯವೆಂದು ಮನವರಿಕೆ ಮಾಡಿಕೊಂಡು ಬಸವಾದಿ ಶರಣರು ಜನರಾಡುವ ಸರಳ ಕನ್ನಡದಲ್ಲಿ ವಚನಗಳ ಮೂಲಕ ವಿಚಾರಗಳನ್ನು ಹೊರ ಹಾಕಿದರು.

ವಚನ ಸಾಹಿತ್ಯದಿಂದ ಭಾಷೆ ಭಕ್ತನಾಯಿತು. ಅಂದರೆ ರಾಜಸ್ತುತಿ, ವೈಭವೀಕರಣ ಮುಂತಾದವು ದೂರ ತಳ್ಳಲ್ಪಟ್ಟು ಭಾಷೆಯ ದುರ್ಬಳಕೆ ತಪ್ಪಿತು. ಕನ್ನಡ ಭಾಷೆಯ ರಮ್ಯತೆ ಉಪಯುಕ್ತತೆ ಹೆಚ್ಚಾದವು. ವಚನ ಸಾಹಿತ್ಯ ಕನ್ನಡ ಸಾಹಿತ್ಯ, ಎಲ್ಲ ವಿಷಯ-ವಿಚಾರಗಳ ಅಭಿವ್ಯಕ್ತಿಗೂ ಸಮರ್ಥವಾಗುವ ರೀತಿಯಲ್ಲಿ ಬೆಳೆಯಲು ವಚನ ಸಾಹಿತ್ಯ ಭದ್ರಬುನಾದಿಯನ್ನು ಒದಗಿಸಿದೆ. ವಚನ ಗದ್ಯವೂ ಹೌದು, ಪದ್ಯವೂ ಹೌದು, ಗದ್ಯ ಪದ್ಯಗಳ ಅಂತರವೇ ಉಳಿಯದಂತೆ ಪದ್ಯದ ಲಯವನ್ನು, ಗದ್ಯದ ಸ್ಪಷ್ಟತೆಗಳನ್ನು ಮೈಗೂಡಿಸಿಕೊಂಡು ಬೆಳೆದಿರುವುದು ವಚನ ಸಾಹಿತ್ಯದ ಗರಿಮೆ-ಹಿರಿಮೆ, ಕೆಲವು ಸಂಗೀತ ಕಲಾವಿದರು ವಚನಗಳನ್ನು ಹಾಡಲು ಸಾಧ್ಯವಿಲ್ಲವೆಂಬ ಕಾಲವೊಂದಿತ್ತು. ಆದರೆ ಈಗ ವಚನಗಳನ್ನು ಹಾಡದ ಸಂಗೀತಗಾರರೇ ಇಲ್ಲ ಎಂಬಂತಾಗಿದೆ.

ದಿವಂಗತಿ ಎಂ.ಆರ್. ಶ್ರೀಯವರು ವಚನಗಳಲ್ಲಿ ರಸಭಾವ ಅಲಂಕಾರಗಳೂ, ಉದಾತ್ತ ಧ್ಯೈಯವೂ ಇರುವುದರಿಂದ ಅವು ಉತ್ತಮ ಸಾಹಿತ್ಯವೆಂದು ಧಾರಾಳವಾಗಿ ಹೇಳಬಹುದು ಎಂದು ಹೇಳಿದ್ದಾರೆ. ನಾಗಚಂದ್ರ ಹೇಳಿದ 'ಜನತಾ ದೃಷ್ಟಿ' ಎಂಬ ಸಾಹಿತ್ಯದ ಸಾಮಾನ್ಯ ಲಕ್ಷಣವೂ ವಚನ ವಾಂಜಿಯಕ್ಕೆ ವಿಶೇಷವಾಗಿ ಸರಿಹೋಗುತ್ತದೆ.



ಬಸವಾದಿ ಶರಣರು ಸರಳ ಕನ್ನಡದಲ್ಲಿ ವಚನಗಳನ್ನು ರಚಿಸುವ ಮೂಲಕ ವಚನ ಸಾಹಿತ್ಯವನ್ನು ಸಾರ್ವತ್ರಿಕಗೊಳಿಸಿದರು. ಪ್ರಪಂಚದ ವಿಶೇಷವಾಗಿ ಭಾರತದ ವಿವಿಧ ಪ್ರದೇಶಗಳಿಂದ ಆಗಮಿಸಿ, ಕಲ್ಯಾಣದಲ್ಲಿ ನೆಲೆನಿಂತ ಶಿವಶರಣ-ಶರಣೆಯರು ಅಂದಿನ ಸಾಮಾಜಿಕ ಪಿಡುಗುಗಳಾದ ಜಾತೀಯತೆ, ಮೇಲು-ಕೀಳು, ಹೆಣ್ಣು-ಗಂಡು, ಸ್ಪಶ್ಯರು- ಅಸ್ಪೃಶ್ಯರು, ಬಡವರು-ಬಲ್ಲಿದರು ಎಂಬ ಭೇದ ಭಾವನೆಗಳನ್ನು ತೊಡೆದು ಹಾಕಿ, ಮಾನವೀಯತೆಯನ್ನು ಹುಟ್ಟು ಹಾಕಿದರು. ಎಲ್ಲರನ್ನು ಪ್ರೀತಿಸಿದರು, ಎಲ್ಲರನ್ನು ಏಕ ಭಾವದಿಂದ ಒಪ್ಪಿಕೊಂಡರು, ಅಪ್ಪಿಕೊಂಡರು.

ಸಕಲ ಜೀವಾತ್ಮರಿಗೆ ಲೇಸನೆ ಬಯಸುವವರೇ ಕುಲಜರು ಎನ್ನುವುದರ ಮೂಲಕ ಯಾರೂ ಕೀಳಲ್ಲ, ಅಸ್ಪೃಶ್ಯರಲ್ಲ ಎಂಬುದನ್ನು ಸಾರಿದರು. ನಡುವೆ ಸುಳಿವ ಆತ್ಮನು ಹೆಣ್ಣೂ ಅಲ್ಲ, ಗಂಡೂ ಅಲ್ಲ ಎಂಬುದನ್ನು ಹೇಳುವುದರ ಮೂಲಕ ಮಹಿಳಾ ಸ್ವಾತಂತ್ರ್ಯಕ್ಕೆ, ಸಬಲೀಕರಣಕ್ಕೆ ಶಕ್ತಿ ತುಂಬಿದರು. ಮಹಿಳೆಯರಿಗೆ ಧರ್ಮಲಾಂಛನ ಧರಿಸುವ ಸ್ವಾತಂತ್ರ್ಯವನ್ನು ನೀಡುವುದರ ಮೂಲಕ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದರು. ಆಯ್ದಕ್ಕಿ ಲಕ್ಕಮ್ಮ ಅಗತ್ಯಕ್ಕಿಂತ ಹೆಚ್ಚು ಅಕ್ಕಿಯನ್ನು ಆಯ್ದು ತಂದ ಗಂಡನಿಗೆ ಈ ಅಕ್ಕಿಯ ಆಸೆ ನಿಮಗೇಕೆ, ಇದು ನಿಮ್ಮ ಮನವೋ, ಬಸವಣ್ಣನ ಅನುಮಾನದ ಚಿತ್ತವೋ ಎಂದು, ಗಂಡನನ್ನು ಮತ್ತು ಬಸವಣ್ಣನನ್ನು ಪ್ರಶ್ನಿಸುವ ಮಟ್ಟಿಗೆ ಬೆಳೆಯಲು ಅಂದು ಮಹಿಳೆಯರಿಗೆ ಸಾಧ್ಯವಾಯಿತು.

ಕಾಯಕ ದೇವರಿಗಿಂತ ದೊಡ್ಡದು, ಕಾಯಕವೇ ದೇವರು ಎಂದು ಸಾರಿದವರು ಶಿವಶರಣರು. ಕಾಯಕ-ದಾಸೋಹಗಳ ಮೂಲಕ, ಅಸಂಗ್ರಹವನ್ನೇ ಜೀವನ ಶೈಲಿಯಾಗಿಸುವ ಮೂಲಕ ಆರ್ಥಿಕ ಸಮಾನತೆಗೆ ಅಡಿಪಾಯ ಹಾಕಿದರು. ಶಿವಶರಣರು ವ್ಯಕ್ತಿತ್ವ ನಿರ್ಮಾಣ, ಸಾಮಾಜಿಕ ಕ್ರಾಂತಿ, ಧಾರ್ಮಿಕ ಕ್ರಾಂತಿ, ಆರ್ಥಿಕ ಕ್ರಾಂತಿಗಳ ಮೂಲಕ ವಚನ ಸಾಹಿತ್ಯ ೧೨ನೆಯ ಶತಮಾನದಲ್ಲಿ ಸಮಗ್ರ ಕ್ರಾಂತಿಯನ್ನುಂಟು ಮಾಡಿದ್ದು ವಿಶ್ವ ಸಾಹಿತ್ಯದ ಸೋಜಿಗವಾಗಿದೆ. ವಚನ ಸಾಹಿತ್ಯದಿಂದ ರೂಪುಗೊಂಡ ಚಳವಳಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಅಪರೂಪ-ಅನುಪಮವಾದುದು.

೧೨ನೇ ಶತಮಾನದಲ್ಲಿ ಶರಣರಲ್ಲಿ ಯಾವುದೇ ವರ್ಗೀಕರಣ ಇರಲಿಲ್ಲ. ದಲಿತ- ಬಲಿತ, ಗಂಡು-ಹೆಣ್ಣು, ಮೇಲ್ಜಾತಿಯವರು ಕೆಳಜಾತಿಯವರು ಎಂಬ ಯಾವುದೇ ವಿಂಗಡಣೆ ಇರಲಿಲ್ಲ. ಏಕೆಂದರೆ ಶರಣರು ಮಾನವರೆಲ್ಲರೂ ಒಂದೇ ಎಂದು ಭಾವಿಸಿದವರು/ಹೇಳಿದವರು ಮತ್ತು ಅದರಂತೆ ನಡೆದುಕೊಂಡವರು. ಅವರೆಲ್ಲರನ್ನು ಅವರು ಮಾಡುವ ಕಾಯಕದಿಂದ ಗುರುತಿಸಲಾಗುತ್ತಿತ್ತು. ಒಕ್ಕಲಿಗ, ಮುದ್ದಣ್ಣ, ಸುಲಿಯ ಚಂದಯ್ಯ, ಮೇದಾರ ಕೇತಯ್ಯ ಮುಂತಾದ ಉದಾಹರಣೆಗಳನ್ನು ಕೊಡಬಹುದು. ಆದರೆ ಇವೇ ಮುಂದೆ ಜಾತಿಗಳಾಗಿ ಪರಿಣಮಿಸಿದ್ದು ವಿಪರ್ಯಾಸ.

ವಚನಕಾರರಲ್ಲಿ ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ ಮುಂತಾದ ಕೆಲವರು ಮಾತ್ರ ಹೆಚ್ಚು ಪ್ರಚಲಿತದಲ್ಲಿದ್ದಾರೆ. ಇದರಿಂದಾಗಿ ಅನೇಕ ಉದ್ದಾಮ ವಚನಕಾರರು ಹೆಚ್ಚು ಪ್ರಸಿದ್ಧಿಯನ್ನು



ಪಡೆಯಲಿಲ್ಲ. ಅವರು ಎಲೆಯ ಮರೆಯ ಕಾಯಿಯಂತೆ ಉಳಿದು ಹೋದರು. ಹಾಗಾಗಿ ಈ ಗೋಷ್ಠಿಯಲ್ಲಿ ದಲಿತ ವಚನಕಕಾರರ ಬಗ್ಗೆ ಒಂದು ವಿಶೇಷ ಉಪನ್ಯಾಸವನ್ನು ಏರ್ಪಡಿಸುವುದರ ಮೂಲಕ, ಅವರನ್ನು ಜನರಿಗೆ ಪರಿಚಯಿಸುವ ಒಂದು ಉತ್ತಮ ಕೆಲಸ ಆಗಿದೆ ಎಂದು ನನ್ನ ಭಾವನೆ ಅದನ್ನು ಪ್ರೊ. ಶರಣಪ್ಪ ಮಾಳಗೆಯವರು ಸಮರ್ಥವಾಗಿ ಮಾಡಿದ್ದಾರೆ. ಒಂದು ಉದಾಹರಣೆ ಹೇಳುವುದಾದರೆ ಶರಣ ಉರಿಲಿಂಗ ಪೆದ್ದಿಯನ್ನು ಬುದ್ಧಿಮಾನ ಉರಿಲಿಂಗ ಪೆದ್ದಿ ಎಂದು ಹೇಳಲಾಗುತ್ತದೆ. ಉರಿಲಿಂಗ ಪೆದ್ದಿಯ ಅಪ್ರತಿಮ ಸಾಧನೆಯನ್ನು ಕಂಡು ೧೨ನೇಯ ಶತಮಾನದಲ್ಲಿಯೇ ಮಠದ ಪೀಠಾಧಿಪತಿಯನ್ನಾಗಿ ಮಾಡಲಾಯಿತು. ಇಂದಿಗೂ ಉರಿಲಿಂಗ ಪೆದ್ದಿಯ ಮಠಗಳು ಬೀದರ, ಕಲಬುರಗಿ, ಮೈಸೂರು ಮುಂತಾದ ಜಿಲ್ಲೆಗಳಲ್ಲಿ ಕಾಣಸಿಗುತ್ತವೆ. ಉರಿಲಿಂಗ ಪೆದ್ದಿಯ ಧರ್ಮಪತ್ನಿ ಕಾಳವ್ವ ಕೂಡ ಅಷ್ಟೇ ಪ್ರಖರ ವಚನಕಾರ್ತಿ. ಹಾಗೆ ನೋಡಿದರೆ ಕೆಲವರನ್ನು ಬಿಟ್ಟರೆ ಬಹುತೇಕ ಶರಣರು ದಲಿತವರ್ಗಕ್ಕೆ ಸೇರಿದವರಾಗಿದ್ದಾರೆ.

ವಿದ್ವಾನವಾಚಸ್ಪತಿ ಡಾ. ಅರಳು ಮಲ್ಲಿಗೆ ಪಾರ್ಥ ಸಾರಥಿಯವರು 'ದಾಸಸಾಹಿತ್ಯದ ಪರಂಜ್ಯೋತಿಗಳು' ಎಂಬ ಕೃತಿಯಲ್ಲಿ ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯ ಕನ್ನಡ ಸಾಹಿತ್ಯ-ಸಂಸ್ಕೃತಿಯ ಎರಡು ಕಣ್ಣುಗಳಿದ್ದಂತೆ ಎಂದು ಹೇಳುತ್ತಾರೆ.

ದಾಸ ಸಾಹಿತ್ಯ ಕನ್ನಡದ ಸುಲಭ ಸರಳ ಕೀರ್ತನೆಗಳ ಮೂಲಕಜ್ಞಾನಾಮೃತದ ಕುಟುಕುಗಳನ್ನು ಕುಡಿಸಿ, ಜನ ಸಾಮಾನ್ಯರನ್ನು ಜ್ಞಾನದ ಬೆಳಕಿನಲ್ಲಿ ಅವರೆಲ್ಲ ಧರ್ಮ ನಿಷ್ಠರಾಗಿ, ದೇವ ನಿಷ್ಠರಾಗಿ ಒಳ್ಳೆಯ ಮಾರ್ಗದಲ್ಲಿ

ನಡೆಯುವಂತೆ ಜನರನ್ನು ಪ್ರೇರೇಪಿಸಿದೆ, ಈ ಮೂಲಕ ಸುಂದರ ಸಮಾಜವನ್ನು ನಿರ್ಮಾಣ ಮಾಡುವದು ಹರಿದಾಸರ ಉದಾತ್ತ ಧ್ಯೆಯವಾಗಿತ್ತು.

ದಾಸ ಸಾಹಿತ್ಯ ಪ್ರಮುಖವಾಗಿ, ಭಕ್ತಿಮಾರ್ಗವನ್ನು ಪ್ರತಿಪಾದಿಸಿದ್ದು, ಇದು ಭಕ್ತಿ ಸಾಹಿತ್ಯವೆಂದೇ ಅನೇಕರು ಹೇಳುತ್ತಾರೆ. ಆದರೆ ಡಾ. ಸ್ವಾಮಿರಾವ ಕುಲಕರ್ಣಿಯವರು, ಡಾ. ಅರಳು ಮಲ್ಲಿಗೆ ಪಾರ್ಥಸಾರಥಿಯವರು ಮುಂತಾದವರು ದಾಸ ಸಾಹಿತ್ಯ ಮೇಲ್ನೋಟಕ್ಕೆ ಭಕ್ತಿ ಸಾಹಿತ್ಯ ಎಂದು ಗುರುತಿಸಿಕೊಂಡರೂ ಆ ಸಾಹಿತ್ಯದ ಆಳಕ್ಕೆ ಇಳಿದಾಗ ಸಾಮರಸ್ಯ ಸಮನ್ವಯದ ಸುಂದರ ಸಮಾಜ ನಿರ್ಮಾಣವೇ ದಾಸ ಸಾಹಿತ್ಯದ ಉದ್ದೇಶವಾಗಿತ್ತು ಎಂದು ಹೇಳಿದ್ದಾರೆ.

ಹರಿಭಕ್ತಿಯು ದಾಸ ಸಾಹಿತ್ಯದ ನೆಲೆಯಾಗಿದ್ದರೂ ಹರನನ್ನೂ ಸ್ತುತಿಸಿದ ಉದಾಹರಣೆಗಳು ನಮಗೆ ದಾಸ ಸಾಹಿತ್ಯದಲ್ಲಿ ಸಿಗುತ್ತದೆ. ದಾಸ ಸಾಹಿತ್ಯದಲ್ಲಿ ಆಧ್ಯಾತ್ಮಿಕತೆ ಢಾಳವಾಗಿ ಕಾಣಿಸಿದರೂ ಸಮಾಜ ಸುಧಾರಣೆಯ, ಲೋಕದ ಡೊಂಕನ್ನು ತಿದ್ದುವ ಜೀವನವನ್ನು ಪ್ರೀತಿಸುವ ಅನೇಕ ಕೀರ್ತನೆಗಳು ನಮಗೆ ಸಿಗುತ್ತವೆ.

ದಾಸ ಸಾಹಿತ್ಯದ ರಚನಕಾರರು ಒಂದೇ ಸಮುದಾಯಕ್ಕೆ ಸೇರಿದವರು ಎಂದು ನಮಗೆ ಮೇಲ್ನೋಟಕ್ಕೆ ಅನಿಸಿದರೂ ಕುರುಬ ಜನಾಂಗಕ್ಕೆ ಸೇರಿದ ಶ್ರೀ ಕನಕದಾಸರು, ಮುಸ್ಲಿಂ ಸಮುದಾಯಕ್ಕೆ ಸೇರಿದ ಶ್ರೀ ರಾಮದಾಸರು ಮುಂತಾದವರನ್ನು ನಾವು ಗುರುತಿಸಬಹುದಾಗಿದೆ. ಕನಕದಾಸರಂತೂ ದಾಸಶ್ರೇಷ್ಠ ಎನಿಸಿದ್ದಾರೆ. ಇದಲ್ಲದೇ ಅಸಗಿಹಾಳ

ಕಲ್ಯಾಣ ಕಿರಣ ಗೋವಿಂದದಾಸರು ೨೫ ದಲಿತರಿಗೆ ದಾಸ ದೀಕ್ಷೆ ನೀಡಿರುವ ದಾಖಲೆ ಇದೆ ಎಂದು ಡಾ. ಸ್ವಾಮಿರಾವ ಕುಲಕಣಿಯವರು ಹೇಳಿದ್ದಾರೆ. ಸಧ್ಯದ ಸಂಶೋಧನೆಯ ಪ್ರಕಾರ ೪೦೦ ದಾಸರಿದ್ದಾರೆ ನಮ್ಮ ಕಲ್ಯಾಣ ಕರ್ನಾಟಕದಲ್ಲಿಯೇ ೧೨೦ಕ್ಕೂ ಹೆಚ್ಚು ದಾಸರಿದ್ದಾರೆ.

ವಚನ ಸಾಹಿತ್ಯ ೧೨ನೇ ಶತಮಾನದಲ್ಲಿ ರಚನೆಯಾಗಿದ್ದರೆ ದಾಸ ಸಾಹಿತ್ಯ ರಚನೆಯಾದದ್ದೂ ೧೫-೧೬ನೇ ಶತಮಾನದಲ್ಲಿ ದಾಸ ಸಾಹಿತ್ಯವನ್ನು ಅವಲೋಕಿಸಿದಾಗ ಅದರ ಮೇಲೆ ವಚನ ಸಾಹಿತ್ಯದ ಪ್ರಭಾವ ಆಗಿರುವುದನ್ನು ನಾವು ಅವಲೋಕಿಸಬಹುದಾಗಿದೆ.

ವಚನ ಸಾಹಿತ್ಯ, ದಾಸ ಸಾಹಿತ್ಯ ಡಾ. ಅರಳು ಮಲ್ಲಿಗೆ ಪಾರ್ಥಸಾರಥಿಯವರು ಹೇಳಿದಂತೆ ಕನ್ನಡ ಸಾಹಿತ್ಯದ ಎರಡು ಕಣ್ಣುಗಳು ಇವೆರಡನ್ನು ತುಲನಾತ್ಮಕವಾಗಿ ನೋಡುವುದಕ್ಕಿಂತ ಆಯಾ ಕಾಲಮಾನಗಳಲ್ಲಿ ಸಂದರ್ಭಕ್ಕನುಗುಣವಾಗಿ ಇವೆರಡು ಮುಖ್ಯವಾದುವುಗಳು, ಆಯಾ ಸಂದರ್ಭದಲ್ಲಿ ತಮ್ಮ ತಮ್ಮ ನೆಲೆಯಲ್ಲಿ ಎರಡೂ ಸಾಹಿತ್ಯಗಳು ವೈಶಿಷ್ಟ್ಯಪೂರ್ಣವಗಿ ಬೆಳೆದು ಬಂದಿವೆ.

ಡಾ. ಸ್ವಾಮಿರಾವ ಕುಲಕರ್ಣಿಯವರು ದೈವ, ಧರ್ಮ, ತತ್ವ, ಆಚರಣೆಗಳಲ್ಲಿ ಕೆಲ ವ್ಯತ್ಯಾಸಗಳನ್ನು ಬಿಟ್ಟರೆ, ವಚನ ಸಾಹಿತ್ಯ, ದಾಸ ಸಾಹಿತ್ಯದ ಉದ್ದೇಶಗಳಲ್ಲಿ ಸಾಮ್ಯತೆ ಇದೆ ಎಂದು ಹೇಳುತ್ತಾರೆ. ಮುಂದುವರೆದು ವಚನಕಾರರು ವ್ಯವಸ್ಥೆಯ ಹೊರಗೆ ಬಂದು ಹೋರಾಟ ಮಾಡಿದರೆ ದಾಸರು ವ್ಯವಸ್ಥೆಯಲ್ಲಿ ಇದ್ದು ಕೊಂಡೇ ಸಮಾಜ ಸುಧಾರಣೆಗೆ ಪ್ರಯತ್ನಿಸಿದರೆಂದು ಹೇಳಿದ್ದಾರೆ. ಮಾನವ ಜನ್ಮ ದೊಡ್ಡದು ಇದನ್ನು ಹಾಳು ಮಾಡಿಕೊಳ್ಳಬೇಡಿ ಹುಚ್ಚಪ್ಪಗಳಿರಾ' 'ಕುಲಕುಲವೆಂದು ಹೊಡೆದಾಡದಿರಿ, ಆವ ಕುಲವಾದರೇನು ಆತ್ಮಭಾವ ಅರಿತಮೇಲೆ, 'ರಾಮ-ರಹೀಮ ಒಂದೆಂಬ ನಿಸ್ಸಿಮ ಕುಲನಂದು ಮುಂತಾದ ಹಾಡುಗಳನ್ನು ಉದಾಹರಿಸಬಹುದಾಗಿದೆ. ದಾಸರ ಹಾಡುಗಳ ಸಂಗೀತ ಮಯವಾಗಿವೆ. ಸಂಗೀತಕಾರರು ಸಾರ್ವಕಾಲಿಕ, ಸಾರ್ವತ್ರಿಕ ಚಿಂತನೆಗಳನ್ನು ಹೊಂದಿರುವ, ಆಕಾಲದ ವರ್ಣ ವ್ಯವಸ್ಥೆಯನ್ನು ವಿರೋಧಿಸಿದ ಅನೇಕ ಹಾಡುಗಳು ದಾಸ ಸಾಹಿತ್ಯದಲ್ಲಿ ಸಿಗುತ್ತವೆ. ಇವುಗಳ ಸಂಖ್ಯೆ ಕಡಿಮೆ ಇದ್ದರೂ ಸಂಗೀತಗಾರರೂ ಇಂಥವುಗಳನ್ನು ಆಯ್ದುಕೊಂಡು ಪ್ರಚಾರ ಮಾಡಬೇಕಾದ ಅವಶ್ಯಕತೆ ಇದೆ ಎಂದು ಹೇಳಬಹುದು.

ಭಾಷೆಯ ದೃಷ್ಠಿಯಿಂದ ವಚನಕಾರರು ಮತ್ತು ಹರಿದಾಸರು ತಮ್ಮ ರಚನೆಗಳನ್ನು ಸರಳ ಕನ್ನಡದಲ್ಲಿಯೇ ಆಡಿರುವುದು ವೇದ್ಯವಾಗುತ್ತದೆ. ಇದಕ್ಕೆ ಪ್ರಮುಖ ಕಾರಣ ಅವರ ಜೀವನ ಪ್ರೀತಿ, ಜನಪರ ಕಾಳಜಿ ಎಂದರೆ ತಪ್ಪಾಗಬಾರದು. ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಜನರಿಗಾಗಿ, ಜನರಿಂದ ರಚಿತವಾಗಿರುವ ಜನಪರ ಸಾಹಿತ್ಯವಾಗಿದೆ.

# ಕನ್ನಡ ಮಾಧ್ಯಮ ಮತ್ತು ಶಿಕ್ಷಣ

### ಕನ್ನಡ ಪಠ್ಯಗಳ ಪ್ರಸ್ತುತತೆ

**- ಡಾ. ಬಿ.ವಿ. ವಸಂತಕುಮಾರ್**

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಅದು ಸಾರ್ವಕಾಲಿಕ ಮತ್ತು ಎಂದೆಂದಿಗೂ ಪ್ರಸ್ತುತವಾದದ್ದಾಗಿದೆ. ಅವುಗಳಿಂದಾಗಿಯೇ ಎರಡು ಸಾವಿರ ವರ್ಷಗಳಿಗಿಂತಲೂ ಪ್ರಾಚೀನತೆಯನ್ನುಳ್ಳ ಕನ್ನಡತನ ತನ್ನದೇ ಆದ ಪರಂಪರೆಯನ್ನು ರೂಪಿಸಿ ಕೊಳ್ಳುತ್ತಾ ಬಂದಿದೆ ಅದು ನಿತ್ಯ ನಿರಂತರ, ಜಂಗಮರೂಪಿ ನದಿ ಅದರ ಒಳ-ಹೊರ ಹರಿವಿನಲ್ಲಿ ಕಾಲಾನುಸಾರ ಏರಿಳಿತಗಳಾಗಿರಬಹುದು. ಆದರೆ ಕನ್ನಡಿಗರು ಅದನ್ನೆಂದೂ ಬತ್ತಲು ಬಿಟ್ಟಿಲ್ಲ. ಆ

ಅನುಭವಗಳ-ಆಧಾರದ ಮೇಲೆ ಮುಂದೆಯೂ ಎಂದೂ ಬತ್ತಲು ಬಿಡುವುದಿಲ್ಲ ಎಂಬ ಆಶಾವಾದ ನನ್ನದು, ಆ ಕನ್ನಡ ಪರಂಪರೆ ನದಿಯಿಂದ ನಾವು ಎಷ್ಟೆಷ್ಟು ಪಡೆಯುತ್ತೇವೆಯೋ ಅಷ್ಟಷ್ಟು ನಾವು ಹಾಗೂ ನಾವು ರೂಪಿಸುವ ಕನ್ನಡ ಪಠ್ಯಗಳು ಅಷ್ಟಷ್ಟು ಪ್ರಸ್ತುತವಾಗುತ್ತವೆ.

'ಪ್ರಸ್ತುತತೆ' ಎನ್ನುವುದು ಸದ್ಯದ ವರ್ತಮಾನವನ್ನು ಸೂಚಿಸುತ್ತಿರುತ್ತದೆ. ಆದರೆ ಅದರ ಬೇರುಗಳು ಭೂತಕಾಲದಲ್ಲಿಯೂ ಅದರ ಚಿಗುರು, ಹೂವು, ಹಣ್ಣು, ಬೀಜ, ಭವಿಷ್ಯದಲ್ಲಿಯೂ ಸಂಬಂಧವನ್ನು ಹೊಂದಿರುತ್ತವೆ. ಹಾಗಾಗಿ ನಮ್ಮ ಪ್ರಸ್ತುತತೆ ಅಥವಾ ವರ್ತಮಾನದ ಅಗತ್ಯ ಎಂದು ಭೂತ-ಭವಿಷ್ಯಗಳ ನಡುವಿನ ಹುಡುಕಾಟ ಮತ್ತು ಕಂಡದ್ದನ್ನು ಕಟ್ಟಿಕೊಳ್ಳುವುದಾಗಿರುತ್ತದೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಎಂಬುದು ಹೀಗೆ ಹಳತು-ಹೊಸತುಗಳ ಸಂಗಮ ದೇಸಿಮಾರ್ಗ ಪರಂಪರೆಗಳ ಸಮ್ಮಿಲನ. ಇದನ್ನು ನಾವು ಕವಿರಾಜಮಾರ್ಗದ ಶ್ರೀವಿಜಯ, ಬೃಹದ್ದೇಶಿಯ ಮತಂಗಮುನಿ, ವಿಕ್ರಮಾರ್ಜುನ ವಿಜಯ, ಆದಿ ಪುರಾಣಗಳ ಆದಿಮಹಾಕವಿ ಪಂಪನಿಂದಲೂ ಕಾಣುತ್ತ ಬಂದಿದ್ದೇವೆ.

ನಾವಿಂದು ಚರ್ಚಿಸುತ್ತಿರುವುದು ಕನ್ನಡ ಮಾಧ್ಯಮ ಮತ್ತು ಶಿಕ್ಷಣ ಎಂಬುದರ ಅಡಿಯಲ್ಲಿ "ಕನ್ನಡ ಪಠ್ಯಗಳ ಪ್ರಸ್ತುತತೆ" ಯ ಬಗ್ಗೆ" "ಕನ್ನಡ ಪಠ್ಯ" ಎಂದರೆ ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಕಲಿಯಲೆಂದು ಅಧ್ಯಾಪಕರು ಕಲಿಸಲಿ ಎಂದು ಪಠ್ಯಪುಸ್ತಕ ರಚನಾ ಸಮಿತಿಯು ರಚಿಸುವ ಕನ್ನಡ ಭಾಷೆ ಹಾಗೂ ಸಾಹಿತ್ಯ ಪಠ್ಯಪುಸ್ತಕಗಳು, ಅವು ನಮ್ಮ ಕನ್ನಡ ಶಿಕ್ಷಣದ ಕರ್ನಾಟಕದ ಶಿಕ್ಷಣದ ಬುನಾದಿಗಳೆಂದರೆ ತಪ್ಪಾಗದು, ಬುನಾದಿಯೇ ಅಪ್ರಸ್ತುತವಾದರೆ ಕಟ್ಟಡವೂ ಅಪ್ರಸ್ತುತವಾಗುತ್ತದೆ. ಕಟ್ಟಿದ ಉದ್ದೇಶವೇ ವಿಫಲವಾಗುತ್ತದೆ. ಕನ್ನಡ ಪಠ್ಯಗಳು ಪ್ರಸ್ತುತವಾಗುವಂತಿದ್ದರೆ ಅದರ ಮೇಲೆ ಕಟ್ಟಿದ ಕಟ್ಟಡ ಭದ್ರವಾಗಿಯೂ ಭವ್ಯವಾಗಿಯೂ ನೂರ್ಕಾಲ ಬಾಳುವಂತೆಯೂ ಇರುತ್ತದೆ. ಆದರೆ ಇಂದು ಕನ್ನಡ ಪಠ್ಯಗಳು ಎಷ್ಟು ಪ್ರಸ್ತುತವಾಗಿವೆ ಎಂಬುದರ ಬಗ್ಗೆ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯ, ಸರ್ಕಾರವೂ ಸೇರಿದಂತೆ ಇಡೀ ಕನ್ನಡ ನಾಡು ಪರಾಮರ್ಶೆಮಾಡಬೇಕಾಗಿದೆ. ಮಕ್ಕಳಲ್ಲಿ



ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಯ ಬಗ್ಗೆ ಒಲವು ಅರಿವು-ಅನುಭವ ಬರಬೇಕೆಂದರೆ ಅಂಥ ಆಸಕ್ತಿ ಮೂಡಿಸುವ ಪ್ರೌಢಿಮೆ ಸಾಧಿಸುವ ಆನಂದ ಅನುಭವಿಸುವ ಕನ್ನಡತನ ಹಾಗೂ ಭಾರತೀಯತೆ ಎರಡನ್ನು ಒಳಗೊಂಡಂತಹ ಕನ್ನಡ ಪಠ್ಯಗಳನ್ನು ರೂಪಿಸಬೇಕಾಗಿದೆ.

ಯಾವುದೇ ದೇಶ ತನ್ನ ಸ್ವಾತಂತ್ರ್ಯವನ್ನು ಗಳಿಸಿಕೊಂಡ ತಕ್ಷಣವೇ ತನ್ನ ಸ್ವರಾಜ್ಯವನ್ನು ಕಟ್ಟಿಕೊಳ್ಳಬೇಕಾದರೆ ತನ್ನ ಮಾತೃಭಾಷೆಯಲ್ಲಿ ಮಾತೃಭೂಮಿಯ ಶಿಕ್ಷಣವನ್ನು ಕಲಿಸಬೇಕು ಅದಕ್ಕಾಗಿ ಅಂಥ

ಪಠ್ಯಗಳನ್ನು ರೂಪಿಸಬೇಕು. ಆದರೆ ಭಾರತ ಸ್ವಾತಂತ್ರ್ಯವನ್ನು ಗಳಿಸಿದರೂ ಅದರ ನೇತೃತ್ವವನ್ನು ವಹಿಸಿದವರು ಮೆಕಾಲೆ ಹಾಗೂ ಕಾರ್ಲ್‌ಮಾರ್ಕ್ಸ್ ಪ್ರಣೀತ ಶಿಕ್ಷಣ ಕ್ರಮವನ್ನು ಅನುಸರಿಸಿದ ಕಾರಣ ಇಡೀ ಭಾರತೀಯ ಶಿಕ್ಷಣವ್ಯವಸ್ಥೆ ಮತ್ತು ಭಾರತೀಯ ವಿದ್ಯಾವಂತರು ತಾವು ಹುಟ್ಟಿ ಬೆಳೆದ ದೇಶಿಯ ಪರಿಸರಕ್ಕೆ ಅರಿವಿಗೆ, ಅನುಭವಕ್ಕೆ ಹೊರಗಿನವರಾಗಿದ್ದೇವೆ ಹೆಚ್ಚೆಚ್ಚು ಪಾಶ್ಚಾತ್ಯರಾಗಿದ್ದೇವೆ. ಬಹಳ ಹಿಂದೆಯೇ ಬಂದ 'ಸನಾದಿ ಅಪ್ಪಣ್ಣ' ಸಿನಿಮಾ ಹಾಗೂ ಬಿ.ಪಿ. ಕೈಲಾಸಂ ಬರೆದಿರುವ 'ಟೊಳ್ಳು ಗಟ್ಟಿ' ನಾಟಕ ನಮ್ಮ ಶಿಕ್ಷಣ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲಿವೆ ಕನ್ನಡದ ಸಂಸ್ಕೃತಿ ಚಿಂತಕ ಡಿ. ಆರ್. ನಾಗರಾಜ್ ಅವರು ತಮ್ಮ ಸಂಸ್ಕೃತಿ ಕಥನದಲ್ಲಿ ಮೆಕಾಲೆ ಮಕ್ಕಳು ಹಾಗೂ ಕಾಲ್ ಮಾರ್ಕ್ಸ್ ಮಕ್ಕಳು ಸೃಷ್ಟಿಸಿರುವ ಶೈಕ್ಷಣಿಕ ಅವಾಂತರಗಳು ಅಪಕಲ್ಪನೆಗಳ ಬಗ್ಗೆ ವಿಸ್ತುತವಾಗಿ ತವಾಗಿ ಚರ್ಚಿಸಿದ್ದಾರೆ. ಧರ್ಮಪಾಲರ 'ಸುಂದರತರು' ದೇಸೀಯ ಶಿಕ್ಷಣ ಸ್ವರೂಪದ ಬಗ್ಗೆಯೂ ಉಲ್ಲೇಖಿಸಿದ್ದಾರೆ. ಅಂದರೆ ಸ್ವಾತಂತ್ರೋತ್ತರದಿಂದಲೇ ನಮ್ಮ ಪಠ್ಯಗಳು ಭಾರತೀಯತೆಗೆ ವಿಮುಖವಾಗಿವೆ ಹಾಗಾಗಿ ನಾವಿಂದೂ ರಾಷ್ಟ್ರೀಯತೆ, ಭಾರತೀಯತೆ, ಭಾವೈಕ್ಯತೆ, ಸೋದರತೆ, ಸಮಾನತೆ, ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಸಾಧಿಸಲಾಗದವರಾಗಿದ್ದೇವೆ.

*** ಮೂರು ವರ್ಷಗಳ ಪಠ್ಯ ಮೂರು ದಿನಗಳಲ್ಲಿ ನಿರ್ಧಾರ:**

ನಮ್ಮ ವಿಶ್ವವಿದ್ಯಾನಿಲಯಗಳ ಬಿಓಎಸ್‌ಗೆ ಎಂಥ ಸಂಕಟಗಳಿವೆ ಎಂದರೆ ಪದವಿಯ ಮೂರು ವರ್ಷಗಳು ಓದಲು ಬೇಕಾಗಿರುವ ಪಠ್ಯಗಳನ್ನು ಮೂರೇ ಮೂರು ಸಭೆಗಳಲ್ಲಿ ನಿರ್ಧರಿಸಬೇಕಾದ ಒತ್ತಡದಲ್ಲಿದ್ದಾರೆ. ಇತ್ತೀಚಿಗೆ ಕೆಲವು ವಿಶ್ವವಿದ್ಯಾನಿಲಯಗಳು ಅಧ್ಯಾಪಕರ ವೇದಿಕೆಗಳ ಮೂಲಕ ಪಠ್ಯಪುಸ್ತಕ ರಚನಾ ಕಮ್ಮಟಗಳನ್ನು ನಡೆಸಿ ಪಠ್ಯಪುಸ್ತಕ ರಚಿಸುತ್ತಿರುವುದು ಆಶಾದಾಯಕ ಬೆಳವಣಿಗೆ ಕನ್ನಡ ಪಠ್ಯಗಳು ಪ್ರಸ್ತುತವಾಗಬೇಕೆಂದರೆ ಆ ಪಠ್ಯಪುಸ್ತಕಗಳನ್ನು ಆಸಕ್ತ ತಜ್ಞರು. ಸಾಕಷ್ಟು ಸಮಯ ಚರ್ಚಿಸಿ ತೀರ್ಮಾನಿಸಿ, ವಿದ್ಯಾರ್ಥಿಗಳಿಗೆ ಅಧ್ಯಾಪಕರಿಗೆ ಓದಲು ಕೊಟ್ಟು ಅವರ ಅಭಿಪ್ರಾಯಗಳನ್ನು ಒಳಗೊಂಡು ರಚಿಸಬೇಕು. ವಿದ್ಯಾರ್ಥಿಗಳ ಅಧ್ಯಾಪಕರ ಪಾಲ್ಗೊಳ್ಳುವಿಕೆಯಿಲ್ಲದ ಪಠ್ಯಪುಸ್ತಕಗಳು ಹೇರಿಕೆಗಳಾಗುತ್ತವೆಯೇ ವಿನಃ ಸ್ವೀಕೃತಿಗಳಾಗುವುದಿಲ್ಲ.

*** ಪಾಠ ಮಾಡುವವರನ್ನು ಹೊರಗಿಟ್ಟು ಹುಟ್ಟುವ ಕನ್ನಡ ಪಠ್ಯಗಳು :**

ಪ್ರಾಥಮಿಕ ಶಾಲೆಗಳಿಂದ ಹಿಡಿದು ಪದವಿ ಕಾಲೇಜುಗಳವರೆಗೆ ಪಾಠ ಮಾಡುವ ಶಿಕ್ಷಕರು ದೊಡ್ಡ ಪ್ರಮಾಣದಲ್ಲಿ ಪಠ್ಯಪುಸ್ತಕಗಳ ರಚನೆಯ ಪ್ರಕ್ರಿಯೆಯಲ್ಲಿ ಒಳಗೊಳ್ಳುವ ವ್ಯವಸ್ಥೆ ನಮ್ಮಲ್ಲಿಲ್ಲ, ಇದರಿಂದಾಗಿ ವಿದ್ಯಾರ್ಥಿಗಳ ಹಾಗೂ ಸೆಮಿಸ್ಟರ್ ಪದ್ಧತಿಯ

ಸ್ಥಿತಿಗತಿಯ ಚಿತ್ರಣವಿರುವುದರಿಂದ ಅವರನ್ನು ಒಳಗೊಂಡು ಪಠ್ಯಪುಸ್ತಕಗಳನ್ನು ರೂಪಿಸಿದರೆ ಅವು ಹೆಚ್ಚು ಪ್ರಸ್ತುತವಾಗ ಬಲ್ಲವು.

*** ಸರಿಯಾದ ಸಮಯಕ್ಕೆ ವಿದ್ಯಾರ್ಥಿಗಳ ಕೈ ಸೇರಿದ ಪಠ್ಯಪುಸ್ತಕಗಳು :**

ಇದು ಅವಸರದ ಯುಗ ವ್ಯಾಪಾರೀ ಯುಗ, ನಮ್ಮ ಬಹುತೇಕ ಪಠ್ಯಪುಸ್ತಕಗಳು ವರ್ಷದ ಪ್ರಾರಂಭದಲ್ಲಿ ಮುದ್ರಣಕ್ಕೆ ಹೋದರೆ ಆ ಚತುರ್ಮಾಸ ಮುಗಿದರೂ ವಿದ್ಯಾರ್ಥಿಗಳ ಕೈಸೇರುವುದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಇಂದು ಪಠ್ಯಪುಸ್ತಕಗಳಿಗಿಂತ ಮೊದಲೇ ಗೈಡುಗಳು ಮಾರುಕಟ್ಟೆಗೆ ಬಂದು ಧಾಳಿ ಮಾಡುತ್ತವೆ. ಹಾಗಾಗಿ ಗೈಡ್ ಖರೀದಿಸಿದ ಕನ್ನಡದ ಮಕ್ಕಳು ಕನ್ನಡ ಪಠ್ಯ ಪುಸ್ತಕಗಳನ್ನೇ ಖರೀದಿಸುವುದಿಲ್ಲ ಪ್ರಾಥಮಿಕ ಶಾಲೆಯ ಹಂತದಲ್ಲಿ ಸರ್ಕಾರವೇ ಕನ್ನಡ ಪಠ್ಯಗಳನ್ನು ಉಚಿತವಾಗಿ ನೀಡುತ್ತದೆ. ಆ ಪಠ್ಯಗಳು ಅಂಗಡಿಗಳಲ್ಲಿ ಮಾರಾಟಕ್ಕೆ ಲಭ್ಯವಿರುವುದಿಲ್ಲ ಒಂದು ಮಗು ತನ್ನ ಪುಸ್ತಕ ಕಳೆದುಕೊಂಡರೆ ಮತ್ತೆ ಅದನ್ನು ಪಡೆಯುವುದು ಕಷ್ಟಸಾಧ್ಯವಾಗಿದೆ. ಕನ್ನಡ ಪಠ್ಯಗಳು ಅಪ್ರಸ್ತುತವಾಗಿ ಗೈಡ್‌ಗಳೇ ಪ್ರಸ್ತುತವಾಗುತ್ತಿರುವ ಹೊತ್ತಿನಲ್ಲಿ ನಾವಿದ್ದೇವೆ.

***ಮಾರ್ಕ್ಸೀಕರಣ ಮನೀಕರಣ ಮೆಟರಿಯಲೀಕರಣ ಶಿಕ್ಷಣದ ಗುರಿಯಾಗಿದೆ: ನಮ್ಮ ಕನ್ನಡ ಪಠ್ಯಗಳು ಮಾಹಿತಿಯ ಭಾರದಿಂದ ಮಕ್ಕಳನ್ನು ಬಾಡಿಸುತ್ತಿವೆ:**

ಶಿಕ್ಷಣದ ಗುರಿ ಮಕ್ಕಳ ವ್ಯಕ್ತಿತ್ವದ ಸರ್ವಾಂಗೀಣ ವಿಕಾಸ. ಓದಿರುವುದನ್ನು ತಿಳಿಯಲು ಪರೀಕ್ಷೆ ಇತ್ತು. ಇಂದು ಪರೀಕ್ಷೆಗಾಗಿ ಓದುತ್ತಿದ್ದೇವೆ. ಮಾರ್ಕ್ಸ್ ಅಂದರೆ ಅಂಕಗಳು, ಅದೇ ಮುಖ್ಯವಾಗಿದೆ. ಅದನ್ನು ಮಾರ್ಕ್ಸಿಕರಣ ಎಂದು ಕರೆದಿದ್ದೇನೆ. ಶಿಕ್ಷಣದ ಗುರಿ ಜ್ಞಾನಸಂಪಾದನೆಯಾಗಿತ್ತು. ಇಂದು ಶಿಕ್ಷಣದ ಗುರಿ ಹಣ ಸಂಪಾದನೆಯಾಗಿದೆ. ವಿಜ್ಞಾನ ಮತ್ತು ವಾಣಿಜ್ಯ ತಂತ್ರಜ್ಞಾನ, ವೈದ್ಯಕೀಯ ಶಿಕ್ಷಣದಲ್ಲಿ ಕನ್ನಡ ಪಠ್ಯಗಳೆಂದರೆ ಆಟಕ್ಕುಂಟು ಲೆಕ್ಕಕ್ಕಿಲ್ಲ. ಇಂಥ ದುಃಸ್ಥಿತಿಯಿಂದ ಕನ್ನಡವನ್ನು ಕಾಪಾಡಿದರೆ ಮಾತ್ರ ಆ ಕ್ಷೇತ್ರಗಳಲ್ಲಿ ಕನ್ನಡದ ಉಳಿವು ಹಾಗೂ ಬೆಳವಣಿಗೆ ಸಾಧ್ಯ. ಅವರಿಗೆ ಕನ್ನಡ ಪಠ್ಯಗಳು ಬೇಡವಾಗಿ ಅವರನ್ನು ಮಾನವೀಯತೆಯೇ ಬೇಡವೆನ್ನುವವರನ್ನಾಗಿಸುತ್ತಿವೆ. ಕನ್ನಡ ಪಠ್ಯಗಳೆಂದರೆ ಅವು ಮೌಲ್ಯಗಳು, ಮಾನವೀಯತೆ ಹಾಗೂ ಚೈತನ್ಯಗಳು ಕನ್ನಡದ ಪಠ್ಯಗಳನ್ನು ಅಪ್ರಸ್ತುತಗೊಳಿಸುವುದೆಂದರೆ ಮೌಲ್ಯಗಳನ್ನೂ, ಮಾನವೀಯತೆಯನ್ನೂ ಅನಂತ ಚೈತನ್ಯವನ್ನೂ ಅಪ್ರಸ್ತುತಗೊಳಿಸಿದಂತೆ.

***ಕನ್ನಡ ಪಠ್ಯಗಳೆಂದರೆ ಕೇವಲ ಭಾಷಾವ್ಯವಹಾರದ ಪಠ್ಯಗಳಲ್ಲ: ಭಾಷಾಪ್ರೌಢಿಮೆ ಭಾವ ಶಕ್ತಿ ಹಾಗೂ ಸಾಂಸ್ಕೃತಿಕ ಹಿರಿಮೆಯ ಪಠ್ಯಗಳು:**

ಇಂದು ಕನ್ನಡ ಪಠ್ಯಗಳೆಂದರೆ ಆಡಳಿತ ಕನ್ನಡ, ವಾಣಿಜ್ಯ ಕನ್ನಡ, ಸಂವಹನ ಕನ್ನಡ ಎಂದು ಕೇವಲ ಭಾಷಾವ್ಯವಹಾರದ ಲೋಕೋಪಯೋಗಿ ಭಾಷೆಯೆಂದು ನಾವು ಕಲಿಯುವ ಕಲಿಸುವ ಮಟ್ಟಕ್ಕೆ ಇಳಿದಿದ್ದರಿಂದ ಕನ್ನಡ ಪಠ್ಯಗಳು ಬಡವಾಗುತ್ತಿವೆ. ಕನ್ನಡ ಪಠ್ಯಗಳು ಭಾಷೆಯ ಎಲ್ಲ ಸಾಧ್ಯತೆಗಳನ್ನೂ, ಬುದ್ಧಿಭಾವಗಳ ವಿದ್ಯುದಾಲಿಂಗನದ ಪ್ರತಿಭಾ ಫಲಿತವನ್ನೂ, ಪರಂಪರಾಗತ ಅಳಿಯದೇ ಉಳಿದು ಬಂದ ಮೌಲಿಕ ಜೀವನ ದರ್ಶನದ ಸಂಸ್ಕೃತಿಯನ್ನೂ ಉಣಬಡಿಸುವಂತಿರಬೇಕು. ಕನ್ನಡ ಪಠ್ಯಗಳೆಂದರೆ ಭಾಷಾಪಠ್ಯಗಳೂ



ಹೌದು, ಸಾಹಿತ್ಯ ಪಠ್ಯಗಳೂ ಹೌದು, ಸಾಂಸ್ಕೃತಿಕ ಪಠ್ಯಗಳೂ ಹೌದು ಸ್ಥಳೀಯ ಪಠ್ಯಗಳೂ ಹೌದು ಜಾಗತಿಕ ಪಠ್ಯಗಳೂ ಹೌದು. ಹಾಗಾದಾಗ ಅಂಥ ಪಠ್ಯಗಳು ಎಂದೆಂದಿಗೂ ಪ್ರಸ್ತುತವಾಗುತ್ತವೆ. ಅವು ಕನ್ನಡದ ಪಠ್ಯಗಳಾಗಿ ಮಾತ್ರ ಉಳಿಯದೇ ಬೇರೆ ಭಾಷೆಗಳಿಗೂ ಅನುವಾದಗೊಂಡು ವಿಶ್ವಪಠ್ಯಗಳಾಗಿ ಬೆಳೆಯುತ್ತವೆ. ಅಂಥ ಕನ್ನಡ ಪಠ್ಯಗಳನ್ನು ರೂಪಿಸುವ ಮೂಲಕ ಕನ್ನಡದ ಮಕ್ಕಳು ವಿಶ್ವಮಾನವರಾಗಬೇಕಿದೆ.

**ರಾಷ್ಟ್ರೀಯತೆ, ಮಾನವೀಯತೆ, ಸಾಮರಸ್ಯ ಸಾಧಿಸದ ಕನ್ನಡ ಪಠ್ಯ ಅಪ್ರಸ್ತುತ:**

ಪಠ್ಯಪುಸ್ತಕಗಳ ಹಿಂದೆ ಪಕ್ಷ ರಾಜಕಾರಣದ, ಸೈದ್ಧಾಂತಿಕ ರಾಜಕಾರಣದ ಕರಿನೆರಳು ದಟ್ಟವಾಗಿದೆ. ಸ್ವಾತಂತ್ರ್ಯಗಳಿಸಿದಂದಿನಿಂದಲೇ ಮಾರ್ಕ್ಸವಾದವು ನಮ್ಮ ಶಿಕ್ಷಣ ಕ್ಷೇತ್ರವನ್ನು ಆಳುತ್ತಾ ಬಂದಿದೆ. ನಾವಿಂದು ಬಹುತೇಕರು ಮೆಕಾಲೆ ಮತ್ತು ಕಾರ್ಲ್‌ಮಾರ್ಕ್ಸ್ ಅವರ ದೃಷ್ಟಿಧೋರಣೆಗಳಿಗೆ ಅನುಗುಣವಾಗಿ ರೂಪಿತವಾದ ಶಿಕ್ಷಣದಿಂದ ರೂಪುಗೊಂಡವರು ನಾವು ಮಾಡುವ ಆಲೋಚನೆ-ಕ್ರಿಯೆ-ಪಠ್ಯರಚನೆ ಅದಕ್ಕೆ ಅನುಗುಣವಾಗಿದ್ದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ಅದಕ್ಕೆ ವಿರುದ್ಧವಾಗಿ ಆಲೋಚಿಸುವ ಕ್ರಿಯಿಸುವ- ಪಠ್ಯರಚಿಸುವವರನ್ನು ಕಂಡಾಗ ಆಶ್ಚರ್ಯ, ಉದ್ವೇಗ ಸಂಘರ್ಷಗಳು ಎದುರಾಗುತ್ತವೆ. ಆ ವಾದಗಳನ್ನು ಇಂದು ಎಡಪಂಥ ಹಾಗೂ ಬಲಪಂಥ ಎಂದು ಕಪ್ಪು ಬಿಳುಪು ಸಿನಿಮಾದಂತೆ ವರ್ಗಿಕರಿಸಿ ಹೇಳಲಾಗುತ್ತಿದೆ. ಆದರೆ ಅವು ಅಷ್ಟು ಸರಳವಾಗಿಲ್ಲ ರಾಷ್ಟ್ರವಾದವನ್ನು ಕೋಮುವಾದವೆಂದೂ ಪ್ರಗತಿ ಪರತೆಯನ್ನು ಪ್ರಗತಿ ವಿರೋಧಿಯೆಂದೂ, ಭಾರತೀಕರಣವನ್ನೂ ಕೇಸರೀಕರಣವೆಂದು ಕರೆಯುವ ಮಾರ್ಕ್ಸ್‌ವಾದಿಗಳು, ಮೆಕಾಲೆವಾದಿಗಳು, ಮತ್ತು ಹಿಂದುತ್ವ ವಿರೋದಿಗಳ ವಾದವು ಎಷ್ಟು ಸತ್ಯ ಎಂಬುದರ ಪರಾಮರ್ಶೆ ಮತ್ತು ಆತ್ಮಾವಲೋಕನ ನಡೆಸಬೇಕಾದ ಹೊತ್ತಿನಲ್ಲಿದ್ದೇವೆ. ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ಕನ್ನಡ ಪಠ್ಯವಾಗಲೀ ಅಥವಾ ಬೇರೆ ಯಾವುದೇ ಪಠ್ಯವಾಗಲೀ ಅವು ನಮ್ಮ ಮಕ್ಕಳನ್ನು ಭಾರತೀಯರನ್ನಾಗಿ ಮಾಡಬೇಕೇ ವಿನಃ ಭಾರತೀಯ ಮೈಬಣ್ಣದ ಬ್ರಿಟೀಷರನ್ನಾಗಲೀ ಅಥವಾ ಭಾರತೀಯ ಮೈಬಣ್ಣದ ರಷ್ಯನ್ನರನ್ನಾಗಲಿ ಅಲ್ಲ ಎಂಬುದರ ಬಗ್ಗೆ ಯಾರಲ್ಲೂ ಭಿನ್ನತೆಯಿರಬಾರದು ಆದರೆ ಇತ್ತೀಚೆಗೆ ಕೆಲವು ಕನ್ನಡದ ಬುದ್ಧಿಜೀವಿಗಳಿಗೆ

ರಾಷ್ಟ್ರಭಕ್ತಿ, ರಾಷ್ಟ್ರೀಯತೆ, ಭಾರತೀಯತೆ ಎಂಬ ಪದಗಳೂ ಬೇಡವಾಗುತ್ತಿರುವುದು ಆ ಧೋರಣೆಯನ್ನೇ ಕನ್ನಡ ಪಠ್ಯ ರಚನೆಯಲ್ಲಿ ತುರುಕುತ್ತಿರುವುದು ಕನ್ನಡ ಪಠ್ಯಗಳು ಅಪ್ರಸ್ತುತವಾಗಲು ಕಾರಣವಾಗುತ್ತಿವೆ.

ಉದಾಹರಣೆಗೆ ೨೦೧೪ರ ೮ನೆಯ ತರಗತಿಯ 'ಸಿರಿಗನ್ನಡ' ಪ್ರಥಮಭಾಷಾ ಕನ್ನಡ ಪಠ್ಯ ಪುಸ್ತಕವನ್ನೂ ಅನಂತರ ಬಂದ ಸರ್ಕಾರವು ಪ್ರೊ. ಬರಗೂರು ರಾಮಚಂದ್ರಪ್ಪ ಅವರ ಸರ್ವಾಧ್ಯಕ್ಷತೆಯಲ್ಲಿ ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿಯನ್ನು ರಚಿಸಿ ೮ನೆಯ ತರಗತಿ ಹಿಂದಿನ ಪಠ್ಯವನ್ನೂ ಪರಿಷ್ಕರಿಸಿದೆ.

ಎರಡೂ ಪುಸ್ತಕಗಳಲ್ಲಿ ಬಹುತೇಕ ಪಾಠ ಕವಿತೆಗಳು ಒಂದೇ ಆಗಿದ್ದು ಕೆಲವು ಪಾಠ ಹಾಗೂ ಕವಿತೆಗಳನ್ನೂ ಬದಲಿಸಲಾಗಿದೆ. ಒಂದು ಬಿಜೆಪಿ ಸರ್ಕಾರದ ಅವಧಿಯ ಪಠ್ಯವಾದರೆ ಮತ್ತೊಂದು ಕಾಂಗ್ರೆಸ್ ಸರ್ಕಾರದ ಅವಧಿಯ ಪುಸ್ತಕ. ಎರಡೂ ಕನ್ನಡ ಪಠ್ಯಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿದರೆ ಹೇಗೆ ಭಾರತೀಯತೆ ಹಾಗೂ



ಭಾರತೀಯ ಪರಂಪರೆ ವರ್ಗಸಾಮರಸ್ಯದ-ಆಶಯಗಳನ್ನು ಪಠ್ಯದಿಂದ ಕೈ ಬಿಡಲಾಗಿದೆ. ಎಂಬ ಪಕ್ಷರಾಜಕಾರಣ ರೂಪಿಸಿರುವ ಪಠ್ಯರಾಜಕಾರಣ ಅರ್ಥವಾಗುತ್ತದೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಿ.ಎನ್. ರಾಮಚಂದ್ರ ಅವರ ಅಧ್ಯಕ್ಷತೆಯಲ್ಲಿ ಆಯ್ಕೆಮಾಡಿದ್ದಂಥ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರ ಕರ್ನಾಟಕ ಸಂಸ್ಕೃತಿ ಸಮೀಕ್ಷೆಯಿಂದ ಕ್ರೋಡಿಕರಿಸಿದ “ಸಿಂಧೂ ಸಂಸ್ಕೃತಿ” ಎಂಬ ಪಾಠವನ್ನು ಕೈಬಿಟ್ಟು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಪ್ರೊ. ಬರಗೂರು ರಾಮಚಂದ್ರಪ್ಪ ಅವರ ಸರ್ವಾಧ್ಯಕ್ಷತೆಯ ಸಮಿತಿಯು ಜವಹರಲಾಲ್ ನೆಹರೂ ಅವರು ತಮ್ಮ ಮಗಳು ಇಂದಿರಾಗಾಂಧಿಯವರಿಗೆ ಬರೆದಿರುವ “ಮಗಳಿಗೆ ಬರೆದ ಪತ್ರಗಳು” ಪಾಠವನ್ನು ಸೇರಿಸಲಾಗಿದೆ. ಕೆ.ಎಸ್. ನರಸಿಂಹಸ್ವಾಮಿ ಅವರ “ಭಾರತೀಯತೆ ಕವಿತೆಯನ್ನು” ತೆಗೆದು ಅವರದೇ ಮತ್ತೊಂದು ಕವಿತೆ “ಸಣ್ಣ ಸಂಗತಿ” ಸೇರಿಸಲಾಗಿದೆ ಅಂತೆಯೇ ಕೃಷ್ಣಾನಂದ ಕಾಮತ್ “ಪರಿಸರ ಸಮತೋಲನದ ಬದಲು ನೇಮಿಚಂದ್ರರ “ನೀರು ಕೊಡದ ನಾಡಿನಲ್ಲಿ” ಡಿ.ಕೆ. ರಾಜೇಂದ್ರರ “ರಾಜಕುಮಾರಿಯ ಜಾಣೆ” ಯ ಬದಲು ಎ.ಕೆ. ರಾಮನುಜನ್‌ರ 'ಹೂವಾದ ಹುಡುಗಿ' ನಮ್ಮ ಈ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಎಚ್.ಎಸ್. ವೆಂಕಟೇಶಮೂರ್ತಿ ಅವರ 'ಬಿಲ್ಲ ಹಬ್ಬ' ಎಂಬ ನಾಟಕ ಪಠ್ಯವನ್ನು ತೆಗೆದು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ 'ಯಶೋಧರ' ನಾಟಕವನ್ನು ಇಟ್ಟಿದ್ದಾರೆ. ಕುವೆಂಪು ಅವರ 'ಅಜ್ಜಯ್ಯನ ಅಭ್ಯಂಜನವನ್ನು ತೆಗೆದು ಯು.ಆರ್. ಅನಂತಮೂರ್ತಿಯವರ 'ಅಮ್ಮ' ಎಂಬ ಭಾಗವನ್ನು ಅವರ ಆತ್ಮಕಥೆಯಿಂದ ಆರಿಸಿಟ್ಟಿದ್ದಾರೆ. ಬಿಲ್ಲಹಬ್ಬ ಕೃಷ್ಣನ ಶಕ್ತಿಯನ್ನು ಕಂಸನ ಭಯ ಹಾಗೂ ಕ್ರೌರ್ಯವನ್ನು, ದೇವಕಿಯ ಕರುಳಿನ ಸಂಕಟವನ್ನು ಹೇಳುವ ಎಚ್.ಎಸ್.ವಿ. ಅವರ ಅತ್ಯಂತ ಸಮರ್ಥ ಭಾಷೆಯ, ಸೃಜನಶೀಲ ಪ್ರತಿಭೆಯ, ಮನಮುಟ್ಟುವ ನಾಟಕ ಅದನ್ನು ಪರಿಷ್ಕಾರ ಸಮಿತಿ ಯಾವ ಕಾರಣಕ್ಕೆ ಕೈಬಿಟ್ಟಿದೆ

ಎಂಬುದನ್ನು ತಿಳಿಸಿಲ್ಲ. ಸಿಂಧೂ ಸಂಸ್ಕೃತಿ ಸಿಂಧೂ ಬಯಲಿನ ನಾಗರಿಕತೆ ಬಗ್ಗೆ ತಿಳಿಸಿದರೆ ಮಗಳಿಗೆ ಬರೆದ ಪತ್ರ ನೆಹರೂ ಹಾಗೂ ಇಂದಿರಾಗಾಂಧಿಯವರ ಕೇಂದ್ರಿತವಾಗಿದೆ ಭಾರತೀಯತೆ ಕವನವು ಭಾಷೆ ಬೇರೆ ಭಾವವೊಂದೆ ನಾವು ಭಾರತೀಯರು" "ಕಣ್ಣು ಬೇರೆ ನೋಟವೊಂದೆ ನಾವು ಭಾರತೀಯರು" "ನಮ್ಮ ಗುರಿಯ ಬೆಳಕಿನಡೆಗೆ ನಡೆವ ಧೀರ ಪಯಣದಲ್ಲಿ ಎಲ್ಲೆ ಇರಲಿ ನಾವು ಒಂದು-ನಾವು ಭಾರತೀಯರು" . ಇಂಥ ಕವಿತೆಯನ್ನು ಕನ್ನಡ ಪಠ್ಯದಿಂದ ಕೈ ಬಿಟ್ಟ ಕನ್ನಡ ಪಠ್ಯ ರಾಜಕಾರಣ ಕೊನೆಯಾದಂದು ಕನ್ನಡ ಪಠ್ಯಗಳು ಪ್ರಸ್ತುತವಾಗುತ್ತವೆ.

***ಹಳಗನ್ನಡ ಸಾಹಿತ್ಯ ಶಾಸ್ತ್ರ ಸಾಹಿತ್ಯಗಳಿಂದ ದೂರವಾಗುತ್ತಿರುವ ಕನ್ನಡ ಪಠ್ಯ**

ವರ್ತಮಾನವಾಗುವುದೆಂದರೆ ಗಿಡ ತನ್ನ ಬೇರುಗಳನ್ನೂ ಕಳೆದುಕೊಳ್ಳುವುದಲ್ಲ. ಭವಿಷ್ಯವಾಗುವುದೆಂದರೆ ವರ್ತಮಾನವನ್ನು ಮರೆಯುವುದಲ್ಲ. ವರ್ತಮಾನ ಭೂತವಾಗಬೇಕಿಲ್ಲ ಆದರಿಂದ ಪಾಠ ಕಲಿಯಬೇಕಾಗಿದೆ. ಭವಿಷ್ಯವು ವರ್ತಮಾನವೇ ಆಗಬೇಕಿಲ್ಲ. ಆದರೆ ಅದರಿಂದ ಸಾರವನ್ನು ಹೀರಿ ಮೇಲೇರಬೇಕಾಗಿದೆ. ಆದರೆ ನಮ್ಮ ಕನ್ನಡ ಶಿಕ್ಷಣದಲ್ಲಿ ಇಂದು ಹಳಗನ್ನಡ, ಶಬ್ದಮಣಿದರ್ಪಣ, ಛಂದಸ್ಸು, ಕಾವ್ಯಮೀಮಾಂಸೆ, ಭಾಷಾವಿಜ್ಞಾನ ಗ್ರಂಥ ಸಂಪಾದನೆ, ಅನುವಾದಕಾರ್ಯ, ಸಂಶೋಧನೆ ಇವುಗಳೆಲ್ಲ



ದಿನದಿಂದ ದಿನಕ್ಕೆ ಬೇಡವಾಗುತ್ತಿವೆ. ನಮ್ಮ ಪಠ್ಯಕ್ರಮಗಳಿಂದ ಕಣ್ಮರೆಯಾಗುತ್ತಿವೆ. ಹಳಗನ್ನಡ ಕಾವ್ಯಗಳನ್ನು ಸರಿಯಾಗಿ ಪಾಠ ಮಾಡುವವರು ಸಿಗುತ್ತಿಲ್ಲ. ಶಾಸ್ತ್ರ ಪಾಠ ಮಾಡಬಲ್ಲ ಪಂಡಿತ ಪರಂಪರೆ ಕಣ್ಮರೆಯಾಗುತ್ತಿದೆ ಎಂದು ಅಲ್ಲಲ್ಲಿ ಆಗಾಗ ಮಾತಾಡುವ ಚರ್ಚಿಸುವ ಸಂದರ್ಭಗಳನ್ನು ಕಾಣುತ್ತೇವೆ ಇಂಥ ಸ್ಥಿತಿ ಕನ್ನಡಕ್ಕೆ ಅದಾಗಿಯೇ ಬಂತೋ? ಅಥವಾ ಕನ್ನಡ ಅಧ್ಯಾಪಕರು ನಾವಾಗಿಯೇ ತಂದು ಕೊಂಡಿದ್ದೇವೆಯೋ? ಎಂಬುದರ ಬಗ್ಗೆ ಆತ್ಮ ವಿಮರ್ಶೆ ನಡೆಯ ಬೇಕಾಗಿದೆ

ನಾವು ಕನ್ನಡ ಪಠ್ಯಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ಪ್ರೀತಿಸಿದ್ದಕ್ಕಿಂತ ಹೆಚ್ಚು ಸಂಸ್ಕೃತ, ಹಿಂದಿ, ಪ್ರಾಕೃತ, ಪಾಳಿ ಮೊದಲಾದ ಭಾಷೆ, ಪಠ್ಯ, ಸಾಹಿತ್ಯ ಸಂಸ್ಕೃತಿಗಳನ್ನು ದ್ವೇಷಿಸಿದ್ದೇ ಹೆಚ್ಚು ಹಾಗಾಗಿ ಕನ್ನಡದ ಸ್ಥಿತಿಯೇ ಸಂಸ್ಕೃತದ ಸ್ಥಿತಿ . ಸಂಸ್ಕೃತದ ಸ್ಥಿತಿಯೇ ಕನ್ನಡದ ಸ್ಥಿತಿ.ಶ ಎರಡನ್ನೂ ನುಂಗಿ ನೀರು ಕುಡಿಯುತ್ತಿರುವ ಇಂಗ್ಲೀಷ್ ಪಠ್ಯಗಳು ರಾರಾಜಿಸುತ್ತಿರುವ ಕನ್ನಡನಾಡಿನ ನಮ್ಮ ಸಂದರ್ಭದಲ್ಲಿ ಕನ್ನಡ ಪಠ್ಯಗಳನ್ನೂ ಭೂತದ ಬೇರು ವರ್ತಮಾನದ ಕಾಂಡ ಭವಿಷ್ಯದ ಚಿಗುರುಗಳೊಂದಿಗೆ ಪ್ರಸ್ತುತವೂ ಸಾರ್ವಕಾಲಿಕವೂ. ಆಗುವಂತೆ ಕನ್ನಡ ಪಠ್ಯ ಓದುವ ಮಕ್ಕಳು ಕನ್ನಡದ ಮಕ್ಕಳಾಗಿ ರೂಪುಗೊಳ್ಳುವಂತೆ "ಜೈ ಭಾರತ ಜನನಿಯ ತನುಜಾತೆ ಜಯಹೇ ಭಾರತಮಾತೆ" ಎಂದು ನಿತ್ಯ ಹಾಡುವ ಭಾರತೀಯರಾಗುವಂತೆ ರೂಪಿಸಬೇಕಾಗಿದೆ. ಕನ್ನಡ ಸಾಯುತ್ತಿಲ್ಲ. ಕನ್ನಡವನ್ನು ಸಾಯಿಸುತ್ತಿದ್ದೇವೆ. ನಾವು ಕನ್ನಡಿಗರಾಗಿ, ನಮ್ಮ ನಾಡು ಕನ್ನಡ ನಾಡಾಗಿ ಬದುಕಬೇಕೆಂದರೆ ನಾವು ನಮ್ಮ ಕನ್ನಡ ಪಠ್ಯಗಳನ್ನೂ ಮಕ್ಕಳ ತನುಕರಗುವಂತೆ ಮನಕರಗುವಂತೆ ಸದಾ ಹರಿಯುವಂತೆ ಜಂಗಮನದಿಗಳಾಗುವಂತೆ ಪ್ರಭಾವಿಸುವ ಪಠ್ಯಗಳನ್ನು ಕಟ್ಟಿಕೊಡಬೇಕು.

## ಕನ್ನಡ ಮಾಧ್ಯಮ ಮತ್ತು ಉದ್ಯೋಗ

**- ಆನಂದ್ (ಬನವಾಸಿ ಬಳಗ)**

ಇಂಗ್ಲೀಷ್ ಮಾಧ್ಯಮ ಕಲಿಕೆಯನ್ನು ಬುದ್ಧಿವಂತಿಕೆಯ, ಉದ್ಯೋಗಾವಕಾಶಗಳ ಹೆಬ್ಬಾಗಿಲಿನ . ನಮ್ಮ ಮಕ್ಕಳ ಬದುಕು ಹಸನಾಗಿಸುವ, ಮೃಷ್ಟಾನ್ನದ ಸಾಧನವೆಂದು ಭಾವಿಸುತ್ತಿರುವ ಸಮಾಜದ ಇಂದಿನ ಸ್ಥಿತಿಯಲ್ಲಿ

ಪರಿಸ್ಥಿತಿಯನ್ನು ಅವಲೋಕಿಸುವುದು, ಆಲೋಚಿಸುವುದು ಒಂದು ಸವಾಲೇ ಸರಿ. ಇಂದಿನ ವಿಚಾರ ಸಂಕಿರಣದಲ್ಲಿ ಕನ್ನಡ ಮಾಧ್ಯಮದ ಕಲಿಕೆಯು, ಉದ್ಯೋಗಾವಕಾಶಗಳ ಮೇಲೆ ಉಂಟು ಮಾಡುತ್ತಿರುವ ಪರಿಣಾಮದ ಬಗ್ಗೆ ನನ್ನ ಕೆಲವು ಅನಿಸಿಕೆಗಳನ್ನು ಹಂಚಿಕೊಳ್ಳ ಬಯಸುತ್ತೇನೆ. ಇಂದಿನ ವಿಷಯಕ್ಕೆ ಮೂಲಕಾರಣವೆಂದರೆ ಕನ್ನಡ ಮಾಧ್ಯಮದಲ್ಲಿ ಓದಿದರೆ ಉದ್ಯೋಗ ಅವಕಾಶಗಳು ಕಡಿಮೆ ಎನ್ನುವ ಆತಂಕ. ಹೌದೇ? ರಾಜ್ಯ ಸರ್ಕಾರಿ ನೌಕರರಿಗೆ ಇದು ಹೊಂದುವುದಿಲ್ಲ. ಉಳಿದಂತೆ ಕೇಂದ್ರ ಸರ್ಕಾರ, ಬಹುರಾಷ್ಟ್ರೀಯ ಸಂಸ್ಥೆಗಳು, ಖಾಸಗಿ ಉದ್ದಿಮೆಗಳಲ್ಲಿ ಇಂಗ್ಲೀಷ್ ಗೊತ್ತಿರಲೇಬೇಕೆಂಬ ಪರಿಸ್ಥಿತಿ ಇದೆ ಎನ್ನುವುದು ಕಟುಸತ್ಯ.

ನಮ್ಮ ನಾಡಿನಲ್ಲಿ ತಲಾಂತರದಿಂದ ಉದ್ಯೋಗವೆಂದರೆ ಕೃಷಿ, ಚಮ್ಮಾರಿಕೆ, ಸಿಂಪಿಗ, ಬಡಗಿ, ಕುಂಬಾರಿಕೆ ಮೊದಲಾದ ಗೃಹ ಕೈಗಾರಿಕೆಗಳು ಮತ್ತು ಈ ಉದ್ಯೋಗಗಳೆಲ್ಲಾ ಹೆಚ್ಚಾಗಿ ವಂಶಪಾರಂಪರ್ಯವಾದದ್ದಾಗಿದ್ದವು. ಕುಲಕಸುಬುಗಳ ಯುಗದಲ್ಲಿ ಅರಸಾದರೂ ಆಳಾದರೂ ತಂದೆ ಮಾಡಿದ್ದನ್ನು ಮಕ್ಕಳು, ತಂದೆಯಿಂದಲೇ ಕಲಿತು ಮಾಡುತ್ತಿದ್ದದು ಸಾಮಾನ್ಯ. ಆಧುನಿಕ ಕಲಿಕೆಯ ವ್ಯವಸ್ಥೆ ರೂಪುಗೊಂಡ ನಂತರ ಉದ್ಯೋಗದ ಎಲ್ಲಾ ಅವಕಾಶಗಳೂ ಅದೇ ಶಾಲೆಯ ಕಲಿಕೆಯ ಮಾನದಂಡದ ಅಡಿಯಲ್ಲಿ ಬಂದವು.

ಅಕ್ಷರಕ್ಕೆ ನಮ್ಮ ಸಮಾಜ ತೆರೆದುಕೊಂಡಿದ್ದು ಶತಮಾನದಿಂದ ಈಚೆಗೆ, ಇದರ ಪರಿಣಾಮವಾಗಿ ಶಿಕ್ಷಣಕ್ಕೂ ಉದ್ಯೋಗಕ್ಕೂ ನೆಂಟು ಬೆಸೆಯಿತು. ಪ್ರತಿಯೊಂದು ಉದ್ಯೋಗಕ್ಕೂ ಇಂತಿಷ್ಟು ವಿದ್ಯಾರ್ಹತೆ ಇರಲೇಬೇಕೆನ್ನುವ ಪರಿಸ್ಥಿತಿ ಹುಟ್ಟಿತು. ಕನಿಷ್ಠ ವಿದ್ಯಾರ್ಹತೆ ೧೦ನೆಯ ತರಗತಿ ಎಂಬುದಾಗಿದ್ದು ತೀರಾ ಇತ್ತೀಚಿನವರೆಗೆ ರಾಜ್ಯದಲ್ಲಿ ಹತ್ತರ ಹಂತ ದಾಟುವವರ ಪ್ರತಿಶತ ೬೦ರಷ್ಟು ಇತ್ತು. ಅಂದರೆ ಪ್ರತಿವರ್ಷ ಹತ್ತನೆ ತರಗತಿ ಪರೀಕ್ಷೆ ಎದುರಿಸುವ ಸುಮಾರು ಎಂಟು ಲಕ್ಷ ಮಕ್ಕಳಲ್ಲಿ ಮೂರು ಲಕ್ಷದಷ್ಟು ಮಕ್ಕಳು ನಪಾಸಾಗುತ್ತಾರೆ. ಅಂದರೆ ಅಷ್ಟು ಜನರ ಉದ್ಯೋಗಾವಕಾಶದ ಬಾಗಿಲು ಬಂದ್ ಆದಂತೆ.

ಇದರೊಂದಿಗೆ ಕನ್ನಡ ಮಾಧ್ಯಮದ ಕಲಿಕೆಯ ಬೆಳವಣಿಗೆಯನ್ನೂ ನಾವು ಗಮನಿಸಬೇಕಿದೆ. ಹತ್ತನೆಯ ತರಗತಿವರೆಗೆ ಕನ್ನಡ ಮಾಧ್ಯಮ ಶಾಲೆಗಳಿದ್ದು ಶಿಕ್ಷಣ ಎಲ್ಲರನ್ನೂ ಮುಟ್ಟಲು ಸರ್ಕಾರವು ಹಳ್ಳಿಹಳ್ಳಿಯಲ್ಲಿ ಶಾಲೆಗಳನ್ನು ತೆರೆದು ಉಚಿತವಾಗಿ

ಇಂಗ್ಲೀಷ್ ಮಾಧ್ಯಮದಲ್ಲಿನ ಕಲಿಕೆಗೂ ವ್ಯತ್ಯಾಸ ತಿಳಿಯದೆ ಇರುವುದನ್ನು ಗಮನಿಸಬಹುದು. ವೈಜ್ಞಾನಿಕ ಅಧ್ಯಯನ ತಾಯುಡಿಯಲ್ಲಿ ಕಲಿಕೆ ಅತ್ಯುತ್ತಮ ಎಂದರೇನಾಯಿತು. ಇಂಗ್ಲೀಷಿನ ಪ್ರಾವಿಣ್ಯತೆ ಉದ್ಯೋಗಕ್ಕೆ ಅತ್ಯುತ್ತಮ ಎನ್ನಿಸಿರುವಾಗ ಕನ್ನಡ ಮಾಧ್ಯಮ ಯಾಕಾಗಿ ಬಯಸುತ್ತಾರೆ? ಅಂದರೆ ಮಾರುಕಟ್ಟೆ ಬಯಸುವುದೇ ಬೇರೆ. ಉದ್ಯೋಗಗಳು ಬಯಸುವ ಅರಿವು, ಕೌಶಲ್ಯಗಳ ಕಲಿಕೆ ತಾಯುಡಿ ಮಾಧ್ಯಮದಲ್ಲಿ ಕಲಿತರೆ ಹೆಚ್ಚು ಸಲೀಸಾಗಿ ಮೈಗೂಡಿಸಿಕೊಳ್ಳಬಹುದು ಎನ್ನುವುದಾದರೆ ನಮ್ಮ ಕಲಿಕೆಯು ತಾಯುಡಿ ಮಾಧ್ಯಮದಲ್ಲೇ ಇವೆಲ್ಲಾ ಕಲಿಕೆ ಆಗಬೇಕು. ಮತ್ತು ಇಂಗ್ಲೀಷ್ ಭಾಷೆಯ ಮೇಲೆ ಪ್ರಭುತ್ವ ಸಾಧಿಸುವ ಮಟ್ಟಿಗಿನ ಕಲಿಕೆ ಇರಬೇಕಿದೆ. ತಾನ್ನುಡಿಯ ಅಡಿಪಾಯ ಗಟ್ಟಿ ಇದ್ದರೆ ಇಂಗ್ಲೀಷ್ ಭಾಷೆಯ ಕಲಿಕೆಯೂ ಸುಲಭವಾಗುತ್ತದೆ. ನಮ್ಮ ಕಲಿಕೆಯಲ್ಲೂ ಕೂಡಾ ಎಲ್ಲಾ ಉದ್ಯೋಗಗಳಿಗೂ ಬೇಕಿರುವ ಶಾಖೆಗಳು ಇಲ್ಲ. ಇದರಿಂದಾಗಿ ಅದೆಷ್ಟೋ ಉದ್ಯೋಗಗಳಿಗೆ ಕಲಿಕೆಯೇ ಇಲ್ಲ. ಉದಾಹರಣೆ ನೆಲಕ್ಕೆ ಕಲ್ಲು ಹಾಸುವ ಕೆಲಸ. ಗೋಡೆ ಕಟ್ಟುವ ವಿದ್ಯೆ, ನೆಯ್ಗೆ, ಹೊಲಿಗೆ, ನಲ್ಲಿ ರಿಪೇರಿ, ಅಂಗಡಿ ವ್ಯಾಪಾರ, ಮಾರುಕಟ್ಟೆ ಪ್ರತಿನಿಧಿ.... ಇತ್ಯಾದಿ.

ಇನ್ನು ಸರ್ಕಾರಿ ಕೆಲಸಗಳಿಗೆ ನೇಮಕಾತಿ ಆಗಲು ಕನ್ನಡ ಮಾಧ್ಯಮದಲ್ಲಿನ ಕಲಿಕೆ ತೊಡಕಲ್ಲ ಎನ್ನುವುದರಿಂದ ಕನ್ನಡ ಮಾಧ್ಯಮದ ಕಲಿಕೆ ಅನಿವಾರ್ಯ ಎನ್ನುವ ನಿಯಮ ಮಾಡಿದರೆ ಒಳ್ಳೆಯದು. ಉನ್ನತ ಕಲಿಕೆಯನ್ನು ಕನ್ನಡಕ್ಕೆ ತರಬೇಕಾದ ತುರ್ತು ಅಗತ್ಯ ಇದೆ. ನಮ್ಮ ಕನ್ನಡ ಮಾಧ್ಯಮದ ಕಲಿಕೆಯನ್ನು ಸುಲಭವಾಗಿಸುವ ಮೂಲಕ, ಉನ್ನತ ಕಲಿಕೆ ಕನ್ನಡದಲ್ಲಿ ತರುವ ಮೂಲಕ ಹೆಚ್ಚು ಕನ್ನಡಿಗರನ್ನು ಹೆಚ್ಚು ಕ್ಷಮತೆಯುಳ್ಳವರಾಗಿ ಮಾಡಬಹುದು. ಹೆಚ್ಚು ಉದ್ಯೋಗಕ್ಕೆ ಬೇಕಿರುವ ಕೌಶಲ್ಯಗಳನ್ನು ಉದ್ದಿಮೆಗಳ ಸಹಯೋಗದಲ್ಲಿ ಮಾಡಬಹುದು. ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗಳ ಜೊತೆಗೂಡಿ ಶಿಕ್ಷಣ ಇಲಾಖೆ ಕಲಿಕೆಯ ಎಲ್ಲ ಪಟ್ಯಗಳನ್ನು ಕನ್ನಡಕ್ಕೆ ತರಬೇಕಿದೆ. ನಿಮ್ಮದರ್ಪಣ ಪೀನದರ್ಪಣಗಳು ಉಬ್ಬುಗನ್ನಡಿ, ತಗ್ಗುಗನ್ನಡಿಗಳಾಗಬೇಕಿದೆ. ಹೊಸ ಹೊಸ ಉದ್ಯೋಗಗಳಿಗೆ ಬೇಕಾದ ಕೋರ್ಸ್‌ಗಳು ಬೇಕಿವೆ. ಹೀಗೆ ಕನ್ನಡ ಮಾಧ್ಯಮದ ಕಲಿಕೆಯನ್ನು ಸರಳ ಮಾಡುವುದರ ಜೊತೆಯಲ್ಲಿ, ಬದುಕಿನ ವಿದ್ಯೆಗಳ ಹೊಸ ಹೊಸ ಅಗತ್ಯಗಳನ್ನು ಕಂಡುಕೊಂಡು ಅವುಗಳನ್ನು ಪೂರೈಸುವ ಕೋರ್ಸುಗಳನ್ನು ಆರಂಭಿಸಿ, ಆ ಮೂಲಕ ಉದ್ಯೋಗಕ್ಕೆ ಯೋಗ್ಯ ಅಭ್ಯರ್ಥಿಗಳನ್ನು ಹುಟ್ಟುಹಾಕಬೇಕಿದೆ. ಹತ್ತನೆಯ ತರಗತಿಯ ಮಾನದಂಡ ಎನ್ನುವುದನ್ನು ಕೈಬಿಟ್ಟು ಬದುಕುವ ವಿದ್ಯೆಗಳ ಕೌಶಲ್ಯಗಳನ್ನು ಕಲಿಸುವ ಸಂಸ್ಥೆಗಳನ್ನು ರೂಪಿಸಿ ಜಾರಿಮಾಡಬೇಕಿದೆ. ಸರ್ಕಾರಿ ಹುದ್ದೆಗಳಿಗೆ ಕನ್ನಡ ಮಾಧ್ಯಮದಲ್ಲಿ ಒಂದು ಹಂತದವರೆಗೆ ಓದಿರಲೇಬೇಕೆನ್ನುವ ನಿಯಮದ ಮೂಲಕ ವಿದ್ಯಾರ್ಥಿಗಳನ್ನು ಕನ್ನಡ ಮಾಧ್ಯಮದಲ್ಲಿ ಓದುವಂತೆ ಉತ್ತೇಜಿಸಬೇಕಾಗಿದೆ. ಗ್ರಾಹಕ ಸೇವೆಯಲ್ಲಿ ಕನ್ನಡ ಕಡ್ಡಾಯ ಮಾಡುವ ಕಾಯ್ದೆಯ ಮೂಲಕ ಎಲ್ಲಾ ವ್ಯಾಪಾರವಹಿವಾಟು ಗ್ರಾಹಕ ಸೇವೆಗಳಲ್ಲಿ ಕನ್ನಡ ಕಡ್ಡಾಯ ಮಾಡುವ ಮೂಲಕ ಕನ್ನಡ ಕಲಿತವರಿಗೆ ಮಾತ್ರ ಕೆಲಸ ಸಿಗುವಂತಹ ಸನ್ನಿವೇಶ ಹುಟ್ಟು ಹಾಕಬಹುದಾಗಿದೆ. ಸಾರ್ವಜನಿಕರ ಸಂಪರ್ಕಕ್ಕೆ ಬರುವ ಯಾವುದೇ ಉದ್ಯೋಗವಾಗಲಿ ಅಲ್ಲಿ ಕನ್ನಡ ಕಡ್ಡಾಯ ಎನ್ನುವುದು ಸರ್ಕಾರದ ಕಾಯ್ದೆ ಕಾನೂನು ಮೂಲಕ ಜಾರಿಯಾಗಬೇಕಿದೆ.

ಯಾವುದೇ ಉದ್ಯೋಗವಾಗಲಿ ಕನ್ನಡ ನುಡಿಯಲ್ಲಿನ ಪರಿಣಿತಿ ಮತ್ತು ವಿಷಯಜ್ಞಾನ ಮುಖ್ಯವಾಗಬೇಕು. ಉದ್ದಿಮೆಗಳು ತಮ್ಮ ಅಗತ್ಯಕ್ಕೆ



ತಕ್ಕಂತೆ ನಂತರದಲ್ಲಿ ಇಂಗ್ಲೀಷ್ ಸೇರಿದಂತೆ ಯಾವುದಾದರೂ ಭಾಷೆಯನ್ನೂ ಕಲಿಸಬಹುದು. ಇಂಗ್ಲೀಷ್ ಕಲಿಕೆಗೂ ಇಂಗ್ಲಿಷ್ ಮಾಧ್ಯಮದಲ್ಲಿನ ಕಲಿಕೆಗೂ ಸಲ್ಲದ ನಂಟು ಹಾಕಿ ಇಂದಿನ ಇಂಗ್ಲೀಷ್ ಮಾಧ್ಯಮ ಕೂಟಗಳು ಹುಟ್ಟು ಹಾಕುತ್ತಿರುವ ಮಿಥ್ಯೆಯನ್ನು ಮುರಿದು ಹಾಕಿ, ಕನ್ನಡ ಮಾಧ್ಯಮದಲ್ಲಿ ಕಲಿತರೆ ಜ್ಞಾನಾರ್ಜನೆಗೆ ಒಳ್ಳೆಯದು ಮತ್ತು ಒಳ್ಳೆಯ ಇಂಗ್ಲೀಷನ್ನೂ ಕಲಿಸುತ್ತೇವೆ ಎನ್ನುವ ವ್ಯವಸ್ಥೆ ರೂಪಿಸಬೇಕಾಗಿದೆ. ಬೆಂಗಳೂರು ಕೇಂದ್ರಿತ ಬೆಳವಣಿಗೆಯ ದಟ್ಟಣೆ ಕಡಿಮೆಯಾಗಿ ಜಿಲ್ಲಾ ಮಟ್ಟದಲ್ಲಿ ಅಲ್ಲಿನ ಸಂಪನ್ಮೂಲ ಮತ್ತು ಸಾಮರ್ಥ್ಯಕ್ಕೆ ತಕ್ಕಂತೆ ಬೆಳವಣಿಗೆಯನ್ನು ಯೋಜಿಸಬೇಕಿದೆ. ಆ ಮೂಲಕ ಪ್ರತಿಯೊಬ್ಬರಿಗೂ ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲೇ ಕೆಲಸದ ಅವಕಾಶ ಕಟ್ಟಿಕೊಡಬೇಕಾಗಿದೆ. ಇಷ್ಟಾದರೆ ಕನಿಷ್ಠ ಪಕ್ಷ ಕನ್ನಡ ಮಕ್ಕಳ ಉದ್ಯೋಗದ ಅವಕಾಶಗಳು ಹೆಚ್ಚುತ್ತವೆ.

## **ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮ**

**- ಡಾ ಹೆಚ್.ಎನ್.ಮುರಳೀಧರ**

ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮದ ವಿಚಾರ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಇದೊಂದು ವಿಚಾರವಷ್ಟೇ ಆಗಿರದೆ ಸಮಸ್ಯೆಯೂ ಆಗಿ ಪರಿಣಮಿಸಿದೆ. ಹೀಗಾಗಿ ಮತ್ತೆ ಮತ್ತೆ ಈ ಸಮಸ್ಯೆಯ ಪರಿಹಾರ ಅಥವಾ ಪರಿಹಾರಗಳು ಪ್ರಸ್ತಾವಿತವಾಗುತ್ತವೆ. ಆದರೆ ಆ ಪರಿಹಾರಗಳ ಒಳಗಿನಿಂದಲೇ ಹೊಸಹೊಸ ಸಮಸ್ಯೆಗಳೂ ಹುಟ್ಟಿಕೊಳ್ಳುವಂತಾಗಿದೆ. ಇದನ್ನು ನೋಡಿದಾಗ ಈ ವಿಚಾರವನ್ನು ನಾವು ಪ್ರವೇಶಿಸುವ ವಿಧಾನದಲ್ಲೇ ಬಹುಶಃ ಇದರ ಒಂದು ಸಮಸ್ಯೀಕರಣವೂ ಅಡಕವಾಗಿರುವಂತೆ ತೋರುತ್ತದೆ. ಹೀಗಾಗಿ ಈ ವಿಚಾರದ ವಿವೇಚನೆಯೇ ಬೇರೊಂದು ಪಲ್ಲಟವನ್ನು ಅಪೇಕ್ಷಿಸುತ್ತಿರುವಂತಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ನಾವು ಶಿಕ್ಷಣವನ್ನೂ ಮಾಧ್ಯಮವನ್ನೂ, ಅಂತೆಯೇ ಪ್ರಾಥಮಿಕವೆನ್ನುವುದನ್ನೂ ಮರುಸ್ಪಷ್ಟಿಕರಣಕ್ಕೆ ಒಳಪಡಿಸಬೇಕಾದ ಅಗತ್ಯವಿದೆ. ಬಹುಶಃ ಅದು ಮಾತ್ರವೇ ನಮ್ಮನ್ನು ಸವೆದ ಜಾಡಿನಿಂದ ಹೊರಬರಲು ಅನುವು ಮಾಡಿಕೊಟ್ಟೀತು.

ಇಂದು ಜಗತ್ತಿನಾದ್ಯಂತ ಶಿಕ್ಷಣವೆಂಬ ಗ್ರಹಿಕೆಯ ಕುರಿತಾಗಿಯೇ ಮರುಚಿಂತನೆ ನಡೆದಿದೆ. ಇದು ಶಿಕ್ಷಣವು ಶಾಲೆಗಳಲ್ಲಿ ಸಂಭವಿಸುತ್ತದೆ ಎಂಬ ಗ್ರಹಿಕೆಯ ವಿರುದ್ಧವಾಗಿ ನಡೆದಿರುವ ಚಿಂತನೆಯೂ ಆಗಿದೆ. ಶಿಕ್ಷಣವನ್ನು ಶಾಲೆಯೊಂದಿಗೆ ಸಮೀಕರಿಸುವುದಾದರೆ ಅದನ್ನು ಮನುಷ್ಯ ಜಗತ್ತಿನ ಇನ್ನಿತರ ಎಲ್ಲ ದೈನಂದಿನ ಸಾಧಾರಣ ಚಟುವಟಿಕೆಗಳಿಂದ ಪ್ರತ್ಯೇಕಿಸುವುದೂ ಆಗಿದೆ. ಮುಂದುವರಿದು ಹೇಳುವುದಾದರೆ, ಇಲ್ಲಿ ಅದೊಂದು ಸಂಸ್ಥಾವಿಶಿಷ್ಟವಾದ ಸಂಗತಿಯಾಗಿ ಪರಿಗಣಿತವಾಗುತ್ತದೆ. ಹೀಗಾಗಿ ಶಿಕ್ಷಣದ ಶಾಲೀಕರಣವೆಂದರೆ (schooling) ಅದು ಅನಿವಾರ್ಯವಾಗಿ ಶಿಕ್ಷಣದ ಸಾಂಸ್ಥೀಕರಣವೂ (institutionalization) ಆಗಿದೆ. ಅಥವಾ ಇನ್ನೊಂದು ರೀತಿಯಲ್ಲಿ ನೋಡುವುದಾದರೆ, ಶಿಕ್ಷಣವೆಂಬ ಗ್ರಹಿಕೆಯೇ ಶಾಲೀಕರಣದ ಉತ್ಪನ್ನವಾಗಿದೆ. ಅದು ಶಿಕ್ಷಣವನ್ನು ಶಾಲೆಗಳಲ್ಲಿ ಮಾತ್ರ ದೊರೆಯಬಹುದಾದುದೆಂದು ನಂಬಿಸುತ್ತದೆ. ಇದರೊಂದಿಗೇ, ಶಿಕ್ಷಣವನ್ನು ಕೊಡುವವರು ಮತ್ತು ಪಡೆಯುವವರು ಎಂಬವರ್ಗಗಳೂ ಸೃಷ್ಟಿಯಾಗುತ್ತವೆ. ಇದರ ಪರಿಣಾಮವಾಗಿ ಇಲ್ಲಿ ಶಿಕ್ಷಣವೆಂಬ ಗ್ರಾಹಕ ಸಾಮಗ್ರಿಯೊಂದು ಸಿದ್ಧವಾಗುತ್ತದೆ. ಅಷ್ಟೇ ಅಲ್ಲದೆ ಇದರ ಲಾಭಯುತವಾದ ವಿಲೇವಾರಿಗಾಗಿ ಗ್ರಾಹಕವರ್ಗವನ್ನು ಸೃಷ್ಟಿಸಬೇಕಾದ ಅನಿವಾರ್ಯತೆಯೂ ಬಂದೊದಗುತ್ತದೆ. ಹೀಗಾಗಿ ಶಿಕ್ಷಣವನ್ನು ಗ್ರಾಹಕ ಸಾಮಗ್ರಿಯನ್ನಾಗಿ ಮಾಡುವುದರಲ್ಲಿ ಹಾಗೂ ಅದಕ್ಕಾಗಿ ಮಾರುಕಟ್ಟೆಯನ್ನು ನಿರ್ಮಿಸುವುದರಲ್ಲಿ ಶಾಲೀಕರಣವು ಮುಖ್ಯವಾಗಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತದೆ. ಶಾಲೆಯೆನ್ನುವುದು ಉದ್ಯಮವಾದಾಗ ಅದು ತನ್ನ

ಗ್ರಾಹಕರು ಹೂಡುವ ಬಂಡವಾಳ ಹಾಗೂ ಪಡೆಯುವ ಲಾಭದ ಪರಿಭಾಷೆಗಳಲ್ಲೇ ಶಿಕ್ಷಣದ ಬೆಲೆಯನ್ನು ಕಟ್ಟುವ ಪರಿಸ್ಥಿತಿಯನ್ನೂ ನಿರ್ಮಿಸುತ್ತದೆ. ಇದು ಹಲವು ಬಗೆಯ ಶ್ರೇಣೀಕರಣಗಳಿಗೂ ಎಡೆಮಾಡಿಕೊಡುತ್ತದೆ. ಮಾರುಕಟ್ಟೆಯ ಬೆಲೆಪಟ್ಟಿಗಳಿಗೆ ಅನುಗುಣವಾಗಿ ಒಂದೆಡೆ ಜ್ಞಾನದ ಶ್ರೇಣೀಕರಣವೂ ಏರ್ಪಡುತ್ತದೆ. ಇನ್ನೊಂದೆಡೆ ಇದೇ ಸಾಮಾಜಿಕ ಧ್ರುವೀಕರಣಕ್ಕೂ ಕಾರಣವಾಗುತ್ತದೆ. ಒಟ್ಟಿನಲ್ಲಿ ಶಿಕ್ಷಣದ ಹೆಸರಿನಲ್ಲಿ ಹೊಸದೊಂದು ಬಗೆಯ ವರ್ಣವ್ಯವಸ್ಥೆಯ ನಿರ್ಮಾಣವಾಗುತ್ತದೆ.

ಶಿಕ್ಷಣವೆಂಬ ಸಾಂಸ್ಥಿಕತೆಯ ಇನ್ನೊಂದು ಮುಖ್ಯವಾದ ಲಕ್ಷಣವೆಂದರೆ ವಿದ್ಯಾರ್ಥಿ ನಿರಪೇಕ್ಷವಾದ ಜ್ಞಾನವಸ್ತುವಿನ ಅಸ್ತಿತ್ವವೊಂದನ್ನು ಸ್ಥಾಪಿಸುವುದು ಅಥವಾ ಅಂಥದೊಂದು ಅಸ್ತಿತ್ವದ ಬಗೆಗೆ ನಂಬಿಕೆಯನ್ನು ಹುಟ್ಟಿಸುವುದು. ಹೀಗಾದಾಗ ಈ ಜ್ಞಾನವಸ್ತುವಿನ 'ಉನ್ನತಿಕೆ'ಯೊಂದಿಗೇ ಶಿಕ್ಷಣದ 'ಉನ್ನತಿಕೆ' ಕೂಡ ಸಮೀಕರಣ ಗೊಳ್ಳುತ್ತದೆ. ಇದು ಶಿಕ್ಷಣವೆನ್ನುವುದನ್ನು ವಿಲೇವಾರಿಗೆ ಸುಲಭವಾದ ಒಂದು ಮೊಟ್ಟಣವನ್ನಾಗಿ ರೂಪಿಸುವಲ್ಲಿ ಅತ್ಯಂತ ಯಶಸ್ವಿಯಾಗುತ್ತದೆ. ಅಲ್ಲದೆ ಇದೇ ಇನ್ನೊಂದು ಕಡೆಯಲ್ಲಿ ಶಿಕ್ಷಣದ ಪೊಟ್ಟಣವನ್ನು ಪಡೆಯಲು ತಾವು ಎಂತಹ ದುಬಾರಿಯಾದ ಬೆಲೆಯನ್ನಾದರೂ ತೆರಲು ಸಿದ್ಧರಿರಬೇಕೆಂಬ ಮನಃಸ್ಥಿತಿಗೆ ಪೋಷಕರೆಂಬ ಗ್ರಾಹಕವರ್ಗವನ್ನು ಸಜ್ಜುಗೊಳಿಸುತ್ತದೆ.

ಈ ಹಿನ್ನೆಲೆಯಲ್ಲಿ ಗಮನಿಸಬೇಕಾದ ಇನ್ನೊಂದು ಸತ್ಯವೆಂದರೆ ಸ್ವತಃ ಶಿಕ್ಷಣವೆಂಬ ಸಂಸ್ಥೆಯೇ ತನಗಿಂತ ವಿಸ್ತಾರವಾದ ವಾಣಿಜ್ಯ ಲೋಕವೊಂದರ ಭಾಗವಾಗಿದೆ ಎನ್ನುವುದು. ಇಲ್ಲಿ ಶಿಕ್ಷಣದ ಆಗುಹೋಗುಗಳು ಕೂಡ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ವಾಣಿಜ್ಯ ಜಗತ್ತಿನ ನಿಯಂತ್ರಣಗಳಿಗೆ ಒಳಪಟ್ಟಿರುತ್ತವೆ. ಹೀಗಾಗಿ ಈ ಶಿಕ್ಷಣವೆಂಬ ಸಂಸ್ಥೆ ವಾಣಿಜ್ಯ ಜಗತ್ತಿನ ಅಗತ್ಯಗಳಿಗೆ ಅನುಗುಣವಾಗಿ ತನ್ನ ಅಭ್ಯರ್ಥಿಗಳನ್ನು ರೂಪಿಸಲು ವ್ರತ ತೊಡುತ್ತದೆ. ಸ್ಪರ್ಧೆಯೆನ್ನುವುದು ವಾಣಿಜ್ಯ ಜಗತ್ತಿನ ವಾಸ್ತವವಾಗಿರುವುದರಿಂದ ಶಿಕ್ಷಣದಲ್ಲಿಯೂ ಸ್ಪರ್ಧಾತ್ಮಕರೆಯೆನ್ನುವುದು ಒಂದು ಮೌಲ್ಯವಾಗಿ ಪರಿಣಮಿಸುತ್ತದೆ. ಇವಾನ್ ಇಲಿಚ್ ಗಮನಿಸುವಂತೆ ಈ ಸ್ಪರ್ಧಾತ್ಮಕತೆಯನ್ನು ಕಾಪಾಡಿಕೊಳ್ಳಲು ಶಿಕ್ಷಣವು ಜಗತ್ತನ್ನು ಒಂದು ಅಭಾವಗಳ ತಾಣವಾಗಿ ಚಿತ್ರಿಸುತ್ತದೆ. ಇದು ಕೆಲವೇ ಕೆಲವು 'ಸಮರ್ಥರಿಗೆ ಮಾತ್ರ ಬದುಕುವ ಹಾಗೂ ಹೊಂದುವ ಅವಕಾಶಗಳನ್ನು ಕಲ್ಪಿಸಿಕೊಡಬಲ್ಲ ಜಗತ್ತಾಗಿರುವುದರಿಂದ ಇಂತಹ ಸಾಮರ್ಥ್ಯಗಳನ್ನು ದಯಪಾಲಿಸಲು ತನ್ನ ಸಾಂಸ್ಥಿಕ ಅಸ್ತಿತ್ವ ಅನಿವಾರ್ಯವಾಗಿದೆಯೆಂದು ಪ್ರತಿಪಾದಿಸುತ್ತದೆ. ಹೀಗಾಗಿ ಶಿಕ್ಷಣವೆಂಬ ಸಂಸ್ಥೆಯ ರಚನೆಯಲ್ಲಿಯೇ ಮನುಷ್ಯರನ್ನು ಸಹಬಾಳ್ವೆಯಿಂದ ದೂರವಾಗಿಸುವ, ಬದುಕು- ಬದುಕಗೊಡು ನೀತಿಗೆ ವ್ಯತಿರಿಕ್ತವಾದ ಒಂದು ವಿನ್ಯಾಸವಿರುವುದನ್ನು ಗುರುತಿಸಲಾಗಿದೆ. ಈ ಹಿನ್ನೆಲೆಯಲ್ಲಿ 'ಶಿಕ್ಷಣ'ದ ಬಗೆಗೆ ಗುಸ್ತೆವೊ ಎಸ್ತೆವಾ ಮತ್ತು ಮಧು ಎಸ್. ಪ್ರಕಾಶ್ ಅವರ ಅಭಿಪ್ರಾಯವನ್ನು ವಿಶೇಷವಾಗಿ ಗಮನಿಸಬೇಕಾಗಿದೆ. ಅವರೆನ್ನುತ್ತಾರೆ:

'ಸಮಾನತೆ ಮತ್ತು ನ್ಯಾಯಗಳ ಹೆಸರಿನಲ್ಲಿ ಎಲ್ಲ ಕಡೆಗಳಲ್ಲೂ ಶಿಕ್ಷಣವನ್ನು ಪ್ರೋತ್ಸಾಹಿಸಲಾಗುತ್ತದೆ. ಶಿಕ್ಷಣವೆಂಬುದು ಆಧುನಿಕ ಸಮಾಜದ ದಮನಕಾರಿ  ಅಸಮಾನತೆಗಳಿಗೆಲ್ಲ ಮದ್ದು ಎಂಬಂತೆಯೂ ಅದನ್ನು ಬಿಂಬಿಸಲಾಗುತ್ತದೆ. ಆದರೆ,



ಶಿಕ್ಷಣದ ಪರಿಣಾಮ ಮಾತ್ರ ಅದಕ್ಕೆ ತದ್ವಿರುದ್ಧ. ಪ್ರತಿಯೊಂದು ಸಮಾಜವೂ ಶಿಕ್ಷಣಕ್ಕಾಗಿ ತನ್ನ ಶಕ್ತಿ ಸಂಪನ್ಮೂಲಗಳನ್ನು ಎಷ್ಟೇ ವ್ಯಯಿಸಲಿ, ಆಯಾ ಸಮಾಜದ ಬಹುಸಂಖ್ಯಾತರು ಆ ಪ್ರಕ್ರಿಯೆಯ ತುದಿಯನ್ನು ಮುಟ್ಟುವಲ್ಲಿ ಸೋಲುತ್ತಾರೆ; ಮಾತ್ರವಲ್ಲ, ಅಂಥವರನ್ನು ಈ ಮನುಷ್ಯ ನಿರ್ಮಿತ ಸಮಾಜದಲ್ಲಿ ಅನರ್ಹರೆಂದು ಘೋಷಿಸಲಾಗುತ್ತದೆ. ಸದ್ಯಕ್ಕೆ ಕಾಣಸಿಗುವ ವರ್ಗ ವಿಭಜನೆಗಳಲ್ಲೆಲ್ಲ ಅತ್ಯಂತ ದಮನಕಾರಿಯಾದ ಒಂದು ವಿಭಜನೆಯನ್ನು ಶಿಕ್ಷಣವು ಸೃಷ್ಟಿಸುತ್ತದೆ. ಜನರನ್ನು ಅದು ಎರಡು ಗುಂಪುಗಳಾಗಿ ವಿಂಗಡಿಸುತ್ತದೆ-ಶಿಕ್ಷಿತರು ಮತ್ತು ಅಶಿಕ್ಷಿತರು, ಅಥವಾ ಅಗತ್ಯಕ್ಕಿಂತ ಕಡಿಮೆ ಶಿಕ್ಷಿತರು; ಅಂದರೆ, ಜ್ಞಾನ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಈ ಎರಡು ವರ್ಗಗಳು ಕ್ರಮವಾಗಿ ಜ್ಞಾನ ಬಂಡವಾಳಿಗರು ಮತ್ತು ಜ್ಞಾನದರಿದ್ರರು. ಈ ಹೊಸ ವರ್ಗ ಸಂಘರ್ಷದಲ್ಲಿ ಹೆಚ್ಚು ಜ್ಞಾನವನ್ನು ಬಳಸುವ ಜನವರ್ಗಕ್ಕೆ ಹೆಚ್ಚು ಮೌಲ್ಯ; ಸಮಾಜ ಅವರ ಮೇಲೆ ಸಾಕಷ್ಟು ಹಣ ಹೂಡಿ ಅವರನ್ನು ಮಾನವಸಂಪನ್ಮೂಲವಾಗಿ ರೂಪಿಸಿರುತ್ತದೆಯಾದ್ದರಿಂದ ಉತ್ಪಾದನಾ ಸಾಧನಗಳ ಬಹುಪಾಲೂ ಅವರಿಗಾಗಿಯೇ ಮೀಸಲು. ಅಂಥ ಶಿಕ್ಷಿತರು ಮಾತ್ರವೇ ಈ ಸಮಾಜದಲ್ಲಿ ಎಲ್ಲ ಅನುಕೂಲಗಳಿಗೆ ಹಕ್ಕುದಾರರಾಗುತ್ತಾರೆ; ಉಳಿದ ಬಹುಸಂಖ್ಯಾತರ ಪಾಲಿಗೆ ಉಳಿಯುವುದು ದಾರಿದ್ರ ಮತ್ತು ಅನರ್ಹತೆಗಳು ಮಾತ್ರ.

'ಶಿಕ್ಷಣ ಸಂಸ್ಥೆಗಳು ಕೊಡುವ ಸೇವೆಯಲ್ಲಿ ಅಡಗಿರುವ ಇಂಥ ತಾರತಮ್ಯವನ್ನು ಸದ್ಯಕ್ಕೆ ಬದಿಗಿರಿಸಿ ನೋಡುವುದಾದರೂ ಕೂಡ, ಒಂದು ಅಂಶವಂತೂ ನಿಚ್ಚಳವಾಗಿ ಗೋಚರಿಸುತ್ತದೆ ಎಲ್ಲ ಸಮಾಜಗಳಲ್ಲಿಯೂ ಈ ಶಿಕ್ಷಣದ ಫಲ ಒಂದೇ, ಅದು ಸಮಾಜದ ಬಹುಸಂಖ್ಯಾತರನ್ನು ಅನರ್ಹಗೊಳಿಸುವ ಒಂದು ಮಾರ್ಗ......

"ಆದರೆ, ಕಳೆದ ಇಪ್ಪತ್ತು ವರ್ಷಗಳೀಚೆಗೆ ಸ್ಥಿತಿ ಬದಲಾಗ ತೊಡಗಿದೆ-ಶಿಕ್ಷಣಕ್ಕೆ ವಿರೋಧಿಸುವ ಮತ್ತು ಶಿಕ್ಷಣಾವಕಾಶಗಳಿಗಾಗಿ ಹಕ್ಕೊತ್ತಾಯ ಮಂಡಿಸುವ ಹಂತಗಳೀಗ ಮುಗಿದು, ಶಿಕ್ಷಣದಿಂದ ಬಿಡುಗಡೆ ಪಡೆಯಬಯಸುವ ಹೋರಾಟ ಆರಂಭವಾಗತೊಡಗಿದೆ. ಶಿಕ್ಷಣದಿಂದ ಉದ್ಯೋಗವೂ ಗೌರವವೂ ಮತ್ತು ಸಾಮಾಜಿಕ ಚಲನಶೀಲತೆಯೂ ಲಭ್ಯವಾಗುತ್ತದೆ ಎಂಬ ಭ್ರಮೆಯಿಂದಲೇ ಇದುವರೆಗೂ ಒಡಕು ಮತ್ತು ಸಾಮುದಾಯಿಕ ಬದುಕಿನ ವಿನಾಶ ಇವೆಲ್ಲ ನಡೆದರೂ ಅದನ್ನವರು ಸಹಿಸಿಕೊಳ್ಳುತ್ತಾರೆ. ಆದರೆ ಕ್ರಮಕ್ರಮೇಣ ಜನಸಂಖ್ಯೆಯ ಬಹುಭಾಗಕ್ಕೆ ಅರ್ಥವಾಗತೊಡಗಿದ ಸತ್ಯ ಏನೆಂದರೆ ಯಾರೊಬ್ಬರಿಗೂ ಪದವಿಪ್ರಮಾಣ ಪತ್ರ ದೊರಕಿದ ಮಾತ್ರಕ್ಕೆ ಅದು, ಆಯಾ

ಕ್ಷೇತ್ರದಲ್ಲಿ ಕಸುಬು ಕಲಿತದ್ದಕ್ಕಾಗಲೀ ಅಥವಾ ತಜ್ಞತೆ ಗಳಿಸಿದ್ದಕ್ಕಾಗಲೀ ಪ್ರಮಾಣವಾಗಲಾರದು; ಬದಲು, ಇಂಥ ತರಗತಿಯಲ್ಲಿ ಈತ ಇಷ್ಟು ದಿನ ಕುರ್ಚಿಯ ಮೇಲೆ ಕೂತಿದ್ದ ಎಂಬುದನ್ನು ಮಾತ್ರವೇ ಆ ಪ್ರಮಾಣಪತ್ರವು ದೃಢೀಕರಿಸುತ್ತದೆ, ಅಷ್ಟೇ ಉದ್ಯೋಗ ಭರವಸೆ ಕೊಡುವುದು ಹಾಗಿರಲಿ, ಅದಕ್ಕೆ ವಿರುದ್ಧವಾಗಿ ಈ ಪದವಿಗಳು ಬಹುತೇಕರಿಗೆ ಖಾಯಂ ನೈರಾಶ್ಯಕ್ಕೆ ದಾರಿ ಮಾಡಿಕೊಡುತ್ತವೆ. ಟ್ಯಾಕ್ಸಿ ಚಾಲಕರಾಗಿ ಅಥವಾ ಹೊಟೇಲು ಕೆಲಸಗಾರರಾಗಿ ದುಡಿಯಬೇಕಾಗಿ ಬರುವ ಎಂಜಿನಿಯರುಗಳು ಮತ್ತು ಲಾಯರುಗಳು ಅನುಭವಿಸುವ ಅವಮಾನವೇ ಅದಕ್ಕೆ ಸಾಕ್ಷಿ. ಆದರೆ, ಇನ್ನೊಂದು ದಿಕ್ಕಿನಿಂದ, ಶಿಕ್ಷಿತರ ಇಂಥ ಅವಮಾನವೇ ಅಂಥ ಪದವಿಗಳಿಲ್ಲದವರಿಗೆ ಒಂದು ಬಿಡುಗಡೆಯ ಅನುಕೂಲವಾಗಿ ಕಾಣಿಸುವುದೂ ಇದೆ; ಯಾಕೆಂದರೆ, ಅಂಥ ಸ್ಥಿತಿಯಲ್ಲಿಯೇ ಅವರು ತಮ್ಮಲ್ಲಿರುವ ಬುದ್ಧಿ,



ಕೌಶಲ ಮತ್ತು ಕಸುಬುಗಾರಿಕೆಯನ್ನು ಅರಿತು ತಮ್ಮನ್ನೇ ಪುನರ್‌ಮೌಲೀಕರಿಸಿ ಕೊಳ್ಳುತ್ತಾರೆ."

ಶಿಕ್ಷಣವೆಂಬ ಸಂಸ್ಥೆಯ ಸ್ಥಿತಿಗತಿಗಳು ಹಾಗೂ ಅದರ ಹಲವು ಬಗೆಯ ಪರಿಣಾಮಗಳು ಹೀಗಿರುವಾಗ ಇಂದು ಜಗತ್ತು ಇದಕ್ಕೆ ಪರ್ಯಾಯ ಮಾರ್ಗಗಳ ಬಗೆಗೆ ಯೋಚಿಸತೊಡಗಿದೆ. ಸಾಂಸ್ಥಿಕ ಹಿಡಿತದ ಶಿಕ್ಷಣದ ಬದಲಿಗೆ ಇಂದು 'ಕಲಿಕೆ' ಎಂಬ ಗ್ರಹಿಕೆ ಹೆಚ್ಚು ಹೆಚ್ಚು ಮುನ್ನೆಲೆಗೆ ಬರತೊಡಗಿದೆ. 'ಶಿಕ್ಷಣ' ಹಾಗೂ 'ಕಲಿಕೆ'ಗಳನ್ನು ಪರಸ್ಪರ ವೈದೃಶ್ಯದಲ್ಲಿಟ್ಟು ಯೋಚಿಸಲಾಗುತ್ತಿದೆ. ಶಿಕ್ಷಣ ಎನ್ನುವುದು ಸಂಸ್ಥಾಕೇಂದ್ರಿತ ಅಥವಾ ವ್ಯವಸ್ಥಾಕೇಂದ್ರಿತವಾಗಿದ್ದರೆ ಕಲಿಕೆಯೆಂಬುದು ವ್ಯಕ್ತಿಕೇಂದ್ರಿತ ಅರ್ಥಾತ್ ಮನುಷ್ಯ ಕೇಂದ್ರಿತವಾಗಿದೆ. ಶಿಕ್ಷಣವು ಮನುಷ್ಯನನ್ನು ಸಾಂಸ್ಥಿಕ ಅವಲಂಬನೆಗೆ ದೂಡಿದರೆ ಕಲಿಕೆಯು ಕಲಿವವರನ್ನು ಸ್ವತಂತ್ರದಲ್ಲಿ ಅರ್ಥಾತ್ ತನ್ನದೇ ಆದ ತಂತ್ರದಲ್ಲಿ) ಪರಿಭಾವಿಸುತ್ತದೆ. ಸಾಂಸ್ಥಿಕ ಉತ್ಪನ್ನವಾದ ಶಿಕ್ಷಣವು ವ್ಯಕ್ತಿಯನ್ನು ಸಮುದಾಯದಿಂದ ಪ್ರತ್ಯೇಕಿಸಿದರೆ ಸಾಮಾಜಿಕ ಉತ್ಪನ್ನದ ಭಾಗವಾಗಿರುವ ಕಲಿಕೆ ಸಮುದಾಯದೊಂದಿಗೆ ಕೂಡಿಸುವ ಕೆಲಸವನ್ನು ಮಾಡುತ್ತದೆ. ವ್ಯಕ್ತಿಗೆ ಬಾಹ್ಯವಾದ ಶಿಕ್ಷಣ ಆತನನ್ನು ತರಗತಿಗಳಲ್ಲಿ ಬಂಧಿಸಿದರೆ ಕಲಿಕೆಯು ನಿಸರ್ಗ ಸಹಜ ಸನ್ನಿವೇಶಗಳಲ್ಲಿ ಸಮಗ್ರ ಮನುಷ್ಯನನ್ನು ಸ್ವೀಕರಿಸುತ್ತದೆ. ಶಿಕ್ಷಣವು ನಿರ್ದಿಷ್ಟ ಮಾರ್ಗದರ್ಶನದಲ್ಲಿ ತೊಡಗಿಕೊಳ್ಳುವ ಚಟುವಟಿಕೆಯಾದರೆ ದೈನಂದಿನ ಸಹಜ ಸಾಧಾರಣ ಕ್ರಿಯೆಗಳೆಲ್ಲವೂ ಕಲಿಕೆಗೆ ಪೂರಕವಾಗುತ್ತದೆ. ಎಸ್ತೆವಾ ಮತ್ತು ಪ್ರಕಾಶ್ ಅವರ ಮಾತುಗಳಲ್ಲೇ ಹೇಳುವುದಾದರೆ,

* ಶಿಕ್ಷಣ' ಎಂಬ ನಾಮರೂಪವು ಮೂಲಭೂತವಾಗಿ ಒಂದು ಅವಲಂಬಿತ ಸ್ಥಿತಿ. ಇದರೊಳಗೆ ಇರುವ ಪ್ರತಿಯೊಬ್ಬನೂ ಸರ್ಕಾರಿ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಅವಲಂಬಿಸುವುದು ಅನಿವಾರ್ಯ. ಆದರೆ

'ಕಲಿಯುವುದು' ಎಂಬ ಕ್ರಿಯಾರೂಪವು ತಮ್ಮೊಳಗೇ ಇರುವ ಸಾಮರ್ಥ್ಯವೊಂದರ ಆವಿಷ್ಕಾರ. ಅದು ಪರರೊಂದಿಗೂ ನಿಸರ್ಗದೊಂದಿಗೂ ಇಟ್ಟುಕೊಂಡು ಮುನ್ನಡೆಸುವ ಒಂದು ಕ್ರಿಯಾಶೀಲ ಸಂಬಂಧ. ಅಂದರೆ ಕಲಿಯುವುದೆಂಬ ಪ್ರಕ್ರಿಯೆಯು ವೈಯಕ್ತಿಕವಾದ ಒಂದು ಕೆಲಸ; ಮತ್ತು ಹಾಗೆ ಕಲಿಯುವುದಕ್ಕೂ ಮತ್ತು ಆ ಮೂಲಕ ಬದುಕುವ ಕ್ಷಮತೆಯನ್ನು ವರ್ಧಿಸಿಕೊಳ್ಳುವುದಕ್ಕೂ ಇರುವ ಮಾರ್ಗ. ಒಂದೇ, ಅದು ಜಗತ್ತಿನಿಂದ ಕಲಿಯುವುದು, ಜಗತ್ತಿನ ಬಗ್ಗೆ ಕಲಿಯುವುದಲ್ಲ. ಇದು ಬಹುಸಂಖ್ಯೆಯ ಜನರಿಗೀಗ ಅರಿವಾಗಹತ್ತಿದೆ.

ಶಿಕ್ಷಣ ಮತ್ತು ಕಲಿಕೆಗಳ ನಡುವಣ ವೈದೃಶ್ಯದ ಬಗೆಗೆ ಇಷ್ಟು ದೀರ್ಘವಾಗಿ ವಿವೇಚಿಸಿದುದರ ಉದ್ದೇಶವಿಷ್ಟೆ: ಇಂದು ನಾವು ಶಿಕ್ಷಣ ಮಾಧ್ಯಮದ ಬಗೆಗೆ ಆಲೋಚಿಸುತ್ತಿದ್ದೇವೆ. ಆದರೆ 'ಮಾಧ್ಯಮ' ಎನ್ನುವುದರ ಅಗತ್ಯವಿರುವುದು ಮುಖ್ಯವಾಗಿ ಶಿಕ್ಷಣದ ಸಾಂಸ್ಥಿಕ ರೂಪಕ್ಕೆ ಮಾತ್ರವೇ ಆಗಿದೆ. ಏಕೆಂದರೆ ಮಾಧ್ಯಮದ ಮೂಲಕ ಈ ವ್ಯವಸ್ಥೆ ತನ್ನ ಅಭ್ಯರ್ಥಿಗಳನ್ನು ಸಹಜವಾದ ಕಲಿಕೆಯ ಪರಿಸರದಿಂದ ತನ್ನ ಕಲ್ಪಿತವಾದ ಪರಿಸರಕ್ಕೆ ಪ್ರತ್ಯೇಕಿಸಬಲ್ಲುದಾಗಿದೆ. ಇಷ್ಟರ ಮೇಲೆ ಮಾಧ್ಯಮ ಎಂಬ ಮಾತೇ ಆಯ್ಕೆಯೊಂದರ ಸೂಚನೆಯಾಗಿದೆ. ಆ ಆಯ್ಕೆ ಯಾವಾಗಲೂ ವಾಣಿಜ್ಯದ ಭಾಷೆಯೇ ಆಗಿರುತ್ತದೆ. ಆದರೆ ಕಲಿಕೆಯ ಸಹಜ ಸನ್ನಿವೇಶದಲ್ಲಿ ಮಾಧ್ಯಮವೆಂಬ ಮಾತಿಗೆ ಅರ್ಥವೇ ಇರುವುದಿಲ್ಲ. ಏಕೆಂದರೆ ಅಲ್ಲಿ ನುಡಿಯೆನ್ನುವುದು ಆಯ್ಕೆಯ



ಸಂಗತಿಯಾಗಿರದೆ ಅಸ್ತಿತ್ವವೇ ಆಗಿರುತ್ತದೆ. ಯಾವುದು ಅಸ್ತಿತ್ವವೋ ಅದನ್ನು ಮಾಧ್ಯಮವೆನ್ನಲು ಬರುವುದಿಲ್ಲ. ಬೇರೊಂದು ಉದ್ದೇಶಕ್ಕಾಗಿ ನಿರ್ಮಿಸಲಾದ ಸನ್ನಿವೇಶದಲ್ಲಿ ಮಾತ್ರ ಮಾಧ್ಯಮದ ಜರೂರು ಕಂಡುಬರುತ್ತದೆ. ಹೀಗಾಗಿ ಮಾಧ್ಯಮವೆನ್ನಲಾಗುವುದರ ಅಗತ್ಯವನ್ನು ಹುಟ್ಟು ಹಾಕುವುದು ಕೂಡ ವಾಣಿಜ್ಯ ಸಂಸ್ಕೃತಿಯಿಂದ ಪ್ರಣೀತವಾದ ಶಿಕ್ಷಣವೆಂಬ ಸಾಂಸ್ಥಿಕತೆಯೇ ಆಗಿದೆ.

ಕಲಿಕೆಯನ್ನು ಸಹಜ ಪರಿಸರದಲ್ಲಿ ಸಂಭವಿಸುವ ಸಂಪದೀಕರಣದ ಪ್ರಕ್ರಿಯೆಯಾಗಿ ಮಾನ್ಯ ಮಾಡುವುದರಿಂದ ಮಾತ್ರ ಶಿಕ್ಷಣದ ಸಾಂಸ್ಥಿಕತೆಯನ್ನು ಪಲ್ಲಟಗೊಳಿಸಲು ಸಾಧ್ಯವಾಗುತ್ತದೆ. ಅಲ್ಲದೆ ಇದರಿಂದ ಪರಿಸರದ ನುಡಿ ಅಥವಾ ನುಡಿಗಳ ಮೊತ್ತವನ್ನು ಜ್ಞಾನಮೂಲವಾಗಿ ಗುರುತಿಸಿದಂತೆಯೂ ಆಗುತ್ತದೆ. ನುಡಿಯ ಮೂಲಕವಾಗಿ ತಿಳಿವಳಿಕೆ ಸಂಭವಿಸುತ್ತದೆ ಎನ್ನುವುದು ನುಡಿಯನ್ನೂ ತಿಳಿವಳಿಕೆಯನ್ನೂ ಪರಸ್ಪರ ಬಾಹ್ಯ ಸಂಬಂಧದಲ್ಲಿರಿಸುತ್ತದೆ. ಆದರೆ ನುಡಿಯಲ್ಲಿಯೇ ತಿಳಿವಳಿಕೆ ಸಂಭವಿಸುತ್ತದೆ ಅಥವಾ ನುಡಿಯುವ ಕ್ರಿಯೆಯೇ ತಿಳಿವಳಿಕೆಯಾಗಿದೆ ಎಂದಾದಾಗ ಸಹಜವಾಗಿಯೇ ನುಡಿ ಮತ್ತು ತಿಳಿವಳಿಕೆಗಳು ಆಂತರಿಕತೆಯೊಂದರಲ್ಲಿ ಒಗ್ಗೂಡುತ್ತವೆ. ಇದು ಕಲಿಕೆಯನ್ನು ವ್ಯಕ್ತಿಯ ಆಂತರ್ಯದ ಅಭಿವ್ಯಕ್ತಿಯನ್ನಾಗಿಸುತ್ತದೆ. ಅಲ್ಲದೆ ಇದು ಕಲಿಕೆಯ

ಸನ್ನಿವೇಶವನ್ನು ಕೃತ್ರಿಮತೆಯೊಂದರಲ್ಲಿ ಪ್ರತ್ಯೇಕಿಸದೆ ದೈನಂದಿನ ಸಹಜ ಸನ್ನಿವೇಶಗಳೊಂದಿಗೆ ಕಲಿಕೆಯನ್ನು ಬೆಸೆಯುತ್ತದೆ.

ನುಡಿಯನ್ನು ಸಂವಹನ ಮಾಧ್ಯಮವೆಂದು ವ್ಯಾಖ್ಯಾನಿಸುವುದು ಕೂಡ ವಾಣಿಜ್ಯ ಸಂಸ್ಕೃತಿಯ ಲಕ್ಷಣವೇ ಆಗಿದೆ. ಏಕೆಂದರೆ ಇದು ನುಡಿಯ ಅಸ್ತಿತ್ವಾತ್ಮಕ ನೆಲೆಗಳನ್ನು ನಿರ್ಲಕ್ಷಿಸುತ್ತದೆ. ನುಡಿಯು ಹೊರಗಿನ ಅಭಿವ್ಯಕ್ತಿಯಾಗಿರುವಂತೆ ಒಳಗಿನ ಸ್ವಗತವೂ ಆಗಿದೆ. ಸ್ವಗತದಲ್ಲಿ ಮಾತ್ರವೇ ಅರ್ಥಪರಂಪರೆ ಅನುಭವ ಪರಂಪರೆಯಾಗಿಯೂ ಜೀವಂತವಾಗಲು ಸಾಧ್ಯವಾಗುತ್ತದೆ. ಶಿಕ್ಷಣದ ಸಾಂಸ್ಥಿಕತೆ ಸ್ವಗತಗಳನ್ನು ನಿರ್ಲಕ್ಷಿಸುತ್ತದೆ. ಅಭ್ಯರ್ಥಿಗಳೆಲ್ಲರೂ ಕೇವಲ ತರಗತಿಯ ಉದ್ದೇಶಕ್ಕಾಗಿ ತಮ್ಮದಲ್ಲದ ನುಡಿಯಲ್ಲಿ ಪಾಲ್ಗೊಳ್ಳುವಂತೆ ಮಾಡುವುದೆಂದರೆ ಅದು ನುಡಿಯ ಬಾಹ್ಯಚಹರೆಗಳ ಶಿಕ್ಷಿತ ಆಚರಣೆಯಷ್ಟೇ ಆಗುತ್ತದೆ. ಆದರೆ ಕಲಿಕೆಯೆನ್ನುವುದು ಸಾಮಾಜಿಕ ನುಡಿಯ ಸಂದರ್ಭದಲ್ಲಿ ಮಾತ್ರವೇ ವಾಸ್ತವವಾಗುವಂಥದಾಗಿದೆ. ಜೊತೆಗೆ ಇದರಿಂದಾಗಿ ಕಲಿಕೆಯು ಕೂಡ ಒಂದು ಸಾಮಾಜಿಕ ಉತ್ಪನ್ನವಾಗಿ ಮೈದಳೆಯುವಂತಾಗುತ್ತದೆ. ಹೀಗಾಗಿ ಅದು ಕಲಿಯುವವರನ್ನು ಸಮಾಜದೊಂದಿಗೆ ಬೆಸೆಯುವ ಕೆಲಸವನ್ನೂ ಮಾಡುತ್ತದೆ. ಆದರೆ ಸಾಂಸ್ಥಿಕ ಉತ್ಪನ್ನದ ಶಿಕ್ಷಣದಲ್ಲಿ ಭಾಗಿಗಳಾಗುವವರು ಸಮಾಜದಿಂದ ತಮ್ಮನ್ನು ಪ್ರತ್ಯೇಕಿಸುವ ಚಹರೆಗಳನ್ನಷ್ಟೇ ಹೆಚ್ಚಾಗಿ ರೂಢಿಸಿಕೊಳ್ಳಲು ಸಾಧ್ಯವಾಗುತ್ತದೆ.

ಹೀಗಾಗಿ ಬದುಕಿನ ವಿನ್ಯಾಸವೇ ಕಲಿಕೆಯ ವಿನ್ಯಾಸವೂ ಆಗಿದೆ ಮತ್ತು ಈ ವಿನ್ಯಾಸವು ಸಹಜವಾಗಿಯೇ ಪರಿಸರದ ನುಡಿಯೊಂದಿಗೆ ಬೇರ್ಪಡಿಸಲಾಗದಂತೆ ಹೆಣೆದುಕೊಂಡಿದೆ ಎಂಬುದನ್ನು ಒಂದು ಕಲಿಕೆಯ ನೀತಿಯಾಗಿ ಮಾನ್ಯ ಮಾಡುವುದು ಇಂದಿನ ಸಂದರ್ಭದ ತುರ್ತಾಗಿದೆ. ೨೦೦೫ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಇದನ್ನು ಗುರುತಿಸಿದೆ ಎನ್ನುವುದನ್ನು ನಾವು ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಅದರ ಪ್ಯಾರಾ ೩.೧.೨ರಲ್ಲಿನ ಮಾತುಗಳು ಹೀಗಿವೆ:

'ಮಕ್ಕಳು ಹುಟ್ಟಿನಿಂದ ಸಹಜವಾಗಿ ಬಂದ ಅದ್ಭುತ ಭಾಷಾ ಸಾಮರ್ಥ್ಯ ಮತ್ತು ತನ್ನ ಕುಟುಂಬ ಮತ್ತು ಸುತ್ತಮುತ್ತಲಿನ ಜನಸಮುದಾಯದೊಂದಿಗೆ ಸಂಭಾಷಿಸುವ ಕೌಶಲದೊಂದಿಗೆ ಪೂರ್ಣವಾಗಿ ಅರಳಿದ ಭಾಷಾಸಂವಹನಸಾಮರ್ಥ್ಯದೊಂದಿಗೆ ಶಾಲೆಗೆ ಬಂದಿರುತ್ತಾರೆ. ಸಾವಿರಾರು ಪದಗಳ ಸಾಮರ್ಥ್ಯ ಮಾತ್ರವಲ್ಲದೆ, ಭಾಷೆ ವಿಷಯಕ್ಕೆ ಸಂಬಂಧಿಸಿದ ಸಂಕೀರ್ಣವಾದ ಪದ, ಶಬ್ದ ಮತ್ತು ವಾಕ್ಯಗಳ ರಚನೆಯ ನಿಯಮ, ಸಂರಚನೆ ಮತ್ತು ಬಳಕೆಯ ಬಗ್ಗೆ ಪೂರ್ಣಪ್ರಭುತ್ವ ಪಡೆದೇ ಶಾಲೆಗೆ ಬರುತ್ತಾರೆ. ಮಗುವಿಗೆ ತನ್ನ ಭಾಷೆಯಲ್ಲಿ ಹೇಗೆ ಸರಿಯಾಗಿ ತಿಳಿಯಬೇಕು ಮತ್ತು ಮಾತನಾಡಬೇಕು ಎಂಬುದು ಮಾತ್ರವಲ್ಲದೆ ಎಲ್ಲಿ ಹೇಗೆ ಸೂಕ್ತವಾಗಿ ಬಳಸಬೇಕೆಂಬುದರ ಬಗ್ಗೆಯೂ ಅರಿವಿರುತ್ತದೆ. ಹೀಗಾಗಿ, ಅತ್ಯಗತ್ಯವಾಗಿ ನಾವು ಮಾಡಬೇಕಾದ ಕೆಲಸವೆಂದರೆ ಶಾಲೆಗಳಲ್ಲಿ ಭಾರತೀಯ ಭಾಷೆಗಳಲ್ಲಿ ಸುಸ್ಥಿರವಾಗಿ ಕಲಿಸಲು ಅಗತ್ಯವಾದ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡು ಅದನ್ನು ಬಲಪಡಿಸುವುದು.'

'ಪ್ರಾಥಮಿಕ' ಎನ್ನುವುದನ್ನು ಇಂದು ನಾವು ಸಾಂಸ್ಥಿಕ ಶಿಕ್ಷಣದ ಚೌಕಟ್ಟಿನಲ್ಲಿ ಯೋಚಿಸುತ್ತಿದ್ದೇವೆ. ಆದರೆ ಬದುಕಿನ ಪ್ರಾರಂಭವೇ ಕಲಿಕೆಯ ಪ್ರಾರಂಭವೂ ಆಗಿದೆ ಎಂದು ನಾವು ನಂಬುವುದಾದರೆ ಆಗ ಪ್ರಾಥಮಿಕವೆನ್ನುವಂಥದು ಕೂಡ ತರಗತಿಯ ಪ್ರವೇಶಕ್ಕೆ ಮೊದಲೇ ಸಂಭವಿಸುವಂಥದು ಎಂದು ಕೂಡ ತಿಳಿಯಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ 'ಮನೆಯೇ ಮೊದಲ ಪಾಠಶಾಲೆ' ಎಂಬ ಮಾತು ಭಾವುಕವಾದ ಕವಿವಾಣಿಯಾಗದೆ ಸ್ವಭಾವೋಕ್ತಿಯೂ ಆಗಿದೆ ಎನ್ನಬೇಕಾಗುತ್ತದೆ. ವಿಶ್ವಸಂಸ್ಥೆಯ ಸಾಮಾನ್ಯಸಭೆ ಪ್ರಾದೇಶಿಕ ಜನರ ಹಕ್ಕುಗಳ ಬಗೆಗೆ ಕೈಗೊಂಡ ನಿರ್ಣಯದಲ್ಲಿ (೭೧/೧೭೮) ೨೦೧೯ನೆಯ ವರ್ಷವನ್ನು ಪ್ರಾದೇಶಿಕ ಭಾಷೆಗಳ ಅಂತಾರಾಷ್ಟ್ರೀಯ ವರ್ಷವೆಂದು ಈ ಘೋಷಿಸಿತ್ತು. ಘೋಷಣೆಯ ಕಾರ್ಯಯೋಜನೆಯಲ್ಲಿ ಪ್ರಾದೇಶಿಕ ಭಾಷೆಗಳಿಗೂ ಆಯಾ ಜನಸಮುದಾಯಕ್ಕೂ ಇರುವ ಸಂಬಂಧದ ಕುರಿತಾಗಿ ಗುರುತಿಸಿರುವ ಸಂಗತಿಗಳು ಅತ್ಯಂತ ಮಹತ್ತ್ವದ್ದಾಗಿವೆ. ಅದರ ಕೆಲವು ಭಾಗಗಳು ಇಂತಿವೆ:

* ಭಾಷೆಗಳು ಅಸ್ಮಿತೆ, ಸಾಂಸ್ಕೃತಿಕ ವೈವಿಧ್ಯ, ಆಧ್ಯಾತ್ಮಿಕತೆ, ಸಂವಹನ, ಸಾಮಾಜಿಕ ಏಕತೆ, ಶಿಕ್ಷಣ ಮತ್ತು ಅಭಿವೃದ್ಧಿಯ ಮೇಲೆ ಬೀರುವ ಪರಿಣಾಮಗಳು ಸಂಕೀರ್ಣ ಸ್ವರೂಪದ್ದಾಗಿದ್ದು, ಜನರಿಗೂ ಭೂಮಂಡಲಕ್ಕೂ ಅತ್ಯಂತ ಮಹತ್ತ್ವದ್ದಾಗಿದೆ. ಜನರು ತಮ್ಮ ಭಾಷೆಗಳಲ್ಲಿ ಇತಿಹಾಸ, ಸಂಪ್ರದಾಯಗಳು, ಸ್ಮೃತಿ, ಪಾರಂಪಾರಿಕ ಜ್ಞಾನ, ವಿಶಿಷ್ಟ ಆಲೋಚನಾ ವಿಧಾನಗಳು ಅರ್ಥ ಮತ್ತು ಅಭಿವ್ಯಕ್ತಿಗಳನ್ನು ಅಳವಡಿಸುವುದರಲ್ಲದೆ, ಇನ್ನೂ ಹೆಚ್ಚು ಮುಖ್ಯವಾಗಿ ತಮ್ಮ ಭವಿಷ್ಯವನ್ನೂ ಅವುಗಳ ಮೂಲಕವೇ ರಚಿಸಿಕೊಳ್ಳುತ್ತಾರೆ.

* ಭಾಷೆಯ ಮಾನವ ಹಕ್ಕುಗಳ ಮತ್ತು ಮಾನವ ಸ್ವಾತಂತ್ರ್ಯದ ತಿರುಳಾಗಿದ್ದು ಸುಸ್ಥಿರ ಅಭಿವೃದ್ಧಿ, ಉತ್ತಮ ಆಡಳಿತ ಹಾಗೂ ಶಾಂತಿ-ಸಂಧಾನಗಳು ಸಾಕಾರಗೊಳ್ಳಲು ಅಗತ್ಯವಾಗಿದೆ. ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಆಯ್ಕೆಯ

ಭಾಷೆಯನ್ನು ಬಳಸಲು ಇರುವ ಸ್ವಾತಂತ್ರ್ಯವೆನ್ನುವುದು ಆಲೋಚನಾ ಸ್ವಾತಂತ್ರ್ಯಕ್ಕೆ, ಅಭಿಪ್ರಾಯ ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯಗಳಿಗೆ, ಶಿಕ್ಷಣ ಮಾಹಿತಿ ಮತ್ತು ಉದ್ಯೋಗಗಳನ್ನು ದೊರಕಿಸಿಕೊಳ್ಳುವುದಕ್ಕೆ,



ಹಾಗೂ ಮಾನವ ಹಕ್ಕುಗಳ ಜಾಗತಿಕ ಘೋಷಣೆಯಲ್ಲಿ ಅಳವಟ್ಟಿರುವ ಇನ್ನಿತರ ಮೌಲ್ಯಗಳಿಗೆ ಪೂರ್ವಭಾವಿಯಾದ ಅಗತ್ಯವಾಗಿದೆ.

* ಭಾಷಿಕ ವೈವಿಧ್ಯವು ಸಾಂಸ್ಕೃತಿಕ ಅಸ್ಮಿತೆ ಹಾಗೂ ವೈವಿಧ್ಯಗಳ ಪ್ರಸಾರಕ್ಕೆ ಕೊಡುಗೆಯನ್ನು ನೀಡುವಂಥದ್ದಾಗಿದ್ದು ಸಂಸ್ಕೃತಿಗಳ ನಡುವಣ ಸಂವಾದಕ್ಕೆ ನೆರವಾಗುತ್ತದೆ. ಅಲ್ಲದೆ ಅದು ಸರ್ವರಿಗೂ ಗುಣಮಟ್ಟದ ವಿದ್ಯಾಭ್ಯಾಸವನ್ನು ಸಾಧಿಸುವುದಕ್ಕೆ, ಜ್ಞಾನವನ್ನು ಪರಸ್ಪರ ಹಂಚಿಕೊಳ್ಳುವ ಸಮುದಾಯಗಳನ್ನು ಕಟ್ಟುವುದಕ್ಕೆ ಮತ್ತು ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಗೆ ಅಷ್ಟೇ ಮುಖ್ಯವಾದುದಾಗಿದೆ. ಜೊತೆಗೆ ಇದು ದೇಸೀ ಜ್ಞಾನಪರಂಪರೆಯು ತಲೆಮಾರಿನಿಂದ ತಲೆಮಾರಿಗೆ ರವಾನೆ ಯಾಗುವುದನ್ನು ದೃಢಪಡಿಸುವಂಥದ್ದಾಗಿದ್ದು, ಇದು ಜಾಗತಿಕ ಸವಾಲುಗಳನ್ನು ಎದುರಿಸುವುದಕ್ಕೂ ಅತಿ ಮುಖ್ಯವಾದುದಾಗಿದೆ.

* ದೇಶ ಭಾಷೆಗಳು ಸಾವಿರಾರು ವರ್ಷಗಳಿಂದ ಬೆಳೆದುಕೊಂಡು ಬಂದಿರುವ ಜ್ಞಾನರಾಶಿಗಳ ಸಂಕೀರ್ಣ ವ್ಯವಸ್ಥೆಗಳನ್ನೂ ಪ್ರತಿನಿಧಿಸುತ್ತವೆ. ಅವು ನಿಜಕ್ಕೂ ಸಾಂಸ್ಕೃತಿಕ ಭಂಡಾರಗಳೇ ಆಗಿವೆ. ಅವು ವೈವಿಧ್ಯಗಳ ಕೋಶಾಗಾರಗಳೇ ಆಗಿದ್ದು, ಪರಿಸರವನ್ನು ಅರ್ಥಮಾಡಿಕೊಳ್ಳಲು ಹಾಗೂ ಅವುಗಳನ್ನು ಸ್ಥಳೀಯ ಸಮುದಾಯಗಳು ಮತ್ತು ವಿಶಾಲ ಮಾನವತೆಯ ಸಾರ್ಥಕ ಉಪಯೋಗಕ್ಕೆ ಬಳಸಲು ಅತ್ಯಗತ್ಯವಾದ ಸಂಪನ್ಮೂಲಗಳನ್ನು ಹೊಂದಿವೆ. ಸಾವಿರಾರು ವರ್ಷಗಳಿಂದ ಬೆಳೆದುಬಂದಿರುವ ಸಾಂಸ್ಕೃತಿಕ ವೈಲಕ್ಷಣ್ಯಗಳು, ಸಂಪ್ರದಾಯಗಳು ಹಾಗೂ ಮೌಲ್ಯಗಳನ್ನು ಅವು ಉಳಿಸಿಬೆಳೆಸುತ್ತವೆ.

* ಪ್ರತಿಯೊಂದು ದೇಶಭಾಷೆಯೂ ಜಗತ್ತನ್ನು ಅರ್ಥಮಾಡಿಕೊಳ್ಳಲು ಅಗತ್ಯವಾದ ಒಂದು ಅನನ್ಯವಾದ ರಚನೆ ಹಾಗೂ ಚೌಕಟ್ಟನ್ನು ಪ್ರತಿನಿಧಿಸುತ್ತದೆ. ನಿರ್ದಿಷ್ಟ ಪರಿಸರ, ಆರ್ಥಿಕತೆ ಅಥವಾ ಸಮಾಜೋ ಸಾಂಸ್ಕೃತಿಕ ಸಂಗತಿಗಳಿಗೆ ಸಂಬಂಧಿಸಿದಂತೆ ಅವು ವಿಸ್ತಾರವಾದ ಶಬ್ದ ಸಂಪತ್ತನ್ನು ರಚಿಸಿಕೊಂಡಿವೆ. ಬಹಳಷ್ಟು ಸಲ ಅವು ಜ್ಞಾನವನ್ನು ನಿರ್ದಿಷ್ಟ ಪದಪುಂಜಗಳಲ್ಲಿ ಸೂತ್ರರೂಪದಲ್ಲಿ ಹಿಡಿದಿಟ್ಟುಕೊಂಡಿದ್ದು, ಅವು ಇನ್ನೊಂದು ಭಾಷೆಗೆ ಸುಲಭವಾಗಿ ವರ್ಗಾಯಿಸಲು ಬಾರದಂಥವೂ ಆಗಿದೆ. ಹೀಗಾಗಿ ದೇಶಭಾಷೆಯೊಂದು ಕಳೆದುಹೋಗುವುದೆಂದರೆ ಅದು ಮಾನವೋತ್ಕರ್ಷಕ್ಕಾಗಿ ಹಾಗೂ ಸುಸ್ಥಿರ ಪ್ರಗತಿಗಾಗಿ ಅಭಿವೃದ್ಧಿಪಡಿಸ ಬಹುದಾದ ಜ್ಞಾನದ ತಿರುಳೊಂದು

ಕಳೆದುಹೋಗುವುದೂ ಆಗಿದೆ... ಇದರಿಂದ ಜಗತ್ತನ್ನು ತಿಳಿಯುವ ಹಾಗೂ ಅನುಭವಿಸುವ ಅನನ್ಯವಾದ ವಿಧಾನಗಳು ಶಾಶ್ವತವಾಗಿ ಕಣ್ಮರೆಯಾಗಿಬಿಡಬಹುದಾಗಿದೆ.

ವಾಣಿಜ್ಯ ಸಂಸ್ಕೃತಿಯಿಂದ ಪ್ರಣೀತವಾದ ಮನೋಧರ್ಮ ಭಾಷೆಯನ್ನು ಆಯ್ಕೆಯ ಸಂಗತಿಯೆಂದು ಪರಿಗಣಿಸುತ್ತದೆ. ಯಾವುದೇ ಒಂದು ಭಾಷೆಯ ಸ್ಥಾನದಲ್ಲಿ ಇನ್ನೊಂದನ್ನು ಅಳವಡಿಸಬಹುದೆಂದು ಅದು ತಿಳಿಯುತ್ತದೆ. ಅಲ್ಲದೆ ಭಾಷೆಗಳ ಸಂಖ್ಯೆ ಕಡಮೆಯಿದ್ದಷ್ಟೂ ಅದರಿಂದ ಜಾಗತಿಕ ಸಂವಹನ ಸುಗಮವಾಗುವುದೆಂದು ಭಾವಿಸುತ್ತದೆ. ಆದರೆ ಜಗತ್ತಿನಾದ್ಯಂತ ನಡೆದ ಹಾಗೂ ನಡೆಯುತ್ತಿರುವ ಭಾಷಾವೈಜ್ಞಾನಿಕ ಅಧ್ಯಯನಗಳು ಮತ್ತು ಸಂಶೋಧನೆಗಳು ಈ ಗ್ರಹಿಕೆಯನ್ನು ಅಲ್ಲಗಳೆಯುತ್ತವೆ. ಅವುಗಳ ಪ್ರಕಾರ ಭಾಷೆಯೆನ್ನುವುದು ಆಯ್ಕೆಯ ಸಂಗತಿಯಾಗದೆ ಅಸ್ತಿತ್ವವಾಗಿದೆ. ಒಂದು



ಸಮುದಾಯಕ್ಕೂ ಅದರ ಭಾಷೆಗೂ ಇರುವ ಸಂಬಂಧ ಜೈವಿಕವಾದುದಾಗಿದೆ. ಒಂದು ಭಾಷೆಯ ರಾಚನಿಕ ವಿನ್ಯಾಸದಲ್ಲಿಯೇ ಆ ಭಾಷೆಯನ್ನಾಡುವ ಸಮುದಾಯದ ಗ್ರಹಿಕೆ ಮತ್ತು ಆಲೋಚನೆಯ ಕ್ರಮಗಳು ಹಾಗೂ ತಿಳಿವಳಿಕೆಯ ವಿನ್ಯಾಸಗಳು ಅಂತರ್ಗತವಾಗಿವೆ. ಈ ದೃಷ್ಟಿಯಿಂದ ಪ್ರತಿಯೊಂದು ಭಾಷೆಯೂ ಆಯಾ ಭಾಷಿಕ ಸಮುದಾಯದ ಪಾರಂಪಾರಿಕ ಸಾಂಸ್ಕೃತಿಕ ಬಂಡವಾಳವಾಗಿದೆ. ಆದ್ದರಿಂದ ಈ ಸಾಂಸ್ಕೃತಿಕ ಬಂಡವಾಳದ ವಿಸ್ಮೃತಿಯೆನ್ನುವುದು ಭಾಷಿಕ ಸಮುದಾಯವೊಂದು ತನಗೆ ತಾನೇ ಮಾಡಿಕೊಳ್ಳುವ ಅತಿ ದೊಡ್ಡ ನಷ್ಟವಾಗಿದೆ, ಈ ಹಿನ್ನೆಲೆಯಲ್ಲಿ ಪ್ರೊ. ಜಿ.ಎನ್. ದೇವಿ ಅವರ ಈ ಮಾತುಗಳು ಅತ್ಯಂತ ಗಮನಾರ್ಹವಾಗುತ್ತವೆ:

'ಭಾಷಿಕ ಸಮುದಾಯವೊಂದು ಯಾವುದೋ ಬೇರೊಂದು ಭಾಷೆಯಲ್ಲಿ ಶಿಕ್ಷಣವನ್ನು ಪಡೆಯುವುದರಲ್ಲಿಯೇ ತನ್ನ ಉಳಿಗಾಲದ ದಾರಿಯಿದೆಯೆಂದು ನಂಬುವಂತಾದರೆ, ಅದು ಹೊಸ ಭಾಷಿಕ ಸನ್ನಿವೇಶಕ್ಕೆ ಹೊಂದಿಕೊಳ್ಳಲು ನಿರ್ಧರಿಸುತ್ತದೆ. ಆಗ ನಾವು ಅಗತ್ಯವಾಗಿ ಪರಿಶೀಲಿಸಬೇಕಾದ ಸಂಗತಿಯೆಂದರೆ, ಸಮಕಾಲೀನ ಜಗತ್ತಿನ ಮೇಲೆ ಹಿಡಿತವನ್ನು ಸಾಧಿಸಿರುವ ಅಭಿವೃದ್ಧಿಯ ಸಂಕಥನಗಳಲ್ಲಿ ಪ್ರಪಂಚದ ಭಾಷಾಪರಂಪರೆಯು ಕ್ಷೀಣಿಸುವಂತೆ ಮಾಡುವ ಅಥವಾ ಒಂದು ಬಗೆಯ ಭಾಷಾಹತ್ಯೆಯನ್ನು ಒತ್ತಾಯಿಸುವ ಏನಾದರೊಂದು ಅಂಶ ಅಂತರ್ಗತವಾಗಿದೆಯೇ ಎನ್ನುವುದು. ಅದು ಒಂದು ವೇಳೆ ಹಾಗೇನಾದರೂ ಇದ್ದರೆ, ಮಾನವಭಾಷೆಗಳ ಭವಿಷ್ಯವೆನ್ನುವುದು ಭಯಾನಕವಾಗಿದೆ.೪

ಮುಂದುವರಿದು, ಪ್ರೊ. ದೇವಿಯವರೇ ಮತ್ತೆ ಹೇಳುತ್ತಾರೆ:

'ಭಾಷಿಕ ಸಂರಕ್ಷಣೆ ಎನ್ನುವುದು ಒಂದು ಭಾಷಿಕ ಸಮುದಾಯದ ಲೋಕದೃಷ್ಟಿಯನ್ನು ಗೌರವಿಸುವುದರಲ್ಲಿದೆ. ಅಂತಹ ಸಮುದಾಯವೊಂದು ಮಾನವತೆಯ ಭವಿಷ್ಯವಿರುವುದು ನಾವು ಭೂಮಿಗೆ ಸೇರಿದವರಾಗುವುದರಲ್ಲಿಯೇ ಹೊರತು ಭೂಮಿ ನಮಗೆ ಸೇರಿದ್ದೆಂದು ಅದರ ಮೇಲೆ ಆಕ್ರಮಣ ಮಾಡುವುದರಲ್ಲಿ ಅಲ್ಲ ಎಂದು ನಂಬಿದ್ದರೆ, ಆಗ ನಾವು ಆ ಸಮುದಾಯವನ್ನು ಅಭಿವೃದ್ಧಿಯ ಹೆಸರಿನಲ್ಲಿ ಭೂಮಿಯ ಸಂಪನ್ಮೂಲಗಳನ್ನು ಹಾಳುಗೆಡಹುವ ರಾಜಕೀಯ ಕಲ್ಪನೆಯೊಂದರ ಭಾಗವಾಗಿ ಮಾಡಿದರೆ, ಆ ಸಮುದಾಯದ ಭಾಷೆಯನ್ನು ಸಂರಕ್ಷಿಸಲು ಸಾಧ್ಯವಾಗಲಾರದು.

ಭಾಷಿಕ ಹಕ್ಕುಗಳ ಮೇಲಿನ ಜಾಗತಿಕ ಸಮಾವೇಶ ೧೯೯೬ರ ಬಾರ್ಸಿಲೋನಾ ಘೋಷಣೆಯ ಎರಡನೆಯ ಭಾಗದ ೨೩ನೆಯ ಪರಿಚ್ಛೇದದಲ್ಲಿ (೧-೩) ವ್ಯಕ್ತಪಡಿಸಿರುವ ನಿಲುವನ್ನೂ ಇದೇ ಹಿನ್ನೆಲೆಯಲ್ಲಿಯೇ ಗಮನಿಸಬಹುದು.

'ಶಿಕ್ಷಣವು ಯಾವ ಭೂಪ್ರದೇಶದಲ್ಲಿ ಅದನ್ನು ನೀಡಲಾಗುತ್ತಿದೆಯೋ ಅದರ ಭಾಷಿಕ ಸಮುದಾಯದ ಭಾಷಿಕ ಹಾಗೂ ಸಾಂಸ್ಕೃತಿಕ ಸ್ವಾಭಿವ್ಯಕ್ತಿಯ ಸಾಮರ್ಥ್ಯವನ್ನು ಪೋಷಿಸುವಂತಿರಬೇಕು; ಆ ಭಾಷೆಯ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಸಹಾಯಕವಾಗಬೇಕು; ಹಾಗೆಯೇ ಜಗತ್ತಿನಾದ್ಯಂತ ಭಾಷಿಕ ಮತ್ತು ಸಾಂಸ್ಕೃತಿಕ ವೈವಿಧ್ಯಗಳಿಗೆ ಹಾಗೂ ವಿವಿಧ ಭಾಷಿಕ ಸಮುದಾಯಗಳ ನಡುವಿನ ಸಾಮರಸ್ಯದ ಸಂಬಂಧಗಳಿಗೆ ನೆರವಾಗಬೇಕು.೬



ಹಾಗೆಯೇ ಪರಿಚ್ಛೇದ ೨೯ರಲ್ಲಿ ಪ್ರತಿಯೊಬ್ಬರಿಗೂ ತಾನು ವಾಸಿಸುವ ಪ್ರದೇಶಕ್ಕೆ ನಿರ್ದಿಷ್ಟವಾದ ಭಾಷೆಯಲ್ಲಿ ಶಿಕ್ಷಣವನ್ನು ಪಡೆಯುವ ಅಧಿಕಾರವಿದೆ' ಎಂದು ಹೇಳಲಾಗಿದೆ. ಈ ಮೇಲಿನವು ಕೇವಲ ಸಾಂದರ್ಭಿಕವಾದ ಪ್ರಾತಿನಿಧಿಕ ಉಲ್ಲೇಖಗಳಾಗಿದ್ದು, ವಿಶ್ವಸಂಸ್ಥೆಯು ಪ್ರಕಟಿಸಿರುವ ಇನ್ನೂ ಹಲವಾರು ಮಾನವ ಹಕ್ಕುಗಳ ಘೋಷಣೆ, ಒಪ್ಪಂದ ಹಾಗೂ ಒಡಂಬಡಿಕೆಗಳಲ್ಲಿ ವ್ಯಕ್ತಿಯು ತನ್ನ ನುಡಿಯಲ್ಲಿ ಕಲಿಯುವ ಹಕ್ಕನ್ನು ಮಾನವಹಕ್ಕುಗಳ ಹಾಗೂ ಸುಸ್ಥಿರ ಅಭಿವೃದ್ಧಿಯ ಭಾಗವಾಗಿ ಪರಿಗಣಿಸಿರುವುದನ್ನು ಕಾಣಬಹುದಾಗಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ನಾವು ಗಮನಿಸಬೇಕಾದ ಸಂಗತಿಯೆಂದರೆ ಇಂದು ಭಾಷಾಮಾಧ್ಯಮದ ಪ್ರಶ್ನೆ ಕೇವಲ ಮಾಧ್ಯಮದ ಪ್ರಶ್ನೆಯಾಗಿ ಉಳಿದಿಲ್ಲ ಎನ್ನುವುದೇ ಆಗಿದೆ. ಅದು ಭಾಷೆಯಿಂದ ಅಥವಾ ಮಾಧ್ಯಮದಿಂದ ಪ್ರಾರಂಭವಾಗುತ್ತದೆ. ಆದರೆ ಅದು ಸಮಗ್ರತೆಯಲ್ಲಿ ಸಮಾಜ ರಚನೆಯೊಂದನ್ನು ಕುರಿತ ಪ್ರಶ್ನೆಯಾಗುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ, ಇಂದು ಇಂಗ್ಲಿಷ್ ಮಾಧ್ಯಮವನ್ನು ಕುರಿತು ಪ್ರಶ್ನೆಯೂ ಶೈಕ್ಷಣಿಕ ಪ್ರಶ್ನೆಯಾಗಿ ಉಳಿದಿಲ್ಲ. ಅದನ್ನೊಂದು ಸಾಮಾಜಿಕ ಪ್ರಶ್ನೆಯಾಗಿಯೇ ಎದುರುಗೊಳ್ಳಬೇಕಾಗಿದೆ. ಏಕೆಂದರೆ ಇಂಗ್ಲಿಷ್ ಮಾಧ್ಯಮ ಶಾಲೆಗಳ ಹೆಸರಿನಲ್ಲಿ ಬೇರೊಂದು ಬಗೆಯ ಸಾಮಾಜಿಕತೆಯನ್ನು ಪ್ರತಿಷ್ಠಾಪಿಸಲಾಗುತ್ತಿದೆ. ಶಿಕ್ಷಣ ಮಾಧ್ಯಮವೆಂಬ

ಹೆಸರಿನಲ್ಲಿ ಅದು ಪ್ರವೇಶವನ್ನು ಪಡೆದುಕೊಂಡರೂ ವಾಸ್ತವಿಕತೆಯಲ್ಲಿ ಅದೊಂದು ವ್ಯವಹಾರದ ಮಾಧ್ಯಮವಾಗಿಯೇ ಪರಿಣಮಿಸಿದ್ದು ದೇಶಭಾಷೆಗಳನ್ನು ಸ್ಥಳೀಯತೆಯನ್ನೂ ಎರಡನೆಯ ದರ್ಜೆಯದಾಗಿ ಕಾಣುವ ಜೀವನಪದ್ಧತಿ ಹಾಗೂ ಮನೋಧರ್ಮಗಳನ್ನು ರೂಪಿಸುತ್ತಿದೆ. ಈ ನವಸಾಮಾಜಿಕತೆ ತರಗತಿ-ಶಾಲೆಗಳ ಹೊರಗೂ ವಿಸ್ತರಿಸಿಕೊಂಡಿದ್ದು ಸಾಮಾಜಿಕ ಸಂಬಂಧಗಳು ಮತ್ತು ಸನ್ನಿವೇಶಗಳಲ್ಲಿ ಬೇರೊಂದು ಬಗೆಯ ಪ್ರತ್ಯೇಕತೆಯನ್ನೂ ಶ್ರೇಣೀಕರಣವನ್ನೂ ಹುಟ್ಟುಹಾಕಿದೆ. ಇನ್ನೊಂದು ಕಡೆ ಇಂಗ್ಲಿಷ್ ಮಾಧ್ಯಮವೆಂದು ಕರೆಸಿಕೊಳ್ಳಲಾಗುತ್ತಿರುವುದು ಅಪವಿತ್ರ ಆರ್ಥಿಕತೆಯೊಂದಿಗೂ ನಂಟನ್ನು ಪಡೆದುಕೊಂಡಿದೆ. ಹೂಡುವ ಬಂಡವಾಳ ಹಾಗೂ ಹಿಂಪಡೆಯುವ ಲಾಭದ ಮಾನದಂಡಗಳಲ್ಲಿ ಇಂಗ್ಲಿಷ್ ಎಂಬ ಷೇರುಪೇಟೆಯನ್ನು ಸೃಷ್ಟಿಸಿರುವ ಶೈಕ್ಷಣಿಕ ಸಾಂಸ್ಥಿಕತೆ ಪ್ರಜಾಸತ್ತಾತ್ಮಕ ಹಾಗೂ ಸಂವಿಧಾನಾತ್ಮಕ ಮೌಲ್ಯಗಳಿಗೆ ತಂದೊಡ್ಡುತ್ತಿರುವ ಅಪಾಯಗಳನ್ನು ಬಹುಶಃ ನಾವು ಹೆಚ್ಚು ಗಂಭೀರವಾಗಿ ಪರಿಗಣಿಸುತ್ತಿಲ್ಲವೆಂದೇ ತೋರುತ್ತದೆ. 'ನಮ್ಮೊಳಗೆ ಹಾಸುಹೊಕ್ಕಾಗಿ ಬಿಟ್ಟಿರುವ ಪಾಶ್ಚಾತ್ಯ ಶಿಕ್ಷಣ ಪದ್ಧತಿ, ಸಂಸ್ಕೃತಿ ಹಾಗೂ ಜೀವನವಿಧಾನಗಳ ದಬ್ಬಾಳಿಕೆಯಿಂದ ನಮ್ಮನ್ನು ನಾವು ಬಿಡಿಸಿಕೊಂಡಾಗ ಮಾತ್ರ ನಿಜವಾದ ಸ್ವಾತಂತ್ರ್ಯ ಬರುವಂತಾಗುತ್ತದೆ...' ಎಂದು ನುಡಿದ ಗಾಂಧೀಜಿಯವರ ಮಾತುಗಳನ್ನು ಈ ಸಂದರ್ಭದಲ್ಲಿ ನೆನೆಯಬೇಕಾಗಿದೆ. ಸಾಮಾಜಿಕ ಅಸಮಾನತೆ ಹಾಗೂ ಅಪವಿತ್ರ ಆರ್ಥಿಕತೆಗಳೊಂದಿಗೆ ಇಂಗ್ಲಿಷ್ ಮಾಧ್ಯಮವು ಹೊಂದಿರುವ ನಂಟನ್ನು ಪರಿಗಣಿಸದೆ ಕೇವಲ ಅದನ್ನೊಂದು ಶೈಕ್ಷಣಿಕ ಸಂಗತಿಯಾಗಿ ಚರ್ಚಿಸುವುದು ಬಹುಶಃ ನಾವು ದೇಶಭಾಷೆಗಳಿಗೆ ಮಾಡುತ್ತಿರುವ ಅನ್ಯಾಯವೂ ಆಗಿದೆ.

ಇದರ ಮುಂದುವರಿಕೆಯಾಗಿ ಇನ್ನೊಂದು ಸಂಗತಿಯನ್ನೂ ಹೇಳಬೇಕಾಗಿದೆ. ಭಾಷಾ ಮಾಧ್ಯಮದ ಪ್ರಶ್ನೆ ನ್ಯಾಯಾಲಯದ ಮೆಟ್ಟಿಲನ್ನೇರಿದಾಗ ನ್ಯಾಯಾಲಯವು ಅದನ್ನೊಂದು ಆಯ್ಕೆಯ ಸಂಗತಿಯಾಗಿ ಪರಿಗಣಿಸಿದೆ. ಅಲ್ಲದೆ ಈ ಆಯ್ಕೆಯೆನ್ನುವುದು

ಪೋಷಕರ ಹಕ್ಕೆಂದೂ ಅಭಿಪ್ರಾಯಪಟ್ಟಿದೆ. ಇದು ಬಹುಶಃ ಭಾಷಾ ಮಾಧ್ಯಮದ ಪ್ರಶ್ನೆಯನ್ನು ಇನ್ನಿತರ ಎಲ್ಲ ಸಂಗತಿಗಳಿಂದ ಬೇರ್ಪಡಿಸಿ ಅದನ್ನೊಂದು ಶುದ್ಧವಾದ ಶೈಕ್ಷಣಿಕ ಪ್ರಶ್ನೆಯೆಂದು ಪರಿಗಣಿಸಿದುದರ ಫಲವಾಗಿದೆ. ಆದರೆ ಇಂಗ್ಲಿಷ್ ಮಾಧ್ಯಮವೆನ್ನುವುದು ಒಂದು ಶೈಕ್ಷಣಿಕ ಅಧ್ಯಯನದ ಸಾಧ್ಯತೆಯಾಗಿ ನಮ್ಮ ಮುಂದಿಲ್ಲ ಎನ್ನುವುದೇ ಸರ್ವವಿದಿತವಾದ ವಾಸ್ತವ ಸಂಗತಿಯಾಗಿದೆ. ಇಂದು ಇಂಗ್ಲಿಷ್ ಮಾಧ್ಯಮದ ಪ್ರಸಾರವು ಮಾರುಕಟ್ಟೆ ಸಂಸ್ಕೃತಿಯ ಎಲ್ಲ ಚಹರೆಗಳನ್ನು ತನ್ನೊಳಗೆ ಮೈಗೂಡಿಸಿಕೊಂಡಿದೆ. ಮಾರುಕಟ್ಟೆಯು ಹೆಚ್ಚೆಂದರೆ ಗ್ರಾಹಕನಿಗೆ ಎರಡು ಉತ್ಪನ್ನಗಳ ನಡುವಿನ ಆಯ್ಕೆಯನ್ನು ನೀಡಬಹುದೇ ಹೊರತು ಕೊಳ್ಳುವ ಅಥವಾ ಕೊಳ್ಳದಿರುವುದರ ನಡುವಿನ ಆಯ್ಕೆಯನ್ನು ನೀಡುವುದಿಲ್ಲ. ಉತ್ಪಾದನೆಯ ಅನಿವಾರ್ಯತೆಯ ಮಿಥ್ಯೆಯನ್ನು ಸೃಷ್ಟಿಸುವುದೇ ಮಾರುಕಟ್ಟೆಯ ತಂತ್ರವಾಗಿದೆ. ಇದಕ್ಕಾಗಿ ಅದು ತನ್ನ ಗ್ರಾಹಕವರ್ಗವು ಸಾಮಾಜಿಕ ವಿಸ್ಮೃತಿಯೊಂದರಲ್ಲಿ ಸದಾ ಸಿಲುಕಿಕೊಂಡಿರುವಂತೆ ನೋಡಿಕೊಳ್ಳುತ್ತದೆ. ಈ ದೃಷ್ಟಿಯಿಂದ ಮಾರುಕಟ್ಟೆಯಲ್ಲಿ ಒತ್ತಾಯಗಳು ಹಾಗೂ ಒತ್ತಡಗಳಿರುತ್ತವೆಯೇ ಹೊರತು ಆಯ್ಕೆಗಳಿರುವುದಿಲ್ಲ. ಹೀಗಾಗಿ ಇಂಗ್ಲಿಷ್ ಮಾಧ್ಯಮದ ಪ್ರಶ್ನೆಯು ಶೈಕ್ಷಣಿಕ ಪ್ರಶ್ನೆಗಿಂತ ಹೆಚ್ಚಾಗಿ ಒಂದು ಸಮಾಜೋ-ಆರ್ಥಿಕ ಪ್ರಶ್ನೆಯಾಗಿದೆ. ಅದನ್ನು ಹಾಗೆ ನೋಡಿದಾಗ ಮಾತ್ರ ಪ್ರಾಮಾಣಿಕವಾದ ಶೈಕ್ಷಣಿಕತೆಗೆ ನ್ಯಾಯವನ್ನು ಒದಗಿಸಲು ಸಾಧ್ಯವಾದೀತು.

ಇಷ್ಟು ಹೇಳಿದ ಮೇಲೆ ಭಾಷಾ ಮಾಧ್ಯಮದ ಬಗೆಗೆ ಇನ್ನೊಂದು ವಿಚಾರವನ್ನು ಪ್ರಸ್ತಾವಿಸಬೇಕು. ಇದು 'ಮಾಧ್ಯಮ'ವೆಂಬ ಗ್ರಹಿಕೆಯನ್ನು ಕುರಿತ ಒಂದೆರಡು ಸ್ಪಷ್ಟೀಕರಣಗಳಿಗೆ ಸಂಬಂಧಿಸಿದುದಾಗಿದೆ. ಹೀಗಾಗಿ ಇಲ್ಲಿ ಬೋಧನೆ ಹಾಗೂ ಕಲಿಕೆಗಳ ಪ್ರಕ್ರಿಯೆಯನ್ನು ಗಮನದಲ್ಲಿರಿಸಿಕೊಂಡು ಕೆಲವು ಸಂಗತಿಗಳನ್ನು ಗಮನಿಸಬೇಕಾಗಿದೆ. ಯಾವುದೇ ಸನ್ನಿವೇಶದಲ್ಲಿ 'ಮಾಧ್ಯಮ' ಎನ್ನುವುದು ನಿರ್ದಿಷ್ಟವಾದ ನಿಯೋಗವನ್ನು (function) ಇರುತ್ತದೆ. ನಿರ್ವಹಿಸುವುದಕ್ಕಾಗಿ ಇರುತ್ತದೆ. ಎಂದರೆ ಬೇರೊಂದನ್ನು ಸಾಧಿಸುವುದಕ್ಕಾಗಿ ಮಾಧ್ಯಮವಿರುತ್ತದೆಯೇ ಹೊರತು ಅದು ತನ್ನಷ್ಟಕ್ಕೇ ಅಸ್ತಿತ್ವ- ಪ್ರಾಧಾನ್ಯವನ್ನು ಹೊಂದಿರುವುದಿಲ್ಲ. ಉದಾಹರಣೆಗೆ ಕನ್ನಡಕದ ಗಾಜು ತನ್ನ ಮೂಲಕ ತೋರಿಸುವುದಕ್ಕಾಗಿ ಇರುತ್ತದೆಯೇ ಹೊರತು ತನ್ನನ್ನು ತಾನೇ ತೋರಿಸುವುದಿಲ್ಲ. ಅರ್ಥಾತ್ ಪಾರದರ್ಶಕತೆ ಎನ್ನುವುದು ಮಾಧ್ಯಮದ ಮುಖ್ಯವಾದ ಗುಣವಾಗಿರುತ್ತದೆ. ಅದು ಇದರಿಂದ ದೂರವಾಗಿ ಅಪಾರದರ್ಶಕವಾಗುತ್ತ ಹೋದಷ್ಟೂ ತನ್ನ ಮಾಧ್ಯಮದ ಕೆಲಸವನ್ನು ನಿರ್ವಹಿಸಲಾರದೆ ಹೋಗುತ್ತದೆ.

ಪರಿಸರದಲ್ಲಿ ಕನ್ನಡವನ್ನು ಮಾತನಾಡಬಲ್ಲ ಮಗುವೊಂದು ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದುವಾಗಲೂ ಈ ಮಾತು ನಿಜವಾಗುತ್ತದೆ. ಶಾಲೆಯಲ್ಲಿನ ಮಾಧ್ಯಮ ತನ್ನನ್ನು ತಾನು ತೋರಿಸಿಕೊಳ್ಳದೆ ತನ್ನ ಮೂಲಕವಾಗಿ ತೋರಿಸಬೇಕಾಗುತ್ತದೆ. ಎಂದರೆ ಪರಿಸರದಿಂದ ಈಗಾಗಲೇ ಪಡೆದುಕೊಂಡ ಮತ್ತು ಪಡೆದುಕೊಳ್ಳುತ್ತಿರುವ ಭಾಷಾಕೌಶಲಗಳ ವಿಸ್ತರಣೆಯಾಗಿ ಮಾಧ್ಯಮ ಕೆಲಸ ಮಾಡಬೇಕಾಗುತ್ತದೆ. ಹೀಗಾಗಬೇಕಾದರೆ ಪರಿಸರದ ನುಡಿಯೊಂದಿಗೆ ತಲ್ಲೀನಗೊಳ್ಳುವಂತೆ ಕಲಿಕೆಯ ನುಡಿಯನ್ನು ರೂಪಿಸಬೇಕಾಗುತ್ತದೆ.

ಇದು ಸಾಧ್ಯವಾಗಬೇಕಾದರೆ ಸಂಪ್ರದಾಯದಿಂದ ಬಂದಿರುವ ನಿರೂಪಣಾಪಥ್ಯವನ್ನು ಉಂಡುಂಡೆಯಾಗಿ ಹಾಗೆಯೇ ಮುಂದುವರಿಸದೆ



ಭಾಷಾವೈಜ್ಞಾನಿಕವಾಗಿ ಅದನ್ನು ಮರುರೂಪಣೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಯಾವುದರ ಮೂಲಕವಾಗಿ ಗ್ರಹಿಸಬೇಕಾಗಿದೆಯೋ ಆ ಮಾಧ್ಯಮವೇ ಗ್ರಹಿಕೆಗೆ ತಡೆಗೋಡೆಯಾಗಿ ನಿಲ್ಲುವಂತಾಗುತ್ತದೆ. ಶಬ್ದಕೋಶ, ವಾಕ್ಯರಚನೆಯ ವಿನ್ಯಾಸ ಮೊದಲಾದವುಗಳಲ್ಲಿ ಹಂತಹಂತವಾದ ಸ್ಥಿತ್ಯಂತರವನ್ನು ಸಾಧಿಸುವುದರ ಮೂಲಕ ಮಾಧ್ಯಮದ ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಬೋಧನಾಶಾಸ್ತ್ರದ ದೃಷ್ಟಿಯಿಂದ ಪರಿಸರದ ನುಡಿಯಲ್ಲಿ ಕಲಿಯುವಾಗಲೂ ಈ ಸಮಸ್ಯೆಗಳು ಎದುರಾಗುತ್ತವೆಯೆಂದರೆ ಇನ್ನು ಪರಭಾಷೆಯ ವಿಚಾರವನ್ನು ಹೆಚ್ಚು ಹೇಳಬೇಕಾಗಿಯೇ ಇಲ್ಲವೆಂದು ತೋರುತ್ತದೆ. ಪರಭಾಷೆಯ ಆಗಂತುಕತನವೇ ಮಾಧ್ಯಮವಾಗಿ ಅದು ಪಾರದರ್ಶಕವಾಗದಂತೆ ಮತ್ತೆ ಮತ್ತೆ ತಡೆಯುತ್ತ ಹೋಗುತ್ತದೆ. ಹೀಗಾಗಿ ಕಲಿಕೆಯಲ್ಲಿ ಮಾಧ್ಯಮವನ್ನು ಪಾರದರ್ಶಕವಾಗಿಸಿಕೊಳ್ಳುವ ಹಾಗೂ ಅದರ ಮೂಲಕ ಗ್ರಹಿಸುವ ಎರಡೂ ಕ್ರಮಗಳನ್ನು ಮಗು ಒಟ್ಟೊಟ್ಟಿಗೆ ನಿಭಾಯಿಸಬೇಕಾಗುತ್ತದೆ. ಇದರಿಂದ ಅದು ಮಾನಸಿಕ ಒತ್ತಡಕ್ಕೆ ಒಳಗಾಗುವುದಲ್ಲದೆ ಮಗು ಮತ್ತು ಪರಿಸರದ ನಡುವಿನ ಸಂಬಂಧದ ವಿಷಮತೆಗೂ ಕಾರಣವಾಗುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಶಿಕ್ಷಣ, ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮ ಎಂಬಿವುಗಳಿಗೆ ಸಂಬಂಧಿಸಿದ ಗ್ರಹಿಕೆಗಳನ್ನು ಮರುಪರಿಶೀಲನೆಗೆ ಒಳಪಡಿಸಿದಲ್ಲದೆ ಸಮಸ್ಯೆಗಳಿಗೆ ಪರಿಹಾರಗಳು ಸಿಗಲಾರವೆಂದೇ ತೋರುತ್ತದೆ. ಈ ದೃಷ್ಟಿಯಿಂದ ಇವುಗಳನ್ನು ಕುರಿತ ಪರಿಪ್ರೇಕ್ಷ್ಯವೇ ಒಟ್ಟಾರೆಯಾಗಿ ಸಿದ್ಧಮಾದರಿಯ ರೂಪಾವಳಿಯಿಂದ (Paradigm) ಪಲ್ಲಟಕ್ಕಾಗಿ ಒತ್ತಾಯಿಸುತ್ತದೆ. ಸ್ವಾತಂತ್ರ್ಯ ಹಾಗೂ ಸಮಾನತೆಗಳನ್ನು ಸಂವಿಧಾನಾತ್ಮಕ ಮೌಲ್ಯಗಳಾಗಿ ಒಪ್ಪಿರುವ ನಾವು ಅದೇ ಮೌಲ್ಯಗಳನ್ನು ಕಲಿಕೆಯ ವಲಯದಲ್ಲಿ ಪ್ರತಿಷ್ಠಾಪಿಸುವವರೆಗೂ ಬಹುಶಃ ಈ ಅತಂತ್ರಸ್ಥಿತಿ ಹೀಗೆಯೇ ಮುಂದುವರಿಯುವುದೆಂದು ತೋರುತ್ತದೆ.

**ಅಧ್ಯಕ್ಷ ಭಾಷಣ:**

**ಸಮಾನ ಶಿಕ್ಷಣದ ಅಗತ್ಯ**

**- ಡಾ. ನಿರಂಜನಾರಾಧ್ಯವಿ.ಪಿ**

ಪ್ರಾರಂಭಿಸುವ ಮುನ್ನ

ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಆಯೋಜನೆಗೊಳ್ಳುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ನಾಡ ನುಡಿಯ ಉಳಿವು - ಅಳಿವು ಬೆಳವಣಿಗೆಗಳ ಬಗ್ಗೆ ಸದಾಕಾಲ ಚರ್ಚಿಸುತ್ತಲೇ ಬಂದಿವೆ. ಎಂದಿನಂತೆ ಕಲಬುರಗಿಯಲ್ಲಿ ನಡೆಯುತ್ತಿರುವ ೮೫ನೇ ಸಾಹಿತ್ಯ ಸಮ್ಮೇಳನವು ಕನ್ನಡ ಮಾಧ್ಯಮ ಮತ್ತು ಶಿಕ್ಷಣ ಕುರಿತಾದ ಗೋಷ್ಠಿಯನ್ನು ಸಮ್ಮೇಳನದ ಪ್ರಧಾನ ವೇದಿಕೆಯಲ್ಲಿ ಆಯೋಜಿಸಿರುವುದು ಪರಿಷತ್ತಿನ ಕಾಳಜಿ ಮತ್ತು ಕನ್ನಡವನ್ನು ಉಳಿಸಿ-ಬೆಳೆಸುವಲ್ಲಿ ಕಲಿಕಾ ವ್ಯವಸ್ಥೆಯ ಮಾಧ್ಯಮ ಏನಾಗಿರಬೇಕೆಂಬ ಮೂಲ ಪ್ರಶ್ನೆಯನ್ನು ಮತ್ತೊಮ್ಮೆ ಮುನ್ನೆಲೆಗೆ ತಂದಿದೆ. ಅದಕ್ಕಾಗಿ ಸಮ್ಮೇಳನಾಧ್ಯಕ್ಷರು, ಪರಿಷತ್ತಿನ ಅಧ್ಯಕ್ಷರು ಮತ್ತು ಗೆಳೆಯರನ್ನು ಅಭಿನಂದಿಸುತ್ತೇನೆ

**ಸಂಶೋಧನಾ ನೆಲೆಯಲ್ಲಿ ಶಿಕ್ಷಣ ಮಾಧ್ಯಮ**

ಶಿಕ್ಷಣ ಮಾಧ್ಯಮದ ಬಗ್ಗೆ ದೇಶದ ಮತ್ತು ಜಗತ್ತಿನ ವಿವಿಧ ಭಾಗಗಳಲ್ಲಿ ನಡೆದಿರುವ ನಿರಂತರ ಸಂಶೋಧನೆಗಳು ನಿರೂಪಿಸಿರುವ ಸಾರ್ವತ್ರಿಕ ಸತ್ಯವೆಂದರೆ, ಸಮಾಜದ ಜನಸಾಮಾನ್ಯರ ನಾಡು ನುಡಿಯನ್ನು ಶಿಕ್ಷಣದ ಮಾಧ್ಯಮವನ್ನಾಗಿಸದೆ, ಅದನ್ನು ಉಳಿಸಿ-ಬೆಳೆಸಿ-ಗಟ್ಟಿಗೊಳಿಸುವುದಾಗಲಿ ಅಥವಾ ಕಲಿಕೆಯಲ್ಲಿ ಸ್ವಂತಿಕೆ, ಸೃಜನಾತ್ಮಕತೆ ಮತ್ತು ಹೊಸತನ್ನು ಅನ್ವೇಷಿಸುವ ಪರಿವರ್ತನಾ ಗುಣ, ಆ ಮೂಲಕ ಸಾಮಾಜಿಕ ಚಲನಶೀಲತೆ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿಲ್ಲವೆಂಬುದು.

ಶಿಕ್ಷಣ ಜಾಗತಿಕ ಮೇಲುಸ್ತುವಾರಿ ವರದಿಯ ಅನ್ವಯ ಮಕ್ಕಳಿಗೆ ಅವರ ಮಾತೃ ಭಾಷೆಯಲ್ಲಿ ಶಿಕ್ಷಣ ನೀಡಿದಾಗ ಅಂತಹ ಮಕ್ಕಳು ಕಲಿಕೆಯಲ್ಲಿ ಆಂಗ್ಲ ಭಾಷೆಯಲ್ಲಿ ಕಲಿಯುವ ಮಕ್ಕಳಿಗಿಂತ ಅದ್ವಿತೀಯ ಸಾಧನೆಗೈದಿರುವುದು ಕಂಡು ಬಂದಿದೆ. ಸಂಶೋಧನೆಗಳ ಪ್ರಕಾರ ಮಾತೃ ಭಾಷಾ ಆಧಾರಿತ ದ್ವಿಭಾಷಿ ಅಥವಾ ಬಹುಭಾಷಾ ಶಿಕ್ಷಣ ಮಗುವಿನ ಕಲಿಕೆ ಮತ್ತು ಕಲಿಕಾ ಫಲಿತಾಂಶಗಳ ಮೇಲೆ ಗಾಢವಾದ ಪರಿಣಾಮ ಬೀರುತ್ತದೆ . ಈ ಸಂಶೋಧನೆಯಲ್ಲಿ ಕಂಡುಬಂದ ಮತ್ತೊಂದು ಪ್ರಮುಖ ಅಂಶವೆಂದರೆ

---

1. ಹೆಚ್ಚಿನ ವಿವರಗಳು ಯುನೆಸ್ಕೊದ ಈ ಜಾಲತಾಣದಲ್ಲಿ ನೋಡಬಹುದು. https://learning por- tal. iiep.unesco.org/en/glossary/mother-tongue-instruction

ಮಾತೃ ಭಾಷಾ ಆಧಾರಿತ ಬಹುಭಾಷಾ ಶಿಕ್ಷಣವು ಎರಡನೇ ಭಾಷೆಯನ್ನು ಕಲಿಯುವ ಪ್ರಕ್ರಿಯೆಯ ಮೇಲೆ ಸಕಾರಾತ್ಮಕ ಪ್ರಭಾವ ಬೀರುತ್ತದೆಯೆಂದು ತಿಳಿಸುತ್ತದೆ.

**ಭಾಷಾ ಮಾಧ್ಯಮ ಮತ್ತು ಶಿಕ್ಷಣ ಕುರಿತಂತೆ ಗಾಂಧೀಜಿ ಹೀಗೆ ಹೇಳಿದ್ದರು:**

"ಪರಭಾಷೆಯ ಮೂಲಕ ಶಿಕ್ಷಣ ನಮ್ಮ ಮಕ್ಕಳ ಬುದ್ಧಿಶಕ್ತಿಯನ್ನು ಬೆಂಡು ಮಾಡಿದೆ; ಅವರ ನರಗಳನ್ನು ದುರ್ಬಲಗೊಳಿಸಿದೆ. ಅವರನ್ನು ಬಾಯಿಪಾಠ ಮಾಡುವ ಗಿಳಿಗಳನ್ನಾಗಿಸಿದೆ. ಪ್ರತಿಭಾನ್ವಿತವಾದ ಸೃಷ್ಟಿಕಾರ್ಯಕ್ಕೆ ಅನರ್ಹರನ್ನಾಗಿ ಮಾಡಿದೆ"

ಶಿಕ್ಷಣದಲ್ಲಿ ಮಾಧ್ಯಮ ಒಂದು ಪ್ರಮುಖ ಪ್ರಶ್ನೆಯಾಗಲು ಕಾರಣವೆಂದರೆ, ಶಿಕ್ಷಣ ಮತ್ತು ನಾವು ನಿರ್ಮಿಸಿಕೊಳ್ಳಬೇಕೆಂದುಕೊಂಡಿರುವ ಸಮಾಜದ ಕಲ್ಪನೆಗೆ ಇರುವ ಅವಿನಾಭಾವ ಸಂಬಂಧ. ಉದಾಹರಣೆಗೆ, ಸಮಾಜ ನಿರ್ಮಾಣದಲ್ಲಿ ಶಿಕ್ಷಣದ ಮಹತ್ವ ಕುರಿತಂತೆ ರಾಷ್ಟ್ರೀಯ ಶಿಕ್ಷಣ ನೀತಿಯು (೧೯೮೬) ಈ ರೀತಿ ಹೇಳುತ್ತದೆ.

"ಶಿಕ್ಷಣವು ಮಹತ್ವವಾದ ಪಾತ್ರವನ್ನು ಹೊಂದಿದೆ. ಅದು ರಾಷ್ಟ್ರೀಯ ಏಕತೆ, ವೈಜ್ಞಾನಿಕ ಮನೋಭಾವ, ಮನೋಸ್ವಾತಂತ್ರ್ಯ ಹಾಗು ಮನೋಸ್ಥೈರ್ಯಗಳಿಗೆ ಪುಷ್ಟಿ ನೀಡುವಂತಹ ದೃಷ್ಟಿ ಹಾಗು ಸೂಕ್ಷ್ಮತೆಯನ್ನು ನೀಡುತ್ತದೆ. ಈ ಮೂಲಕ ನಮ್ಮ ಸಂವಿಧಾನದಲ್ಲಿ ಉಲ್ಲೇಖಗೊಂಡಿರುವ ಗುರಿಗಳಾದ ಸಮಾಜವಾದ, ಜಾತ್ಯತೀತತೆ, ಮತ್ತು ಪ್ರಜಾಪ್ರಭುತ್ವದ ಗುರಿಗಳನ್ನು ಮುಟ್ಟಲು ಸಹಾಯ ಮಾಡುತ್ತದೆ .

ರಾಷ್ಟ್ರೀಯ ಶಿಕ್ಷಣ ನೀತಿಯ ಮೇಲಿನ ಹೇಳಿಕೆ ಅಕ್ಷರಶಃ ಸತ್ಯ. ಯಾವುದೇ ಸಮಾಜದಲ್ಲಿ, ಶಿಕ್ಷಣ ಸಾಮಾಜಿಕ ಒಳಿತಿನ ಬಹು ಮುಖ್ಯ ಸಾಧನ. ಸಮಾನತೆ, ಸಾಮಾಜಿಕ ನ್ಯಾಯ ಮತ್ತು ತಾರತಮ್ಯಗಳನ್ನು ತೊಡೆದು ಹಾಕಿ ಮಾನವೀಯತೆಯ ನೆಲೆಗಟ್ಟಿನಲ್ಲಿ ಒಂದು ಉತ್ತಮ ಸಮಾಜವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಯಲ್ಲಿ ಶಿಕ್ಷಣದ ಪಾಲು ಅಪಾರ. ಶಿಕ್ಷಣವನ್ನು ಮಕ್ಕಳ ಮಾತೃ ಭಾಷೆಯಲ್ಲಿ ನೀಡಿದಾಗ, ತನ್ನ ಸುತ್ತಲಿನ ಸಾಮಾಜಿಕ-ಸಾಂಸ್ಕೃತಿಕ ಪರಿಸರವನ್ನು ಸಾಂದರ್ಭಿಕ ನೆಲೆಯಲ್ಲಿ ಅರ್ಥೈಸಿಕೊಳ್ಳುವುದರ ಜೊತೆ ಜೊತೆಗೆ ಶಿಕ್ಷಣವನ್ನು ಸಾಮಾಜಿಕ ಪರಿವರ್ತನೆಯ ಸಾಧನವನ್ನಾಗಿ ಬಳಸಲು ಅವರನ್ನು ಅಣಿಗೊಳಿಸುತ್ತದೆ.

ಇನ್ನು ಶಾಲಾ ಶಿಕ್ಷಣದಲ್ಲಿ ರಾಷ್ಟ್ರೀಯ ಶೈಕ್ಷಣಿಕ ಪ್ರಾಧಿಕಾರ ಎಂದು ಗುರುತಿಸಲ್ಪಟ್ಟಿರುವ ರಾಷ್ಟ್ರೀಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ಸಂಸ್ಥೆಯು ಭಾಷಾ ಮಾಧ್ಯಮ ಮತ್ತು ಭಾಷಾ ಕಲಿಕೆಯ ಬಗ್ಗೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ ವಿಶದವಾಗಿ ಚರ್ಚಿಸಿದೆ. ಇದು ನಮ್ಮ ರಾಷ್ಟ್ರೀಯ ಶಿಕ್ಷಣ ನೀತಿ ನಿರೂಪಣಾ ಚೌಕಟ್ಟು

---

2.http://www.unesco.org/new/en/education/themes/strengthening-educa-

tion-systems/languages-in-education/single-view/news/multilingua

lism_a_key_to_inclusive_education/

3. ಹನುಮಂತಯ್ಯ .ಎಲ್. ಮತ್ತು ಚಂದ್ರಶೇಖರ ನಂಗಲಿ .ವಿ. (2016) .ಕುವೆಂಪು ವಿರಚಿತ ಕನ್ನಡ ಭಾಷಾ ಸಂವಿಧಾನ. ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

4. ಭಾರತ ಸರ್ಕಾರದ ರಾಷ್ಟ್ರೀಯ ಶಿಕ್ಷಣ ನೀತಿ 1986 , ಪ್ಯಾರ 2.2



ಕೂಡ ಹೌದು . ಈ ನೀತಿ ನಿರೂಪಣಾ ಚೌಕಟ್ಟಿನ ಪ್ಯಾರಾ ೩.೧.೨ ರಲ್ಲಿ ಹೇಳಿರುವಂತೆ "ಮಕ್ಕಳು ಹುಟ್ಟಿನಿಂದ ಸಹಜವಾಗಿ ಬಂದ ಅದ್ಭುತ ಭಾಷಾ ಸಾಮರ್ಥ್ಯವನ್ನು ಮತ್ತು ಕುಟುಂಬ ಮತ್ತು ತನ್ನ ಸುತ್ತ-ಮುತ್ತಲಿನ ಜನಸಮುದಾಯದೊಂದಿಗೆ ಸಂಭಾಷಿಸುವ ಕೌಶಲದೊಂದಿಗೆ ಪೂರ್ಣವಾಗಿ ಅರಳಿದ ಭಾಷಾ ಸಂವಹನ ಸಾಮರ್ಥ್ಯದೊಂದಿಗೆ ಶಾಲೆಗೆ ಬಂದಿರುತ್ತಾರೆ. ಅವರು ಸಾವಿರಾರು ಪದಗಳ ಶಬ್ದ ಭಂಡಾರ ಮತ್ತು ಅದನ್ನು ಸಾಂದರ್ಭಿಕವಾಗಿ ಬಳಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಇಷ್ಟು ಮಾತ್ರವಲ್ಲದೆ, ಭಾಷಾ ವಿಷಯಕ್ಕೆ ಸಂಬಂಧಿಸಿದ ಸಂಕೀರ್ಣವಾದ ಪದ, ಶಬ್ದ ಮತ್ತು ವಾಕ್ಯಗಳ ರಚನೆಯ ನಿಯಮ, ಸಂರಚನೆ ಮತ್ತು ಬಳಕೆಯ ಮೇಲೆ ಪೂರ್ಣ ಪ್ರಭುತ್ವ ಪಡೆದೇ ಶಾಲೆಗೆ ಬರುತ್ತಾರೆ. ಮಗುವಿಗೆ ತನ್ನ ಭಾಷೆಯಲ್ಲಿ ಹೇಗೆ ಸರಿಯಾಗಿ ತಿಳಿಯಬೇಕು ಮತ್ತು ಮಾತನಾಡಬೇಕು ಎಂಬುದು ಮಾತ್ರವಲ್ಲದೆ ಎಲ್ಲಿ? ಹೇಗೆ? ಸೂಕ್ತವಾಗಿ ಬಳಸ ಬೇಕೆಂಬುದರ ಬಗ್ಗೆಯೂ ಅರಿವಿರುತ್ತದೆ. ಹೀಗಾಗಿ, ಅತ್ಯಗತ್ಯವಾಗಿ ನಾವು ಮಾಡಬೇಕಾದ ಕೆಲಸವೆಂದರೆ ಶಾಲೆಗಳಲ್ಲಿ ಭಾರತೀಯ ಭಾಷೆಗಳಲ್ಲಿ ಸುಸ್ಥಿರವಾಗಿ ಕಲಿಸಲು ಅಗತ್ಯವಾದ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡು ಅದನ್ನು ಬಲಪಡಿಸಬೇಕಿದೆ"

ಶ್ರೇಷ್ಠ ಚಿಂತಕ ಮತ್ತು ಶಿಕ್ಷಣ ತಜ್ಞ ಜಾನ್ ಡ್ಯೂಯಿರವರ ಪ್ರಕಾರ ಶಿಕ್ಷಣ ಒಂದು ಸಾಮಾಜಿಕ ಪ್ರಕ್ರಿಯೆ; ಶಿಕ್ಷಣ ಜೀವನಕ್ಕೆ ಸಿದ್ಧತೆ ಮಾತ್ರವಲ್ಲ, ಅದರೆ ಜೀವನವೇ ಶಿಕ್ಷಣ. ಅವರ ಪ್ರಕಾರ ಶಿಕ್ಷಣ ಮತ್ತು ಪ್ರಜಾಪ್ರಭುತ್ವಕ್ಕೆ ಅವಿನಾಭಾವ ಸಂಬಂಧವಿದ್ದು, ಉತ್ತಮ ಶಿಕ್ಷಣ ಸಾಮಾಜಿಕ ಒಳಿತು ಮತ್ತು ವೈಯಕ್ತಿಕ ಒಳಿತಿನ ಮಿಶ್ರಣವಾಗಿರುತ್ತದೆ."

ಹೀಗಿದ್ದಾಗ, ಸಹಜವಾಗಿ ನಮ್ಮ ಮುಂದೆ ಬರುವ ಪ್ರಶ್ನೆಯೆಂದರೆ, ತಾಯ್ನುಡಿಯಲ್ಲಿ ಅರ್ಥಾತ್ ಕನ್ನಡದಲ್ಲಿ ಶಿಕ್ಷಣ ಕೊಡಮಾಡುವ ಪ್ರಶ್ನೆ ಒಂದು ಬೃಹದಾಕಾರದ ಸಮಸ್ಯೆಯಾಗಿ ಬೆಳೆದು

ನಿಂತಿರುವ ಕಾರಣವಾದರೂ ಏನು ಎಂಬುದನ್ನು ನಾವು ಈ ಗೋಷ್ಠಿಯಲ್ಲಿ ವಾಸ್ತವಿಕವಾಗಿ ವಿಮರ್ಶಿಸುವ ಪ್ರಯತ್ನ ಮಾಡಿದ್ದೇವೆ. ಗೋಷ್ಠಿಯ ಭಾಗವಾಗಿದ್ದ ಎಲ್ಲ ಹಿರಿಯ ಗೆಳೆಯರಿಗೆ ನಾನು ತುಂಬು ಹೃದಯದ ಅಭಿನಂದನೆಗಳನ್ನು ತಿಳಿಸುತ್ತೇನೆ.

**ಶಿಕ್ಷಣ ಮಾಧ್ಯಮ, ಖಾಸಗೀಕರಣ ಮತ್ತು ನವ ವಸಾಹತುಶಾಹಿ ವ್ಯವಸ್ಥೆ**

ನಾವಿಂದು ನವ-ವಸಾಹತುಶಾಹಿಯ ಜಗತ್ತಿಲ್ಲಿದ್ದೇವೆ. ನವ-ವಸಾಹತುಶಾಹಿಯ ಒಂದು ಪ್ರಮುಖ ಲಕ್ಷಣವೆಂದರೆ ಜೀವನದ ಪ್ರತಿಯೊಂದು ಮೂಲಭೂತ ಅಗತ್ಯತೆಗಳನ್ನು ಮಾರಾಟ ಮಾಡಬಲ್ಲ ಸರಕನ್ನಾಗಿ ಮಾರ್ಪಡಿಸುವುದರ ಮೂಲಕ ಗರಿಷ್ಠ ಲಾಭ ಗಳಿಸುವ ಹಾಗು ಸಾಮಾಜಿಕ ಒಳತಿನ ಪ್ರತಿಯೊಂದು ಸೇವೆಯನ್ನು ಲಾಭದ ಉದ್ದಿಮೆಯನ್ನಾಗಿಸುವ ಮೂಲಕ ಇಡೀ ಸಮಾಜವನ್ನೇ ಒಂದು ಜಾಗತಿಕ ಮಾರುಕಟ್ಟೆಯನ್ನಾಗಿಸುವ ಆಕ್ರಮಶೀಲ ಗುಣ. ನವ-ವಸಾಹತುಶಾಹಿ ಮಾರುಕಟ್ಟೆಯ

---

5.http://www.wilderdom.com/experiential/Summary John Dewey Experience Education.html ದಿನಾಂಕ 02.01.2020ರಂದು ಅವಲೋಕಿಸಿದೆ



ಯುಗಧರ್ಮವೆಂದರೆ, ಎಲ್ಲಾ ಮಾನವ ಸಂಬಂಧಗಳನ್ನು ವ್ಯಾಪಾರದ ಸಂಬಂಧ ಗಳನ್ನಾಗಿ ಮಾರ್ಪಡಿಸಿ ಮಾನವೀಯತೆಯ ಜಾಗದಲ್ಲಿ ವ್ಯಾಪಾರ ಮತ್ತು ಗ್ರಾಹಕ ಸಂಸ್ಕೃತಿಯನ್ನು ಜೀವನದ ಕ್ರಮವನ್ನಾಗಿಸುವುದು,

ಪರಿಣಾಮ, ಸಾಮಾಜಿಕ ಒಳಿತಾಗಬೇಕಿದ್ದ ಶಿಕ್ಷಣ ಇಂದು ವ್ಯಾಪಾರೀಕರಣ ಗೊಂಡು ಮಾರಾಟದ ವಸ್ತುವಾಗಿದೆ. ನವ-ವಸಾಹತುಶಾಹಿಯ ಮಾರುಕಟ್ಟೆ ಕುತಂತ್ರಕ್ಕೆ ಇಂದು ನಾವೆಲ್ಲರೂ ವೈಯಕ್ತಿಕವಾಗಿ ಮತ್ತು ಸಾಮುದಾಯಿಕವಾಗಿ ಒಂದಲ್ಲ ಒಂದು ರೀತಿಯಲ್ಲಿ ತಿಳಿದೋ ಅಥವಾ ತಿಳಿಯದೆಯೋ ಬಲಿಯಾಗಿದ್ದೇವೆ. ಇದಕ್ಕೆ ಜ್ವಲಂತ ಉದಾಹರಣೆಯೆಂದರೆ ಕನ್ನಡ ಭಾಷೆಯನ್ನು ಬಲಿಕೊಟ್ಟು ಅಂಗ್ಲಮಾಧ್ಯಮದ ಶಿಕ್ಷಣದ ಬಗ್ಗೆ ಸರ್ಕಾರಗಳು ಸಮಾಜ ಹಾಗು ನಾವು ಬೆಳೆಸಿಕೊಂಡಿರುವ ಅತೀ ವ್ಯಾಮೋಹ. ಈ ವ್ಯಾಮೋಹ ಎಷ್ಟರ ಮಟ್ಟಿಗೆ ಬೆಳೆದಿದೆಯೆಂದರೆ, ಸಂಶೋಧನೆಗಳು, ಪ್ರಾಯೋಗಿಕ ಅನುಭವಗಳು ಮತ್ತು ಎಲ್ಲಾ ಬಗೆಯಲ್ಲಿ ಪರೀಕ್ಷಿಸಿ ನಿರೂಪಿಸಲ್ಪಟ್ಟಿರುವ ಪ್ರಾಯೋಗಿಕ ಪರೀಕ್ಷೆಗಳು ಸಾಕ್ಷ್ಯಾಧಾರಿತವಾಗಿ ಮಾತೃಭಾಷಾ ಶಿಕ್ಷಣದ ಮಹತ್ವವನ್ನು ಸಾರಿದ್ದರೂ, ಅದಕ್ಕೆ ವಿರುದ್ಧವಾಗಿ ನೀತಿ ನಿರೂಪಿಸುವ ಮತ್ತು ಮತಬ್ಯಾಂಕ್ ರಾಜಕಾರಣದ ಮೂಲಕ ಸುಳ್ಳನ್ನೇ ಸತ್ಯವೆಂದು ಪ್ರತಿಪಾದಿಸುವ ವಿಷಮ ಸ್ಥಿತಿಯಲ್ಲಿ ನಾವಿದ್ದೇವೆ.

ವಿಶೇಷವೆಂದರೆ, ಶಿಕ್ಷಣವನ್ನು ವ್ಯಾಪಾರವನ್ನಾಗಿಸುವ ಕ್ರಿಯೆಗೆ ಅನುಸರಿಸುವ ವಿಧಾನ ಮತ್ತು ಮಾರ್ಗ ಅಪ್ಪಟ ಸುಳ್ಳು ಮತ್ತು ಅಪಪ್ರಚಾರಗಳಿಂದ ಕೂಡಿದೆ. ಉದಾಹರಣೆಗೆ, ಮಾತೃ ಭಾಷೆಯಲ್ಲಿ ಶಿಕ್ಷಣ ಪಡೆಯುವುದರಿಂದ ಪ್ರಗತಿ ಸಾಧ್ಯವಿಲ್ಲವೆಂಬ ಸುಳ್ಳನ್ನು ಸೃಷ್ಟಿಸಿ, ವ್ಯಾಪಕ ಅಪಪ್ರಚಾರದ ಮೂಲಕ ಮಾತೃಭಾಷೆಯಲ್ಲಿ ಕಲಿಯುವುದನ್ನು ಕೀಳರಿಮೆಯನ್ನಾಗಿಸಿ ಭಾಷಾ ಅಸ್ಮಿತೆಯನ್ನೇ ಅಳಿಸಿ ಹಾಕುವುದು; ವಿದ್ಯಾರ್ಥಿಯ ಜ್ಞಾನ ಮತ್ತು ಸಾಮರ್ಥ್ಯವನ್ನು ಅವನ/ಳ ಭಾಷೆಯಲ್ಲಿ ಅಳೆಯುವ ಬದಲು ತನ್ನದಲ್ಲದ ಭಾಷೆಯ ಮೂಲಕ ಅಳೆದು ಕುಬ್ಜನನ್ನಾಗಿಸಿ ತಾನು ಪಡೆದ ಶಿಕ್ಷಣ ಅಪ್ರಯೋಜಕವೆಂಬ ಭಾವನೆ ಬಿತ್ತುವುದು ಮತ್ತು ಸಾರ್ವಜನಿಕ ವಲಯದಲ್ಲಿರುವ ಎಲ್ಲಾ ಸೇವೆಗಳು ಕಳಪೆ ಗುಣಮಟ್ಟ ಮತ್ತು ಖಾಸಗಿ ವಲಯದ ಸೇವೆಗಳು ಅತ್ಯಂತ ಶ್ರೇಷ್ಠ ಎಂಬ ಸುಳ್ಳು ಭ್ರಮೆಗಳ ಮೂಲಕ ಸಾರ್ವಜನಿಕ ಸಂಸ್ಥೆಗಳಾದ ಶಾಲೆ, ಆಸ್ಪತ್ರೆ ಮತ್ತು ಉದ್ದಿಮೆಗಳ ಬಗ್ಗೆ ಜನರು ಭರವಸೆ ಕಳೆದುಕೊಳ್ಳುವಂತೆ ನಿರಂತರ ಅಪಪ್ರಚಾರ ಮತ್ತು ಸುಳ್ಳು ಜಾಹೀರಾತು ಕುತಂತ್ರಗಳ ಮೂಲಕ ಈ ಎಲ್ಲಾ ಕ್ಷೇತ್ರಗಳಲ್ಲಿ ವ್ಯಾಪಾರದ ಮನೋಧರ್ಮವನ್ನು ಹುಟ್ಟುಹಾಕುವುದು.

ಇದು ಎಷ್ಟು ಪ್ರಭಾವಶಾಲಿ ಪ್ರಚಾರವಾಗಿರುತ್ತದೆಯೆಂದರೆ, ಸರ್ಕಾರಗಳು ಕೂಡ ಖಾಸಗಿ ಸಂಸ್ಥೆಗಳಲ್ಲಿ ಗುಣಮಟ್ಟವಿದೆಯೆಂಬ ಹುಸಿ ಪ್ರಚಾರಗಳನ್ನು ನೀತಿ-ನಿರೂಪಣಾ ಹಂತದಲ್ಲಿ ದಾಖಲಿಸಿ ಖಾಸಗೀಕರಣಕ್ಕೆ ಸರ್ಕಾರವೇ ಕಂಕಣಕಟ್ಟಿ ನಿಲ್ಲುವ ಮಟ್ಟಕ್ಕೆ ಸರ್ಕಾರಗಳನ್ನೇ ಬೇಸ್ತು ಬೀಳಿಸುವಂತಿರುತ್ತವೆ. ಇದಕ್ಕೆ, ಅಧಿಕಾರಶಾಹಿಯ ಪೂರ್ಣ ಬೆಂಬಲವಿರುತ್ತದೆ. ಈ ಎಲ್ಲಾ ಕುತಂತ್ರಗಳ ಫಲಿತಾಂಶ, ಶಿಕ್ಷಣವನ್ನು ಖಾಸಗಿ ವಲಯಗಳಿಗೆ ಮುಕ್ತವಾಗಿ ತೆರೆದಿಡುವುದು; ಲಾಭಕ್ಕಾಗಿ ಶಿಕ್ಷಣ ಕ್ಷೇತ್ರವನ್ನು ಖಾಸಗೀಕರಣ ಗೊಳಿಸುವುದು. ಶಿಕ್ಷಣ ಕಾರ್ಯಕ್ರಮವನ್ನು ರೂಪಿಸಿ, ನಿರ್ವಹಿಸಿ, ತಲುಪಿಸುವ

ಕೆಲಸವನ್ನು ಖಾಸಗಿ, ಕಾರ್ಪೋರೇಟ್, ಸರ್ಕಾರೇತರ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ವಹಿಸುವುದು ಅವ್ಯಾಹತವಾಗಿ ನಡೆಯುತ್ತದೆ. ಇದು ಗೊತ್ತಿದ್ದರೂ, ಅಧಿಕಾರಿಗಳು ತಿಳಿದೂ ತಿಳಿಯದ ಜಾಣರಂತೆ ವರ್ತಿಸಿ ಖಾಸಗೀಕರಣಕ್ಕೆ ಪ್ರತ್ಯಕ್ಷ ಬೆಂಬಲ ನೀಡುತ್ತಿರುತ್ತಾರೆ. ಇದರ ಅತಿರೇಕವೆಂದರೆ ರಾಜ್ಯ ಪ್ರಾಯೋಜಿತ ಖಾಸಗೀಕರಣ. ಉದಾಹರಣೆಗೆ , ಆರ್‌ಟಿಇ ಅಡಿಯಲ್ಲಿ ಖಾಸಗಿ ಶಾಲೆಗಳಲ್ಲಿ ಶೇಕಡಾ ೨೫ರ ಮೀಸಲಾತಿ ಮೂಲಕ ಕಳೆದ ೬ ವರ್ಷಗಳಲ್ಲಿ ಸುಮಾರು ೧೨೩೭ ಕೋಟಿಯನ್ನು ಖಾಸಗಿ ಶಾಲೆಗಳಿಗೆ ಮರುಪಾವತಿಸಿರುವುದು ರಾಜ್ಯ ಪ್ರಾಯೋಜಿತ ಖಾಸಗೀಕರಣವಲ್ಲದೆ ಬೇರೇನು? ಉದಾಹರಣೆಗೆ, ಕರ್ನಾಟಕ ಸರ್ಕಾರ ೨೦೧೭-೧೮ ರಲ್ಲಿ ಮಂಡಿಸಿದ ಆಯವ್ಯಯ ಭಾಷಣದಲ್ಲಿ ಪ್ಯಾರಾ ೯೩, ಪುಟ ೫೩, ಕರ್ನಾಟಕ ಸರ್ಕಾರ ಆಯವ್ಯಯ ೨೦೧೭-೧೮, ಮಾರ್ಚ್ ೧೫,೨೦೧೭ ಶಿಕ್ಷಣದ ಖಾಸಗೀಕರಣವನ್ನು ವೈಭವೀಕರಿಸುವ ಮಟ್ಟಕ್ಕೆ ನವ ವಶಾಹತುಶಾಹಿ ಶಕ್ತಿಗಳು ಸರ್ಕಾರವನ್ನೇ ಒಳಮಾಡಿಕೊಂಡಿವೆ ಎಂಬುದು ಅತಿಶಯೋಕ್ತಿಯಲ್ಲ. ಅದು ಈ ರೀತಿ ಹೇಳುತ್ತದೆ;

"ದುರ್ಬಲ ಮತ್ತು ಅವಕಾಶ ವಂಚಿತ ವರ್ಗಗಳ ೪ ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಖಾಸಗಿ ಶಾಲೆಗಳಲ್ಲಿ ಪ್ರವೇಶಾವಕಾಶ ಒದಗಿಸಿ ಅವರ ಪಾಲಕರಿಗೆ ಗುಣಮಟ್ಟದ ಶಿಕ್ಷಣದ ತೃಪ್ತಿಯನ್ನು ಸರ್ಕಾರವು ಒದಗಿಸಿದೆ. ಹಾಗೂ ಈ ಮಕ್ಕಳ ಶಾಲಾ ಶುಲ್ಕವನ್ನು ಮರುಪಾವತಿ ಮಾಡಲಾಗುತ್ತಿದೆ. ಇಂತಹ ಮಕ್ಕಳಿಗೆ ಶಾಲೆಗಳನ್ನು ವ್ಯಾಪಕವಾಗಿ ಆಯ್ಕೆ ಮಾಡಲು ನೆರವಾಗುವಂತೆ ನೆರೆಹೊರೆಯ ಮಾನದಂಡಗಳನ್ನು ಸಡಿಲಿಸಲಾಗಿದೆ" .

ಹೀಗಾಗಿ, ಶಿಕ್ಷಣ ವ್ಯಾಪಾರೀಕರಣ ಪ್ರಕ್ರಿಯೆಯು, ಮೊದಲು ಸಾರ್ವಜನಿಕ ಶಿಕ್ಷಣ ವಲಯ ಖಾಸಗಿ ವಲಯದಂತೆ ವರ್ತಿಸುವಂತೆ ಒತ್ತಡ ಹೇರುವುದರ ಮೂಲಕ ಶಿಕ್ಷಣದ ಸಾಮಾಜಿಕ ಒಳಿತಿನ ಕಲ್ಪನೆಯನ್ನು ವೈಯಕ್ತಿಕ ಒಳಿತು ಮತ್ತು ಸ್ಥಾನಮಾನದ ಪ್ರತಿಷ್ಠೆಯ ವಿಷಯವನ್ನಾಗಿ ಮಾರ್ಪಡಿಸಿ ನಂತರ ಸಾರ್ವಜನಿಕ ಶಾಲೆಗಳು ಸೂಕ್ತ ಸಂಪನ್ಮೂಲ ಗಳಿಲ್ಲದೆ ಬಳಲುವಂತೆ ಮಾಡಿ ಕ್ರಮೇಣವಾಗಿ ಖಾಸಗಿ ವಲಯವು ಸಾರ್ವಜನಿಕ ಶಿಕ್ಷಣದಲ್ಲಿ ನುಸುಳುವಂತೆ ಖಾಸಗೀಕರಣ ಮತ್ತು ವ್ಯಾಪಾರೀಕರಣಕ್ಕೆ ಭೂಮಿಕೆಯನ್ನು ರಾಜ್ಯವು ಸಿದ್ಧಗೊಳಿಸುತ್ತದೆ.

**ಭಾಷಾ ಮಾಧ್ಯಮದ ಮೇಲೆ ಶಿಕ್ಷಣ ಖಾಸಗೀಕರಣದ ಅಪಾಯಗಳು**

ಶಿಕ್ಷಣದ ಖಾಸಗೀಕರಣದ ಮತ್ತು ವ್ಯಾಪರೀಕರಣದ ಮೊದಲನೆಯ ಬಹುದೊಡ್ಡ ಅಪಾಯವೆಂದರೆ ಆಂಗ್ಲ ಭಾಷೆಯನ್ನು ಶಿಕ್ಷಣದಲ್ಲಿ ಯಜಮಾನಿಕೆಯ ಭಾಷೆಯನ್ನಾಗಿಸುವ ಮೂಲಕ ಜಾಗತಿಕ ಮಾರುಕಟ್ಟೆಯನ್ನು ಶಿಕ್ಷಣವೂ ಸೇರಿದಂತೆ ಎಲ್ಲ ಸೇವಾ ವಲಯಗಳಿಗೆ ವಿಸ್ತರಿಸಿ ಮೂಲಭೂತ ಸೇವೆಗಳನ್ನು ವ್ಯಾಪಾರೀಕರಣಗೊಳಿಸಿ ನಾಗರೀಕತೆಯ ಎಲ್ಲ ಮಾನವ ಸಂಬಂಧಗಳನ್ನು ಮಾರಾಟದ ಸಂಬಂಧಗಳನ್ನಾಗಿ ಮಾರ್ಪಡಿಸುತ್ತದೆ .

ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣ ದೊರೆತಾಗ ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಸಿಗಬಹುದಾದ ಎಲ್ಲಾ ಒಳಿತುಗಳನ್ನು ಸತ್ಯಗಳನ್ನು ಮರೆಮಾಚುವ

ಶಿಕ್ಷಣದ ಉದ್ಯಮಶೀಲ ವ್ಯಾಪಾರಿಗಳು, ಆಂಗ್ಲ ಭಾಷೆಯನ್ನು ವೈಭವೀಕರಿಸುವ ಮೂಲಕ ತಮ್ಮ ಲಾಭಕ್ಕಾಗಿ ಮುಗ್ಧ ಜನರ ಅಸಹಾಯಕತೆಯನ್ನೇ ಬಂಡವಾಳವಾಗಿಸಿಕೊಂಡು ಶಿಕ್ಷಣದ ಹೆಸರಿನಲ್ಲಿ ಜನಸಾಮಾನ್ಯರನ್ನು ನಿರಂತರವಾಗಿ ಶೋಷಿಸುತ್ತಾರೆ. ಶೋಷಣೆಯ ಮೂಲಕ ಗಳಿಸುವ ಅಪಾರ ಸಂಪತ್ತಿನಲ್ಲಿ ತಮ್ಮ ಖಾಸಗೀ ಸಾಮ್ರಾಜ್ಯಗಳನ್ನು ಸ್ಥಾಪಿಸಿ ಹಣ ಬಲದಿಂದ ಪ್ರಭುತ್ವವನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಉದಾಹರಣೆಗೆ, ಇಂದು ಖಾಸಗೀ ಶಾಲೆಗಳನ್ನು ನಡೆಸುತ್ತಿರುವ ಬಹುತೇಕ ಸಂಸ್ಥೆಗಳು ಸಂಸದರು, ವಿಧಾನ ಸಭಾ ಸದಸ್ಯರು, ಪ್ರಭಾವೀ ರಾಜಕಾರಣಿಗಳು ಮತ್ತು ಆಶ್ಚರ್ಯಕರ ರೀತಿಯಲ್ಲಿ ಮಠಮಾನ್ಯಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸರ್ಕಾರವನ್ನು ನಡೆಸಿ ನಿಯಂತ್ರಿಸುತ್ತವೆ. ಪರಿಸ್ಥಿತಿ ಹೀಗಿರುವಾಗ, ಮಾಧ್ಯಮ ಮಾತೃಭಾಷೆಯಲ್ಲಿರುವಂತೆ ನೀತಿ ನಿರೂಪಿಸಿ ಎಂದು ಅವರನ್ನು ಕೇಳುವುದು "ಸುಂಕದವನ ಮುಂದೆ ಸುಖ-ದುಃಖ ಹೇಳಿ" ಪರಿಹಾರ ಕೇಳಿದಂತಾಗುತ್ತದೆ. ಅವರೇ ಆಂಗ್ಲ ಮಾಧ್ಯಮ ಶಾಲೆಗಳನ್ನು ನಡೆಸಿ ಶಿಕ್ಷಣದ ಹೆಸರಿನಲ್ಲಿ ಕೊಳ್ಳೆ ಹೊಡೆಯುತ್ತಿರುವಾಗ ಜನಪರವಾದ ನೀತಿ-ನಿಯಮ-ಕಾನೂನುಗಳನ್ನು ಹೇಗೆ ತಾನೆ ರೂಪಿಸಿಯಾರು?

ಆದರೂ ನಮ್ಮ ಹೋರಾಟ ನಿಲ್ಲಬಾರದು. ಸತ್ಯ ಗೆಲ್ಲಲೇ ಬೇಕಾಗಿರುವುದರಿಂದ ನಾವು ವಾಸ್ತವಿಕ ಕಾನೂನು ಮತ್ತು ನೀತಿಯ ನೆಲೆಯಲ್ಲಿ ಮಾಡಬಹುದಾದ ಮತ್ತು ಅಗತ್ಯವಿದ್ದಲ್ಲಿ ಕಾನೂನು-ನೀತಿಗಳನ್ನು ಬದಲಿಸಬೇಕಾದ ಅಗತ್ಯತೆಯನ್ನು ಸರಕಾರಕ್ಕೆ ಪದೇ ಪದೇ ಮನವರಿಕೆ ಮಾಡಿಕೊಡಬೇಕಿದೆ.

**ಸರ್ಕಾರದ ಮುಂದಿರುವ ಆಯ್ಕೆಗಳು**

ಮಾತೃ ಭಾಷಾ ಮಾಧ್ಯಮವನ್ನು ಶಿಕ್ಷಣದಲ್ಲಿ ಕಡ್ಡಾಯಗೊಳಿಸುವ ಕುರಿತಂತೆ ರಾಜ್ಯ ಸರ್ಕಾರವು ಈಗಿರುವ ಕಾನೂನು ಚೌಕಟ್ಟುಗಳ ವ್ಯಾಪ್ತಿಯಲ್ಲಿ ನೀತಿ ನಿರೂಪಿಸಿ ಜಾರಿಗೊಳಿಸುವುದು. ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿರುವುದರಿಂದ ರಾಜ್ಯ ಮತ್ತು ಕೇಂದ್ರ ಆ ವಿಷಯಗಳಲ್ಲಿ ನೀತಿ ಮತ್ತು ಕಾನೂನು ರೂಪಿಸುವ ಸಮಾನ ಹಕ್ಕನ್ನು ಹೊಂದಿರುತ್ತವೆ. ಈ ನಿಟ್ಟಿನಲ್ಲಿ ತಕ್ಷಣದ ಕ್ರಮ ಈ ಕೆಳಕಂಡಂತಿವೆ:

೧. ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿರುವುದರಿಂದ, ಈ ಅವಕಾಶವನ್ನು ಬಳಸಿ, ರಾಜ್ಯ ಸರ್ಕಾರವು ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ ೨೦೦೯ ಪ್ರಕರಣ ೨೯(೨) ರಲ್ಲಿ ಗೊತ್ತುಪಡಿಸಿರುವ ಮೌಲ್ಯಗಳಿಗನುಗುಣವಾಗಿ ಶಿಕ್ಷಣ ನೀತಿಯನ್ನು ರೂಪಿಸಿ ಜಾರಿಗೊಳಿಸುವ ಕ್ರಮಕ್ಕೆ ಮುಂದಾಗಬೇಕಿದೆ. ಅದರಂತೆ, ಶಿಕ್ಷಣ ನೀತಿಯು ಶಿಕ್ಷಣವನ್ನು ಒಂದು ಸಾಮಾಜಿಕ ಒಳಿತೆಂದು ಭಾವಿಸಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿ, ಮಕ್ಕಳ ಜ್ಞಾನ, ಸಾಮರ್ಥ್ಯ ಮತ್ತು ಪ್ರತಿಭೆಯ ವರ್ಧನೆ; ಪೂರ್ಣ ಪ್ರಮಾಣದಲ್ಲಿ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳ ವಿಕಸನ; ಶಿಶು ಸ್ನೇಹಿ ಮತ್ತು ಶಿಶು ಕೇಂದ್ರಿತ ವಾತಾವರಣದಲ್ಲಿ

ಚಟುವಟಿಕೆಗಳು, ಅನ್ವೇಷಣೆ ಮತ್ತು ಸಾಹಸ ಶೋಧನೆ ಮೂಲಕ ಮಕ್ಕಳು ಕಲಿಯುವುದು ಮತ್ತು ಮಗುವಿನ ಭಯ, ಆಘಾತ ಹಾಗೂ ಆತಂಕ ಹೋಗಲಾಡಿಸುವುದು ಮತ್ತು ಮಗು ಮುಕ್ತವಾಗಿ ತನ್ನ ಅಭಿಪ್ರಾಯವನ್ನು



ವ್ಯಕ್ತಪಡಿಸುವುದಕ್ಕೆ ನೆರವಾಗಬಹುದಾದ ಒಂದು ಉತ್ತಮ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಕೊಡಲು ಮುಂದಾಗಬೇಕಿದೆ.

9. ಇದು ಸಾಧ್ಯವಾಗಬೇಕಾದರೆ, ಕಾನೂನಿನಲ್ಲಿಯೇ ಹೇಳಿರುವಂತೆ ಶಿಕ್ಷಣ ಮಾಧ್ಯಮವು ಮಕ್ಕಳ ಮಾತೃಭಾಷೆಯಲ್ಲಿಯೇ ಇರಬೇಕು. ಕಾನೂನಿನಲ್ಲಿನ, 'ಸಾಧ್ಯವಾಗಬಹುದಾದಷ್ಟು ಮಟ್ಟಿಗೆ' ಎಂಬ ಪದ ಪುಂಜವನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ. ಸಾಮಾನ್ಯವಾಗಿ ಒಂದು ರಾಜ್ಯದಲ್ಲಿ ಒಂದಕ್ಕಿಂತ ಹೆಚ್ಚು ಮಾತೃ ಭಾಷೆಗಳಿರುವ ಸಾಧ್ಯತೆಯಿರುತ್ತದೆ. ಅಂಥಹ ಸಂದರ್ಭಗಳಲ್ಲಿ, ಮಾತೃ ಭಾಷೆಯಲ್ಲಿ ಶಿಕ್ಷಣ ಒದಗಿಸುವ ಹೊಣೆ ಹೊತ್ತಿರುವ ರಾಜ್ಯ ಸರ್ಕಾರವು ಸಾಧ್ಯವಾದಷ್ಟು ಮಟ್ಟಿಗೆ ಆ ಮಕ್ಕಳ ಮಾತೃ ಭಾಷೆಯಲ್ಲಿಯೇ ಶಿಕ್ಷಣ ನೀಡಲು ಕ್ರಮ ಕೈಗೊಳ್ಳಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಆ ಭಾಷೆಗೆ ಸೇರಿದ ಜನ ಸಂಖ್ಯೆ ಮತ್ತು ಮಕ್ಕಳ ಸಂಖ್ಯೆಯನ್ನು ಗಮನಿಸಿ ಸರ್ಕಾರ ತೀರ್ಮಾನಿಸ ಬೇಕಾಗುತ್ತದೆ. ಸರ್ಕಾರದ ಅಂಥಹ ತೀರ್ಮಾನಗಳಿಗೆ ಸಹಾಯಕವಾಗುವ ರೀತಿಯಲ್ಲಿ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ೨೯(೨) (ಎಫ್) ರಲ್ಲಿ 'ಸಾಧ್ಯವಾಗ ಬಹುದಾದಷ್ಟು ಮಟ್ಟಿಗೆ' ಎಂಬ ಪದಪುಂಜವನ್ನು ಸೇರಿಸಲಾಗಿದೆಯೇ ಹೊರತು ಬಹು ಸಂಖ್ಯಾತರ ಮಾತೃ ಭಾಷೆಯನ್ನು ಕಡೆಗಣಿಸುವ ದೃಷ್ಟಿಯಿಂದಲ್ಲ. ಈ ತಾಂತ್ರಿಕ ತೊಡಕನ್ನು ತೊಡೆದು ಹಾಕಿ ಕಾಯ್ದೆಯಲ್ಲಿನ ಈ ಅವಕಾಶವನ್ನು ಜಾರಿಗೊಳಿಸಲು ಈಗಾಗಲೇ ೨೦೧೫ ರಲ್ಲಿ ರಾಜ್ಯದ ಎರಡೂ ಸದನಗಳಲ್ಲಿ ಜಾರಿಯಾಗಿರುವ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು (ಕರ್ನಾಟಕ ತಿದ್ದುಪಡಿ) ವಿಧೇಯಕ, ೨೦೧೫ನ್ನು ರಾಷ್ಟ್ರಪತಿ ಅನುಮೋದನೆ ಯೊಂದಿಗೆ ಮುಂಬರುವ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ತರಲು ಅಗತ್ಯ ಕ್ರಮ ಕೈಗೊಳ್ಳಬೇಕಿದೆ.

೩. ಸಮಸ್ಯೆಯ ಶಾಶ್ವತ ಪರಿಹಾರಕ್ಕಾಗಿ ರಾಜ್ಯ ಸರ್ಕಾರವು ಇತರೆ ರಾಜ್ಯಗಳ ಬೆಂಬಲದೊಂದಿಗೆ ಸಂವಿಧಾನದ ಪರಿಚ್ಛೇದ ೨೧ಎ ಗೆ ಅಗತ್ಯ ತಿದ್ದುಪಡಿ ತರುವ - ಮೂಲಕ ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಕನಿಷ್ಠ ೧೦ ನೆಯ ತರಗತಿಯವರೆಗೆ ಕಡ್ಡಾಯವಾಗಿ ಮಗುವಿನ ಮಾತೃ ಭಾಷೆಯಲ್ಲಿಯೇ ಶಿಕ್ಷಣ ನೀಡಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕಿದೆ. ಈ ವಿಷಯದಲ್ಲಿ, ರಾಜ್ಯವನ್ನು ಪ್ರತಿನಿಧಿಸುವ ಸಂಸದರು ಸಕ್ರಿಯ ಪಾತ್ರವಹಿಸಬೇಕಿದೆ. ಈ ಕೆಲಸಕಕ್ಕೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಅಖಿಲ ಭಾರತ

ಪ್ರಾತಿನಿಧಿಕ ಸಭಾವು ಮಾರ್ಚ್ ೨೦೧೮ ರಲ್ಲಿ ಹೊರಡಿಸಿರುವ ಭಾಷಾ ನಿರ್ಣಯವನ್ನು ಪ್ರಧಾನವಾಗಿ ಬಳಸಬೇಕಿದೆ.

೪. ಭಾಷೆ ಮತ್ತು ನಾಡಿನ ಹಿತದೃಷ್ಟಿಯಿಂದ ಕನ್ನಡವನ್ನು ಉಳಿಸಿ ಬೆಳೆಸಲು ಸರ್ಕಾರಕ್ಕಿರುವ ಒಂದೇ ಒಂದು ದಾರಿಯೆಂದರೆ ಶಿಕ್ಷಣವನ್ನು ರಾಜ್ಯದ ಸಮಗ್ರ ಅಭಿವೃದ್ಧಿಗೆ ಏಕೈಕ ಭದ್ರ ಬುನಾದಿಯೆಂದು ಪರಿಗಣಿಸಿ ಕೂಡಲೇ ರಾಜ್ಯದ ಎಲ್ಲಾ ಮಕ್ಕಳಿಗೆ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯ ಆಧಾರದ ಮೇಲೆ ಒಂದೇ



ಗುಣಮಟ್ಟದ ಶಿಕ್ಷಣ ಒದಗಿಸಬಲ್ಲ ಸಮಗ್ರ ಶಿಕ್ಷಣ ನೀತಿ ಹಾಗು ಭಾಷಾ ನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸಬೇಕಾಗಿದೆ. ತಾರತಮ್ಯಗಳನ್ನು ಹುಟ್ಟುಹಾಕುತ್ತಿರುವ ಇಂದಿನ ಶೈಕ್ಷಣಿಕ ವ್ಯವಸ್ಥೆಗೆ ಅಂತ್ಯಹಾಡುವುದರ ಮೂಲಕ ಸಮಸ್ಯೆಯ ಮೂಲವನ್ನು ಅರಿತು ದೀರ್ಘಕಾಲಿಕ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಸಮಾನತೆ ಮತ್ತು ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ಮಾತೃಭಾಷಾ ಮಾಧ್ಯಮದಲ್ಲಿ ಸಮಾನ ಶಾಲಾ ಶಿಕ್ಷಣವನ್ನು ನೀಡಲು ಸಾಧ್ಯವಾಗಬಹುದಾದ ಸಮಗ್ರ ಶಿಕ್ಷಣ ನೀತಿಯೊಂದು ಮಾತ್ರ ಇಂತಹ ಸಂಕೀರ್ಣ ಮತ್ತು ಸೂಕ್ಷ್ಮತೆಯಿಂದ ಕೂಡಿದ ವಿಚಾರಗಳಿಗೆ ಪರಿಹಾರವನ್ನು ಒದಗಿಸಬಲ್ಲದು.

ಕೊನೆಯದಾಗಿ, ಕುವೆಂಪು ಅವರು ೧೯೫೧ ರಲ್ಲಿ ದೇಜಗೌ ಅವರ 'ಕನ್ನಡಿಗರೆ ಎಚ್ಚರಗೊಳ್ಳಿ!' ಎಂಬ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ಹೇಳಿದ ಮಾತನ್ನು ಉದ್ಧರಿಸಿ ನನ್ನ ಮಾತನ್ನು ಮುಗಿಸುತ್ತೇನೆ.

"ಹೇ ರಾಜಕಾರಣಿ, ಹೇ ಮಂತ್ರಿವರೇಣ್ಯ, ಹೇ ಅಧಿಕಾರಿ ಸರ್ವೋತ್ತಮ, ಹೇ ವಣಿಜ್ವರ, ಹೇ ಶ್ರಮಜೀವಿ, ಹೇ ಅಧ್ಯಾಪಕ ಮಹಾಶಯ, ಓ ನೇಗಿಲ ಯೋಗಿ, ನೀನು ಯಾರೇ ಆಗಿರು, ಎಲ್ಲಿಯೇ ಇರು, ಕನ್ನಡವನ್ನು ಕೈಬಿಡದಿರು.

"ನಾಳೆ ಎಂದರಾಗದು; ಮುಂದೆ ಎಂದರಾಗದು; ಇಂದೇ ನೀನು ನಿರ್ಣಯಿಸ ಬೇಕು ಇಂದೆ ಎತ್ತಿ ಮೊರೆಯಬೇಕು. ಬೆಂಕಿಗೆ ಬಿದ್ದವರನ್ನು ನಾಳೆ ಎತ್ತುತ್ತೇನೆಯೆಂದರೆ ದೊರೆಯುವುದೇನು? ಬೂದಿಯಲ್ಲವೇ! ನೀರಿಗೆ ಬಿದ್ದವರನ್ನು ನಾಳೆ ಎತ್ತುತ್ತೇನೆಂದರೆ ಲಭಿಸುವುದೇನು? ಹೆಣವಲ್ಲವೆ!

"ಇದು ನಿನ್ನ ಭಾಷೆ; ಇದು ದೇಶದ ಭಾಷೆ; ಇದು ಸಾವಿರಾರು ವರ್ಷಗಳ ಸುಮಷ್ಟ ಸಾಹಿತ್ಯ ಭಾಷೆ; ಇದು ಮಹಾಕವಿಗಳನ್ನು ಶಿಲ್ಪಿಗಳನ್ನು ರಾಜಾಧಿರಾಜರನ್ನು ವೀರಾಧಿವೀರರನ್ನು ರಸಋಷಿ ದಾರ್ಶನಿಕರನ್ನು ಹಡೆದಿರುವ ಭಾಷೆ; ಏನೋ ನಡುವೆ ನಾಲ್ಕು ದಿನ ವಿಧಿ ಮುನಿಯೆ ಸಿರಿಯಳಿದು, ಮನೆ ಮುರಿಯೆ ಬೀದಿ ಸೇರಿದ ಮಾತ್ರದಿಂದ ನಿನ್ನ

ತಾಯಿ ರಾಣಿಯಾಗಿದ್ದಳೆಂಬುದನ್ನು ಮರೆತುಬಿಡುವೆಯ? ಸ್ವತಂತ್ರನಾದ ಮೇಲೆಯೂ ಆಕೆಯನ್ನು ತೊತ್ತಾಗಿರುಸುವೆಯಾ?"

## ಚಲನಚಿತ್ರ : ಕನ್ನಡ ಸಾಹಿತ್ಯ

# ಕನ್ನಡ ಚಲನಚಿತ್ರ : ಮೌಲ್ಯ ಪರಂಪರೆ

**–ಕೆ.ಎಂ. ಚೈತನ್ಯ**

## ಸಿನೆಮ ಒಂದು ಉದ್ಯಮ :

ಪ್ರಪಂಚದಾದ್ಯಂತ ಸಿನೆಮ ಹಾಗೂ ಸಂಸ್ಕೃತಿಗೂ ಮೊದಲಿನಿಂದಲೂ ಒಂದು ವಿಶೇಷ ಸಂಬಂಧ ಇದೆ. ಮೊದಲಿಗೆ ಸಿನೆಮ ಒಂದು ಕಲೆಯೊ, ಉದ್ಯಮವೊ ಎಂಬ ಪ್ರಶ್ನೆ ಆಗಾಗ ಚರ್ಚೆಯಾಗಿದೆ. ಇತರ ಕಲೆಗಳಲ್ಲಿ ಆ ಕಲೆಯ ಸೃಷ್ಟಿಗೂ ಅದು ತಲುಪುವ ಓದುಗ, ಕೇಳುಗ ಅಥವ ನೋಡುಗನಿಗೂ ಒಂದು ನೇರ ಸಂಬಂಧ ಇರುತ್ತೆ. ಆದರೆ ಸಿನೆಮ ಹಾಗಲ್ಲ. ಒಬ್ಬ ನಿರ್ದೇಶಕನ ಮನಸ್ಸಿನಲ್ಲಿ ಒಂದು ವಸ್ತು ಹುಟ್ಟಿದಾಗ ಅದನ್ನು ತೆರೆಯ ಮೇಲೆ ತರಲು ನಟರು ಬೇಕು. ಅದನ್ನು ಅಂದವಾಗಿ ತೋರಿಸಲು ಛಾಯಾಗ್ರಾಹಕ ಬೇಕು. ಆ ಕಥೆಗೆ ಸರಿಯಾದ ವೇಗ ನೀಡಲು ಸಂಕಲನಕಾರ ಬೇಕು. ಸೂಕ್ತವಾದ ಹಿನ್ನೆಲೆ ಸಂಗೀತ ಹಾಗೂ ಹಾಡುಗಳು ಬೇಕು. ಕಲಾ ನಿರ್ದೇಶಕರು, ಪ್ರಸಾದನ ಮಾಡುವವರು, ಸಂಭಾಷಣೆ ಬರೆಯುವವರು, ಗೀತ ರಚನಾಕಾರರು, ಹಾಡುಗರು... ಎಲ್ಲಕ್ಕಿಂತ ಮುಖ್ಯವಾಗಿ ಒಂದು ಸಿನೆಮ ತಯ್ಯಾರಿಸಲು ಸಾಕಷ್ಟು ಹಣ ಬೇಕು. ನಿರ್ದೇಶಕನ ಕಥೆಗೆ ಬೆಲೆ ಕೊಟ್ಟು ಆ ಕನಸಿಗೆ ರೆಕ್ಕೆ ಕೊಡುವ ನಿರ್ಮಾಪಕ ಬೇಕು.

## ಸಿನೆಮ ಸೃಷ್ಟಿಯಲ್ಲಿ ತಂಡ ಹಾಗು ಉದ್ಯಮದ ಪಾತ್ರ :

ಈ ಎಲ್ಲ ಅಂಶಗಳು ಕಥೆಯು ಕಡೆಗೆ ಜನರ ಮುಂದೆ ಯಾವ ರೂಪದಲ್ಲಿ ಪ್ರದರ್ಶನ ಆಗುತ್ತೆ ಅನ್ನುವುದನ್ನು ಬದಲಾಯಿಸುತ್ತವೆ ರೂಪಿಸುತ್ತವೆ. ಒಬ್ಬ ಛಾಯಾಗ್ರಾಹಕ ತನ್ನ ಬೆಳಕು ಹಾಗೂ composition ಮೂಲಕ ತನ್ನದೇ ಆದ ಆಯಾಮವನನು ನೀಡುತ್ತಾನೆ, ಒಬ್ಬ ಸಂಭಾಷಣೆ ಬರೆಯುವವನು ತನ್ನ ಕೊಡುಗೆಯಿಂದ ಕಥೆಗೆ ಬೇರೆ ಆಯಾಮ ನೀಡುತ್ತಾನೆ. ಒಬ್ಬ ನಟ ಪಾತ್ರವನ್ನು ಹೇಗೆ ಗ್ರಹಿಸುತ್ತಾನೆ ಅನ್ನುವುದರ ಮೇಲೆ ತೆರೆಯ ಮೇಲೆ ಆ ಪಾತ್ರವನ್ನು ಜನರು ನೋಡಿದಾಗ ಅದನ್ನು ಜನರು ಹೇಗೆ ಗ್ರಹಿಸುತ್ತಾರೆ ಅನ್ನುವುದನ್ನು ನಿರ್ಧರಿಸುತ್ತಾನೆ. ಈ ಎಲ್ಲದರಲ್ಲೂ ಉದ್ಯಮದ ದೃಷ್ಟಿಯಿಂದ ಕೂಡ ನಿಧಾರವಾಗುತ್ತವೆ. ಒಬ್ಬ ಜನಪ್ರಿಯ ನಟನಿಗೆ ತನ್ನದೇ ಆದ ಪ್ರೇಕ್ಷಕರಿರುತ್ತಾರೆ. ಅವರಿಗೆ ಆತನಿಂದ ಒಂದು ಅಪೇಕ್ಷೆ ಇರುತ್ತೆ. ಆ ನಟ ಆರಿಸಿಕೊಳ್ಳುವ ಪಾತ್ರಗಳಲ್ಲಿ, ಅದನ್ನು ಅಭಿನಯಿಸುವ ರೀತಿಯಲ್ಲಿ ತನ್ನ ಪ್ರೇಕ್ಷಕರ ನಿರೀಕ್ಷೆಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರುತ್ತಾನೆ. ಒಬ್ಬ ನಿರ್ಮಾಪಕ ಒಂದು ಕಥೆಯನ್ನು ನಿರ್ಮಾಣ ಮಾಡಬೇಕು ಎಂದು ನಿರ್ಧರಿಸಿದಾಗ, ಮಾರುಕಟ್ಟೆಯಲ್ಲಿ ಜನರು ಅದನ್ನು ನೋಡಬೇಕು, ತನಗೆ ಅದರಿಂದ ಲಾಭ ಬರಬೇಕು ಎಂಬ ನಿರೀಕ್ಷೆ ಇಟ್ಟುಕೊಂಡಿರುತ್ತಾನೆ. ಅದಕ್ಕೆ ತನ್ನ ಹಾಗೆ ಕೆಲವೊಮ್ಮೆ ಕಥೆಯಲ್ಲಿ ಕೆಲವು ಸೇರ್ಪಟೆಗಳನ್ನು, ಬದಲಾವಣೆಗಳನ್ನು ಕೇಳಬಹುದು.

**ವಿತರಕರ ಪಾತ್ರ:**

ಅದೇ ರೀತಿ ಚಲನಚಿತ್ರದಲ್ಲಿ ವಿತರಣೆ ಬಹಳ ಮುಖ್ಯವಾದ ಭಾಗ, ವಿತರಕರು ಯಾವ ರೀತಿಯ ಸಿನೆಮಾಗಳನ್ನು ಜನರ ಮುಂದೆ ತೆಗೆದುಕೊಂಡು ಹೋಗುತ್ತಾರೆ, ಯಾವ ರೀತಿಯ ಸಿನೆಮಾಗಳನ್ನು ವಿತರಕರು ಬಯಸುತ್ತಾರೆ, ಅನ್ನುವುದೂ ಬಹಳ ಮುಖ್ಯವಾಗುತ್ತದೆ. ಹೀಗಾಗಿ, ಪ್ರತಿ ಹಂತದಲ್ಲೂ ನಿರ್ದೇಶಕನ ಆಶಯಕ್ಕೂ ಮಾರುಕಟ್ಟೆಯ ಅಪೇಕ್ಷೆಗೂ, ಸಾಕಷ್ಟು ಬದಲಾವಣೆಗಳು ಆಗುತ್ತವೆ. ಆ ಎಲ್ಲವನ್ನೂ ಒಳಗೊಂಡು ಕಡೆಗೆ ತೆರೆಯ ಮೇಲೆ ಬರುವುದೇ ನೀವು ನೋಡುವ ಸಿನೆಮಾ, ಸಿನೆಮಾ ಒಂದು ಉದ್ಯಮವಾದುದರಿಂದ ಇಲ್ಲಿ ಇದೆಲ್ಲವೂ ಮುಖ್ಯವಾಗುತ್ತದೆ.

**ಮೌಲ್ಯ ಪ್ರಸಾರ- ನಿರ್ದೇಶಕನ ಕಥೆ ಹಾಗೂ ನಾಯಕನ ಪಾತ್ರ :**

ಸಿನೆಮಾದ ಮೌಲ್ಯ ಪರಂಪರೆಯ ಬಗ್ಗೆ ಮಾತಾಡುವ ಮುನ್ನ ಒಂದು ಮುಖ್ಯವಾದ ವಿಷಯ ಅರ್ಥಮಾಡಿಕೊಳ್ಳಬೇಕು. ಸಿನೆಮಾ ನೋಡುವ ಪ್ರೇಕ್ಷಕ ಆ ಸಿನೆಮಾದಲ್ಲಿ ಮೌಲ್ಯಗಳನ್ನು ಹೇಗೆ ಗ್ರಹಿಸುತ್ತಾನೆ? ಒಂದು ನಿರ್ದೇಶಕ ಆರಿಸುವ ಕಥೆ ಹಾಗೂ ಅದನ್ನು ತೆರೆಯ ಮೇಲೆ ತರುವ ಬಗೆಯಿಂದ. ಆದರೆ ಅದಕ್ಕೂ ಮುಖ್ಯವಾಗಿ ಜನಸಾಮಾನ್ಯರು ಒಂದು ಚಿತ್ರದ ಮೌಲ್ಯಗಳನ್ನು ಗುರುತಿಸಿಕೊಳ್ಳುವುದು ಅದರ ನಾಯಕ ಅಥವ ನಾಯಕಿಯ ಮುಖಾಂತರ, ನಾಯಕನ ಧೋರಣೆ ಏನು? ಆತ ಯಾವುದಕ್ಕೆ ಸ್ಪ<ದಿಸುತ್ತಾನೆ, ಪ್ರತಿಕ್ರಿಯಿಸುತ್ತಾನೆ? ಸಮಾಜದ ಬಗ್ಗೆ, ವ್ಯವಸ್ಥೆಯ ಬಗ್ಗೆ, ಹೆಂಗಸರ ಬಗ್ಗೆ ಆತನ ವರ್ತನೆ ಏನು? ಇವುಗಳನ್ನು ತನ್ನ ಅಭಿಮಾನಿಗಳು ನೋಡಬಹುದು, ಅನುಕರಿಸಬಹುದು.

**ಡಾ. ರಾಜಕುಮಾರ್, ಎಂ.ಜಿ.ಆರ್, ಎನ್.ಟಿ.ಆರ್.**

ಭಾರತೀಯ ಚಿತ್ರರಂಗಕ್ಕೆ ಅದರಲ್ಲೂ ದಕ್ಷಿಣ ಭಾರತ ಚಿತ್ರರಂಗಕ್ಕೆ ಒಂದು ವಿಶೇಷ ಇತಿಹಾಸ ಇದೆ. ೧೯೫೦, ೬೦ ಹಾಗೂ ೭೦ರ ದಶಕಗಳಲ್ಲಿ ಸಿನೆಮಾದ ಪ್ರಭಾವ ಕೇವಲ ಬೆಳ್ಳಿತೆರೆಗೆ ಮಾತ್ರ ಸೀಮಿತವಾಗಿರಲಿಲ್ಲ. ತಮ್ಮ ಸುತ್ತಮುತ್ತಲ ಸಾಮಾಜಿಕ ಹಾಗು ರಾಜಕೀಯ ಬೆಳವಣಿಗೆಯಲ್ಲಿ ಸಿನೆಮಾ ಮುಖ್ಯವಾದ ಪಾತ್ರ ವಹಿಸಿತ್ತು. ಅದರಲ್ಲೂ ಕರ್ನಾಟಕ, ತಮಿಳುನಾಡು ಹಾಗೂ ಆಂಧ್ರ ಪ್ರದೇಶದಲ್ಲಿ ಇದು ಹೆಚ್ಚು ಪ್ರಭಾವಶಾಲಿಯಾಗಿತ್ತು ಅನ್ನುವುದನ್ನು ನಾವು ನೋಡಬಹುದು. ಈ ಮೂರು ರಾಜ್ಯಗಳಲ್ಲಿ ಮೂರು ದಿಗ್ಗಜರು ಚಲನಚಿತ್ರವನ್ನು ರೂಪಿಸಲು ಮುಖ್ಯರಾಗಿದ್ದರು.

ತಮಿಳುನಟ ಎಂ.ಜಿ. ರಾಮಚಂದ್ರನ್ ಕೇವಲ superstar ಮಾತ್ರವಲ್ಲ ಆ ನಾಡಿನ ದ್ರಾವಿಡ ಹೋರಾಟದಲ್ಲಿ ಮುಖ್ಯಶಕ್ತಿಯಾಗಿದ್ದರು. ನಂತರ ಆ ರಾಜ್ಯದ ಮುಖ್ಯಮಂತ್ರಿ ಆದರು. ಆಂಧ್ರಪ್ರದೇಶದಲ್ಲಿ ಎನ್.ಟಿ. ರಾಮರಾವ್

ಅವರು ತೆಲುಗು ಭಾಷೆಯ ಬಗ್ಗೆ ಹೆಮ್ಮೆಯನ್ನು ಅಭಿಮಾನಿಗಳಲ್ಲಿ ಹೆಚ್ಚಿಸಿ, ತೆಲುಗು ದೇಸಂ ಪಕ್ಷ ಕಟ್ಟುವುದರ ಮೂಲಕ ಆ ರಾಜ್ಯದ ಮುಖ್ಯಮಂತ್ರಿ ಆದರು. ಕರ್ನಾಟಕದಲ್ಲಿ ಡಾ. ರಾಜಕುಮಾರ್ ಅವರು ಗೋಕಾಕ್ ಚಳುವಳಿಯ ಮುಖ್ಯ ಹಂತದಲ್ಲಿ ಸೇರುವ ಮೂಲಕ ಇಡೀ ಹೋರಾಟಕ್ಕೆ ವಿಶೇಷ ಶಕ್ತಿ ತಂದರು. ಆದರೆ ಎಂ.ಜಿ.ಆರ್. ಹಾಗೂ ಎನ್.ಟಿ.ಆರ್.



ಅವರ ಹಾಗೆ ರಾಜಕುಮಾರ್ ಅವರಿಗೆ ರಾಜಕೀಯದ ಬಗ್ಗೆ ಹೆಚ್ಚು ಆಸಕ್ತಿ ಇರಲಿಲ್ಲ. ಅದರಿಂದ ದೂರ ಉಳಿದರು. ಸಿನೆಮಾ ರಂಗಕ್ಕೆ ಸಂಪೂರ್ಣ ಗಮನ ಕೊಟ್ಟರು.

**ಸಾಮಾನ್ಯ ಹಿನ್ನೆಲೆಯ superstar ಗಳು :**

ವಿಶೇಷ ಅಂದರೆ, ಈ ಮೂವರೂ ದಿಗ್ಗಜರು ಬಹಳ ಸಾಮಾನ್ಯ ಹಿನ್ನೆಲೆಯಿಂದ ಬಂದಂಥವರು. ಅವರ ತಂದೆತಾಯಂದಿರು ಹಣವಂತರಲ್ಲ. ಅವರು ಬಹಳ ಪ್ರಭಾವ ಉಳ್ಳ ಹಾಗೂ privilage ಇರುವ ಕುಟುಂಬಗಳಿಂದ ಬಂದವರಲ್ಲ. ಈ ರೀತಿಯ ಸಾಮಾನ್ಯ ಹಿನ್ನೆಲೆಯಿಂದ ಬಂದಿದ್ದರಿಂದ ಅವರು ಜನಸಾಮಾನ್ಯರಿಗೆ ಹತ್ತಿರವಾದರು. ಜನಸಾಮಾನ್ಯರ ಮಿಡಿತ ಅವರಿಗೆ ಗೊತ್ತಿತ್ತು. ವ್ಯಾಪಕವಾದ ಅವರ ಪ್ರಭಾವದ ಬಗ್ಗೆ ಅವರಿಗೆ ಅರಿವಿತ್ತು. ಈ ಕಾರಣಕ್ಕೆ ಅವರು ಯಾವ ರೀತಿಯ ಪಾತ್ರಗಳನ್ನು ಆಯ್ಕೆ ಮಾಡಬೇಕು ಹಾಗೂ ಹಾಗೂ ಯಾವ ರೀತಿ ಅದನ್ನು ತೆರೆಯ ಮೇಲೆ ಅಭಿನಯಿಸಬೇಕು ಎನ್ನುವುದರ ಬಗ್ಗೆ ವಿಶೇಷ ಮುಂಜಾಗ್ರತೆ ವಹಿಸಿದರು.

ಅದರಲ್ಲೂ ಜನಸಾಮಾನ್ಯರಲ್ಲಿ ಪ್ರೀತಿಯಿಂದ ಅಣ್ಣವರು" ಅನಿಸಿಕೊಂಡ ಡಾ.ರಾಜಕುಮಾರ್ ಅವರು ಸ್ವಲ್ಪ ಹೆಚ್ಚೇ ಅನಿಸುವಷ್ಟು ಕಾಳಜಿ ವಹಿಸುತ್ತಿದ್ದರು. ಅವರ ಸಿನೆಮಾಗಳಲ್ಲಿ ರಾಜಕುಮಾರ್ ಅವರು ಸಿಗರೇಟು ಸೇದುತ್ತಿರಲಿಲ್ಲ. ನಾಯಕ ಮಧ್ಯಪಾನ ಮಾಡುವ ಸನ್ನಿವೇಶಗಳನ್ನು ಒಪ್ಪುತ್ತಿರಲಿಲ್ಲ. ಜನ ಅವರನ್ನು ನೋಡಿ ಅನುಕರಿಸಬಹುದು ಎನ್ನುವುದರ ಬಗ್ಗೆ ಅವರಿಗೆ ಅರಿವಿತ್ತು.

**Commercial cinema ಹಾಗು ಮೌಲ್ಯ ಪರಂಪರೆ :**

ಮೌಲ್ಯ ಪರಂಪರೆ ಬಗ್ಗೆ ನನ್ನ ಈ ಮಾತುಗಳೂ ಹೆಚ್ಚು ಜನಪ್ರಿಯ ಹಾಗೂ commercial ಸಿನೆಮಾ ಕುರಿತಾದ ಮಾತುಗಳಾಗಿರುತ್ತವೆ. ಕಲಾತ್ಮಕ ಚಿತ್ರಗಳನ್ನು ಮಾಡುವುದರಲ್ಲಿ ಗಿರೀಶ್ ಕಾಸರವಳ್ಳಿ, ಪಿ.ಶೇಷಾದ್ರಿ ಮೊದಲುಗೊಂಡು ಅನೇಕ ನಿರ್ದೇಶಕರು ದೇಶವಿದೇಶಗಳಲ್ಲಿ ಮನ್ನಣೆ ಪಡೆದಿದ್ದಾರೆ. ಕರ್ನಾಟಕಕ್ಕೆ ಹೆಮ್ಮೆ ತಂದಿದ್ದಾರೆ, ಅದರ ಬಗ್ಗೆ ಬೇರೆ ಮಾತಿಲ್ಲ. ಆದರೆ ಆ ಚಿತ್ರಗಳು ಕೆಲವು ವಿದ್ಯಾವಂತರು ಹಾಗು ಸಾಹಿತ್ಯ ಸಿನೆಮಾ

ಕ್ಷೇತ್ರದ ನಿಪುಣರಿಗೆ ಸೀಮಿತವಾಗಿವೆ. ಅದರ ಪ್ರಭಾವ ಹೆಚ್ಚು academic ಆದಂಥದ್ದು, ಆದರೆ Commercial cinema ಅನ್ನುವುದು ಅತಿ ಸಾಮಾನ್ಯ ಜನರನ್ನೂ ಮುಟ್ಟುತ್ತದೆ. ಅವರನ್ನೇ ಕೇಂದ್ರವಾಗಿಟ್ಟುಕೊಂಡು ತಯ್ಯಾರಾಗುತ್ತದೆ. ಬಹಳ ವಿದ್ಯಾವಂತರಲ್ಲದವರೂ ಸಹ ಈ ಚಿತ್ರಗಳನ್ನು ನೋಡುತ್ತಾರೆ, ಆನಂದಿಸುತ್ತಾರೆ. ಅದರ ಮೂಲಕ ಯಾವ ಲೋತಿಯ ಪ್ರಭಾವಕ್ಕೆ ಒಳಗಾಗುತ್ತಾರೆ. ಯಾವ ರೀತಿಯ ಮೌಲ್ಯಗಳನ್ನು ಪಡೆಯುತ್ತಾರೆ ಎನ್ನುವುದು ಮುಖ್ಯವಾಗಿದೆ.

**ಹತ್ತು ಬೆಳವಣಿಗೆಗಳು**

ನನ್ನ ಗ್ರಹಿಕೆಯ ಪ್ರಕಾರ ಕನ್ನಡ ಚಿತ್ರರಂಗದಲ್ಲಿ ಹತ್ತು ಮುಖ್ಯ ಬೆಳವಣಿಗೆಗಳನ್ನು ನಾವು ಕಾಣಬಹುದು ಇವುಗಳು ಒಂದುಕಡ್ಡಾಯವಾದ ಕಾಲಾನುಕ್ರಮಕ್ಕೆ chronologyಗೆ ಸೀಮಿತವಾಗಿಲ್ಲ. ನಾನು ಕಂಡಿರುವ ಈ ಹತ್ತು ಮುಖ್ಯ ಬೆಳವಣಿಗೆಗಳು ಏನೆಂದರೆ>



- ಪೌರಾಣಿಕ ವಸ್ತುಗಳು
- ಐತಿಹಾಸಿಕ ಕಥೆಗಳು
- ಸಾಮಾಜಿಕ ವಿಷಯಗಳು
- ಕನ್ನಡ ಸಿನೆಮಾಗಳಲ್ಲಿ ಸಾಹಿತಿಗಳ ಕುತೂಹಲ
- ಪುಟ್ಟಣ್ಣ ಕಣಗಾಲ್ ಹಾಗೂ
- ಪ್ರೇಮಲೋಕ ಹಾಗೂ ತಾಂತ್ರಿಕ ನೈಪುಣ್ಯ
- ಓಂ ಹಾಗೂ ಭೂಗತ ಜಗತ್ತಿನ ಸಿನೆಮಾಗಳು
- ಮುಂಗಾರುಮಳೆ ಹಾಗೂ ಬೆಳೆಯುತ್ತಿರುವ ಕನ್ನಡ ಚಿತ್ರರಂಗದ ಮಾರುಕಟ್ಟೆ.
- ಸಾರ್ವತ್ರಿಕ ಅಥವ Universal ವಿಷಯಗಳನ್ನು ಇಟ್ಟುಕೊಂಡು ಮಾಡಲಾದ ಕನ್ನಡ ಸಿನೆಮಾಗಳು.
- Mega Budget ಅಥವ ಅದ್ದೂರಿಯಾಗಿ ಮಾಡಲಾದ, ಕರ್ನಾಟಕದ ಸೀಮೆಯನ್ನು ಮೀರಿ ಮಾರುಕಟ್ಟೆ ಬೆಳೆಸುವ ಪ್ರಯತ್ನಗಳು.

ಈ ಹತ್ತು ಬೆಳವಣಿಗೆಗಳು ಹೇಗೆ ಕನ್ನಡ ಚಿತ್ರರಂಗವನ್ನು ರೂಪಿಸಿವೆ. ಇದರ ಮುಖ್ಯ ಪಾತ್ರಗಳು ಯಾವ ರೀತಿ ಮೌಲ್ಯಗಳನ್ನು ಪ್ರತಿಪಾದಿಸಿವೆ ಎನ್ನುವುದನ್ನು ಗಮನಿಸುವ ಮೂಲಕ ಕನ್ನಡ ಚಲನಚಿತ್ರ ಮೌಲ್ಯ ಪರಂಪರೆಯನ್ನು ನೋಡುವ ಪ್ರಯತ್ನ ನನ್ನದಾಗಿದೆ.

**ವೃತ್ತಿ ರಂಗಭೂಮಿ ಹಾಗೂ ಸಿನೆಮಾ :**

ಕನ್ನಡ ಚಿತ್ರರಂಗದ ಮೊದಲ ಪ್ರಯತ್ನಗಳು ನಡೆದಿದ್ದು ವೃತ್ತಿ ರಂಗಭೂಮಿಯವರ ಮೂಲಕ. ವೃತ್ತಿ ರಂಗಭೂಮಿಯ ದೊಡ್ಡ ಹೆಸರುಗಳಾದ ಗುಬ್ಬಿ ವೀರಣ್ಣ, ಸುಬ್ಬಯ್ಯ ನಾಯುಡು ಹಾಗೂ ಅನೇಕರು ಮೊದಲ ಕನ್ನಡ ಸಿನೆಮಾಗಳಲ್ಲಿ ತೊಡಗಿಕೊಂಡಿದ್ದರು.

**ಸತಿ ಸುಲೋಚನೆ:**

೧೯೪೧ರಲ್ಲಿ ಬಂದ ಸತಿ ಸುಲೋಚನ ಕನ್ನಡ ಸಿನೆಮಾದ ಮೊದಲ ಟಾಕಿ ಸಿನೆಮ, ಅದಕ್ಕಿಂತ ಮುಂಚೆ ಕೆಲವು ಮೂಕಿ ಚಿತ್ರಗಳು ಬಂದಿದ್ದವು. ಆದರೆ ಮಾತು, ಸಂಭಾಷಣೆ ಉಳ್ಳ ಮೊದಲ ಚಲನಚಿತ್ರ 'ಸತಿ ಸುಲೋಚನ. ಮಾರ್ವಾರಿ ಉದ್ಯಮಿಯಾದ ಚಮಕ್ಲಾಲ್ ದೂಂಗಾಜಿ ಎನ್ನುವವರು ಇದನ್ನು ಆಗಿನ ಕಾಲದಲ್ಲೇ ಸುಮಾರು ೪೦,೦೦೦ ರೂಪಾಯಿಗಳ ವೆಚ್ಚದಲ್ಲಿ ಮಾಡಿದ್ದರು. ಆಗಿನ ಕಾಲಕ್ಕೆ ಬಹಳ ದೊಡ್ಡ ಮೊತ್ತ ಅದು. ಸುಬ್ಬಯ್ಯನಾಯ್ಡು ಹಾಗು ತ್ರಿಪುರಾಂ ಮುಖ್ಯ ಭೂಮಿಕೆಯಲ್ಲಿದ್ದ ಈ ಚಿತ್ರವನ್ನು ವೈ.ವಿ. ರಾವ್ ಅವರು ನಿರ್ದೇಶಿಸಿದ್ದರು. ಸುಲೋಚನೆ ರಾಮಾಯಣದಲ್ಲಿ ಬರುವ ಒಂದು ಪಾತ್ರ ರಾವಣನ ಮಗ ಇಂದ್ರಜೀತನ ಮಡದಿ, ಇಡೀ ರಾಮ ರಾವಣ ಯುದ್ಧವನ್ನು ಆಕೆಯ ಮೂಲಕ ನೋಡಲಾಗಿದೆ. ಕಡೆಗೆ ಗಂಡನನ್ನು ಕಳೆದುಕೊಳ್ಳುವ ಸುಲೋಚನೆ ಪುರಾಣದಲ್ಲಿ ಒಬ್ಬ ದೊಡ್ಡ ಸತಿ ಎಂಬ ಹೆಸರು ಪಡೆಯುತ್ತಾಳೆ. ಇದರಲ್ಲಿ ನಾವೊಂದು ವಿಶೇಷತೆಯನ್ನು ಗಮನಿಸಬೇಕು. ಪುರಾಣ ಹಾಗು ಇತಿಹಾಸವನ್ನು ಹೇಗೆ ಹೊಸ

ದೃಷ್ಟಿಕೋನದಿಂದ ನೋಡಬಹುದು ಎನ್ನುವುದು ಸತಿ ಸುಲೋಚನ ಸಿನೆಮಾದ ಪ್ರಯತ್ನವಾಗಿತ್ತು. ಇದು ಬಹಳ ಮುಖ್ಯ. ಯಾಕೆಂದರೆ ಪುರಾಣ ಹಾಗೂ ಇತಿಹಾಸವನ್ನು ವಸ್ತುವಾಗಿ ಆರಿಸಿಕೊಂಡಾಗ ಸಮಕಾಲೀನ ಸಮಾಜಕ್ಕೆ, ರಾಜಕೀಯಕ್ಕೆ ಪ್ರಸ್ತುತ ಮಾಡುವ ರೂಪಾಂತರ ಅದಾಗಿರುತ್ತದೆ.

**ಕಿತ್ತೂರು ಚೆನ್ನಮ್ಮ :**

ಇದನ್ನು ಹಲವಾರು ಸಿನೆಮಾಗಳಲ್ಲಿ ಅನೇಕ ಕಾಲಗಳಲ್ಲಿ ನಾವು ನೋಡಬಹುದು. ಕನ್ನಡದ ಜನಪ್ರಿಯವಾದ 'ಕಿತ್ತೂರು ಚೆನ್ನಮ್ಮ' ಸಿನೆಮಾದಲ್ಲಿ ರಾಣಿ ಚೆನ್ನಮ್ಮ "ನಿಮಗೇಕೆ ಕೊಡಬೇಕು ಕಪ್ಪ" ಎಂದು ಗರ್ಜಿಸಿದಾಗ ಒಂದು ಕಡೆ ಅದು ಐತಿಹಾಸಿಕ ಕಥೆಯಲ್ಲಿ ಚೆನ್ನಮ್ಮ ಬ್ರಿಟೀಶರಿಗೆ ಆಡಿದ ಮಾತಾಗಿತ್ತು. ಆದರೆ ಆ ಸಿನೆಮ ತಯ್ಯಾರಾಗಿದ್ದು, ಭಾರತ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದ ನಂತರ, ಸ್ವತಂತ್ರ್ಯ ಬಂದ ೧೪ ವರ್ಷಗಳ ನಂತರ ಬಂದ ಕಿತ್ತೂರು ಚೆನ್ನಮ್ಮ ಸಿನೆಮ ಎರಡು ರೀತಿಯಲ್ಲಿ ಕನ್ನಡಿಗರನ್ನು ಮುಟ್ಟಿತು. ಒಂದು ಸ್ವಾತಂತ್ರ್ಯ ಪೂರ್ವದ ದೇಶದ ಎಲ್ಲೆಡೆ ಇದ್ದ ರಾಷ್ಟ್ರವಾದವನ್ನು ಅದು ಪ್ರತಿಬಿಂಬಿಸಿತು. ಅಲ್ಲದೆ ಕೇವಲ ೯ ವರ್ಷಗಳ ಹಿಂದೆ ಮೈಸೂರು ಪ್ರಾಂತ್ಯ Bombay presidency ಯ ಕೆಲವು ಭಾಗಗಳು, ದಕ್ಷಿಣ ಕನ್ನಡ, Madras Presidency ಯ ಭಾಗಗಳು, ಹೀಗೆ ಹಲವಾರು ಪ್ರಾಂತ್ಯಗಳನ್ನು ಸೇರಿಸಿ ಕರ್ನಾಟಕ ಎಂಬ ಹೊಸ ರಾಜ್ಯ ಹುಟ್ಟಿಕೊಂಡಿತ್ತು. ಚೆನ್ನಮ್ಮನ ಮಾತು ಕನ್ನಡತನದ ಹೆಮ್ಮೆಯ ಪ್ರತಿಪಾದನೆಯೂ ಆಗಿತ್ತು.

ಇದೇ ರೀತಿ ಇತಿಹಾಸ ಹಾಗು ಪುರಾಣವನ್ನು ಇಂದಿನ ಸಂದರ್ಭಕ್ಕೆ ಸ್ಪಂದಿಸುವಂತೆ ಅನೇಕ ಚಿತ್ರಗಳು ಬಂದಿವೆ. 'ಕಲ್ಲರಳಿ ಹೂವಾಗಿ' ಸಿನೆಮಾ ಆಗಲಿ, 'ಸಂಗೊಳ್ಳಿ ರಾಯಣ್ಣ' ಸಿನೆಮಾ ಆಗಲಿ ಅಥವಾ ಇತ್ತೀಚೆಗೆ ಬಂದ ಮುನಿರತ್ನ ಅವರ 'ಕುರುಕ್ಷೇತ್ರ' ಕೂಡ ಇತಿಹಾಸ ಪುರಾಣವನ್ನು ಇಂದಿನ ಸಂದರ್ಭಕ್ಕೆ ರೂಪಾಂತರಿಸುವ ಪ್ರಯತ್ನಗಳಾಗಿವೆ.

**ಬಂಗಾರದ ಮನುಷ್ಯ :**

ಬಹುಶಃ ಕನ್ನಡ ಸಿನೆಮಾ ಇತಿಹಾಸದಲ್ಲಿ ಅತಿ ಮುಖ್ಯ ಮೈಲಿಗಲ್ಲು ಎಂದರೆ 'ಬಂಗಾರದ ಮನುಷ್ಯ' ಚಿತ್ರ ಎನ್ನಬಹುದು. ಸಾಮಾಜಿಕ ವಿಷಯಗಳನ್ನು ಹೇಗೆ ಜನರ ಮುಂದೆ ಕೊಂಡೊಯ್ಯಬಹುದು ಎನ್ನುವುದನ್ನು ಈ ಚಿತ್ರ ಸಾಬೀತು ಮಾಡಿತು. ಸಿದ್ದಲಿಂಗಯ್ಯನವರು ನಿರ್ದೇಶಿಸಿದ ಈ ಚಿತ್ರ ಡಾ. ರಾಜಕುಮಾರ್ ಅವರ ಹೆಸರನ್ನು ಇನ್ನಷ್ಟು ಹೆಚ್ಚಿಸಿತು. ಬೆಂಗಳೂರಿನಲ್ಲಿ ಸುಮಾರು ೧೦೪ವಾರ, ಮೈಸೂರಿನಲ್ಲಿ ೬೦ ವಾರ, ಮಂಗಳೂರಿನಲ್ಲಿ ೨೫ ವಾರ ಸತತವಾಗಿ ಪ್ರದರ್ಶನ ಕಂಡ "ಬಂಗಾರದ ಮನುಷ್ಯ" ಇತಿಹಾಸ ಸೃಷ್ಟಿಮಾಡಿತು.

ಈ ಸಿನೆಮಾದ ವಿಶೇಷ ಎಂದರೆ ಕೃಷಿಯಲ್ಲಿ ಹೊಸ ಪದ್ಧತಿಗಳನ್ನು ಅಳವಡಿಸುವ ಕಡೆ ಜನ ಸಾಮಾನ್ಯರ ಗಮನ ಸೆಳೆಯಿತು. ಡೈನಮೈಟ್ ಬಳಸುವುದಾಗಲಿ ದೊಡ್ಡ ಗಳನ್ನು ಬಳಸಿ ಭೂಮಿಯನ್ನು ಚೊಕ್ಕ ಮಾಡುವುದಾಗಲಿ ಎಲ್ಲವನ್ನೂ ಈ ಚಿತ್ರದಲ್ಲಿ ತೋರಿಸಲಾಗಿತ್ತು. ಒಂದು ಹಾಡಿನಲ್ಲಿ ಕೆ.ಆರ್.ಎಸ್. ಅಣೆಕಟ್ಟು ಕಟ್ಟಿದ ಕಥೆ ಹಾಗೂ ಅದರಿಂದ ಜನರಿಗೆ ಆದ ಅನುಕೂಲಗಳ ಬಗ್ಗೆ ತಿಳಿಸಲಾಯಿತು. ಒಂದು ದೃಶ್ಯದಲ್ಲಿ



ನಾಯಕ ನಾಯಕಿಗೆ ಸಹಕಾರ ಸಂಘಗಳ ಬಗ್ಗೆ ಸರಳ ಮಾತುಗಳಲ್ಲಿ ವಿವರಿಸುತ್ತಾನೆ. ಆಗ ತಾನೆ ಸಹಕಾರಿ ಸಂಘಗಳು ಬೆಳೆಯುತ್ತಿದ್ದ ಕರ್ನಾಟಕದಲ್ಲಿ ಇದು ಆ ಸಹಕಾರಿ ಸಂಘಟನೆಗೆ ಸಾಕಷ್ಟು ಸಹಾಯ ನೀಡಿತು. ಹೀಗೆ ಆಗಿನ ಕಾಲದ ಹಲವು ಸಮಕಾಲೀನ ವಿಷಯಗಳನ್ನು ಈ ಚಿತ್ರ ತೆರೆಯ ಮೇಲೆ ತಂದಿತು.

ನಗರಗಳಲ್ಲಿ ಕೆಲಸ ಹುಡುಕಿಕೊಂಡು ಬಂದಿದ್ದ ಅನೇಕ ಜನರು.... ಅದರಲ್ಲೂ ಹಲವು ವಿದ್ಯಾವಂತರೂ ಸೇರಿದಂತೆ... ಮತ್ತೆ ತಮ್ಮ ಹಳ್ಳಿಗಳಿಗೆ ಹೋಗಿ ಕೃಷಿ ಮಾಡಲು ಈ ಸಿನೆಮ ಪ್ರೇರೇಪಿಸಿತು ಎಂದು ಹೇಳಲಾಗುತ್ತದೆ. ಮೌಲ್ಯ ಪರಂಪರೆಯ ದೃಷ್ಟಿಯಿಂದೊಂದು ಸಇನೆಮ ಹೇಗೆ ಜನರನ್ನ ಹುಡಿದುಂಬಿಸಬಹುದು ಎನ್ನುವುದಕ್ಕೆ ಬಂಗಾರದ ಮನುಷ್ಯ ಒಂದು ನಿದರ್ಶನವಾಗಿದೆ.

**ಸಾಹಿತಿಗಳು ಹಾಗು ಸಿನೆಮ:**

ಕನ್ನಡ ಚಿತ್ರರಂಗದ ಮತ್ತೊಂದು ವಿಶೇಷ ಎಂದರೆ ನಮ್ಮ ನಾಡಿನ ಸಾಹಿತಿಗಳು ಈ ಕ್ಷೇತ್ರದೊಂದಿಗೆ ಬೆಳೆಸಿಕೊಂಡ ಸಂಬಂಧ. ದೋಣಿ ಸಾಗಲಿ ಮುಂದೆ ಹೋಗಲಿ, ಮೂಡಲ ಮನೆಯ ಮುತ್ತಿನ ನೀರಿನ, ಹೀಗೆ ಕನ್ನಡ ಸಿನೆಮಾದ ಹಲವಾರು ಸುವರ್ಣ ಗೀತೆಗಳನನು ನೀಡಿದವರು ಕುವೆಂಪು, ಬೇಂದ್ರೆಯಂತಹ ಸಾಹಿತ್ಯ ಕವಿವರ್ಯರು. ಸತಿ ಸುಲೋಚನಕ್ಕಿಂತ ಮೊದಲು ಮೂಕೀ ಚಿತ್ರದ ಕಾಲದಲ್ಲಿ ೧೯೨೫ರಲ್ಲಿ ತಯ್ಯಾರಾದ ವಸಂತಸೇನ ಎಂಬ ಚಿತ್ರಕ್ಕೆ ಕತೆ ಸೂಚಿಸಿ ಒಂದು ಹಾಸ್ಯ ಪಾತ್ರದಲ್ಲಿ ಅಭಿನಯಿಸಿದ್ದು ಟಿ.ಪಿ. ಕೈಲಾಸಂ ಅವರು. ಆದ್ದರಿಂದ ಕನ್ನಡದಲ್ಲಿ ಸಾಹಿತ್ಯಕ್ಕೂ ಸಿನೆಮಾಗೂ ಬಹಳ ಹಳೆಯ ನಂಟು. ಶಿವರಾಮ ಕಾರಂತರು ಚೋಮನ ದುಡಿ ಕಾದಂಬರಿಯನ್ನು ಸಿನೆಮ ಮಾಡಿದಾಗ ತಾನೆ ಅದಕ್ಕೆ ಚಿತ್ರಕಥೆ ಸಂಭಾಷಣೆ ಬರೆದರು. ಹಾಗೆ ತರಾಸು ಅವರು ಚಂದವಳ್ಳಿಯ ತೋಟಕ್ಕೆ ಬರೆದರು.

ಆದರೆ ಈ ನಿಟ್ಟಿನಲ್ಲಿ ಎಲ್ಲಕ್ಕೂ ಮುಖ್ಯವಾದ ಬೆಳವಣಿಗೆ ಸಂಸ್ಕಾರ ಚಿತ್ರ ಯು.ಆರ್. ಅನಂತಮೂರ್ತಿಯವರು ಬರೆದ ಕಾದಂಬರಿಯನ್ನು ಗಿರೀಶ್ ಕಾರ್ನಾಡರು ಚಿತ್ರಕಥೆಗೆ ಅಳವಡಿಸಿ ಅದರ ಕೇಂದ್ರ ಪಾತ್ರವನ್ನೂ ಅಭಿನಯಿಸಿದರು. ಕನ್ನಡದ ಮತ್ತೊಬ್ಬರು ದೊಡ್ಡ ಸಾಹಿತಿ ಪಿ. ಲಂಕೇಶ್ ಅವರು ಮತ್ತೊಂದು ಮುಖ್ಯ

ಪಾತ್ರದಲ್ಲಿ ಅಭಿನಯಿಸಿದರು. ಹೆಸರಾಂತ ಚಿತ್ರಕಲಾ ಕಲಾವಿದರಾದ ಎಸ್.ಜಿ. ವಾಸುದೇವ್ ಇದಕ್ಕೆ ಕಲಾ ನಿರ್ದೇಶನ ಮಾಡಿದರು. ಪಟ್ಟಾಭಿರಾಮರೆಡ್ಡಿ ಅವರು ನಿರ್ದೇಶಿಸಿದ ಈ ಚಿತ್ರ ಭಾರತದ ಹೊಸ ಅಲೆಯ ಚಿತ್ರಗಳಿಗೆ ನಾಂದಿ ಹಾಡಿತು.

ಅದುವರೆಗೂ ಸಿನೆಮಾಗಳಲ್ಲಿ ನಾಯಕನಟ ಒಂದು Larger than life ಅಥವಾ ಅತಿಮಾನುಷ ಪಾತ್ರವನ್ನು ವಹಿಸುತ್ತಿದ್ದ. ಆತನ ಶೌರ್ಯ, ಪ್ರೀತಿ, ದುಃಖ ಎಲ್ಲವನ್ನೂ amplify ಮಾಡಿ, ದೊಡ್ಡದು ಮಾಡಿ ತೆರೆಯ ಮೇಲೆ ತೋರಿಸಲಾಗುತ್ತಿತ್ತು. ಆದರೆ ಸಂಸ್ಕಾರ ತರದ ಚಿತ್ರಗಳಲ್ಲಿ ನಾಯಕ ಜನಸಾಮಾನ್ಯರ ಹಾಗೇ ಇರುತ್ತಿದ್ದ. ಆತನ ಹಾಗು ಆತನ ಸುತ್ತಲಿನ ಜನರ ಗೊಂದಲಗಳು, ಸಣ್ಣತನಗಳು, ಭಯಗಳು, ಎಲ್ಲವನ್ನೂ ಪ್ರತಿಬಿಂಬಿಸುತ್ತಿದ್ದ. ನಿಜ ಜೀವನಕ್ಕೆ ಹತ್ತಿರವಿರುವ ಪಾತ್ರಗಳನ್ನು ಸೃಷ್ಟಿಸುವುದರಲ್ಲಿ ಹಾಗು



ಸಮಕಾಲೀನ ವಿಷಯಗಳ ಜೊತೆ ಸ್ಪಂದಿಸುವುದರಲ್ಲಿ ಈ ಹೊಸ ಅಲೆಯ ಚಿತ್ರಗಳು ವಿಶೇಷವಾಗಿದ್ದವು.

ಗಿರೀಶ್ ಕಾರ್ನಾಡರು, ಲಂಕೇಶರು ಸೇರಿದಂತೆ ಚಂದ್ರಶೇಖರ ಕಂಬಾರರು, ಬರಗೂರು ರಾಮಚಂದ್ರಪ್ಪನವರು, ಹೀಗೆ ಹಲವಾರು ಸಾಹಿತಿಗಳು ಸಿನೆಮಾಗಳನ್ನು ನಿರ್ದೇಶಿಸಿದರು. ನಾಗತ್ತಿಹಳ್ಳಿ ಚಂದ್ರಶೇಖರ್, ಎನ್.ಎಸ್. ಶಂಕರ್, ನಾಗಾಭರಣರಂತಹ ನಿರ್ದೇಶಕರು ಹಲವು ಜನಪ್ರಿಯ ಸಿನೆಮಾಗಳನ್ನು ತೆರೆಗೆ ತಂದರು.

**ಸಾಹಿತ್ಯ ಆಧರಿಸಿದ ಸಿನೆಮ:**

ಹೀಗೆ ಸಾಹಿತಿಗಳು ತಾವೇ ಸಿನೆಮಾ ನಿರ್ದೇಶನಕ್ಕೆ ಒಂದು ಕಡೆ ಮುಂದಾಗಿದ್ದರೆ ಎಂ.ಎಸ್. ಸತ್ಯು, ಗಿರೀಶ್ ಕಾಸರವಳ್ಳಿ, ಪಿ. ಶೇಷಾದ್ರಿ ಅಂತ ನಿರ್ದೇಶಕರು ಸಾಹಿತ್ಯ ಕೃತಿಗಳನ್ನು ಆಧರಿಸಿ ಅನೇಕ ಸಿನೆಮಾಗಳನ್ನು ಮಾಡಿದರು. ಈ ಸಿನೆಮಾಗಳು ಕನ್ನಡ ಸಾಹಿತ್ಯವನ್ನು ದೇಶವಿದೇಶಗಳಿಗೆ ಕೊಂಡೊಯ್ಯಲು ಕಾರಣವಾದವು. ಅನೇಕ ರಾಷ್ಟ್ರೀಯ, ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ತಂದು ಕೊಟ್ಟ ಈ ಸಿನೆಮಾಗಳು ಕೆಲವು ವಿದ್ಯಾವಂತ, ಸುಸಂಸ್ಕೃತ ಪ್ರೇಕ್ಷಕರಿಗೆ ಮಾತ್ರ ಸೀಮಿತವಾಗಿದ್ದು ಜನಸಾಮಾನ್ಯರನ್ನು ತಲುಪಲು ಅಷ್ಟು ಸಾಧ್ಯವಾಗಲಿಲ್ಲ.

**ಪುಟ್ಟಣ್ಣ ಕಣಗಾಲ್ ಹಾಗೂ Bridge cinema:**

Commercial cinema ಹಾಗು ಸಾಹಿತ್ಯ ಎರಡರ ನಡುವೆ ಸೇತುವೆಯಾಗಿ ನಿಂತವರು ಪುಟ್ಟಣ್ಣ ಕಣಗಾಲ್, ಲಕ್ಷ್ಮಿನಾರಾಯಣ್ ಅವರಂತ ನಿರ್ದೇಶಕರು.

ಪುಟ್ಟಣ್ಣ ಕಣಗಾಲ್ ಅವರ ಚಿತ್ರಗಳು ಸಾಕಷ್ಟು ಸಾಹಿತ್ಯ ಕೃತಿಗಳನ್ನು ಆಧರಿಸಿದ ಚಿತ್ರಗಳಾಗಿದ್ದವು. ಅದನ್ನು ತೆರೆಗೆ ತರುವ ರೀತಿಯಲ್ಲಿ ಆ ಕಥೆಗಳು ಸಾಮಾನ್ಯರಿಗೂ ತಲುಪಿ ಜನಪ್ರಿಯವಾಗುವಂತೆ ಪುಟ್ಟಣ ಕಣಗಾಲ್ ನೋಡಿಕೊಳ್ಳುತ್ತಿದ್ದರು.

ಅರವತ್ತರ ದಶಕದಲ್ಲಿ ಬಿ.ಆರ್. ಪಂತುಲು ಅವರಿಗೆ ಸಹಾಯಕ ನಿರ್ದೇಶಕರಾಗಿ ಕೆಲಸ ಆರಂಭಿಸಿದ ಕಣಗಾಲ್ ಅವರು ಬೆಳ್ಳಿಮೋಡದಂತಹ ಭಾವಪೂರ್ವಕ (emotional) ಕಥೆಯ ಮೂಲಕ ಬೇರೆ ರೀತಿಯ ನಿರ್ದೇಶಕ ಎಂಬ ಹಎಸರು ಗಳಿಸಿದರು. ൧൯൬൭ ರಿಂದ ൧൯൮൫ವರೆಗೆ ಮೂವತ್ತೈದು ಚಿತ್ರಗಳನ್ನು ಇವರು ನಿರ್ದೇಶಿಸಿದರು. ಇವರ ವಿಶೇಷ ಏನೆಂದರೆ ಸ್ತ್ರೀ ಪಾತ್ರ ಪ್ರಧಾನ ಚಿತ್ರಗಳು, ಗಂಡು ಪಾತ್ರವನ್ನು ಕೇಂದ್ರವಾಗಿಟ್ಟುಕೊಂಡು ಹಲವು ಯಶಸ್ವಿ ಚಿತ್ರಗಳನ್ನು ಕಣಗಾಲ್ ಅವರು ಮಾಡಿದರು, ಆದರೆ ಸ್ತ್ರೀ ಪಾತ್ರ ಪ್ರಧಾನವಾಗಿ ಅವರು ಮಾಡಿದ ಚಿತ್ರಗಳು ಹೊಸ ಬಗೆಯ ನೋಡುಗನನ್ನು ಸೃಷ್ಟಿ ಮಾಡಿತು. ಇವರ ಚಿತ್ರದ ಸ್ತ್ರೀ ಪಾತ್ರಗಳು ಕೇವಲ ಅಂದವಾಗಿದ್ದ ಗಂಡಸಿನ ಮಾತು ಕೇಳಿಕೊಂಡು ಪುರುಷಪ್ರದಾನ ಸಮಾಜಕ್ಕೆ ಅರ್ಪಿಸಿಕೊಂಡ ಹೆಣ್ಣು ಪಾತ್ರಗಳಾಗಿರಲಿಲ್ಲ. ಕಣಗಾಲ್ ಅವರ ಚಿತ್ರಗಳಲ್ಲಿ ಸ್ತ್ರೀ ಪಾತ್ರಗಳು ಶಕ್ತಿಯುತವಾಗಿದ್ದ ಪಾತ್ರಗಳು. ಸೂಕ್ಷ್ಮತೆ, ಪ್ರತಿಭೆ, ಆಳ ಉಳ್ಳ ಪಾತ್ರಗಳಾಗಿದ್ದವು. ಸಮಾಜದ ನಂಬಿಕೆಗಳನ್ನು, ಗಂಡಸರ ಧೋರಣೆಗಳನ್ನು ಪ್ರಶ್ನಿಸುವ ದಿಟ್ಟತನ ತೋರಿಸುವ ಪಾತ್ರಗಳಾಗಿದ್ದವು. ಈ ಚಿತ್ರಗಳು, ಇಂತಹ ಕಥೆಗಳನ್ನು ಜನಸಾಮಾನ್ಯರೂ ಒಪ್ಪುವಂತೆ ಮಾಡಿದ್ದು ಕಣಗಾಲ್ ಅವರ ಹೆಗ್ಗಳಿಕೆ.

**ಪ್ರೇಮಲೋಕ:**

ತಾಂತ್ರಿಕ ನೆಲೆಯಿಂದ ೧೯೮೭ರಲ್ಲಿ ವಿ. ರವಿಚಂದ್ರನ್ ಅವರು ನಿರ್ದೇಶಿಸಿ ಮುಖ್ಯಪಾತ್ರ ವಹಿಸಿದ 'ಪ್ರೇಮಲೋಕ' ಸಿನೆಮ ಎಲ್ಲರ ಗಮನ ಸೆಳೆಯಿತು. ಆಗಿನ ಕಾಲದಲ್ಲೆ ೧.೭ ಕೋಟಿ ಖರ್ಚು ಮಾಡಿ ತಯಾರಾದ ಈ ಸಿನೆಮ, ತಾಂತ್ರಿಕ ನೈಪುಣ್ಯದಿಂದ ತುಂಬಿತ್ತು. ಇದರ ಕಲೆ ಆಗಲಿ, ಸಂಗೀತವಾಗಲಿ, ಕ್ಯಾಮೆರಾ ಅಥವಾ ಸಂಕಲನವಾಗಲಿ ಅಂದಿನ ಇಡಿ ಭಾರತೀಯ ಚಿತ್ರರಂಗ ಕನ್ನಡ ಚಿತ್ರರಂಗದ ಕಡೆ ತಿರುಗಿ ನೋಡುವಂತೆ ಮಾಡಿದ್ದು ಇದರ ವಿಶೇಷ.

ಈ ಚಿತ್ರದ ನಾಯಕ ಬಹಳ ಶ್ರೀಮಂತ ಕುಟುಂಬದಿಂದ ಬಂದವನು. ಈತ ಒಬ್ಬ ಹುಡುಗಿಯನ್ನು ಪ್ರೀತಿಸುತ್ತಾನೆ. ಆಕೆಯನ್ನು ಗೆಲ್ಲಲು ಒಂದು ನಿಗೂಢವಾದ Bike Rider ಅವತಾರದಲ್ಲಿ ಹೇಗೆ ಒಲಿಸಿಕೊಳ್ಳುತ್ತಾನೆ ಎನ್ನುವುದು ಕಥೆ. ಆಗಿನ ಕಾಲಕ್ಕೆ ಎಲ್ಲ box office ದಾಖಲೆಗಳನ್ನು ಮೀರಿ ಅನೇಕ ಭಾಷೆಗಳಿಗೂ ಸಂಚರಿಸಿದ ಚಿತ್ರ ಇದು.

**ಓಂ ಹಾಗೂ ಭೂಗತ ಜಗತ್ತಿನ ಸಿನೆಮಾಗಳು :**

೧೯೯೫ರಲ್ಲಿ ತಯ್ಯಾರಾದ 'ಓಂ' ಚಿತ್ರ ಕನ್ನಡ ಸಿನೆಮಾ ರಂಗದಲ್ಲಿ ಮತ್ತೊಂದು ಗಮನಾರ್ಹ ಬೆಳವಣಿಗೆ, ಉಪೇಂದ್ರ ಅವರು ನಿರ್ದೇಶಿಸಿ ಪಾರ್ವತಮ್ಮ ರಾಜಕುಮಾರ್ ಅವರು ವಜೇಶ್ವರಿ ಲಾಂಛನದಲ್ಲಿ ನಿರ್ಮಿಸಿದ 'ಓಂ' ಚಿತ್ರದಲ್ಲಿ ಶಿವರಾಜಕುಮಾರ್ ಹಾಗೂ ಪ್ರೇಮ ಮುಖ್ಯ ಪಾತ್ರಗಳಲ್ಲಿದ್ದರು. ಅದಲ್ಲದೆ ಬೆಂಗಳೂರಿನ ಭೂಗತ ಜಗತ್ತಿನಲ್ಲಿದ್ದ ಬೆಕ್ಕಿನ ಕಣ್ಣು ರಾಜೇಂದ್ರ, ತನ್ವಿರ್, ಕೊರಂಗು, ಜೇಡಲ್ಲಿ.. ಹೀಗೆ ಹಲವು ನಿಜ ಜೀವನದಲ್ಲಿ ರೌಡಿ ಶೀಟರ್‌ಗಳೆಂದು ಹೆಸರಾಗಿದ್ದ ಜನರು ಇದರಲ್ಲಿ ಕಾಣಿಸಿಕೊಂಡರು.

ಮೊದಲ ಬಾರಿಗೆ ಬೆಂಗಳೂರಿನ ಭೂಗತ ಜಗತ್ತನ್ನು, ಆ ಕಥೆಗಳನ್ನು, ಈ ಸಿನೆಮ ತೆರೆಯ ಮೇಲೆ ತರುವ ಪ್ರಯತ್ನ ಮಾಡಿತು. ಈ ಚಿತ್ರದ ಕೇಂದ್ರ ಪಾತ್ರ ಸತ್ಯ ಎಂಬ ಒಬ್ಬ ಬ್ರಾಹ್ಮಣ ಅರ್ಚಕನ ಮಗ, ಒಂದು ಕೊಲೆಯ ಕೇಸಿನಲ್ಲಿ ಸುಳ್ಳು ಆಪಾದನೆಗೆ ತುತ್ತಾಗಿ. ಇದಕ್ಕೆ ತನ್ನ ಪ್ರೇಯಸಿ ಕಾರಣಳಾಗುತ್ತಾಳೆ. ಇದರಿಂದ ಭೂಗತ ಜಗತ್ತಿನ ಜೊತೆ ಸತ್ಯ ಸೇರಿಕೊಳ್ಳುತ್ತಾನೆ. ಇದರ ನಂತರ ಹಿಂಸೆಯ ಚಕ್ರದಲ್ಲಿ ಸಿಲುಗಿಕೊಳ್ಳುತ್ತಾನೆ. ನಾಯಕ ಹೇಗೆ ಮತ್ತೆ ಪ್ರೀತಿ ಕಂಡುಕೊಂಡು, ಈ ಹಿಂಸೆಯ ಪ್ರಪಂಚದಿಂದ ದೂರವಾಗುತ್ತಾನೆ ಎಂಬುದು 'ಓಂ' ಚಿತ್ರದ ಹಂದರ. “ಓಂ' ಒಂದು ಇಡೀ ಹೊಸ ಪ್ರಕಾರದ ಚಿತ್ರಗಳನ್ನು ಹುಟ್ಟುಹಾಕಿತು. ಅವು ಭೂಗತ ಜಗತ್ತಿನ ಚಿತ್ರಗಳು ಅಥವಾ ಮಚ್ಚು ಲಾಂಗಿನ ಚಿತ್ರಗಳು ಒಂದು ಪ್ರಖ್ಯಾತಿ ಪಡೆದವು. ಓಂ ನಂತರ ಬಂದ ಡೆಡ್ಲಿ ಸೋಮ ಆಗಲಿ, ಪ್ರೇಮ್ ಅವರ ಜೋಗಿ ಸಿನೆಮಾ ಆಗಲಿ, ಇವೆಲ್ಲ ಅದೇ ಪ್ರಕಾರಕ್ಕೆ ಸೇರಿದ ಚಿತ್ರಗಳಾಗಿದ್ದವು. ಈ ಮಚ್ಚು

ಲಾಂಗು ಸಿನೆಮಾಗಳು ನಟರಾದ ಶಿವರಾಜಕುಮಾರ್ ಅವರಿಗೆ ಬೇರೆಯ ಒಂದು Imageನ್ನು ಸೃಷ್ಟಿ ಮಾಡಿತು.

**ಮುಂಗಾರು ಮಳೆ ಹಾಗೂ ಪ್ರೇಮ ಕಥೆಗಳು:**

೨೦೦೬ರಲ್ಲಿ ಯೋಗರಾಜ ಭಟ್ ಅವರು ನಿರ್ದೇಶಿಸಿದ, ಈ. ಕೃಷ್ಣಪ್ಪ ಅವರು ನಿರ್ಮಿಸಿದ 'ಮುಂಗಾರು ಮಳೆ' ಚಿತ್ರ ತೆರೆ ಕಂಡಿತು. ಗಣೇಶ್ ಹಾಗೂ ಪೂಜಾ ಗಾಂಧಿ



ಅಭಿನಯದ ಈ ಚಿತ್ರ ಲಘುವಾಗಿ ಸಾಗುವ ಒಂದು ಪ್ರೇಮಕಥೆ, ಚಿತ್ರದ ನಾಯಕ ಪ್ರೀತಮ್ ಶ್ರೀಮಂತ ಕುಟುಂಬಕ್ಕೆ ಸೇರಿದವನು. ಆತನ ಅಂತಸ್ತಿಗೆ ಹೋಲಬಲ್ಲ ಕುಟುಂಬದ ನಂದಿನಿ ಎಂಬಾಕೆಯನ್ನು ಪ್ರೀತಿಸುತ್ತಾನೆ. ಆಕೆಗೆ ಆಗಲೇ ಹುಡುಗ ಗೊತ್ತಾಗಿದ್ದು, ಆಕೆಗೆ ನಿಶ್ಚಿತಾರ್ಥ ಆಗಿದೆ ಎಂದು ಗೊತ್ತಾದ ಮೇಲೂ ನಾಯಕ ಆಕೆಯನ್ನು ಒಲಿಸುವ ಪ್ರಯತ್ನ ಮಾಡುತ್ತಾನೆ. ಕಡೆಗೆ ಅವಳು ಇವನನ್ನು ಪ್ರೀತಿಸಲು ಪ್ರಾರಂಭಿಸಿದಾಗ ತಾನು ಎಷ್ಟು ಸ್ವಾರ್ಥಿ ಎಂಬ ಅರಿವು ನಾಯಕನಿಗೆ ಆಗುತ್ತದೆ. ಹುಡುಗಿಯ ಕುಟುಂಬದವರ ನಂಬಿಕೆ ದ್ರೋಹ ಮಾಡಿ ಹುಡುಗಿಯನ್ನು ಗೊಲ್ಲುವುದಕ್ಕಿಂತ ಅವಳನ್ನು ತ್ಯಾಗ ಮಾಡಿ ನಂಬಿಕೆ ಉಳಿಸಿಕೊಳ್ಳುವುದು ಮುಖ್ಯವೆಂದು ನಾಯಕ ನಿರ್ಧರಿಸುತ್ತಾನೆ. ಎಲ್ಲರ ಸಂತೋಷಕ್ಕಾಗಿ ತನ್ನ ಸಂತೋಷವನ್ನು ತ್ಯಾಗ ಮಾಡುತ್ತಾನೆ.

ಭಾರತದಲ್ಲಿ ಒಂದು ವರ್ಷ multiplex ನಲ್ಲಿ ಓಡಿದ ಮೊದಲ ಚಿತ್ರ ಇದು. ಇದರ ಒಟ್ಟಾರೆ Box office ಗಳಿಕೆ ಹಲವು ದಾಖಲೆಗಳನ್ನು ಮುರಿಯಿತು. ಕನ್ನಡ ಚಿತ್ರರಂಗಕ್ಕೆ ಎಷ್ಟು ದೊಡ್ಡ ಮಾರುಕಟ್ಟೆ ಇದೆ ಎಂದು ತೋರಿಸಿಕೊಟ್ಟಿತು. ಈ ಚಿತ್ರದಿಂದ ಕನ್ನಡದಲ್ಲಿ ತಂತ್ರಜ್ಞರಿಗೆ, ನೃತ್ಯ ಸಂಯೋಜಕರಿಗೆ, ಗೀತ ರಚನಾಕಾರರಿಗೆ ಹೀಗೆ ತೆರೆಯ ಹಿಂದೆ ಕೆಲಸ ಮಾಡುವ ಹಲವರಿಗೆ ಹೆಚ್ಚು ಬೆಲೆ ಸಿಗುವಂತಾಯಿತು.

ಹೊಸಬರನ್ನು ಇಟ್ಟುಕೊಂಡು ದೊಡ್ಡ ಯಶಸ್ಸನ್ನು ಕಾಣಬಹುದು ಎಂಬ ನಂಬಿಕೆಯನ್ನು 'ಮುಂಗಾರುಮಳೆ' ಹುಟ್ಟು ಹಾಕಿತು. ಇದಾದ ನಂತರದ ವರ್ಷಗಳಲ್ಲಿ ಬಂದ 'ದುನಿಯಾ' ಹಾಗೂ 'ಆ ದಿನಗಳು' ಚಿತ್ರಗಳು ಕೂಡ ಇದೇ ನಂಬಿಕೆಯನ್ನು ಹೆಚ್ಚಿಸಿದವು. 'ಮುಂಗಾರು ಮಳೆಯ' ಹಾಗೆ ಈ ಎರಡೂ ಚಿತ್ರಗಳೂ ಪ್ರೇಮ ಕಥೆಗಳಾಗಿದ್ದವು.

'ಮುಂಗಾರುಮಳೆ' ಚಿತ್ರ ಶ್ರೀಮಂತ ಕುಟುಂಬಕ್ಕೆ ಸೇರಿದ ಇಬ್ಬರು ಪ್ರೇಮಿಗಳ ದುರಂತ ಕಥೆಯಾಗಿದ್ದರೆ, 'ದುನಿಯಾ' ಕಡು ಬಡತನದಲ್ಲಿದ್ದ ಇಬ್ಬರು ಪ್ರೇಮಿಗಳ ಕಥೆ. ನಾಯಕ ಶಿವುಗೆ ತನ್ನ ತಾಯಿಯ ಶವವನ್ನು ಅಂತಿಮ ಸಂಸ್ಕಾರ ಮಾಡಲೂ ದುಡ್ಡಿಲ್ಲದೆ ಶ್ರಮಿಸುತ್ತಾನೆ. ಅತ್ಯಾಚಾರಕ್ಕೆ ಒಳಗಾಗುತ್ತಿರುವ ನಾಯಕಿ ಪೂರ್ಣಿಮಾಳನ್ನು

ಕಾಪಾಡುತ್ತಾನೆ. ಆಕೆ ಅನಾಥೆ, ಅನಾಥಾಶ್ರಮದಿಂದ ಆಕೆಯನ್ನು ಹೊರಹಾಕುತ್ತಾರೆ. ಪೂರ್ಣಿಮ ಹಾಗೂ ಶಿವು ಕಾಸಿಲ್ಲದೇ ಜೀವನ ಸಾಗಿಸಲು ಮುಂದಾಗುತ್ತಾರೆ. ಪೂರ್ಣಿಮಾ ಕಂಡ ಕನಸ್ಸುಗಳನ್ನು ಈಡೇರಿಸಲು ಶಿವು ಭೂಗತ ಜಗತ್ತಿನ ಜನರೊಂದಿಗೆ ಸೇರುತ್ತಾನೆ. ಹಿಂಸೆಯ ಲೋಕದ ಒಳಗೆ ಹೊಕ್ಕುತ್ತಾನೆ. ಪೊಲೀಸರು ಆತನನ್ನು Encounter ನಲ್ಲಿ ಕೊಲ್ಲಬೇಕೆಂಬ ವಿಷಯ ಗೊತ್ತಾದಾಗ ಪೂರ್ಣಿಮ ತಾನೆ ಶಿವುಗೆ ವಿಷ ಕೊಟ್ಟು ತಾನೂ ವಿಷ ಕುಡಿದು, ಸಾಯುತ್ತಾಳೆ.

'ದುನಿಯಾ' ಚಿತ್ರ ಬಂದ ನಂತರ 'ಆ ದಿನಗಳು' ಚಿತ್ರ ಬಿಡುಗಡೆ ಆಯಿತು. ಪ್ರೀತಿಯ ಕುಲುಮೆಯಲ್ಲಿ ನಲುಗಿದ ಭೂಗತ ಜಗತ್ತು ಎಂಬ tagline ನೊಂದಿಗೆ ಬಿಡುಗಡೆಯಾದ ಈ ಚಿತ್ರ ಬೆಂಗಳೂರಿನಲ್ಲಿ ೧೯೮೯ರಲ್ಲಿ ನಡೆದ ನೈಜ ಘಟನೆಗಳ ಸುತ್ತ ಹೆಣೆಯಲಾದ ಕಥೆ, ಅಗ್ನಿ ಶ್ರೀಧರ್ ಅವರು ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದ ಈ ಚಿತ್ರಕ್ಕೆ ಚಿತ್ರಕಥೆಯಲ್ಲಿ ಗಿರೀಶ್ ಕಾರ್ನಾಡರೂ ಕೊಡುಗೆ ನೀಡಿದ್ದರು. ನಾನು ನಿರ್ದೇಶಿಸಿದ ಮೊದಲ ಚಿತ್ರ ಇದು.



ಈ ಚಿತ್ರದ ನಾಯಕ ಚೇತನ್ ತಂದೆಯನ್ನು ಅಪಾರವಾಗಿ ಗೌರವಿಸುತ್ತಾನೆ. ತನಗಿಂತ ವಯಸ್ಸಿನಲ್ಲಿ ಹೆಚ್ಚಿನ ಹಾಗೂ ತನ್ನ ಅಂತಸ್ತಿಗಿಂತ ಕಮ್ಮಿ ಇರುವ ಮಲ್ಲಿಕಾ ಎಂಬಾಕೆಯನ್ನು ಪ್ರೀತಿಸುತ್ತಾನೆ. ತಾನು ಪ್ರೀತಿಸುತ್ತಿರುವ ಹುಡುಗಿಯನ್ನು ಹೆದರಿಸಲು ತನ್ನ ತಂದೆಯೇ ಕೊತ್ವಾಲ್ ರಾಮಚಂದ್ರನಂತಹ ಪ್ರಖ್ಯಾತ ರೌಡಿಯನ್ನು ಕಳಿಸಿದ್ದಾನೆ. ಎಂದು ಚೇತನ್‌ನಿಗೆ ಗೊತ್ತಾಗುತ್ತೆ. ಅಪ್ಪ ಇವರ ಮಾತು ಕೇಳಲು ಸಿದ್ಧರಿಲ್ಲ. ಚೇತನ್ ತಾನೆ ಕೊತ್ವಾಲ್ ಮುಗಿಸಲು ಮುಂದಾಗುತ್ತಾನೆ. ಪೊಲೀಸರ ವರ್ತನೆ ಈತನ ನಿರ್ಧಾರವನ್ನು ಇನ್ನಷ್ಟು ಗಟ್ಟಿ ಮಾಡುತ್ತದೆ. ಚೇತನ್ ಭೂಗತ ಜಗತ್ತಿನ ವರ್ತುಲದೊಳಗೆ ಸಿಲುಕಿಕೊಳ್ಳುತ್ತಾನೆ. ಕೊತ್ವಾಲ್ ಕೊಲೆಗೆ ಕಾರಣವಾಗುತ್ತಾನೆ. ತಾನು ಮಾಡಿದ ತಪ್ಪನ್ನು ತಡವಾಗಿ ಅರಿತುಕೊಂಡ ಚೇತನ್‌ನ ತಂದೆ ಆ ಪ್ರೇಮಿಗಳನ್ನು ಒಂದಾಗಿಸಲು ಮುಂದಾಗುತ್ತಾನೆ.

ಭೂಗತ ಜಗತ್ತಿನ ಕಥೆಯಾದರೂ ಈ ನಮ್ಮ ಚಿತ್ರದಲ್ಲಿ ಹಿಂಸೆಯ ವಿಜೃಂಭಣೆ ಇರಲಿಲ್ಲ. ಎಲ್ಲವನ್ನು ನೈಜವಾಗಿ ತೋರಿಸುವ ಪ್ರಯತ್ನ ಇದಾಗಿತ್ತು. ಮಚ್ಚು ಲಾಂಗು ಚಿತ್ರಗಳಲ್ಲಿ ನೋಡಿದ ಭೂಗತ ಜಗತ್ತಿಗೂ ಆ ದಿನಗಳು ಚಿತ್ರದಲ್ಲಿ ನೋಡಿದ ಭೂಗತ ಜಗತ್ತಿಗೂ ಬೇರೆ ನೋಟ ಇತ್ತು.

**Universal subjects:**

ಇದಾದ ನಂತರದ ವರ್ಷಗಳಲ್ಲಿ ಸುದ್ದಿ ಮಾಡಿದ ಸಿನೆಮಾಗಳಲ್ಲಿ 'ಲೂಸಿಯ' ಎಲ್ಲರ ಗಮನ ಸೆಳೆಯಿತು. Crowd funding ಮೂಲಕ ಹಲವಾರು ಜನ ದುಡ್ಡು ಹಾಕಿ ಮಾಡಿದ ಈ 'ಲೂಸಿಯ' ಚಿತ್ರದ ಕಥೆ ಕರ್ನಾಟಕದಲ್ಲೇ

ನಡೀಬೇಕು ಅಥವಾ ಕನ್ನಡ ಸಂದರ್ಭದಲ್ಲೇ ನಡೆಯಬೇಕು ಎಂದಿರಲಿಲ್ಲ/ ಒಂದು ರೀತಿಯ universal subject ಆಗಿತ್ತು. ನಾಯಕ ಮಂಡ್ಯದಿಂದ ಬಂದ ಹುಡುಗ, ಆತನಿಗೆ ನಿದ್ದೆ ಬರುವುದಿಲ್ಲ. ಅದು ಅವನ ದೊಡ್ಡ ಸಮಸ್ಯೆ ಆಗಿರುತ್ತದೆ. ಆತನಿಗೆ ಒಬ್ಬ ಒಂದು ವಿಶೇಷವಾದ ಮದ್ದು ಕೊಡುತ್ತಾನೆ. ಅದಾದ ನಂತರ ಅವನಿಗೆ ನಿದ್ದೆ ಬರುತ್ತದೆ. ಆದರೆ ಯಾವಾಗ ನಿದ್ದೆ ಮಾಡುತ್ತಿದ್ದಾನೆ, ಯಾವಾಗ ಕನಸ್ಸು ಕಾಣುತ್ತಿದ್ದಾನೆ ಎಂಬ ಗಡಿಗಳು ನಾಯಕನ ಅರಿವು ತಪ್ಪಿ ಹೋಗುತ್ತವೆ.

ಇದಾದ ನಂತರ ಬಂದ 'ಉಳಿದವರು ಕಂಡಂತೆ' ಸಿನೆಮಾ ಕೂಡಾ ಇದೇ ರೀತಿ Universal subject ಉಳ್ಳ ಚಿತ್ರವಾಗಿತ್ತು. ಒಂದು ಕೊಲೆಯನ್ನು ಐದು ಜನರ ದೃಷ್ಟಿಯಲ್ಲಿ ಹೇಳುವ ಕಥೆ ಇದು. ಉಡುಪಿಯಲ್ಲಿ ನಡೆಯುವ ಈ ಕಥೆ ಹೇಳುವ ಬಗೆಯಲ್ಲಿ ಪಾಶ್ಚಾತ್ಯ ನಿರ್ದೇಶಕರಾದ Tarantino ಹಾಗು Brain De Palma ಅವರ ಪ್ರಭಾವ ಸಾಕಷ್ಟು ಇದೆ ಎಂದು ನಿರ್ದೇಶಕರು ಹೇಳಿಕೊಂಡಿದ್ದಾರೆ.

**Treasure Hunt ಸಿನೆಮಾಗಳು :**

ಇಂದು ಇವತ್ತಿನ ಸಿನೆಮಾಗಳ ವಸ್ತುವಿಗೆ ಬಂದಾಗ ಒಂದು ರೀತಿಯ Treasure Hunt ಕಥೆಗಳು ಈಗಿನ ನಿರ್ದೇಶಕರನ್ನು ನಟರನ್ನು ಸೆಳೆಯುತ್ತಿವೆ. ಇತ್ತೀಚೆಗೆ ಬಂದ ಕೆಲವು ಸಿನೆಮಾಗಳು ಅದ್ದೂರಿ Budget ನಲ್ಲಿ ತಯಾರಾಗಿದ್ದು, ಕರ್ನಾಟಕವಲ್ಲದೆ ಹಲವಾರು ಭಾಷೆಗಳ ಪ್ರೇಕ್ಷಕರನ್ನು ಮನಸ್ಸಿನಲ್ಲಿಟ್ಟುಕೊಂಡು ತಯಾರಾದ ಚಿತ್ರಗಳು.



ಕೆ.ಜಿ.ಎಫ್. ಚಿತ್ರ ಕನ್ನಡ ಚಿತ್ರರಂಗದಲ್ಲಿ ಮಾತ್ರವಲ್ಲ ಹಿಂದಿ, ತೆಲುಗು ಹಾಗೂ ತಮಿಳು ಭಾಷೆಗಳಲ್ಲೂ ಯಶಸ್ಸು ಕಂಡಿದೆ.

ಈ ಚಿತ್ರದ ನಾಯಕ ಬಡ ಹಿನ್ನೆಲೆಯಿಂದ ಬಂದವನು. ಆತನ ತಾಯಿ ಸಾಯುವ ಮುನ್ನ "ನೀನು ದುಡ್ಡು ಮಾಡಬೇಕು" ಎಂದು ಆಣೆ ಮಾಡಿಸಿಕೊಳ್ಳುತ್ತಾಳೆ. ಮುಂದೆ ಆತ ಭೂಗತ ಜಗತ್ತಿನಲ್ಲಿ ಕೊಲೆಗಡುಕನಾಗುತ್ತಾನೆ. ಎಲ್ಲರೂ ಅವನಿಗೆ ಹೆದರುವಂತೆ ಮಾಡುತ್ತಾನೆ. "ಕೆ.ಜಿ.ಎಫ್" ಎಂಬ ಕಾಲ್ಪನಿಕ ಗಣಿಯೊಂದರ ಒಡೆಯನನ್ನು ಕೊಲ್ಲುವ ಸುಪಾರಿ ಇವನಿಗೆ ಸಿಗುತ್ತದೆ. ಅಲ್ಲಿಗೆ ಹೋದಾಗ ಅಲ್ಲಿಯ ಕಾರ್ಮಿಕರ ಕಷ್ಟ ನೋವುಗಳು ಅವನಿಗೆ ಕಾಣಿಸುತ್ತದೆ. ತಾನು ಬಯಸದೇ ಅವರನ್ನು ಕಾಪಾಡುವ ವ್ಯಕ್ತಿ ಯಾಗುತ್ತಾನೆ.

ಹೀಗೆ ಅದ್ದೂರಿಯಾಗಿ ತಯಾರಾದ ಅವನೆ ಶ್ರೀಮನ್ನಾರಾಯಣ' ಚಿತ್ರದಲ್ಲಿ ಸಹ ನಾಯಕ ಒಬ್ಬ ಪೊಲೀಸ್ ಆಫೀಸರ್. ಸ್ವಲ್ಪ ತರಲೆ. ಸಾಕಷ್ಟು ಬುದ್ಧಿವಂತ. ಅಷ್ಟು ಪ್ರಾಮಾಣಿಕನಲ್ಲ. ಒಂದು ನಿಧಿಯನ್ನು ಒಬ್ಬ ದರೋಡೆಕೋರ ಹುಡುಕುತ್ತಿದ್ದಾನೆ ಎಂದು ನಾಯಕನಿಗೆ ತಿಳಿಯುತ್ತದೆ. ಅದನ್ನು ತಾನೂ ಹುಡುಕಲು ಪ್ರಯತ್ನ ಮಾಡುತ್ತಾನೆ. ಒಂದು ಜನಾಂಗದವರು ಅದನ್ನು ಕಾಪಾಡುತ್ತಿದ್ದಾರೆ ಎಂದು ಗೊತ್ತಾಗುತ್ತದೆ. ಅವರಿಂದ ಅದನ್ನು ಕದ್ದು ಓಡಲು plan ಮಾಡುತ್ತಾನೆ. ಆದರೆ ಆತನ ಮನಃ ಪರಿವರ್ತನೆಯಾಗಿ ಅವರನ್ನು ಕಾಪಾಡುವ ವ್ಯಕ್ತಿಯಾಗುತ್ತಾನೆ.

ಇತ್ತೀಚೆಗೆ ಬಂದ 'ಬೆಲ್ ಬಾಟಂ' ಸಿನೆಮಾದಲ್ಲೂ ಸಹ ನಾವು ಇದಕ್ಕೆ ಹೋಲುವ ನಾಯಕನ ಪಾತ್ರವನ್ನು ಕಾಣಬಹುದು. ಮೊದಲಿಗೆ ನಾಯಕ ಅಷ್ಟು ಪ್ರಾಮಾಣಿಕನಲ್ಲದ, ಸ್ವಲ್ಪ ದುರಾಸೆಯುಳ್ಳ ವ್ಯಕ್ತಿ. ಕಥೆಯ ಕಡೆ ಹಂತದಲ್ಲಿ ಪರಿವರ್ತನೆಯಾಗಿ ಒಳ್ಳೆಯವನಾಗುತ್ತಾನೆ. ಈ ಒಂದು characterization ಇತ್ತೀಚಿನ ಹಲವು ಚಿತ್ರಗಳಲ್ಲಿ ನಾವು ನೋಡಬಹುದು.

'ಕೆ.ಜಿ.ಎಫ್' ಹಾಗೂ 'ಅವನೇ ಶ್ರೀಮನ್ನಾರಾಯಣ' ಚಿತ್ರಗಳು ಎರಡೂ ಯಾವುದೋ ಕಾಲ್ಪನಿಕ ಜಾಗದಲ್ಲಿ ಕಾಲದಲ್ಲಿ ನಡೆಯುತ್ತವೆ. ಆ ಚಿತ್ರಗಳಲ್ಲಿ ವಾಸ್ತವ ಮುಖ್ಯವಲ್ಲ. ಹಾಗೆಯೇ nativity ಅಷ್ಟು ಮುಖ್ಯವಲ್ಲ. ಚಲನಚಿತ್ರ ಒಂದು ಕಲ್ಪನೆಯನ್ನು ಕಟ್ಟುವ ಕಲೆ. ಅದರಲ್ಲಿ ವಾಸ್ತವವನ್ನು ತೋರಿಸುತ್ತೇವೋ ಅಥವಾ ಕಾಲ್ಪನಿಕ ಸೃಷ್ಟಿ ಮಾಡುತ್ತೇವೋ ಎಂಬುದು ಮಾಡುವವರಿಗೆ ಹಾಗೂ ನೋಡುವವರಿಗೆ ಬಿಟ್ಟಿದ್ದೆ.

**ಬದಲಾಗುತ್ತಿರುವ ನಾಯಕನ ಪಾತ್ರಗಳು :**

ಹೀಗೆ ನಾವು 'ಸತಿ ಸುಲೋಚನ' ದಿಂದ ಮೊದಲುಗೊಂಡು ಇಂದಿನ ಸಿನೆಮಾ ನಾಯಕನ ಪಾತ್ರವನ್ನು ನೋಡಿದರೆ ಅದು ಕಾಲಕಾಲಕ್ಕೆ ಹೇಗೆ ಬದಲಾಗುತ್ತಿದೆ ಎನ್ನುವುದನ್ನು ಗಮನಿಸಬಹುದು. ಮೊದಲು ಕಟ್ಟುತ್ತಿದ್ದ ನಾಯಕ ಪಾತ್ರಗಳಿಗೆ ಸಮಾಜ ಹಾಗು ದೇಶದ ಬಗ್ಗೆ ಭರವಸೆ, ಆಸೆ ಮಹತ್ವಾಕಾಂಕ್ಷೆ ಇತ್ತು. ನಂತರದ ನಾಯಕ ಪಾತ್ರಗಳು ಸಮಾಜವನ್ನು ಹೊಸ ದಿಕ್ಕಿನ ಕಡೆ ಕೊಂಡೊಯ್ಯುವ ಆಸೆ ಇಟ್ಟುಕೊಂಡವರಾಗಿದ್ದರು. ಮುಂದೆ ಸಾಗುತ್ತ ಸಮಾಜ ಹಾಗೂ ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಂಡ, ಅದರ ವಿರುದ್ಧ ಸಿಡಿದೇಳುವ ಮೂಲಕ ಅದನ್ನು ಸರಿಪಡಿಸುವ ಧೈಯ ಇರುವ ನಾಯಕ ಪಾತ್ರಗಳು ಬಂದವು. ನಂತರ ಬಂದ ಕೆಲವು ನಾಯಕ ಪಾತ್ರಗಳಿಗೆ ಸಮಾಜ, ವ್ಯವಸ್ಥೆಗಿಂತ ತಮ್ಮ ಹತ್ತಿರ

ಸಂಬಂಧಗಳು, ಪ್ರೇಯಸಿ, ತಾಯಿ ಇವುಗಳು ಮುಖ್ಯವಾದವು. ಇತ್ತೀಚೆಗೆ ಬರುತ್ತಿರುವ ನಾಯಕ ಪಾತ್ರಗಳಿಗೆ ಸಮಾಜ, ವ್ಯವಸ್ಥೆಯ ಮೇಲೆ ಸಂಪೂರ್ಣ ನಂಬಿಕೆ ಕಳೆದುಕೊಂಡಿದ್ದು, ತಮ್ಮ ಸ್ವಾರ್ಥಕ್ಕಾಗಿ ಬದುಕುವ ಪಾತ್ರಗಳಾಗಿರುತ್ತಾರೆ. ಸನ್ನಿವೇಶಗಳು ಅವರನ್ನ ಮಾನವೀಯತೆಯ ಕಡೆ ಒಳ್ಳೆತನದ ಕಡೆ ತೆಗೆದುಕೊಂದು ಹೋಗುತ್ತವೆ. ಹೇಗೆ ಕಾಲ ಬದಲಾಗುತ್ತಾ ನಾಯಕ ಪಾತ್ರದ ಆಯಾಮಗಳು ಬದಲಾಗುತ್ತಿರುವುದನ್ನು ನಾವು ಗಮನಿಸಬಹುದು.

**ಹೊಸ ತಂತ್ರಜ್ಞಾನ ಹಾಗು ವಿತರಣೆಯ ಮಾಧ್ಯಮಗಳು :**

ಇಂದು ದೃಶ್ಯಮಾಧ್ಯಮದ ಮಾರುಕಟ್ಟೆ ಹಾಗೂ ವಿತರಣೆ ಸಾಕಷ್ಟು ಬದಲಾಗಿದೆ. ಇಂಟರ್ನೆಟ್ ಬೆಳೆದ ಹಾಗೆ TV, OTT Platform ಹೀಗೆ ಹಲವಾರು ಕಡೆ ನಾವು ಸಿನೆಮಾ ನೋಡಬಹುದಾಗಿದೆ. ಮುಂಚಿನ ಹಾಗೆ ಸಿನೆಮಾ ಮಾಧ್ಯಮ ಕೆಲವರಿಗೆ ಮಾತ್ರ ಸೀಮಿತವಾದ ಪ್ರಪಂಚವಾಗಿಲ್ಲ. ಎಲ್ಲರ ಮೊಬೈಲ್‌ನಲ್ಲೂ ಕ್ಯಾಮೆರಾಗಳಿವೆ. ಚಿತ್ರೀಕರಣ, ಸಂಕಲನ, ಸಿನೆಮಾ ತಯಾರಿಸಲು ಬಳಸುವ ಅನೇಕ ತಂತ್ರಗಳ ಬಗ್ಗೆ ಅನೇಕರಿಗೆ ಗೊತ್ತಿದೆ. ಒಬ್ಬ ನಾಯಕನಟ ಸಿನೆಮಾದಲ್ಲಿ ಕಾಣಿಸಿಕೊಂಡಾಗ ಆತನಲ್ಲಿ ಏನನ್ನು ಅನುಕರಿಸಬೇಕು ಏನನ್ನು ಅನುಕರಿಸಬಾರದು ಎಂಬ ಅರಿವು ಮುಂಚೆಗಿಂತ ಹೆಚ್ಚಾಗಿದೆ ಅನ್ನುವುದು ನನ್ನ ನಂಬಿಕೆ. ಆದ್ದರಿಂದ ಮೌಲ್ಯ ಪ್ರಸಾರದಲ್ಲಿ ಸಾಮಾಜಿಕ ಜಾಲತಾಣಗಳು, ಸುದ್ದಿಮಾಧ್ಯಮಗಳು, ಹೀಗೆ ಅನೇಕ ಮಾಧ್ಯಮಗಳಲ್ಲಿ ಸಿನೆಮಾ ಕೂಡ ಒಂದಾಗಿದೆ. ಸಿನೆಮ ಮಾಡುವ ತಂತ್ರಜ್ಞಾನ, ವಿತರಿಸುವ ರೀತಿಗಳು ಬದಲಾಗಿವೆ. ಬರುವ ದಿನಗಳಲ್ಲಿ ಇದು ಯಾವ ದಿಕ್ಕಿನಲ್ಲಿ ಬೆಳೆಯುತ್ತದೆ, ಯಾವ ರೂಪ ಪಡೆಯುತ್ತದೆ ಅನ್ನುವುದು ನಾವೆಲ್ಲರೂ ಕುತೂಹಲದಿಂದ ಗಮನಿಸಬೇಕು.

# ಕಿರುತೆರೆ – ಸಾಮಾಜಿಕ ಜವಾಬ್ದಾರಿ

· ಟಿ. ಸುರೇಶ

೭೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಬಂಧ ಮಂಡಿಸುವ ಅವಕಾಶ ನನಗೆ ಎರಡನೆಯ ಸಲ ಒದಗಿ ಬಂದಿದೆ. ಈ ಹಿಂದೆ ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಬಂಧ ಮಂಡಿಸಿದ್ದೆ. ಆಗ ಕಡೆಯ ನಿಮಿಷದಲ್ಲಿ ಬರಬೇಕಾದವರು ಬಾರದೆ ಹೋದುದರಿಂದ ಪ್ರೀತಿಯ ಗುರುಗಳಾದ ಚಂಪಾ ಅವರು ನನ್ನನ್ನು 'ಬದಲಿ ಆಟಗಾರ' ಎಂದು ಕರೆದಿದ್ದರು. ಮಾಧ್ಯಮ ಕುರಿತ ಗೋಷ್ಠಿಯಲ್ಲಿ ಗೌರಿ ಲಂಕೇಶ್ ಅವರ ಜೊತೆಗೆ ನಾನೂ ಸಹ ಇದ್ದೆ, ಕಿರುತೆರೆಯ ಬಗ್ಗೆ ಮಾತಾಡಿದ್ದೆ. ಈ ಸಲ ಅಪರೂಪಕ್ಕೆ ನಾನು ಬದಲಿ ಆಟಗಾರ ಅಲ್ಲ. ಅಧ್ಯಕ್ಷರಾದ ಮನು ಬಳಿಗಾರ್ ಅವರು ಖುದ್ದಾಗಿ ಕರೆ ಮಾಡಿ ಬರಲು ಸೂಚಿಸಿದರು. ಈ ಆಹ್ವಾನಕ್ಕಾಗಿ ಮನು ಬಳಿಗಾರ್ ಅವರಿಗೆ, ಸಮ್ಮೇಳನಾಧ್ಯಕ್ಷರು ಮತ್ತು ಗುರುಗಳಾದ ಎಚ್ಚೆಸ್ವಿ ಅವರಿಗೆ ಮತ್ತು ಈ ಆಯ್ಕೆಗೆ ಕಾರಣರಾದ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಸಮಿತಿಗಳ ಸದಸ್ಯರಿಗೆ ವಿಶೇಷ ಧನ್ಯವಾದಗಳನ್ನು ತಿಳಿಸುತ್ತೇನೆ.

ಇಲ್ಲಿ ನಾನು ಮಾಡುತ್ತಿರುವ ಪ್ರಬಂಧ ಮಂಡನೆಗಾಗಿ ದೊರೆವ ಗೌರವಧನವನ್ನಾಗಲಿ ನನ್ನ ಪ್ರಯಾಣದ ಖರ್ಚನ್ನಾಗಲಿ ನಾನು ಪಡೆಯುವುದಿಲ್ಲ. ಆ ಹಣವನ್ನು ಸದುಪಯೋಗ ಪಡಿಸಿಕೊಳ್ಳಿ ಎಂದು ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಿಗೆ ಕೋರುತ್ತೇನೆ. (ತಕ್ಷಣ ಇದಕ್ಕೆ ಉತ್ತರಿಸಿದ ಅಧ್ಯಕ್ಷ ನಾಡೋಜ ಮನು ಬಳಿಗಾರ್ ಅವರು ತಾವು ಅಧ್ಯಕ್ಷರಾದ ದಿನದಿಂದ ಇದುವರೆಗೆ ಪರಿಷತ್ತಿನಿಂದ ದೊರೆಯುವ ತಿಂಗಳ ಗೌರವ ಸಂಭಾವನೆಯನ್ನು ಪಡೆದಿಲ್ಲ ಎಂದು ಸ್ಪಷ್ಟಪಡಿಸಿದರು.)

ಇಂದಿನ ನನ್ನ ಮಾತುಗಳನ್ನು ಮಂಡಿಸುವ ಮುಂಚೆ ಮೂರು ವಿಷಯಗಳನ್ನು ಹೇಳಬೇಕಿದೆ.

೧. ಚಿಕ್ಕಮಗಳೂರಿನ ಸಾಹಿತ್ಯ ಸಮ್ಮೇಳನವನ್ನು ಕುರಿತಂತೆ ಆ ಸಮ್ಮೇಳನದ ಅಧ್ಯಕ್ಷರ ಆಯ್ಕೆಯ ಹಿನ್ನೆಲೆಯಲ್ಲಿ ಸಾಹಿತ್ಯ ಪರಿಷತ್ತು ಧನ ಸಹಾಯ ನೀಡುವುದಿಲ್ಲ ಎಂಬ ನಿಲುವು ತೆಗೆದುಕೊಂಡದ್ದು ಮತ್ತು ಸಂಸ್ಕೃತಿ ಸಚಿವರು ಆ ಸಮ್ಮೇಳನಾಧ್ಯಕ್ಷರ ಬಗ್ಗೆ ಆಡಿದ ಕಟುವಾದ ಮಾತುಗಳಿಗೆ ನನ್ನ ವಿರೋಧವಿದೆ. (ಇದಕ್ಕೆ ಕೂಡ ತಕ್ಷಣ ಪ್ರತಿಕ್ರಿಯಿಸಿದ ಅಧ್ಯಕ್ಷ ಡಾ. ಬಳಿಗಾರ್ ಅವರು ಸಮ್ಮೇಳನಕ್ಕೆ ಧನ ಸಹಾಯ ನೀಡುವುದಿಲ್ಲ ಎಂದು ಹೇಳಿರಲಿಲ್ಲ. ಈ ವಿಚಾರದಲ್ಲಿ ವಿನಾಕಾರಣ ಹಾಗೂ ಮತ್ತೆ ಮತ್ತೆ ದೋಷಾರೋಪಣೆ ಮಾಡಲಾಗುತ್ತಿದೆ ಎಂದು ತೀವ್ರವಾಗಿ ಆಕ್ಷೇಪಿಸಿದರು. ಚಿಕ್ಕಮಗಳೂರು ಜಿಲ್ಲಾ ಸಮ್ಮೇಳನದ ಸಮಯದಲ್ಲಿ ಕಾನೂನು ಸುವ್ಯವಸ್ಥೆಗೆ ಭಂಗ ಬರಬಹುದು ಎಂದು ಜಿಲ್ಲಾ ಆಡಳಿತ ನನಗೆ ತಿಳಿಸಿದ್ದರಿಂದ ಸಮ್ಮೇಳನವನ್ನು ಕೆಲಕಾಲ ಮುಂದೂಡುವಂತೆ ನಾನು ತಿಳಿಸಿದ್ದೆ. ಆದರೆ ಜಿಲ್ಲಾ ಅಧ್ಯಕ್ಷರು ಅದಕ್ಕೆ ಒಪ್ಪಲಿಲ್ಲ. ಆಗಿರುವುದು

ಇಷ್ಟೇ. ಇದನ್ನೇ ವಿನಾಕಾರಣವಾಗಿ ಮತ್ತೆ ಮತ್ತೆ ಪ್ರಸ್ತಾಪಿಸಿ ವಿವಾದ ಮಾಡುವುದು ಕೆಲವರ ಉದ್ದೇಶ ಇದ್ದಂತಿದೆ ಎಂದು ವಿಷಾದಿಸಿದರು.)

೨. ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಲ್ಲಿ ನಡೆದ ಸಮ್ಮೇಳನದ ಎರಡನೆಯ ದಿನಕ್ಕೆ ಪೆಟ್ರೋಲ್ ಬಾಂಬ್ ಎಸೆಯುವ ಬೆದರಿಗೆ ಒಡ್ಡಿದವರನ್ನು ಸರ್ಕಾರ ಈ ಕೂಡಲೇ ಬಂಧಿಸಿ ಶಿಕ್ಷೆ ವಿಧಿಸಬೇಕಾಗಿದೆ.

೩. ಪರದೇಶಗಳಿಂದ ನೆಮ್ಮದಿ ಹುಡುಕಿ ನಮ್ಮ ದೇಶಕ್ಕೆ ಬರುವವರನ್ನು ನೆಲೆಗೊಳಿಸಲು ಧರ್ಮಾಧರಿತವಾದ ಕಾನೂನು ರಚಿಸಿರುವುದನ್ನು ಮತ್ತು ಅದಕ್ಕೆ ಸಂಬಂಧಿಸಿದಂತೆ ಮಾಡಲಾಗಿರುವ ಪ್ರಜೆಗಳ ಯಾದಿ ತಯಾರಿಸುವ ಕ್ರಿಯೆಯು ಸಂವಿಧಾನ ವಿರೋಧಿಯಾಗಿದೆ ಎಂಬುದು ನನ್ನ ನಿಲುವಾಗಿದೆ.

ಈ ಮೂರು ವಿಷಯಗಳ ಬಗ್ಗೆ ಈ ಸಮ್ಮೇಳನವು ಸಹ ಸ್ಪಷ್ಟ ನಿಲುವಳಿಯನ್ನು ಪ್ರಕಟಿಸಬೇಕೆಂದು ಸಮ್ಮೇಳನಾಧ್ಯಕ್ಷರಲ್ಲಿ ಮನವಿ ಮಾಡುತ್ತೇನೆ.

ಇನ್ನು ಇಂದಿನ ವಿಷಯಕ್ಕೆ ಬರೋಣ. ನನಗೆ ನೀಡಲಾಗಿರುವ ಪ್ರಬಂಧದ ವಿಷಯ 'ಕಿರುತೆರೆ- ಸಾಮಾಜಿಕ ಜವಾಬ್ದಾರಿ' ಕುರಿತು ಅದಾಗಲೇ ಅನೇಕ ಕಡೆಗಳಲ್ಲಿ ಮಾತಾಡಿದ್ದೇನೆ, ಬರೆದಿದ್ದೇನೆ. ಆದರೂ ಸಮಕಾಲೀನ ಸಂದರ್ಭದ ಹಿನ್ನೆಲೆಯಲ್ಲಿ ಈ ವಿಷಯವನ್ನು ಕುರಿತು ಹೇಳಬಹುದಾದ ಅನೇಕ ಹೊಸ ವಿಷಯಗಳಿವೆ. ಅವುಗಳನ್ನು ಕ್ಲುಪ್ತವಾಗಿ ಮಂಡಿಸಲು ಪ್ರಯತ್ನಿಸುತ್ತೇನೆ. ಇಲ್ಲಿ ನಾನು ಮಂಡಿಸುತ್ತಿರುವ ಅಭಿಪ್ರಾಯಗಳೆಲ್ಲವೂ ವೈಯಕ್ತಿಕ ನೆಲೆಯಿದ್ದು, ಇವುಗಳನ್ನು ಮುಕ್ತವಾಗಿ ಚರ್ಚಿಸಲು ನಾನು ಸದಾ ಸಿದ್ಧನಿದ್ದೇನೆ.

**ವೈರುಧ್ಯಗಳ ನಡುವೆ ಓಡುವ ಬದುಕು**

'ಕಿರುತೆರೆ', 'ಸಮಾಜ' ಮತ್ತು 'ಜವಾಬ್ದಾರಿ' ಎಂಬ ಮೂರು ಪದಗಳಿವೆ ನನಗೆ ಕೊಟ್ಟಿರುವ ವಿಷಯದಲ್ಲಿ, ಈ ಗೋಷ್ಠಿಯ ಪ್ರಧಾನ ವಿಷಯ 'ಚಲನಚಿತ್ರ ಮತ್ತು ಸಾಹಿತ್ಯ', ಈ ಗೋಷ್ಠಿಯ ಹೆಸರು ಮತ್ತು ಇಲ್ಲಿನ ಪ್ರಬಂಧಗಳ ವಿಷಯದಲ್ಲಿಯೊ ವೈರುಧ್ಯಗಳಿವೆ. ಚಲನಚಿತ್ರ ಮತ್ತು ಸಾಹಿತ್ಯದ ಕೊಳುಕೊಡೆಗಳ ಬಗ್ಗೆ ಮಾತಾಡುವಾಗ 'ಕಿರುತೆರೆಯ ಸಾಮಾಜಿಕ ಜವಾಬ್ದಾರಿ' ಎಂದು ಪ್ರಬಂಧ ಮಂಡಿಸುವುದು ಈ ವೈರುಧ್ಯದ ಮತ್ತೊಂದು ಭಾಗ. ಇರಲಿ, ನನ್ನ ಮಿತಿಯಲ್ಲಿ ಈ ವಿಷಯ ಕುರಿತು ಆಡಬಹುದಾದ ಕೆಲವು ಮಾತುಗಳನ್ನು ಹೇಳುತ್ತೇನೆ.

ಮೊದಲಿಗೆ 'ಜವಾಬ್ದಾರಿ' ಎಂಬ ಪದದ ಹಿಂದಿನ ವಿಶೇಷ ಹಾಗೂ ವೈರುಧ್ಯಗಳ ಜಗತ್ತನ್ನು ಗಮನಿಸೋಣ. ಗುಲ್ಬರ್ಗ ಪ್ರಾಂತ್ಯವಾದ್ದರಿಂದ ಇದು ಮಾತಾಡಲೇಬೇಕಾದ್ದು. ಪರ್ಶಿಯನ್ ಮತ್ತು ಹಿಂದೂಸ್ಥಾನಿ ಪದಗಳ ಸಮ್ಮಿಶ್ರದಿಂದ ಇದೇ ಪ್ರಾಂತ್ಯದಲ್ಲಿ ಹುಟ್ಟಿದ ದನಿ ಭಾಷೆಯ ಪದ 'ಜವಾಬ್', ಆ ಪದಕ್ಕೆ ಸಂಸ್ಕೃತೀಕರಣಗೊಳಿಸಿ

ಧಾರಣ ಎಂಬ ಪದವನ್ನು ಕೂಡಿಸಿ ಹುಟ್ಟಿದ ಪದ 'ಜವಾಬ್ದಾರಿ' ಎಂಬ ಪದವು ಈ ಪ್ರಾಂತ್ಯದ ಗುರುತುಗಳು – ನಮ್ಮ ಭಾಷೆಯಲ್ಲಿ ಶಾಶ್ವತವಾಗಿ ಉಳಿದಿರುವ ಸೂಚನೆಯಾಗಿದೆ.

ಆದರೆ ಇಂದು 'ಜವಾಬ್ದಾರಿ' ಎಂಬುದು ಯಾರಿಗೆ ಇರಬೇಕೊ ಅವರಿಗೆ ಇಲ್ಲ. ಪ್ರಶ್ನೆ ಕೇಳಿ ಉತ್ತರ ಪಡೆಯಬೇಕೆಂದು ಬಯಸಿದವನನ್ನು ದೇಶದ್ರೋಹಿ ಎಂದು ಗುರುತಿಸುವ



ಸ್ಥಿತಿಯಿದೆ. ಆಳುವ ಸರ್ಕಾರಗಳಿಗೆ ಸ್ವತಃ ಉತ್ತರದಾಯಿತ್ವ ಎಂಬುದಿಲ್ಲ. ಇನ್ನು ಇದೇ ಸಮಾಜದ ಶಿಶುಗಳಾದ ಸಿನಿಮಾ ಮತ್ತು ಕಿರುತೆರೆಗಳಿಗೆ ಜವಾಬ್ದಾರಿ ಇದೆಯೇ ಎಂಬ ವಿವರಗಳನ್ನು ಮುಂದೆ ನೋಡೋಣ.

ಇನ್ನು ಎರಡನೆಯ ಪದ 'ಸಮಾಜ'. ಸಮಾಜ ಎಂಬುದು ಸಮಾನವಾಗಿ ಬದುಕುವ ಜನಗಳು ಇರುವಂತಹದು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ದೇಶದ ಒಟ್ಟು ಆದಾಯದಲ್ಲಿ ಶೇ.೮೦ರಷ್ಟು ಕೇವಲ ಹತ್ತಿಪ್ಪತ್ತು ವ್ಯಕ್ತಿಗಳಿಗೆ ಸೇರಿ, ಶೇಕಡ ೧೫ರಷ್ಟು ಮೇಲ್ವರ್ಗ ಮತ್ತು ಮೇಲ್ ಮಧ್ಯಮ ವರ್ಗದ ಜನಕ್ಕೆ ಸೇರಿ, ಉಳಿದ ಶೇ.೫ರಲ್ಲಿ ದೇಶದ ಬಹುತೇಕರು ಕೈಗೆ ಬಾಯಿಗೆ ತಾಗದ ಆದಾಯದಲ್ಲಿ ಹೈರಾಣಾಗಿರುವುದನ್ನು ಕಾಣುತ್ತಾ ಇದ್ದೇವೆ. ಇಂತಹ ಸಮಾನವಲ್ಲದ ಸಮಾಜ ಸೃಷ್ಟಿಸಿ ಸಾಮಾಜಿಕ ಜವಾಬ್ದಾರಿ ಎಂದು ಮಾತಾಡುವುದು ಮತ್ತೊಂದು ಬೃಹತ್ ವೈರುಧ್ಯ ಆದಾಯದ ತರತಮಗಳು ಈ ದೇಶದಲ್ಲಿ ಅದ್ಯಾವ ಮಟ್ಟಕ್ಕೆ ಬೆಳೆದಿವೆ ಎಂದರೆ ನಿತ್ಯ ಹಸಿವಿನಿಂದ ಸಾಯುವವರ ಸಂಖ್ಯೆ, ನಿರುದ್ಯೋಗದಿಂದ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ, ತಾನು ಬೆಳೆದದ್ದಕ್ಕೆ ಸರಿಯಾದ ಬೆಲೆ ಸಿಗದೆ ಹಾಗೂ ಆರ್ಥಿಕ ಒತ್ತಡಗಳಿಂದ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆಗಳನ್ನು ಗಮನಿಸಿದರೆ ನಾವು ಯಾವ ಸಮಾಜದ ಬಗ್ಗೆ ಮಾತಾಡಬೇಕು ಎಂಬುದೇ ಗೊಂದಲ ಎನ್ನುವ ಪರಿಸ್ಥಿತಿಯಿದೆ. ಪಿ. ಸಾಯಿನಾಥ್ ಅವರು ತಯಾರಿಸಿದ 'ನಿರೋಸ್ ಗೆಸ್ಟ್' ಮತ್ತು ನವೀಪ್ ಅವರ 'ಲ್ಯಾಂಡ್‌ಸ್' ಸಾಕ್ಷ್ಯ ಚಿತ್ರ ನೋಡಿರುವವರಿಗೆ ಈಗ ನಾನು ಹೇಳಿದ ವಿವರಗಳ ವಿಶ್ವರೂಪ ತಿಳಿದಿರುತ್ತದೆ. ಹೀಗಾಗಿ ಈಗ 'ಸಮಾಜ' ಎಂಬುದನ್ನು ಕಿರುತೆರೆಯ ಮಟ್ಟಿಗೆ ಆರೋಪಿಸಿ ನೋಡುವುದಾದರೆ ನಾಳೆಯ ಬಗ್ಗೆ ಖಾತ್ರಿ ಇಲ್ಲದ, ಯಾವುದೋ ಭ್ರಮೆಯಲ್ಲಿ ಮುಳುಗಿ ತೇಲುಗಣ್ಣಾಗಿರುವ ಮುಖಗಳೇ ಕಿರುತೆರೆಯನ್ನು ಆಸ್ವಾದಿಸುತ್ತಾ ಇರುವುದನ್ನು ಕಾಣುತ್ತಿವೆ.

ಇನ್ನು ಮೂರನೆಯ ಪದ 'ಕಿರುತೆರೆ' ಈಗಿದನ್ನು 'ಕಿರು' ಎಂದು ಕರೆಯುವುದೇ ತಪ್ಪು. ಏಕೆಂದರೆ ಯಾವ ಮಾಧ್ಯಮವನ್ನು 'ಹಿರಿದು' ಎಂದು ಗುರುತಿಸುತ್ತಾ ಇದ್ದೇವೋ ಆ ಸಿನಿಮಾ ಎಂಬುದು ಸಹ ತಾವು ಉಸಿರಾಡಲು ಇದೇ ಕಿರುತೆರೆಯ ಟೆಲಿವಿಷನ್ ಮತ್ತು ಸ್ಟೀಮಿಂಗ್ ಪ್ಲಾಟ್‌ಫಾರಂಗಳಿಂದ ಬರುವ ಆದಾಯವನ್ನೇ ನೆಚ್ಚಿಕೊಂಡಿದೆ. ಸಿನಿಮಾ ನೋಡಲು ಸಿನಿಮಾ ಮಂದಿರಕ್ಕೆ ಹೋಗುವವರಿಗಿಂತ ಕಿರುತೆರೆಯ ಮೂಲಕ ನೋಡುವವರೇ ಕಳೆದ ಅರ್ಧ

ದಶಕದಲ್ಲಿ ಹೆಚ್ಚಾಗಿದ್ದಾರೆ ಎಂಬುದು ಅಂಕಿ ಸಂಖ್ಯೆಗಳಿಂದ ತಿಳಿಯುತ್ತಿದೆ. ಇಂತಹ ಕಾಲಘಟ್ಟದಲ್ಲಿ ಈ ಮಾಧ್ಯಮವನ್ನು ಕಿರಿದು' ಎಂದು ಗುರುತಿಸುವುದೇ ವೈರುಧ್ಯ.

ಇಂತಹ ವೈರುಧ್ಯಗಳ ನಡುವೆ ನಾವು 'ಕಿರುತೆರೆ- ಸಾಮಾಜಿಕ ಜವಾಬ್ದಾರಿ' ಎಂದು ಗಮನಿಸುವುದಾದರೆ ಹೇಳಬಹುದಾದ ಅನೇಕ ಸಂಗತಿಗಳಿವೆ. ಮೊದಲಿಗೆ ಟೆಲಿವಿಷನ್ ಮಾಧ್ಯಮವನ್ನು ಬಳಸುತ್ತಿರುವ ಕ್ರಮ ಗಮನಿಸೋಣ, ಹೊಸ ಶತಮಾನದ ಆರಂಭದಲ್ಲಿ ಬೆಂಗಳೂರಿನಲ್ಲಿ ನಡೆದ ಒಂದು ಘಟನೆಯನ್ನು ನಾನು ಹಲವೆಡೆ ಉದಾಹರಿಸಿದ್ದೇನೆ. ಅದನ್ನು ಇಲ್ಲಿ ಮತ್ತೆ ನೆನಪಿಸಿಕೊಳ್ಳುತ್ತೇನೆ. ಆಗ ರಾತ್ರಿ ಹತ್ತು ಗಂಟೆಯಾದರೆ ಕನ್ನಡ ಟೆಲಿವಿಷನ್‌ನಲ್ಲಿ ಹೆಣ ಬೀಳುತ್ತಿದ್ದ ಕಾಲ. ಆಗ ಕ್ರೈಂ ಕತೆಗಳು ಎರಡು ಪ್ರಮುಖ ವಾಹಿನಿಗಳಲ್ಲೂ ಒಂದೇ ಸಮಯದಲ್ಲಿ ಪ್ರಸಾರವಾಗುತ್ತಿತ್ತು. ಅಲ್ಲಿ ಬಂದ ಒಂದು ಕತೆಯ



ವಿವರ ನೀಡುತ್ತೇನೆ. ಬೆಂಗಳೂರಿನ ಬಡಾವಣೆಯೊಂದರ ಪ್ರೌಢಶಾಲೆಯಲ್ಲಿ ಓದುತ್ತಿದ್ದ ಬಾಲಕಿಯೊಬ್ಬಳ ಆತ್ಮಹತ್ಯೆಗೆ ನೇರವಾಗಿ ಆ ಶಾಲೆಯ ಮೇಷ್ಟ್ರರೊಬ್ಬರನ್ನು ಅಪರಾಧಿ ಎಂದು ಆರೋಪಿಸಿದ್ದವು. ಇದಕ್ಕೆ ತೀರಿಕೊಂಡ ಬಾಲಕಿ ಬರೆದ ಪತ್ರದಲ್ಲಿದ್ದ ಸದರಿ, 'ಮೇಷ್ಟರು ಇದಕ್ಕೆಲ್ಲಾ ಕಾರಣ' ಎಂಬ ಸಾಲು ಕಾರಣವಾಗಿತ್ತು. ಎರಡೂ ಕಾರ್ಯಕ್ರಮ ಮಾಡಿದವರು ವಾಸ್ತವವನ್ನು ಗಮನಿಸಲಿಲ್ಲ. ಆರೋಪ ಮಾಡಿಬಿಟ್ಟರು. ಅದರಿಂದ ಆ ಬಡಾವಣೆಯಲ್ಲಿದ್ದ ಜನ ಅದೆಷ್ಟು ಕೆರಳಿದರೆಂದರೆ ಆ ಶಾಲೆಯ ಎದುರಿಗೆ ಪ್ರತಿಭಟನೆ ಮಾಡಿದರು. ಆ ಶಿಕ್ಷಕನನ್ನು ಕೆಲಸದಿಂದ ತೆಗೆಯುವವರೆಗೆ ಬಿಡಲಿಲ್ಲ. ನಂತರ ಆ ಶಿಕ್ಷಕ ಮಾತ್ರವಲ್ಲ ಆತನ ಕುಟುಂಬಕ್ಕೂ ಆ ಬಡಾವಣೆಯಲ್ಲಿ ಬದುಕುವುದು ಕಷ್ಟವಾಗುವಂತೆ ಮಾಡಿದರು. ಇದರಿಂದಾಗಿ ನೊಂದ ಶಿಕ್ಷಕ ಒಂದೆರಡು ವಾರಗಳ ನಂತರ ಆತ್ಮಹತ್ಯೆ ಮಾಡಿಕೊಳ್ಳುವಂತಾಯಿತು. ವಾಸ್ತವವಾಗಿ ಆ ಶಾಲೆಯಲ್ಲಿ ವಿಜ್ಞಾನ ವಿಷಯ ಕಲಿಸುತ್ತಿದ್ದ ಆ ಮೇಷ್ಟರು ತೀರಿಕೊಂಡ ಬಾಲಕಿಗೆ ಇದ್ದ ಇನ್‌ಫ್ಯಾಚುಯೇಷನ್ ಎಂಬ ಮಾನಸಿಕ ಸಮಸ್ಯೆಯಿಂದ ತಪ್ಪಿಸಲು ಪ್ರಯತ್ನಿಸಿದ್ದರು. ಹದಿಹರಯದ ಮನಸ್ಸುಗಳು ಮಾಡಿಕೊಳ್ಳಬಹುದಾದ ಇಂತಹ ಅವಘಡಗಳನ್ನು ಸಂಪೂರ್ಣ ವಿವರ ಗಮನಿಸದೆ, ತಮ್ಮ ಮನಸ್ಸಿಗೆ ತೋಚಿದ ಕ್ರಮದಲ್ಲಿ ಮಾತಾಡಿದ ಎರಡೂ ಕಾರ್ಯಕ್ರಮಗಳು ಆ ಅಮಾಯಕ ಶಿಕ್ಷಕನ ಸಾವಿಗೆ ಕಾರಣವಾಗಿದ್ದವು. ಮಾತು ಅಪಾಯಕಾರಿ. ಯಾರ ಮಾತು ಯಾರ ಕೊರಳಿಗೆ ಕತ್ತಿ ತರುತ್ತದೆ, ಕುಣಿಕೆ ತರುತ್ತದೋ ಎಂಬ ಎಚ್ಚರಿಕೆ ಸಮಾಜದಲ್ಲಿರುವ ಎಲ್ಲರಿಗೂ ಇರಬೇಕು.

ಈ ಪರಿಸ್ಥಿತಿ ಅಂದಿನಿಂದ ಇಂದಿನವರೆಗೂ ಮುಂದುವರೆದಿದೆ. ವಾಟ್ಸಪ್‌ನಲ್ಲಿ ಬಂದ ವಿಷಯಗಳನ್ನು ಹಿಡಿದು, ವಾಸ್ತವ ಗ್ರಹಿಸದೆ ಆಡುವ ಮಾತುಗಳೇ ಸುದ್ದಿಗಳಾಗಿ ಬರುತ್ತಿರುವುದನ್ನು ನಾಡು ಗಮನಿಸುತ್ತಿದೆ. ಇದಲ್ಲದೆ ಬಹುತೇಕ

ಸುದ್ದಿ ಮಾಧ್ಯಮಗಳು ಅವಕಾಶವಾದಿಗಳಾಗಿವೆ. ಹಣ ಕೊಟ್ಟವನನ್ನು ಹೊಗಳುತ್ತಾ, ನಾಡಿಗೆ ಅಗತ್ಯವಾದ ಅನೇಕ ವಿಷಯಗಳನ್ನು ಚರ್ಚಿಸದೆ ಉಳಿದಿರುವುದು ಸಹ ಕಾಣುತ್ತಿದೆ. ಇದು ಕಳೆದ ಎರಡು ದಶಕಗಳಿಂದ ಹುಟ್ಟಿದ ಅನಾರೋಗ್ಯಕರ ಸ್ಪರ್ಧೆಯಿಂದಾಗಿ ಟೆಲಿವಿಷನ್ ಸುದ್ದಿವಾಹಿನಿಗಳೆಲ್ಲದರ ಸ್ಥಿತಿಯಾಗಿದೆ. ಇವುಗಳಲ್ಲಿ ಜನೋಪಯೋಗಿ ಕಾರ್ಯಕ್ರಮಗಳು ಬರುವುದಿಲ್ಲ ಎಂದೇನಲ್ಲ. ಅನೇಕ ಒಳ್ಳೆಯ ಕಾರ್ಯಕ್ರಮಗಳು ಬರುತ್ತವೆ. ಆದರೆ ಪ್ರೈಮ್ ಟೈಮ್ ಎಂದು ಗುರುತಿಸಲಾಗುವ ಕಾಲಮಾನದಲ್ಲಿ ದ್ವೇಷ ಹುಟ್ಟಿಸುವ, ಜಗಳಕ್ಕಿಳಿಯುವ ಸ್ಥಿತಿ ಹೆಚ್ಚಾಗಿದೆ ಎಂಬುದು ಎಲ್ಲರೂ ಗಮನಿಸಿರುವ ಸಂಗತಿಯಾಗಿದೆ. ಇದೂ ಬದಲಾಗುವ ಕಾಲವೂ ದೂರವಿಲ್ಲ. ಅದಾಗಲೇ ಬಹುತೇಕ ಜನ ಟೆಲಿವಿಷನ್ ನೋಡುವುದರಿಂದ ದೂರ ಸರಿದು ವೆಬ್ ಸುದ್ದಿಗಳನ್ನು ಓದುವ, ನೋಡುವ ಹಂತಕ್ಕೆ ಚಲಿಸುತ್ತಾ ಇದ್ದಾರೆ. ಅಂದರೆ ಒಂದು ಕಾಲಮಾನಕ್ಕೆ ಒಂದು ಬಗೆಯ ಸುದ್ದಿ ಎಂಬ ಸೂತ್ರ ಈ ಬದಲಾಗುತ್ತಿರುವ ಕಾಲಘಟ್ಟದಲ್ಲಿ ನಡೆಯುವುದಿಲ್ಲ. ಹಾಗಾಗಿ ಎಲ್ಲಾ ವಾಹಿನಿಗಳು ಮಾಹಿತಿ ಕೇಂದ್ರಿತ ಹಾಗೂ ಚುಟುಕು ಸುದ್ದಿಗಳ ಕಡೆಗೆ ಚಲಿಸುವುದನ್ನು ಬಹುಬೇಗ ಕಾಣಲಿದ್ದೇವೆ.

**ಮುಕ್ತ ಮಾರುಕಟ್ಟೆ ಮತ್ತು ಕೊಳ್ಳುಬಾಕ ಸಂಸ್ಕೃತಿಯ ಕೂಸುಗಳು**

ಈ ಕಿರುತೆರೆ ಹುಟ್ಟಿದ ಕಾರಣ ಏನೇ ಇರಲಿ, ಅದು ಜನಪ್ರಿಯವಾಗಿದ್ದು ಮುಕ್ತ ಮಾರುಕಟ್ಟೆಯ ಕೊಳ್ಳುಬಾಕ ಸಂಸ್ಕೃತಿಯನ್ನು ವಿಸ್ತರಿಸುವುದಕ್ಕಾಗಿ, ಕಾರ್ಯಕ್ರಮದ ನಡುವೆ



ಜಾಹೀರಾತು ಅನ್ನುವ ಕಾಲದಿಂದ ಜಾಹೀರಾತಿನ ನಡುವೆ ಕಾರ್ಯಕ್ರಮ ಎಂಬ ಕಾಲಕ್ಕೆ ಬಂದದ್ದುಂಟು. ಇದನ್ನು ತಿದ್ದಲು ಪ್ರತೀ ಘಂಟೆಗೆ ಇಂತಿಷ್ಟೇ ಜಾಹೀರಾತು ಎಂಬ ಮಿತಿ ಹಾಕುವ ಕಾನೂನು ಸಹ ಬಂದಿದೆ. ಆದರೂ ಮಾಹಿತಿ, ವಿದ್ಯಾಭ್ಯಾಸ ಮತ್ತು ಮನರಂಜನೆ ಎಂಬ ಮೂರು ಮುಖ್ಯ ಕಾರಣಗಳಿಗಾಗಿ ಆಗಬೇಕಿದ್ದ ಟೆಲಿವಿಷನ್ ಕಾರ್ಯಕ್ರಮಗಳು ಇಂದು ಕೇವಲ ಮನರಂಜನೆ ಎಂಬ ಏಕಮುಖಿ ನಿಲುವಿಗೆ ಬಂದಿರುವುದಂತೂ ಸತ್ಯ. ಅಪವಾದ ಎಂಬಂತೆ ವಿದ್ಯೆ ಮತ್ತು ಮಾಹಿತಿ ಇರುವ ಕಾರ್ಯಕ್ರಮಗಳನ್ನು ಯಾವುದಾದರೂ ವಾಹಿನಿ ಬಿತ್ತರಿಸಿದರೆ ಅದು ಜನಪ್ರಿಯ ಕಾರ್ಯಕ್ರಮಗಳ ಪಟ್ಟಿಯಲ್ಲಿ ಇರುವುದು ಅನುಮಾನ. ಅಂಥವುಗಳನ್ನು ಈ ಸಮಾಜವು ನೋಡದ ಹಾಗೆಯೇ ಈ ಮಾಧ್ಯಮ ನೋಡುಗರನ್ನು ಸಿದ್ಧಪಡಿಸಿದೆಯೇ ಎನಿಸುತ್ತದೆ.

ಇಂತಹ ಸಂದರ್ಭದಲ್ಲಿ ಕಿರುತೆರೆಗಾಗಿ ಕತೆಗಳನ್ನು ಹೆಣೆದು ನಿತ್ಯ ತಯಾರಿಸುವ ಕಾಯಕ ಮಾಡುತ್ತಿರುವವರ ಸಂಕಟ ವಿಭಿನ್ನ ಬಗೆಯದು. ಒಂದು ಕಾಲದಲ್ಲಿ ಈ ಸಮಾಜದಿಂದಲೇ ಹುಟ್ಟಿದ ಅನೇಕ

ಘಟನೆಗಳನ್ನು, ಸಾಹಿತ್ಯ ಕೃತಿಗಳನ್ನು ಆಧರಿಸಿ ಕಿರುತೆರೆಗಾಗಿ ಕಾರ್ಯಕ್ರಮ ಮಾಡುತ್ತಿದ್ದವರು ಅನೇಕರಿದ್ದಾರೆ. (ನಾಗಾಭರಣ ನಿರ್ದೇಶನದ "ನಮ್ಮ ನಮ್ಮಲ್ಲಿ" , ಕಾಸರವಳ್ಳಿ ಅವರು "ಗೃಹಭಂಗ" , ಸೀತಾರಾಂ ಅವರ "ಕತೆಗಾರ" , ನಾನು ತಯಾರಿಸಿದ "ಪ್ರೀತಿ-ಪ್ರೇಮ" , "ಕಾದಂಬರಿ ಕಣಜ" ಹೀಗೆ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಸಾಹಿತ್ಯಾಧಾರಿತ ಕಾರ್ಯಕ್ರಮಗಳೆಂದು ಪಟ್ಟಿ ಮಾಡಬಹುದು.) ಆದರೆ ಹೊಸ ಶತಮಾನದ ಎರಡನೆಯ ದಶಕ ಬರುವ ಕಾಲಕ್ಕೆ ವಾಹಿನಿಗಳು ಸಂಪೂರ್ಣ ಕಾರ್ಪೋರೇಟೀಕರಣ ಆಗಿವೆ. ಇಲ್ಲೀಗ ಸ್ಥಳೀಯ ನೋಡುಗರಿಗೆ ಎಂದು ಕಾರ್ಯಕ್ರಮ ತಯಾರಾಗುವುದಕ್ಕಿಂತ ಜನರಲೈಸ್ಡ್ (ಸಾಮಾನ್ಯಕರಣಗೊಂಡ) ನೋಡುಗರಿಗೆ ಕಾರ್ಯಕ್ರಮ ತಯಾರಾಗುತ್ತಿದೆ. ಈ ಪರಿಸ್ಥಿತಿಯಲ್ಲಿ ಯರಾದರೂ ಬಯಸಿದರೂ ಸಾಹಿತ್ಯ ಕೃತಿ ಆಧರಿಸಿದ ಕಾರ್ಯಕ್ರಮವನ್ನು ಮಾಡಲು ಆಯಾ ವಾಹಿನಿಗಳು ಸಮಯ ಕೊಡುವುದು ಬಹುತೇಕ ಇಲ್ಲವೇ ಇಲ್ಲ. ಅಕಸ್ಮಾತ್ ಸರ್ಕಾರೀ ಸಂಸ್ಥೆಯಾದ ದೂರದರ್ಶನ ಎಂಬುದು ಇಂತಹ ಕಾರ್ಯಕ್ರಮ ಮಾಡಲು ಮುಂದಾದರೂ ಆ ವಾಹಿನಿ ನೋಡುವ ಪ್ರೇಕ್ಷಕರ ಸಂಖ್ಯೆ ತೀರಾ ಕಡಿಮೆಯಾಗಿದೆ ಎಂಬುದು ಸತ್ಯ.

ಹೀಗಾಗಿ ಸಾಹಿತ್ಯಕ್ಕೂ ಕಿರುತೆರೆಗೂ ಈಗ ಇರುವ ಸಂಬಂಧ ಕೇವಲ ಯಾವುದೋ ಲೇಖಕನ ಹಾಡಿನ ಸಾಲನ್ನು ಯಾವುದೋ ಕಾರ್ಯಕ್ರಮದಲ್ಲಿ ಹಾಡುವಷ್ಟಕ್ಕೆ ಸೀಮಿತ ವಾಗಿದೆ ಎನ್ನಬಹುದು. ಹಾಗೆಂದ ಕೂಡಲೇ ಈ ಕಾರ್ಯಕ್ರಮಗಳಿಗೆ ಸಂಭಾಷಣೆ ಎಂತಲೋ, ನಿರೂಪಣೆ ಎಂತಲೋ ಸಾಹಿತ್ಯ ಬರೆಯುತ್ತಾರಲ್ಲವೇ ಎಂಬ ಪ್ರಶ್ನೆ ಬರುತ್ತದೆ. ಖಂಡಿತ ಆ ಕೆಲಸ ಆಗುತ್ತಿದೆ. ಆದರೆ ಕನ್ನಡದ ಸಂದರ್ಭದಲ್ಲಿ ಶೇಕಡ ೬೦ ರಷ್ಟು ಧಾರವಾಹಿಗಳು ಇನ್ಯಾವುದೋ ಭಾಷೆಯ ಯಶಸ್ವಿ ಧಾರವಾಹಿಗಳ ಮರು ಅವತರಣಿಕೆಗಳು ಹೀಗಾಗಿ ಇಲ್ಲಿ ಬರೆಯುವವರು ಅನುವಾದಕರ ಕೆಲಸ ಮಾಡುತ್ತಾ ಇರುತ್ತಾರೆ. ಕೆಲವು ಸ್ವತಂತ್ರ ಕತೆಗಳು ಸಹ ತಯಾರಾಗುತ್ತಿವೆ. ಅವುಗಳು ಸಾಹಿತ್ಯಾಧಾರಿತ ಕೃತಿಗಳಲ್ಲವಾದ್ದರಿಂದ ಇವತ್ತಿನ ಚರ್ಚೆಗೆ ಅವು ಬರುವುದಿಲ್ಲ.

ಇನ್ನು ಸ್ಥಳೀಯ ಮತ್ತು ಪ್ರಾದೇಶಿಕ ವೈವಿಧ್ಯವನ್ನು ಈ ಮಾಧ್ಯಮದಲ್ಲಿ ಹಿಡಿಯುವ ಪ್ರಯತ್ನ ತೊಂಬತ್ತರ ದಶಕದಲ್ಲಿ ಮತ್ತು ಈ ಶತಮಾನದ ಆರಂಭದಲ್ಲಿ ಒಂದಿಷ್ಟು

ಆಗಿತ್ತು. (ಮೂಡಲಮನೆ, ಸಂಕ್ರಾಂತಿ, ನಾಕುತಂತಿ ಮುಂತಾದ ಧಾರಾವಾಹಿಗಳನ್ನು ನೆನೆಯಬಹುದು.) ನಂತರ ಕಾರ್ಪೋರೇಟೀಕರಣದ ಧಾವಂತದ ಜೊತೆಗೆ ಈ ಬಗೆಯ ಹಲವು ಕನ್ನಡ ಸೊಗಡುಗಳನ್ನು ದಾಟಿಸುವ ಕೆಲಸವನ್ನು ಟೆಲಿವಿಷನ್ ಧಾರಾವಾಹಿಗಳು ಮಾಡಿದ್ದು ಅತೀ ಕಡಿಮೆ. ಒಂದಿಬ್ಬರು ಉತ್ತರ ಕರ್ನಾಟಕ ಭಾಗದ ವಾರ್ತಾವಾಚಕರು ಸಣ್ಣಪುಟ್ಟ ಪ್ರಯತ್ನ ಮಾಡಿದರಾದರೂ ಈ ಕಾಲದ ಸಂಖ್ಯೆಗಳ ಆಟದ ಎದುರು ಪ್ರಯೋಗಗಳು ಬಹುಕಾಲ ಬಾಳಲಿಲ್ಲ. ಹೀಗಾಗಿ ಇಂದು ಟೆಲಿವಿಷನ್‌ನಲ್ಲಿ ಸಾಮಾನ್ಯಕರಣಗೊಂಡ ಕನ್ನಡ ಅಥವಾ ಕಂಗ್ಲೀಷು ಕನ್ನಡವೇ ಕೇಳುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಎಲ್ಲಿಯವರೆಗೆ ಟೆಲಿವಿಷನ್ ವಾಹಿನಿಗಳು ಕಾರ್ಪೋರೇಟೀಕರಣದಿಂದ ಹೊರಬರುವುದಿಲ್ಲವೋ ಅಲ್ಲಿಯವರೆಗೆ ನೋಡುಗರು ಸುಮ್ಮನಿರಬಾರದು. ತಮ್ಮ ಊರುಗಳಲ್ಲಿ ಬಡಾವಣೆಗಳಲ್ಲಿ ನೀವುಗಳೇ ಕಮ್ಯುನಿಟಿ ರೇಡಿಯೋ ಹಾಗೆ ಕಮ್ಯುನಿಟಿ ಟೆಲಿವಿಷನ್ ವಾಹಿನಿ ಆರಂಭಿಸಬೇಕು. (ಕೆಲವು ಕೇಬಲ್ ವಾಹಿನಿಗಳು ಈ ಪ್ರಯತ್ನ ಮಾಡುತ್ತಿವೆ. ಆದರೆ ಅವು ಪೂರ್ಣ ಪ್ರಮಾಣದಲ್ಲಿ ಆಯಾ ಸ್ಥಳೀಯ ಜನರ ಅಗತ್ಯ ಪೂರೈಸುತ್ತಿಲ್ಲ.) ಆಗ ಟೆಲಿವಿಷನ್ ಮಾಧ್ಯಮ ಸಂಪೂರ್ಣ ಡೆಮಾಕ್ರಟೈಸ್ ಆಗುತ್ತದೆ. ಜೊತೆಗೆ ಈ ದಿನ ಚರ್ಚೆಯಾಗುತ್ತಿರುವ ಸಾಮಾಜಿಕ ಜವಾಬ್ದಾರಿ ನಿರ್ವಹಣೆ ಸಹ ಖಂಡಿತ ಆಗುತ್ತದೆ.

**ಡಿಜಿಟಲ್ ಜಗತ್ತು**

ಇಂದು ಡಿಜಿಟಲ್ ಸ್ಟೀಮಿಂಗ್ ಸೈಟ್‌ಗಳ ಸಂಖ್ಯೆ ದಿನದಿಂದ ದಿನಕ್ಕೆ ದೊಡ್ಡದಾಗುತ್ತಿದೆ. ದಿನವೊಂದಕ್ಕೆ ಯೂಟ್ಯೂಬ್ ಒಂದರಲ್ಲಿಯೇ ಎರಡು ಸಾವಿರ ಗಂಟೆಗಳಿಗೂ ಹೆಚ್ಚು ಕಾರ್ಯಕ್ರಮಗಳು ಅಪ್‌ಲೋಡ್ ಆಗುತ್ತವೆ. ಇವುಗಳಲ್ಲಿ ಯಾವುದನ್ನು ನೋಡುವುದು ಎಂಬ ಆಯ್ಕೆ ನೋಡುಗನಿಗೆ ಬಿಟ್ಟದ್ದು. ಇಲ್ಲಿ ಕನ್ನಡದ್ದೇ ಅನ್ನುವ ಕಾರ್ಯಕ್ರಮಗಳು ಅತೀ ಕಡಿಮೆ. ಹೀಗಾಗಿ ತಮ್ಮ ಮೊಬೈಲ್‌ಗೆ ಅದಾಗಲೇ ಮಣಿದು ಹೋಗಿರುವ ಹೊಸ ತಲೆಮಾರಿನ ನೋಡುಗರು ಕನ್ನಡದ ಕಾರ್ಯಕ್ರಮಗಳಿಂದ ಬಹುದೂರ ಇದ್ದಾರೆ. ಅಕಸ್ಮಾತ್ ಅವರನ್ನು ಕನ್ನಡದ ಕಾರ್ಯಕ್ರಮ ನೋಡಲು ಪ್ರೇರೇಪಿಸಿದರೂ ಅದಾಗಲೇ ಜಾಗತಿಕ ಸಿನಿಮಾಗಳ ರುಚಿ ಹತ್ತಿದವರಿಗೆ ನಮ್ಮ ಭಾಷೆಯ ಕಾರ್ಯಕ್ರಮಗಳು ಪೇಲವ ಅನಿಸುತ್ತವೆ.

ಇಂತಹ ಸ್ಥಿತಿಯನ್ನು ದಾಟಿಕೊಂಡು ಕನ್ನಡದ ಕಾರ್ಯಕ್ರಮಗಳನ್ನು ವೆಬ್‌ಸೀರೀಸ್ ಆಗುವ ಪ್ರಯತ್ನ ಅನೇಕರು ಮಾಡುತ್ತಿದ್ದಾರೆ. ಅವರು ಬೇಗ ಎಲ್ಲರ ಕಣ್ಣಿಗೂ ಸಿಗುವ ಹಾಗಾಗಲಿ ಎಂದು ಹಾರೈಸೋಣ.

ಆದರೆ ಈ ವೆಬ್ ಜಗತ್ತಿನಲ್ಲಿ ಸಾಹಿತ್ಯ ಮತ್ತು ದೃಶ್ಯಮಾಧ್ಯಮದ ಸಂಬಂಧ ಅದಾಗಲೇ ನಾನಾಡಿದ ಮಾತುಗಳ ಸ್ಥಿತಿಗಿಂತ ಭಿನ್ನವಾಗಿಲ್ಲ. ಒಂದೆರಡು ಸಾಹಿತ್ಯವನ್ನಾಧರಿಸಿದ ಕೃತಿಗಳು ವೆಬ್ ಸೀರೀಸ್ ಆಗಿ ಹಿದಿಯಲ್ಲಿ ಬಂದಿವೆಯಾದರೂ ಅವೂ ಸಹ ಮಾರಾಟದ ಸರಕಾಗಿ ತಯಾರಾದಂಥ ಕೃತಿಗಳು. (ಕ್ರೌರ್ಯವನ್ನು ಅಥವಾ

ಕಾಮವನ್ನು ವೈಭವೀಕರಿಸಿ ಮಾರಾಟ ಮಾಡಿದ ಕೃತಿಗಳೇ ಹೆಚ್ಚಾಗಿ ಬಂದಿವೆ) ಈ ಮಾತಿಗೆ ಅಪವಾದ ಎನಿಸುವ ಕೆಲವು ಕೃತಿಗಳು ಕಾಣುತ್ತವೆ. ಅವು ಜನಪ್ರಿಯತೆ ಪಡೆದುದು ಅಪರೂಪ.



**ಕೆರಳಿಸುವವರ ನಡುವ ಕಂಗೆಟ್ಟವರು**

ನನ್ನ ಮಾತುಗಳ ಅಂತಿಮ ಹಂತಕ್ಕೆ ಬರುವಾಗ ಈ ಮಾಧ್ಯಮದ ಎಲ್ಲಾ ವಿವರಗಳನ್ನೂ ಗಮನಿಸಿದರೆ ಅನಿಸುವುದಿಷ್ಟು, ಯಾವುದು ಜನರಿಗಾಗಿ ಹುಟ್ಟಿತೋ ಅದು ಜನರನ್ನು ಕೆರಳಿಸುವ, ಒಡೆಯುವ, ದ್ವೇಷಕ್ಕಿಳಿಸುವ ಅಥವಾ ಕ್ರೌರ್ಯದ ಹಾದಿಗೆ ಕರೆದೊಯ್ಯುವ ಕೆಲಸ ಮಾಡುತ್ತಿದೆ. ಒಬ್ಬ ಪುಟ್ಟ ಆರೇಳು ವರ್ಷದ ಬಾಲಕಿ "ದೇಶ್ ಕಿ ಗದ್ದಾರೋಂಕೋ" ಎಂದು ಉದ್ದಕ್ಕೆ ದ್ವೇಷದ ಘೋಷಣೆಗಳನ್ನು ಕೂಗುವ ವಿಡಿಯೊ ವೈರಲ್ ಆಗುತ್ತದೆ. ಇದು ಮಗುವಿನ ಮುಗ್ಧತೆಗಿಂತ ಆ ಮಗುವಿಗೆ ಅಂತಹುದನ್ನು ಕಂಠಪಾಠ ಮಾಡಿಸಿದ ಮನಸ್ಸುಗಳನ್ನು ಪರಿಚಯಿಸುತ್ತದೆ. ಇಂಥವುಗಳನ್ನು ನೋಡಿದ ಇನ್ಯಾವುದೋ ಭಾಗದಲ್ಲಿ ಕಿತ್ತೂರು ಚೆನ್ನಮ್ಮನ, ಸಂಗೊಳ್ಳಿ ರಾಯಣ್ಣನ ಮಾತುಗಳಿಗೆ ಅಭಿನಯಿಸಿ ಚಪ್ಪಾಳೆ ಗಿಟ್ಟಿಸುವ ಬದಲು ಇದೇ ಮಾದರಿಯ ದ್ವೇಷದ ಸ್ಲೋಗನ್‌ಗಳಿಂದ ಮೆಚ್ಚುಗೆ ಪಡೆಯುವ ಕಾಯಿಲೆ ಶುರುವಾಗುತ್ತದೆ ಎಂಬ ಆತಂಕವಿದೆ. ಒಂದೆಡೆ ಮಸೀದಿ ಕೆಡವುವುದೇ ದೇಶಭಕ್ತಿ ಎಂಬ ನಾಟಕ ಮಾಡಿದ ಕರಾವಳಿಯ ಶಾಲಾ ಮಕ್ಕಳು ಮತ್ತು ಮತ್ತೊಂದೆಡೆ ಸರ್ಕಾರದ ಹೊಸ ಕಾಯಿದೆಯನ್ನು ಪ್ರಶ್ನಿಸಿದ ಉತ್ತರ ಕರ್ನಾಟಕದ ಶಾಲೆಯ ಮಕ್ಕಳು, ಇಬ್ಬರನ್ನೂ ಸರ್ಕಾರ ನಡೆಸಿಕೊಂಡ ಕ್ರಮ ಹಾಗೂ ಮಾಧ್ಯಮಗಳು ಈ ವಿವರಗಳನ್ನು ಬಿಚ್ಚಿಟ್ಟ ಕ್ರಮ ಎರಡೂ ಸಹ ಕಣ್ಣೆದುರಿಗಿವೆ. ಇಂತಹವುಗಳ ನಡುವೆ ಆಗುವ ಸಣ್ಣಪುಟ್ಟ ಒಳ್ಳೆಯ ಕೆಲಸಗಳು ಕಾಣಿಸದಂತೆ ನಾಪತ್ತೆ ಆಗುತ್ತಿವೆ. ಈ ಸಂದರ್ಭದಲ್ಲಿ ಈ ಸಮಾಜವು ಒಳಿತನ್ನು ಅದೆಷ್ಟೇ ಸಣ್ಣದಾಗಿದ್ದರೂ ಗುರುತಿಸಿ, ಬೆನ್ನು ತಟ್ಟಿ ಬೆಳೆಸುವ ಕೆಲಸ ಮಾಡಬೇಕಾಗಿದೆ.

ಲೇಖನದ ಆರಂಭದಲ್ಲೇ ಹೇಳಿದಂತೆ ಈ ಮಾಧ್ಯಮಗಳು ಇದೇ ಸಮಾಜದ ಶಿಶುಗಳು, ಸಮಾಜ ಎಷ್ಟು ವಿಘಟಿತವಾಗಿದೆಯೋ ಇವೂ ಅಷ್ಟೇ ವಿಘಟಿತವಾಗಿವೆ. ಇದನ್ನು ಸರಿಪಡಿಸಬೇಕಾದ್ದು ಸಹ ಸಮಾಜದ್ದೇ ಜವಾಬ್ದಾರಿ. ಸಮಾಜವು ಜವಾಬ್ದಾರಿಯಿಂದ ನಡೆಯುವುದನ್ನು ರೂಢಿಸಿಕೊಂಡಾಗ, ಒಡೆವ ಮನಸ್ಸುಗಳನ್ನು ಹತ್ತಿಕ್ಕುವ ಅಭ್ಯಾಸ ಮಾಡಿಕೊಂಡಾಗ ಉಳಿದ ಮಾಧ್ಯಮಗಳು ಸಹ ಜವಾಬ್ದಾರಿಯಿಂದ ಅರಿತು ಕೆಲಸ ಮಾಡುತ್ತವೆ. ಆ ಕಾಲ ಬೇಗ ಬರಲಿ ಎಂಬ ಕನಸು ನನ್ನದು.

ಕಡೆಯಲ್ಲಿ ಒಂದು ಮಾತು:

ಜವಾಬ್ ಸೂಚ್ಯತೇ ಹೀ ರಹನಾ...

ಜವಾಬ್ ಮಿಲನ ತಕ್ ನಹಿ ರುಕ್‌ನಾ...

ಎಂಬ ದಖ್ಖನಿ ಮಾತಿನೊಂದಿಗೆ ಮುಂದೆ ಪ್ರಶೋತ್ತರಕ್ಕೆ ಅವಕಾಶ ಇದ್ದರೆ ಸೈ. ಇಲ್ಲವಾದರೆ ತೊಂದರೆ ಇಲ್ಲ. ನಮ್ಮ ಸಂವಾದವನ್ನು ಹಾದಿಬದಿಯಲ್ಲಾದರೂ ಸರಿ ನಿರಂತರವಾಗಿ ಮುಂದುವರೆಸೋಣ ಎನ್ನುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ನನ್ನನ್ನು ಇಲ್ಲಿಗೆ ಕರೆಸಿದ, ನನ್ನ ಅಭಿಪ್ರಾಯ ಹಂಚಿಕೊಳ್ಳಲು ಅವಕಾಶ ಒದಗಿಸಿದ ಎಲ್ಲರಿಗೂ, ನನ್ನ ಮಾತಿಗೆ ತಾಳ್ಮೆಯಿಂದ ಕಿವಿಯನ್ನು ಒದಗಿಸಿದ ನಿಮಗೂ ನನ್ನ ವಿಶೇಷ ಧನ್ಯವಾದಗಳು.

# ಮಾಧ್ಯಮ : ಸವಾಲುಗಳು

# ಮಾಧ್ಯಮಗಳ ಸವಾಲುಗಳು

**- ರವೀಂದ್ರ ಭಟ್ಟ**

ಕನ್ನಡ ಸುದ್ದಿ ಮಾಧ್ಯಮಗಳ ಪ್ರಮುಖ ಸವಾಲುಗಳು ಎರಡು. ಒಂದು ಮಾರುಕಟ್ಟೆ ಸವಾಲಾದರೆ ಇನ್ನೊಂದು ಆಂತರಿಕ ಸವಾಲು, ಮಾರುಕಟ್ಟೆ ಸವಾಲಿನಲ್ಲಿ ಹಲವಾರು ಅಂಶಗಳಿವೆ. ಅದು ದರ ಸಮರವಾಗಿರಬಹುದು, ಜಾಹೀರಾತು ಕೊರತೆಯಾಗಿರಬಹುದು, ಹೊಸ ಹೊಸ ತಂತ್ರಜ್ಞಾನ ಆಗಿರಬಹುದು. ಅವುಗಳನ್ನು ಎದುರಿಸಲು ಬಹಳಷ್ಟು ಮಾರ್ಗಗಳಿವೆ. ಆದರೆ ಅದರಲ್ಲೇ ಇನ್ನೊಂದು ಸವಾಲು ಎಂದರೆ ಒಂದಕ್ಕೊಂದು ಪೂರಕವಾಗಿರಬೇಕಾದ ಮಾಧ್ಯಮಗಳು ಪರಸ್ಪರ ಆತಂಕಕಾರಿಯಾಗಿವೆ. ಪತ್ರಿಕಾ ಮಾಧ್ಯಮದ ಸವಾಲು ಒಂದು ರೀತಿಯದ್ದಾಗಿದ್ದರೆ ಎಲೆಕ್ಟ್ರಾನಿಕ್ಸ್ ಮಾಧ್ಯಮಗಳ ಸವಾಲುಗಳು ಇನ್ನೊಂದು ರೀತಿಯದ್ದು, ಸಾಮಾಜಿಕ ಮಾಧ್ಯಮಗಳ ಕತೆಯನ್ನು ಕೇಳುವುದೇ ಬೇಡ. ಪತ್ರಿಕಾ ಮಾಧ್ಯಮವೊಂದು ಈಗ ತನ್ನದೇ ಉತ್ಪನ್ನವಾಗಿರುವ ಆನ್‌ಲೈನ್ ಮಾಧ್ಯಮದಿಂದ ಸ್ಪರ್ಧೆಯನ್ನು ಎದುರಿಸುತ್ತಿರುತ್ತದೆ. ದುಶನ್ ನಮ್ಮ ಬಗಲಲ್ಲಿಯೇ ಇದ್ದಾನೆ. ವೆಬ್ ಎಡಿಷನ್ ಗೆ ಒತ್ತುಕೊಟ್ಟರೆ ಪತ್ರಿಕೆ ಬಡವಾಗುತ್ತದೆ. ಪತ್ರಿಕೆಗೆ ಒತ್ತು ಕೊಟ್ಟರೆ ಕಾಲಕ್ಕೆ ತಕ್ಕಂತೆ ನಡೆದುಕೊಂಡಂತೆ ಆಗುವುದಿಲ್ಲ. ಜೊತೆಗೆ ಬಳಲಿಕೆಯೂ ಕಾಡುತ್ತದೆ. ಇವೆಲ್ಲ ಆಂತರಿಕ ಸವಾಲುಗಳು. ಆದರೆ ಎಲ್ಲ ಮಾಧ್ಯಮಗಳ ಏಕೈಕ ಸವಾಲು ಎಂದರೆ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುವುದು.

ಎಲೆಕ್ಟ್ರಾನಿಕ್ ಮತ್ತು ಸಾಮಾಜಿಕ ಜಾಲತಾಣಗಳು ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿರುವುದರಿಂದಲೇ ಪತ್ರಿಕಾ ಮಾಧ್ಯಮಗಳು ಈಗಲೂ ಜೀವಂತವಾಗಿವೆ ಎನ್ನುವುದನ್ನು ಒಪ್ಪಬಹುದಾಗಿದ್ದರೂ ಹೊಸ ತಲೆಮಾರಿನ ಜನರಲ್ಲಿ ಸುದ್ದಿ ಕುತೂಹಲ ಕಡಿಮೆಯಾಗಿರುವುದು ಮುದ್ರಣ ಮಾಧ್ಯಮಗಳಿಗೆ ತಲೆ ಬಿಸಿಯಾಗಿದೆ. ಪತ್ರಿಕೆಗಳನ್ನು ಓದುವ ಹವ್ಯಾಸ ನಿಧಾನಕ್ಕೆ ಕಡಿಮೆಯಾಗುತ್ತಿದೆ ಅಥವಾ ಓದುವ ರೀತಿ ಬದಲಾಗಿದೆ. ಮೊದಲೆಲ್ಲಾ ಪತ್ರಿಕೆ ಕೈಯಲ್ಲಿ ಹಿಡಿದು ಓದುತ್ತಿದ್ದವರು ಈಗ ಕಂಪ್ಯೂಟರ್ ಅಥವಾ ಟ್ಯಾಬ್ ಗಳಲ್ಲಿ ಓದುತ್ತಿದ್ದಾರೆ. ಮೊಬೈಲ್‌ನಲ್ಲಿ ಪತ್ರಿಕೆ ಓದುವವರ ಸಂಖ್ಯೆ ಕೂಡ ಕಡಿಮೆ ಏನಲ್ಲ. ಈಗ ಸುದ್ದಿಗಾಗಿ ಸುದ್ದಿ ಪತ್ರಿಕೆಗಳನ್ನು ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಸುದ್ದಿ ಹಲವಾರು ಮೂಲಗಳಿಂದ ನಮ್ಮ ಮನದ ಬಾಗಿಲಿಗೆ ಬಂದು ಬೀಳುತ್ತಿದೆ. ಅದರಲ್ಲಿ ಸತ್ಯ ಮತ್ತು ಅಸತ್ಯವನ್ನು ಹುಡುಕುವುದು ಓದುಗರ ಹಣೆಬರಹ.

ತಂತ್ರಜ್ಞಾನ ಬೆಳೆದಿದೆ. ಸುದ್ದಿ ಬರೆಯಲು, ಕಳಿಸಲು, ಸುದ್ದಿ ಹೆಕ್ಕಲು ಈಗ ಸುಲಭ. ಆದರೆ ಎಂತಹ ಸುದ್ದಿಯನ್ನು ಕೊಡುತ್ತಿದ್ದೇವೆ ಎನ್ನುವುದನ್ನು ನೋಡಿದರೆ ನಿರಾಸೆ ಕಾಣುತ್ತಿದೆ. ತಂತ್ರಜ್ಞಾನದ ಆಸ್ಫೋಟದಲ್ಲಿ ವಿಶ್ವಾಸಾರ್ಹತೆ ಮರೆಯಾಗಿದೆ. ಸುದ್ದಿ ಮತ್ತು ಸುದ್ದಿಯಲ್ಲಿದ್ದು ಎನ್ನುವುದರ ನಡುವಿನ ಗೆರೆ ಮಾಸಿ ಹೋಗಿದೆ. ಈಗ ಎಲ್ಲವೂ ಸುದ್ದಿ ಎನ್ನುವಂತಾಗಿದೆ.

ಮೊದಲೆಲ್ಲಾ ಸಾಹಿತಿಗಳೇ ಪತ್ರಕರ್ತರೂ ಆಗಿರುತ್ತಿದ್ದರು. ಈಗ ಪತ್ರಕರ್ತರಿಗೆ ಸಾಹಿತ್ಯದ ಹಂಗೇಕೆ ಎಂದು ಕೇಳುವ ಮಟ್ಟಕ್ಕೆ ಬಂದು ನಿಂತಿದ್ದೇವೆ. ಮಾರುಕಟ್ಟೆ



ಸವಾಲುಗಳನ್ನು ತಂತ್ರಗಳಿಂದ ಗೆಲ್ಲಬಹುದು. ಆದರೆ ಆಂತರಿಕ ಸವಾಲುಗಳನ್ನು ಗೆಲ್ಲುವುದು ಅಷ್ಟು ಸುಲಭವಲ್ಲ. ಯಾಕೆಂದರೆ ಮಾಧ್ಯಮಗಳ ಆಂತರಿಕ ಸವಾಲುಗಳಲ್ಲಿ ಪ್ರಮುಖವಾಗಿದ್ದು ಭಾಷೆ, ನಾವು ಈಗ ನಮ್ಮ ಮಕ್ಕಳಿಗೆ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಂತದಲ್ಲಿ ಕನ್ನಡ ಭಾಷೆಯನ್ನು ಸರಿಯಾಗಿ ಕಲಿಸುವುದಿಲ್ಲ. ಭಾಷೆಯೇ ಬಾರದಿದ್ದರೆ ಅಭಿವ್ಯಕ್ತಿ ಹೇಗೆ ಸಾಧ್ಯ? ಈಗಿನ ನಮ್ಮ ಮಕ್ಕಳ ಭಾಷೆ ಹೈಬ್ರಿಡ್ ಭಾಷೆ, ಅವರಿಗೆ ಸರಿಯಾಗಿ ಕನ್ನಡವನ್ನೂ ಕಲಿಸಿಲ್ಲ. ಇಂಗ್ಲಿಷ್ ಅನ್ನೂ ಕಲಿಸಿಲ್ಲ. ಅದಕ್ಕಾಗಿಯೇ ಈಗ ನಮ್ಮ ಪತ್ರಕರ್ತರಿಗೆ ೫೦ ಕನ್ನಡ ಶಬ್ದಗಳು ಮಾತ್ರ ಗೊತ್ತು. ಅದನ್ನೇ ಅವರು ತಿರುಗಾಮುರುಗಾ ಬಳಸುತ್ತಾರೆ. ನೀವು ಸುದ್ದಿ ಚಾನೆಲ್‌ಗಳಲ್ಲಿ ಆ್ಯಂಕರ್‌ಗಳು ಮಾತನಾಡುವುದನ್ನು ಕೇಳಿದರೆ ನಿಮಗೆ ಕನ್ನಡ ಭಾಷೆ ಇಷ್ಟೊಂದು ಬಡವಾಗಿದೆಯಾ ಎನ್ನಿಸದೇ ಇರದು. ಈ ಸಮಸ್ಯೆಗೆ ಪರಿಹಾರವನ್ನು ಕೊಡುವವರು ಯಾರು?

ಪತ್ರಕರ್ತರಾಗಲು ಒಂದಿಷ್ಟು ಸಿದ್ಧತೆಗಳು ಬೇಕು. ಕನಿಷ್ಠ ನಮ್ಮ ರಾಜ್ಯದ ಭೌಗೋಳಿಕ ಜ್ಞಾನವಾದರೂ ಇರಬೇಕು. ಒಂದಿಷ್ಟು ರಾಜಕೀಯ, ಚಳವಳಿ, ಸಾಮಾಜಿಕ ಪರಿಸ್ಥಿತಿ ಗೊತ್ತಿರಬೇಕು. ಸಾಹಿತ್ಯ, ರಂಗಭೂಮಿ, ಸಾಂಸ್ಕೃತಿಕ ವಲಯದ ಪ್ರಾಥಮಿಕ ತಿಳಿವಳಿಕೆಯಾದರೂ ಇರಬೇಕು. ಆದರೆ ಈಗ ನಾವು ಪತ್ರಕರ್ತರಿಗೆ ಅದೆಲ್ಲಾ ಯಾಕೆಬೇಕು ಎಂದು ಕೇಳುತ್ತೇವೆ. ಇದನ್ನು ಬಹಳಷ್ಟು ಶಾಲಾ ಕಾಲೇಜುಗಳಲ್ಲಿ ಕಲಿಸುವುದೂ ಇಲ್ಲ. ನಮ್ಮ ಬಹುತೇಕ ವಿಶ್ವವಿದ್ಯಾಲಯಗಳ ಪತ್ರಿಕೋದ್ಯಮ ಪಠ್ಯದಲ್ಲಿ ಭಾಷೆ ಮತ್ತು ಸಾಂಸ್ಕೃತಿಕ ವಿಷಯಗಳು ಇಲ್ಲವೇ ಇಲ್ಲ. ಅದಕ್ಕಾಗಿಯೇ ಮಾಧ್ಯಮಗಳಿಗೆ ಬಡವರು, ನಿರ್ಗತಿಕರು, ದನಿ ಇಲ್ಲದವರ ಪರ ನಾವು ನಿಲ್ಲಬೇಕು ಎನ್ನುವುದು ಮರೆತು ಹೋಗಿದೆ. ಯಾವುದು ಸುದ್ದಿ ಯಾವುದು ಸುದ್ದಿಯಲ್ಲ ಎಂದು ತಿಳಿಯುವುದಕ್ಕೆ ಒಂದಿಷ್ಟು ವಿವೇಚನೆ ಬೇಕು. ಅಂತಹ ವಿವೇಚನೆ ಬರುವುದು ನಮ್ಮ ಓದು ಮತ್ತು ಅನುಭವಗಳಿಂದ. ಈಗ ಪತ್ರಕರ್ತರಿಗೆ ಓದು ಬೇಡ ಎನ್ನುವಂತಾಗಿದೆ. ತಂತ್ರಜ್ಞಾನದ ಕಾರಣದಿಂದ ಈಗ ನಾವು ಫೀಲ್ಡಿಗೆ ಹೋಗುವುದೂ ಬೇಕಾಗಿಲ್ಲ. ದೇಶ ತಿರುಗುವುದೂ ಇಲ್ಲ. ಕೋಶ ಓದುವುದೂ ಇಲ್ಲ. ಅದಕ್ಕೇ ರಾಜಕೀಯ ಸುದ್ದಿಗಳೇ ಮಿಂಚುತ್ತವೆ. ವೈಯಕ್ತಿಕ ವಿಷಯಗಳೂ ಟಿ ಆರ್ ಪಿ ಹೆಸರಿನಲ್ಲಿ ಸುದ್ದಿ ರೂಪದಲ್ಲಿ ದಾಂಗುಡಿ ಇಡುತ್ತವೆ.

ಮಾಧ್ಯಮಗಳು ಜನಪರವಾಗಿ ನಿಲ್ಲದಿದ್ದರೆ ಅವುಗಳ ಅವಸಾನಕ್ಕೆ ಬಹಳ ದಿನ ಬೇಕಾಗಿಲ್ಲ. ನಾವು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಮೇಲೆ ಒತ್ತಡ ಹೇರಿ ಮಾಧ್ಯಮಗಳೂ ಅಗತ್ಯ ಸೇವೆ ಎಂದು ಕಾನೂನು ಮಾಡಬಹುದು.

ಕಾನೂನು ಬಂದ ತಕ್ಷಣ ಜನರು ಅದನ್ನು ಅಗತ್ಯ ಸೇವೆ ಎಂದು ಪರಿಗಣಿಸಬೇಕು ಎಂದೇನೂ ಇಲ್ಲ. ಜನರು ಇದನ್ನು ಅಗತ್ಯ ಎಂದು ಪರಿಗಣಿಸುವಂತೆ ಮಾಡುವುದು ನಮ್ಮ ಕೈಯಲ್ಲಿಯೇ ಇದೆ ಮತ್ತು ಅದೇ ಈಗಿನ ಬಹುದೊಡ್ಡ ಸವಾಲು.

ಮಾಧ್ಯಮವನ್ನು ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಎಂದು ಕರೆಯುತ್ತೇವೆ. ಪ್ರಜಾಪ್ರಭುತ್ವದ ಕಾವಲು ನಾಯಿ ಎಂದೂ ಹೇಳುತ್ತೇವೆ. ಆದರೆ ನಾಯಿಗೆ ಒಂದು ಕೆಟ್ಟ ರೋಗವಿದೆ. ಅದು ಪರಿಚಿತರನ್ನು ಕಂಡರೆ ಕಚ್ಚುವುದೂ ಇಲ್ಲ, ಬೊಗಳುವುದೂ ಇಲ್ಲ. ಕಾವಲು ನಾಯಿಗೆ ಈಗ ನಾವು ಕಚ್ಚುವುದನ್ನು ಅಥವಾ ಕನಿಷ್ಠ ಬೊಗಳುವುದನ್ನಾದರೂ ಕಲಿಸಬೇಕಾಗಿದೆ. ಕಾರ್ಪೋರೇಟ್ ಸ್ವರೂಪ ಪಡೆದುಕೊಂಡಿರುವ ಮಾಧ್ಯಮಗಳು ಸಾಕು ನಾಯಿಗಳಾಗದೆ ಕಚ್ಚುವ ನಾಯಿಗಳಾಗಬೇಕು. ಇಲ್ಲವಾದರೆ ವಿಶ್ವಾಸಾರ್ಹತೆ ಎನ್ನುವುದು ಕನಸಿನ ಗಂಟಾಗುತ್ತದೆ. ವಿಶ್ವಾಸಾರ್ಹತೆ ಉಳಿಯದಿದ್ದರೆ ನಾವು ಎಲ್ಲವನ್ನೂ ಕಳೆದುಕೊಂಡಂತೆ.

## ದೃಶ್ಯ - ಶ್ರವ್ಯ ಮಾಧ್ಯಮ

**- ರಮಾಕಾಂತ ಎ.ಎಸ್.**

ದೃಶ್ಯ ಮಾಧ್ಯಮ ಅಥವ ಟಿವಿ ಮಾಧ್ಯಮದಲ್ಲಿ ಕಳೆದ ಒಂದೂವರೆ ದಶಕದ ಕಾಲ ಕೆಲಸ ಮಾಡಿದ ಅನುಭವವಿರುವ ನಾನು, ಈ ಮಾಧ್ಯಮದ ಹಲವು ಏಳು ಬೀಳುಗಳನ್ನು ಹತ್ತಿರದಿಂದ ಕಂಡಿದ್ದೇನೆ. ದೃಶ್ಯ ಮಾಧ್ಯಮವನ್ನು ೨೪/೭ ಸುದ್ದಿವಾಹಿನಿಗಳ ಪ್ರಾರಂಭದ ಕಾಲ ಮತ್ತು ಅದಕ್ಕೆ ಮುಂಚಿನ ಕಾಲವೆಂದು ವಿಂಗಡಿಸುವುದು ಸೂಕ್ತವಾಗಬಹುದು.

ದೇಶ ಮತ್ತು ರಾಜ್ಯದಲ್ಲಿ ೨೪/೭ ಸುದ್ದಿ ವಾಹಿನಿಗಳ ಪರ್ವ ಆರಂಭಕ್ಕೂ ಮುನ್ನ, ದೂರದರ್ಶನವೇ ಸುದ್ದಿಯ ಅತಿ ದೊಡ್ಡ ನಿಕ್ಷೇಪವಾಗಿತ್ತು. ಆದ್ರೆ, ಜಾಗತೀಕರಣದ ಅಲೆಯಲ್ಲಿ ೨೪/೭ ಸುದ್ದಿವಾಹಿನಿಗಳು ದೇಶದಲ್ಲಿ ದಾಂಗುಡಿ ಇಟ್ಟ ಕಾಲಘಟ್ಟ ಒಂದು ಹೊಸ ಸ್ಪರ್ಧಾತ್ಮಕ ಲೋಕವನ್ನೇ ತೆರೆದಿಟ್ಟಿತ್ತು. ಸುದ್ದಿ ಜಗತ್ತು ಏಕಸ್ವಾಮ್ಯ ಪರಿಸರದಿಂದ ಕ್ರಮೇಣವಾಗಿ ಹೊರಬಿತ್ತು.

ಕರ್ನಾಟಕದ ಮಟ್ಟಿಗೆ, ಮೊಟ್ಟ ಮೊದಲು ಉದಯ ನ್ಯೂಸ್ ೨೪/೭ ಕನ್ನಡ ಸುದ್ದಿ ವಾಹಿನಿಯಾಗಿ ಶುರುವಾಯ್ತು. ಆದರೆ, ಅದರಲ್ಲಿ ತಾಜಾ ಸುದ್ದಿ ಕಡಿಮೆ, ಪುನರಾವರ್ತಿತ ಸುದ್ದಿಗಳೇ ಹೆಚ್ಚು ಅನ್ನುವ ಹಾಗಿತ್ತು. ನಿಜಾರ್ಥದಲ್ಲಿ ಪೂರ್ಣ ಪ್ರಮಾಣದ ೨೪/೭ ಸುದ್ದಿವಾಹಿನಿ ಆಗಿ ಅಸ್ತಿತ್ವಕ್ಕೆ ಬಂದಿದ್ದೇ ಟಿವಿ ೯. ಆ ಕಾಲಕ್ಕೆ, ಹೊಸದು ಅನ್ನಿಸುವ ಹಲವು ವಿಭಿನ್ನ ಕಾರ್ಯಕ್ರಮಗಳನ್ನು ಪ್ರಸ್ತುತ ಪಡಿಸಿದ ಟಿವಿ ೯ ಕೆಲವೇ ದಿನಗಳಲ್ಲಿ ಜನಮನ ಗೆದ್ದಿತ್ತು. ಟಿವಿ ೯ಗೆ ಸಿಕ್ಕ ಯಶಸ್ಸು, ಕನ್ನಡದಲ್ಲಿ ಹಲವು ಸುದ್ದಿವಾಹಿನಿಗಳ ಹುಟ್ಟಿಗೆ ಕಾರಣವಾಗಿದ್ದು ಸುಳ್ಳಲ್ಲ.

ಆನಂತರದ ದಿನಗಳಲ್ಲಿ ಆರಂಭವಾದ ಅನೇಕ ಸುದ್ದಿವಾಹಿನಿಗಳು ಟಿವಿ೯ ದಾರಿಯಲ್ಲಿಯೇ ಸಾಗಿದವು. ಕೆಲವು ಚಾನಲ್‌ಗಳು ಯಶಸ್ಸು ಕಂಡವು, ಇನ್ನು ಕೆಲವು ಸ್ಪರ್ಧೆಯಲ್ಲಿ ಉಳಿಯಲಾಗದೆ ಅಳಿದು ಹೋದವು. ಅಳಿದು ಹೋಗಿದ್ದು ಯಾಕೆ ಎಂದು ಪ್ರಶ್ನೆ ಕೇಳುವುದೇ ಆದ್ರೆ ಸಮಕಾಲೀನ ದೃಶ್ಯ ಮಾಧ್ಯಮ ಎದುರಿಸಿದ ಮತ್ತು ಈಗಲೂ ಎದುರಿಸುತ್ತಿರುವ ಸವಾಲುಗಳನ್ನು ಪಟ್ಟಿ ಮಾಡುತ್ತಾ ಹೋಗಬಹುದು.

ಮೊದಲನೆಯದಾಗಿ

**೧. ಮಾಧ್ಯಮವನ್ನು ಉದ್ಯಮದಂತೆ ಕಂಡಿದ್ದು,**

ಒಂದು ವಾಹಿನಿಯ ಯಶಸ್ಸೆಂದರೆ ಬರೀ ಜನಪ್ರಿಯತೆ ಇರುವುದು ಮಾತ್ರವಲ್ಲ. ಅದರ ಜೊತೆಗೆ, ವ್ಯಾವಹಾರಿಕವಾಗಿ ಆ ಚಾನಲ್ ಗಳಿಸುವ ಆದಾಯವೂ



ಮುಖ್ಯವಾಗಿರುತ್ತದೆ . ಒಂದು ಚಾನಲ್ ಗಳಿಸುವ ಆದಾಯವನ್ನು ಜಾಹೀರಾತಿನಿಂದ ದೂರವಿಟ್ಟು ನೋಡಲಾಗದು ಹಾಗೂ ಜಾಹೀರಾತು ಪ್ರಕಟಣೆಗೆ ಟಿಆರ್ಪಿಯೇ ಮಾನದಂಡವೆಂಬುದನ್ನು ನಾವು ಮರೆಯಬಾರದು. ಒಂದು ವಾಹಿನಿಯ ಯಶಸ್ಸನ್ನು ಟಿಆರ್ಪಿಯಿಂದ ಅಳೆಯಲಾಗುತ್ತದೆ. ಮೊದಲಿಗೆ TAM ಸಂಸ್ಥೆ ಈ ಅಂಕಿ ಸಂಖ್ಯೆ ಒದಗಿಸುತ್ತಿತ್ತು. ಈಗ BARC ಸಂಸ್ಥೆ TRP ಅಂಕಿ ಅಂಶಗಳನ್ನು ಒದಗಿಸುತ್ತಿದೆ. ಹೆಚ್ಚಿನ TRP ಪಡೆದ ಸುದ್ದಿವಾಹಿನಿ ಮತ್ತು ಅದರ ಕಾರ್ಯಕ್ರಮಗಳು ಹೆಚ್ಚು ಜನರನ್ನು ತಲುಪಿವೆ ಮತ್ತು ಹೆಚ್ಚು ಜನ ನೋಡಿದ್ದಾರೆಂಬುದು ಇದರ ಅರ್ಥ. ಆದರೆ, ನೆನಪಿರಲಿ ಎಲ್ಲರೂ ಇಷ್ಟ ಪಟ್ಟು ಆ ಟಿವಿ ಚಾನಲ್ ಅನ್ನು ನೋಡಿದ್ದಾರೆಂದು ಅರ್ಥೈಸಬೇಕಿಲ್ಲ.

ಈ ರೀತಿ, ಒಂದು ಸುದ್ದಿ ವಾಹಿನಿ ಯಶಸ್ಸಿನ ಹಾದಿಯಲ್ಲಿ ಸಾಗುತ್ತಿರುವಾಗ, ಹಲವು ಮಂದಿ ಬಂಡವಾಳದಾರರಿಗೆ ನ್ಯೂಸ್ ಚಾನಲ್‌ಗಳು ಆಕರ್ಷಕವಾಗಿ ಕಂಡಿದ್ದು ಸೋಜಿಗವೇನಲ್ಲ. ಆ ಬಳಿಕ ಶುರುವಾಗಿದ್ದೇ ಸಾಲು ಸಾಲು ಸುದ್ದಿ ವಾಹಿನಿಗಳು, ನಿಜವಾದ ಪೈಪೋಟಿ ಆರಂಭವಾಗಿದ್ದೇ ಆಗ, ಅದು ಆರೋಗ್ಯಕರವೋ ಅನಾರೋಗ್ಯ ಕರವೋ ಎಂಬುದು ಅರ್ಥವಾಗಲಿಕ್ಕೆ ಕೆಲವು ವರ್ಷಗಳೇ ಬೇಕಾದವು.

ಮೊದಲಿಗೆ ಬಂಡವಾಳಶಾಹಿಗಳು, ರಾಜಕಾರಣಿಗಳು ಸುದ್ದಿವಾಹಿನಿಗಳನ್ನು ಆರಂಭಿಸಿದ್ರು. ಕೆಲವರಿಗೆ ಸ್ವಕಾರ್ಯ, ಸ್ವಾಮಿ ಕಾರ್ಯ ಎರಡೂ ಆಯಿತು. ಬಂಡವಾಳಶಾಹಿಗಳು ಹೂಡಿಕೆ ಮತ್ತು ಅದಕ್ಕೆ ತಕ್ಕ ಲಾಭವನ್ನಷ್ಟೇ ನಿರೀಕ್ಷಿಸಿದ್ರು, ಸುದ್ದಿ ವಾಹಿನಿ ಅಥವ ದೃಶ್ಯಮಾಧ್ಯಮ ಪ್ರವರ್ಧಮಾನಕ್ಕೆ ಬರಲು, ಜನಮಾನಸದಲ್ಲಿ ಗಟ್ಟಿಯಾಗಿ ನೆಲೆಯೂರಲು ಸಾಕಷ್ಟು ಸಮಯ ಹಿಡಿಯುತ್ತದೆ. ದೃಶ್ಯ ಮಾಧ್ಯಮವೆಂದರೆ ಹೋಟೆಲ್ ವಹಿವಾಟು ಅಥವ ಸೀರೆ

ಅಂಗಡಿಯ ವ್ಯಾಪಾರದಂತಲ್ಲ. ಬೆಳಗ್ಗೆ ಬಂಡವಾಳ ಹಾಕಿ, ಸಂಜೆಗೆ ಲಾಭ ನಿರೀಕ್ಷಿಸುವುದು ತಪ್ಪು. ಆದರೆ, ಅಷ್ಟು ಹೊತ್ತಿಗಾಗಲೇ ಮಾಧ್ಯಮ ಅನ್ನುವುದನ್ನು, ಕೇವಲ ಲಾಭದ ಉದ್ದೇಶದಿಂದ ಮಾತ್ರ ಮಾಡಬಾರದು ಎಂಬ ದೃಷ್ಟಿಕೋನವೇ ಮಸುಕು ಮಸುಕಾಗಿ ಹೋಗಿತ್ತು.

ಜಿದ್ದಿಗೆ ಬಿದ್ದಂತೆ ಹುಟ್ಟಿಕೊಂಡ ಕನ್ನಡದ ಸುದ್ದಿ ವಾಹಿನಿಗಳು, ನಿರೀಕ್ಷಿತ ಆದಾಯ ಕಾಣದೆ ನಷ್ಟಕ್ಕೆ ಮುಖಮಾಡಿ ನಿಂತವು, ಲಾಭ ಕಾಣುವ ಮನಸ್ಥಿತಿಯಲ್ಲಿದ್ದ ಹೂಡಿಕೆದಾರರಿಗೆ, ಇದು ನಷ್ಟದ ಬಾಬು ಎಂದು ಅರಿಯಲು ತುಂಬ ಸಮಯ ಹಿಡಿಯಲಿಲ್ಲ. ಅಷ್ಟರೊಳಗೇ ಕೆಲವು ವಾಹಿನಿಗಳು ಬಾಗಿಲು ಜಡಿದವು.

ಅಲ್ಲಿ ಕೆಲಸ ಮಾಡುತ್ತಿದ್ದ ಪತ್ರಕರ್ತರು ಬೀದಿಗೆ ಬಿದ್ದರು. ಇಂದಿಗೂ ಪ್ರತಿ ಎರಡು ವರ್ಷಗಳಿಗೊಮ್ಮೆ ಒಂದು ಅಥವಾ ಎರಡು ಸುದ್ದಿ ವಾಹಿನಿಗಳು ಬಾಗಿಲು ಮುಚ್ಚುತ್ತಿವೆ, ಇಲ್ಲವೆ ರೋಗಿಷ್ಟ ಸ್ಥಿತಿ ತಲುಪುತ್ತಿವೆ. ಇದೆಲ್ಲಕ್ಕೂ ಕಾರಣವಾಗಿದ್ದು ಲಾಭಕೋರ ಮನಸ್ಥಿತಿ. ಹಣ ಗಳಿಕೆಯ ಉದ್ದೇಶದಿಂದ ಸುದ್ದಿವಾಹಿನಿಗಳನ್ನು ಪ್ರಾರಂಭಮಾಡಿದ್ದೇ ದೃಶ್ಯ ಮಾಧ್ಯಮದ ಅತಿ ದೊಡ್ಡ ಸವಾಲು. ಲಾಭ ಇಂದಲ್ಲಾ ನಾಳೆ ಬರುವುದು ನಿಜವಾದ್ರೂ ಮಾಧ್ಯಮದ ಬದ್ಧತೆ ಎತ್ತಿ ಹಿಡಿಯದೇ ಇದ್ದರೆ, ಸಂಸ್ಥೆ ಹಳ್ಳ ಹಿಡಿದು ಹೋಗುತ್ತದೆ.



## ೨. ಮುಕ್ತ ಪತ್ರಿಕೋದ್ಯಮ

ಪತ್ರಿಕೋದ್ಯಮ ಅನ್ನುವುದು ಮುಕ್ತ ಸನ್ನಿವೇಶದಲ್ಲಿ ನಡೆಯುವ ಒಂದು ಪ್ರಕ್ರಿಯೆ. ಅದನ್ನು ಮುಕ್ತ ಪತ್ರಿಕೋದ್ಯಮವೆಂದು ಕರೆಯಬೇಕಿರುವ ಪರಿಸ್ಥಿತಿಯೇ ಶೋಚನೀಯ, ಹೌದು, ಮುಕ್ತ ಪತ್ರಿಕೋದ್ಯಮ ಇಂದಿಗೆ ಅತಿ ದೊಡ್ಡ ಸವಾಲು. ಕೆಲಸ ಕೊಟ್ಟಿರುವವನ ಮುಲಾಜಿಗೆ ಬಿದ್ದು, ರಾಜಕಾರಣಿಯಾಗಿರುವ ಮಾಲೀಕನ ಹಿತಾಸಕ್ತಿ ಕಾಯುವುದು ನಮ್ಮ ಕರ್ತವ್ಯ ಎಂಬಂತೆ ಕೆಲವು ವಾಹಿನಿಗಳು ವರ್ತಿಸಿದ್ದು ಮತ್ತು ವರ್ತಿಸುತ್ತಿರುವುದು ಸುಳ್ಳಲ್ಲ. ಇಲ್ಲಿ ಪತ್ರಕರ್ತನಾದವನಿಗೆ ಮುಕ್ತ ಸನ್ನಿವೇಶ ನಿರ್ಮಾಣವಾಗುವುದಿಲ್ಲ, ಹೀಗಾಗಿ ಪತ್ರಿಕೋದ್ಯಮ ತನ್ನ ಮೂಲ ಆಶಯಗಳಿಂದ ಕ್ರಮೇಣ ದೂರ ಸರಿಯುತ್ತಿರುತ್ತದೆ.

ದೃಶ್ಯ ಮಾಧ್ಯಮ ತನ್ನ ಇನ್ನೊಂದು ಬದಿಯಲ್ಲಿ ಎದುರಿಸುತ್ತಿರುವ ಸವಾಲುಗಳು, ಅದರ ಅಳಿವು ಉಳಿವನ್ನು ಅಳೆಯುವ ಅಳತೆಗೋಲಾಗಿವೆ. ಅವನ್ನು ಪಟ್ಟಿ ಮಾಡುವುದಾದ್ರೆ

**೩. ಮಾಹಿತಿ ಪ್ರವಾಹ**

ಸುದ್ದಿ ಮೂಲಗಳು ಹೆಚ್ಚಾದಷ್ಟು, ತಂತ್ರಜ್ಞಾನದ ಲಭ್ಯತೆ ಹೆಚ್ಚಾದಷ್ಟೂ ಜಗತ್ತು ಕಿರಿದಾಗಿ ಮಾಹಿತಿ ಪ್ರವಾಹ ಹೆಚ್ಚುತ್ತಾ ಹೋಗುತ್ತದೆ. ಲಭ್ಯವಾದ ಮಾಹಿತಿಯಲ್ಲಿ ಯಾವುದು ಸುದ್ದಿ, ಯಾವುದು ಸುದ್ದಿ ಅಲ್ಲ ಎಂಬುದನ್ನು ವರ್ಗೀಕರಣ ಮಾಡುವುದೇ ದೊಡ್ಡ ಸವಾಲಾಗುತ್ತದೆ. ದೃಶ್ಯ ಮಾಧ್ಯಮದಲ್ಲಿ ಕ್ಷಣ ಕ್ಷಣದ ಪೈಪೋಟಿ ಹೆಚ್ಚಿರುವ ಕಾರಣ, ಮಾಹಿತಿ ರಾಶಿಯಲ್ಲಿ ಸುದ್ದಿಯನ್ನು ಹೆಕ್ಕುವುದಕ್ಕೆ ಸೂಕ್ಷ್ಮತೆ, ನೈಪುಣ್ಯ ಮತ್ತು ಜಾಣ್ಮ ಬೇಕಾಗಿದೆ. ಇಲ್ಲಿ, ಯಾವ ಸುದ್ದಿ ಜನರನ್ನು ನೋಡಿಸಿಕೊಂಡು ಹೋಗುತ್ತದೆ ಎಂಬುದು ಮುಖ್ಯವಾಗುತ್ತದೆ.

**೪. ತಪ್ಪು ಮಾಹಿತಿ**

ಬಂದ ಮಾಹಿತಿಯ ಕಣಜದಲ್ಲಿ ರಾಗಿ ಮತ್ತು ಸಾಸಿವೆಯನ್ನು ಬೇರ್ಪಡಿಸುವ ಸವಾಲು ಮತ್ತೊಂದಿದೆ. ನಿಜವಾದ ಮಾಹಿತಿ ಯಾವುದು, ತಪ್ಪು ಯಾವುದು ಅನ್ನುವುದನ್ನು ಗುರುತಿಸುವುದು ದೊಡ್ಡ ಸವಾಲಾಗುತ್ತದೆ. ಇದನ್ನು ಮಾಡಲು ತುಂಬಾ ಸಮಯವಿರುವುದಿಲ್ಲ. ದೃಶ್ಯ ಮಾಧ್ಯಮದ ಸ್ಪರ್ಧಾತ್ಮಕ ಓಟದಲ್ಲಿ, ಸುಳ್ಳು ಮಾಹಿತಿಯನ್ನು ಅತಿ ರಂಜಿತವಾಗಿ ಅದಾಗಲೇ ಬೇರೆ ವಾಹಿನಿಗಳು ಪ್ರಸಾರ ಮಾಡಲು ಶುರು ಮಾಡಿದ್ದರೆ, ಸುದ್ದಿ ಮನೆಯಲ್ಲಿ ತಪ್ಪು-ಒಪ್ಪುಗಳ ನಿಷ್ಕರ್ಷೆಗೆ ಒಳಪಡಿಸುವುದಕ್ಕಿಂತ, ವೇಗ ಮುಖ್ಯವಾಗುತ್ತದೆ. ಹಾಗಾಗಿ ತಪ್ಪು ಮಾಹಿತಿಯನ್ನು ಎಲ್ಲರಿಗಿಂತ ಬೇಗ, ಆಚೆ ಇರಿಸ ಬೇಕಾಗಿರುವುದು ನಿಜ ಸವಾಲು.

ಟಿವಿ ಮಾಧ್ಯಮದ ಮುಂದಿರುವ ಮತ್ತಷ್ಟು ಸವಾಲುಗಳನ್ನು ನೋಡುವುದಾದ್ರೆ

**೫. ಒಂದೇ ಬಗೆಯ ಸುದ್ದಿ**

ಇದು ದೃಶ್ಯ ಮಾಧ್ಯಮದಲ್ಲಿ ಒಂದು ಸವಾಲೇ ಸರಿ. ಎಲ್ಲರಿಗೂ ಏಕಕಾಲಕ್ಕೆ ಅಥವಾ

ಕೆಲವೇ ಸೆಕೆಂಡುಗಳ ಅಂತರದಲ್ಲಿ ಕೆಲವು ಮಾಹಿತಿ ಅಥವ ಸುದ್ದಿ ಲಭ್ಯವಾಗುತ್ತದೆ. ಆ ಸಂದರ್ಭದಲ್ಲಿ ಬೇರೆ ವಾಹಿನಿ ನೋಡುತ್ತಿರುವ ವೀಕ್ಷಕರನ್ನು, ನಮ್ಮ ವಾಹಿನಿಗೆ ಎಳೆದು ತಂದು ಕೂರಿಸುವುದು ದೊಡ್ಡ ಸವಾಲಾಗಿದೆ. ನಿರೂಪಕರ ಸಾಮರ್ಥ್ಯದ ಪರೀಕ್ಷೆ ಒಂದು ಕಡೆಯಾದರೆ, ಅವರ ಅನುಭವ, ಜ್ಞಾನ, ಭಾಷೆ, ಧ್ವನಿ, ನಿರೂಪಣೆಯಲ್ಲಿನ ನಾವೀನ್ಯತೆ ಜೊತೆಗೆ ವರದಿಗಾರರ ವರದಿಗಾರಿಕೆ ಆಯಾಮಗಳು, ಎಷ್ಟು ವ್ಯಕ್ತಿಗಳನ್ನು ವಿಷಯ ಸಂಬಂಧಿತವಾಗಿ ಮಾತನಾಡಿಸುತ್ತೇವೆ. ಇನ್ಪುಟ್-ಔಟ್ಪುಟ್ ವಿಭಾಗಗಳ ನಡುವಿನ ತಾಳ ಮೇಳ ಇವೆಲ್ಲವೂ ಸವಾಲುಗಳೇ ಆಗಿವೆ.

**೬. ಸುದ್ದಿಗೆ ರೋಚಕತೆಯ ಸ್ಪರ್ಶ**

ಇತ್ತೀಚಿನ ದಿನಗಳಲ್ಲಿ ಅತಿ ದೊಡ್ಡ ಸವಾಲಿದು. ಸುದ್ದಿ ಎಲ್ಲರಿಗೂ ಒಂದೇ, ಆದ್ರೆ ಆ ಸುದ್ದಿಗೆ ಮಾಂತ್ರಿಕ ಸ್ಪರ್ಶ ಕೊಟ್ಟು, ರೋಚಕವಾಗಿಸಿದರಷ್ಟೇ ಅದು ಜನರಿಗೆ ತಲುಪುವುದು, ಇದು ಅಲಿಖಿತ ನಿಯಮ. ಸುದ್ದಿಯನ್ನು ಸುದ್ದಿಯಾಗಿ ಕೊಟ್ಟರಷ್ಟೇ ಸಾಕು ಎಂದು ಬಯಸುವ ವರ್ಗವಿದ್ದರೂ, ಅವರ ಸಂಖ್ಯೆ ಅತ್ಯಲ್ಪ. ಸುದ್ದಿ ರೋಚಕತೆಯಿಂದ ಕೂಡಿರದಿದ್ದರೆ, ಅದು ಜನರನ್ನು ತಲುಪುವಲ್ಲಿ ಸೋತಿರುತ್ತದೆ ಎಂಬುದು, ವಾರಕ್ಕೊಮ್ಮೆ ಸಿಗುವ ಟಿಆರ್ಪಿ ಮಾರ್ಕ್ಸ್‌ಕಾರ್ಡ್‌ನಲ್ಲಿ ಬಟಾಬಯಲಾಗುತ್ತದೆ. ದೃಶ್ಯ ಮಾಧ್ಯಮವೇ ಪೈಪೋಟಿಗೆ ಬಿದ್ದಿರುವ ಕಾಲದಲ್ಲಿ, ರೋಚಕತೆಯ ಸ್ಪರ್ಶ ಅನಿವಾರ್ಯ.

**೭. ಜನ ಬಯಸಿದ್ದನ್ನು ಕೊಡುವುದು**

ಇದು, ಇತ್ತೀಚಿನ ದಿನಗಳಲ್ಲಿ ಅನಿವಾರ್ಯತೆಯೆಂಬಂತೆ ಕಂಡುಬರುತ್ತಿರುವ ವಿಚಾರ. ಎಲ್ಲರಿಗೂ ಸಿಗುವ ಸುದ್ದಿ ಒಂದೇ. ಆದರೆ ಅದರಲ್ಲಿ ಜನ ಬಯಸುವುದು ಯಾವುದು? ಬರಿಯ ಮಾಹಿತಿಯೇ ಆದರೆ, ಅದರ ವೀಕ್ಷಣೆ ಮಟ್ಟ ಕಡಿಮೆ. ಜ್ಞಾನಾರ್ಜನೆ, ಶಿಕ್ಷಣ ಎಂದೆಲ್ಲ ಹೇಳಿದರೂ ಕೂಡ, ದೊಡ್ಡ ವರ್ಗ ಅದರ ವೀಕ್ಷಣೆಗೆ ಇಲ್ಲ. ಜನ ಸುದ್ದಿಯಲ್ಲಿ ಏನು ಬಯಸುತ್ತಾರೆ? ಸುದ್ದಿಯೊಂದಿಗೆ ಅವರಿಗೆ ಬೇಕಿರುವುದು ಏನು? ಅಂದರೆ, Infotainment. ಮಾಹಿತಿಯೊಂದಿಗೆ ಮನರಂಜನೆ ಬಯಸುವ ದೊಡ್ಡ ವರ್ಗವೇ ಇಲ್ಲಿದೆ. ಆದ ಕಾರಣ, ಮಾಹಿತಿ ಮತ್ತು ಮನರಂಜನೆಯ ಮಿಶ್ರಣವನ್ನು ಉಣಬಡಿಸುವುದು ಸಮಕಾಲೀನ ದರ್ದು. ಜನ ಬಯಸಿದ್ದನ್ನು ಕೊಡುವುದು ಅನಿವಾರ್ಯವೆನ್ನುವ ಸ್ಥಿತಿ ನಿರ್ಮಾಣವಾಗಿದೆ. ಬಯಸಿದ್ದನ್ನ ಕೊಡದ ಸಂಸ್ಥೆಗೆ ಸೋಲು ಕಟ್ಟಿಟ್ಟ ಬುತ್ತಿ ಎಂಬುದು ಸಾಬೀತಾಗಿದೆ. ಮಾರುಕಟ್ಟೆಯ ರೀತಿಯಲ್ಲೇ, ಬೇಡಿಕೆ-ಪೂರೈಕೆ ವ್ಯವಸ್ಥೆ ದೃಶ್ಯ ಮಾಧ್ಯಮವನ್ನೂ ಹೊಕ್ಕಿದ್ದು ದುರಂತ.

**೮. ಸಪ್ಷನ್ ಅಥವ ಚಂದಾದಾರಿಕೆ:**

ಇದು ನೋಡುಗನ ಕೈಯಲ್ಲಿ ಕಾಣಿಸಿಕೊಳ್ಳುತ್ತಿರುವ ಅತಿ ದೊಡ್ಡ ಅಸ್ತ್ರ. ಈ ಮೊದಲು, ಬೇಕೋ ಬೇಡವೋ ಟಿವಿಯಲ್ಲಿ ಬಂದಷ್ಟು ಚಾನಲ್‌ಗಳನ್ನು ನೋಡುವ ಕಾಲವಿತ್ತು. ಆದರೆ, ಈಗ ತನಗೆ ಇಷ್ಟವಿಲ್ಲದ ಚಾನೆಲ್ ಅನ್ನು, ನೋಡುಗ ತನ್ನ ಮನೆಯ



ಸೆಟ್ ಟಾಪ್ ಬಾಕ್ಸಿನಿಂದ ತೆಗೆದು ಹಾಕಬಹುದು. ಆಯ್ಕೆಯ ಗುಚ್ಛದಿಂದ ಒಂದು ಚಾನಲ್ ಹೊರಬೀಳಲು ಶುರುವಾದರೆ ಅದು ಅವಸಾನಕ್ಕೆ ಸಮ. ಸಪ್ಪನ್ ಯಾವ ಮಟ್ಟಿಗಿದೆ, ಯಾವ ಪ್ರದೇಶದಲ್ಲಿ ವಾಹಿನಿ ಬರುತ್ತಿದೆ, ಎಲ್ಲಿ ಬರುತ್ತಿಲ್ಲ, ಎಲ್ಲಿ ನೋಡುಗರು ಚಾನಲ್ ತೆಗೆಸುತ್ತಿದ್ದಾರೆ ಎಂಬುದರ ಮೇಲೆ ಒಂದು ವ್ಯಾವಹಾರಿಕ ಕಣ್ಣಿರಬೇಕು. ಆಗಾಗ ಒಂದು ಸರ್ವೆ ಮಾಡುವುದು ಅಗತ್ಯ. ಇದೂ ಕೂಡ ದೃಶ್ಯ ಮಾಧ್ಯಮ ಮುಂದಿರುವ ಒಂದು ಸವಾಲು

**೯. ಜಾಹೀರಾತು**

ಜಾಹೀರಾತು ಸವಾಲು ಹೌದು, ಸಂಪಾದನೆಯೂ ಹೌದು. ಒಂದು ಸುದ್ದಿ ವಾಹಿನಿಯ ಪ್ರಮುಖ ಆದಾಯದ ಮೂಲವೇ ಜಾಹೀರಾತು. ಆದಾಯ ಯಾರಿಗೆ ಬೇಡ ಹೇಳಿ! ಹಾಗಂತ ಜಾಹೀರಾತುಗಳ ನಡುವೆ ಸುದ್ದಿ ಪ್ರಸಾರವಾಗುವಂತಾಗಬಾರದು, ಸುದ್ದಿಗಳ ಮಧ್ಯೆ ಜಾಹೀರಾತು ಇದ್ದರಷ್ಟೇ ಚೆನ್ನ, ಚಾನಲ್‌ನ ಮಾರುಕಟ್ಟೆ ವಿಭಾಗದಿಂದ ಅನೇಕ ಬಾರಿ ಹೆಚ್ಚಿನ ಜಾಹೀರಾತುಗಳ ಪ್ರಸಾರಕ್ಕೆ ಒತ್ತಡವಿದ್ದರೂ, ಸಂಪಾದಕೀಯ ವಿಭಾಗದವರು ಅದನ್ನು ಬದಿಗೆ ಸರಿಸಬೇಕಿರುವುದು ಒಂದು ದೊಡ್ಡ ಸವಾಲು.

ಸುದ್ದಿ, ಸುದ್ದಿಯ ಮೌಲ್ಯ, ಪ್ರಸಾರದ ಅವಧಿ, ಅದರ ಆಳ ಎಲ್ಲವುಗಳ ಮೇಲೆ ಮಾರುಕಟ್ಟೆ ವಿಭಾಗದ ಪ್ರಭಾವ ಅಥವ ಒತ್ತಡ ಕಡಿಮೆ ಮಾಡಬೇಕಿರುವುದು ಕಷ್ಟದ ಕೆಲಸ. ಜಾಹೀರಾತು ಮತ್ತು ಸುದ್ದಿಯ ನಡುವೆ ಸರಿಯಾದ ಅನುಪಾತ ಕಾಪಾಡಿಕೊಳ್ಳುವುದೇ ಇಲ್ಲಿ ನಿರ್ಣಾಯಕ .

**೧೦. Artificial Intelligenceಅಥವ ಕೃತಕ ಬುದ್ಧಿಮತ್ತೆ**

ಇದು ಈಗಾಗಲೇ ಎಲ್ಲ ವಲಯವನ್ನೂ ಆವರಿಸಿರುವಂತೆಯೇ ದೃಶ್ಯ ಮಾಧ್ಯಮ ಜಗತ್ತಿಗೂ ಹೆಜ್ಜೆ ಇಟ್ಟಿದೆ. ಚೀನಾ ಮುಂತಾದ ದೇಶಗಳಲ್ಲಿ ಈಗಾಗಲೇ ರೋಬೊ ಆಂಕರ್‌ಗಳು ಬಂದಿದ್ದಾರೆ. ರೋಬೊ ತಲೆಯೊಳಗೆ ಸುದ್ದಿ ತುಂಬಿಸಿದರಾಯ್ತು, ಅದೇ ಹೇಳಿ ಮುಗಿಸುತ್ತದೆ. ರೋಬೊ ಯಾವುದೇ ಸಂಬಳ, ಬೋನಸ್ ಕೇಳುವುದಿಲ್ಲ, ಅನಾರೋಗ್ಯವೆಂದು ರಜೆಯನ್ನೂ ಕೇಳುವುದಿಲ್ಲ, ಮೇಕಪ್ ಮಾಡಬೇಕಾದ ಅಗತ್ಯವೂ ಇಲ್ಲ. ರೋಬೊ ಸುಂದರಿಗೆ ಎಂದೂ ವಯಸ್ಸೇ ಆಗುವುದಿಲ್ಲ. ಒಂದುಕಡೆ, ಇದು ಅನೇಕ ವಾರ್ತಾವಾಚಕರ ಕೆಲಸಕ್ಕೆ ಕುತ್ತು ತಂದರೂ,

ರೋಬೋಗಳು ಜನರೊಂದಿಗೆ ಸಂಪರ್ಕ ಬೆಸೆಯಬಲ್ಲ ಕೊಂಡಿಯಾಗಲು ಸಾಧ್ಯವೇ ಅನ್ನುವುದೂ ಒಂದು ಸವಾಲು, ಸುದ್ದಿ ವಾಚಕರು ಅಥವ ಚರ್ಚೆ ನಡೆಸಿಕೊಡುವ ನಿರೂಪಕರ ಭಾವನೆಗಳು, ವೀಕ್ಷಕರೊಂದಿಗೆ ಒಂದು ಭಾವನಾತ್ಮಕ ಸಂಬಂಧ ಏರ್ಪಡುವಂತೆ ಮಾಡುತ್ತವೆ. ರೋಬೋಗಳಿಗೂ ಇದು ಸಾಧ್ಯವೇ? ಖರ್ಚು ಕಡಿಮೆ ಮಾಡುವ ಧಾವಂತದಲ್ಲಿ, ದೃಶ್ಯ ಮಾಧ್ಯಮ ತನ್ನ ವೀಕ್ಷಕರೊಂದಿಗಿನ ಸಂಬಂಧ ಕಡಿದುಕೊಳ್ಳಬಲ್ಲದೇ? ಎಂಬುದೂ ಒಂದು ಪ್ರಶ್ನೆ ?

**೧೧. ಅಭಿಪ್ರಾಯ ರೂಪಿಸುವ ಸಮೂಹಗಳು :**

ಸಮಕಾಲೀನ ದೃಶ್ಯ ಮಾಧ್ಯಮ ಎದುರಿಸುತ್ತಿರುವ ಮತ್ತೊಂದು ಸವಾಲು ಎಡ-ಬಲ



ಉಳಿಸಿಕೊಳ್ಳುವುದೇ ಒಂದು ಸವಾಲಾಗಿ ಪರಿಣಮಿಸಿದೆ. ಇಂಥ ಸನ್ನಿವೇಶದಲ್ಲಿ ರೇಡಿಯೊ ಅಥವ ಶ್ರವ್ಯ ಮಾಧ್ಯಮ ತನ್ನನ್ನು ತಾನು Reinvent ಮಾಡಿಕೊಳ್ಳಬೇಕಾದ ಅಥವ ಹೊಚ್ಚ ಹೊಸದರಂತೆ, ವಿಶಿಷ್ಟವೆಂಬಂತೆ ಕಾಣುವಂತೆ ಮಾರ್ಪಾಟು ಮಾಡಿಕೊಳ್ಳಬೇಕಾದ ಸವಾಲನ್ನು ಎದುರಿಸುತ್ತಿದೆ.

ಶ್ರವ್ಯ ಮಾಧ್ಯಮ, ದೃಶ್ಯ ಮಾಧ್ಯಮಕ್ಕಿಂತಲೂ ಹೆಚ್ಚಿಗೆ ಆಪ್ತವಾಗುವ ಮಾಧ್ಯಮ. ಟಿವಿ ಮಾಧ್ಯಮಕ್ಕಿಂತಲೂ ಶ್ರವ್ಯ ಮಾಧ್ಯಮದಲ್ಲಿ ನಿರೂಪಕನ ಪ್ರಾಮುಖ್ಯತೆ ಹೆಚ್ಚು. ಟಿವಿಯಲ್ಲಿ ಮಾತಿಗಿಂತ ದೃಶ್ಯಗಳಿಗೆ ಪ್ರಾಮುಖ್ಯತೆ ಹೆಚ್ಚಾಗಿದ್ದರೆ, ರೇಡಿಯೋದಲ್ಲಿ ನಿರೂಪಕ ಏನು ಹೇಳುತ್ತಾನೆ, ಹೇಗೆ ಹೇಳುತ್ತಾನೆ ಅನ್ನುವುದೇ ಹೆಚ್ಚು ಮುಖ್ಯವಾಗುತ್ತದೆ. ಹೀಗಾಗಿ, ರೇಡಿಯೊ ನಿರೂಪಕ ಅಥವ ರೇಡಿಯೊ ಜಾಕಿಗೆ ಭಾಷೆಯ ಮೇಲೆ ಹೆಚ್ಚಿನ ಹಿಡಿತವಿರಬೇಕಾಗುತ್ತದೆ. ಶಿಷ್ಟ ಭಾಷೆಯ ಜೊತೆಗೆ ಆಡುಭಾಷೆಯನ್ನೂ ಸಮರ್ಥವಾಗಿ ಬಳಸಿಕೊಳ್ಳಬೇಕಾದ ಸವಾಲು ಇಲ್ಲಿದೆ.

ಕನ್ನಡ ನಾಡು ಮತ್ತು ನುಡಿಯ ಬಗ್ಗೆ ಹೆಚ್ಚು ಜಾಗೃತಿ ಮತ್ತು ಪ್ರೀತಿ ವ್ಯಕ್ತವಾಗುತ್ತಿರುವ ಇವತ್ತಿನ ಹೊಸ ಸನ್ನಿವೇಶದಲ್ಲಿ, ಸಹೃದಯರು ಮತ್ತೆ ರೇಡಿಯೊ ಕಡೆಗೆ ಕಿವಿ ಮಾಡುವ ಸಾಧ್ಯತೆಗಳು ಹೆಚ್ಚಿವೆ. ಹಳೆಯದೆಲ್ಲವೂ ಹೊಸ ರೂಪದಲ್ಲಿ ಪ್ರತ್ಯಕ್ಷವಾಗುತ್ತಿರುವ ಈ ಸಂದರ್ಭಕ್ಕೆ ಅನುಗುಣವಾದ ರೀತಿಯಲ್ಲಿ, ಶ್ರವ್ಯ ಮಾಧ್ಯಮ ಬದಲಾಗಬೇಕಾದ ಅನಿವಾರ್ಯತೆ ಎದುರಿಸುತ್ತಿದೆ.

ದೃಶ್ಯ ಮತ್ತು ಶ್ರವ್ಯ ಮಾಧ್ಯಮ ಎದುರಿಸುತ್ತಿರುವ ಸವಾಲುಗಳಿಗೆ ಸಂಬಂಧಿಸಿದಂತೆ ಇಷ್ಟು ಹೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ತಂತ್ರಜ್ಞಾನದ ಸುಧಾರಣೆಯಿಂದ ದೃಶ್ಯ ಮತ್ತು ಶ್ರವ್ಯ ಮಾಧ್ಯಮಗಳಲ್ಲಿ

ಇನ್ನೂ ಏನೆಲ್ಲ ಬದಲಾವಣೆಗಳಾಗಲಿವೆ, ಅವುಗಳು ತಮ್ಮ ಅಸ್ತಿತ್ವ ಕಾಪಾಡಿಕೊಳ್ಳಲು ಇನ್ನೂ ಯಾವೆಲ್ಲ ರೀತಿಯ ಸವಾಲುಗಳನ್ನು ಎದುರಿಸಬೇಕಾಗಿಬರಬಹುದು ಅನ್ನುವ ಪ್ರಶ್ನೆಗಳು, ಎಲ್ಲರಂತೆ ನನ್ನಲ್ಲೂ ಕುತೂಹಲ ಸೃಷ್ಟಿಸುತ್ತವೆ.

## ಅಂತರ್ಜಾಲ ಮಾಧ್ಯಮ

**- ಕೋಡಿಬೆಟ್ಟು ರಾಜಲಕ್ಷ್ಮಿ**

೨೦೦೦ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ವಿಶುವಲ್ ಇಂಟರಾಕ್ಟಿವ್ ಪ್ರೈವೇಟ್ ಲಿಮಿಟೆಡ್ ಕಂಪೆನಿಯು ಕನ್ನಡ ಇಂಡಿಯಾ ಇನ್ಫೋ.ಕಾಂ ಎಂಬ ಸ್ವತಂತ್ರ ವೆಬ್‌ಸೈಟ್ ಶುರು ಮಾಡಿದಾಗ ಅಂತರ್ಜಾಲ ಮಾಧ್ಯಮ ಎಂಬುದೇ ಒಂದು ಹೊಚ್ಚ ಹೊಸ ಪರಿಕಲ್ಪನೆಯಾಗಿತ್ತು. ಕನ್ನಡಕ್ಕೆ ಮಾತ್ರವಲ್ಲ, ಎಲ್ಲ ಭಾಷೆಗಳೂ ಆನ್‌ಲೈನ್ ಲೋಕಕ್ಕೆ ಪ್ರವೇಶಿಸುತ್ತ ಆನ್‌ಲೈನ್ ಯುಗವನ್ನು ಸ್ವಾಗತಿಸಲಾರಂಭಿಸಿದವು.

ಆ ಸಂದರ್ಭದಲ್ಲಿ ಇಂಗ್ಲಿಷ್‌ನಲ್ಲಿ ಮತ್ತು ಪ್ರಾದೇಶಿಕ ಭಾಷೆಯಲ್ಲಿ ಸಾವಿರಾರು ವೆಬ್‌ಸೈಟ್‌ಗಳು ಹುಟ್ಟಿಕೊಂಡವು. ಕಂಪ್ಯೂಟರ್ ಪರದೆಯ ಮೇಲೆ ಕನ್ನಡದ ಫಾಂಟ್‌ಗಳಲ್ಲಿ ನಮ್ಮೂರಿನ ಸುದ್ದಿಯನ್ನು ಓದುವ ಪ್ರಕ್ರಿಯೆಯೇ ಅಚ್ಚರಿ ಎನಿಸುತ್ತಿತ್ತು. ಮುದ್ರಣ ಮಾಧ್ಯಮದ ಸಾಧ್ಯತೆಗಳನ್ನೇ ಆನ್‌ಲೈನ್‌ನಲ್ಲಿಯೂ ಅನ್ವೇಷಿಸುತ್ತ, ವಿಸ್ತರಿಸುತ್ತ, ವೆಬ್‌ಸೈಟ್‌ಗಳು ಕೆಲಸ ಆರಂಭಿಸಿದ್ದವು. ಇನ್ನೂ ಹೇಳಬೇಕೆಂದರೆ ಮುದ್ರಣ ಮಾಧ್ಯಮದಲ್ಲಿ ನ್ಯೂಸ್ ಪ್ರಿಂಟ್ ಸಮಸ್ಯೆ ಇದ್ದುದರಿಂದ ಬರಹಗಳನ್ನು ಸಂಕ್ಷಿಪ್ತವಾಗಿ ಇರಿಸಬೇಕಾಗಿತ್ತು. ಆದರೆ ಆನ್‌ಲೈನ್‌ನಲ್ಲಿ ಈ ಸಮಸ್ಯೆ ಇರಲಿಲ್ಲ. ಆರಂಭದ ದಿನಗಳಲ್ಲಿ ಇದೊಂದು ಸಕಾರಾತ್ಮಕ ವಿಷಯ ಎನಿಸಿದರೂ ಭಾರೀ ದೀರ್ಘ ಬರಹಗಳನ್ನು ಓದುವ ವ್ಯವಧಾನ ಆನ್‌ಲೈನ್ ಓದುಗರಲ್ಲಿ ಇರುವುದಿಲ್ಲ ಎಂಬ ಆತಂಕ, ನಂತರದ ದಿನಗಳಲ್ಲಿ ಮೊಳಕೆಯೊಡೆಯಲು ಶುರುವಾಯಿತು. ಆದರೆ ಪುಟ್ಟ ಪುಟ್ಟ ಅನೇಕ ಸ್ಟೋರಿಗಳನ್ನು ಹಾಕುವುದಕ್ಕೇನೂ ಅಡೆತಡೆಯಿರಲಿಲ್ಲ.

೧೦ ವರ್ಷಗಳ ಹಿಂದೆ ಭಾರತದಲ್ಲಿ ಡಿಜಿಟಲ್ ಲೋಕ ಇನ್ನೂ ಕಣ್ಣೆರೆದಿರಲಿಲ್ಲ. ಮೊಬೈಲ್‌ಗಳಲ್ಲಿ ಒಳಬರುವ ಕರೆಗಳಿಗೆ ನಿಮಿಷಕ್ಕೆ ಐದಾರು ರೂಪಾಯಿ ಶುಲ್ಕ ವಿಧಿಸುತ್ತಿದ್ದ ಕಾಲದಲ್ಲಿ ವೆಬ್‌ಸೈಟ್‌ಗಳ ಓದುಗರು ಯಾರು ಎಂದು ಹುಡುಕಿದರೆ, ಅವರಲ್ಲಿ ಹೆಚ್ಚಿನವರು ಅನಿವಾಸಿ ಭಾರತೀಯರೇ ಆಗಿದ್ದರು. ಹಾಗಾಗಿ ಅನಿವಾಸಿ ಭಾರತೀಯರನ್ನೇ ಕೇಂದ್ರವನ್ನಾಗಿಸಿ ಬರಹಗಳು ವೆಬ್‌ಸೈಟ್‌ನಲ್ಲಿ ಕಾಣಿಸಿಕೊಂಡವು. ಇಷ್ಟೆಲ್ಲ ಪ್ರಯೋಗಗಳು, ಅನ್ವೇಷಣೆಗಳು ನಡೆಯುತ್ತಿರುವಾಗ ಹೂಡಿಕೆಯ ಹಣವು ಖರ್ಚಾಗಿ, ಲಾಭದ ಚೀಲವು ಭರ್ತಿಯಾಗದೇ, ವೆಬ್‌ಸೈಟ್‌ಗಳು ಕಂಗಾಲಾಗಲಾರಂಭಿಸಿದವು. ಅಂತಿಮವಾಗಿ ಅಂತರ್ಜಾಲ ಮಾಧ್ಯಮವೂ ಒಂದು ಉದ್ಯಮವೇ ಆದುದರಿಂದ

ಲಾಭವನ್ನು ಆಧರಿಸಿ ವ್ಯವಸ್ಥೆಯೊಂದನ್ನು ಕಟ್ಟುವುದು ಮುಖ್ಯವಾಗಿತ್ತು. ಹೀಗೆ ವ್ಯವಸ್ಥೆಯೊಂದನ್ನು ರೂಪಿಸುವ ನಿಟ್ಟಿನಲ್ಲಿ ಎದುರಾದುದು ಹಣಕಾಸಿನ ಸಮಸ್ಯೆ

ಹೊಸ ಶತಮಾನದ ಆದಿಭಾಗದಲ್ಲಿ ಎದುರಾದ ಆ ಸಮಸ್ಯೆ ಎರಡು ದಶಕಗಳ ಬಳಿಕವೂ ಅಂದರೆ ಇಂದಿಗೂ ಹಾಗೆಯೇ ಉಳಿದುಕೊಂಡಿದೆ. ಸವಾಲುಗಳು ಇನ್ನಷ್ಟು



ಸೂಕ್ಷ್ಮವಾದ ಹಲವು ರೂಪ ಪಡೆದುಕೊಂಡಿವೆ. ಇಂದಿಗೂ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು, ಬೇಕಾದಷ್ಟು ಬಂಡವಾಳ ಹೊಂದಿಸುವ ಸವಾಲನ್ನು ಬಗೆಹರಿಸುವುದು ಹೇಗೆ -ಎಂದು ಸುದ್ದಿ ವೆಬ್‌ಸೈಟ್‌ಗಳು ತಲೆಮೇಲೆ ಕೈಹೊತ್ತು ಕುಳಿತಿವೆ. ಸುದ್ದಿಯ ವಿಚಾರದಲ್ಲಿ ಪತ್ರಿಕೆಗಳ ರಚನಾ ಮಾದರಿಯಲ್ಲಿಯೇ ವೆಬ್‌ಸೈಟ್‌ಗಳ ಮಾದರಿಯನ್ನು ಕಟ್ಟಿಕೊಂಡರೂ, ಪತ್ರಿಕೆಗಳದ್ದೇ ಮಾದರಿಯಲ್ಲಿ, ವಿವಿಧೆಡೆಗಳಿಂದ ಲಕ್ಷಗಟ್ಟಲೇ ರೂಪಾಯಿಗಳ ಜಾಹೀರಾತನ್ನು ತಂದು, ಆದಾಯ ಸಂಗ್ರಹಿಸಿಕೊಂಡು, ಓದುಗರಿಗೆ ಉಚಿತವೆಂಬಷ್ಟು ಅಗ್ಗವಾಗಿ ಸುದ್ದಿಯನ್ನು ಕೊಡುವುದು ವೆಬ್‌ಸೈಟ್‌ಗಳಿಗೆ ಕಷ್ಟ ಇನ್ನು ಜಾಹೀರಾತುದಾರರಿಗೆ ವೆಬ್‌ಸೈಟ್‌ನ ಪ್ರತಿ ಕ್ಷಣದ ಮಾಹಿತಿಯನ್ನೂ ಪಡೆಯುವ ಅವಕಾಶಗಳಿವೆ. ಒಂದು ವೆಬ್‌ಪುಟಕ್ಕೆ ಎಷ್ಟು ಜನರು ಭೇಟಿ ಕೊಟ್ಟರು, ಎಷ್ಟು ಹೊತ್ತು ಆ ಪುಟದಲ್ಲಿ ನಿಂತಿದ್ದರು, ಒಂದು ಲೇಖನದ ಯಾವ ಸಾಲಿನ ಮೇಲೆ ಕರ್ಸರ್‌ಗಳು ಹೆಚ್ಚು ಹೊತ್ತು ನಿಂತಿದ್ದವು ಎಂಬೆಲ್ಲ ಮಾಹಿತಿಗಳನ್ನು ಇಟ್ಟುಕೊಂಡು, ಓದುಗರ ಮನೋವಿಶ್ಲೇಷಣೆಗೇ ಇಳಿದುಬಿಡುವ ಡೇಟಾವಿಶ್ಲೇಷಕರಿಂದ ಜಾಹೀರಾತುದಾರರು ಎಲ್ಲ ಮಾಹಿತಿ ಪಡೆದು, ಎಷ್ಟು ಜಾಹೀರಾತು ಕೊಡಬೇಕು ಎಂಬ ಲೆಕ್ಕಾಚಾರವನ್ನು ಹಾಕುವುದರಲ್ಲಿ ನಿಷ್ಣಾತರು.

ಕನ್ನಡ ಇಂಡಿಯಾ ಇನ್ಫೋ.ಕಾಂ ಆ ಸಂದರ್ಭದಲ್ಲಿ 'ಸೂಜಿಮಲ್ಲಿಗೆ' ಎಂಬ ಅಂತರ್ಜಾಲ ಪತ್ರಿಕೆಯನ್ನು ರೂಪಿಸಿ, ಅದಕ್ಕೆ ಶುಲ್ಕ ವಿಧಿಸಿ ಓದುಗರಿಗೆ ಮಾರಾಟ ಮಾಡಲು ಪ್ರಯತ್ನಿಸಿತು. ಅನೇಕ ಸಂಚಿಕೆಗಳು ಪ್ರಕಟವಾದರೂ, ಇಂದಿನ ಕಾಲದಂತೆ ಪಿಡಿಎಫ್‌ಗಳಿಗೆ ಪಾಸ್‌ವರ್ಡ್ ವಿಧಿಸುವ ತಂತ್ರಜ್ಞಾನವಾಗಲೀ, ಸಂಚಿಕೆಯನ್ನು ಖರೀದಿಸಿದ ಗ್ರಾಹಕ ಅದನ್ನು ಹಂಚದಂತೆ ತಡೆಯುವ ವ್ಯವಸ್ಥೆಯಾಗಲೀ ಆಗ ಇರಲಿಲ್ಲ. ಅಷ್ಟಕ್ಕೂ ಸೀಮಿತ ಸಂಖ್ಯೆಯ ಅನಿವಾಸಿ ಕನ್ನಡಿಗರು ಅದರ ಗ್ರಾಹಕರಾದ್ದರಿಂದ ಆದಾಯವನ್ನು ವೃದ್ಧಿಸುವ ದಾರಿಗಳೂ ಹೆಚ್ಚು ತೆರೆದುಕೊಳ್ಳಲಿಲ್ಲ. ಇಂಡಿಯಾ ಇನ್ಫೋ.ಕಾಂ ಅಂದಿನ ಸಂದರ್ಭದಲ್ಲಿ ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ, ವೆಬ್‌ಸೈಟ್ ನಡೆಸಲು 'ಒಂದು ಡಾಲರ್ ದೇಣಿಗೆ ನೀಡಿ' ಎಂಬ ಜಾಹೀರಾತನ್ನು ನೀಡಲಾರಂಭಿಸಿತು.

ಇಂದು ತಂತ್ರಜ್ಞಾನ ವಿಕಾಸವಾಗಿದ್ದು, ಆನ್‌ಲೈನ್‌ನಲ್ಲಿ ಬರಹಗಳನ್ನು ಓದಲು ಓದುಗರಿಗೆ ಶುಲ್ಕ ವಿಧಿಸುವ ಮಾದರಿಗಳನ್ನು ಜಗತ್ತಿನ ಅನೇಕ ವೆಬ್‌ಸೈಟ್‌ಗಳು ಮಾಡಿಕೊಂಡಿವೆ. ಗಾರ್ಡಿಯನ್‌ನಂತಹ ಆನ್‌ಲೈನ್ ಪತ್ರಿಕೆಗಳು ದೇಣಿಗೆ ಪಡೆಯುವ ಈ ಪರಿಕಲ್ಪನೆಯನ್ನು ಇವತ್ತಿಗೂ ಅನುಸರಿಸುತ್ತಿವೆ. ಅಂದರೆ ಅಂತರ್ಜಾಲ ಮಾಧ್ಯಮವು ವಿಕಾಸ ಹೊಂದಿ ಇಪ್ಪತ್ತು ವರ್ಷಗಳ ಬಳಿಕವೂ ಆರ್ಥಿಕ ಸಬಲೀಕರಣವನ್ನು ಸಾಧಿಸಲು ಹೆಣಗಾಡುತ್ತಲೇ ಬಂದಿವೆ. ಈ ಆರ್ಥಿಕತೆಯು ಕೇವಲ ಜಾಹೀರಾತು ಸೆಳೆಯುವ ತಂತ್ರಗಾರಿಕೆಯನ್ನಷ್ಟೇ ಅವಲಂಬಿಸಿಲ್ಲ.

ಈ ಸಂದರ್ಭದಲ್ಲಿ ಅಂತರ್ಜಾಲದ ಅರ್ಥಮೀಮಾಂಸೆಯನ್ನು ಗಮನಿಸುವು ದಾದರೆ, ಎರಡು ದಶಕಗಳಲ್ಲಿ ಡಿಜಿಟಲ್ ಲೋಕದಲ್ಲಿ ಆಗಿರುವ ವೇಗವಾದ ಬದಲಾವಣೆ ಯನ್ನೂ ಗಣನೆಗೆ ತೆಗೆದುಕೊಳ್ಳಬೇಕು.

ನವಮಾಧ್ಯಮದತ್ತ ಮುಖಮಾಡಿದ್ದ ಜನತೆ, ಸ್ಮಾರ್ಟ್ ಫೋನ್‌ಗಳ ಪ್ರವೇಶ ಮತ್ತು ಕಡಿಮೆ ದರಕ್ಕೆ ಡೇಟಾಪ್ಯಾಕೇಜ್‌ಗಳ ಲಭ್ಯತೆಯಿಂದಾಗಿ, ತಮ್ಮ ಅಂಗೈಯಲ್ಲಿದ್ದ



ಮೊಬೈಲ್‌ಗಳತ್ತ ಮುಖಮಾಡಿದರು. ಇಷ್ಟರವರೆಗೆ ವೆಬ್‌ಸೈಟ್‌ಗಳನ್ನು ನಡೆಸಲು ವ್ಯವಸ್ಥೆಯೊಂದರ ಸಂಶೋಧನೆಯಲ್ಲಿ ಮುಳುಗಿದ್ದವರೆಲ್ಲರೂ ಇನ್ನೊಂದು ಮೆಟ್ಟಿಲೇರಬೇಕಾಯಿತು. ಅಂದರೆ ಒಂದೋ ಗ್ರಾಹಕರನ್ನು ಮೊಬೈಲ್‌ನಿಂದ ಆಚೆ ಕರೆತರುವ ಸವಾಲನ್ನು ಎದುರಿಸಬೇಕು, ಅಥವಾ ಮೊಬೈಲ್ ಮೂಲಕವೇ ಅವರ ಗಮನ ಸೆಳೆಯುವ ಪ್ರಯತ್ನ ಮಾಡಬೇಕಾಗಿತ್ತು. ಎರಡನೇ ಆಯ್ಕೆಯೇ ಸುಲಭವೂ, ಕಾರ್ಯಸಾಧುವೂ ಆಯಿತು.

**ಅಂತರ್ಜಾಲ ಅರ್ಥಮೀಮಾಂಸೆ**

ರಾಯಿಟರ್ಸ್ ಇನ್‌ಸ್ಟಿಟ್ಯೂಟ್ ಆಫ್ ಸ್ಟಡೀ ಆಫ್ ಜರ್ನಲಿಸಂ(RISj) ೨೦೧೯ರಲ್ಲಿ ಪ್ರಕಟಿಸಿರುವ ವರದಿಯ ಪ್ರಕಾರ, ಮುಂದಿನ ದಿನಗಳಲ್ಲಿ ಭಾರತದ ಸುದ್ದಿ ಮಾಧ್ಯಮ ಮೊಬೈಲ್ ಫಸ್ಟ್ ಪ್ಲಾಟ್‌ಫಾರಂ ಆಧರಿಸಿ ಮುಂದುವರೆಯಲಿದೆ. ಸರ್ಚ್ ಎಂಜಿನ್ ಮೂಲಕ ಶೇ ೩೨ರಷ್ಟು ಗ್ರಾಹಕರು ಸುದ್ದಿಗಾಗಿ ಹುಡುಕಾಡಿದರೆ, ಸಾಮಾಜಿಕ ಜಾಲತಾಣಗಳ ಮೂಲಕ ಶೇ ೨೪ರಷ್ಟು ಮಂದಿ ಗ್ರಾಹಕರು ಸುದ್ದಿಯನ್ನು ಪಡೆಯುತ್ತಾರೆ. ನೇರವಾಗಿ ಸುದ್ದಿಜಾಲಗಳಿಗೆ ಭೇಟಿ ಕೊಡುವವರ ಸಂಖ್ಯೆ ಶೇ ೧೮ ಇರಬಹುದು ಎನ್ನುತ್ತದೆ ವರದಿ. ಒಟ್ಟಿನಲ್ಲಿ ಶೇ ೬೮ರಷ್ಟು ಮಂದಿ ಆನ್‌ಲೈನ್ ಸುದ್ದಿಗಾಗಿ ಮೊಬೈಲನ್ನೇ ನೋಡುತ್ತಾರೆ. ಭಾರತ, ಅಮೆರಿಕ, ಟರ್ಕಿ, ಬ್ರೆಜಿಲ್ ಮತ್ತು ಜರ್ಮನಿಯನ್ನು ಪರಿಗಣಿಸಿದರೆ ಡಿಜಿಟಲ್ ಸುದ್ದಿಗಾಗಿ ಮೊಬೈಲ್‌ನ್ನು ಅವಲಂಬಿಸಿದವರ ದೊಡ್ಡ ಸಂಖ್ಯೆ ಭಾರತದಲ್ಲಿಯೇ ಕಾಣಸಿಗುತ್ತದೆ.

ಮಾಧ್ಯಮ ಮತ್ತು ಮನರಂಜನೆ ಕ್ಷೇತ್ರದ ಗಾತ್ರ ೨೦೧೪-೧೫ರಲ್ಲಿ ಒಂದು ಲಕ್ಷ ಕೋಟಿ ರೂಪಾಯಿಗಳಷ್ಟು ಇದ್ದರೆ ಇದು ೨೦೧೮-೧೯ರ ವೇಳೆಗೆ ೧.೬ ಲಕ್ಷ ಕೋಟಿ ರೂಪಾಯಿಗೇರಿದೆ. ಜಾಹೀರಾತು ಆದಾಯವು ೪೨ ಸಾವಿರ ಕೋಟಿ ರೂಪಾಯಿಗಳಿಂದ ೬೯ ಸಾವಿರ ಕೋಟಿ ರೂಪಾಯಿಗೆ ಏರಿದೆ. ಇದೇ ಅವಧಿಗೆ ಡಿಜಿಟಲ್ ಮಾಧ್ಯಮದ ಜಾಹೀರಾತು ಗಾತ್ರವು ೪.೭ ಸಾವಿರ ಕೋಟಿಯಿಂದ ೧೬ ಸಾವಿರ ಕೋಟಿಗೆ ಏರಿದೆ. ವರ್ಷದಿಂದ ವರ್ಷಕ್ಕೆ ಆಗುವ ಆರ್ಥಿಕ ಪ್ರಗತಿಯನ್ನು ಗಮನಿಸಿದರೆ ದೃಶ್ಯ, ಮುದ್ರಣ ಮಾಧ್ಯಮದಲ್ಲಿಯೂ ಈ ಏರಿಕೆ ಕಂಡು ಬರುತ್ತದೆ. ಆದಾಗ್ಯೂ ಡಿಜಿಟಲ್ ಮಾಧ್ಯಮದಲ್ಲಿ ಆಗಿರುವ ಪ್ರಗತಿಯನ್ನು ಕಂಡು ಅಂತರ್ಜಾಲ ಸುದ್ದಿ ಮಾಧ್ಯಮ ಖುಷಿಪಡುವಂತೆ ಇಲ್ಲ. ಯಾಕೆಂದರೆ ಜಾಹೀರಾತು ಪ್ರಮಾಣದ ಹೆಚ್ಚಳದಲ್ಲಿ ಸಿಂಹಪಾಲನ್ನು ಗೇಮಿಂಗ್ ವೆಬ್‌ಸೈಟ್‌ಗಳು, ಮನರಂಜನೆ, ಇ ಕಾಮರ್ಸ್ ವೆಬ್‌ಸೈಟ್‌ಗಳು ಕಬಳಿಸಿಬಿಡುತ್ತವೆ. ದೃಶ್ಯಮಾಧ್ಯಮದಲ್ಲಿಯೂ ಬಹುತೇಕ ಜಾಹೀರಾತು ಪ್ರಮಾಣವನ್ನು ಮನರಂಜನಾ ವಾಹಿನಿಗಳು ಕಬಳಿಸಿದಂತೆಯೇ ಡಿಜಿಟಲ್ ಮಾಧ್ಯಮದಲ್ಲಿಯೂ ಮನರಂಜನೆಯೇ ಹೆಚ್ಚು ಪಾಲು ಪಡೆಯುತ್ತದೆ. ಇಡೀ ಜಗತ್ತಿನಲ್ಲಿ ಅತೀ ಹೆಚ್ಚು ಗೇಮ್‌ಗಳು ಡೌನ್‌ಲೋಡ್ ಆಗಿರುವುದು ಭಾರತದಲ್ಲಿಯೇ ಎಂಬುದು ಗಮನಾರ್ಹ.

ಡಿಜಿಟಲ್ ಕ್ಷೇತ್ರದ ಅಭಿವೃದ್ಧಿ (digital expansion)ಯಿಂದಾಗಿ ಅಂತರ್ಜಾಲ ಮಾಧ್ಯಮಕ್ಕೆ ಜನರನ್ನು ತಲುಪಲು ನೂರಾರು ದಾರಿಗಳು ಸುಲಲಿತವಾಗಿ ಕಾಣಿಸಿಕೊಂಡವು. ಹಾಗಂತ ಈ ದಾರಿಗಳನ್ನು ಬಳಸಿಕೊಂಡು ಆರ್ಥಿಕವಾಗಿ ಸ್ವತಂತ್ರ ವಾಗುವುದು ಸುಲಭವಾಗಲಿಲ್ಲ. ಗ್ರಾಹಕರ ಗಮನವನ್ನು ಸೆಳೆಯಲು ಸಾವಿರಾರು ದಾರಿಗಳು ಇರುವಾಗ, ಡಿಜಿಟಲ್ ಸುದ್ದಿಮಾಧ್ಯಮ ಅದನ್ನು ದಾಟಿ ಪ್ರಯಾಣಿಸುವುದು ಹೂವಿನ ಹಾದಿಯೇನೂ ಅಲ್ಲ.

**ಎರಡು ರೀತಿಯ ಮಾರ್ಕೆಟ್**

ಡಿಜಿಟಲ್ ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ, ಮೊಬೈಲ್ ಎಂಬುದು ಗ್ರಾಹಕರ ಖರೀದಿ ವೇದಿಕೆಯಾಗಿ ಮಾರ್ಪಟ್ಟಿದೆ. ಇದನ್ನು ಮಾರುಕಟ್ಟೆ ಭಾಷೆಯಲ್ಲಿ ಮೊಬೈಲ್ ಫಸ್ಟ್ ಮಾರುಕಟ್ಟೆ ಎಂದು ಹೇಳುವುದಾದರೆ, ಅಂತರ್ಜಾಲ ಮಾಧ್ಯಮವು ಈ ವೇದಿಕೆಗೆ ಲಗ್ಗೆ ಹಾಕುವ ಸಾಮರ್ಥ್ಯವನ್ನು ರೂಢಿಸಿಕೊಳ್ಳುವುದು ಅನಿವಾರ್ಯವಾಯಿತು. ತೋರುಬೆರಳಿನ ಸ್ಪರ್ಶಮಾತ್ರಕ್ಕೇ ಸುದ್ದಿಯ ಲೋಕವೇ ಅನಾವರಣಗೊಳ್ಳಬೇಕು ಎಂದು ಓದುಗರು ಬಯಸುತ್ತಾರೆ. ಹಾಗಾಗಿ ಮುದ್ರಣ ಮಾಧ್ಯಮವನ್ನೇ ಮಾದರಿಯನ್ನಾಗಿಟ್ಟುಕೊಂಡು ರೂಪುಗೊಂಡ ವೆಬ್‌ಸೈಟ್‌ಗಳು ತಮ್ಮ ವಿನ್ಯಾಸವನ್ನು ಮೊಬೈಲ್‌ನ ಸ್ಕ್ರೀನ್‌ಗೆ ಒಗ್ಗಿಸಿಕೊಂಡವು. ಮೊಬೈಲ್‌ಗೆ ಅನ್ವಯಿಸಿದಂತೆ ತಂತ್ರಗಾರಿಕೆ (ಸ್ಟ್ರಾಟೆಜಿ) ರೂಪಿಸುವುದು, ಅಭಿವೃದ್ಧಿಪಡಿಸುವುದು, ನೋಟಿಫಿಕೇಶನ್ ನೀಡುವುದು- ಮುಂತಾದವು ಕಳೆದ ನಾಲ್ಕೈದು ವರ್ಷಗಳಲ್ಲಿ ಕಂಡು ಬಂದ ಬೆಳವಣಿಗೆ

ಹೆಚ್ಚಿನ ಮಂದಿ ಮೊಬೈಲ್‌ನ್ನು ಅನ್‌ಲಾಕ್ ಮಾಡುವುದೇ ಸಾಮಾಜಿಕ ಜಾಲತಾಣದತ್ತ ಇಣುಕಿ ನೋಡುವುದಕ್ಕಾಗಿ, ಖರೀದಿ ವೆಬ್‌ಸೈಟ್‌ಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಬ್ಯುಸಿಯಾಗಿರುವ ಗ್ರಾಹಕರ ಸಂಖ್ಯೆ ಇನ್ನೂ ಹೆಚ್ಚು. ಈ ಮಾರುಕಟ್ಟೆಯನ್ನು ಫ್ಲಾಟ್‌ಫಾರಂ ಡಾಮಿನೇಟೆಡ್ ಮಾರುಕಟ್ಟೆ ಎಂದು ಹೇಳುವುದಾದರೆ, ಶೇ ೫೨ರಷ್ಟು ಮಂದಿ ಓದುಗರು ಫೇಸ್‌ಬುಕ್, ವಾಟ್ಸ್ ಆಪ್ ಮೂಲಕ ಸುದ್ದಿವೆಬ್‌ಸೈಟ್‌ಗಳ ಪುಟಗಳನ್ನು ತಲುಪುತ್ತಾರೆ ಎಂದು ರಾಯಿಟರ್ ಅಧ್ಯಯನ ಹೇಳುತ್ತದೆ. ಅಂದಮೇಲೆ ಈ ಫ್ಲಾಟ್‌ಫಾರಂ ಆಧಾರಿತ ಮಾರುಕಟ್ಟೆಯಿಂದ ಓದುಗರನ್ನು ಸೆಳೆಯುವುದೂ ಸುಲಭದ ಕೆಲಸವಲ್ಲ. ಉದಾಹರಣೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಘೋಷಣೆಯೊಂದನ್ನು ಮಾಡಿದರೆ ಅದನ್ನು ಪ್ರಧಾನಿಯವರ ಟ್ವಿಟ್ಟರ್ ಖಾತೆಗೆ ಹೋಗಿ ನೋಡುವ ಅವಕಾಶವೇ ಇರುತ್ತದಲ್ಲ. ತಮ್ಮ ನೆಚ್ಚಿನ ನಟಿ, ದೀಪಿಕಾ ಪಡುಕೋಣೆ ಒಂದು ಹೇಳಿಕೆ ಕೊಟ್ಟರೆ ಅದನ್ನೂ ಆಕೆಯ ಇನ್‌ಸ್ಟಗ್ರಾಂ ಪುಟದಲ್ಲಿಯೇ ನೋಡಬಹುದಲ್ಲ ! ಹಾಗಾಗಿ ಇವೆಲ್ಲವನ್ನೂ ದಾಟಿ, ಸುದ್ದಿ ಅಥವಾ ಒಂದು ವಿಚಾರಕ್ಕೆ ಹೊಸ ಆಯಾಮವನ್ನು ಕೊಡುವ ಮೂಲಕ, ಓದುಗರ ಬುದ್ಧಿಗೆ ರುಚಿಸುವಂತೆ ಮಾಹಿತಿ ನೀಡುವ ನಿಟ್ಟಿನಲ್ಲಿ ಅಂತರ್ಜಾಲ ತಾಣಗಳು ಪ್ರಯತ್ನಗಳನ್ನು ನಡೆಸಬೇಕಾದುದು ಬಹುದೊಡ್ಡ ಸವಾಲಾಗಿದೆ.

ಹಾಗೆ ನೋಡಿದರೆ ಸುದ್ದಿ ವೆಬ್‌ಸೈಟ್‌ಗಳು ಸಾಮಾಜಿಕ ಜಾಲತಾಣವನ್ನು ಆಧರಿಸಿ ತಮ್ಮ ಓದುಗರನ್ನು ತಲುಪಲು ಬೇಕಾದ ಪ್ರಯತ್ನವನ್ನು ಚೆನ್ನಾಗಿಯೇ ಮಾಡುತ್ತಿವೆ. ಇನ್‌ಸ್ಟಗ್ರಾಂ, ಫೇಸ್‌ಬುಕ್, ವಾಟ್ಸ್‌ಆಪ್, ಟೆಲಿಗ್ರಾಂ ಸೇರಿದಂತೆ ಲಭ್ಯ ಇರುವ ಎಲ್ಲ ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಉಪಸ್ಥಿತಿಯನ್ನು ಹೇಳುತ್ತ ಮುಂದುವರೆಯುತ್ತಿವೆ. ವಾಟ್ಸ್‌ಆಪ್ ಬಳಕೆದಾರರ ಸಂಖ್ಯೆ ಭಾರತದಲ್ಲಿ ತೀವ್ರಗತಿಯಲ್ಲಿ ಹೆಚ್ಚುತ್ತಿದ್ದು, ೨೦೧೭ರಲ್ಲಿ ಇದ್ದ ಬಳಕೆದಾರರ ಸಂಖ್ಯೆ ಒಂದೇ ವರ್ಷದಲ್ಲಿ ಅಂದರೆ ೨೦೧೮ರಲ್ಲಿ ದ್ವಿಗುಣಗೊಂಡಿದೆ ಎಂದು ಕ್ವಿಂಟೈಪ್ ಬ್ಲಾಗ್ ತನ್ನ ವಿಶ್ಲೇಷಣೆಯಲ್ಲಿ ಹೇಳಿದೆ. ಇದನ್ನೇ ಗಮನಿಸಿಕೊಂಡು ಟೈಮ್ಸ್ ಆಫ್ ಇಂಡಿಯಾದಂತಹ ಸಾಂಪ್ರದಾಯಿಕ

ಮಾಧ್ಯಮ ಆಧರಿತ ವೆಬ್‌ಸೈಟ್, 'ಫಸ್ಟ್ ಪೋಸ್ಟ್' ಮತ್ತು 'ದ ಕ್ವಿಂಟ್' ನಂತಹ ಸ್ವತಂತ್ರ ವೆಬ್‌ಸೈಟ್‌ಗಳು ಶುಲ್ಕ ಪಡೆದು



ವಾಟ್ಸ್ ಆಪ್ ಚಂದಾದಾರರಾಗುವಂತೆ ಓದುಗರಿಗೆ ಸೂಚಿಸುವ ಹೊಸವಿಧಾನವನ್ನು ಅಳವಡಿಸಿಕೊಂಡಿವೆ. ಅದೇನೇ ಆದರೂ ನೆಟ್‌ಫ್ಲಿಕ್ಸ್, ಅಮೆಜಾನ್ (FANG) ಮುಂತಾದ ದೈತ್ಯಗಾತ್ರದ ಸಂಸ್ಥೆಗಳ ಕಾರ್ಯಭಾರದ ನಡುವೆ ಇಂತಹ ಪ್ರಯತ್ನಗಳ ಮೂಲಕ ಬರುವ ಲಾಭ ಸಣ್ಣದೆಂದೇ ಹೇಳಬೇಕು.

ಮುದ್ರಣ ಮಾಧ್ಯಮವನ್ನು ಆಧರಿಸಿ ರೂಪುಗೊಂಡ ವೆಬ್‌ಸೈಟ್‌ಗಳು, ಜಾಹೀರಾತನ್ನು ಒಂದು ಪ್ಯಾಕೇಜನ್ನಾಗಿ ರೂಪಿಸಿಕೊಂಡು ಪಡೆಯುತ್ತಿವೆ. ದೃಶ್ಯ, ಮುದ್ರಣ ಮತ್ತು ಡಿಜಿಟಲ್ ಮಾಧ್ಯಮಕ್ಕೆ ಒಟ್ಟಾಗಿ ಪ್ಯಾಕೇಜ್‌ಗಳನ್ನು ರೂಪಿಸಿ, ಚೌಕಾಸಿ ಮಾಡುತ್ತವೆ. ಒಂದಲ್ಲ ಒಂದು ಪ್ಲಾಟ್‌ಫಾರಂನ ಸಾಮರ್ಥ್ಯವನ್ನು ಬಳಸಿಕೊಂಡು, ಮತ್ತೊಂದನ್ನು ಚಾಲನೆಯಲ್ಲಿಡುವಂತಹ ಪ್ರಯತ್ನಗಳು ಅನೇಕ ಕಡೆ ಸಾಗಿವೆ.

೩೫ ವರ್ಷದೊಳಗಿನ ಭಾರತೀಯರ ಪೈಕಿ ಮೂರನೇ ಎರಡರಷ್ಟು ಮಂದಿ ಇಂಗ್ಲಿಷ್‌ನಲ್ಲಿ ಮೊಬೈಲ್ ಮೂಲಕವೇ ಸುದ್ದಿ ನೋಡುವುದಾಗಿ ಹೇಳಿಕೊಂಡಿರುವುದನ್ನು ಕೂಡ ರಾಯಿಟರ್‌ನ ವರದಿ ವಿವರಿಸಿದೆ. ಈ ಮಾಹಿತಿಯು ಪ್ರಾದೇಶಿಕ ಭಾಷಾ ಮುದ್ರಣ ಸಂಸ್ಥೆಗಳನ್ನು ಕಂಗಾಲು ಮಾಡಿದೆ. ತಮ್ಮ ಉಳಿವಿಗಾಗಿ, ಡಿಜಿಟಲ್ ಮಾಧ್ಯಮದಲ್ಲಿ ಸಿಗುವ ಎಲ್ಲ ವೇದಿಕೆಯನ್ನೂ ಒಂದಲ್ಲ ಒಂದು ರೀತಿಯಲ್ಲಿ ಬಳಸಿಕೊಳ್ಳುವ ತಂತ್ರಗಳನ್ನು ಮುದ್ರಣ ಸಂಸ್ಥೆಗಳು ಹುಡುಕಿಕೊಳ್ಳುತ್ತಲೇ ಇವೆ.

ಆದರೆ ಯುವಜನತೆಯು ಇಂಗ್ಲಿಷ್‌ನತ್ತ ಮುಖ ಮಾಡುತ್ತಿರುವ ಸಂಗತಿ ಜಾಹೀರಾತುದಾರಿಗೂ ಸ್ಪಷ್ಟವಿದೆ. ಇದು ಪ್ರಾದೇಶಿಕ ಭಾಷಾ ವೆಬ್‌ಸೈಟ್‌ಗಳಿಗೆ ಮತ್ತೊಂದು ಸಂಕಟವನ್ನು ತಂದೊಡ್ಡಿದೆ. ಮಲಯಾಳಂ ಮನೋರಮಾ ವೆಬ್‌ಸೈಟ್‌ನ ಮಾರುಕಟ್ಟೆ ತಂಡವು ನಡೆಸಿದ ವಿಶ್ಲೇಷಣೆಯನ್ನು ಗಮನಿಸುವುದಾದರೆ, ಪ್ರಾದೇಶಿಕ ಜಾಹೀರಾತುದಾರರು ತಮ್ಮ ಜಾಹೀರಾತುಗಳನ್ನು ನೀಡುವಾಗ, ಮೊದಲು ದೃಶ್ಯಮಾಧ್ಯಮ ಗಳಿಗೆ ಆದ್ಯತೆ ನೀಡಿದರೆ, ಎರಡನೆಯ ಆದ್ಯತೆಯನ್ನು ಮುದ್ರಣಕ್ಕೆ ನೀಡುತ್ತಾರೆ. ಮೂರನೆಯ ಆದ್ಯತೆ ರೇಡಿಯೋ ಹಾಗೂ ಕೊನೆಯ ಅವಕಾಶ ಭಾಷಾ ವೆಬ್‌ಸೈಟ್‌ಗಳಿಗೆ ಸರ್ಚಿಂಗ್ ಕ್ಷೇತ್ರವನ್ನು ಅಭಿವೃದ್ಧಿಪಡಿಸಿ ಓದುಗರನ್ನು ಸೆಳೆಯೋಣ ಎಂದರೆ ಗೂಗಲ್‌ನ ಏಕಸ್ವಾಮ್ಯದಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ ಎಂಬಂತಾಗಿದೆ. ಬ್ಯುಸಿನೆಸ್‌ಟು ಕಸ್ಟಮರ್ (B2C) ಮಾರುಕಟ್ಟೆ ಕ್ಷೇತ್ರವನ್ನು ಇ-ಕಾಮರ್ಸ್ ವ್ಯವಸ್ಥೆ ಭದ್ರವಾಗಿ ಹಿಡಿದುಕೊಂಡಿದೆ. ಸಾಂಪ್ರದಾಯಿಕವಾದ ದೃಶ್ಯ ಮತ್ತು

ಮುದ್ರಣ ಮಾಧ್ಯಮಗಳು ಮಾರುಕಟ್ಟೆಯಲ್ಲಿ 'ಬ್ರ್ಯಾಂಡ್' ಸ್ಥಾಪಿಸಿದಂತೆ ವೆಬ್‌ಸೈಟ್‌ಗಳಿಗೆ ಸ್ವತಂತ್ರ ಬ್ರ್ಯಾಂಡ್ ಸ್ಥಾಪಿಸುವುದು ಸಾಧ್ಯವಾಗುತ್ತಿಲ್ಲ. ವೇಗವಾಗಿ ಬದಲಾಗುತ್ತಿರುವ ಡಿಜಿಟಲ್ ಲೋಕದ ಸ್ವಭಾವವೇ ಅದಕ್ಕೆ ಕಾರಣವಿರಬಹುದು. ಸ್ಥಳೀಯ ಭಾಷಾ ಓದುಗರೂ ಡಿಜಿಟಲ್ ಮಾಧ್ಯಮವೆಂದರೆ ಅದೊಂದು ತಮಾಷೆಯ ಮಾಧ್ಯಮವೆಂಬಂತೆ ಅಥವಾ ಗೇಮಿಂಗ್ ಮುಂತಾದವುಗಳಿಗೆ ಮಾತ್ರ ಲಾಯಕ್ಕು ಎಂಬಂತೆ ಪರಿಗಣಿಸುವುದೂ ವೆಬ್‌ಸೈಟ್ ಪ್ರೊಮೋಷನ್‌ಗೆ ಸವಾಲು ಎಂದು ಮಾರ್ಕೆಟಿಂಗ್ ತಂಡ ಹೇಳುತ್ತದೆ.

**ವಿಶ್ವಾಸಾರ್ಹತೆ**

ನಕಲಿ ಸುದ್ದಿ ಹಾವಳಿಯ ನಡುವೆ ವಿಶ್ವಾಸಾರ್ಹತೆಯ ಪ್ರಶ್ನೆ ಮತ್ತೊಂದು ಸವಾಲು, ಮಲಯಾಳಂ ಮನೋರಮಾದ ಮಾರ್ಕೆಟಿಂಗ್ ಟೀಮ್ ಸರಿಯಾಗಿಯೇ



ಗುರುತಿಸಿದೆ. ಮುದ್ರಣ ಮತ್ತು ದೃಶ್ಯ ಮಾಧ್ಯಮಗಳ ಮೇಲಿರುವ ವಿಶ್ವಾಸಾರ್ಹತೆಯನ್ನು ಡಿಜಿಟಲ್ ಮಾಧ್ಯಮದ ಮೇಲೆ ಪ್ರಾದೇಶಿಕ ಓದುಗರು ಇಟ್ಟಿಲ್ಲ. ಈ ಅಪನಂಬಿಕೆಗೆ ಮತ್ತಷ್ಟು ಹುಳಿ ಹಿಂಡುವಂತೆ ಸಾಲಾಗಿ ಕೇಳಿ ಬರುವ 'ನಕಲಿಸುದ್ದಿ'ಯ ಸುದ್ದಿಯು ಅಂತರ್ಜಾಲ ಮಾಧ್ಯಮದ ಮುಂದಿರುವ ದೊಡ್ಡ ಸವಾಲು. ತಮ್ಮ ವೆಬ್‌ಸೈಟ್‌ನ ಹೆಸರಲ್ಲಿ ಸುತ್ತಾಡುವ ಸುಳ್ಳುಸುದ್ದಿಯನ್ನು ಪತ್ತೆ ಮಾಡುವ ಫ್ಯಾಕ್ಟ್ ಚೆಕ್ ರಿಪೋರ್ಟ್‌ಗಳನ್ನು ವರದಿ ಮಾಡುವ ಜವಾಬ್ದಾರಿಯನ್ನೂ ಹೊತ್ತುಕೊಂಡಿವೆ. ನಕಲಿ ಸುದ್ದಿಯ ಹಾವಳಿ ಸಣ್ಣ ವಿಚಾರದಂತೆ ಕಂಡರೂ ಅವರು ಓದುಗರ ಅಥವಾ ಗ್ರಾಹಕರ ಮನಸ್ಸಿನಲ್ಲಿ ಬಿತ್ತುವ ಅಪನಂಬಿಕೆ ಒಟ್ಟು ಉದ್ಯಮದ ಬೆಳವಣಿಗೆ ದೃಷ್ಟಿಯಿಂದ ಉತ್ತಮವೇನಲ್ಲ.

ಅಂತರ್ಜಾಲ ಸುದ್ದಿ ಮಾಧ್ಯಮಗಳು ಎದುರಿಸುತ್ತಿರುವ ಸವಾಲುಗಳನ್ನು ಹೀಗೆ ಪಟ್ಟಿ ಮಾಡಿದ ತಕ್ಷಣ ಪರಿಸ್ಥಿತಿಯು ಗಾಬರಿಬೀಳುವಂತಿದೆ ಎನ್ನುವಂತಿಲ್ಲ. ಎನ್‌ಡಿಟಿವಿ ನಡೆಸಿದ ಸಂದರ್ಶನದಲ್ಲಿ ಬರಹಗಾರ ಹಾಗೂ ಜಾಗತಿಕ ವಿಶ್ಲೇಷಕ ರುಚಿರ್ ಶರ್ಮಾ, ಮುಂದಿನ ದಶಕದಲ್ಲಿ ಜಗತ್ತು ಎತ್ತ ಸಾಗಬಹುದು ಎಂಬ ಅಂದಾಜನ್ನು ಮಾಡಿದ್ದಾರೆ. ಅವರ ಪ್ರಕಾರ ನಾಲ್ಕನೇ ಸ್ತಂಭ(4th estate) ಅದಾಗಲೇ ಕುಸಿದು ಬಿದ್ದಿದ್ದು, ಐದನೇ ಸ್ತಂಭವು ಮೇಲೇಳುತ್ತಿದೆ. ಅದುವೇ ಆನ್‌ಲೈನ್ ಮಾಧ್ಯಮದ ಬೆಳವಣಿಗೆ, ಸುದ್ದಿಯ ವಿಕೇಂದ್ರೀಕರಣವು ಅಗಾಧ ಪ್ರಮಾಣದಲ್ಲಿ ನಡೆಯುತ್ತಿದೆ. ಈಗಾಗಲೇ ೩೫ ವರ್ಷದೊಳಗಿನ ಯುವಜನತೆಯ ಪೈಕಿ ಶೇ ೫೦ರಷ್ಟು ಮಂದಿ ಆನ್‌ಲೈನ್ ಜಗತ್ತನ್ನು ಪ್ರವೇಶಿಸಿದ್ದಾಗಿದೆ. ಆದ್ದರಿಂದಲೇ ೨೦೦೦ನೇ ಇಸವಿಯಲ್ಲಿ ಶೇ ೮೦ರಷ್ಟು ಜನತೆ ಸುದ್ದಿಗಾಗಿ ಟೀವಿಯನ್ನು

ಅವಲಂಬಿಸಿದ್ದವರು ೨೦೧೯ರ ವೇಳೆಗೆ ಶೇ ೫೦ರಷ್ಟು ಜನರು ಮಾತ್ರ ಟೀವಿ ನೋಡುತ್ತಿದ್ದಾರೆ. ೨೦ ವರ್ಷದ ಹಿಂದೆ ಸುದ್ದಿಪತ್ರಿಕೆಯನ್ನು ಓದುತ್ತಿದ್ದ ಶೇ ೫೦ರಷ್ಟು ಜನರ ಪ್ರಮಾಣ ಈಗ ಶೇ ೧೫ಕ್ಕೆ ಇಳಿದಿದೆ.

ಈ ಎಲ್ಲ ಅಂಶಗಳನ್ನು ಗಮನಿಸಿದರೆ ದಿನಪತ್ರಿಕೆಗಳನ್ನು ಮಾದರಿಯಾಗಿಟ್ಟು ಕೊಂಡು ಆನ್‌ಲೈನ್ ಸುದ್ದಿ ವಿತರಣಾ ವ್ಯವಸ್ಥೆಯನ್ನು ರೂಪಿಸುವ ಬದಲಾಗಿ, ಅಂತರ್ಜಾಲ ಮಾಧ್ಯಮದ ಸ್ವಭಾವವನ್ನು ಅರಿತುಕೊಂಡು ಹೊಸ ವ್ಯವಸ್ಥೆಯನ್ನೇ (Business Model) ರೂಪಿಸಬೇಕಾದ ತುರ್ತು ಈಗ ಇದೆ. ಕೇವಲ ಅಕ್ಷರ ಮತ್ತು ಚಿತ್ರಗಳಿಗೆ ಸೀಮಿತವಾಗಿದ್ದ ವೆಬ್‌ಸೈಟ್‌ಗಳು ಇಂದು, ವಿಡಿಯೊ, ಆಡಿಯೊ, ಸಂವಾದ ಮುಂತಾಗಿ ಮಾಧ್ಯಮದ ಎಲ್ಲ ಆಯಾಮಗಳನ್ನು ಒಳಗೊಂಡಂತೆ ವಿಕಾಸ ಹೊಂದಿದೆ. ಡಿಜಿಟಲ್ ಯುಗ ಎನ್ನುವುದು ಕ್ಷಣ ಕ್ಷಣವೂ ವೇಗವಾಗಿ ಬದಲಾಗುತ್ತಿರುವುದರಿಂದ, ಒಂದು ಮಾದರಿಯನ್ನು ರೂಪಿಸಿಕೊಂಡು ಅದುವೇ ಶಾಶ್ವತ ಎಂದು ಸುಮ್ಮನಿರು ವಂತಿಲ್ಲ. ಬದಲಾವಣೆಯ ಜೊತೆಗೆ ಓಡುತ್ತಿರುವ ಶಕ್ತಿಯನ್ನೂ ಅಂತರ್ಜಾಲ ಮಾಧ್ಯಮ ಹೊಂದಿರಬೇಕಾಗುತ್ತದೆ.

ಡಿಜಿಟಲ್ ಯುಗ ಪ್ರವೇಶಿಸಿದಂತೆಯೇ ಇದೀಗ ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್)ಯು ಜಗತ್ತನ್ನು ಪ್ರವೇಶಿಸಲು ಸಿದ್ಧವಾಗಿದೆ. ನ್ಯಾನೋಟೆಕ್ನಾಲಜಿ ಜನರ ಬದುಕನ್ನು ಬದಲಾಯಿಸುವ ಉತ್ಸಾಹದಲ್ಲಿದೆ. ಜನರ ಜೀವನ ಶೈಲಿಯ ಮೇಲೆ ಇವೆಲ್ಲದರ ಪರಿಣಾಮವೂ ಆಗಲಿದೆ.

## ಸಾಮಾಜಿಕ ಜಾಲತಾಣ

**- ಸುಭಾಷ್ ಹೂಗಾರ್**

ನನಗಿಂತ ಮೊದಲು ಮಾತನಾಡಿರುವವರು ಮುದ್ರಣ ಮಾಧ್ಯಮ, ಎಲೆಕ್ಟ್ರಾನಿಕ್ ಮಾಧ್ಯಮ, ಇಂಟರ್ನೆಟ್ ಮಾಧ್ಯಮ ಹಾಗೂ ಈ ಎಲ್ಲಾ ಮಾಧ್ಯಮಗಳು ಇಂದು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಿವರವಾಗಿ ಬೆಳಕು ಚೆಲ್ಲಿದ್ದಾರೆ.

ನಾನು ಈಗ ನಮ್ಮ ನಿಮ್ಮೆಲ್ಲರ ಅಂದರೆ, ಜನ ಸಾಮಾನ್ಯರ ಮಾಧ್ಯಮ ಮತ್ತು ಭವಿಷ್ಯದ ಮಾಧ್ಯಮವಾದ ಸೋಷಿಯಲ್ ಮೀಡಿಯಾದ ಬಗ್ಗೆ ನನ್ನ ಕೆಲವು ವಿಚಾರಗಳನ್ನು ತಮ್ಮ ಜೊತೆ ಹಂಚಿಕೊಳ್ಳುತ್ತೇನೆ.

ಕಳೆದ ೧೦ ವರ್ಷಗಳಿಂದ ಈಚೆಗೆ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಕ್ಷೇತ್ರ ಅಪಾರವಾದ ಮತ್ತು ತ್ವರಿತವಾದ ಬೆಳವಣಿಗೆಯನ್ನು ಕಂಡಿದೆ. ಜಗತ್ತಿನ ಒಟ್ಟು ಜನಸಂಖ್ಯೆಯ ಸುಮಾರು ಶೇ.೪೫ ರಷ್ಟು ಜನ ಅಂದರೆ, ಸುಮಾರು ೩೫೦ ಕೋಟಿ ಜನ ಹಾಗೂ ಭಾರತದ ಸುಮಾರು ೪೦ ಕೋಟಿ ಜನ ಸಾಮಾಜಿಕ ಜಾಲತಾಣ ಬಳಸುತ್ತಾರೆ.

ತಮ್ಮ ಸ್ನೇಹಿತರು, ಬಂಧು ಬಾಂಧವರು, ಆತ್ಮೀಯರು ಮತ್ತು ಪರಿಚಿತರೊಂದಿಗೆ ದಿನನಿತ್ಯ ಸಂಪರ್ಕದಲ್ಲಿರಲು, ಜಗತ್ತಿನ ಆಗುಹೋಗುಗಳ ಬಗೆಗಿನ ಸುದ್ದಿ ತಿಳಿಯಲು ಮತ್ತು ಮನರಂಜನೆ ಹೊಂದಲು ಫೇಸ್‌ಬುಕ್, ಟ್ವಿಟರ್ ಮತ್ತು ಇನ್ಸಟಾಗ್ರಾಂ ಹಾಗೂ ಇನ್ನಿತರ ಸಾಮಾಜಿಕ ಜಾಲತಾಣಗಳ ವೇದಿಕೆಗಳನ್ನು ಅವಲಂಬಿಸಿದ್ದಾರೆ. ಹೀಗಾಗಿ ಈ ಸಾಮಾಜಿಕ ಜಾಲತಾಣಗಳ ವೇದಿಕೆಗಳು ಈಗ ನಮ್ಮ ಬದುಕಿನ ಅವಿಭಾಜ್ಯ ಅಂಗಗಳೇ ಆಗಿವೆ...

ಹಾಗಾದರೆ, ಸೋಷಿಯಲ್ ಮೀಡಿಯಾ ಅಂದರೇನು..?

ಅತ್ಯಂತ ಸರಳವಾಗಿ ಹೇಳುವುದಾದರೆ ಹಲವಾರು ಜನರು ಅಥವಾ ಬೇರೆ ಬೇರೆ ಸಮುದಾಯಗಳ ನಡುವಿನ ಸಂಪರ್ಕ ಸಾಧನವೇ ಸಾಮಾಜಿಕ ಜಾಲತಾಣ ಅಥವಾ ಸಾಮಾಜಿಕವಾಗಿ ಪರಸ್ಪರರ ಜೊತೆಗೆ ಸಂಪರ್ಕದಲ್ಲಿ ಇರಲು ಬಳಕೆಯಾಗುವ ಆನ್ಲೈನ್ ವೇದಿಕೆಯನ್ನು ಸಾಮಾಜಿಕ ಜಾಲತಾಣ ಎಂದು ಕರೆಯಬಹುದು.

ಸಾಂಪ್ರದಾಯಿಕ ಸಂವಹನ ಸಾಧನಗಳಾದ ದೂರವಾಣಿ, ಪತ್ರ ವ್ಯವಹಾರ ಮತ್ತು ಇಮೇಲ್ ಗಳ ಮೂಲಕ ಇಬ್ಬರು ವ್ಯಕ್ತಿಗಳು ಮಾತ್ರ ಸಂವಹನ ನಡೆಸಬಹುದಾಗಿತ್ತು. ಆದರೆ, ಈ ಸಾಮಾಜಿಕ ಜಾಲತಾಣಗಳ ಮೂಲಕ ಏಕಕಾಲಕ್ಕೆ ಒಬ್ಬರಿಗಿಂತ ಹೆಚ್ಚು ಜನರು ಮತ್ತು ಸಮುದಾಯಗಳೊಂದಿಗೆ ಸಂವಹನ ಮತ್ತು ಸಂವಾದ ಸಾಧ್ಯ. ಇದುವೇ ಸಾಮಾಜಿಕ ಜಾಲತಾಣಗಳ ವಿಶೇಷತೆ.

ಮೊಬೈಲ್ ತಂತ್ರಜ್ಞಾನದಲ್ಲಿ ಆಗಿರುವ ಅಗಾಧ ಬೆಳವಣಿಗೆ ಮತ್ತು ಸುಲಭ

ಇಂಟರ್ನೆಟ್ ಲಭ್ಯತೆಯು ಸಾಮಾಜಿಕ ಜಾಲತಾಣಗಳ ಪ್ರಭಾವ, ಮಹತ್ವ ಮತ್ತು ಜನಪ್ರಿಯತೆ ಹೆಚ್ಚಾಗುವುದಕ್ಕೆ ಪ್ರಮುಖ ಕಾರಣವಾಗಿವೆ.

ಜಗತ್ತಿನಾದ್ಯಂತ ಸಾಮಾಜಿಕ ಜಾಲತಾಣಗಳ ಬಳಕೆಗೆ ಜನರು ಮೊಬೈಲ್ ಮೇಲೆಯೇ ಅತಿ ಹೆಚ್ಚು ಅವಲಂಬಿತರಾಗಿದ್ದಾರೆ. ಇತ್ತೀಚಿನ ಅಧ್ಯಯನದ ಪ್ರಕಾರ ವಿಶ್ವದಾದ್ಯಂತ ಸಾಮಾಜಿಕ ಜಾಲತಾಣ ಬಳಸುವವರ ಪೈಕಿ ಶೇ. ೯೧ ರಷ್ಟು ಜನರು ಮೊಬೈಲ್ ನ್ನೇ ನೆಚ್ಚಿಕೊಂಡಿದ್ದಾರೆ.

ಇಂಟರ್ನೆಟ್ ಬಳಕೆದಾರರ ನಡುವೆ ಮೊಬೈಲ್ ಇಷ್ಟೊಂದು ಜನಪ್ರಿಯ ಆಗಿರುವುದಕ್ಕೆ ಪ್ರಮುಖ ಕಾರಣವೆಂದರೆ, ಕೇವಲ ಒಂದು ಬಟನ್ ಒತ್ತುವ ಮೂಲಕ ತಮಗೆ ಬೇಕಾದ ಮಾಹಿತಿಯನ್ನು ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಪಡೆಯಬಹುದು ಅಥವಾ ತಮಗೆ ಬೇಕಾದವರನ್ನು ಯಾವ ಜಾಗದಿಂದಾದರೂ ಸಂಪರ್ಕಿಸಬಹುದು. ಸೋಷಿಯಲ್ ಮೀಡಿಯಾ ಯುಗ ಆರಂಭವಾಗುವ ಮೊದಲು ಇದೆಲ್ಲಾ ಕನಸಿನ ಮಾತಾಗಿತ್ತು.

ಸೋಷಿಯಲ್ ಮೀಡಿಯಾ ಆರಂಭವಾಗಿದ್ದು ೧೯೯೭ ರಲ್ಲಿ. ಸಿಕ್ಸ್ ಡಿಗ್ರೀಸ್ (ಡಾಟ್) ಕಾಮ್ ಎಂಬ ವೆಬ್ಸೈಟ್ ಆಗ ಆರಂಭವಾಯಿತು. ಜನರು ಈ ವೆಬ್ಸೈಟ್ ಮೂಲಕ ತಮ್ಮ ಖಾಸಗಿ ಬದುಕಿನ ಭಾವಚಿತ್ರಗಳನ್ನು ಸಾರ್ವಜನಿಕವಾಗಿ ಹಂಚಿಕೊಳ್ಳಲು ಆರಂಭಿಸಿದರು. ಈ ಕಾರಣಕ್ಕಾಗಿ ಸಿಕ್ಸ್ ಡಿಗ್ರೀಸ್ (ಡಾಟ್) ಕಾಮ್ ನ್ನು ಜಗತ್ತಿನ ಮೊದಲ ಸಾಮಾಜಿಕ ಜಾಲತಾಣ ಎಂದು ಹೇಳಬಹುದು. ನಂತರ ಮೈ ಸ್ಪೇಸ್ ಮತ್ತು ಆರ್ಕುಟ್ ಎಂಬ ಸಾಮಾಜಿಕ ಜಾಲತಾಣ ವೇದಿಕೆಗಳೂ ಆರಂಭವಾದವು. ಆದರೆ, ಈ ವೇದಿಕೆಗಳು ಬಳಕೆದಾರರ ನಡುವೆ ನಿರೀಕ್ಷಿಸಿದಷ್ಟು ಜನಪ್ರಿಯತೆ ಹೊಂದಲಿಲ್ಲ.

೨೦೦೪ರಲ್ಲಿ ಹಾರ್ವರ್ಡ್್ರ ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿ ೨೧ ವರ್ಷದ ಮಾರ್ಕ್ ಝುಕರ್ಬರ್ಗ್್ರ ಫೇಸ್‌ಬುಕ್ ಹೆಸರಿನ ಸೋಷಿಯಲ್ ಮೀಡಿಯಾ ವೇದಿಕೆ ಆರಂಭಿಸಿದರು.

ಆರಂಭದಲ್ಲಿ ಹಾರ್ವರ್ಡ್್ರ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪರಸ್ಪರ ಸಂವಹನ ನಡೆಸುವುದಷ್ಟೇ ಫೇಸ್‌ಬುಕ್ ಉದ್ದೇಶವಾಗಿತ್ತು. ಆದರೆ, ಈ ವೇದಿಕೆ ಶೀಘ್ರ ಜನಪ್ರಿಯತೆ ಪಡೆದಿದ್ದರಿಂದ ಮರುವರ್ಷವೇ ಅದನ್ನು ಅಮೆರಿಕದ ಎಲ್ಲಾ ಪ್ರಮುಖ ವಿಶ್ವವಿದ್ಯಾಲಯಗಳಿಗೆ ವಿಸ್ತರಿಸಲಾಯಿತು ಹಾಗೂ ೨೦೦೬ ರಲ್ಲಿ ಇಡೀ ಜಗತ್ತಿಗೆ ಫೇಸ್‌ಬುಕ್ ಪರಿಚಯಿಸಲಾಯಿತು.

ಅಲ್ಲಿಂದ ಇಲ್ಲಿಯವರೆಗೆ ಫೇಸ್‌ಬುಕ್ ಸಾಮಾಜಿಕ ಜಾಲತಾಣದ ಅತ್ಯಂತ ಜನಪ್ರಿಯ ವೇದಿಕೆ ಎಂಬ ಗರಿಮೆ ಹೊಂದಿದ್ದು, ಪ್ರತಿ ತಿಂಗಳು ಸರಾಸರಿ ೨೩೫ ಕೋಟಿಗೂ ಅಧಿಕ ಜನ ಫೇಸ್‌ಬುಕ್ ಬಳಕೆ ಮಾಡುತ್ತಾರೆ. ವಿಶ್ವದಲ್ಲಿ

ಸಾಮಾಜಿಕ ಜಾಲತಾಣದ ಎರಡನೇ ಅತಿ ದೊಡ್ಡ ವೇದಿಕೆ ಎನಿಸಿರುವ ಟ್ವಿಟರ್ ಕೂಡ ೨೦೦೬ರಲ್ಲೇ ಆರಂಭವಾಯಿತು.

ಪ್ರಸ್ತುತ ಸಂದರ್ಭದಲ್ಲಿ ಜಗತ್ತಿನ ಪ್ರತಿಯೊಂದು ಬೆಳವಣಿಗೆಯ ಮೇಲೂ ಸಾಮಾಜಿಕ ಜಾಲತಾಣದ ಪ್ರಭಾವ ಗಾಢವಾಗಿದೆ. ಉದ್ಯಮ, ಶಿಕ್ಷಣ, ಆರೋಗ್ಯ,



ರಾಜಕೀಯ, ಕ್ರೀಡೆ, ಪರಿಸರ ಹೀಗೆ ಯಾವುದೇ ಕ್ಷೇತ್ರ ಇಂದು ಸಾಮಾಜಿಕ ಜಾಲತಾಣದ ಪ್ರಭಾವದಿಂದ ಹೊರತಾಗಿಲ್ಲ. ಪ್ರತಿಭಟನೆಗಳು ಮತ್ತು ಸಾಮಾಜಿಕ ಚಳವಳಿಗಳೂ ಡಿಜಿಟಲ್ ಸ್ವರೂಪ ಪಡೆದುಕೊಂಡಿವೆ.

ಸಾಮಾಜಿಕ ಜಾಲತಾಣಗಳಿಂದ ಆಗಿರುವ ಬಹುದೊಡ್ಡ ಲಾಭವೆಂದರೆ, ಬಳಕೆದಾರರು ಇಲ್ಲಿ ತಾವೇ ವಿಷಯ ಪ್ರಸ್ತಾಪಿಸಬಹುದು ಮತ್ತು ಅದರ ಪ್ರಸಾರ, ಪ್ರಚಾರವನ್ನೂ ಮಾಡಬಹುದು. ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳ ಸಂದರ್ಭದಲ್ಲಿ ಮಾಹಿತಿಯ ಹರಿವು ಏಕಮುಖವಾಗಿತ್ತು. ಸಾಮಾನ್ಯ ಓದುಗರು ಅಥವಾ ವೀಕ್ಷಕರು ಪತ್ರಿಕೆಗಳು ಮತ್ತು ಟಿವಿಗಳು ಒದಗಿಸುವ ಸುದ್ದಿ, ಮಾಹಿತಿಯನ್ನು ಕೇವಲ ತಿಳಿಯಬಹುದಾಗಿತ್ತು. ಆದರೆ, ತಮ್ಮ ಅಭಿಪ್ರಾಯ, ವಿಚಾರಗಳನ್ನು ಸುದ್ದಿ ಮಾಧ್ಯಮಗಳಿಗಾಗಲೀ ಹೊರ ಜಗತ್ತಿಗಾಗಲೀ ತಿಳಿಸಲು ಸಾಧ್ಯವಿರಲಿಲ್ಲ.

ಆದರೆ, ಫೇಸ್‌ಬುಕ್ ಮತ್ತು ಟ್ವಿಟರ್ ನಂಥ ಸಾಮಾಜಿಕ ಜಾಲತಾಣ ವೇದಿಕೆಗಳು ಅಸ್ತಿತ್ವಕ್ಕೆ ಬಂದ ನಂತರ ಜನ ಸಾಮಾನ್ಯರು ಮತ್ತು ಸಮಾಜದ ಕಟ್ಟ ಕಡೆಗೆ ನಿಂತ ವ್ಯಕ್ತಿಯೂ ಸಹ ತನ್ನ ಅಭಿಪ್ರಾಯವನ್ನು ಸಾರ್ವಜನಿಕವಾಗಿ ಹಂಚಿಕೊಳ್ಳಲು ಹಾಗೂ ಪ್ರಭುತ್ವದ ಮೇಲೆ ಪ್ರಭಾವ ಬೀರುವುದು ಸಾಧ್ಯವಾಗಿದೆ. ಕೈಯಲ್ಲಿ ಸ್ಮಾರ್ಟ್ ಫೋನ್ ಮತ್ತು ಇಂಟರ್ನೆಟ್ ಇದ್ದರೆ ಸಾಕು, ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬರೂ ಸಕ್ರಿಯವಾಗಿ ಪಾಲ್ಗೊಳ್ಳುವುದು ಈಗ ಸಾಧ್ಯವಿದೆ. ಪ್ರಜಾಪ್ರಭುತ್ವದ ಬೇರುಗಳು ಗಟ್ಟಿಗೊಳ್ಳಲು ಈ ಬೆಳವಣಿಗೆ ಸಹಕಾರಿಯಾಯಿತು.

ಹೀಗೆ, ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಅಭಿಪ್ರಾಯ, ವಿಚಾರ ಮಂಡಿಸುವುದಕ್ಕೆ ಶಕ್ತಿಶಾಲಿ ಸಾಧನವೊಂದು ದೊರೆತ ಪರಿಣಾಮವಾಗಿ ಜಗತ್ತಿನಲ್ಲಿ ಕ್ಷಿಪ್ರ ಬದಲಾವಣೆಗಳಿಗೆ ನಾಂದಿಯಾಯಿತು. ಇದಕ್ಕೆ ಅತ್ಯುತ್ತಮ ಉದಾಹರಣೆ ಅರಬ್ ಕ್ರಾಂತಿ ಇದನ್ನು ಫೇಸ್‌ಬುಕ್ ಕ್ರಾಂತಿ ಎಂದೂ ಕರೆಯಲಾಗುತ್ತದೆ.

ಮಧ್ಯಪ್ರಾಚ್ಯ ಮತ್ತು ಉತ್ತರ ಆಫ್ರಿಕಾದ ದೇಶಗಳ ಸರ್ವಾಧಿಕಾರಿ ಆಡಳಿತಗಾರರ ವಿರುದ್ಧ ಅಲ್ಲಿನ ಜನ ನಡೆಸಿದ ಸರಣಿ ಪ್ರತಿಭಟನೆ, ಹೋರಾಟಗಳನ್ನೇ ಅರಬ್ ಕ್ರಾಂತಿ ಎಂದು ಕರೆಯಲಾಗಿದೆ. ಸರ್ವಾಧಿಕಾರಿ ಆಡಳಿತಗಳನ್ನು ಕೊನೆಗೊಳಿಸಿ ಈ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಜಾರಿಗೊಳಿಸಲು ಕಾರಣವಾದ ಈ ಹೋರಾಟಗಳು

ಜಗತ್ತಿನ ಇತಿಹಾಸದಲ್ಲಿ ಅಚ್ಚಳಿಯದ ದಾಖಲೆಗಳು. ಇದಕ್ಕೆ ಕಾರಣವಾಗಿದ್ದು, ಫೇಸ್‌ಬುಕ್ ನಂತಹ ಸಾಮಾಜಿಕ ಜಾಲತಾಣ.

೨೦೧೦ ಡಿಸೆಂಬರ್ 02 ರಂದು ಉತ್ತರ ಆಫ್ರಿಕಾದ ದೇಶವಾದ ಟ್ಯೂನಿಷಿಯಾದಲ್ಲಿ ತರಕಾರಿ ವ್ಯಾಪಾರಿಯೊಬ್ಬ ಆ ದೇಶದ ರಾಷ್ಟ್ರಾಧ್ಯಕ್ಷ, ಸರ್ವಾಧಿಕಾರಿ ಬೆನ್ ಆಲಿಯ ದೌರ್ಜ, ಶೋಷಣೆ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಲು ಜನನಿಬಿಡ ಮಾರ್ಕೆಟ್ ನಡುವೆಯೇ ಆತ್ಮಾಹುತಿಗೆ ಪ್ರಯತ್ನಿಸಿದ. ಹಲವಾರು ವರ್ಷಗಳಿಂದ ಬೆನ್ ಆಲಿಯ ಆಡಳಿತದ ಜನವಿರೋಧಿ ನೀತಿಗಳಿಂದ ರೋಸಿ ಹೋಗಿ ತರಕಾರಿ ವ್ಯಾಪಾರಿ ಈ ಉಗ್ರ ಪ್ರತಿಭಟನೆಗೆ ಮುಂದಾಗಿದ್ದ, ತರಕಾರಿ ವ್ಯಾಪಾರಿಯ ಈ ಆತ್ಮಾಹುತಿ ಪ್ರಯತ್ನದ ವೀಡಿಯೋ ಇಡೀ ದೇಶದಲ್ಲಿ ವೈರಲ್ ಆಯಿತು. ಈ ಘಟನೆ ಟ್ಯೂನಿಷಿಯಾದಲ್ಲಿ ಜನರ



ನಡುವೆ ಚರ್ಚೆಯ ದೊಡ್ಡ ವಿಷಯವಾಯಿತು. ಕ್ರೂರಿ ಬೆನ್ ಆಲಿಯ ದೌರ್ಜನ್ಯ, ಶೋಷಣೆ, ಜನವಿರೋಧಿ ನೀತಿಗಳ ವಿರುದ್ಧ ದೇಶಾದ್ಯಂತ ಜನರ ದನಿ ಗಟ್ಟಿಯಾಗತೊಡಗಿತು. ಆ ಜನದನಿ ದೇಶದ ಹೊರಗೂ ಕೇಳಲಾರಂಭಸಿತು. ಇಡೀ ಜಗತ್ತು ಸಹ ಗಮನವೂ ಟ್ಯೂನಿಷಿಯಾದ ಬೆಳವಣಿಗೆಗಳನ್ನು ಗಮನಿಸತೊಡಗಿತು.

ಟ್ಯೂನಿಷಿಯಾದ ಸಾಂಪ್ರದಾಯಿಕ ಮಾಧ್ಯಮಗಳು ಸಂಪೂರ್ಣವಾಗಿ ಬೆನ್ ಆಲಿಯ ಹಿಡಿತದಲ್ಲಿದ್ದವು. ಪ್ರಭುತ್ವದ ವಿರುದ್ಧ ವರದಿ ಮಾಡುವುದು ಅಲ್ಲಿ ಅಸಾಧ್ಯವೇ ಆಗಿತ್ತು.

ಆದರೆ, ಸೋಷಿಯಲ್ ಮೀಡಿಯಾದ ಮೇಲೆ ಯಾರ ನಿಯಂತ್ರಣವೂ ಇರಲಿಲ್ಲ. ಬೆನ್ ಆಲಿ ದುರಾಡಳಿತದ ವಿರುದ್ಧದ ಪ್ರತಿಭಟನೆಯ ಸುದ್ದಿಗಳನ್ನು ಜನರಿಗೆ ತಲುಪಿಸಲು ಫೇಸ್‌ಬುಕ್, ಟ್ವಿಟರ್ ಬಳಸಿಕೊಳ್ಳಲಾಯಿತು. ದಿನೇ ದಿನೇ ಪ್ರತಿಭಟನೆಗಳ ಸಂಖ್ಯೆ ಮತ್ತು ತೀವ್ರತೆ ಹೆಚ್ಚುತ್ತಲೇ ಹೋಯಿತು.

ಹಲವು ತಿಂಗಳುಗಳ ನಿರಂತರ ಹೋರಾಟದ ಪರಿಣಾಮವಾಗಿ ೨೪ ವರ್ಷಗಳ ಕಾಲ ನಿರಂಕುಶ ಪ್ರಭುವಾಗಿ ಮೆರೆದಿದ್ದ ಬೆನ್ ಆಲಿಯ ಆಡಳಿತ ಕೊನೆಗೊಂಡು ಟ್ಯೂನಿಷಿಯಾದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಗೆ ಸಾಧ್ಯವಾಯಿತು.

ಫೇಸ್‌ಬುಕ್, ಟ್ವಿಟರ್ ನೆರವಿನಿಂದ ಟ್ಯೂನಿಷಿಯಾದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾದ ನಂತರ ಈ ಕ್ರಾಂತಿಯ ಕಿಡಿ ಇತರ ದೇಶಗಳಿಗೂ ಹಬ್ಬಿತು. ಹಲವು ರಾಷ್ಟ್ರಗಳಲ್ಲಿ ಸರ್ವಾಧಿಕಾರ ಅಂತ್ಯವಾಗಿ ಪ್ರಜೆಗಳ ಪ್ರಭುತ್ವ ಸ್ಥಾಪನೆಗೆ ಕಾರಣವಾಯಿತು. ಈ ಅರಬ್ ಕ್ರಾಂತಿ ಇಷ್ಟಕ್ಕೇ ನಿಲ್ಲಲಿಲ್ಲ.

ಜೋರ್ಡಾನ್ ದೇಶದ ಅರಸ ಎರಡನೇಯ ಅಬ್ದುಲ್ಲಾ, ಈಜಿಪ್ಟಿನ ಸರ್ವಾಧಿಕಾರಿ ಹೋಸ್ನಿ ಮುಬಾರಕ್ ಮತ್ತು ಲಿಬಿಯಾದ ನಿರಂಕುಶವಾದ ಅಧ್ಯಕ್ಷ ಮುಅಮ್ಮರ್ ಗಡಾಫಿ ಆಡಳಿತಗಳೂ ಸಹ ಜನಾಕ್ರೋಶಕ್ಕೆ ಬಲಿಯಾದವು. ಈ ದೇಶಗಳಲ್ಲೂ ಸರ್ವಾಧಿಕಾರ ಕೊನೆಗೊಂಡು ಪ್ರಜೆಗಳೇ ಆಯ್ಕೆ ಮಾಡಿದ ಸರಕಾರಗಳು ಅಸ್ತಿತ್ವಕ್ಕೆ ಬಂದವು. ಸಾಮಾಜಿಕ ಜಾಲತಾಣಗಳು ಹೊತ್ತಿಸಿದ ಹೋರಾಟದ ಈ ಕಿಡಿ ಇನ್ನೂ ಹಲವು ರಾಷ್ಟ್ರಗಳಲ್ಲಿ ಈಗಲೂ ಮುಂದುವರೆದಿದೆ.

ಪ್ರಭುತ್ವದ ನಿಯಂತ್ರಣದಲ್ಲಿರುವ ಸಾಂಪ್ರದಾಯಿಕ ಮಾಧ್ಯಮಗಳಿಂದ ಇಂಥದೊಂದು ಕ್ರಾಂತಿ ಸಾಧ್ಯವೇ ಇರಲಿಲ್ಲ. ಇದೆಲ್ಲವೂ ಸಾಧ್ಯವಾಗಿದ್ದು ಜನರ ಕೈಗೆ ಸಿಕ್ಕಿರುವ ಸೋಷಿಯಲ್ ಮೀಡಿಯಾ ಎಂಬ ಪ್ರಬಲ ಅಸ್ತ್ರದಿಂದಾಗಿಯೇ ಎಂಬುದು ನೂರಕ್ಕೆ ನೂರರಷ್ಟು ದಿಟ. ಅದೇ ಕಾರಣಕ್ಕೆ ಸೋಷಿಯಲ್ ಮೀಡಿಯಾ ಅನ್ನು ಜನರ ಮಾಧ್ಯಮ ಎಂದೂ ಕರೆಯಲಾಗುತ್ತಿದೆ.

ಆದರೆ, ಇತರ ಎಲ್ಲಾ ಮಾಧ್ಯಮಗಳಿಗೆ ಇರುವಂತೆ ಸೋಷಿಯಲ್ ಮೀಡಿಯಾಕ್ಕೂ ತನ್ನದೇ ಆದ ಕೆಲ ಅನಾನುಕೂಲಗಳೂ ಇವೆ.

ಮಾಹಿತಿಯನ್ನು ಸೃಜಿಸುವ ಅಧಿಕಾರ ಜನರ ಕೈಗೆ ಸಿಕ್ಕಾಗ ಅದರಿಂದ ಕೆಲವು ಅನಾನುಕೂಲ ಹಾಗೂ ಅನಾಹುತಗಳೂ ಸಹಜವೇ ಆಗಿದ್ದವು. ಫೇಕ್ ನ್ಯೂಸ್ ಅಥವಾ



ಸುಳ್ಳು ಸುದ್ದಿ ಸೋಷಿಯಲ್ ಮೀಡಿಯಾದಿಂದ ಆಗುವ ಅನಾಹುತಕ್ಕೆ ಅತ್ಯುತ್ತಮ ಉದಾಹರಣೆ, ಸಾಮಾಜಿಕ ಜಾಲತಾಣಗಳಲ್ಲಿ ಕ್ಷಣಕ್ಷಣಕ್ಕೂ ನಾವು ನೋಡುವ ಸುದ್ದಿ ಅಥವಾ ಪಡೆಯುವ ಮಾಹಿತಿಯ ಸಿಂಹಪಾಲು ಫೇಕ್ ನ್ಯೂಸ್ ಆಗಿರುತ್ತದೆ ಇದು ಎಂಬುದು ಖಂಡಿತ ಸುಳ್ಳಲ್ಲ.

ಸೋಷಿಯಲ್ ಮೀಡಿಯಾ ಬಳಕೆದಾರರಿಗೆ ತಪ್ಪು ಮಾಹಿತಿ ನೀಡಲು, ಅವರಿಗೆ ಮೋಸ ವಂಚನೆ ಮಾಡಲು ಅಥವಾ ಕೆಲವು ನಿರ್ದಿಷ್ಟ ಗುಂಪು, ಸಮುದಾಯ, ರಾಜಕೀಯ ಪಕ್ಷಗಳು, ಸೈದ್ಧಾಂತಿಕ ಸಂಘಟನೆಗಳು ತಮ್ಮ ರಾಜಕೀಯ, ಸಾಮಾಜಿಕ ಮತ್ತು ವ್ಯಾಪಾರಿ ಅಜೆಂಡಾಗಳನ್ನು ಜಾರಿಗೊಳಿಸಲು ಇಂತಹ ಫೇಕ್ ನ್ಯೂಸ್ ಗಳನ್ನು ಉದ್ದೇಶಪೂರ್ವಕವಾಗಿಯೇ ಸೃಷ್ಟಿಸಿ ಅವುಗಳು ವೈರಲ್ ಆಗುವಂತೆ ನೋಡಿಕೊಳ್ಳುತ್ತವೆ.

ಇಂಥ ಫೇಕ್ ನ್ಯೂಸ್ ಜನರ ಅಭಿಪ್ರಾಯ ರೂಪಿಸಲು ಮತ್ತು ನೀತಿ, ನಿಲುವು, ಒಲವುಗಳನ್ನು ಪ್ರಭಾವಿಸಲು ಕಾರಣವಾಗುತ್ತವೆ. ಇಂಥ ಫೇಕ್ ನ್ಯೂಸ್ ವ್ಯವಹಾರದಲ್ಲಿ ತೊಡಗಿರುವವರು ತಮ್ಮ ರಾಜಕೀಯ ಅಥವಾ ರಾಜಕೀಯೇತರ ಅಜೆಂಡಾ ಜಾರಿಗೊಳಿಸುವುದಲ್ಲದೇ ಆರ್ಥಿಕ ಲಾಭವನ್ನೂ ಪಡೆಯುತ್ತಾರೆ.

ಸತ್ಯದ ತಲೆ ಮೇಲೆ ಹೊಡೆದಂತೆ ಸುಳ್ಳು ಸುದ್ದಿಗಳನ್ನು ಹಬ್ಬಿಸುವುದು, ವಿಶ್ವಾಸಾರ್ಹ ಸಂಸ್ಥೆಗಳು ಮತ್ತು ವ್ಯಕ್ತಿಗಳ ಸೋಷಿಯಲ್ ಮೀಡಿಯಾ ಖಾತೆಗಳನ್ನೇ ಹೋಲುವಂತಹ ಖಾತೆಗಳನ್ನು ತೆರೆದು ತಪ್ಪು ಮತ್ತು ಸುಳ್ಳು ಸುದ್ದಿಗಳನ್ನು ವ್ಯವಸ್ಥಿತವಾಗಿ ಹರಡುವುದು ಚಾಲ್ತಿಯಲ್ಲಿರುವ ಕೆಟ್ಟ ಪದ್ಧತಿ, ಪ್ರಸ್ತುತ ಸಂದರ್ಭದಲ್ಲಿ ನಮ್ಮ ದೇಶದ ಹಾಗೂ ಜಾಗತಿಕ ರಾಜಕೀಯ ವ್ಯವಸ್ಥೆ ಮೇಲೆ ಈ ಫೇಕ್ ನ್ಯೂಸ್ ಬೀರುತ್ತಿರುವ ಪ್ರಭಾವದ ಬಗ್ಗೆ ವ್ಯಾಪಕ ಚರ್ಚೆಗಳು ನಡೆದಿವೆ.

ಫೇಕ್ ನ್ಯೂಸ್ ಪದ ಬಳಕೆ ಇತ್ತೀಚಿನ ವರ್ಷಗಳಲ್ಲಿ ಎಷ್ಟೊಂದು ಹೆಚ್ಚಾಗಿದೆಯೆಂದರೆ ೨೦೧೭ ರಲ್ಲಿ ಸೋಷಿಯಲ್ ಮೀಡಿಯಾದಲ್ಲಿ ಈ ಪದದ ಬಳಕೆ ಶೇ. ೩೬೫ ರಷ್ಟು ಹೆಚ್ಚಾಗಿತ್ತು. ಕಾಲಿನ್ ಡಿಕ್ಷನರಿ ಈ ಪದವನ್ನು ೨೦೧೭ರ ವರ್ಷದ ಪದ ಎಂದೂ ಘೋಷಣೆ ಮಾಡಿತ್ತು.

ಈ ಫೇಕ್ ನ್ಯೂಸ್ ಎಂಬ ಹೆಮ್ಮಾರಿಯನ್ನು ಸೆದೆಬಡಿಯುವುದು ಅಸಾಧ್ಯವೇನಲ್ಲ. ಸೋಷಿಯಲ್ ಮೀಡಿಯಾ ಬಳಕೆದಾರರು ಜವಾಬ್ದಾರಿಯಿಂದ ವರ್ತಿಸಿದರೆ ಅದು ಖಂಡಿತ ಸಾಧ್ಯ. ಫೇಕ್ ನ್ಯೂಸ್ ಪತ್ತೆ ಹಚ್ಚುವ ಪ್ರಪ್ರಥಮ ಹೆಜ್ಜೆಯೆಂದರೆ, ಸೋಷಿಯಲ್ ಮೀಡಿಯಾದಲ್ಲಿ ಬರುವ ಪ್ರತಿಯೊಂದು ವಿಷಯ ನಂಬುವುದನ್ನು ಬಳಕೆದಾರರು ಮೊದಲು ನಿಲ್ಲಿಸಬೇಕು. ಪ್ರತಿಯೊಬ್ಬರಿಗೂ ಮಾಹಿತಿ ಸೃಜಿಸುವ ಅವಕಾಶ ಹಾಗೂ ಅಧಿಕಾರ ಇರುವುದರಿಂದ ಈ ಮಾಧ್ಯಮದಲ್ಲಿ ಬರುವ ಮಾಹಿತಿ ಸಹಜವಾಗಿಯೇ ಪ್ರಶ್ನಾರ್ಹವಾಗಿರುತ್ತದೆ ಎಂಬುದನ್ನು ಮನಗಾಣಬೇಕು.

ಸೋಷಿಯಲ್ ಮೀಡಿಯಾದಲ್ಲಿ ಬರುವ ಸುದ್ದಿ ಮತ್ತು ಮಾಹಿತಿಗಳು ಸರಿಯೋ ತಪ್ಪೋ ಎಂಬುದನ್ನು ಖಚಿತಪಡಿಸಿಕೊಳ್ಳುವ ಅಭ್ಯಾಸವನ್ನು ರೂಢಿಸಿಕೊಳ್ಳುವ ಮೂಲಕ ಫೇಕ್ ನ್ಯೂಸ್ ತಡೆಗಟ್ಟಬಹುದು. ಸಾಮಾನ್ಯವಾಗಿ ಜನರು ಸಾಮಾಜಿಕವಾಗಿ, ರಾಜಕೀಯವಾಗಿ ತಮಗೆ ಇಷ್ಟವಾಗುವ, ಅನುಕೂಲವಾಗುವ ಅಥವಾ ಲಾಭವಾಗುವ

ಸಂಗತಿಗಳ ಸತ್ಯಾಸತ್ಯತೆ ಪರೀಕ್ಷಿಸದೇ ಅದನ್ನು ಒಪ್ಪಿಕೊಳ್ಳುತ್ತಾರೆ. ಹಿಂದೆ ಮುಂದೆ ಯೋಚಿಸದೇ ಅಂಥದನ್ನು ಫಾರ್ವರ್ಡ್‌ರ ಮಾಡುವ ಮೂಲಕ ಫೇಕ್ ನ್ಯೂಸ್ ಹರಡುವುದರಲ್ಲಿ ತಮಗೆ ಅರಿವಿಲ್ಲದಂತೆಯೇ ಭಾಗಿಯಾಗುತ್ತಾರೆ. ನಮ್ಮ ಅಭಿಪ್ರಾಯ ಮತ್ತು ನಂಬಿಕೆಗಳು ತೀರ್ಪು ತೆಗೆದುಕೊಳ್ಳುವ ನಮ್ಮ ಸಾಮರ್ಥ್ಯದ ಮೇಲೆ ಪ್ರಭಾವ ಬೀರದಂತೆ ನಾವು ಎಚ್ಚರಿಕೆ ವಹಿಸಬೇಕು.

ಈ ಸುದ್ದಿ ಅಥವಾ ಮಾಹಿತಿಯನ್ನು ಪ್ರಕಟಿಸಿರುವ ವೆಬ್ಸೈಟ್ ನಮಗೆ ಪರಿಚಿತವೇ? ಮಾಹಿತಿಯ ಮೂಲ ನಂಬಲರ್ಹವೇ ಎಂಬುದನ್ನು ತಿಳಿದುಕೊಳ್ಳಬೇಕು. ತಮಗೆ ಪರಿಚಿತವಲ್ಲದ ವೆಬ್ಸೈಟ್ ಆಗಿದ್ದರೆ ಅದರ ಅಬೌಟ್ ಸೆಕ್ಷನ್ ಗೆ ಹೋಗಿ ಇನ್ನಷ್ಟು ವಿವರ ತಿಳಿಯಬೇಕು. ಇಲ್ಲವೇ ಆ ಬರಹಗಾರರ ಬಗೆಗೆ ಹೆಚ್ಚಿನ ಮಾಹಿತಿ ಕಲೆ ಹಾಕಬೇಕು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಸೋಷಿಯಲ್ ಮೀಡಿಯಾದಲ್ಲಿ ಬರುವುದೆಲ್ಲವನ್ನೂ ನಂಬದೇ ಆ ಮಾಹಿತಿಯ ಸಾಚಾತನ ಖಚಿತಪಡಿಸಿಕೊಳ್ಳಬೇಕು. ಅದು ನಂಬಿಕೆಗೆ ಯೋಗ್ಯವಲ್ಲದ ಸುದ್ದಿ, ಮಾಹಿತಿ ಆಗಿದ್ದರೆ ಯಾವುದೇ ಕಾರಣಕ್ಕೂ ಅದನ್ನು ಬೇರೆಯವರಿಗೆ ಫಾರ್ವರ್ಡ್‌ರ ಮಾಡಬಾರದು ಮತ್ತು ತಪ್ಪದೇ 'ಇದು ಸುಳ್ಳು ಸುದ್ದಿ' ಎಂದು ಕಾಮೆಂಟ್ ಮಾಡಬೇಕು.

ಕೊನೆಯದಾಗಿ, ಇತರ ಎಲ್ಲಾ ಸಂಶೋಧನೆಗಳಂತೆ ಸೋಷಿಯಲ್ ಮೀಡಿಯಾ ಕೂಡ ಎಂಬುದನ್ನು ಮರೆಯಬಾರದು. ಇದು ನೈತಿಕವಾಗಿ ಸರಿಯಾದದ್ದು ಎಂದು ಹೇಳಲಾಗದು. ಈ ಮಾಧ್ಯಮವನ್ನೂ ಸಹ ಒಳ್ಳೆಯ ಅಥವಾ ಕೆಟ್ಟ ಉದ್ದೇಶಗಳೆರಡಕ್ಕೂ ಬಳಸಬಹುದು. ಸಮಾಜದ ಜವಾಬ್ದಾರಿಯುತ ಪ್ರಜೆಯಾಗಿ ಮತ್ತು ಸೋಷಿಯಲ್ ಮೀಡಿಯಾದ ಜವಾಬ್ದಾರಿಯುತ ಬಳಕೆದಾರರಾಗಿ ಒಳ್ಳೆಯ ಉದ್ದೇಶಕ್ಕೆ ಮಾತ್ರ ಇದನ್ನು ಬಳಸುವುದು ಮತ್ತು ಸುಳ್ಳು ಹಾಗೂ ತಪ್ಪು ಮಾಹಿತಿ ಹರಡದಂತೆ ತಡೆಯುವುದು ನಮ್ಮೆಲ್ಲರ ಕರ್ತವ್ಯ...

# ಕನ್ನಡ ಭಾಷೆ : ಹೊಸ ತಂತ್ರಜ್ಞಾನ

# ಸಾಹಿತ್ಯ ಮತ್ತು ತಂತ್ರಜ್ಞಾನ

**- ಐ.ಜಿ. ಶ್ರೀನಿಧಿ**

ಸಾಹಿತ್ಯ ಮತ್ತು ತಂತ್ರಜ್ಞಾನ ಎನ್ನುವ ಶೀರ್ಷಿಕೆ, ಕೇಳಲು ಸ್ವಲ್ಪ ವಿಚಿತ್ರ ಅನ್ನಿಸಬಹುದು. ಸೌತ್ ಇಂಡಿಯನ್ ಊಟ ಮತ್ತು ಫ್ರೆಂಚ್ ಫ್ರೈಸ್ ಅಂದಹಾಗೆ ಅದರೆ ವಾಸ್ತವ ಅಷ್ಟು ವಿಚಿತ್ರವೇನಲ್ಲ. ಅದೇ ಆಲೂಗೆಡ್ಡೆಯ ಉಪ್ಪೇರಿ ನಮ್ಮ ಬಿಸಿಬೇಳೆಬಾತ್ ಜೊತೆಗೆ ಎಷ್ಟು ಚೆನ್ನಾಗಿ ಹೊಂದಿಕೊಳ್ಳುತ್ತದೋ ಸಾಹಿತ್ಯ-ತಂತ್ರಜ್ಞಾನಗಳೂ ಅಷ್ಟೇ ಚೆನ್ನಾಗಿ ಜೊತೆಯಾಗಬಲ್ಲವು

ತಂತ್ರಜ್ಞಾನ ಕ್ಷೇತ್ರದಲ್ಲಿರುವವರು ಹೀಗೆ ಏನು ಬೇಕಾದರೂ ಹೇಳಬಹುದು, ಆದರೆ ತಂತ್ರಜ್ಞಾನದ ಬಗ್ಗೆ ಸಾಮಾನ್ಯ ಅಭಿಪ್ರಾಯ ಯಾವಾಗಲೂ ಅನುಕೂಲಕರವಾಗಿರಬೇಕು ಎಂದೇನೂ ಇಲ್ಲ.

ಸದ್ಯ ಪ್ರಚಲಿತದಲ್ಲಿರುವ ಎಐ, ಆಟೋಮೇಶನ್ ಮುಂತಾದ ಪರಿಕಲ್ಪನೆಗಳ ಉದಾಹರಣೆಯನ್ನೇ ನೋಡಿ. ಅದರನುಕೂಲಗಳನ್ನು ಈಗಾಗಲೇ ಪಡೆದುಕೊಳ್ಳುತ್ತಿರುವವರೂ ಸೇರಿದಂತೆ ಬಹಳಷ್ಟು ಮಂದಿ ಅವೆಲ್ಲ ಕೆಟ್ಟದು ಎಂದೇ ಸಾರಾಸಗಟಾಗಿ ತೀರ್ಪು ಕೊಡುತ್ತಾರೆ.

ಇದು ಇವತ್ತಿನ ಸಂಗತಿ ಮಾತ್ರವೇನಲ್ಲ, ಎರಡು ಶತಮಾನಗಳ ಹಿಂದೆಯೂ ಇಂಥದ್ದೇ ಸನ್ನಿವೇಶ ಇತ್ತು. ಮಗ್ಗದಲ್ಲಿ ಬಟ್ಟೆ ನೇಯುವಾಗ ಸಂಕೀರ್ಣ ವಿನ್ಯಾಸಗಳನ್ನು ಸುಲಭವಾಗಿ ರೂಪಿಸಲು ನೆರವಾಗುವ ತಂತ್ರಜ್ಞಾನ ರೂಪಿಸಿದ ಜೋಸೆಫ್ ಜಕಾರ್ಡ್ ಎಂಬ ವ್ಯಕ್ತಿಯ ಮೇಲೆ ಹಲ್ಲೆ ನಡೆಸಲು ಹೋಗುವ ಮಟ್ಟದ ಆಕ್ರೋಶ ವ್ಯಕ್ತವಾಗಿತ್ತು. ಆದರೆ ಈಗ ಕಂಪ್ಯೂಟರ್ ಪ್ರೋಗ್ರಾಮಿಂಗ್ ಕ್ಷೇತ್ರಕ್ಕೆ ಬುನಾದಿ ಹಾಕಿದ ವ್ಯಕ್ತಿ ಎಂದು ನಾವು ಆತನನ್ನು ಗೌರವಿಸುತ್ತೇವೆ.

ವಿರೋಧಿಸುವುದೇ ತಪ್ಪು ಎಂದು ನಾನು ಹೇಳುತ್ತಿಲ್ಲ, ಉದಾಹರಣೆಗೆ, ಟೀವಿ ಬಂದಾಗ ಅದು ಓದುವ ಅಭ್ಯಾಸವನ್ನು ಹಾಳುಮಾಡುತ್ತಿದೆ ಎಂಬ ಆರೋಪ ಬಹಳ ಬೇಗನೆ ಕೇಳಿಬಂತು. ಅದಕ್ಕೆ ಸೋಮಾರಿ ಪೆಟ್ಟಿಗೆಯೆಂಬ ನಾಮಕರಣವೂ ಆಯಿತು. ಇನ್ನು ಕಂಪ್ಯೂಟರ್, ಅಂತರಜಾಲ ಹಾಗೂ ಮೊಬೈಲುಗಳ ಬಗೆಗಂತೂ ಹೇಳುವುದೇ ಬೇಡ. ಟೀವಿಯಿಂದಲೇ ಸಾಕಷ್ಟು ಕಡಿಮೆಯಾಗಿದ್ದ ಓದುವ ಅಭ್ಯಾಸ ಇದೀಗ ಇನ್ನಷ್ಟು ಹದಗೆಟ್ಟಿದೆ ಎನ್ನುವ ಆರೋಪವನ್ನು ನಾವು ಈಗ ಕೆಲ ವರ್ಷಗಳಿಂದ ಕೇಳುತ್ತಿದ್ದೇವೆ.

ಇದು ನಿಜವೂ ಹೌದು. ಓದುವ ಹವ್ಯಾಸ ಹಿಂದಿನ ಕಾಲದಷ್ಟು ವ್ಯಾಪಕವಾಗಿಲ್ಲ. ನಮ್ಮ attention span ಈಗ ವಿಪರೀತ ಕಡಿಮೆಯಾಗಿದೆ. ಬರಹಗಳನ್ನು ಓದಿ ಆಸ್ವಾದಿಸಲು ನಮಗೆ ಸಮಯವೇ ಇಲ್ಲ.

ಇದು ಎಲ್ಲರಿಗೂ ಗೊತ್ತು ಹಾಗಾದರೆ ಈ ಪರಿಸ್ಥಿತಿ ಬದಲಾಯಿಸಲು ನಾವೇನು ಮಾಡಬಹುದು? ಆಲೂಗೆಡ್ಡೆಯಿಂದ ಫ್ರೆಂಚ್ ಫ್ರೈಸ್ ಬದಲು ಉಪ್ಪೇರಿ ಮಾಡಿ ಬಿಸಿಬೇಳೆಬಾತ್ ಜೊತೆ ನೆಂಚಿಕೊಳ್ಳುವ ಉದಾಹರಣೆ ಪ್ರಸ್ತುತವೆನಿಸುವುದು ಇಲ್ಲಿಯೇ.

ತಂತ್ರಜ್ಞಾನದಿಂದಾಗಿ ಸಾಹಿತ್ಯಕ್ಕೆ ತೊಂದರೆಯಾಗುತ್ತಿದೆ ಎನ್ನುವುದಾದರೆ ಆ ತೊಂದರೆಯನ್ನು ದೂರಮಾಡಲೂ ನಾವು ಆ ತಂತ್ರಜ್ಞಾನವನ್ನೇ ಬಳಸಿಕೊಳ್ಳಬಹುದು!

ಅದು ಹೇಗೆ? ತಂತ್ರಜ್ಞಾನಕ್ಕೆ ಹೇಳಿ ಕಾದಂಬರಿ ಬರೆಸಲು ಆಗುತ್ತದೆಯೇ ಎನ್ನಬೇಡಿ. ಏಕೆಂದರೆ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಎಐ) ತಂತ್ರಜ್ಞಾನ ಬಳಸಿ ರಚಿಸಿದ 'ithe Road' ಎಂಬ ಇಂಗ್ಲಿಷ್ ಕಾದಂಬರಿ ೨೦೧೮ರಲ್ಲೇ ಪ್ರಕಟವಾಗಿತ್ತು.

ನಮ್ಮ ಕಾದಂಬರಿಕಾರರು ಸಾಹಿತ್ಯ ಕೃಷಿಗೆ ತಮ್ಮ ಕಲ್ಪನೆ ಮತ್ತು ಅಧ್ಯಯನಗಳನ್ನು ಬಳಸಿಕೊಂಡರೆ ಈ ಕಾದಂಬರಿ ಬರೆದ ಕಂಪ್ಯೂಟರ್ ಅನೇಕ ಸೆನ್ಸರುಗಳ ಸಹಾಯ ಪಡೆದುಕೊಂಡಿತ್ತು. ಅಮೆರಿಕಾದ ನ್ಯೂಯಾರ್ಕ್‌ನಿಂದ ನ್ಯೂ ಆರ್ಲನ್ಸ್‌ರೆಗಿನ ಕಾರು ಪ್ರಯಾಣದಲ್ಲಿ ಈ ಕಂಪ್ಯೂಟರ್ ಹಾಗೂ ಸೆನ್ಸರುಗಳು ಗಮನಿಸಿದ ಸಂಗತಿಗಳ ಹೂರಣವೇ ಕಾದಂಬರಿಯ ವಸ್ತು.

ಕಂಪ್ಯೂಟರೇ ಬರೆದ ಕಾದಂಬರಿ ಓದಿಸಿಕೊಳ್ಳುತ್ತದೋ ಇಲ್ಲವೋ ಎನ್ನುವುದು ಚರ್ಚಿಸಬೇಕಾದ ವಿಷಯ. ಆದರೆ ಒಂದಷ್ಟು ರೀತಿಯ ಬರಹಗಳನ್ನು ಕಂಪ್ಯೂಟರುಗಳು ಈಗಾಗಲೇ ಬರೆಯುತ್ತಿವೆ ಎನ್ನುವುದು ನಿಜ.

'ಇಂತಹ ಕಂಪ್ಯೂಟರ್ ಬರಹಗಾರರ ಕೈವಾಡ ಹೆಚ್ಚಾಗಿ ಕಾಣಸಿಗುತ್ತಿರುವುದು ಇಂಗ್ಲಿಷಿನ ಸುದ್ದಿಮನೆಗಳಲ್ಲಿ, ನಿರ್ದಿಷ್ಟ ಸೂತ್ರಗಳಿಗೆ ಒಗ್ಗುವಂತಹ ವರದಿ ಅಥವಾ ಬರಹಗಳನ್ನು (ಉದಾ: ಸಂಸ್ಥೆಗಳ ಆರ್ಥಿಕ ಫಲಿತಾಂಶ) ಇಂತಹ ಕಂಪ್ಯೂಟರ್‌್ರ ಬರಹಗಾರ ತಂತ್ರಾಂಶಗಳು ಈಗಾಗಲೇ ಸಿದ್ಧಪಡಿಸುತ್ತಿವೆ ಹಾಗೂ ಜಾಗತಿಕ ಸುದ್ದಿಸಂಸ್ಥೆಗಳು ಅವನ್ನು ಪ್ರಕಟಿಸುತ್ತಿವೆ. ಈ ಅಭ್ಯಾಸಕ್ಕೆ ಸ್ವಯಂಚಾಲಿತ ಪತ್ರಿಕೋದ್ಯಮ (ಆಟೋಮೇಟೆಡ್ ಜರ್ನಲಿಸಂ) ಎಂಬ ಹೆಸರನ್ನು ಕೊಡಲಾಗಿದೆ.

ಹೀಗೆಲ್ಲ ಹೇಳಿದಾಗ ಇನ್ನೊಂದು ಪ್ರಶ್ನೆ ಮೂಡುವುದು ಸಾಧ್ಯ. ಈಗ ಇರುವ ಬರಹಗಳನ್ನೇ ಜನ ಓದುತ್ತಿಲ್ಲ ಎಂದಾಗ ತಂತ್ರಾಂಶ ಬಳಸಿ ಇನ್ನಷ್ಟು ಬರಹ ಸೃಷ್ಟಿಸಿದರೆ ಅದರಿಂದ ಏನು ಉಪಯೋಗ? ಹೌದು, ಹೊಸ ಹೊಸ ಓದುಗರನ್ನು ಸಾಹಿತ್ಯದ ಕಡೆಗೆ ಸೆಳೆಯಲು ಹಾಗೂ ಸಾಹಿತ್ಯ ಸೃಷ್ಟಿಯ ಕೆಲಸವನ್ನು ಸುಲಭ ಮಾಡಿಕೊಳ್ಳಲು ಕೂಡ ನಾವು ತಂತ್ರಜ್ಞಾನವನ್ನು ಬಳಸಿಕೊಳ್ಳುವುದು ಸಾಧ್ಯ.

ಮೊಬೈಲಿನಲ್ಲೇ ಮುಳುಗಿರುವ ಹೊಸ ತಲೆಮಾರಿಗೆ ಪುಸ್ತಕದ ರುಚಿ ಹತ್ತಿಸಲು ಇ-ಪುಸ್ತಕಗಳನ್ನು ನೀಡುವುದು ಈ ನಿಟ್ಟಿನಲ್ಲಿ ಒಂದು ಹೆಜ್ಜೆ, ವಿಶ್ವದ ಅತಿದೊಡ್ಡ ಇ- ಪುಸ್ತಕ ಪ್ರಕಾಶಕ ಅಮೆಜಾನ್ ತನ್ನ ಕಿಂಡಲ್ ವೇದಿಕೆಯಲ್ಲಿ ಕನ್ನಡಕ್ಕೆ ಬೆಂಬಲ ನೀಡಲು ಇನ್ನೂ ಮೀನಾಮೇಷ ಎಣಿಸುತ್ತಿದೆಯಾದರೂ ಗೂಗಲ್ ಪ್ಲೇ ಬುಕ್ಸ್ ಹಾಗೂ ನಮ್ಮದೇ ದೇಶದ ಉದ್ಯಮಿಗಳು ಪ್ರಾರಂಭಿಸಿರುವ ಹಲವು ವ್ಯವಸ್ಥೆಗಳಲ್ಲಿ ಕನ್ನಡ ಇ-ಪುಸ್ತಕಗಳ ಪ್ರಕಟಣೆ ಮತ್ತು ಮಾರಾಟ ಈಗಾಗಲೇ ಸಾಧ್ಯವಾಗಿದೆ. ಹೊಸ ಬರಹಗಾರರಿಗೆ ದೊಡ್ಡ



ಮಾರುಕಟ್ಟೆ ಒದಗಿಸಿಕೊಡುವ, ಹೆಸರಾಂತ ಬರಹಗಾರರ ಮಾರುಕಟ್ಟೆಯನ್ನು ಇನ್ನಷ್ಟು ವಿಸ್ತರಿಸುವ ಸಾಧ್ಯತೆಯಿರುವ ಈ ಮಾರ್ಗವನ್ನು ಹೆಚ್ಚು ಲೇಖಕರು ಪ್ರಕಾಶಕರು ಬಳಸುವುದು ಅಪೇಕ್ಷಣೀಯ. ತಮ್ಮ ಎಲ್ಲ ಪುಸ್ತಕಗಳನ್ನೂ ಇ-ಬುಕ್ ರೂಪದಲ್ಲಿ ಪ್ರಕಟಿಸಿರುವ ಶ್ರೀ ವಸುಧೇಂದ್ರರಂತಹ ಲೇಖಕ-ಪ್ರಕಾಶಕರ ಮೇಲ್ಪಂಕ್ತಿಯನ್ನು ನಾವೆಲ್ಲರೂ ಅನುಸರಿಸಬಹುದು.

ಬಹುಮಾಧ್ಯಮದ (ಮಲ್ಟಿ ಮೀಡಿಯಾ) ರುಚಿ ಹತ್ತಿಸಿಕೊಂಡವರು ಸುದೀರ್ಘ ಬರಹಗಳನ್ನು ಓದಲಾರರು ಎನ್ನುವುದಾದರೆ ಅಂತಹವರಿಗೆ ಪುಸ್ತಕಗಳನ್ನು ಕೇಳಿಸುವುದು (ಆಡಿಯೋ ಬುಕ್) ಕೂಡ ಸಾಧ್ಯವಿದೆ. ಇಂಗ್ಲೀಷಿನಲ್ಲಿ ಬಹಳ ಜನಪ್ರಿಯವಾಗಿರುವ ಆಡಿಯೋ ಬುಕ್‌ಗಳು ಕಳೆದ ಕೆಲ ವರ್ಷಗಳಿಂದ ಕನ್ನಡದಲ್ಲೂ ಕಾಣಿಸಿಕೊಳ್ಳುತ್ತಿರುವುದು ವಿಶೇಷ.

ಹೆಚ್ಚು ಜನ ತಮ್ಮ ಮೊಬೈಲಿನಲ್ಲಿ ವೀಡಿಯೋ ವೀಕ್ಷಣೆಯನ್ನೇ ಹೆಚ್ಚಾಗಿ ಇಷ್ಟಪಡುತ್ತಾರೆ ಎನ್ನುವುದಾದರೆ, ಅವರನ್ನು ತಲುಪಲು ಪುಸ್ತಕ ಪರಿಚಯಗಳನ್ನು ವೀಡಿಯೋ ರೂಪದಲ್ಲಿ ನೀಡಬಹುದು. ಕತೆ-ಕವಿತೆ-ಕಾದಂಬರಿ ಮಾತ್ರವೇ ಅಲ್ಲ ವಿಜ್ಞಾನ, ತಂತ್ರಜ್ಞಾನ, ಹಣಕಾಸು ಮುಂತಾದ ವಿಷಯಗಳ ಬಗ್ಗೆ ಓದುವಂತೆ ಪ್ರೇರೇಪಿಸುವುದಕ್ಕೂ ಇದೊಂದು ಉತ್ತಮ ಮಾರ್ಗ. ಇಂತಹ ವೀಡಿಯೋಗಳನ್ನು ಫೇಸ್‌ಬುಕ್‌ನಂತಹ ಸಾಮಾಜ ಜಾಲಗಳಲ್ಲೇ ಪ್ರಕಟಿಸಿ ಹೆಚ್ಚು ಜನರಿಗೆ ತಲುಪುವಂತೆಯೂ ಮಾಡಬಹುದು. ನಿರ್ದಿಷ್ಟ ವಿಷಯಗಳ ಬಗ್ಗೆ ವಿಚಾರ ವಿನಿಮಯ ನಡೆಸುವ ಸಮುದಾಯಗಳನ್ನೂ ಬೆಳೆಸಬಹುದು.

ಈ ಎಲ್ಲ ಬಗೆಯ ಪ್ರಯತ್ನಗಳೂ ಕನ್ನಡದಲ್ಲಿ ಪ್ರಾರಂಭವಾಗಿವೆ ಎನ್ನುವುದು ವಿಶೇಷ. ಇಂತಹ ಪ್ರಯತ್ನಗಳ ಫಲವಾಗಿ ಹೊಸ ಬರಹಗಾರರು ರೂಪುಗೊಳ್ಳುತ್ತಿರುವುದನ್ನು, ಫೇಸ್‌ಬುಕ್‌ನಂತಹ ಮಾಧ್ಯಮಗಳಲ್ಲಿ ಬರೆಯಲು ಪ್ರಾರಂಭಿಸಿದವರು ಬರವಣಿಗೆಯಲ್ಲಿ ಹೆಸರು ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

ಅಂತರಜಾಲದ ವ್ಯಾಪ್ತಿ ಹೆಚ್ಚಿದಂತೆ ಸ್ಥಳೀಯ ಭಾಷೆಗಳಲ್ಲಿ ಮಾಹಿತಿಗೆ ಬೇಡಿಕೆ ಹೆಚ್ಚುತ್ತಿದೆ. ಈ ಬೇಡಿಕೆಯ ಸಾಕಷ್ಟು ದೊಡ್ಡ ಪಾಲು ಅನುವಾದಗಳಿಂದ ಪೂರೈಕೆಯಾಗಬೇಕು. ಅನುವಾದದ ಪ್ರಕ್ರಿಯೆಯಲ್ಲೂ ತಂತ್ರಜ್ಞಾನದ ನೆರವು ಗಣನೀಯವಾಗಬಲ್ಲದು. ಅನುವಾದವೆಂದರೆ ಗೂಗಲ್ ಟ್ರಾನ್ಸ್ಲೇಟ್ ಮಾತ್ರವೇ ಅಲ್ಲ. ಅನುವಾದ ಕ್ಷೇತ್ರದಲ್ಲಿ ಜಾಗತಿಕವಾಗಿ ಬಳಕೆಯಾಗುವ CAT (ಕಂಪ್ಯೂಟರ್ ಏಡೆಡ್ ಟ್ರಾನ್ಸ್ ಲೇಶನ್) ಸಾಧನ- ಸಲಕರಣೆಗಳೂ ವೃತ್ತಿಪರರ ನೆರವಿಗೆ ಬರಬಲ್ಲವು.

ವೃತ್ತಿಪರ ಅನುವಾದಕರಷ್ಟೇ ಏಕೆ. ಹವ್ಯಾಸಿ ಅನುವಾದಕರು ಕೂಡ ತಂತಜ್ಞಾನದ ಸಹಾಯದಿಂದ ಹೊಸ ಮಾಹಿತಿಯನ್ನು ನಮ್ಮ ಭಾಷೆಗೆ ತರಬಹುದು. ಮಕ್ಕಳ ಕತೆಗಳನ್ನು ಅನುವಾದಿಸಲು ನೆರವಾಗುವ 'ಸ್ಟೋರಿವೀವ ಜಾಲತಾಣವನ್ನು ಇಲ್ಲಿ ವಿಶೇಷವಾಗಿ ಉದಾಹರಿಸಬಹುದು. ವಿಶ್ವದ ಅನೇಕ ಭಾಷೆಗಳ ಕತೆಗಳನ್ನು ನಮ್ಮ ಭಾಷೆಗೆ, ನಮ್ಮ ಕತೆಗಳನ್ನು ಬೇರೆ ಭಾಷೆಗಳಿಗೆ ಅನುವಾದಿಸುವುದನ್ನು ಈ ಜಾಲತಾಣ ಸುಲಭಸಾಧ್ಯವಾಗಿಸಿದೆ. ಅಷ್ಟೇ ಅಲ್ಲ ಈ ಎಲ್ಲ ಕತೆಗಳನ್ನೂ ಉಚಿತವಾಗಿ ಓದಲು ಅನುವುಮಾಡಿಕೊಟ್ಟು ಮಕ್ಕಳಲ್ಲಿ ಓದುವ ಹವ್ಯಾಸವನ್ನೂ ಬೆಳೆಸುತ್ತಿದೆ.

ಹೊಸ ಸಾಹಿತ್ಯದ ಸೃಷ್ಟಿ ಹಾಗೂ ಅನುವಾದಗಳ ಜೊತೆಗೆ ಹಿಂದಿನ ಬರಹಗಳನ್ನು



ಉಳಿಸಿಡುವುದು ಕೂಡ ಮಹತ್ವದ ಕೆಲಸ ಮುದ್ರಿತ ಪುಸ್ತಕಗಳನ್ನು ಡಿಜಿಟಲ್ ರೂಪಕ್ಕೆ ತಂದು ಉಳಿಸಿಡುವುದು. ಮುದ್ರಿತ ಪುಟಗಳಲ್ಲಿರುವ ಅಕ್ಷರಗಳನ್ನು ಓಸಿಆರ್ ತಂತ್ರಜ್ಞಾನ ಬಳಸಿ ಮತ್ತೆ ಪಠ್ಯರೂಪಕ್ಕೆ ತರುವುದು, ಆ ಪಠ್ಯವನ್ನು ವಿಶ್ಲೇಷಿಸಿ ಹೆಚ್ಚಿನ ಅಧ್ಯಯನ ಸಾಧ್ಯವಾಗಿಸುವುದು ಸೇರಿದಂತೆ ತಂತ್ರಜ್ಞಾನದ ನೆರವಿನಿಂದ ನಾವು ಅನೇಕ ಕೆಲಸಗಳನ್ನು ಮಾಡಿಕೊಳ್ಳಬಹುದು. ಈ ನಿಟ್ಟಿನಲ್ಲಿ ಇಂಟರ್‌ನೆಟ್ ಆರ್ಕೈವ್, ವಿಕಿಮೀಡಿಯ ಕಾಮನ್ಸ್ ಮುಂತಾದ ಜಾಗತಿಕ ಕಾರ್ಯಕ್ರಮಗಳು ನಡೆಸಿರುವ ಪ್ರಯತ್ನಗಳಲ್ಲಿ ಕನ್ನಡವೂ ಸ್ಥಾನ ಪಡೆದುಕೊಂಡಿದೆ. ಇಂತಹ ಪ್ರಯತ್ನಗಳ ಪರಿಣಾಮವಾಗಿ ವಿವಿಧ ಕಾಲಘಟ್ಟಗಳಲ್ಲಿ ಪ್ರಕಟವಾದ ಕನ್ನಡದ ಬರಹಗಳು ಡಿಜಿಟಲ್ ಲೋಕವನ್ನು ಪ್ರವೇಶಿಸಿವೆ.

ಒಟ್ಟಾರೆಯಾಗಿ ಸಾಹಿತ್ಯ ಸೃಷ್ಟಿಯ ಕೆಲಸವನ್ನು ತಂತ್ರಜ್ಞಾನಕ್ಕೆ ವಹಿಸಿಕೊಡುವ ತುತ್ತತುದಿಯ ಆಲೋಚನೆಗಿಂತ. ನಮ್ಮ ಕೆಲಸದ ಪರಿಣಾಮವನ್ನು ಅಧಿಕಗೊಳಿಸುವುದಕ್ಕೆ (augment) ತಂತ್ರಜ್ಞಾನವನ್ನು ಬಳಸುವ ಈ ಉದಾಹರಣೆಗಳು ಹೆಚ್ಚು ಬೇಗನೆ ಹಾಗೂ ಹೆಚ್ಚು ಸಮರ್ಥವಾಗಿ ನಮ್ಮ ನೆರವಿಗೆ ಬರಬಲ್ಲವು. ಅವುಗಳ ಬಳಕೆ ವ್ಯಾಪಕವಾದರೆ ಇನ್ನೆಷ್ಟು ಹೊಸ ಸಾಧ್ಯತೆಗಳೂ ತೆರೆದುಕೊಳ್ಳಬಲ್ಲವು. ಅಂತಹ ಸಾಧ್ಯತೆಗಳ ಬಗ್ಗೆ ಕುತೂಹಲ ಹಾಗೂ ಅವುಗಳ ನೆರವನ್ನು ಪಡೆದುಕೊಳ್ಳುವ ಆಸಕ್ತಿಯೊಂದನ್ನು ನಾವು ಬೆಳೆಸಿಕೊಂಡರೆ ಸಾಕು!

ಇದರ ಜೊತೆಗೆ ಆಗಬೇಕಾದ ಇನ್ನೊಂದು ಮುಖ್ಯ ಕೆಲಸ ಇದೆ. ಹೊಸ ಪ್ರಯತ್ನಗಳಲ್ಲಿ ತೊಡಗಿಸಿಕೊಳ್ಳುವ ಲೇಖಕರನ್ನು, ಪ್ರಕಾಶಕರನ್ನು ಮುಕ್ತಮನಸ್ಸಿನಿಂದ ಬೆಂಬಲಿಸುವುದೇ ಆ ಕೆಲಸ, ಸಾರ್ವಜನಿಕರು. ಸಂಘಸಂಸ್ಥೆಗಳು ಹಾಗೂ ಸರಕಾರ ತಮ್ಮತಮ್ಮ ಮಟ್ಟದಲ್ಲಿ ಈ ಬೆಂಬಲ ನೀಡಿದಾಗ ಮಾತ್ರವೇ ಸಾಹಿತ್ಯದ ಬಿಸಿಬೇಳೆಬಾತ್ ಹಾಗೂ ತಂತ್ರಜ್ಞಾನದ ಉಪ್ಪೇರಿ ಇನ್ನಷ್ಟು ರುಚಿಕರವಾಗುವುದು ಸಾಧ್ಯವಾಗುತ್ತದೆ.

## ಕನ್ನಡ ತಂತ್ರಜ್ಞಾನದಲ್ಲಿ ಅಳವಡಿಕೆಯ ಸಮಸ್ಯೆಗಳು

**ಬೇಳೂರು ಸುದರ್ಶನ**

**ಕನ್ನಡ ಭಾಷೆ-ಹೊಸತಂತ್ರಜ್ಞಾನ :** ಈ ಗೋಷ್ಠಿಯಲ್ಲಿ ತಂತ್ರಜ್ಞಾನದಲ್ಲಿ ಆಳವಡಿಕೆಯ ಸಮಸ್ಯೆಗಳ ಬಗ್ಗೆ ನಾನು ನನ್ನ ಅರಿವಿಗೆ ಬಂದ ಸಂಗತಿಗಳನ್ನು ನಿಮ್ಮ ಮುಂದೆ ಇಡಲು ಬಯಸಿದ್ದೇನೆ. ಆನ್ವಯಿಕ ತಂತ್ರಾಂಶಗಳ ವಿಷಯದಲ್ಲಿ ಇರುವ ತೊಡಕುಗಳ ಬಗ್ಗೆ ತಮ್ಮೆಲ್ಲರ ಗಮನವನ್ನು ಸೆಳೆಯಲು ಯತ್ನಿಸುತ್ತೇನೆ.

೧. **ಕಾರ್ಯ ಸಮನ್ವಯದ ಕೊರತೆ:** ಭಾಷಾ ಸಾಧನ ಮತ್ತು ತಂತ್ರಾಂಶ ಅಭಿವೃದ್ಧಿ ಪ್ರಕ್ರಿಯೆಗಳು ವಿವಿಧ ಸಂಘ ಸಂಸ್ಥೆಗಳ ನಡುವೆ ಹಂಚಿಹೋಗಿವೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಂಬಂಧಿತ ಇಲಾಖೆಗಳು, ಖಾಸಗಿ ಸಂಸ್ಥೆಗಳು ಮತ್ತು ಮುಕ್ತ ತಂತ್ರಾಂಶ ಸಮುದಾಯದ ನಡುವೆ ಸೂಕ್ತವಾದ ಸಮನ್ವಯವಿಲ್ಲ. ಮಾನದಂಡಗಳಿಗೆ ಅನುಗುಣವಾಗಿ ತಂತ್ರಜ್ಞಾನ ರೂಪಿಸುವುದು. ಯಾವುದೇ ಕಾರ್ಯದ ಪುನರಾವರ್ತನೆಯನ್ನು ಮಾಡದೇ ಇರುವುದು-ಇವು ಮುಖ್ಯವಾದ ಪಂಥಾಹ್ವಾನಗಳಾಗಿವೆ.

೨. **ಏಕೀಕೃತ ಜಾಲತಾಣ:** ಅವಶ್ಯಕತೆಗಳ ಪಟ್ಟಿಗೆ ಅನುಗುಣವಾಗಿರುವ, ಸೂಕ್ತವಾಗಿ ಪರಿಶೀಲನೆಗೆ ಒಳಪಟ್ಟಿರುವ ಸಹಾಯದ ಮಾಹಿತಿ ಇರುವ ಕನ್ನಡ ಐಟಿ ಸಾಧನಗಳು ಮತ್ತು ತಂತ್ರಾಂಶಗಳ ಒಂದು ಏಕೀಕೃತ ಸಂಗ್ರಹತಾಣವನ್ನು ರೂಪಿಸುವುದು ದೊಡ್ಡ ಸವಾಲಾಗಿದೆ. ಏಕೆಂದರೆ ಈಗ ಲಭ್ಯವಿರುವ ಸಾಧನಗಳನ್ನು ವಿವಿಧ ಸಂಸ್ಥೆಗಳು ವಿವಿಧ ಹಣಕಾಸು ನೆರವಿನೊಂದಿಗೆ ರೂಪಿಸುತ್ತಿವೆ. ಅದಾಗ್ಯೂ ಇ-ಆಡಳಿತದಲ್ಲಿ ರೂಪುಗೊಂಡ ಕನ್ನಡ ಕಂಪ್ಯೂಟಿಂಗ್ ಯೋಜನೆಯು ಅದಷ್ಟು ಬೇಗನೆ ಇಂತಹ ಕ್ರೋಡೀಕೃತ ಜಾಲತಾಣ ಪುಟವನ್ನು ಅನಾವರಣಗೊಳಿಸಲು ಎಲ್ಲ ಯತ್ನಗಳನ್ನು ಮಾಡುತ್ತಿದೆ ಎಂದು ತಿಳಿಸ ಬಯಸುತ್ತೇನೆ.

೩. **ಖಚಿತ ಮತ್ತು ಕನ್ನಡ ಕೇಂದ್ರಿತ ಮಾನದಂಡಗಳ ಕೊರತೆ:** ಮಾನದಂಡಗಳನ್ನು ಅನುಸರಿಸದೇ ಇರುವುದು ದೊಡ್ಡ ಸಮಸ್ಯೆಯಾಗಿದೆ. ಈ ಕುರಿತು ಕಳೆದ ತಿಂಗಳಲ್ಲಿ ಇ ಕನ್ನಡ ಕಮಟ್ಟವನ್ನು ಸಂಘಟಿಸಿ ತಂತ್ರಜ್ಞರಿಂದ

ಸ್ಕೂಲ ಮಾನದಂಡಗಳ ಪಟ್ಟಿ ಮಾಡಲಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಮಾನದಂಡಗಳನ್ನು ಅಧರಿಸಿ ಪ್ರತಿಯೊಂದೂ



ತಂತ್ರಾಂಶಕ್ಕೆ ಬೇಕಾದ ಕನ್ನಡ ಭಾಷಾ ಕೇಂದ್ರಿತ ಮಾನದಂಡಗಳನ್ನು ರೂಪಿಸುವ ಬಗ್ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಇ-ಆಡಳಿತ ಇಲಾಖೆಗಳು ಕಾರ್ಯನಿರತವಾಗಿವೆ ಎಂಬುದನ್ನೂ ತಿಳಿಸಲು ನನಗೆ ತುಂಬಾ ಸಂತೋಷ ವಾಗುತ್ತಿದೆ.

೪. **ತಜ್ಞತೆಯ ಕಂದರ:** ಭಾಷಾಶಾಸ್ತ್ರಜ್ಞರು ಮತ್ತು ಮಾಹಿತಿ ತಂತ್ರಜ್ಞಾನ ತಜ್ಞರ ನಡುವೆ ಸಂಪರ್ಕ ಕಲ್ಪಿಸುವುದು ಇನ್ನೊಂದು ದೊಡ್ಡ ಸವಾಲಾಗಿದೆ. ಪ್ರಸ್ತುತ ಬಹಳಷ್ಟು ಭಾಷಾಶಾಸ್ತ್ರಜ್ಞರು ಕಂಪ್ಯೂಟರ್ ಭಾಷೆಗಳು. ದತ್ತಸಂಚಯ ಇತ್ಯಾದಿಗಳ ಬಗ್ಗೆ ಹೆಚ್ಚು ಅರಿತವರಲ್ಲ ಈ ಕಂದರವು ಭಾಷಾ ಸಂಪನ್ಮೂಲಗಳನ್ನು ಸ್ಥಾಪಿಸುವುದಕ್ಕೆ ತಡೆಯಾಗಿದೆ. ಹೀಗಿದ್ದೂ ಭಾಷಾಶಾಸಜ್ಞರೇ ಯಾವುದೇ ಐಟಿ ಸಾಧನದ ಯಶಸ್ವಿಗೆ ಮೂಲಾಧಾರವಾಗಿದ್ದಾರೆ.

೫. **ಆನ್ವಯಿಕ ತಂತ್ರಾಂಶಗಳಲ್ಲಿ ಸೂಕ್ತ ರೆಂಡರಿಂಗ್:** ಅಕ್ಷರ ಜೋಡಣೆ ಅರ್ಥಾತ್ ಡಿಟಿಪಿ ರಂಗದಲ್ಲಿ ಈಗಲೂ ಪೇಜ್‌ಮೇಕರ್‌ನಂತಹ ಹಳೆಯ ತಂತ್ರಾಂಶಗಳನ್ನೇ ಬಳಸುತ್ತಿದ್ದಾರೆ. ಇದರಿಂದಾಗಿ ಇ-ಪುಸ್ತಕ ಚಳವಳಿಯನ್ನು ಆರಂಭಿಸಲು ಪ್ರಕಾಶನ ಸಂಸ್ಥೆಗಳಿಗೂ ಸಮಸ್ಯೆ ಆಗುತ್ತಿದೆ. ಅಲ್ಲದೆ ಡಿಟಿಪಿ ರಂಗದಲ್ಲಿ ಇನ್ನೂ ಯುನಿಕೋಡ್ ಅಲ್ಲದೇ ಫಾಂಟ್‌ಗಳನ್ನೇ ಬಳಸುವುದರಿಂದ ಫಾಂಟ್ ಪರಿವರ್ತನೆಯ ಲೋಪಗಳನ್ನೂ ಎದುರಿಸಬೇಕಾಗಿದೆ ಮತ್ತು ಇ-ಪುಸ್ತಕ ರಚನೆ ವಿಳಂಬವಾಗುತ್ತದೆ. ಈ ಹಿನ್ನೆಲೆಯಲ್ಲಿ ಮುಕ್ತ ಪೇಜಿನೇಶನ್ ತಂತ್ರಾಂಶವಾದ ಸ್ಕೈಬಸ್‌ನ್ನು ಸಂಪೂರ್ಣವಾಗಿ ಕನ್ನಡೀಕರಿಸಿ (ಆದೇಶ ಪದಗಳು ಮತ್ತು ಹೈಫೆನೇಶನ್, ಪದ ಊಹಿಸುವ ತಂತ್ರಾಂಶ ವ್ಯಾಕರಣ ಮತ್ತು ಕಾಗುಣಿತ. ಇ-ಪುಸ್ತಕ ರಚನೆ ಹೀಗೆ ಭಾಷಾ ಸಂಬಂಧಿತ ಎಲ್ಲ ಸಾಧನಗಳನ್ನೂ ಅಳವಡಿಸಿ) ಬಳಸಿದರೆ ಪ್ರಕಾಶನ ರಂಗದಲ್ಲಿ ಕ್ರಾಂತಿಯನ್ನೇ ಉಂಟು ಮಾಡಬಹುದು. ಇದನ್ನು ಪ್ರಕಾಶನ ರಂಗದ ಪ್ರಮುಖರು ಕೂಡಲೇ ಗಮನಿಸಿ ಕೊಂಚ ಹಣಕಾಸಿನ ನೆರವನ್ನೂ ಕೊಟ್ಟರೆ ಈ ಬಗ್ಗೆ ದೊಡ್ಡ ಹೆಜ್ಜೆಗಳನ್ನು ಇಡಬಹುದು.

೬. **ಕೀಲಿಮಣೆ ಸಂಗತಿಗಳು:** ಕರ್ನಾಟಕ ರಾಜ್ಯ ಸರ್ಕಾರವು ನುಡಿ ತಂತ್ರಾಂಶವನ್ನು ಅಧಿಕೃತ ಡಿಟಿಪಿ ತಂತ್ರಾಂಶವೆಂದು ಮಾನ್ಯಮಾಡಿ ಕನ್ನಡಭಾಷೆಗೆ ಕಗಪ ಕೀಲಿಮಣೆಯನ್ನೇ ಅಧಿಕೃತ ಕೀಲಿಮಣೆ

ಮಾನದಂಡ ಎಂದು ಪ್ರಕಟಿಸಿದೆ. ಈ ಕೀಲಿಮಣೆಯನ್ನು ಶ್ರೀ ಕೆ.ಪಿ. ರಾವ್ ರೂಪಿಸಿದ ಕೀಲಿಮಣೆಯನ್ನು ಆಧರಿಸಿ ರೂಪಿಸಲಾಗಿದೆ. ಸಿಡ್ಯಾಕ್ ಕೂಡ ಇನ್ ಸ್ಕ್ರಿಪ್ಟ್ ಕೀಲಿಮಣೆಯನ್ನು ಕನ್ನಡಕ್ಕಾಗಿ ರೂಪಿಸಿದ್ದು ಇದರಲ್ಲಿ ಎಲ್ಲಾ ಭಾರತೀಯ ಲಿಪಿಗಳಿಗೆ ಸಮಾನವಾದ ವಿನ್ಯಾಸವಿದೆ. ಕನ್ನಡ ಕಂಪ್ಯೂಟಿಂಗ್‌ನಲ್ಲಿ ಲಿಪ್ಯಂತರಣ ಕೀಲಿಮಣೆಯೂ ತುಂಬಾ ಜನಪ್ರಿಯವಾಗಿದೆ. ವಿಂಡೋಸ್ ಮತ್ತು ಮ್ಯಾಕ್ ಓಎಸ್ ಸಾಧನಗಳು ತಮ್ಮ ತಂತ್ರಾಂಶಗಳಲ್ಲೇ ಇನ್ ಸ್ಕ್ರಿಪ್ಟ್ ಕೀಲಿಮಣೆಯನ್ನು



ಅಡಕಗೊಳಿಸಿವೆ. ಲಿನಕ್ಸ್ ತಂತ್ರಾಂಶವು ಎಲ್ಲಾ ಮೂರು ವಿನ್ಯಾಸಗಳನ್ನೂ ಹೊಂದಿದೆ ಕೆ.ಪಿ.ರಾವ್ ಕೀಲಿಮಣೆಯನ್ನು ಬಳಸಲು ವಿಂಡೋಸ್‌ನಲ್ಲಿ ಕೀಲಿಮಣೆ ಡ್ರೈವರ್ ಬೇಕಾಗುತ್ತದೆ. ಮ್ಯಾಕ್ ಓಎಸ್‌ನಲ್ಲಿ ಮುಕ್ತ ಕೀಲಿ ಮಣೆಯ ವಿನ್ಯಾಸವು ಲಭ್ಯವಿದೆ, ಮೈಕ್ರೋಸಾಫ್ಟ್ ಸಂಸ್ಥೆಯ ಭಾಷಾ ಇಂಡಿಯಾ ರೂಪಿಸಿದ ಭಾರತೀಯ ಭಾಷೆಗಳ ಕೀಲಿಮಣೆ ಕೆಲವು ಝೀರೋ ವಿಡ್ ನಾನ್ ಜಾಯ್ನರ್‌ಗಳಂತಹ ಕೆಲವು ತೊಡಕುಗಳಿವೆ. ಗೂಗಲ್ ಇಂಡಿಕ್ ಸಾಧನಗಳ ವಿಂಡೋಸ್ ಮತ್ತು ಎಲ್ಲಾ ಗೂಗಲ್ ಕೌಡ್ ಅಧಾರಿತ ಸೇವೆಗಳಿಗಾಗಿ ಲಿಪ್ಯಂತರಣ ಕೀಲಿಮಣೆ ವಿನ್ಯಾಸ ಮತ್ತು ಇನ್ ಸ್ಕ್ರಿಪ್ಟ್ ಕೀಲಿಮಣೆ ವಿನ್ಯಾಸವನ್ನು ಹೊಂದಿವೆ. ಈ ಹಿನ್ನೆಲೆಯಲ್ಲಿ ಯಾವುದೇ ಕಾರ್ಯಚರಣ ವ್ಯವಸ್ಥೆಯಲ್ಲಿ ಸಮನಾಗಿ ಕಾರ್ಯ ನಿರ್ವಹಿಸುವ ಮತ್ತು ಯುನಿಕೋಡ್ ಅಕ್ಷರಭಾಗಗಳನ್ನು ವೈಜ್ಞಾನಿಕವಾಗಿ ಅಳವಡಿಸಿಕೊಂಡಿರುವ ಕೆ. ಪಿ. ರಾವ್ ವಿನ್ಯಾಸ ಆಧಾರಿತ ಸಾರ್ವತ್ರಿಕ ಕೀಲಿಮಣೆಯನ್ನು ರೂಪಿಸುವುದು ಇಂದಿನ ಅಗತ್ಯವಾಗಿದೆ.

೮. **ಫಾಂಟ್ ಸಂಗತಿಗಳು :** ಈಗಲೂ ಕನ್ನಡಕ್ಕೆ ಯುನಿಕೋಡ್ ಪಠ್ಯಫಾಂಟ್ (ಬುಕ್ ಫಾಂಟ್) ಅಗತ್ಯವಿದೆ. ಈಗ ಕನ್ನಡದಲ್ಲಿ ಹಲವು ಯುನಿಕೋಡ್ ಫಾಂಟ್‌ಗಳು ಇದ್ದರೂ ಒಂದು ಸಾರ್ವತ್ರಿಕ ಬಳಕೆಯ ಬುಕ್ ಫಾಂಟ್ ಎಂಬುದು ಪೂರ್ಣವಾಗದ ಬೇಡಿಕೆಯಾಗಿದೆ. ಈಗಿರುವ ಯುನಿಕೋಡ್ ಫಾಂಟ್‌ಗಳಲ್ಲೂ ಹಲವು ಅಕ್ಷರಭಾಗಗಳ ಮತ್ತು ಎನ್‌ಕೋಡಿಂಗ್ ಲೋಪಗಳನ್ನು ಹೊಂದಿವೆ. ಇವುಗಳನ್ನೆಲ್ಲ ಸರಿಪಡಿಸಬೇಕಿದೆ. ಇಲ್ಲೂ ಶ್ರೀ ಕೆ.ಪಿ. ರಾವ್ ಅವರ ಅಪಾರ ಫಾಂಟ್‌ನ್ನು ಮಾದರಿಯಾಗಿ ತೆಗೆದುಕೊಂಡು ಮುಂದಿನ ಹೆಜ್ಜೆಗಳನ್ನು ಇಡಬಹುದಾಗಿದೆ.

೯. **ದೇಸೀಕರಣ:** ಖಾಸಗಿ ಒಡೆತನದ ಅಥವಾ ಮುಕ್ತವಾದ ಆನ್ವಯಿಕ ತಂತ್ರಾಂಶಗಳ ದೇಸೀಕರಣ (ಲೋಕಲೈಸೇಶನ್) ಇನ್ನೊಂದು ಪ್ರಮುಖ ಸವಾಲಾಗಿದೆ. ಏಕೆಂದರೆ ಲೋಕಲೈಸೇಶನ್ ಕಾರ್ಯದಲ್ಲಿ ಹಲವು ಸಂಸ್ಥೆಗಳು ತೊಡಗಿವೆ. ಇತ್ತೀಚೆಗಷ್ಟೇ ದೇಸೀಕರಣ ಮತ್ತು ಪದಕಣಜ ರಚನೆಯ ಬಗ್ಗೆ ಇ-ಆಡಳಿತ

ಇಲಾಖೆ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಹೆಜ್ಜೆ ಇಡಲಾಗಿದೆ. ಪದಕಣಜ ಮತ್ತು ಇ-ಆಡಳಿತದಲ್ಲಿ ಕನ್ನಡ ಅನುಷ್ಠಾನ ಕುರಿತ ಸಮಿತಿಗಳನ್ನು ಇನ್ನು ಕೆಲವೇ ದಿನಗಳಲ್ಲಿ ರಚಿಸಲಾಗುವುದು.

೯. **ಯುನಿಕೋಡೇತರ ಫಾಂಟ್‌ಗಳಿಂದ ಯುನಿಕೋಡ್‌ಗೆ ಪರಿವರ್ತನೆ :** ಕನ್ನಡದ ಬಹುತೇಕ ವಿಷಯ ವಸ್ತುಗಳು ಈಗಲೂ ಯುನಿಕೋಡೇತರ ಫಾಂಟ್‌ಗಳಲ್ಲೇ ಇವೆ. ಈಗಿರುವ ಹಲವು ಪರಿವರ್ತಕಗಳು ಸ್ವರೂಪದಲ್ಲಿರುವ ಪಠ್ಯಗಳನ್ನು ಸುಲಭವಾಗಿ ಪರಿವರ್ತಿಸುತ್ತವೆ: ಆದರೆ ಇವುಗಳಲ್ಲಿ ಇಂಗ್ಲೀಷ್ ಫಾಂಟ್‌ಗಳನ್ನು ಬಳಸುವ ಹಾಗಿಲ್ಲ. ಇಂತಹ ಹಲವು ಪರಿವರ್ತಕಗಳು ಕಡತದಲ್ಲಿ ಇರುವ



ಫಾಂಟ್ ಗಾತ್ರ ವಿನ್ಯಾಸ, ಪ್ಯಾರಗಳು-ಯಾವುದನ್ನೂ ಉಳಿಸಿಕೊಳ್ಳುವುದಿಲ್ಲ. ಆದ್ದರಿಂದ ಯುನಿಕೋಡ್‌ಗೆ ಬಹುದೊಡ್ಡ ಪ್ರಮಾಣದಲ್ಲಿ ಪಠ್ಯವನ್ನು ಆಯಾ ಕಡತದ ಅಥವಾ ದತ್ತಾಂಶದ ಸ್ವರೂಪದಲ್ಲಿಯೇ ಪರಿವರ್ತಿಸುವ ತಂತ್ರಾಂಶಗಳನ್ನು ರೂಪಿಸುವುದು ಅತ್ಯಂತ ಅವಶ್ಯಕವಾಗಿದೆ.

೧೦. **ಪಠ್ಯ ಮತ್ತು ಧ್ವನಿಸಂಚಯ:** ಭಾರತೀಯ ಭಾಷೆಗಳು ಸಂಪನ್ಮೂಲ ಕೊರತೆ ಯಿಂದ ಕೂಡಿವೆ. ಇಲ್ಲಿಗ ಕೆಲವೇ ಲಕ್ಷ ವಾಕ್ಯಗಳು ಸಮಾಂತರ ಪಠ್ಯಅಥವಾ ಧ್ವನಿಸಂಚಯದ ಆಕರವಿದೆ ಕಳೆದ ಒಂದು ದಶಕದಲ್ಲಿ ಹಲವು ಸಂಸ್ಥೆಗಳು ವಿಶ್ಲೇಷಣೆ ಉತ್ಪಾದನೆ-ಅನುವಾದ. ಉದಾಹರಣೆ ಆಧಾರಿತ ಯಂತ್ರಾನುವಾದ ನಿಯಮ ಆಧಾರಿತ. ಸಂಖ್ಯಾಶಾಸ್ತ್ರ ಬಳಸಿಮಾಡುವ ವಿಧಾನ-ಹೀಗೆ ಹಲವು ಅನುವಾದ ವಿಧಾನಗಳನ್ನು ಯಂತ್ರಾನುವಾದಕ್ಕಾಗಿ ಬಳಸಿವೆ. ಹೀಗಿದ್ದೂ ಇವುಗಳಲ್ಲಿ ಸಂಖ್ಯಾಶಾಸ್ತ್ರೀಯ ಆಧಾರಿತ ಮತ್ತು ಹೈಬ್ರಿಡ್ ಯಂತ್ರಾನುವಾದವೇ ಹೆಚ್ಚು ಉತ್ತಮ ಫಲಿತಾಂಶಗಳನ್ನು ನೀಡುತ್ತಿದೆ. ಹೀಗಿದ್ದೂ ಸಂಖ್ಯಾಶಸ್ತೀಯ ವಿಧನಕ್ಕೆ ಭಾರೀ ಪ್ರಮಾಣದ ಸಮಾಂತರ ಸಂಚಯಗಳು ಬೇಕಾಗಿವೆ. ಆದ್ದರಿಂದ ಯಂತ್ರಾನುವಾದದ ಫಲಿಂತಾಂಶವನ್ನು ಉತ್ತಮಪಡಿಸಲು

೧೧. ಅತಿ ಕರಾರುವಾಕ್ಕಾದ ಧ್ವನಿ ಮತ್ತು ಚಂಕಡ್ ಸಮಾಂತರ ಸಂಚಯಗಳನ್ನು ರೂಪಿಸಬೇಕಾಗಿದೆ. ಅಲ್ಲದೇ ಪಠ್ಯದಿಂದ ಧ್ವನಿಪರಿವರ್ತನೆಗೆ ಮತ್ತು ಧ್ವನಿಯಿಂದ ಪಠ್ಯ ಅನುವಾದಕ್ಕೆ ಕನ್ನಡದಲ್ಲಿ ಟಿಪಣಿಯುಕ್ತ (ಅನೋಟೇಟೆಡ್) ಧ್ವನಿಸಂಚಯಗಳನ್ನು ರೂಪಿಸಬೇಕಾಗಿದೆ. ತರಬೇತಾದ ತಜ್ಞರು. ಭಾಷಾ ಶಾಸ್ತ್ರಜ್ಞರು ಮತ್ತು ಐಟಿ ನಡುವೆ ಸಂಪರ್ಕ ಸಾಧಿಸಿವುದು ಒಂದು ಸವಾಲಾಗಿದೆ. ಮೈಸೂರಿನಭಾರತೀಯ ಭಾಷಾ ಸಂಸ್ಥಾನವು ಇತ್ತೀಚೆಗೆ ತನ್ನೆಲ್ಲ ಪಠ್ಯ ಮತ್ತು ಧ್ವನಿ ಸಂಚಯವನ್ನು ಮುಕ್ತ ಬಳಕೆಗೆ ನೀಡದ್ದು ಈ ನಿಟ್ಟಿನ ಒಂದು

ಮಹತ್ವದ ಬೆಳವಣಿಗೆಯಾಗಿದೆ. ಆದರೆ ಕನ್ನಡಭಾಷೆಯ ವೈವಿಧ್ಯವನ್ನು ಕೂಡಾ ಸಂರಕ್ಷಿಸುವುದು ತಂತ್ರಜ್ಞಾನದ ಹೊಣೆಗಾರಿಕೆ, ಇಲ್ಲವಾದರೆ ಗ್ರಾಂಥಿಕ ಭಾಷೆಯೊಂದನ್ನೇ ಡಿಜಿಟಲ್ ರಂಗದ ಕಾಣಬೇಕಾದ ಅನಿವಾರ್ಯ ಉಂಟಾಗುತ್ತದೆ. ಇದು ಸ್ಥಳೀಯತೆಗೆ ಧಕ್ಕೆ ತರುತ್ತದೆ.

೧೧. **ಸಂಪನ್ಮೂಲ ಹಂಚಿಕೆ ವ್ಯವಸ್ಥೆ ಮತ್ತು ಲಭ್ಯತೆ:** ಐಟಿ ಸಾಧನಗಳನ್ನು ರೂಪಿಸಲು ಮತ್ತು ಪರಿಹಾರಗಳನ್ನು ಹುಡುಕಲು ಬೇಕಾದ ಬಹಳಷ್ಟು ಕನ್ನಡ ಭಾಷಾ ಸಂಪನ್ಮೂಲಗಳು ಮತ್ತು ಉಪವ್ಯವಸ್ಥೆಗಳು ನೀತಿ ನಿಯಮ ಸಂಗತಿಗಳಿಂದಾಗಿ ತಂತ್ರಾಂಶ ಅಭಿವೃದ್ಧಿಕಾರರಿಗೆ ಯಂತ್ರಾನುವಾದ. ಪಠ್ಯದಿಂದ ಧ್ವನಿಗೆ ಪರಿವರ್ತನೆ, ಧ್ವನಿಯಿಂದ ಪಠ್ಯಕ್ಕೆ ಪರಿವರ್ತನೆ, ಕಾಗುಣಿತ ಸರಿಪಡಿಸುವಿಕೆ, ದ್ವಿಭಾಷಾ ನಿಘಂಟುಗಳು, ಮಾರ್ಫಾಲಾಜಿಕಲ್ ಅನಲೈಸರ್‌ಗಳು, ಸ್ಟೆಮ್ಮರ್‌ಗಳು ಲೆಮ್ಮಟೈಸರ್‌ಗಳು, ವರ್ಗಾವಣೆ



ವ್ಯಾಕರಣಗಳು. ಮುಂತಾದ ಭಾಷಾ ಅಧಾರಿತ ತಂತ್ರಾಂಶಗಳನ್ನು ರೂಪಿಸಲು ಇವು ಅತ್ಯವಶ್ಯವಾಗಿವೆ, ಇವುಗಳನ್ನು ಹಲವು ಸರ್ಕಾರಿ ಅನುದಾನಿತ ಸಂಸ್ಥೆಗಳು ಮತ್ತು ಯಂತ್ರಾನುವಾದ ವ್ಯವಸ್ಥೆಗಳು ರೂಪಿಸಿದ್ದರೂ ಅವುಗಳು ವೆಬ್ ಸರ್ವಿಸ್ ಆಗಿಯಾಗಲೀ, ಎಪಿಐ (ಅಪ್ಲಿಕೇಶನ್ ಡೆವಲಪ್‌ಮೆಂಟ್ ಇಂಟರ್‌ಫೇಸ್) ಆಗಿಯಾಗಲೀ ಲಭ್ಯವಿಲ್ಲ. ಇಂಥ ಉಪವ್ಯವಸ್ಥೆಗಳು ಮತ್ತು ಎಪಿಐಗಳು ತಂತ್ರಾಂಶ ಅಭಿವೃದ್ಧಿಯಲ್ಲಿ ಸಹಾಯಕವಾಗುತ್ತವೆ.

೧೨. ಮುಕ್ತ ತಂತ್ರಜ್ಞಾನ ನೀತಿ ಮತ್ತು ಸಾರ್ವಜನಿಕ ಹಣ ಅಧಾರಿತ ಯೋಜನೆಗಳು: ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳು ಭಾರತೀಯ ಭಾಷೆಗಳ/ ಕನ್ನಡದ ಐಟಿ ಸಾಧನಗಳನ್ನು, ತಂತ್ರಾಂಶಗಳನ್ನು ರೂಪಿಸಲು ಧನಸಹಾಯ ನೀಡುತ್ತವೆ. . ಇವುಗಳನ್ನು ಮುಕ್ತ ತಂತ್ರಾಂಶ ವ್ಯವಸ್ಥೆಯಲ್ಲಿ ರೂಪಿಸುವುದು ಮತ್ತು ಯಾವುದೇ ವೇದಿಕೆಯಲ್ಲಿ ಕೆಲಸ ಮಾಡುವ ಹಾಗೆ ರೂಪಿಸುವುದು ಒಂದು ಸವಾಲಾಗಿದೆ. ಅಲ್ಲದೇ ಅತ್ಯತ್ತಮ ಭಾಷಾ ಐಟಿ ಸಾಧನಗಳನ್ನು ರೂಪಿಸಲು ಸಂಶೋಧಕರಿಗೆ, ತಜ್ಞರಿಗೆ ಮತ್ತು ಅಪ್ಲಿಕೇಶನ್ ತಯಾರಕರಿಗೆ ನಿಧಿಸಹಾಯ ಒದಗಿಸಬೇಕಾಗುತ್ತದೆ. ಅದಿಲ್ಲವಾದರೆ ಖಾಸಗಿ ತಂತ್ರಾಂಶಗಳೇ ಮೇಲುಗೈ ಸಾಧಿಸಿ ಸರ್ಕಾರಗಳು ಕೈಚೆಲ್ಲಿ ಕೂರಬೇಕಾಗುತ್ತದೆ. ಸರ್ಕಾರವು ಸ್ಟಾಟ್‌ಅಪ್ ಸಂಸ್ಥೆಗಳಿಗೆ ನಿಧಿ ನೀಡುವಾಗ ಸಾರ್ವಜನಿಕ ಹಿತಾಸಕ್ತಿ ಮತ್ತು ಮುಕ್ತ ಲಭ್ಯತೆಯನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು ಎಂಬುದು ನನ್ನ ಅಗ್ರಹವಾಗಿದೆ. ಕರ್ನಾಟಕ ಸರ್ಕಾರವು ಮುಕ್ತ ತಂತ್ರಾಂಶ ನೀತಿಯನ್ನು ಅನುಮೋದಿಸಿ ಪ್ರಕಟಿಸಬೇಕು ಎಂಬುದು ನನ್ನ ವೈಯಕ್ತಿಕ ಅಗ್ರಹವಾಗಿದೆ.

೧೩. ಮುಕ್ತಜ್ಞಾನದ ಅಭಿಯಾನದಲ್ಲಿ ತೊಡಕುಗಳು: ಕರ್ನಾಟಕ ಸರ್ಕಾರವು ನಿರ್ವಹಿಸುತ್ತಿರುವ ಕಣಜ ಜಾಲತಾಣವು ಈಗ ಹೆಚ್ಚಿನ ಬೆಳವಣಿಗೆ ಕಾಣುತ್ತಿಲ್ಲ. ಈಗ ಕಣಜ ಜಾಲತಾಣವನ್ನು ಭಾರತದ ಅತ್ಯುತ್ತಮ ಜ್ಞಾನಕೋಶವಾಗಿ ರೂಪಿಸಲು ಹೊಸ ಹಾದಿಗಳನ್ನು ಹುಡುಕಬೇಕಾಗಿದೆ. ಸರ್ಕಾರದ ಮತ್ತು ಸಮುದಾಯದ ಎಲ್ಲ ಮುಕ್ತ ಜ್ಞಾನಗಳನ್ನೂ ಕಣಜ ಜಾಲತಾಣದಲ್ಲಿ ಪ್ರಕಟಿಸುವ ಬಗ್ಗೆ ಬೃಹತ್ ಆಂದೋಲನ ಆಗಬೇಕಿದೆ. ಪದೇ ಪದೇ ಅಧ್ಯತೆಗಳು ಬದಲಾಗುವ ಸಮಸ್ಯೆಯನ್ನು ಕಣಜ ಜಾಲತಾಣವು ಎದುರಿಸುತ್ತಿದೆ. ಕಣಜ ಬೆಳೆಸುವಲ್ಲಿ ಸಮುದಾಯವನ್ನೂ ಹೆಚ್ಚಿನ ಪ್ರಮಾಣದಲ್ಲಿ ವಿಶ್ವಾಸಕ್ಕೆ ತೆಗೆದು ಕೊಂಡು ಜ್ಞಾನ ಸಂಗ್ರಹವನ್ನು ವಿಸ್ತರಿಸಬೇಕಿದೆ. ಕಣಜ ಜಾಲತಾಣಕ್ಕೆ ಈಗಾಗಲೇ ಹತ್ತು ವರ್ಷಗಳು ಆಗುತ್ತಿರುವುದರಿಂದ ರಾಜ್ಯ ಸರ್ಕಾರವು ಮುಕ್ತಜ್ಞಾನ ನೀತಿಯನ್ನು ಪ್ರಕಟಿಸಿ ದೇಶಕ್ಕೆ ಮಾದರಿ ಆಗಬೇಕು ಎಂಬುದು ನನ್ನ ವೈಯಕ್ತಿಕ ಅಗ್ರಹವಾಗಿದೆ.

೧೪. ಸರ್ವಬಳಕೆಯ ಸೂತ್ರಗಳ ಅಳವಡಿಕೆ: ಕನ್ನಡ ತಂತ್ರಾಂಶಗಳನ್ನು ರೂಪಿಸುವಾಗ



ವಿಶ್ವಮಾನ್ಯ ಸರ್ವಬಳಕೆಯ(ಅಕ್ಸೆಸಿಬಿಲಿಟಿ) ಸೂತ್ರಗಳನ್ನು ಕಡ್ಡಾಯವಾಗಿ ಅಳವಡಿಸಬೇಕಿದೆ. ಭಾರತದಲ್ಲಿ ಗಮನಾರ್ಹ ಸಂಖ್ಯೆಯಲ್ಲಿ ಅಕ್ಸೆಸಿಬಿಲಿಟಿ ಅಗತ್ಯವಿರುವ ಅರ್ಹ ಉದ್ಯೋಗಿಗಳು, ಭವಿಷ್ಯದ ಉದ್ಯೋಗಿಗಳು ಇದ್ದಾರೆ ಆದ್ದರಿಂದ ಸಮಾನ ಅವಕಾಶಗಳನ್ನು ರೂಪಿಸಲು ತಂತ್ರಾಂಶ ನೀತಿಯಲ್ಲಿ ಸರ್ವಬಳಕೆಯ ಸೂತ್ರಗಳನ್ನು ಕಡ್ಡಾಯವಾಗಿ ಅಳವಡಿಸುವುದು ಬಹುದೊಡ್ಡ * ಸವಾಲಾಗಿದೆ.

**ಅಧ್ಯಕ್ಷ ಭಾಷಣ:**

**ಭಾಷೆ-ತಂತ್ರಜ್ಞಾನ: ಕಡಿಮೆಯಾಗಬೇಕಾದ ಕಂದಕ**

**- ಸುಭಂದ್ರ ಹಾಲ್ಗೊಟ್ಟೇಲಿ**

ಇಂದಿನ "ಕನ್ನಡ ಭಾಷೆ : ಹೊಸ ತಂತ್ರಜ್ಞಾನ" ಗೋಷ್ಠಿಗೆ ಆಶಯನುಡಿಗಳನ್ನಾಡಿದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮಾನ್ಯ ಕುಲಪತಿ ಡಾ. ಕರಿಸಿದ್ದಪ್ಪನವರೆ, ಈ ಗೋಷ್ಠಿಯಲ್ಲಿ ವಿಷಯ ಮಂಡನೆ ಮಾಡುತ್ತಿರುವ (ಮಾಡಿದ) ತಜ್ಞವೃಂದದಲ್ಲಿರುವ ಮುಖ್ಯಮಂತ್ರಿಗಳಿಗೆ ಇ-ಆಡಳಿತ ಸಲಹಾಕಾರ ಶ್ರೀ ಬೇಳೂರು ಸುದರ್ಶನ. ಕನ್ನಡ ಗಣಕ ಪರಿಷತ್ ಕಾರ್ಯದರ್ಶಿ ಶ್ರೀ ಜಿ.ಎನ್. ನರಸಿಂಹಮೂರ್ತಿ ಹಾಗೂ ಸಾಫ್ಟ್ ವೇರ್ ತಂತ್ರಜ್ಞಶ್ರೀ ಟಿ.ಜಿ. ಶ್ರೀನಿಧಿಯವರೆ ನೀವು ನಾಲ್ಕು ಜನರು ನನ್ನ ಕೆಲಸವನ್ನು ಸಾಕಷ್ಟು ಹಗುರ ಮಾಡಿದ್ದೀರಿ. ಯಾವುದೇ ಒಂದು ಹೊಸ ತಂತ್ರಜ್ಞಾನ ನಮ್ಮ ಎಂದಿನ ಕೆಲಸಗಳನ್ನು ಹಗುರ ಮಾಡಬೇಕು. ನಮ್ಮ ಕಾರ್ಯದಕ್ಷತೆಯನ್ನು ಹೆಚ್ಚಿಸಬೇಕು ಜತೆಗೆ ಅದು ಎಲ್ಲರ ಕೈಗೆಟಕುವಂತಿರಬೇಕು ಹಾಗೂ ಸುಲಭ ಲಭ್ಯವಾಗಬೇಕು. ತಂತ್ರಜ್ಞಾನಗಳ ಅಭಿವೃದ್ಧಿಗೆ ಹೂಡಿದ ಹಣ ನಿಜ ಅರ್ಥದಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳುವುದು ಯಾವಾಗಲೆಂದರೆ ಅದು ಈ ದೇಶದ ಕಟ್ಟಕಡೆಯ ಮನುಷ್ಯನನ್ನೂ ಮುಟ್ಟಿದಾಗ ಮಾತ್ರ ಇವೆಲ್ಲ ಆಶಯಗಳ ಹಿನ್ನೆಲೆಯಲ್ಲಿ ಕನ್ನಡ ಭಾಷೆಯ ಶ್ರೇಯೋಭಿವೃದ್ಧಿಗೆ ಹೊಸ ತಂತ್ರಜ್ಞಾನಗಳ ಕೊಡುಗೆಗಳೇನು ತರುತ್ತಿದೆ? ಎಂಬುದನ್ನು ಸಹಾ ನಾವು ಗುರುತಿಸಬೇಕಾಗುತ್ತದೆ.

ಮಾತಿನ ಮೊದಲು ನಮ್ಮ ಕನ್ನಡ ಭಾಷೆಯ ಕುರಿತಂತೆ ಕೆಲ ಕಾಲ ಚಿಂತಿಸೋಣ. ಒಂದು ಉಲ್ಲೇಖದಂತೆ ಈ ಜಗತ್ತಿನ ಆರು ಸಾವಿರ ಭಾಷೆಗಳಲ್ಲಿ ಜೀವಂತಿಕೆಯ ದೃಷ್ಟಿಯಿಂದ ಕನ್ನಡದ ಸ್ಥಾನ ಇಪ್ಪತ್ತೈದು. ಹಾಗೆಯೇ ಇದು ಅತ್ಯಂತ ಸತ್ವಯುತ ಭಾಷೆಗಳಲ್ಲಿ ಒಂದು. ಇದನ್ನು ಹೇಳುವ ಸಮಯದಲ್ಲಿ ಇತ್ತೀಚೆಗಷ್ಟೇ ನಮ್ಮನ್ನಗಲಿದ ಹಿರಿಯ ಸಾಹಿತಿ- ಸಂಶೋಧಕ-ಹೋರಾಟಗಾರ ಡಾ. ಎಂ. ಚಿದಾನಂದಮೂರ್ತಿಯವರು ಸದಾ ಹೇಳುತ್ತಿದ್ದ ಮಾತುಗಳು ನನ್ನ ನೆನಪಿಗೆ ಬರುತ್ತಿವೆ. ಬಹುಶಃ ಅದು ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತ ಸಂದರ್ಭವಿರಬೇಕು. ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿನ ಸಮಾರಂಭವೊಂದರ ಅಧ್ಯಕ್ಷತೆ ವಹಿಸಿದ ಚಿದಾನಂದಮೂರ್ತಿ ಅವರು ಹೀಗೆ ಹೇಳಿದ್ದರು "ಶಾಸ್ತ್ರೀಯ ಭಾಷೆಯ ಸ್ಥಾನವೆಂಬುದು ಕೇಂದ್ರ ಸರ್ಕಾರ ನೀಡುವ ಪದಕ ಅಥವಾ ಪ್ರಮಾಣಪತ್ರದಿಂದ ನಿರ್ಧಾರವಾಗುವುದಿಲ್ಲ. ಭಾಷೆಯೊಂದು ನಿಜವಾದ ಅರ್ಥದಲ್ಲಿ ಶಾಸ್ತ್ರೀಯ ಸ್ಥಾನ ಪಡೆಯುವುದು ಯಾವಾಗ ಎಂದರೆ ಆ ಭಾಷೆಯನ್ನು ನಾಡಿನ ಎಲ್ಲ ಕ್ಷೇತ್ರಗಳ ಪರಿಣತರೂ ಬಳಸಲು ಸಾಧ್ಯವಾದಾಗ. ಹಾಗೆಯೇ ಅವರೆಲ್ಲರೂ ವ್ಯಕ್ತಪಡಿಸಿದ ವಿಷಯಗಳನ್ನು ಜನಸಾಮಾನ್ಯರು ಅರ್ಥಮಾಡಿಕೊಳ್ಳುವಂತೆ ಆದಾಗ, ತೀರಾ ಸರಳವಾಗಿ ಹೇಳಬೇಕೆಂದರೆ ಆ ಭಾಷೆಗಿರುವ ಪದಸಂಪತ್ತು ಹಾಗೂ ಅದರ ವ್ಯಾಪ್ತಿ ಇಂಥ ಸ್ಥಾನವನ್ನು

ನಿರ್ಧರಿಸುತ್ತದೆ. ಈ ನಿಟ್ಟಿನಲ್ಲಿ ಚಿದಾನಂದಮೂರ್ತಿಯವರ ಚಿಂತನೆಗಳನ್ನೇ ವಿಸ್ತರಿಸುವುದಾದರೆ ಸರಳ ಸಂಪರ್ಕ ಭಾಷೆಯಾದ ಕನ್ನಡವು ಧ್ವನ್ಯಾತ್ಮಕ ಭಾಷೆ ನುಡಿದಂತೆ ಬರೆಯಬಲ್ಲ, ಬರೆದಂತೆ ನುಡಿಯಲು ಸಾಧ್ಯವಾಗುವ ಅನನ್ಯ ಭಾಷೆಗಳಲ್ಲಿ ಕನ್ನಡವೂ ಒಂದು. ಶಾಸ್ತ್ರೀಯ ಭಾಷೆಯೆನ್ನುವುದಕ್ಕಿಂತಲೂ ಕನ್ನಡ ಒಂದು ಸದೃಢ ಭಾಷೆ, ಕಾಲ ಕಾಲದ ಎಲ್ಲ ಪಲ್ಲಟಗಳನ್ನೂ, ಎಲ್ಲ ಪರಕೀಯ ದಾಳಿಗಳನ್ನು ತಡೆದು ನಿಂತಿದೆ. ಹಾಗೆಯೇ ಬಳಕೆದಾರರ ಬದಲಾದ ಆದ್ಯತೆಗಳಿಗೆ ತಕ್ಕಂತೆ ಮಡಿವಂತಿಕೆಯನ್ನು ತೊರೆದು ಇತರ ಭಾರತೀಯ ಭಾಷೆಗಳಂತೆಯೇ ಹೊಸತನಕ್ಕೆ ತೆರೆದುಕೊಂಡಿದೆ. ಭಾಷೆಯು ಶಿಷ್ಟರೂಪದಲ್ಲಿ ಕಡಿಮೆ ಬಳಕೆಯಾಗುತ್ತಿರಬಹುದು. ಆದರೆ ಅಸಾಂಪ್ರದಾಯಿಕ ನೆಲೆಗಟ್ಟುಗಳಲ್ಲಿ ಅದು ಹೆಚ್ಚು ಬಳಕೆಯಾಗುತ್ತಿರಬಹುದು. ಈ ಹೆಚ್ಚಿನ ಮಟ್ಟದ ಬಳಕೆಗೆ ತಂತ್ರಜ್ಞಾನಗಳ ಕೊಡುಗೆ ಅಪಾರ. ಹಿಂದೆಲ್ಲಾ ದಿನಪತ್ರಿಕೆಯಿಂದ ಒಂದು ಲಕ್ಷ ಪ್ರತಿಗಳ ಮುದ್ರಣ ವಾಗುತ್ತಿದೆಯೆಂಬುದೇ ದಾಖಲೆಯ ಸುದ್ದಿಯಾಗಿತ್ತು. ಇಂದು ಹಲವು ಪತ್ರಿಕೆಗಳು ಪ್ರತಿಯೊಂದೂ ಐದಾರು ಲಕ್ಷ ದಿನಂಪ್ರತಿ ಮಾರಾಟವಾಗುತ್ತಿವೆ. ಟೀವಿ ಮಾಧ್ಯಮದ ಭರಾಟೆಯ ಹೊರತಾಗಿಯೂ ಇಷ್ಟೊಂದು ಪ್ರಮಾಣದಲ್ಲಿ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಏಕ ಕಾಲಕ್ಕೆ ಮುದ್ರಣಗೊಂಡು ವಿತರಣೆಯಾಗುತ್ತಿರುವುದು ಪೂರಕ ತಂತ್ರಜ್ಞಾನಗಳಿಂದಾಗಿಯೇ ಎಂದರೆ ಉತ್ಪ್ರೇಕ್ಷೆಯಲ್ಲ. ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲಾಕೇಂದ್ರಗಳನ್ನು ಪರಿಗಣಿಸಿದರೆ ವಾರವೊಂದಕ್ಕೆ ಕನಿಷ್ಠ ಹತ್ತರಿಂದ ಇಪ್ಪತ್ತು ಕನ್ನಡ ಪುಸ್ತಕಗಳು ಬಿಡುಗಡೆಯಾಗುತ್ತಿವೆ. ಇವುಗಳಲ್ಲಿ ಬಹುತೇಕ ಪುಸ್ತಕಗಳು ಶುದ್ಧ ಸಾಹಿತ್ಯ ಪ್ರಕಾರಕ್ಕೆ ಸಂಬಂಧಿಸಿದ್ದರೂ ಕೆಲವು ಪುಸ್ತಕಗಳು ವಿಜ್ಞಾನ-ತಂತ್ರಜ್ಞಾನದ ಹೊಸ ಹೊಳಹುಗಳ ಕುರಿತಂತೆಯೂ ಇರುತ್ತವೆ. ಕನಿಷ್ಠ ಎರಡು ವಾರಗಳಿಗೆ ಒಮ್ಮೆಯಾದರೂ ಕನ್ನಡ ದಿನಪತ್ರಿಕೆಗಳು ವಿಜ್ಞಾನ-ತಂತ್ರಜ್ಞಾನಗಳಿಗೆ ಸಂಬಂಧಿಸಿದ ಅಂಕಣ ಬರಹಗಳು, ವಿಶೇಷ ಲೇಖನಗಳು ನುಡಿಚಿತ್ರಗಳನ್ನು ಪ್ರಕಟಿಸುತ್ತಿವೆ. ಹೊಸತೊಂದು ಉಪಗ್ರಹ ಅಥವಾ ಕ್ಷಿಪಣಿ ಉಡ್ಡಯನಯಾದೊಡನೆ ಆ ಕುರಿತು ವಿಶ್ಲೇಷಣೆಯನ್ನು ಪರಿಣತರೊಂದಿಗೆ ಚರ್ಚಿಸುವ ಕಾರ್ಯಕ್ರಮಗಳನ್ನು ಟೀವಿ ಚಾನೆಲ್‌ಗಳು ಹಮ್ಮಿಕೊಳ್ಳುತ್ತಿವೆ.

ಹೊಸ ತಂತಜ್ಞಾನಗಳ ಕುರಿತು ಪ್ರಸ್ತಾಪಿಸುವಾಗ ನಾವು ತಪ್ಪದೇ ಉಲ್ಲೇಖಿಸುವ ಪದ ಕಂಪ್ಯೂಟರ್, ಇಂದು ಕನ್ನಡವೂ ಸೇರಿದಂತೆ ಭಾಷೆಗಳ ವ್ಯಾಪಕತೆಯನ್ನು ಹೆಚ್ಚಿಸುತ್ತಿರುವ ಹೊಸ ತಂತ್ರಜ್ಞಾನಗಳು ಈ ಕಂಪ್ಯೂಟರ್ ಅನ್ನು ಆವರಿಸಿರುವವುಗಳೇ ಆಗಿವೆ. ಹೊಸ ತಂತ್ರಜ್ಞಾನಗಳು ಕಂಪ್ಯೂಟರ್‌ನ ಯಂತ್ರಾಂಶ ಅಥವಾ ಹಾರ್ಡ್‌ವೇರ್ ಗಳಿಗೆ ಸಂಬಂಧಿಸಿರಬಹುದು. ಹಾಗೂ ತಂತ್ರಾಂಶ ಅಥವಾ ಸಾಫ್ಟ್‌ವೇರ್‌ಗಳಿಗೆ ಸಂಬಂಧಿಸಿರಬಹುದು. ಹೊಸ ತಂತ್ರಜ್ಞಾನವೊಂದನ್ನು ಅಭಿವೃದ್ಧಿಪಡಿಸುವಾಗ ತಂತ್ರಜ್ಞರು ಸದಾ ಈ ಮೂರು ಮಂತ್ರಗಳನ್ನು ಜಪಿಸುತ್ತಿರುತ್ತಾರೆ- ಅದು ಕೆಲಸದ ವೇಗವನ್ನು ಹೆಚ್ಚಿಸಬೇಕು. ಅದು ಸುಲಭವಾಗಿ ಬಳಸುವಂತಿರಬೇಕು. ಹಾಗೂ ಅದು ಹಿಂದಿನದಕ್ಕಿಂತಲೂ ಅಗ್ಗವಾಗಿರಬೇಕು. ನಮ್ಮ ಆಡುನುಡಿ ಕನ್ನಡ ಮಾಹಿತಿಯನ್ನು ಅತ್ಯಂತ ಕ್ಲುಪ್ತ ಅವಧಿಯಲ್ಲಿ, ಸುಲಭವಾಗಿ ಅರ್ಥವಾಗುವಂತೆ, ಅಗ್ಗದ ದರದಲ್ಲಿಯೇ ತಲುಪಿಸುವಲ್ಲಿ ಮೊಬೈಲ್, ಟೀವಿ, ರೇಡಿಯೋ ಸೇರಿದಂತೆ

ಕಂಪ್ಯೂಟರ್ ಸಂಬಂಧಿತ ಗ್ಯಾಜೆಟ್‌ಗಳು ಯಶಸ್ವಿಯಾಗಿವೆ. ಅವುಗಳಿಗೆ ಸಂಬಂಧಿಸಿದ ಕಾರ್ಯಚರಣೆ ವ್ಯವಸ್ಥೆಗಳು, ಲಿಪಿ ತಂತ್ರಾಂಶಗಳು ಅಕ್ಷರ



ವಿನ್ಯಾಸಗಳು, ಅಕ್ಷರ -ಧ್ವನಿ-ಅಕ್ಷರ ಪರಿವರ್ತಕಗಳು, ಬರಹ ಚಹರೆ ಸಂಸ್ಕಾರಕಗಳು ಕನ್ನಡ ಭಾಷೆಯಲ್ಲಿನ ಜ್ಞಾನ ಸಂವಹನೆಗೆ ಅತಿ ಹೆಚ್ಚಿನ ಕೊಡುಗೆಗಳನ್ನು ನೀಡಿವೆ. ಕೈಬರಹ. ಮುದ್ರಿತ ಪುಟ, ಚಿತ್ರ, ಛಾಯಚಿತ್ರ, ಧ್ವನಿತುಣಕುಗಳ ದಾಖಲೆಗಳು ಇಂದು ಸುಲಭವಾಗಿ ಡಿಜಿಟಲೀಕರಣಗೊಳ್ಳಲು ನೆರವಾಗುತ್ತಿದೆ. ಮಾಹಿತಿ ಸಂಚಯಗಳಲ್ಲಿ ಸೇರಿಹೋದ ಇಂಥ ಮಾಹಿತಿಗಳನ್ನು ಇಂದು ಅಕಾರಾದಿ ವಿಂಗಡನೆ, ಸೌಕರ್ಯದಿಂದ ಯಾವುದೇ ಸಮಯ-ಸಂದರ್ಭಗಳಲ್ಲಿ ಸುಲಭವಾಗಿ ಹೆಕ್ಕಿ ತೆಗೆಯಬಹುದು. ಇಂಟರ್‌ನೆಟ್ ಸಂಪರ್ಕದ ನೆರವಿನಿಂದ ಜಾಲತಾಣದ ಮಾಹಿತಿ ಸಂಚಯಗಳಲ್ಲಿ ಪದಕೋಶಗಳನ್ನು, ಧ್ವನಿಮಾಹಿತಿ ಬಿತ್ತರಣೆಯನ್ನು, ವೀಡಿಯೋಗಳನ್ನು ಎಲ್ಲೆಂದರಲ್ಲಿ ವೀಕ್ಷಿಸಬಹುದು. ತಂತ್ರಜ್ಞಾನವನ್ನು ಅರಗಿಸಿಕೊಂಡವರಿಗಷ್ಟೇ ಮೀಸಲಿದ್ದ ಇಂಥ ಎಷ್ಟೋ ಅನುಕೂಲಗಳು ಇಂದು ತಂತ್ರಜ್ಞಾನದ ಕಿಂಚತ್ ಪರಿಚಯವಿರುವವರಿಗೂ ಲಭ್ಯವಾಗುತ್ತಿವೆ. ಬಳಕೆದಾರ- ಸ್ನೇಹಿ ಸ್ಪರ್ಶಸಂವೇದಿ ತಂತ್ರಜ್ಞಾನಗಳ ನೆರವಿನಿಂದಾಗಿ ಇಂದು ಮಾಹಿತಿ ತಂತ್ರಜ್ಞಾನದ ನೂರಾರು ಸೌಲಭ್ಯಗಳು ಸಾಮಾನ್ಯ ಜನರನ್ನು ಮುಟ್ಟಿವೆ. ಅಂಗೈನಲ್ಲಿ ಹಿಡಿಯಬಹುದಾದ ಮೊಬೈಲ್ ಫೋನ್‌ಗಳ ನೆರವಿನಿಂದ ಮೀನುಗಾರರು ಕಡಲತೀರದಲ್ಲಿ ಯಾವ ಸಮಯದಲ್ಲಿ ಎಷ್ಟು ಉಬ್ಬರವಿರುತ್ತದೆಯೆಂದು ತಿಳಿಯಬಹುದು. ಬೆಂಗಳೂರಿನ ವಾಹನಚಾಲಕರು ಯಾವ ರಸ್ತೆಯಲ್ಲಿ ಜನದಟ್ಟನಣೆ ಕಡಿಮೆಯಿರುತ್ತದೆಯೆಂದು ಅರಿಯಬಹುದು. ಮಳೆ ಸೇರಿದಂತೆ ಹವಾಮಾನ ಕುರಿತ ರೈತರಿಗೆ ಸಲಹೆ, ಮುನ್ನೆಚ್ಚರಿಕೆಗಳೂ ಫೋನಿನಲ್ಲೇ ಇಂದು ಲಭ್ಯ. ಚಟ್ನಿಪುಡಿ-ಮೆಣಸಿನಪುಡಿ-ಚಕ್ಕುಲಿ-ಕೋಡುಬಳೆಗಳು ಸಹಾ ಇಂದು ಆನ್‌ಲೈನ್ ವಹಿವಾಟಿನ ಸರಕುಗಳಾಗಿವೆ. ಫೇಸ್‌ಬುಕ್‌ನಂಥ ಸಾಮಾಜಿಕ ಜಾಲತಾಣಗಳ ಮೂಲಕ ಅನೇಕ ಗೃಹಿಣಿಯರು ತಮ್ಮ ಕಸೂತಿಯ ಅರಿವೆಗಳು, ಹೆಣಿಗೆಯ ಬುಟ್ಟಿಗಳು. ಜಲ-ತೈಲ ಚಿತ್ರಗಳನ್ನು ಬಿಕರಿ ಮಾಡುತ್ತಿದ್ದಾರೆ. ಹಾಗೆಯೇ ರಾಸಾಯನಿಕ ಬಳಸದೆಯೇ ಬೆಳೆದ ಮಾವಿನಹಣ್ಣು, ದ್ರಾಕ್ಷಿ, ನೈಸರ್ಗಿಕವಾಗಿ ಬೆಳೆದ ತರಕಾರಿಗಳ ವಿತರಣೆಗೆ ಕಂಪ್ಯೂಟರ್ ಸಾಕ್ಷರ ರೈತರು ಆನ್‌ಲೈನ್ ಮಾರ್ಗವನ್ನು ಕಂಡುಕೊಂಡಿದ್ದಾರೆ. ಇನ್ನು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಮಿತಿಯೇ ಇಲ್ಲದಷ್ಟು ಸೌಲಭ್ಯಗಳು ಇಂದು ಸಿಗುತ್ತಿವೆ. ವಿಶ್ವವಿದ್ಯಾಲಯಗಳು ತಮ್ಮ ವಹಿವಾಟಿನಲ್ಲಿ ವಿದ್ಯಾರ್ಥಿ ಸ್ನೇಹಿ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿವೆ. ಉದಾಹರಣೆಗೆ ಹೆಚ್ಚಿನ ವ್ಯಾಸಂಗಕ್ಕೆ ವೀಸಾ ಅರ್ಜಿ ಗುಜರಾಯಿಸಿರುವ ವಿದ್ಯಾರ್ಥಿಗಳ ದಾಖಲೆಗಳನ್ನು ಅಮೆರಿಕದ ದೂತವಾಸವು ತಮ್ಮೊಂದಿಗೆ ಒಡಂಬಡಿಕೆ ಮಾಡಿಕೊಂಡ ವಿಶ್ವವಿದ್ಯಾಲಯಗಳ ದತ್ತಾಂಶದೊಂದಿಗೆ ತಾಳೆ ನೋಡಬಹುದು. ಅಂತೆಯೇ ಹೆಚ್ಚಿನ ವ್ಯಾಸಂಗಕ್ಕೆ ತೆರಳಲಿರುವ ವಿದ್ಯಾರ್ಥಿಗಳು ಸಹಾ ತಮ್ಮ ಭವಿಷ್ಯತ್ತಿನ ವಿಶ್ವವಿದ್ಯಾಲಯಗಳಲ್ಲಿ ಜರಗುತ್ತಿರುವ ಸಂಶೋಧನೆಗಳು,

ಜಾಗತಿಕ ಮಟ್ಟದಲ್ಲಿ ಅದರ ಸಾಧನೆ. ಅಲ್ಲಿನ ಪ್ರಾಧ್ಯಾಪಕರ ಪರಿಣತಿ ಕುರಿತಂತೆ ಕೂಲಂಕಷವಾಗಿ ಮಾಹಿತಿಗಳನ್ನು ಸಂಗ್ರಹಿಸಬಹುದು. ಎಲ್ಲಕ್ಕೂ ಮಿಗಿಲಾಗಿ ಅಂತರ್ಜಾಲ ಸೌಕರ್ಯದ ನೇರ ಅನುವಾದ ಸೇವೆಗಳನ್ನು ಬಳಸಿ ಕನ್ನಡವೂ ಸೇರಿದಂತೆ ಯಾವುದೇ ಭಾಷೆಯಲ್ಲಿ ಆ ಮಾಹಿತಿಯ ವಿವರಗಳನ್ನು ಪಡೆಯಬಹುದು.

ಇಂಟರ್‌ನೆಟ್ ಬಳಕೆಯನ್ನೇ ಒಂದು ಮಾನದಂಡವಾಗಿರಿಸಿಕೊಂಡರೆ, ಚೀನಾ ದೇಶದ ಹೊರತಾಗಿ ಜಗತ್ತಿನಲ್ಲೇ ಅತಿ ಹೆಚ್ಚಿನ ಸಂಖ್ಯೆಯ ಇಂಟರ್‌ನೆಟ್ ಬಳಕೆದಾರರಿರುವುದು ಭಾರತದಲ್ಲಿ ನಲವತ್ತೈದು ಕೋಟಿ ಹತ್ತು ಲಕ್ಷಕ್ಕೂ ಹೆಚ್ಚು ಕ್ರಿಯಾಶೀಲ ಬಳಕೆದಾರರು



ನಮ್ಮಲ್ಲಿದ್ದಾರೆ. ಅವರಲ್ಲಿ ಮೂವತ್ತೆಂಟೂವರೆ ಕೋಟಿಗೂ ಹೆಚ್ಚಿನ ಬಳಕೆದಾರರು ೧೨ ವರ್ಷಕ್ಕಿಂತಲೂ ದೊಡ್ಡ ವಯಸ್ಸಿನವರು. ಹತ್ತೊಂಬತ್ತು ಕೋಟಿ ಹತ್ತು ಲಕ್ಷ ಬಳಕೆದಾರರು ಗ್ರಾಮೀಣ ಪ್ರದೇಶದಲ್ಲಿದ್ದು, ಅವರಲ್ಲಿ ಬಹುತೇಕರು ತಮ್ಮ ಭಾಷೆಯಲ್ಲಿಯೇ ಮಾಹಿತಿಗಳನ್ನು ಪಡೆಯುತ್ತಿದ್ದಾರೆ. ಅಂದರೆ ಹೊಸ ತಂತ್ರಜ್ಞಾನಗಳ ನೆರವಿನಿಂದಾಗಿ ಅವರಿಗೆ ತಮ್ಮ ತಮ್ಮ ಭಾಷೆಗಳಲ್ಲಿ ವಹಿವಾಟು ನಡೆಸಲು ಸಾಧ್ಯವಾಗಿದೆ. ಲಕ್ಷಗಟ್ಟಲೆ ಜನರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಬಲ್ಲ ಸಾಮರ್ಥ್ಯ ಇಂಟರ್‌ನೆಟ್ ನೆರವಿನ ಸಾಮಾಜಿಕ ಜಾಲತಾಣಗಳಿಗಿವೆ. ಇಂದು ಕನ್ನಡದ ಅನೇಕ ಸಾಹಿತ್ಯಕ ಪತ್ರಿಕೆಗಳು, ಪುಸ್ತಕಗಳ ಇ-ಆವೃತಿ, ಪ್ರಸುತ್ತ ಸಂಗತಿಗಳ ವೀಡಿಯೋ, ಪಾಡ್‌ಕಾಸ್ಟ್ ತುಣುಕುಗಳು ಸಾಮಾಜಿಕ ಜಾಲತಾಣಗಳ ಮೂಲಕವೇ ಪ್ರಸರವಾಗುತ್ತಿವೆ. ಆನ್‌ಲೈನ್‌ನಲ್ಲೇ ಉದ್ಯೋಗ ಸಂದರ್ಶನ, ಪರೀಕ್ಷೆಗಳು ಪಠ್ಯಬೋಧನೆ, ಉತ್ತರಪತ್ರಿಕೆಗಳ ಪರಿಶೀಲನೆ, ಫಲಿತಾಂಶ ಘೋಷಣೆ, ಅಂಕಪಟ್ಟಿ ವಿತರಣೆ ಮಾಡಲು ಸಾಧ್ಯವಾಗಿದೆ. ಹೊಸ ಉತ್ಪನ್ನವೊಂದರ-ಅದು ಕಾರಾಗಿರಲಿ ಅಥವಾ ಆರ್ಗನಿಕ್ ಕಾಳಾಗಿರಲಿ-ಬಗೆ ಬಳಕೆದಾರರ ಅಭಿಪ್ರಾಯಗಳನ್ನು ಖರೀದಿಗೆ ಮುನ್ನ ಇಂಥ ತಾಣಗಳ ಮೂಲಕ ಪಡೆಯಬಹುದು. ಈ ಉತ್ಪನ್ನಗಳ ಬಗೆಗಿನ ಅನುಭವಗಳನ್ನು ಮತ್ತೊಬ್ಬರ ಅನುಕೂಲಕ್ಕಾಗಿ ಹಂಚಿಕೊಳ್ಳಲೂಬಹುದು. ಅತ್ಯಂತ ತ್ವರಿತವಾಗಿ ಜ್ಞಾನಪ್ರಸರಣೆ ಮಾಡಲು ಇಂಟರ್ ನೆಟ್ ತಾಣಗಳಿಗಿಂತಲೂ ಪ್ರಶಸ್ತವಾದ ಸ್ಥಳ ಮತ್ತೊಂದಿಲ್ಲ.

ಇಷ್ಟೆಲ್ಲಾ ಪ್ರಸ್ತಾಪಿಸಿದ ಮೇಲೆ ವಿಷಯ ಮಂಡನೆ ಮಾಡಿರುವ ಶ್ರೀನಿದಿ, ನರಸಿಂಹಮೂರ್ತಿ ಹಾಗೂ ಸುದರ್ಶನರ ಮಾತುಗಳಲ್ಲಿ ಈ ಕೆಳಕಂಡವುಗಳನ್ನು ನಾವು ಗಮನದಲ್ಲಿರಿಸಿಕೊಳ್ಳಬೇಕು. ಜತೆಗೆ ತಮ್ಮ ಆಶಯನುಡಿಗಳಲ್ಲಿ ಕರಿಸಿದ್ದಪ್ಪನವರು ಪ್ರಸ್ತಾಪಿಸಿದ ಅಂಶಗಳನ್ನೂ ನಾವು ಮನನ ಮಾಡಬೇಕು. ಸಾಹಿತ್ಯ ಸಮ್ಮೇಳನದ ಈ ಗೋಷ್ಠಿಯ ನಡಾವಳಿಗಳಲ್ಲಿ ಇವು ದಾಖಲಾಗಿ, ಸರ್ಕಾರವೂ ಸೇರಿದಂತೆ ಸೂಕ್ತ ಹೊಣೆಗಾರರನ್ನು ಅವು ಮುಟ್ಟಬೇಕೆಂಬ ಆಶಯ ನನ್ನದು.

ಹೊಸ ತಂತ್ರಜ್ಞಾನಗಳು ತಂತ್ರಜ್ಞರಿಗೆ, ಭಾಷಾಶಾಸ್ತ್ರಜ್ಞರಿಗೆ ಶಿಕ್ಷಕರಿಗೆ-ಹೇಗೆ ಅನೇಕರಿಗೆ ಅವಕಾಶಗಳ ಮಹಾಪೂರವನ್ನೇ ಹರಿಸುತ್ತಿವೆ. ಸರ್ಕಾರದ ಅನೇಕ ಸೌಲಭ್ಯಗಳು ಸಾಮಾನ್ಯಜನರನ್ನು ತ್ವರಿತವಾಗಿ ಮುಟ್ಟಲು ಇವೇ ತಂತ್ರಜ್ಞಾನಗಳು ನೆರವಾಗುತ್ತಿವೆ. ಕಾರ್ಯಚಟುವಟಿಕೆಯ ಸರಪಳಿಯಲ್ಲಿ ಕೆಲವು ಕೊಂಡಿಗಳಿರುವ ಇಚ್ಛಾಶಕ್ತಿಯ ಕೊರತೆಯಿಂದಾಗಿ, ಕೊನೆಯ ಮನುಷ್ಯನಿಗೆ ಇಂಥ ತಂತ್ರಜ್ಞಾನಗಳೇ ಕೆಲವೊಮ್ಮೆ ತೊಡಕುಗಳಾಗುತ್ತಿವೆ. ಇತ್ತ ಆಡಳಿತ ಪಾರದರ್ಶಕತೆಯನ್ನು ಉತ್ತಮಪಡಿಸಿಕೊಳ್ಳಲು ಮತ್ತು ಆ ಮೂಲಕ ಜನರ ವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಸರ್ಕಾರಗಳಿಗೆ ಈ ಹೊಸ ತಂತ್ರಜ್ಞಾನಗಳು ನೆರವಿಗೆ ಬರುತ್ತಿವೆ. ಹಾಗೆಯೇ ಈ ತಂತ್ರಜ್ಞಾನಗಳ ಬಳಕೆ ಮತ್ತು ಅಭಿವೃದ್ಧಿಗಾಗಿ ಕಂಪನಿಗಳನ್ನು ಸ್ಥಾಪಿಸುವವರು ನೆಲ-ಜಲಗಳನ್ನು ಬಿಟ್ಟುಕೊಟ್ಟ ಸ್ಥಳೀಯರಿಗೆ ಯಾವ ಅನುಕೂಲಗಳನ್ನು ಕಲ್ಪಿಸಿಕೊಡುವರೆಂಬುದು ಮುಖ್ಯ ಪ್ರಶ್ನೆ. ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತಿರುವ ಐ.ಟಿ. ಉದ್ದಿಮೆಗಳು ಬೆಳ್ಳಂದೂರು, ವರ್ತೂರು, ಸರ್ಜಾಪುರ, ದೇವರಬೀಸನಹಳ್ಳಿಯ ಜನರಿಗೆ ನೀಡುವ ಉದ್ಯೋಗ ಕೊಡುಗೆಯೇನು? ಕಲ್ಲಿದ್ದಿಲಿನಿಂದ ವಿದ್ಯುತ್ ಉತ್ಪಾದಿಸುವ ನಂದಿಕೂರು ಕಂಪನಿ ಹಾಗೂ ಬೈಜಿಕ ವಿದ್ಯುತ್



ಉತ್ಪಾದಿಸುವ ಕೈಗಾ ಸ್ಥಾವರಗಳು ಕನಿಷ್ಠ ಅಲ್ಲಿಯ ಜನರಿಗೆ ೨೪ ಗಂಟೆಗಳ ವಿದ್ಯುತ್ ಪೂರೈಸುತ್ತಿವೆಯೇ? ಹಾಗಿದ್ದರೆ ಇವೆಲ್ಲ ಅವಕಾಶಗಳನ್ನು ಕಲ್ಪಿಸುವ ಸರ್ಕಾರದ ಜವಾಬ್ದಾರಿ ಯೇನು? ಇವೆಲ್ಲ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ಕಂಡುಕೊಳ್ಳಬೇಕಿದೆ ಅಂಥ ಉತ್ತರಗಳನ್ನು ಕನ್ನಡ ಭಾಷೆಯಲ್ಲಿಯೇ ಪ್ರಸ್ತುತ ಪಡಿಸಬೇಕಿದೆ. ಅದು ಸಾಧ್ಯವಾದಲ್ಲಿ ಭಾಷೆ ಹಾಗೂ ತಂತ್ರಜ್ಞಾನಗಳ ನಡುವಣ ಕಂದಕ ಕಡಿಮೆಯಾಗಬಹುದು. ಭಾಷೆಯೊಂದರ ಬಳಕೆಯ ಹೆಚ್ಚಳಕ್ಕೆ ತಂತ್ರಜ್ಞಾನಗಳು ನೆರವಾಗಬೇಕು. ಹೊಸ ತಂತ್ರಜ್ಞಾನಗಳ ಸಾಧಕ- ಬಾಧಕಗಳನ್ನು ಸಾಮಾನ್ಯ ಜನರಿಗೆ ತಲುಪಿಸಲು ಭಾಷೆ ಬೆಂಬಲಿಸಬೇಕು. ಭಾಷೆ ಹಾಗೂ ತಂತ್ರಜ್ಞಾನಗಳೆರಡಕ್ಕೂ ಸಂಪರ್ಕ ಕಲ್ಪಿಸುವ ಜವಾಬ್ದಾರಿ ಸ್ವತಃ ತಂತ್ರಜ್ಞರಾಗಿರುವ ತಂತ್ರಜ್ಞಾನ ಬರಹಗಾರರದ್ದು. ಇಂಥ ಜವಾಬ್ದಾರಿಯನ್ನು ದಶಕಗಳಿಂದಲೂ ಸ್ವಯಿಚ್ಛೆಯಿಂದ ಹೊತ್ತು ಸಮರ್ಥವಾಗಿ ನಿರ್ವಹಿಸುತ್ತಿರುವ ಹಿರಿಯರು ಇದೇ ವೇದಿಕೆಯಲ್ಲಿದ್ದಾರೆ. ಅಂಥ ವಿದ್ವಜ್ಜನರ ಜತೆ ಕೂತು ಮಾತನಾಡುವ, ವಿಷಯ ಹಂಚಿಕೊಳ್ಳುವ ವಿಶೇಷ ಅವಕಾಶ ನನ್ನದು ಹಾಗೂ ಸಭೆಯಲ್ಲಿ ನೆರೆದಿರುವ ಪರಿಷತ್ತಿನ ಅಧ್ಯಕ್ಷರು ಹಾಗೂ ಸಮ್ಮೇಳನದ ಅಯೋಜಕರೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

# ಪುಸ್ತಕ ಲೋಕ

# ಕನ್ನಡ ಪುಸ್ತಕೋದ್ಯಮ-ಸವಾಲು

**- ಪ್ರಕಾಶ್ ಕಂಬತ್ತಳ್ಳಿ**

ಕನ್ನಡ ಪುಸ್ತಕೋದ್ಯಮ ಇಂದು ಸಂಕೀರ್ಣ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಹಾಗೆ ನೋಡಿದರೆ ಕನ್ನಡ ಪುಸ್ತಕೋದ್ಯಮಕ್ಕೆ 'ಸಮೃದ್ಧ' ಎನ್ನುವಂತಹ ಸ್ಥಿತಿ ಇರಲೇ ಇಲ್ಲ. ಹತ್ತು ವರ್ಷಗಳ ಹಿಂದೆ ಕನ್ನಡದಲ್ಲಿ ವರ್ಷಕ್ಕೆ ಸುಮಾರು ಎರಡೂವರೆ ಸಾವಿರದಿಂದ ಮೂರು ಸಾವಿರ ಪುಸ್ತಕಗಳು ಪ್ರಕಟವಾಗುತ್ತಿವೆ. ಇಂದು ಕನ್ನಡದಲ್ಲಿ ವರ್ಷಕ್ಕೆ ಸುಮಾರು ಏಳು ಸಾವಿರಕ್ಕೂ ಹೆಚ್ಚು ಪುಸ್ತಕಗಳು ಪ್ರಕಟವಾಗುತ್ತಿವೆ. ಅದರೂ ಪರಿಸ್ಥಿತಿ ಆಶಾದಾಯಕವಾಗೇನೂ ಇಲ್ಲ. ಪುಸ್ತುಕಗಳು ಪ್ರಕಟವಾಗುತ್ತಿರುವ ವೇಗದಲ್ಲಿ ಕನ್ನಡ ಓದುಗರು ಸೃಷ್ಟಿಯಾಗುತ್ತಿಲ್ಲ. ಇದಕ್ಕೆ ಕಾರಣಗಳು ಹಲವು.

ಕನ್ನಡ ಪುಸ್ತಕಗಳ ಪ್ರಕಟಣೆಗೆ ಸುಮಾರು ೨೦೦ ವರ್ಷಗಳ ಇತಿಹಾಸವಿದೆ. ಕ್ರಿ.ಶ. ೧೮೧೭ರ ಆಗಸ್ಟ್ ೧೭ರಂದು ಪ್ರಕಟವಾದ ವಿಲಿಯಂ ಕೇರಿ ಎಂಬುವರು ಬರೆದ A Grammer Of Karnataka Language ಎನ್ನುವ ಪುಸ್ತಕವೇ ಕನ್ನಡದಲ್ಲಿ ಮೊದಲ ಪುಸ್ತಕ ಎನ್ನಲಾಗುತ್ತಿದೆ. ಈ ಪುಸ್ತಕ ಕಲ್ಕತ್ತದ ಹತ್ತಿರದ ಶ್ರೀರಾಂಪೋರ್ ಎಂಬಲ್ಲಿ ಪ್ರಕಟವಾಗಿತ್ತು ಎಂದು ದಾಖಲೆಗಳು ತಿಳಿಸುತ್ತವೆ.

ಆದರೆ ಕ್ರಿ.ಶ. ೧೮೧೦ರಲ್ಲೇ 'ಧಾತುಪಾಠ' ಎನ್ನುವ ಕನ್ನಡ ಪುಸ್ತಕ ಪ್ರಕಟವಾಗಿತ್ತು ಎಂದೂ ಕೆಲವರು ಹೇಳುತ್ತಾರೆ. ಕೃಷ್ಣಮಾಚಾರ್ಯ ಎನ್ನವವರು ಈ ಕೃತಿಯನ್ನು ರಚಿಸಿದ್ದರಂತೆ, ಆದರೆ ಇದರ ಪ್ರತಿ ಇನ್ನೂ ಸಿಕ್ಕಿಲ್ಲ.

ಹತ್ತೊಂಬತ್ತನೇ ಶತಮಾನ ಮತ್ತು ಇಪ್ಪತ್ತನೇ ಶತಮಾನದಲ್ಲಿ ಕನ್ನಡ ಸಾಹಿತ್ಯ ಸಮೃದ್ಧವಾಗಿ ಬೆಳೆಯಿತು. ಸರಸ್ವತಿ ರತ್ನಾಕರ ಬುಕ್ ಡಿಪೊ (ಕ್ರಿ.ಶ.೧೮೯೮) ಮತ್ತು ಟಿ.ಎನ್. ಕೃಷ್ಣಯ್ಯ ಶೆಟ್ಟಿ (ಕ್ರಿ. ಶ. ೧೯೦೦) ಅವರು ಮೊದಲಿಗರಾಗಿ ಪುಸ್ತಕ ಮಳಿಗೆಯನ್ನು ಬೆಂಗಳೂರಿನಲ್ಲಿ ತೆರೆದರು. ಆದರೂ ಕನ್ನಡ ಪುಸ್ತಕದ ಮಾರಾಟ ತಲೆ ಮೇಲೆ ಮೂಟೆ ಹೊತ್ತು ಮನೆಯಿಂದ ಮನೆಗೆ ಕೊಂಡು ಹೋಗಿ ಮಾರಾಟ ಮಾಡುವುದು ಜಾತ್ರೆಗಳಲ್ಲಿ ಮಾರಾಟ ಮಾಡುವುದು ಮುಂತಾದವುಗಳಿಗೆ ಸೀಮಿತವಾಗಿತ್ತು. ಈ ಪರಿಸ್ಥಿತಿಯನ್ನು ಗಮನಿಸಿದ ನ್ಯಾಯಮೂರ್ತಿ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಕನ್ನಡದ್ದೇ ಆದ ಮೊದಲ ಪುಸ್ತಕ ಮಳಿಗೆ 'ಸತ್ಯಶೋಧನ ಪ್ರಕಟಣಾ ಮಂದಿರ' ಅನ್ನು ಬೆಂಗಳೂರಿನ ಸಿಟಿ ಮಾರ್ಕೆಟ್ ಬಳಿ ೧೯೨೮ರಲ್ಲಿ ತೆರೆದರು. ಆ ವೇಳೆಗಾಗಲೇ ಸಾಕಷ್ಟು ಪುಸ್ತಕಗಳು ಪ್ರಕಟವಾಗಿದ್ದರೂ ಒಂದು ವ್ಯವಸ್ಥಿತ ಮಳಿಗೆ ಇರಲಿಲ್ಲ. ನಂತರ ಸಮಾಜ ಪುಸ್ತಕಾಲಯ, ಎಚ್. ಎನ್. ಬ್ರದರ್ಸ್ ಇತ್ಯಾದಿ ಪುಸ್ತಕ ಮಳಿಗೆಗಳು ಆರಂಭವಾದವು. ಜನರೂ ವಿದ್ಯಾವಂತರಾಗುತ್ತಿದ್ದರು. ಹೊಸದಾಗಿ ಅನೇಕ ಶಾಲಾ ಕಾಲೇಜುಗಳು ಆರಂಭವಾದವು. ಮಧ್ಯಮ ವರ್ಗದ ಉದಯವಾಗಿತ್ತು. ಜನಪ್ರಿಯ ಲೇಖಕರ ಪುಸ್ತಕಗಳು ಮನರಂಜನೆಯ ಮಾಧ್ಯಮವಾಗಿದ್ದವು. ಹೆಣ್ಣುಮಕ್ಕಳು ವಿದ್ಯೆ ಕಲಿತಂತೆ, ಓದುವ ಮಹಿಳಾ ವರ್ಗವೇ

ಸೃಷ್ಟಿಯಾಯಿತು. ೭೦ರ ದಶಕದವರೆಗೂ ಇದೇ ಟ್ರೆಂಡ್ ಮುಂದುವರೆಯಿತು.

ನಂತರ ಪುಸ್ತಕೋದ್ಯಮದಲ್ಲಿ ಸಾಕಷ್ಟು ಬದಲಾವಣೆಗಳಾದವು. ಮುದ್ರಣ ಮಾಧ್ಯಮಕ್ಕೆ ಕಂಪ್ಯೂಟರಿನ ಆಗಮನವಾಯಿತು. ಹೊಸ ಹೊಸ ಮುದ್ರಣ ಯಂತ್ರಗಳು ಬೆಂಗಳೂರಿಗೆ ಆಗಮಿಸಿದವು. ಆಫ್‌ಸೆಟ್ ಮುದ್ರಣ ಜನಪ್ರಿಯವಾಯಿತು. ಡಿಟಿಪಿ ಯುಗ ಆರಂಭವಾಯಿತು. ಇದರಿಂದಾಗಿ ಪುಸ್ತಕಗಳ ವಿನ್ಯಾಸವೇ ಬದಲಾಗಿ ಹೋಯಿತು. ಇಲ್ಲಿಯವರೆಗೆ ಬಣ್ಣಗಳಲ್ಲಿ ಮುದ್ರಣವಾಗುತ್ತಿದ್ದ ಮುಖಪುಟಗಳು ನಾಲ್ಕು, ಐದು ಮತ್ತು ಆರು ಬಣ್ಣಗಳಲ್ಲಿ ಮುದ್ರಣವಾಗತೊಡಗಿದವು. ಮುಖಪುಟಕ್ಕೆ ಅತ್ಯುತ್ತಮವಾದ ಗ್ಲಾಸ್ ಮತ್ತು ಮ್ಯಾಟ್ ಲ್ಯಾಮಿನೇಷನ್ ಮಾಡುವುದು ಚಲಾವಣೆಗೆ ಬಂತು. ಎಂಬೋಸಿಂಗ್, ಸ್ಪಾಟ್ ಲ್ಯಾಮಿನೇಷನ್ ಜನಪ್ರಿಯವಾಯಿತು. ಕನ್ನಡ ಪುಸ್ತಕಗಳು ವಿನ್ಯಾಸದಲ್ಲಿ ಇಂಗ್ಲೀಷ್ ಪುಸ್ತಕಗಳನ್ನು ಮೀರಿಸತೊಡಗಿದವು. ನೋಡಿದ ಕೂಡಲೇ ಕೈಗೆತ್ತಿಕೊಳ್ಳುವಷ್ಟು ಆಕರ್ಷಕವಾಗಿ ಮುದ್ರಣವಾಗತೊಡಗಿದವು. ಹೊಸ ಲೇಖಕರು ಬರೆಯಲಾರಂಭಿಸಿದರು. ಅತ್ಯಂತ ವೇಗವಾಗಿ ಪುಸ್ತಕಗಳು ಮುದ್ರಣ ಕಾಣತೊಡಗಿದವು. ವರ್ಷಕ್ಕೆ ೬೦೦-೭೦೦ರಂತೆ ಪ್ರಕಟವಾಗುತ್ತಿದ್ದ ಪುಸ್ತಕಗಳ, ಸಾವಿರದ ಸಂಖ್ಯೆಯನ್ನು ಮೀರಿ ದಾಪುಗಾಲಿನೊಂದಿಗೆ ಪ್ರಕಟವಾಗತೊಡಗಿದವು.

ಪುಸ್ತಕ ಪ್ರಕಟಣೆ ಸಮೃದ್ಧಿ ಕಾಣುವ ವೇಳೆಯಲ್ಲಿಯೇ ಕೆಲವೊಂದು ಅಂಶಗಳು ಪುಸ್ತಕೋದ್ಯಮಕ್ಕೆ ಮಾರಕವೂ ಅಗತೊಡಗಿದವು. ಎಂಬತ್ತರ ದಶಕದಲ್ಲಿ ಕರ್ನಾಟಕಕ್ಕೆ ದೂರದರ್ಶನ ಕಾಲಿಟ್ಟಿತು. ಆರಂಭದಲ್ಲಿ ಕೆಲವೇ ಚಾನಲ್‌ಗಳಿದ್ದವು. ಸೀಮಿತ ವಧಿಯ ಪ್ರಸಾರವಿತ್ತು. ಆದರೆ ಕ್ಷಿಪ್ರದಲ್ಲಿಯೇ ಕೆಲವು ಬದಲಾವಣೆಗಾದವು. ಹಲವಾರು ಖಾಸಗಿ ಚಾನಲ್‌ಗಳು ಆರಂಭವಾದವು. ೨೪ ಗಂಟೆಗಳ ಪ್ರಸಾರ ಆರಂಭವಾಯಿತು. ಇದೆಲ್ಲದರ ಪರಿಣಾಮವಾಗಿ ಟಿವಿ ವೀಕ್ಷಕರ ಸಂಖ್ಯೆ ಹೆಚ್ಚಾಯಿತು. ಓದುವವರು ಗಣನೀಯವಾಗಿ ಕಡಿಮೆಯಾಗತೊಡಗಿದರು. ಇದರ ಜೊತೆಗೆ ಕನ್ನಡ ಚಾನಲ್‌ಗಳು ಮಧ್ಯಾಹ್ನದ ಧಾರವಾಹಿಗಳನ್ನು ಆರಂಭಿಸಿದವು. ಕನ್ನಡ ಪುಸ್ತಕಗಳನ್ನು ಓದುತ್ತಿದ್ದ ಮಹಿಳಾ ವರ್ಗ ಧಾರವಾಹಿಗಳೆಡೆಗೆ ಮುಖ ಮಾಡಿತು. ಜನಪ್ರಿಯ ಲೇಖಕರ ಪುಸ್ತಕಗಳ ಮಾರಾಟ ಗಣನೀಯವಾಗಿ ಕುಸಿಯಿತು. ಸಾವಿರಾರು ಸರ್ಕ್ಯುಲೇಟಿಂಗ್ ಲೈಬ್ರರಿಗಳು ಚಾಲ್ತಿಯಲ್ಲಿದ್ದವು. ಯಾವಾಗ ಓದುಗರೆಲ್ಲಾ ಟಿವಿ ಧಾರವಾಹಿಗಳಿಗೆ ಶಿಫ್ಟ್ ಆದರೋ ಸರ್ಕ್ಯುಲೇಟಿಂಗ್ ಲೈಬ್ರರಿಗಳು ಮುಚ್ಚಿಹೋದವು, ಹಿಂದೆ ಒಂದು ಜನಪ್ರಿಯ ಪುಸ್ತಕ ಬಿಡುಗಡೆಯಾದರೆ ಒಂದೇ ದಿನದಲ್ಲಿ ಸುಮಾರು ೩೦೦ ರಿಂದ ೫೦೦ ಪ್ರತಿಗಳು ಖರ್ಚಾಗುತ್ತಿದ್ದವು. ಅನಕೃ, ತರಾಸು, ನರಸಿಂಹಯ್ಯ ಮುಂತಾದವರ ಪುಸ್ತಕಗಳನ್ನು ಜನ ಕ್ಯೂ ನಿಂತು ಕೊಳ್ಳುತ್ತಿದ್ದರು.

ಆದರೆ ಅದೆಲ್ಲ ವೈಭವದ ಮಾತಾಯಿತು, ೨೦೦೦ದ ಇಸವಿಯ ವೇಳೆಗೆ ಓದುಗರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗತೊಡಗಿತು.

ಟಿ.ವಿ ಧಾರಾವಾಹಿಗಳ ಪೈಪೋಟಿಯನ್ನು ಎದುರಿಸುತ್ತಿರುವುದರ ಜೊತೆಗೇ ಇತರ ಮಾಧ್ಯಮಗಳೂ ಒದಿಗೆ ಕುತ್ತು ತರತೊಡಗಿದವು, ಕಂಪ್ಯೂಟರ್ ಅತ್ಯಂತ ವೇಗವಾಗಿ ಜನಪ್ರಿಯವಾಗತೊಡಗಿತು. ಇಂಟರ್ ನೆಟ್ ಎಲ್ಲ ಕಡೆಯೂ ದೊರೆಯುವಂತಾಗಿ ಜಗತೇ ಹಳ್ಳಿಯಾಗತೊಡಗಿತು. ಇಡೀ ಜಗತ್ತಿನ ಸಂಗತಿಗಳು ಕ್ಷಣಾರ್ಧದಲ್ಲಿ ಇಂಟರ್ ನೆಟ್ ಮೂಲಕ ಎಲ್ಲರಿಗೂ ಲಭ್ಯವಾಗತೊಡಗಿದವು. ಜನರು ಅದರಲ್ಲೂ ಯುವಜನತೆ ಇಂಟರ್‌ನೆಟ್‌ಗೆ ಮುಗಿ ಬೀಳತೊಡಗಿದರು. ಮತ್ತೆ ಪುಸ್ತಕೋದ್ಯಮ ಸೊರಗತೊಡಗಿತು.

ಕಳೆದ ವರ್ಷಗಳಲ್ಲಿ ಕೆಲವು ಹೊಸ ಹೊಸ ವಸ್ತುಗಳ ಆವಿಷ್ಕಾರವಾಯಿತು. ಅವುಗಳಲ್ಲಿ



ಮೊಬೈಲ್ ಕೂಡಾ ಒಂದು. ಕೆಲವೇ ವರ್ಷಗಳಲ್ಲಿ ಜಗತ್ತಿನ ತುಂಬಾ ಪಸರಿಸಿದ ಮೊಬೈಲ್, ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲೂ ಹರಡಿ ಪ್ರತಿಯೊಬ್ಬರ ಅಗತ್ಯದ ವಸ್ತುಗಳಲ್ಲೊಂದಾಯಿತು. ಪುಸ್ತಕೋದ್ಯಮಕ್ಕೆ ಸಂಬಂಧಿಸಿದಂತೆ kindle ಉದಯಿಸಿತು. ಕೇವಲ ೨೦೦ ಪುಟದ ಪುಸ್ತಕದ ಗಾತ್ರವುಳ್ಳ kindleನಲ್ಲಿ ಸುಮಾರು ೧೦, ೦೦೦ ಪುಸ್ತಕಗಳನ್ನು ಹಾಕಬಹುದು. ಅಲ್ಲದೇ ಅದರಲ್ಲಿ ಯಾವುದೇ ಪುಟ ತೆರೆದು ಓದಬಹುದು, ಅಕ್ಷರಗಳನ್ನು ದೊಡ್ಡದು ಚಿಕ್ಕದು ಮಾಡಬಹುದು. ಇನ್ನೂ ಮಂದುವರೆದು, ಓದಲು ತೊಂದರೆ ಇರುವವರಿಗೆ ಅದೇ ಓದಿ ಹೇಳುತ್ತದೆ ಇಂತಹ ಸಂಶೋಧನೆಗಳ ಮುಂದೆ ಸಾಂಪ್ರಾದಾಯಿಕ ಪುಸ್ತಕಗಳು ಮಂಕಾಗತೊಡಗಿದವು.

ಇವುಗಳಿಗೆ ಕಳಸವಿಟ್ಟಂತೆ ಇತ್ತೀಚಿನ ಹೊಸ ಸಂಶೋಧನೆ E-Book ಕನ್ನಡಕ್ಕೂ ನಿಧನವಾಗಿ ಕಾಲಿರಿಸುತ್ತಿದೆ. E-Book ನಿಂದಾಗಿ ಮನೆಯಲ್ಲಿ ಪುಸ್ತಕಗಳನ್ನು ಇಟ್ಟುಕೊಳ್ಳುವ ಗೊಡವೆಯೇ ಇಲ್ಲ. ಈ ಪುಸ್ತಕಗಳನ್ನು ಕಂಪ್ಯೂಟರ್‌ಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. ಲ್ಯಾಪ್ ಟಾಪ್‌ಗೆ, ಟ್ಯಾಬ್ಲೆಟ್‌ಗೆ ಮತ್ತು ಮೊಬೈಲ್‌ಗೆ ಕೂಡಾ ಹಾಕಿಸಿಕೊಳ್ಳಬಹುದು. ಈ ಆವಿಷ್ಕಾರಗಳಿಂದಾಗಿ ಸಾಂಪ್ರದಾಯಿಕ ಪುಸ್ತಕಗಳು ನಿಧಾನವಾಗಿ ಕಣ್ಮರೆಯಾಗುತ್ತಿವೆ.

ಇಷ್ಟೆಲ್ಲ ಆವಿಷ್ಕಾರಗಳಿಂದಾಗಿ ಪುಸ್ತಕದ ಸ್ವರೂಪ ಬದಲಾಗಿ ಓದು ಬಹಳ ಸುಲಭವಾಗಿದ್ದರೂ ಕನ್ನಡದಲ್ಲಿ ಓದುಗರ ಸಂಖ್ಯೆ ಹೆಚ್ಚಾಗುತ್ತಿದೆಯೇ ಎಂದರೆ ಅದಕ್ಕೆ ಉತ್ತರ ಇಲ್ಲ ಎಂದೇ ಹೇಳಬೇಕು.

ಯಾಕೆ ಇಲ್ಲ ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟ ಆ ಬಹುಶಃ * ಯುವಜನತೆ ಕನ್ನಡದಿಂದ ವಿಮುಖವಾಗಿರುವುದು ಎನ್ನಬಹುದು. ಕಳೆದ ಇಪತ್ತಕ್ಕೂ ಹೆಚ್ಚು ವರ್ಷಗಳಿಂದ ಶಾಲೆಗಳೆಲ್ಲಾ ಇಂಗ್ಲೀಷ್ ಮಾಧ್ಯಮಕ್ಕೆ ಶಿಫ್ಟ್ ಅಗಿವೆ. ಈ ಮಕ್ಕಳ್ಯಾರೂ ಕನ್ನಡವನ್ನು ಪ್ರಮುಖ ಭಾಷೆಯಾಗಿ ಓದಿಲ್ಲ. ೩ನೇ ಭಾಷೆಯಾಗಿ ಓದುತ್ತಾರೆ. ಆದ್ದರಿಂದ ಅವರಿಗೆ ಕನ್ನಡದ ತಿಳಿವಳಿಕೆ ಅಷ್ಟಕ್ಕಷ್ಟೆ, ಸಾಫ್ಟ್ ವೇರ್, ಇಂಜಿನಿಯರಿಂಗ್, ವೈದ್ಯ ವೃತ್ತಿಗೆ ಒಲವು

ತೋರುವವರೇ ಹೆಚ್ಚುತ್ತಿದ್ದಾರೆ. ಇವರಿಗೆ ಹೋಲಿಸಿದರೆ ಸಾಹಿತ್ಯದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ. ಬಹುತೇಕರು ಕಂಪ್ಯೂಟರ್ ತಜ್ಞ ಇಂಜಿನಿಯರ್, ಡಾಕ್ಟರ್ ಎಂದೇ ಚಿಂತಿಸುತ್ತಾರೆ. ಸಹಜವಾಗಿಯೇ ಅವರ ಒಲವು ಇಂಗ್ಲೀಷ್ ಕಡೆಗಿರುತ್ತದೆ. ಹೀಗಾಗಿ ಗಂಭೀರ ಸಾಹಿತ್ಯಕ ಓದು ಕ್ಷೀಣಿಸುತ್ತದೆ. ಇತರ ಜ್ಞಾನಶಾಖೆಗಳಿಗೆ ಸಂಬಂಧಿಸಿದಂತೆ ಕನ್ನಡದ ಪುಸ್ತಕಗಳ ಕೊರತೆಯೂ ಇದಕ್ಕೆ ಒಂದು ಕಾರಣ. ಕನ್ನಡ ಕೇವಲ ಅಡುಭಾಷೆಯಾಗುತ್ತಿದೆ.

ಇಷ್ಟೆಲ್ಲ ಆದರೂ ಓದುಗರಿಲ್ಲದಿದ್ದರೂ ಪುಸ್ತಕೋದ್ಯಮ ಸಮೃದ್ಧವಾಗಿಯೇ ಇದೆ. ಕಳೆದ ಒಂದು ದಶಕದಲ್ಲಿ ಪುಸ್ತಕದ ಬೆಳೆ ದುಪ್ಪಟ್ಟಾಗಿದೆ. ಓದುಗರಿಂದಾಗಿ ಖಂಡಿತ ಅಲ್ಲ. ಸರ್ಕಾರದ ಹಲವಾರು ಯೋಜನೆಗಾಗಿ ಪುಸ್ತಕಗಳು ಪ್ರಕಟವಾಗುತ್ತವೆ. ಗ್ರಂಥಾಲಯ ಇಲಾಖೆಗಾಗಿಯೇ ಪುಸ್ತಕ ಪ್ರಕಟಿಸುವವರಿದ್ದಾರೆ, ವರ್ಷಕ್ಕೆ ಏಳು ಸಾವಿರ ಮಸ್ತಕ ಪ್ರಕಟವಾದರೂ ಅದರಲ್ಲಿ ಶೇ. ೭೦ ರಷ್ಟು ಪುಸ್ತಕಗಳು ಮಾರುಕಟ್ಟೆಗೆ ಬರುವುದೇ ಇಲ್ಲ. ಗ್ರಂಥಾಲಯ ಇಲಾಖೆ ಪುಸ್ತಕ ಖರೀದಿ ನಿಲ್ಲಿಸಿದರೆ ಇಂತಹ ಪ್ರಕಟಣೆಗಳು ನಿಂತಂತೆಯೇ.

ಇಂದು ಯಾವುದೇ ಕನ್ನಡ ಪುಸ್ತಕ ಮಳಿಗೆಯಲ್ಲಿ ವಿಚಾರಿಸಿ. ಅಲ್ಲಿನ ಗ್ರಾಹಕರೆಲ್ಲರೂ ೪೦+ ವಯಸ್ಸಿನವರೇ, ಯುವಜನತೆ ಬೇರೆ ಬೇರೆ ಆಕರ್ಷಣೆಗಳಿಂದಾಗಿ ಸಾಂಪ್ರದಾಯಿಕ ಪುಸ್ತಕಗಳನ್ನು ಬಳಸುತ್ತಿಲ್ಲ. ಅವುಗಳ ಓದಿನ ರುಚಿಯನ್ನೇ ಕಳೆದುಕೊಂಡು ಬಿಟ್ಟಿದ್ದಾರೆ.

ಕನ್ನಡ ಪುಸ್ತಕೋದ್ಯಮ-ಸವಾಲು ೧೫೫

ಕನ್ನಡ ಪುಸ್ತಕೋದ್ಯಮ ಸುಮಾರು ೧೦೦ ವರ್ಷಗಳ ಇತಿಹಾಸ ಹೊಂದಿರುವಂಥದ್ದು. ಹಾಗೆ ನೋಡಿದರೆ ಪುಸ್ತಕೋದ್ಯಮ ಅನೋದು ಕೂಡ ಕೇವಲ ಬಳಕೆಯಲ್ಲಿ ಬಂದ ಪದ ಅಷ್ಟೆ, ಪುಸ್ತಕಕ್ಕೆ ಇನ್ನೂ ಉದ್ಯಮದ ಸ್ವರೂಪ ಬಂದಿಲ್ಲ. ಉದ್ಯಮ ಎಂದು ಸರ್ಕಾರವೂ ಇದನ್ನು ಗುರುತಿಸಿಲ್ಲ. ನಾವೆಲ್ಲ ಚಿತ್ರೋದ್ಯಮ, ಕೈಗಾರಿಕೋದ್ಯಮ ಎಂದೆಲ್ಲಾ ಹೇಳುವಂತೆ ಪುಸ್ತಕೋದ್ಯಮ ಎಂಬ ಪದವನ್ನು ಬಳಸುತ್ತಾ ಬಂದಿದ್ದೇವೆ, ಬದಲಿಗೆ ಇದನ್ನು 'ಪುಸ್ತಕ ಸಂಸ್ಕೃತಿ' ಎಂದು ಬಳಸುವುದು ಸೂಕ್ತ ಎಂದು ಕಾಣುತ್ತದೆ.

ಲೇಖಕ-ಪ್ರಕಾಶಕ-ಮಾರಾಟಗಾರ ಮತ್ತು ಓದುಗರೆಲ್ಲರೂ ಈಗ ಬಿಡಿಬಿಡಿಯಾಗಿ ಚದುರಿ ಹೋಗಿದ್ದು, ಒಂದು ನೀತಿಯಿಂದ ಇವರನ್ನೆಲ್ಲಾ ಒಂದುಗೂಡಿಸಬೇಕಾಗಿದೆ. ಪುಸ್ತಕೋದ್ಯಮಕ್ಕೆ ಒಂದು ನೀತಿ ಅಂದರೆ ಪುಸ್ತಕ ನೀತಿ ಜರೂರು ಈಗಿನ ಅಗತ್ಯಗಳಲ್ಲಿ

ನಮ್ಮಲ್ಲಿ ಈಗ ಏನಾಗಿದೆ ಅಂದ್ರೆ, ಕನ್ನಡದಲ್ಲಿ ಎಷ್ಟು ಪುಸ್ತಕ ಪ್ರಕಟವಾಗ್ತಿವೆ ಅಂತ ಯಾರಿಗೂ ಗೊತ್ತಿಲ್ಲ. ಸುಮ್ಮನೆ ಒಂದು ಅಂದಾಜಿನ ಮೇಲೆ ಹೇಳುತ್ತೇವೆ, ಖಚಿತವಾಗಿ ಇಷ್ಟೇ ಅಂತ ಹೇಳುವ ವ್ಯವಸ್ಥೆ ಇಲ್ಲ. ಪುಸ್ತಕ

ಪ್ರಕಟಣೆ ಕಾರ್ಯವನ್ನು ಖಾಸಗಿಯವರು ಮಾಡುತ್ತಾರೆ, ಸಾಹಿತ್ಯ ಪರಿಷತ್ತು ಮಾಡುತ್ತದೆ, ಸರಕಾರ ಮಾಡುತ್ತದೆ ಮತ್ತು ಅಕಾಡೆಮಿ, ವಿಶ್ವವಿದ್ಯಾಯಲಗಳಂತಹ ಅನುದಾನಿತ ಸಂಸ್ಥೆಗಳು ಮಾಡುತ್ತವೆ. ಪ್ರತಿಯೊಬ್ಬರೂ ತಮಗೆ ತೋಚಿದಂತೆ ಈ ಉದ್ಯಮವನ್ನು ಬೆಳೆಸುತ್ತಾ ಬಂದಿದ್ದಾರೆ, ಇವರೆಲ್ಲರೂ ಪ್ರಕಟಿಸುವ ಪತ್ರಿ ಪುಸ್ತಕವೂ ಒಂದು ಕಡೆ ನೋಂದಣಿಯಾಗಬೇಕು. ಕನ್ನಡ ಪುಸ್ತಕ ಪ್ರಾಧಿಕಾರವು ಕೆಲವು ವರ್ಷಗಳ ಹಿಂದೆ ಪ್ರಕಾಶಕರನ್ನು ನೋಂದಾಣಿ ಮಾಡುವ ವ್ಯವಸ್ಥೆ ಹೊಂದಿತ್ತು. ಆದರೆ ಆ ವ್ಯವಸ್ಥೆ ನಿಂತು ಹೋಯಿತು. ಈ ಅಂಶಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಒಂದು ನೀತಿಗೆ ಒಳಪಡಿಸಿ ಪುಸ್ತಕೋದ್ಯಮವನ್ನು ಬೆಳೆಸಿದರೆ ಆಗ ಪುಸ್ತಕೋದ್ಯಮದ ಚಿತ್ರಣವೇ ಬದಲಾದೀತು.

ಹಲವಾರು ಆತಂಕಗಳು ಪುಸ್ತಕೋದ್ಯವನ್ನು ಕಾಡುತ್ತಲೇ ಬಂದಿವೆ. ಬಹಳ ವಿಶೇಷ ಅಂದ್ರೆ ಪುಸ್ತಕೋದ್ಯಮವನ್ನು ಆರಂಭದಿಂದಲೂ ಬೆಳೆಸುತ್ತಾ ಬಂದಿರುವವರು ಬಹುಮಟ್ಟಿಗೆ ಹವ್ಯಾಸಿ ಪ್ರಕಾಶಕರೇ, ಕರ್ನಾಟಕದಲ್ಲೀಗ ಸರಿಸುಮಾರು ೧೫೦೦ ಪ್ರಕಾಶಕರಿದ್ದಾರೆ. ಅದರಲ್ಲಿ ವೃತ್ತಿಪರ ಪ್ರಕಾಶಕರ ಸಂಖ್ಯೆ ನೂರರ ಗಡಿಯನ್ನು ದಾಟಿಲ್ಲ. ಶೇ. ೬೦ರಷ್ಟು ಪ್ರಕಾಶಕರು ಹವ್ಯಾಸಿಗಳೇ. ಹಾಗಾಗಿ ಪ್ರಕಾಶಕರನ್ನು ವ್ಯವಸ್ಥಿತವಾಗಿ ಸಂಘಟಿಸಲು ಇಲ್ಲಿಯವರೆಗೂ ಸಾಧ್ಯವಾಗಿಲ್ಲ. ಪುಸ್ತಕೋದ್ಯಮದಲ್ಲಿ ಏನಾಗಿದೆ, ಏನಾಗ್ತಿದೆ ಅನ್ನೋದು ಬಹಳಷ್ಟು ಪ್ರಕಾಶಕರಿಗೆ ಗೊತ್ತಿರಲ್ಲ. ಅನೇಕ ಪ್ರಕಾಶಕರುಗಳು ಪ್ರಿಂಟರುಗಳ ಮರ್ಜಿಯಲ್ಲಿರುತ್ತಾರೆ. ಯಾಕೆಂದರೆ ಅವರಿಗೆ ಪುಸ್ತಕದ ಗಾತ್ರ ಇದೇನು Demy ನೋ Crown ನೋ ಅನ್ನೊದು ಗೊತ್ತಿರಲ್ಲ White Paper ಯಾವುದು, Maplitho ಯಾವುದು, Light Wt. Paper ಯಾವುದು ಅಂತ ತಿಳಿದಿರಲ್ಲ. Cover Page ಬೋರ್ಡ್ ಎಷ್ಟು GSM ಅಂತ ಗೊತ್ತಿರಲ್ಲ.

ಇದೆಲ್ಲ ಯಾಕಾಗುತ್ತೆ ಅಂದರೆ ಪುಸ್ತಕ ಉದ್ಯಮವಾಗಿದ್ದೆ ಇರೋದು, ಪ್ರಕಾಶಕರಿಗೆ ತರಬೇತಿ ನೀಡುವಂತಂಹ ಯಾವುದೇ Diploma / Certificate Course ಇಡೀ ಕರ್ನಾಟಕದಲ್ಲಿ ಇಲ್ಲೆ ಇರೋದು. ಇಂತಹ ಒಂದು ವ್ಯವಸ್ಥೆಯ ಅಗತ್ಯ ಇಂದಿನ ಅದ್ಯತೆಗಳಲ್ಲಿ ಒಂದು.

ಇವುಗಳ ಜೊತೆಗೆ ಪುಸ್ತಕೋದ್ಯಮಕ್ಕೆ ಒಂದಾದ ಮೇಲೊಂದರಂತೆ ಆತಂಕಗಳು ಎದುರಾಗ್ತಾ ಇರೋದು. T.V. ಮಾಧ್ಯಮ ಬಂತು, ಒಂದು ಕಾಲದಲ್ಲಿ ಕಾದಂಬರಿ ಪ್ರಕಾರವನ್ನು ಓದಿ ಬೆಳೆಸಿದಂತಹ ನಮ್ಮ ಮಹಿಳಾ ಓದುಗರೆಲ್ಲಾ ಕೈ ತಪ್ಪಿಹೋದರು. ದಿನದ ೨೪ ಗಂಟೆಗಳ ಮನರಂಜನೆ ಒದಗಿಸುವ ಈ ಮಾಧ್ಯಮ ಅನೇಕ ಓದುಗರನ್ನು ಕಿತ್ತುಕೊಂಡಿತು. ಬಡಾವಣೆಗೆ ಹತ್ತರಂತೆ ಇದ್ದ ಸರ್ಕ್ಯುಲೇಟಿಂಗ್ ಲೈಬ್ರರಿಗಳೆಲ್ಲಾ ಮುಚ್ಚಿಹೋದವು.

ಇದರ ಜೊತೆಗೆ ಬಂದ Computer, Internetಗಳು ಮತ್ತಷ್ಟು ಓದುಗರ ಮೇಲೆ ದಾಳಿಯಿಟ್ಟಿವೆ. ಮೊಬೈಲ್‌ನ (ಸ್ಮಾರ್ಟ್ ಫೋನ್) ವ್ಯಾಪಕ ಬಳಕೆ ಇಂಟರ್‌ನೆಟ್ ಲಭ್ಯತೆಯಿಂದಾಗಿ ಹಲವಾರು ವಿಚಾರಗಳ ಸಂಗ್ರಹ ಸುಲಭವಾಗಿ ಕೆಲವೊಂದು ವಿಭಾಗಗಳ ಪುಸ್ತಕದ ಓದೇ ಈಗ ಇಲ್ಲವಾಗುತ್ತಿದೆ.

ಅದೂ ಹೋಗಲಿ ಅಂದ್ರೆ ಈಗ ನಮ್ಮ ಮೇಲೆರಗಿರುವ ಕಿಂಡಲ್/ ಐಪ್ಯಾಡ್ ನಮ್ಮ ಕತ್ತು ಹಿಸುಕುತ್ತಾ ಇವೆ. ಇವೂ ಹೋಗಲಿ ಅಂದ್ರೆ 'ಕೇಳು' ಪುಸ್ತಕಗಳು ಮತ್ತಷ್ಟು ಆತಂಕವನ್ನು ಉಂಟು ಮಾಡಿವೆ, ಇವೆಲ್ಲವನೂ ನೋಡಿದರೆ ನಾವು ಇಲ್ಲಿಯವರೆಗೆ ನೋಡಿದ ಪುಸ್ತಕಗಳ ಸ್ವರೂಪವೇ ಬದಲಾಗ್ತಾ ಇದೆಯೇನೋ ಅನ್ನಿಸುತ್ತೆ. ಕಾಗದ ರಹಿತ ಪುಸ್ತಕಗಳು ಅಂದರೆ E ಪುಸ್ತಕಗಳ ಓದು ಹೆಚ್ಚುತ್ತಿದೆ.

ಹೀಗಿದ್ದರೂ ಪ್ರಕಟಣೆಗಳ ಸಂಖ್ಯೆ ಹೆಚ್ಚುತ್ತಿರುವುದಕ್ಕೆ ಇನ್ನಿತರ ಕಾರಣಗಳೂ ಇವೆ, ಕಳೆದ ಕೆಲವು ವರ್ಷಗಳಿದೀಚೆಗೆ ಪತ್ರಿಕೆಗಳಲ್ಲಿ ಅಂಕಣ ಬರಹಗಳು ಆರಂಭವಾದವು. ಹಿಂದೆ ಎಲ್ಲೋ ಯಾವಾಗಲೋ ಒಂದೊಂದು ಅಂಕಣಗಳನ್ನು ಪತ್ರಿಕೆಗಳು ಪ್ರಕಟಿಸ್ತಾ ಇದ್ದವು. ಆದರೆ ಈಗ ಬಹುತೇಕ ಪತ್ರಿಕೆಗಳು ದಿನಕ್ಕೆ ಕನಿಷ್ಠ ೩ರಿಂದ ೪ ಅಂಕಣಗಳನ್ನು ನಿರಂತರವಾಗಿ ಪ್ರಕಟಿಸುತ್ತಾ ಇವೆ. ಇವೆಲ್ಲವೂ ಮುಂದೆ ಪುಸ್ತಕಗಳಾಗಿ ಪ್ರಕಟವಾಗುತ್ತವೆ. ಬಹುಶಃ ಪುಸ್ತಕೋದ್ಯಮದ ಹುಲುಸಾದ ಬೆಳೆಗೆ ಇದೂ ಒಂದು ಕಾರಣ ಇರಬಹುದು ಎಂದೆನಿಸುತ್ತದೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಖರೀದಿ ಕೂಡಾ ಪುಸ್ತಕಗಳ ಪ್ರಕಟಣೆಯ ಹೆಚ್ಚಳಕ್ಕೆ ಕಾರಣವಾಗಿದೆ. ಆದರೆ ಪುಸ್ತಕದ ಒಳ ಹೊರಣ, ಗುಣಮಟ್ಟಕ್ಕೆ ಆದತೆಯಿಲ್ಲ. ಗ್ರಂಥಾಲಯಕ್ಕೆ ಬರುವ ಶೇ. ೭೦ರಷ್ಟು ಪುಸ್ತಕಗಳು ಮಾರುಕಟ್ಟೆಗೆ ಬರುವದೇ ಇಲ್ಲ. ಗ್ರಂಥಾಲಯಕ್ಕೇ ಇವು ಸೀಮಿತ.

ಯುವ ಜನಾಂಗ ಕನ್ನಡ ಪುಸ್ತುಕಗಳ ಕಡೆ ಅಕರ್ಷಿತರಾಗುತ್ತಿಲ್ಲ ಯಾಕೆ? ಯಾಕೆಂದರೆ ಅವರು ಪಡೆದ ಶಿಕ್ಷಣ ಮಾಧ್ಯಮ. ಇಂಗ್ಲೀಷ್ ಭಾಷೆಯಲ್ಲಿಯೇ ಶಿಕ್ಷಣ ಪಡೆದ ಹುಡುಗರಿಗೆ ಕನ್ನಡ ಪುಸ್ತಕಗಳ ಬಗ್ಗೆ ಯಾವ ಆಸಕ್ತಿ ಇದ್ದೀತು? ಕನ್ನಡವನ್ನು ೩ನೆಯ ಭಾಷೆಯಾಗಿ ಓದಿದವರು ಕನ್ನಡ ಪುಸ್ತಕಗಳ ಬಗ್ಗೆ ಯಾವ ಆಸಕ್ತಿ ಉಳಿಸಿಕೊಂಡಾರು? ಇನ್ನು ಕರ್ನಾಟಕದಲ್ಲಿ ತಳವೂರುತ್ತಿರುವ International Schoolಗಳನ್ನು ಕುರಿತು ಮಾತಾಡೋ ಹಾಗೇ ಇಲ್ಲ. ಕಡ್ಡಾಯವಾಗಿ ಕನ್ನಡವನ್ನು SSLC ವರೆಗಾದರೂ ಮಾಧ್ಯಮವಾಗಿ ಬೇಡ-ಕನಿಷ್ಠ ಒಂದು ಭಾಷೆಯಾಗಿಯಾದರೂ

ಕಲಿಸದಿದ್ದರೆ ಕನ್ನಡಕ್ಕೆ ಉಳಿಗಾಲವೇ ಇರುವುದಿಲ್ಲ. ಬರಬರುತ್ತಾ ಕನ್ನಡ ಕೇವಲಮನೆಯಲ್ಲಿ ಮಾತಾನಾಡುವ ಭಾಷೆಯಾಗಿ ಉಳಿದು ಬಿಡುತ್ತೋ ಏನೋ.

ಈಗಲೇ ಸರ್ಕಾರ ಎಚ್ಚೆತ್ತುಕೊಂಡು ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಪುಸ್ತಕೋದ್ಯಮ ತೀವ್ರ ಸಂಕಷ್ಟವನ್ನೆದುರಿಸಬೇಕಾಗುತ್ತದೆ.

## ಕನ್ನಡ ಪುಸ್ತಕೋದ್ಯಮ-ಸವಾಲು ೧೫೭

ಕನ್ನಡದ ಓದುಗರ ವಿಶ್ವದಾದ್ಯಂತ ಹರಡಿದ್ದರೂ ಅವರಿಗೆ ಪುಸ್ತಕಗಳನ್ನು ತಲುಪಿಸುವ ಸೂಕ್ತ ವ್ಯವಸ್ಥೆ ಇಲ್ಲಿಯವರೆಗೆ ಇರಲಿಲ್ಲ. ಅಂಚೆಯೊಂದೇ ಮಾರ್ಗವಾಗಿತ್ತು. ಆದರೆ ಈಗ ಅಮೆಜಾನ್ ಡಾಟ್ ಕಾಮ್, ಗೂಗಲ್ ಸರ್ಚ್ ಇಂಜಿನ್ ಮತ್ತು ಫ್ಲಿಪ್ ಕಾರ್ಟ್ ಮುಂತಾದ ಸಂಸ್ಥೆಗಳು ಕನ್ನಡ ಪುಸ್ತಕಗಳನ್ನು ಆನ್ ಲೈನ್ ಮೂಲಕ ಮಾರಾಟ ಮಾಡುವ ವ್ಯವಸ್ಥೆ ಮಾಡಿವೆ. ಹಲವಾರು ಪ್ರಸಿದ್ಧ ಪ್ರಕಾಶನ ಸಂಸ್ಥೆಗಳು ಆನ್‌ಲೈನ್ ಮಾರಾಟ ಜಾಲಕ್ಕೆ ಈಗ ತೆರೆದುಕೊಂಡಿವೆ. ಗ್ರಾಹಕರು ಕೂತಲ್ಲೇ ಪುಸ್ತಕ ಪಡೆಯುವ ಇಂತಹ ಯೋಜನೆ ಪುಸ್ತಕೋದ್ಯಮದ ಬೆಳವಣಿಗೆಗೆ ಆಶಾದಾಯಕವಾಗಿದೆ.

ಕನ್ನಡ ಜನತೆ ಹಿಂದಿನ ೩ ಕೋಟಿಯಿಂದ ೬ ಕೋಟಿಗೇರಿದ್ದರೂ ಅದಕ್ಕೆ ಸಮಾನಾಂತರವಾಗಿ ಕನ್ನಡ ಪುಸ್ತಕ ಮಳಿಗೆಗಳು ಹೆಚ್ಚಿಲ್ಲ. ಕರ್ನಾಟಕದಲ್ಲಿ ೧೦ಕ್ಕಿಂತ ಹೆಚ್ಚು ಕನ್ನಡ ಪುಸ್ತಕ ಮಳಿಗೆಗಳಿಲ್ಲ. ಸುಮಾರು ಜಿಲ್ಲೆಗಳಲ್ಲಿ ಒಂದೇ ಒಂದು ಕನ್ನಡ ಪುಸ್ತಕ ಮಳಿಗೆ ಇಲ್ಲ ಇಂಗ್ಲೀಷ್ ಪುಸ್ತಕ ಮಾರಾಟ ಆನ್‌ಲೈನ್‌ನಲ್ಲಿ ಚೆನ್ನಾಗಿ ಕುದುರಿದೆ, ಆದರೆ ಕನ್ನಡ ಪುಸ್ತಕಗಳು ಆನ್‌ಲೈನ್‌ನಲ್ಲೂ ಹೆಚ್ಚು ಮಾರಾಟವಾಗುತ್ತಿಲ್ಲ. ಕೆಲವು ಪ್ರಯೋಗಗಳು ನಡೆದರೂ 'ಆಡಿಯೋ' ಪುಸ್ತಕಗಳ ಪ್ರಯೋಗ ಕನ್ನಡದಲ್ಲಿನ್ನೂ ಯಶಸ್ವಿಯಾಗಿಲ್ಲವೆಂದೇ ಹೇಳಬೇಕು.

ಈ ಎಲ್ಲ ಇಲ್ಲಗಳ ನಡುವೆಯೂ ಕೆಲವು ಓದುಗರು ಇನ್ನೂ ಕನ್ನಡಕ್ಕೆ ನಿಷ್ಠೆಯಿಂದಿದ್ದಾರೆ. ಎಸ್.ಎಲ್. ಭೈರಪ್ಪ, ಪೂರ್ಣಚಂದ್ರ ತೇಜಸ್ವಿ, ಷಡಕ್ಷರಿ, ಮಣಿಕಾಂತ, ಯಂಡಮೂರಿ, ವಸುಧೇಂದ್ರ ಅಂಥವರ ಪುಸ್ತಕಗಳು ಪ್ರಕಟವಾದ ತಿಂಗಳಲ್ಲಿಯೇ ಸಾವಿರಾರು ಪ್ರತಿಗಳು ಮಾರಾಟವಾಗುತ್ತವೆ. ವಿಮರ್ಶೆ, ಪ್ರಬಂಧ ಮುಂತಾದ ಗಭೀರ ಸಾಹಿತ್ಯವನ್ನಂತೂ ಕೇಳುವವರೇ ಇಲ್ಲ. ತೇಜಸ್ವಿಯವರ ಕೃತಿಗಳು ಯುವಜನತೆಯನ್ನು ಇನ್ನೂ ಕನ್ನಡದಲ್ಲಿ ಸೆಳೆದು ನಿಲಿಸಿವೆ. ಈಗ ಹಲವಾರು ಲೇಖಕರು, ಪ್ರಕಾಶಕರು ತಮ್ಮ ಪುಸ್ತಕಗಳ ಪ್ರಚಾರಕ್ಕೆ ಅಂರ್ಜಾಲವನ್ನು ಯಶಸ್ವಿಯಾಗಿ ಬಳಸುತ್ತಿದ್ದು ಓದುಗರನ್ನು ಸೆಳೆಯುವಲ್ಲಿ ಸಫಲರಾಗಿದ್ದಾರೆ.

ತಂತ್ರಜ್ಞಾನ, ಬದಲಾದಂತೆ ಹೊಸ ಸ್ವರೂಪದ ಸಾಹಿತ್ಯ ಸೃಷ್ಟಿಯೂ ನಡೆಯುತ್ತಿದೆ. ಫೇಸ್‌ಬುಕ್ ಕವಿಗಳ ಸಂಖ್ಯೆ ಹೆಚ್ಚುತ್ತಿದೆ. ಇಂದಿನ ಓದುಗರಿಗೆ ಗಂಭೀರ ಸಾಹಿತ್ಯ ಬೇಕಾಗಿಲ್ಲ. ತತ್‌ಕ್ಷಣಕ್ಕೆ ಉಪಶಮನ ಕೊಡುವಂತಹ, ರೋಚಕವೆನಿಸುವಂತಹ. ಪರಿಹಾರ ದೊರಕುವಂತಹ ಪುಸ್ತಕಗಳ ಓದು ಸಾಕು. ಬಹುಶಃ ಇಂದಿನ ವೇಗದ ಬದುಕು ಇದಕ್ಕೆ ಕಾರಣವಿರಬಹುದು. ಅವಸರದ ಬದುಕಿಗೆ ಅವಸರದ ದಿಢೀರ್ ಸಾಹಿತ್ಯ ಸಾಕಾಗಿದೆ. ಹೀಗಾಗಿಯೇ ಏನೋ ವ್ಯಕ್ತಿತ್ವ ವಿಕಸನ, ಮಾರ್ಗದರ್ಶಿ ಸೂತ್ರಗಳನ್ನು ಹೇಳುವ ಪುಸ್ತಕಗಳು. ಆರೋಗ್ಯ, ಆಧ್ಯಾತ್ಮ ಪುಸ್ತಕಗಳು ಮಾರಾಟವಾಗುವಷ್ಟು ಗಂಭೀರ ಸಾಹಿತ್ಯ ಕೃತಿಗಳು ಮಾರಾಟವಾಗುತ್ತಿಲ್ಲ. ಇದಕ್ಕೆ ಅಪವಾದವಾಗಿ ಕೆಲವೊಂದು ಲೇಖಕರ ಕೃತಿಗಳು ಮಾರಾಟವಾದರೂ ಈ ಭಾಗ್ಯ ಎಲ್ಲ ಮಹತ್ವದ ಕೃತಿಗಳಿಗೆ ಸಿಗುತ್ತಿಲ್ಲ. ಕೆಲವೊಂದು ಪ್ರಕಾರದ ಪುಸ್ತಕಗಳನ್ನು ಓದುವವರೇ ಇಲ್ಲವಾಗುತ್ತಿದ್ದಾರೆ.

ಈ ಸಮಸ್ಯೆಗೆ ಸರ್ಕಾರವೇ ಪರಿಹಾರ ಸೂಚಿಸಬೇಕು. ಕನ್ನಡ ಕಲಿತವರಿಗೆ ಎಲ್ಲ ಕೇತ್ರಗಳಲ್ಲೂ ಆದ್ಯತೆ ನೀಡಬೇಕು. ಕನಿಷ್ಠ ಒಂದರಿಂದ ೧೦ನೇ ತರಗತಿಯವರೆಗೆ ಕನ್ನಡವನ್ನು ಒಂದು ಭಾಷೆಯಾಗಿಯಾದರೂ ಕಲಿಸಬೇಕು. ಆಗ ಕನ್ನಡ ಉಳಿಯುತ್ತದೆ ಬೆಳೆಯುತ್ತದೆ. ಕನ್ನಡ ಪುಸ್ತಕೋದ್ಯಮ ಗರಿಕೆಗೆದರಿ ನಿಲ್ಲಬಲ್ಲದು.

## ಲೇಖಕ-ಓದುಗ ಲೋಕ

**- ಡಾ. ಗಾಯತ್ರಿ ನಾವಡ**

ನನ್ನ ವಿಷಯದ ಪರಿವ್ಯಾಪ್ತಿ 'ಲೇಖಕ-ಓದುಗಲೋಕ', ನಾನೊಬ್ಬಳು ಲೇಖಕಿ- ಓದುಗಿ-ಪ್ರಕಾಶಕಿ ಹೌದಾದರೂ ಮೊದಲಿಗೆ ನಾನೊಬ್ಬ ಓದುಗಿ ಮತ್ತೆ ಲೇಖಕಿ, ಆಮೇಲೆ ಪ್ರಕಾಶಕಿ, ನನಗೆ ಈ ಬಗೆಯ ಜೀವನಶ್ರದ್ಧೆ ಕಲಿಸಿದ್ದರೆ ಅದು ನನ್ನ ಓದು ಮತ್ತು ಬರಹ. ಹಾಗಾಗಿಯೇ ನನಗೆ ಓದು-ಬರಹ ಬರಿಯ ಬೌದ್ಧಿಕ ಪ್ರಕ್ರಿಯೆ ಅಲ್ಲ, ಅದೊಂದು ತಪಸ್ಸು, ಧ್ಯಾನಸ್ಥ ಸ್ಥಿತಿ. ಒತ್ತಡ, ಸಂಕಟವನ್ನು ದಾಟುವ ಕಿಂಡಿ, ಬಿಡುಗಡೆಯ ದಾರಿ.'ತಾಳುವಿಕೆಗಂತನ್ಯ ತಪವು ಇಲ್ಲ' ಎನ್ನುವ ದಾಸರ ಮಾತನ್ನು ಸ್ವಲ್ಪ ಬದಲಿಸಿ ಹೇಳುವುದಾದರೆ ನನಗೆ ಓದುವಿಕೆಗಂತನ್ಯ ತಪವು ಇಲ್ಲ.

ಭಾರತದಲ್ಲಿ ಪುಸ್ತಕಕ್ಕೆ, ಪುಸ್ತಕ ಸಂಸ್ಕೃತಿಗೆ ಬಹಳ ದೊಡ್ಡ ಪರಂಪರೆಯಿದೆ ಗ್ರಂಥಪೂಜೆ, ಗ್ರಂಥಪಠಣ, ಗ್ರಂಥದಾನ-ಇವು ನಮ್ಮ ಜೀವನದರ್ಶನ. 'ದೇಶ ತಿರುಗು-ಕೋಶ ಓದು' ಎನ್ನುವುದು ನಾಣ್ಣುಡಿ, ಇವೆರಡೂ ಜ್ಞಾನ ಸಮೃದ್ಧಿಯ ಕೇಂದ್ರಗಳು. ಅಷ್ಟೇ ಅಲ್ಲ ದೇಹ, ಬುದ್ಧಿ, ಮನಸ್ಸಿನ ಸ್ವಾಸ್ಥ್ಯಕೇಂದ್ರಗಳೂ ಹೌದು ಅದನ್ನೇ ಕವಿ ನೇಮಿಚಂದ್ರ ಪುಸ್ತಕವನ್ನು 'ಭುವನದ ಭಾಗ್ಯ' ಎಂದುದು (ಹಾಸ್ಯಬ್ರಹ್ಮ ಗಂಗಾವತಿ ಪ್ರಾಣೇಶ ಅವರು ಪುಸ್ತಕದ

ಮಹತ್ವವನ್ನು ಅರ್ಥಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ. 'ಮೊಬೈಲ್ ಕೈಯಲ್ಲಿ ಹಿಡಿದರೆ ನಿನ್ನನ್ನು ತಲೆಯೆತ್ತದಂತೆ ಮಾಡುತ್ತದೆ, ಪುಸ್ತಕ ಕೈಯಲ್ಲಿ ಹಿಡಿದರೆ ನಿನ್ನ ತಲೆಯೆತ್ತುವಂತೆ ಮಾಡುತ್ತದೆ.) ಹೌದು ನಿಜವಾಗಿ ಪುಸ್ತಕದ ಮಹಿಮೆಯೇ ಅಂತಹದು.

ಜಾನ್ ಗುಟೆನ್ ಬರ್ಗ್ ಮುದ್ರಣಯಂತ್ರದ ಅವಿಷ್ಕಾರ ಪುಸ್ತಕಲೋಕದಲ್ಲೊಂದು ಹೊಸಕ್ರಾಂತಿಗೆ ನಾಂದಿ ಹಾಡಿತು. ಚಿತ್ರಲಿಪಿಯಿಂದ ಅಕ್ಷರ ಲಿಪಿಗೆ ಆಗ ಮಾರ್ಪಾಡಿನಷ್ಟೇ ಮಹತ್ವದ್ದು ಮುದ್ರಣಯುಗಕ್ಕೆ ಬದಲಾದ ಕ್ಷಣ ಕೂಡಾ. ಅದು ಪುಸ್ತಕಲೋಕಕ್ಕೆ ಹೊಸ ವಿಸ್ತಾರ, ವಿನ್ಯಾಸ ಒದಗಿಸಿದ ಸಂದರ್ಭ.

ಪುಸ್ತಕ ಲೋಕಕ್ಕೆ ನಾಲ್ಕು ದ್ವಾರಗಳು. ಅದು ಲೇಖಕ, ಓದುಗ, ಪ್ರಕಾಶಕ, ಮಾರಾಟಗಾರ, ಈ ನಾಲ್ಕೂ ಪರಸ್ಪರ ಅಂತರ್ ಸಂಬಂಧದ ನೆಲೆಯವು.ಆದರೆ ಇವತ್ತು ಪುಸ್ತಕ ಪ್ರಪಂಚದ ಮುಂದಿರುವ ತೊಡಕು ಎಂದರೆ ಈ ನಾಲ್ಕು ದ್ವಾರಗಳ ಅಂತ ಸಂಬಂಧ ಕಡಿದಿರುವುದು, ಪರಿಣಾಮ ಸಂವಾದ ಸಾಧ್ಯವಿಲ್ಲದುದು. ಹಾಗಾಗಿ ಪುಸ್ತಕ ಲೋಕದ ಪ್ರವೇಶಕ್ಕೆ ಓದುಗ, ಲೇಖಕನಿಗೆ ಕೆಲವು ಇಕ್ಕಟ್ಟು ಬಿಕ್ಕಟ್ಟುಗಳಿವೆ, ಸಮಸ್ಯೆ, ಸವಾಲುಗಳಿವೆ. ನಾಡಿನ ಕನ್ನಡಿಗರ ಸಂಖ್ಯೆ ಆರು ಕೋಟಿಗೂ ಮೀರಿದೆ. ಕನ್ನಡ ಪುಸ್ತಕ ಪ್ರಕಟನೆಯ ಸಂಖ್ಯೆಯಲ್ಲಿ ಗಣನೀಯ ಏರಿಕೆ ಆಗಿದೆ. ಲೇಖಕರ ಸಂಖ್ಯೆಯಲ್ಲೂ ಹೆಚ್ಚಳವಾಗಿದೆ. ಓದುಗರ ಕೊಂಡುಕೊಳ್ಳುವ ಸಾಮರ್ಥ್ಯ ಹೆಚ್ಚಿದೆ. ಇದೇ ಬಗೆಯ ಏರಿಕೆ



ಪ್ರಕಾಶಕರು ಹಾಗೂ ಮಾರಾಟಗಾರರಲ್ಲೂ ಆಗಿದೆ. ಇದು ಪುಸ್ತಕಲೋಕದ ಆಶಾದಾಯಕ ಬೆಳವಣಿಗೆ ಎನ್ನಬೇಕು. ಹೀಗಿದ್ದೂ ಈ ಮಟ್ಟದಲ್ಲಿ ಓದುಗರ ಸಂಖ್ಯೆಯಲ್ಲಿ ಏರಿಕೆ ಆಗಿದೆಯೇ ಎಂದರೆ ಇಳಿಕೆಯ ನಿರಾಶಾದಾಯಕ ಉತ್ತರ ಸಿಗುತ್ತದೆ. ನನಗೆ ಇನ್ನೂ ಬಿಡಿಸಿಕೊಳ್ಳಲಾರದ ಪ್ರಶ್ನೆ ಎಂದರೆ ಇದು ಏಕೆ ಹೀಗೆ? ಏನು ಕಾರಣ? ಯಾರು ಹೊಣೆ? ನಾಳೆ ಹೇಗೆ? ಎನ್ನುವ ಪ್ರಶ್ನೆಯಿಂದಲೇ ಹುಡುಕಾಟಕ್ಕೆ ಹೊರಡಬೇಕು. ಈ ಹುಡುಕಾಟದಲ್ಲಿ ನಾನು ಲೇಖಕ-ಓದುಗನ ಮುಂದಿರುವ ಸವಾಲುಗಳೇನು ಎನ್ನುವ ಚರ್ಚೆಯನ್ನು ಎತ್ತುವಲ್ಲಿ ಲೇಖಕ ಪ್ರಕಾಶಕ ಸಂಗತಿಯನ್ನು ಪ್ರಾಸಂಗಿಕವಾಗಿ ಆಡಬೇಕಾಗಿದೆ. ಇಲ್ಲಿನ ನನ್ನ ನಡೆ ಲೇಖಕನಿಂದ ಪ್ರಕಾಶಕರ ದಿಕ್ಕಿನೆಡೆಗೆ ಇರುತ್ತದೆ. ಹಾಗಾಗಿ ಇದು ವಿಷಯಾಂತರ ಅಲ್ಲ ಎನ್ನುವುದನ್ನು ಮೊದಲಿಗೆ ಸ್ಪಷ್ಟಪಡಿಸುತ್ತೇನೆ

ಇಲ್ಲಿ ಓದುಗನ ಮುಂದಿರುವ ಮುಖ್ಯವಾದ ಸಮಸ್ಯೆಗಳು ಎರಡು: ಒಂದು ಪ್ರಕಟಿತ ಪುಸ್ತಕಗಳ ಮಾಹಿತಿಯ ಕೊರತೆ, ಇನ್ನೊಂದು ಪ್ರಕಟಿತ ಪುಸ್ತಕಗಳ ಮಾಹಿತಿ ಇದ್ದೂ ಅದನ್ನು ತನ್ನ ಕೈಗೆ ಪಡೆಯುವಲ್ಲಿನ ತೊಡಕು. ಅಂದರೆ ಪುಸ್ತಕಗಳು ಯಾರನ್ನು ತಲಪಬೇಕೋ ಅವರನ್ನು ತಲುಪದಿರುವುದು. ತಲುಪಿಸುವ ವ್ಯವಸ್ಥೆ ಇಲ್ಲದಿರುವುದು ಯಾವ

ಪುಸ್ತಕಗಳು ಪುಸ್ತಕಲೋಕಕ್ಕೆ ಹೊಸಸೇರ್ಪಡೆಯಾಗಿವೆ. ಅವು ಯಾವ ವಿಷಯದ ಕುರಿತಾಗಿವೆ, ಅದರ ಲೇಖಕರು, ಪ್ರಕಾಶಕರು ಯಾರು, ಬೆಲೆ ಎಷ್ಟು, ಅವು ಎಲ್ಲಿ ಸಿಗುತ್ತವೆ, ಅವನ್ನು ಕೊಂಡುಕೊಳ್ಳುವ ಬಗೆ ಎಂತು ಎನ್ನುವ ಮಾಹಿತಿ ಸಂಪರ್ಕ ಇಲ್ಲದಿರುವಲ್ಲಿ ಪುಸ್ತಕಕೊಂಡುಕೊಳ್ಳುವುದು ಓದುಗನಿಗೆ ಸವಾಲಿನ ಹಾದಿ. ಸದ್ಯ ಲೇಖಕ ಓದುಗ, ಪ್ರಕಾಶಕರ ನಡುವಿನ ಬಾಂಧವ್ಯದ ಬಾಗಿಲು ಅಂದರೆ ಪತ್ರಿಕೆಗಳ 'ಸಾದರಸ್ವೀಕಾರ ಕಾಲಂ, 'ಪುಸ್ತಕ ಪರಿಚಯ' ಪುಟಗಳು, ಸಾಮಾಜಿಕ ಜಾಲತಾಣಗಳ ಪೋಸ್ಟ್ ಗಳು ಅಕಾಡೆಮಿ, ಪ್ರಾಧಿಕಾರಗಳ ಗ್ರಂಥಾಲಯ ಇಲಾಖೆಯ ಬಿಬ್ಲಿಯಗ್ರಾಫಿ ಕ್ಯಾಟಲಾಗುಗಳು, ಕನ್ನಡ ಸಂಸ್ಕೃತಿ ಇಲಾಖೆಯ ಪ್ರಕಟಣೆಗಳು ರಾಜ್ಯ ಹಾಗೂ ಜಿಲ್ಲಾ ಕಚೇರಿಗಳಲ್ಲಿ ದೊರೆಯುತ್ತವೆ. ಹಾಗೇನೇ ಜಿಲ್ಲಾ, ತಾಲ್ಲೂಕು, ಸಾರ್ವಜನಿಕ ಗ್ರಂಥಾಲಯಗಳು ಸಗಟು ಖರೀದಿಯ ಪ್ರಕಟಣೆಗಳನ್ನು ಓದುಗರ ಕೈಗೆ ತಲುಪಿಸುವ ಕೆಲಸ ಮಾಡುತ್ತಿವೆ. ಇಲ್ಲಿ ಎಲ್ಲ ಕನ್ನಡ ಓದುಗರ ಪರವಾಗಿ ನನ್ನ ಎರಡು ಕೋರಿಕೆಗಳಿವೆ. ಒಂದು ಗ್ರಂಥಾಲಯ ಇಲಾಖೆಯ ಕೃತಿಸ್ವಾಮ್ಯ ವಿಭಾಗದಲ್ಲಿ ನೋಂದಾಯಿತ ಗ್ರಂಥಗಳ ಯಾದಿಯನ್ನು ಮುದ್ರಿತ ಅಂತರ್ಜಾಲದಲ್ಲಿ ಬಿಡುಗಡೆಗೊಳಿಸಬೇಕು. ಇನ್ನೊಂದು ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಗಳು ಜಿಲ್ಲಾ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿಯಲ್ಲಿ ಪ್ರದರ್ಶನ ಮತ್ತು ಮಾರಾಟಕ್ಕೆ ವ್ಯವಸ್ಥೆ ಆಗಬೇಕು.

ಇಂದು ನಮ್ಮ ಬದುಕು ಓದುವ ಸಂಸ್ಕೃತಿಯಿಂದ ಕೇಳುವ ಸಂಸ್ಕೃತಿಗೆ ಕೇಳುವ ಸಂಸ್ಕೃತಿಯಿಂದ ನೋಡುವ ಸಂಸ್ಕೃತಿಗೆ ಬದಲಾಗಿದೆ, ಈ ಧಾವಂತದ ದಿನಚರಿಯಲ್ಲಿ ಓದುಗ ಪುಸ್ತಕದೆಡೆಗೆ' ಎನ್ನುವ ಹೇಳಿಕೆ 'ಪುಸ್ತಕ ಓದುಗನೆಡೆಗೆ' ಎಂದು ಬದಲಾಗದ ಅಗತ್ಯವಿದೆ. ಈ ನೆಲೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ, ಪುಸ್ತಕ ಮೇಳ, ಪುಸ್ತಕಜಾಥಾ ಯೋಜನೆಗಳನ್ನು ನಾವು ಅಭಿನಂದಿಸಲೇಬೇಕು. ಡಾ. ಚಂದ್ರಶೇಖರ ಕಂಬಾರರ ಪರಿಕಲ್ಪನೆಯಲ್ಲಿ ರೂಪುಗೊಂಡ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ಪುಸ್ತಕ

ಸಂಸ್ಕೃತಿ ಯಾತ್ರೆಯ ಹೆಸರಲ್ಲಿ ಊರತೇರು, ನಾಡಹಬ್ಬ ಎಂದು ನಾಡೆಲ್ಲ ತಿರುಗಾಟ ನಡೆಸುತ್ತಿರುವುದು ಹಳ್ಳಿ ಹಳ್ಳಿಯ ಓದುಗರ ಕೈಗೆ ಪುಸ್ತಕ ಮುಟ್ಟಿಸುತ್ತಿರುವುದು ಒಂದು ಮಹತ್ವದ ಹೆಜ್ಜೆ.

ಸಮ್ಮೇಳನದ ವೇದಿಕೆಯ ಆಚೆ ತೆರೆದ ಪುಸ್ತಕ ಲೋಕ ನಿಜವಾದ ಕನ್ನಡ ಕಟ್ಟುವ ಕೆಲಸ. ಕಲಬುರ್ಗಿಯ ಉರಿಬಿಸಿಲನ್ನು ತಂಪಾಗಿಸುವುದು ಈ ಪುಸ್ತಕ ಪ್ರೀತಿಯೇ ಪುಸ್ತಕ ಪ್ರೀತಿಯನ್ನು ನೋಡಬೇಕಾದರೆ ನಾವು ಕೇರಳಕ್ಕೆ ಹೋಗಬೇಕು. ಅಲ್ಲಿ ಎಲ್ಲ ಮನೆಗಳಲ್ಲೂ ಒಂದು ಗ್ರಂಥಭಂಡಾರ ಇದ್ದೇ ಇರುತ್ತದೆ. ನಮ್ಮಲ್ಲಿ ಎಷ್ಟು ಮಂದಿ ತಮ್ಮದೇ ಗ್ರಂಥಾಲಯ ಹೊಂದಿದ್ದಾರೆ? ದೊಡ್ಡ ಪಗಾರ ಪಡೆವ ಅನೇಕ ಮಂದಿ ಪುಸ್ತಕವನ್ನು ಕಡ ಕೇಳಿ ಕೊಂಡೊಯ್ಯುವರೇ ಹೊರತು ಕೊಂಡು ಓದುವವರಲ್ಲ.

ಈಚಿನ ದಿನಗಳಲ್ಲಿ ನಮ್ಮ ಪುಸ್ತಕಲೋಕದ ಮುಂದಿರುವ ಆತಂಕ ಎಂದರೆ ಎಡ- ಬಲ ಪಂಥೀಯ ಮನಸ್ಥಿತಿ. ಮುಖ್ಯವಾಗಿ ಬಲದವರು ಎಡದವರನ್ನು ಓದುವುದಿಲ್ಲ, ಎಡದವರು ಬಲದವರನ್ನು ನೋಡುವುದಿಲ್ಲ ಎನ್ನುವಷ್ಟು ಮೂಲಭೂತವಾದಿಗಳಾಗಿದ್ದಾರೆ. ಇದು ಒಟ್ಟು ಸಾಹಿತ್ಯ ಸೃಷ್ಟಿಗೆ ಲೇಖಕ-ಓದುಗನ ಅರಿವಿನ ವಿಸ್ತಾರಕ್ಕೆ ದೊಡ್ಡ ತಡೆಯೊಡ್ಡಿದೆ, ಗೊಂದಲಕ್ಕೆ ಕೆಡವಿದೆ.

ಪುಸ್ತಕ ಸಂಸ್ಕೃತಿಗೆ ದೂರವಾಗುತ್ತಿರುವ ಸಮೂಹವನ್ನು ಗುರುತಿಸುವಲ್ಲಿ ಮೊದಲಿಗೆ ಕಾಣುವ ಬಹಳ ದೊಡ್ಡ ಗುಂಪು ಶಾಲಾ ಕಾಲೇಜು ವಿದ್ಯಾರ್ಥಿಗಳದು, ಅಂಕ, ಶುಲ್ಕಕ್ಕೆ ಗಂಟುಬಿದ್ದು ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ನಮ್ಮ ಮಕ್ಕಳು ಕನ್ನಡ ಓದುಗರಾಗುವ ಕನಸು ಕಟ್ಟಲೂ ಸಾಧ್ಯವಾಗದು. ಹಗಲೇ ಕಾಣದೆ, ಸೂರನನ್ನು ನೋಡುದೆ ಬೆಳಗ್ಗೆ ಎಂಟರಿಂದ ರಾತ್ರಿ ಎಂಟರವರೆಗೆ ನಡೆಸುವ ಶಿಕ್ಷಣ ದಂಧೆಯಲ್ಲಿ ನಮ್ಮ ಮಕ್ಕಳು ಬರಡಾಗುತ್ತಿದ್ದಾರೆ, ಕುರುಡರಾಗುತ್ತಿದ್ದಾರೆ. ನಾನು ಬಹಳ ಬಾರಿ ಹೇಳುತ್ತೇನೆ, ನಮ್ಮ ಕಂಬಳ ನಿಷೇಧಕ್ಕಿಂತ ಮೊದಲು ಇಂತಹ ಮಕ್ಕಳ ಬಂಧಿಖಾನೆಗಳನ್ನು ನಿಷೇಧಿಸಬೇಕು. ಹನ್ನೆರಡು ಕೆ.ಜಿ.ಗೂ ಮೀರಿದ ಚೀಲವೆಂಬ ಮೂಟೆಯಲ್ಲಿ ಒಂದೇ ಒಂದು ಕನ್ನಡ ಪುಸ್ತಕವಿಲ್ಲದ ದುರಂತದ ಸಂದರ್ಭವನ್ನು ಶಿಕ್ಷಣದ ಹೆಸರಿನಲ್ಲಿ ನಾವು ಸಂಭ್ರಮಿಸುತ್ತಿದ್ದೇವೆ. ಕನ್ನಡ ನಾಡಿನ ನೆಲ, ಜಲ, ಜನ, ಹಣ, ಗಾಳಿಯ ಎಲ್ಲ ಸೌಲಭ್ಯ ಪಡೆದು ಉಪ್ಪನ್ನದ ಋಣಪ್ರಜ್ಞೆಯಿಲ್ಲದೆ ಕನ್ನಡ ಭಾಷಾವಿರೋಧಿ ಧೋರಣೆಯನ್ನು ತೋರುತ್ತಿರುವ ಇಂತಹ ಶಿಕ್ಷಣಸಂಸ್ಥೆಗಳ ವಿರುದ್ಧ ಎಲ್ಲ ಕನ್ನಡಪರ ಸಂಘಟನೆಗಳು ಹೋರಾಟ ಕಟ್ಟಬೇಕಾದ ತುರ್ತು ಇಂದಿನದು. ಇಂತಹ ಸಂದರ್ಭದಲ್ಲಿ ಪಾಲಕರು ಕೂಡಾ ಎಚ್ಚೆತ್ತುಕೊಳ್ಳಬೇಕಾಗಿದೆ.

ಓದುವ ಸಂಸ್ಕೃತಿಯಿಂದ ದೂರವಾದ ಇನ್ನೊಂದು ಸಮೂಹವೆಂದರೆ ಕುಟುಂಬದ ಮಹಿಳೆಯರು ಹಾಗೂ ಹಿರಿಯರು. ಟಿ.ವಿ. ಯಂತಹ ವಿದ್ಯುನ್ಮಾನ ದೃಶ್ಯಮಾಧ್ಯಮಗಳ ಮನರಂಜನೆಯು ಈ ಓದುಗ ಸಮೂಹವನ್ನು ಕಸಿದುಕೊಂಡಿದೆ. ಟಿ.ಆರ್.ಪಿ. ಮೇಲೆ ಆಧರಿತವಾಗಿರುವ ದೃಶ್ಯಮಾಧ್ಯಮಗಳು ಸಾಮಾಜಿಕ, ರಾಜಕೀಯ ಸಂಗತಿಗಳಿಗೆ ಕೊಡುವ ಮಹತ್ವವನ್ನು ಪುಸ್ತಕ ಸಂಸ್ಕೃತಿಗೆ ಕೊಡುತ್ತಿಲ್ಲ.

ಜಾಗತೀಕರಣದ ಚಕ್ರಾಧಿಪತ್ಯದ ಈ ದಿನಗಳಲ್ಲಿ ಕೊಳ್ಳುಬಾಕ ಮನಸ್ಥಿತಿಯಲ್ಲಿ ಬದುಕಿನ ಅರ್ಥ,ಲಯ,ವಿನ್ಯಾಸ ಎಲ್ಲವೂ ಬದಲಾಗಿದೆ. ತೃತೀಯ ಜಗತ್ತಿನ ಮಾರುಕಟ್ಟೆಗೆ



ಸರಕು ತುಂಬುವ ಪೈಪೋಟಿಯಲ್ಲಿ ಲಗ್ಗೆ ಇಡುತ್ತಿವೆ. ಹೀಗೆ ಬದುಕನ್ನು ಹರಾಜಿಗಿಟ್ಟ ತರಾವರಿ ಸರಕುಗಳು ನಮಗೆ ದುಬಾರಿ ಎನಿಸುವುದಿಲ್ಲ. ಯಾಕೆಂದರೆ ಅವು ನಮ್ಮ ಶೋಕಿ ಹಾಗೂ ಪ್ರತಿಷ್ಠೆಯ ಮಾನಕಗಳು ಆದರೆ ಪುಸ್ತಕದ ಪ್ರಶ್ನೆ ಬಂದಾಗ ಮಾತ್ರ ಬೆಲೆ ದುಬಾರಿ ಎಂಬ ಆರೋಪ ಕೇಳಿಬರುತ್ತದೆ ಮತ್ತು ಇಂಗ್ಲೀಷ್ ಹಾಗೂ ಇತರ ಭಾಷೆಗಳ ಪುಸ್ತಕಗಳು ಅಗ್ಗದ ಬೆಲೆಗೆ ಸಿಗುತ್ತವೆ ಎನ್ನುವ ತರ್ಕವನ್ನು ಮಂಡಿಸಲಾಗುತ್ತದೆ. ಇದು ಮೇಲ್ನೋಟಕ್ಕೆ ನಿಜ ಅನ್ನಿಸಿದರೂ ಒಳಸೂಕ್ಷ್ಮದಲ್ಲಿ ಇರುವ ಸತ್ಯವನ್ನು ಮುಂದಿಡಬೇಕಾಗಿದೆ. ಇಂಗ್ಲೀಷ್ ಮತ್ತು ಇತರ ಭಾಷೆಗಳ ಪುಸ್ತಕಗಳು ಒಂದು ಆವೃತ್ತಿಯಲ್ಲಿ ಸಾವಿರಾರು ಪ್ರತಿಗಳು ಪ್ರಕಟವಾಗುತ್ತಿವೆ. ಕನ್ನಡ ಪುಸ್ತಕ ೫೦೦ ಪ್ರತಿಗಳನ್ನು ಅಚ್ಚಿಸಿ ಮಾರಾಟವಾಗಲು ಹಲವು ವರ್ಷ ಕಾಯಬೇಕಾಗುತ್ತದೆ. ಈ ಮನಸ್ಥಿತಿ ಮತ್ತು ಪರಿಸ್ಥಿತಿಯ ಬದಲಾವಣೆಗೆ ವಿದೇಶಗಳಲ್ಲಿರುವಂತೆ ಪುಸ್ತಕಲೋಕದ ಹಿತಕಾಯುವ ಒಂದು ಏಜೆನ್ಸಿ ವ್ಯವಸ್ಥೆ ಸ್ಥಾಪನೆಯಾಗಬೇಕು. ಇಲ್ಲದೆ ಹೋದರೆ ಜಾಗತಿಕ ಪುಸ್ತಕಲೋಕದೊಂದಿಗೆ ನಾವು ಸ್ಪರ್ಧಿಸಲಾರೆವು.

ನಮ್ಮ ಜನಪ್ರತಿನಿಧಿಗಳಿಗೆ, ಅಧಿಕಾರಿಯ ವ್ಯವಸ್ಥೆಗೆ ಅಭಿವೃದ್ಧಿಯ ಪರಿಕಲ್ಪನೆ ಇಲ್ಲ. ಅವರ ದೃಷ್ಟಿಯಲ್ಲಿ ಅಭಿವೃದ್ಧಿ ಅಂದರೆ ರಸ್ತೆ ನಿರ್ಮಾಣ, ಸ್ಟೀಲ್ ಬ್ರಿಜ್ ನಿರ್ಮಾಣ, ಕಂಪನಿಗಳ ಸ್ಥಾಪನೆ-ಹೀಗೆ ಒಟ್ಟು ಆರ್ಥಿಕ ಜಗತ್ತಿಗೆ ಸಂಬಂಧಿಸಿದ್ದು, ನಿಜವಾದ ಅಭಿವೃದ್ಧಿ ಎಂದರೆ ಒಟ್ಟು ಮಾನವ ಬದುಕಿನ ಅಭಿವೃದ್ಧಿ, ಅಭಿವೃದ್ಧಿಗೆ ಆರ್ಥಿಕ ಮುಖವಷ್ಟೇ ಇದ್ದರೆ ಸಾಲದು, ಅದಕ್ಕೆ ಸಾಂಸ್ಕೃತಿ ಆಯಾಮವೂ ಬೇಕು ಕೇರಳದಲ್ಲಿ ಚುನಾಯಿತ ಪತ್ರಿನಿಧಿಗಳಿಗೆ ಮುಖ್ಯ ಹಬ್ಬದ ಸಂದರ್ಭಗಳಲ್ಲಿ ಹೆಚ್ಚುವರಿ ಬೋನಸ್ ನೀಡುತ್ತಾರೆ. ಆ ಮೊತ್ತದಲ್ಲಿ ಅವರು ಪುಸ್ತಕಗಳನ್ನು ಮಾತ್ರ ಕೊಂಡುಕೊಳ್ಳಬೇಕು (ಮಾಹಿತಿ : ಶ್ರೀ ಜಿ.ಎನ್. ಮೋಹನ್) ನಮ್ಮ 'ಜನಪತ್ರಿನಿಧಿಗಳು', 'ಗಣ್ಯರು', 'ಮಾನ್ಯರು' ಮಣಗಟ್ಟಲೆ ತೂಕದ ಹಾರ ತುರಾಯಿಗೆ ಕೊರಳೊಡ್ಡುವುದನ್ನು ಬಿಟ್ಟು ಪುಸ್ತಕದ ಕಟ್ಟು ಹಿಡಿವ ಪರಂಪರೆಗೆ ಚಾಲನೆ ನೀಡಬೇಕು. ಓದುವ ಸಂಸ್ಕೃತಿಯನ್ನು ವಿಸ್ತರಿಸುವ ಕೇರಳದ ಪ್ರಯೋಗವನ್ನು ನಾನಿಲ್ಲಿ ಹೇಳಬೇಕು. ಅಲ್ಲಿನ ಸೆಲೂನು ಒಂದರಲ್ಲಿ ಮಿನಿ ಗ್ರಂಥಾಲಯನ್ನು ಮಾಡಲಾಗಿದೆ. ಸೆಲೂನಿಗೆ ಬಂದ ವ್ಯಕ್ತಿ ಸರದಿಯಲ್ಲಿ ಕಾಯುವ ಸಮಯದಲ್ಲಿ ಅಲ್ಲಿನ ಪುಸ್ತಕ ಓದಬಹುದು. ಹಾಗೆ ಓದಿದ ವ್ಯಕ್ತಿಗೆ ವಿಶೇಷ ರಿಯಾಯಿತಿ ನೀಡಲಾಗುತ್ತದೆ. ಇದೇ ರೀತಿ ನಮ್ಮ ಆಸ್ಪತ್ರೆಗಳಲ್ಲಿ ಒಂದಷ್ಟು ಸ್ವಚ್ಛತೆ, ಆರೋಗ್ಯ, ಆಹಾರ, ಪರಿಸರ, ಕೃಷಿ, ಶಿಕ್ಷಣ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿ

ಒಂದು ಗ್ರಂಥಾಲಯ ನಿರ್ಮಾಣ ಅಗತ್ಯವಿದೆ. ಹಾಗೇನೇ ನಮ್ಮ ನಗರಗಳ ಪಾರ್ಕ್‌ಗಳಲ್ಲಿ ಗ್ರಂಥಭಂಡಾರ ಸ್ಥಾಪಿಸುವಲ್ಲಿ ಜನಪ್ರತಿನಿಧಿಗಳು, ಕಾರ್ಪೊರೇಟರುಗಳು ಕಾಳಜಿ ತೋರಬೇಕು.

ಇದು ಓದುಗನ ಮುಂದಿರುವ ಸವಾಲುಗಳಾದರೆ ಲೇಖಕನ ಮುಂದಿರುವ ಇಕ್ಕಟ್ಟು ತ್ರಿಶಂಕುಸ್ಥಿತಿಯದು. ಇವತ್ತು ಪ್ರಕಾಶನ ಮಾರಾಟ ಪುಸ್ತಕೋದ್ಯಮವಾಗಿ ಮಾರ್ಪಾಟಾಗಿದ್ದು ಎಲ್ಲವೂ ಕಸ್ಟಮರ್ ಪರಿಭಾಷೆಗೆ ಬಂದಿದೆ. ಕೂಡು-ಕಳೆವ ಲೆಕ್ಕಾಚಾರದ ಮಾರುಕಟ್ಟೆ ಆಧರಿತ ವ್ಯವಹಾರ ಎನಿಸಿದೆ. ಈ ಕೊಡು-ಕೊಳ್ಳುವ ಆಲ್ಲೀಬ್ರಾದಲ್ಲಿ ಎಲ್ಲ ಇಕ್ಕಟ್ಟುಗಳಿಗೆ ಹೆಚ್ಚು ಒಳಗಾಗುವವನು ಲೇಖಕ. ಇದು ಹೇಗೆ ಅಂದರೆ ಜಾತಿ, ಪಂಥ, ಕೋಮು, ಗುಂಪು, ಲಾಬಿಯಲ್ಲಿ ರಾಡಿಯಾಗಿರುವ ಇಂದಿನ ಸಾಹಿತ್ಯ ಸಂದರ್ಭದಲ್ಲಿ ಈ ಯಾವ 'ಅರ್ಹತೆ' ಇಲ್ಲದ ಪತ್ರಿಭಾವಂತ ಪ್ರಾಮಾಣಿಕ ಲೇಖಕನಿಗೆ ಪ್ರಕಾಶಕರು ದಕ್ಕುವುದು



ಸುಲಭವಲ್ಲ. ಬಹುತೇಕ ಪ್ರಕಾಶಕರು 'ಚಾಲ್ತಿಖಾತೆ'ಯ ವ್ಯಕ್ತಿಗಳ ಪುಸ್ತಕ ಪ್ರಕಟನೆಯತ್ತ ಆಸಕ್ತರಾಗಿದ್ದಾರೆ. ಸರಳವಾಗಿ ಹೇಳುವುದಾದರೆ ಪ್ರಕಾಶಕನಿಗೆ ಇವತ್ತು ಕೃತಿಕಾರ ಮುಖ್ಯವೇ ಹೊರತು ಒಂದು ಕೃತಿ ಮುಖ್ಯವಾಗುವುದಿಲ್ಲ. ಒಂದೊಮ್ಮೆ ಜನಪ್ರಿಯವಲ್ಲದ, ಮಧ್ಯಮಮಾರ್ಗದ ಲೇಖಕನ ಕೃತಿಯನ್ನು ಪ್ರಕಟಣೆಗೆ ಸ್ವೀಕರಿಸಿದರೂ (ಕೆಲವೆ ಕೆಲವು ಪ್ರಕಾಶಕರ ಹೊರತುಪಡಿಸಿ) ಲೇಖಕನಿಗೆ ಗೌರವಧನ ನೀಡುವಲ್ಲಿ ಉತ್ಸುಕರಾಗಿಲ್ಲ. ಇನ್ನು ಕೆಲವು ಪ್ರಕಾಶಕರು ಲೇಖಕನಿಗೆ ಗೌರವಧನ ನೀಡುವ ಕರಾರುಪತ್ರ ಸಹಿ ಮಾಡಿ ಕೈಎತ್ತುವವರೂ ನಮ್ಮಲ್ಲಿದ್ದಾರೆ ಅವರಿಗೆ ಚೆನ್ನಾಗಿ ಗೊತ್ತಿದೆ, ನ್ಯಾಯಾಲಯದ ವೆಚ್ಚದ ಹೊರೆ ಮತ್ತು ಇಂತಹ ಸಿವಿಲ್ ಪ್ರಕರಣಗಳು ತಮ್ಮ ಜೀವಿತಾವಧಿಯೊಳಗೆ ಇತ್ಯರ್ಥವಾಗುವುದಿಲ್ಲ ಎನ್ನುವ ಸತ್ಯ. ಮತ್ತೆ ಕೆಲವು ಪ್ರಕಾಶಕರು ಲೇಖಕರಿಂದ ಪ್ರಕಟಣೆಯ ವೆಚ್ಚ ಪಡೆದು ಲೇಖಕರಿಗೆ ಒಂದಷ್ಟು ಪ್ರತಿಕೊಟ್ಟು ಕೈತೊಳೆದುಕೊಳ್ಳುವವರೂ ಇದ್ದಾರೆ. ಈ ಎಲ್ಲ ಇಕಟ್ಟುಗಳು ಒಬ್ಬ ಲೇಖಕನಿಗೆ ಹವ್ಯಾಸಿ ಪ್ರಕಾಶಕನಾಗುವ ಒತ್ತಡದ ಸಂದರ್ಭವನ್ನು ಸೃಷ್ಟಿಸಿದೆ. ಹೀಗೆ ಒಬ್ಬ ಲೇಖಕ ಪ್ರಕಾಶಕ-ಮಾರಾಟಗಾರನ ಎಲ್ಲ ಜವಾಬ್ದಾರಿಯನ್ನು ನಿರ್ವಹಿಸುವುದು ಅವನ ಬರಹದ ಅವಕಾಶಕ್ಕೆ ಮತ್ತಷ್ಟು ಸವಾಲನ್ನು ಒಡ್ಡುತ್ತದೆ. ಜೊತೆಗೆ ಪುಸ್ತಕದ ಸಗಟು ಖರೀದಿಯ ಪ್ರಕ್ರಿಯೆಯಲ್ಲಿನ ವಿಳಂಬ, ಪುಸ್ತಕಗಳ ದೀರ್ಘಕಾಲಿಕ ದಾಸ್ತಾನು, ಹೂಡಿದ ಹಣವನ್ನು ವರ್ಷಗಟ್ಟಲೆ ನಿಭಾಯಿಸುವ ಸಾಮರ್ಥ್ಯ, ಮಾರುಕಟ್ಟೆಯ ಹುಡುಕಾಟ-ಇತ್ಯಾದಿ ಅಂಶಗಳು ಪುಸ್ತಕಲೋಕದ ಅಭಿವೃದ್ಧಿಗೆ ಪೂರಕವಾಗಿಲ್ಲ. ಹಾಗೆಂದು ಪುಸ್ತಕ ಮಾರಾಟಮಳಿಗೆಗೆ ಕೊಂಡೊಯ್ದರೆ ೫೦ರಿಂದ ೬೦ ಶೇಕಡಾ ರಿಯಾಯತಿ ಕೇಳುತ್ತಾರೆ, ಅದು ಪುಸ್ತಕ ಮಾರಾಟವಾದ ಬಳಿಕ ಪಾವತಿಸುವ ಕರಾರಿನ ಮೇಲೆ ಈ ವಾಸ್ತವ ಲೇಖಕ-ಹವ್ಯಾಸಿ ಪ್ರಕಾಶಕನ ಎಲ್ಲ ನಿರೀಕ್ಷೆಯನ್ನು ಹುಸಿಯಾಗಿಸಿದೆ. ಮಲಯಾಳಂ, ಮರಾಠಿ,

ತಮಿಳ್, ಬಂಗಾಳಿಯಲ್ಲಿ ಒಂದು ಅವೃತ್ತಿಯಲ್ಲಿ ಕೆಲವು ಸಾವಿರ ಪತ್ರಿಗಳು ಪ್ರಕಟವಾಗುತ್ತಿರುವಲ್ಲಿ ಕನ್ನಡದಲ್ಲಿ ಈ ಅಂಕೆ ಐನೂರು, ಸಾವಿರದ ಗಡಿ ಅಂಚಿನಲ್ಲಿ ಅಚ್ಚಾಗುತ್ತಿರುವುದೇಕೆ? ಗಳಗನಾಥರು ತಲೆ ಮೇಲೆ ಪುಸ್ತಕದ ಗಂಟು ಹೊತ್ತು ಮನೆ ಮನೆಗೆ ಪುಸ್ತಕ ಮಾರಾಟ ಮಾಡಿದ ಇತಿಹಾಸದ ನೆಲದಲ್ಲಿ ಇವತ್ತು ಈ ಬಗೆಯ ಪುಸ್ತಕದ ನಿರಾಸಕ್ತಿ ಯಾಕಾಗಿ?

**ಹೊರಳುದಾರಿಯಲ್ಲಿ ಪುಸ್ತಕಲೋಕ**

ಜಾಗತೀಕರಣದ ಫಲವಾದ ವಿಶ್ವಮಾರುಕಟ್ಟೆ ನೀತಿ ಕನ್ನಡ ಪುಸ್ತಕಲೋಕಕ್ಕೆ ಸವಾಲಾಗಿ ನಿಂತಿದೆ. ಲೇಖಕ-ಓದುಗ-ಪ್ರಕಾಶಕ-ಮಾರಾಟಗಾರ-ಈ ಸಂಬಂಧವನ್ನು ಮರುಕಟ್ಟುವ ಅಗತ್ಯದ ಹೊತ್ತಿನಲ್ಲಿ ವಿಶ್ವಪುಸ್ತಕ ಮಾರುಕಟ್ಟೆಯೊಂದಿಗೆ ಕನ್ನಡ ಪುಸ್ತಕಲೋಕವನ್ನು ಕಟ್ಟುವ ಸವಾಲು ಎದುರಾಗಿದೆ. ಈ ಮುಖಾಮುಖಿಯಲ್ಲಿ ಕನ್ನಡ ಪುಸ್ತಕಲೋಕವನ್ನು ಬೆಳೆಸಬೇಕಾದ ಜವಾಬ್ದಾರಿ ಎಲ್ಲ ಕನ್ನಡಿಗರದು. ಭಾಷೆ ನಮಗೆ ಬರಿಯ ಸಂವಹನ ಮಾಧ್ಯಮ ಅಲ್ಲ, ಅದು ಹೃದಯಸಂವಾದದ ಬಗೆ, ಹಾಗೆಂದೇ ಭಾಷೆಯನ್ನು ತಾಯಾಗಿ ಕಂಡ ನೆಲ ನಮ್ಮದು ಈ ಎಚ್ಚರ ಯಾವತ್ತು ನಮ್ಮದಾಗಿರಬೇಕು.

ಪುಸ್ತಕ ಸಂಸ್ಕೃತಿ ಕಟ್ಟು ಈ ಎಲ್ಲ ಸಮಸ್ಯೆಗಳಾಚೆಗೆ ಇವತ್ತು ಡಿಜಿಟಲ್ ತಂತ್ರಜ್ಞಾನದ ಬಹುರೂಪಿ ಬೆಳಕಿಂಡಿ ಪುಸ್ತಕಲೋಕದ ಮುಂದೆ ತೆರೆದಿದೆ. ಅನೇಕರಲ್ಲಿ ಇದು ಒಂದು ಆತಂಕ, ತಲ್ಲಣವನ್ನು ಸೃಷ್ಟಿಸಿದ್ದು ನಿಜ ಆದರೆ ಪುಸ್ತಕಲೋಕವನ್ನು ತೀರಾ ಭಾವನಾತ್ಮಕತೆಗೆ



ಎಳೆದು ನೋಡುವುದಕ್ಕಿಂತ ಇದನ್ನು ಹೊಸ ತಂತ್ರಜ್ಞಾನದ ಗುಣಾತ್ಮಕತೆಯ ಅರಿವಿನಲ್ಲಿ ನೋಡಬೇಕು. ಡಿಜಿಟಲ್ ತಂತ್ರಜ್ಞಾನದ ಕೂಸುಗಳಾದ ಈ-ಬುಕ್, ಆಡಿಯೋ ಬುಕ್, ಫೇಸ್ ಬುಕ್, ಟ್ವಿಟರ್, ಇನ್‌ಸ್ಟಾಗ್ರಾಮ್‌ಗಳು ಲೇಖಕ-ಓದುಗನಿಗೆ ತೆರೆದ ಹೊಸಬಾಗಿಲಾಗಿ ಕಂಡುಕೊಳ್ಳಬೇಕಾಗಿದೆ. ಗಾಂಧೀಜಿಯವರ ಒಂದು ಮಾತನ್ನು ಈ ಸಂದರ್ಭಕ್ಕೆ ಅನ್ವಯಿಸಿ ಹೇಳುವುದಾದರೆ ಬಾಗಿಲು ಮುಚ್ಚಿದೆ ಎಂದು ಕೂರಬೇಡ, ಹೊಸ ಗಾಳಿ ಬೆಳಕಿಗೆ ಕಿಟಕಿಗಳನ್ನು ತೆರೆದಿಡು. ಅಂತೆಯೇ ಪುಸ್ತಕಲೋಕದ ಬಾಗಿಲು ಮುಚ್ಚಿದೆ ಎಂದು ಕೂರಬೇಡ, ತಂತ್ರಜ್ಞಾನದ ಹೊಸಬೆಳಕಿಗೆ ಕಿಟಕಿಯನ್ನು ತೆರೆದಿಡು ಎನ್ನುವ ಮನಸ್ಥಿತಿ ನಮ್ಮದಾಗಬೇಕು. ಅಂದರೆ ಪುಸ್ತಕ ಲೋಕದ ಮುಂದಿರುವ ಈ ತಂತ್ರಜ್ಞಾನದ ಸವಾಲನ್ನು ಹೊಸ ಅವಕಾಶವಾಗಿ ಮಾರ್ಪಡಿಸಿಕೊಳ್ಳಬೇಕು. ಅಂಗೈಯೊಳಗಿನ ಮೊಬೈಲ್ ನಿಂದ ತೆರೆದುಕೊಳ್ಳುವ 'ವೆಬ್ ಬುಕ್ ಜಗತ್ತು' ವಿಶ್ವದ ಯಾವುದೇ ಪುಸ್ತಕದ ಮಾಹಿತಿಯನ್ನು ಕ್ಷಣಮಾತ್ರದಲ್ಲಿ ಒಂಧು ಗೂಗಲ್ ಸರ್ಚ್ ಮೂಲಕ ಪಡೆಯಬಹುದು. ಅಮೆಜಾನ್, ಫ್ಲಿಪ್ ಕಾರ್ಟ್‌ನಂತಹ ಅನ್ ಲೈನ್ ಶಾಪಿಂಗ್‌ನಲ್ಲಿ ಆರ್ಡರ್ ಮಾಡಬಹುದು.

ಯಾವುದೇ ಓಡಾಟ, ಹುಡುಕಾದ ತ್ರಾಸವಿಲ್ಲದೆ ಮನೆಬಾಗಿಲಲ್ಲೇ ಪುಸ್ತಕ ಪಡೆಯಬಹುದು. ಪುಸ್ತಕಲೋಕದ ಸಾವಿರಾರೂ ಪುಟಗಳನ್ನು ಒಂದು ಬೆರಳುಗಾತ್ರದ ಪೆನ್ ಡ್ರೈವ್‌ನಲ್ಲಿಟ್ಟು ಸುಲಭವಾಗಿ ಕೊಂಡೊಯ್ಯಬಹುದು, ಬೇಕಾದಾಗ ಕಂಪ್ಯೂಟರ್ ಪರದೆಯ ಮೇಲೆ ಓದಬಹುದು, ದಿನವೂ ಯುಟ್ಯೂಬ್/ವಾಟ್ಸಪ್‌ಗಳಲ್ಲಿ ಬರುವ ಬರಹ, ಭಾಷಣ. ಓದುಗನ ಓದಿನ ಪ್ರೀತಿಯನ್ನು ಅರಿವಿನ ಬೆಳಕನ್ನು ಹೆಚ್ಚಿಸುವ ಈ ಡಿಜಿಟಲ್ ಬುಕ್ ವಲ್ಡ್ಸ್ನ್ ನಾವು ಪುಸ್ತಕಕ್ಕೆ ಪರಾಯ, ಪುಸ್ತಕರೂಪದ ಪಲ್ಲಟ ಎಂದು ಗ್ರಹಿಸಬೇಕೇ ಹೊರತು ಅದು ಪುಸ್ತಕಲೋಕದ ಮುಂದಿರುವ ಆತಂಕ, ಕುಂದು ಎಂದು ತಿಳಿಯಬೇಕಿಲ್ಲ. ಅದು ಚರಿತ್ರೆಯ ಹಿಂದಿನ ಪುಟಗಳ ಮುಂದಿನ ಹಾಳೆಯಂತೆ ಎನ್ನುವುದು ನನ್ನ ನಿಲುವು.

ಕನ್ನಡ ಪುಸ್ತಕ ಅಥವಾ ಯಾವುದೇ ಭಾಷೆಯ ಪುಸ್ತಕದ ಓದುಗನ ಮುಂದಿರುವ ತೊಡಕು ಎಂದರೆ ತನ್ನ ಭಾಷೆಯ ಅಚೆಗಿರುವ ತನ್ನದಲ್ಲದ ಭಾಷೆಯ ಪುಸ್ತಕವನ್ನು ಓದಲಾಗದ ಸವಾಲು. ಹಾಗಾಗಿಯೇ ನಾವು ಇವತ್ತು ಪುಸ್ತಕಗಳ ಅಮದು ರಸ್ತೆಗೆ- ಪರಸ್ಪರ ಭಾಷಾಂತರಕ್ಕೆ ಒತ್ತಾಯ ಮಂಡಿಸುತ್ತಿರುವುದು. ಇಂತಹ ಸಂದರ್ಭದಲ್ಲಿ ಕನ್ನಡದಲ್ಲಿ ಬರೆದ ಬರೆಹವನ್ನು ಅಥವಾ ಪ್ರಪಂಚದ ಯಾವುದೇ ಒಂದು ಭಾಷೆಯಲ್ಲಿ ಬರೆದ ಪುಸ್ತಕವನ್ನು ಇನ್ನೊಂದು ಭಾಷಾ ಓದುಗ ಅವನ ಭಾಷೆಯಲ್ಲಿ ಓದುವ ದೊಡ್ಡ ಅವಕಾಶ ಹೊಸತಂತ್ರಜ್ಞಾನ ನಮಗೆ ಒದಗಿಸಿದೆ. ಈಗಿರುವ ಅಗತ್ಯ ಎಂದರೆ ಕನ್ನಡ ಪುಸ್ತಕಗಳನ್ನು ವೆಬ್‌ಬುಕ್ ವಲ್ಡ್ಸ್ಗೆ ಅಳವಡಿಸುವ, ಪ್ರಪಂಚದಾದ್ಯಂತ ಓದುಗನನ್ನು ಸೃಷ್ಟಿಸುವ ಕೆಲಸ ನಾನೇನೂ ಕಂಪ್ಯೂಟರ್ ಪರಿಣತಳಲ್ಲ. ಆದರೆ ಇಲ್ಲಿ ಒಂದು ಸಣ್ಣ ಅನುಮಾನ ನನಗೆ ಒಂದು ಪುಸ್ತಕ ಓದಿನಲ್ಲಿನ ತಲ್ಲೀನತೆ, ಧ್ಯಾನಸ್ಥ, ಅಂತಸ್ಥ ಸ್ಥಿತಿಯ 'ತಂತ್ರಜ್ಞಾನ ಅತ್ಯಂತ ಮುಂದುವರಿದ ಸ್ಥಿತಿಯಲ್ಲೂ ಪುಸ್ತಕಲೋಕ ಮುಕ್ಕಾಗಿಲ್ಲ, ಓದುಗನ ಸಂಖ್ಯೆ ಇಳಿದಿಲ್ಲ. ಇದಕ್ಕೆ ಓದುಗನು ಒಳ್ಳೆಯ ಪುಸ್ತಕಗಳನ್ನು ಹುಡುಕುವ, ಆಯುವ, ಕೊಳ್ಳುವ, ಓದುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಪುಸ್ತಕ ನಮ್ಮ ಬದುಕಿನ ಜೀವನಾವಶ್ಯಕ ವಸ್ತುಗಳ ಪಟ್ಟಿಯಲ್ಲಿ ಸೇರುವಂತಾಗಬೇಕು, ಕಪಾಟಿನ ಶೋಕಿಯಷ್ಟೇ ಆಗಬಾರದು. ಅಂದರೆ ಪುಸ್ತಕದ ಓದು ಬದುಕಿನ ಪ್ರೀತಿಯಾಗಬೇಕು, ಬದುಕಿನ ರೀತಿಯಾಗಬೇಕು, ಬದುಕಿನ ಭಾಗವಾಗಬೇಕು, ಅದು ಬದುಕಾಗಬೇಕು.

## ಅಧ್ಯಕ್ಷ ಭಾಷಣ:

## ಮನುಷ್ಯ: ಪುಸ್ತಕದೊಂದಿಗೆ ಬೆಳೆಯಬೇಕು

**ಡಾ. ಸತೀಶಕುಮಾರ್ ಹೊಸಮನಿ**

ಪುಸ್ತಕ ಎಂಬ ಪದ ಮೂಲತಃ ಲ್ಯಾಟಿನ ಭಾಷೆಯಿಂದ ಬಂದಿದೆ. Latin word codex od meaning books . In modern sense (bound and withseparate leaves) originally meant “block of wood” ಎನ್ನಬಹುದು.

ಅಖಂಡ ಕರ್ನಾಟಕದ ಕಲ್ಯಾಣ ಕರ್ನಾಟಕ 'ಭಾಗವು ತನ್ನದೆಯಾದ ಪ್ರಾಮುಖ್ಯತೆಯನ್ನು ಪಡೆದಿದೆ. ಇವತ್ತು ಈ ಭಾಗ ಕನ್ನಡ-ಉರ್ದು-ವಚನ ಸಾಹಿತ್ಯದ ತವರು ಮತ್ತು ವಿವಿಧ ಸಾಮ್ರಾಜ್ಯಗಳ ತೊಟ್ಟಿಲು ಎಂದು ಬಿಂಬಿಸಲಾಗುತ್ತದೆ. ಕಲಬುರಗಿ ಅಕ್ಷರೋತ್ಸವವು ಕನ್ನಡ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಪರಂಪರೆ, ಪುರಾತತ್ವಗಳ ಮೂಲತಾಣವೆಂದೇ ಖ್ಯಾತಿಯಾಗಿರುವ ಕಲಬುರಗಿ ಜಿಲ್ಲೆ ಹಲವು ಪ್ರಥಮಗಳ ನಾಡು, ವಿವಿಧ ಧರ್ಮಗಳು, ಮತಗಳು ಪಂಗಡಗಳ ಅನುಯಾಯಿಗಳು ಇಲ್ಲಿ ಅನ್ಯೋನ್ಯತೆಯಿಂದ ಬಾಳುತ್ತಿದ್ದಾರೆ. ಈ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡ ರಾಷ್ಟ್ರಕೂಟರ ರಾಜಧಾನಿಯಾಗಿದ್ದು, ಅಮೋಘ ವರ್ಷ ನೃಪತುಂಗನ ಕವಿರಾಜಮಾರ್ಗ, ಕನ್ನಡದ ಆದಿಗ್ರಂಥವೆಂಬ ಮನ್ನಣೆ ಪಡೆದಿದೆ. ಕವಿ ಕಲಾವಿದರ ಪಂಡೀತವರೇಣ್ಯರ ನೆಲೆಬೀಡೆಂಬ ಮನ್ನಣೆ ಗಳಿಸಿರುವ ಈ ಜಿಲ್ಲೆ ತೊಗರಿ, ಕೃಷಿ, ಸಿಮೆಂಟ ಉತ್ಪಾದನೆಗೂ ಹೆಸರುವಾಸಿಯಾಗಿದೆ.

ಹನ್ನೆರಡನೆಯ ಶತಮಾನದ ಬಸವಣ್ಣನವರ ನಾಡು ಹಾಗೂ ವಚನಕಾಲ ಜೇಡರ ದಾಸಿಮಯ್ಯ ಮತ್ತು ಮತ್ತಿತರರು ಜಾಗತಿಕ ಮನ್ನಣೆಗೆ ಪಾತ್ರವಾದ ಗಣಿತ ಗ್ರಂಥ, 'ಮಿತಾಕ್ಷರ'ದ ಕೃರ್ತ ವಿಜ್ಞಾನೇಶ್ವರ, ಶ್ರೇಷ್ಠ ಸುಫಿ ಸಂತ ಬಂದೇನವಾಜ ಮತ್ತು ಶರಣಬಸವೇಶ್ವರರು ಹಾಗೂ ಭಗವಾನ ಬುದ್ಧರ ಬುದ್ಧವಿಹಾರ ಈ ನಾಡಿನ ಪ್ರಸಿದ್ಧ ಆಕರ್ಷಣೀಯ ಪ್ರವಾಸಿ ತಾಣಗಳಾಗಿವೆ.

ಪ್ರಪಂಚದಲ್ಲಿ ನಾವು ಕಂಡು ಕೇಳರಿಯದಂಥ ಮಾಹಿತಿ ಕ್ರಾಂತಿ ಇಂಟರ್‌ನೆಟ್ ಜಾಲದೊಂದಿಗೆ ಪ್ರಾರಂಭವಾಗಿದೆ. ಸಂಪರ್ಕ ಸಾಧನಗಳಲ್ಲಿ ಮಹಾ ಕ್ರಾಂತಿಯೇ ಆಗಿದ್ದರೂ ಅನುಭವ, ಆಲೋಚನೆ, ವಿಚಾರ, ವಿಷಯಗಳ ಸಂವನ ಮತ್ತು ಹಸ್ತಾಂತರಗಳ ಅತ್ಯಂತ ಅಗ್ಗದ ಮತ್ತು ಕ್ಷಿಪ್ರವಾಹಕಗಳೆಂದರೆ ಇಂದಿಗೂ ಪುಸ್ತಕಗಳೇ, ಕಾಲದ ಅಗ್ನಿ ಪರೀಕ್ಷೆಯನ್ನು ನಿರಾಯಾಸವಾಗಿ ಗೆದ್ದಿರುವ ಪುಸ್ತಕಗಳು ಜ್ಞಾನದ ನೀರನ್ನು ದಶದಿಕ್ಕಿಗೂ ಹರಿಸುವ ಗಂಗೋತ್ರಿಗಳಾಗಿವೆ.

ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಡಾ. ಪಾಟೀಲ ಪುಟ್ಟಪ್ಪರವರು ಪುಸ್ತಕ ಸಂಸ್ಕೃತಿ ಬಗ್ಗೆ ಈ ಕೆಳಗಿನಂತೆ ಉಲ್ಲೇಖಿಸಿದ್ದಾರೆ. ಮನುಷ್ಯನಿಗೆ ಭಾಷೆ ಬಂದು, ಅಕ್ಷರ ಜ್ಞಾನ ಆದಮೇಲೆ, ತನ್ನ ವಿಚಾರ ಹಾಗೂ ಅನಿಸಿಕೆಗಳನ್ನು ಬರಹದಲ್ಲಿ ಮೂಡಿಸುವ ಹವ್ಯಾಸ ಹತ್ತಿಕೊಂಡಿರುತ್ತದೆ. ಬರೆದುದನ್ನು ಓದುವ, ತಿಳಿದುಕೊಳ್ಳುವ, ಗೀಳನ್ನು ಅವನು ಶತಮಾನಗಳಿಂದಲೂ ತನಗೆ ಅಂಟಿಸಿಕೊಂಡಿದ್ದಾನೆ. ಪುಸ್ತಕಗಳು ಬಂದ ಮೇಲೆ ಅದರಲ್ಲಿ ಅವನು ಅನಿರ್ವಚನೀಯ ಆನಂದವನ್ನು ಕಂಡಿದ್ದಾನೆ.

ಅವನಿಗೆ ನಳಂದಾ, ತಕ್ಷಶಿಲೆ, ಕಾಶಿ, ಅಥೆನ್ಸ್, ಗಂಗಾ, ಥೇಮ್ಸ್, ಸಾಕ್ರೆಟಿಸ್, ಕನ್‌ಫ್ಯೂಶಿಯಸ್, ವರ್ಜಿಲ್, ವಾಲ್ಮೀಕಿ ಎಲ್ಲವೂ ಎಲ್ಲರೂ ಪುಸ್ತಕಗಳಲ್ಲಿಯೇ, ಅವರನ್ನು ಹುಡುಕಲು ಅವನು ಬೇರೆ ಇನ್ನೆಲ್ಲಿಯೂ ಹೋಗಬೇಕಾದುದೇ ಇಲ್ಲ. ಅವನ ಪುಸ್ತಕಗಳು ಅವನಿಗೆ ಪ್ರಾಚೀನದ ನಾಶವನ್ನು ತೋರಿಸಿಕೊಡುತ್ತದೆ. ಅರ್ವಾಚೀನದ ವೈಭವದ ಕಥೆಯನ್ನು ಹೇಳಿಕೊಡುತ್ತವೆ.

ಸಾಕ್ರೆಟಿಸ್‌ಗೆ ಪುಸ್ತಕಗಳೆಂದರೆ ಪಂಚಪ್ರಾಣ, ತನ್ನ ಎಲ್ಲ ಸಂಪತ್ತೂ ಅವುಗಳಲ್ಲಿಯೇ ಇದೆಯೆಂದು ಅವನು ಹೇಳುತ್ತಿದ್ದನು. ತನ್ನ ಗ್ರಂಥಾಲಯವು ತನ್ನ ವಿಚಾರಗಳ ಹೆರಿಗೆಯ ಸ್ಥಳವೆಂದು ಅವನು ತಿಳಿದಿದ್ದನು.

ಡಾ. ಬಿ.ಆರ್. ಅಂಬೇಡ್ಕರ್ ರವರು ಒಂದು ಕಡೆ ಹೇಳುತ್ತಾರೆ. ಶಿಕ್ಷಣ ಸಮಾಜದ ಬದಲಾವಣೆಗೆ ದಾರಿ. ಅತೀ ಹೆಚ್ಚಿನ ಪುಸ್ತಕಗಳನ್ನು ಓದಿ, ಸಂವಿಧಾನ ರಚಿಸಿದ್ದು ನಮ್ಮೆಲ್ಲರಿಗೆ ದಾರಿದೀಪವಾಗಿದ್ದಾರೆ. ಹಡಗಿನಲ್ಲಿ ಪುಸ್ತಕಗಳನ್ನು ತಂದಿರುವುದು.

ಸಾವಿರಾರು ವರ್ಷಗಳ ಜ್ಞಾನ ಒಂದು ಪುಟ್ಟ ಗ್ರಂಥಾಲಯದಲ್ಲಿ ಸಂಗ್ರಹವಾಗಿರುತ್ತದೆ. ಅಲ್ಲಿ ಮನುಷ್ಯನ ಮನಸ್ಸನ್ನು ಪ್ರಸನ್ನಗೊಳಿಸುವ ಜ್ಞಾನಿಗಳ ಸಹವಾಸ ಅವನಿಗೆ ಲಭಿಸುತ್ತದೆ. ನಾಗರಿಕ ಜಗತ್ತಿನ ವಿವೇಕ ವಿನೋದ ಎಲ್ಲವೂ ಅವನಿಗೆ ಅಲ್ಲಿ ಸಿಕ್ಕುತ್ತವೆ. ಗ್ರಂಥಗಳ ಸಹಾಯದಿಂದ ಮನುಷ್ಯನು ತನ್ನ ವಿವೇಕಕ್ಕೆ ಸಾಣಿ ಹಿಡಿದುಕೊಳ್ಳುತ್ತಾನೆ.

ಹಿಂದೆ ರೋಮ್‌ನಲ್ಲಿ ಒಬ್ಬ ಮನುಷ್ಯ ಸುಸಂಸ್ಕೃತವೆನಿಸಬೇಕಾದರೆ ತಾನು ಪುಸ್ತಕಗಳಿಂದ ಪ್ರಭಾವಿತನಾಗಿರುವುದನ್ನು ತೋರಿಸಿಕೊಡಬೇಕಾಗಿದ್ದಿತು. ತಾನು ಓದಿದ ಪುಸ್ತಕದಿಂದ ತನಗೆ ಹಿಡಿಸಿದ ಒಂದು ಮಾತನ್ನು ಹೇಳಬೇಕೆನ್ನುವ ಒಂದು ಪರಿಪಾಠ ಬೆಳೆದುಕೊಂಡಿತು. ಪ್ರತಿಯೊಬ್ಬನಿಗೂ ತನ್ನ ಪಾಂಡಿತ್ಯ ಪ್ರದರ್ಶನ ಮಾಡುವ ಒಂದು ಅವಕಾಶವನ್ನು ಅದು ಒದಗಿಸಿಕೊಟ್ಟಿದ್ದಿತು.

ಓದುವ ಚಟ ಹಾಗೂ ಪುಸ್ತಕದ ಇತಿಹಾಸ ಕುರಿತು ಶಿವರಾಮ ಕಾರಂತರು ಈ ಕೆಳಕಂಡಂತೆ ಉಲ್ಲೇಖಿಸಿದ್ದಾರೆ.

ಮನುಷ್ಯ ಸಮಾಜದ ಬುದ್ಧಿವಂತ ವ್ಯಕ್ತಿಗಳೆಲ್ಲರೂ ಮಾತುಗಾರರಾಗಿ ತಂತಮ್ಮ ಭಾವನೆಗಳನ್ನು, ಯೋಚನೆಗಳನ್ನು ಮತ್ತು ತಿಳಿಯನ್ನು ಆಚೀಚಿನ ಜನರಿಗೆ ಹಂಚುವ ಆಸಕ್ತಿ ವಹಿಸುತ್ತ ಬಂದ ಕಾಲದ ಬಳಿಕ, ನಾಳಿನವರ ಬಗ್ಗೆ, ದೂರದವರ ಬಗ್ಗೆ ಆ ಕೆಲಸ ಮಾಡಲು ಸಾಧ್ಯವಾದದ್ದು ಮಾತ್ರ ಮಾತು ಕಲಿತ ಎಷ್ಟೆಷ್ಟೋ ಕಾಲದ ಬಳಿಕ. ಮುಂದೆ,



ನಾನಾ ದೇಶಗಲ ಜನರು ತಂತಮ್ಮ ಭಾಷೆಗಳಿಗೆ ಲಿಪಿಯನ್ನು ಸೃಷ್ಟಿಸಿಕೊಂಡರು. ಈಜಿಪ್ಪಿನ ಜನರು ಜೊಂಡು ಹುಲ್ಲಿನಿಂದ ಕಾಗದ ತಯಾರಿಸಿ, ಅದರ ಮೇಲೆ ಬರೆದರು. ಅವರೇ ಕೆಲವು ವರ್ಷ ಉಳಿಯಬಲ್ಲ ಫಲಕಗಳ ಮೇಲೆಯೂ ಬರೆದರು. ಸುಮೇರಿಯನರು ತಮ್ಮ ಅನಿಸಿಕೆಗಳನ್ನು ಹಸಿ ಅವೆಮಣ್ಣಿನ ಇಟ್ಟಿಗೆಗಲ ಮೇಲೆ ಅಂಟಿಸಿ, ಅ ಇಟ್ಟಿಗೆಗಳನ್ನು ಬೇಯಿಸಿ, ಅವು ದೀರ್ಘಕಾಲ ಉಳಿಯುವಂತೆ ಮಾಡಿದರು. ಹಲವರು ಮುಂದಿನವರಿಗಾಗಿ ತಮ್ಮ ಬರಹಗಳನ್ನು ಕಾದಿಟ್ಟುದೂ ಉಂಟು.

ನಮ್ಮ ದೇಶದಲ್ಲಿ ಶಿಲಾ ಶಾಸನಗಳೂ, ತಾಮ್ರ ಶಾಸನಗಳೂ ನಮ್ಮ ಪುರಾತನರ ಆದೇಶಗಳನ್ನು ವರ್ತಮಾನ ಕಾಲದವರಿಗೂ, ಭವಿಷ್ಯತ್ತಿನವರಿಗೂ ಕಾದಿಟ್ಟಂತೆ, ತಾಡವಾಲೆಗಳಲ್ಲಿ ಕಂಠಗಳಿಂದ ಬರಹವನ್ನು ಕೊರೆದು, ತಂತಮ್ಮ ಕಾಲದ ಅಮೂಲ್ಯ ಜ್ಞಾನ ಸಂಪತ್ತನ್ನು ಮುಂದಿನವರಿಗೆ ಒದಗಿಸಿದ್ದಾರೆ.

ಕರ್ನಾಟಕ ದೇಶವನ್ನು ನೆನೆಯುವಾಗ - ಗೆರಸೊಪ್ಪೆಯಲ್ಲಿ ರಾಣಿಯೊಬ್ಬಳು ಜೈನ ಧರ್ಮಿಯರ ಧವಳ ತ್ರಯಗಳನ್ನು ತಾಡವಾಲೆಗಳ ಮೇಲೆ ಅರಗಿನ ಶಾಯಿಯಿಂದ ಬರೆಯಿಸಿ, ಶಾಸ್ತ್ರದಾನ ಮಾಡಿದ್ದಳು. ಇವುಗಳ ಕಾಲ ಕ್ರಿ.ಶ. ೧೧೧೩- ೧೧೨೦. ಈ ಶತಮಾನದ ಆರಂಭದಲ್ಲಿ ಉತ್ತರ ಹಿಂದುಸ್ಥಾನದ ಜೈನರಿಗೆ ಮೂಡಬಿದಿರೆಯಲ್ಲಿ ಈ ಧವಳ ತ್ರಯಗಳ ತಾಡವಾಲೆ ಸಂಪುಟಗಳು . ಬಹುಕಾಲದ ತರುವಾಯ ದೊರೆತವು.

ನಮ್ಮವರು ಓದುವುದಿಲ್ಲವೇ? ನಮ್ಮ ದಿನಪತ್ರಿಕೆಗಳು ಮುದ್ರಿಸುವ ವಾರ್ತಾವಿಹಾರಗಳು ಏನೇನನ್ನೆಲ್ಲ ಅಚ್ಚುಮಾಡಿ ಹಬ್ಬಿಸುತ್ತಿವೆ! ಅವು ನಮಗೆ ಬೇಡವಾದರೆ, ರೇಡಿಯೋ ಪ್ರಸಾರದಲ್ಲಿ ನಿತ್ಯನಿತ್ಯವೂ ಜ್ಞಾನ ಪ್ರಸಾರವಾಗುತ್ತಿದೆ. ಅದನ್ನು ಕೇಳದೆ ಹೋದರೂ ಸುದ್ದಿಗಳಿಗೆ, ಕ್ರೀಡಾ ವಿಹಾರಗಳಿಗೆ, ತಾಸು ತಾಸುಗಳ ಕಾಲ ಕಿವಿಗೊಡುವ ಅಸಂಖ್ಯ ಜನರಿದ್ದಾರೆ.

ಕಾಲೇಜು ಬಿಟ್ಟು - ಹತ್ತು ಹದಿನೆರಡು ವರ್ಷಗಳ ಕಾಲ ಕಳೆದ ಬಳಿಕ, ಶ್ರವಣದ ಚಾಳಿಯೊಂದನ್ನು ಬಿಟ್ಟರೆ, ಯಾವುದೇ ಒಳ್ಳೆಯ ಸಾಹಿತ್ಯವನ್ನು, ಉದ್ದಂಥವನ್ನು, ಹೊಸ ವಿಷಯವನ್ನು ಓದುವ ಚಟ ಇರಿಸಿಕೊಂಡವರು ಎಷ್ಟು ಮಂದಿ ನಮ್ಮಲ್ಲಿ ಸಿಗಬಹುದು?

ಅಂಥವರ ಸಂಖ್ಯೆ ಆಯಾಯ ವಿಷಯದ ಪ್ರಾಧ್ಯಾಪಕರಿಗೆ ಸೀಮಿತ, ಅದೂ, ನಾಲ್ಕು ವರ್ಷ ಕಳೆದ ಬಳಿಕೆ, ತಮ್ಮ ಹಳೆಯ ಓದಿನಿಂದ ತಮ್ಮ ಶಿಷ್ಯರನ್ನು ಬೆದರಿಸಲು ಬಂದೀತು. ಮುಂದೆಯೂ ಆಗಾಗ ಓದಿಕೊಂಡು ಪ್ರವಚನ ನಡೆಯಿಸಬೇಕಾಗಿಲ್ಲ.

ಇಂದಿನ ಜಗತ್ತಿನ ಪ್ರತಿಯೊಂದು ಕ್ಷೇತ್ರದಲ್ಲೂ ಸಂಶೋಧನೆ ನಡೆಯುತ್ತಿದೆ. ಜಗತ್ತಿನ ಕುತೂಹಲಿಗಳು ಸಂಪಾದಿಸುತ್ತಿರುವ ಜ್ಞಾನದ ಮೊತ್ತ ಮೊದಲಿಗಿಂತ ಸಾವಿರಾರು ಪಾಲು ವರ್ಧಿಸುತ್ತಿದೆ.

ಆ ಬಗೆಯ ಜ್ಞಾನಸಂಗ್ರಹದ ಸಲುವಾಗಿ ನಮ್ಮ ಸಮಾಜದ ಹಿರಿಯರೆಂಬವರು ದಿನನಿತ್ಯ ಎಷ್ಟು ಸಮಯ ಕಳೆಯುತ್ತಿದ್ದಾರೆ ಎಂದು ಹುಡುಕಿದರೆ, ಬೆರಳಣಿಕೆಯ ಬುದ್ಧಿಜೀವಿಗಳು ಸಿಗಬಹುದು!



ಹೊಟ್ಟೆಯ ಹಸಿವಿಗೂ, ಬುದ್ಧಿಯ ಹಸಿವಿಗೂ ಇರುವ ಅಂತರ ಬಹಳ.

ಓದದೇ ಇದ್ದ ಶ್ರೀಮಂತರಿಗೆ ತಾವು ಓದಿದವರೆನ್ನುವುದನ್ನು ತೋರಿಸಿಕೊಳ್ಳುವ ಚಪಲ ಇದ್ದಿತು. ಓದದೇ ಇದ್ದವನು ಸುಸಂಸ್ಕೃತನೇ ಅಲ್ಲವೆಂದು ಜನ ಆಗ ತಿಳಿದಿದ್ದರು. ಭೋಜನಕ್ಕೆ ಬಂದ ಅತಿಥಿ ಅಭ್ಯಾಗತರಲ್ಲೂ ಒಬ್ಬರಾದ ಮೇಲೆ ಒಬ್ಬರಂತೆ ತಾವು ಓದಿದ ಕವಿ ಕೃತಿಯಿಂದ, ತಮಗೆ ಆಕರ್ಷಕವೆನಿಸಿದ ಕೆಲಸಾಲುಗಳನ್ನು ಹೇಳಲೇಬೇಕು.

ಔತಣ ಹೇಳಿದ ಶ್ರೀಮಂತರು ಆಗ ಒಂದು ಉಪಾಯಗಾರಿಕೆ ಮಾಡಿ ಕೊಂಡಿದ್ದರು. ತಾವು ಓದಿದವರೆನ್ನುವುದಕ್ಕೆ ತೋರಿಸಿಕೊಳ್ಳಲು ಅವರು ಓದಿದ ಸೇವಕರನ್ನು ತಮ್ಮ ಮನೆಯಲ್ಲಿ ಕೆಲಸಕ್ಕೆ ಇರಿಸಿಕೊಂಡಿರುತ್ತೀದ್ದರು. ಸೀಝರನ ಕಾಲದಲ್ಲಿದ್ದ ರೋಮುಲಸ್ ಎಂಬ ಒಬ್ಬ ಶ್ರೀಮಂತನ ನಿದರ್ಶನ ಇಲ್ಲಿ ಇದೆ. ಈ ರೋಮುಲಸ್‌ಗೆ ಶ್ರೀಮಂತಿಕೆ ಬಂದಿದ್ದಿತು. ಆದರೆ ಅವನಿಗೆ ಓದು ಬರಹದ ದರ್ಶನ ಆಗಿರಲಿಲ್ಲ. ತಾನು ಹೇಳಬೇಕಾದ ಸರದಿ ಬಂದಾಗ ಅವನು ಹಿಂದಿನ ಕವಿಗಳ ಹೆಸರನ್ನು ಕೊಟ್ಟ ತನ್ನ ಸೇವಕರನ್ನು ಆ ಕವಿ ಹೆಸರಿನಿಂದ ಕೂಗಿ ಕರೆಯುತ್ತಿದ್ದ.

ಒಂದು ಸಲ ನಡೆದ ಪ್ರಸಂಗವು ಬಹಳಷ್ಟು ವಿನೋದಕ್ಕೆ, ಅಪಹಾಸ್ಯಕ್ಕೆ ಕಾರಣವೆನಿಸಿತು. ಭೋಜನ ಬಹು ಭರಭರಾಟೆಯಿಂದ ನಡೆದಾಗ, ತಾನು ಓದಿದ ಒಂದು ರಸವತ್ತಾದ ಮಾತನ್ನು ಹೇಳುವುದು ಮನೆಯ ಯಜಮಾನನಿಗೆ ಬಂದಿತು. ಆಗ ಅವನು ತನ್ನ ಅತಿಥಿಗಳನ್ನು ಚಕಿತಗೊಳಿಸಬೇಕೆಂದು, ಚಪ್ಪಾಳೆ ತಟ್ಟಿ, 'ವರ್ಜಿಲ್' ಎಂದು ಕೂಗಿದ ತತ್‌ಕ್ಷಣವೇ ಇನ್ನೊಬ್ಬ ಸೇವಕ "ಯಜಮಾನರೇ ಅವನಿಗೆ ಈ ದಿನ ರಜೆ" ಎಂದು ಹೇಳಿದ. ಅವನು ಹೇಳಿದ ಮಾತನ್ನು ಕೇಳಿ ಅಲ್ಲಿ ಸೇರಿದ್ದವರೆಲ್ಲರೂ ಗೊಳ್ಳನೆ ನಕ್ಕರು. ಅದು ಅವರಿಗೆ ವಿನೋದ ಒದಗಿಸಿದ್ದರೆ, ಮನೆಯ ಯಜಮಾನನನ್ನು ಅಪಹಾಸ್ಯಕ್ಕೆ ಗುರಿಪಡಿಸಿದ್ದಿತು.

ತಾನು ಓದಿದವನೆನ್ನುವುದನ್ನು ತೋರಿಸಿಕೊಳ್ಳಬೇಕೆನ್ನುವ ಅವ್ಯಕ್ತ ಆಶೆ ಪ್ರತಿಯೊಬ್ಬನಲ್ಲಿಯೂ ಇದ್ದೇ ಇರುತ್ತದೆ. ಫೋಟೋ ತೆಗೆಸಿಕೊಳ್ಳುವುದು ಇದ್ದಾಗ, ಸ್ಟುಡಿಯೋಕ್ಕೆ ಹೋದವನಾಗಲಿ, ಛಾಯಾ ಚಿತ್ರಗ್ರಾಹಕನ ಎದುರಿಗೆ ನಿಂತವನಾಗಲಿ ತಾನು ಇರುವುದಕ್ಕಿಂತಲೂ ಬೇರೆಯಾಗಿ ಕಾಣಿಸಿಕೊಳ್ಳಬೇಕೆನ್ನುತ್ತಾನೆ. ಓದದೇ ಇದ್ದವನು ಪುಸ್ತಕಗಳ ಮೇಲೆ ಕೈ ಇರಿಸಿ ತನ್ನ ಫೋಟೋ ತೆಗೆಸಿಕೊಳ್ಳಬೇಕೆನ್ನುತ್ತಾನೆ. ಯಾರಿಗೂ ತೋರಿಸದೇ ಇರುವ ತನ್ನ ಒಳ್ಳೆಯ ಮುಖವನ್ನು ಪ್ರತಿಯೊಬ್ಬನೂ ತನ್ನ ಫೋಟೋಗ್ರಾಫರ್ ಒಬ್ಬನಿಗೇ ತೋರಿಸುತ್ತಾನೆ.

ಓದಿದ ಮನುಷ್ಯನೆನ್ನುವುದನ್ನು ತೋರಿಸಿಕೊಳ್ಳುವುದು ವ್ಯಕ್ತಿಗೆ ಬೇಕಾಗಿರುವಂತೆ ಒಂದು ದೇಶಕ್ಕೆ ಕೂಡ ಬೇಕಾಗಿರುತ್ತದೆ. ತಮ್ಮ ಸಂಪೂರ್ಣ ಸಾಕ್ಷರತೆ ಬಂದಿದೆ ಎನ್ನುವುದನ್ನು ಜಿಲ್ಲೆಗಳೂ, ರಾಜ್ಯಗಳೂ ಸ್ಪರ್ಧೆಗೆ ನಿಂತವರಂತೆ ಹೇಳಿಕೊಳ್ಳುತ್ತವೆ.

ಸಾಕ್ಷರತೆ ಬಂದಿಲ್ಲ, ಬಂದಿದೆ ಎನ್ನುವುದನ್ನು ತೋರಿಸಿಕೊಳ್ಳಬೇಕೆನ್ನುತ್ತೇವೆ. ತೋರಿಸಿಕೊಳ್ಳಬೇಕೆನ್ನುವ ಈ ಗುಣಧರ್ಮ ಎಲ್ಲ ಆಕಾಶಗಳ ಅಡಿಯಲ್ಲಿ, ಎಲ್ಲ ಭೂಮಿಯ ಮೇಲೂ ಇದೆ. ಅದು ಸಾರ್ವತ್ರಿಕವಾಗಿರುವಂತೆ ಬೇರೆ ಯಾವುದೂ ಸಾರ್ವತ್ರಿಕವಾಗಿಲ್ಲ. ಎಲ್ಲ ದೇಶಗಳಲ್ಲಿದ್ದರೂ ಕೆಲದೇಶಗಳಲ್ಲಿ ಮಾತ್ರ ಅದು ಸೋಂಕು ರೋಗದ ಸಾರ್ವತ್ರಿಕೆಯನ್ನು ಪಡೆದುಕೊಂಡಿದೆ.

ಅಂಥ ಒಂದು ನಿದರ್ಶನವನ್ನು ಯುನೆಸ್ಕೋಕರಿಯರ್ ನಮಗೆ ಒದಗಿಸಿದೆ. ಆಫ್ರಿಕೆಯ ಒಂದು ದೇಶ ಅಮೇರಿಕೆಯ ಒಂದು ಕಂಪನಿಗೆ ಕಾಗದ ಬರೆದು ತನಗೆ ಪೆನ್ನಿನ ಲೆಕ್ಕಣಿಕೆಯ, ಐದು ಮಿಲಿಯ ಮುಚ್ಚಳಿಕೆ-ಕ್ಯಾಪ್ ಬೇಕೆಂದು ಕೇಳಿತು. ಆ ಕಂಪನಿಯವರಿಗೆ ಆ ಕಾಗದ ಓದಿ ಕೌತುಕವೆನಿಸಿತು. ಕಾಗದದಲ್ಲಿ ಏನೋ ತಪ್ಪಾಗಿದೆ ಪೆನ್ನಿನ ಬರೀ ಕ್ಯಾಪ್‌ನಿಂದ ಯಾರು ಬರೆಯುತ್ತಾರೆ? ಪೆನ್ ಎಂದು ಬರೆಯುವುದಕ್ಕೆ ಬದಲಾಗಿ ಪೆನ್‌ಕ್ಯಾಪ್ ಎಂದು ತಪ್ಪಾಗಿ ಬರೆದಿರುವರೆಂದು ಆ ಕಂಪನಿಯವರು ತಿಳಿದುಕೊಂಡರು.

ಆ ಕಂಪನಿಯವರು ಪೆನ್‌ಕ್ಯಾಪ್ ಪೂರೈಸಲು ಕೇಳಿದ್ದ ಆ ದೇಶಕ್ಕೆ ಕಾಗದ ಬರೆದು "ನಿಮ್ಮ ಕಾಗದದಲ್ಲಿ ಏನೋ ಆಚಾತುರ್ಯವಾಗಿ ನೀವು ಪೆನ್ ಕ್ಯಾಪ್ ಎಂದು ಬರೆದಿದ್ದೀರಿ. ನಿಮ್ಮ ಉದ್ದೇಶ ಪೆನ್ ಎಂದು ಬರೆಯುವದೇ ಇದ್ದಿರಬೇಕು. ನಿಮ್ಮ ಅಪೇಕ್ಷೆಯಂತೆ ನಾವು ಐದು ಮಿಲಿಯ ಪೆನ್ ಸಿದ್ಧಪಡಿಸಿ ಕಳಿಸುತ್ತೇವೆ" ಎಂದು ತಿಳಿಸಿದರು.

ಆ ಕಾಗದ ಬಂದೊಡನೆಯೇ ತಮಗೆ ಪೆನ್ನನ್ನು ಎಲ್ಲಿ ಕಳಿಸಿಬಿಡುವರೋ ಎಂದು ಗಾಬರಿಗೊಂಡು ಆ ದೇಶದವರು ಅಮೇರಿಕೆಯ ಕಂಪನಿಯವರಿಗೆ ಬರೆದರು "ನಮಗೆ ಬೇಕಾಗಿರುವುದು ಪೆನ್ ಅಲ್ಲ. ಪೆನ್‌ಕ್ಯಾಪ್ ಮಾತ್ರ ನಾವು ನಿಮಗೆ ನಮಗೇನು ಬೇಕೋ ಅದನ್ನು ಬರೆದಿದ್ದೇವೆ. ನಮ್ಮ ದೇಶದಲ್ಲಿ ಓದಿದವರು ಕಡಿಮೆ. ಇಲ್ಲಿ ನಿರಕ್ಷರತೆ ತುಂಬಿಕೊಂಡಿದೆ. ಓದದೇ ಇದ್ದವರೆಲ್ಲರೂ ಓದಿದವರಂತೆ ತೋರಿಸಿಕೊಳ್ಳಬೇಕೆನ್ನುತ್ತಾರೆ. ಅವರಿಗೆಲ್ಲ ಜನರಿಗೆ ಕಾಣುವಂತೆ ತಮ್ಮ ಎದೆಯ ಮೇಲಿನ ಜೇಬುಗಳಲ್ಲಿ ಈ ಪೆನ್ ಕ್ಯಾಪ್ ಇರಿಸಿಕೊಳ್ಳುವುದು ಬೇಕಾಗಿದೆ. ಪೆನ್ ಕ್ಯಾಪ್ ನೋಡಿದವರು ಪೆನ್ನೇ ಇರಬೇಕೆಂದು ಭಾವನೆ ಮಾಡಿಕೊಳ್ಳುತ್ತಾರೆ. ಪೆನ್ ಇರಬೇಕಾದರೆ ಅವರು ಓದಿದವರೇ ಇರಬೇಕೆನ್ನುವ ಭ್ರಮೆಯನ್ನು ಅದು ನಿರ್ಮಿಸುತ್ತದೆ ಜನರಿಗೆ ಅಷ್ಟಾದರೆ ಸಾಕು" .

ಓದುವದಕ್ಕೆ ಬರುತ್ತದೆ ಆದರೆ ಅನೇಕರು ಓದುವದಿಲ್ಲ ಓದುವದೆಂದರೆ ಅವರಿಗೆ ಮೈಗೆ ಮುಳ್ಳು ಹಚ್ಚಿದಂತಾಗುತ್ತದೆ. ಇನ್ನು ಕೆಲವರಿದ್ದಾರೆ ಅವರು ಓದುತ್ತಾರೆ ಆದರೆ ತಾವು ಓದಿದುದಕ್ಕಿಂತಲೂ ಹೆಚ್ಚು ತೋರಿಸಿಕೊಳ್ಳಬೇಕೆನ್ನುತ್ತಾರೆ. ತಾವು ಇಂಗ್ಲೀಷು ಓದಿದವರೆನ್ನುವುದನ್ನು ಕೆಲ ಸ್ವಾಮಿಗಳಿಗೆ ತೋರಿಸಿಕೊಳ್ಳುವುದು ಬೇಕಾಗಿರುತ್ತದೆ. ತಮಗೆ ಇಂಗ್ಲೀಷು ಬರುತ್ತಿದ್ದರೆ ತಮ್ಮ ಪ್ರತಿಷ್ಠೆ ಹೆಚ್ಚುವದೆಂದು ಅವರು ಭಾವನೆ ಮಾಡಿಕೊಂಡಿರುತ್ತಾರೆ. ತಾವು ಯಾರ ಬಾಯಿಂದಲೋ ಕೇಳಿದ ಒಂದು ಇಂಗ್ಲೀಷ್ ಅವತರಣಿಕೆಯನ್ನು ತಪ್ಪು ತಪ್ಪಾಗಿ ಹೇಳಿ ಅವರು ಇಂಗ್ಲೀಷನ್ನೂ ಬರೆದವನನ್ನೂ ಏಕಕಾಲಕ್ಕೆ ಕೊಲ್ಲುತ್ತಾರೆ.

ಪುಸ್ತಕಗಳ ಬಗೆಗೆ ಅನೇಕರಿಗೆ ಹುಚ್ಚು ಎನ್ನುವಷ್ಟು ಪ್ರೀತಿ. ಅವರು ಹೇಗಾದರೂ ಮಾಡಿ ತಮಗೆ ಬೇಕಾದ ಪುಸ್ತಕವನ್ನು ಸಂಪಾದಿಸಲೇಬೇಕೆನ್ನುತ್ತಾರೆ. ಅಂಥ ಆಸಕ್ತರು ಇರುವರೆನ್ನುವ ಕಾರಣದಿಂದಲೇ ಆಹಾರಧಾನ್ಯಗಳಲ್ಲಿ ಆರಿಕೆ ಕಂಡು ಬರುವಂತೆ ಎಷ್ಟೋ ಗ್ರಂಥಾಲಯಗಳಲ್ಲಿ ಪುಸ್ತಕಗಳ ಅರಿಕೆಯೂ ಆಗತೊಡಗಿದೆ.

ಹಿಂದೆ, ಸೈಯದ್ ಸಪ್ಪರ್ ಅಲೀ ಬಕ್ರೀ ಎಂಬ ಇಸ್ಲಾಮಿಕ್ ಸ್ನಾತಕನಿದ್ದ, ಪುಸ್ತಕದ ಹುಚ್ಚು ಹಚ್ಚಿಕೊಂಡವರಲ್ಲಿ ಅವನನ್ನು ಮೀರಿಸುವವರೇ ಇರಲಿಲ್ಲ. ತನಗೆ ಬೇಕಾದ ಪುಸ್ತಕವನ್ನು ದೊರಕಿಸಿಕೊಳ್ಳಲು ಅವರು ಏನು ಬೇಕಾದರೂ ಮಾಡಲು ಸಿದ್ಧನಾಗಿದ್ದನು. ಅವನು ಹಗಲು ಹೊತ್ತಿನಲ್ಲಿ ಸಾರ್ವಜನಿಕ ಗ್ರಂಥಾಲಯಗಳನ್ನೂ, ಖಾಸಗಿ ಸಂಗ್ರಹಾಲಯಗಳನ್ನೂ ಸುತ್ತಾಡಿಕೊಂಡು ಬರುತ್ತಿದ್ದ. ತನ್ನ ಗಮನ ಸೆಳೆದ ಪುಸ್ತಕವನ್ನು ಪಡೆದುಕೊಳ್ಳಲು, ಕದಿಯುವ ಹಾದಿ ಹುಡುಕುತ್ತ ರಾತ್ರಿ ಅಲ್ಲಿಗೆ ಹೋಗುತ್ತಿದ್ದ ಕೊನೆಗೊಮ್ಮೆ ಅವನು ಹೈದರಾಬಾದದ ಕೇಂದ್ರ ಗ್ರಂಥಾಲಯದಲ್ಲಿ ಪುಸ್ತಕದ ಕಳುವಿನಲ್ಲಿ ತೊಡಗಿದಾಗ ಸಿಕ್ಕಿಬಿದ್ದ.

ಪುಸ್ತಕವನ್ನು ಓದಲೆಂದು ಯಾರಿಗಾದರೂ ಕೊಟ್ಟವರು ಸಾಮಾನ್ಯವಾಗಿ ಮರೆತುಬಿಟ್ಟಿರುತ್ತಾರೆ. ಆ ಪುಸ್ತಕ ತಮಗೆ ಬೇಕೆನಿಸಿದಾಗ "ಯಾರಿಗೋ ಕೊಟ್ಟೆ" ಎಂದು ಮಿಡುಕುತ್ತಾರೆ. ಪುಸ್ತಕ ಇಸಿದುಕೊಂಡು ಬಂದವರಂತೂ ಅದನ್ನು ತಮ್ಮ ನೆನಪಿನಲ್ಲಿ ಇರಿಸಿಕೊಂಡಿರುವುದಿಲ್ಲ. ಫ್ರೆಂಚಿನಲ್ಲಿ ಹೇಳುವ ಒಂದು ಮಾತಿನಲ್ಲಿ ಅವರು ತಮ್ಮ ರಕ್ಷಣೆ ಹುಡುಕಿಕೊಂಡಿದ್ದಾರೆ; "ಪುಸ್ತಕಗಳನ್ನು ಇನ್ನೊಬ್ಬರಿಗೆ ಕೊಡುವವನು ಮೂರ್ಖ. ಹಿಂದಿರುಗಿ ಕೊಡುವವನು ಹೆಚ್ಚಿನ ಮೂರ್ಖ" ಹೆಚ್ಚಿನ ಮೂರ್ಖನೆಂದು ಅದೇಕೆ ಅನ್ನಿಸಿಕೊಳ್ಳಬೇಕೆಂದು ಅವರು ತಾವು ಒಯ್ದ ಪುಸ್ತಕಗಳನ್ನು ಹಿಂತಿರುಗಿಸುವದೇ ಇಲ್ಲ.

ಪಾಟ್ನಾದಲ್ಲಿರುವ ಬಹು ಶ್ರೀಮಂತ ಖುದಾಭಕ್ಷ ಗ್ರಂಥಾಲಯದ ಸಂಸ್ಥಾಪಕನಾದ ಖುದಾಭಕ್ಷನು ಮೂರು ವಿಧದ ಮೂರ್ಖರಿದ್ದಾರೆಂದು ಹೇಳುತ್ತಿದ್ದ. ಒಂದು ಪುಸ್ತಕ ನೋಡಿದಾಗ ಅದು ಎಷ್ಟೊಂದು ಅಮೂಲ್ಯವಾದುದೆನ್ನುವುದನ್ನು ಗುರುತಿಸಲಾರದವನು ಒಬ್ಬ, ತನ್ನಲಿರುವ ಅಮೂಲ್ಯ ಪುಸ್ತಕಗಳನ್ನು ಕೈಗಡಕೊಡುವವನು ಇನ್ನೊಬ್ಬ ಒಂದು ಅಮೂಲ್ಯವಾದ ಪುಸ್ತಕವನ್ನು ಕೈಗಡ ಪಡೆದು ಅದನ್ನು ಹಿಂದಿರುಗಿಸುವವನು ಮತ್ತೊಬ್ಬ.

**ಮನುಷ್ಯ ಪುಸ್ತಕಗಳೊಂದಿಗೆ ಬೆಳೆಯಬೇಕು**

ಜಗತ್ತಿನಲ್ಲಿ ಇರಬೇಕೆನ್ನುವ ಮನುಷ್ಯನು ಜಗತ್ತನ್ನು ತಿಳಿದುಕೊಳ್ಳಬೇಕು. ಕಿವಿಯಿಂದ ಕೇಳಿ, ಕಣ್ಣಿನಿಂದ ನೋಡಿ ಜಗತ್ತನ್ನು ತಿಳಿದುಕೊಳ್ಳಬಹುದು. ಆದರೆ ನೋಡಿ, ಕೇಳಿ ತಿಳಿದುಕೊಳ್ಳುವ ಜ್ಞಾನ ಪರಿಮಿತವಾಗಿರುತ್ತದೆ.

ಅದು ಹೆಚ್ಚು ತಿಳಿಯಬೇಕಾದರೆ ನಮಗೆ ಓದಲು ಬರಬೇಕು. ಓದಬಲ್ಲವನು ಶತಮಾನಗಲ ಒಳಗೆ ಹೊಕ್ಕು ನೋಡಿ ಬರಬಹುದು. ಕತ್ತಲು ಕವಿದ ಗವಿಯಲ್ಲಿ ಬೆಳಕು ಹಿಡಿದು ಹೊರಟರೆ, ಅದು ನಮಗೆ ಎಲ್ಲವನ್ನೂ ತೋರಿಸಿ ಕೊಡಬಲ್ಲದು.

ಓದು ಬಲ್ಲವನೇ ಪರಿಪೂರ್ಣ ಮನುಷ್ಯನೆನಿಸುತ್ತಾನೆ. ಓದಿನಿಂದ ನಮಗೆ ಲಭಿಸುವ ಸಂತೋಷವು ಬೇರೆ ಯಾವುದರಿಂದಲೂ ಲಭಿಸಲಾರದು. ಈ ವಿಚಾರದಲ್ಲಿ ನಮಗೆ ಗ್ರೀಕ್ ತತ್ವಜ್ಞಾನಿ ಎರಾಸ್‌ಮಸ್‌ನೇ ಗುರುವೆನಿಸಬೇಕು. ಅವನು ಹೇಳುತ್ತಿದ್ದ: "ನನಗೆ ಸ್ವಲ್ಪ ಹಣ ಸಿಕ್ಕರೆ ನಾನು ಪುಸ್ತಕ ಕೊಳ್ಳುತ್ತೇನೆ. ಅದರಲ್ಲಿ ಸ್ವಲ್ಪ ಉಳಿದರೆ ನಾನು ಅನ್ನ ಬಟ್ಟೆ ಕೊಳ್ಳುತ್ತೇನೆ."



ಚೆನ್ನಾಗಿ ಬದುಕ ಬೇಕೆನ್ನುವವನು ಒಳ್ಳೆಯ ಪುಸ್ತಕ ಓದುವ ಅಭ್ಯಾಸವನ್ನು ಇರಿಸಿಕೊಂಡಿರಬೇಕು. ಮನುಷ್ಯನು ತಿಳಿದುಕೊಳ್ಳುವುದಕ್ಕೋಸುಗ ಬದುಕದೆ, ಬದುಕುವುದಕ್ಕೋಸುಗ ತಿಳಿದುಕೊಳ್ಳಬೇಕು.

ಜ್ಞಾನ ಪಡೆಯುವುದು ಪ್ರತಿಯೊಬ್ಬನ ಜನ್ಮ ಸಿದ್ಧ ಹಕ್ಕು ಗುರುವಿನ ಮೂಲಕ ಮನುಷ್ಯನು ಎಷ್ಟೇ ಕಲಿತರೂ, ನಿಜವಾದ ಜ್ಞಾನ ಪಡೆಯಲು ಅವನು ಪುಸ್ತಕಗಳಿಗೇ ಶರಣು ಹೋಗಬೇಕಾಗುತ್ತದೆ. 'ಸರ್ವ ಧರ್ಮಗಳನ್ನೂ ತ್ಯಾಜ್ಯ ಮಾಡಿ, ನೀನು ನನ್ನನ್ನೇ ಶರಣು ಹೋಗು' ಎಂದು ಶ್ರೀಕೃಷ್ಣ ಅರ್ಜುನನಿಗೆ ಹೇಳಿದಂತೆ, ಗ್ರಂಥಾಲಯ ನಮಗೆ ಹೇಳುತ್ತದೆ.

ಒಂದು ಒಳ್ಳೆಯ ಪುಸ್ತಕ ಒಬ್ಬ ಒಳ್ಳೆಯ ಮನುಷ್ಯನಿಗಿಂತಲೂ ಮಿಗಿಲಾದುದು. ಆ ಮನುಷ್ಯ ಸತ್ತು ಹೋಗುತ್ತಾನೆ. ಆದರೆ, ಒಂದು ಒಳ್ಳೆಯ ಪುಸ್ತಕ ಎಂದು ಸತ್ತು ಹೋಗುವುದಿಲ್ಲ. ಅದು, ಪೀಳಿಗೆಯಿಂದ ಪೀಳಿಗೆಗೆ ಬರುವ ಜನರೆಲ್ಲರನ್ನೂ ಪ್ರಭಾವಿಸುತ್ತದೆ. ಒಬ್ಬ ಮನುಷ್ಯ, ಎಷ್ಟೇ ದೊಡ್ಡವನಿದ್ದರೂ ಅವನು ನಮ್ಮೊಂದಿಗೆ ಜಗಳ ಮಾಡಬಹುದು; ಆದರೆ ಒಂದು ಪುಸ್ತಕ ಮಾತ್ರ ನಮ್ಮೊಂದಿಗೆ ಎಂದೂ ಜಗಳ ಮಾಡುವುದಿಲ್ಲ.

ಪುಸ್ತಕಗಳು ಓದುವುದಕ್ಕೋಸುಗ ಇವೆ, ಬೀರುಗಳಲ್ಲಿ ಪ್ರದರ್ಶಿಸುವುದ ಕ್ಕೋಸುಗ ಇಲ್ಲ. ಪುಸ್ತಕಗಳು ಜನರಿಗೆ ಸರಿ-ಸಮಾನತೆಯನ್ನು ತಂದುಕೊಡುತ್ತವೆ. ದೊಡ್ಡವರು ಯಾರೇ ಇದ್ದರೂ ಅವರೊಂದಿಗೆ ಜನಸಾಮಾನ್ಯರೂ ಕೂಡ ಬೆರೆತು ಕೊಳ್ಳಬಹುದು. ಈ ಕಾಲದ, ಹಿಂದಿನ ಕಾಲದ, ಎಲ್ಲ ಕಾಲಗಳ ಸರ್ವ ಶ್ರೇಷ್ಠರ ಸಹವಾಸವನ್ನು ಅವು ನಮಗೆ ಒದಗಿಸಿಕೊಡುತ್ತವೆ.

ಮನುಷ್ಯನಿಗೆ ಓದಲು ಬರುತ್ತದೆಯೆಂದರೆ ಸಾಲದು. ಅವರು ಒಳ್ಳೆಯ ಪುಸ್ತಕ ಓದಬೇಕು. ಓದಲು ಬಂದರೂ ಕೂಡ ಅವನು ಪುಸ್ತಕ ಓದದೇ ಹೋದರೆ, ಓದಲು ಬಾರದವನಿಗೂ ಅವನಿಗೂ ಯಾವ ವ್ಯತ್ಯಾಸವೂ ಇರಲಾರದು.

ಹೆಚ್ಚು ಓದಿ ಮನುಷ್ಯನು ಹೆಚ್ಚು ಲೋಕಜ್ಞಾನ ಸಂಪಾದಿಸಿಕೊಳ್ಳಬೇಕು. ಪುಸ್ತಕಗಳು ಅವನನ್ನು ವಿದ್ವಾನನ್ನಾಗಿ ಮಾಡಬಲ್ಲವು. ಪುಸ್ತಕಗಳನ್ನು ಹಿಡಿದು ಹೋಗದಿದ್ದರೆ ದೇವರು ಕೂಡ ಮೌನ ಧರಿಸುತ್ತಾನೆಂದು ಹೇಳುತ್ತಾರೆ. “ಪುಸ್ತಕಗಳಿಲ್ಲದಿದ್ದರೆ ನ್ಯಾಯವು ಸುಪ್ತವಾಗುತ್ತದೆ. ಪ್ರಾಕೃತಿಕ ವಿಜ್ಞಾನವು ತಡೆದು ನಿಲ್ಲುತ್ತದೆ. ತತ್ವಜ್ಞಾನವು ಕುಂಟತೊಡಗುತ್ತದೆ. ಅಕ್ಷರಗಳು ಮೂಕವಾಗುತ್ತವೆ. ಜಗತ್ತಿನಲ್ಲಿ ಇರುವುದೆಲ್ಲವೂ ಕತ್ತಲೆಯಲ್ಲಿ ಮುಳುಗುತ್ತದೆ.”

ಜಗತ್ತು ಬದಲಾಗಿದ್ದರೆ, ಅದು ಪುಸ್ತಕಗಳಿಂದ ಬದಲಾಗಿದೆ. ಪುಸ್ತಕಗಳಲ್ಲಿರುವ ವಿಚಾರಗಳು ಮಾನವ ಕುಲದ ಮೇಲೆ ಪರಿಣಾಮ ಬೀರಿದೆ. ಪುಸ್ತಕಗಳು ಜಗತ್ತಿನ ಮೇಲೆ ಬೀರಿದ ಪ್ರಭಾವವು ಅಪರಿಮಿತವಾಗಿದೆ. ಅವು ಬಹು ಬಲಶಾಲೀ ಶಕ್ತಿಯೆನಿಸಿವೆ. ಪುಸ್ತಕಗಳನ್ನು ಆಸಕ್ತಿಯಿಂದ ಉತ್ಸಾಹದಿಂದ ಓದಬೇಕು. ಅವು ಏನು ಆನಂದ ಕೊಡಬಲ್ಲವೆನ್ನುವುದು ಓದಬಲ್ಲವರಿಗೆ ಮಾತ್ರ ಗೊತ್ತಿದೆ. ಪುಸ್ತಕಗಳು ತಮ್ಮ ಕೆಲಸವನ್ನು



ಸದ್ದು ಗದ್ದಲವಿಲ್ಲದೆ ಮೌನವಾಗಿಯೇ ಮಾಡುತ್ತವೆ. ಅವು ಮನುಷ್ಯನನ್ನು ಜಗತ್ತನ್ನು ಬದಲಿಸುವ ಸಾಮರ್ಥ್ಯವನ್ನು ಒಳಗೊಂಡಿವೆ.

ಪುಸ್ತಕಗಳಿಂದ ಕ್ರಾಂತಿ ಆಗಿಲ್ಲವೆಂದು ಹೇಳುವವರು ಇದ್ದಾರೆ. ಆದರೆ, ಆ ಮಾತು ಸಂಪೂರ್ಣ ಸತ್ಯವಲ್ಲ. ಪುಸ್ತಕ ಓದಿದವರನ್ನು ಪುಸ್ತಕಗಳು ಕ್ರಾಂತಿಗೆ ಪ್ರಚೋದಿಸಿವೆ. ಒಂದು ಒಳ್ಳೆಯ ಪುಸ್ತಕದ ಬೋಧೆ ಎಂದೂ ವ್ಯರ್ಥವೆನಿಸುವುದಿಲ್ಲ. ಅದು ಎಲ್ಲಿಯಾದರೂ ಕೆಲವೊಂದು ಹೃದಯಗಳಲ್ಲಿ ಜಗತ್ತನ್ನು ಇದ್ದಂತೆಯೇ ಇರಗೊಡದೆ ಬದಲಿಸಬೇಕೆನ್ನುವ ಅಸಂತುಷ್ಟಿಯನ್ನು ನಿರ್ಮಿಸಿರುತ್ತದೆ.

ಒಂದು ಒಳ್ಳೆಯ ಪುಸ್ತಕ ಒಳ್ಳೆಯ ವಿಚಾರವನ್ನು ಒಳಗೊಂಡಿದೆಯೆಂದು ಶ್ರೇಷ್ಠವಲ್ಲ. ಆ ಒಳ್ಳೆಯ ವಿಚಾರ, ಇನ್ನೂ ಹೆಚ್ಚು ಉದಾತ್ತವಾದುದನ್ನು, ಅದನ್ನು ಓದಿದ ಮನುಷ್ಯನ ಮನಸ್ಸಿನ ಸೂಚಿಸುತ್ತದೆ. ಗಂಡಾಂತರಗಳಿಂದ ಕೂಡಿದ ಜೀವನ ಸಮುದ್ರದಲ್ಲಿ ಯಾನ ಮಾಡುವ ಅನೇಕ ಸುರಕ್ಷಿತ ಉಪಾಯಗಳನ್ನು ನಮಗೆ ಅದು ಹೇಳಿಕೊಡುತ್ತದೆ.

ಮನುಷ್ಯ ಸೃಷ್ಟಿಯಲ್ಲಿ ಪುಸ್ತಕಗಳ ಜಗತ್ತು ಅತ್ಯಪೂರ್ವವಾಗಿದೆ. ಈ ಲೋಕದೊಳಗೇ ಅನೇಕ ಲೋಕಗಳು ಎನ್ನುವಂತೆ, ಪುಸ್ತಕಗಳ ಜಗತ್ತು ನಮಗೆ ಅನೇಕ ಲೋಕಗಳನ್ನು ತೋರಿಸಿಕೊಡುತ್ತದೆ. ಮನುಷ್ಯನು ನಿರ್ಮಿಸಿದುದೆಲ್ಲವೂ ಇಂದಲ್ಲ ನಾಳೆ ನಶಿಸಿ ಹೋಗುತ್ತದೆ. ಕಟ್ಟಡಗಳು ಕುಸಿದು ಬೀಳುತ್ತವೆ. ರಾಷ್ಟ್ರಗಳು

ಹಾಳಾಗುತ್ತವೆ. ನಾಗರಿಕತೆಗಳಿಗೆ ವೃದ್ಧಾಪ್ಯ ಬಂದು ಅವು ಸತ್ತು ಹೋಗುತ್ತವೆ. ಆದರೆ ಪುಸ್ತಕಗಳ ಜಗತ್ತಿನಲ್ಲಿ ಈ ರೀತಿ ಆಗುವುದಿಲ್ಲ.

ಎಲ್ಲರೂ ಓದಬೇಕು. ಎಲ್ಲರ ಮನೆಯಲ್ಲಿಯೂ ಪುಸ್ತಕಗಳು ಇರಬೇಕು. ಪುಸ್ತಕಗಳಿಲ್ಲದ ಮನೆಯೂ ಒಂದೇ ಕಿಟಕಿಯಿಲ್ಲದ ಕೋಣೆಯೂ ಒಂದೇ ಎಂದು ಹೇಳುತ್ತಾರೆ.

ಮನೆಯಲ್ಲಿ ಪುಸ್ತಕಗಳು ತುಂಬಿದ್ದರೆ, ಮಕ್ಕಳು, ಪುಸ್ತಕದ ವಾತಾವರಣದಲ್ಲಿ ಬೆಳೆಯುತ್ತಾರೆ. ಮನೆಗೆ ಪುಸ್ತಕಗಳನ್ನು ತರದೇ ಇರುವ ಮನುಷ್ಯನು ತನ್ನ ಕುಟುಂಬಕ್ಕೆ ಅನ್ಯಾಯವನ್ನು ಬಗೆಯುತ್ತಾನೆ. ಪುಸ್ತಕಗಳು ಎದುರಿಗೆ ಇದ್ದರೆ ಮಕ್ಕಳು ಓದುವುದನ್ನು ಕಲಿಯುತ್ತಾರೆ. ತಂದೆ ತಾಯಿಗಳು ಪುಸ್ತಕಗಳನ್ನು ಕೈಗೆ ಎತ್ತಿಕೊಂಡರೆ, ಅದು, ಮಕ್ಕಳ ಮನಸ್ಸಿನ ಮೇಲೆ, ತಾವೂ ಓದಬೇಕೆನ್ನುವ ಪರಿಣಾಮವನ್ನು ಬೀರುತ್ತದೆ.

ಹುಡುಗರು ಚಿಕ್ಕವರಿದ್ದಾಗಲೇ ಅವರಲ್ಲಿ ಜ್ಞಾನ ಸಂಪಾದಿಸುವ ಪ್ರೀತಿಯನ್ನು ಮೂಡಿಸಬೇಕು. ನಿಜವಾದ ಜ್ಞಾನ ಸಂಪಾದಿಸಿದವನು ಕ್ಷುದ್ರ ಹವ್ಯಾಸಗಳನ್ನು ಹಚ್ಚಿಕೊಳ್ಳುವುದೇ ಇಲ್ಲ.

ತನ್ನ ಸ್ನೇಹಿತರನ್ನು ಮನುಷ್ಯನು ಕಳೆದುಕೊಳ್ಳಬಹುದು. ಆದರೆ ಪುಸ್ತಕಗಳ ಸ್ನೇಹವನ್ನು ಮಾತ್ರ ಅವನು ಕಳೆದುಕೊಳ್ಳಬಾರದು. ಒಳ್ಳೆಯ ಪುಸ್ತಕ, ಸ್ನೇಹಿತರಲ್ಲಿಯೇ ಅತ್ಯಂತ ಹೆಚ್ಚು ಶ್ರೇಷ್ಠ, ಪುಸ್ತಕದ ಸ್ನೇಹ, ನಿನ್ನೆ, ಇಂದು, ನಾಳೆ, ಯಾವಾಗಲೂ ಒಂದೇ ರೀತಿಯಾಗಿ ಇರುತ್ತದೆ.



ಶ್ರೇಷ್ಠ ಪುಸ್ತಕವು ನಮಗೋಸುಗ ಆಲೋಚನೆ ಮಾಡುವುದಿಲ್ಲ. ಆದರೆ, ಅದು ನಮ್ಮನ್ನು ಆಲೋಚನೆ ಮಾಡಲು ಹಚ್ಚುತ್ತದೆ. ಜಗತ್ತು, ಸಣ್ಣ ವಿಚಾರಗಳ ಮೇಲೆ ಅಲ್ಲ, ದೊಡ್ಡ ಆಲೋಚನೆಗಳ ಮೇಲೆ ಬದುಕಿದೆ. ಪುಸ್ತಕಗಳಿಂದ ಮನುಷ್ಯನ ಆಲೋಚನೆಗೆ ಚಿರಂತನತೆ ಬಂದಿದೆ. ಮನುಷ್ಯನ ವಿಚಾರಗಳೆಂದೂ ಸಾಯುವುದಿಲ್ಲ. ಅವು ಪರಿಣಾಮ ಬೀರುವುದನ್ನು ತಡೆಗಟ್ಟುವುದು ಎಂಥ ಬಲಾಢ್ಯ ಸೈನ್ಯದಿಂದಲೂ ಸಾಧ್ಯವಿಲ್ಲ.

ಈಗ ಪುಸ್ತಕಗಳೇನೋ ಇವೆ. ಆದರೆ ಓದುವವರನ್ನು ಹುಡುಕುವದೇ ಕಷ್ಟವಾಗಿದೆ. ಟೆಲಿವಿಜನ್ ಬಂದು ತಲೆಗೆ ವಿಜನ್ ಕೊಡುವ ಪುಸ್ತಕಗಳನ್ನು ಓದುವುದೇ ತಪ್ಪಿಹೋದಂತಾಗಿದೆ.

ಗಾಜಿನ ಕಪಾಟಿನಲ್ಲಿಟ್ಟಿರೂ ಪ್ರದರ್ಶನದ

ವಸ್ತುಗಳಲ್ಲ ನಾವು; ಬೇಡಿ ಬಯಸಿರಲಿಲ್ಲ

ಈ ಬಗೆಯ ವಿಶ್ರಾಂತಿ ಹರಿದರೂ ಚಿಂತೆಯಿಲ್ಲ

ಹರಿಯುತ್ತಿರಬೇಕು ಕೈಯಿಂದ ಕೈಗೆ.

ಚೆನ್ನವೀರ ಕಣವಿ

ಡಾ. ಹಾ.ಮಾ. ನಾಯಕರವರು ಪುಸ್ತಕ ಸಂಸ್ಕೃತಿ ಘೋಷಣೆಯ ಬಗ್ಗೆ ಮತ್ತು ಪುಸ್ತಕೋದ್ಯಮದ ಬಗ್ಗೆ ವಿಶ್ಲೇಷಿಸಿದ್ದಾರೆ.

ಕಾಗದ ಮುದ್ರಣಗಳ ಬೆಲೆ ವಿಪರೀತವಾಗಿ ಏರಿದ್ದರೂ, ಕೊಳ್ಳುವವರ ಸಂಖ್ಯೆ ಇಳಿಮುಖವಾಗಿದ್ದರೂ, ಕನ್ನಡ ಪುಸ್ತಕಗಳ ಪ್ರಕಟಣೆಯೇನೂ ಕುಂಟಿಲ್ಲ. ಇದೀಗ ತನ್ನ ಪ್ರಕಟಣೆಯ ಹತ್ತನೆಯ ವರ್ಷವನ್ನು ಮುಗಿಸಿರುವ, ಪುಸ್ತಕೋದ್ಯಮಕ್ಕಾಗಿಯೇ ಮೀಸಲಾಗಿರುವ ಮೈಸೂರಿನ ಮಾಸಪತ್ರಿಕೆ 'ಗ್ರಂಥ ಲೋಕ'ದ ಲೆಕ್ಕಾಚಾರಗಳ ಪ್ರಕಾರ ಕನ್ನಡದಲ್ಲಿ ಪ್ರತಿವರ್ಷ ಸುಮಾರು ಎಂಟರಿಂದ ಹತ್ತು ಸಾವಿರ ಪುಸ್ತಕಗಳು ಪ್ರಕಟಗೊಳ್ಳುತ್ತವೆ. ಈ ಲೆಕ್ಕದಲ್ಲಿ ಒಳ್ಳೆಯ, ಕೆಟ್ಟ, ಏನೂ ಅಲ್ಲದ ಸಣ್ಣ ದೊಡ್ಡ ಎಲ್ಲ ಬಗೆಯ ಪುಸ್ತಕಗಳೂ ಸೇರುತ್ತವೆ. ಏನೇ ಇರಲಿ, ನಮ್ಮಲ್ಲಿರುವ ಪ್ರಕಟಣೆಯ ಕಷ್ಟಗಳ ಮಧ್ಯೆ ಇಷ್ಟೊಂದು ಪುಸ್ತಕಗಳು ಪ್ರಕಟವಾಗುತ್ತಿರುವುದು ಸಣ್ಣ ಮಾತಲ್ಲ.

ನಮ್ಮ ಪುಸ್ತಕೋದ್ಯಮ, ವ್ಯವಹಾರಕ್ಕಿಂತ ಉತ್ಸಾಹವನ್ನು ಆಧರಿಸಿದ್ದು ಸ್ಥಾಪಿತ ಪ್ರಕಾಶನ ಸಂಸ್ಥೆಗಳಿಗಿಂತ ಹವ್ಯಾಸೀ ಪ್ರಕಾಶಕರೇ ಇದಕ್ಕೆ ಕಾರಣ. ಬಹು ಸಂದರ್ಭಗಳಲ್ಲಿ ಲೇಖಕರೇ ಪ್ರಕಾಶಕರಾಗಿರುತ್ತಾರೆ. ಕೆಲವು ಸಂದರ್ಭಗಳಲ್ಲಿ ನಾಲ್ಕಾರು ಜನ ಸ್ನೇಹಿತರು ಕೂಡಿ ಈ ಕೆಲಸ ಮಾಡುತ್ತಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ಸಂಘ-ಸಂಸ್ಥೆಗಳು ಇದಕ್ಕೆ ಕೈ ಹಾಕುವುದೂ ಉಂಟು. ಲೇಖಕನಾದವನು ತನ್ನ ಮನಸ್ಸಿನ ತೃಪ್ತಿಗಾಗಿ ಬರೆಯುತ್ತಾನೆ ಎನ್ನುವ ಮಾತು ಇದೆಯಾದರೂ ತನ್ನ ಬರಹ ಪ್ರಕಟವಾಗಿ ಜನರ ಕೈಸೇರದಿದ್ದರೆ ಯಾವ ಲೇಖಕನಿಗೂ ತೃಪ್ತಿಯಾಗುವದೇ ಇಲ್ಲ. ಆದ್ದರಿಂದ ಪ್ರತಿಯೊಬ್ಬ ಲೇಖಕನೂ ಪ್ರಕಟಣೆಗಾಗಿ ಹಂಬಲಿಸುತ್ತಾನೆ; ಹಲವು ಹೊಸ ಹಾದಿಗಳನ್ನು ಹುಡುಕುತ್ತಾನೆ. ಎಲ್ಲ ಲೇಖಕರಿಗೂ, ಎಲ್ಲ ಬಗೆಯ ಬರಹಗಳಿಗೂ ಪ್ರಕಾಶಕರು ಸಿಕ್ಕುವುದಿಲ್ಲ. ಫಲವಾಗಿ ಹವ್ಯಾಸೀ ಪ್ರಕಾಶನ ಹುಟ್ಟಿಕೊಂಡಿದೆ. ಅದೇ ಕನ್ನಡ ಪುಸ್ತಕೋದ್ಯಮದ ರಕ್ಷಣೆಗೆ ನಿಂತಿದೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವತಿಯಿಂದ ಲೇಖಕ ಮತ್ತು ಪ್ರಕಾಶಕರಿಗೆ, ಉತ್ತೇಜನ ನೀಡಲು ೨೦೦೬ರಲ್ಲಿ 'ಏಕಗವಾಕ್ಷಿ' ಯೋಜನೆಯಡಿ ಒಬ್ಬ ಲೇಖಕ/ಪ್ರಕಾಶಕ/ಸಂಸ್ಥೆಗಳು ಪ್ರಕಟಿಸಿದ ಪುಸ್ತಕದ ತಲಾ ೩೦೦ ಪ್ರತಿಗಳು ಅಥವಾ ರೂ. ೦೧ ಲಕ್ಷಕ್ಕೂ ಮೀರದಂತೆ ಪುಸ್ತಕ ಖರೀದಿ ಮಾಡಲಾಗುತ್ತಿದೆ.

೨೦೦೬ ರಿಂದ ೨೦೧೭ರವರೆಗೆ ವಿವಿಧ ಯೋಜನೆಯಡಿಯಲ್ಲಿ ಸ್ವೀಕರಿಸಿದ ಪುಸ್ತಕಗಳ ವಿವರ

| ಕ್ರ.ಸಂ. | ವರ್ಷ | ಆಯ್ಕೆಗೆ ಸ್ವೀಕರಿಸಿದ ಪುಸ್ತಕಗಳ ಸಂಖ್ಯೆ |
|---|---|---|
| ೧. | ೨೦೦೬ | ೩೫೦೦ |
| 9. | 9002 | ೪೦೦೦ |
| 2. | ೨೦೦೮ | ೪೨೫೦ |
| 9. | ೨೦೦೯ | ೫೦೩೫ |
| 8. | ೨೦೧೦ | ೫೪೮೬ |
| 2. | ೨೦೧೧ | 2090 |
| 2. | ೨೦೧೨ | ೮೦೦೦ |
| ೮. | ೨೦೧೩ | ೫೧೯೬+೧೫೩೨+೮೮+೪೫೧+೧೫=೭೨೮೨ |
| ೯. | ೨೦೧೪ | ೪೪೬೭+೧೨೫೩+೨೮೭+೧೬-೬೦೨೨ |
| ೧೦. | ೨೦೧೫ | ೪೭೯೨+೨೨೪೨+೭೫೫+೪೫=೭೮೩೪ |
| ೧೧. | ೨೦೧೬ | ೪೩೪೭+೨೬೦೩+೧೬೦೩+೫೦=೮೬೦೩ |
| ೧೨. | ೨೦೧೭ | ೪೯೬೫+೩೨೬೦+೩೨೦೦+೮೮=೧೧೫೧೩ |
| | ಒಟ್ಟು | ೭೮೫೫೩ |

**ಎಸ್.ಸಿ.ಪಿ/ಟಿ.ಎಸ್.ಪಿ**

| ವರ್ಷ | ಕನ್ನಡ | ಆಂಗ್ಲ | ಹಿಂದಿ | ಒಟ್ಟು |
|---|---|---|---|---|
| ೨೦೧೬-೧೭ ೩೪೩ | ೩೪೩ | ೨೩೦೪ | ೦ | ೨೬೪೭ |
| ೨೦೧೭-೧೮ ೮೪೮ | ೮೪೮ | ೩೫೬೪ | ೦ | ೪೪೧೨ |
| ೨೦೧೮-೧೯ | ೧೬೮೪ | ೨೫೩೨ | ೫೭೨ | ೪೭೮೮ |
| ೨೦೧೯-೨೦ | ೨೭೮೫ | ೨೫೨೪ | ೧೨೪೩ | ೬೫೫೨ |
| ಒಟ್ಟು | ೫೬೬೦ | ೧೦೯೨೪ | ೧೮೧೫ | ೧೮೩೯೯ |

ಪುಸ್ತಕದ ಪ್ರಭಾವವನ್ನು ನಾಡಿನ ಪ್ರಖ್ಯಾತ ಸಾಹಿತಿಗಳಾದ ಚೆನ್ನವೀರ ಕಣವಿರವರು ಈ ಕೆಳಗಿನಂತೆ ನಿರೂಪಿಸಿದ್ದಾರೆ.



ಎಳೆವಯಸ್ಸಿನಿಂದಲೇ ಮನುಷ್ಯ ಅರಿತೊ, ಅರಿಯದೆಯೊ ಅನೇಕ ಬಗೆಯ ಪ್ರಭಾವಗಳಿಗೆ ಈಡಾಗುತ್ತಾನೆ. ತಾನು ಓಡಾಡಿ ನಲಿದ ಮನೆಯ ವಾತಾವರಣ, ತನ್ನ ಬೆಳವಣಿಗೆಯಲ್ಲೇ ಮಗ್ನರಾಗಿರುವ ತಂದೆ-ತಾಯಿಗಳು, ತನ್ನೊಡನೆ ಸುಖ-ದು:ಖದಲ್ಲಿ ಪಾಲುಗೊಂಡ ಗೆಳೆಯರು, ಶಾಲೆ-ಕಾಲೇಜುಗಳಲ್ಲಿ ತನ್ನ ಜ್ಞಾನ ವಿಕಾಸಕ್ಕೆ ಕಾರಣರಾದ ಗುರುಹಿರಿಯರು, ತನ್ನ ಸುತ್ತಮುತ್ತಲಿನ ನಿಸರ್ಗ, ತನ್ನ ಮನಸ್ಸನ್ನು ಸೆರೆಹಿಡಿದು ಸೂರೆಗೊಂಡ ಪುಸ್ತಕಗಳು ಈ ಎಲ್ಲವೂ ಒಂದಿಲ್ಲ ಒಂದು ರೀತಿಯಲ್ಲಿ ಒಂದೊಂದು ಹಂತದಲ್ಲಿ, ತಮ್ಮ ಪ್ರಭಾವವನ್ನು ಬೀರಿ, ನಮ್ಮ ಬದುಕನ್ನು ತಿದ್ದಿ, ಬಾಳನ್ನು ರೂಪಿಸುತ್ತವೆ. ಸಲಿಗೆಯ ಗೆಳೆಯರೆದುರು ಮನಸ್ಸು ಬಿಚ್ಚಿ ಮಾತನಾಡಿದಂತೆ ಉಳಿದವರೆದುರು ನಾವು ವರ್ತಿಸಲಾರೆವು. ಸಹೃದಯತೆ ಮೊದಲು ಗೆಳೆತನದಲ್ಲಿ ಮೊಲೆಯುತ್ತದೆ. ನಿಸರ್ಗ ತನ್ನ ರುದ್ರ ರಮಣೀಯವಾದ ನೂರು ನೋಟಗಳಿಂದ ನಮ್ಮ ಹೃದಯವನ್ನು ಅರಳಿಸುತ್ತ, ಕುತೂಹಲವನ್ನು ಕೆರಳಿಸುತ್ತ, ಮನಸ್ಸನ್ನು ತುಂಬಿಕೊಳ್ಳುತ್ತಲೇ ಇರುತ್ತದೆ. ಈ ಎಲ್ಲ ಗುಣಗಳೂ ಗ್ರಂಥಗಳಲ್ಲಿ ಒಟ್ಟುಗೂಡಿರುತ್ತವೆಂದು ನನ್ನ ಅನಿಸಿಕೆ.

ಜೀವನದ ಕೊನೆಯವರೆಗೂ ತಾನೊಬ್ಬ ವಿದ್ಯಾರ್ಥಿಯೇ ಎಂಬ ಅರಿವನ್ನು ಹಾಗೂ ಜ್ಞಾನದ ಅಗಾಧತೆಯನ್ನು ಗ್ರಂಥವಾಚನ ನಮಗೆ ಒದಗಿಸುತ್ತದೆ. ಎಷ್ಟೇ ಅಂದರೂ ಅಧ್ಯಾಪಕರು ಕಲಿಸುವ ಬೋಧೆಗೆ ಒಂದು ಮಿತಿ ಇರುತ್ತದೆ.

ಆದರೆ ಪುಸ್ತಕಗಳು ಕಲಿಸುವ ಕಲಿಕೆಗೆ ಆ ಮಿತಿಯಿಲ್ಲ. ಮಹಾಕವಿ ಮಿಲ್ಟನ್ ನುಡಿದಂತೆ “ಒಂದು ಸದ್ಗ್ರಂಥವು ಮಹಾಚೇತನನೊಬ್ಬನ ಅನರ್ಘವಾದ ಜೀವಸಾರ; ಜೀವಿತರ ಮುಂದಿನ ಜೀವಿತಕ್ಕಾಗಿ ನಿಕ್ಷೇಪವಾಗಿಟ್ಟ ಜೀವಸಾರ,” ಆದುದರಿಂದಲೇ ನಮ್ಮ ಜೀವನದಲ್ಲಿ ಪುಸ್ತಕಗಳ ಪ್ರಭಾವ ಮಹತ್ತರವಾದುದು.

ಪುಸ್ತಕಗಳ ಮೇಲೆ ಪುಸ್ತಕಗಳು ಪ್ರಕಟವಾಗುತ್ತಲೇ ಇರುತ್ತವೆ. ಆದರೆ ನಿಜವಾದ ಒಳ್ಳೆಯ ಪುಸ್ತಕವೊಂದು ಪ್ರಕಟವಾದಾಗ ಅದು ತನ್ನಲ್ಲಿಯ ಶಬ್ದಗಳಿಗೆ ಅಭೂತಪೂರ್ವವಾದ ಶಕ್ತಿಯನ್ನೂ ದೀರ್ಘಾಯುಷ್ಯವನ್ನೂ ನೀಡುತ್ತದೆ. ಜೀವನದ ಹೋರಾಟಕ್ಕೆ ಒಂದು ಉದ್ದೇಶವನ್ನೂ ಗುರಿಯನ್ನೂ, ಪ್ರೇರಣೆ, ಪ್ರೋತ್ಸಾಹಗಳನ್ನೂ ಒದಗಿಸುತ್ತದೆ.

ಉತ್ತಮವಾದ ಪ್ರತಿಯೊಂದು ಗ್ರಂಥದ ಹಿಂದೆ ಒಂದು ಜೀವಂತ ಆತ್ಮವಿರುತ್ತದೆ. ಆ ಗ್ರಂಥವನ್ನೋದಿದಾಗ ಅದರ ಸ್ಪರ್ಶ ನಮಗೂ ಆಗುತ್ತದೆ. ವಾಲ್ಟವಿಟ್‌ಮನ್ ತನ್ನ ಒಂದು ಕವಿತೆಯಲ್ಲಿ ಹೀಗೆ ನುಡಿಯುತ್ತಾನೆ.

This is no book

Who touches this touches a man.

ಓದಿ ಮರುಳಾಗಬಾರದು.

ಓದದೆಯೂ ಮರುಳಾಗಬಾರದು.

ಓದಿ ಹುರುಳಾಗಬೇಕು.

-ವಿ.ಕೃ.ಗೋಕಾಕ

ಪುಸ್ತಕಗಳಿಂದ ವ್ಯಕ್ತಿತ್ವ ನಿರ್ಮಾಣವಾಗುತ್ತದೆ, 'ದೇಶ ತಿರುಗು ಇಲ್ಲವೆ ಕೋಶ ಓದು' ಎನ್ನುವ ಲೋಕೋಕ್ತಿಯಂತೆ ಪುಸ್ತಕಗಳು ಬದುಕಿನ ದಾರಿದೀಪಗಳಾಗಿವೆ.

ಅಗಾಧವಾದ ಸಾಧನೆಗೈಯ್ಯಲು ಪುಸ್ತಕ ಪ್ರೇರಣೆ ಪಡೆದ ಉದಾಹರಣೆಗಳು ಇಲ್ಲದಿಲ್ಲ. ಅನುಭವ, ವಯೋಮಾನ ಹಾಗೂ ತಾರ್ಕಿಕ ಊಹೆಗಳ ಹಿನ್ನೆಲೆಯಲ್ಲಿ ಪುಸ್ತಕಗಳ ಸಂದೇಶಗಳು ಅನನ್ಯ ರೂಪದಲ್ಲಿ ವಿವರಿಸಲ್ಪಡುತ್ತವೆ ಹಾಗೂ ಅನುಕರಿ ಸಲ್ಪಡುತ್ತವೆ. ವಸ್ತುಗತ ಸತ್ವ ಹಾಗೂ ವ್ಯಕ್ತಿಗತ ಸತ್ವಗಳೆರಡರ ಸಮ್ಮಿಲನದಿಂದ ಸಂಯೋಜಿತ, ಸುಭದ್ರ ವ್ಯಕ್ತಿತ್ವವು ವಿಕಾಸಹೊಂದುವುದು. ಈ ಕ್ರಿಯೆಗೆ ಪರಿಸರವೂ ತನ್ನ ಅಗೋಚರವಾದ ಕೊಡುಗೆ ನೀಡದಿರಲಾರದು. ಆಳವಾದ ಅಧ್ಯಯನ ಸಾಧಕನ ಬಾಹ್ಯ ಪ್ರಕೃತಿಯಿಂದ ಆಂತರಿಕ, ಅಧ್ಯಾತ್ಮಿಕ ಚಕ್ಷುವನ್ನು ಜಾಗ್ರತೆಗೊಳಿಸಿ ತನ್ಮೂಲಕ ತನ್ನ ಹಾಗೂ ಪರಿಸರದ ಸಂಪೂರ್ಣ ದರ್ಶನ ಪಡೆದು, ಜೀವನದಲ್ಲಿ ಸಮದೃಷ್ಟಿ, ಸಂತುಷ್ಟಿ ಹೊಂದುವ ಭೂಮಿಕೆ, ಮನೋವೇದಿಕೆಯ ರಚನೆಗೆ ಕಾರಣೀಭೂತವಾಗುತ್ತದೆ.

ಪುಸ್ತಕಗಳು ನಮ್ಮನ್ನು ಪರಿಪೂರ್ಣತೆಯೆಡೆಗೆ ಕರೆದೊಯ್ಯುವವೆಂಬ ಸತ್ಯವಾದರೂ ಕೇವಲ ಪುಸ್ತಕ ಮೂಲಕ ಜ್ಞಾನವೊಂದೆ ಜೀವನಕ್ಕೆ ಸಾಕೆಂದರೆ ಓದಿ ಕೆಟ್ಟ ಕೂಚ ಭಟ್ಟನೆಂಬಂತಾಗುವುದು. ಅದಕ್ಕೆ ಬದಲಾಗಿ ಜ್ಯೋತಿಯಿಂದ ಜ್ಯೋತಿ ಬೆಳಗಿಸಿದ ಹಾಗೆ ಅಧ್ಯಯನ ಚಿಂತನದಿಂದ ಜ್ಞಾನ ವೃದ್ಧಿಸಿಕೊಂಡು ಆತ್ಮ ಸಾಕ್ಷಾತ್ಕಾರ ಗೊಳಿಕೊಳ್ಳುವುದು ಸಾರ್ಥಕ. ಆದರೆ ಖ್ಯಾತ ವಿಚಾರವಾದಿ ಟ್ರೇವಿಲಿಯನ್‌ರ ಅಭಿಪ್ರಾಯ ದಂತೆ ಇಂದಿನ ಶಿಕ್ಷಣವು ಬಹುಸಂಖ್ಯೆಯ ಜನರನ್ನು ಕೇವಲ ಓದಲು ಕಲಿಸಿದೆಯೇ ವಿನಹ: ಯಾವುದನ್ನು ಹೇಗೆ ಏತಕ್ಕಾಗಿ ಯಾವಾಗ ಓದಬೇಕೆಂಬ ತಿಳುವಳಿಕೆಯ ಪರಿಪೂರ್ಣತೆ ನೀಡಿಲ್ಲವೆಂಬುದೊಂದು ವಿಷಾದನೀಯವಾದ ವಿಷಯವಾಗಿದೆ. ಆದುದರಿಂದ ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ಪುಸ್ತಕಗಳ ಆಯ್ಕೆಯ ಸರಳ ಸೂತ್ರ-ಕೆಲವು ಪುಸ್ತಕಗಳ ಕೇವಲ ರುಚಿ ನೋಡಬೇಕು. ಇನ್ನೂ ಕೆಲವನ್ನು ಓದಿ ನುಂಗಬೇಕು. ಕೆಲವೊಂದನ್ನು ಮಾತ್ರ ಮೆಲುಕು ಹಾಕಿ ಅಗಿದು ನುಂಗಿ ಜೀರ್ಣಿಸಿಕೊಳ್ಳಬೇಕೆಂಬ ಫ್ರಾನ್ಸಿಸ್ ಬೇಕನರ್ ಉಕ್ತಿ ಅತ್ಯಂತ ಅರ್ಥಪೂರ್ಣವಲ್ಲವೇ? "ಓದಿನಾ ಓದು ಮೆದ್ದ ಕಬ್ಬಿನ ಸಿಪ್ಪೆ, ಓದಿನಾ ಒಡಲನರಿತ ಓದು ಸಿಪ್ಪೆ ತಾ ಕಬ್ಬಾದಂತೆ ಸರ್ವಜ್ಞ.

ಡಾ|| ಚಂದ್ರಶೇಖರ ಕಂಬಾರರವರು ತಮ್ಮ ಸಂದರ್ಶನದಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕು. ಅತೀ ಹೆಚ್ಚಿನ ಸಂಖ್ಯೆಯಲ್ಲಿ ಗ್ರಂಥಗಳನ್ನು ಓದಬೇಕು ಅಂದಾಗ ಮಾತ್ರ ಜ್ಞಾನ ವೃದ್ಧಿಯಾಗುತ್ತದೆ.

"ಪುಸ್ತಕವನ್ನು ಓದಲು ಹಾತೊರೆಯುವವನಿಗೂ,

ಬೇಸರವನ್ನು ಕಳೆಯಲೆಂದು ಓದಲು

ಪುಸ್ತಕಬೇಕೆನ್ನುವವನಿಗೂ ವ್ಯತ್ಯಾಸವಿದೆ" .

- ಜಿ.ಕೆ. ಚೆಸ್ಟರ್‌ಟನ್

ನಾವು ಹಮ್ಮಿಕೊಳ್ಳುವ ವಿವಿಧ ಸಮಾರಂಭಗಳಲ್ಲಿ ಪುಸ್ತಕಗಳನ್ನು ಉಡುಗೊರೆ ಯಾಗಿ ನೀಡಬೇಕೇ ವಿನಃ ವಜ್ರ, ವೈಡೂರಗಳನ್ನಲ್ಲ.

ವಿದೇಶಿಗರಲ್ಲಿ ಪುಸ್ತಕ ಪ್ರೇಮ ಹೇಗಿದೆಯೆಂದರೆ ಪ್ರತಿ ಮನೆಗೊಂದು ಒಂದು ಪುಟ್ಟ ಗ್ರಂಥಾಲಯವಿದೆ, ಉದಾ: ಜರ್ಮನಿಯಲ್ಲಿ ಲೇಖಕ/ಪ್ರಕಾಶಕನು ಪ್ರಕಟಿಸಿದ ಪುಸ್ತಕದ ಪ್ರತಿಗಳುನ್ನು ಖರೀದಿಸುತ್ತಾರೆ.



ಸಂದರ್ಭಕ್ಕೆ ತಕ್ಕಂತೆ ಕನ್ನಡದಲ್ಲಿ ಸಂದರ್ಭ ಗ್ರಂಥಗಳಾದ ಶಬ್ದಕೋಶಗಳು, ವಿಶ್ವಕೋಶಗಳು, ಸಾಹಿತ್ಯ ಚರಿತ್ರೆಗಳು, ಗ್ರಂಥಸೂಚಿಗಳು, ಲೇಖನ ಸೂಚಿಗಳು, ಪದಪ್ರಯೋಗ ಕೋಶಗಳು, ಜೀವನ ಚರಿತ್ರೆ ಗ್ರಂಥಗಳು, ವಾರ್ಷಿಕ ಪುಸ್ತಕಗಳು, ಪ್ರವಾಸಿ ಕೈಪಿಡಿಗಳು, ಗೆಜೆಟಿಯರ್‌ಗಳು ಓದುಗನಿಗೆ ಓದುವ ಅಭಿರುಚಿ ಹೆಚ್ಚಿಸುವುದರ ಜೊತೆಗೆ ಅಭಿರುಚಿಯನ್ನು ಹಾಗೂ ಜ್ಞಾನದ ಚಿಲುಮೆಯನ್ನು ಪಸರಿಸುವ ಪುಸ್ತಕಗಳಾಗಿ, ಹೊಸ ಓದಿಗೆ ಪ್ರೇರಣೆಯನ್ನು ವೈವಿಧ್ಯಮಯ ಗ್ರಂಥಗಳು ಮಾಹಿತಿಯನ್ನು ನೀಡುತ್ತವೆ.

ಭವಿಷ್ಯದಲ್ಲಿ ಕಾಗದ ರಹಿತ ಸಮಾಜ ನಿರ್ಮಾಣವಾಗುವುದರಿಂದ ಸಂದೇಹವೇ ag E-mail, Watsup, Facebook, Twitter, E-books, E-office, E-Tickets ಮುಂತಾದ ಆಧುನಿಕ ತಂತ್ರಜ್ಞಾನವನ್ನು ಅಂಗೈಯಲ್ಲಿಯೇ ನಾವು ವೀಕ್ಷಿಸುತ್ತಿದ್ದೇವೆ ಮತ್ತು ಡಿಜಿಟಲ್ ಗ್ರಂಥಗಳನ್ನು ಓದುತ್ತಿದ್ದೇವೆ.

ಒಳ್ಳೆಯ ಪುಸ್ತಕದ ಓದು ಎಂದರೆ

ಬಟ್ಟೆಯನ್ನು ಸುಗಂಧದ ಪನ್ನೀರಿನಲ್ಲಿ

ನೆನೆಸಿದಂತೆ, ಬಟ್ಟೆ ಒಣಗಿದರೂ ಪನ್ನೀರಿನ

ಪರಿಮಳ ಉಳಿಯುವಂತೆ, ಓದಿದ ಪುಸ್ತಕದ

ಅಮೃತಸಾರ ಕೆಲಕಾಲ ಮನದಲ್ಲಿ ಉಳಿಯುವುದು

ತತ್ವಜ್ಞಾನಿ

ಪುಸ್ತಕಗಳ ಕುರಿತಂತೆ ವಿದ್ವಾಂಸರು ಈ ಕೆಳಕಂಡಂತೆ ವ್ಯಾಖ್ಯಾನಿಸಿದ್ದಾರೆ.

೧)	ನಾನು ಓದಿದ ಪುಸ್ತಕ ನಿನ್ನೆ ಅಚ್ಚಾದುದಾಗಿರಲಿ, ನೂರು ವರ್ಷಗಳ ಹಿಂದೆ ಅಚ್ಚಾದುದಿರಲಿ- ನನ್ನ ಪಾಲಿಗೆ ಹೊಸದೇ, (ವಿಲಿಯಂ ಹ್ಯಾಬ್ಲೆಟ್)

೨)	ಪುಸ್ತಕಗಳು ಇನ್ನೂ ಹುಟ್ಟಲಿರುವ ಜನಾಂಗದ ಆಸ್ತಿ~ (ಜೋಸೆಫ್ ಎಡಿಸನ್)

೩)	ಶಾಸನಗಳು ಸಾಯುತ್ತವೆ; ಗ್ರಂಥಗಳಿಗೆ ಸಾವಿಲ್ಲ. (ಬುಲ್‌ವರ್ ಲಿರ್ಟ್ಟ)

೪)	ಯಾವುದಾದರೊಂದು ಮಹಾಗ್ರಂಥವೂ ಚಿಕ್ಕದೊಂದು ದೇಶ, ಜನ-ಅಥವಾ- ಭಾಷೆಯದಾಗುವುದಿಲ್ಲ (ವಿಕ್ಟರ್ ಹೂಗೋ)

೫)	ಪುಸ್ತಕಗಳು ಆಯಾಕಾಲದ ಸಂಸ್ಕೃತಿಯ ಜೀವಂತ ಪ್ರತೀಕ (ಎಮರ್ಸನ್)


೬)	ಓ ಪುಸ್ತಕಗಳೇ, ನೀವು ದೇವ ಮಂದಿರದ ಚಿನ್ನದ ಪಾತ್ರೆಗಳು; ಕೈಯಲ್ಲಿ ಹಿಡಿಯಬಹುದಾದ ಪ್ರಜ್ವಲಿಸುವ ಜ್ಯೋತಿಗಳು. (ರಿಚರ್ಡ್ ಡೀಬರಿ)

೭)	ಪುಸ್ತಕಗಳು, ಸಂತನಿರುವ ಅಥವಾ ಇದ್ದಾನೆಂದು ನಂಬಲಾದ ದೇವ ಮಂದಿರಗಳು (ಫ್ರಾನ್ಸಿಸ್ ಬೇಕನ್)

ಅನ್ನದಾಸೋಹ, ಜ್ಞಾನದಾಸೋಹ ಜೊತೆಗೆ ಪುಸ್ತಕ ದಾಸೋಹ ಮಾಡಿದ ಗದುಗಿನ ಶ್ರೀ ತೋಂಟದಾಚಾರ್ಯ ಮಠದ ಸ್ವಾಮಿಜಿಗಳೇ ಸಮಾಜಕ್ಕೆ ನಿದರ್ಶನ ವಾಗಿದ್ದು, ತಮ್ಮಗೆಲ್ಲರಿಗೂ ತಿಳಿದ ವಿಷಯ.

**ಲೇಖಕ, ಓದುಗ ಮತ್ತು ಪ್ರಕಾಶನ ಕುರಿತಾದ ಪಿರಾಮಿಡ್**

ಸಾರ್ವಜನಿಕ ಗ್ರಂಥಾಲಯ ಶ್ರೀಸಾಮಾನ್ಯರ ವಿಶ್ವವಿದ್ಯಾಲಯಗಳಾಗಿ ಓದುವ ಆಸಕ್ತಿಯನ್ನು ಹುಟ್ಟಿಸುತ್ತಿದೆ. ಸಾಮಾಜಿಕ ಬದಲಾವಣೆಯನ್ನು ತರುವ ನಿಟ್ಟಿನಲ್ಲಿ ಗ್ರಂಥಾಲಯಗಳ ಪಾತ್ರ ಅವಿಸ್ಮರಣೀಯ.



ದೇಶದಲ್ಲಿಯೇ ಪ್ರಥಮ ಬಾರಿಗೆ ರಾಜ್ಯದ ೩೦ ಜಿಲ್ಲಾ ಕೇಂದ್ರ ಗ್ರಂಥಾಲಯಗಳು, ೨೭ ನಗರ ಕೇಂದ್ರ ಗ್ರಂಥಾಲಯಗಳು ಮತ್ತು ೧೭೬ ತಾಲ್ಲೂಕು ಕೇಂದ್ರ ಗ್ರಂಥಾಲಯಗಳು ಮತ್ತು ಶಾಖಾ ಗ್ರಂಥಾಲಯಗಳು ಸೇರಿ ಒಟ್ಟು ೨೭೨ ಗ್ರಂಥಾಲಯಗಳನ್ನು ದೇಶದಲ್ಲಿಯೇ ಪ್ರಥಮವಾಗಿ ಡಿಜಿಟಲ್ ಗ್ರಂಥಾಲಯಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ಜನವರಿ ೨೭ ರಂದು ಕಲಬುರಗಿಯಲ್ಲಿ ಮಾನ್ಯ ಇಲಾಖಾ ಸಚಿವರಿಂದ ಡಿಜಿಟಲ್ ಗ್ರಂಥಾಲಯ ಉದ್ಘಾಟನೆಯಾಗಿರುವುದು ಶ್ಲಾಘನೀಯ ಅದಲ್ಲದೆ ಉಡುಪಿ, ಚಾಮರಾಜನಗರದಲ್ಲಿ ಈಗಾಗಲೇ ಡಿಜಿಟಲ್ ಗ್ರಂಥಾಲಯ ಉದ್ಘಾಟನೆಯಾಗಿ ಕಾರ್ಯನಿರ್ವಹಿಸುತ್ತಿವೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವತಿಯಿಂದ ಓದುವ ಹವ್ಯಾಸವನ್ನು ಹೆಚ್ಚಿಸಲು, ವಿಶ್ವ ಪುಸ್ತಕ ದಿನಾಚರಣೆ, ಗ್ರಂಥಪಾಲಕರ ದಿನಾಚರಣೆ, ರಾಷ್ಟ್ರೀಯ ಗ್ರಂಥಾಲಯ, ಸಪ್ತಾಹ, ಪುಸ್ತಕ ಪ್ರದರ್ಶನ, ಪುಸ್ತಕ ದಾನ ಅಭಿಯಾನ, ಸದಸ್ಯತ್ವ ನೊಂದಣಿ ಅಭಿಯಾನ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

"ನಮ್ಮ ಜ್ಞಾನ ವೃದ್ಧಿಯಾಗಲು

ಪುಸ್ತಕ ಓದಬೇಕು

ಓದಿ ಮನನ ಮಾಡಬೇಕು

ಮನನವಾದ ಬಳಿಕ ಇತರರಿಗೆ ಹೇಳಬೇಕು.

ಹೇಳಿ ಹಾಡಿ ಪ್ರಸಾರಿಸಿದರೆ

ಜ್ಞಾನದ ಚಿಂತನೇ ದೀಪ್ತಿ ಬೆಳಗುವುದು".

-ಶ್ರೀ ಶಿವಲಿಂಗೇಶ್ವರ

ಏಕಗವಾಕ್ಷಿ ಯೋಜನೆಯಡಿ ೨೦೧೭ನೇ ಸಾಲಿನಲ್ಲಿ ಆಯ್ಕೆಯಾದ ಪುಸ್ತಕಗಳಿಗೆ ಮತ್ತು ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ೨೦೧೯ನೇ ಸಾಲಿನ ಪುಸ್ತಕಗಳಿಗೆ ಖರೀದಿ ಆದೇಶ ನೀಡಲಾಗಿದೆ. ಇದೇ ತಿಂಗಳ ೧೨.೦೨.೨೦೨೦ ಮತ್ತು ೨೦.೨೦.೨೦೨೦ ರೊಳಗಾಗಿ ಗ್ರಂಥಗಳನ್ನು ಪೂರೈಸಬೇಕೆಂದು ಕೋರುತ್ತೇನೆ.

೪೫ Crores ಬಳಕೆದಾರರು ಚೀನಾ ಹೊರತುಪಡಿಸಿ ಭಾರತದಲ್ಲಿ Internet ಬಳಸುತ್ತಾರೆ (ಭಾರತ ಎರಡನೆಯದು)

# ಕಲಬುರಗಿ ಜಿಲ್ಲಾ ದರ್ಶನ

## ಐತಿಹಾಸಿಕ ಪರಂಪರೆ

**ಡಾ. ಶಂಭುಲಿಂಗ ಎಸ್. ವಾಣಿ**

ಭಾರತವು ಜಗತ್ತಿನಲ್ಲಿಯೇ ಅತ್ಯಂತ ಪ್ರಾಚೀನ ನಾಗರಿಕತೆ ಮತ್ತು ಪರಂಪರೆಯನ್ನು ಹೊಂದಿರುವ ದೇಶವಾಗಿದೆ. ಕ್ರಿಶ.೧೯೦೨-೧೧ ರಲ್ಲಿ ಸರ್ ಜಾನ್ ಮಾರ್ಶಲ್, ದಯಾರಾಮ ಸಹಾನಿ, ಆರ್. ಡಿ. ಬ್ಯಾನರ್ಜಿ, ರಾವ್‌ನರ್ ಮುಂತಾದ ಸಂಶೋಧಕರು ಸಿಂಧು ನದಿ ತೀರದ ಸ್ಥಳವನ್ನು ಆಯ್ಕೆ ಮಾಡಿಕೊಂಡು ಅಲ್ಲಿ ನಿರಂತರವಾಗಿ ಭೂ ಉತ್ಖನನ ಕಾರ್ಯ ನಡೆಸಿದರು. ಅದರ ಪ್ರಯುಕ್ತ ಪ್ರಾಚೀನ ಕಾಲದ ಮಾನವನ ನೆಲೆಗಳು ಬೆಳಕಿಗೆ ಬಂದವು ಭಾರತದ ನಾಗರಿಕತೆಯ ಇತಿಹಾಸದ ಕಾಲಮಾನ ಕ್ರಿ.ಪೂ ಸು. ೫೦೦೦ ವರ್ಷಗಳಿಂದ ಆರಂಭಗೊಂಡಿರುವುದನ್ನು ಪತ್ತೆ ಹಚ್ಚಿದರು. ನಂತರದಲ್ಲಿ ನಡೆದ ಶೋಧಗಳಲ್ಲಿ ಹಲವು ನಗರಗಳು, ವ್ಯಾಪಾರ ಕೇಂದ್ರಗಳು, ದೊಡ್ಡ ಪಟ್ಟಣಗಳು ಹೀಗೆ ಹಲವು ಸ್ಥಳಗಳನ್ನು ಗುರುತಿಸಲಾಯಿತು. ಉತ್ಖನನದಲ್ಲಿ ದೊರೆತ ಅವಶೇಷಗಳನ್ನು ಕಾರ್ಬೋ ಹೈಡ್ರ (C14) ಪರೀಕ್ಷೆಗೆ ಒಳಪಡಿಸಿ ಅವುಗಳ ಕಾಲಮಾನವನ್ನು ನಿಗದಿಪಡಿಸಲಾಯಿತು. ಭಾರತ ಸ್ವಾತಂತ್ರ್ಯ ಹೊಂದಿದ ನಂತರ ಭಾರತೀಯ ಪುರಾತತ್ವ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದ ಹಲವು ಅಧಿಕಾರಿಗಳು. ಭಾರತದ ಪ್ರಾಚೀನ ಪರಂಪರೆಯ ತಾಣಗಳನ್ನು ಗುರುತಿಸಿ ಅಲ್ಲಿ ಉತ್ಖನನ ಕಾರ್ಯಕೈಗೊಂಡು ದೇಶದ ಪ್ರಾಚೀನ ಭವ್ಯ ಪರಂಪರೆಯನ್ನು ಕಟ್ಟಿಕೊಡುವಲ್ಲಿ ಅವಿರತವಾಗಿ ಶ್ರಮಿಸಿದರು. ಅದೇ ರೀತಿ ದಕ್ಷಿಣ ಭಾರತದ ಹಲವು ಕಡೆಗಳಲ್ಲಿ ಉತ್ಖನನ ಕಾರ್ಯ ಕೈಗೊಳ್ಳಲಾಯಿತು. ಅದರಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಕೆಲವೊಂದು ಪ್ರಾಚೀನ ನೆಲೆಗಳನ್ನು ಗುರುತಿಸಿ ಇಲ್ಲಿ ಶೋಧಕಾರ್ಯ ನಡೆಯಿಸಿದರು. ಅದರ ಫಲವಾಗಿ ಕಲಬುರಗಿ ಜಿಲ್ಲೆಯು ಸಹ ಭಾರತದ ಇತಿಹಾಸದಷ್ಟೇ ಪ್ರಾಚೀನ ನಾಗರಿಕತೆ ಮತ್ತು ಪರಂಪರೆಯನ್ನು ಹೊಂದಿರುವ ವಿಷಯ ಬೆಳಕಿಗೆ ತರಲಾಯಿತು. ಭಾರತೀಯ ಪುರಾತತ್ವ ಇಲಾಖೆ, ರಾಜ್ಯ ಸರಕಾರದ ಪುರಾತತ್ವ, ಪರಂಪರೆ ಮತ್ತು ವಸ್ತು ಸಂಗ್ರಹಾಲಯ ಇಲಾಖೆ, ಪೂನಾದ ಡೆಕ್ಕನ್ ಕಾಲೇಜಿನ ಇತಿಹಾಸ ವಿಭಾಗ ಹಾಗೂ ಇತರ ಸಂಶೋಧಕರು ಕಲಬುರಗಿ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ಉತ್ಖನನ, ಶೋಧಕಾರ್ಯ ಕೈಗೊಂಡು ಜಿಲ್ಲೆಯ ಭವ್ಯ ಪರಂಪರೆಯ ಇತಿಹಾಸ ರಚಿಸುವಲ್ಲಿ ನಿರಂತರವಾಗಿ ಶ್ರಮಿಸಿದ್ದಾರೆ.

**ಇತಿಹಾಸ ಪೂರ್ವಕಾಲ :**

ಕಲಬುರಗಿ ಪ್ರದೇಶ ಇತಿಹಾಸ ಪೂರ್ವಕಾಲದ ಪರಂಪರೆಯನ್ನು ಹೊಂದಿದ್ದು, ರಾಬರ್ಟ್ ಬ್ರೂಸ್‌ಫೋರ್ಟ್ ಎಂಬ ಭೂವಿಜ್ಞಾನಿಯು ಸುರಪುರ ತಾಲೂಕಿನ ಎಡೆನಹಳ್ಳಿಯಲ್ಲಿ ಆದಿ ಹಳೆ ಶಿಲಾಯುಗದ ಕಲ್ಲಿನ ಆಯುಧಗಳನ್ನು ಪತ್ತೆ ಹಚ್ಚಿದನು. ಕ್ರಿ.ಶ ೧೯೭೦ರ ನಂತರದಲ್ಲಿ ಪೂನಾದ ದಖ್ಖನ್ ಕಾಲೇಜಿನ ಪ್ರಾಚೀನ ಇತಿಹಾಸ ಮತ್ತು ಸಂಶೋಧನಾ ಕೇಂದ್ರದ ಪ್ರೊ. ಕೆ.ಪದಯ್ಯನವರು ಬ್ರೂಸ್ ಫೋರ್ಟ್ ಸಂಶೋಧನೆಯನ್ನು ಮುಂದುವರೆಸಿ, ಶೋರಾಪುರ ಸಂಗಮ ಪ್ರದೇಶದ ಪ್ರಾಗೈತಿಹಾಸ

ಹಾಗೂ ಪೂರ್ವಭಾವಿ ಇತಿಹಾಸದ ನೆಲೆಗಳನ್ನು ಕುರಿತು ಸಂಶೋಧನೆ ನಡೆಸಿ ಜಿಲ್ಲೆಯ ಪ್ರಾಚೀನತೆಯನ್ನು ಇತಿಹಾಸ ಪೂರ್ವಕಾಲದಿಂದ ಆರಂಭವಾಗಿರುವುದಲ್ಲಿ ಪತ್ತೆಹಚ್ಚಿದರು. ಕ್ರಿ.ಶ. ೧೯ನೇ ಶತಮಾನದ ಮಧ್ಯಬಾಗದಲ್ಲಿ ಕರ್ನಲ್ ಮೆಡೋಸ್ ಟೆಲರ್ ಅವರು ನಂತರ ಕಬ್ಬಿಣಯುಗದ ಬೃಹತ್ ಶಿಲಾ ಸಂಸ್ಕೃತಿಯನ್ನು, ಕಲ್ಲು ವೃತ್ತಗಳು ಮತ್ತು ಕಲ್ಮನೆಗಳನ್ನು ಜೇವರ್ಗಿ ತಾಲೂಕಿನ ಅಂದೋಲ, ಚಿಕ್ಕನಹಳ್ಳಿ, ರಾಜನ್ ಕೊಳ್ಳೂರು, ಹಗರಟಿ ಹಾಗೂ ಇತರ ಕಡೆಗಳಲ್ಲಿ ಪತ್ತೆಹಚ್ಚಿದರು, ಬೀಮಾ ನದಿ ದಂಡೆ ಪ್ರದೇಶದ ಮೇಲೆ ಅ. ಸುಂದರ ಮತ್ತು ಎಸ್. ನಾಗರಾಜ ಅವರು ಮದ್ಯ ಹಳೆ ಶಿಲಾಯುಗದ ಕಲ್ಲಿನ ಉಪಕರಣಗಳನ್ನು ಅಫಜಲಪುರದ ಉಡಚಣ, ಸುರಪುರದ ಹುಣಸಗಿಯಲ್ಲಿ ನೂತನ ಶಿಲಾಯುದ ಜನವಸತಿ ನೆಲೆಗಳನ್ನು ಗುರುತಿಸಿದರು. ಕ್ರಿ.ಶ.೧೯೬೪ರ ಶೋಧದಲ್ಲಿ ಬೂದಿಹಾಳದಲ್ಲಿ ಎರಡು ಬೂದಿ ದಿನ್ನೆಗಳನ್ನು ಶೋಧಿಸಿದರು. ಕೆ. ಪದಯ್ಯವನರು ಸಹ ಜಿಲ್ಲೆಯ ಕರ, ಕೋಡೇಕಲ್‌ಗಳಲ್ಲಿ ಬೂದಿಗುಡ್ಡಗಳನ್ನು ಗುರುತಿಸಿದರು. ಕಲಬುರಗಿ ಜಿಲ್ಲೆಯವರೆ ಆದ ಕಪಟರಾಳ ಕೃಷ್ಣರಾಯರು ಜಿಲ್ಲೆಯ ಹಲವು ಕಡೆ ಶೋಧಕಾರ್ಯ ಮಾಡಿ ಸನ್ನತಿ ಪ್ರದೇಶದಲ್ಲಿ ಬೌದ್ಧ ನೆಲೆಗಳನ್ನು, ಪ್ರಾಕೃತ ಶಾಸನಗಳನ್ನು ಹಾಗೂ ಬೌದ್ಧ ಶಿಲೆಗಳನ್ನು ಪತ್ತೆಹಚ್ಚಿ ವರದಿ ಮಾಡಿರುವುದು ವಿಶೇಷವಾಗಿದೆ. ಮಂದುವರೆದು ಎಸ್. ಶೇಷಾದ್ರಿ, ಪಿ.ಬಿ. ದೇಸಾಯಿ, ಎಂ.ಎಸ್. ನಾಗರಾಜರಾವ ಅವರು ಜಿಲ್ಲೆಯ ಸನ್ನತಿ ಭಾಗದಲ್ಲಿ ಪದೇ ಪದೇ ಶೋಧನೆ ಕೈಗೊಂಡು ಅಲ್ಲಿ ಲಭ್ಯವಾದ ಅವಶೇಷಗಳನ್ನು ಪ್ರಸುತ್ತ ಸರಕಾರಿ ವಸ್ತುಸಂಗ್ರಹಾಲಯ ಮತ್ತು ಪುರಾತತ್ವ ಇಲಾಖೆಯಲ್ಲಿ ಸಂಗ್ರಹಿಸಿ ಇಡಲಾಗಿದೆ.

ಕೇಂದ್ರ ಸರಕಾರದ ಪುರಾತತ್ವ ಇಲಾಖೆಯು ಸನ್ನತಿಗೆ ಹೊಂದಿಕೊಂಡಿರುವ ಕನಗನಹಳ್ಳಿಯಲ್ಲಿ ಉತ್ಖನನ ಕಾರ್ಯಕೈಗೊಂಡು ಮಹಾಸ್ತೂಪವನ್ನು ಪತ್ತೆಹಚ್ಚಿರುವುದು ವಿಶೇಷವಾಗಿದೆ. ಮೌರ್ಯ ಚಕ್ರವರ್ತಿ ಅಶೋಕನಿಗೆ ಸಂಬಂಧಿಸಿದ ಹರದಾಳಪುರ ಬೃಹತ್ ಬಂಡೆ ಶಾಸನದ ೧೩ ಮತ್ತು ೧೪ನೆಯ ವಿಧಿಗಳು ಮತ್ತು ಕಳಿಂಗದ ಶಾಸನದ ಪ್ರತ್ಯೇಕ ಪ್ರತಿಗಳು ಕಿರುಬಂಡೆ ಶಾಸನದಲ್ಲಿ ಲಭ್ಯವಾಗಿವೆ. ಕಳಿಂಗದ ವಿಷಯವನ್ನು ಉಲ್ಲೇಖಿಸುವ ಈ ಪ್ರದೇಶದಲ್ಲಿ ಮಾತ್ರ ಲಭ್ಯವಾಗಿವೆ. ಈ ಎಲ್ಲಾ ಶೋಧನೆಗಳು ಜಿಲ್ಲೆಯಲ್ಲಿ ಆದಿ ಶಿಲಾಯುಗದಿಂದ ಹಿಡಿದು ಮೌರ್ಯ, ಶಾತವಾಹನರ ಕಾಲದವರೆಗಿನ ಸಂಸ್ಕೃತಿ ಮತ್ತು ಪರಂಪರೆಯನ್ನು ಕಲಬುರಗಿ ಜಿಲ್ಲೆ ಹೊಂದಿರುವುದನ್ನು ಸ್ಪಷ್ಟಪಡಿಸುತ್ತದೆ.

ಸನ್ನತಿಯ ಸ್ತೂಪ ರಚನೆಗೆ ಸ್ಥಳೀಯವಾಗಿ ಲಭ್ಯವಾಗುವ ಶಹಾಬಾದ ಕಲ್ಲುಗಳನ್ನು (ಫರ್ಸಿ) ಬಳಸಲಾಗಿದೆ. ಇದೇ ಕಲ್ಲಿನಲ್ಲಿ ಸ್ತೂಪದ ರಚನೆ, ಗೌತಮಬುದ್ಧನ ಮೂರ್ತಿ ಶಿಲ್ಪಗಳು, ಬುದ್ಧನ ಜೀವನಕ್ಕೆ ಸಂಬಂಧಿಸಿದ ದೃಷ್ಟಾಂಶಗಳನ್ನು ಹಾಗೂ ಚಕ್ರವರ್ತಿ ಅಶೋಕ ಹಾಗೂ ಆತನ ಹೆಂಡತಿಯರ ಮೂರ್ತಿ ಶಿಲ್ಪವು ಇಡೀ ಮೌರ್ಯರ ಇತಿಹಾಸದ ಮೇಲೆ ಒಂದು ಹೊಸ ಅಧ್ಯಯನಕ್ಕೆ ಪ್ರೇರಕವಾಗಿದೆ.

ಜಿಲ್ಲೆಯ ಆಂದೋಲ, ರಾಜನಕೋಳೂರು, ಹಗರಟಗಿಗಳಲ್ಲಿ ಮೆಡೋಸ್ ಟ್ಯೈಲರ್ ಅವರು ಕಲೋರಿಗಳನ್ನು ಕುರಿತು ಅಧ್ಯಯನ ಮಾಡಿದರು. ಇದರಿಂದ ಬೃಹತ್ ಶಿಲಾ ಸಂಸ್ಕೃತಿಯ ಕಾಲದ ಶವಸಂಸ್ಕಾರ ಪದ್ಧತಿಯನ್ನು

ಭಾರತದ ಇತರ ಪ್ರಾಚೀನ ನೆಲೆಗಳಲ್ಲಿ ಕಾಣಬಹುದು. ಆದರೆ ಕಲ್ಗೋರಿಗಳಲ್ಲಿ ಬೆಲೆಬಾಳುವ ವಸ್ತುಗಳಿರುತ್ತವೆ ಎಂಬ ತಪ್ಪುಕಲ್ಪನೆಯಲ್ಲಿ



ಅವುಗಳನ್ನು ನಾಶಪಡಿಸಿ, ಅದರ ಕಲ್ಲುಗಳನ್ನು ಬೇರೆ ಬೇರೆ ಕಡೆಗಳಲ್ಲಿ ಹರಡಿಹೋಗಿವೆ ಎಂದು ಟೈಲರ್ ಅವರು ಅಭಿಪ್ರಾಯಪಟ್ಟಿದ್ದಾರೆ. ಕೆಲವು ಗೋರಿಗಳಲ್ಲಿ ಕಬ್ಬಿಣದ ಹಾಗೂ ಮಣ್ಣಿನ ಉಪಕರಣಗಳನ್ನು ಇಟ್ಟಿರುವುದು ವಿಶೇಷವಾಗಿದೆ.

**ಜಿಲ್ಲೆಯ ಪೌರಾಣಿಕ ಹಿನ್ನೆಲೆ :**

ಪ್ರಸ್ತುತ ಲೇಖನವು ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ಕೆಲವೊಂದು ಪ್ರದೇಶಗಳ ಐತಿಹಾಸಿಕ ಪರಂಪರೆಯನ್ನು ಒಳಗೊಂಡಿರುತ್ತದೆ. ಕಾರಣ ಕ್ರಿಶ. ೨೦೦೯ರವರೆಗೆ ಯಾದಗಿರಿ ಜಿಲ್ಲೆಯ ಶಹಾಪೂರ, ಶೋರಾಪುರ ತಾಲೂಕುಗಳು ಕಲಬುರಗಿ ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಿದ್ದವು. ಐತಿಹಾಸಿಕ ಪರಂಪರೆಯು ಭೌಗೋಳಿಕ ಹಿನ್ನೆಲೆಯನ್ನು ಇಟ್ಟುಕೊಂಡು ವಿಭಜಿಸಲು ಸಾಧ್ಯವಿಲ್ಲ. ಆದ್ದರಿಂದ ಈ ಎರಡು ಜಿಲ್ಲೆಗಳ ಐತಿಸಾಹಿಕ ಹಿನ್ನೆಲೆ ಒಂದೇ ನಿಟ್ಟಿನಲ್ಲಿ ಮುಂದುವರೆಯುತ್ತಿರುವ ಹಿನ್ನೆಲೆಯಲ್ಲಿ ನನ್ನ ಲೇಖನದಲ್ಲಿ ಕೆಲವೊಮ್ಮೆ ಎರಡು ಜಿಲ್ಲೆಯ ಪರಿಸರದ ಸ್ಥಳಗಳ ವಿವರಣೆಯು ಒಳಗೊಂಡಿದೆ.

ಕಲಬುರಗಿ ಜಿಲ್ಲೆಯು ಹಲವು ಪೌರಾಣಿಕ ಹಿನ್ನೆಲೆಯ ಧಾರ್ಮಿಕ ಪವಿತ್ರ ಸ್ಥಳಗಳನ್ನು ಹೊಂದಿದೆ. ಅವುಗಳಲ್ಲಿ ಕೃಷ್ಣಾ-ಭೀಮೆಯರ ಮಧ್ಯದಲ್ಲಿ ಬರುವ ಪ್ರದೇಶವನ್ನು “ಸಗರನಾಡು” ಎಂದು ಕರೆಯಲಾಗುತ್ತದೆ. ಮಹಾಬಲಶಾಲಿಯೂ ಪುರಾಣ ಪ್ರಸಿದ್ಧನೂ ಆದ ಸಗರ ಚಕ್ರವರ್ತಿಯು ಈ ಭಾಗವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಅಧಿಕಾರ ಮಾಡಿದನೆಂದು ಪೌರಾಣಿಕ ಕಥೆಯಲ್ಲಿ ಬರುತ್ತದೆ. (ಇಕ್ಷಾಕು ವಂಶ). ಪೌರಾಣಿಕ ಹಿನ್ನೆಲೆಯ ಮತ್ತೊಂದು ಸ್ಥಳವೆಂದರೆ 'ಛಾಯಾಭಗವತಿ'. ಇದು ಸೂರ್ಯ ದೇವನಿಗೆ ಸಂಬಂಧಿಸಿದ ಕ್ಷೇತ್ರ, ಸೂರ್ಯದೇವನ ಮೊದಲನೆಯ ಹೆಂಡತಿ ಸಂಯಜ್ಞಳು ನಿಧನ ಹೊಂದಿದಾಗ ಅವಳಷ್ಟೇ ಸುಂದರವಾದ 'ಛಾಯಾದೇವಿಯು” ಸೂರ್ಯನನ್ನು ಸೇರಿಕೊಂಡಳು. ಕೆಲಕಾಲನಂತರ ನಿಜವನ್ನು ಅರಿತ ಸೂರ್ಯದೇವನು ತನ್ನ ಮೊದಲನೆಯ ಹೆಂಡತಿಯನ್ನು ಇದೇ ಸ್ಥಳದಲ್ಲಿ ಕೂಡಿಕೊಂಡನೆಂಬ ಪ್ರತೀತವಿದೆ. ಭೀಮಾನದಿಯ ಕುರಿತು ಅಮರಸಿಂಹನ 'ಅಮರಕೋಶ', ಮಂಗಳಾಷ್ಟಕ ಶ್ಲೋಕ, ಮತ್ಸ, ಬ್ರಹ್ಮ ಮತ್ತು ವಾಮನ ಪುರಾಣಗಳಲ್ಲಿ ಹಾಗೂ ಮಹಾಭಾರತದಲ್ಲಿ ಭೀಮಾ ನದಿಯನ್ನು “ಮಹಾನದಿ” ಎಂದು ಉಲ್ಲೇಖಿಸಲಾಗಿದೆ. ಭೀಮಶಂಕರವು ಭೀಮಾನದಿಯ ಉಗಮಕ್ಕೆ

ಕಾರಣವಾಗಿದೆ. ಶಿವನು ತ್ರಿಪುರಾಸುರ ರಾಕ್ಷಸನನ್ನು ಹತ್ಯೆಗೈದು ವಿಶ್ರಾಂತಿಗಾಗಿ ವಿಂದ್ಯಾ ಪರ್ವತಾವಳಿಯಲ್ಲಿ ಬಂದು ತಪಸ್ಸಿಗೆ ಕುಳಿತಾಗ, ಅದೇ ಕಾಲಕ್ಕೆ ಅಯೋಧ್ಯೆಯ ಅರಸ ಭೀಮಕನು ತಾನು ಕೈಗೊಂಡ ಯಜ್ಞವನ್ನು ಶಾಸ್ರೋಕ್ತವಾಗಿ ಆಚರಣೆ ಮಾಡದ ಇಬ್ಬರು ಋಷಿಗಳನ್ನು ಅದೇ ಅಗ್ನಕುಂಡದಲ್ಲಿ ಹಾಕಿ ಹತ್ಯೆಮಾಡಿದ. ಅದರ ಪಾಪ ಪರಿಹಾರಕ್ಕಾಗಿ ರಾಜನೂ ಸಹ ವಿಂದ್ಯಾ ಪರ್ವತಾವಳಿಯಲ್ಲಿ ತಪಸ್ಸನ್ನು ಆಚರಿಸುತ್ತಿರುವಾಗ ಭೀಮಕನ ತಪಸ್ಸಿಗೆ ಮೆಚ್ಚಿದ ಶಿವನು ವರ ಕೇಳಲು ಹೇಳಿದ, ಆಗ ಶಿವನ ಹಣೆಯ ಮೇಲೆ ನೀರು ಬೆವರುತ್ತಿತ್ತು. ಇದನ್ನು ಕಂಡ ರಾಜನು ಆ ಬೆವರು ಹನಿಯೇ ಮಹಾನದಿಯಾಗಿ ಹರಿಯಲಿ ಎಂದು ಬೇಡಿಕೊಂಡನು. ಭೀಮಕನ ಪ್ರಾರ್ಥನೆಯಿಂದ ಉಗಮಗೊಂಡ ನದಿಯೆ 'ಭೀಮರತಿ' ಅಥವಾ ಭೀಮಾನದಿ' ಎಂಬ ಐತಿಹ್ಯವಿದೆ. ಸನ್ನತಿಯು ಸಹ ಒಂದು ಪೌರಾಣಿಕ ಮತ್ತು ಐತಿಹಾಸಿಕ ಸ್ಥಳವಾಗಿದೆ. ರಾಮ-ಸೀತೆಯರು ಇಲ್ಲಿ ಮುನಿನಾರಾಯಣ ಹಾಗೂ ಚಂದ್ರಲಾಂಬೆಯಾಗಿ ಜನ್ಮತಾಳಿದರೆಂಬ ಪ್ರತೀತವಿದೆ.



ಘತ್ತರಗಿ (ಅಫಜಲಪೂರ) ಭಾಗಮ್ಮ (ಭಾಗ್ಯವಂತಿ) ದೇವಿಯು ಪೌರಾಣಿಕ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯದ ಕುಲದೇವತೆಯಾಗಿದ್ದು, ರಾಜ್ಯ ಪತನದ ನಂತರ ಭುವನೇಶ್ವರಿ ತಾಯಿಯ “ನಾಗ” ಅಥವಾ ಮರದ ರೂಪದಲ್ಲಿ ಭೀಮನದಿಯ ಮೂಲಕ ಬಂದು ಪ್ರಸ್ತುತ ಘತ್ತರಗಿ ಸ್ಥಳದಲ್ಲಿ ನಾಗ ಮತ್ತು ಮರದ ರೂಪದಲ್ಲಿ ಪ್ರತ್ಯಕ್ಷಳಾಗಿ ಭಕ್ತರಿಗೆ ಬೇಡಿದ್ದನ್ನು ದಯಪಾಲಿಸಿದ ಭಕ್ತರ ಪಾಲಿನ ಆರಾಧ್ಯ ದೇವತೆಯಾಗಿ ಉಳಿದುಕೊಂಡಿದ್ದಾಳೆ. ದೇವಲ ಗಾಣಗಾಪುರವು ದತ್ತಾತ್ರೇಯನ ಪಾದುಕೆಗಳನ್ನು ಹೊಂದಿರುವ ಸ್ಥಳ, ಆಳಂದ ತಾಲೂಕಿನ ಕಡಗಂಚಿ ಸಮೀಪದ ನರೋಣಾ ಒಂದು ಪೌರಾಣಿಕ ಹಿನ್ನೆಲೆಯ ಸ್ಥಳವಾಗಿದೆ. ರಾವಣನನ್ನು ಸಂಹರಿಸಿದ ರಾಮನು ಅಯೋಧ್ಯೆಗೆ ಹಿಂದಿರುಗುವಾಗ ಮಾರ್ಗಮದ್ಯದಲ್ಲಿ ನರೋಣಕ್ಕೆ ಬಂದು ಇಲ್ಲಿ ಕಾರ್ತಿಕೇಯ ಲಿಂಗವನ್ನು ಸ್ಥಾಪಿಸಿ ಪೂಜೆಗೈದು ಹತ್ಯೆಯ ಪಾಪವನ್ನು ಕಳೆದುಕೊಂಡದ್ದರಿಂದ ಇದನ್ನು “ನ” “ರಾವಣ” ಎಂದು ಕರೆಯಲಾಗುತ್ತದೆ. ಅಲ್ಲದೆ ಅಗಸ್ತ್ಯ ಮಹರ್ಷಿಗಳು ತಂಗಿದ ಸ್ಥಳ ಇದೆ ಎಂದು ಐತಿಹ್ಯವಿದೆ. ಹೀಗೆ ಜಿಲ್ಲೆಯ ಹಲವು ಪ್ರದೇಶಗಳು ಪೌರಾಣಿಕ ಹಿನ್ನೆಲೆಯನ್ನು ಹೊಂದಿರುವುದು ಕಂಡುಬರುತ್ತದೆ.

**ಜಿಲ್ಲೆಯ ಐತಿಹಾಸಿಕ ಪರಂಪರೆ :**

ಕ್ರಿ.ಶ. ೧೯೬೦ ಕಲಬುರಗಿ ಜಿಲ್ಲೆಯ ಸಂಶೋಧನೆಗೆ ಮಹತ್ವದ ವರ್ಷವಾಗಿದೆ. ಜಿಲ್ಲೆಯಲ್ಲಿ ಶಾತವಾಹನರ ಕಾಲದ ಬೌದ್ಧಸ್ತೂಪ, ಶಾಸನ ಹಾಗೂ ಶಿಲ್ಪಗಳು ಲಭ್ಯವಾಗಿವೆ. ಸನ್ನತಿಯಲ್ಲಿ ಅಶೋಕ ಚಕ್ರವರ್ತಿ ಬೃಹತ್ ಬಂಡೆ ಶಾಸನಗಳನ್ನು ಪತ್ತೆಹಚ್ಚಲಾಗಿ ಅದರಿಂದ ಕಲಬುರಗಿ ಜಿಲ್ಲೆಯ ಮೌರ್ಯರ ಆಳ್ವಿಕೆಗೆ ಒಳಪಟ್ಟಿರುವುದು ಬೆಳಕಿಗೆ

ಬಂದಿತು. ಮೌರ್ಯರ ಕಾಲಕ್ಕೆ ಸನ್ನತಿ ದೊಡ್ಡನಗರವಾಗಿದ್ದು ಶಾತವಾಹನರ ಕಾಲಕ್ಕೆ ಇನ್ನಷ್ಟು ಅಭಿವೃದ್ಧಿ ಹೊಂದಿತು. ಚಂದ್ರವಳ್ಳಿ, ಬನವಾಸಿ, ವಡಗಾಂವ, ಮಾಧವಪುರ, ತಿ. ನರಸೀಪುರ ಮುಂತಾದ ನೆಲೆಗಳಲ್ಲಿ ಸಿಕ್ಕಂತಹ ಅವಶೇಷಗಳು ಸನ್ನತಿಯಲ್ಲಿ ಲಭ್ಯವಾಗಿವೆ. ಇದು ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಪ್ರದೇಶವಾಗಿದ್ದು, ನಗರ ಚಟುವಟಿಕೆಗಳು ಎಲ್ಲವೂ ಇಲ್ಲಿ ನಡೆಯುತ್ತಿದ್ದವು. ಆದ್ದರಿಂದಲೇ ಈ ರಕ್ಷಣೆಗಾಗಿ ಇಟ್ಟಿಗೆಗಳಿಂದ ಕೋಟೆಯನ್ನು ನಿರ್ಮಿಸಲಾಯಿತು. ಕೋಟೆಯ ಅವಶೇಷಗಳನ್ನು ಇಂದಿಗೂ ಸನ್ನತಿಯಲ್ಲಿ ನೋಡಬಹುದಾಗಿದೆ.

ಅಶೋಕನು ತನ್ನ ಸಾಮ್ರಾಜ್ಯವನ್ನು ನಾಲ್ಕು ಪ್ರಾಂತಗಳಲ್ಲಿ ವಿಂಗಡಿಸಿದನು. ಅದರಲ್ಲಿ ಪಾಟಲೀಪುತ್ರ, ಮಗದ, ಉಜ್ಜಯಿನಿ ಮತ್ತು ಸುವರ್ಣಗಿರಿ. ಈ ನಾಲ್ಕನೆಯ ಪ್ರಾಂತ ಸುವರ್ಣಗಿರಿಯ ಇಂದಿನ ಚಿತ್ತಾಪುರ ತಾಲೂಕಿನ ಸನ್ನತಿ ಎಂದು ಇತಿಹಾಸಕಾರರ ಅಭಿಪ್ರಾಯವಾಗಿದೆ. ಪ್ರಾಚೀನ ಸುವರ್ಣಗಿರಿಯ ಎಲ್ಲಾ ಭೌಗೋಲಿಕ ಲಕ್ಷಣಗಳನ್ನು ನಾವು ಪ್ರಸ್ತುತ ಸನ್ನತಿಯಲ್ಲಿ ನೋಡಬಹುದಾಗಿದೆ.

ಸನ್ನತಿ ಪ್ರದೇಶದಲ್ಲಿ ನಡೆದ ಉತ್ಕನನದಲ್ಲಿ ಬೌದ್ಧ ಸ್ತೂಪದ ಅವಶೇಷಗಳು ಲಭ್ಯವಾಗಿವೆ. ಅದರಲ್ಲಿ ಕನಗನಹಳ್ಳಿಯ ಸ್ತೂಪದಲ್ಲಿ ಸುಮಾರು ೮೫ಕ್ಕೂ ಹೆಚ್ಚಿನ ಸುಣ್ಣದ ಕಲ್ಲಿನಲ್ಲಿ ಕೆತ್ತಿರುವ ಫಲಕಗಳು ದೊರೆತಿವೆ. ಅವುಗಳು ಅಶೋಕ ಹಾಗೂ ಬುದ್ಧನನ್ನು ಕುರಿತು ರಚಿಸಲಾಗಿದೆ. ಭಾರತದಲ್ಲಿಯೆ ಮೊಟ್ಟಮೊದಲ ಬಾರಿಗೆ ಅಶೋಕ ಮತ್ತು ಆತನ ರಾಣಿಯರ



ಚಿತ್ರವಿರುವ ಫಲಕ ಕಲಬುರಗಿ ಜಿಲ್ಲೆಯ ಸನ್ನತಿಯ ಕನಗನಹಳ್ಳಿಯಲ್ಲಿ ದೊರೆತಿರುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ. ಇದು ದೇಶ ವಿದೇಶಿಯ ಸಂಶೋಧಕರಿಗೆ ಮಹತ್ವದ ಸಂಗತಿಯಾಗಿದೆ. ಅಲ್ಲದೆ ಗೌತಮಬುದ್ಧನ ವಿವಿಧ ಭಂಗಿಯ ಮೂರ್ತಿ ಶಿಲ್ಪಗಳು ಇಲ್ಲಿ ಲಭ್ಯವಾಗಿವೆ.

ಮೌರ್ಯರ ಅವನತಿಯ ನಂತರ ಅಧಿಕಾರಕ್ಕೆ ಬಂದ ಶಾತವಾಹನರು ಮೌರ್ಯರ ಪರಂಪರೆಯನ್ನು ಮುಂದುವರೆಸಿಕೊಂಡು ಹೋದರು. ಜಿಲ್ಲೆಯ ಸನ್ನತಿ ಪ್ರದೇಶದಲ್ಲಿ ಶಾತವಾಹನರಿಗೆ ಸಂಬಂಧಿಸಿದ ಹಲವು ಅವಶೇಷಗಳು ಲಭ್ಯವಾಗಿವೆ. ಹಾಲನ ಗಥಾಸಪ್ತಸತಿ' ಗ್ರಂಥದಲ್ಲಿ ಬರುವ ಜನಜೀವನ ಶೈಲಿಯ ವರ್ಣನೆಯು ಸನ್ನತಿಯಲ್ಲಿ ದೊರೆತ ಅವಶೇಷಗಳಿಗೆ ಹೋಲಿಕೆ ಇದೆ ಇಂದೊಂದು ನಗರ ಜೀವನಶೈಲಿಯ ಪ್ರದೇಶವಾಗಿತ್ತೆಂದು ಕಂಡುಬರುತ್ತದೆ. ಕದಂಬರು ಮತ್ತು ಬದಾಮಿ ಚಾಲುಕ್ಯರ ಕಾಲದ ಕಲಬುರಗಿ ಜಿಲ್ಲೆಯ ಕುರಿತು ಯಾವುದೇ ಮಾಹಿತಿಗಳು ಇದುವರೆಗೆ ಲಭ್ಯವಾಗಿಲ್ಲ.

ಬದಾಮಿ ಚಾಲುಕ್ಯರ ನಂತರ ಅಧಿಕಾರಕ್ಕೆ ಬಂದ ರಾಷ್ಟ್ರಕೂಟರು ಕ್ರಿ.ಶ. ೮ನೇ ಶತಮಾನದಿಂದ ೧೦ನೆಯ ಶತಮಾನದವರೆಗೆ ಅಧಿಕಾರ ಮಾಡಿದ ಇವರು ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ಪ್ರಮುಖ ಸ್ಥಾನವನ್ನು

ಹೊಂದಿದ್ದರು. ರಾಷ್ಟ್ರಕೂಟರ ಕುರಿತು ಇತಿಹಾಸಕಾರರಲ್ಲಿ ಒಮ್ಮತದ ಅಭಿಪ್ರಾಯಗಳಿಲ್ಲ. ಅವರಲ್ಲಿ ಮಾನ್ಯಖೇಡ ರಾಷ್ಟ್ರಕೂಟರು ಒಬ್ಬರಾಗಿದ್ದಾರೆ.

ಕನ್ನಡದ ಅತ್ಯಂತ ಪ್ರಾಚೀನ ಕೃತಿಯಾದ ಕವಿರಾಜಮಾರ್ಗವು ರಾಷ್ಟ್ರಕೂಟರ ಕಾಲದಲ್ಲಿ ರಚನೆಗೊಂಡಿರುವುದರಿಂದ ರಾಷ್ಟ್ರಕೂಟರು ಕನ್ನಡನಾಡಿನವರೆಂದು ಒಪ್ಪಿಕೊಳ್ಳಲಾಗಿದೆ. ಕಲಬುರಗಿಯಿಂದ ಅನ್ನೇಯ ದಿಕ್ಕಿನಲ್ಲಿ ೪೦ ಕಿ.ಮೀ. ದೂರದಲ್ಲಿರುವ

ಭೀಮಾನದಿಯ ಉಪನದಿ ಕಾಗಿಣಾ ನದಿಯ ಎಡದಂಡೆಯ ಮೇಲಿರುವ ಮಳಖೇಡ (ಮಾನ್ಯಖೇಟ) ಅವರ ರಾಜಧಾನಿಯ ಪಟ್ಟಣವಾಗಿದೆ. ಈ ಮನೆತನದ ಶ್ರೇಷ್ಠ ಅರಸರಾದ ಕೃಷ್ಣ ಮೂರನೆಯ ಗೋವಿಂದ ಹಾಗೂ ಅಮೋಘವರ್ಷ ನೃಪತುಂಗರ ಕಾಲದಲ್ಲಿ ಕಲಬುರಗಿಜಿಲ್ಲೆಯ ಮಾನ್ಯಖೇಟದ ಕೀರ್ತಿ ದೇಶ ವಿದೇಶಗಳಲ್ಲಿ ಹಬ್ಬಿತು. ಇವರ ಕಾಲದಲ್ಲಿ ರಾಜಧಾನಿಗೆ ಭೇಟಿ ನೀಡಿದ ಸುಲೆಮಾನನರು ಜಗತ್ತಿನ ನಾಲ್ಕು ದೊಡ್ಡ ರಾಷ್ಟ್ರಗಳಲ್ಲಿ ಇದು ಒಂದಾಗಿದೆ ಎಂದು ತನ್ನ ಪ್ರವಾಸಿ ಕಥನದಲ್ಲಿ ಉಲ್ಲೇಖಿಸಿದ್ದಾನೆ. ಇಲ್ಲಿಯ ಕಲೆ. ವಾಸ್ತುಶಿಲ್ಪ, ಸಾಹಿತ್ಯ ಅಪಾರ ಪ್ರಗತಿಯನ್ನು ಹೊಂದಿತು. ಕವಿರಾಜಮಾರ್ಗ ಗ್ರಂಥ ಶ್ರೀವಿಜಯನು ಅಮೋಘವರ್ಷನ ಕಾಲದ ನಗರಗಳ ಸೌಂದರ್ಯ, ಪಟ್ಟಣಗಳ ರಚನೆ ಕುರಿತು ದೊರೆಯು ಕೈಗೊಂಡ ಕ್ರಮಗಳನ್ನು ಕುರಿತು ತನ್ನ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಪ್ರಸ್ತುತ ಮಳಖೇಡ ಪ್ರದೇಶದಲ್ಲಿ ಶಿಥಿಲಗೊಂಡ ಹಾಗೂ ಭಗ್ನಾವಶೇಷ ರೂಪದಲ್ಲಿ ಹಲವು ಅವಶೇಷಗಳು ಕಂಡುಬರುತ್ತವೆ. ಇಲ್ಲಿಯ ಕೋಟೆಯು ಚೋಳರ ದಾಳಿಗಳಿಂದ, ಮುಸ್ಲಿಂರ ದಾಳಿಗಳಿಂದ ಅವನತಿ ಹೊಂದಿವೆ. ಪ್ರಸ್ತುತ ಕೋಟೆಯು ಹಲವು ಸಲ ಪುನರ್ ನಿರ್ಮಾಣಗೊಂಡಿದೆ. ಇಲ್ಲಿಯ ದೇವಾಲಯ, ಕೋಟೆ, ಮಸೀದಿ, ಬಸೀದಿ, ಕಾವಲು ಗೋಪುರ ಹಾಗೂ ಇತರ ಕಟ್ಟಡಗಳನ್ನು ವೀಕ್ಷಿಸಿದಾಗ ಅವುಗಳು ಪುನ ನಿರ್ಮಿಸಿದಂತೆ ಕಂಡುಬರುತ್ತವೆ. ಕಲಬುರಗಿಯಲ್ಲಿ ಅಧಿಕಾರ ಮಾಡಿರುವ ಬಹಮನಿ

ಸುಲ್ತಾನರ ಒಂದನೇಯ ಮಹಮ್ಮದಶಹಾ (೧೩೫೮-೧೩೭೫)ನು ಈ ಕೋಟೆಯ ಮೇಲೆ ದಾಳಿ ಮಾಡಿ ಅದನ್ನು ಪುನರ್ ನಿರ್ಮಿಸಿದನು. ಅದರಲ್ಲಿ ಮಸೀದಿ, ಕಾಳಿ ಮಸೀದಿ, ಉಪಲಿಬುರ್ಜ, ತೋಪುಗಳು ಇಲ್ಲಿ ಕಂಡುಬರುತ್ತವೆ.

ಬದಾಮಿಯ ಚಾಲುಕ್ಯರ ಮೂಲವನ್ನು ಹೊಂದಿರುವ ಕಲ್ಯಾಣಿ ಚಾಲುಕ್ಯರು ಬೀದರ ಜಿಲ್ಲೆಯ ಬಸವಕಲ್ಯಾಣದಿಂದ ಅಧಿಕಾರಿ ಮಾಡಿದರು. ಅವರ ಪ್ರಾರಂಭಿಕ ಅರಸರು ಯಾದಗಿರಿಯಿಂದ ತಮ್ಮ ಅಧಿಕಾರವನ್ನು ಆರಂಭಿಸಿ, ನಂತರ ಬಸವಕಲ್ಯಾಣಕ್ಕೆ ಹೋದರು. ಅವರ ಆಳ್ವಿಕೆಯನ್ನು ಕುರಿತು ಜಿಲ್ಲೆಯ ಹಲವು ಭಾಗಗಳಲ್ಲಿ ಅವರು ದೇವಾಲಯಗಳನ್ನು ನಿರ್ಮಿಸಿದರು. ಅವುಗಳ ಸಂಕ್ಷಿಪ್ತ ವಿವರಣೆ ಇಲ್ಲಿದೆ.

೧೮ನೇಯ ಶತಮಾನದಲ್ಲಿ ಕಲಬುರಗಿಯು ವೀರಶೈವ ಧರ್ಮದ ಕೇಂದ್ರವಾಗಿದ್ದು, ಇಲ್ಲಿಯ ಶರಣಬಸವೇಶ್ವರ ದೇವಸ್ಥಾನ (ಸಮಾಧಿ)ವು ಅಪಾರ ಸಂಖ್ಯೆಯ ಭಕ್ತರನ್ನು ಹೊಂದಿದೆ. ಜೇವರ್ಗಿ ತಾಲೂಕಿನ ಅರಳಗುಂಡಗಿಯಲ್ಲಿ ಕ್ರಿಶ. ೧೭೪೬ರಲ್ಲಿ ಜನಿಸಿದ ಶರಣಬಸವೇಶ್ವರರು ಲಿಂಗದೀಕ್ಷೆಯನ್ನು ಪಡೆದು ವೀರಶೈವ ಧರ್ಮ ಸುಧಾರಣೆಯಲ್ಲಿ ತೊಡಗಿದರು. ಸಂಸಾರ ಜೀವನದಲ್ಲಿದ್ದು, ದಾಸೋಹಕಾರ್ಯ ಮಾಡುತ್ತಾ ಸಕಲ ಜೀವಿಗಳ ಲೇಸನ್ನು ಬಯಸಿ, ಜನಮನಗೆದ್ದು ಮಹಾನ್ ಪವಾಡ ಪುರುಷರಾದರು. ಅರಳಗುಂಡಗಿಯಿಂದ ಕಲ್ಯಾಣಕ್ಕೆ ಹೊರಟ ಶರಣರು ಕಲಬುರಗಿಯ ಅದಿ ದೊಡ್ಡಪ್ಪ ಶರಣರ ಭಕ್ತಿಗೆ ಮೆಚ್ಚಿ ಕಲ್ಯಾಣಕ್ಕೆ ಹೋಗುವುದನ್ನು ಬಿಟ್ಟು ಕಲಬುರಗಿಯನ್ನೇ ಕಲ್ಯಾಣವನ್ನಾಗಿ ಮಾಡಿದ ಶರಣರು ಯುಗಪುರುಷರಾದರು. ಕ್ರಿ.ಶ.೧೮೨೨ರಲ್ಲಿ ಲಿಂಗೈಕ್ಯರಾದ ಶರಣಬಸವೇಶ್ವರರನ್ನು ದೊಡ್ಡಪ್ಪಗೌಡರು ತಮ್ಮ ಮನೆಯ ಮುಂಭಾಗದಲ್ಲಿ ಸಮಾಧಿ ಮಾಡಿದರು. ಅದೇ ಇಂದಿನ ಶರಣಬಸವೇಶ್ವರ ದೇವಸ್ಥಾನ. ಆದಿದೊಡ್ಡಪ್ಪ ಶರಣರಿಂದ ಇಂದಿನ ೮ನೆಯ ಪೀಠಾಧಿಪತಿಗಳಾದ ಪೂಜ್ಯ ಡಾ. ಶರಣಬಸಪ್ಪ ಅಪ್ಪ ಅವರವರೆಗೆ ಗುರು, ಲಿಂಗ, ಜಂಗಮ ದಾಸೋಹ ಕಾರ್ಯವನ್ನು ನಿರಂತರವಾಗಿ ನಡೆದುಕೊಂಡು ಬಂದಿದೆ. ಅಲ್ಲದೆ ಶರಣರ ಮೂಲ ಸಮಾಧಿಯನ್ನು ವಿಸ್ತಾರಗೊಳಿಸುತ್ತಾ ಈ ಹಂತವನ್ನು ತಲುಪಿದೆ. ಪ್ರಸ್ತುತ ಪೀಠಾಧಿಪತಿಗಳಾದ ಪೂಜ್ಯ ಡಾ. ಶರಣಬಸಪ್ಪಾ ಅಪ್ಪಾ ಅವರು ಈ ಕಟ್ಟಡವನ್ನು ಬಂಗಾರದ ದೇವಾಲಯ (Golden Temple) ವನ್ನಾಗಿ ಮಾಡುವ ದೊಡ್ಡ ಯೋಜನೆಯನ್ನು ಹಾಕಿಕೊಂಡು ಅದರ ಕಾರ್ಯ ಆರಂಭಗೊಂಡಿದೆ. ಮುಂದಿನ ದಿನಗಳಲ್ಲಿ ಈ ಕಾರ್ಯ ಪೂರ್ಣಗೊಂಡ ನಂತರ ಇದು ಕಲಬುರಗಿ ನಗರದಲ್ಲಿ ಹಿಂದೂ-ಮುಸ್ಲಿಂರ ಸಾಂಸ್ಕೃತಿಕ ಮತ್ತು ಧಾರ್ಮಿಕ ಸಮ್ಮಿಲನ ಕೇಂದ್ರವಾಗಿದೆ. ಅದೇ ಪರಂಪರೆಯು ಇಂದಿನ ದಿನಗಳಲ್ಲಿ ಕಾಣಬಹುದಾಗಿದೆ.

**ಕಲಬುರಗಿ ತಾಲೂಕು (ಕ.ಚಾಲುಕ್ಯರ ೩೩ ದೇವಾಲಯಗಳು) :**

ಕವಲಗಿ (ಬಿ)-ನವಕೋಟಿ ನಾರಾಯಣ, ಕಲ್ಲಬೇನೂರು-ಈಶ್ವರ ದೇವಾಲಯ, ಕಿರಣಗಿ -ತ್ರಿಲಿಂಗೇಶ್ವರ, ಮಲ್ಲಿಕಾರ್ಜುನ. ಕಲಬುರಗಿ ನಗರ-ಸ್ವಯಂಭು (ಕೋಟೆಯ) ಮಲ್ಲಿಕಾರ್ಜುನ, ಜೋಗುರ-ಸೋಮೇಶ್ವರ,

ಬೆಳಗುಂಪಾ- ಬಸವೇಶ್ವರ (ತ್ರಿ) ಶಂಕರಲಿಂಗ, ಹರಸೂರು-(ಬಸೀದಿ) ಭೋಗಲಿಂಗೇಶ್ವರ ಗುಡಿ, ಹಿರೇಕವಲಗಿ- ಸೋಮಲಿಂಗೇಶ್ವರ, ಹೆರೂರ (ಬಿ) -ರಾಮಲಿಂಗೇಶ್ವರ, ಸೋಮಲಿಂಗೇಶ್ವರ,



**ಕಲಬುರಗಿ ಜಿಲ್ಲೆಯ ಕೋಟೆಗಳ ಪರಂಪರೆ :**

ಕಲಬುರಗಿ ಜಿಲ್ಲೆಯು ಹಲವು ಪ್ರಕಾರಗಳ ಕೋಟೆಗಳನ್ನು ಒಳಗೊಂಡಿದೆ. ಇಲ್ಲಿ ಜಲದುರ್ಗ, ಗಿರಿದುರ್ಗ, ವನದುರ್ಗ, ಸಮತಟ ದುರ್ಗಗಳಿವೆ. ಶಾತವಾಹನರ ಕಾಲದಿಂದ ಸುರಪುರ ನಾಯಕರವರೆಗೆ ಅಧಿಕಾರ ಮಾಡಿರುವ ಹಲವು ರಾಜಕೀಯ ಮನೆತನಗಳು, ಸಾಮಂತ ನಾಯಕರು ತಮ್ಮ ಆಡಳಿತದ ಕೇಂದ್ರಗಳನ್ನು ರಕ್ಷಿಸಿಕೊಳ್ಳಲು ಭದ್ರವಾದ ಕೋಟೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಅವುಗಳಲ್ಲಿ ಕೆಲವು ಪ್ರಮುಖ ಕೋಟೆಗಳೆಂದರೆ, ಸನ್ನತಿ, ಸಗರ, ಗೊಟಂಗೊಟ್ಟಾ, ಮಳಖೇಡ, ಅಲ್ಲೂರ (ಬಿ), ಸೇಡಂ, ಅಡಕಿ, ಮುಧೋಳ, ನಾಗಾವಿ, ದಂಡೋತಿ, ಅಳ್ಳೊಳ್ಳಿ, ಕೊಲ್ಲೂರು, ಗುಲಬರ್ಗಾ, ಫಿರೋಜಾಬಾದ. ಫರಹತಾಬಾದ, ಹೊಳಕುಂದಾ, ಇಜೇರಿ, ಚಿನಮಳ್ಳಿ ಲಾಡ್ಲಾಪುರ, ಇಟಕಲ್, ಚಿಂಚೋಳಿ, ಶಿಲಾರಕೋಟ, ಗಾಜರಕೋಟ, ಮದನಾ, ಕೋಡ್ಲಾ, ಬಂದರವಾಡ, ಮಾಶ್ಯಾಳ ಮುಂತಾದವುಗಳು ಇಂದಿನ ಕಲಬುರಗಿ ಜಿಲ್ಲೆಗೆ ಒಳಪಟ್ಟರೆ, ಯಾದಗಿರಿ ಜಿಲ್ಲೆಯಲ್ಲಿ ಶಹಾಪುರ, ಯಾದಗಿರಿ, ಸುರಪುರ, ವಾಗಣಗೇರಾ, ವನದುರ್ಗ, ರಾಯನಪಾಳ್ಯ ಪ್ರಮುಖವಾಗಿವೆ. ಇನ್ನು ಕೆಲವು ಗ್ರಾಮ ರಕ್ಷಣೆಯ ಕೋಟೆಗಳು ಸಹ ಆರ್ಥಿಕವಾಗಿ ಶ್ರೀಮಂತ ಹೊಂದಿರುವ ಗ್ರಾಮಗಳಲ್ಲಿ ರಚನೆಗೊಂಡಿವೆ. ಎರಡು ಜಿಲ್ಲೆಗಳನ್ನು ಸೇರಿಸಿ ಒಟ್ಟು ಸುಮಾರು ೪೮ ಕೋಟೆಗಳನ್ನು ಗುರುತಿಸಿ ನನ್ನ ಸಂಶೋಧನೆಯ ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಇವುಗಳು ನಮ್ಮ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿಯ ಪ್ರತೀಕವಾಗಿವೆ.

ಕೋಟೆಗಳು ರಾಜಮನೆತನಗಳ ರಕ್ಷಣೆಗಾಗಿ ನಿರ್ಮಾಣಗೊಂಡರೆ ಗ್ರಾಮಗಳ ರಕ್ಷಣೆಗಾಗಿ ಹಲವು ಹುಡೆ (ಗುಹೆಗಳು)ಗಳು ಜಿಲ್ಲೆಯಲ್ಲಿ ೧೮-೧೯ನೇ ಶತಮಾನದಲ್ಲಿ ರಚನೆಗೊಂಡಿವೆ. ಇವುಗಳು ಎತ್ತರವಾದ ಕಟ್ಟಡಗಳಾಗಿದ್ದು, ಮೇಲೆ ಹತ್ತಲು ಒಳಗಡೆ ಮೆಟ್ಟಿಲುಗಳಿವೆ. ಅಲ್ಲದೆ ಆರಾಧ್ಯ ದೇವರ ಮೂರ್ತಿ ಶಿಲ್ಪ ಇರುತ್ತದೆ. ಮೇಲೆ ಹತ್ತಿದಾಗ ಸುಮಾರು ಮೈಲುಗಳವರೆಗೆ ವೀಕ್ಷಿಸಬಹುದು. ಇವುಗಳು ಆಕ್ರಮಣಕಾರರ ಕುರಿತು ಸಂದೇಶ ರವಾನೆಮಾಡುವ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ಇದರ ಕಟ್ಟಿಗೆಗೆ ಬೆಂಕಿಹಚ್ಚಿ ಹೊಗೆ ಎತ್ತರಕ್ಕೆ ಹೋಗುವಂತೆ ಕಾರ್ಯಕೈಗೊಳ್ಳಲಾಗುತ್ತಿತ್ತು. ಇದು ಮುಂದಿನ ಗ್ರಾಮದಲ್ಲಿಯ ಹುಡದ ಮೇಲಿರುವ ಕಾವಲುಗಾರರಿಗೆ ಗೊತ್ತಾದಾಗ ಅವರು ತಮ್ಮ ಗ್ರಾಮದ ರಕ್ಷಣೆಗೆ ಕ್ರಮ ಕೈಗೊಳ್ಳುತ್ತಿದ್ದರು. ಒಂದು ವೇಳೆ ಬೆಂಕಿ ಎತ್ತರಕ್ಕೆ ಹೋಗುವಂತೆ ಕಂಡುಬಂದರೆ ಗ್ರಾಮದಲ್ಲಿ ಲೂಟಿ ನಡೆದಿದೆ ಎಂದು ಸಂಕೇತ. ದೇಸಾಯಿಗಳು, ದೇಶಮುಖರು,

ಪಟೇಲರು, ಪಟವಾರಿಗಳು, ಗ್ರಾಮದ ನಾಯಕರು ತಮ್ಮ ಗ್ರಾಮದ ಸಂಪತ್ತು, ತಮ್ಮ ಸಂಪತ್ತಿನ ರಕ್ಷಣೆಗಾಗಿ ಬಳಸುತ್ತಿದ್ದರು. ಕೆಲವು ಗ್ರಾಮಗಳ ನಾಲ್ಕು ದಿಕ್ಕಿನಲ್ಲಿ ನಾಲ್ಕು ಹುಡೇವುಗಳಿರುತ್ತಿದ್ದವು. ಇಂತಹ ಗ್ರಾಮಗಳು ನಾವು ಜೇವರ್ಗಿ ಮತ್ತು ಸೇಡಂ ತಾಲೂಕುಗಳಲ್ಲಿ ಕಾಣಬಹುದಾಗಿದೆ. ಇದಕ್ಕೆ ಸಂಬಂಧಿಸಿದಂತೆ ಗ್ರಾಮವನ್ನು ಹುಡೇದೂರು. ದೇವರು ಸಹ ಹುಡೇದೇವರು ಎನ್ನುವ ಗ್ರಾಮ ಮತ್ತು ದೇವಾಲಯಗಳಿವೆ. ಇವುಗಳು ಇಂದಿನ ಮೊಬೈಲ್ ತರಂಗಗಳನ್ನು ರವಾನೆ ಮಾಡುವ ಟಾವರ್‌ಗಳಾಗಿ ಕಾರ್ಯನಿರ್ವಹಿಸುತ್ತಿದ್ದವು ಎಂದರೆ ತಪ್ಪಾಗಲಾರದು ಹುಡೆಗಳು ನಮ್ಮ ಇತಿಹಾಸ ಮತ್ತು ಪರಂಪರೆಯ ಪ್ರತೀಕವಾಗಿವೆ.

ಬಹಮನಿಯರ ಪತನದ ನಂತರ ಕಲಬುರಗಿ ಜಿಲ್ಲೆಯ ಮೇಲೆ ಆದಿಲ್‌ಶಾಹಿಗಳು



ಅಧಿಕಾರ ಸ್ಥಾಪಿಸಿದರು. ಕಲಬುರಗಿ ಕೋಟೆಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಪುನರ್ ನಿರ್ಮಾಣಗೊಳಿಸಿ ಅಲ್ಲಿ ಶಾಸನಗಳನ್ನು ಹಾಕಿಸಿದ್ದಾರೆ. ಅಹಮ್ಮದನಗರದೊಂದಿಗೆ 'ಯದ್ಧಗಳಲ್ಲಿ ಆದಿಲ್‌ಶಾಹಿಗಳು ತಮ್ಮ ಸೈನ್ಯವನ್ನು ಇಲ್ಲಿಯ ಕೋಟೆಯಲ್ಲಿ ಸಂಗ್ರಹಿಸಿ ಯುದ್ಧಕ್ಕೆ ಬಳಸುತ್ತಿದ್ದರು. ಕಲಬುರಗಿಯ ಕೋಟೆಯ ಒಳಗಡೆ ಕೆಲವೊಂದು ಬುರಜ್‌ಗಳನ್ನು (ಕಾವಲು ಗೋಪುರ) ನಿರ್ಮಿಸಿದರು. ಅಲ್ಲದೆ ಕಲಬುರಗಿಯ ಸಂತರ ಸಮಾಧಿಯ ಪ್ರಾಂಗಣದಲ್ಲಿ ಭಕ್ತರಿಗಾಗಿ ಬಾವಿ, ತಂಗುದಾಣ ಹಾಗೂ ಇತರ ಕಟ್ಟಡಗಳನ್ನು ನಿರ್ಮಿಸಿ ಇದರ ಕುರಿತು ಶಾಸನಗಳನ್ನು ಹಾಕಿದ್ದಾರೆ.

ಮೊಗಲ್ ಕೊನೆಯ ಸುಲ್ತಾನನಾದ ಔರಂಗಜೇಬನು ಇಡಿ ಭಾರತವನ್ನು ಗೆಲ್ಲಲು ನಿರಂತರವಾಗಿ ದಕ್ಷಿಣ ಭಾರತದ ಮೇಲೆ ದಂಡಯಾತ್ರೆಗಳನ್ನು ಆಯೋಜಿಸಿದ. ಬಿಜಾಪುರದ ಆದಿಲ್ ಶಾಹಿಗಳ ಮೇಲೆ ದಾಳಿಯ ಸಂದರ್ಭದಲ್ಲಿ ಸಗರ ಪ್ರದೇಶದಲ್ಲಿ ಕೆಲಕಾಲ ನೆಲೆನಿಂತು, ಸುರಪುರ ನಾಯಕರ ಮೇಲೆ ದಾಳಿಮಾಡಿ ೧೬೭೭ರಲ್ಲಿ ಔರಂಗಜೇಬನು ಆದಿಲ್ ಶಾಹಿಗಳ ಪ್ರದೇಶಗಳಾದ ಗುಲಬರ್ಗಾ, ಶಹಾಪುರ, ಸುರಪುರ, ಸಗರನಾಡುಗಳನ್ನು ಮೊಗಲ್ ಸೈನಿಕರು ವಶಪಡಿಸಿಕೊಂಡರು. ಔರಂಗಜೇಬನು ನಿರಂತರ ೨೫ ವರ್ಷಗಳ ಹೋರಾಟದ ಬಳಿಕ ದಕ್ಷಿಣ ಭಾರತದ ಪ್ರದೇಶಗಳ ಮೇಲೆ ಹಿಡಿತ ಸಾಧಿಸಿದನು.

ಕ್ರಿ.ಶ. ೧೬೩೬-೧೮೫೮ರವರೆಗೆ ೧೩ ಜನ ನಾಯಕರು ೧೮೫೮ ರಿಂದ ೧೯೪೮ರವರೆಗೆ ಕೆಲವು ನಾಯಕರು (ಗೋಸಲ ವಂಶಸ್ಥರು) ಸುರಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಧೀರ್ಘವಾಗಿ ಅಧಿಕಾರ ಮಾಡಿದ್ದಾರೆ. ಅವರ ಕಾಲದಲ್ಲಿ ಕಲಬುರಗಿ ಜಿಲ್ಲೆಯು ಹಲವು ದೃಷ್ಟಿಯಿಂದ ಪ್ರಾಮುಖ್ಯತೆಯನ್ನು ಪಡೆದಿತ್ತು. ತಿರುಪತಿಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ನಡೆಯಲಿರುವ ಪ್ರಥಮ

ಪೂಜೆಯೇ ಈ ನಾಯಕರ ಮನೆತನದಿಂದ ಆರಂಭವಾಗುತ್ತದೆ. ಅಲ್ಲದೆ 'ಗರುಡಾದ್ರಿ' ಎನ್ನುವ ಚಿತ್ರಕಲೆಯನ್ನು ಕಲಾ ಪ್ರಪಂಚಕ್ಕೆ ಪರಿಚಯಸಿದವರೆ ಈ ಗೋಸಲ ವಂಶಸ್ಥರಾದ ನಾಯಕರು.

ಕಲಬುರಗಿ ಜಿಲ್ಲೆಯ ಬ್ರಿಟಿಷರ ಹೈದ್ರಾಬಾದ ನಿಜಾಮರ ವಿರುದ್ಧ ನಿರಂತರ ಹೋರಾಟ ಮಾಡುವುದರ ಮೂಲಕ ಒಂದುಕಡೆಗೆ ಭಾರತದ ಸ್ವಾತಂತ್ರ ಸಂಗ್ರಾಮದಲ್ಲಿ ಪ್ರಮುಖ ಸ್ಥಾನಮಾನ ಪಡೆದುಕೊಂಡಿದೆ. ಅಲ್ಲದೆ ಸ್ವಾತಂತ್ರ್ಯಾನಂತರ ಭಾರತ ಒಕ್ಕೂಟದಿಂದ ದೂರ ಉಳಿದು ಹೈದ್ರಾಬಾದ ನಿಜಾಮಾನ ಆಳ್ವಿಕೆಯ ವಿರುದ್ಧ ನಿರಂತರ ಹೋರಾಟ ಮಾಡಿ ಕೊನೆಗೆ ಸೆಪ್ಟೆಂಬರ್ ೧೭, ೧೯೪೮ರಂದು ಭಾರತದ ಒಕ್ಕೂಟದಲ್ಲಿ ಸೇರ್ಪಡೆಗೊಂಡಿತು. ಈ ರೀತಿ ಕಲಬುರಗಿ ಜಿಲ್ಲೆಯು ರೋಮಾಂಚನಕಾರಿ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿದೆ.

## ಪ್ರವಾಸೋದ್ಯಮ ತಾಣಗಳು ಮತ್ತು ಅಭಿವೃದ್ಧಿ

**ಡಾ. ಶಶಿಶೇಖರ ರೆಡ್ಡಿ**

'ಸೂರ್ಯನಗರಿ' ಎಂದೇ ಪ್ರಸಿದ್ಧವಾಗಿರುವ ಕಲಬುರ್ಗಿ ನಗರವು ಪ್ರವಾಸೋದ್ಯಮ ಕ್ಷೇತ್ರದಲ್ಲಿ ವಿಪುಲ ಅವಕಾಶಗಳನ್ನು ಹೊಂದಿದೆ. ಜಿಲ್ಲೆಯಲ್ಲಿ ಅನೇಕ ಪ್ರವಾಸಿ ತಾಣಗಳಿವೆ. ಅದರೆ ಸಿಗಬೇಕಾದ ಪ್ರಚಾರ, ಪ್ರಸಿದ್ಧಿ ಮತ್ತು ಅಭಿವೃದ್ಧಿ ಅನೇಕ ಕಾರಣಗಳಿಂದಾಗಿ ದೊರೆತಿರುವುದಿಲ್ಲ. ಮುಂಬರುವ ದಿನಗಳು ಜಿಲ್ಲೆಯ ಪ್ರವಾಸೋದ್ಯಮದಲ್ಲಿ ಹೊಸ ಮನ್ವಂತರವನ್ನು ಬರೆಯಲಿವೆ. ಕಲಬುರ್ಗಿಯು ರಾಜ್ಯದ ರಾಜ್ಯಧಾನಿ ಬೆಂಗಳೂರುನಿಂದ ೫೮೫ ಕಿ.ಮೀ.ದೂರದಲ್ಲಿದ್ದು, ರೈಲು, ಬಸ್ ಮತ್ತು ವಿಮಾನಯಾನ ಸಂಪರ್ಕ ಹೊಂದಿದೆ. ಕೇವಲ ಒಂದು ಗಂಟೆಯೊಳಗೆ ಬೆಂಗಳೂರು ತಲುಪಬಹುದು. ಕೇಂದ್ರ ಸರಕಾರದ ಯಡಾನ್ ಯೋಜನೆಯಲ್ಲಿ ಕಡಿಮೆ ದರವನ್ನು ನಿಗದಿಪಡಿಸಿರುವುದರಿಂದ ಪ್ರವಾಸಿಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಲಿದೆ. ವಾರದ ಏಳು ದಿನಗಳಲ್ಲಿ ವಿಮಾನ ಸಂಚಾರವಿದ್ದು, ಮುಂದಿನ ದಿನಗಳಲ್ಲಿ ಅವುಗಳ ಸಂಖ್ಯೆ ಹೆಚ್ಚಾಗಬಹುದು. ಮತ್ತು ವಿವಿಧ ಪ್ರಮುಖ ನಗರಗಳಿಗೆ ಸಂಪರ್ಕ ಲಭ್ಯವಾಗಬಹುದು. ಇದು ಜಿಲ್ಲೆಯ ಪ್ರವಾಸೋದ್ಯಮ ಬೆಳವಣಿಗೆಯಲ್ಲಿ ಒಂದು ಮೈಲುಗಲ್ಲಾಗಿದೆ. ಹೈದ್ರಾಬಾದನಿಂದ ಕಲಬುರಗಿ ೨೩೨ ಕಿ. ಮೀ. ದೂರದಲ್ಲಿದ್ದು, ಹೆಚ್ಚಿನ ಪ್ರಮಾಣದಲ್ಲಿ ಬಸ್ ಹಾಗೂ ರೈಲು ಸಂಪರ್ಕವಿದೆ. ಕೇವಲ ೪ ರಿಂದ ೫ ಗಂಟೆಯಲ್ಲಿ ಹೈದ್ರಾಬಾದದಿಂದ ರಸ್ತೆ ಮೂಲಕ ಕಲಬುರಗಿ ತಲುಪಬಹುದು. ಕಲಬುರ್ಗಿ ಉತ್ತಮ ರೈಲ್ವೆ ಜಾಲವನ್ನು ಹೊಂದಿದ್ದು ದೇಶದ ಪ್ರಮುಖ ನಗರಳೊಂದಿಗೆ ನೇರ ಸಂಪರ್ಕ ಹೊಂದಿದೆ. ಕರ್ನಾಟಕ ಸರಕಾರವು ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗುವಂತಹ ಹಲವು ಯೋಜನೆಗಳನ್ನು ರೂಪಿಸಿದೆ. “ಒಂದು ರಾಜ್ಯ ಹಲವು ಜಗತ್ತು” ಎನ್ನುವ ತನ್ನ ಘೋಷಣೆಯೊಂದಿಗೆ

ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕ ರಾಜ್ಯದಲ್ಲಿಯೇ ಕಲ್ಯಾಣ ಕರ್ನಾಟಕವು ಹಲವು ಪ್ರವಾಸಿ ತಾಣಗಳನ್ನು ಹೊಂದಿದೆ.

ಪ್ರಾಚೀನ ಪರಂಪರೆಯನ್ನು ಹೊಂದಿದ ಕಲಬುರಗಿ ಜಿಲ್ಲೆ ಎಲ್ಲಾ ಪ್ರಕಾರದ ಪ್ರವಾಸಿ ತಾಣಗಳನ್ನು ಹೊಂದಿದೆ. ಇತಿಹಾಸ ಪೂರ್ವ ಕಾಲದ ನೆಲೆಗಳು ಮತ್ತು ಮಹಾಕಾವ್ಯಗಳಲ್ಲೂ ಉಲ್ಲೇಖ ಪಡೆದಿರುವ ಅವಿಭಜಿತ ಕಲಬುರ್ಗಿ ಜಿಲ್ಲೆ ಬುದ್ಧ, ಬಸವ-ಸಂತರ, ಸೂಫಿಗಳ ಕಾರ್ಯಕ್ಷೇತ್ರದ ಜೊತೆಗೆ ಸುಮಾರು ಹದಿನೆಂಟು ರಾಜಕೀಯ ಮನೆತನಗಳು ಅಧಿಕಾರಕ್ಕೆ ಒಳಪಟ್ಟಿರುವ ಈ ಪ್ರದೇಶದಲ್ಲಿ ಕೋಟೆ, ಕೊತ್ತಲಗಳು, ದೇವಾಲಯಗಳು, ಸ್ತೂಪಗಳು, ವಿಹಾರಗಳು, ಮಸೀದಿಗಳು, ಅರಮನೆಗಳು, ಸುಲ್ತಾನರ, ಸಂತರ, ಶರಣರ, ಸೂಫಿಗಳ ಸಮಾಧಿಗಳು ಜಿಲ್ಲೆಯ ಪ್ರಮುಖ ಆಕರ್ಷಣೀಯ ಕೇಂದ್ರಗಳಾಗಿವೆ. ನಿರೀಕ್ಷಿತ ಮೂಲ ಸೌಕರ್ಯಗಳಿಲ್ಲದಿದ್ದರೂ ದೇಶೀಯ ಹಾಗೂ ವಿದೇಶಿ ಪ್ರವಾಸಿಗರು ಭೇಟಿ ನೀಡುತ್ತಿರುತ್ತಾರೆ.



ಪ್ರವಾಸಿ ತಾಣಗಳ ಪ್ರಾಮುಖ್ಯತೆಯ ಬಗ್ಗೆ ಅಧ್ಯಯನ ಮಾಡಿರುವ ವಿಭಿನ್ನ ಹಿನ್ನೆಲೆ ಮತ್ತು ಆಸಕ್ತಿಯಿರುವ ವಿದೇಶಿ ಪ್ರವಾಸಿಗರು ಆಗಮಿಸುತ್ತಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಪ್ರವಾಸೋದ್ಯಮ ಇಲಾಖೆ, ಮೂಲಭೂತ ಸೌಕರ್ಯಗಳ ಇಲಾಖೆ ಮತ್ತು ಸ್ಥಳೀಯ ಆಡಳಿತ ಕೈಜೋಡಿಸಿದರೆ ಜಿಲ್ಲೆಯ ಪ್ರವಾಸೋದ್ಯಮ ಅಭೂತಪೂರ್ವ ಪ್ರಗತಿ ಕಾಣುತ್ತದೆ. ಹಲವು ಉದ್ದಿಮೆಗಳ ಸ್ಥಾಪನೆ ಮತ್ತು ಉದ್ಯೋಗವಕಾಶಕ್ಕೂ ದಾರಿ ಮಾಡಿಕೊಡುತ್ತದೆ.

**ರಾಜಕೀಯ ಇತಿಹಾಸ**

ಕಲಬುರ್ಗಿ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳ ಬಗ್ಗೆ ತಿಳಿದುಕೊಳ್ಳುವ ಮೊದಲು ಈ ಜಿಲ್ಲೆಯನ್ನು ಆಳಿದ ರಾಜಕೀಯ ಮನೆತನಗಳ ಕುರಿತು ಸಂಕ್ಷಿಪ್ತವಾದ ಇತಿಹಾಸ ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ರಾಜಾ ಕಲಿಚಂದನ 'ಕಲಬುರಗಿ, ರಾಜಾ ಗುಲಚಂದನ 'ಗುಲಬರ್ಗಾ, ಸುಲ್ತಾನ ಹಸನ ಗಂಗೂನ 'ಹಸನಾಬಾದ' ಎಂದು ಕರೆಯಲ್ಪಟ್ಟಿರುವ ಇಂದಿನ ಕಲಬುರ್ಗಿ, ಉತ್ತರ ಕರ್ನಾಟಕದ ಎರಡನೆಯ ಜಿಲ್ಲೆಯಾಗಿದೆ. ವಾಯುವ್ಯ ಭಾಗದಲ್ಲಿ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪೂರ ಮತ್ತು ಉಸ್ಮಾನಾಬಾದ ಜಿಲ್ಲೆಗಳು, ಪೂರ್ವ ಭಾಗಕ್ಕೆ ತೆಲಂಗಾಣದ ಮಹಬೂಬನಗರ ಜಿಲ್ಲೆಗಳು ಜಿಲ್ಲೆಯ ಗಡಿಗೆ ಹೊಂದಿಕೊಂಡಿದ್ದ ಉತ್ತರ ಭಾಗಕ್ಕೆ ಬೀದರ, ದಕ್ಷಿಣ ಭಾಗಕ್ಕೆ ರಾಯಚೂರು, ಪಶ್ಚಿಮದಲ್ಲಿ ವಿಜಯಪುರ ಜಿಲ್ಲೆಯ ಗಡಿಭಾಗಗಳಿಗೆ ಹೊಂದಿಕೊಂಡಿದೆ. ಚಿನಮಳ್ಳಿ ಶಾಸನದಲ್ಲಿ 'ಕಲಂಬರಿಗೆ', ಬೇಲೂರು ಶಾಸನದಲ್ಲಿ (೧೩೯೭) 'ಕಲಬರಗೆ' ಎಂದೂ, ಶಿರವಾಳ ಶಾಸನದಲ್ಲಿ (೧೫೩೭)

'ಕಲಬುರಿಗೆ' ಎಂದು ಉಲ್ಲೇಖಗೊಂಡಿದೆ. ಅದೇ ಆಧಾರದ ಮೇಲೆ ಮತ್ತೆ ಸರಕಾರ ಪ್ರಾಚೀನ ಪರಂಪರೆಯ ಪ್ರತೀಕವಾಗಿ ಜಿಲ್ಲೆಗೆ 'ಕಲಬುರ್ಗಿ' ಎಂದು ಮರುನಾಮಕರಣ ಮಾಡಿದೆ.

ಕ್ರಿ. ಶಿ. ೧೯೯೦ ರಲ್ಲಿ ಭಾರತ ಪುರಾತತ್ವ ಸರ್ವೇಕ್ಷಣ ಇಲಾಖೆ ನಡೆಸಿದ ಉತ್ಖನನದಲ್ಲಿ ಜಿಲ್ಲೆಯ ಸನ್ನತಿಯಲ್ಲಿ ಅಶೋಕ ಚಕ್ರವರ್ತಿಯ ಬೃಹತ್ ಬಂಡೆಗಲ್ಲು ಶಾಸನ ಮೌರ್ಯರು ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿರುವ ಮಾಹಿತಿಯನ್ನು ಒದಗಿಸುತ್ತದೆ. ೧೩ ಮತ್ತು ೧೪ನೇ ಬೃಹತ್ ಬಂಡೆಗಲ್ಲು ಶಾಸನಗಳು ಹಾಗೂ ಎರಡು ಕಳಿಂಗ ಶಾಸನಗಳಲ್ಲಿ ಮೌರ್ಯ ಅರಸರು ದಖನ್ ಪ್ರಸ್ತಭೂಮಿಯ ಕರ್ನಾಟಕದ ಉತ್ತರಭಾಗದ ಕಲಬುರ್ಗಿ ಜಿಲ್ಲೆಯನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಿರುವ ವಿಷಯವನ್ನು ಒದಗಿಸುತ್ತದೆ. ಅಶೋಕನು ತನ್ನ ಸಾಮ್ರಾಜ್ಯವನ್ನು ನಾಲ್ಕು ಭಾಗಗಳಲ್ಲಿ ವಿಂಗಡಿಸಿದ್ದು, ಅದರಲ್ಲಿ ನಾಲ್ಕನೆಯ ಪ್ರಾಂತ 'ಸುವರ್ಣಗಿರಿ' ಇಂದಿನ ಚಿತ್ತಾಪುರ ತಾಲೂಕಿನ 'ಸನ್ನತಿ'ಯೇ ಅಂದಿನ ಸುವರ್ಣಗಿರಿ ಎನ್ನುವುದು ವಿದ್ವಾಂಸರ ಅಭಿಪ್ರಾಯವಾಗಿದೆ. ಪ್ರಾಚೀನ ಸುವರ್ಣಗಿರಿಯ ಎಲ್ಲಾ ಭೌಗೋಳಿಕ ಲಕ್ಷಣಗಳು ಇಂದಿನ ಸನ್ನತಿ ಪ್ರದೇಶವು ಒಳಗೊಂಡಿದೆ. ಮೌರ್ಯರು ಮತ್ತು ಮುಂದೆ ಅಧಿಕಾರಕ್ಕೆ ಬಂದ ಶಾತವಾಹನರ ಕಾಲದ ಹಲವು ಅವಶೇಷಗಳು ಭೂಉತ್ಕನನದಲ್ಲಿ ಲಭ್ಯವಾಗಿವೆ.

ಹಾಲನ ಗಾಥಾಸಪ್ತಶತಿಯಲ್ಲಿ ಉಲ್ಲೇಖವಾಗಿರುವ ಜನಸಾಮಾನ್ಯರ ಜೀವನ ಶೈಲಿಯ ವರ್ಣನೆ ಸನ್ನತಿಯಲ್ಲಿ ದೊರೆತ ಅವಶೇಷಗಳಲ್ಲಿ ಕಂಡುಬರುತ್ತದೆ. ದಕ್ಷಣ



ಭಾರತದಲ್ಲಿ ಬಾದಾಮಿ ಚಾಲುಕ್ಯರು ಅವನತಿ ಹೊಂದುತ್ತಿದ್ದಂತೆ, ರಾಷ್ಟ್ರಕೂಟರು ಏಳಿಗೆ ಹೊಂದಿದರು. ಕ್ರಿ.ಶ. ೮ನೇ ಶತಮಾನದಿಂದ ೧೦ನೆಯ ಶತಮಾನದವರೆಗೆ ಅಧಿಕಾರ ಮಾಡಿರುವ ರಾಷ್ಟ್ರಕೂಟರು ಕಲಬುರಗಿ ಜಿಲ್ಲೆಯ ಸಮೀಪದಲ್ಲಿರುವ ಮಾನ್ಯಖೇಟ (ಮಳಖೇಡ) ದಿಂದ ರಾಜ್ಯಭಾರ ಮಾಡಿದರು. ರಾಷ್ಟ್ರಕೂಟರು ಭರತಖಂಡದಲ್ಲಿ ಅಧಿಕಾರ ಮಾಡಿರುವ ಪ್ರಮುಖ ಮನೆತನಗಳಲ್ಲಿ ಒಂದಾಗಿದೆ. ಅಲ್ಲದೆ ಭಾರತಕ್ಕೆ ಭೇಟಿ ನೀಡಿದ ಸುಲೇಮಾನನು ಮಳಖೇಡಗೆ ಭೇಟಿ ನೀಡಿ, ಈ ರಾಜ್ಯವು ಜಗತ್ತಿನ ನಾಲ್ಕು ದೊಡ್ಡ ಸಾಮ್ರಾಜ್ಯಗಳಲ್ಲಿ ಒಂದಾಗಿದೆ ಎಂದು ತನ್ನ ಪ್ರವಾಸಿ ಕಥನದಲ್ಲಿ ಉಲ್ಲೇಖಿಸಿದ್ದಾನೆ. ಈ ಮನೆತನದಲ್ಲಿ ಅಧಿಕಾರ ಮಾಡಿರುವ ಒಂದನೆಯ ಕೃಷ್ಣ, ಧ್ರುವ, ಮೂರನೆಯ ಗೋವಿಂದ ಹಾಗೂ ಅಮೋಘವರ್ಷ ನೃಪತುಂಗ ಪ್ರಮುಖರಾಗಿದ್ದಾರೆ. ಮೂರನೇಯ ಗೋವಿಂದನ ಕಾಲದಲ್ಲಿ (ಕ್ರಿ.ಶ.೭೯೩-೮೧೪) ಮಾನ್ಯಖೇಟವು ರಾಜಧಾನಿ ಪಟ್ಟಣವಾಗಿತ್ತೆಂದು ಕೆಲವು ಶಾಸನಗಳಲ್ಲಿ ಉಲ್ಲೇಖಗಳಿವೆ. ಅಲ್ಲದೆ ಅಮೋಘವರ್ಷ ನೃಪತುಂಗನ ಕಾಲದಲ್ಲಿ ಈ ನಗರ ಅಪಾರ ಪ್ರಗತಿಯನ್ನು ಕಂಡಿರುವ ಕುರಿತು ಶಾಸನಗಳಲ್ಲಿ ಉಲ್ಲೇಖವಿದೆ. ಹಾಗೆಯೇ ಶ್ರೀವಿಜಯನ ಕವಿರಾಜಮಾರ್ಗದಲ್ಲಿ ರಾಜನು ರಾಜಧಾನಿ ಪಟ್ಟಣದ ರಚನೆಗೆ ಕೈಗೊಂಡ ಕ್ರಮಗಳನ್ನು ವಿವರಿಸಿದ್ದಾನೆ. ಮೂರನೆಯ ಕೃಷ್ಣನ ನಂತರ ರಾಷ್ಟ್ರಕೂಟ ಮನೆತನವು

ಅವನತಿಯ ಹಂತವನ್ನು ತಲುಪಿತು. ಚಾಲುಕ್ಯ ಮನೆತನದ ಮತ್ತೊಂದು ಶಾಖೆಯಾದ ಕಲ್ಯಾಣಿ ಚಾಲುಕ್ಯರು ಬೀದರ ಜಿಲ್ಲೆಯ ಬಸವಕಲ್ಯಾಣದಿಂದ ಅಧಿಕಾರ ಮಾಡಿದರು. ಆದರೆ ಅವರ ಅಧಿಕಾರ ಆರಂಭವಾಗಿರುವುದು ಜಿಲ್ಲೆಯ ಯಾದಗಿರಿಯಿಂದ, ನಂತರ ಬಸವಕಲ್ಯಾಣವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಈ ಮನೆತನದ ಪ್ರಮುಖ ಅರಸರಾದ ಒಂದನೇಯ ಸೋಮೇಶ್ವರ, ಆರನೇಯ ವಿಕ್ರಮಾದಿತ್ಯ ಹಾಗೂ ಇತರ ಅರಸರು ತಮ್ಮ ಅಧಿಕಾರದ ಅವಧಿಯಲ್ಲಿ ಜಿಲ್ಲೆಯ ಹಲವು ಭಾಗಗಳಲ್ಲಿ ನೂರಕ್ಕಿಂತ ಹೆಚ್ಚಿನ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅವೆಲ್ಲವೂ ಚಾರಿತ್ರಿಕವಾಗಿ ಪ್ರಮುಖವಾದ ತಾಣಗಳು.

ದೆಹಲಿಯ ಐಲು ದೊರೆಯೆಂದು ಪರಿಗಣಿತನಾದ ಮಹಮ್ಮದ ಬಿನ್ ತುಘಲಕ್ ದುರಾಡಳಿತಕ್ಕೆ ಬೇಸತ್ತು ಆತನ ಅಧಿಕಾರಿಗಳು ಇಸ್ಮಾಯಿಲ್ ಖಾನನ ನೇತೃತ್ವದಲ್ಲಿ ಸ್ವತಂತ್ರರಾದರು. ಅದೇ 'ಬಹಮನಿ ರಾಜ್ಯ' (೧೩೪೭), ಈ ರಾಜ್ಯಕ್ಕೆ ಹಸನ್‌ನನ್ನು ಉತ್ತರಾಧಿಕಾರಿಯೆಂದು ಇಸ್ಮಾಯಿಲ್ ಖಾನನು ಸಾರಿದ. ಇವನು ಅಧಿಕಾರವಹಿಸಿಕೊಂಡು ಕೆಲವೇ ವರ್ಷಗಳಲ್ಲಿ ರಾಜಧಾನಿಯನ್ನು ದೌಲತಾಬಾದನಿಂದ ಇಂದಿನ ಕಲಬುರ್ಗಿಗೆ ವರ್ಗಾಯಿಸಿದ. ಸ್ಥಳೀಯ ಸಾಮಂತ ನಾಯಕನಾದ ಗುಲಚಂದನನ್ನು ಬದಿಗೊತ್ತಿ ತನ್ನದೆಯಾದ ಪ್ರಭುತ್ವವನ್ನು ಸ್ಥಾಪಿಸಿದ. ಕ್ರಿಶ. ೧೩೪೭ ರಿಂದ ೧೫೨೭ರವರೆಗೆ ಒಟ್ಟು ೧೮ ಜನ ಸುಲ್ತಾನರು ಅಧಿಕಾರ ಮಾಡಿದರು. ಅವರಲ್ಲಿ ಮೊದಲಿನ ೮ ಜನ ಸುಲ್ತಾನರು ಕಲಬುರ್ಗಿಯಲ್ಲಿ ಉಳಿದ ೧೦ ಜನ ಸುಲ್ತಾನರು ಬೀದರ ನಗರದಿಂದ ರಾಜ್ಯವಾಳಿದರು. ಬಹಮನಿ ಸುಲ್ತಾನರಲ್ಲಿ ಅಲ್ಲಾವುದ್ದೀನ್ ಹಸನ್ ಬಹಮನ ಶಹಾ, ಒಂದನೇ ಮಹಮ್ಮದ ಶಹಾ, ಎರಡನೇಯ ಮಹಮ್ಮಹ ಶಹಾ ಹಾಗೂ ಫಿರೋಜ್ ಶಹಾರ ಕಾಲದಲ್ಲಿ ಕಲಬುರ್ಗಿಯ ಬಹಮನಿ ರಾಜ್ಯದ ಕೀರ್ತಿ ದೇಶ ವಿದೇಶಗಳಲ್ಲಿ ಹಬ್ಬಿತು. ಅವರ ಕಾಲದಲ್ಲಿ ನಿರ್ಮಾಣಗೊಂಡ ಕಟ್ಟಡಗಳೇ ಇಂದಿನ ಪ್ರಮುಖ ಪ್ರವಾಸಿ ತಾಣಗಳಾಗಿವೆ.

ಕ್ರಿ.ಶ. ೧೪೨೨ ರಲ್ಲಿ ರಾಜಧಾನಿ ಬೀದರಗೆ ವರ್ಗಾವಣೆಗೊಂಡಿತು. ಅಲ್ಲಿ ಆಳ್ವಿಕೆ ಮಾಡಿರುವ ಪ್ರಮುಖ ಸುಲ್ತಾನರೆಂದರೆ ಅಹಮ್ಮದ್ ಶಹಾ, ಅಲ್ಲಾವುದ್ದೀನ್ ಶಹಾ ಹಾಗೂ ಮೂರನೇಯ ಮಹಮ್ಮದ್‌ಷಾ ಪ್ರಮುಖರಾಗಿದ್ದಾರೆ.

ಕಲಬುರ್ಗಿ ಜಿಲ್ಲೆಯ ಹಿಂದುಳಿಯುವಿಕೆಗೆ ಬಹುಮಟ್ಟಿಗೆ ಕಾರಣ ಎಂದು ನಂಬಿರುವ ನಿಜಾಮರು ಕ್ರಿ.ಶ. ೧೨೪ ರಿಂದ ೧೯೮೪ ರವರೆಗೆ ಹೈದ್ರಾಬಾದಿನಿಂದ ಆಳ್ವಿಕೆ ಮಾಡಿರುವ ೭ ಜನ ನಿಜಾಮರಲ್ಲಿ ಕೊನೆಯ ನಿಜಾಮ ತನ್ನ ರಾಜ್ಯವನ್ನು ಉತ್ತರ ಕರ್ನಾಟಕದ ಇಂದಿನ ಐದು ಜಿಲ್ಲೆಗಳನ್ನು ತನ್ನ ಆಡಳಿತಕ್ಕೆ ಒಳಪಡಿಸಿಕೊಂಡು, ಅವರಲ್ಲಿ ಕೊನೆಯ ನಿಜಾಮ ಮೀರ್ ಉಸ್ಮಾನ್ ಅಲೀಖಾನ್ (೧೯೧೧-೧೯೪೮) ಕಲಬುರ್ಗಿ ನಗರದ ಮೇಲೆ ಹಿಡಿತ ಸಾಧಿಸಿ, ಇಲ್ಲಿ ಆಡಳಿತ ಮತ್ತು ತನ್ನ ಅನುಕೂಲಕ್ಕಾಗಿ ಹಲವು ಕಟ್ಟಡಗಳನ್ನು ನಿರ್ಮಿಸಿದ್ದಾನೆ. ಅವುಗಳು ಸಹ ನಮ್ಮ ಪ್ರವಾಸಿ ತಾಣಗಳಾಗಿವೆ.

೧. ನೈಸರ್ಗಿಕ ಪ್ರವಾಸಿ ತಾಣಗಳು

೨. ಧಾರ್ಮಿಕ ಕೇಂದ್ರಗಳು

೩. ಐತಿಹಾಸಿಕ ತಾಣಗಳು

**೧) ನೈಸರ್ಗಿಕ ಪ್ರವಾಸಿ ತಾಣಗಳು :** ಕಲಬುರ್ಗಿಯ ಪೂರ್ವಕ್ಕಿರುವ ಚಿಂಚೋಳಿ ತಾಲೂಕು ಹೇರಳವಾದ ಕಾಡು ಸಸ್ಯ ಸಂಪತ್ತು ಹೊಂದಿದ್ದು ಅನೇಕ ನಿಸರ್ಗ ನಿರ್ಮಿತ ಪ್ರವಾಸಿ ತಾಣಗಳಿವೆ. ವಿಶೇಷವಾಗಿ ಕೊಂಚಾವರಂ ವನ್ಯಧಾಮವು ೧೩೪.೮೮ ಚದರ ಕಿ.ಮೀ. ಪ್ರದೇಶ ವನ್ಯಧಾಮದ ವ್ಯಾಪ್ತಿಗೆ ಒಳಪಟ್ಟಿದೆ. ಕರ್ನಾಟಕ ಸರಕಾರದಿಂದ ಅಧಿಸೂಚನೆಯೂ ಸಹ ಹೊರಡಿಸಲಾಗಿದ್ದು, ವನ್ಯಜೀವಿ, ಸಸ್ಯ ಸಂಪತ್ತು ಮತ್ತು ಜೀವ ವೈವಿಧ್ಯತೆಯನ್ನು ಹೊಂದಿದೆ. ಅರಣ್ಯ ಪ್ರದೇಶದಲ್ಲಿ ಹೆಚ್ಚು ಹೆಚ್ಚು ವನ್ಯಜೀವಿಗಳಿಗೆ ಅಗತ್ಯವಾದ ನೀರಿನ ಹೊಂಡಗಳನ್ನು, ಪ್ರಾಣಿಗಳ ದೇಹಕ್ಕೆ ಉಪ್ಪಿನಾಂಶ ಒದಗಿಸುವ ಉಪ್ಪುಗುಂಡಿಗಳು, ಪಕ್ಷಿಗಳಿಗಾಗಿ ವಿವಿಧ ಬಗೆಯ ಹಣ್ಣಿನ ಮರಗಳನ್ನು ಬೆಳೆಸಿ, ಜಂಗಲ್ ರಿಸಾರ್ಟ್‌ಗಳನ್ನು ಅಭಿವೃದ್ಧಿ ಪಡಿಸಿ ಪ್ರವಾಸೋದ್ಯಮವನ್ನು ಉತ್ತೇಜಿಸಬಹುದಾಗಿದೆ. ಕೊಂಚಾವರಂ ವನ್ಯಧಾಮವು ಬಿಸಿಲನಾಡು ಕಲಬುರ್ಗಿಯ ಮರುಳುಗಾಡಿನ ಓಯಸಿಸ್‌ನಂತಿದೆ. ಪರಿಸರ ಸಂವೇದಿ ಪ್ರದೇಶವೆಂದು ಗುರುತಿಸಲ್ಪಡುವ ಜೀವ ವೈವಿದ್ಯತೆಯು ಮಾನವ ಸಮುದಾಯಕ್ಕೆ ಮಹತ್ತರ ಕೊಡುಗೆಯನ್ನು ನೀಡಲಿದೆ. ಪಶ್ಚಿಮ ಘಟ್ಟಕ್ಕೆ ಹೋಲಿಕೆ ಮಾಡುವ ಅನೇಕ ಅಂಶಗಳು ಕೊಂಚಾವರಂ ಕಾಡಿನಲ್ಲಿವೆ. ಚಿಂಚೋಳಿ, ಸಂಗಾಪುರ, ಬೋನಸ್ಪುರ, ಮಗ್ಗುಂಪುರ ಮತ್ತು ಶಾದಿಪುರ ಐದು ಬ್ಲಾಕ್‌ಗಳಲ್ಲಿ ವನ್ಯಧಾಮ ಹರಡಿಕೊಂಡಿದೆ. ಈ ದಟ್ಟಕಾಡಿನಲ್ಲಿ ಚಿರತೆ, ತೋಳ, ಮುಸುವ (ಮಂಗ), ಚುಕ್ಕಿಜಿಂಕೆ, ಕತ್ತೆಕಿರುಬ, ಕಾಡುಹಂದಿ, ಮುಳ್ಳುಹಂದಿ, ಮೊಲ, ಮುಂಗಸಿ., ಕೃಷ್ಣಮೃಗ, ಕಾಳಿಂಗ, ಹೆಬ್ಬಾವು, ಉಡ, ಪ್ಯಾಂಗೋಲಿನ್ ಒಳಗೊಂಡಂತೆ ಬಗೆ ಬಗೆಯ ಚಿಟ್ಟೆಗಳು, ಪ್ರಾಣಿ ಪಕ್ಷಿಗಳು,

ಜಲಪಾತಗಳು ಚಿಂಚೋಳಿ ತಾಲೂಕಿನಲ್ಲಿವೆ. ಈ ಎರಡೂ ಜಲಪಾತಗಳಿಗೆ ಉತ್ತಮ ಸಂಪರ್ಕ ರಸ್ತೆ ಮೂಲಭೂತ ಸೌಕರ್ಯಗಳನ್ನು ಹೆಚ್ಚು ಹೆಚ್ಚು ಜನ ವೀಕ್ಷಿಸಲು ಸಾಧ್ಯವಾಗುತ್ತದೆ.

**೨) ಧಾರ್ಮಿಕ ಕೇಂದ್ರಗಳು:**



**ಶ್ರೀ ಶರಣಬಸವೇಶ್ವರ ದೇವಸ್ಥಾನ:**

ನಗರದ ಹೃದಯ ಭಾಗದಲ್ಲಿರುವ ಶ್ರೀ ಶರಣಬಸವೇಶ್ವರ ದೇವಸ್ಥಾನವು ಒಂದು ಪ್ರಮುಖ ಧಾರ್ಮಿಕ ಹಾಗೂ ಐತಿಹಾಸಿಕ ಪ್ರವಾಸಿ ತಾಣವಾಗಿದೆ. ಕ್ರಿ.ಶ. ೧೮೨೨ರಲ್ಲಿ ಲಿಂಗೈಕ್ಯರಾದ ಶ್ರೀ ಶರಣಬಸವೇಶ್ವರ ಸಮಾಧಿಯ ಸ್ಥಳವೆ ಈ ಕಟ್ಟಡ. ಇದನ್ನು ಗದ್ದುಗೆ ಎಂದೂ ಸಹ ಕರೆಯಲಾಗುತ್ತದೆ. ಪ್ರಸ್ತುತ ೮ನೇಯ ಪೀಠಾಧಿಪತಿಗಳಾದ ಪೂಜ್ಯ ಡಾ. ಶರಣಬಸವಪ್ಪಾ ಅಪ್ಪನವರು ಈ ಕಟ್ಟಡಕ್ಕೆ ಬಂಗಾರ ಲೇಪನ ಮಾಡಿ ಸುವರ್ಣ ಮಂದಿರವನ್ನಾಗಿ ಮಾಡುವ ಯೋಜನೆಯನ್ನು ಹೊಂದಿದ್ದಾರೆ. ಇದರ ಕಾರ್ಯವು ಪ್ರಗತಿಯಲ್ಲಿದೆ. ಮುಂದಿನ ದಿನಗಳಲ್ಲಿ ಇದು ದಕ್ಷಿಣ ಭಾರತದ "ಸುವರ್ಣ ಮಂದಿರ" ವಾಗಬಹುದು. ಮೂಲತಃ ಶರಣಬಸವೇಶ್ವರರು ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಅರಳುಗುಂಡಗಿ ಗ್ರಾಮದಲ್ಲಿ ಶರಣ ಸಂಪ್ರದಾಯದ ಸಾಲೋಕ್ಯ ಮನೆತನದ ಸಂಗಮ್ಮ ಮತ್ತು ಮಲಕಪ್ಪ ದಂಪತಿಗಳ ಉದರದಲ್ಲಿ ಕ್ರಿ.ಶ. ೧೭೪೬ರಲ್ಲಿ ಜನಿಸಿದರು. ೧೨ನೇಯ ವಯಸ್ಸಿನಲ್ಲಿ ಲಿಂಗದೀಕ್ಷೆ ಪಡೆದು, ವೀರಶೈವ ಮತ ಉದ್ಧಾರ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಗೆದ್ದು ಮಹಾನ್ ಪರುಷರಾದರು, ಪವಾಡ ಪುರುಷರಾದರು ಹಾಗೂ ಯುಗಪುರುಷರೆನಿಸಿಕೊಂಡರು ಹಲವು ಪವಾಡಗಳನ್ನು ಮಾಡುತ್ತಾ, ನಿತ್ಯ ಲಿಂಗಾರ್ಚನೆ, ದಾಸೋಹ ಸೇವೆ ಮುಂದುವರೆಸಿದರು. ೧೨ನೇ ಶತಮಾನದ ಕಲ್ಯಾಣವನ್ನು ಕಾಣುವ ಆಸೆಯಿಂದ ಅರಳಗುಂಡಗಿಯನ್ನು ಬಿಟ್ಟು ಕಲ್ಯಾಣದ ಕಡೆಗೆ ಸಂಚಾರ ಆರಂಭಿಸಿದರು. ಅವರ ಆಗಮನದ ಸುದ್ದಿ ತಿಳಿದ ಗ್ರಾಮಸ್ಥರು ಅವರ ದರ್ಶನ ಪಡೆಯಲು ತಮ್ಮ ತಮ್ಮ ಗ್ರಾಮಗಳಲ್ಲಿ ನೆಲೆ ನಿಲ್ಲುವಂತೆ ವಿನಂತಿಸಿಕೊಂಡರು. ಭಕ್ತರ ಮನನೋಯಿಸದ ಶರಣರು ಅವರ ಗ್ರಾಮಗಳಲ್ಲಿ ಕೆಲ ದಿನಗಳ ಕಾಲ ನೆಲೆ ನಿಂತು ದಾಸೋಹ, ಲಿಂಗಪೂಜೆ, ಜ್ಞಾನದಾಸೋಹ ಕಾರ್ಯಗಳನ್ನು ಮಾಡುತ್ತಾ ಭಕ್ತರಿಗೂ ಅವುಗಳ ಮಹತ್ವದ ಬಗ್ಗೆ ಮನವರಿಕೆ ಮಾಡುತ್ತಾ ಕಲ್ಯಾಣದ ಕಡೆಗೆ ತಮ್ಮ ಪ್ರವಾಸ ಮುಂದುವರೆಸಿದರು. ಕಲಬುರಗಿಯ ಶರಣಸಿರಸಗಿ ಗ್ರಾಮದ ಆದಿದೊಡ್ಡಪ್ಪಗೌಡರು ಶರಣರನ್ನು ಕಲಬುರಗಿಗೆ ಆಹ್ವಾನಿಸಿ, ಅವರ ದಾಸೋಹ ಕಾರ್ಯಕ್ಕೆ ಸಹಕಾರ ನೀಡಲು ಮುಂದಾದರು. ಅಲ್ಲದೇ ಕಲ್ಯಾಣಕ್ಕೆ ಹೋಗುವುದನ್ನು ಬಿಟ್ಟು ಕಲಬುರಗಿಯೇ ಕಲ್ಯಾಣ ಮಾಡುವಂತೆ ವಿನಂತಿಸಿಕೊಂಡಾಗ ಭಕ್ತರ ಪರೀಕ್ಷೆಯನ್ನು ಮಾಡಿ ನಂತರ ಅದಿದೊಡ್ಡಪ್ಪ ಶರಣರ ಮನೆಯಲ್ಲಿ ನೆಲೆ ನಿಂತು ತಮ್ಮ ನಿತ್ಯ ದಾಸೋದ

ಕಾರ್ಯವನ್ನು ನಿರಂತರವಾಗಿ ನಡೆಸಿಕೊಂಡು ಬಂದು ಕೊನೆಗೆ ಅವರು ಕ್ರಿಶ. ೧೮೨೨ (ಶಾ.ಕೆ. ೧೭೪೪ ಚಿತ್ರಭಾನು ಸಂವ್ರ ಫಾಲ್ಗುಣಮಾಸದ ಸೋಮವಾರ) ರಂದು ಲಿಂಗೈಕ್ಯರಾದರು. ಅವರನ್ನು ಆದಿದೊಡ್ಡಪ್ಪ ಶರಣರು ತಮ್ಮ ಮನೆಯ ಮುಂಭಾಗದಲ್ಲಿಯೇ, ಸಮಾಧಿ ಮಾಡಿ ಅದರ ಮೇಲೆ ಭವ್ಯವಾದ ಮಂದಿರ ಕಟ್ಟಡವನ್ನು ನಿರ್ಮಿಸಿದರು. ಮುಂದೆ ಮುಂದೆ ಬಂದ ಪೀಠಾಧಿಪತಿಗಳು ಸಮಾಧಿ ಸ್ಥಳವನ್ನು ಹಂತ ಹಂತವಾಗಿ ವಿಸ್ತರಿಸಿದರು. ಗರ್ಭಗೃಹದಲ್ಲಿ ಎರಡು ಮುಕುಟಗಳಿವೆ. ಅದರಲ್ಲಿ ಬಲಗಡೆ ಗುರುಗಳಾದ ಮರುಳರಾಧ್ಯರು ಎಡಗಡೆ ಶರಣಬಸವೇಶ್ವರರ ಮುಕುಟ, ಗುರುಶಿಷ್ಯರ ಸಮಾಗಮದ ಸಂಕೇತವೇ ಈ ಎರಡು ಮೂರ್ತಿಗಳು. ಈ ಪ್ರಾಂಗಣದಲ್ಲಿ ಶರಣಬಸವೇಶ್ವರರು ನೆಲೆ ನಿಂತ ಕೋಣೆಗಳು, ಅವರು ನಡೆಸಿದ ದಾಸೋಹ ಮಹಾಮನೆ ಹಾಗೂ ಅವರ ಲಿಂಗೈಕ್ಯದ ಮುನ್ನ ಹಚ್ಚಿದ 'ನಂದಾದೀಪ' ಇಂದಿಗೂ ನಾವು ಇಲ್ಲಿ



ವೀಕ್ಷಿಸಬಹುದು. ಅಂದಿನಿಂದ ಇಂದಿನವರೆಗೆ ಶರಣರು ಹಾಕಿಕೊಟ್ಟ ಸಂಪ್ರದಾಯದಲ್ಲಿಯೇ ಸಂಸ್ಥಾನವು ಮುಂದುವರೆದುಕೊಂಡು ಬಂದಿರುವುದು ವಿಶೇಷವಾಗಿದೆ.

**ದೇವಲ ಗಾಣಗಾಪುರ:**

ದತ್ತ ಮಹಾರಾಜರ ದೇವಲಗಾಣಗಾಪುರ ರಾಜ್ಯದ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಲ್ಲೊಂದು, ಈ ದೇವಾಲಯ ಭೀಮಾ ಮತ್ತು ಅಮರ್ಜಾನದಿಗಳ ಸಂಗಮ ಸ್ಥಳದಲ್ಲಿದೆ. ಸಂಗಮೇಶ್ವರ ಹಾಗೂ ನರಸಿಂಹ ದೇವಾಲಯಗಳು ಇಲ್ಲಿಯ ಧಾರ್ಮಿಕ, ಪ್ರಾವಸಿ ತಾಣಗಳಾಗಿವೆ. ಮಹಾರಾಷ್ಟ್ರದಿಂದ ನರಸಿಂಹ ಸರಸ್ವತಿ ಮಹಾರಾಜರು ಕಡಗಂಚಿ ಮಾರ್ಗವಾಗಿ ಇಲ್ಲಿಗೆ ಆಗಮಿಸಿ ಹಲವು ವರ್ಷಗಳ ಕಾಲ ಇಲ್ಲಿ ನೆಲೆನಿಂತು, ಶ್ರೀಶೈಲಕ್ಕೆ ಹೊರಡುವಾಗ ದತ್ತಾತ್ರೇಯ ನಿರ್ಗುಣ ದೇವರ ಪಾದುಕೆಗಳನ್ನು ಇಲ್ಲಿ ಬಿಟ್ಟಿದ್ದಾರೆ. ಈ ಪಾದುಕೆಗಳ ಇಲ್ಲಿಗೆ ಆಗಮಿಸುವ ಭಕ್ತರಿಗೆ ಆರಾಧನೆಯ ದೈವವಾಗಿದೆ. ಅಂದಿನಿಂದ ಇಂದಿನವರೆಗೆ ಇಲ್ಲಿಯ ದತ್ತಾತ್ರೇಯ ದೇವಾಲಯ ಯಾತ್ರಿಕರ ಆಕರ್ಷಣೀಯ ಸ್ಥಳವಾಗಿದೆ. ಮಹಾರಾಷ್ಟ್ರದಿಂದ ಅಪಾರ ಸಂಖ್ಯೆಯ ಜನ ವರ್ಷವಿಡೀ ಇಲ್ಲಿ ಆಗಮಿಸಿ ಒಂದೆರಡು ದಿನ ದತ್ತಾತ್ರೇಯ ಸನ್ನಿಧಾನದಲ್ಲಿ ನೆಲೆನಿಂತು ಹೋಗುತ್ತಾರೆ. ಕರ್ನಾಟಕ ಹಾಗೂ ದೇಶದ ನಾನಾ ರಾಜ್ಯಗಳಿಂದ ಭಕ್ತರು ಇಲ್ಲಿಗೆ ಆಗಮಿಸುತ್ತಾರೆ. ಪವಿತ್ರವಾದ ಈ ಸ್ಥಳದಲ್ಲಿ ಭೂತ-ಪ್ರೇತಗಳ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಜನರಲ್ಲಿದೆ. ಇತ್ತೀಚಿನ ದಿನಗಳಲ್ಲಿ ನಾಡಿನ ರಾಜಕೀಯ ನಾಯಕರು ತಮ್ಮ ಸ್ಥಾನಮಾನಗಳನ್ನು ಭದ್ರಪಡಿಸಿಕೊಳ್ಳಲು ಗುರು (ದೇವರ) ವಿನ ಸನ್ನಿಧಾನಕ್ಕೆ ಆಗಮಿಸುತ್ತಿದ್ದಾರೆ.

**ಶ್ರೀಕ್ಷೇತ್ರ ಘತ್ತರಗಿ ಭಾಗ್ಯವಂತಿದೇವಿ ದೇವಾಲಯ:**

ಅಫಜಲಪೂರದ ದಕ್ಷಿಣಕ್ಕೆ ೧೫ ಕೀ.ಮೀ. ದೂರದಲ್ಲಿರುವ ಶ್ರೀಕ್ಷೇತ್ರ ಘತ್ತರಗಿ ಭಾಗ್ಯವಂತಿ ದೇವಾಲಯವು ಪ್ರಸಿದ್ಧ ಧಾರ್ಮಿಕ ಯಾತ್ರಾಸ್ಥಳವಾಗಿದೆ. ವಿಜಯನಗರದ ಸಾಮ್ರಾಜ್ಯದ ಕುಲದೇವತೆಯಾದ ಭುವನೇಶ್ವರಿ ದೇವಿಯು ವಿಜಯನಗರ ಕೊನೆಯ ಅರಸ ರಾಮರಾಯನಿಗೆ ಸಾಮ್ರಾಜ್ಯವನ್ನು ಉಳಿಸುವುದಕ್ಕಾಗಿ ಹಲವು ಬಾರಿ ಎಚ್ಚರಿಸಿದಾಗೂ ನಿರ್ಲಕ್ಷ್ಯ ತೋರಿ ಸಾಮ್ರಾಜ್ಯದ ಅವನತಿಯಾಯಿತು. ದೇವಿಯು ಅಲ್ಲಿಂದ ನಿರ್ಗಮಿಸಿ ತುಂಗಭದ್ರಾ ಮತ್ತು ಕೃಷ್ಣನದಿಗುಂಟ ಮೇಲ್ಮುಖವಾಗಿ ಸಾಗಿ ಬಂಧು ಘತ್ತರಗಿ ಹತ್ತಿರ ಸೂಕ್ತ ತಾಣದ ಹುಟುಕಾಟದಲ್ಲಿದ್ದಾಗ ಕುರಿಗಾಹಿ ಜಮ್ಮಣ್ಣನಿಗೆ ನದಿಯಾಳದಲ್ಲಿ ಧ್ವನಿಯೊಂದು ಕೇಳಿಸಿ ತನ್ನನ್ನು ಸೂಕ್ತ ತಾಣದಲ್ಲಿ ಪ್ರತಿಷ್ಠಾಪನೆ ಮಾಡಲು ಪ್ರೇರೇಪಿಸಿದಾಗ ಊರವರನ್ನು ಸೇರಿಸಿ ಜಮ್ಮಣ್ಣ ದೇವಿಯನ್ನು ತಮ್ಮೂರಿಗೆ ಬಂದು ನೆಲೆಸಲು ವಿನಂತಿಸಿಕೊಂಡಾಗ ಬೃಹತ್ ಗಾಜಿನ ಕಂಬದಲ್ಲಿ ಹಾವಿನ ರೂಪದಲ್ಲಿ ದೇವಿ ಪ್ರತ್ಯಕ್ಷವಾದಾಗ ಜನ ಭಯಬೀತರಾದರು. ಜಮ್ಮಣ್ಣ ಧೈರ್ಯದಿಂದ ದೇವಿಯನ್ನು ಬರಮಾಡಿಕೊಂಡನು. ಗುಡಿ ನಿರ್ಮಿಸಿದನು. ಗಾಜಿನ ಕಂಬ ಕ್ರಮೇಣ ಕರಿಯ ಕಲ್ಲಿನ ಕಂಬವಾಗಿ ಪರಿವರ್ತಿತವಾಯಿತು. ಈಗಲೂ ದೇವಿಯನ್ನು ಕಲ್ಲಿನ ಕಂಬದ ರೂಪದಲ್ಲೇ ಪೂಜಿಸಲಾಗುತ್ತದೆ. ಭುವನೇಶ್ವರಿ ದೇವಿ ಘತ್ತರಗಿ ಭಾಗ್ಯವನ್ನು ಬದಲಿಸಿ ಸುಖ ಸಮೃದ್ಧಿಗಳನ್ನು ನೆಲೆಸುವಂತೆ ಮಾಡಿದುದರಿಂದ ಭಾಗ್ಯವಂತಿ ದೇವಿ ಎಂದೇ ಪ್ರಸಿದ್ಧಳಾಗಿದ್ದಾಳೆ. ಬೇಡಿದವರ ಇಷ್ಟಾರ್ಥಗಳನ್ನು ಈಡೇರಿಸುವ ತಾಯಿ ಭಾಗ್ಯವಂತಿ ದೇವಿಯ ದರ್ಶನಕ್ಕೆ ಕರ್ನಾಟಕ,

ಮಹಾರಾಷ್ಟ್ರ, ತೆಲಂಗಾಣ, ಅಂಧ್ರಪ್ರದೇಶ ಸೇರಿದಂತೆ ದೇಶದ ನಾನಾ ಮೂಲೆಗಳಿಂದ ಭಕ್ತರು ಆಗಮಿಸುತ್ತಾರೆ.

**ಬುದ್ಧವಿಹಾರ:**

ಕಲಬುರ್ಗಿ ನಗರದಿಂದ ಪೂರ್ವಕ್ಕೆ ಸೇಡಂ ರಸ್ತೆಯ ಮಾರ್ಗದಲ್ಲಿ ೮ ಕಿ. ಮೀ. ದೂರದಲ್ಲಿರುವ ಆಧುನಿಕ ಕಟ್ಟಡ ಈ ಬುದ್ಧವಿಹಾರ. ಇದನ್ನು ಸುಮಾರು ೭೦ ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಬುದ್ಧ ವಿಹಾರಗಳ ಎಲ್ಲಾ ಅಂಶಗಳನ್ನು ಅಳವಡಿಸಿಕೊಂಡು ನಿರ್ಮಿಸಿರುವ ಇದರ ಕೇಂದ್ರ ಗುಮ್ಮಟವು ದೇಶದ ವಿಹಾರಗಳಲ್ಲೇ ಅತಂತ್ಯ ಎತ್ತರ ಹಾಗೂ ವಿಶಾಲವಾಗಿದೆ. ನೆಲಮಾಳಿಗೆಯಲ್ಲಿ ವಿಶಾಲವಾದ ಧ್ಯಾನಮಂದಿರವಿದೆ. ಮೇಲ್ಭಾಗದ ಪರಾಂಗಣದಲ್ಲಿ ಸುಂದರವಾದ ಬುದ್ಧನ ಪ್ರತಿಮೆ ಇದೆ. ಅದರ ಗುಮ್ಮಟದ ಒಳಭಾಗದಲ್ಲಿ ಗೌತಮಬುದ್ಧನ ಜೀವನಕ್ಕೆ ಸಂಬಂಧಿಸಿದ ಹಲವು ಮೂರ್ತಿಶಿಲ್ಪಗಳನ್ನು ನಿರ್ಮಿಸಲಾಗಿದೆ. ಇದರ ಸುತ್ತಲಿನ ಸ್ಥಳದಲ್ಲಿ ಸುಂದರವಾದ ಉದ್ಯಾನವನ ಹಾಗೂ ನಾಲ್ಕೂ ದಿಕ್ಕನಲ್ಲಿ ಸಾಂಚಿ ಮತ್ತು ಸಾರಾನಾಥ ಸೂಪ್ತದ ಮಾದರಿಯ ಪ್ರವೇಶದ್ವಾರಗಳನ್ನು ಹೋಲುವಂತಹ ರಚನೆಗಳು ಹಾಗೂ ಅಶೋಕಸ್ತಂಭದ ರಚನೆಯನ್ನು ಹೋಲುವಂತಹ ಸ್ತಂಭ ಮತ್ತು ಅಂಬೇಡ್ಕರರು ತಮ್ಮ ಸಂಗಡಿಗರೊಂದಿಗೆ ಬೌದ್ಧ ಧರ್ಮ ಸೇರ್ಪಡೆಗೆ ಹೊರಟ ದೃಶ್ಯದ ಮೂರ್ತಿಶಿಲ್ಪಗಳಿವೆ. ಇಲ್ಲಿಗೆ ಪ್ರತಿದಿನ ದೇಶದ ನಾನಾ ಭಾಗಗಳಿಂದ ಹಾಗೂ ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ಇದರ ವೀಕ್ಷಣೆಗೆ ಆಗಮಿಸುತ್ತಾರೆ. ಮುಂದಿನ ದಿನಗಳಲ್ಲಿ ಇದು ವಿದೇಶಿ ಪ್ರವಾಸಿಗರನ್ನು ಆಕರ್ಷಿಸುವುದಲ್ಲಿ ಸಂದೇಹವಿಲ್ಲ. ಪಾಲಿ ಅಧ್ಯಯನ ಕೇಂದ್ರ ಜೊತೆಗೆ ಶೈಕ್ಷಣಿಕ ಸಂಸ್ಥೆಗಳು ಇಲ್ಲಿ ನೆಲೆಗೊಂಡಿದ್ದು, ಅಂತರಾಷ್ಟ್ರೀಯ ಗುಣಮಟ್ಟದ ಸಭಾಗೃಹಗಳು, ಮಂದಿರಗಳು ಇಲ್ಲಿವೆ.

**ಅಮೃತ ಸರೋವರ:**

ನಗರದಿಂದ ಪೂರ್ವ ಸೇಡಂ ರಸ್ತೆಯಲ್ಲಿ ೧೦. ಕೀ.ಮೀ. ದೂರದಲ್ಲಿರುವ ಗೀತಾನಗರದ 'ಅಮೃತ ಸರೋವರ' ರಿಟ್ರೀಟ್ ಸೆಂಟರ್ ಸುಂದರ ಪ್ರಸಿದ್ಧ ಆಧ್ಯಾತ್ಮಿಕ ಪ್ರವಾಸಿ ತಾಣವಾಗಿದೆ. ದ್ವಾದಶ ಜ್ಯೋತಿರ್ಲಿಂಗಗಳು, ಜಲಪಾತ ಹೊಂದಿರುವ ಬೃಹತ್ ಶಿವಲಿಂಗ, ೨೦೦೦ ಜನ ಸುಖಾಸೀನಗಳಲ್ಲಿ ಕುಳಿತು ಕಾರ್ಯಕ್ರಮ ನಡೆಸಬಹುದಾದ ಸುಸಜ್ಜಿತ ತಾಂತ್ರಿಕ ಸೌಲಭ್ಯಗಳಿಂದ ಕೂಡಿದ ಸಭಾಂಗಣ ಹೀಗೆ ಹತ್ತು ಹಲವು ಆಕರ್ಷಣೀಯವಾದ ಅಮೃತ ಸರೋವರ ಪರಿಸರ ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಸೌಲಭ್ಯ. ಆಕರ್ಷಣೆಗಳನ್ನು ಸೇರಿಸುತ್ತಿದೆ. ಇತ್ತೀಚಿನ ಜಗತ್ತಿನ ಅತ್ಯಂತ ಹೆಚ್ಚು ಸಂಯಮ. ತಾಳ್ಮೆ ಹೊಂದಿದ ಮಹಿಳೆ ಎಂದೇ ಖ್ಯಾತರಾದ ಶತಾಯುಷಿ ದಾದಿ ಜಾನಕಿಯವರು ಭೇಟಿ ನೀಡಿದ್ದರು. ಎಲ್ಲಾ ಧರ್ಮ, ಜಾತಿ, ಮತ, ಪಂಥಗಳ ಸಾವಿರಾರು ಜನ ಭೇಟಿ ನೀಡುತ್ತಾರೆ. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ, ಸರಕಾರಿ ನೌಕರರಿಗೆ, ಶಿಕ್ಷಕರಿಗೆ ಪ್ರಾಧ್ಯಾಪಕರಿಗೆ, ಪೊಲೀಸ್, ಸಿಬ್ಬಂದಿಗೆ, ವೈದ್ಯರಿಗೆ ತರಬೇತಿ, ಕಾರ್ಯಗಾರಗಳನ್ನು ನಿರಂತರವಾಗಿ ನಡೆಸಲಾಗುತ್ತದೆ.

೩) ಐತಿಹಾಸಿಕ ಪ್ರವಾಸಿ ತಾಣಗಳು ಕಲಬುರಗಿ ಕೋಟೆ:

ಕಲಬುರ್ಗಿಯ ಹೃದಯ ಭಾಗದಲ್ಲಿರುವ ಬಹಮನಿ ಕೋಟೆಯನ್ನು ತಲುಪಲು



ನೇರವಾದ ರಸ್ತೆಗಳಿವೆ. ಸೂಪರ್ ಮಾರ್ಕೆಟ್‌ನಿಂದ ಕೇವಲ ಒಂದು ಕಿ.ಮೀ. ದೂರದಲ್ಲಿದೆ. ಕೋಟೆಗೆ ಎರಡು ಕಡೆಯಿಂದ ಪ್ರವೇಶದ್ವಾರಗಳಿವೆ. ಒಂದು ಪೂರ್ವಾಭಿಮುಖವಾಗಿದ್ದರೆ ಇನ್ನೊಂದು ಶಹಾಬಜಾರ ವೃತ್ತದಿಂದ ಪ್ರವೇಶಿಸಬಹುದು. ಪ್ರಸ್ತುತ ಕೋಟೆಯು ವಾರಂಗಲ್ಲಿನ ಕಾಕತೀಯರ ಸಾಮಂತ ದೊರೆ ರಾಜಾ ಗುಲಚಂದ್ರ ಕಟ್ಟಿಸಿದನೆಂದು ಪ್ರತೀತಿಯಿದೆ. ಅದರೆ ಬಹಮನಿ ಸುಲ್ತಾನರು ಕ್ರಿ. ಶ. ೧೩೫೦ ರಲ್ಲಿ ತಮ್ಮ ರಾಜಧಾನಿಯನ್ನು ದೌಲತಾಬಾದನಿಂದ ಇಲ್ಲಿಗೆ ಮರ್ಗಾಯಿಸಿದ ನಂತರ ಈ ಕೋಟೆಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಮಾರ್ಪಾಡು ಮಾಡಿದರು, ಮೂರು ಕಿ. ಮೀ. ಸುತ್ತಳತೆಯನ್ನು ಹಾಗೂ ಅದರ ಹೊರಭಾಗದಲ್ಲಿ ಆಳವಾದ ಕಂದಕವನ್ನು ಹೊಂದಿದ್ದು ಇದು ಕೃತಕ ಜಲದುರ್ಗವಾಗಿದೆ. ಕೋಟೆಯ ಸುತ್ತಲೂ ಹಲವು ಕಾವಲು ಗೋಪುರಗಳಿವೆ. ಅವುಗಳ ಮೇಲೆ ಒಟ್ಟು ೨೬ ತೋಪುಗಳನ್ನು ಅಳವಡಿಸಲಾಗಿದೆ, ಭಾರತದ ಇತಿಹಾಸದಲ್ಲಿಯೇ ಪ್ರಥಮವಾಗಿ ಬಹಮನಿ ಸುಲ್ತಾನರು ಯುದ್ಧರಂಗದಲ್ಲಿ ಹಾಗೂ ಕೋಟೆಗಳ ರಕ್ಷಣೆಗಳಲ್ಲಿ ತೋಪುಗಳನ್ನು ಬಳಸಿದರು. ಕೋಟೆಯ ಒಳಗಡೆ ಆನೆ, ಕುದುರೆಗಳಿಗೆ ಪ್ರತ್ಯೇಕ ಲಾಯಗಳಿವೆ. ಅಲ್ಲದೆ ಸೈನಿಕರ ವಸತಿ ನಿಲಯಗಳನ್ನು ನಾವು ಇಲ್ಲಿ ಕಾಣಬಹುದು. ಕೋಟೆಯನ್ನು ಬಲಪಡಿಸಿದವರಲ್ಲಿ ಒಂದನೇಯ ಮಹಮ್ಮದ ಶಹಾ ಹಾಗೂ ಫಿರೋಜಶಹಾರು ಪ್ರಮುಖರಾಗಿದ್ದಾರೆ. ಇಲ್ಲಿಯ ವಿದೇಶಿಯ ಮಾರುಕಟ್ಟೆ, ಸುಲ್ತಾನರ ವಿಶ್ರಾಂತಿ ಸ್ಥಳಗಳು, ಸುರಂಗ ಮಾರ್ಗಗಳು, ಗುಪ್ತದ್ವಾರಗಳು, ಭಾವಿಗಳು ರಾಜಧಾನಿ ಪಟ್ಟಣಕ್ಕೆ ಅಗತ್ಯವೆನಿಸುವ ಎಲ್ಲಾ ಕಟ್ಟಡಗಳನ್ನು ಕಲಬುರಗಿ ಕೋಟೆ ಹೊಂದಿದೆ. ಆದರೆ ಅರಮನೆಗಳು ಕಾಣಸಿಗುವುದಿಲ್ಲ. ಕಾರಣಾಂತರಗಳಿಂದ ನಾಶವಾಗಿರಬಹುದು. ಉತ್ಖನನ ನಡೆಸಿದರೆ ಮಹತ್ವದ ಅವಶೇಷಗಳು ಪ್ರಾಪ್ತವಾಗುತ್ತದೆ.

**ಜಾಮಿ ಮಸೀದಿ :**

ಕಲಬುರಗಿ ಕೋಟೆಯ ಕೇಂದ್ರ ಭಾಗದಲ್ಲಿ ರಚನೆಗೊಂಡ ಈ ಬೃಹತ್ ಮಸೀದಿಯು ಇಸ್ಲಾಮಿಕ್ ವಾಸ್ತುಶೈಲಿಯ ಅದ್ಭುತ ಕಟ್ಟಡವಾಗಿದೆ. ಏಷಿಯಾ ಖಂಡದಲ್ಲಿಯ ಅದ್ವಿತಿಯ ಹಾಗೂ ಆಕರ್ಷಣಿಯವಾದ ಈ ಕಟ್ಟಡವು ಇಂಡೋ-ಪರ್ಶಿ ಯನ್ ಶೈಲಿಯಲ್ಲಿದೆ. ಬಹಮನಿ ಮನೆತನದ ಎರಡನೇಯ ಸುಲ್ತಾನನಾದ ಒಂದನೇಯ ಮಹಮ್ಮದ್‌ಷಾನ ಕಾಲದಲ್ಲಿ ಇದನ್ನು ನಿರ್ಮಿಸಲಾಗಿದೆ. ಬಹಮನಿ ರಾಜ್ಯ ದಕ್ಷಿಣ ಭಾರತದಲ್ಲಿ ಭದ್ರಗೊಂಡ ನಂತರ

ಇಂತಹ ವಿಶೇಷ ಯೋಜನೆಯನ್ನು ರೂಪಿಸಿ, ಉತ್ತರ ಪರ್ಶಿಯಾದ ಕಾರಡೋವಾದಿಂದ ವಾಸ್ತುಶಿಲ್ಪಿ 'ಮಹಮ್ಮದ ರಫಿ'ಯನ್ನು ಇಲ್ಲಿಗೆ ಬರಮಾಡಿಕೊಂಡಿರುವ ಮಸೀದಿಯ ನೀಲ ನಕ್ಷೆಯನ್ನು ಸಿದ್ಧಪಡಿಸಿ, ಸ್ಥಳೀಯ ಕಾರ್ಮಿಕರ ಸಹಯೋಗದೊಂದಿಗೆ ಇದನ್ನು ನಿರ್ಮಿಸಲಾಯಿತು. ಈ ಕಾರ್ಯ ಕ್ರಿ.ಶ. ೧೩೬೭ ಆಗಸ್ಟ್ ೩೦ ರಂದು ಪೂರ್ತಿಗೊಂಡಿರುವ ವಿಷಯ ಮಸೀದಿಯ ಪ್ರವೇಶದ್ವಾರದ ಕಮಾನಿನ ಎಡಭಾಗದಲ್ಲಿರುವ ಅರೇಬಿಕ್ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಇದನ್ನು ವಿದೇಶಿಯರು "ಕಾರ್ಡೋವಾ ಮಸೀದಿ" ಎಂದು ಸಹ ಕರೆಯುತ್ತಾರೆ. ೨೧೬-೧೭೬ ಅಡಿ ಉದ್ದ-ಅಗಲವಾಗಿದೆ. ಈ ಮಸೀದಿಯ ಪೂರ್ವ-ಉತ್ತರ-ದಕ್ಷಿಣ ಭಾಗಗಳಿಗೆ ತೆರೆದ ಕಮಾನುಗಳಿದ್ದು, ಪಶ್ಚಿಮಕ್ಕೆ ಮಾತ್ರ ಗೋಡೆಯನ್ನು ಹೊಂದಿದೆ (ಮಕ್ಕಾಭಾಗ),



ಒಳಭಾಗದಲ್ಲಿ ೨೫೦ ಕಮಾನುಗಳು, ೧೫೦ ಕಂಬಗಳು ಹಾಗೂ ಮೇಲ್ಭಾಗದ ೧೧೫ ವಿವಿಧ ಬಗೆಯ ಗುಮ್ಮಟಗಳನ್ನು ಹೊಂದಿದೆ, ಇಲ್ಲಿಯ ಬೃಹತ್ತಾದ ಹಾಗೂ ಕಿರಿದಾದ ಕಮಾನುಗಳು ಅತ್ಯಂತ ಆಕರ್ಷಕವಾಗಿ ರಚಿಸಲಾಗಿದೆ. ಕೇಂದ್ರ ಗುಮ್ಮಟದ ಒಳಭಾಗ ಆಕರ್ಷಕವಾಗಿದ್ದು, ಕುರಾನಿನ ವಾಕ್ಯ, ಹಸನ್, ಮಹಮ್ಮದ್, ಅಲ್ಲಾಹೋ ಅಕ್ಬ ಎನ್ನುವ ಸುಂದರವಾದ ಅಕ್ಷರಗಳನ್ನು ಹೊಂದಿದೆ. ಪ್ರೊ. ಷೇಕ್ ಅಲಿಯವರ ಪ್ರಕಾರ ಪ್ರಾರಂಭದಲ್ಲಿ ಇದನ್ನು ರಾಜಕೀಯ ಹಾಗೂ ಧಾರ್ಮಿಕ ಚಟುವಟಿಕೆಗಳಿಗಾಗಿ ಬಳಸಲಾಗುತ್ತಿತ್ತು ಎಂದು ಹೇಳಿದ್ದಾರೆ. ಇಮಾಮ್‌ರು ಬಳಿ ನಿಂತು ಪ್ರಾರ್ಥನೆ ಮಾಡಿದರೆ ಆ ಧ್ವನಿ ಇಡೀ ಪ್ರಾಂಗಣದಲ್ಲಿ ಕೇಳಿಸುತ್ತದೆ. ಕಟ್ಟಡ ವಾಸ್ತುಶಿಲ್ಪಿಗಳು ಆ ರೀತಿ ಗುಮ್ಮಟಗಳನ್ನು ಜೋಡಿಸಿರುವುದು ಇದರ ವಿಶೇಷತೆಯಾಗಿದೆ. ನಂತರದಲ್ಲಿ ಈ ತಂತ್ರಜ್ಞಾನವನ್ನು ಮುಂದೆ ವಿಜಯಪುರದ ಗೋಳಗುಮ್ಮಟ ಮತ್ತು ಹಯದ್ರಾಬಾದಿನ ಗೋಲ್ಗೊಂಡಾ ಕೋಟೆಗಳಲ್ಲಿ ಕಾಣಬಹುದು.

**ಕಾವಲು ಗೋಪುರಗಳು:**

ಬಹಮನಿ ಕೋಟೆಯಲ್ಲಿರುವ ಕಾವಲು ಗೋಪುರ (ರಣಮಂಡಲ)ಗಳು ಸಹ ಪ್ರಮುಖ ಆಕರ್ಷಕ ಪ್ರವಾಸಿ ತಾಣಗಳಾಗಿವೆ. ಅದರಲ್ಲಿ ರಣಮಂಡಲ (ಬಾಲ ಹಿಸ್ಸಾರ) ಹನುಮಾನ ಬುರ್ಜ್, ಕಾಲಿಬುರ್ಜ್ ಪ್ರಮುಖವಾಗಿವೆ. ಪ್ರತಿಯೊಂದು ಕಾವಲು ಗೋಪುರಗಳ ಮೇಲೆ ಬೃಹದಾಕಾರದ ತೋಪುಗಳು, ಮದ್ದುಗುಂಡು ಸಂಗ್ರಹ ಸ್ಥಳ, ಸೈನಿಕರ ವಿಶಾಂತ್ರಿ ಕೋಣೆಗಳಿವೆ. ಕೋಟೆಯ ಪೂರ್ವ ದಿಕ್ಕಿನಿಂದ ಪ್ರವೇಶಿಸಿದರೆ ಮುಂಭಾಗದಲ್ಲಿ ಚೌಕಕಾರದ ರಚನೆಯಂತೆ ಕಂಡುಬರುವ ಕಟ್ಟಡವೆ ರಣಮಂಡಲ. ಇದು ೮೦-೧೦೦ ಅಡಿ ಉದ್ದ-ಅಗಲ ಹಾಗೂ ೧೦೦ ಅಡಿ ಎತ್ತರವಾಗಿದೆ. ಇದರ ಮೇಲೆ ಹತ್ತಲು ಎರಡು ಕಡೆ ಮೆಟ್ಟಲುಗಳಿವೆ. ಮೇಲ್ಭಾಗದಲ್ಲಿ ೧೫ ಅಡಿ ಉದ್ದನೆಯ ಎರಡು ಹಾಗೂ ೨೦ ಅಡಿ ಉದ್ದನೆಯ ಒಂದು ತೋಪು ಒಟ್ಟು ಮೂರು ತೋಪುಗಳಿವೆ. ಕೋಟೆಯ ಒಳಗಡೆ ಇರುವ ಇತರ ಪ್ರೇಕ್ಷಣಿಯ

ಸ್ಥಳಗಳೆಂದರೆ, ವಿದೇಶಿಯ ಮಾರುಕಟ್ಟೆ, ಶಸ್ತ್ರಾಸ್ತ್ರಗಳ ಸಂಗ್ರಹಾಗಾರ, ದೇವಾಲಯದ ಅವಶೇಷಗಳು, ಸುರಂಗ ಮಾರ್ಗಗಳು, ನೀರಿನ ತಾಣಗಳು, ಸುಲ್ತಾನರ ಹಾಗೂ ಸೈನಿಕರ ವಿಶ್ರಾಂತಿ ಗೃಹಗಳು ಹೀಗೆ ಹಲವು ಸ್ಥಳಗಳು ಕೋಟೆಯೊಳಗಿವೆ.

**ಶಹಾಬಜಾರ ಮಸೀದಿ :**

ಕಲಬುರ್ಗಿ ಕೋಟೆಯ ಶಹಾಬಜಾರ ವೃತ್ತದ ಕಡೆಯ ಪ್ರವೇಶದ್ವಾರದಿಂದ ಉತ್ತರ ದಿಕ್ಕಿನಲ್ಲಿ ಅರ್ಧ ಕಿ.ಮೀ. ದೂರದಲ್ಲಿರುವ ಈ ಕಟ್ಟಡ ಶಹಾಬಜಾರ ಮಸೀದಿ (ಲಾಲ್ ಹನುಮಾನ ದೇವಸ್ಥಾನ ಹತ್ತಿರ) ಬಹಮನಿ ಸುಲ್ತಾನ ಒಂದನೇಯ ಮಹಮ್ಮದ್ ಶಹಾನ ಕಾಲದಲ್ಲಿ ನಿರ್ಮಾಣಗೊಂಡ (೧೩೬೫) ಮಸೀದಿ ಪ್ರಾರಂಭದಲ್ಲಿ ಸುಲ್ತಾನರ ಪ್ರಾರ್ಥನೆಗಾಗಿ ಇದನ್ನು ನಿರ್ಮಿಸಲಾಯಿತು. ಕೋಟೆಯ ಒಳಗಡೆ ಮಸೀದಿ ನಿರ್ಮಿಸಿದ ನಂತರ, ಇದನ್ನು ದೇಶ ವಿದೇಶದಿಂದ ಬರುವ ವ್ಯಾಪಾರಸ್ಥರಿಗಾಗಿ ಬಳಸಲಾಯಿತು. ಆದ್ದರಿಂದ ಇದನ್ನು ಶಹಾಬಜಾರ್ ಮಸೀದಿ ಎಂದು ಕರೆಯುತ್ತಾರೆ. ರಶಿಯಾ ಪ್ರವಾಸಿ ನಿಕೆಟಿನ್ ಇಲ್ಲಿಗೆ ಭೇಟಿ ನೀಡಿ ಇದರ ಕುರಿತು ತನ್ನ ಪ್ರವಾಸಿ ಕಥನದಲ್ಲಿ ಉಲ್ಲೇಖಿಸಿದ್ದಾರೆ.



ಈ ಪ್ರದೇಶದಲ್ಲಿ ದೊಡ್ಡದಾದ ಕುದುರೆ ವ್ಯಾಪಾರ ನಡೆಯುತ್ತಿದ್ದು, ತಿಂಗಳಲ್ಲಿ ಕನಿಷ್ಟ ೧೦ ದಿನಗಳವರೆಗೆ ನಿರಂತರವಾಗಿ ವ್ಯಾಪಾರ ನಡೆಯುತ್ತಿತ್ತು. ಪ್ರತಿ ತಿಂಗಳು ೧೦-೧೫ ಸಾವಿರ ಕುದುರೆಗಳ ಮಾರಾಟ ನಡೆಯುತ್ತಿತ್ತು ಎಂದು ವಿವರಿಸಿದ್ದಾರೆ. ದೇಶ-ವಿದೇಶಿಯ ವ್ಯಾಪಾರಸ್ಥರು, ಸರದಾರರು, ರಾಜನ ಆಸ್ಥಾನದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಇಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಇದರ ಪ್ರವೇಶದ್ವಾರವು ಅರ್ಧ ಚಂದ್ರಾಕೃತಿಯ ಕಮಾನ ಆಕಾರದಲ್ಲಿದ್ದು, ಒಳಗಡೆ ವಿಶಾಲವಾದ ಅಂಗಳವಿದೆ. ಅಂಗಳದ ಪಶ್ಚಿಮ ಭಾಗದಲ್ಲಿ ೧೭ ಕಂಬಗಳು ಮತ್ತು ಕಮಾನುಗಳು ಪ್ರವೇಶವಿದ್ದು, ೧೨೫ ಅಡಿ ಉದ್ದ ೬೦ ಅಡಿ ಅಗಲದ ಆಯತಾಕಾರದಲ್ಲಿದೆ. ಇದರ ಮೇಲ್ಭಾಗದಲ್ಲಿ ೯೦ ಕಿರಿದಾದ ಗುಮ್ಮಟಗಳಿವೆ. ಒಟ್ಟಾರೆ ಇದರ ರಚನೆಯು ನೋಡಲು ನಯನ ಮನೋಹರವಾಗಿದೆ.

**ಶೇಖರೋಜಾ:**

ಶಹಾಬಜಾರ ಮಸೀದಿಯಿಂದ ಪಶ್ಚಿಮ ದಿಕ್ಕಿನಲ್ಲಿ ಅರ್ಧ ಕಿ.ಮೀ. ದೂರದಲ್ಲಿರುವ ಎರಡು ವೃತ್ತಕಾರದ ಮಿನಾರಗಳನ್ನು 'ಸೋ ಮಿನಾರ್' ಎಂದು ಕರೆಯುತ್ತಾರೆ. ಇದು ಮೂಲತಃ ಪ್ರಾರಂಭದ ಬಹಮನಿ ಸುಲ್ತಾನರ ಕಾಲದಲ್ಲಿ ಕಲಬುರ್ಗಿಗೆ ಆಗಮಿಸಿ, ಇಲ್ಲೆ ನೆಲೆ ನಿಂತು ಸಾವನ್ನಪ್ಪಿದ ಶ್ರೇಷ್ಠ ಸಂತರಾದ ಶೇಖ್-ಸಿರಾಜ್-ಉದ್- ದಿನ್-

ಜುನೈದಿಯರ ಸಮಾಧಿಯ ಪ್ರವೇಶದ್ವಾರ. ಇದನ್ನು ಶೇಖರೋಜಾ ದರ್ಗಾ ಎಂದು ಕರೆಯುತ್ತಾರೆ. ಶಹಾಬಜಾರ್ ದರ್ಗಾದ ಸಂತರ ಸಮಾಧಿಯ ದರ್ಶನಕ್ಕೆ ಹೋಗಲು ವಿಶಾಲವಾದ ರಾಜಮಾರ್ಗದಲ್ಲಿದೆ. ಅದರ ಎರಡೂ ಬದಿಯಲ್ಲಿ ಸುಮಾರು ೧೦೦ ಅಡಿ ಎತ್ತರದ ಮಿನಾರುಗಳಿವೆ. ಮಿನಾರುಗಳ ಒಳಗಡೆಯಿಂದ ಮೇಲೆ ಹತ್ತಲು ಮೆಟ್ಟಲುಗಳಿದ್ದು, ಇಲ್ಲಿಂದ ಜನರಿಗೆ ಪ್ರಾರ್ಥನೆಗೆ ಕರೆಯನ್ನು ನೀಡಲಾಗುತ್ತಿತ್ತು.

ಇದರ ಹಿಂಭಾಗದಲ್ಲಿ ಸಂತರ ಹಾಗೂ ಅವರ ವಂಶಸ್ಥರ ಮತ್ತು ಅನುಯಾಯಿಗಳ ಸಮಾಧಿಗಳಿವೆ. ಸಮಾಧಿಯ ದರ್ಶನ ಪಡೆಯಲು ಅಪಾರ ಸಂಖ್ಯೆಯ ಅನುಯಾಯಿಗಳು ಬರುತ್ತಿದ್ದರು. ಅವರಿಗಾಗಿ ಬಹಮನಿ ಮತ್ತು ಆದಿಲ್‌ಶಾಹಿ ಸುಲ್ತಾನರು ಭಕ್ತರಿಗಾಗಿ ನೀರಿನ ವ್ಯವಸ್ಥೆ, ಆಹಾರ, ವಿಶ್ರಾಂತಿ ನೆಲೆಗಳನ್ನು ನಿರ್ಮಿಸಿರುವ ಕುರಿತು ಇಲ್ಲಿಯ ಶಾಸನಗಳಲ್ಲಿ ಉಲ್ಲೇಖಗಳಿವೆ.

**ಶೋರ್ (ಚೋರ್) ಗುಮ್ಮಟ:**

ಕಲಬುರಗಿ ನಗರದ ಆಳಂದ ನಗರಕ್ಕೆ ತೆರಳುವ ವರ್ತುಲ ರಸ್ತೆಯಲ್ಲಿ ನೀರು ಶುದ್ಧೀಕರಣ ಘಟಕದ ಎದುರುಗಡೆ “ಗೋಳಗುಮ್ಮಟ” ಮಾದರಿಯ ದೊಡ್ಡ ಕಟ್ಟಡವಿದೆ. ಇದನ್ನು ಚೋರ್ ಗುಮ್ಮಟ ಎಂದು ಕರೆಯುತ್ತಾರೆ. ಭೌಗೋಳಿಕವಾಗಿ ಎತ್ತರದ ಸ್ಥಳದಲ್ಲಿ ನಿರ್ಮಿಸಿರುವ ಇದರಲ್ಲಿ ಯಾವುದೇ ಸಮಾಧಿಗಳು ಇರುವುದಿಲ್ಲ. ಇದು ಸಂತರು ಮೇಲೆ ನಿಲ್ಲಲು ನಿರ್ಮಿಸಿರುವ ಸ್ಥಳ ಎಂದು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ. ಹೊರಗಿನಿಂದ ನೋಡಿದರೆ ಎರಡು ಅಂತಸ್ತಿನ ಕಟ್ಟಡದಂತೆ ಕಾಣುವ ಇದು ಒಳಗಡೆ ಒಂದೇ ವಿಶಾಲವಾದ ಪ್ರಾಂಗಣ, ಮೇಲೆ ಹತ್ತಲು ಎರಡುಕಡೆ ಮೆಟ್ಟಿಲುಗಳಿವೆ. ಮೇಲ್ಭಾಗದಲ್ಲಿ ಗುಮ್ಮಟದ ಒಳಭಾಗದಿಂದಲೂ ಹಾಗೂ ಹೊರಭಾಗದಿಂದಲೂ ಸುತ್ತಲು



ಅವಕಾಶವಿದೆ. ಗುಮ್ಮಟದ ನಾಲ್ಕು ದಿಕ್ಕಿನಲ್ಲಿ ಜಾಲಂದ್ರಗಳು ಇದ್ದು, ಒಳಭಾಗವನ್ನು ವೀಕ್ಷಿಸಬಹುದು. ಗುಮ್ಮಟದ ಒಳಬಾಗವು ಸುಂದರವಾದ ಚಿತ್ರಗಳ ಅಲಂಕಾರ ಹಾಗೂ ಕುರಾನಿನ ವಾಕ್ಯಗಳನ್ನು ರಚಿಸಲಾಗಿದೆ. ಆಗಲೂ ವಿವಿಧ ಬಗೆಯ ಬಣ್ಣಗಳ ಚಿತ್ರಗಳನ್ನು ನೋಡಬಹುದು. ಮೇಲ್ಭಾಗದಲ್ಲಿ ವಿಶಾಲವಾದ ಹಾಗೂ ಎತ್ತರವಾದ ಗುಮ್ಮಟ, ಅದರ ನಾಲ್ಕು ಬದಿಯಲ್ಲಿ ಗೋಪುರಗಳಿವೆ. ಇದನ್ನು “ಕಲಬುರ್ಗಿಯ ಗೋಳಗುಮ್ಮಟ” ಎಂದು ಕರೆಯಲಾಗುತ್ತದೆ.

**ಸಾಥ (ಹಪ್ತ) ಗುಮ್ಮಟಗಳು:**

ಖ್ವಾಜಾ ಬಂದೇನವಾಜ್ ದರ್ಗಾಕ್ಕೆ ಹೋಗುವ ಮಾರ್ಗದಲ್ಲಿರುವ ಗುಮ್ಮಟಗಳ ಸಮೂಹದ ಸ್ಥಳವೇ ಸಾಥಗುಂಬಜ್. ಇಲ್ಲಿ ಒಟ್ಟು ಏಳು ಗುಮ್ಮಟಗಳಿರುವುದರಿಂದ ಇದನ್ನು ಹಣ್ಣ ಅಥವಾ ಸಾಥ(ಅಂದರೆ ಏಳು) ಗುಂಬಜ್

ಎಂದು ಕರೆಯುತ್ತಾರೆ. ಆದರೆ ಮೂಲತಃ ಇದು ಐದು ಜನ ಬಹಮನಿ ಸುಲ್ತಾನರ ಸಮಾಧಿಯ ಸ್ಥಳವಾಗಿದೆ. ಪ್ರಾರಂಬಿಕ ಮೂರು ಸುಲ್ತಾನರನ್ನು ಹೊರತುಪಡಿಸಿ, ಉಳಿದ ಐದು ಜನ ಸುಲ್ತಾನರಾದ ದಾವುದ ಶಹ, ಮುಜಾಹಿದ ಶಾಹ, ಘಿಯಾಸುದ್ದೀನ್ ಶಾಹ, ಷಂಷುದ್ದೀನ ಶಹಾ ಫಿರೋಜ ಶಹಾರ ಸಮಾಧಿಗಳಿವೆ. ಇವುಗಳಲ್ಲಿ ಎರಡು ಜೋಡು ಗುಮ್ಮಟಗಳಿದ್ದು, ಉಳಿದ ಮೂರು ಒಂದೊಂದು ಗುಮ್ಮಟಗಳನ್ನು ಹೊಂದಿವೆ. ಇದರಲ್ಲಿ ಫಿರೋಜ್‌ಶಹಾನ ಸಮಾಧಿಯನ್ನು ಹೊರತುಪಡಿಸಿದರೆ ಉಳಿದ ಸಮಾಧಿಗಳು ಸರಳ ಶೈಲಿ (ತುಘಲಕ್ ಶೈಲಿಯಲ್ಲಿವೆ. ಸಮಾಧಿಗಳು ಸುಲ್ತಾನರ ವ್ಯಕ್ತಿತ್ವದ ಪ್ರತಿಬಿಂಬಗಳಂತಿವೆ. ಸುಲ್ತಾನರು ತಾವು ಜೀವಿತ ಅವಧಿಯಲ್ಲೇ ತಮ್ಮ ತಮ್ಮ ಸಮಾಧಿಗಳನ್ನು ತಮಗೆ ಇಷ್ಟಬಂದಂತೆ ನಿರ್ಮಿಸಿಕೊಳ್ಳುವ ಸಂಪ್ರದಾಯ ಇಸ್ಲಾಂ ರಾಜರುಗಳಲ್ಲಿದೆ. ಕಲೆ ಮತ್ತು ವಾಸ್ತು ಶಿಲ್ಪ ರಂಗದಲ್ಲಿ ಆಸಕ್ತಿ ಹೊಂದಿದ ಸುಲ್ತಾನರು ತಮ್ಮ ಸಮಾಧಿಗಳನ್ನು ಭವ್ಯವಾಗಿ ನಿರ್ಮಿಸಿಕೊಂಡಿದ್ದಾರೆ. ಆಂತರಿಕ ಸೌಂದರ್ಯಕ್ಕೂ ವಿಶೇಷ ಗಮನ ಹರಿಸಿದ್ದಾರೆ. ಆ ರೀತಿಯ ಅಂಶಗಳನ್ನು ನಾವು ಇಲ್ಲಿ ವೀಕ್ಷಿಸಬಹುದು. ಫಿರೋಜಶಹಾನ ಸಮಾಧಿ ಆತನ ವ್ಯಕ್ತಿತ್ವಕ್ಕೆ ಕೈಗನ್ನಡಿಯಂತಿದೆ ವಿಭಿನ್ನ ಶೈಲಿಯ ಈ ಕಟ್ಟಡದಲ್ಲಿ ಹಿಂದೂ, ರಾಜಸ್ಥಾನಿ, ಬೆಂಗಾಲಿ, ಇರಾನ್, ಇರಾಕ್, ಪರ್ಶಿಯನ್ ಮುಂತಾದ ವಾಸ್ತು ಶೈಲಿಯ ಲಕ್ಷಣಗಳನ್ನು ಒಟ್ಟಾಗಿ ಕಾಣುತ್ತೇವೆ.

**ಖ್ವಾಜಾ ಬಂದೇನವಾಜ್ ದರ್ಗಾ :**

ಸಾಥ ಗುಮ್ಮಟದಿಂದ ಅರ್ಧ ಕಿ.ಮೀ. ದೂರದಲ್ಲಿ ಮತ್ತೊಂದು ಗುಮ್ಮಟಗಳ ಸಮುಚ್ಛಯ ಕಂಡುಬರುತ್ತದೆ. ಅದೇ ಶ್ರೇಷ್ಠ ಸೂಫಿ ಸಂತರಾದ ಖ್ವಾಜಾ ಬಂದೇ ನವಾಜರ, ಅವರ ಕುಟುಂಬದ ಸದಸ್ಯರು, ಅರಸು ಪರಿವಾರದ ಸದಸ್ಯರು ಹಾಗೂ ಅನುಯಾಯಿಗಳ ಸಮಾಧಿಗಳ ಸ್ಥಳ, ಕ್ರಿ.ಶ. ೧೩೯೯ರಲ್ಲಿ ಈ ಸಂತರನ್ನು ಸುಲ್ತಾನ ಫಿರೋಜ್ ಶಹಾನು ದೌಲತಾಬಾದದಿಂದ ಕಲಬುರ್ಗಿಗೆ ಆಹ್ವಾನಿಸಿದ, ಅವರಿಗೆ ಇಲ್ಲಿಯೇ ನೆಲೆಸಲು ಎಲ್ಲಾ ವ್ಯವಸ್ಥೆಗಳನ್ನು ಕಲ್ಪಿಸಿಕೊಟ್ಟನು. ಸುಲ್ತಾನರು ಇಲವರನ್ನು ತಮ್ಮ ಮಾರ್ಗದರ್ಶಕ ರು ಹಾಗೂ ಆಧ್ಯಾತ್ಮ ಗುರುಗಳೆಂದು ಗೌರವಿಸುತ್ತಿದ್ದರು. ಪ್ರಾರಂಭದ ಕೆಲವು ವರ್ಷಗಳವರೆಗೆ ಸಂತರು ಕೋಟೆಯ ಒಳಭಾಗದಲ್ಲಿ ವಾಸವಾಗಿದ್ದರು. ನಂತರ ಅವರು ಪ್ರಸ್ತುತ ಸಮಾಧಿಯ ಸ್ಥಳಕ್ಕೆ ಬಂದು ನೆಲೆ ನಿಂತರು. ೧೦೫ ವರ್ಷ ಬದುಕಿದ

ಖ್ವಾಜಾ ಬಂದೇ ನವಾಜನು ಸುಮಾರು ೧೦೫ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿರು. ಇವರ ದರ್ಶನಕ್ಕೆ ಅಪಾರ ಸಂಖ್ಯೆಯ ಜನಸಮೂಹ ಆಗಮಿಸುತ್ತಿತ್ತು. ಕ್ರಿ.ಶ. ೧೪೨೨ ರಲ್ಲಿ ಸ್ವಾಜಾ ಬಂದೇ ನವಾಜರು ವಿಧಿವಶವಾದನಂತರ ಅದೇ ಸ್ಥಳದಲ್ಲಿ ಸುಲ್ತಾನ ಅಹಮ್ಮದ ಷಾನು ಬೃಹತ್ ಸಮಾಧಿಯನ್ನು ನಿರ್ಮಿಸಿದನು. ಇದು ಭಾರತದಲ್ಲಿ ಸೂಫಿ ಸಂತರಗಾಗಿ ನಿರ್ಮಿಸಿರುವ ಸಮಾಧೀಗಳಲ್ಲಿ ಎರಡನೇಯ ಎತ್ತರವಾದ ಕಟ್ಟಡವಾಗಿದೆ. ಇದರ ಒಳ ಅಲಂಕಾರ ಅತ್ಯಂತ ಅದ್ಭುತವಾಗಿದ್ದು, ತಳಮಟ್ಟದಿಂದ ಮೇಲ್ಮಟ್ಟದವರೆಗೆ ಸುಂದರವಾದ ಚಿತ್ರಗಳಿಂದ ಕಂಗೊಳಿಸುತ್ತದೆ. ಆದರೆ ಪ್ರಸ್ತುತ ಮೂಲ ಚಿತ್ರಗಳನ್ನು ತೆಗೆದುಹಾಕಿ ರಾಜಸ್ಥಾನಿಯ ಮಾದರಿಯಲ್ಲಿ ವಿವಿಧ ಬಣ್ಣಗಳ ಗ್ಲಾಸುಗಳನ್ನು ಕೂಡಿಸಲಾಗಿದೆ. ಇದು ಸಹ ಕಟ್ಟಡದ ಸೌಂದರ್ಯವನ್ನು ಹೆಚ್ಚಿಸುತ್ತಿದೆ. ಇದೇ ಆವರಣದಲ್ಲಿ ಬಂದೇನವಾಜರ ಮೊಮ್ಮಗ ಅಕ್ಬ ಹುಸೇನಿ ಸಮಾಧಿ, ಚಾಂದಬೀಬಿ ಸಮಾಧಿ, ಸಂತರ ಮಗಳ ಮತ್ತು ಪತ್ನಿಯರ ಸಮಾಧಿಗಳು ಪ್ರಮುಖವಾಗಿವೆ. ಅಲ್ಲದೆ ಸಂತರ ಬಗ್ಗೆ ಅರಿತುಕೊಂಡ ಮೊಗಲ್ ಚಕ್ರವರ್ತಿ ಔರಂಗಜೇಬನು ವಿಶಾಲವಾದ ಕಮಾನಿನ ಆಕಾರದ ಪ್ರವೇಶದ್ವಾರವನ್ನು ನಿರ್ಮಿಸಿದ್ದಾನೆ, ಅದನ್ನು 'ಔರಂಗಜೇಬ ಆಲಂಗೀರ ದರ್ವಾಜ' ಎಂದು ಕರೆಯುತ್ತಾರೆ. ಈ ಪ್ರಾಂಗಣದಲ್ಲಿ ಆದಿಲ್‌ಶಾಹಿಗಳ ಕಾಲದ ಕೆಲವು ಕಟ್ಟಡಗಳು ನಿರ್ಮಾಣವಾಗಿವೆ.

**ಮಳಖೇಡ (ಮಾನ್ಯಖೇಟ):**

ಕನ್ನಡ ಸಾರಸತ್ವ ಲೋಕಕ್ಕೆ ಪ್ರಥಮ ಕೃತಿ 'ಕವಿರಾಜಮಾರ್ಗ' ನೀಡಿದ ನಾಡು ಮಳಖೇಡವು ಸೇಡಂನಿಂದ ಪಶ್ಚಿಮಕ್ಕೆ ೧೨ ಕಿ. ಮೀ ದೂರದಲ್ಲಿರುವ ಕಾಗಿಣಾ ನದಿಯ ಎಡದಂಡೆಯ ಮೇಲಿದೆ. ರಾಷ್ಟ್ರಕೂಟರ ರಾಜಧಾನಿಯಾದ ಈ ಪ್ರದೇಶಕ್ಕೆ ಕ್ರಿ. ಶ. ೮- ೧೦ನೇ ಶತಮಾನದ ಇತಿಹಾಸವಿದೆ. ರಾಷ್ಟ್ರಕೂಟರ ಮೂರನೇಯ ಗೋವಿಂದ ಹಾಗೂ ಅಮೋಘವರ್ಷ ನೃಪತುಂಗರ ಕಾಲಕ್ಕೆ ಮಳಖೇಡ ರಾಜಧಾನಿಯಲ್ಲಿ ಹಲವು ಕಟ್ಟಡಗಳು ನಿರ್ಮಾಣಗೊಂಡು, ಜಗತ್ತಿನ ಪ್ರಮುಖ ರಾಜಧಾನಿ ಪಟ್ಟಣಗಳಲ್ಲಿ ಇದು ಒಂದಾಗಿದೆ ಎಂದು ವಿದೇಶಿ ಯಾತ್ರಿಕ ಸುಲೈಮಾನನ ವರದಿ ಹಾಗೂ ಶ್ರೀ ವಿಜಯನ ಕವಿರಾಜಮಾರ್ಗದಲ್ಲಿ ರಾಜಧಾನಿಯ ವರ್ಣನೆಯೇ ಇದಕ್ಕೆ ಸಾಕ್ಷಿಯಾಗಿದೆ. ಇಲ್ಲಿಯ ಕೋಟೆ ಹಾಗೂ ಕಾವಲು ಗೋಪುರಗಳ ರಚನೆಗಳು ಪ್ರಾಚೀನ ಶೈಲಿಯಲ್ಲಿವೆ. ಕೋಟೆಯ ಪ್ರವೇಶದ್ವಾರಗಳು ರಾಜಮಾರ್ಗ ಹಾಗೂ ಇತರ ಕಟ್ಟಡಗಳನ್ನು ಇಂದಿಗೂ ನೋಡಬಹುದಾಗಿದೆ. ಅಮೋಘವರ್ಷ ನೃಪತುಂಗನು ಜೈನ ಧರ್ಮಕ್ಕೆ ರಾಜಾಶ್ರಯ ನೀಡಿದ ಪ್ರಯುಕ್ತ ಈ ಭಾಗದಲ್ಲಿ ಹಲವು ಜೀನಾಲಯಗಳು ಹಾಗೂ ಬಸಿದಿಗಳನ್ನು ನಿರ್ಮಾಣಗೊಂಡವು. ಆ ಪರಂಪರೆಯನ್ನು ನಾವು ಮಾನ್ಯಖೇಟದಲ್ಲಿ ಇಂದಿಗೂ ನೋಡಬಹುದಾಗಿದೆ. ಅಲ್ಲದೇ ದಂಡನಾಯಕರಾದ ಬಂಕೇಶ, ಲೋಕಾದಿತ್ಯರು ನಾಡಿನ ಹಲವು ಕಡೆಗಳಲ್ಲಿ ಬಸದಿಗಳು ನಿರ್ಮಿಸಿದರು. ಮಳಖೇಡ ಪಟಣ್ಣವು ಮಧ್ವ ಸಂಪ್ರಾದಾಯದವರ ಒಂದು ಪ್ರಮುಖ ಧಾರ್ಮಿಕ ಸ್ಥಳವೂ ಆಗಿದೆ. ಜಯತೀರ್ಥರು, ರಘುನಾಥತೀರ್ಥರು, ವ್ಯಾಸತೀರ್ಥರು, ಸತ್ಯನಿಧಿತೀರ್ಥರ ಬೃಂದಾವನಗಳು ಇಲ್ಲಿವೆ. ನಾಡಿನ ಬೇರೆ ಬೇರೆ ಭಾಗಗಳಿಂದ ಮಧ್ವ

ಸಂಪ್ರದಾಯಸ್ಥರು ವರ್ಷದುದ್ದಕ್ಕೂ ಇಲ್ಲಿಗೆ ಆಗಮಿಸುತ್ತಾರೆ. ಕ್ರಿ.ಶ. ೧೪-೧೫ನೇಯ ಶತಮಾನದಲ್ಲಿ ಬಹಮನಿ ಸುಲ್ತಾನರು ಮಳಖೇಡವನ್ನು ವಶಪಡಿಸಿಕೊಂಡು ಅಲ್ಲಿ ತಮಗೆ ಅವಶ್ಯವೆನಿಸುವ ಕಟ್ಟಡಗಳನ್ನು



ರಚಿಸಿಕೊಂಡರು. ಅವುಗಳಲ್ಲಿ ಕಾಳಿಮಸೀದಿ, ಕಾವಲು ಗೋಪುರಗಳು, ಕೋಟೆ, ಹೂಡೆ, ಬತ್ತೇರಿಗಳಿವೆ.

**ನಾಗಾವಿ (ಚಿತ್ತಾಪುರ) :**

ಚಿತ್ತಾಪುರ ಪಟ್ಟಣದಿಂದ ೫ ಕಿ.ಮೀ. ದೂರದಲ್ಲಿ ನಾಗಾವಿ ಎನ್ನುವ ಐತಿಹಾಸಿಕ ಹಾಗೂ ಧಾರ್ಮಿಕ ಪ್ರವಾಸಿ ತಾಣವಿದೆ. ಶಾಸನಗಳಲ್ಲಿ ಇದನ್ನು ಅಗ್ರಹಾರ ನಾಗಬಾವಿ" , "ಮಹಾ ಅಗ್ರಹಾರ ನಾಗಬಾವಿ" , "ಸರ್ವನಮಸ್ಯದ ಅಗ್ರಹಾರ ನಾಗಬಾವಿ" ಎಂದು ಉಲ್ಲೇಖವಾಗಿದೆ. ಇದು ಅರಲು ೩೦೦ರ ರಾಜಧಾನಿ ಪಟ್ಟಣವಾಗಿತ್ತು. ಕಲ್ಯಾಣಿ ಚಾಲುಕ್ಯರ ಒಂದನೆಯ ಸೋಮೇಶ್ವರನ ಕಾಲದ ಸ್ತಂಭ ಶಾಸನ, ೬೦ ಕಂಬಗಳ ಮಧುಸೂದನ ದೇವಾಲಯ ಘಟಿಕಸ್ಥಾನದ ಆವರಣದಲ್ಲಿದೆ. ಇಲ್ಲಿ ವೇದಾಧ್ಯಯನ, ಶಾಸ್ತ್ರಾಧ್ಯಯನ ಹಾಗೂ ಇತರ ವಿದ್ಯೆಯ ಅಧ್ಯಯನಕ್ಕೆ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಗ್ರಂಥಪಾಲಕರಿಗೆ ಒಟ್ಟು ೨೫೭ ಜನರಿಗೆ ಸ್ಥಳಾವಕಾಶವಿದ್ದು ಇದರ ನಿರ್ವಹಣೆಗಾಗಿ ಹೈಹಯ ಮಹಾಮಂಡಲೇಶ್ವರ ಅಯ್ಯರಸ ಭೂಮಿಯನ್ನು ದತ್ತಿ ನೀಡಿರುವ ವಿಷಯವನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಅಲ್ಲದೇ ಪ್ರಾಚೀನ ಕಾಲದ ದಕ್ಷಿಣ ಭಾರತದ ನಲಂದ ವಿಶ್ವವಿದ್ಯಾಲಯವೆಂದು ಇದನ್ನು ಕರೆಯಲಾಗುತ್ತದೆ. ನಾಗಾವಿಯ ಪ್ರಾಮುಖ್ಯತೆಯನ್ನು ಬಿಂಬಿಸುವ ಹಲವು ಶಾಸನಗಳು ಲಭ್ಯವಾಗಿವೆ. ಬಹಮನಿ ಸುಲ್ತಾನರು ತಮ್ಮ ಅಧಿಕಾರ ಅವಧಿಯಲ್ಲಿ ಇದನ್ನು ವಶಪಡಿಸಿಕೊಂಡು ಅಲ್ಲಿ ತಮಗೆ ಅವಶ್ಯವಾದ ಜಾಮಿ ಮಸೀದಿ, ಕಾವಲು ಗೋಪುರ, ಸಭಾಭವನ ಹಾಗೂ ಇತರ ಕಟ್ಟಡಗಳನ್ನು ನಿರ್ಮಿಸಿದರು. ಪ್ರಸ್ತುತ ನಾಗಾವಿ ಯಲ್ಲಮ್ಮದೇವಿಯ ದೇವಸ್ಥಾನ ಧಾರ್ಮಿಕ ಯಾತ್ರಿಕರಿಗೆ ಅತ್ಯಂತ ಮಹತ್ವದ ಪವಿತ್ರ ಯಾತ್ರಾ ಸ್ಥಳವಾಗಿದೆ. ನಾಡಿನ ನಾನಾ ಭಾಗದ ಮತ್ತು ಮಹಾರಾಷ್ಟ್ರ, ತೆಲಂಗಾಣ ಮತ್ತು ಅಂಧ್ರಪ್ರದೇಶದಿಂದ ಜನರು ವರ್ಷವಿಡೀ ಇಲ್ಲಿಗೆ ಆಗಮಿಸುತ್ತಾರೆ.

**ಸನ್ನತಿ:**

ಚಿತ್ತಾಪುರದಿಂದ ನೈಋತ್ಯ ಭಾಗಕ್ಕೆ ೪೮ ಕಿ.ಮೀ.ದೂರದಲ್ಲಿದೆ. ಭೀಮಾ ನದಿಯ ದಂಡೆಯ ಮೇಲೆ ಇರುವ ಈ ಗ್ರಾಮವನ್ನು ಪ್ರಾಚೀನ ಶಾಸನಗಳಲ್ಲಿ "ಸೋಥಿ" , "ಸೋಂದಾ" ಎಂದು ಕರೆಯಲಾಗಿದೆ. ಮೌರ್ಯರ ಅಶೋಕ ಚಕ್ರವರ್ತಿಯ ಕಾಲಕ್ಕೆ ಹಾಗೂ ಶಾತವಾಹನರ ಕಾಲಕ್ಕೆ ಸಂಬಂಧಿಸಿದ ಪ್ರಮುಖ ಪಟ್ಟಣಗಳಲ್ಲಿ ಇದು ಇಂದಾಗಿದೆ ಎಂದು ಇಲ್ಲಿ ಲಭ್ಯವಾದ ಶಾಸನ ಹಾಗೂ ಅವಶೇಷಗಳಿಂದ ತಿಳಿದುಬರುತ್ತದೆ. ಗ್ರಾಮದ ಹೊರ

ವಲಯದಲ್ಲಿ ಶಾತವಾಹನರ ಕಾಲದಲ್ಲಿ ನಿರ್ಮಾಣಗೊಂಡ ಇಟ್ಟಿಗೆಯ ಕೋಟೆ, ಗ್ರಾಮದ ಇನ್ನೊಂದು ಬದಿಯಲ್ಲಿ ಚಂದ್ರಲಾ ಪರಮೇಶ್ವರಿ ದೇವಸ್ಥಾನ ಹಾಗೂ ಅಲ್ಲಿಂದ ಮೂರು ಕಿ.ಮೀ. ದೂರದಲ್ಲಿರುವ ಕನಗನಹಳ್ಳಿಯಲ್ಲಿ ಪ್ರಾಚೀನ ಕಾಲದ ಸ್ತೂಪದ ಅವಶೇಷಗಳು ಪ್ರವಾಸಿ ಪ್ರಮುಖ ಆಕರ್ಷಣೆಗಳಾಗಿವೆ. ಅಶೋಕನ ಕಾಲದ ಶಾಸನಗಳು ಇಲ್ಲಿ ಲಭ್ಯವಾಗಿರುವುದರಿಂದ ಆತನ ರಾಜ್ಯ ಇಲ್ಲಿಯವರೆಗೆ ವಿಸ್ತಾರಗೊಂಡಿರ ಬಹುದಾಗಿದೆ. ಶಾತವಾಹನರ ಕಾಲದಲ್ಲಿ ನಿರ್ಮಾಣಗೊಂಡ ಬೃಹತ್ ಸ್ತೂಪವು ಕಲಾನಂತರದಲ್ಲಿ ಭೀಮಾನದಿಯ ಪ್ರವಾಹದಿಂದ ನಾಶಗೊಂಡಿರಬಹುದಾಗಿದೆ. ೧೯೫೪ರ ನಂತರ ಇದನ್ನು ಗುರುತಿಸಿ, ಮುಂದೆ ೧೯೮೫ರಲ್ಲಿ ಭಾರತೀಯ ಪುರಾತತ್ವ ಇಲಾಖೆಯು ಇಲ್ಲಿ ಭೂ



ಉತ್ಖನನ ಕೈಗೊಂಡಿತು. ಆಗ ಇಲ್ಲಿ ಸ್ತೂಪದ ಹಲವು ಅವಶೇಷಗಳು ಲಭ್ಯವಾದವು. ಅವುಗಳಲ್ಲಿ ಗೌತಮಬುದ್ಧನ ಮೂರ್ತಿಶಿಲ್ಪಗಳು, ಬುದ್ಧನ ಜೀವನಕ್ಕೆ ಸಂಬಂಧಿಸಿದ ಹಲವಾರು ಶಿಲ್ಪಗಳು ಸ್ತೂಪದ ಸುತ್ತಲೂ ಅಳವಡಿಸಲಾಗಿದೆ. ಇಲ್ಲಿ ದೊರೆತ ಪ್ರಮುಖ ಮೂರ್ತಿಶಿಲ್ಪಗಳೆಂದರೆ ಅಶೋಕ ಮತ್ತು ಅವನ ರಾಣಿಯರದು. ಇದೊಂದು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರಮುಖ ಪ್ರವಾಸಿ ತಾಣವಾಗಿದೆ.

**ಕಾಳಗಿ :**

ಕಲಬುರ್ಗಿಯಿಂದ ಪೂರ್ವ ದಿಕ್ಕಿನಲ್ಲಿ ೪೫ ಕಿ.ಮೀ. ದೂರದಲ್ಲಿರುವ ಕಾಳಗಿಯು ಒಂದು ಪ್ರಮುಖ ಐತಿಹಾಸಿಕ ಪ್ರೇಕ್ಷಣಿಯ ಸ್ಥಳವಾಗಿದೆ. ಇದು ಮನ್ನೆದಡಿ ೧೦೦೦ದ ರಾಜಧಾನಿ ಪಟ್ಟಣವಾಗಿತ್ತು. ಪ್ರಾಚೀನ ಕಾಲದ ಶೈಕ್ಷಣಿಕ ಹಾಗೂ ರಾಜಕೀಯ ಚಟುವಣಿಕೆಗಳ ಕೇಂದ್ರಸ್ಥಾನವಾಗಿರುವ ಇಲ್ಲಿಂದ ಹಲವು ಶಾಸನಗಳು ಪತ್ತೆಯಾಗಿವೆ. ಕಲ್ಯಾಣಿ ಚಾಲುಕ್ಯ ಅರಸರು ಇಲ್ಲಿಯ ದೇವಾಲಯಗಳಿಗೆ ದಾನದತ್ತಿಯನ್ನು ನೀಡಿರುವ ವಿಷಯ ಹಲವು ಶಾಸನಗಳಲ್ಲಿ ಉಲ್ಲೇಖವಾಗಿದೆ. ಇಲ್ಲಿಯ ಶಾಸನೋಕ್ತಿ ದೇವಾಲಯಗಳೆಂದರೆ ಸೋಮೇಶ್ವರ, ಬೆಬ್ಬೇಶ್ವರ, ಕಾಳೇಶ್ವರ, ಜಯಲಿಂಗೇಶ್ವರ ಹಾಗೂ ಗೋಕೇಶ್ವರ ದೇವಾಲಯಗಳು. ಆದರೆ ಇಂದು ಇಲ್ಲಿಯ ದೇವಾಲಯಗಳನ್ನು ಬೇರೆ ಬೇರೆ ಹೆಸರಿನಲ್ಲಿ ಕರೆಯಲಾಗುತ್ತಿದೆ. ಗ್ರಾಮದ ಹೊರವಲಯದಲ್ಲಿ ಕಾಳಿಂಗ ದೇವಾಲಯದ ಬಲಭಾಗದಲ್ಲಿ "ಸೂರ್ಯನಾರಾಯಣ" ತ್ರಿಕೂಟ ದೇವಾಲಯವಿದೆ. ಇದರ ಹೊರಭಾಗದಲ್ಲಿ ಸುಂದರವಾದ ಶಿಲಾ ಬಾಲಕಿಯರ ಮೂರ್ತಿಶಿಲ್ಪಗಳಿವೆ. ಇದರ ಒಂದು ಗರ್ಭಗುಡಿ ಶಿಥಿಲವಾಗಿದೆ. ಇಲ್ಲಿಯ ಕಾಳೇಶ್ವರ ದೇವಾಲಯದ ಪ್ರಾಂಗಣದಲ್ಲಿ ನೀಲಕಂಠ, ಕಾಳೇಶ್ವರ, ರೇವಣಸಿದ್ದೇಶ್ವರ, ಈಶ್ವರ, ಸೋಮೇಶ್ವರ ಹಾಗೂ ವೀರಭದ್ರ ದೇವಾಲಯಗಳಿವೆ. ವಿಶಾಲವಾದ ತೆರೆದ ಮಂಟಪ, ಸಮೀಪದಲ್ಲಿ ಪುಷ್ಕರಣಿ ಇದೆ. ಇದರ ಸಮೀಪದಲ್ಲಿಯೆ ಒಂದು ಹಳ್ಳ ಹರಿಯುತ್ತದೆ. ಇಲ್ಲಿಯ ಚತುರ್ಮುಖ ಗಣಪತಿ ವಿಗ್ರಹ ವಿಶೇಷವಾಗಿದೆ. ತ್ರಿಕೂಟ ಬಸದಿಯನ್ನು ಸಹ ಇಲ್ಲಿ ಕಾಣಬಹುದು. ಒಟ್ಟಿನಲ್ಲಿ

ಈ ಪ್ರದೇಶವು ಹಲವು ಮೂರ್ತಿಶಿಲ್ಪಗಳಿಂದ ಹಾಗೂ ದೇವಾಲಯಗಳಿಂದ ಕೂಡಿದ ಒಂದು ಪ್ರಮುಖ ಪ್ರವಾಸಿ ತಾಣವಾಗಿದೆ.

ಕಲಬುರಗಿ ಜಿಲ್ಲೆಯಲ್ಲಿ ಬರುವ ಪ್ರತಿಯೊಂದು ಗ್ರಾಮಗಳು ಧಾರ್ಮಿಕ, ಐತಿಹಾಸಿಕ ಹಾಗೂ ನೈಸರ್ಗಿಕ ನೆಲೆಗಳನ್ನು ಹೊಂದಿವೆ. ಶಾತವಾಹನರ, ಮೌರ್ಯರ ರಾಷ್ಟ್ರಕೂಟರ, ಚಾಲುಕ್ಯರ, ವಿಜಯನಗರ ಸಾಮ್ರಾಜ್ಯದ ಸ್ಮಾರಕಗಳ ಅವಶೇಷಗಳನ್ನು ಹೇರಳವಾಗಿ ಹೊಂದಿವೆ.

**ಸೇಡಂ:**

ಇತಿಹಾಸದಲ್ಲಿ ಸೇಡಂ ತನ್ನದೇ ಅದ ಪ್ರಮುಖ ಸ್ಥಾನವನ್ನು ಹೊಂದಿದೆ. ಈ ಭಾಗವನ್ನು ಮೌರ್ಯರು, ಶಾತವಾಹನರು, ಬಾದಾಮಿ, ಚಾಳುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲಚೂರರು, ಬಹಮನಿ ಅರಸರು, ನಾಯಕರು ಹಾಗೂ ಹೈದರಾಬಾದಿನ ನಿಜಾಮರು ಆಳಿದರು. ಪಂಚಲಿಂಗೇಶ್ವರ ದೇವಾಲಯ ಸೇಡಂ ಪಟ್ಟಣದ ಅತ್ಯಂತ ಆಕರ್ಷಣೀಯ ಸ್ಮಾರಕಗಳಲ್ಲಿ ಇದು ಒಂದಾಗಿದೆ. ೮ ಅಡಿ ಎತ್ತರದ ಜಗುಲಿಯ



ಮೇಲೆ ನಿರ್ಮಾಣಗೊಂಡು ಪಶ್ಚಿಮಾಭಿಮುಖವಾಗಿ ನಿಂತಿರುವ ಈ ದೇವಾಲಯವು ಸೇಡಂನ ಒಂದು ಉತ್ಕೃಷ್ಟ ಕಲಾಕೃತಿಯಾಗಿದೆ. ಚಾಲುಕ್ಯರ ಶೈಲಿಯ ಈ ದೇವಾಲಯದಲ್ಲಿ ಕುಸರಿ ಕೆತ್ತನೆಯ ಶಿಲ್ಪ ಜನಮನವನ್ನು ಸೂರೆಗೊಳ್ಳುತ್ತದೆ. ಆದುದರಿಂದ ಇದಕ್ಕೆ ಪಂಚಲಿಂಗೇಶ್ವರ ದೇವಾಲಯ ಎಂದು ಹೆಸರು ಬಂದಿದೆ. ಈ ದೇವಾಲಯವು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ರಚನೆಯಾಗಿದೆ, ಈ ದೇವಾಲಯದ ಮೆಟ್ಟಿಲುಗಳನ್ನು ಏರುತ್ತಿದ್ದಂತೆ ಕೈಯಲ್ಲಿ ತ್ರಿಶೂಲ, ಆದಿಶೇಷ, ಡಮರುಗ, ಕಪಾಲ ಹಿಡಿದು ನಿಂತಿರುವ ದ್ವಾರಪಾಲಕರ ಶಿಲಾಮೂರ್ತಿಗಳು, ಶಿಲಾಬಾಲಕಿಯರು, ಸಂಗೀತಗಾರರು ಆಕರ್ಷಿಸುತ್ತವೆ. ತ್ರಿಭಂಗಿಗಳಲ್ಲಿ ನಿಂತ ಶಿಲಾಬಾಲಕಿಯರು ಪ್ರೇಕ್ಷಕರನ್ನು ದೇವಾಲಯಕ್ಕೆ ಸ್ವಾಗತಿಸುತ್ತಾರೆ. ದೇವಾಲಯದ ಅತ್ಯಂತ ಆಕರ್ಷಣೀಯ ಭಾಗವೆಂದರೆ ಸುಂದರವಾಗಿ ಕೆತ್ತಿದ ಭುವನೇಶ್ವರಿ ಶಿಲ್ಪ ಇಲ್ಲಿರುವ ಅಷ್ಟ ದಿಕ್ಪಾಲಕರು ಮತ್ತು ಅವರ ವಾಹನಗಳು ಜೀವಂತ ಕಳೆಯಿಂದ ಕಂಗೊಳಿಸುತ್ತವೆ. ಆಡಕಿ, ಕೋಡ್ಲಾ, ಹಂದರಕಿ, ಮುಗನೂರು, ಊಡಗಿ, ಬಟಗೇರಾ (ಬಿ), ಮೆದಕ, ಮೋತಕಪಲ್ಲಿ, ಬೆನಕನಹಳ್ಳಿ, ಸಿಂಧನಮಡು, ಶಿಲಾರಕೋಟ ಹಲವಾರು ಪ್ರದೇಶಗಳಲ್ಲಿ ಕೋಟೆ ಕೊತ್ತಲಗಳು, ದೇವಾಲಯಗಳು, ಜೈನಬಸದಿಗಳು, ಶಿಲಾಮೂರ್ತಿಗಳು ಗಮನ ಸೆಳೆಯುತ್ತವೆ.

ಕಲಬುರ್ಗಿ ಜಿಲ್ಲೆಯ ಪ್ರತಿಯೊಂದು ಹಳ್ಳಿಯೂ ಒಂದಿಲ್ಲೊಂದು ವಿಶೇಷವನ್ನು ಪಡೆದಿವೆ. ಭೀಕರ ಬರದಲ್ಲೂ ಬತ್ತದ ಚಿಂಚೋಳಿ ಪಟ್ಟಣದ ಹೊರವಲಯದ ಪಾಪನಾಶ ಎಂದೇ ಪ್ರಸಿದ್ಧವಾದ ಪಂಚಲಿಂಗೇಶ್ವರ ಪುಷ್ಕರಣಿ, ವಿಜ್ಞಾನೇಶ್ವರರ ಮೇಲೆ ಬೆಳಕು ಚೆಲ್ಲುವ ಮರೆಯಲಾಗದ ಮರತೂರು. ಅಪರೂಪದ ಪ್ರಾಣಿಗಳ ವನ್ಯಜೀವಿಧಾಮ, ಗತವೈಭವ ಸಾರುವ ನಿಂಬರ್ಗಾ, ಶ್ರೇಷ್ಠ ತತ್ವಪದಕಾರ ಕಡಕೋಳ ಮಡಿವಾಳಪ್ಪ ಊರು ಜೇವರ್ಗಿಯ ಕಡಕೋಳ, ಸೂಫಿ ಪರಂಪರೆಯ ಚನ್ನೂರಿನ ಜಲಾಲ್ ಸಾಹೇಬ, ಕಲ್ಯಾಣಿ ಚಾಲುಕ್ಯರ ಕಾಲದ ಧಾರ್ಮಿಕ ಕೇಂದ್ರ ಚಿಂಚೋಳಿ ತಾಲೂಕಿನ ಗಡಿಕೇಶ್ವಾರ, ಆಳಂದದ ಪ್ರತಿಗ್ರಾಮದಲ್ಲೂ ಐತಿಹಾಸಿಕ ಕುರುಹುಗಳು ಸಿಗುತ್ತವೆ.

ಕಲಬುರ್ಗಿ ಜಿಲ್ಲೆಯ ಎಲ್ಲಾ ಪ್ರವಾಸಿ ತಾಣಗಳನ್ನು ಜನಪ್ರಿಯಗೊಳಿಸಲು ಈ ಕೆಳಕಂಡ ಅಗತ್ಯವಾದ ಅಂಶಗಳನ್ನು ತುರ್ತಾಗಿ ನೆರವೇರಿಸಿದರೆ ಅದ್ಭುತವಾದ ಪ್ರಗತಿಯನ್ನು ಸಾಧಿಸಬಹುದು.

೧) ಉತ್ತಮವಾದ ಸರ್ವಋತು ಸಂಪರ್ಕ ರಸ್ತೆಗಳನ್ನು ನಿರ್ಮಿಸಬೇಕು.

೨) ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು.

೩) ಪ್ರವಾಸೋಧ್ಯಮ ಇಲಾಖೆಯ ಜಾಲತಾಣದಲ್ಲಿ (ಚಿತ್ರ, ಆಡಿಯೋ, ವೀಡಿಯೋ) ಬಹು ಮಾಧ್ಯಮದ ಎಲ್ಲಾ ಆಯಾಮಗಳನ್ನು ಬಳಸಿ ಸಮಗ್ರವಾದ ಮಾಹಿತಿ ನೀಡಬೇಕು.

೪) ಪದವೀಧರರಿಗೆ ಪ್ರವಾಸಿ ಗೈಡ್ ತರಬೇತಿ ಕೊಡಿಸಿ ಪೂರ್ಣಕಾಲಿಕವಾಗಿ ಅದೇ ವೃತ್ತಿಯಲ್ಲಿ ತೊಡಗಲು ಪ್ರೇರೇಪಿಸಬೇಕು.

೫) ಖಾಸಗಿ ಸಹಭಾಗಿತ್ವದಲ್ಲಿ ಉತ್ತಮವಾದ ಹೋಟೆಲುಗಳನ್ನು ಪ್ರಾರಂಭಿಸಬೇಕು.

೬) ಐತಿಹಾಸಿಕ ತಾಣಗಳ ಮಾಹಿತಿಯಿರುವ ಆಕರ್ಷಕವಾದ ಬಹುಭಾಷೆಗಳ

ಕಿರುಹೊತ್ತಿಗೆಗಳನ್ನು ಮುದ್ರಿಸಿ ಆಸಕ್ತ ಪ್ರವಾಸಿಗಳಿಗೆ ಸಿಗುವಂತೆ ಮಾಡಬೇಕು.

೭) ಸಾರ್ವಜನಿಕ ಸ್ಥಳಗಳಲ್ಲಿ ದೊಡ್ಡ ಗಾತ್ರದ ಜಾಹೀರಾತು ಫಲಕಗಳ ಮೂಲಕ ಪ್ರಚಾರ ಮಾಡಬೇಕು.

೮) ದೃಶ್ಯ ಮಾಧ್ಯಮ ಮತ್ತು ಮುದ್ರಣ ಮಾಧ್ಯಮದ ಮೂಲಕ ಪ್ರಚಾರ ಮಾಡಬೇಕು.

೯) ಎಲ್ಲಾ ಕಾರ್ಯಗಳು ದೂರಗಾಮೀ ಸುಸ್ಥಿರವಾಗ ದೃಷ್ಟಿ ಹೊಂದಿರಬೇಕು.

೧೦) ಪ್ರಸಿದ್ಧ ಸೆಲೆಬ್ರೆಟಿಗಳನ್ನು ಪ್ರಚಾರ ರಾಯಭಾರಿಗಳನ್ನಾಗಿ ಗುರುತಿಸಿ ಪ್ರಚಾರ ಮಾಡಬೇಕು.

೧೧) ಶ್ರೀ ಶರಣಬಸವೇಶ್ವರರ ಅಥವಾ ಕಲಬುರ್ಗಿಯ ಮಹಾನ್ ವ್ಯಕ್ತಿಗಳ ಬೃಹತ್ ಪ್ರತಿಮೆಗಳನ್ನು ಸ್ಥಾಪಿಸಿ ಮನೋರಂಜನಾ ತಾಣಗಳನ್ನು ನಿರ್ಮಿಸಬೇಕು.

೧೨) ಅಪ್ಪನ ಕೆರೆಯ ಆವರಣದಲ್ಲಿ ವಾಟರ್ ಪಾರ್ಕ್ ನಿರ್ಮಿಸಬೇಕು

೧೩) ಜನಪದ ವಸ್ತುಗಳು, ಐತಿಹಾಸಿಕ ವಸ್ತುಗಳನ್ನು ಸಂಗ್ರಹಿಸಿ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಬೇಕು ಇರುವ ವಸ್ತುಸಂಗ್ರಹಾಲಯವನ್ನು ಇನ್ನಷ್ಟು ಶ್ರೀಮಂತ ಅರ್ಥಪೂರ್ಣವಾಗಿ ಸಜ್ಜುಗೊಳಿಸಬೇಕು.

☆

# ಸಾಹಿತ್ಯ ಮತ್ತು ಸಂಸ್ಕೃತಿ

**ಡಾ. ಅಮೃತಾ ಆರ್. ಕಟಕ**

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಎಂಬುದು ಕನ್ನಡಿಗರಿಗೆ ಹಿಗ್ಗಿನ ಸುಗ್ಗಿ, ಸಾಹಿತಿಗಳೆಲ್ಲ ತಮ್ಮ ಕೃತಿಗಳನ್ನು ಮತ್ತು ವಿಚಾರಗಳನ್ನು ಒಟ್ಟುಗೂಡಿಸಿ ರಾಶಿ ಮಾಡುವ ಸುಸಂದರ್ಭವಿದು. ಎಲ್ಲರಿಗೂ ಶುಭಾಶಯಗಳು.

'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಜನರಿಂದ ತುಂಬಿದ ಕಲಬುರಗಿ ಜಿಲ್ಲೆ, ಶಾಸ್ತ್ರೀಯ ಭಾಷಾ ಸ್ಥಾನಮಾನ ಪಡೆದಿರುವ ಕನ್ನಡ ಸಾಹಿತ್ಯದ ಮೊಟ್ಟಮೊದಲ ಉಪಲಬ್ದ ಗ್ರಂಥ 'ಕವಿರಾಜಮಾರ್ಗ'ವನ್ನು ರಚಿಸಿದ ಶ್ರೀವಿಜಯನಿಗೆ ಆಶ್ರಯ ನೀಡಿದಂಥ ನೃಪತುಂಗ ಚಕ್ರವರ್ತಿಯು ಆಳಿದ: ಕನ್ನಡ ಸಾಹಿತ್ಯ ಚಟುವಟಿಕೆಗೆ ನೆಲೆಯಾದ, ಮಾನ್ಯಖೇಟವನ್ನು ಹೊಂದಿರುವ ಕಲಬುರಗಿ ಜಿಲ್ಲೆ, ಗಣಿತಸಾರ ಸಂಗ್ರಹವೆಂಬ ಅಂಕಗಣಿತ, ಬೀಜಗಣಿತ, ರೇಖಾಗಣಿತದಂಥ ವಿಷಯಗಳನ್ನು ಕಾವ್ಯಮಯವಾಗಿ, ಸರಳವಾಗಿಯೂ ತಿಳಿಸುವ ಶ್ರೇಷ್ಠಮಟ್ಟದ ಪುಸ್ತಕ ರಚನೆಗೆ ಜೈನಮುನಿ ಮಹಾವೀರಾಚಾರರಿಗೆ ಆಶ್ರಯ ನೀಡಿದ ಕಲಬುರಗಿ ಜಿಲ್ಲೆ, ಕುಮುದೇಂದು ಪಂಡಿತನಿಂದ 'ಸಿರಿಭೂವಲಯ'ವೆಂಬ ಸಂಖ್ಯಾಶಾಸ್ತ್ರ ಗ್ರಂಥ ರಚನೆಗೆ ಕಾರಣವಾದ ಕಲಬುರಗಿ ಜಿಲ್ಲೆ, ಕನ್ನಡಿಗ ಮರತೂರಿನ ವಿಜ್ಞಾನೇಶ್ವರರಿಂದ (ಯಾಜ್ಞವಲ್ಕರ ಸ್ಮತಿಗೆ ವ್ಯಾಖ್ಯಾನ) 'ಮಿತಾಕ್ಷರ'ದಂಥ ಭಾರತೀಯ ನ್ಯಾಯ ಪದ್ಧತಿಯ ಮಹತ್ವದ ಗ್ರಂಥ ಬರೆಯಿಸಿದ ಪ್ರಖ್ಯಾತ ಕಲಬುರಗಿ, (ಮಧ್ಯಯುಗದಿಂದ ಇಲ್ಲಿಯವರೆಗೆ ಭಾರತದಾದ್ಯಂತ ಜಾರಿಯಲ್ಲಿರುವ ನ್ಯಾಯ ಪದ್ಧತಿ) ದೇವಪುರದ ಲಕ್ಷ್ಮೀಶನಿಂದ ಜೈಮಿನಿ ಭಾರತವನ್ನೂ, ಶ್ರೀಧರಚಾರನಿಂದ 'ಜಾತಕ ತಿಲಕ'ವೆಂಬ ಜ್ಯೋತಿಷ್ಯ ಶಾಸ್ತ್ರವನ್ನು ಬರೆಯಿಸಿದ ಕಲಬುರಗಿ, ಜಿಲ್ಲೆಯು ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ.

ಜೈನರ ಕಾವ್ಯದ ಶರಣರ ವಚನದ | ದಾಸರ ಹಾಡಿನ ಈ ನಾಡು ಎಂಬ ಪ್ರಸಿದ್ಧ ಹಾಡಿಗೆ ನನ್ನ ನಾಲ್ಕು ಸಾಲು ಸೇರಿಸುತ್ತಾ, ಅನುಭಾವಿಗಳ ತತ್ವಪದಗಳ | ಬಂಡಾಯದ ಕಥೆಗಳ | ದಲಿತರ – ಕವನಗಳ 1 ಜನಪದ ಚಿಂತನೆಗಳ | ಜಾಗೃತವಾದ ಈ ಜಿಲ್ಲೆ | ನಮ್ಮ ಕಲಬುರಗಿ ಜಿಲ್ಲೆ ಎಂದು ಹೇಳಲು ಹೆಮ್ಮೆ ಪಡುತ್ತೇನೆ.

ಭೂರಚನಾಶಾಸ್ತ್ರಜ್ಞರ ಪ್ರಕಾರ ಅತ್ಯಂತ ಬೆಲೆಬಾಳುವ ಲೋಹಗಳನ್ನು ಬಳಸುತ್ತಿದ್ದ, ಫಲವತ್ತಾದ ಎರೆಮಣ್ಣಿನಿಂದ ಕೂಡಿದ, ವೈವಿಧ್ಯಮಯವಾದ ಬಳೆಗಳನ್ನು ಬೆಳೆಯಬಲ್ಲ. ಕೃಷಿಭೂಮಿ ಹೊಂದಿರುವ, ಉತ್ತಮ ಆರ್ಥಿಕ ವ್ಯವಸ್ಥೆಯ ಕಾರಣವಾಗಿ ಉತ್ತರದ ಮೌಲ್ಯರನ್ನು ಕೂಡ ತನ್ನೆಡೆಗೆ ಸೆಳೆದ ಆಕರ್ಷಕವಾದ ಮತ್ತು ಮಾನವರು ವಾಸಿಸಲು ಯೋಗ್ಯವಾದ ಅತ್ಯಂತ ಪ್ರಾಚೀನ ಭೂಭಾಗವೆಂದರೆ ದಖನ್ ಪ್ರಸ್ಥಭೂಮಿ (ಪಾಂತ) ಇದರ ಹೃದಯದಂತಿರುವ ಕಲಬುರಗಿ ಭೂಪ್ರದೇಶವು ಹಲವು ವಿಶಿಷ್ಟಗಳ ಕಣಜವೇ ಹೌದು.

ಪಾಲಿ ಪ್ರಾಕೃತ, ಸಂಸ್ಕೃತ, ಕನ್ನಡ ಭಾಷೆಗಳಲ್ಲದೆ ಕ್ರಮೇಣ ಫಾರ್ಸಿ, ಮರಾಠಿ, ಹಿಂದಿ, ತೆಲುಗು, ಉರ್ದು, ಇಂಗ್ಲಿಷ್ ಮೊದಲಾದ ಭಾಷೆಗಳಿಗೆ ಚಲನಶೀಲತೆಯನ್ನು ಒದಗಿಸಿಕೊಟ್ಟಿದೆ. ಬೌದ್ಧ, ಜೈನ, ಶೈವ, ವೈದಿಕ, ಇಸ್ಲಾಂ, ಕ್ರೈಸ್ತ, ಸಿಖ್ ಇನ್ನಿತರ ಧರ್ಮಗಳಿಗೆ ಪ್ರೋತ್ಸಾಹ-ಪೋಷಣೆ ನೀಡಿದೆ. ಪ್ರಬಲ ವ್ಯಾಪಾರಿ ಸಂಘಗಳ ಮುಖಾಂತರ ಆಗೇಯ- ಪಶ್ಚಿಮ ಏಷ್ಯಾ ಮತ್ತು ಮಡಿಟರೇನಿಯನ್‌ವರೆಗೆ ವಹಿವಾಟು ಹೊಂದಿದ್ದು, ಸಶಕ್ತ ಆರ್ಥಿಕತೆಗೆ ಮಾದರಿಯಾದ ಕಲಬುರಗಿ ಜಿಲ್ಲೆಯು ಸಾಹಿತ್ಯಕವಾಗಿ ಅಷ್ಟೇ ಸಮೃದ್ಧವಾದ ಗ್ರಂಥ ರಚನೆಗೆ ಕಾರಣವಾಗಿದೆ. ಭಾಷಿಕ ರಾಜ್ಯಗಳ ಸ್ಥಾಪನಾಯುಗದ ಸಂದರ್ಭದಲ್ಲಿ ರಾಷ್ಟ್ರಕೂಟರು ಇಲ್ಲಿ ಕನ್ನಡ ರಾಜ್ಯವನ್ನು ಕಟ್ಟಿದರು, ಬೆಳಸುತ್ತಾ ಬಂದರು.

ಒಂದು ಪ್ರದೇಶದ ಸಾಂಸ್ಕೃತಿಕ ಶ್ರೀಮಂತಿಕೆಯ ಮಾನದಂಡವೆಂಬುದು ಆಯಾ ಪ್ರದೇಶದ ಸಾಹಿತ್ಯ, ಕಲೆ ಮತ್ತು ಮಹಿಳಾ ಬದುಕನ್ನು ಅವಲಂಬಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಕಲಬುರಗಿಯು ಸಮೃದ್ಧ ಸಾಹಿತ್ಯಕ್ಕೆ ಸಾಕ್ಷಿಯಾಗಿದೆ.

**ಕಲಬುರಗಿ ಜಿಲ್ಲೆಯ ಜನಪದ ಸಾಹಿತ್ಯ**

"ಬ್ಯಾಸಿಗಿ ದಿವಸಕ ಬೇವಿನ ಮರ ತಂಪ | ಭೀಮರತಿಯೆಂಬ ಹೊಳಿತಂಪ | ಹಡೆದವ್ವ ನೀತಂಪ ನನ್ನ ತವರೀಗಿ' ಎಂದು ಆರಂಭವಾಗುವ ಇಲ್ಲಿಯ ಜನಪದ ಸಾಹಿತ್ಯವನ್ನು ಗದ್ಯ, ಪದ್ಯ, ಮಿಶ್ರ ಎಂದು ೩ ಪ್ರಕಾರವಾಗಿ ಗುರುತಿಸಬಹುದು.

ರೈತರ ಹಂತಿಯ ಹಾಡುಗಳು, ಗರತಿಯ ಹಾಡುಗಳು-ಬೀಸುವ, ಕುಟ್ಟುವ, ಸೋಬಾನೆ ಜೋಗುಳ, ಭುಲಾಯಿ ಹಾಡುಗಳು, ವಿವಿಧ ಸಂಸ್ಕಾರಗಳಲ್ಲಿ ಹಾಡುವ ಕುಂಕುಮ ಹಚ್ಚುವ ಹಾಡು ಒರಳುಕಲ್ಲು ಕೊಡಪೂಜೆ, ಬೀಗರು ಎದುರುಗೊಳ್ಳುವ, ಐರಾಣಿ ಹೊರುವ, ಎಣ್ಣೆ ಹಚ್ಚುವ, ಸುರಗಿ ಸುತ್ತುವ, ಭೂಮಾ ಒಪ್ಪಿಸುವ ಕೂಸೊಪ್ಪಿಸುವ ಇನ್ನೂ ಮುಂತಾದ ಚಾಜದ ಸಂಪ್ರದಾಯದ ಹಾಡುಗಳು ಸಮೃದ್ಧವಾಗಿವೆ.

ಕಡ್ಲಿಮಟ್ಟಿ ಕಾಶಿಬಾಯಿ ಹಾಡು, ಚಂದ್ರುಣಿಯ ಹಾಡು, ನೀಲಗಂಗಾಳ ಹಾಡು, ಚನ್ನಮ್ಮನ ದಂಡಿ ಮೊದಲಾದ ಕಥನ ಗೀತೆಗಳಿವೆ. ರಜಾಕಾರ ಹಾವಳಿ ಸಂದರ್ಭದ ಹಾಡುಗಳೂ ಚಾಲ್ತಿಯಲ್ಲಿವೆ. ಡೊಳ್ಳಿನ ಹಾಡು, ಮೊಹರಂ ಹಾಡುಗಳು ಹೇರಳವಾಗಿವೆ. ಜನಪದ ಕಥೆಗಳು, ಗಾದೆ, ಒಗಟುಗಳು, ಒಡಪುಗಳು ಹಳ್ಳಿಗಳಲ್ಲಿ ಇನ್ನೂ ಜೀವಂತವಾಗಿವೆ.

[ಎಂ. ಎಸ್. ಲಠ್ಠೆ. ಬಸವರಾಜ ಪೊಲೀಸ್ ಪಾಟೀಲ, ಬಿ.ವಿ.ಮಲ್ಲಾಪುರ, ವೀರಣ್ಣ ದಂಡೆ, ಡಿ.ಬಿ. ನಾಯಕ್, ಪಿ.ಕೆ. ಖಂಡೋಬ, ಮ.ಗು. ಬಿರಾದಾರ, ಎಚ್.ಟಿ.ಪೋತೆ, ಶ್ರೀಶೈಲ ನಾಗರಾಳ, ಚನ್ನಣ್ಣ ವಾಲೀಕಾರ,

ಹಣಮಂತರಾಯ ದೊಡ್ಡಮನಿ ಮುಂತಾದವರು ಈ ಭಾಗದ ಜನಪದ ವಿದ್ವಾಂಸರಾಗಿದ್ದಾರೆ. ಸಂಶೋಧನಾ ಕೃತಿಗಳು ಅಕಾಡೆಮಿಕ್/ ಶೈಕಣಿಕ ನೆಲೆಯಲ್ಲಿ ಬರೆಯಲಾದ ಗ್ರಂಥಗಳು ಸಾಕಷ್ಟಿವೆ.]

ಕಲಬುರಗಿಯ ಸ್ಥಳನಾಮವು ಹುಸಿಹಡಗಲಿ, ಸರಡಗಿ, ಗೊಬ್ಬರ, ಬಸವಕಲ್ಯಾಣ, ಕುಳಗೇರಿ, ಚಿನಮಳ್ಳಿ, ಸಿರವಾಳದ ಶಾಸನಗಳಲ್ಲಿ ಕಲಂಬುರಗಿ ಎಂದು ಉಲ್ಲೇಖಿತಗೊಂಡಿದೆ. ಶ್ರೀಕೃಷ್ಣದೇವರಾಯನ ಆಮುಕ್ತ ಮೌಲ್ಯದಾ, ವಿರೂಪಾಕ್ಷಪಂಡಿತ ಕವಿಯ ಚನ್ನಬಸವ ಪುರಾಣ, ತೆಲುಗಿನ 'ರಾಯವಾಚಕಮು' ಕೆಳದಿಯ ನೃಪವಿಜಯದಲ್ಲಿ ಮತ್ತು ಪರ್ಶಿಯನ್



ರಾಯಭಾರಿ ಅಬ್ದುಲ್ ರಜಾಕ್‌ನ ವಿಜಯನಗರದ ಮೇರೆಗಳ ಉಲ್ಲೇಖದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. [ಈ ಜಿಲ್ಲೆಯು ಮೌರರು, ಶಾತವಾಹನರು, ಬಾದಾಮಿ ಚಾಲುಕ್ಯರು, ಮಾನ್ಯಖೇಟದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲಚೂರಿಗಳು, ದೇವಗಿರಿಯ ಸೇವುಣರು, ಬಹಮನಿ ಸುಲ್ತಾನರು ಮತ್ತು ಆದಿಲ್ ಶಾಹಿಗಳಿಂದ ಆಳಲ್ಪಟ್ಟಿದೆ.]

'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್' ಎಂದು ಕನ್ನಡ ನಾಡಿನ ವಿಸ್ತಾರವನ್ನು ಬಣ್ಣಿಸಿದರೆ, 'ಕುರಿತವರಲ್ಲದೆ ಮತ್ತಂ ಪೆರರುಂ ತಂತಮ್ಮ ನುಡಿಯೊಳೆಲ್ಲ ಜಾಣ, ಎಂದು ಇಲ್ಲಿಯ ಜನರ ಪ್ರತಿಭೆಯನ್ನು, ಭಾಷಾ ವೈವಿಧ್ಯತೆಯನ್ನು ಹಾಡಿ ಹೊಗಳಿದ ಶ್ರೀವಿಜಯನ ಗ್ರಂಥವು, ಕನ್ನಡ ಸಾಹಿತ್ಯದ ಚರಿತ್ರೆಯನ್ನು, ವ್ಯಾಕರಣ, ಭಾಷಾಶಾಸ್ತ್ರ, ಸಂಸ್ಕೃತಿ ಮತ್ತು ಸಂಸ್ಕೃತ ಭಾಷೆಯೊಂದಿಗಿನ ಸಂಬಂಧವನ್ನು ಅಲಂಕಾರ ಗ್ರಂಥವಾಗಿ, ಕನ್ನಡ ಕವಿಗಳಿಗೆ ಕಾವ್ಯ ರಚನಾ ಮಾರ್ಗದರ್ಶಿಯಾಗಿದೆ. ಕಾವ್ಯದ ಗುಣದೋಷಗಳನ್ನು ಕಾವ್ಯ ಪ್ರಕಾರಗಳನ್ನು ಛಂದಸ್ಸನ್ನು ಕುರಿತು ವಿವರಿಸಿದ ಅಪೂರ್ವ ಹೊತ್ತಗೆಯಾಗಿದೆ.

ಜೈನರ ಕಾವ್ಯ ರಚನೆಗೆ ನೆಲೆವೀಡಾದ ಈ ನೆಲವು ಹಳಗನ್ನಡ ಕಾಲದ ಕವಿಗಳಿಗೆ ಪ್ರೇರಣಾ ಶಕ್ತಿಯನ್ನು ನೀಡಿದೆ. ನಂತರದಲ್ಲಿ ಕಲ್ಯಾಣದ ಶರಣರ ಸಾಂಸ್ಕೃತಿಕ ಚಳುವಳಿಯ ಮೂಲಕ 'ವಚನ ಸಾಹಿತ್ಯ'ಕ್ಕೆ ಭದ್ರ ಬುನಾದಿಯನ್ನು ಹಾಕಿದೆ,

ಬಸವಣ್ಣನಿಗೆ ಹಿರಿಯರಾದ ಮುದನೂರಿನ ಜೇಡರದಾಸಿಮಯ್ಯ 'ಮೊಲೆಮೂಡಿ ಬಂದರೆ ಹೆಣ್ಣೆಂಬರು ಗಡ್ಡಮೀಸೆ ಬಂದರೆ ಗಂಡೆಂಬರು ಒಳಗೆ ಸುಳಿವಾತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ' ಎಂದು ಲಿಂಗಭೇದವನ್ನು ಅಲ್ಲಗಳೆದರು, ಕೆಂಭಾವಿಯ ಭೋಗಣ್ಣ ಊರಲ್ಲಿರುವ ಲಿಂಗಗಳೆಲ್ಲ ತನ್ನ ಬೆನ್ನ ಹಿಂದೆ ಬರುವಂತೆ ಮಾಡಿದರು. ಬಸವಣ್ಣನ ಸಮಕಾಲೀನರಾದ ಕೊಂಡಗುಳಿ ಕೇಶಿರಾಜ, ಸಗರದ ಬ್ರಹ್ಮಯ್ಯ, ನೆಲೋಗಿಯ ಕೋಲು ಶಾಂತಯ್ಯ

ಮುನೋಳಿಯ ಗಜೇಶ ಮಸಣಯ್ಯ, ಬಿಟ್ಟಿಬಾಚಯ್ಯ, ಹಾವಿನಹಾಳ ಕಲ್ಲಯ್ಯ, ಏಲೇಶ್ವರದ ಕೇತಯ್ಯ, ಅಕ್ಕಮ್ಮ, ಅನಂತರದ ಸ್ವರವಚನಕಾರರು ತಿಂಥಿಣಿಯ ಮೌನೇಶ್ವರರು, ಮೊದಲಾದವರು ಸಮೃದ್ಧ ಸಮಾಜಪರವಾದ ಮತ್ತು ಆಧ್ಯಾತ್ಮಿಕ ಸಾಹಿತ್ಯವನ್ನು ರಚಿಸಿದ್ದಾರೆ.

[ಏಕಾಂತಪ್ರಿಯನಾದ ಆಳಂದದ ಏಕಾಂತರಾಮಯ್ಯ, ಜೈನರೊಡನೆ ಸಂಘರ್ಷ ಮಾಡಿ, ತನ್ನ ದೇವರೇ ಶ್ರೇಷ್ಠವೆಂದು ಪ್ರತಿಪಾದಿಸಿದ ಸಗರದ ಬ್ರಹ್ಮಯ್ಯ, ಮುನೋಳಿಯಲ್ಲಿ ಬಾಳಿದ ಗಜೇಶ ಮಸಣಯ್ಯ ಮತ್ತು ಮಸಣಮ್ಮ, ಜೇವರಗಿ ತಾಲೂಕಿನ ನೆಲೋಗಿಯ ಕೋಲು ಶಾಂತಯ್ಯ ಕಟ್ಟಿಗೆ ಹಿಡಿದುಕೊಂಡು ಕೆಲಸ ಮಾಡುತ್ತ ತನ್ನ ತಾನರಿಯಬೇಕೆಂದು ಪ್ರತಿಪಾದಿಸಿದವನು.]

ಶಿವಶರಣೆಯರಲ್ಲಿ ದಾಸಿಮಯ್ಯನ ಮಡದಿ ದುಗ್ಗಳೆ, ಹೆರೂರ ತಿಲಕವ್ವ, ಎಡೆಮಠದ ನಾಗದೇವನ ಸತಿ ಮಸಣಮ್ಮ, ಬಿದನೂರ ಗಂಗಮ್ಮ, ಯನಗಂಟಿ ವೀರಮ್ಮ ಪ್ರಮುಖರಾಗಿದ್ದಾರೆ.

**ದಾಸಸಾಹಿತ್ಯ:**

ಮಧ್ಯಕಾಲೀನ (ನಡುಗಾಲದ) ಕನ್ನಡ ಸಾಹಿತ್ಯದ ಎರಡು ಕಣ್ಣುಗಳಂತಿರುವ



ವಚನ-ದಾಸ ಸಾಹಿತ್ಯಗಳು ಕಲಬುರಗಿಯಲ್ಲಿ ಸತ್ವಯುತವಾಗಿ ಬೆಳೆದಿವೆ. ಸುರಪುರದಲ್ಲಿ ವ್ಯಾಸ ಮಂದಿರದ ಸ್ಥಾಪನೆ ಹಾಗೂ ಕಲಬುರಗಿಯಲ್ಲಿ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ವೃಂದಾವನದ ಸ್ಥಾಪನೆಗಳು ಈ ಜಿಲ್ಲೆಯ ದಾಸ ಸಾಹಿತ್ಯದ ಪರಿಸರವನ್ನು ಶ್ರೀಮಂತಗೊಳಿಸಿವೆ. ವಿಜಯದಾಸರ ಪರಂಪರೆಯ ಸುರಪುರದ ಆನಂದ ದಾಸರು, ಪಂಚವಿಧ ಭಕ್ತಿಯ ಕೃತಿಗಳನ್ನು ರಚಿಸಿದರು (ದಾಸ, ಸಖ್ಯ, ಮಧುರ, ವಾತ್ಸಲ್ಯ ಮತ್ತು ಶಾಂತ) ಮುದನೂರಿನಲ್ಲಿ ಬಾಳಿದ ಹೆನ್ನಪ್ಪ/ ಹೊನ್ನರಂಗದಾಸರು ಸ್ತುತಿಪದ್ಯಗಳನ್ನು ಸಾಮಾಜಿಕ ಕಳಕಳಿಯನ್ನು ಪರಮಾತ್ಮನ ಲೀಲೆಗಳನ್ನು ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಿಸಿದರು. ತಿಂಥಣಿಯ ಶ್ರೀನಿವಾಸದಾಸರು, ಮುದನೂರು ದಾಸರೆಂದು ಹೆಸರಾದ ಶ್ರೀ ಗೋಪತಿದಾಸರು, ಶ್ರೀ ಟೊಂಕದಾಸರು, ಹುಣಸಿಹೊಳೆ ಗ್ರಾಮದ ಗಿರಿಧರದಾಸರು, ಹರಿದಾಸ ಪರಂಪರೆಯನ್ನು ವಿಸ್ತರಿಸಿದ ಸುರಪುರದ ದಾಸಾಚಾರ್ಯರು. ಗಿರಿರಾಯಾಚಾರರು ಹೀಗೆ ಸಾಕಷ್ಟು ದಾಸರನ್ನು ಹೆಸರಿಸಬಹುದು.

ಅಫಜಲಪುರದ ಮಣೂರಿನ ಹನುಮಂತದಾಸರು, ದಾಸ ಸಾಹಿತ್ಯದ ಪ್ರಚಾರಕರು, ಚಂಡರಕಿದಾಸರು, ರಾಮಾಚಾರ್‌ನವಲಿ ದಂಪತಿಗಳು, ಗೋಪಾಲಾಚಾರ್ ಮಣೂರರು, ಸರಸ್ವತಿಬಾಯಿ ತಂತ್ರಿ ಇವರು ದಾಸಸಾಹಿತ್ಯದ ಪೋಷಕರು. ಇತ್ತೀಚೆಗೆ ದಾಸಸಾಹಿತ್ಯ ಪ್ರಾಜೆಕ್ಟ್ ಅಡಿಯಲ್ಲಿ ಸ್ಪರ್ಧೆ,ಗಾಯನ, ಮಹಿಳಾ ಭಜನೆ

ಮಂಡಳಿಗಳ ರಚನೆ, ದಾಸವಾಣಿ ಕಾರ್ಯಕ್ರಮಗಳ ಮೂಲಕ ದಾಸಸಾಹಿತ್ಯವು ಲಿಖಿತವಾಗಿಯೂ, ಮೌಖಿಕವಾಗಿಯೂ ಜೀವಂತಿಕೆಯನ್ನುಳಿಸಿಕೊಂಡಿದೆ. ವಸಂತ ಕುಷ್ಟಗಿ, ಸ್ವಾಮಿರಾವ ಕುಲಕರ್ಣಿ, ವಾಸುದೇವ ಅಗ್ನಿಹೋತ್ರಿ, ಶೀಲಾದಾಸ, ಸುಮನ್ ಯಜುರ್ವೇದಿ ಮೊದಲಾದ ವಿದ್ವಾಂಸರಿಂದ ಈ ಪರಂಪರೆಯು ಮುಂದುವರಿದಿದೆ.

ಮೆಟ್ಟು ಮಾರುವವನಿರಲಿ | ಕಟ್ಟಿಗೆ ತರುವವನಿರಲಿ

ಕಷ್ಟಮಾಡಿ ಉಂಬುವವನ ಹಿಡಿ ಅನ್ನವೇ ಸಾಕು ಎಂದು ಕಾಯಕದ ಮಹತ್ವವನ್ನು ಶ್ರೇಷ್ಠವಾಗಿಸಿದ ತಿಂಥಿಣಿಯ ಮೌನೇಶ್ವರರು, ಹಿಂದೂ-ಮುಸ್ಲಿಂ ಭ್ರಾತೃತ್ವಕ್ಕೆ ಪ್ರತೀಕರಾದವರು, ಕೋಮು ಸೌಹಾರ್ದತೆಯ ಪ್ರತೀಕವಾಗಿರುವ ಕೊಡೇಕಲ್ ಬಸವಣ್ಣನವರ ಕಾಲಜ್ಞಾನ ಸಾಹಿತ್ಯವು ಅಪರೂಪವಾದುದು.

ಖ್ವಾಜಾ ಬಂದಾನವಾಜ್ ಎಂದು ಪ್ರಸಿದ್ಧಿ ಪಡೆದಿರುವ ಸೈಯದ್ ಮಹಮದ್ ಹುಸೇನಿ ಗೇಸುದರಾಜ್ ಎಂಬ ಸೂಫಿ ಸಂತರು ಅರೆಬಿಕ್, ಫಾರಸಿ, ಉರ್ದುಗಳಲ್ಲಿ ಅಸಾಮಾನ್ಯ ಪಾಂಡಿತ್ಯ ಹೊಂದಿದ್ದು ಇವರು ಮೇರಾಜ್ ಅಲ್ ಆಶಿಕೀನ್, ಜವಾಮೆ ಉಲ್ ಕಲಿಮ್,ಮತ್ತೂಬಟ್, ದಿವಾನ್ ಫಿಕರನಾಮಾ ಎಂಬ ಕೃತಿಗಳನ್ನು ರಚಿಸಿದ್ದಾರೆ, ಮೊದಲ ದಖನಿ ಗದ್ಯಕವಿಗಳಾದ ಇವರ 'ಚಕ್ಕಿನಾಮಾ'ದಲ್ಲಿ ಕಲಬುರಗಿಯ ಕನ್ನಡದ ಗರತಿ ಹಾಡುಗಳಲ್ಲಿಯ ಭಾವ-ಲಯಗಳ ಮಿದುವನ್ನು ಕಾಣಬಹುದು. ಉದಾ: ಐರತ ಗೈರತ ಚಕ್ಕಿರೇ ದೋ ಪಾಟಾ..... ಮಿಶ್ರ ಭಾಷೆಗಳಿಂದ ಕೂಡಿದ ದಖನೀ ಭಾಷೆಯು ಅರಬ್ಬಿ, ತುರ್ಕಿ, ಫಾರಸಿ, ಮರಾಠಿ, ತೆಲುಗು, ಇನ್ನಿತರ ಭಾಷಿಕರ ಒಡನಾಟದಿಂದ ಹುಟ್ಟಿದ್ದು.

**ಸ್ವರವಚನ-ತತ್ವಪದ :**

ಕನಕ ಕಾಮಿನೀ ಭೂಮಿಗಾಗಿ ಹೊಡೆದಾಡಿ | ಕೆಟ್ಟಿತೀ ಜಗವೆಲ್ಲ | ಎಂದು ಹೊನ್ನು ಹೆಣ್ಣು ಮಣ್ಣಿಗಾಗಿ ಬಡಿದಾಡಿ ಮನುಷ್ಯತ್ವವನ್ನೇ ಮರೆತವರಿಗೆ ಎಚ್ಚರಿಸಿದ ಷಣ್ಮುಖಶಿವಯೋಗಿಗಳು ಇಲ್ಲಿ ಬದುಕಿ ಹೋಗಿದ್ದಾರೆ. ಮಾನಗೇಡಿ ಮಂದಿ ಹುಟ್ಟಿ ಮರ್ತ್ಯಾ ಕೆಡಿಸ್ಯಾರೋ ಮುಟ್ಟಾದ ೩ ದಿನಕ ಹುಟ್ಟಿ ಬಂದಿರಿ ನೀವು ಮುಡಚಟು ಎಲ್ಯಾದ್ದೇಳಣ್ಣಾ ಎನ್ನುತ್ತ, ಹುಟ್ಟು ಹೋರಾಟಗಾರರೆಂದೇ ಪ್ರಸಿದ್ಧಿ ಪಡೆದಿರುವ ಕಡಕೋಳ ಮಡಿವಾಳಪ್ಪ ಕಲಬುರಗಿಯ ಚಿಣಮಗೇರಿ ಹಾಗೂ ಕಡಕೋಳದಲ್ಲಿ ಬೆಳೆದರು. ಕೊಡೇಕಲ್ ರಾಚಪ್ಪಯ್ಯ, ಅಂಬಲಗಿ ಚನ್ನಮಲ್ಲಕವಿ, ಚನ್ನೂರ ಜಲಾಲ ಸಾಹೇಬ, ರಾಮಪುರದ ಬಕ್ಕಪ್ಪ, ಐನೂಲಿ ಕರಿಬಸವಾರ, ದೇಗಾಂವದ ಗುಂಡಪ್ಪ, ಕೂಡಲೂರು ಬಸವಲಿಂಗ ಶರಣರು, ಬೇನೂರು ಕಾಕಿಪೀರ, ಖೈನೂರು ಕೃಷ್ಣಪ್ಪ, ಮೊಟ್ನಳ್ಳಿ ಹಸನಸಾಬ, ಜಂಬಗಿ ಶರಣ, ಸಿರಗಾಪುರ ಬಂಡೆಪ್ಪ, ದ್ಯಾಗಾಯಿ ಹಜರತ ಸಾಹೇಬ, ಕ್ವಾನಳ್ಳಿ ಹೊನ್ನಪ್ಪ, ಮಹಾಗಾಂವ ಮೀರಾಸಾಹೇಬ, ಮೌಖಿಕ ಪರಂಪರೆಗೆ ಸೇರಿದವರು. ೧೨ನೆಯ ಶತಮಾನದ ನಂತರ ದುರ್ಬಲಗೊಂಡ ಲಿಖಿತ ಪರಂಪರೆಯು ದೇವರ ಕೋಣೆ ಸೇರಿ ಮೀಸಲಾಯಿತು. ಆದರೆ ಬಾಯಿಂದ ಹರಡುತ್ತ ಹೋದ ತತ್ವಪದ ಸಾಹಿತ್ಯವು ಸಾಮಾಜಿಕ ಸ್ಪಂದನೆಯನ್ನು ಹೊಂದಿತ್ತು. ಯೌಗಿಕ ಪಂಥಗಳ ಅವಧೂತರು, ಆರೂಢರು, ಸಿದ್ದರು, ನಾಖುತು, ಸಂತರು, ಅನುಭಾವಿಗಳು ೧೭ ರಿಂದ ೧೯ ನೆಯ ಶತಮಾನದಲ್ಲಿ ಈ ಪ್ರದೇಶದಲ್ಲಿ ತಾಂಡವವಾಡುತ್ತಿರುವ ಸಾಮಾಜಿಕ ಅರಾಜಕತೆಯನ್ನು ತಿಳಿಯಾಗಿಸಲು ಪ್ರಯತ್ನಿಸಿದ್ದಾರೆ.

ಕ್ರಿ. ಶ. ೧೩೪೭ ರಲ್ಲಿ ಅಸ್ತಿತ್ವಕ್ಕೆ ಬಂದ ಬಹಮನಿ ರಾಜ್ಯದ ಸುಲ್ತಾನರು ಮೊದಲಿಗೆ ಕಲಬುರಗಿ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ಕಾಲಾಂತರದಲ್ಲಿ ಈ ಸಾಮ್ರಾಜ್ಯ ಒಡೆದು ೫ ಹೋಳುಗಳಾಗಿ ಕಲಬುರಗಿಯು ನಿಜಾಮ್ ಶಾಹಿಯ ಆಳ್ವಿಕೆಗೆ ಒಳಪಟ್ಟಿತು. ಸೂಫಿಗಳ ಅಗಮನದಿಂದ ಬದಲಾದ ಸಾಂಸ್ಕೃತಿಕ ಸಂದರ್ಭ, ನೈಸರ್ಗಿಕವಾಗಿ ಎದುರಾದ ಕ್ಷಾಮ, ಬರ ಪ್ಲೇಗಿನಂತ ರೋಗರುಜಿನಗಳಿಂದ ತಲ್ಲಣಿಸಿ ಹೋದ ಈ ಜಿಲ್ಲೆಯ ಜನಬದುಕುವುದೇ ದೊಡ್ಡ ಸವಾಲಾಗಿತ್ತು. ೧೮ನೇ ಶತಮಾನದಲ್ಲಿ ಸುಮಾರು ೧೦ ರಿಂದ ೧೨ ಸಲ ಬರಗಾಲ ಕಾಣಿಸಿಕೊಂಡಿತ್ತು. ೧೮೭೫-೭೭ರಿಂದ ೮೦ರ ಅವಧಿಯಲ್ಲಿ ಚಾರಿತ್ರಿಕವಾದ ಕ್ಷಾಮವು ಲಕ್ಷಾಂತರ ಜನರನ್ನು ಬಲಿ ತೆಗೆದುಕೊಂಡಿತು. ೧೯೪೦ ರವರೆಗೂ ಹಾಗೇ ಬರಗಾಲವು ಮುಂದುವರಿಯಿತು. ಸಹಜವಾಗಿ ಜನರ ಮನಸ್ಸು ಆಧ್ಯಾತ್ಮದ ಕಡೆ ಒಲಿಯಿತು. ಇಂಥ ಆಪತ್ ಕಾಲದಲ್ಲಿಯೂ ಪುರಾಣ, ತತ್ವಪದ, ಕಾವ್ಯಗಳ ರಚನೆ ಮಾಡಿದ್ದೇ ಸಾಹಸದ ಕೆಲಸ.

ತಾಯಿನುಡಿಯಲ್ಲಿ ಶಿಕ್ಷಣ ಸಿಗದೇ ಇರುವಂಥ ಪರಿಸ್ಥಿತಿಯಲ್ಲಿ, ದೇಶಕ್ಕೆ ಸ್ವಾತಂತ್ರ್ಯ ಸಿಕ್ಕರೂ ನಿಜಾಮರಿಂದ ವಿಮೋಚನೆ ಪಡೆಯಲು ಹೋರಾಟ ಮಾಡುವ ಅನಿವಾದ್ಯತೆಯಲ್ಲಿ ಸಿಲುಕಿರುವ ಈ ಜಿಲ್ಲೆಯ ಜನ ಸೊಗಸಾದ, ಕಾಲ್ಪನಿಕವಾದ ಸಾಹಿತ್ಯ ರಚನೆ ಮಾಡುವುದಾದರೂ ಹೇಗೆ ಸಾಧ್ಯ? ಅನ್ಯ ಭಾಷೆಯಲ್ಲಿ ಶಿಕ್ಷಣ ಪಡೆದು ತನ್ನ

ಭಾಷೆಯನ್ನು ಬದುಕಿಸಿ ಅದರಲ್ಲಿ ಬರೆಯುವ ಎದೆಗಾರಿಕೆ ಅತ್ಯಲ್ಪ ಜನರಿಗೆ ಮಾತ್ರ ದಕ್ಕಿತ್ತು. ಹೀಗೆ ಕುಸಿದು ಹೋದ ಸಾಂಸ್ಕೃತಿಕ ಪರಿಸರದಲ್ಲಿ ಇಲ್ಲಿಯ ೨ನೇ ತಲೆಮಾರಿನವರು



ಮರಾಠಿ, ಉರ್ದು ಭಾಷೆಗಳನ್ನು ಕಲಿತು ಕನ್ನಡ ಸೇವೆಗೆ ಕಟಿಬದ್ಧರಾದರು. ಕಪಟರಾಳ ಕೃಷ್ಣರಾವ್, ಸಿದ್ದಯ್ಯ ಪುರಾಣಿಕ, ತವಗ ಭೀಮಸೇನರಾಯ, ಅನಂತರ ವಸಂತ ಕುಷ್ಟಗಿಯವರ ಸೇವೆ ವಿಶಿಷ್ಟವಾದುದು. ಕನ್ನಡ ಸಾಹಿತ್ಯ ಸಂಘಗಳನ್ನು ಕಟ್ಟಿ ಸಾಹಿತ್ಯ ಪರಿಷತ್ತನ್ನು ಗಟ್ಟಿಗೊಳಿಸಿದರು. ತವಗ ಭೀಮಸೇನರಾಯರು. ೩೦ ವರ್ಷಗಳವರೆಗೆ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಿಜಾಂ ಕರ್ನಾಟಕದಿಂದ ಕಲಬುರಗಿಯ ಪ್ರತಿನಿಧಿತ್ವ ವಹಿಸಿದರು. ನಾಡ ಹಬ್ಬದಲ್ಲಿ ಕನ್ನಡ ಸಂಬಂಧಿತ ಸ್ಪರ್ಧೆಗಳನ್ನು ಏರ್ಪಡಿಸುತ್ತಿದ್ದರೆ, ಕನ್ನಡ ಸಾಹಿತ್ಯ ಪರಿಷತ್ತಿನ ಅಣುವಕಾವ, ಜಾಣ ರತ್ನದಂಥ ಪರೀಕ್ಷೆಗಳನ್ನು ನಡೆಸಿ, ಕನ್ನಡವನ್ನು ಉಳಿಸಿ ಬೆಳೆಸಿದರು.

ಮಠ-ಮಂದಿರ, ಅಗ್ರಹಾರ-ಘಟಿಕಾಸ್ಥಾನಗಳು (ನಾಗಾವಿ) ಶಿಕ್ಷಣ ಕೇಂದ್ರಗಳಾಗಿದ್ದು, ಸಂಸ್ಕೃತ, ವೇದ, ಉಪನಿಷತ್ತು, ಜ್ಯೋತಿಷ್ಯ, ತರ್ಕಶಾಸ್ತ್ರ, ಪುರಾಣಗಳನ್ನು ಪ್ರಧಾನ ವಿಷಯಗಳಾಗಿ ಬೋದಿಸುತ್ತಿರುವ ಸಂದರ್ಭದಲ್ಲಿ ನೂತನ ವಿದ್ಯಾಲಯದಂಥ ಶಿಕ್ಷಣ ಸಂಸ್ಥೆಯು ಕನ್ನಡ ಓದುಗ ಮನಸ್ಸುಗಳಿಗೆ ನೆಲೆ ಒದಗಿಸಿತು. ಹೆಚ್ಚಿನ ಓದಿಗೆ ಹೈದರಾಬಾದಿಗೆ ಹೋಗುವ ಮತ್ತು ತೆಲುಗು, ಫಾರ್ಸಿ, ಅರಬ್ಬಿ, ಮರಾಠಿ, ಉರ್ದು, ಇಂಗ್ಲೀಷ್, ಹಿಂದಿ ಭಾಷೆಗಳಿಗೆ ಬಾಯೊಡ್ಡುವ ಅನಿವಾರತೆಯ ನಡುವೆ ಈ ಸಂಸ್ಥೆಯು ಸಾಹಿತ್ಯ-ಸಾಂಸ್ಕೃತಿಕ ಬೆಳವಣಿಗೆಗೆ ಪಟ್ಟಶ್ರಮ ಸಾರ್ಥಕತೆ ಪಡೆಯಿತು. ಅಲ್ಲದೆ, ಹೈ.ಕ.ಶಿ.ಸಂಸ್ಥೆ, ಕ.ಬ.ವಿದ್ಯಾವರ್ಧಕ ಸಂಘಗಳನ್ನು ಸ್ಮರಿಸಬಹುದು.

ನಮ್ಮ ನೆಲದ ಭಾಷೆಯನ್ನು ಕಲಬುರಗಿ ಭಾಷೆ, ಒರಟು, ಮೊಗಲಾಯಿ ಕನ್ನಡವೆಂದು ಕಡೆಗಣಿಸಿ, ಮೈಸೂರು ಭಾಷೆಯೇ ಪ್ರಮುಖ ಭಾಷೆಯಂತೆ ಪರಿಗಣಿಸಲಾಗುತ್ತಿತ್ತು. ಹಾಗೂ ಮೈಸೂರಿನಿಂದ ಪಠ್ಯಪುಸ್ತಕಗಳನ್ನು ತರಿಸಿಕೊಂಡು ಕನ್ನಡ ಮಾಧ್ಯಮದವರಿಗೆ ಬೋಧಿಸಲಾಗುತ್ತಿತ್ತು. ಅಂಥ ಪರಿಸ್ಥಿತಿಯ ನಡುವೆಯೂ ಸಾಕಷ್ಟು ಜನ ಸಾಹಿತಿಗಳು ನಮ್ಮ ಜಿಲ್ಲೆಯಲ್ಲಿ ಹೊಸಗನ್ನಡದಲ್ಲಿ ಕೃತಿರಚನೆಗೆ ಮುಂದಾದರು. 'ಹೂಮಾಲೆ' ಕನ್ನಡ ಕಾವ್ಯ ಸಂಗ್ರಹ (Anth---) ವನ್ನು ಪ್ರೊ. ಡಿ.ಕೆ. ಭೀಮಸೇನರಾಯರ ಸಂಪಾದನೆಯಲ್ಲಿ ಪ್ರಕಟವಾಗಿ ಮೈಸೂರು. ಬೊಂಬಾಯಿ, ಮದ್ರಾಸ ಪ್ರಾಂತಗಳಿಗೂ ಅದು ಪಠ್ಯವಾಗಿತ್ತು. ಒಳ್ಳೆಯ ಪರಿಣಾಮವನ್ನು ಬೀರಿತು.

**ಹೊಸಗನ್ನಡ ಸಾಹಿತ್ಯ :**

ಹಿರಿಯ ಕವಯಿತ್ರಿ ಶೈಲಜಾ ಉಡಚಣರು ಒಂದು ಗಳಿಗೆ, ಕಾದು ನೋಡು, ಸ್ವಗತ, ಕಪ್ಪು ನೆಲ ಸೊಕ್ಕಿನ ಸೂರ, ನನ್ನಂತಹವರು, ಕೇಳುಮಗಾ, ಇನ್ನೂ ಹಲವು ಕವನ ಸಂಕಲನಗಳ ಮೂಲಕ ಮಹಿಳಾ ಸಂವೇದನೆಗಳನ್ನು ವ್ಯಕ್ತಪಡಿಸಿದರು. ಜನಪರ ಹೃದಯದ ಶಿವಶರಣ ಪಾಟೀಲ ಜಾವಳಿಯವರ ಹಾಲು ತೊರೆಯಿಂದ ಉಪ್ಪು ನೀರಿಗೆ, ಹತ್ತರ ಕೂಡ ಹನ್ನೊಂದು, ಪರಿಸ್ಥಿತಿಯ ೧೦ & ೫ ಕವಿತೆಗಳು, ಮುಗಿಯದ ಕನಸು, ಹಣೆಬಾರದ ಹಾಡು, ಕಾಳಮಾನದ ಕವಿತೆಗಳು, ಕಾಮಧೇವುನಿವ ಧಾರೆಗಳು ಹೀಗೆ ಹಲವು ಕೃತಿಗಳು ಜೀವಪರವಾಗಿ ಬಂದಿವೆ.

ಬಂಡಾಯ ಕವಿಯೆಂದೇ ಖ್ಯಾತಿ ಪಡೆದ (ಇತ್ತೀಚೆಗೆ ನಿಧನರಾದ) ಡಾ. ಚನ್ನಣ್ಣ ವಾಲೀಕಾರ ಅವರು ಬರೆದ 'ಮರದ ಮೇಲಿನ ಗಾಳಿ, ಕರಿತೆಲಿಮಾನವನ ಜೀಪದ, ಹಾಡಕ್ಕಿ ಹಾಗೂ ಇತರ ಪದ್ಯಗಳು, ಪ್ಯಾಂಥರ್ ಪದ್ಯಗಳು, ಬಂಡೆದ್ದ ದಲಿತರ ಬೀದಿ



ಹಾಡುಗಳು, ಧಿಕ್ಕಾರದ ಹಾಡುಗಳು, ಕಗ್ಗತ್ತಲೆ ಖಂಡದ ಹಾಡುಗಳು ಇವುಗಳೆಲ್ಲ ತಳಸಮುದಾಯದ ಶ್ರಮಿಕರ ದುಃಖ-ದುಮ್ಮಾನವನ್ನು ಹೊರಹಾಕಿವೆ. 'ಯಾವ ಅಕ್ಷರದಿಂದ ಬರೆದು ತೋರಿಸಲಯ್ಯ ನಮ್ಮ ಜನಗಳಿಗಾದ ಎದೆಯಭ್ಯಾನಿ' ಎಂದು ಹಾಡುತ್ತ ವೈಚಾರಿಕತೆಯ ಬೀಜ ಬಿತ್ತಿದರು.

ಡಾ. ಎಂ.ಜಿ.ಬಿರಾದಾರರು 'ಕಾವ್ಯಸಿಂಧು' ಎಂಬ ಕವನ ಸಂಕಲನವು ವಿಶಿಷ್ಟ ಶೈಲಿಯಿಂದಾಗಿ ಗಮನ ಸೆಳೆಯುತ್ತದೆ. ಡಾ. ಬಸವರಾಜ ಸಬರದ ಹೋರಾಟ, ನನ್ನವರ ಹಾಡು 'ಮೂಡಲಕ ಕೆಂಪು ಮೂಡ್ಯಾವ, ನೂರು ಹನಿಗಳು, ನೂರೆಂಟು ನೆನಪುಗಳು, ಕೆಂಬಾವುಟದ ಹಾಡುಗಳು, ದನಿ ಎತ್ತಿ ಹಾಡೇನ, ಮೊದಲಾದ ಕವನ ಸಂಕಲನಗಳು ಜನಪದ ಕಾಳಜಿಯನ್ನು ಹೊಂದಿವೆ, ರೇವಣಸಿದ್ದಯ್ಯ ರುದ್ರಸ್ವಾಮಿಮಠ (ಜಂಗಮಶ್ರೀ) ಅವರ 'ರವ' ಎಂಬ ಕೃತಿ, ಸಿದ್ದರಾಮ ಪೊಲೀಸ ಪಾಟೀಲರ ನಾನು ನಮ್ಮಪ್ಪನ್ಹಾಂಗ, ನೀನೊಮ್ಮೆ ಸತ್ತು ನೋಡು, ಸತ್ಯಜ್ಜನ ವಚನಗಳು ಕನ್ನಡಕ್ಕಾಗಿ ಅವಿರತವಾಗಿ ದುಡಿಯುತ್ತಿರುವ ಪ್ರೊ. ವಸಂತ ಕುಷ್ಟಗಿಯವರು ಭಾವದೀಪ್ತಿ, ಹೊಸಾಹೆಜ್ಜೆ, ಗಾಂಧಾರಿಯ ಕರುಣೆ, ಕಾಡ-ಬೆಳದಿಂಗಳಿನ ಒಂದು ಕತೆ, ಕಂದಾ ಇವರ ದಿಬ್ಬಣದ ಹಾಡು, ಬೆತ್ತಲೆಯ ಬಾನು, ಹಾರಯಿಕೆ ಎಂಬ ಕವನ ಸಂಕಲಗಳ ರಚನೆ ಮಾಡಿದ್ದಾರೆ.

ರವೀಂದ್ರ ಕರ್ಜಗಿಯವರ ೩ ಕೃತಿಗಳು, ಕೆರಳ್ಳಿ ಗುರುನಾಥರೆಡ್ಡಿ, ಪ್ರಭುರಾಜ ಅರಣಕಲ್, ಗುರುಬಸವಯ್ಯ ಅಮ್ಮಾಪುರ ಅವರುಗಳ ಕೃತಿಗಳು ವಿಚಾರಪೂರ್ಣವಾಗಿವೆ. ಡಾ. ಪ್ರಭು ಖಾನಾಪರೆಯವರ ಪಾಂಚಜನ್ಯ, ಆಸೆ, ಅಸಮಾಧಾನ, ಕೋಮು-ದಳ್ಳುರಿಯ ಕೊಳ್ಳೇರಾಮ ಕವನ ಸಂಕಲನಗಳು ವಿಡಂಬನಾತ್ಮಕ ಶೈಲಿಗೆ ಹೆಸರಾಗಿವೆ.

ಡಾ. ಸ್ವಾಮಿರಾವ ಕುಲಕರ್ಣಿಯವರ ಕಳದೈತೋ ಪ್ರೀತಿ ಕಳದೈತಿ ಹನುಮಂತರಾವ ದೊಡ್ಡಮನಿಯವರ ನೊಂದವರ ಹಾಡು, ಡಿ.ಎಂ, ನದಾಫರ ಪ್ರತೀಕಗಳಾಗುವುದಿಲ್ಲ ಗೆಳೆಯ, ಟಿ.ಎಂ. ಭಾಸ್ಕರರ ಹೊಸದಾರಿ, ಸಿದ್ಧರಾಮ ಹೊನ್ನಲ್ ರ ಅಂತರಂಗದ ಹನಿಗಳು ಇನ್ನಿತರ ಕೃತಿಗಳು ಬೆಳಕಿಗೆ ಬಂಧಿವೆ. ಪ್ರಭಾಕರ ಜೋಶಿಯವರ ಯಜ್ಞಕುಂಡ, ಮೃತ್ಯು ಶೀತದ ದಾಳಿ, ಶಮೀವೃಕ್ಷದ ಮೇಲೆ ಇತ್ಯಾದಿ ಹೆಸರಿಸಬಹುದು.

ಸರಸ್ವತಿ ಚಿಮ್ಮಲಗಿ, ಶಶಿಕಲಾ ಮೋಳಿ, ನೀಲಮ್ಮ ಕತ್ನಳ್ಳಿ, ಕಾಶಿನಾಥ ಅಂಬಲಗಿ ಗಂಗಾಪೂಜಾರ, ಎಸ್.ಪಿ. ಸುಳ್ಳದ, ಚಂದ್ರಕಲಾ ಬಿದರಿ (ಎಚ್ಚರಾದಾಗ), ಅನಿತಾ ಗೋತಗಿ, ಭಾಗ್ಯಲತಾ ಶಾಸ್ತ್ರಿ, ವೀರಭದ್ರ ಸಿಂಪಿ, ಸೂರಕಾಂತ ಸುಜ್ಯಾತ್, ಸುರೇಶ ಬಡಿಗೇರ, ರಾಜಶೇಖರ ಮಾಂಗ ಇನ್ನೂ ಹಲವಾರು ಹೊಸ ತಲೆಮಾರಿನ ಯುವ ಕವಿಗಳು ಕಾವ್ಯ ಕ್ಷೇತ್ರವನ್ನು ಸಮೃದ್ಧಗೊಳಿಸಿದ್ದಾರೆ.

**ಕಥೆ-ಕಾದಂಬರಿ ಸಾಹಿತ್ಯ**

ಕಲಬುರಗಿ ಜಿಲ್ಲೆಯಲ್ಲಿ ಕಾವ್ಯ ಬೆಳೆದಷ್ಟು ಕಥೆ- ಕಾದಂಬರಿಗಳು ಸಂಖ್ಯೆಯಲ್ಲಿ ಹೆಚ್ಚಿಲ್ಲದಿದ್ದರೂ ಸತ್ವದಲ್ಲಿ ಗಟ್ಟಿಯಾಗಿವೆ. ಆರಂಭದಲ್ಲಿ ಸಂಪಾದಿತ ಕಥಾ ಸಂಕಲನಗಳಲ್ಲಿ ಅನೇಕರು ಬರೆದ ಕಥೆಗಳು ಪ್ರಕಟವಾದವು. ೧೯೮೨ ರಲ್ಲಿ ಪ್ರೊ. ವಸಂತಕುಷ್ಟಗಿ ಮತ್ತು ಸ್ವಾಮಿರಾವ ಕುಲಕರ್ಣಿಯವರಿಂದ ಸಂಪಾದಿತ 'ಕಥಾ ಸಮೂಹ' ಅಲ್ಲದೆ ಇನ್ನಿತರರು ಸಂಪಾದಿಸಿದ ಬಂಗಾರಿ, ಕಥಾ ಸೌಗಂಧ, ಗುಲಾಬಿಯ ಗುಚ್ಚ, ನನ್ನವರ ಕಥೆಗಳು ಮೌನವೊಡೆದ ಮಾತು ಮೊದಲವುಗಳು ಕಥಾ ಸಾಹಿತ್ಯಕ್ಕೆ ಚಾಲನೆ ನೀಡಿದವು.



ಶೈಲಜಾ ಉಡುಚಣ, ಕುಸುಮಾಕರ ದೇಸಾಯಿ, (ನಾನುಲಕ್ಕಿ, ಕಾಶಿಯಲ್ಲಿ ಕಂಡದ್ದೇನು ಧ್ರುವಮಿಲನ, ಮಹಡಿಮನೆ) ಗೀತಾ ನಾಗಭೂಷಣ (ಜ್ವಲಂತ), ಲಕ್ಷ್ಮೀದೇವಿ ಸಂಧ್ಯಾ ಹೊನಗುಂಟಕರ್ ಇಲ್ಲಿಯ ಕತೆಗಾರ್ತಿಯರು ಮಹಿಳಾ ಸಂವೇದನೆಗಳನ್ನು ತೀವ್ರವಾಗಿ ಅಭಿವ್ಯಕ್ತಿಸಿದ್ದಾರೆ.

ಚೆನ್ನಣ್ಣ ವಾಲೀಕರರ ಬಂಡಾಯದ ಕತೆಗಳು (ಕಪ್ಪು ಕಥೆಗಳು, ಕುತ್ತದಲ್ಲಿ ಕುದ್ದವರ ಕಥೆಗಳು) ಸಿದ್ಧರಾಮ ಹೊನ್ನಲ್ (ಕಥೆಕೇಳು ಗೆಳೆಯಾ, ಬಯಲ ಬಿತ್ತನೆ), ಎಂ.ಜಿ.ಬಿರಾದಾರ (ಸವಕಳಿ), ಸಿದ್ದರಾಮ ಉಪ್ಪಿನ, ಪ್ರಭುಖಾನಾಪುರೆ (ಒಡಲವುರಿ ಕಿಡಿಯಾಗಿ) ಕೆ.ಎಸ್.ನಾಯಕ್, ಶಿವರಾಜ ಪಾಡೀಲ (ದೂರದ ನಕ್ಷತ್ರ) ಮಹಿಪಾಲರೆಡ್ಡಿ ಮುನ್ನೂರ್ ಮಹಾಂತೇಶ ನವಲಕ, ಸುಬ್ಬರಾವ್ ಕುಲಕರ್ಣಿ, ಎಚ್.ಬಿ. ತೀರ್ಥ ಎಚ್. ಟಿ. ಪೋತೆ

ಇನ್ನೂ ಹಲವಾರು ಜನರು ಕಲಬುರಗಿಯ ಭಾಷೆಯಲ್ಲಿ ಇಲ್ಲಿಯ ಜನಜೀವನದ ವ್ಯಥೆಯ ಬದುಕನ್ನು, ಜಮಿನ್ದಾರಿ ವ್ಯವಸ್ಥೆಯಡಿ ನಲುಗಿದ ಜನಜೀವನವನ್ನು ಬಂಡಾಯ ಧೋರಣೆಯಲ್ಲಿ ಚಿತ್ರಿಸಿದ್ದಾರೆ.

ಹೆಚ್ಚು ಕಡಿಮೆ ಇದೇ ಕಥೆಗಾರರೇ ಕಾದಂಬರಿಗಳನ್ನು ಬರೆದಿದ್ದು ಇವರಲ್ಲಿ ಗೀತಾನಾಗಭೂಷಣರು 'ಬದುಕು' ಕಾದಂಬರಿಗೆ ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿಯನ್ನು ಪಡೆದಿರುತ್ತಾರೆ. ಗಂಡು ಮೆಟ್ಟಿನ ಭಾಷೆಯಲ್ಲಿ ಮೂವತ್ತು ಕಾದಂಬರಿಗಳನ್ನು ಬರೆದು ಕನ್ನಡ ಕಾದಂಬರಿ ಲೋಕಕ್ಕೆ ಬೆರಗು ಮೂಡಿಸಿದ ಗೀತಾನಾಗಭೂಷಣರು ಶೋಷಿತ ಮಹಿಳೆಯರ ಬದುಕನ್ನು ಹಸಿಹಸಿಯಾಗಿ ಕಥನವಾಗಿಸಿದ್ದಾರೆ. ಇವರ "ಹಸಿಮಾಂಸ ಮತ್ತು ಹದ್ದುಗಳು' ಚಲನಚಿತ್ರಕೂಡಾ ಆಗಿದೆ. ಕಾದಂಬರಿಗಾರ್ತಿ-ಕತೆಗಾರ್ತಿ ಗೀತಾ ನಾಗಭೂಷಣ ಅವರು ನಮ್ಮ ಕಲಬುರಗಿಯ ಹೆಮ್ಮೆಯಾಗಿದ್ದಾರೆ. ರಾಜ್ಯಮಟ್ಟದಲ್ಲಿ ಹೆಸರು ಮಾಡಿದ ಚನ್ನಣ್ಣ ವಾಲೀಕಾರ ಚಂದ್ರಕಾಂತ ಕುಸನೂರರು ಪ್ರಮುಖರಾಗಿದ್ದಾರೆ. ಕುಸನೂರರ ಚರ್ಚ್‌ಗೇಟ್ ಗೋಹರ್‌ಜಾನ್ ಮಾಲತಿ ಮತ್ತು ನಾನು, ಯಾತನಾಶಿಬಿರ, ಇವುಗಳಲ್ಲಿ ಹಲವು ತಲೆಮಾರುಗಳ ಕತೆಯಿದ್ದು, ಹೈ.ಕ.ದ ವಿಮೋಚನಾ ಪ್ರಸಂಗ ಅಂದಿನ ತಲ್ಲಣಗಳಲ್ಲಿ ಚಿತ್ರಣಗೊಂಡಿವೆ. ವಾಲೀಕರರ 'ಬೆಳ್ಳಾ' ಕಾದಂಬರಿಯು ಕಲಬುರಗಿ ಭಾಷೆಯನ್ನು ಸಶಕ್ತವಾಗಿ ಬಳಸಿಕೊಂಡಿದ್ದು, ದೇವನೂರರ ಕುಸುಮಾಬಾಲೆಗೆ ಸರಿಸಾಟಿಯಾಗಿದೆ. (ಆದರೆ ಮಿವರ್ಶಕರಿಂದ ಚರ್ಚಿಸಲ್ಪಡಲಿಲ್ಲ)

**ಕಲಬುರಗಿ ಜಿಲ್ಲೆಯ ಮಕ್ಕಳ ಸಾಹಿತ್ಯ :**

ಕಲಬುರಗಿ ಜಿಲ್ಲೆಯಲ್ಲಿ ಬಹುಕಾಲ ಸೇವೆಗೈದ ಸಿದ್ದಯ್ಯ ಪುರಾಣಿಕರ 'ತುಪ್ಪಾರೊಟ್ಟಿ ಗೇ ಗೇ (೧೯೭೭) ಗಿಲ್‌ಗಿಉಲ್ ಗಿಲಗಚ್ಚಿ, ಸಂಕಲನಗಳು (ಮತ್ತು ಅಜ್ಜನ ಕೋಲಿದು ನನ್ನಯ ಕುದುರೆ' ಎಂಬ ಜನಪ್ರಿಯ ಹಾಡನ್ನೂಳಗೊಂಡಂತೆ) ಇಲ್ಲಿಯ ಮಕ್ಕಳ ಸಾಹಿತ್ಯದ ಮೊದಲ ಕೃತಿಗಳು. ಎ.ಕೆ. ರಾಮೇಶ್ವರ, ಚಂದ್ರಕಾಂತ ಕರದಳ್ಳಿ, ಎಚ್. ಬಿ.ತೀರ್ಥ, ಭಂಟನೂರು ಗುರುಶಾಂತಯ್ಯ, ಚಿತ್ರಶೇಖರ ಕಂಠಿ, ಸೂಗಯ್ಯ ಹಿರೇಮಠ, ಎಂ. ಮಂಡಲಗಿರಿ ಪ್ರಸನ್ನ ಭೀಮಣ್ಣ ಬೋನಾಳ, ಕೆರಳ್ಳಿ ಗುರುನಾಥರೆಡ್ಡಿ, ಪಾಪಮ್ಮ ಹಾಬಾಳಕರ, ರಾಜಶೇಖರ ಕುಕ್ಕುಂದಾ ಮೊದಲಾದವರು ಮಕ್ಕಳ ಸಾಹಿತಿಗಳಾಗಿದ್ದಾರೆ.

[ಎ. ಕೆ. ರಾಮೇಶ್ವರ-ನಂದಿಕೋಲು, ರಾಜ್ಯಪ್ರಶಸ್ತಿ ವಿಜೇತ ಕೃತಿ ವಸಂತಬಂದ, ಬನ್ನಿ ಮನುಕುಲ ಚಂದಿರರೆ, ಹಕ್ಕಿ ಹಾರುತಿದೆ.

ಕೆರಳ್ಳಿ ಗುರುನಾಥರೆಡ್ಡಿ- ಒಂದು ಗೀತರೂಪಕ, ಇನ್ನೊಂದು ನಾಟಕ, ಪುಟ್ಟಪಾತರಗಿತ್ತಿ, ರಾಜಶೇಖರ ಕುಕ್ಕುಂದಾ-ಚಲುವ ಚಂದಿರ ವಿದ್ಯಾಸಾಗರ ಕುಕ್ಕುಂದಾ-ನನ್ನ ಕನಸು

ಚಂದ್ರಶೇಖರ ಕರವಳ್ಳಿ-ಆನೆ ಬಂತು ಆನೆ ಖ್ಯಾತಿಯ ಸಾಹಿತಿ, ಮಲ್ಲಿಗೆ ಮಾಲೆ. ನಲಿದಾಡು ಬಾ ನವಿಲೆ,

ರವೀಂದ್ರ ಕರ್ಜಗಿ - ಅಡಿ ಕಲಿ ತಾಯ ಮಡಿಲಲಿ

ಉಮಾತನಯರಾಜ ಚಂದ್ರಮಾಮ, ಸೂಗಯ್ಯ ಹಿರೇಮಠ ಪ್ಲಾಸ್ಟಿಕ್ ಚೀಲ ಬಂತಮ್ಮ ಎಚ್. ಬಿ. ತೀರ್ಥ - ಹೊಟ್ಟೆಬಾಕ ನರಿ ಪಾಪಮ್ಮ ಹಾಬಾಳಕರ ಅಂಗಳದ ಹೂಗಳು]

ಇತ್ತೀಚೆಗೆ ಮಕ್ಕಳ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳು ಬೇಸಿಗೆ ಶಿಬಿರಗಳು, ಚಿಣ್ಣರ ಮೇಳಗಳು 'ನವರಂಗ (ಪ್ರಚೋಶಿ) ಇವುಗಳೆಲ್ಲ ಮಕ್ಕಳ ಸಾಹಿತ್ಯದ ಅಭಿವೃದ್ಧಿಗೆ ಪ್ರೇರಣವಾಗಿವೆ. ಕಲಬುರಗಿ ಜಿಲ್ಲೆಯ ನಾಟಕ ಸಾಹಿತ್ಯ

ನಾಟಕ ಸಾಹಿತ್ಯಕ್ಕೆ ರಂಗಭೂಮಿಯ ಬೆಳವಣಿಗೆಯು ಪೂರಕವಾಗಿರುತ್ತದೆ. ಅಂತೆಯೇ ಕಲಬುರಗಿಯಲ್ಲಿ ೧೯೨೮ ರಿಂದಲೇ ನಾಟಕ ಕಂಪನಿಗಳ ಉದಯವಾಗಿದೆ, (ರಂಗಂ ಪೇಟೆಯ ನಾಟಕ ಕಂಪನಿ .ಪೌರಾಣಿಕ ನಾಟಕಗಳನ್ನು ಪ್ರದರ್ಶಿಸಿತು. ೧೯೪೪ ರಲ್ಲಿ ಮಿಣಜಗಿ ನಾಟಕ ಕಂಪನಿ, ಮೈದರಗಿ ನಾಟಕ ಕಂಪನಿ)ಸ್ವಾತಂತ್ರ್ಯದ ಹಂಬಲವು ಇಲ್ಲಿಯ ಯುವ ಜನರನ್ನು ಒಗ್ಗೂಡಿಸಲು ಮತ್ತು ಸಾಂಸ್ಕೃತಿಕ ಚಟುವಟಿಕೆ ಕೈಗೊಳ್ಳಲು ಪ್ರೇರೇಪಿಸಿತು. ವಿದ್ಯಾಭ್ಯಾಸಕ್ಕಾಗಿ ರಾಯಚೂರು, ಕೊಪ್ಪಳದಿಂದ ಕಲಬುರಗಿಗೆ ಬಂದ

ಗರೂಡ ಸದಾಶಿವರಾಯ ಮೊದಲಾದವರಿಂದ ಆರಂಭಗೊಂಡು ರಂಗ ಚಟುವಟಿಕೆಗಳು ಬ್ರಿಟಿಷರನ್ನು ಪ್ರತಿರೋಧಿಸುತ್ತ ಬಂದವು, ಬಂಧವಿಮೋಚನ, ವಿಕ್ರಮ ಶಶಿಕಲಾ, ಶ್ರೀಶರಣ ಬಸವ ಮೊದಲಾದ ನಾಟಕಗಳನ್ನು ರಚಿಸಿ, ಅನುವಾದಿಸಿ, ಪ್ರಯೋಗಿಸಿದರು.

೧೯೪೧ ರಲ್ಲಿ ಹುಟ್ಟಿದ ಕನ್ನಡ ಸಾಹಿತ್ಯ ಸಂಘ, ಹೆರೂರು ದತ್ತಾತ್ರೇಯ ಮಾಸ್ತರರ ಹವ್ಯಾಸಿ ರಂಗ ಚಟುವಟಿಕೆಗಳು. ಐತಿಹಾಸಿಕ ನಾಟಕಗಳ ಪ್ರಯೋಗ, ೭೦ರಲ್ಲಿ ದಶಕದಲ್ಲಿ ಆರಂಭಗೊಂಡ ರಂಗಮಾಧ್ಯಮ, ರಂಗಭಾರತಿ, ನೃಪತುಂಗ ಬರಹಗಾರರ ಹಾಗೂ ಕಲಾವಿದರ ಸಂಸ್ಥೆ, ನಾಟಕ ಅಕಾಡೆಮಿಯ ಸಹಯೋಗದೊಂದಿಗೆ ರಾಜ್ಯ-ರಾಷ್ಟ್ರಮಟ್ಟದ ಹಲವಾರು ನಾಟಕ ತಂಡಗಳ ಸಹಯೋಗದಲ್ಲಿ ನಡೆದ ನವೀನತಮ ಪ್ರಯೋಗಗಳು ಜಿಲ್ಲೆಯ ನಾಟಕಕಾರರಿಗೆ ಪ್ರೇರಣೆ ನೀಡಿ ನಾಟಕ ರಚಿಸಲು ಸಹಕರಿಸಿವೆ.

ರಂಗಾಯಣ ಕಲಬುರಗಿಗೆ ಬಂದಿದ್ದು, ಇಲ್ಲಿಯ ರಂಗಾಸಕ್ತರಿಗೆ ಹೆಚ್ಚಿನ ಅನುಕೂಲವಾಗಿದೆ. ಪ್ರಭಾಕರ ಸಾತಖೇಡ, ಶಂಕ್ರಯ್ಯ ಘಂಟಿ ಅವರ ಅವಿರತ ಪರಿಶ್ರಮ ಸಾಕಾರಗೊಂಡಿದೆ.



ಸಂಶೋಧನಾ ಸಾಹಿತ್ಯ

ಕರ್ನಾಟಕದಲ್ಲಿ ನಡೆದಂತೆ ಕಲಬುರಗಿಯಲ್ಲಿಯೂ ಸಾಹಿತ್ಯ ಮತ್ತು ಸಂಶೋಧನೆಯ ಕಾರ ನಿರಂತರವಾಗಿದೆ. ಡಾ. ಪಿ.ಬಿ. ದೇಸಾಯಿಯವರು ೧೯೩೨ ರಲ್ಲಿ ಪ್ರಕಟಿಸಿದ ಪ್ರಾಚೀನ ಕರ್ನಾಟಕ, ವಿಜ್ಞಾನೇಶ್ವರರ ಪರಿಚಯಿಸುವ ಲೇಖನಗಳು 'ಹೊಸಬೆಳಕು' ನಿಯತಕಾಲಿಕದಲ್ಲಿ ಪ್ರಕಟಿಸಿದಾಗಿನಿಂದ ಇದರ ಪ್ರಾಚೀನತೆಯನ್ನು ಗುರುತಿಸಬಹುದಾಗಿದೆ. ಡಿ.ಕೆ.ಭೀಮಸೇನರಾವ್, ಕಟಪರಾಳ ಕೃಷ್ಣರಾವ್, ಖ್ಯಾತ ಸಂಶೋಧಕ ಸೀತಾರಾಮ ಜಾಗೀರದಾರ, ದತ್ತಾತ್ರಯ ಹೆರೂರ, ಶಾಂತರಸ, ಸಿದ್ದಯ್ಯ ಪುರಾಣಿಕ, ಅಷ್ಟಾವಧಾನಿ ನರಸಿಂಹಶಾಸ್ತ್ರಿ ಇವರುಗಳು ವಿಶಾಲ ಮಾರ್ಗವನ್ನು ನಿರ್ಮಿಸಿ ಮುಂದಿನ ಸಂಶೋಧಕರಿಗೆ ಮಾರ್ಗದರ್ಶಕರಾಗಿದ್ದಾರೆ.

ಕಲಬುರಗಿಯಲ್ಲಿ ಗುಲಬರ್ಗಾ.ವಿ.ವಿ. ಆರಂಭವಾದ ನಂತರ ಸಂಶೋಧನೆ ಮತ್ತು ಪ್ರಕಟಣೆಯ ಕಾರ ಭರದಿಂದ ಸಾಗಿದೆ ಡಾ. ಬಿ.ಬಿ. ಹೆಂಡಿ, ಡಾ. ಎಂ.ಜಿ. ಬಿರಾದಾದ, ಎಂ. ಎಸ್. ಲಠ್, ವಿ. ಶಿವಾನಂದ, ಸಂಗಮೇಶ ಸವದತ್ತಿಮಠ, ಪಿ.ಕೆ. ಖಂಡೋಬಾ, ನಾಗಾಬಾಯಿ ಬುಳ್ಳಾ, ಡಿ.ಬಿ. ನಾಯಕ್ ಇನ್ನೂ ನೂರಾರು ಗಣ್ಯ ವಿದ್ವಾಂಸರು ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಕೃತಿಗಳ ಅಧ್ಯಯನ ಕೈಗೊಂಡರು. ಚಂಪೂ, ವಚನ,ಕೀರ್ತನ, ರೂಪಗಳು ಜೈನ, ವೀರಶೈವ ಹಾಗೂ ಬ್ರಾಹ್ಮಣ ಕಾವ್ಯ, ಪುರಾಣಗಳು, ಜಾನಪದದಲ್ಲಿ ಜನಾಂಗಿಕ ಅಧ್ಯಯನ ಕ್ಷೇತ್ರದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ಅಂದಿನಿಂದ ಇಂದಿನವರೆಗೂ ಸಾವಿರಾರು ಸಂಶೋಧನಾ ಗ್ರಂಥಗಳ ರಚನೆಗೆ ಮತ್ತು ಪ್ರಕಟಣೆಗೆ ಕಾರಣೀಭೂತವಾಗಿದೆ.

**ಪತ್ರಿಕಾ ಸಾಹಿತ್ಯ**

ಕೈ ಬರಹದ ಪತ್ರಿಕೆಗಳಿಂದ ಆರಂಭಗೊಂಡು ಮುದ್ರಿತ ಪತ್ರಿಕೆಗಳವರೆಗೆ ಪತ್ರಿಕಾ ಸಾಹಿತ್ಯಕ್ಕೆ ಸುದೀರ್ಘ ಇತಿಹಾಸವಿದೆ. ವಿಜಯನಗರ ಅರಸರ, ಬಹಮನಿ ಸುಲ್ತಾನರ ಕಾಲದಲ್ಲಿ, ಅನಂತರ ಸ್ವಾತಂತ್ರ್ಯ ಹೋರಾಟದ, ತದನಂತರ ಹೈ.ಕ.ದ ವಿಮೋಚನೆಯ ಕಾಲದಲ್ಲಿಯೂ ಕನ್ನಡವನ್ನೊಳಗೊಂಡಂತೆ ಬಹುಭಾಷಾ ಪತ್ರಿಕೆಗಳು ಕಲಬುರಗಿ ಜಿಲ್ಲೆಯಲ್ಲಿ ಬೆಳಕು ಕಂಡಿವೆ.

ಸಾಧನಾ, ಪ್ರಜಾ, ನಾಗರೀಕ ಹಸ್ತಪತ್ರಿಕೆಗಳು, ಉದಯ, ಪ್ರಕಾಶ, ದಿ ಡೆಮಾಕ್ರೆಟ್ (ಇಂಗ್ಲೀಷ್) ಕಸ್ತೂರಬಾ ಕರ್ನಾಟಕ ಮೊದಲಾದ ೨೫ ಹಸ್ತ ಪತ್ರಿಕೆಗಳಿದ್ದವು. ಸ್ವಾತಂತ್ರ್ಯ ವಿಮೋಚನೆಯ ನಂತರ ಇವುಗಳು ಕ್ಷೀಣಿಸುತ್ತ ಹೋದವು.

ಮರಾಠಿಯ 'ಗುಲಬರ್ಗಾ ಸಮಾಚಾರ' ಕಲಬುರಗಿ ಜಿಲ್ಲೆಯ ಪ್ರಥಮ ಪತ್ರಿಕೆ. ಪರಶುರಾಮ ಬೋಡೆ ಇದರ ಸಂಪಾದಕರು. ೧೯೪೪ ರಲ್ಲಿ ದತ್ತಾತ್ರೆಯ ಅವರಾದಿ ಮತ್ತು ಹನುಮಂತರಾವ್ ನೇತೃತ್ವದ 'ನಾಗರೀಕ' ಪತ್ರಿಕೆ ಕನ್ನಡದ ಮೊದಲ ಪತ್ರಿಕೆ, ಬಿ. ಮಹದೇವಪ್ಪ ಪತ್ರಿಕೆಯ ಮುಖಾಂತರ ಸಾಹಿತ್ಯ ಸೇವೆಗೈದ ಮಹನೀಯರು, ಕನ್ನಡ, ಉರ್ದು, ಹಿಂದಿ, ಇಂಗ್ಲೀಷ್, ತಮಿಳು, ಭಾಷೆಗಳೊಂದಿಗೆ ದೈನಿಕ, ಸಾಪ್ತಾಹಿಕ, ಪಾಕ್ಷಿಕ, ಮಾಸಿಕ, ದೈಮಾಸಿಕ, ತ್ರೈಮಾಸಿಕ, ಇತ್ಯಾದಿಯಾಗಿ ವಿವಿಧ ಪ್ರಕಾರಗಳಲ್ಲಿ ಪತ್ರಿಕಾ ಸಾಹಿತ್ಯ ವಿಸ್ಕೃತಗೊಂಡಿದೆ. ದಲಿತ ಶಕ್ತಿ, ಚಿಂತಕ, ಆಕ್ರೋಶ, ನೃಪತುಂಗ, ಜಯಭೀಮ



ಗದೆ, ಶೂದ್ರ ಇನ್ನೂ ಹಲವಾರು ಪತ್ರಿಕೆಗಳು ಗಮನಾರ್ಹವಾಗಿವೆ. ನಾಡು-ನುಡಿಯ, ನೆಲ-ಜಲದ, ಗಡಿ ಸೀಮೆಗಳ ಜಗಳಕ್ಕೆ ಸಾಹಿತ್ಯ, ಸಂಸ್ಕೃತಿಯ ಶ್ರೀಮಂತಿಕೆಗೆ, ಶೈಕ್ಷಣಿಕ ಪ್ರಗತಿಗೆ, ರಾಜಕೀಯ ಪರಿವರ್ತನೆಗೆ ಪತ್ರಿಕಾ ಸಾಹಿತ್ಯವು ಬೆನ್ನಲುಬಾಗಿ ನಿಂತಿದೆ.

ಸಾಹಿತ್ಯವು ಸಮಾಜದ ಪ್ರತಿಬಿಂಬವಾಗಿರುತ್ತದೆ. ಅಂದಂದಿನ ಧಾರ್ಮಿಕ-ಸಾಮಾಜಿಕ- ರಾಜಕೀಯ-ಭಾಷಿಕ ಇನ್ನಿತರ ಎಲ್ಲ ಹೋರಾಟಗಳೂ ಜನಜೀವನದ ಮೇಲೆ ಪ್ರಭಾವ ಬೀರುತ್ತವೆ. ಜನರ ಜೀವನ ವಿಧಾನವೇ ಸಂಸ್ಕೃತಿಯ ಅಂಗವಾಗುತ್ತವೆ, ಕಲಬುರಗಿಯ ಕನ್ನಡದ ಯಾವುದೇ ರೂಪವನ್ನು ನೋಡಿದರೂ ಅಲ್ಲಿ ಜೀವನಪರವಾದ ನೆಲೆಗಳಿವೆ. ಕಾರಣ್ಯವೇ ಇಲ್ಲಿಯ ಸಾಹಿತ್ಯದ ತಾಯಿ ಬೇರಾಗಿದೆ.

ಈ ದಿಸೆಯಲ್ಲಿ ಈವರೆಗೆ ಮಾಡಿದ ಕಲಬುರಗಿಯ ಸಾಹಿತ್ಯದ ಪರಿಚಯದಲ್ಲಿ ಅನನ್ಯ ಬಹು ಸಂಸ್ಕೃತಿಯ ಪರಿಚಯವೂ ಅಡಕವಾಗಿದೆ. ಅಪೂರ್ವವಾದ ಜ್ಞಾನಶಾಖೆಗಳನ್ನು ಪರಿಚಯಿಸಿದ, ಸೌಹಾರ್ದತೆಗೆ ನೆಲೆ ಬೀಡಾದ ಈ ಜಿಲ್ಲೆಯು ಸರ್ವಧರ್ಮಗಳ ಅಮೂಲ್ಯವಾದ ಸ್ಮಾರಕಗಳನ್ನು ತನ್ನ ಒಡಲಲ್ಲಿ ಸಂರಕ್ಷಿಸಿಕೊಂಡು ಬಂದಿರುವುದು ತಮ್ಮೆಲ್ಲರ ಕಣ್ಣೆದುರಿಗಿದೆ. ಈ ಮೊದಲಿನ ಪ್ರಬಂಧಕಾರರ ವಿಷಯದಲ್ಲಿ ಇದು ಪ್ರಸ್ತಾಪವಾಗಿದೆ.

ಇದರೊಂದಿಗೆ ಅಂತರಾಷ್ಟ್ರೀಯ ಚಿತ್ರಕಲಾ ಖ್ಯಾತಿಯನ್ನು ಪಡೆದ ಎಸ್. ಎಂ. ಪಂಡಿತರು ಕಲಬುರಗಿಯ ಸಂಸ್ಕೃತಿಗೆ ಗರಿಮೆಯನ್ನು ತಂದುಕೊಟ್ಟಿದ್ದಾರೆ. ಜೆ.ಎಸ್. ಖಂಡೇರಾವ್, ಎ.ಎಸ್. ಪಾಟೀಲ, ವಿ.ಜಿ.ಅಂದಾನಿ, ರಹಮಾನ ಪಟೇಲರಂಥ ಚಿತ್ರಕಲಾವಿದರು ದೇಶ-ವಿದೇಶಗಳಲ್ಲಿ ನಮ್ಮೂರಿನ ಸಂಸ್ಕೃತಿಯನ್ನು ಪರಿಚಯಿಸುತ್ತಿದ್ದಾರೆ.

ಜೈನರ ಬಸದಿಗಳಿಗೆ, ಮುಸ್ಲಿಮರ ದರ್ಗಾಗಳಿಗೆ, ಕ್ರೈಸ್ತರ ಚರ್ಚುಗಳಿಗೆ, ಸಿಬ್ಬರ ಗುರುದ್ವಾರಗಳಿಗೆ, ಬೌದ್ಧ ವಿಹಾರಗಳಿಗೆ ಮತಭೇದವಿಲ್ಲದೆ ಎಲ್ಲರೂ ತಲೆಬಾಗುವ ಆಹಾರಾದಿಗಳನ್ನು ಕೊಡುಕೊಳ್ಳುವ ಪರಸ್ಪರರ ಸುಖ-ದುಃಖಗಳಲ್ಲಿ ಕೈಗೂಡಿಸುವ ಅನನ್ಯ ಸಂಸ್ಕೃತಿಯೇ ಕಲಬುರಗಿಯ ಸಂಸ್ಕೃತಿ, ಕಡಕ್ ರೊಟ್ಟಿ, ಶೇಂಗಾ ಹಿಂಡಿ, ಪುಂಡಿಪಲ್ಲೆ ಕಡುಬು, ಭಜ್ಜಿಪಲ್ಲೆ, ಶೇಂಗಾ ಹೋಳಿಗೆ, ಹುಳಬಾನ, ಹೂರಣ ಹೋಳಿಗೆಯ ಪುಷ್ಟಿದಾಯಕ ಸಂಸ್ಕೃತಿ, ತೊಗರಿಯ ಕಣಜ ಕಲಬುರಗಿ. ಇಲ್ಲಿಯ ಸಂಸ್ಕೃತಿಯು ಕವಿ ಕುವೆಂಪು ಅವರು ಕರ್ನಾಟಕದ ಬಣ್ಣನೆಯಲ್ಲಿ ಹೇಳಿದಂತೆ ಸರ್ವಜನಾಂಗದ ಶಾಂತಿಯ ತೋಟವಾಗಿದೆ.

ಇಂಥ ಅಪೂರ್ವವಾದ ಸಾಂಸ್ಕೃತಿಕ ಬದುಕನ್ನು ತಮ್ಮದಾಗಿಸಿಕೊಳ್ಳುವ ಮುಂದಿನ ವಾರಸುದಾರರಿಗೆ ಈ ಸಾಹಿತ್ಯ-ಸಂಸ್ಕೃತಿಯ ಮುಂದುವರಿಕೆಯ ಜವಾಬ್ದಾರಿಯನ್ನು ಹೊರಿಸುತ್ತ ನನ್ನ ಮಾತಿಗೆ ವಿರಾಮ ಹೇಳುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತಿಗೆ ಮತ್ತು ನನಗೆ ಈ ಅವಕಾಶ ಕೊಟ್ಟ ಆಯೋಜಕರಿಗೆ, ಈವರೆಗೆ ಕೇಳಿಸಿಕೊಂಡ ತಮಗೆಲ್ಲ ಧನ್ಯವಾದಗಳು.

## ಭಾವೈಕ್ಯತೆಯ ನೆಲೆಗಳು

**ಬೋಡೆ ರಿಯಾಜ್ ಅಹ್ಮದ**

ಭಾರತದ ಸಂಸ್ಕೃತಿಗೆ ದಖನ್ ಅತ್ಯಮೂಲ್ಯ ಕೊಡುಗೆ ಎಂದರೆ ಸಹಿಷ್ಣುತೆ ಮತ್ತು ಸಹಬಾಳ್ವೆ, ಇದು ರಾಜಧಾನಿ ದೆಹಲಿಗೂ ದಖನ್ ಕಲಿಸಿದ ಪಾಠ ಪರಸ್ಪರ ಸೌಹಾರ್ದದಿಂದ ಬಾಳುವುದು ದಖನ್ ಪ್ರದೇಶದ ಜನರಿಗೆ ಹೊಸದಾದ ಸಂಗತಿಯೇನಲ್ಲ. ಅದಕ್ಕೆ ಭೌಗೋಳಿಕ, ಐತಿಹಾಸಿಕ, ಆರ್ಥಿಕ, ಸಾಮಾಜಿಕ ಕಾರಣಗಳಿವೆ. ಗುಲ್ಬರ್ಗವು ಕೆಲಕಾಲ ದಖನ್‌ನ ರಾಜಧಾನಿ ಆಗಿತ್ತು ಎಂಬುದು ತಾಂತ್ರಿಕವಾಗಿ ಸರಿ. ಆದರೆ, ಅದು ಈಗಿನ ಕರ್ನಾಟಕದ ಸುಮಾರು ಎರಡು ಪಟ್ಟು ಭೂಭಾಗದ ರಾಜಧಾನಿಯಾಗಿತ್ತು ಹೀಗಾಗಿ ಗುಲಬರ್ಗಾ ಅಂದರೆ ದಖನ್, ದಖನ್ ಅಂದರೆ ಗುಲಬರ್ಗಾ, ದಖನ್‌ನ ಚರಿತ್ರೆಯನ್ನು ನಿರ್ವಹಿಸುವಲ್ಲಿ ಕಲಬುರಗಿ- 'ಗುಲ್ಬರ್ಗ' ಪ್ರಮುಖ ಪಾತ್ರ ವಹಿಸುತ್ತಲೇ ಬಂದಿದೆ. ದಖನ್ ಎಂಬ ಪದವೇ 'ದಕ್ಷಿಣ' ಎಂಬ ಸಂಸ್ಕೃತ ಪದದ ಕನ್ನಡೀಕರಣಗೊಂಡ ತದ್ಭವ ರೂಪ. ದಖನ್ ಪ್ರದೇಶವು ಹಲವು ಭಾಷೆ ಮತ್ತು ಸಂಸ್ಕೃತಿಗಳು ಒಂದೆಡೆ ಸೇರಿ ಪರಸ್ಪರ ಮುಖಾಮುಖಿಯಾಗಿ ಕೊಡುಕೊಳ್ಳುವಿಕೆಯ ಮೂಲಕ ಬೆಳೆಯುತ್ತ ಬಂದಿವೆ. ಎರಡು ಚಿಂತನೆ-ನಂಬಿಕೆ- ಆಲೋಚನೆಗಳು ಜೊತೆಯಲ್ಲಿ ಇದ್ದು ಬದುಕಲು ಆರಂಭಿಸುತ್ತಿದ್ದಂತೆ ಸಹಜವಾಗಿಯೇ ಒಂದು ಇನ್ನೊಂದರ ಮೇಲೆ ತನ್ನ ಪ್ರಭಾವ-ಪ್ರೇರಣೆ ಬೀರುತ್ತದೆ. ಯಾಕೆಂದರೆ ಯಾರೊಬ್ಬರೂ ಅಂದರೆ ಯಾವೊಂದು ಜೀವಂತ ಸಂಸ್ಕೃತಿಯೂ ನಿರ್ವಾತದಲ್ಲಿ ಬದುಕುವುದಿಲ್ಲ. ಬದಲಾಗುತ್ತ-ಬೆಳೆಯುತ್ತ ಇದ್ದದ್ದಕ್ಕೆ ಹೊಸದನ್ನು ತನ್ನದೇ ಹೆಜ್ಜೆಗುರುತುಗಳನ್ನು ಮೂಡಿಸುತ್ತ ಹೋಗುವುದು ಜೀವಂತ ಸಂಸ್ಕೃತಿಯ ಲಕ್ಷಣ ಇದಕ್ಕೆ ದಖನ್ ಹೊರತಲ್ಲ. ಹಾಗೆಯೇ ಗುಲ್ಬರ್ಗ ಕೂಡ.

ಹಲವು ಭಾಷೆ, ಧರ್ಮ, ನಂಬಿಕೆಗಳು ಒಂದೆಡೆ ನೆಲೆ ನಿಂತ ಪ್ರದೇಶ ಕಲಬುರಗಿ- ಗುಲ್ಬರ್ಗ. ಇದು ಬಹುಸಂಸ್ಕೃತಿ-ನಂಬಿಕೆಗಳು ಒಂದೆಡೆ ಸೇರಿದ ಕುದಿಪಾತ್ರೆ, ಹಳೆಯ ತತ್ವ ಸಿದ್ಧಾಂತಗಳೆಲ್ಲ ಇಲ್ಲಿ ಬಂದು ಸೇರಿ ಕುದ್ದು ಹೊಸ ರೂಪ ಪಡೆದು ಕೊನೆಯಾಗುತ್ತದೆ.

ಬೌದ್ಧ-ಜೈನ ಧರ್ಮಗಳು ದಖನ್‌ನಲ್ಲಿ ಉಂಟು ಮಾಡಿದ ಸಂಚಲವು ಹಲವು ನಂಬಿಕೆಗಳ ಸ್ವರೂಪದ ಮೇಲೆ ತೀವ್ರ ಬದಲಾವಣೆಯನ್ನು ಉಂಟು ಮಾಡಿತು. ಚಂದ್ರಗುಪ್ತ ದಖನ್‌ನತ್ತ ನಡೆದು ಬಂದದ್ದು ಹಾಗೂ ಅವನ ಮೊಮ್ಮಗ ಸಾಮ್ರಾಟ್ ಅಶೋಕ 'ಮಸ್ಕಿ ಸೇರಿದಂತೆ ಈ ಭಾಗದಲ್ಲಿ ಬರೆಸಿದ ಶಾಸನಗಳು ಕೂಡು ಸಂಸ್ಕೃತಿಯ ಸ್ವರೂಪಕ್ಕೆ ಸಾಕ್ಷಿಯಂತಿವೆ. ಸನ್ನತಿಯಲ್ಲಿ ಅಶೋಕನ ಅಪರೂಪದ ಶಾಸನ ದೊರೆತಿರುವುದು ಹಾಗೂ ಅಲ್ಲಿಗೆ ಸಮೀಪದಲ್ಲಿರುವ ಕನಗನಹಳ್ಳಿಯಲ್ಲಿ ಭಾರತದ ಏಕೈಕ ಅಶೋಕ ಶಿಲ್ಪ ಇರುವುದು ಕೇವಲ ಕಾಕತಾಳೀಯ ಅಲ್ಲ.

ನಂತರ ಈ ಭಾಗವನ್ನು ಆಳಿದ ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು ಸಹಬಾಳ್ವೆಯ ಸಂಸ್ಕೃತಿಯನ್ನು ಮುಂದುವರೆಸಿದರು. ಕಲಬುರಗಿ ನಂತರದ ಇತಿಹಾಸದಲ್ಲಿ ಹಲವು ಪ್ರಥಮಗಳಿಗೆ ಸಾಕ್ಷಿಯಾಗಿದೆ. ಕನ್ನಡದ ಮೊದಲ ಉಪಲಬ್ದ ಗ್ರಂಥ ಶ್ರೀವಿಜಯನ 'ಕವಿರಾಜಮಾರ್ಗ' ವು ಈ ಭಾಗದಲ್ಲಿ ರಚಿತವಾದದ್ದು ಆಕಸ್ಮಿಕ ಅಲ್ಲ. ರಾಷ್ಟ್ರಕೂಟರ ದೊರೆ ನೃಪತುಂಗನ ಆಸ್ಥಾನದಲ್ಲಿದ್ದ ಶ್ರೀವಿಜಯ ತನ್ನ 'ಕವಿರಾಜಮಾರ್ಗ'ದಲ್ಲಿ ಪರವಿಚಾರ ಮತ್ತು ಪರಧರ್ಮದ ಸಹಿಷ್ಣುತೆಯ ಬಗ್ಗೆ ಮಾತನಾಡಿದ್ದಾನೆ. 'ಕಸವರವೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ' ಎಂಬುದು ಕಲ್ಬುಗಿ ಸಂಸ್ಕೃತಿಯು ಕನ್ನಡ ಸಂಸ್ಕೃತಿಗೆ- ಭಾರತೀಯ ಸಂಸ್ಕೃತಿಗೆ ನೀಡಿದ ಕೊಡುಗೆ.

ನಂತರ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಈ ಪ್ರದೇಶದಲ್ಲಿ ಸಾಂಸ್ಕೃತಿಕ-ಸಾಹಿತ್ಯಕ ಶ್ರೀಮಂತಿಕೆ ಜೊತೆಗೆ ಸಹಬಾಳ್ವೆಯ ಸಂಸ್ಕೃತಿ ಮುಂದುವರೆಯಿತು. ಆರನೇ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ ಆ ಮಿತಾಕ್ಷರ'ದ ವಿಜ್ಞಾನೇಶ್ವರ ಹಾಗೂ ಕವಿ ಬಿಲ್ಹಣನ ಕೃತಿಗಳ ಓದು ಕಲಬುರ್ಗಿ ಪ್ರದೇಶದ ಮಹತ್ವವನ್ನು ಸೂಚಿಸುತ್ತದೆ.

ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಬಸವಣ್ಣನ ನೇತೃತ್ವದ ಚಳುವಳಿಯು ಎಲ್ಲ ಬಗೆಯ ತರತಮಗಳನ್ನು ತೊಡೆದುಹಾಕಲು ಶ್ರಮಿಸಿತು. ಹೊಸ ಆಲೋಚನಕ್ರಮಕ್ಕೆ ನಾಂದಿ ಹಾಡಿದ ನಾಯಕ ಬಸವಣ್ಣ ಆಗಿದ್ದರೂ ಅದು ಕೇವಲ 'ಬಸವ' ಕೇಂದ್ರಿತ ಆಗಿರಲಿಲ್ಲ. ಪ್ರಜಾಸತ್ತಾತ್ಮಕ ನೆಲೆಯಲ್ಲಿ ಆಲೋಚನೆ ಮಾಡಲು- ಚಿಂತನೆಗೆ ಹಚ್ಚುವ ಹಲವರು ಕ್ರಿಯಾಶೀಲರಾಗಿದ್ದರು. ಲಿಂಗ ನಿರಾಕರಣೆಯ 'ಅಲ್ಲಮ' ಕೇಂದ್ರಿತ ಆಲೋಚನೆ ಕ್ರಮ ಕೂಡ ತನ್ನದೇ ನೆಲೆಗಳನ್ನು ಈ ಪ್ರದೇಶದಲ್ಲಿ ಕಂಡುಕೊಂಡದ್ದಕ್ಕೆ ಕೊಡೇಕಲ್, ತಿಂಥಣಿ, ಸಾವಳಗಿ ಕ್ಷೇತ್ರಗಳೇ ಸಾಕ್ಷಿ ವಚನ ಚಳವಳಿಯ ಬಸವ-ಅಲ್ಲಮ- ಅಕ್ಕ ತಮ್ಮ ಪ್ರಖರ ಪ್ರಭಾವ ಬೀರಿರುವುದು ನಿಜವಾದರೂ ಮಾದಾರ ಚೆನ್ನಯ್ಯ, ಮಡಿವಾಳ ಮಾಚಯ್ಯ-ಅಂಬಿಗರ ಚೌಡಯ್ಯ ಅವರಂತಹ ವಚನಕಾರರ ಆಲೋಚನಾ ಕ್ರಮ ಕೂಡ ತನ್ನದೇ ಹೆಜ್ಜೆ ಜಾಡು ರೂಪಿಸಿತು.

ಭಾರತದಲ್ಲಿ ಮಧ್ಯಕಾಲೀನ ಚರಿತ್ರೆ ಆರಂಭವಾಗುವುದು 'ದಾಳಿ'ಯ ಮೂಲಕ ಆದರೆ, ದಖನ್ ಅದಕ್ಕೆ ಭಿನ್ನವಾಗಿತ್ತು. ಪ್ರವಾಧಿ ಮಹಮ್ಮದರು ಬದುಕಿದ್ದ ಕಾಲದಲ್ಲಿಯೇ (ಎಂಟನೇ ಶತಮಾನ) ಅವರ ಸಂದೇಶವು ಧರ್ಮ ಪ್ರಚಾರಕರ ಮೂಲಕ ಮಲಬಾರಿನ ಕರಾವಳಿಯನ್ನು ತಲುಪಿತ್ತು. ಈ ಅಂಶವನ್ನು ಐತಿಹಾಸಿಕ ದಾಖಲೆಗಳು ಧೃಢಪಡಿಸಿವೆ. ಭಾರತದಲ್ಲಿ ಇಸ್ಲಾಮ್ ಕಾಣಿಸಿಕೊಂಡದ್ದು ನೈತಿಕ, ಆಧ್ಯಾತ್ಮಿಕ ನೆಲೆಯಲ್ಲಿ ಅದೂ ಪಶ್ಚಿಮದ ಕರಾವಳಿಗುಂಟ. ಸಿಂದ್‌ನಲ್ಲಿ ಅರಬ್ಬರು ದಾಳಿ ನಡೆಸುವ ಬಹಳಷ್ಟು ಮುಂಚೆಯೇ ಇಸ್ಲಾಮ್ ಧರ್ಮಕ್ಕೆ ಸೇರಿದ ಸಾಹಸಿಗಳು, ಧರ್ಮ ಪ್ರಚಾರಕರು ದಕ್ಷಿಣ ಭಾರತದಲ್ಲಿ ಇಸ್ಲಾಮ್ ಧರ್ಮವು ನೆಲೆ ಕಲ್ಪಿಸಲು ಕಾರಣರಾಗಿದ್ದರು. ಪ್ರಾಚೀನ ಕಾಲದಿಂದಲೂ ಅರಬ್ಬ ವ್ಯಾಪಾರಿಗಳಿಗೆ ಪಶ್ಚಿಮದ ಕರಾವಳಿಯ ಜೊತೆಗಿನ ಒಡನಾಟ ಇತ್ತು. ವ್ಯಾಪಾರಿಗಳ ಜೊತೆಗೇ ಬಂದ ಧಾರ್ಮಿಕರು ಹೊಸಧರ್ಮದ ಬಗೆಗೆ ಅರಿವು ಮೂಡಿಸುವುದರ ಜೊತೆಗೆ ಪ್ರಚಾರ

ನಡೆಸಿದರು. ಸಮಾನತೆಯ ಮಾತುಗಳು, ನೈತಿಕತೆಯ ಪ್ರತಿಪಾದನೆ ಮತ್ತು ನಡವಳಿಕೆಗಳು, ಪ್ರಾರ್ಥನೆಯ ವಿಧಾನಗಳು ದಕ್ಷಿಣದ ಜನರು ಕುತೂಹಲದಿಂದ



ನೋಡುವುದಕ್ಕೆ ಕಾರಣವಾಗಿದ್ದವು. (ಶೇಕ್ ಮೊಹಮ್ಮದ್ ಇಕ್ಬಾಲ್-ದ ಮಿಷನ್ ಆಫ್ ಇಸ್ಲಾಮ್, (೧೯೭೭)ವಿವಿಧ ಜ್ಞಾನಶಾಖೆಗಳಲ್ಲಿ ಆಸಕ್ತಿ ಹೊಂದಿದ್ದ

ಒಂದೆಡೆ ಸಂಪತ್ತಿನ ಆಸೆಗೆ ಪ್ರಭುತ್ವದ ದಾಳಿ ನಡೆದಿತ್ತು. ಅಲಾವುದ್ದೀನ್ ಖಿಲ್ಜಿ ಅದರ ನೇತೃತ್ವ ವಹಿಸಿದ್ದ. ಅದೇ ಹೊತ್ತಿಗೆ ದೆಹಲಿಯ ಸ್ವಾಜಾ ನಿಜಾಮುದ್ದೀನ್ ಔಲಿಯಾ ಸೂಚನೆಯ ಮೇರೆಗೆ ಏಳುನೂರಕ್ಕೂ ಹೆಚ್ಚು ಜನ ಸೂಫಿ ಸಂತರು ದಕ್ಷಿಣದ ವಿವಿಧ ಕಡೆಗಳಲ್ಲಿ ಉಳಿದುಕೊಂಡಿದ್ದರು. ಜಾತೀಯತೆ ಮತ್ತು ಅಸಮಾನತೆಯ ಕಾರಣದಿಂದಾಗಿ ಸಾರುವ ಸೂಫಿಗಳು ಅಪ್ಯಾಯಮಾನವಾಗಿ ಕಾಣಿಸಿದ್ದರಲ್ಲಿ ಅಚ್ಚರಿಯಿಲ್ಲ. ಅದು ಇಸ್ಲಾಮ್ ಹರಡುವ ಪ್ರಕ್ರಿಯೆಯನ್ನು ತೀವ್ರಗೊಳಿಸಿತು.

ಗುಲ್ಬರ್ಗ ರಾಜಧಾನಿಯಾಗಿಸಿಕೊಂಡ ಬಹಮನಿ ಸಾಮ್ರಾಜದ ಸ್ಥಾಪನೆ ಹಾಗೂ ಬಹಮನಿ ದೊರೆಗಳ ನೀತಿ-ನಿರೂಪಣೆ ದಖನ್ ಸಹಬಾಳ್ವೆಯ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಹೋಗಲು ಕಾರಣವಾದವು. ಮೊದಲ ದೊರೆ ಅಲಾವುದ್ದೀನ್ ಹಸನಗಂಗೂ ಸ್ಥಾಪಿಸಿದ ಬಹಮನಿ ಸಾಮ್ರಾಜ್ಯದ ನಂತರದ ಸುಲ್ತಾನರು ಹಸನ್‌ನ ಪರಿಪಾಠ ಮುಂದುವರೆಸಿದರು ಇತಿಹಾಸಕಾರ ಫರಿಸ್ತಾನ ಪ್ರಕಾರ ಸಾಮ್ರಾಜ್ಯದ ಸಂಸ್ಥಾಪಕನು ರಾಜ್ಯ ಸ್ಥಾಪನೆಯ ಸಮಯದಲ್ಲಿ ಗಂಗೂ ಎಂಬ ಬ್ರಾಹ್ಮಣನ ಹೆಸರನ್ನು ತನ್ನ ಹೆಸರಿನ ಜೊತೆ ಸೇರಿಸಿಕೊಂಡನೆಂದು ಉಲ್ಲೇಖಿಸಲಾಗಿದೆ. ಫಿರೋಜ್ ಅಧಿಕಾರಕ್ಕೆ ಬರುತ್ತಿದ್ದಂತೆಯೇ ತನ್ನ ಆಡಳಿತದಲ್ಲಿ ಹೆಚ್ಚುತ್ತಿದ್ದ ಇರಾನಿಯರ ಪ್ರಭಾವ ಕಡಿಮೆ ಮಾಡುವ ಉದ್ದೇಶದಿಂದ ಸ್ಥಳೀಯ ಹಿಂದು ಪ್ರಮುಖರನ್ನು ಆಡಳಿತದ ವಿವಿಧ ಹಂತಗಳಲ್ಲಿ ನೇಮಿಸಿದ. ಬ್ರಾಹ್ಮಣರಿಗೆ ಗೌರವಾನ್ವಿತ ಸ್ಥಾನ ಹಾಗೂ ಜವಾಬ್ದಾರಿಯುತ ಹುದ್ದೆಗಳನ್ನು ನೀಡಿದ ಹಾಗೂ ಸಾಮ್ರಾಜ್ಯದ ಉನ್ನತ ಸ್ಥಾನಗಳನ್ನು ಹಿಂದುಗಳಿಗೆ ನೀಡುವ ಪರಿಪಾಠವನ್ನು ಮೊಗಲರು ಅಳವಡಿಸಿಕೊಳ್ಳಲು ಪ್ರಾರಂಭಿಸಿದರು.

ದಖನ್‌ನ ರಾಜಧಾನಿ ಇತಿಹಾಸದಲ್ಲಿ ಮೊದಲ ಬಾರಿಗೆ ಮುಸ್ಲಿಮ್ ಅರಸನೊಬ್ಬ ಹಿಂದು ರಾಜಕುಮಾರಿಯನ್ನು ಮದುವೆಯಾದ ಘಟನೆ ದಾಖಲಾಯಿತು. ಸುಲ್ತಾನ್‌ನು ವಿಜಯನಗರದಿಂದ ೨೦ ಲಿ.ಮೀ.ದೂರದಲ್ಲಿ ಬಿಡಾರ ಹೂಡಿದ್ದ ಹಳೆಯ ದ್ವೇಷ ಮರೆಯಲಾಯಿತು. ವಿಜಯನಗರದ ರಾಜಧಾನಿಯನ್ನು ಸಡಗರದಿಂದ ಸಿಂಗರಿಸಲಾಯಿತು. ಬಿಡಾರ ಹೂಡಿದ್ದ ಪ್ರದೇಶದಿಂದ ಅರಮನೆಯವರೆಗೆ ರಸ್ತೆಯ ಇಕ್ಕೆಲಗಳಲ್ಲಿ

ಹಿಂದು- ಮುಸ್ಲಿಮ್ ಸಮುದಾಯಕ್ಕೆ ಸೇರಿದ ಜನ ಕಾದು ನಿಂತಿದ್ದರು. ಕನ್ನೈಯನ್ನು ಕರೆತರಲು ಫಿರೋಜ್‌ನ ಸಹೋದರ ಖಾನ್ ಏ ಖಾನನ್ ಮತ್ತು ಪ್ರಧಾನಿ ಫಜಲುಲ್ಲಾ ಇಂಜುವನ್ನು ಕಳುಹಿಸಲಾಗಿತ್ತು. ವಿಜಯನಗರದಿಂದ ಕನ್ನೈಯು ಆಗಮಿಸುತ್ತಿದ್ದಂತೆಯೇ ಸ್ವತಃ ಫಿರೋಜ್‌ನೇ ಕುದುರೆಯ ಮೇಲೆ ಕುಳಿತು ಮಾವನಿಗೆ ಗೌರವ ಸಲ್ಲಿಸಲು ಹೊರಟ. ನಗರದ ಹೊರವಲಯದಲ್ಲಿಯೇ ಕಾದು ನಿಂತಿದ್ದ ರಾಯ ಫಿರೋಜ್‌ನಿಗೆ ಕೆಂಪು ಹಾಸಿನ ಸ್ವಾಗತ ಕೋರಿದ, ಅಮೂಲ್ಯ ಉಡುಗೊರೆಗಳನ್ನು ನೀಡುದ. ಇಬ್ಬರು ಸಾಮ್ರಾಟರು ಜೊತೆಯಾಗಿ ನಡೆದು ಬರುತ್ತಿರುವುದನ್ನು ನೋಡಿ ಜನತೆ ಪುಷ್ಪವೃಷ್ಟಿ ಮಾಡಿದರು ಹಿಂದು-ಮುಸ್ಲಿಮ್ ಮೈತ್ರಿಯ ಹೊಸ ಅಧ್ಯಾಯ ಆರಂಭ ಆಗಿರುವುದನ್ನು ನೋಡಿ ಜನ ಸಂಭ್ರಮಿಸಿದರು.



ಗಣಿತ, ರೇಖಾಗಣಿತ, ವಿಜ್ಞಾನ,ಸಾಹಿತ್ಯ, ಸೂಫಿ ಪರಂಪರೆ, ನ್ಯಾಯಶಾಸ್ತ್ರ ಸೇರಿದಂತೆ ವಿವಿಧ ಜ್ಞಾನಶಾಲೆಗಳಲ್ಲಿ ಆಸಕ್ತಿ ಹೊಂದಿದ್ದ ಫಿರೋಜ್ ಅವುಗಳಲ್ಲಿ ಪರಿಣಿತನೂ ಆಗಿದ್ದ. ಸ್ವತಃ ಕವಿಯಾಗಿದ್ದ ಫಿರೋಜ್ 'ಉರುಜಿ', 'ಫಿರೋಜಿ' ಎಂಬ ಕಾವ್ಯನಾಮಗಳನ್ನು ಇಟ್ಟುಕೊಂಡಿದ್ದ. ಫಿರೋಜ್‌ನಿಗೆ ಹೊಸ ಹೊಸ ಭಾಷೆ ಕಲಿಯು ವುದು ಎಂದರೆ ಆಸಕ್ತಿ ಸುಮಾರು ೫೦ಕ್ಕೂ ಹೆಚ್ಚು ಭಾಷೆಗಳನ್ನು ಅಡಬಲ್ಲವನಾಗಿದ್ದ ಫಿರೋಜ್ ಅದಕ್ಕಾಗಿ ಪ್ರತಿಯೊಂದು ಭಾಷೆ ಮಾತನಾಡುವ ರಾಣಿಯೊಬ್ಬಳನ್ನು ಕಟ್ಟಿಕೊಂಡಿದ್ದ, ಫಾರಸಿ, ಅರಬ್ಬಿ ಟರ್ಕಿಗಳಲ್ಲದೇ ಚೀನಿ, ಜಪಾನಿ, ಮರಾಠಿ, ಕನ್ನಡ, ತೆಲುಗು, ಗುಜರಾತಿ, ಬೆಂಗಾಲಿ ಸೇರಿದಂತೆ ಹಲವು ಭಾಷೆಗಳನ್ನಾಡುವ ರಾಣಿಯರು ಇದ್ದ ಅರಮನೆ ಅವನದಾಗಿತ್ತು. ಪ್ರತಿಯೊಬ್ಬ ರಾಣಿಯ ಜೊತೆಗೂ ಅವಳದೇ ಭಾಷೆಯಲ್ಲಿ ಮಾತನಾಡುವ ಪರಿಪಾಠ ಇಟ್ಟುಕೊಂಡಿದ್ದ. ಅದಕ್ಕಾಗಿ ಫಿರೋಜ್ ನಿರ್ಮಿಸಿದ ಅಪರೂಪದ ಮತ್ತು ವ್ಯವಸ್ಥಿತ ನಗರ ಭೀಮಾನದಿಯ ದಡದ ಮೇಲಿರುವ ಫಿರೋಜಾಬಾದ್, ಹಲವು ಭಾಷಿಕರು ಒಂದೆಡೆ ನೆಲೆಸಿದ ಫಿರೋಜಾಬಾದ್ ಕಾಸ್ಮೋ-ಕಲ್ಚರ್‌ನ ಪ್ರತೀಕದ ಹಾಗಿತ್ತು. ಫಿರೋಜಾಬಾದ್ ಭಾಷಾ ಕಲಿಗೆಯ ಪ್ರಯೋಗಶಾಲೆಯಾಗಿತ್ತು. ಆಧುಕಿನ ಭಾಷಾಕಲಿಕೆಗೆ ಫಿರೋಜ್ ನೀಡಿದ ಕೊಡುಗೆ ಅನನ್ಯ.

ಫಿರೋಜ್ ಹಾಕಿದ ಸೌಹಾರ್ದದ ನೆಲೆಯು ನಂತರ ಆದಿಲ್ ಷಾಹಿ ಅರಸರ ಪೈಕಿ ಇಬ್ರಾಹಿಂನ ಸರಸ್ವತಿ ಪ್ರಾರ್ಥನೆಯನ್ನು 'ಕಿತಾಬ್ ಎ ನವರಸ್' ಬರೆಯುವುದಕ್ಕೆ ಹಾಗೂ ಮೊಗಲ್ ದೊರೆ ಅಕ್ಬರ್‌ನ ಆಸ್ಥಾನದಲ್ಲಿ 'ದೀನ್ ಇಲಾಹಿ' ಎಂಬ ಹೊಸ ಧರ್ಮ ಸ್ಥಾಪನೆಗೆ ಅನುವು ಮಾಡಿಕೊಟ್ಟಿತು. ಇದು ದಖನ್ ಭಾರತಕ್ಕೆ ನೀಡಿದ ಅಮೂಲ್ಯ ಕೊಡುಗೆ, ನಂತರ ಗೋಲ್ಕುಂಡಾದ ಅರಸ ಖುಲಿ ಖುತಬ್ ಶಾಹನು ಸಮಸ್ತ ಭಾರತೀಯ ಸಂಸ್ಕೃತಿ, ಹಬ್ಬ ಹರಿ

ದಿನಗಳನ್ನು ವೇಷ ಭೂಷಣಗಳು ಇತ್ಯಾದಿಗಳ ಕುರಿತು ಶೃಂಗಾರ ಪೂರ್ಣವಾಗಿ ದಖನಿ ಭಾಷೆಯಲ್ಲಿ ಕಾವ್ಯ ರಚನೆ ಮಾಡಲು ಪ್ರೇರಕವಾಯಿತು.

ಆದರೆ ಸೂಫಿ ಪರಂಪರೆಯು ಈ ಕಾಲಘಟ್ಟದ ಅತ್ಯಂತ ಮಹತ್ವದ ಅಂಶ. ಉತ್ತರ ಭಾರತದಿಂದ ಬಂದ ಚಿಸ್ತಿ ಪರಂಪರೆಯ ಜೊತೆಗೆ ಇರಾನ್‌ನಿಂದ ನೇರವಾಗಿ ಬೀದರಿಗೆ ಬಂದ ನಿಯಾಮತ್ ಅಲ್ಲಾ ಸಂಪ್ರದಾಯ ಹಾಗೂ ಖಾದರಿಯಾ ಪರಂಪರೆಗಳು ವಿಶೇಷ ಉಲ್ಲೇಖಕ್ಕೆ ಪಾತ್ರವಾಗುತ್ತವೆ. ಹಿಂದೂ ಮತ್ತು ಮುಸ್ಲಿ ನಾಗರಿಕತೆಗಳ ಪರಸ್ಪರ ಮುಖಾಮುಖಿಯಾಗಿ, ಸಂಧಿಸಿ-ಬೆರೆತುಕೊಂಡ ರೀತಿ ಅನನ್ಯವಾದದು. ಎರಡು ವಿಭಿನ್ನ ಸಂಸ್ಕೃತಿಗಳು ಮತ್ತು ಧಾರ್ಮಿಕ ಕಾರಣಗಳಿಗಾಗಿ ವ್ಯಾಪಕ ಭಿನ್ನಾಭಿಪ್ರಾಯಗಳ ನಡುವೆಯೂ ಪರಸ್ಪರ ಪ್ರಭಾವ ಬೀರಿದವು ಎಂದು ಸರ್‌ಜಾನ್ ಮಾರ್ಷಲ್ ಅಭಿಪ್ರಾಯ ಪಡುತ್ತಾರೆ.

ಫಿರೋಜ್‌ನ ಪರಿಪಾಠವನ್ನು ಅವನ ಸಹೋದರ ದೊರೆ ಅಹಮ್ಮದ್ ಮುಂದುವರೆಸಿದ. ಸ್ಥಳೀಯ ಹಿಂದುಗಳ ಜೊತೆಗೆ ನೇರ ಒಡನಾಟ ಇಟ್ಟುಕೊಂಡಿದ್ದ. ಸಹೋದರ ಫಿರೋಜ್‌ನ ಜೊತೆಗೆ ಭಿನ್ನಾಭಿಪ್ರಾಯ-ಕದನ ಏರ್ಪಟ್ಟಾಗ ಅವನ ನೆರವಿಗೆ ಬಂದದ್ದು ಸೂಫಿ ಸಂತರಾದ ಹಜ್ರತ ಖಾಜಾ ಬಂದೇ ನವಾಜ ಗೇಸು ದರಾಜ್ ಮತ್ತು ಸ್ಥಳೀಯ ಹಿಂದು ಸಮುದಾಯ. ಹಿಂದೂ ಮತ್ತು ಮುಸ್ಲಿಂ ಸಮುದಾಯಗಳು ಜೊತೆಯಲ್ಲಿಯೇ ಬದುಕಲು ಆರಂಭಿಸಿ ತುಂಬ ದಿನಗಳಾಗಿದ್ದವು. ಆದರೆ, ಕೊಡುಕೊಳುವ ಸಂಬಂಧ ದಖನ್ ಪ್ರದೇಶ ಕಂಡಷ್ಟು



ವ್ಯಾಪಕ ಪ್ರಮಾಣದಲ್ಲಿ ಆಗಿರಲಿಲ್ಲ. ಅಹ್ಮದ್‌ನ ಆಸಕ್ತಿ, ಕಾಳಜಿಗಳ ಫಲವಾಗಿ ಎರಡು ಸಮುದಾಯಗಳು ಸ್ನೇಹ-ಸೌಹಾರ್ದದಿಂದ ಬದುಕ ತೊಡಗಿದವು.

ಆಳಂದ ತಾಲ್ಲೂಕಿನ ಮಾಡ್ಯಾಳದಲ್ಲಿರುವ ಅಲ್ಲಮಪ್ರಭು ಬೀದರ್ ಸಮೀಪದ ಅಷ್ಟೂರಿನಲ್ಲಿಯೂ ಇದ್ದಾನೆ, ಅಲ್ಲಿಯೇ ಇರುವ ಅಹ್ಮದ್ ಷಹಾನ ಸಮಾಧಿಗೆ ಹಿಂದು- ಮುಸ್ಲಿಂರ ಸಮಾನ ಗೌರವ ನೀಡುವುದು, ಫಾಸರಿಗಳು ವ್ಯಾಪಕವಾಗಿ ದಖನ್ ವಲಸೆ ಬಂದದ್ದರಿಂದ ಈ ಪ್ರದೇಶದಲ್ಲಿ ಶಿಯಾ ಮುಸ್ಲಿಂರು ಹೆಚ್ಚು ಸಂಖ್ಯೆಯಲ್ಲಿ ಕಾಣಿಸಿಕೊಂಡರು. ಅದರ ಫಲವಾಗಿ ಮೊಹರಂ, ಅಲಾವಿ ಪದ್ಯಗಳಿಗೆ ಆದ್ಯತೆ ದೊರೆಯಿತು. ಮುಸ್ಲಿಂರಿಲ್ಲದ ಊರುಗಳಲ್ಲಿಯೂ ಮೊಹರಂ ಆಚರಣೆ ಸಾಮಾನ್ಯವಾಯಿತು.

ಅರೆಬಿಕ್, ಮರಾಠಿ ಮತ್ತು ಸಂಸ್ಕೃತದಂತಹ ಭಾಷೆಯ ಜೊತೆ ಸೇರಿ ಭಾಷೆ ಉರ್ದು(ದಖನಿ) ಹುಟ್ಟುವುದಕ್ಕೆ ಕಾರಣವಾಯಿತು. ದಖನಿಯ ಮೊದಲ ಸಾಹಿತ್ಯ ಕೃತಿಗಳು ಈ ಅಂಶವನ್ನು ರುಜುವಾತು ಪಡಿಸುತ್ತವೆ. 'ಉರ್ದು'

ಪದದ ಅರ್ಥ ಸೈನಿಕರ ಶಿಬಿರ. ಟರ್ಕಿಗಳು, ಅರಬ್ಬರು, ಅಫಘಾನಿಗಳು, ಭಾರತೀಯರು ಸೇರಿ ಆರಂಬಿಸಿದ ಹೊಸ ಭಾಷೆ ಭಾರತೀಯ ಮತ್ತು ಮಧ್ಯಪ್ರಾಚ್ಯದ ಭಾಷೆಗಳ ಸಮ್ಮಿಲನದಿಂದ ಹುಟ್ಟಿದ ಉರ್ದು ಅಪ್ಪಟ ಅಂದರೆ ಪ್ರತಿಶತ ನೂರಕ್ಕೆ ನೂರು ಭಾರತೀಯ ಭಾಷೆ ಉರ್ದು ಬರೆಯುವವುಕ್ಕಾಗಿ ಅರಬ್ಬಿ-ಫಾರಸಿ ಲಿಪಿಯನ್ನೇ ಬಳಸಲಾಗುತ್ತದೆ. ಉರ್ದುವಿನ ಮೊದಲ ಕೃತಿ 'ಕದಂರಾವ್ ಪದಂರಾವ್ ಬಂದದ್ದು ಈ ನೆಲದಿಂದಲೇ ಹಾಗೇಯೇ ಉರ್ದುವಿನ ಮೊದಲ ಗದ್ಯ ಲೇಖಕ ಗೇಸು ದರಾಜ್ ಅವರು ಗುಲ್ಬರ್ಗದಲ್ಲಿ ನೆಲೆ ನಿಂತದ್ದು ಐತಿಹಾಸಿಕ-ಧಾರ್ಮಿಕ ಮಹತ್ವದ ಸಂಗತಿ. ತಾತ್ವಿಕತೆ ಹಾಗೂ ಸಾಹಿತ್ಯಗಳೆರೆಡರ ದೃಷ್ಟಿಯಿಂದಲೂ ಮಹತ್ವದ ಕೊಡುಗೆ ನೀಡಿದ ಸೂಫಿ ಸಂತ ಗೇಸು ದರಾಜ್ ಅವರಿಗೆ ಎರಡೂ ಸಮುದಾಯದ ಜನ ಶ್ರದ್ಧೆಯಿಂದ ನಡೆದುಕೊಳ್ಳುತ್ತಾರೆ. ಅದು ಇಂದಿಗೂ ಮುಂದುವರೆದಿದೆ.

ಗುಲ್ಬರ್ಗಾ ರಾಜಧಾನಿಯಾಗಿದ್ದ ದಖನಿ ಮಾತ್ರವಲ್ಲದೆ ಉತ್ತರ ಭಾರತ ಹಾಗೂ ಇರಾಕ ಇರಾನವರೆಗೆ ತಮ್ಮ ಸೂಫಿ ಸಿದ್ಧಾಂತ ಹಾಗೂ ಯೋಚನಾ ಕ್ರಮಕ್ಕೆ ಹೆಸರು ವಾಸಿಯಾಗಿದ್ದವರು ಹಜರತ ಬಂದೇ ನವಾಜ ಗೇಸು ದರಾಜ, ಅರಬಿಕ್ ಫಾರ್ಸಿಗಳಲ್ಲಿ ಪರಿಣಿತರಾಗಿದ್ದ ಗೇಸುದರಾಜರು ತಮ್ಮ ೮೦ನೇಯ ವಯಸ್ಸಿನಲ್ಲಿ ಕಲಬುರಗಿಗೆ ಆಗಮಿಸಿ ದಖನಿ ಭಾಷೆಯನ್ನು ಕಲಿತು ಆ ಜನಪದೀಯ ಭಾಷೆಯಲ್ಲಿ ಸೂಫಿ ಗುಹ್ಯತೆಯ ಮೇರುಆಜುಲ್ ಆಶೀಖೀನ, ದರೆ ಇಸ್ರಾರ್, ವಜ್ರದ ನಾಮಾ, ವುಜುದಿಲ್ ಆಶೀಖೀನ್, ಶಿಕಾರ್ ನಾಮಾ ಮುಂತಾದ ಕಿರು ಗ್ರಂಥಗಳನ್ನು ಚಿಕ್ಕನಾಮಾ, ದ ಮುಖಾಮ ರಾಮ್‌ಕಲಿ ಎಂಬ ಬಿಡಿ ಜನಪದ ಗೀತೆಗಳನ್ನು ರಚಿಸಿದ್ದು, ವಿಶೇಷವಾಗಿದೆ. ದೈವೀ ಪ್ರೇಮದ ಸಾಕ್ಷಾತ್ಕಾರಕ್ಕಾಗಿ ಹೇಗೆ ಲೌಕಿಕ ಪ್ರೇಮವು ಅನಿವಾರ್ಯವಾಗಿದೆ ಎಂಬುದನ್ನು ಸಾಬೀತುಪಡಿಸುತ್ತದೆ. ತಮ್ಮ ವೃತ್ತಾಂತ ಕೃತಿಯಲ್ಲಿ ಪ್ರೇಮದ ಅಸ್ತಿತ್ವದ ಬಗ್ಗೆ ಹೀಗೆ ಬರೆಯುತ್ತಾರೆ.

"ಜಹಾಂ ಇಷ್ಕ ಅಸ್ತ್ ದೀಗ ಜಿರ್‌ಖಾ ಸಾಜಿ,

ಹಮಾ ಬಾಜಿಸ್ತ್ ಅಲಾ ಇಷ್ಕ ಬಾಜಿ"

ಅರ್ಥಾತ್ ಪ್ರಪಂಚವು ಪ್ರೇಮ ಲೋಕವಾಗಿದೆ, ಉಳಿದೆಲ್ಲಾ ಮಾಯೆ, ಎಲ್ಲವು ಆಟ-ಆಟಿಕೆಗಳಾಗಿವೆ, ಕೇವಲ ಪ್ರೇಮ ಕೆಲಸದ ವಸ್ತುವಾಗಿದೆ.

ಕಲಬುರಗಿ ಎಂದಾಕ್ಷಣ ಹಜ್ರತ್ ಬಂದೇ ನವಾಜರ ಜೊತೆ ಬರುವ ಹೆಸರೆ ಶ್ರೀ ಶರಣ ಬಸವೇಶ್ವರರದ್ದು, ಕರುಣಾಮಯಿಗಳು, ಮಹಾ ದಾಸೋಹಿಗಳಾಗಿ ಲೋಕ ಕಲ್ಯಾಣ ಕಾರ್ಯಗಳಲ್ಲಿ ತೊಡಗಿ ಶಿವಶರಣರ ಮಾರ್ಗದಲ್ಲಿ ಮುನ್ನೆಡೆದವರು ಶ್ರೀ ಶರಣಬಸವೇಶ್ವರರರು.

ಆರಂಭದಲ್ಲಿ ಅಲ್ಲಮಪ್ರಭು ಪರಂಪರೆಯ ಬಗ್ಗೆ ಪ್ರಸ್ತಾಪಿಸಿದೆ. ಅಲ್ಲಮನಿಂದ ಪ್ರೇರಣ ಪಡೆದಿದ್ದ ಅಮರಕಲ್ಯಾಣ ಸ್ಥಾಪಿಸುವ ಮಹದಾಸೆ ಹೊಂದಿದ್ದ ಸಮೂಹದ ನೇತೃತ್ವ ದಿಗ್ಗಿಯ ಸಂಗಮನಾಥನದಾಗಿತ್ತು. ಅವನ ಶಿಷ್ಯ ಕೊಡೇಕಲ್ ಬಸವಣ್ಣ ಹಾಗೂ ತಿಂಥಿಣಿ ಮೋನಪ್ಪಯ್ಯ ಅಲ್ಲಮ ಪರಂಪರೆಯ ಮುಂದುವರಿಕೆಯಂತಿರುವುದು ಅವರ ವಚನಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ.

"ಹಿಂದು ತುರುಕರಿಗೆ ಚಂದ್ರಮನೊಬ್ಬನೆ

ನಿಂದಿಸಿದವನೆ ಅಧಮನು ಕಾಣದ

ಅಂಧಕರಿಗೇಕೆ ದರ್ಪಣವು ಸಕಲವು

ಒಂದೇ ಎಂದ ಕಂಡ ಗುರು ಬೇರೆ "

ಎಂದು ಹೇಳುವ ಮೋನಪ್ಪಯ್ಯ "ಆಕಾಸ ಭೂಕಾಂತೆ ಏಕವಾಗಿರಲಿಕ್ಕೆ ಅಲ್ಲಮನೆಂಬ ಸೂಕ್ಷ್ಮಲಿಂಗ ಎನಗುಂಟು' ಎಂದು ತನ್ನ ನೆಲೆಯನ್ನು ಖಚಿತ ಪಡಿಸುತ್ತಾನೆ.

*ತಿಂಥಿಣಿಯ ಮೌನೇಶ್ವರದೇವಸ್ಥಾನವು ಏಕಕಾಲಕ್ಕೆ ಹಿಂದೂ-ಮುಸ್ಲಿಂರಿಗೆ ಪವಿತ್ರ ಸ್ಥಳಗಳಾಗಿವೆ. ಇವರಿಗೆ ಮೈನುದ್ದೀನ ಎಂಬ ಮತ್ತೊಂದು ಹೆಸರು ಇತ್ತೆಂದು ಹೇಳಲಾಗುತ್ತದೆ. ಪೂಜೆ ಮತ್ತು ಊಟದ ಸಮಯದಲ್ಲಿ ಹೇಳಲಾಗುವ ಘೋಷಣೆ ಹೀಗಿದೆ:

ಓಂ ಏಕ್‌ಲಾಕ್ ಐಂಸಿ ಹಜಾರ ಪಾಂಚೋಪೀ

ಪೈಗಂಬರ ಮೌನದ್ದೀನ್

ಜಿತ ಪೈಗಂಬರ ಮೌನದ್ದೀನ್

ಕಾಶಿಪತಿ ಗಂಗಾಧರ ಹರಹರ ಮಹಾದೇವ

ಅದೇ ರೀತಿ ಭಾವೈಕ್ಯತೆಗಾಗಿ ಧಾರ್ಮಿಕವಾಗಿ ಸಾಹಿತ್ಯವಾಗಿ, ಹಾಗೂ ಸಾಂಸ್ಕೃತಿಕವಾಗಿ, ಅಮೂಲ್ಯ ಕೊಡುಗೆ ನೀಡಿದವ ಕೊಡೆಕಲ್ ಬಸವಣ್ಣ ಚಾರಿತ್ರ್ಯ ಬರೆದಿರುವ ವೀರ ಸಂಗಯ್ಯನು "ಹಿಂದು ರಕ್ಷೆಯನ್ನು ಮೆಟ್ಟುತ

ಮುಂದೆ ಕಂಸಿಯ ನಡೆಸುತ್ತಾ”  ಕೊಡೆಕಲ್ ಬಸವಣ್ಣ ಹೋಗುತ್ತಿದ್ದುದನ್ನು ವರ್ಣಿಸುತ್ತಾನೆ. “ಹಿಂದೂ ರಕ್ಷೆ”  ಮೆಟ್ಟುವ ಆಧಾರವಾಗುವ ಕೆಲಸ ಮಾಡಿದರೆ “ಮುಸಲ್ಮಾನ ಕಂಸಿ” ಯು ಚಲಿಸುವ ಕೆಲಸ ಮಾಡಿ ಹಿಂದು ಮುಸ್ಲಿಂ ಸಾಮರಸ್ಯಕ್ಕೆ ನಾಂದಿ ಹಾಡುತ್ತಾನೆ. ಹಾಗೆಯೇ

ಇವರುಗೊಂಕಾರ ಅವರಗಲೀಫ

ಇವರ ಪ್ರಮಾಣ ಅವರ ಕರ್ಮವು

ಇವರಗಲ್ಲವ ಅವರಿಗಲ್ಲಾ ನಾಮಗಳು

ಇವರ ಬಸವನು ಅವರ ಮಹ್ಮದ

ಇವರ ವೇದವು ಅವರ ಮುಸ್ತಾಫವು

ಎಂದು ಸಾರಿ ಹೇಳುತ್ತಾನೆ.



೧೯ನೇ ಶತಮಾನವನ್ನು ಕನ್ನಡ ಸಾಹಿತ್ಯ-ಸಾಂಸ್ಕೃತಿಕ ಲೋಕ 'ಕತ್ತಲ ಕಾಲ' ಎಂದು ಗ್ರಹಿಸಿ ತಪ್ಪು ಹೆಜ್ಜೆಜಾಡಿನಲ್ಲಿ ನಡೆಯಿತು. ಈ ಕಜಾಳಘಟ್ಟದಲ್ಲಿ ಹೆಚ್ಚು ಚಾಲ್ತಿಯಲ್ಲದ್ದ ತತ್ವಪದಗಳನ್ನು ಸಾಹಿತ್ಯ ಮತ್ತು ಸಹಬಾಳ್ವೆಯ ಸಂಕೇತ ಎಂದು ನೋಡಲು ಆರಂಭಿಸಿದ್ದು ತೀರಾ ಇತ್ತೀಚಿಗೆ, ಜಾನಪದ ಸಾಹಿತ್ಯವೂ ಇಂತಹದೇ ಸ್ಥಿತಿ ಎದುರಿಸಿತ್ತಾದರೂ ನವೋದಯ ಲೇಖಕರು-ಕವಿಗಳ ಪರಿಶ್ರಮ-ಕುತೂಹಲ-ಆಸಕ್ತಿಯ ಪರಿಣಾಮವಾಗಿ ನೆಲೆ ಕಂಡುಕೊಂಡಿತ್ತು ಆದರೆ, ತತ್ವಗಳಿಗೆ ಆ ಭಾಗ್ಯ ದೊರಕುವುದಕ್ಕೆ ಬಹಳ ಕಾಲ ಕಾಯಬೇಕಾಯಿತು. ಇಪ್ಪತ್ತೊಂದನೆಯ ಶತಮಾನದ ಎರಡನೆಯ ದಶಕದಲ್ಲಿ ತತ್ವ ಪದಗಳು ಚರ್ಚೆಗೆ ಚಾಲ್ತಿಗೆ ಬಂದದ್ದು ಆಕಸ್ಮಿಕವೇನಲ್ಲ. ತತ್ವಪದಗಳ ತಾತ್ವಿಕತೆಯು ದಖನ್ ಭಾರತಕ್ಕೆ ನೀಡಿದ ಸಹಬಾಳ್ವೆಯ ಪಾಠದ ಮುಂದುವರಿಕೆಯೇ ಆಗಿದೆ.

ತತ್ವಪದಕಾರರಲ್ಲಿ ಪ್ರಮುಖನಾಗಿರುವ

ಕಡಕೋಳ ಮಡಿವಾಳಪ್ಪ ತನ್ನ ಪದದಲ್ಲಿ

ಹಲವು ನಾಮರಿಗೆ ಹಲವು ರೂಪರಿಗೆ

ಹಲವು ಸ್ತ್ರೀಯರಿಗೆ ಶರಣಾರ್ಥಿ

ಹಲವು ಜಾಣರಿಗೆ ಹಲವು ಮುಗ್ಧರಿಗೆ

ಹಲವು ಛಲರಿಗೆ ಶರಣಾರ್ಥಿ

ಎಂದಿದ್ದಾನೆ. ನಾಮ, ರೂಪ, ಕ್ರಿಯೆಗಳು, ಧರ್ಮಗಳು, ಹೆಸರು ಸ್ವರೂಪ ಮತ್ತು ಆಚರಣೆಗಳನ್ನು ಸೂಚಿಸುತ್ತವೆ. ವಿವಿಧ ಧರ್ಮಗಳ ಪ್ರೀತಿಸಬೇಕು. ಹಾಗೆಯೇ ಜಾಣ ಮುಗ್ಧ, ಛಲ ಮೊದಲಾದ ಸ್ವಭಾವಗಳ ಗೌರವಿಸಬೇಕು ಎಂಬ ಅಪೇಕ್ಷೆ ಕವಿಯದು. ಧಾರ್ಮಿಕ ವೈವಿಧ್ಯತೆ ಮತ್ತು ವೈಯಕ್ತಿಕ ಸ್ವಭಾವಗಳ ವೈವಿಧ್ಯತೆಗಳನ್ನೂ ಗೌರವಿಸಿದರೆ ಸೌಹಾರ್ದಕ್ಕೆ ಭಂಗ ಬರದು ಎಂಬ ನಿಲುವು ವ್ಯಕ್ತಪಡಿಸಿದ್ದಾನೆ. ಮಡಿವಾಳಪ್ಪ ಹಾಗೂ ಅವನ ಸಮಕಾಲೀನರ ತತ್ವಪದಗಳು ರೂಢಿಗತ ನಿಲುವನ್ನು ಪ್ರಶ್ನಿಸುವುದರ ಜೊತೆಗೆ ಸಹಬಾಳ್ವೆಯ ಪಾಠವನ್ನೂ ಹೇಳುತ್ತವೆ.

ವಯಸ್ಸಿನಲ್ಲಿ ಮಡಿವಾಳಪ್ಪನಿಗಿಂತ ಹಿರಿಯ ಆದರೂ ಶಿಷ್ಯನಾಗಿದ್ದ ಚೆನ್ನೂರು ಜಲಾಲ ಸಾಬ್ ಕನ್ನಡದ ಮೊದಲ ಮುಸ್ಲಿಂ ತತ್ವಪದಕಾರ ಎಂದು ಚೆನ್ನೂರು ಜಲಾಲ ಸಾಹೇಬ ಅವರನ್ನು ಗುರುತಿಸಲಾಗುತ್ತದೆ. ಚೆನ್ನೂರು ಜಲಾಲ್ ಸಾಬ್ (೧೮೩೩- ೧೯೧೯) ಅವರ ತತ್ವಪದಗಳಲ್ಲಿ ಉರ್ದು, ಕನ್ನಡ ಭಾಷೆಗಳು ಒಂದೆಡೆ ಕೂಡುತ್ತವೆ. ಅಂತರ್ ಸಂಬಂಧಗಳ ನೆಲೆ ಪ್ರಧಾನವಾಗಿದೆ. 'ಜಂಗಮನಾದ ಮೇಲೆ ಮನಲಿಂಗ ಮಾಡಿಕೊಂಡಿರಬೇಕು' ಎಂಬ ನಿಲುಬು ಜಲಾಲ್ ಅವರದು.

ಸಬ್ ಕಹತೇ ಈಶ್ವರ ಅಲ್ಲಾ / ಇದರ ಭೇದ ಯಾರಿಗು ತಿಳಿಯಲಿಲ್ಲ/

ನಿರಾಕಾರಸೇ ಆಕಾರ ಹುವೇ ? ವೇದಶಾಸ್ತ್ರಕ್ಕೆ ನಿಲುಕಲಿಲ್ಲ/

ಹಿಂದೂ ಮುಸ್ಲಿಮಾನ ಶಸ್ತ್ರ ಪಡತೆ ಹೈ ? ಗುರುಮನ ಕೀಲ ಸಿಗಲಿಲ್ಲ/

ಲಾಯಕೆ ಗುರುಕೋ ಸಬ್ ಧೂಂಡಲಾಕೋ/ ಏನು ಬೇಡಿದ್ದು ಕೊಡಬೇಕಲ್ಲ

ತನುಮನ ಧನಲೋಭ ಛೋಡಕರ್ / ಆಗಬೇಕು ಗುರುವಿನ ಚೇಲಾ/

ಹಮ್ ಕಹತೆ ತುಮ್ ಕಹತೆ / ಮಾಡಬ್ಯಾಡರೀ ಮ್ಯಾಲಿನ ಶೀಲ

ಗುರು ಮಡಿವಾಳನ ಹೋಕರ್ / ತೊಳೆಯಬೇಕರಿ ಒಳಗಿನ ಮೈಲಾ

ಎಂಬ ಜಲಾಲ್ ಸಾಬ್ ಅವರ ಹಾಡಿನಲ್ಲಿ ಹಾಗೂ ಅಲ್ಲಾನ ಜಾತ್ರೆ ಎಂಬ ಕಡಕೋಳ ಮಡಿವಾಳಪ್ಪನ ಹಾಡಿನಲ್ಲಿ ಮತೀಯ ಸಹಿಷ್ಣುತೆಯ ಮಾದರಿಗಳಿವೆ. ಇದೇ ರೀತಿ ಮೇಟ್ನಳ್ಳಿ ಹಸನ್ ಸಾಬ, ಬೇನೂರ ಕಾಕಾಪೀರ್, ಸಾವಳಗಿ ಮೊಹ್ಮದ, ಮಹಾಗಾಂವ ಮೀರಾಸಾಬ ತಮ್ಮ ತಮ್ಮ ತತ್ವಪದಗಳಿಂದ ಭಾವೈಕ್ಯತೆಗೆ ವಿಶಿಷ್ಠ ಕೊಡುಗೆ ನೀಡಿದ್ದಾರೆ.

ಕಲ್ಬುರ್ಗಿ- ಗುಲ್ಬರ್ಗ ರೂಪಿಸಿದ -ಕಟ್ಟಿದ-ಬೆಳೆಸಿದ ವಿವಿಧ ರೂಪಗಳಲ್ಲಿ ದಾಖಲಿಸಿದ ಸಹಬಾಳ್ವೆ-ಸಹಿಷ್ಣುತೆಯ ಪಾಠ ನಿನ್ನೆಗೆ ಮಾತ್ರ ಸೀಮಿತವಾಗಿಲ್ಲ. ಸ್ವಾತಂತ್ರ್ಯೋತ್ತರ ಭಾರತದಲ್ಲಿಯೂ ಮುಂದುವರೆದಿದೆ.

ಏಕ ಕಾಲಕ್ಕೆ ಉರ್ದು-ಕನ್ನಡ ಭಾಷೆಗಳಲ್ಲಿ ಸಾಹಿತ್ಯ ಕೃಷಿ ಮಾಡಿದ ರೇವಣಸಿದ್ದಯ್ಯ ರುದ್ರಸ್ವಾಮಿ ಮಠ, ಡಾ: ಮುದ್ದಣ್ಣ "ಮಂಜರ್" ರವರ ಕೊಡುಗೆಗಳನ್ನು ಇಲ್ಲಿ ಸ್ಮರಿಸಲೇ ಬೇಕಾಗುತ್ತದೆ.

ಕಲಬುರಗಿಯ ಭಾಷೆ ಉರ್ದು-ಮರಾಠಿ ಮಿಶ್ರಿತ ಕನ್ನಡ ಹಾಗೂ ಉರ್ದುವಿನ ತಾಣವೂ ಹೌದು, ಇತ್ತೀಚೆಗೆ ಉರ್ದು ಭಾಷೆಯ ಕಾವ್ಯ ಪ್ರಕಾರವಾಗಿರುವ ಘಜಲ್‌ನ್ನು ಕರ್ನಾಟಕದಲ್ಲಿ ಕವಿಗಳು ಕನ್ನಡದಲ್ಲಿ ವಿನೂತನ ಪ್ರಯೋಗಗಳನ್ನು ನಡೆಸುತ್ತಿದ್ದು, ಅದೂ ಸಹ ಭಾಷಾ ಸಾಮರಸ್ಯಕ್ಕೆ ಕಾರಣವಾಗಿದೆ.

ಇಲ್ಲಿಯ ಹಲವು ಕಟ್ಟಡಗಳ ವಸ್ತು ಶಿಲ್ಪವು ಹಿಂದು-ಮುಸ್ಲಿಂ ವಾಸ್ತು ಶಿಲ್ಪದ ಭಾವೈಕ್ಯ ಮಿಶ್ರಣವಾಗಿವೆ. ಕೊಡೆಕಲ್ ಬಸವಣ್ಣ, ಹಾಗೂ ತಿಂಥಣಿಯ ಮೌನೇಶ್ವರ ದೇವಸ್ಥಾನಗಳು ಮುಸ್ಲಿಂ ದರ್ಗಾಗಳಂತಿವೆ. ಡಾ. ಅರುಣಿ ಅವರ ಪ್ರಕಾರ ಕಲಬುರಗಿಯ ಹಪ್ತ ಗುಂಬಜನ ದ್ವಾರಗಳು, ಚಜ್ಜಾಗಳು ಹಿಂದು ವಾಸ್ತು ಶಿಲ್ಪವು ಇಸ್ಲಾಮಿನ ಗುಂಬಜ್ ಗಳೊಂದಿಗೆ ಇಂಡೋ-ಇಸ್ಲಾಮಿಕ ವಾಸ್ತು ಶಿಲ್ಪವೆನಿಸುತ್ತದೆ. ದಖನಿ ಚಿತ್ರ ಕಲೆಯಲ್ಲಿ ಕ್ಯಾಲಿಗ್ರಾಫಿ ಜೊತೆಗೆ ಸಸ್ಯಗಳ ಕಲಾತ್ಮ ಚಿತ್ರಣವು ಮತೀಯ ಸಾಮರಸ್ಯಕ್ಕೆ ಸಾಕ್ಷಿಯಾಗಿದೆ.

ಇಲ್ಲಿಯ ಆಹಾರ ಪದ್ಧತಿಯು ಸಹ ಭಿನ್ನ ಸಂಸ್ಕೃತಿಗಳ ಮಿಲನವಾಗಿದೆ. ಹಲವು ಸಂತರ ಉತ್ಸವ, ಉರುಸ್‌ಗಳಲ್ಲಿ ಮಾಡುವ ಗೋಧಿಯ ಮಾಲಿದಾ ಪರ್ಶಿಯನ್ ಆಗಿದ್ದು, ಇಲ್ಲಿಯ ಜಾತ್ರೆ ಉರುಸ್‌ಗಳಲ್ಲಿ ಸಂತರಿಗೆ ನೈವೇದ್ಯವಾಗಿ ಅರ್ಪಿಸಲಾಗುತ್ತದೆ. ಮೋಹರಂನ ಚೋಂ ಸಹ ಮತ್ತೊಂದು ಉದಾಹರಣೆಯಾಗಿದೆ.

ಇಂತಹ ಭಾವೈಕ್ಯತೆಯು ಸತತವಾಗಿ ಮುಂದುವರೆಯುತ್ತಿದ್ದು, ಅದು ಬೆಳೆಯುತ್ತದೆ-ಬದುಕುತ್ತದೆ. ಅದೊಂದೇ ನಮ್ಮ ಮುಂದಿರುವ ಅನಿವಾರ್ಯ ಆಯ್ಕೆ.

# ಕನ್ನಡ ನಾಡು-ನುಡಿ ಮತ್ತು ಯುವ ಕರ್ನಾಟಕ

**ಯುವಕರ್ನಾಟಕ - ಒಂದು ಅವಲೋಕನ**

**- ಶೋಭಾ ಎಚ್.ಜಿ.**

ಬಾರಿಸು ಡಿಂಡಿಮವ...ಓ ಕರ್ನಾಟಕ ಹೃದಯ ಶಿವ, ಸತ್ತಂತಿಹರನು ಬಡಿದೆಚ್ಚರಿಸು, ಕಚ್ಚಾಡುವವರನು ಕೂಡಿಸಿ ಒಲಿಸು, ಹೊಟ್ಟೆಯ ಕಿಚ್ಚಿಗೆ ಕಣ್ಣೀರ ಸುರಿಸಿ, ಎದ್ದೇಳಿ ಯುವಜನತೆ ಡಿಂಡಿಮವ... ಕುವೆಂಪುರವರ ಈ ನುಡಿಯೊಂದಿಗೆ ನನ್ನ ಇಂದಿನ ಗೋಷ್ಠಿಯನ್ನು ಆರಂಭಿಸುತ್ತಿದ್ದೇನೆ.

ಅವಲೋಕನ ಇದೊಂದು ಬೃಹತ್ ಕೆಲಸ, ಯುವಕರ್ನಾಟಕ ಹೇಗಿತ್ತು? ಹೇಗಿದೆ? ಹೇಗಾಗಬೇಕು? ಅನ್ನುವಂತಹ ಚಿಂತನೆ ಇಲ್ಲಿ ನಡೆಯಬೇಕಿದೆ. ಯುವಕ್ಷೇತ್ರ ವ್ಯಾಪಕವಾದದ್ದು, ಯುವಕರ್ನಾಟಕ ಅವಲೋಕನ ತಕ್ಷಣ ನೆನಪಾದದ್ದು ಅಖಂಡ ಕರ್ನಾಟಕ. ಯಾವುದೇ ಗೊಂದಲವಿಲ್ಲದೇ ಆಗ ಬದುಕುತ್ತಿದ್ದ, ಸಮಾಜ ರಾಷ್ಟ್ರಕ್ಕಾಗಿ ದುಡಿಯುತ್ತಿದ್ದ ನಮ್ಮ ಯುವಜನತೆ ಎಲ್ಲಿ? ಇಂದು ಆಧುನಿಕತೆಯ ಭರಾಟೆಯಲ್ಲಿ ಅನೇಕ ಸವಾಲುಗಳ ಮಧ್ಯೆ ನಾನೇನು ಮಾಡಲಿ ಎನ್ನುವ ತುಡಿತದೊಂದಿಗೆ, ಗೊಂದಲಗಳಲ್ಲಿ ಮುಳುಗಿರುವ ಯುವಜನತೆ ಎಲ್ಲಿ?

ಇಂದಿನ ಯುವಜನಾಂಗ ನಾಡಿನ ಬೆನ್ನೆಲುಬಾಗಿದ್ದು ನಾಡಿನ ರಕ್ಷಣೆ ಮತ್ತು ಪ್ರಗತಿಗಾಗಿ ಮುಂಚೂಣಿಯಲ್ಲಿರಬೇಕು. ಆಗ ಮಾತ್ರ ಸುಭದ್ರ ಮತ್ತು ಸುರಕ್ಷಿತ ಸಮೃದ್ಧ ನಾಡನ್ನು ಕಟ್ಟಲು ಸಾಧ್ಯ ಒಂದು ದೇಶದ ಉತ್ಸಾಹ, ಶಕ್ತಿ ಮತ್ತು ಆಕಾಂಕ್ಷೆಗಳ ಪ್ರತೀಕವೇ ಯುವಜನಾಂಗ, ನಮ್ಮ ನಾಡು ಯುವ ಪೀಳಿಗೆಯ ಮೇಲೆ ಭರವಸೆ ಹಾಗೂ ನಿರೀಕ್ಷೆಯನ್ನಿಟ್ಟಿದೆ ಎಂಬುದನ್ನು ನಾವು ತಿಳಿಯಬೇಕಾಗಿದೆ. ಸ್ವಾತಂತ್ರ್ಯನಂತರ ದೇಶ ಕಟ್ಟಲು ಭರವಸೆ ಹಾಗೂ ನಿರೀಕ್ಷೆಯನ್ನಿಟ್ಟಿದೆ ಎಂಬುದನ್ನು ನಾವು ತಿಳಿಯಬೇಕಾಗಿದೆ. ಸ್ವಾತಂತ್ರ್ಯನಂತರ ದೇಶ ಕಟ್ಟಲು ಅಗತ್ಯವಾಗಿದ್ದ ನಮ್ಮ ಯುವಶಕ್ತಿಯ ಸದ್ಬಳಕೆಯನ್ನು ಮಾಡುವ ಬಗ್ಗೆ ಯಾರೂ ಚಿಂತಿಸಲೇ ಇಲ್ಲ. ೨೧ನೇ ಶತಮಾನ ನಮ್ಮದಾಗಬೇಕು. ಇದಕ್ಕಾಗಿ ನಮ್ಮ ಯುವಶಕ್ತಿಯನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು. ನಮ್ಮ ಕರ್ನಾಟಕವು ಈ ಯತ್ನದಲ್ಲಿ ದೇಶಕ್ಕೆ ಮಾದರಿಯಾಗಬೇಕು.

ನೀರು ಸೇದಿ ಸೇದಿ

ನೆಲವ ಅಗೆದು, ಅಗೆದು

ಎಪ್ಪತ್ತಾದರೂ ಇಪ್ಪತ್ತರಂತೆ ಕಾಣುತ್ತಿದ್ದರು ಅಂದಿನವರು!

ಬೀಡಿ, ಸಿಗರೇಟ್ ಸೇದಿ ಸೇದಿ

ಗುಟ್ಕಾ, ಪಾನ್ ಪರಾಗ್ ಅಗಿದು, ಅಗಿದು

ಇಪ್ಪತ್ತರಲ್ಲೇ ಎಪ್ಪತ್ತರಂತೆ ಕಾಣುತ್ತಾರೆ ಇಂದಿನವರು!

ಯುವಜನಾಂಗ ನಾಡಿನ ಭವಿಷ್ಯತ್ತಿನ ಬೆನ್ನೆಲುಬು ಆದರೆ ಇಂದಿನ ಯುವ ಸಮುದಾಯ ಎಲ್ಲಿ ದಾರಿ ತಪ್ಪುತ್ತಿದೆ ಎಂಬ ಪ್ರಶ್ನೆಗೆ ನಿಖರವಾಗಿ ಉತ್ತರ ಸಿಕ್ಕಿಬಿಡುತ್ತದೆ. ಇಸ್ಪೀಟ್ ಗೊತ್ತಿಲ್ಲ, ನೀರು ಕುಡಿದದ್ದು ಬಿಟ್ಟರೆ ಬೇರೇನನ್ನೂ ಕುಡಿದಿಲ್ಲ. ಹುಡುಗಿಯರೆಂದರೆ ಅಲರ್ಜಿ, ಲಾಟರಿಯಿಂದ ಬಲುದೂರ, ಸಿಗರೇಟ್ ಹೊಗೆ ಕಂಡರೆ ಮಾರುದ್ದ, ಗಾಂಜಾ, ಡ್ರಗ್ಸ್ ಎಂದರೇನು? ಎನ್ನುವ ಯುವಕ ಎಂದರೆ ತನ್ನ ಸಹಪಾಠಿಗಳ ದೃಷ್ಟಿಯಲ್ಲಿ ಕೆಲಸಕ್ಕೆ ಬಾರದವ, ಅಪ್ರಯೋಜಕ. ಇದು ನಮ್ಮ ಯುವಕರ್ನಾಟಕ. ಬೆರಳೆಣಿಕೆಯಷ್ಟು ಯುವ ಗುಂಪುಗಳು... ಕುಟುಂಬ, ರಾಷ್ಟ್ರ, ನಾಡು ನುಡಿ ಉಳಿಸುವ ನಿಟ್ಟಿನಲ್ಲಿ ತಮ್ಮನ್ನು ಪೂರ್ಣಾವಧಿಯಲ್ಲಿಯೇ ತೊಡಗಿಸಿಕೊಂಡು ಕೆಲಸ ಮಾಡುತ್ತಿರುವುದು ಶ್ಲಾಘನೀಯ, ಹಾಗೆ ಮೇಲೆ ಹೇಳಿದ ದಾರಿ ಬಿಟ್ಟು ನಡೆಯುತ್ತಿರುವವರನ್ನು ಸಹ ಮುಖ್ಯವಾಹಿನಿಗೆ ಪ್ರಯತ್ನಿಸುತ್ತಿರುವ ಇವರೆಲ್ಲ ಸಹ ಯುವಜನತೆಯೇ ಎನ್ನುವುದೊಂದು ಸಮಾಧಾನ.

ಬರೇ ಓದಿಕೊಂಡು ಕಾಲ ಕಳೆಯುವ, ಬೇರೆ ಯಾವುದರಲ್ಲೂ ಆಸಕ್ತಿಯನ್ನೇ ತೋರದ ವಿದ್ಯಾರ್ಥಿಗಳು, ತಾವು ಓದುವ ಶಾಲೆ, ಕಾಲೇಜುಗಳಲ್ಲೇ ಅಸ್ಪ್ರಶ್ಯರು. ಪ್ರಾಯಶಃ ಅನೇಕ ವಿದ್ಯಾರ್ಥಿಗಳು ಜೀವನವೆಂದರೆ ಎಂಜಾಯ್ ಮಾಡುವುದು ಎಂದೇ ತಿಳಿದಿರುವ ಮಂದಿ ಓದುವ ವಿದ್ಯಾರ್ಥಿಗಳಿಂದ ದೂರವೇ ಉಳಿಯುವುದು ಇಂದಿನ ವಿಶೇಷ, ಸಿನಿಮಾ, ಟಾಕೀಸ್, ಬಸ್ ನಿಲ್ದಾಣ, ತಮ್ಮ ಮಾಮೂಲಿ ಅಡ್ಡಗಳಲ್ಲಿ ಕಾಲ ಕಳೆಯುತ್ತಾ ಇರುವುದು ಇವರ ಟ್ರೆಂಡ್. ಅದನ್ನು ಬಿಟ್ಟು ಯುವಜನತೆ ಇಂದು ಸಮಾಜದ ರಚನಾತ್ಮಕ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ತಮ್ಮ ಪ್ರತಿಭೆ, ಕೌಶಲ್ಯಗಳ ಬೆಳಕನ್ನು ಚೆಲ್ಲಬೇಕಾಗಿದೆ.

ಇಂಥ ಆಲೋಚನೆಯಲ್ಲಿ ಯುವತಿಯರೂ ಹಿಂದೆ ಬಿದ್ದಿಲ್ಲ. ಕಾಲೇಜು ಮೆಟ್ಟಿಲು ಹತ್ತಿದ ದಿನದಿಂದಲೇ ಲೋಕವೆಲ್ಲಾ ಸುಂದರವಾಗಿ ಕಾಣುವಾಗ ತಾವೂ ಇನ್ನಷ್ಟು ಸುಂದರ ಕೊಡುಗೆ ನೀಡಲು ಮುಂದಾಗುತ್ತಾರೆ. ಪೆಪ್ಸಿ, ಕೋಕ್ ನಂತಹಾ ಪಾನೀಯಗಳು ಇವರ ಕ್ಯೂನಲ್ಲಿ ಫ್ಯಾಷನ್ ಆಗಿಬಿಡುತ್ತವೆ. ಪಾಸಾದ್ರೆ ಕಾಲೇಜು, ಫೇಲಾದ್ರೆ ಮ್ಯಾರೇಜು ಇದ್ದೇ ಇದೆಯಲ್ಲ ಎಂಬ ಭರವಸೆ ಫ್ಯಾಷನ್ ಲೋಕದ ಕದ ತಟ್ಟಲು ಪ್ರೇರೇಪಿಸಲೂಬಹುದು. ಇದರರ್ಥ ಫ್ಯಾಷನ್ ಗೆ ಹೊರತಾದ ಯುವತಿಯರು ಇಲ್ಲವೆಂದೇನಲ್ಲ. ಅವರ ಸಂಖ್ಯೆ ಬೆರಳೆಣಿಕೆಯಷ್ಟು

ಅಡಿ, ತಮ್ಮ ಭವಿಷ್ಯದ ಹಾದಿಯನ್ನು ದುರ್ಗಮ ಮಾಡಿಕೊಳ್ಳುತ್ತಾ ಸಾಗುವ ಯುವಜನತೆ ತಮ್ಮ ಅವನತಿಯ ಹಾದಿ ತುಳಿಯುತ್ತಿದ್ದಾರೆ ಎಂಬುದು ಕಟುವಾದ ಸತ್ಯ ಇನ್ನು ಇಂದಿನ ದಿನಗಳಲ್ಲಿ ನಡೆಯುತ್ತಿರುವ ಬಹುಪಾಲು ಭಯೋತ್ಪಾದನೆ ಇರಬಹುದು, ಕೊಲೆ, ಸುಲಿಗೆ, ದರೋಡೆ ಮುಂತಾದ ಚಟುವಟಿಕೆಗಳಲ್ಲಿ ಯುವಜನತೆಯದೇ ಸಿಂಹಪಾಲು. ಅವರಿಗೆ ಸಿಗುತ್ತಿರುವ ನಕಾರಾತ್ಮಕ ಮಾರ್ಗದರ್ಶನ ಇದಕ್ಕೆಲ್ಲ ಕಾರಣವಾಗಿರಲೂಬಹುದು.

ಅಂದರೆ ಇವರನ್ನು ಸರಿದಾರಿಗೆ ತರಲು ಆಗುವುದಿಲ್ಲವೇ?

ಖಂಡಿತಾ ಆಗುತ್ತದೆ. ದಾರಿತಪ್ಪಿ ನಡೆಯುತ್ತಿರುವ ಯುವಜನತೆಯಲ್ಲಿ ಸಾಮಾಜಿಕ ಮತ್ತು ರಾಷ್ಟ್ರಚಿಂತನೆ, ದೂರದೃಷ್ಟಿ, ಕುತೂಹಲ, ಸಂಶೋಧನೆ, ಆತ್ಮವಿಶ್ವಾಸ, ವೈಚಾರಿಕ ದೃಷ್ಟಿಕೋನ ಮುಂತಾದವುಗಳನ್ನು ಭಿತ್ತಿ ಬೆಳೆಸಿದರೆ ಮಾತ್ರ ಸರಿದಾರಿಗೆ ತರಲು ಸಾಧ್ಯ ವೀರ



ಸನ್ಯಾಸಿ ಸ್ವಾಮಿ ವಿವೇಕಾನಂದರು ಹೇಳಿದಂತೆ ಯುವಕರನನು ನಿರ್ಭಿತರನ್ನಾಗಿ ಬೆಳೆಸಬೇಕು ಆತ್ಮೋನ್ನತಿಗೆ ಭಯವೇ ದೊಡ್ಡ ಶತ್ರು, ಆ ಭಯ ನಿವಾರಣೆಗೆ ಜ್ಞಾನ ಮತ್ತು ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆ ಮೂಲಕ ಜೀವನದ ಸಮಸ್ಯೆಗಳನ್ನು ಎದುರಿಸಲು ಯುವ ಜನಾಂಗ ಎದ್ದು ನಿಲ್ಲಬೇಕು. ಇದು ನಮ್ಮ ಯುವ ನೀತಿಯ ಒಂದು ಅಂಶವಾಗಬೇಕಾಗಿದೆ.

ಭ್ರಷ್ಟಾಚಾರ ತಡ ಹಾಗೂ ವ್ಯವಸ್ಥೆ ಬದಲಾವಣೆಯ ಬಗ್ಗೆ ಯುವಜನತೆಗೆ ಗ್ರಾಮೀಣ ಮಟ್ಟದಿಂದಲೇ ಅರಿವನ್ನು ಕೊಡುವಂತಾಗಬೇಕು.

ರಾಷ್ಟ್ರ ಹಾಗೂ ಜನತೆಯ ಅಭಿವೃದ್ಧಿಯ ಚಿಂತನೆಗಳನ್ನು ಯುವಜನಾಂಗ ಬೆಳಸಿಕೊಂಡಲ್ಲಿ, ಬಲಿಷ್ಠ ನಾಡು ನಿರ್ಮಾಣ ಸಾಧ್ಯ. ಅದರ ಬಗ್ಗೆ ಹೈಸ್ಕೂಲಿನಿಂದಲೇ ಅರಿವನ್ನು ನೀಡುವ ವ್ಯವಸ್ಥೆಯಾಗಬೇಕು.

ವಿದ್ಯಾವಂತ ಯುವ ಸಮೂಹ ಹೆಚ್ಚು ಹೆಚ್ಚು ರಾಜಕೀಯ ಪ್ರವೇಶ ಮಾಡುವ ಮೂಲಕ ಇರುವ ವ್ಯವಸ್ಥೆ ಬದಲಾವಣೆ ಮಾಡಬೇಕಾಗಿದೆ. ವಿದ್ಯಾರ್ಥಿ ಜೀವನದಿಂದ ಉತ್ತಮ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ರಾಷ್ಟ್ರನಿರ್ಮಾಣದತ್ತ ಹೆಜ್ಜೆ ಹಾಕುವಂತೆ ಮಾಡುವ ಕಾರ್ಯಯೋಜನೆಯ ರೂಪುರೇಷೆ ಆಗಬೇಕು.

ಸಮಾಜವನ್ನು ಅಪರಾಧ ಮುಕ್ತವಾಗಿಸಲು ೧೬ರಿಂದ ೧೮ರ ಹರೆಯದ ಯುವಜನಾಂಗಕ್ಕೆ ಉತ್ತಮ ಮಾರ್ಗದರ್ಶನ ನೀಡಬೇಕಿದೆ. ಹರೆಯದಲ್ಲೇ ಮಕ್ಕಳು ಹಾದಿ ತಪ್ಪುವ ಅವಕಾಶಗಳು ಹೆಚ್ಚಿದ್ದು, ಅವರನ್ನು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸುವುದರಿಂದ ಅವರಲ್ಲಿ ಸಾಮಾಜಿಕ ಜವಾಬ್ದಾರಿ ಮೂಡಿಸುವ ನಿಟ್ಟಿನಲ್ಲಿ ಕೆಲಸವಾಗಬೇಕು.

ಅಪಾರ ಯುವಶಕ್ತಿಯನ್ನು ಹೊಂದಿರುವ ನಮ್ಮ ದೇಶದಲ್ಲಿ ಯುವಶಕ್ತಿಗೆ ಸೂಕ್ತ ಮಾರ್ಗದರ್ಶನ ನೀಡುವುದರಿಂದ ಸಮಾಜದಲ್ಲಿರುವ ದುಷ್ಟಶಕ್ತಿಗಳಿಂದ ಯುವಶಕ್ತಿಯನ್ನು ದೂರವಿಡಲು ಸಾಧ್ಯ ಇಂತಹ ಪ್ರಯತ್ನಗಳಲ್ಲಿ ಮಾಧ್ಯಮದ ಪಾತ್ರ ಪ್ರಮುಖವಾಗಿದೆ.

ಹದಿಹರೆಯದ ಮಕ್ಕಳಲ್ಲಿ ಅಪರಾಧವನ್ನು ವೈಜ್ಞಾನಿಕವಾಗಿ ಹಾಗೂ ರಚನಾತ್ಮಕವಾಗಿ ತಡೆಯಲು ಅರಿವು ಮೂಡಿಸುವುದರಿಂದ ಉತ್ತಮ ಸಮಾಜ ನಿರ್ಮಾಣ ಸಾಧ್ಯ.

ಪ್ರೌಢಶಾಲೆ ಮತ್ತು ಪದವಿಪೂರ್ವ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣದ ಮಾಹಿತಿ, ವಿವಿಧ ಕೌಶಲ್ಯಗಳ ಕಲಿಕೆಗೆ ಅವಕಾಶ

ಕಲ್ಪಿಸುವ ನಿಟ್ಟಿನಲ್ಲಿ ಅವರಿಗೆ ಭವಿಷ್ಯತ್ತಿನ ಗುರಿ ಹಾಗೂ ನಿರ್ಧಾರದ ಬಗ್ಗೆ ಅರಿವು ಮೂಡಿಸುವಂತಹ ಕಾರ್ಯಗಳು, ಒಂಬತ್ತು ಮತ್ತು ಹತ್ತನೆ ತರಗತಿ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣ ಅಧ್ಯಯನ ವಿಷಯ ಬೋಧಿಸುವುದು ಅವಶ್ಯಕ. ಇಂದಿನ ಐಟಿ ಯುಗದಲ್ಲಿ ವೃತ್ತಿ ಶಿಕ್ಷಣ ಯುವಜನಾಂಗದ ಕೌಶಲ್ಯ ವೃದ್ಧಿಸುತ್ತದೆ. ಅದಕ್ಕಾಗಿ ವಯೋಮಾನಕ್ಕೆ ಅನುಗುಣವಾಗಿ ಪ್ರತ್ಯೇಕ ಪಠ್ಯ ಮತ್ತು ಪ್ರಾಯೋಗಿಕ ವಿಚಾರ ಶಿಕ್ಷಣದಲ್ಲಿ ಅಳವಡಿಸಬೇಕು ಪದವಿ ಪೂರ್ವ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ನಾನಾ ರೀತಿಯ ಕೌಶಲ್ಯ ರೂಢಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು. ಕಾರ್ಮಿಕ ಇಲಾಖೆ, ಐಟಿಐ,



ಪಾಲಿಟೆಕ್ನಿಕ್, ಪ್ರೌಢಶಿಕ್ಷಣ ಮೊದಲಾದ ವಿಭಾಗಗಳಲ್ಲಿ ವೃತ್ತಿ ಶಿಕ್ಷಣ ಇಂದು ಹರಿದು ಹಂಚಿ ಹೋಗಿದ್ದು ಅವುಗಳೆಲ್ಲವನ್ನು ಈ ಯುವನೀತಿಯಡಿ ತಂದಲ್ಲಿ ಅನುಕೂಲ.

ವೃತ್ತಿ ಶಿಕ್ಷಣದ ಜವಾಬ್ದಾರಿ ಹೊರಲು ಮುಂದೆ ಬರುವ ಖಾಸಗಿ ವಿದ್ಯಾಸಂಸ್ಥೆಗಳಿಗೆ ಎಲ್ಲಾ ರೀತಿಯ ಪ್ರೋತ್ಸಾಹ ನೀಡಬೇಕು. ರಾಜ್ಯದಿಂದ ರಾಜ್ಯಕ್ಕೆ ಜಿಲ್ಲೆಯಿಂದ ಜಿಲ್ಲೆಗೆ ಪಾರಂಪರಿಕ ಕೌಶಲ್ಯಗಳು ವಿಭಿನ್ನವಾಗಿದ್ದು ಅಲ್ಲಿನ ಪರಿಸರಕ್ಕೆ ತಕ್ಕಂತೆ ಬೆಳೆಸಿ ಯುವ ಜನಾಂಗದಲ್ಲಿ ಜನಪ್ರಿಯ ಆಗುವಂತೆ ಮಾಡಬೇಕು. ಯುವಜನಾಂಗ ಸ್ವಾವಲಂಬಿ ಆಗುವಂತೆ ವೃತ್ತಿಶಿಕ್ಷಣ ಹಾಗೂ ಪ್ರತಿಭೆ ಕೌಶಲ್ಯ ಪ್ರೋತ್ಸಾಹಿಸುವಂತಹ ಯೋಜನೆಗಳ ಬಗ್ಗೆ ಚಿಂತನೆ ಮತ್ತು ಜಾರಿ ತರಬೇಕು.

ಆಧುನಿಕತೆಯಲ್ಲಿ ಇಂದು ಕಾಡುತ್ತಿರುವ ಕ್ರೌರ್ಯ, ಹಿಂಸೆ, ಉಗ್ರಗಾಮಿತ್ವ, ಮದ್ಯ, ಮಾದಕವಸ್ತುಗಳ ಸೇವನೆಯನ್ನು ಯುವಜನತೆಯಿಂದ ದೂರವಾಗಿಸಬೇಕು. ಅವರು ಇಂದು ಮಾನಸಿಕ ಒತ್ತಡದಿಂದ ದೇಹದ ನಿರೋಧಕ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ರಕ್ತದ ಒತ್ತಡ, ತಲೆನೋವು ಮತ್ತು ಅಲರ್ಜಿ, ಹೃದಯಘಾತ ಮುಂತಾದ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಇತ್ತೀಚಿನ ಸಂಶೋಧನೆಗಳ ಪ್ರಕಾರ ಮಾನಸಿಕವಾಗಿ ದುರ್ಬಲರಾದವರು ಒತ್ತಡಕ್ಕೆ ಅತಿಹೆಚ್ಚು ಪ್ರತಿಕ್ರಿಯಿಸುತ್ತಿದ್ದಾರೆ. ಇದರಿಂದಾಗಿ ಅವರು ಖಿನ್ನರಾಗುತ್ತಾರೆ. ಒತ್ತಡಗಳು

ಅತಿಯಾಗಿದ್ದು, ವ್ಯಕ್ತಿ ದುರ್ಬಲನಾಗಿದ್ದರೆ ಆತ ಒತ್ತಡಕ್ಕೆ ಬೇಗ ಬಲಿಯಾಗುತ್ತಾನೆ. ಸೈಬರ್ ಕೆಫೆಗಳು, ಅಂತರ್ಜಾಲಗಳು, ಅಶ್ಲೀಲ ಚಲನಚಿತ್ರಗಳು ಹಾಗೂ ಕೀಳು ಅಭಿರುಚಿಯುಳ್ಳ ಲೈಂಗಿಕ ಪುಸ್ತಕಗಳು ಹಾಗೂ ಕೆಲವು ಪತ್ರಿಕೆಗಳು, ಜಾಹೀರಾತುಗಳು ಯುವಕರನ್ನು ದಾರಿತಪ್ಪಿಸುತ್ತಿವೆ. ಇಂತಹ ಅಪಾಯಕಾರಿ ಜೀವನ ಶೈಲಿ ಮನುಕುಲಕ್ಕೆ ಮಾರಕವಾಗುತ್ತಿದೆ. ಈ ನಿಟ್ಟಿನಲ್ಲಿ ಜಾಗೃತಿಯನ್ನು ಮೂಡಿಸಿ ಅದಕ್ಕೆ ಬಲಿಯಾದವರನ್ನು ಹೊರತರುವ ನಿಟ್ಟಿನಲ್ಲಿ ಈ ನೀತಿ ಕೆಲಸ ಮಾಡಬೇಕು.

ಅಂದು ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟ ಯುವಕರು ಅದೆಷ್ಟೋ. ಇದು ಸತ್ಯ ಕೂಡ. ಭಗತ್ ಸಿಂಗ್, ಚಂದ್ರಶೇಖರ್ ಆಜಾದ್, ಸುಭಾಷ್ ಚಂದ್ರ ಬೋಸ್ ಮುಂತಾದ ಸ್ವಾತಂತ್ರ್ಯ ಹೋರಾಟಗಾರರ ಸಂದೇಶಗಳನ್ನು ಹರಡಬೇಕಾಗಿದೆ.

ಪಟ್ಟಣಗಳ ವಿಲಾಸಿ ಸುಲಭ ಜೀವನಕ್ಕಾಗಿ ಹಳ್ಳಿಗಳಿಂದ ಜೀವನೋಪಾಯಕ್ಕೆ ಬರುವವರ ಸಂಖ್ಯೆ ಹೆಚ್ಚುತ್ತಿದೆ, ಅದಕ್ಕಾಗಿ ಗ್ರಾಮೀಣ ಪ್ರದೇಶಗಳಲ್ಲಿ ಯುವಜನತೆಗೆ ಸ್ವಾವಲಂಬಿ ಜೀವನ ನಡೆಸುವಂತಹ ವೃತ್ತಿ ತರಬೇತಿಗಳು ಮತ್ತು ಅದನ್ನು ಅಲ್ಲಿಯೇ ಮಾಡುವಂತಹ ಕೆಲಸ ಆರಂಭವಾಗಬೇಕು.

ಕೃಷಿಯ ಚಟುವಟಿಕೆಗಳಲ್ಲಿ ಯುವಜನತೆಯನ್ನು ಹೆಚ್ಚು ತೊಡಗಿಸಿಕೊಳ್ಳುವಂತೆ ಮಾಡಬೇಕು. ಅದಕ್ಕೆ ಬೇಕಾದಂತಹ ತರಬೇತಿಗಳು ಹಾಗೂ ಸೌಲಭ್ಯಗಳನ್ನು ಕಲ್ಪಿಸಬೇಕು.

ಗ್ರಾಮೀಣ ಭಾಗದಲ್ಲಿ ಯುವತಿಯರನ್ನು ಅನೇಕ ಸಮಸ್ಯೆಗಳು ಕಾಡುತ್ತಿವೆ. ಅದರ ಬಗ್ಗೆ ಸಮಗ್ರ ಸಂಶೋಧನೆ ಆಗಬೇಕು, ಅದಕ್ಕಾಗಿಯೇ ಒಂದು ಕಾರ್ಯಪಡೆ ರಚನೆ ಮಾಡಬೇಕು.

ಹದಿಹರೆಯದ ಸಮಸ್ಯೆಗಳ ಮತ್ತು ಯುವಜನತೆಯ ಗೊಂದಲಗಳಿಗಾಗಿಯೇ ಒಂದು ಸಲಹಾ ಕೇಂದ್ರವೊಂದನ್ನು ರಾಜ್ಯಮಟ್ಟದಲ್ಲಿ ತೆಗೆಯಬೇಕು, ಸಾಧ್ಯವಾದರೆ ಜಿಲ್ಲಾ ಮಟ್ಟದಲ್ಲಿ ಕೂಡ.

ಯುವಜನತೆಯ ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಆಗುತ್ತಿಲ್ಲ. ದೇಶದ ಭದ್ರ ಬುನಾದಿಯಾಗಿರುವ ಯುವ ಶಕ್ತಿಯನ್ನು ನಿರಂತರವಾಗಿ ಸದೃಢಗೊಳಿಸುವ ಕೆಲಸ ಆಗಬೇಕು? ಯುವ ಶಕ್ತಿ ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡರೆ ದೇಶದ ಸುಸ್ಥಿರ ಅಭಿವೃದ್ಧಿ ಸಾಧ್ಯವಾಗಲಿದೆ.

* ಯುವಶಕ್ತಿಯೇ ಅತ್ಯಂತ ಪ್ರಬಲ

* ಯುವಶಕ್ತಿ-ಸಂಪನ್ಮೂಲ ಸದ್ಬಳಕೆಯಿಂದ ದೇಶ ಸ್ಥಿರ

* ಜಾಗೃತ ಯುವಶಕ್ತಿಯಿಂದ ರಾಷ್ಟ್ರ ಪ್ರಬಲ

*ಸುಸಂಸ್ಕೃತ ಯುವಶಕ್ತಿ ಸಮಾಜದ ಶಕ್ತಿ

*ಗ್ರಾಮಾಭಿವೃದ್ಧಿಗೆ ಯುವಶಕ್ತಿ ಸದ್ಬಲಕೆಯಾಗಲಿ

* ಆರೋಗ್ಯವಂತ ಯುವಶಕ್ತಿ ಬೇಕು

* ಯುವಶಕ್ತಿ ಆಕರ್ಷಿಸುವಂತಹ ಆರೋಗ್ಯಯುತ ಸಾಹಿತ್ಯ-ಸಂಸ್ಕೃತಿ ಸಮ್ಮೇಳನ ಆಯೋಜನೆ ಅಗತ್ಯ

* ರಾಜ್ಯದ ಯುವ ಜನತೆ ಕನ್ನಡವನ್ನು ಕಟ್ಟುವ ಮತ್ತು ನಿರ್ಮಿಸುವ ಕಾಯಕಕ್ಕೆ ಮುಂದಾಗಬೇಕು

* ದೇಶದ ಉನ್ನತ ಸಾಧನೆಗಳಿಗೆ ಯುವ ಜನಾಂಗದ ಆರೋಗ್ಯಪೂರ್ಣ ಶಕ್ತಿಯ ಅಗತ್ಯವಿದೆ

* ಸಮಾಜ ಹಿತಕ್ಕೆ ಯುವಶಕ್ತಿ ಸದ್ಬಳಕೆ ಅತಿ ಅವಶ್ಯಕ.

* ಯುವಜನತೆಯಿಂದು ಮಾನಸಿಕವಾಗಿಯೂ, ದೈಹಿಕವಾಗಿಯೂ ಪ್ರಬಲರಾಗ ಬೇಕಾಗಿದೆ. ಒತ್ತಡಗಳಿಗೆ ಮರುಗದೆ ಆತ್ಮಸ್ಥೈರ್ಯವನ್ನು ಮೈಗೂಡಿಸಿಕೊಳ್ಳಬೇಕಾಗಿದೆ. ಯವಸ್ನೇಹಿತರೇ, ನಿರಾಶೆ, ಸೋಲು, ಅತೃಪ್ತಿ, ಚಿಂತೆ ಮತ್ತು ಒತ್ತಡಗಳು ಇಂದು ನಿಮ್ಮ ಮಾನಸಿಕ ದೃಢತೆಯನ್ನು ಅಲುಗಾಡಿಸುತ್ತಿರಬಹುದು. ಆದರೆ ಬಾಳಿನ ಪಯಣದಲ್ಲಿ ಇವೆಲ್ಲವೂ ಸಾಮಾನ್ಯವೆಂದು ತಿಳಿದು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಬೇಕು.

* ಜಾಗತೀಕರಣದ ಫಲವಾಗಿ ಅದೆಷ್ಟೋ ವಿಷಯಗಳು ನಮ್ಮ ಕಣ್ಣೆದುರಿಗೆ ಕಣ್ಣಾಮುಚ್ಚಾಲೆಯಾಡುತ್ತಿವೆ. ಆದರೆ ಎಲ್ಲಿಯ ತನಕ ಈ ಜಾಗತೀಕರಣ ಎಂಬ ಜಂಜಾಟಕ್ಕೆ ಕೊನೆಯಿಲ್ಲವೋ ಅಲ್ಲಿಯ ತನಕ ಈ ಭಯೋತ್ಪಾದನೆಗೂ ಕೊನೆಯಿಲ್ಲ ಅಂತ ಕಾಣುತ್ತೆ. "ಯುವಜನತೆಯೇ ಏಳಿ ಎದ್ದೇಳಿ ಈ ಜಗತ್ತನ್ನ ಬೆಳಕಿನೆಡೆಗೆ ಸಾಗಿಸಿ" ಅನ್ನುವ ಅಂದಿನ ವಿವೇಕಾನಂದರ ಯುವಪ್ರೇರಿತ ಮಾತುಗಳು ನಮಗೆ ನೆನಪಾಗಬೇಕಿದೆ.

*ನಮ್ಮ ಕನ್ನಡ ನಾಡನ್ನು ಭ್ರಷ್ಟಾಚಾರ ಮುಕ್ತ ಹಾಗೂ ಸಂಸ್ಕಾರ ಯುತ ನಾಡನ್ನಾಗಿ ಕಟ್ಟಿ ಬೆಳೆಸುವಲ್ಲಿ ವಿದ್ಯಾರ್ಥಿಗಳ ಮತ್ತು ಯುವಶಕ್ತಿಯ ಪಾತ್ರ ಅತಿ ಮುಖ್ಯವಾಗಿದೆ. ಯುವಜನತೆಯನ್ನು ಕಾಡುತ್ತಿರುವ ಆರೋಗ್ಯ ನಿರುದ್ಯೋಗ, ಪರಿಹರಿಸಿದಲ್ಲಿ ಸಾಹಿತ್ಯ ನಾಡು ನುಡಿ, ಸಂಸ್ಕೃತಿಯನ್ನು ಅವರೇ ಬೆಳೆಸುತ್ತಾರೆ.



*ಯುವಶಕ್ತಿ ಎಂತಹ ಲಕ್ಷವನ್ನೂ ದಣಿವರಿಯದೇ ಮುಟ್ಟಬಲ್ಲ ಎದೆಗಾರಿಕೆಯನ್ನು ಹೊಂದಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಇಚ್ಛಾಪೂರ್ವಕವಾಗಿ ಗುರಿಯನ್ನಿಟ್ಟುಕೊಂಡು ಮುಂದಡಿಯಿಟ್ಟರೆ ಏನನ್ನಾದರೂ ಸಾಧಿಸಬಹುದು.

ಪ್ರತಿಯೊಬ್ಬ ವ್ಯಕ್ತಿಯೂ, ಪ್ರತಿಯೊಂದು ರಾಷ್ಟ್ರವೂ ಶ್ರೇಷ್ಠತೆಯನ್ನು ಪಡೆಯಲು

ಮೂರು ಸಂಗತಿಗಳು ಅವಶ್ಯಕ:

೧. ಒಳಿತಿನ ಶಕ್ತಿಯಲ್ಲಿ ದೃಢನಂಬಿಕೆ

೨. ಮಾತ್ಸರ್ಯ ಹಾಗೂ ಅಪನಂಬಿಕೆಗಳಿಲ್ಲದಿರುವಿಕೆ

೩. ಒಳ್ಳೆಯವರಾಗಲು, ಒಳಿತನ್ನು ಮಾಡಲು ಪ್ರಯತ್ನಿಸುತ್ತಿರುವವರಿಗೆ ಸಹಾಯಮಾಡುವಿಕೆ.

೪.ಯುವ ಕರ್ನಾಟಕ ಹೀಗಿರಿಬೇಕು

ದೇಶದಲ್ಲಿ ಯುವ ಸಮಯದಾಯ ಹೆಚ್ಚಿದೆ. ದುಡಿಯುವ ಕೈಗಳಿಗೆ ಕೆಲಸ ಸಿಗಬೇಕು. ಹಳ್ಳಿಯಿಂದ ಸಾಕಷ್ಟು ವಲಸೆ ಆಗುತ್ತಿದೆ. ಯುವಜನರು ಹಳ್ಳಿಗಳನ್ನು ಬಿಟ್ಟು ಬರದಂತೆ ಅವರಿಗೆ ಅಲ್ಲೇ ಉದ್ಯೋಗ ಸಿಗುವಂತೆ ಮಾಡಬೇಕು.

ಓದಿ ಹಳ್ಳಿಗಳು ಉಳಿಯಬೇಕು, ಕೃಷಿ ಜೊತೆ ಬೇರೆ ಉದ್ಯೋಗ ಸೃಷ್ಟಿಯಾಗಬೇಕು. ನಗರ ಪ್ರದೇಶದ ಒತ್ತಡ ಕಡಿಮೆಯಾಗಬೇಕು. ಕಸ ಮುಕ್ತ ಕರ್ನಾಟಕ ನಿರ್ಮಾಣವಾಗಬೇಕು. ಆರೋಗ್ಯ ಸೇವೆಗಳು ಉತ್ತಮವಾಗಿ ಸಿಗಬೇಕು ಯುವಜನತೆ ತಮ್ಮನ್ನು ವಿವಿಧ ಕ್ಷೇತ್ರಗಳಲಿ ತೊಡಗಿಸಿಕೊಳ್ಳಬಹುದು, ಮುಖ್ಯವಾಗಿ ಕೃಷಿ ಕ್ಷೇತ್ರ ಪ್ರವಾಸೋದ್ಯಮ, ಕೈಗಾರಿಕೋದ್ಯಮ ಹೀಗೆ ಸಾಮಾಜಿಕ, ಆರ್ಥಿಕ, ರಾಜಕೀಯ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮನ್ನ ತೊಡಗಿಸಿಕೊಳ್ಳಬೇಕು.

ಏಕೀಕರಣದ ಪಿತಾಮಹ ಆಲೂರು ವೆಂಕಟರಾಯರು ಹೇಳಿದಂತೆ

ಕರ್ನಾಟಕವು ನಮ್ಮ ಕನ್ನಡಿಗರ ಕುರುಕ್ಷೇತ್ರ, ಭಾರತವು ನಮ್ಮ ಧರ್ಮ ಕ್ಷೇತ್ರ

ಭಾರತಿದೇವಿಯು ವಿಶ್ವದ ಉತ್ಸವಮೂರ್ತಿಯು, ಕರ್ನಾಟಕ ದೇವಿಯೂ ಭಾರತಿದೇವಿಯ ಉತ್ಸವಮೂರ್ತಿಯು.

ಕರ್ನಾಟಕತ್ವವವು ಅತ್ಯಂತ ಪರಿಶುದ್ಧ ಭಾವನೆ, ಅತ್ಯಂತ ವಿಶಾಲವಾದ ಭಾವನೆ. ಅದು ಕರ್ನಾಟಕದ ಹಿತಗಳೆಲ್ಲವನ್ನೂ ತನ್ನಲ್ಲಿ ಅಡಗಿಸಿಕೊಂಡಿದೆ.

ಅಖಂಡ ಕರ್ನಾಟಕವು ಮೊದಲು ಹೃದಯದಲ್ಲಿ, ಭಾರತೀಯ ಸಂಸ್ಕೃತಿಯೂ ಕರ್ನಾಟಕ ಸಂಸ್ಕೃತಿ.

ತತ್ವಜ್ಞಾನ.

ಇತಿಹಾಸವೆಂದರೆ ಸತ್ತವರ ಮೇಲೆ ಕಟ್ಟುವ ಗೋರಿಯಲ್ಲ ಅದೊಂದು ಆಳವಾದ

ಕರ್ನಾಟಕ ಬಾಳೆಯ ಗಿಡಕ್ಕೆ ಈಗ ಗೊನೆ ಬಿಟ್ಟಂತಾಗಿದೆ. ಅದರೊಳಗಿನ ಕಾಯಿಗಳನ್ನು ಹಣ್ಣು ಮಾಡಿಕೊಂಡು ಉಣ್ಣುವ ಕೆಲಸ ಕನ್ನಡಿಗರದು.

ಈಗಿನ ಕಾಲಕ್ಕೆ ಮಾತೃ ಭಾಷೆಗಿಂತ ದೇಶ ಭಾಷೆಗೆ ಮನ್ನಣೆ ಹೆಚ್ಚು ಎಂಬುದನ್ನು ಯಾರು ಮರೆಯದಿರಲಿ.



ನಾನು ಮೊದಲು ಭಾರತೀಯನು, ಅನಂತರ ಕರ್ನಾಟಕದವನು ಎಂಬುದು ಸರಿಯಲ್ಲ. ಇವುಗಳಲ್ಲಿ ಮೊದಲು, ಹಿಂದುಗಡೆಗಳಿಲ್ಲ. ಎರಡು ಭಾವನೆಗಳು ಪರಸ್ಪರ ವಿರುದ್ಧಗಳಲ್ಲ. ವಿಶಿಷ್ಟತ್ವವು ಸಮಷ್ಟಿತ್ವವೂ ಎಕಸಮಯಾವಭೇದದಿಂದ ಬೇಕು.

ನಾವು ಅಂದುಕೊಂಡಷ್ಟು ಪೆದ್ದರಲ್ಲ ಯುವ ಸಮೂಹ, ನಿರ್ಭಯತೆ, ಆಶಾವಾದ ಮತ್ತು ಸಾಮಾಜಿಕ ಸಮಸ್ಯೆಗಳ ಬಗೆಗಿನ ವಿಶಾಲ ಅವರ ದೃಷ್ಟಿಯ ಸಂಕೇತ, ಯುವ ಮಂಥನ ನಡೆದಲ್ಲಿ, ಅವರ ಪಾತ್ರದ ಅರಿವು ಮಾಡಿಕೊಡುವುದರಲ್ಲಿ ನಾವು ಗೆಲ್ಲಬಹುದು. ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ, ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ, ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ, ಪರುಷದ ಬಲದಿಂದ ಅವಲೋಕದ ಕೇಡು ನೋಡಯ್ಯ, ಕೂಡಲಸಂಗನ ಶರಣರನುಭಾವದಿಂದ ಎನ್ನ ಭವದ ಕೇಡು ನೋಡಯ್ಯ ಎನ್ನುವ ಶ್ರೇಷ್ಠ ವಚನಕಾರರಾದ ಬಸವಣ್ಣನವರು ಹೇಳಿದಂತೆ

ಬೆಳಕು ಜ್ಞಾನದ ಸಂಕೇತ, ಅಜ್ಞಾನದ ಕುರುಹು. ಈ ಜ್ಞಾನವೆಂಬ ಬೆಳಕಿನ ಬಲದಿಂದ ಅಜ್ಞಾನವೆಂಬ ಕತ್ತಲು ಹರಿಯುತ್ತದೆ. ಜ್ಞಾನದ ಬೆಳಕಿನಲ್ಲಿ ವಿವೇಕ ಅರಳುತ್ತದೆ. ಸತ್ಯದ ಬಲದಿಂದ ಅಸತ್ಯ ಅಳಿಯುತ್ತದೆ. ಅಮೂಲ್ಯವಾದ ಸ್ಪರ್ಶ ಮಣಿಯ ಸೋಂಕಿನ ಬಲದಿಂದ ಕಬ್ಬಿಣ ಮುಂತಾದ ಅವಲೋಹಗಳು ರೂಪಾಂತರ ಪಡೆಯುತ್ತವೆ. ಅಂತೆಯೇ ಶರಣರ ಒಡನಾಟ ಅವರ ಅನುಭಾವದ ನುಡಿಗಳ ಸತ್ಸಂಗದಿಂದ ಅಜ್ಞಾನ ಅಡಗಿ ಭವದ ಭಾವಗಳು ಇಲ್ಲದಂತಾಗುವವು. ಸಜ್ಜನರ ಸಂಗವ ಮಾಡುವುದು ಲೇಸು ದುರ್ಜನರ ಸಂಗ ಬೇಡ ಅನ್ನುತ್ತಾರೆ ಬಸವಣ್ಣನವರು. ಇದನ್ನು ಯುವಜನತೆ ಅನುಸರಿಸಿದರೆ ಇಂದಿನ ಯುವಕರ್ನಾಟಕ ಒಂದು ಅವಲೋಕನ ಗೋಷ್ಠಿಗೊಂದು ಅರ್ಥಪೂರ್ಣ ಮಹತ್ವ ಸಿಗುತ್ತದೆ.

ಇಂದಿನ ಯುವಜನತೆಗೆ ಕುವೆಂಪುರವರು ಅಂದೇ ಹೇಳಿದಂತೆ

ಅರ್ಥವಿಲ್ಲದ ಪ್ರಶ್ನೆಗೆ ಸುಮ್ಮನಿರುವುದೇ ಉತ್ತರ

ನಮ್ಮ ಉತ್ಸಾಹ ಹುಲ್ಲಿನ ಬೆಂಕಿಯಾಗಬಾರದು, ಕಲ್ಲಿದ್ದಲ ಕಾವಾಗಬೇಕು

ವಿದ್ಯಾರ್ಥಿ ಭತ್ತ ಬೆಳೆಯುವ ಗದ್ದೆಗಳಾಗಬೇಕು, ಬರಿಯ ಚೀಲಗಳಾಗಬಾರದು ನೀವು ಲೋಕವನ್ನಾಗಲೋ, ಸಮಾಜವನ್ನಾಗಲೀ, ಪುರೋಹಿತಶಾಹಿಯನ್ನಾಗಲೀ ಬದಲಾಯಿಸಲು ಪ್ರಯತ್ನಿಸುವ ಅಗತ್ಯ ಖಂಡಿತ ಇಲ್ಲ. ನೀವು ಮತ್ತು ನಿಮ್ಮ ಮನಸ್ಸು ಪರಿವರ್ತನೆ ಆಗದೆ ಏನೂ ಬದಲಾಗುವುದಿಲ್ಲ" ಇಂದಿನ ಕನಸು, ನಾಳೆಯ ಮನಸು, ನಾಡಿದ್ದಿನ ಉಣಿಸು. ಮುಚ್ಚುಮರೆ ಇಲ್ಲದೆಯೇ ನಿನ್ನ ಮುಂದೆಲ್ಲವನು ಬಿಚ್ಚಿಡುವೆ ಓ ಗುರುವೇ ಅಂತರಾತ್ಮ ಪಾಪವಿದೆ ಪುಣ್ಯವಿದೆ, ನರಕವಿದೆ ನಾಕವಿದೆ, ಸ್ವೀಕರಿಸು ಓ ಗುರುವೇ ಅಂತರಾತ್ಮ

"ಎದ್ದೇಳಿ, ಕಾರ್ಯೋನ್ಮುಖರಾಗಿ, ಈ ಜೀವನವಾದರು ಎಷ್ಟು ಕಾಲ? ನೀವು ಈ ಜಗತ್ತಿಗೆ ಬಂದ ಮೇಲೆ ಏನಾದದ್ದಾರೆ ಗುರುತನ್ನು ಬಿಟ್ಟು ಹೋಗಿ, ಅದಿಲ್ಲದಿದ್ದರೇ ನಿಮಗೂ ಮರ ಕಲ್ಲುಗಳಿಗೂ ಏನು ವ್ಯತ್ಯಾಸ? ಅವು ಅಸ್ತಿತ್ವಕ್ಕೆ ಬರುತ್ತದೆ ನಶಿಸಿ ನಿರ್ನಾಮವಾಗುತ್ತದೆ." ಸ್ವಾಮಿ ವಿವೇಕಾನಂದರ ಈ ವಾಣಿಯೊಂದಿಗೆ ನನ್ನ ಈ ಪುಟ್ಟ ಭಾಷಣವನ್ನು ಮುಗಿಸುತ್ತಿದ್ದೇನೆ.

# ಕರ್ನಾಟಕದ ಯುವ ಸಮುದಾಯದ ಸವಾಲು ಮತ್ತು

# ಸಾಧ್ಯತೆಗಳು

**- ಅಪ್ಪಗೆರೆ ಸೋಮಶೇಖರ್**

೨೦೨೦ನೇ ಜನವರಿ ೩೦ಕ್ಕೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರು "ಮೂಕನಾಯಕ" (ಪಾಕ್ಷಿಕ) ಪತ್ರಿಕೆಯನ್ನು ಪ್ರಕಟಿಸಿ ನೂರು ವರ್ಷ. ೧೯೨೦ ಜನವರಿ ೩೧ರಂದು ಈ ಪತ್ರಿಕೆಯನ್ನು ಹೊರತಂದಾಗ ಅಂಬೇಡ್ಕರ್ ಅವರು ೨೯ ವರ್ಷದ ಯುವಕರಾಗಿದ್ದರು. ಮೂಕನಾಯಕ ಪತ್ರಿಕೆಯ ಆರಂಭದಲ್ಲಿ ಬರೆಯಲಾಗಿರುವ ಅಂಬೇಡ್ಕರ್ ಅವರ ಮಾತುಗಳ ಮೂಲಕ ಯುವ ಸಮುದಾಯದ ಸಾವಲು- ಸಾಧ್ಯತೆಗಳನ್ನು ಚರ್ಚೆಗೆ ಒಳಪಡಿಸುವುದು ಹೆಚ್ಚು ಸೂಕ್ತವೆನಿಸುತ್ತದೆ. ಇವತ್ತಿಗೆ ಹೆಚ್ಚು ಪ್ರಸ್ತುತವಾಗಿರುವ ಆ ಮಾತುಗಳು ಹೀಗೆವೆ :

"ಈಗೇಕೆ ನಾನು ಸಂಕೋಚಪಡಬೇಕು

ಯಾವುದೇ ಹಿಂಜರಿಕೆಯಿಲ್ಲದೆ ನಾನು ಮಾತಾಡುವೆ

ಮೂಕರ ನೋವುಗಳನ್ನು ಯಾರೂ ಅರಿಯರು

ಮಾತಾಡಲು ಸಂಕೋಚಪಟ್ಟುಕೊಂಡರೆ ಏಳಿಗೆ ಸಾಧ್ಯವಿಲ್ಲ" (ಮೂಕನಾಯಕ)

ಅಂಬೇಡ್ಕರ್ ಅವರು ನೂರು ವರ್ಷಗಳ ಹಿಂದೆ ಹೇಳಿರುವ ಈ ಮಾತುಗಳು ಇವತ್ತಿನ ಅಸಹಿಷ್ಣು ಭಾರತದ ಸಂದರ್ಭದಲ್ಲಿ ಹೆಚ್ಚು ಮೌಲಿಕವಾದವುಗಳಾಗಿವೆ. ಕೋಮುವಾದಿ ವ್ಯವಸ್ಥೆಯು ಮಾತನಾಡುವ, ಪ್ರಶ್ನಿಸುವ, ಅಭಿವ್ಯಕ್ತಿಸುವ ಸ್ವಾತಂತ್ರ್ಯವನ್ನು ಹರಣ ಮಾಡುತ್ತಿರುವ ಈ ಹೊತ್ತಿನಲ್ಲಿ ಪ್ರಜ್ಞಾವಂತ ಯುವ ಮನಸ್ಸುಗಳು ಅಂಬೇಡ್ಕ ಅವರ ಈ ಮಾತುಗಳನ್ನು ಆತ್ಮಾವಲೋಕನದ ಮಾತುಗಳನ್ನಾಗಿ ಸ್ವೀಕರಿಸಬೇಕಾಗಿದೆ. ವ್ಯವಸ್ಥೆಯ ಹುನ್ನಾರದ ಮುಖವಾಡಗಳನ್ನು ಬಯಲು ಮಾಡುವ ನಿಟ್ಟಿನಲ್ಲಿ ಎಚ್ಚೆತ್ತ ಯುವ ಮನಸ್ಸುಗಳು; ಸಾಮಾಜಿಕ ಸಾಮರಸ್ಯ ಹಾಗೂ ಸ್ವಾಸ್ಥ್ಯವನ್ನು ಕಾಪಾಡುವ ಸಲುವಾಗಿ ದಿಟ್ಟವಾಗಿ, ಮುಕ್ತವಾಗಿ, ನಿರ್ಭೀಡೆಯಿಂದ ವೈಚಾರಿಕ ಪ್ರಜ್ಞೆಯ ಮೂಲಕ ದೌರ್ಜನ್ಯದ ವಿರುದ್ಧದ ಪ್ರತಿರೋಧದ ಮಾತುಗಳನ್ನು ಆಡಬೇಕಾಗಿದೆ.

೧೮ ರಿಂದ ೪೫ರವರೆಗಿನ ವಯೋಮಾನದವರನ್ನು "ಯುವ ಸಮುದಾಯ" ಎಂದು ಗುರುತಿಸಲಾಗುತ್ತದೆ. ಯಾವುದೇ ದೇಶ, ಸಮಾಜದಲ್ಲಿನ ಯುವ ಸಮುದಾಯದ ಮಾನಸಿಕ ಹಾಗೂ ದೈಹಿಕ ಆರೋಗ್ಯವು, ಆ ದೇಶದ ಸಮಾಜ ಹಾಗೂ ಸಾಮುದಾಯದ ಮಾನಸಿಕ ಸ್ವಾಸ್ಥ್ಯದ ಪ್ರತೀಕವೇ ಸರಿ. ಹಾಗಾಗಿ, ಒಂದು ದೇಶದ ಯುವ ಸಮುದಾಯದ(ಸಮಸ್ತ ಪ್ರಜೆಗಳ) ಮಾನಸಿಕ ಹಾಗೂ ದೈಹಿಕ ಆರೋಗ್ಯವು ಆ ದೇಶದ ಭೌತಿಕ ಹಾಗೂ ಬೌದ್ಧಿಕ ಶ್ರೀಮಂತಿಕೆಯನ್ನು ದೃಢೀಕರಿಸುತ್ತದೆ. ಯುವ

ಸಮುದಾಯ ಮಾನಸಿಕ, ದೈಹಿಕ ಆರೋಗ್ಯದ ವಿಷಯದಲ್ಲಿ ಸದೃಢವಾಗಿದೆ ಎಂದರೆ, ಆ ಸಮಾಜವೂ ಸಹಾ ಆರೋಗ್ಯಕರವಾಗಿದೆ ಎಂದರ್ಥ. ಯಾವುದೇ ದೇಶದ ಬಡತನ, ಹಸಿವು, ನಿರುದ್ಯೋಗ, ಆರ್ಥಿಕತೆ, ಶೈಕ್ಷಣಿಕ, ಆರೋಗ್ಯ, ಪೌಷ್ಠಿಕತೆಯ ಪ್ರಮಾಣವನ್ನು ಆಧರಿಸಿ ಅಲ್ಲಿನ ಯುವ ಸಮುದಾಯದ ಅಸ್ತಿತ್ವವನ್ನು ಅಳೆಯಲಿಕ್ಕೆ ಸಾಧ್ಯವಿದೆ. ಯುವ ಸಮುದಾಯದ ಕಲಿಕೆ, ಉದ್ಯೋಗದ ಮುಕ್ತ ಅವಕಾಶಗಳು ಸಾಮಾಜಿಕ ನ್ಯಾಯದ ಅಡಿಯಲ್ಲಿ ಪ್ರಜಾಸತ್ತಾತ್ಮಕವಾಗಿವೆಯೆ ಎನ್ನುವದರ ಆಧಾರದ ಮೇಲೂ ಆ ಸಮಾಜದ ಔನ್ನತ್ಯವನ್ನು ಪರಿಗಣಿಸಬಹುದು.

ಯುವ ಸಮುದಾಯದ ಸವಾಲು-ಸಾಧ್ಯತೆಗಳನ್ನು ಚರ್ಚಿಸುವ ಪೂರ್ವದಲ್ಲಿ ಕೆಲವು ಮುಖ್ಯ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ. ಭಾರತೀಯ ಸಮಾಜದಲ್ಲಿರುವ ಯುವ ಸಮುದಾಯ ಮಾನಸಿಕ, ದೈಹಿಕ ಆರೋಗ್ಯದ ವಿಷಯದಲ್ಲಿ ಸಮರ್ಥವಾಗಿದೆಯೆ? ಕಲಿಕೆ ಹಾಗೂ ಉದ್ಯೋಗದ ಮುಕ್ತ ಅವಕಾಶದ ಸಾಧ್ಯತೆಗಳಿವೆಯೆ? ಈ ದೇಶದಲ್ಲಿ ಯಾವುದೇ ಆತಂಕವಿಲ್ಲದೆ ಸ್ವತಂತ್ರವಾದ, ಸ್ವಾವಲಂಬಿಯಾದ, ತನ್ನಿಷ್ಟದ ಬದುಕನ್ನು ಕಟ್ಟಿಕೊಳ್ಳಲಿಕ್ಕೆ ನಮ್ಮ ಮುಂದೆ ಬಹು ಆಯ್ಕೆಗಳಿವೆ ಎಂಬಂತಹ ಭರವಸೆ ಯುವ ಸಮುದಾಯದಲ್ಲಿ ಯಾವ ಪ್ರಮಾಣದಲ್ಲಿದೆ? ಈ ನಿಟ್ಟಿನಲ್ಲಿ ನಮ್ಮ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ ವ್ಯವಸ್ಥೆ ಯುವ ಸಮುದಾಯವನ್ನು ಮಾನಸಿಕವಾಗಿ ಸದೃಢವಾಗಿ ರೂಪಿಸಿದೆಯೆ? ಸಮಾಜದಲ್ಲಿರುವ ಯುವ ಸಮುದಾಯವನ್ನು ಮಾನಸಿಕವಾಗಿ, ದೈಹಿಕವಾಗಿ ಸಮರ್ಥವಾಗಿ ನಿರ್ಮಿಸುವುದು ಯಾರ ಜವಾಬ್ದಾರಿ, ಹೊಣೆಗಾರಿಕೆ? ಇವು ನಮ್ಮ ಮುಂದಿರುವ ಬಹಳ ಗಂಭೀರವಾದ ಪ್ರಶ್ನೆಗಳಾಗಿವೆ.

'ಕರ್ನಾಟಕದ ಯುವ ಸಮುದಾಯದ ಸವಾಲು-ಸಾಧ್ಯತೆ' ಕುರಿತ ಚರ್ಚೆ ಎಂದರೆ, 'ಯುವ ಸಮುದಾಯವನ್ನು ಒಳಗೊಂಡ ವರ್ತಮಾನದ ಶೈಕ್ಷಣಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಸಂಗತಿಗಳ ಕುರಿತ ಆತ್ಮಾವಲೋಕನದ, ಆತ್ಮವಿಮರ್ಶೆ'ಯ ಜಿಜ್ಞಾಸೆಯೇ ಆಗಿದೆ. ಪ್ರಸ್ತುತ ಬಹುತೇಕ ಯುವ ಸಮುದಾಯ ಮಾನಸಿಕವಾಗಿ, ಬೌದ್ಧಿಕವಾಗಿ ಹಾಗೂ ಭೌತಿಕವಾಗಿ; ಜಾತಿ, ಧರ್ಮ, ಭಾಷೆ, ರಾಜಕೀಯದ ನೆಲೆಯಲ್ಲಿ ಭಿನ್ನ ಭಿನ್ನ ಸ್ವರೂಪದಲ್ಲಿ ಛಿದ್ರಗೊಂಡ ಹಾಗೂ ಛಿದ್ರೀಕರಿಸಲ್ಪಟ್ಟ ಸಮುದಾಯವಾಗಿದೆ. ಇಂತಹ ಸಂಕೀರ್ಣ ಸನ್ನಿವೇಶದಲ್ಲಿ, ಯಾವ ಸಮುದಾಯದ ಸವಾಲು-ಸಾಧ್ಯತೆಗಳನ್ನು ಕುರಿತು ಮಾತನಾಡಬೇಕು? ಎಂಬುದು ಬಹುದೊಡ್ಡ ಸವಾಲಾಗಿದೆ. ಅಂದರೆ ವರ್ಗ-ಜಾತಿ-ಧರ್ಮಗಳ ನೆಲೆಗಟ್ಟಿನಲ್ಲಿ ಛಿದ್ರಗೊಂಡಿರುವ ಅಂದರೆ, 'ಬಡವ-ಶ್ರೀಮಂತ, ನಗರ-ಗ್ರಾಮೀಣ, ಉದ್ಯೋಗಿ- ನಿರುದ್ಯೋಗಿ, ಅಕ್ಷರಸ್ಥ-ಅನಕ್ಷರಸ್ಥ, ಮೇಲ್ಜಾತಿ-ಕೆಳಜಾತಿ, ಹಿಂದೂ-ಮುಸ್ಲಿಂ ಇತ್ಯಾದಿಯಾಗಿ ವರ್ಗೀಕರಿಸಲ್ಪಟ್ಟಿರುವ ಇವುಗಳಲ್ಲಿ ಯಾವ ಯುವ ಸಮುದಾಯದ ಬಗ್ಗೆ ಮಾತನಾಡಬೇಕು? ಭಿನ್ನ ಸ್ವರೂಪದಲ್ಲಿ ಛಿದ್ರಗೊಂಡಿರುವ ಯುವ ಸಮುದಾಯವು ತಮ್ಮ ಮುಂದಿರುವ ಸಮಸ್ಯೆ, ಸವಾಲುಗಳನ್ನು ಒಂದೇ ರೀತಿಯಲ್ಲಿ ಸ್ವೀಕರಿಸುತ್ತಾವೆಯೇ? ತಮ್ಮನ್ನು ಹಿಡಿದಿಟ್ಟಿರುವ ಎಲ್ಲೆ, ಕಟ್ಟುಪಾಡುಗಳನ್ನು ಮೀರಿ ಒಟ್ಟು ಮಾನವ

ಸಮಾಜ, ದೇಶದ ಹಿತದೃಷ್ಟಿಯಲ್ಲಿ ವಿಶಾಲವಾಗಿ ಯೋಚಿಸುವಷ್ಟರಮಟ್ಟಿಗೆ ಯುವ ಸಮುದಾಯ ಬೌದ್ಧಿಕವಾಗಿ ಸದೃಢವಾಗಿದೆಯೆ? ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವ ಹೊಸ



ಸಾಧ್ಯತೆಯ ಮಾರ್ಗವಿದೆಯೆ? ಎಂಬಂತಹ ಸಮಸ್ಯೆಗಳು ಮುಖಾಮುಖಿಯಾಗುತ್ತವೆ. ಸಂಕೀರ್ಣವಾಗಿರುವ ಈ ಎಲ್ಲಾ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಸ್ಥೂಲವಾಗಿ ಹೇಳುವುದಾದರೆ, ಇಂದಿನ ವ್ಯವಸ್ಥೆಯನ್ನು ದಿಟ್ಟತನದಿಂದ ಪ್ರಶ್ನಿಸುವುದು ಹೇಗೆ? ಎಂಬುದು ಯುವ ಸಮುದಾಯದ ಮುಂದಿರುವ ಬಹು ಮುಖ್ಯ ಸವಾಲು' ಹಾಗೂ ವ್ಯವಸ್ಥೆಯನ್ನು ಪ್ರಶ್ನಿಸದೆ ಬೇರೆ ದಾರಿಯಿಲ್ಲ ಎಂಬುದು 'ಸಾಧ್ಯತೆ' ಮಾರ್ಗವಾಗಿದೆ.

ಇಂದಿನ ಯುವ ಸಮುದಾಯದ ಮುಂದೆ ಅಸಂಖ್ಯಾತ 'ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಧಾರ್ಮಿಕ' ಸವಾಲುಗಳಿವೆ. ಈ ಸವಾಲುಗಳನ್ನು ಚರ್ಚಿಸುವ ಪೂರ್ವದಲ್ಲಿ ನಮ್ಮನ್ನು ಪ್ರತಿನಿಧಿಸುತ್ತ(ಆಳುತ್ತಿರುವ?) ಬಂದಿರುವ ಪ್ರಭುತ್ವಗಳಿಗೆ ಕೆಲವು ಸಂವಿಧಾನಬದ್ಧವಾದ ಪ್ರಶ್ನೆಗಳನ್ನು ಕೇಳಬೇಕಾಗಿದೆ. ಅವುಗಳು :

೧. ೧೯೫೦ ಜನವರಿ ೨೬ರಂದು ಭಾರತ ಸಂವಿಧಾನವನ್ನು ಅನುಷ್ಠಾನಗೊಳಿಸಿ ಎಪ್ಪತ್ತು ವರ್ಷಗಳನ್ನು ಪೂರೈಸುತ್ತಿರುವ ಈ ಹೊತ್ತಿನಲ್ಲಿ ನಮ್ಮನ್ನು ಪ್ರತಿನಿಧಿಸುತ್ತಿರುವ ಪ್ರಭುತ್ವಗಳಿಗೆ, ಭಾರತ ಸಂವಿಧಾನದ 'ಪ್ರಸ್ತಾವನೆ' ಹೇಳುವ ಹಾಗೆ : "ಭಾರತದ ಪ್ರಜೆಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದೀ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ರೂಪಿಸುವುದಕ್ಕಾಗಿ : ಭಾರತದ ಎಲ್ಲಾ ಪ್ರಜೆಗಳಿಗೆ(ಇದರಲ್ಲಿ ಬಹಳ ಮುಖ್ಯವಾಗಿ ಯುವ ಸಮುದಾಯವೂ ಬರುತ್ತದೆ) ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು" ಕಲ್ಪಿಸಿಕೊಡಲಿಕ್ಕೆ ನಮಗೆ ಸಾಧ್ಯವಾಗಿದೆಯೆ?

9. ಸಂವಿಧಾನದ ಪ್ರಸ್ತಾವನೆಯೆ ಹೇಳುವಂತೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವೆಂದರೆ, "ಹಿಂದುಳಿದವರ, ಬಡವರ, ದುರ್ಬಲರ, ತುಳಿತಕ್ಕೆ ಮತ್ತು ಶೋಷಣೆಗೆ ಒಳಪಟ್ಟ ಅಸಹಾಯಕರನ್ನು ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮೇಲಕ್ಕೆತ್ತಲು ಶಾಸನಗಳನ್ನು, ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ರೂಪಿಸಿ ಅವುಗಳನ್ನು ಜಾರಿಗೊಳಿಸುವುದು. ಬಡತನ, ಹಸಿವು, ನಿರುದ್ಯೋಗದಂತಹ ಜ್ವಲಂತ ಸಮಸ್ಯೆಗಳನ್ನು ನಿರ್ಮೂಲನೆ ಮಾಡಲು ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸಲು" ನಮಗೆ ಸಾಧ್ಯವಾಗಿದೆಯೆ?

೩. ಸಂವಿಧಾನದಲ್ಲಿರುವ 'ಮಾನವನ ಮೂಲಭೂತ ಹಕ್ಕು'ಗಳಲ್ಲಿ ಹೇಳಿರುವ ಹಾಗೆ "ಪ್ರತಿಯೊಬ್ಬರಿಗೂ ಕೆಲಸ ಮಾಡುವ, ಉದ್ಯೋಗ ಆರಿಸಿಕೊಳ್ಳುವ, ಆಹಾರ, ಬಟ್ಟೆ, ವಾಸಕ್ಕೆ ಮನೆ, ಶಿಕ್ಷಣ ಪಡೆಯುವ ಹಕ್ಕುಗಳನ್ನು ಕಲ್ಪಿಸಿಕೊಡಲಾಗಿದೆಯೆ? ಈ ಎಲ್ಲವೂ ನಮ್ಮನ್ನು ಪ್ರತಿನಿಧಿಸುವ (ನಮ್ಮನ್ನಾಳುವ) ಸರ್ಕಾರಗಳ ಜವಾಬ್ದಾರಿ, ಕರ್ತವ್ಯ ಎಂದು ನಮ್ಮ ಸಂವಿಧಾನ ಹೇಳುತ್ತದೆ. ಈವರೆಗೆ ನಮ್ಮನ್ನು ಪ್ರತಿನಿಧಿಸಿದ, ಪ್ರತಿನಿಧಿಸುತ್ತಿರುವ ಪ್ರಭುತ್ವಗಳಿಗೆ ಇವುಗಳನ್ನು ಆಗು ಮಾಡಲು ಸಾಧ್ಯವಾಗಿದೆಯೆ?

೪. ಭಾರತದ ಸಂವಿಧಾನದ ಪ್ರಸ್ತಾವನೆಯ ಆರಂಭದ ಮಾತಾಗಿರುವ "ಭಾರತದ ಪ್ರಜೆಗಳಾದ ನಾವು" ಎಂಬ ವಿಶಾಲ ಭಾವನೆಯನ್ನು ಅಂದರೆ, ಎಲ್ಲ ಬಗೆಯ



ಜಾತಿ, ಮತ, ಧರ್ಮ, ಭಾಷೆ, ಪಂಥಗಳನ್ನು ಮೀರಿ ನಾವೆಲ್ಲರು ಭಾರತೀಯರು ಎನ್ನುವ ಏಕೀಕೃತ ಭಾವವನ್ನು ಸಮಸ್ತ ನಾಗರೀಕರಲ್ಲಿಯೂ ಕಳೆದ ಎಪ್ಪತ್ತು ವರ್ಷಗಳಲ್ಲಿ ಮೂಡಿಸಲಿಕ್ಕೆ ನಮಗೆ ಸಾಧ್ಯವಾಗಿದೆಯೆ?

ಹೆಜ್ಜೆ ಹೆಜ್ಜೆಗೂ ಸಂವಿಧಾನವನ್ನು ಉಲ್ಲಂಘಿಸುತ್ತಿರುವ ನಾವು ಒಂದರ್ಥದಲ್ಲಿ ಸಂವಿಧಾನವನ್ನು ಅರ್ಥಮಾಡಿಕೊಳ್ಳದ, ಅದರ ಮಾತು ಕೇಳದ ಭಾರತೀಯರಾಗಿದ್ದೇವೆ. ಗಂಭೀರವಾದ ಮೇಲಿನ ಪ್ರಶ್ನೆಗಳನ್ನು ಬಿಡಿಸಿಕೊಳ್ಳದ ಹೊರತು, ಯುವ ಸಮುದಾಯದ ಮುಂದಿರುವ ಸಮಸ್ಯೆ-ಸವಾಲು, ಅವುಗಳ ಪರಿಹಾರ-ಸಾಧ್ಯತೆಗಳನ್ನು ಅರ್ಥೈಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ ಎನಿಸುತ್ತದೆ. ಏಕೆಂದರೆ, ರೋಗದ ಮೂಲವನ್ನು ಪತ್ತೆಹಚ್ಚದೆ ಚಿಕಿತ್ಸೆ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿಯೇ ಅಂಬೇಡ್ಕರ್ ಅವರು : "ಭಾರತ ಸ್ವಾತಂತ್ರ್ಯವಾದರಷ್ಟೇ ಸಾಲದು, ಭರತ ಖಂಡದಲ್ಲಿ ಜನಿಸಿದ ಸಮಸ್ತ ಭಾರತೀಯರೂ ಸಮಾನ ಹಕ್ಕುಳ್ಳವರಾಗಬೇಕು" ಎಂದು ಹೇಳಿದ್ದು.

"ಯುವ ಸಮಯದಾಯ" ಎಂಬುದನ್ನು ಈ ರೀತಿ ಅರ್ಥೈಸಿಕೊಳ್ಳಬಹುದು ಎನಿಸುತ್ತದೆ. : "ಸ್ವತಂತ್ರ ಆಲೋಚನೆ, ಚಿಂತನೆ, ವಿಚಾರ ಅಭಿವ್ಯಕ್ತಿಯುಳ್ಳ ಮಾನಸಿಕತೆಯನ್ನು ಒಳಗೊಂಡಂತೆ, ಯಾವುದೇ ಸ್ವರೂಪದ ಭ್ರಷ್ಟಾಚಾರ, ಗುಲಾಮಗಾರಿಕೆಗೆ ಬಲಿಯಾಗದ; ಜಾತೀಯತೆ, ಅಸ್ಪೃಶ್ಯತೆ, ಅನ್ಯಾಯ, ಅಸಮಾನತೆ, ದೌರ್ಜನ್ಯ, ದಬ್ಬಾಳಿಕೆಯ ವಿರುದ್ಧ ಪ್ರತಿರೋಧದ ಗುಣವಿರುವ; ಮೌಢ್ಯ, ಕಂದಾಚಾರ, ಧರ್ಮಾಂಧತೆ, ಕೋಮುವಾದ, ಜನಾಂಗೀಯ ದ್ವೇಷವನ್ನು ನಿಷ್ಠೂರವಾಗಿ ಖಂಡಿಸುವ; ಸಾಮಾಜಿಕ ಹೊಣೆಗಾರಿಕೆ, ಜವಾಬ್ದಾರಿಯ ಅರಿವಿರುವ; ಪ್ರಶ್ನಿಸುವ, ಪ್ರತಿಭಟಿಸುವ, ಅಭಿವ್ಯಕ್ತಿಸುವ ಸ್ವಾಭಿಮಾನದ ವ್ಯಕ್ತಿತ್ವವನ್ನು ಎಲ್ಲಾ ಸಂದರ್ಭದಲ್ಲೂ ಕಾಪಾಡಿ ಕೊಂಡಿರುವ; ಜಾತ್ಯತೀತ, ಧರ್ಮತೀತ, ಭಾಷತೀತ, ದೇಶತೀತ ಮೌಲ್ಯಾಧಾರಿತ ಪರಿಕಲ್ಪನೆಯಲ್ಲಿ ಸಹಿಷ್ಣು

ಧೋರಣೆಯುಳ್ಳ ಅಹಿಂಸಾವಾದಿ ಬುದ್ಧನ 'ಬಹುಜನ ಹಿತಾಯ ಬಹುಜನ ಸುಖಾಯ ಲೋಕಾನುಕಂಪಾಯ' ಎಂಬ ಬುಹತ್ವ ಸಂಸ್ಕೃತಿಯ ಭಾರತದ ಬಗೆಗೆ ಭರವಸೆವುಳ್ಳ; ವೈಚಾರಿಕ, ವೈಜ್ಞಾನಿಕ ಮನೋಭಾವವುಳ್ಳ" ಯುವ ಮನಸ್ಸು ಎಂಬುದಾಗಿದೆ. ಕಳೆದ ಎಪ್ಪತ್ತು ವರ್ಷಗಳಲ್ಲಿ ಈ ಸ್ವರೂಪದ ವ್ಯಕ್ತಿತ್ವವುಳ್ಳ ಯುವ ಸಮುದಾಯವನ್ನು ಕಟ್ಟುವಲ್ಲಿ ನಾವು ಯಶಸ್ವಿಯಾಗಿದ್ದೇವೆಯೆ? ಈ ಬಗೆಯ ಯುವ ಸಮುದಾಯ ರೂಪುಗೊಳ್ಳುವಂತಹ ವೈಚಾರಿಕ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕವಾದ ಆರೋಗ್ಯಕರ ವಾತಾವರಣ ನಮ್ಮಲ್ಲಿ ಉಳಿದಿದೆಯೆ? ಎಂಬುದು ನಾವೆಲ್ಲರೂ ಕೇಳಿಕೊಳ್ಳಬೇಕಾದ ನೈತಿಕ ಪ್ರಶ್ನೆಯಾಗಿದೆ. ಹಾಗಂತ ಸ್ವಲ್ಪಮಟ್ಟಿಗೂ ಸಾಧಿಸಲಾಗಿಲ್ಲ ಎಂಬುದು ಈ ಮಾತಿನ ಅರ್ಥವಲ್ಲ. ಬದಲಾಗಿ ಯಾವ ಪ್ರಮಾಣದಲ್ಲಿ ಸಾಧ್ಯವಾಗಿಸಬೇಕಾಗಿತ್ತೋ ಆ ಪ್ರಮಾಣದಲ್ಲಿ ಸಾಧಿಸಲಾಗಿಲ್ಲ ಎಂಬುದು ಈ ಮಾತಿನ ತುಡಿತವಾಗಿದೆ.

ಭಾರತ ಅಥವಾ ಕರ್ನಾಟಕದ 'ಪ್ರಜ್ಞಾವಂತ ಯುವ ಸಮುದಾಯ'ದ ಪಾಲಿಗೆ ಪ್ರಸ್ತುತ ಸಾಮಾಜಿಕವಾಗಿ ಉಲ್ಬಣಗೊಳ್ಳುತ್ತಿರುವ ಜಾತೀಯತೆ, ಅಸ್ಪೃಶ್ಯತೆ, ಧರ್ಮಾಂಧತೆ, ಕೋಮುವಾದ, ಅಸಹಿಷ್ಣುತೆ, ಅತ್ಯಾಚಾರ, ಭ್ರಷ್ಟಾಚಾರ, ಹಿಂಸಾತ್ಮಕ ರಾಜಕಾರಣ, ಅಸಮಾನತೆ, ಜನಾಂಗೀಯ ದ್ವೇಷ, ಹಸಿವು, ಬಡತನ, ನಿರುದ್ಯೋಗ, ಮೌಢ್ಯ,



ಕಂದಾಚಾರ ಮುಂತಾದ ಸಾಮಾಜಿಕ ಪಿಡುಗುಗಳನ್ನು ಮುಖಾಮುಖಿಯಾಗುತ್ತ, ಅವುಗಳ ವಿರುದ್ಧ ಬಂಡೇಳುವ, ಪ್ರಶ್ನಿಸುವ ಸವಾಲಿನ ವರ್ತಮಾನ ಇದಾಗಿದೆ. ಈ ಗಂಭೀರವಾದ ಸವಾಲುಗಳನ್ನು ಎದುರಿಸಲಿಕ್ಕೆ ಸಹಕಾರಿಯಾಗಬಲ್ಲ ಅರೋಗ್ಯಪೂರ್ಣವಾದ, ವೈಚಾರಿಕ ಅರಿವುಳ್ಳ ಶೈಕ್ಷಣಿಕ ವಾತಾವರಣ ನಮ್ಮ ನಡುವೆ ಉಳಿದಿದೆಯೇ? ವೈಚಾರಿಕವಾಗಿ, ವೈಜ್ಞಾನಿಕವಾಗಿ, ಸ್ವತಂತ್ರವಾಗಿ ಚಿಂತಿಸುವ, ಪ್ರಶ್ನಿಸುವ ಅರಿವನ್ನು ಮೂಡಿಸಬಲ್ಲ ಬೌದ್ಧಿಕ ಪರಿಸರ ಜೀವಂತವಾಗಿದೆಯೇ? ವಿವೇಕವನ್ನು ಮೂಡಿಸಿ ಪ್ರಜ್ಞೆಯನ್ನು ವಿಸ್ತರಿಸಬೇಕಿದ್ದ ವಿಶ್ವವಿದ್ಯಾಲಯಗಳಂತಹ ಶೈಕ್ಷಣಿಕ ಕೇಂದ್ರಗಳು ವಿದ್ಯಾರ್ಥಿ ಮನಸ್ಸುಗಳಲ್ಲಿ ಜಾತೀಯತೆ, ಕೋಮುವಾದ, ಜನಾಂಗೀಯ ದ್ವೇಷ ರಾಜಕಾರಣವನ್ನು ವ್ಯವಸ್ಥಿತವಾಗಿ ಬಿತ್ತುವ ಅಪಾಯಕಾರಿ ನೆಲೆಗಳಾಗಿ ಮಾರ್ಪಡುತ್ತಿದ್ದಾವೆಯೇ? ಈ ಎಲ್ಲಾ ಅಪಾಯಗಳಿಂದ ವಿದ್ಯಾರ್ಥಿ ಯುವ ಸಮುದಾಯ ಪಾರಾಗುವ, ತಮ್ಮನ್ನು ತಾವು ಕಾಪಾಡಿಕೊಳ್ಳುವ ಬಗೆ ಯಾವುದು ಎನ್ನುವುದು ಸಹಾ ಯುವ ಸಮುದಾಯದ ಮುಂದಿರುವ ಬಹುದೊಡ್ಡ ಸವಾಲುಗಳಾಗಿವೆ.

'ಅಹಂಕಾರವನ್ನು ತಣಿಸುದಾವುದೋ ಅದು ವಿದ್ಯೆ' ಎಂದು ಕುವೆಂಪು ಅವರು ಹೇಳಿದ ಮಾತಿನಂತೆ, ಇವತ್ತಿನ ಶಿಕ್ಷಣಕ್ಕೆ, ಯುವ ಸಮುದಾಯದ ಮನಸ್ಸನ್ನು ರೋಗಗ್ರಸ್ಥ ಮಾಡಿರುವ ಜಾತಿ, ಧರ್ಮ, ಕೋಮುವಾದ, ಮನುವಾದ ಇತ್ಯಾದಿ ಅಹಂಕಾರಗಳನ್ನು ನಿರಸನಗೊಳಿಸಿಕೊಳ್ಳಲಿಕ್ಕೆ ಸೂಕ್ತ ಮಾರ್ಗ ಸೂಚಿಸಲು ಸಾಧ್ಯವಾಗಿದೆಯೇ? ಅನಿಕೇತನ ತತ್ವ, ವಿಶ್ವಮಾನವ ಸಂದೇಶವನ್ನು ಸಾರಿದ ಕುವೆಂಪು ಅವರು : "ಪ್ರತಿಯೊಂದು ಮಗುವೂ ಹುಟ್ಟುತ್ತಲೆ ವಿಶ್ವಮಾನವ, ಬೆಳೆಯುತ್ತಾ ನಾವು ಅದನ್ನು ಅಲ್ಪಮಾನವ'ನನ್ನಾಗಿ ಮಾಡುತ್ತೇವೆ. ಹುಟ್ಟುವಾಗ 'ವಿಶ್ವಮಾನವ'ನಾಗಿಯೇ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ 'ಬದ್ದನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿಸಿ ಅವನನ್ನು 'ಬುದ್ಧ'ನನ್ನಾಗಿ ಅಂದರೆ ವಿಶ್ವಮಾನವನನ್ನಾಗಿ ಪರಿವರ್ತಿಸುವುದೆ ನಮ್ಮ ವಿದ್ಯೆ, ಸಂಸ್ಕೃತಿ, ನಾಗರೀಕತೆ ಎಲ್ಲದರ ಆದ್ಯ ಕರ್ತವ್ಯವಾಗಬೇಕು. ಲೋಕ ಉಳಿದು, ಬಾಳಿ ಬದುಕಬೇಕಾದರೆ ಪ್ರಪಂಚದ ಮಕ್ಕಳೆಲ್ಲ 'ಅನಿಕೇತನ'ರಾಗಬೇಕು. 'ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ' ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ, ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; ಮನುಜ ಮತ. ಆ ಪಥ ಈ ಪಥ ಅಲ್ಲ; ವಿಶ್ವಪಥ. ಆ ಒಬ್ಬರ ಈ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳ್ಳುವುದು. ಮಿತ ಮತದ ಆಂಶಿಕ ದೃಷ್ಟಿಯಲ್ಲ! ಭೌತಿಕ ಪಾರಮಾರ್ಥಿಕ ಎಂಬ ಭಿನ್ನ ದೃಷ್ಟಿಯಲ್ಲ, ಎಲ್ಲವನ್ನು ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ, 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು. ವರ್ಣಾಶ್ರಮವನ್ನು ತಿದ್ದುವುದಲ್ಲ ಅದನ್ನು ಸಂಪೂರ್ಣವಾಗಿ ತೊಲಗಿಸಬೇಕು. ಎಲ್ಲ ಮತಗಳಲ್ಲಿರುವ ಜಾತಿಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ, ವಿನಾಶಗೊಳಿಸ ಬೇಕು. ಯುವಕರು 'ನಿರಂಕುಶಮತಿಗಳಾಗಬೇಕು. ನಿರಂಕುಶಮತಿತ್ವ ಎಂದರೆ, ಸಂಯಮಪೂರ್ಣವಾದ ಬುದ್ಧಿ ಸ್ವಾತಂತ್ರ್ಯ ಯುವಕ ಸಹೋದರರೇ, ಯಾವ ಒಂದು

ಸಂಪ್ರದಾಯದ ಸಂಕೋಚಕ್ಕೂ ಸಿಕ್ಕಿಕೊಳ್ಳಬಾರದು. ಯಾವ ಒಂದು ಪಂಥದ ಇಕ್ಕಟ್ಟಿಗೂ ಒಳಗಾಗಬಾರದು. ಸರ್ವಧರ್ಮಗಳ ಸಾರವಾದ ಉದಾರ 'ದರ್ಶನ'ವೊಂದನ್ನು ಕಂಡು, ಕಟ್ಟಿಕೊಂಡು ಬಾಳಬೇಕು. ಜಾತಿ ಮತ ದೇಶ ಕಾಲಗಳ ಭೇದವಿಲ್ಲದೆ ಎಲ್ಲ ಮಹಾಪುರುಷರ ಜ್ಞಾನಗಂಗೆಗಳ ಮಂಗಳ ಸಂಗಮದಲ್ಲಿ ತೀರ್ಥಸ್ನಾನ ಮಾಡಿ ಪೂರ್ಣ ಜೀವನವನ್ನು ಪೂರ್ಣವಾಗಿ ಅನುಭವಿಸಬೇಕು. ನಿರಂಕುಶಮತಿಗಳಾಗಬೇಕಾದರೆ ದಾಸ್ಯಬುದ್ಧಿ ತೊಲಗಬೇಕು; ದಾಸ್ಯಬುದ್ಧಿ ತೊಲಗಬೇಕಾದರೆ ಸ್ವತಂತ್ರವಾಗಿ ಜೀವಿಸಲು ಪ್ರಯತ್ನಿಸಬೇಕು; ಎಂದರೆ, ಸ್ವಾವಲಂಬನೆ ಬೇಕು." ಎಂದು ಹೇಳಿದ ಆದರ್ಶಯುತವಾದ ಈ ಮೌಲ್ಯಗಳು ಇವತ್ತಿನ ಯುವ ಮನಸ್ಸುಗಳಿಗೆ ದಿಕ್ಸೂಚಿಯಾಗಬೇಕಿದೆ. ೧೯೭೪ ಡಿಸೆಂಬರ್ ೮ರಂದು ಕುವೆಂಪು ಅವರು ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವದ ಭಾಷಣದಲ್ಲಿ ಓದಿದ :

"ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ

ಬಡತನದ ಬುಡಮುಟ್ಟ ಕೀಳಬನ್ನಿ

ಮೌಢ್ಯತೆಯ ಮಾರಿಯನು ಹೊರದೂಡತನ್ನಿ

ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ

ಓ, ಬನ್ನಿ, ಸೋದರರೆ, ಬೇಗ ಬನ್ನಿ!

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ

ಮತಿಯಿಂದ ದುಡಿಯಿರೈ ಲೋಕ ಹಿತಕೆ

ಆ ಮತದ ಈ ಮತದ ಹಳೆಮತದ ಸಹವಾಸ

ಸಾಕಿನ್ನು ಸೇರಿರೈ ಮನುಜಮತಕೆ

ಓ, ಬನ್ನಿ, ಸೋದರರೆ, ವಿಶ್ವಪಥಕೆ!"

ಎಂಬೀ ಆಶಯಗಳನ್ನು ನಮ್ಮ ಸಮಾಜದಲ್ಲಿ ಸಾಧ್ಯವಾಗಿಸಿದ್ದೇವೆಯೇ? ಎಂಬ ಪ್ರಶ್ನೆಯ ಮೂಲಕ ಇವತ್ತಿನ ಯುವ ಸಮುದಾಯ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಕುವೆಂಪು ಅವರ ಈ ಮಾತುಗಳು ಅರ್ಥವಾಗದ ನಮಗೆ, ಇವತ್ತು ನಮ್ಮ ಮುಂದಿರುವ ಸವಾಲುಗಳಾಗಲಿ, ಸಾಧ್ಯತೆಯ ನೆಲೆಗಳಾಗಲಿ ಅರ್ಥವಾಗಲಿಕ್ಕೆ ಸಾಧ್ಯವಿಲ್ಲ

ಎನಿಸುತ್ತದೆ. ಬಹಳ ಸುಲಭವಾಗಿ ಸಿನಿಮಾ ನಾಯಕ, ನಾಯಕಿಯರು ಮಾದರಿಯಾಗುವ ನಮ್ಮ ಯುವ ಸಮುದಾಯಕ್ಕೆ ತಾವು ಓದುತ್ತಿರುವ ಬುದ್ಧ, ಬಸವಣ್ಣ, ಫುಲೆ, ಶಾಹು ಮಹಾರಾಜ, ನಾಲ್ವಡಿ ಕೃಷ್ಣರಾಜ ಒಡೆಯರ್, ನಾರಾಯಣಗುರು, ಅಂಬೇಡ್ಕರ್, ಭಗತ್ ಸಿಂಗ್, ರಮಾಬಾಯಿ, ಕುವೆಂಪು, ಲಂಕೇಶ್, ದೇವನೂರ ಮಹಾದೇವ, ಸಾಕ್ರಟೀಸ್, ಅರಿಸ್ಟಾಟಲ್, ಗೆಲಿಲಿಯೋ, ಪ್ಲೇಟೊ, ನೆಲ್ಸನ್ ಮಂಡೇಲಾ, ಅಬ್ರಹಾಂ ಲಿಂಕನ್, ಜಾನ್ ಎಫ್. ಕೆನಡಿ, ಮಾರ್ಟಿನ್ ಊಥರ್ ಕಿಂಗ್ ಮುಂತಾದ ಸಮಾಜ ಚಿಂತಕರು ಆದರ್ಶವಾಗುವುದಿಲ್ಲ ಯಾಕೆ? ಈ ಎಲ್ಲರ ವಿಚಾರಗಳನ್ನು ಯುವ ಸಮುದಾಯಕ್ಕೆ ಮುಟ್ಟಿಸುವಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆ ಸೋತಿದೆಯೆ? ಹಾಗಾದರೆ ಅದಕ್ಕಿರುವ ತೊಡಕುಗಳು ಯಾವುವು? ಆ ತೊಡಕುಗಳನ್ನು ಬಿಡಿಸಲಿಕ್ಕೆ ನಾವು ಪ್ರಯತ್ನಿಸಿದ್ದೇವೆಯೇ? ಈ ಸ್ವರೂಪದ ಜ್ವಲಂತ ಸವಾಲುಗಳನ್ನು ಎದುರಿಸುತ್ತಿರುವ ಇಂದಿನ ಯುವ ಸಮುದಾಯ ತನ್ನ ಬಿಡುಗಡೆಯ ಸಾಧ್ಯತೆಯ ಭರವಸೆಯನ್ನು ಆತ್ಮವಿಮರ್ಶೆಯ ಮೂಕ ಮನವರಿಕೆ ಮಾಡಿಕೊಳ್ಳಬೇಕಿದೆ.



ಇಂದಿನ ಭ್ರಷ್ಟರಾಜಕಾರಣ, ಕೋಮುವಾದ, ಧರ್ಮಾಂಧತೆ, ಜಾತಿವಾದಗಳು ಪ್ರಸ್ತುತ ಸಮಾಜ, ಸಮುದಾಯದ ಮನಸ್ಸುಗಳನ್ನು ಮಾನಸಿಕವಾಗಿ, ಭೌತಿಕವಾಗಿ ಭ್ರಷ್ಟಗೊಳಿಸುತ್ತಿವೆ. ಸ್ವತಂತ್ರ, ಸ್ವಾವಲಂಬಿ ಧೋರಣೆಯನ್ನೇ ನಾಶ ಮಾಡುತ್ತಿವೆ. ಇದು ಒಂದು ರೀತಿಯಲ್ಲಿ ಇಡೀ ಮಾನವ ಕುಲ ತನ್ನನ್ನು ತಾನೇ ಆತ್ಮಹತ್ಯೆಗೆ ಬಲಿತೆತ್ತುಕೊಳ್ಳುವಂತೆ ಮಾಡುವ ಹುನ್ನಾರವಾಗಿದೆ. ಈ ಹುನ್ನಾರದ ಹಿಂದಿರುವ ಅಮಾನವೀಯ ಸಂಚುಗಳನ್ನು ಬೆತ್ತಲುಗೊಳಿಸುವ, ಆ ಮೂಲಕ ಜನಸಾಮಾನ್ಯರಲ್ಲಿ ಎಚ್ಚರ ಮೂಡಿಸುವ ತುರ್ತು ಇದೆ. ದುರಂತವೆಂದರೆ, ಈ ಬಗೆಯ ಎಚ್ಚರ ಮೂಡಿಸುವ ನೈತಿಕ ಹೊಣೆಗಾರಿಕೆಯನ್ನು ಹೊತ್ತುಕೊಳ್ಳಬೇಕಾಗಿದ್ದ ಯುವ ಸಮುದಾಯವೇ ಇಂದು, ಜಾತಿವಾದ ಬಿತ್ತುತ್ತಿರುವ ಕೋಮುವಾದಕ್ಕೆ ಬಲಿಯಾಗಿ 'ಮಾನಸಿಕ ಗುಲಾಮಗಾರಿಕೆ' ಎಂಬ ಮಾನಸಿಕ ರೋಗದಿಂದ ನರಳುತ್ತಿದೆ. ಯಾವ ಮಾನಸಿಕ ರೋಗದಿಂದ ಯುವ ಸಮುದಾಯ ನರಳುತ್ತಿದೆಯೋ, ಆ ಯುವ ಸಮುದಾಯಕ್ಕೆ ಸ್ವತಃ ನಾನು ಮಾನಸಿಕ ರೋಗದಿಂದ ಬಳಲುತ್ತಿದ್ದೇನೆ ಎಂಬಂತಹ ಅರಿವೇ ಇಲ್ಲದಾಗಿದೆ. ಅಕ್ಷರಮಟ್ಟಿಗೆ ಅದು ತನ್ನ ಜಾಗೃತಾವಸ್ಥೆಯನ್ನು ಕಳೆದುಕೊಂಡಿದೆ. ಹೀಗೆ ಎಚ್ಚರ ತಪ್ಪಿರುವ ಯುವ ಸಮುದಾಯವಿರುವ ಯಾವುದೇ ಸಮಾಜದ ಭವಿಷ್ಯ ಉಜ್ವಲಗೊಳ್ಳಲಿಕ್ಕೆ ಸಾಧ್ಯವೇ? ಮೊದಲ ಆದ್ಯತೆ ಎಂದರೆ, ಹೀಗೆ ಪ್ರಜ್ಞಾಹೀನ ಸ್ಥಿತಿಯಲ್ಲಿರುವ ರೋಗಗ್ರಸ್ಥ ಯುವ ಸಮುದಾಯವನ್ನು ಮಂಪರಿನಿಂದ ಬಡಿದೆಬ್ಬಿಸಿ ಜಾಗೃತಗೊಳಿಸುವುದಾಗಿದೆ. ಈ ಮಾನಸಿಕ ಗುಲಾಮಗಾರಿಕೆಯನ್ನು ಕುರಿತು ಬಿ. ಬಸವಲಿಂಗಪ್ಪನವರು, 'ತಲೆಯ ಮೇಲೆ ಮಲ ಹೊರುವ ಪದ್ಧತಿ'ಯನ್ನು ನಿಷೇಧಿಸಿ ಕನೂನು ಜಾರಿಗೆ ತಂದ ತರುವಾಯದಲ್ಲಿ "ಈ ಕಾನೂನು ಭೌತಿಕವಾಗಿ ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ನಿಷೇಧಿಸಬಹುದು. ಆದರೆ ಕಣ್ಣಿಗೆ ಕಾಣದಿರುವ,

ಮೆದುಳುಗಳಲ್ಲಿ ಜಾತಿ, ಕೋಮುವಾದದ ಮಲ ಹೊತ್ತು ತಿರುಗುತ್ತಿರುವುದನ್ನು ಯಾವ ಕಾನೂನಿನ ಮೂಲಕ ನಿಷೇಧಿಸಲಿಕ್ಕೆ ಸಾಧ್ಯ?" ಎಂದು ಪ್ರಶ್ನಿಸಿದ್ದು.

ಜಾತಿವಾದ, ಕೋಮುವಾದದ ವಿಷ ಬಿತ್ತುತ್ತಿರುವ ಮನುವಾದಿ ವ್ಯವಸ್ಥೆಯ ವಿರುದ್ಧ ಬಂಡೇಳುವುದು; ತಮ್ಮ ಮೆದುಳು, ಹೃದಯಗಳನ್ನು ಭ್ರಷ್ಟ ವ್ಯವಸ್ಥೆಗೆ ಅಡವಿಟ್ಟು ಮಾನಸಿಕ ಗುಲಾಮಗಾರಿಕೆಗೆ ಒಳಗಾಗದಂತೆ ತಮ್ಮನ್ನು ತಾವು ಕಾಪಾಡಿಕೊಳ್ಳುವುದು; ಭ್ರಷ್ಟ ರಾಜಕಾರಣಿಗಳ, ಧರ್ಮಾಂಧರ, ಕೋಮುವಾದಿಗಳ, ಜಾತಿವಾದಿಗಳ ಕೈಯೊಳಗಿನ ಅಸ್ತ್ರವಾಗದಂತೆ ಎಚ್ಚರವಹಿಸುವುದು; ಸದಾ ಜಾಗೃತರಾಗಿರುವುದು ಇಂದಿನ ಯುವ ಸಮುದಾಯದ ಮುಂದಿರುವ ಸಂಕೀರ್ಣವಾದ ಸವಾಲಾಗಿದೆ. ಏಕೆಂದರೆ, ಪಂಜಾಬಿನ ಕವಿ ಹೇಳಿರುವಂತೆ :

"ನಾನು ಎಲ್ಲಿಯೂ ಹೋಗಿರಲಿಲ್ಲ

ಯಾರೊಟ್ಟಿಗೂ ಮಾತನಾಡಿರಲಿಲ್ಲ

ನನ್ನ ಕೈಯಲ್ಲಿ ಕೊಳಲಿತ್ತು

ನನ್ನ ಹೆಗಲ ಮೇಲೆ ಕಂಬಳಿ ಇತ್ತು

ಆದರೆ ಈಗ,

ನನ್ನ ಕೈಯಲ್ಲಿ ಕೋವಿ ಕೊಟ್ಟವರು ಯಾರು?

ನನ್ನ ಹೆಗಲ ಮೇಲೆ ನನ್ನದೇ ಹೆಣ ಇಟ್ಟವರು ಯಾರು?"

-ಎಂಬ ಭಯಾನಕ ಸ್ಥಿತಿ ಇವತ್ತು ನಮ್ಮ ಕಣ್ಣ ಮುಂದಿದೆ. ಈ ಸವಾಲಿನ ಸ್ಥಿತಿಯಿಂದ ಹೊರ ಬರುವ ಸಾಧ್ಯತೆಯನ್ನು ಕುರಿತು ಡಾ. ಅಂಬೇಡ್ಕರ್ ಅವರು ಹೇಳಿದ್ದು 'ಕಲ್ಟಿವೇಷನ್ ಆಫ್ ದಿ ಮೈಂಡ್' ಅಂದರೆ, ನಮ್ಮ ಮನಸ್ಸನ್ನು ಸ್ವಚ್ಚಗೊಳಿಸಿಕೊಂಡು ಅದರ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವುದು ಎಂದು ಹಾಗೂ ಒಂದು ಜನಾಂಗದ ರಾಜಕೀಯ ವಿಕಾಸ ಸಾಧ್ಯವಾಗಬೇಕಾದರೆ ಅದಕ್ಕೆ ಮುನ್ನ ಆ ಜನಾಂಗದ ಮನಸ್ಸು ಮತ್ತು ಅಂತರಂಗಗಳು ದಾಸ್ಯದಿಂದ ಬಿಡುಗಡೆ ಹೊಂದಲೇಬೇಕು' ಎಂದು.

ತನ್ನದಲ್ಲದ ಜಾತಿ, ಧರ್ಮ, ಸಮುದಾಯ, ಸಂಸ್ಕೃತಿ, ಭಾಷೆ, ಆಹಾರ ಪದ್ಧತಿವುಳ್ಳವರನ್ನು ದ್ವೇಷಿಸುವ, ಹಿಂಸಿಸುವ, ಹಲ್ಲೆ ಮಾಡುವ, ಕೊಲ್ಲುವಂತಹ ವಿಕೃತ ಕೋಮುವಾದಿ ಅಮಲಿಗೆ ಯುವ ಮನಸ್ಸುಗಳು ಇಂದು ಬಲಿಯಾಗುತ್ತಿವೆ. ತಮ್ಮ ಮೆದುಳಿಗೆ ಅಮಲಿನ ವಿಷ ತುಂಬಿರುವುದು ಈ ಜಾತಿವಾದ, ಕೋಮುವಾದ ಎಂಬ ಕನಿಷ್ಠ ಅರಿವೂ ಇಲ್ಲದ ಮಂಪರಿಗೆ ಯುವ ಸಮುದಾಯ ಒಳಗಾಗಿದೆ. ಇದರಿಂದ ಹೊರಬರದ ಹೊರತು ಯುವ ಸಮುದಾಯಕ್ಕೆ ತನ್ನ ಮುಂದಿರುವ ಸವಾಲುಗಳನ್ನು ಅರ್ಥೈಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಅಮೇರಿಕಾದ ವಿಚಾರವಾದಿ ರಾಬರ್ಟ್ ಜಿ. ಇಂಗರ್‌ಸಾಲ್' ಹೇಳುವ : “ನನ್ನ ದೇಹದಲ್ಲಿರುವ ಪ್ರತಿಯೊಂದೂ ತೊಟ್ಟು ರಕ್ತದಿಂದಲೂ ನಾನು ಎಲ್ಲ ರೀತಿಯ ದಬ್ಬಾಳಿಕೆಯನ್ನು, ಸರ್ವಾಧಿಕಾರವನ್ನು ದ್ವೇಷಿಸುತ್ತೇನೆ. ನಾನು ಸ್ವಾತಂತ್ರ್ಯವನ್ನು ಪ್ರೀತಿಸುತ್ತೇನೆ” ಎಂಬ ಮಾತಿನ ಆಶಯದಂತೆ, ನಮ್ಮ ಸುತ್ತಲಿನ ಎಲ್ಲ ಸ್ವರೂಪದ ಶೋಷಣೆಯನ್ನು ಪ್ರಶ್ನಿಸುವ ವೈಚಾರಿಕ ಪ್ರಜ್ಞೆಯನ್ನು ಬೆಳೆಸಿಕೊಂಡಾಗ ಮಾತ್ರ ಯಾವುದೇ ರೀತಿಯ ಸವಾಲುಗಳನ್ನು ಅರ್ಥೈಸಿಕೊಂಡು ಸಾಧ್ಯತೆಯನ್ನು ಕಂಡುಕೊಳ್ಳಲಿಕ್ಕೆ ಸಾಧ್ಯ.

# ಕೃಷಿ ಮತ್ತು ನೀರಾವರಿ

**ಭೂಮಿ-ಜ-ಬೆಳೆ ಸದ್ಬಳಕೆ**

**- ರಾಜಶೇಖರ ನಿಂಬರ**

ಓಂ ಸಹನಾವವತು ಸಹನಾಭುನಕ್ತು

ಸಹ ವೀರ್ಯಂ ಕರವಾವಹೈ

ತೇಜಸ್ವಿ ನಾವಧೀತ ಮಸ್ತು ಮಾವಿದ್ವಿ ಪಾವ ಹೈ

ಓಂ ಶಾಂತಿ, ಶಾಂತಿ, ಶಾಂತಿ

ಇಂದಿನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಗೋಷ್ಠಿ ೫ರ ಕೃಷಿ ಗೋಷ್ಠಿಯಲ್ಲಿ ಮೊದಲಿಗೆ ಕೃಷಿ ಗುರುಗಳಾದ ಪದ್ಮಶ್ರೀ ಸುಭಾಷ ಪಾಳೇಕರ ಅವರಿಗೆ ನಮನಗಳನ್ನು ಅರ್ಪಿಸಿ ಗೋಮಾತೆಗೆ ವಂದಿಸಿ, ಅನಂತ ಕೋಟಿ ಸೂಕ್ಷ್ಮ ಜೀವಾಣುಗಳನ್ನು ಹೃದಯದಲ್ಲಿ ಸ್ಮರಿಸಿ ಕೃಷಿ ಗೋಷ್ಠಿಯಲ್ಲಿ ನನಗೆ ಕೊಟ್ಟಿರುವ ವಿಷಯಗಳು ಮೂರು, ೧. ಭೂಮಿ, ೨. ಬೀಜ, ೩.ಬೆಳೆಗಳ ಸದ್ಬಳಕೆ. ಈ ವಿಷಯಗಳ ಬಗ್ಗೆ ಮಾತಾಡುವ ಪೂರ್ವ ನಾನು ನನ್ನ ಬಗ್ಗೆ ಪರಿಚಯ ಮಾಡಿಕೊಳ್ಳುವೆ. ನಾನು ರಾಜಶೇಖರ ರೇವಣಸಿದ್ದಪ್ಪ ನಿಂಬರಗಿ ಊರು ಬೆನಕನಹಳ್ಳಿ, ತಾಲ್ಲೂಕು ಇಂಡಿ, ಜಿಲ್ಲೆ ವಿಜಯಪುರ, ಶಿಕ್ಷಣ ೭ನೇ ಇಯತ್ತೆ, ೧೩ ವರ್ಷದವನಿದ್ದಾಗಲೆ ಕೃಷಿ ಆರಂಭಿಸಿದ್ದು, ಇಂದಿಗೆ ೪೪ ವರ್ಷವಾಯಿತು ಕೃಷಿಯಲ್ಲಿ ತೊಡಗಿ.

೫ ಎಕರೆ ಬೆಳೆಗಳು, ಲಿಂಬೆ, ಟಿಕ್ಕು, ಟೆಂಗು, ಬಾಳೆ, ಕಬ್ಬು, ನುಗ್ಗೆ, ಮಾವು, ಸೀತಾಫಲ, ೧೫ ಎಕರೆ ಜೋಳ, ೫ ಎಕರೆ ಕಡಲೆ, ೫ ಎಕರೆ ಸಿರಿಧಾನ್ಯ ಬೆಳೆಗಳು. ಮನೆಗಾಗುವಷ್ಟು ಸೆಜ್ಜೆ, ಗೋವಿನ ಜೋಳ, ಹೆಸರು, ಮುಕಣಿ, ಅಲಸಂದೆ, ಎಳ್ಳು, ಅಗಶೆ, ಮತ್ತು ತರಕಾರಿ ಬೆಳೆಗಳು ಒಟ್ಟು ೩೦ ಎಕರೆ ಕೃಷಿ ಕ್ಷೇತ್ರ ಸಂಪೂರ್ಣ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ.

**ಜಾನುವಾರಗಳು :**

೨ ಆಕಳು, ೨ ಎಮ್ಮೆ, ೧೫ ಆಡುಗಳು, ೨ ಕರುಗಳು, ೧೦ ಕೋಳಿಗಳು

**ಕುಟುಂಬ**

ಮಕ್ಕಳು ೫ ಜನ, ೩ ಹೆಣ್ಣು ಮಕ್ಕಳು, ೨ ಗಂಡು ಮಕ್ಕಳು, ಮಕ್ಕಳಿಗೆ ಶಿಕ್ಷಣದ ಜೊತೆಗೆ ಕೃಷಿಯಲ್ಲಿ ತೊಡಗಿಸಿ, ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿಕರನ್ನಾಗಿ (ನೌಕರಿಗೆ ಕಳಿಸಿಲ್ಲ) ಮಾಡಿದ್ದು ನೌಕರಿ ಮಾಡುವಂತಿಲ್ಲ. ಮಕ್ಕಳು ಉತ್ತಮ ಕೃಷಿಕರಾಗಿದ್ದಾರೆ.

ಈ ನೈಸರ್ಗಿಕ ಕೃಷಿ ಹ್ಯಾಂಗೆ ಆದಪ ಅಂದ್ರ, ಯಾವುದೇ ವಸ್ತುಗಳನ್ನು ಹೊರಗಿನಿಂದ



ತರದೆ ರಾಸಾಯನಿಕ ಗೊಬ್ಬರ, ಔಷಧಗಳನ್ನು ಬಳಸದೆ, ಜವಾರಿ ಬೀಜ, ಸಸಿಗಳನ್ನು ಬಳಸಿ ಟ್ರ್ಯಾಕ್ಟರ್‌ಗಳಂಥ ಭಾರವಾದ ಯಂತ್ರಗಳನ್ನು ಬಳಸದೆ, ನಮ್ಮ ಮನೆ ಬೀಜಗಳು, ನಮ್ಮ ಆಕಳ ಗೋಮೂತ್ರ, ಸಗಣಿಯಿಂದ ಗೊಬ್ಬರ ತಯಾರಿಸಿ, ನಮ್ಮ ಹೊಲದಲ್ಲಿ ಸಿಗುವ ಗಿಡ ತಪ್ಪಲಗಳಿಂದ ಔಷಧಿ ತಯಾರಿಸಿಕೊಂಡು, ಪೇಟೆಯಿಂದ ಏನನ್ನೂ ತರದೆ ಕೃಷಿಯನ್ನು ಮಾಡುವಂಥಾದ್ದು, ಸಕಲ ಜೀವಾತ್ಮರಿಗೆ ಲೇಸನು ಬಯಸುವ ಕೃಷಿ ಇದು.

ಹೀಗೆ ಕೃಷಿ ಮಾಡಿದಾಗ ಮಾತ್ರ ರೈತ ಆದರ್ಶ ರೈತನಾಗಿ ಭೂಮಿಗೆ ವಿಷ ಉಣಿಸದೆ, ತಾನು ವಿಷ ಉಣ್ಣದೆ, ಮತ್ತೊಬ್ಬರಿಗೂ ವಿಷ ಉಣಿಸದೆ, ಆಹಾರ, ನೀರು, ಗಾಳಿ, ಪರಿಸರಕ್ಕೆ ಮೀಥೇನ್ ಬಿಡದೆ, ಜಾಗತೀಕ ತಾಪಮಾನ ಹೆಚ್ಚಿಸದೆ, ದೇಶದ ಆರ್ಥಿಕ ಸಬಲತೆಗೆ ದುಡಿವನೆ ರೈತ. ಇನ್ನು ಅನೇಕ ವಿಷಯಗಳನ್ನು ಮಾತಾಡಲು ಇದೆ. ಸಮಯ ೧೫ ನಿಮಿಷ ಕೊಟ್ಟಿದ್ದಾರೆ. ಅನಿವಾರ ವಿಷಯಕ್ಕೆ ಬರುವೆ.

ಮೊದಲು ನಾನು ಕೃಷಿ ಮಾಡುವಾಗ ರಾಸಾಯನಿಕ ಗೊಬ್ಬರಗಳನ್ನು ೧, ೨, ೫, ೧೦ ಪಾಕೇಟ್ ತರುತ್ತಿರಲಿಲ್ಲಾ. ೧೦೦, ಚೀಲ DAP, ೧೦೦ ಚೀಲ ಯುರಿಯಾ ಹೀಗೆ ೧೦೦, ೧೦೦, ಚೀಲ ತಂದು ಭೂಮಿಗೆ ಹಾಕುತ್ತಿದ್ದೆ, ೧ ಲೀಟರ್, ೨ ಲೀಟರ್ ಔಷಧಿ ತರುತ್ತಿರಲಿಲ್ಲಾ ೫ ಲೀಟರ್, ೧೦ ಲೀಟರ್ ಕ್ಯಾನುಗಳಂತೆ ಔಷಧಿ ತರುತ್ತಿದ್ದೆ. ಹೆಸರಾಂತ ಕಂಪನಿಗಳ ಬೀಜಗಳನ್ನು ತಂದು ಅನೇಕ ಕೈಪಿಡಿಗಳನ್ನು ಓದಿ ಅಭ್ಯಾಸಮಾಡಿ ಕೃಷಿ ಮಾಡುತ್ತಿದ್ದೆ. ೪೦ ಆಳುಗಳಿಂದ ಕೆಲಸ ಮಾಡಿಸಿ, ೨-೩ ಊರುಗಳ ದಿಡ್ಡಿ ಗೊಬ್ಬರ ಹೊಡೆಯುತ್ತಿದ್ದೆ. ಸಾಕಷ್ಟು ಬೆಳೆದು ಮಂದಿಗೆ ಸಾವುಕಾರನಾಗಿದ್ದ ವಿನಾಃ ನಾನು ಸಾವಕಾರನಾಗಿರಲಿಲ್ಲಾ ಇಂದು ನನ್ನಲ್ಲಿ ಆಳಗಳಿಲ್ಲಾ ೨೦೦೬ರಲ್ಲಿ ಕೂಡಲ ಸಂಗಮದಲ್ಲಿ ಶ್ರೀ ಸುಭಾಷ್ ಪಾಳೇಕರ ಶಿಬಿರಕ್ಕೆ ನಮ್ಮೂರಿನ ಶ್ರೀ. ಕೆ. ಎಂ. ಕುಂಬಳ ಸರ್ ಜೊತೆ ಹೋಗಿ ೮ ದಿನ ಶಿಬಿರದಲ್ಲಿ ಭಾಗವಹಿಸಿದಾಗ ಗೊತ್ತಾಯಿತು ಏನೆಂದರೆ ನಾನು ಇಲ್ಲಿಯವರೆಗೆ ಮಾಡಿದ್ದು ಅವೈಜ್ಞಾನಿಕ ಕೃಷಿ ಎಂದು. ಇನ್ನು ಮೇಲೆ ನಾನು ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿಯನ್ನೇ ಮಾಡಬೇಕು. ಯಾವತ್ತು ಭೂಮಿಗೆ ವಿಷ ಉಣಿಸಬಾರದು, ನಾನೂ ಉಣಬಾರದು, ನನ್ನ ಕೈಯಿಂದ ಹೋಗುವ ಅನ್ನ ವಿಷವಾಗದೆ ಅಮೃತವಾಗಬೇಕು ಮಣ್ಣು ಹೊನ್ನವಾಗಬೇಕು. ಪರಿಸರ ಹಾನಿಯಾಗಬಾರದು, ನನ್ನ ಕೃಷಿ ನೋಡಲಿಕ್ಕೆ ಶ್ರೀಪಾಳೇಕಾರರು ನಾ ಕರೆಯದೆ ನನ್ನ ತೋಟಕ್ಕೆ ಬರಬೇಕು ಎಂದು ನಿರ್ಧಾರ ಮಾಡಿ ತೋಟಕ್ಕೆ ಬಂದು ೩ ವರ್ಷದ ನಂತರ ಶ್ರೀ ಪಾಳೇಕರ ಸ ೫೦೦ ಜನ ರೈತರೊಂದಿಗೆ ಬಂದು ನೋಡಿ ಆನಂದ ಪಟ್ಟರು ಅಂತ ಹೇಳಲಿಕ್ಕೆ ಹೆಮ್ಮೆ ಆಗತದೆ.

ಬೆಟ್ಟದ (ಗುಡ್ಡದ) ಇಳಿಜಾರಿನಲ್ಲಿ ಹೊಲ ಇದ್ದರೂ ಸಮ ಪಾತಳಿ ಮಾಡು ಅವಶ್ಯವಿಲ್ಲಾ, ಒಡ್ಡು, ಒಡಗಟ್ಟಿ ಬೇಕಾಗಿಲ್ಲಾ, ಕೆರೆ ಮಣ್ಣು ಹೊಡಿಬೇಕಾಗಿಲ್ಲಾ ಆಳವಾದ ಉಳುಮೆ ಬೇಡ, ಕೇವಲ ೧ (ಒಂದು) ನಾಟಿ ಹಸು ಇದ್ದರೆ ಸಾಕು. ಮನಸ್ಸಿನಲ್ಲಿ ಧೃಡ ನಿರ್ಧಾರ ಬೇಕು. ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿಯ ಸ್ವಲ್ಪ ಜ್ಞಾನ ಬೇಕು. ಕೃಷಿ ಹಣ ಮಾಡುವ ಉದ್ಯೋಗವಲ್ಲಾ, ಆಧ್ಯಾತ್ಮದ ಈ ಕೃಷಿ ಮತಿಯಿಂದ ಮಾಡಿದಾಗ ಹಿತವಾಗಿ ನಮ್ಮ ಬದುಕು ಶ್ರೀಮಂತ ಆಗುವುದರಲ್ಲಿ ಸಂಶಯವಿಲ್ಲಾ ಅಂತ ಕೈ ಎತ್ತಿ



ಹೇಳುತ್ತೇನೆ. ಇದಕ್ಕೆ ನಾನೇ ನನ್ನಲ್ಲಿಗೆ ಬಂದು ನೋಡಿರಿ ಬರೆ ಬಾಯಲ್ಲಿ ಹೇಳುವವ ನಾನಲ್ಲಾ ನಾ ಏನು ಮಾಡತೀನಿ, ಏನು ಮಾಡುತ್ತಿದ್ದೆ ಅನ್ನುವುದನ್ನು ಬರೆದು ಇಟ್ಟಿರುವೆ. ೧೯೪೨ನೇ ಇಸವಿಯಿಂದ ೧೯೯೩ ರ ತನದ ನಮ್ಮ ಅಪ್ಪಾವರು (ನಮ್ಮ ತಂದೆಯವರು ಕನ್ನಡ ಶಾಲೆಗೆ ಹೆಡ್ ಮಾಸ್ಟರ್ ಆಗಿದ್ದರು) ದಿನಚರಿ + ಜಮಾ ಖರ್ಚು ಬರೆದಾರ. ೧೯೯೩ರಿಂದ ಇಂದಿನ ತನಕ ನಾನೂ ಬರೆದೀನಿ ನೀವು ಬಂದರೆ ತೋರಿಸ್ತೀನಿ.

ಒಂದು ಎಕರೆ ಲಿಂಬಿ ಗಿಡದಲ್ಲಿ ೨೦೧೯ನೇ ಇಸವಿ ಅಂದರೆ ಈ ತಿಂಗಳ ಹಿಂದೆ ಒಂದು ವರ್ಷಕ್ಕೆ ೬ ಲಕ್ಷ ೩೦ ಸಾವಿರರೂ ಲಿಂಬಿಕಾಯಿ ಮಾರಿದ್ದೀನಿ. ೫೦ ಸಾವಿರ ರೂಪಾಯಿಯ ಲಿಂಬಿ ಬೀಜ ಮಾರಿದ್ದೀನಿ, ೨ ಲಕ್ಷ ೫೦ ಸಾವಿರ ರೂಪಾಯಿ ಲಿಂಬಿ ಅಗಿ (ಸಸಿ) ಮಾರಿದ್ದೀನಿ, ೪೦ ಸಾವಿರ ರೂ, ನುಗ್ಗಿ ಬೀಜ ಮಾರಿದ್ದೀನಿ, ೨೦ ಸಾವಿರ ರೂ. ಬಾಳಿಕಾಯಿ ಮಾರಿದ್ದೀನಿ, ಎಷ್ಟು ಆಯ್ತು ನೋಡಿ, ಒಂಬತ್ತು ಲಕ್ಷ ನಲ್ವತ್ತು ಸಾವಿರ ರೂಪಾಯಿ ಉತ್ಪನ್ನ ಬಂದದ ಅಂದ್ರ ಅಧ್ಯಾತ್ಮ ಕೃಷಿ ಕಾಮಧೇನು, ಕಲ್ಪವೃಕ್ಷ ಅಂದಂತಾಯಿತು. ಅದಕ್ಕೆ ನಾ ಉಳುಮೆ (ಅಗೆತ) ಮಾಡಿಲ್ಲಾ ೧೪ ವರ್ಷವಾಯ್ತು, ಕಳೆ ತೆಗೆದಿಲ್ಲಾ, ಹೊರಗಿನ ಕೊಂಡಂಥ ಯಾವ ಪದಾರ್ಥ ತಂದ ಹಾಕಿಲ್ಲಾ, ಮಣ್ಣು ಹ್ಯಾಂಗ ಆಗದ ಅಂದ್ರೆ ಬರಿಗಾಲಲ್ಲಿ ತಿರುಗಾಡಿದರೆ ಅನೇಕ ಕಾಯಿಲೆವಾಸಿ ಆಗತಾವ, ಘಮ, ಘಮ ಅಂತ ಕರ್ಪೂರದ ವಾಸನೆ ಬರತದೆ, ಮಳೆ ನೀರು ಪೂರ್ತಿ ಇಂಗತದ, ನಮಗ ನೀರ ಬಾಳಕಮ್ಮಿ, ಅದಕ್ಕೆ ತಿಂಗಳಿಗೆ ಒಂದು ನೀರು ಬಿಡತೀನಿ. ನೀರು ಇದ್ದರ ೨೦ ದಿನಕ್ಕೊಮ್ಮೆ ನೀರುಣಿಸುತ್ತೇನೆ. ನಾ ಮಾಡುವದು ಏನೂ ಇಲ್ಲಾ. ಎಲ್ಲ ಪಂಚ ಮಹಾಭೂತಗಳಿಂದ ನಡೀತದೆ. ಉದಾಹರಣೆಕೊಟ್ಟು ಹೇಳಬೇಕೆಂದರೆ ಇಡೀ ದಿನ ಬೇಕಾಗತದ ಇನ್ನೊಮ್ಮೆ ಕೂಡಿದಾಗ ನೋಡೋಣು. ಅದಕ್ಕೆ ನೂರಾರು ವರ್ಷಗಳ ಹಿಂದೆ ಶ್ರೀ ದೇವರ ದಾಸಿಮಯ್ಯನವರು ಹೇಳಿದ್ದು ಹೀಗೆ, ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುತ್ತಿ ಸುಳಿವ ಗಾಳಿ ನಿಮ್ಮ ದಾನ, ನಿಮ್ಮ ದಾನವನುಂಡು ಅನ್ಯ ಕುನ್ನಿಗಳನ್ನು ಹೊಗಳುವವರಿಗೆ ನಾನೆನೆಂಬೆನೋ ರಾಮನಾಥ ಎಂದು.

**ಲಿಂಬೆಹಣ್ಣು ತಂದಿರುವೆ ನೋಡಿ:-**

ಇದೇ ಒಂದು ಎಕರೆ ಲಿಂಬಿ ತೋಟ ನೋಡಲಿಕ್ಕೆ ಸುತ್ತಲಿನ ರೈತರು ತಾಲ್ಲೂಕು, ಜಿಲ್ಲಾ, ರಾಜ್ಯ, ಹೊರರಾಜ್ಯ, ಹೊರದೇಶದವರು ಸಹಿತ ನೋಡಲಿಕ್ಕೆ ಬರತಾರ. ಪೋಟೋ+ ದಾಖಲೆಗಳು ಅವೆ.

**ವಿಷಯ ಪ್ರಸ್ತಾಪ**

೧. ಭೂಮಿ- ಭೂಮಿ ಹೇಂಗಿರಬೇಕಪ ಅಂದ್ರ ಬೀಜ ಬಿತ್ತಿದರ, ಸಸಿ ಹಚ್ಚಿದರ, ಹೌಂದ, ಹೌಂದ ಅನ್ನುವಂಗ ಬೇಳೆ ಬರಬೇಕು. ತಿರುಗಾಡಿದರ ಗಾದಿ ಮೇಲೆ ತಿರುಗಿದಂಗ ಆಗಬೇಕು, ಬೀಡ ಬಿಡಬಾರದು (ನೆಲ ಸೀಳಬಾರದು) ಹಗಲು ರಾತ್ರಿ ಮಳಿ ಬಂದರೂ ಒಂದ ಹನಿ ನೀರು ಭೂಮಿ ಮ್ಯಾಲ ಹರಿಬಾರದು, ಕೈಲಿ ಕೆದರಿದರ ಮಳಗಟ್ಟಲೆ ಮಣ್ಣು ಬರಬೇಕು. ನೀರಹಾಕಿ ತೋಯಿಸಿದರ ಉಂಡಿ ಆಗಬಾರದು. ಭೂಮಿ ಮೇಲೆ ತಿರುಗಾಡುವಾಗ ದೇಶಿ ಎರಿ ಹುಳದ ತೂರು (ಹೊಲ) ಮತ್ತು ಎರೆಹುಳದ ಹಿಕ್ಕಿ



ಕಾಣಿಸಬೇಕು, ಕುಳಿತರ ಆರಾಮ ಅನಿಸಬೇಕು. ಹಾಗೇ ಮಲಗಿಕೊಂಡರ ತಾಯಿ ತೊಟ್ಟಿಲ ತೂಗಿದಾಂಗ ಅನಿಸಬೇಕು ಅದಕ್ಕೆ ನೂರಾರು ವರ್ಷಗಳ ಹಿಂದೆ ಸರ್ವಜ್ಞ ಹೀಗೆ ಹೇಳ್ಯಾನ

ಸ್ತ್ರೀ ಸದನಕೆ ಲೇಸು, ಚಿನ್ನ ಕೊರಳಿಗೆ ಲೇಸು

ಹಣ್ಣ ಮರಕೆ ಲೇಸು, ಬಿತ್ತನೆಗೆ ಮೆತ್ತನೆಯ

ಮಣ್ಣು ಲೇಸೆಂದ ಸರ್ವಜ್ಞ

ಹಿಂಗ ನಮ್ಮ ಭೂಮಿ ತಯ್ಯಾರಾಗ ಬೇಕೆಂದ್ರ ನಾವೆಲ್ಲ ನೀವೆಲ್ಲಾರು ಪೂರ್ವಜರು ಹಾಗೂ ಋಷಿಮುನಿಗಳು ಮಾಡಿದಂಥ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ಮಾಡಬೇಕು. ಮಾಡೋನು ಅಂತ ಹೇಳತೀನಿ.

**೨. ಬೀಜ-** ಬೀಜಗಳ ಬಗ್ಗೆ ಹೇಳಬೇಕೆಂದರೆ ವಿಷಯ ಬಹಳ ಇದೆ. ಸಮಯ ಕಮ್ಮಿ ಇದೆ. ಸ್ವಲ್ಪದರಲ್ಲೇ ಹೇಳುವದಾದರೆ ಬೀಜಗಳು ಮನೆಯ ಜವಾರಿ ಬೀಜಗಳಿರಬೇಕು. ನಮ್ಮ ನಮ್ಮ ಪ್ರದೇಶಕ್ಕೆ ಹೊಂದಿಕೆಯಾಗುವ ಬೆಳೆಗಳ ಬೀಜಗಳು ರೋಗ, ಕೀಟದ ಹಾವಳಿ ತಡೆದು ಬೆಳೆಯುವ ಗುಣ ಹೊಂದಿರತಾವ. ಬಹಳ ದಿನಗಳಿಂದ ಶೇಖರಿಸಿಡಲು ಯೋಗ್ಯರತಾವ. ಶಕ್ತಿ, ಸತ್ಯಗಳಿಂದ ತುಂಬಿರತಾವ. ಇಂಥ ಬೀಜಗಳಿಂದ ಬೆಳೆದ ಆಹಾರ ನಾವು,

ನೀವೆಲ್ಲಾ ಸೇವಿಸಿದಾಗ ಶಕ್ತಿ ಬರತದ. ಸತ್ವ ಸಿಗತದ, ಸಾತ್ವಿಕ ಗುಣಗಳು ಬಂದು ಮನಸ್ಸಿಗೆ ಆನಂದ ಆಗತದ. ಇಂಥ ಉತ್ಪನ್ನ ಮಾರಿದರ ಹೆಚ್ಚಿನ ಬೆಲೆ ಬಂದು ರೈತನಿಗೆ ಆರ್ಥಿಕ ಬಲ ಬರತದ. ಜವಾರಿ (ಮನೆಯ) ಬೀಜಗಳು ಗುಣವಂತ ಮಗನಿದ್ದ ಹಾಗೇ ಅದೇ ಕಂಪನಿ ಬೀಜಗಳು ದುರ್ಗುಣಿ ಮಗ ಇದ್ದ ಹಾಗೆ, ಹೈಬ್ರಿಡ್ ಬೀಜಗಳು ಕುಲಗೆಡಿಸಿದ, ಕುಲಾಂತರಿಸಿದ ಬೀಜ ಇರುವುದರಿಂದ ರೈತನಿಗೆ, ಮಣ್ಣಿಗೆ ಪರಿಸರಕ್ಕೆ ಹಿತ ಆಗುವುದಿಲ್ಲ. ಉದಾ: ಹೈಬ್ರಿಡ ಗೋವಿನ ಜೋಳ ಎಕರೆಗೆ ೩೦ ರಿಂದ ೪೦ ಕ್ವಿಂಟಲ್ ಬೆಳಿತಾವ, ೫೦ ರಿಂದ ೬೦ ಸಾವಿರ ರೂಪಾಯಿ ಲಾಭ ಬರತದೆ. ಆದರೆ ಭೂಮಿಯ ಸಾವಯವ ಇಂಗಾಲ ಅಂತ ಏನ ಹೇಳ್ತಿವಿ, ರೈತನ ರಿಸರ್ವ್ ಬ್ಯಾಂಕ್, ಖಾಲಿ ಆಗತದ. ಎಷ್ಟು ಖಾಲಿ ಅಂದರ ಲಕ್ಷ ರೂಪಾಯಿ ಬೆಲೆ ಬಾಳುವ ಜೀವದ್ರವ್ಯಹಾನಿ ಆಗತದ. ಮನಿಗೆ ಬಂದ ಬೀಗ (ಮಾವ) ನಾವು ಮನಿಯೆಲ್ಲಿ ಇಲ್ಲದಾಗ ನಮ್ಮ ಮನ್ಯಾನು ೧ ಲಕ್ಷ ರೂ ಕಳುವ ಮಾಡಿ ಅಂವ ಊರಿಗೆ ಹೋಗುವಾಗ ನಮ್ಮ ಮಕ್ಕಳ ಕೈಯ್ಯಾಗ ೧೦೦ ರೂಪಾಯಿ ಕೊಟ್ಟಾಗ ಮಾಮಾ ಚಲೋ ಅನಸ್ತಾನ. ಅಂವ ಊರಿಗೆ ಹೋದ ಮ್ಯಾಲ ಗೊತ್ತಾಗತದ ಮನಿ ಕಳುವ ಆಗಿದ್ದು, ಅದಕ್ಕೆ ಬೀಜಗಳು ನಮ್ಮ ಮನೀ ಬೀಜಗಳೇ ಆಗಿರಬೇಕು. ಹಿರಾರು ಹೇಳತಾರ ಬೀಜ ಇದ್ದಂಗ ಬೆಳಿ ಅಂತ.

**೩. ಬೆಳೆ ಸದ್ಬಳಕೆ :** ಬೆಳೆ ಬೆಳೆದು ರಾಶಿ ಮಾಡಿ ನೇರ ಮಾರಾಟ ಮಾಡದೆ ಮೌಲ್ಯವರ್ಧನೆ ಮಾಡಿ ಮಾರಿದಾಗ ಹೆಚ್ಚಿಗೆ ಲಾಭ ಆಗತದೆ ಸಿರಿಧಾನ್ಯಗಳಿಂದ ಅಕ್ಕಿ ಮಾಡಿ ಮಾರಿತೀನಿ, ಜವಿಗೋಧಿ ಅಕ್ಕಿ ಮಾಡತೀನಿ. ನುಗ್ಗಿಕಾಯಿ ಮಾರಿದರೆ ೧ ಅಥವಾ ೨ ರೂಪಾಯಿಗೆ ೧ ಮಾರತದ. ಆದರೆ ಬೀಜ ಮಾಡಿದಾಗ ೧ ಕಾಯಿಯಲ್ಲಿ ಕನಿಷ್ಠ ೨೦ ರಿಂದ ೨೫ ಬೀಜ ಇರತಾವ. ೧ ಬೀಜ ೧ ರೂಪಾಯಿಗೆ ಮಾರತೀನಿ. ೧ ಕೇಜಿ ನುಗ್ಗಿ ಬೀಜಗಳು ಎಣಿಸಿದಾಗ ೨೫೦೦ ಬೀಜ ಇರತಾವ ೨೫೦೦/- ರೂಪಾಯಿಗೆ

ಮಾರುತೀನಿ. ಬಹಳ ಹಣ್ಣ ಆದ ಲಿಂಬಿಕಾಯಿಯಿಂದ ಬೀಜ ತೆಗೆದು ೮೦೦೦/- ರೂಪಾಯಿಗೆ ಕೇಜಿ ಲಿಂಬಿ ಬೀಜ ಮಾರಾಟ ಮಾಡುತೀನಿ. ಇದೇ ಬೀಜ ಮಾರಾಟ ಆಗಲಿಲ್ಲಾ ಅಂದರೆ ಸಸಿ ಮಾಡಿ ೧ ಸಸಿ ೨೫ ರೂಪಾಯಿಗೆ ಒಂದರಂಗ ಮಾರಾಟ ಮಾಡಿ ಈ ವರ್ಷ ೨೫೦೦೦/- ರೂ ಅಗಿ ಮಾರೀನಿ, ತೆಂಗಿನ ಎಳನೀರು ಮಾರಾಟ, ಕೊಬರಿ, ಕೊಬರಿಯಿಂದ ಎಣ್ಣೆ ತೆಗೆದು ೫೦೦ ರೂಪಾಯಿಗೆ ೧ ಕೇಜಿ ಎಣ್ಣೆ ಮಾರುತಿನಿ. ನನ್ನ ಕೃಷಿ ವಿಷಮುಕ್ತ ಅದ ಅಂತ ತಿಳಿದವರು ತೆಗೆದುಕೊಳ್ಳುತ್ತಾರೆ. ನಾ ಏನೇ ಬೆಳೆದರು ಮನೆಯಲ್ಲಿ ಮಾರಾಟ ಆಗತದ. ಇದರಿಂದ ಹಮಾಲಿ, ಬಾಡಗಿ, ಕಮಿಷನ್ ಉಳಿದು ಹೆಚ್ಚಿಗೆ ಲಾಭ ಆಗತದ.

ನಾವು ಬೆಳೆದ ಆಹಾರ ಅನೇಕ ಮುಗ್ಧರು ಸೇವಿಸ್ತಾರ. ಅವರ ಆರೋಗ್ಯದ ಮೇಲೆ ನಾವು ದೌರ್ಜನ್ಯ ಮಾಡಿದಾಗ ಅವರ ಕಳವಳ, ನಮಗ ಹತ್ತಿ ನಾವು ಅವರ ಶಾಪಕ್ಕೆ ಗುರಿ ಆಗತೀವಿ ಅನ್ನುವ ಪರಿಜ್ಞಾನ ನಮ್ಮದಾಗಬೇಕು. ಅಂತಾ ಹೇಳುತ್ತಾ, ಎಲ್ಲ ಬಲ್ಲವರು ನೀವು ಕೃಷಿಯಲ್ಲಿ ಸ್ವಲ್ಪ ಬಲ್ಲಿದ ನನ್ನ ಮಾತು ಬಹಳ ಶಾಂತಿಯಿಂದ, ಸಂತೋಷದಿಂದ ಕೇಳಿದ ನಿಮ್ಮೆಲ್ಲರಿಗೆ ವೇದಿಕೆ ಮೇಲಿರುವ ಎಲ್ಲರಿಗೆ ನಮಿಸುತ್ತಾ ಹೊಲದಲ್ಲಿ ಕೆಲಸ ಮಾಡುವ ನನ್ನನ್ನು ಬ್ರಹ್ಮಾಂಡದಂಥ ಈ ಅಕ್ಷರ ಜಾತ್ರೆ ತೋರಿಸಿ ಇಂಥ ಮಹಾ ವೇದಿಕೆ ಮೇಲೆ ಮಾತನಾಡುವಂತೆ ಮಾಡಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಿಗೆ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರಿಗೆ, ಹಿರಿಯ ಪತ್ರಕರ್ತರೂ, ಪರಿಷತ್ತಿನ ಪ್ರಕಟಣೆ ವಿಭಾಗದ ರಾಜ್ಯ ಸಂಚಾಲಕರೂ ಆದ ಶ್ರೀ ಪದ್ಮರಾಜ ದಂಡಾವತಿಯವರಿಗೆ ಮತ್ತು ಇನ್ನೊಮ್ಮೆ ನಿಮ್ಮೆಲ್ಲರಿಗೆ ನನ್ನ ಪ್ರೀತಿಯ ನಮಸ್ಕಾರಗಳು.

## ಜಲಸಂವರ್ಧನೆ ಮತ್ತು ನಿರ್ವಹಣೆ

**ಶಿವಾನಂದ ಕಳವೆ**

ನೀರಿನ ಮಾತುಕತೆಗೆ ಮುಂಚೆ ರಾಜ್ಯ ಪ್ರವಾಸಕ್ಕೆ ಹೊರಡೋಣ. ವಿಶ್ವವಿಖ್ಯಾತ ವಿಜಯನಗರ ಸಾಮ್ರಾಜ್ಯದ ಹಂಪಿಯೋ, ಚಾಲುಕ್ಯರ ಬದಾಮಿಯೋ, ಆದಿಲ್‌ಶಾಹಿಗಳ ವಿಜಾಪುರವೋ, ಹೊಯ್ಸಳರ ಬೇಲೂರು-ಹಳೆಬೀಡಿಗೆ ಬೇಕಾದರೂ ಹೋಗಬಹುದು. ಕನ್ನಡದ ಪ್ರಪ್ರಥಮ ಸಾಮ್ರಾಜ್ಯದ ಕದಂಬರ ರಾಜಧಾನಿ ಬನವಾಸಿಗೂ ಬರಬಹುದು. ಚಿತ್ರದುರ್ಗದ ಸುತ್ತಾಟಕ್ಕೆ ಹೋದರೆ ಚಂದ್ರವಳ್ಳಿಯ ಚೆಂದದ ಕಲ್ಲುಬೆಟ್ಟಗಳ ಕಣಿವೆಯ ಗುಡ್ಡತಟಾಕ ರಾಜ್ಯದ ಪ್ರಥಮ ಕೆರೆ. ಮೊಟ್ಟ ಮೊದಲು ಈ ನಾಡಿನಲ್ಲಿ ದೇಗುಲ ನಿರ್ಮಿಸಿದ ಶಿಕಾರಿಪುರದ ತಾಳಗುಂದದ ಪ್ರಣವೇಶ್ವರ ಗುಡಿಗೆ ಹೋದರೆ ಅದರ ಪಕ್ಕದಲ್ಲಿರುವುದು ರಾಜ್ಯದ ಎರಡನೆಯ ಕೆರೆಯೆಂದು ಕದಂಬರ ಗುಡ್ಡತಟಾಕಗಳ ದರ್ಶನವಾಗುತ್ತದೆ. ಬೀದರ್, ಮೈಸೂರು, ಕೆಂಪೇಗೌಡರ ಬೆಂಗಳೂರಿಗೆ ಹೋದರೂ ಚರಿತ್ರೆಯ ವೈಭವಗಳ ಹಿಂದೆ ಕಾಣಿಸುವುದು ನೀರಿನ ಕೆಲಸಗಳು ಮಲೆನಾಡಿನ ಕೆಳದಿಯ ದೊರೆ ಸದಾಶಿವನಾಯಕನು (೧೫೧೨-೪೬) ರಾಜಧಾನಿ ಕೆಳದಿಯ ಸುತ್ತ ೧೪ ಕೆರೆ ಸರಣಿ ನಿರ್ಮಿಸಿದವರು. ವಿಜಯನಗರದ ಹಂಪಿಯಲ್ಲಿ 'ಕನ್ನಡಿಕೆರೆ' ಎಂಬ ಹೆಸರಿನ ಒಂದು ಕೆರೆಯಿದೆ. ನೀರಿನ ಮೂಲಕ ಸಾಮ್ರಾಜ್ಯ ಊರು ನೋಡಲು ಇದೊಂದು ಸಾಂಕೇತಿಕ ಸಾಕ್ಷಿಯಾಗಬಹುದು. ಜನಪದ ಸಾಹಿತ್ಯ, ಪುರಾಣ ಕಾವ್ಯ, ಶಾಸನ, ಶಿಲ್ಪ ಕಲೆಗಳ ಮೂಲದಲ್ಲಿ ನೀರಿನ ಕಾರಣವಿದೆ. ಊರಿಗಾಗಿ ನೀರು ಕಟ್ಟಿದ ವಿಕೇಂದ್ರೀಕೃತ ನೀರಾವರಿಯ ಮಹಾಪರಂಪರೆಯಿದೆ.

ಹಾಸನದ ಜಾವಗಲ್‌ನ ಮಲದೇವಿಹಳ್ಳಿಯ ಮರಾಠಿಗರು ಭರತನಾಟ್ಯಕ್ಕೆ ಗೆಜ್ಜೆ ತಯಾರಿಸಲು ಇತಿಹಾಸದಲ್ಲಿ ಹೆಸರಾದವರು. ಹೊಯ್ಸಳ ಅರಸು ವಿಷ್ಣುವರ್ಧನನ ರಾಣಿ ಶಾಂತಲೆ ಇಲ್ಲೇ ನಾಟ್ಯರಾಣಿಯಾಗಿ ಖ್ಯಾತಳಾದವಳು. ೧೦೩ ವರ್ಷಗಳ ಸತತ ಪರಿಶ್ರಮದಿಂದ ನಿರ್ಮಿಸಿದ ಬೇಲೂರು ಚನ್ನಕೇಶವ ದೇಗುಲ ಇವತ್ತು ವಿಶ್ವವನ್ನೇ ಸೆಳೆಯುತ್ತಿದೆ. ಹೊಯ್ಸಳ ಅರಸರ ನೀರ ನೆಮ್ಮದಿಯ ಕೆರೆ ಕಾಯಕದ ಮೂಲಕವೇ ಇಂಥ ಶ್ರೀಮಂತ ಕಲೆ, ಸಂಸ್ಕೃತಿಗಳು ಉದಯಿಸಿದ್ದು ಮರೆಯಲಾಗದು. ನೆಲದುರ್ಗ, ಜಲದುರ್ಗ, ವನದುರ್ಗ, ಗಿರಿದುರ್ಗಗಳಲ್ಲಿನ ಪುರಾತನ ಕೋಟೆಗಳು ಮಳೆ ನೀರು ಹಿಡಿಯುವ ತಂತ್ರಗಳ ಮೂಲಕವೇ ಸಹಸ್ರಾರು ಸೈನಿಕರನ್ನು ನೆಲೆಯೂರಿಸಿವೆಯಲ್ಲವೇ?

ರಾಜ್ಯದ ನದಿಗುಂಟ ನಡೆದು ನೋಡಿ, ನದಿ ಮೂಲದಿಂದ ಸಾಗರ ಸಂಗಮದವರೆಗೆ ದೇಗುಲಗಳು ಶಕ್ತಿಪೀಠಗಳು ಸಿಗುತ್ತವೆ. ದೇವರ ಕಾಡಿನ ನಂಬಿಕೆಯಲ್ಲಿ ನಿಸರ್ಗ ಸಂರಕ್ಷಣೆಯ ಸಂಗತಿಗಳು ಕಾಣಿಸುತ್ತವೆ. ಇಡೀ ರಾಜ್ಯದ ಪಕ್ಷಿ ನೋಟಕ್ಕೆ ಎತ್ತರದ ಬೆಟ್ಟಗಳು ಒಳ್ಳೆಯದು.

ಮಂಡ್ಯದ ಮೇಲುಕೋಟೆ, ಕೊಪ್ಪಳದ ಮಲೆ ಮಹದೇಶ್ವರ, ಕುಮಟಾದ ಯಾಣ, ಬೀದರ್ ಗಾಯ್‌ಮಾತಾ, ಇದೇ ಕಲಬುರಗಿ ಚಿಂಚೋಳಿಯ ಗೊಟ್ಟಂಗೊಟ್ಟಿಯ ಭಕ್ತಪ್ರಭುಗಳ ತಪಸ್ಸಿನ ತಾಣದ ಸನಿಹದ ಸಿದ್ಧಕುಂಡದಲ್ಲಿ ಕಲ್ಲಿನಿಂದ ಹನಿ ನೀರು ಸದಾ ಬೀಳುತ್ತಿರುತ್ತದೆ. ತೀವ್ರ ಜಲಕ್ಷಾಮದಿಂದ ಬಳಲಿದ ಕ್ರಿ.ಶ. ೧೯೭೨ರ ಭೀಕರ ಬರಸಾಥ್ ಬರದಲ್ಲಿ ಇಲ್ಲಿ ನೀರಿತ್ತೆಂಬುದನ್ನು ಮರೆಯಲಾಗದು. ಸಿದ್ದೇಶ್ವರರ ಪವಾಡದಿಂದ ಸಿದ್ದಗಂಗೆಯಾದ ತುಮಕೂರಿನ ಬೆಟ್ಟ, ಸಿಖ್ ಧರ್ಮಸ್ಥಾಪಕರಾದ ಶ್ರೀ ಗುರುನಾನಕರ ತಪಸ್ಸಿನ ಬೀದರ್‌ನ ನಾನಕ್ ಝರಾ, ಬದಾಮಿಯ ಮಹಾಕೂಟದ ಪುಷ್ಕರಣಿಯ ಒರತೆ, ರಾಮನಗರ ಜಿಲ್ಲೆಯ ರಾಮದೇವರ ಬೆಟ್ಟ, ರೇವಣಸಿದ್ದೇಶ್ವರ ಬೆಟ್ಟ, ಮಲೆಬೆನ್ನೂರಿನ ಅರಸಾಳ, ಬೈಲಹೊಂಗಲದ ಸೊಗಲ, ಸುಮಾರು ೧೯೧೦ ಅಡಿ ಆಳದ ಕೊಳವೆ ಬಾವಿ ಕೊರೆಸಿದ್ದರೂ ಮೀರು ಸಿಗದೇ ಪರದಾಡುವ ಕೋಲಾರದ ಅಂತರಗಂಗೆಯಲ್ಲಿ ಕೇವಲ ೧೦-೧೫ ಅಡಿಗೆ ತೆರೆದ ಬಾವಿಯಲ್ಲಿ ನೀರಿದೆ. ಎತ್ತರದ ಬೆಟ್ಟ, ಮರ, ಮೊದೆಗಳನ್ನು ದೈವಿ ನಂಬಿಕೆಯಲ್ಲಿ ಸಂರಕ್ಷಿಸಿದ ಪರಂಪರೆಯಿಂದ ರಾಜ್ಯದ ಅತ್ಯಂತ ಎತ್ತರದ ಹಲವು ಬೆಟ್ಟಗಳಲ್ಲಿ ಇಂದಿಗೂ ನೀರು ಕಾಣಬಹುದು. ಬೆಟ್ಟದ ನೀರು ಇಂದಿನ ಕೃಷಿ ನಗರಗಳ ನೂರಾರು ಟಿ.ಎಂ.ಸಿ. ಬೇಡಿಕೆ ಈಡೇರಿಸುವುದಿಲ್ಲ. ಆದರೆ ಅಲ್ಲಿ ಇವತ್ತಿಗೂ ನೀರು ಹೇಗಿದೆಯೆಂಬುದು ಪರಿಸರ ಹೇಗಿದ್ದರೆ ನೀರಿರುತ್ತದೆಂಬುದರ ದರ್ಶನವಾಗಿದೆ.

**ಕೆರೆ ಕೊಂದವರು ನಾವು**

ರಾಜ್ಯದ ಸಣ್ಣ ನೀರಾವರಿ ಇಲಾಖೆಯ ದಾಖಲೆಯಂತೆ ೩೮,೭೦೮ ಕೆರೆಗಳಿವೆ. ಆಡಳಿತದ ಅನುಕೂಲಕ್ಕೆ ವಿಭಾಗಿಸಿದ ಜಿಲ್ಲಾ ಪಂಚಾಯತ್, ಅರಣ್ಯ ಇಲಾಖಾ ವ್ಯಾಪ್ತಿಯ ಕೆರೆಗಳನ್ನು ನೋಡುತ್ತ ಹೋದರೆ ದರ್ಶನವಾಗುತ್ತದೆ. ವಿಕೇಂದ್ರೀಕೃತ ನೀರಾವರಿ ವ್ಯವಸ್ಥೆಯ ಅತ್ಯುತ್ತಮ ಮಾದರಿಯಾಗಿ ಕೆರೆಕಟ್ಟೆಗಳು ಮೈದಳೆದಿವೆ.

ಎಕರೆಯಲ್ಲಿ ಹತ್ತಾರು ದಿನಗಳಲ್ಲಿ ಸುರಿದ ಮಳೆ ನೀರು ಹಿಡಿಯಲು ದೊಡ್ಡ ಪಾತ್ರೆಗಳು ಬೇಕು. ಒಂದು ಬೃಹತ್ ಅಣೆಕಟ್ಟೆಯಲ್ಲಿ ನೂರಾರು ಟಿ.ಎಂ.ಸಿ, ಹಿಡಿಯಲು ಹೊರಟರೆ ಲಕ್ಷಾಂತರ ಹೆಕ್ಟೇರ್ ಭೂಮಿ ಜಲಾಶಯಕ್ಕೆ ಮುಳುಗುತ್ತದೆ. ಬಿದ್ದ ಹನಿಯನ್ನು ಬಿದ್ದಲ್ಲಿ ಉಳಿಸುವ ತಂತ್ರ ಸರ್ವವ್ಯಾಪಿಯಾದರೆ ಸಾಗರ ಸೇರುವ ಒಂದಿಷ್ಟು ಜಲಸಂಪತ್ತು ನಮ್ಮದಾಗುತ್ತದೆ. ಮುಳುಗಡೆಯ ಪ್ರಶ್ನೆಯಿಲ್ಲ, ಭೂಮಿ ಜವುಗಾಗುವ ಸಂದರ್ಭವಿಲ್ಲ. ಒಮ್ಮೆ ಗ್ರಾಮದ ವಿಶಾಲ ಕೆರೆ ನೋಡಬೇಕು, ಹಿರಿಯರು ಮಾಡಿಟ್ಟ ಜಲಪಾತ್ರೆ ಹಾಳಾಗಿ ಹೋಗಿದೆ. ಅವುಗಳ ಹೂಳು ತೆಗೆದು ಸುಸ್ಥಿತಿಯಲ್ಲಿದ್ದರೆ ನಮ್ಮ ನೀರು ನಮ್ಮೂರಲ್ಲಿ ನಗುತ್ತಿತ್ತು. ಅಬ್ಬರದ ಮಳೆಯ ಸಂಪೂರ್ಣ ನೀರು ಹಿಡಿಯುವ ಸಾಮರ್ಥ್ಯ ಯಾವತ್ತೂ ನಮಗಿಲ್ಲ. ಅದರ ಅಗತ್ಯವೂ ಇಲ್ಲ. ಆದರೆ ಕ್ಷೀರ ಸಾಗರದವರು ಬೆಣ್ಣೆಗೆ ಹುಡುಕುವ ಪರಿಸ್ಥಿತಿ ನಮ್ಮದಾಗಬಾರದು. ದಿನಕ್ಕೆ ನೂರು ಮಿಲಿ ಮೀಟರ್ ಮಳೆ ಸುರಿಯಿತೆಂದರೆ ಒಂದು ಚದರ್ ಮೀಟರ್ ಜಾಗದಲ್ಲಿ ನೂರು ಮೀಟರ್ ಮಳೆ ನೀರು ಬಂತೆಂದು ಅರ್ಥ. ನೂರಾರು ಎಕರೆಯಲ್ಲಿ ಸುರಿಯುವ ಲಕ್ಷಾಂತರ ಮೀಟರ್ ಮಳೆ ಹಳ್ಳವಾಗಿ ಇಳಿಜಾರಿಗೆ ಓಡುತ್ತದೆ. ಓಡುವ ಮುಂಚೆ ಮೂಗುದಾರ ಹಾಕಿ ಎತ್ತರದ ನೆಲೆಯ

ಕೆರೆಗಳಲ್ಲಿ ಒಂದಿಷ್ಟು ಉಳಿಸಬಹುದು. ಹೆಚ್ಚುವರಿ ನೀರನ್ನು ಇನ್ನೊಂದು ಕೆರೆಗೆ ಜೋಡಿಸುತ್ತ ಪ್ರವಾಹ ರೂಪ ಪಡೆಯುವ ಮುಂಚೆ ಜಲಸಂಪತ್ತನ್ನು ಸಮುದಾಯದ ಕೆರೆ ಖಜಾನೆಯಲ್ಲಿ ಶೇಖರಿಸಬಹುದು. ನೀರಾವರಿ, ಅಂತರ್ಜಲ ಹೆಚ್ಚಿಸಲು ಇದು ಸಹಾಯಕವಾಗುತ್ತದೆ. ಅಬ್ಬರದ ಮಳೆ ಪ್ರವಾಹ, ಭೂಸವಕಳಿ ಎದುರಿಸುವ ಸಾಧ್ಯತೆಯಿದು.

ಇತಿಹಾಸದ ಪುಟ ತೆಗೆದರೆ ಕಾವೇರಿ ನದಿ ಪ್ರವಾಹದ ನೀರು ಬಳಸಿ ಕೃಷಿ ಗೆಲ್ಲಿಸಲು ಕಲ್ಲಣೆ, ಸರಣಿ ಕೆರೆಗಳು ನಿರ್ಮಾಣವಾದ ದಾಖಲೆ ಸಿಗುತ್ತದೆ. ಕ್ರಿ.ಶ. ೧೯೨೪ರ ಪ್ರವಾಹದ ತಲ್ಲಣದ ನಂತರದಲ್ಲಿ ಅಣೆಕಟ್ಟೆಯಲ್ಲಿ ನೀರು ಹಿಡಿದು ಗೆಲ್ಲುವ ಸೂತ್ರಗಳು ಜನಪ್ರಿಯವಾಗಿವೆ. ಇದಕ್ಕಿಂತ ಮುಖ್ಯವಾಗಿ ಇದೇ ಕಾವೇರಿ ಕಣಿವೆಯ ಮೈಸೂರು ಸೀಮೆಯಲ್ಲಿ ಮೇಜರ್ ಸ್ಯಾಂಕಿಯ ವರದಿಯ ಪ್ರಕಾರ ಕ್ರಿಶ. ೧೮೬೬ ರಲ್ಲಿ ೧೪,೮೦೩ ಕೆರೆ ಹೂಳೆತ್ತುವ ಯೋಜನೆ ರೂಪಿಸಲಾಗಿತ್ತು. ಸರಣಿ ಕೆರೆಗಳಿಗೆ ಮೈಸೂರು ಸೀಮೆಯ ನೀರಾವರಿ ವಿಶ್ವದ ಗಮನ ಸೆಳೆದಿದೆ. ಪ್ರವಾಹ ನಿಯಂತ್ರಣ ತಂತ್ರ ಅಳವಡಿಸಲು ಇದಕ್ಕಿಂತ ಸೂಕ್ತ ಮಾದರಿಗಳು ಬೇಕೆ? ಕೆರೆಗಳನ್ನು ಕಳೆದ ೬೦ ವರ್ಷಗಳಲ್ಲಿ ಸರಿಯಾಗಿ ಕರೆ ನಿರ್ವಹಿಸಿದ ಫಲವನ್ನು ಈಗ ಜಲಕ್ಷಾಮ, ಪ್ರವಾಹದ ಮೂಲಕ ಅನುಭವಿಸುವಂತಾಗಿದೆ. ಬೃಹತ್ ನೀರಾವರಿಯಿಂದ ಬರುವ ಕಾಲುವೆ ನೀರು, ವಿದ್ಯುತ್ ಅನುಕೂಲತೆಯಿಂದ ಸಾವಿರಾರು ಅಡಿಯಿಂದ ನೀರೆತ್ತುವ ತಂತ್ರಜ್ಞಾನಗಳು ಸಮುದಾಯ ನಿರ್ವಹಿಸಿದ ಕೆರೆಗಳನ್ನು ಮರೆಯುವಂತೆ ಮಾಡಿದವು. ಅಣೆಕಟ್ಟೆಯಲ್ಲಿ ನೀರು ಭರ್ತಿಯಾದಾಗ, ಕೊಳವೆ ಬಾವಿಯಲ್ಲಿ ನೀರು ಸಿಕ್ಕಾಗ ಕೃಷಿ ಅಭಿವೃದ್ಧಿಯಾಗಿದ್ದು ಸುಳ್ಳಲ್ಲ. ಆದರೆ ಬಿದ್ದ ಹನಿಯನ್ನು ಬಿದ್ದಲ್ಲಿ ಸಂರಕ್ಷಿಸುವ ಕೆರೆಗಳ ಮಹತ್ವ ಕಡಿಮೆಯಾಗಿ ಅಂತರ್ಜಲ ಮರುಪೂರಣ ಕಾರ್ಯಗಳು ಕಡಿಮೆಯಾಯಿತು.

ರಾಜರು, ರಾಣಿಯರು, ದಂಡನಾಯಕರು, ಶಾನಭೋಗರು ಸೇರಿದಂತೆ ಹಲವರು ಕೆರೆ ಕಟ್ಟಿಸಿದವರು. ಸಮುದಾಯದ ನಡುವೆ ಹುಟ್ಟಿದ ಈ ಕೆರೆಗಳನ್ನು ನಾವು ಈಗ ಸರಕಾರೀ ಕೆರೆಗಳೆಂದು ಗುರುತಿಸುತ್ತಿದ್ದೇವೆ. ಪುರಾತನ ಜಲನಿಧಿಗಳನ್ನು ಮರೆತಿದ್ದೇವೆ. ಎರೆ ಮಣ್ಣಿನ ಬರದ ಸೀಮೆಯಲ್ಲಿ ಒಮ್ಮೆಗೆ ಕೆರೆ ಭರ್ತಿಯಾದರೆ ಮೂರು ವರ್ಷ ಕೆರೆಯಲ್ಲಿ ನೀರಿರುತ್ತದೆ. ಆದರೆ ಈಗ ಸುರಿಯುತ್ತಿರುವ ಮಳೆ ಹಿಡಿಯಲು ಎಷ್ಟು ಕೆರೆಗಳು ಸರಿಯಾಗಿವೆ? ಕೆರೆ ಅತಿಕ್ರಮಣ ಜೋರಾಗಿದೆ, ಕೆರೆಗಳಿಗೆ ನೀರು ಬರುವ ಕಾಲುವೆಗಳು ಮುಚ್ಚಿಹೋಗಿವೆ. ಒಂದೆಡೆ ನೀರಿನ ಬಳಕೆಯ ಹೆಚ್ಚಳ, ಇನ್ನೊಂದೆಡೆ ಜಲಮೂಲಗಳ ನಿರ್ವಹಣೆಯ ನಿರ್ಲಕ್ಷ್ಯದಿಂದ ಜಲಕ್ಷಾಮಕ್ಕೆ ಆಹ್ವಾನ ನೀಡಿದ್ದೇವೆ.

**ಜಲಕ್ಷಾಮಕ್ಕೆ ಏನು ಕಾರಣ?**

ನೀರಿನ ಸ್ಥಿತಿಗತಿಯ ಅಧ್ಯಯನ ಮಾಡುತ್ತ ಹೋದರೆ ४೦ ವರ್ಷಗಳ ಹಿಂದೆ ಅಡಿಕೆ ತೋಟದ ಕಾಲುವೆಗಳಲ್ಲಿ ಈಜಾಡುತ್ತಿದ್ದ ತುಮಕೂರಿನ ಚಿಕ್ಕನಾಯಕನಹಳ್ಳಿ ಇಂದು ೧೬೦೦ ಅಡಿ ಆಳದ ಕೊಳವೆ ಬಾವಿಯಲ್ಲಿ ನೀರು ಹುಡುಕುತ್ತಿದೆ. ತೆರೆದ ಬಾವಿಗಳಲ್ಲಿ ಕೃಷಿ ಬದುಕು ಹುಡುಕಿದ ಬೀದರ್ ಕೊಳವೆ ಬಾವಿಗೆ ಮೊರೆ ಹೋಗುತ್ತಿದೆ. ಕೆರೆಗಳ ಕೋಲಾರವಂತೂ ಕೊಳವೆ ಬಾವಿಗೂ ನೀರಿಲ್ಲವೆಂದು ಅಳುತ್ತಿದೆ. ಬೇಸಿಗೆಯ

ದಿನಗಳಲ್ಲಿ ಒರತೆ ಜಲ ರಸ್ತೆಗಳಲ್ಲಿ ಹರಿಯುತ್ತ ಓಡಾಟಕ್ಕೆ ತೊಂದರೆ ಅನುಭವಿಸುತ್ತಿದ್ದ ರಾಣಿಬೆನ್ನೂರಿನ ಜೋಯಿಸರಹರಳಹಳ್ಳಿಗೆ ಈಗ ನೀರಿಲ್ಲ. ಹುಬ್ಬಳ್ಳಿ-ಧಾರವಾಡಗಳು ಹತ್ತು ಹದಿನೈದು ದಿನಕ್ಕೊಮ್ಮೆ ನಳದಲ್ಲಿ ನೀರು ನಿರೀಕ್ಷಿಸುತ್ತಿವೆ. ಬೇಸಿಗೆಯಲ್ಲಿ ಹಳ್ಳಿ ಮಕ್ಕಳಿಗೆ ಈಜಾಟಕ್ಕೆ ಆಶ್ರಯ ನೀಡಿದ ಮಲೆನಾಡಿನ ಹೊಳೆ ಹಳ್ಳಗಳು ಸಂಪೂರ್ಣ ಒಣಗುತ್ತಿವೆ. ನದಿ ನಾಡಿನ ಕರಾವಳಿ ಜಲಕ್ಷಾಮಕ್ಕೆ ತುತ್ತಾಗಿದೆ. ನಾಲ್ಕು ದಶಕಗಳೀಚೆಗೆ ನೀರಿನ ಸಮಸ್ಯೆ ಬೆಳೆದಿದೆ. ಅಚ್ಚರಿಯೆಂದರೆ ಸಾಕ್ಷರತೆಯ ಪ್ರಮಾಣ, ಕೃಷಿ ಸುಧಾರಣೆಯ ಕ್ರಮಗಳು ಏರಿದ ಈ ದಶಕದಲ್ಲಿ ನೀರು ಮಾಯವಾಗಿದೆ. ಜಲದ ಕುರಿತ ಅಜ್ಞಾನ ಬೆಳೆಯುತ್ತಿದೆ.

ಏರಿದ ಕೃಷಿ, ಉದ್ಯಮ, ಜನಸಂಖ್ಯೆಯಿಂದ ನೀರಿನ ಬಳಕೆ ಹೆಚ್ಚಿರುವುದು ಸಹಜವಾಗಿ ಕಾಣುತ್ತದೆ. ಅಧಿಕ ನೀರು ಬಳಸುವ ಅಡಿಕೆ, ಕಬ್ಬು, ಭತ್ತ, ಬಾಳೆ, ದ್ರಾಕ್ಷಿ, ಪಪ್ಪಾಯ, ತೆಂಗು, ತಾಳೆ ಮುಂತಾದ ಬೆಳೆಗಳು ಈಗ ಎಲ್ಲೆಡೆ ಹಬ್ಬಿವೆ. ವರ್ಷಕ್ಕೆ ೫೦೦ ಮಿಲಿ ಮೀಟರ್ ಮಳೆ ಸುರಿಯದ ತುಮಕೂರು, ಚೆನ್ನಗಿರಿಗಳಲ್ಲಿ ಒಂದು ಮರಕ್ಕೆ ದಿನಕ್ಕೆ ೧೬ ಲೀಟರ್ ನೀರು ಬಯಸುವ ಅಡಿಕೆ ಬೆಳೆದಿದ್ದೇವೆ. ಪ್ರತಿ ಎಕರೆ ತೋಟಕ್ಕೆ ವಾರಕ್ಕೆ ೧೨,೦೦೦-೧೫,೦೦೦ ಲೀಟರ್ ನೀರು ಬೇಕು. ಕೃಷಿಗೆ ನದಿ, ಕೆರೆಗಳಲ್ಲಿ ನೀರಿಲ್ಲದಿದ್ದರಿಂದ ಆಳದ ಕೊಳವೆ ಬಾವಿ ಕೊರೆಸುತ್ತ ಅಂತರ್ಜಲ ಕುಸಿದಿದೆ. ಒಂದು ಕಾಲದಲ್ಲಿ ನೀರಿಗೆ ನೆರವಾದ ನಗರದ ಕೆರೆಗಳು ಕೊಳಚೆಗುಂಡಿಗಳಾಗಿವೆ. ನದಿ ಮೂಲದ ಮಲೆನಾಡಿನಲ್ಲಿಯೂ ಅರಣ್ಯ ನಾಶವಾಗಿ ಜಲಮೂಲಗಳು ಒಣಗಿವೆ. ವರ್ಷದಿಂದ ವರ್ಷಕ್ಕೆ ಮಳೆ ಕಡಿಮೆಯಾಗುತ್ತಿದೆ. ಮಳೆಗಾಲ ಮುಗಿದ ತಕ್ಷಣ ಹಳ್ಳಗಳ ನೀರಿನ ಹರಿವು ನಿಂತು ಹೋಗುತ್ತಿದೆ.

ರಾಜ್ಯದ ಕೃಷಿಯ ವಿಶೇಷ ಗಮನಿಸಬೇಕು. ಇಲ್ಲಿ ೬,೦೦೦ ಮಿಲಿ ಮೀಟರ್ ಆಗುಂಬೆ ಬೆಟ್ಟದಲ್ಲಿಯೂ ಕೃಷಿಯಿದೆ. ಕೇವಲ ೨೫೦ ಮಿಲಿ ಮೀಟರ್ ಸುರಿಯುವ ಮೊಳಕಾಲ್ಮೂರಿನಲ್ಲಿಯೂ ಬೇಸಾಯವಿದೆ. ಒಟ್ಟೂ ಕೃಷಿ ನೆಲೆಯ ಸುಮಾರು ೪೦ರಷ್ಟು ಪ್ರದೇಶ ಎರೆ ಹೊಲಗಳು. ಎರೆ ಇದ್ದವ ದೊರೆಯೆಂದು ಜನಪದರು ಕರೆಯುತ್ತಾರೆ. ನಮ್ಮ ಮೈಮೇಲಿನ ಬಟ್ಟೆ ಒದ್ದೆಯಾಗುವಷ್ಟು ಚಿಕ್ಕ ಮಳೆ ಸುರಿದರೆ ಒಂದು ವರ್ಷಕ್ಕೆ ಅಗತ್ಯವಿರುವಷ್ಟು ಬಿಳಿಜೋಳ ಬೆಳೆಯುವ ಜಾಣೆ ರೈತರದು. ಚಳಿಗಾಲದ ಮಂಜಿನ ತೇವದಲ್ಲಿ ಕಡಲೆ ಬೆಳೆಯುವ ತಾಕತ್ತಿದೆ. ಎತ್ತುಗಳಿಂದ ಉಳುಮೆ ನಡೆಯುತ್ತಿದ್ದ ಕಾಲದಲ್ಲಿ ಎಕರೆಗೆ ೧೦-೧೫ ಮರಗಳು ಬಯಲು ನಾಡಿನ ಹೊಲದಲ್ಲಿದ್ದವು. ಬೇವು, ಕರಿಜಾಲಿ, ಹೊಂಗೆ ಮುಂತಾದ ಸಸ್ಯಗಳು ಮಣ್ಣಿಗೆ ಸಾವಯವ ಶಕ್ತಿ ಒದಗಿಸಿ ನೀರು ಹಿಡಿಯುತ್ತಿದ್ದವು. ಸದಾ ಬರದಿಂದ ತತ್ತರಿಸುವ ಗದಗದಲ್ಲಿ ಇಂದು ಎರಡು ಎಕರೆಗೆ ಒಂದು ಮರವೂ ಇಲ್ಲ! ಹೊಲದಲ್ಲಿ ಮರ ಬೆಳೆಸುವ ಪ್ರಯತ್ನಗಳು ನಡೆದರೆ ಮಾತ್ರ ನಾಡಿನ ನೀರಿನ ಸ್ಥಿತಿ ಸ್ವಲ್ಪ ಬದಲಾಗಬಹುದು.

ರೈತರು ಕೃಷಿ ಉಳಿಸಲು ಹೋರಾಡುತ್ತಿದ್ದಾರೆ. ನೀರು ದೊರಕಿದರೆ ಸರಕಾರಕ್ಕೆ ಸಾಲ ನೀಡುವುದಾಗಿ ಹೇಳುತ್ತಾರೆ. ದೂರದ ಜಲಾಶಯ, ನದಿಗಳಿಂದ ನೀರು ನೀಡುವ ಕೇಂದ್ರೀಕೃತ ನೀರಾವರಿ ಮಾದರಿಗಳಿವೆ. ಮಳೆ ಬಂದು ಜಲಾಶಯ ಭರ್ತಿಯಾದರೆ

ಬದುಕು ಗೆಲ್ಲಬಹುದು. ಜಲಾಶಯ ತುಂಬದಿದ್ದರೆ ರೈತರು ಕಂಗಾಲಾಗುತ್ತಾರೆ. ಹೊಲದಲ್ಲಿ ಮಳೆ ಸುರಿದರೆ ನೀರು ಹಿಡಿಯಲು ನೀರಾವರಿ ಪ್ರದೇಶಗಳಲ್ಲಿ ಕೆರೆಗಳಿಲ್ಲ. ಕಾವೇರಿ, ಕೃಷ್ಣಾ ಕಣಿವೆಯ ಭತ್ತದ ಬೆಳೆಗಾರರು ಕಳೆದ ನಾಲ್ಕು ವರ್ಷಗಳಿಂದ ಸಂಕಷ್ಟ ಅನುಭವಿಸಿದ್ದಾರೆ. ಶೇಕಡಾ ೩೫-೪೦ ರಷ್ಟು ಕಬ್ಬಿನ ಕ್ಷೇತ್ರಗಳು ಕಡಿಮೆಯಾಗಿವೆ. ಬದುಕನ್ನು ಸುಸ್ಥಿರಗೊಳಿಸಲು ಪ್ರತಿಯೊಬ್ಬರು ಜಲಸಾಕ್ಷರರಾಗಬೇಕು. ನೀರಿನ ಸಂರಕ್ಷಣೆ, ಮಿತ ಬಳಕೆಯ ತಂತ್ರ ಅನುಸರಿಸಬೇಕು. ಹವಾಮಾನ ಬದಲಾವಣೆಯಾದ ಕಾಲಕ್ಕೆ ಸರಿಯಾಗಿ ಮಳೆ ಸುರಿಯದಿದ್ದರೂ ನಂತರ ಮಳೆ ಬರುತ್ತಿದೆ. ಮಳೆ ನೀರು ಓಡಿ ಪ್ರವಾಹ ಪರಿಸ್ಥಿತಿ ಉದ್ಭವವಾಗುತ್ತಿದೆ. ಸುರಿದ ಮಳೆ ನೀರು ಶೇಖರಿಸಲು ಕೆರೆ, ಕೃಷಿಹೊಂಡ ನಿರ್ಮಾಣ ಅಗತ್ಯವಿದೆ. ಹೊಲಗಳಿಗೆ ಬದು ನಿರ್ಮಿಸಿ ಮರ ಅಭಿವೃದ್ಧಿಯಾಗಬೇಕಿದೆ. ನಗರಗಳಲ್ಲಿ ಚಾವಣಿ ನೀರಿನ ಕೊಯ್ಲು, ಕೆರೆಗಳ ಸುಧಾರಣೆ, ನೀರು ಹರಿಯುವ ಕಾಲುವೆಗಳನ್ನು ಸರಿಪಡಿಸುವ ಕಾರ್ಯಗಳಿಗೆ ಮಹತ್ವ ಬೇಕು. ಹಿಂಗಾರಿ, ಮುಂಗಾರಿಯೆಂದು ಮಳೆ ನಂಬಿ ಬೇಸಾಯ ಮಾಡುವ ಪರಿಸ್ಥಿತಿ ಈಗಿಲ್ಲ. ಬದಲಾದ ಹವಾಮಾನದಿಂದ ಯಾವಾಗ ಬೇಕಾದರೂ ಮಳೆ ಸುರಿಯುತ್ತಿದೆ. ನೀರು ಹಿಡಿದು ಜನಜೀವನ ಗೆಲ್ಲಿಸಲು ಸಾಮೂದಾಯಿಕ ಪ್ರಯತ್ನ ಅಗತ್ಯವಿದೆ.

**ಜಲಕ್ಷಾಮಕ್ಕಿಂತ ಜ್ಞಾನಕ್ಷಾಮ ದೊಡ್ಡದು**

ರಾಜ್ಯದ ೧೩೯ ತಾಲೂಕುಗಳಲ್ಲಿ ಬರ ಪರಿಸ್ಥಿತಿ ೨೦೧೯ರಲ್ಲಿ ಉದ್ಭವಿಸಿತ್ತು. ಸರಕಾರ ಬರ ಅಧ್ಯಯನಕ್ಕೆ ಸಮಿತಿಗಳನ್ನು ರಚಿಸಿತ್ತು. ಸಚಿವರು, ಅಧಿಕಾರಿಗಳನ್ನೊಳಗೊಂಡ ಸಮಿತಿ ಬರದ ನಿಜ ಸ್ಥಿತಿ ಅರಿಯಲು ಯಾವ ಮಟ್ಟದಲ್ಲಿ ಅಧ್ಯಯನ ಮಾಡುತ್ತದೆಂಬುದು ನಮಗೆಲ್ಲ ತಿಳಿದ ಸಂಗತಿ, ಜಿಲ್ಲಾ/ತಾಲೂಕು ಮಟ್ಟಗಳಲ್ಲಿ ಅಧಿಕಾರಿ, ಜನಪ್ರತಿನಿಧಿಗಳ ಸಭೆ ಕರೆಯುವುದು, ಮಳೆ ಕೊರತೆಯ ವಿವರ ಪಡೆದು ಕೇಂದ್ರದ ನೆರವಿಗೆ ಮನವಿ ಸಲ್ಲಿಸುವ ಮಾಮೂಲಿ ಕೆಲಸ ನಡೆಯುತ್ತದೆ. ಆಡಳಿತ, ವಿರೋಧ ಪಕ್ಷಗಳಲ್ಲಿ ಜಗಳ, ಚರ್ಚೆಗಳಲ್ಲಿಯೇ ಹೆಚ್ಚಿನ ಸಮಯ ಕಳೆಯುತ್ತದೆ. ಬರದ ನೆಲಮೂಲದ ಪರಿಸ್ಥಿತಿ, ಬರ ಗೆಲ್ಲುವ ರೈತ ತಂತ್ರ ಅರಿಯುವ, ಜನಜಾಗೃತಿ ಮೂಡಿಸುವ ಪ್ರಯತ್ನಗಳು ಮಾತ್ರ ಯಾವತ್ತೂ ನಡೆಯುವುದಿಲ್ಲ. ಭೂಮಿಗೆ ಮರಳು ಮುಚ್ಚಿದೆಯ ಮೂಲಕ ನೆಲದ ತೇವ ಸಂರಕ್ಷಿಸಿ ಕೃಷಿ ಗೆಲ್ಲಿಸುವ ಯಲಬುರ್ಗಾ ರೈತರ ತಂತ್ರಗಳು, ಅಕ್ಕಡಿ ಬೇಸಾಯದ ಮೂಲಕ ಜನ ಜಾನುವಾರಿಗಳಿಗೆ ಬರದ ಕಷ್ಟವಾಗದಂತೆ ಬದುಕಿದ ಬೀದರಿನ ಬೇಸಾಯ, ಬದು ನಿರ್ಮಿಸಿ, ಮರ ಬೆಳೆಸಿ ಗೆದ್ದ ರೈತರು, ವಾರ್ಷಿಕ ೩೦೦-೪೦೦ ಮಿಲಿ ಮೀಟ ಮಳೆ ಸುರಿದರೂ ಎರೆ ಹೊಲದ ಖಾಸಗಿ ಕೆರೆಗಳಲ್ಲಿ ನೀರು ಹಿಡಿದಿಟ್ಟು ಗೆದ್ದ ರಾಯಚೂರಿನ ಸಿಂಗಡದಿನ್ನಿಯ ಕೃಷಿಕರು, ಕೃಷಿ ಹೊಂಡದಲ್ಲಿ ನೀರು ಹಿಡಿದು ಗೆದ್ದವರನ್ನು ನೋಡಿದರೆ ನೆಲದ ಪಾಠಗಳು ಸಿಗುತ್ತವೆ. ಬರ ಎದುರಿಸುವ ದಾರಿ ಕಾಣುತ್ತದೆ. ಪ್ರತಿ ವರ್ಷ ಕೇಂದ್ರದ ಬರಪರಿಹಾರದ ಹಣದ ಮೂಲಕ ಮಾತಾಡುವ ಬದಲು ಇಂಥ ಸುಸ್ಥಿರ ಕ್ರಮಗಳತ್ತ ಗಮನಬೇಕು.

ಅಧಿಕಾರಿಗಳ ಸಭೆ, ಮಾಧ್ಯಮಗಳ ಹೇಳಿಕೆಯ ಹಂತಮೀರಿ ನಿಜವಾದ ವಸ್ತುಸ್ಥಿತಿ

ಅರಿಯುವ ತಂತ್ರಗಳನ್ನು ಆಡಳಿತ ಬಳಸಬೇಕು. ರಾಜ್ಯದ ವಿವಿಧ ಪ್ರದೇಶದ ಒಳ ಹಳ್ಳಿಗಳಲ್ಲಿ ಒಂದು ಸಂಚಾರ ಕೈಗೊಂಡರೆ ವಿಶೇಷ ವಿವರಗಳು ಕಣ್ಣಿಗೆ ರಾಚುತ್ತವೆ. ಚಳಿಗಾಲದಲ್ಲಿ ಬೀದರ್‌ದಿಂದ ಅಥಣಿಯವರೆಗೆ ಕಾಣಿಸುವ ಜವೆಗೋಧಿ, ಜೋಳ, ಸಜ್ಜೆ, ಕಡಲೆ, ಕುಸುಬಿ ಬೆಳೆಗಳ ಸ್ಥಿತಿ ಏನಾಗಿದೆಯೆಂದು ನೋಡಬಹುದು. ನದಿ, ನಾಲೆ, ಕೆರೆ, ಬಾವಿಗಳಲ್ಲಿ ನೀರಿನ ಸ್ಥಿತಿ ಗಮನಿಸಬಹುದು. ದನಕರು ಮೇವಿಗಾಗಿ ರೈತರ ಹೊಲಗಳಲ್ಲಿ ಎಷ್ಟು ಸಂಗ್ರಹವಿದೆಯೆಂಬ ಅಂದಾಜು ದೊರೆಯಬಹುದು. ಹೊಲದಲ್ಲಿ, ಬೇವಿನ ಮರದಡಿಯಲ್ಲಿ ಕುಳಿತ ರೈತರ ಜೊತೆ ಮಾತಾಡುತ್ತ ಹೋದರೆ ಬೇಸಿಗೆಯ ಸಂಕಷ್ಟದ ಅಂದಾಜು ಊಹಿಸಬಹುದು. ಬರದ ಸಂಕಷ್ಟಕ್ಕೆ ಮಳೆ ಕೊರತೆ ಮಾತ್ರ ಕಾರಣವಿರುವುದಿಲ್ಲ, ಮುಂಗಾರಿ ಬೆಳೆ ಕೊಯ್ಲಿನ ಹೊತ್ತಿಗೆ ಅಧಿಕ ಮಳೆ ಸುರಿದು ಮೇವಿನ ನಷ್ಟವಾದರೂ ರೈತರಿಗೆ ಬರ ಭೀಕರವಾಗುವುದನ್ನು ಕಳೆದ ವರ್ಷ ಕಲಬುರಗಿಯಲ್ಲಿ ಕಂಡಿದ್ದೇವೆ. ಬಹುಬೆಳೆ ಪದ್ಧತಿ ಕೈಬಿಟ್ಟಿದ್ದು ಬರದ ತೀವ್ರತೆ ಹೆಚ್ಚಳಕ್ಕೆ ಒಂದು ಕಾರಣವಾಗಿದೆ.

ತೋಟ ಉಳಿಸಲು ವರ್ಷದಿಂದ ವರ್ಷಕ್ಕೆ ಆಳಕ್ಕೆ ಕೊಳವೆ ಬಾವಿ ಕೊರೆಸುತ್ತಿದ್ದೇವೆ. ಅಂತರ್ಜಲ ಕುಸಿತದ ಬಳಿಕ ಜಾನುವಾರುಗಳ ಸಮಸ್ಯೆ ಬೆಳೆಯುತ್ತಿದೆ. ಕೆರೆ, ನಾಲಾಗಳಲ್ಲಿ ನೀರು ಕುಡಿಯುತ್ತಿದ್ದ ದನಕರುಗಳಿಗೆ ಬರದಲ್ಲಿ ಮನುಷ್ಯ ನೀಡಿದರಷ್ಟೇ ನೀರು ಸಿಗುತ್ತದೆ. ಕಲಬುರಗಿಯ ಆಳಂದದ ರೈತರು ೨೦೧೬ ರ ಬರದಲ್ಲಿ ದನಕರುಗಳಿಗೆ ನೀರು ಅಳೆದು ಕುಡಿಸುತ್ತಿದ್ದರು. ಒಂದು ಜಾನುವಾರುವಿಗೆ ದಿನಕ್ಕೆ ೧೦೦-೧೨೦ ಲೀಟರ್ ನೀರು ಬೇಕು. ಆದರೆ ಆ ವರ್ಷ ಅತ್ಯಂತ ಸಂಕಷ್ಟ ಉದ್ಭವಿಸಿ ೧೫-೨೦ ಲೀಟರ್ ನೀರಿನಲ್ಲಿ ದನಕರುಗಳ ಜೀವ ಉಳಿಸುವ ಪರಿಸ್ಥಿತಿ ಬಂದಿತ್ತು. ಕಲಬುರಗಿಯ ಆಳಂದದ ದುತ್ತರಗಾಂವ್ ಹಳ್ಳಿಗೆ ಟ್ಯಾಂಕರ್ ನೀರು ಬರುತ್ತಿತ್ತು. ದಿನಕ್ಕೆ ಐದು ಬಿಂದಿಗೆಯಲ್ಲಿ ಕುಟುಂಬಗಳು ಬದುಕಿದವು. ಪ್ಲಾಸ್ಟಿಕ್ ಬುಟ್ಟಿಯಲ್ಲಿ ನಿಂತು ಸ್ನಾನ ಮಾಡಿ ಆ ನೀರನ್ನು ಸಂಗ್ರಹಿಸಿ ದನಕರುಗಳನ್ನು ಬದುಕಿಸಿದ್ದರು. ದನಕರುಗಳನ್ನೆಲ್ಲ ಕಟುಕರಿಗೆ ಮಾರಾಟ ಮಾಡುತ್ತಿದ್ದ ನೋವಿನ ನೋಟಗಳು ಕಡಂಗಂಚಿ, ದುತ್ತರಗಾಂವ್ ಮುಂತಾದೆಡೆ ಕಾಣಿಸುತ್ತಿದ್ದವು. ಉಳುಮೆ ಎತ್ತುಗಳನ್ನು ಮಾರಾಟ ಮಾಡಿದ ಹೈದ್ರಾಬಾದ್ ಕರ್ನಾಟಕದ ರೈತರು ಪುನಾ, ಮುಂಬೈ, ಬೆಂಗಳೂರಿಗೆ ವಲಸೆ ಹೋಗುತ್ತಿದ್ದರು. ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕದ ಸ್ಥಿತಿ ಹೇಗಿದೆಯೆಂಬುದು ಅರಿಯಲು ಇಷ್ಟು ದೂರ ಪಯಣಿಸುವ ಅಗತ್ಯವೂ ಇರಲಿಲ್ಲ! ಬೆಂಗಳೂರಿನ ಯಶವಂತಪುರ ರಸ್ತೆಯಲ್ಲಿ ನಿಂತರೆ ಖಾಸಗಿ ವಾಹನಗಳಲ್ಲಿ ಸಂಸಾರ ಸಮೇತ ಕೂಲಿಗೆ ವಲಸೆ ಬರುವ ಬಡ ಕುಟುಂಬಗಳನ್ನು ನಿತ್ಯವೂ ನೋಡಬಹುದಿತ್ತು. ಆದರೆ ನಮ್ಮ ಆಡಳಿತಕ್ಕೆ ಬರದ ವಿಚಾರದಲ್ಲಿ ರೈತರಲ್ಲಿ ಕೇಳುವುದಕ್ಕಿಂತ ಅಧಿಕಾರಿಗಳ ವರದಿ ಪಡೆಯುವ ಮಾದರಿಗೆ ಅಂಟಿದೆ!

ಬರ ಮೈಸೂರು ಸೀಮೆಗೂ ಕಾಲಿರಿಸಿದೆ. ಮಳೆಗಾಲದ ಭತ್ತ ಬೆಳೆಯಲಾಗದೇ ಗದ್ದೆಗಳು ಪಾಳು ಬಿದ್ದಿವೆ. ಕೃಷಿಗಿಂತ ಕುಡಿಯುವ ನೀರಿನ ಸಮಸ್ಯೆ ಮುಖ್ಯವಾಗಿದೆ. ರಾಜ್ಯದ ಎಲ್ಲ ಅಣೆಕಟ್ಟುಗಳ ನೀರನ್ನು ಇನ್ನು

ಕುಡಿಯುವುದಕ್ಕೆ ಮಾತ್ರ ನಿಗದಿಪಡಿಸುವ ಅನಿವಾರ್ಯತೆ ತಲೆದೋರಿದೆ. ಕೃಷ್ಣಾ ನದಿಯ ಪ್ರವಾಹದ ನೀರನ್ನು ವಿಜಾಪುರದ ಕೆರೆಗಳಿಗೆ ತುಂಬಿಸುವ ಉತ್ತಮ ಕೆಲಸಗಳು ನಡೆದಿವೆ, ಕೃಷಿ ಹೊಂಡ ಯೋಜನೆಗಳು



ನೆರವಾಗಿವೆ. ಮಲೆನಾಡಿನ ಬೆಟ್ಟಗಳಿಂದ ಕರಾವಳಿಯತ್ತ ಹರಿಯುವ ನದಿ, ಹಳ್ಳಗಳು ಈಗಾಗಲೇ ಒಣಗಿವೆ. ಮಾರ್ಚ್‌ದಲ್ಲಿರುವಷ್ಟು ಕನಿಷ್ಟ ಪ್ರಮಾಣದ ನೀರು ಡಿಸೆಂಬರ್‌ದಲ್ಲಿ ಹರಿಯುತ್ತಿದೆ. ಇಂಥ ಸಂಕಷ್ಟದ ಸಂದರ್ಭದಲ್ಲಿ ಜಲ ಸಂರಕ್ಷಣೆ, ನೀರಿನ ಮಿತ ಬಳಕೆಗೆ ಜಾಗೃತಿ ಮೂಡಿಸುವ ಅಗತ್ಯವಿದೆ. ಅಂತರ್ಜಲ ಕುಸಿತದ ಅಪಾಯದ ಸಂದರ್ಭದಲ್ಲಿ ಅಧಿಕ ನೀರು ಬಳಸುವ ಕಬ್ಬು, ಅಡಿಕೆ, ಭತ್ತದ ಕ್ಷೇತ್ರ ವರ್ಷದಿಂದ ವರ್ಷಕ್ಕೆ ಬೆಳೆಯುತ್ತಿದೆ. ಒಂದು ಅಂದಾಜಿನ ಪ್ರಕಾರ ನಮ್ಮ ಅಣೆಕಟ್ಟೆ ನೀರಿನ ಹೆಚ್ಚಿನ ಭಾಗ ಈ ಬೆಳೆಗಳಿಗೆ ಖರ್ಚಾಗುತ್ತಿದೆ. ಹಣ ನೀಡುವ, ಸುಲಭದಲ್ಲಿ ಬೆಳೆಯುವ ಬೆಳೆಗಳತ್ತ ರೈತರು ಆಸಕ್ತರಾಗಿದ್ದಾರೆ. ವಾಣಿಜ್ಯ ಬೆಳೆಯ ಅಬ್ಬರಕ್ಕೆ ನೀರಿನ ಬಳಕೆ ಹೆಚ್ಚುತ್ತ ಇಂದು ವಾಡಿಕೆಯ ೬೦೦-೮೦೦ ಮಿಲಿ ಮೀಟರ್ ಮಳೆ ಸುರಿದರೂ ಪ್ರದೇಶ ಜಲಕ್ಷಾಮದಿಂದ ತತ್ತರಿಸುವ ಸ್ಥಿತಿಯಿದೆ.

ನೀರಾವರಿ ಬೆಳೆ ಕ್ಷೇತ್ರ ನಿಯಂತ್ರಣಕ್ಕೆ ಯಾವ ಸರಕಾರವೂ ದಿಟ್ಟ ಕ್ರಮ ಕೈಗೊಳ್ಳುವುದಿಲ್ಲ. ವರ್ಷದಿಂದ ವರ್ಷಕ್ಕೆ ನಿಯಂತ್ರಣವಿಲ್ಲದೇ ನೀರಿನ ಬಳಕೆ ಹೆಚ್ಚುತ್ತಿರುವಾಗ ಬೃಹತ್ ನೀರಾವರಿ ಯೋಜನೆ ರೂಪುಗೊಳ್ಳುತ್ತಿವೆ. ಹಣ ಖರ್ಚು ಮಾಡಿ ಕಾಂಕ್ರೀಟ್ ಕಾಲುವೆ ಮಾಡಿದ ಮಾತ್ರಕ್ಕೆ ನೀರಾವರಿಯಾಗುವುದಿಲ್ಲ. ಮಳೆ ಸುರಿದರೆ ಮಾತ್ರ ನೀರು ಸೀಗುತ್ತದೆ. ಮಲೆನಾಡಿನಲ್ಲಿಯೇ ನೀರಿನ ಸಮಸ್ಯೆ ಜೋರಾಗಿರುವಾಗ ನೀರಾವರಿ ಯೋಜನೆಯ ಲಾಭ ಗುತ್ತಿಗೆದಾರರಿಗೆ, ರಾಜಕಾರಣಿಗಳಿಗಷ್ಟೇ 'ನೆಮ್ಮದಿ' ನೀಡಬಹುದು. ಬರ ರಾಜ್ಯದ ಕಾಯಂ ನಿವಾಸಿಯಾಗಲು ಅಗತ್ಯವಿರುವ ಹೆಜ್ಜೆಗಳನ್ನು ಅಸಡಾಬಸಡಾ ಜಲ ಬಳಕೆ, ಕೃಷಿ ನೀತಿಯ ಮೂಲಕ ಇಡುತ್ತಿದ್ದೇವೆ. ತಪ್ಪು ಸರಕಾರದ್ದಷ್ಟೇ ಅಲ್ಲ. ನೀರಿನ ನಿಜಸ್ಥಿತಿ ಅರಿಯದ ಕೃಷಿಕರದೂ ಹೌದು. ಮರ ಬೆಳೆಸುವ, ಜಲ ಸಂರಕ್ಷಿಸುವ, ಬೆಳೆ ವೈವಿಧ್ಯ ಪೋಷಿಸುವ, ಮೌಲ್ಯವರ್ಧನೆಯ ಮಾರುಕಟ್ಟೆ ತಂತ್ರ ಅನುಸರಿಸುವ ಮೂಲಕ ಗೆಲ್ಲುವ ದಾರಿಗಳನ್ನು ರೈತರು ಅನುಸರಿಸುವ ಅಗತ್ಯವಿದೆ.

ಕೋಲಾರದ ಟೊಮೆಟೋ ಬೆಳೆಗೆ ಕಿಲೋಗೆ ೧೫ ರೂಪಾಯಿ ಸಿಕ್ಕರೆ ಮಾತ್ರ ರೈತರಿಗೆ ಲಾಭ ದೊರೆಯುತ್ತದೆ. ೧೬೦೦-೧೮೦೦ ಅಡಿಗೆ ಕುಸಿದ ಅಂತರ್ಜಲ ನಂಬಿಕೊಂಡು ನೀರಿಗಾಗಿ ಅಪಾರ ಹಣ ಖರ್ಚು ಮಾಡುವ ರೈತರಿಗೆ ಲಾಭ ದೊರೆಯುವುದು ಕಷ್ಟವಿದೆ. ದೂರದ ಮಹಾರಾಷ್ಟ್ರದಲ್ಲಿ ಮಳೆ ಸುರಿದು ಅಲ್ಲಿನ ಟೊಮೆಟೋ ಬೆಳೆ ಹಾಳಾದರೆ ನಮ್ಮ ರೈತರಿಗೆ ಲಾಭವಾಗುತ್ತದೆ. ಒಂದೆಡೆ ಬೆಳೆ ನಷ್ಟವಾಗಿ ಇನ್ನೊಂದು ಪ್ರದೇಶದ ರೈತರಿಗೆ ಲಾಭ ದೊರೆಯುವ ದುಸ್ಥಿತಿ ಬಂದಿರುವುದು ದಿಕ್ಕುತಪ್ಪಿದ ಕೃಷಿಗೆ ಉತ್ತಮ ನಿದರ್ಶನವಾಗಿದೆ. ಇದೇ ಜಿಲ್ಲೆಯ

ರಾಂಪುರ, ನೆನೆಮನಹಳ್ಳಿ ಕೃಷಿಕರು ಮಳೆ ನೀರು ಹಿಡಿದು ಮರ ಬೆಳೆಸಿ ಉತ್ತಮ ಕೃಷಿ ನಡೆಸಿದ ಉದಾಹರಣೆಯಿದೆ. ಇಷ್ಟೊಂದು ಸಮೂಹ ಸಂಪರ್ಕ ಸೌಲಭ್ಯ, ತಂತ್ರಜ್ಞಾನ ಹೊಂದಿರುವ ಯುಗದ ನಾವು ಬೆಳೆ ಪರಿಸ್ಥಿತಿ, ನೀರಿನ ಸ್ಥಿತಿಗತಿ, ಮಾರುಕಟ್ಟೆ ಕಲಿಕೆಗೆ ಇವನ್ನು ಪರಿಣಾಮಕಾರಿಯಾಗಿ ಬಳಸಲು ಕಲಿತಿಲ್ಲ. ರಾಜ್ಯಕ್ಕೆ ಈಗ ಒದಗಿರುವುದು ಜಲಬರವಷ್ಟೇ ಅಲ್ಲ 'ಜ್ಞಾನಬರ'ವೂ ಹೌದು.

**ಪ್ರಕೃತಿಯೆದುರು ಗೆಲ್ಲುವುದು ಅಸಾಧ್ಯ, ಬದುಕುವ ಪ್ರಯತ್ನಬೇಕು**

ಕಳೆದ ೨೦೧೯ ರಲ್ಲಿ ಅರ್ಧ ಕರ್ನಾಟಕ ಪ್ರವಾಹಕ್ಕೆ ತತ್ತರಿಸಿದೆ. ಕಾವೇರಿ



ಉಕ್ಕೇರಿದ್ದು, ಕೃಷ್ಣಾ ಆರ್ಭಟಿಸಿದ್ದು ಗಮನಿಸಿದ್ದೇವೆ. ಮಳೆ ಕೊರತೆಯಿಂದ ಬಳಲುತ್ತಿದ್ದ ರಾಜ್ಯ ಹತ್ತೇ ಹತ್ತು ದಿನಗಳಲ್ಲಿ ಸಾವಿರಾರು ಮಿಲಿಮೀಟರ್ ಪಡೆದು ಸರಕಾರೀ ಲೆಕ್ಕದಲ್ಲಿ ಮಳೆ ಕೊರತೆ ಕಡಿಮೆಯಾಗಿದೆ. ತುಂಗಭದ್ರಾ, ಅಘನಾಶಿನಿ, ಶರಾವತಿ, ಗಂಗಾವಳಿ, ಸೀತಾ, ಸೌಪರ್ಣಿಕಾ ಮುಂತಾದ ನದಿ ನಾಡಿಗೆಲ್ಲ ಪ್ರವಾಹ ಭೀಕರ ಗಾಯಮಾಡಿ ಮಳೆ ಮಾಯವಾಗಿದೆ. ಮಳೆ ವಿವಿಧ ನಕ್ಷತ್ರಗಳಲ್ಲಿ ಹೇಗೆ ಸುರಿಯುತ್ತದೆಂಬ ನುಡಿಗಟ್ಟುಗಳಿವೆ. ಹುಬ್ಬೆ ಮಳೆ ಅಂದ್ರೆ ಅಬ್ಬೆ ಹಾಲು ಕುಡಿದಂತೆ, ಆರದಂತೆ ಸುರಿಯುವ ಆರದ್ರೆ ಎಂದೆಲ್ಲ ಗುರುತಿಸದ್ದೇವೆ. ಮಳೆ ನಾಡಿನ ಮಲೆನಾಡು ಕೂಡಾ ಈಗ ಹಾಗಿಲ್ಲ, ಮಳೆಗಾಲದಲ್ಲಿ ಮಳೆಯ ಮುನ್ಸೂಚನೆ ಆಲಿಸುತ್ತಿದೆ. ನಾಲ್ಕಾರು ದಿನ ಜಾತ್ರೆ ನಡೆಸಿದಂತೆ ಅಬ್ಬರಿಸಿ ಊರುಕೇರಿಗಳನ್ನು ಸೂರೆ ಹೊಡೆದು ಹೋಗುತ್ತಿದೆ. ಗುಡ್ಡ ಕುಸಿತ, ಜೀವಹಾನಿ, ಕೃಷಿ ನೆಲೆಗಳನ್ನು ನುಂಗುವುದು ಮಾಮೂಲಿಯಾಗಿ 'ಮಳೆ ಭಯ' ಆವರಿಸಿದೆ. ವಿಚಿತ್ರವೆಂದರೆ ಮುಂದಿನ ಬೇಸಿಗೆಯಲ್ಲಿ ಇದೇ ಊರು ಟ್ಯಾಂಕರ್ ನೀರು ಬೇಡುತ್ತದೆ. ನೆರೆಹಾವಳಿ, ಜಲಕ್ಷಾಮ ಒಂದೇ ವರ್ಷದಲ್ಲಿ ಒಂದೇ ಪ್ರದೇಶದ ಸಮಸ್ಯೆಯಾಗುತ್ತಿರುವುದು ನೀರು ನಿರ್ವಹಣೆಯ ದೋಷವೂ ಹೌದು. ಪ್ರಕೃತಿಯ ಎದುರು ಗೆಲ್ಲುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಬದುಕುವ ಪ್ರಯತ್ನ ಮಾಡುವುದಕ್ಕೆ ಅವಕಾಶವಿದೆ. ನೆರೆಯ ಹಾನಿ ಕಡಿಮೆ ಮಾಡಿಕೊಂಡು ನಾಳಿನ ನೀರಿಗಾಗಿ ಯೋಚಿಸುವ ತುರ್ತು ಎದುರಿಗಿದೆ.

ಹಿಂದಿನ ಸರಕಾರ ೨೦೧೯ ನ್ನು ಜಲವರ್ಷವೆಂದು ಘೋಷಿಸಿತ್ತು. ಜಲಾಮೃತ ಕಾರ್ಯಕ್ರಮವನ್ನು ಜಲಜಾಗೃತಿಗೆ ಅಧಿಕಾರಿ ಕೇಂದ್ರೀಕೃತವಾಗಿ ರೂಪಿಸಿ ಕಾರ್ಯಾಗಾರ, ದಾಖಲೆಗಳನ್ನು ಶೇಖರಿಸುವ ಕಾರ್ಯ ಶೈಲಿಗೆ ಅಂಟಿದೆ. ಕೇಂದ್ರ ಸರಕಾರ ಕೂಡಾ ಜಲಶಕ್ತಿ ಕಾರ್ಯಕ್ರಮ ನಡೆಸುತ್ತಿದೆ. ಎಲ್ಲರಿಗೂ ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕೇಂದ್ರ ಬಿಂದು. ಸರಕಾರಿ ಕಡತಗಳಲ್ಲಿ ಜಲಜಾಗೃತಿ ಕಾರ್ಯಕ್ರಮ

ಸಂಘಟಿಸಿದ ವರದಿ ಬರೆಯುವುದರಿಂದ ರಾಜ್ಯ ಯಾವತ್ತೂ ಉದ್ಧಾರವಾಗುವುದಿಲ್ಲ. ಒಮ್ಮೆ ಕಳೆದ ೧೦ ವರ್ಷಗಳಿಂದ ನೀರಿನ ವಿಚಾರದ ಸರಿತಪ್ಪುಗಳನ್ನು ಅವಲೋಕಿಸಿ ನಡೆದಿದ್ದರೆ ಉತ್ತಮವಾಗುತ್ತಿತ್ತು. ಗೆದ್ದವರ ಪಾಠ ಆಲಿಸಬೇಕಿತ್ತು. ಜಲಕಾರ್ಯಕರ್ತರ ಪ್ರಯತ್ನಗಳಿಂದ ಪಾಠ ಕಲಿಯಬೇಕಿತ್ತು. ಏನು ಮಾಡೋಣ? ಸರಕಾರೀ ವ್ಯವಸ್ಥೆಯಲ್ಲಿ ಕೆರೆಗಿಂತ ಜಾಸ್ತಿ ಹೂಳು ಭರ್ತಿಯಾಗಿದೆ. ನೀರಿನ ವಿಚಾರದಲ್ಲಿ ಪ್ರತಿ ಹಳ್ಳಿಗರೂ ಸ್ವಾರ್ಥಿಗಳಾಗಿ ಕೆರೆಕಟ್ಟೆಗಳಲ್ಲಿ ಶೇಖರಿಸಲು ಮುಂದಾದರೆ ಬದಲಾವಣೆ ಸಾಧ್ಯವಿದೆ.

೨೦೧೭ ರಲ್ಲಿ ರಾಜ್ಯ ಸರಕಾರ ಏಳು ಸಾವಿರ ಕೋಟಿ ರೂಪಾಯಿಗಳನ್ನು ಕೆರೆಗಳಿಗೆ ನೀರು ತುಂಬಿಸಲು ಖರ್ಚು ಮಾಡಿದೆಯಂತೆ! ಕೆರೆ ಸಂಪರ್ಕಿಸುವ ಕಾಲುವೆಗಳನ್ನು ಸರಿಪಡಿಸಿದರೆ ಅಕಾಲಿಕ ಮಳೆಯಲ್ಲಿ ಕೆರೆಗಳು ಭರ್ತಿಯಾಗುತ್ತಿದ್ದವು. ಕೆರೆಗಳನ್ನು ಪೈಪ್ ಮೂಲಕ ಜೋಡಿಸುವ ಪರಿಕಲ್ಪನೆಯಲ್ಲಿ ರಾಜ್ಯ ಮುಳುಗಿದೆ. ಊರಲ್ಲಿ ಸುರಿಯುವ ಮಳೆ ನೀರು ಹಿಡಿಯಲು ಜಲಪಾತ್ರೆ ಸಜ್ಜುಗೊಳಿಸುವುದು ಮರೆತು ದೂರದ ನದಿ ನೋಡುವುದು ಸಾಮಾನ್ಯವಾಗಿದೆ. ಎರಡು ವರ್ಷದ ಹಿಂದಿನ ಬರದಲ್ಲಿ ೭೨೦ ಗ್ರಾಮಗಳಿಗೆ ಟ್ಯಾಂಕರ್ ನೀರು ನೀಡಿದ್ದೇವೆ. ಈಗ ನಮ್ಮ ರಾಜ್ಯ ಅಂತರ್ಜಲ ಕುಸಿತದಲ್ಲಿ ದೇಶದಲ್ಲಿ



ನಾಲ್ಕನೇ ಸ್ಥಾನದಲ್ಲಿದೆ. ನೀರಿಗಾಗಿ ಕೊಲೆಗಳು ನಡೆಯುತ್ತಿವೆ. ಜಲ ಹೋರಾಟಗಳು ಮಾಮೂಲಿಯಾಗಿ ರಾಜಕೀಯ ಮೇಲಾಟಗಳಿಂದ ನೀರಿನ ಸತ್ಯ ಮರೆಯುವಂತಾಗಿದೆ. ಬಿದ್ದ ಹನಿಯನ್ನು ಬಿದ್ದಲೇ ಹಿಡಿಯುವುದು, ನೀರಿನ ಮಿತ ಬಳಕೆ, ಅಧಿಕ ನೀರು ಬಳಸುವ ಬೆಳೆಗಳಿಗೆ ಕಡಿವಾಣ ಹಾಕುವುದು ಮುಖ್ಯವಾಗಿದೆ. ನದಿಗಳು ಸೊರಗಿದರೆ ಅಣೆಕಟ್ಟೆಗಳ ಕೇಂದ್ರೀಕೃತ ನೀರಾವರಿ ಯೋಜನೆಗಳು ಸೋಲುತ್ತವೆ. ಕಾಡಿನ ಮಹತ್ವ ಗಮನಿಸಿಕೊಂಡು ನದಿ ಉಳಿಸಲು ಜನ ಮನ ಜಾಗೃತಗೊಳಿಸುವುದು ಮುಖ್ಯ ಕಾರ್ಯವಾಗಿದೆ.

ವರ್ಷದಿಂದ ವರ್ಷಕ್ಕೆ ಬರ ಪೀಡಿತ ತಾಲೂಕುಗಳ ಸಂಖ್ಯೆ ಹೆಚ್ಚುತ್ತಿದೆ. ದೇಶದ ಎರಡನೇ ದೊಡ್ಡ ಮರುಭೂಮಿಯಾಗಿ ರಾಜ್ಯ ಹೀನಾವಸ್ಥೆಗೆ ತಲುಪುತ್ತಿದೆ. ಮುಂದಿನ ೨೦೫೦ ನೇ ವರ್ಷದಲ್ಲಿ ನೀರಿನ ಬೇಡಿಕೆ ಈಗಿನ ಮಟ್ಟಕ್ಕಿಂತ ಶೇಕಡಾ ೫೫ ರಷ್ಟು ಹೆಚ್ಚಲಿದೆ. ಕೆರೆ, ಕಾಡುಗಳು ಕಣ್ಮರೆಯಾಗುತ್ತ, ನದಿ ಕಲ್ಮಶವಾಗುತ್ತ ಹೋದರೆ ಜಲ ಭವಿಷ್ಯ ಏನಾದೀತು? ಯೋಚಿಸಬೇಕಿದೆ. ರಾಜ್ಯದ ಪ್ರಮುಖ ಏಳು ನದಿಗಳಿಂದ ೩೪೭೨.೫ ಟಿ.ಎಂ.ಸಿ. ನೀರಿದೆ. ಇವುಗಳಲ್ಲಿ ಶೇಕಡಾ ೫೦ ರಷ್ಟು ಬಳಕೆಯಾಗುತ್ತಿದೆ. ಶೇಕಡಾ ೭೦ ರಷ್ಟು ಭೂ ಭಾಗದಲ್ಲಿ ೭೫೦ ಮಿಲಿ ಮೀಟರ್‌ಗಿಂತ ಕಡಿಮೆ ಮಳೆ ಸುರಿಯುತ್ತಿದೆ. ಕೃಷಿ ಭೂಮಿಯ ಶೇಕಡಾ ೯೦ ಭಾಗಕ್ಕೆ ನೀರಾವರಿ ಅಸಾಧ್ಯವೆಂದು ಖಚಿತವಾಗಿದೆ.

ಬಿದ್ದ ಹನಿ ಬಿದ್ದಲ್ಲಿ ಉಳಿಸಿ ಜಲ ಸಂರಕ್ಷಣೆ ಮೂಲಕ ನೀರ ನೆಮ್ಮದಿ ಸಾಧಿಸಿದ ಯಶೋಗಾಥೆ ಗಳಿವೆ, ಪರಿಸರಕ್ಕೆ ತಕ್ಕ ಮಾದರಿಗಳಿವೆ. ಪುಟ್ಟ ಪುಟ್ಟ ಮಾದರಿಗಳಿಂದ ದೊಡ್ಡ ಪಾಠ ಕಲಿಯಬೇಕಿದೆ.

## ಪ್ರಾಕೃತಿಕ ವಿಕೋಪ

**- ಸುಮಂಗಲ ಮುಮ್ಮಿಗಟ್ಟಿ**

೮೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಈ "ಕೃಷಿ ಮತ್ತು ನೀರಾವರಿ" ಗೋಷ್ಠಿಯಲ್ಲಿ ಸೇರಿರುವ ತಮ್ಮೆಲ್ಲರಿಗೆ ನಮಸ್ಕಾರಗಳು. ಕನ್ನಡ ನಾಡಿನ ಜನರ ಪ್ರಜ್ಞಾ ಲೋಕವನ್ನು ವಿಸ್ತರಿಸುವ ಜೊತೆ ಜೊತೆಗೇ ಇಲ್ಲಿಯ ರೈತರ ಬದುಕಿನ ಮೇಲೆ ಪ್ರಭಾವ ಬೀರುವ, ಸಮಕಾಲೀನ ಪ್ರಾಕೃತಿಕ ಬದಲಾವಣೆಗೆ ಅವರನ್ನು ಸಜ್ಜುಗೊಳಿಸುವ ಈ ಗೋಷ್ಠಿಯಲ್ಲಿ ನಾನು ಪ್ರಾಕೃತಿಕ ವಿಕೋಪಗಳು" ನ್ನು ಕುರಿತಂತೆ ಇಲ್ಲಿ ತಮ್ಮೊಂದಿಗೆ ಕೆಲವು ವಿಷಯಗಳನ್ನು ಹಂಚಿಕೊಳ್ಳಲು ಬಯಸುತ್ತೇನೆ.

ಸಾಮಾನ್ಯ ಪರಿಸ್ಥಿತಿಯಲ್ಲಿ ಯಾವುದೇ ರೀತಿಯ ವ್ಯತ್ಯಯ ಉಂಟಾಗಿ ಅದರಿಂದ ಜೀವಹಾನಿ ಅಥವಾ ಇನ್ನಾವುದೇ ರೀತಿಯಲ್ಲಿ ನಷ್ಟವುಂಟಾದಾಗ, ಅದನ್ನು ವಿಕೋಪ ಎಂದು ಕರೆಯುತ್ತಾರೆ. ಇಂತಹ ವಿಕೋಪಗಳು ನೈಸರ್ಗಿಕವಾಗಿದ್ದಾಗ ಅವನ್ನು "ಪ್ರಾಕೃತಿಕ ವಿಕೋಪಗಳು" ಎಂದು ಕರೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಜಾಗತಿಕ ಹವಾಮಾನ ಬದಲಾವಣೆಯಿಂದ ಜಗತ್ತಿನಾದ್ಯಂತ ಅದರಲ್ಲೂ ಭಾರತದಂತಹ ದೇಶದಲ್ಲಿ "ಪ್ರಾಕೃತಿಕ ವಿಕೋಪಗಳು" ಪದೇ ಪದೇ ಸಂಭವಿಸುತ್ತವೆ ಎನ್ನುವ ಎಚ್ಚರಿಕೆಯನ್ನು ಈಗಾಗಲೇ ಕೊಟ್ಟಿರುವುದರಿಂದ, ಅದನ್ನು ತಿಳಿಯಲು ನಾವು ಪ್ರಯತ್ನಿಸಲೇಬೇಕಾಗಿದೆ.

ಸಾಮಾನ್ಯವಾಗಿ ಕಂಡು ಬರುವ ಪ್ರಾಕೃತಿಕ ವಿಕೋಪಗಳು ಎಂದರೆ,

೧. ಬರ

೨. ಪ್ರವಾಹ

೩. ಆಲಿಕಲ್ಲು ಮಳೆ

೪. ಸಿಡಿಲು ಬಡಿತ

೫. ಮೇಘ ಸ್ಫೋಟ

೬. ಚಂಡಮಾರುತ

೭. ಭೂ ಕಂಪನ

೮. ಸುನಾಮಿ

**೧. ಬರ**

ಬರ ಅಂದರೆ ಏನು ಅನ್ನೋದನ್ನ ನಾನು ನಿಮಗೆ ಹೇಳಬೇಕಾಗಿಲ್ಲ. ಬರದ ಬವಣೆಯನ್ನು ಅನುಭವಿಸಿದ ರೈತರಿಗೆ ಗೊತ್ತು ಅದರ ಬವಣೆ. ಕಳೆದ ೧೯ ವರ್ಷಗಳಲ್ಲಿ ೧೫ ವರ್ಷ ರಾಜ್ಯ ಬರಕ್ಕೆ ಒಳಗಾಗಿದೆ. ಕರ್ನಾಟಕ ರಾಜ್ಯದ ಒಣ ಭೂ ಪ್ರದೇಶ ಇಡಿಯ ದೇಶದಲ್ಲಿ ೨ನೇ ಸ್ಥಾನದಲ್ಲಿದೆ. ಮೊದಲ ಸ್ಥಾನದಲ್ಲಿ ರಾಜಸ್ಥಾನವಿದೆ. ನಮ್ಮ



ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶ ಸುಮಾರು ೧೯೦.೨೪ ಲಕ್ಷ ಹೆಕ್ಟೇರುಗಳು. ಇದರಲ್ಲಿ ಸುಮಾರು ೧೫೨.೧ ಲಕ್ಷ ಹೆಕ್ಟೇರುಗಳು ಬರಕ್ಕೀಡಾಗುತ್ತಿದೆ. ಅಂದರೆ ಸರಿ ಸುಮಾರು ೮೦% ಬರ ಪೀಡಿತವಾಗುತ್ತಿದೆ. ಕರ್ನಾಟಕದ ಕೆಲವು ತಾಲೂಕುಗಳಂತೂ ಸತತವಾಗಿ ಐದು ವರ್ಷಗಳಿಗಿಂತ ಹೆಚ್ಚು ಕಾಲ ಬರಕ್ಕೀಡಾಗಿವೆ.

ಬರ ಎಂದರೆ ವಾಡಿಕೆಯ ಮಳೆ ಕೊರತೆ, ಪ್ರತಿಕೂಲ ಹವಾಮಾನ, ಒಣ ಹವೆ, ಜಲಚಕ್ರದಲ್ಲಿ ಉಂಟಾಗುವ ಅಸಮತೋಲನ ಅಂತಾ ಕರೀಬಹುದು. ಬರದಿಂದ ಸಾಮಾನ್ಯವಾಗಿ ಮಣ್ಣು ತನ್ನ ತೇವಾಂಶವನ್ನು ಕಳೆದುಕೊಂಡು, ಒಣದಾಗುತ್ತದೆ. ನದಿ ಕೆರೆ ಕಟ್ಟೆಗಳಲ್ಲಿ ನೀರು ಒಣಗಿ ಹೋಗುತ್ತದೆ, ಜನ ದನ ಜಾನುವಾರುಗಳಿಗೆ ನೀರು ಮತ್ತು ಮೇವಿನ ಕೊರತೆ ಉಂಟಾಗುತ್ತದೆ. ಅಂತರ್ಜಲ ಮಟ್ಟ ಕುಸಿಯುತ್ತದೆ. ಇವೆಲ್ಲದರ ಪರಿಣಾಮವಾಗಿ ಕೃಷಿ ಚಟುವಟಿಕೆಗಳು ಕುಂಟಿತಗೊಳ್ಳುತ್ತವೆ. ಒಟ್ಟಾರೆಯಾಗಿ ಬದುಕು ಕಷ್ಟವಾದಾಗ ಜನರು ಗುಳೆ ಹೊರಡುತ್ತಾರೆ. ಮಕ್ಕಳು ಮಹಿಳೆಯರು, ವೃದ್ಧರು, ಮಕ್ಕಳಲ್ಲಿ ಪೌಷ್ಟಿಕಾಂಶದ ಕೊರತೆ ಕಂಡುಬರುತ್ತದೆ.

ಇವೆಲ್ಲದರ ಪರಿಣಾಮ ಸಾಮಾಜಿಕ ವ್ಯವಸ್ಥೆಯ ಮೇಲೆ ಬೀಳುತ್ತದೆ. ಬಾಲ ಕಾರ್ಮಿಕರ, ಶಾಲೆ ಬಿಟ್ಟ ಮಕ್ಕಳು, ಮತ್ತು ಬಾಲ್ಯ ವಿವಾಹದಂತಹ ಸಮಸ್ಯೆಗಳಲ್ಲಿ ಹೆಚ್ಚಳ ಕಂಡು ಬರುತ್ತದೆ.

## ೨. ಪ್ರವಾಹ

ಕರ್ನಾಟಕದಲ್ಲಿ ಇತ್ತೀಚಿನ ವರ್ಷಗಳಲ್ಲಿ ಪ್ರವಾಹ ಪರಿಸ್ಥಿತಿ ಮತ್ತೆ ಮತ್ತೆ ಕಂಡುಬರುತ್ತಿರುವುದನ್ನು ನಾವೆಲ್ಲ ನೋಡುತ್ತಿದ್ದೇವೆ. ಇದಕ್ಕೆ ಕಾರಣಗಳೆಂದರೆ,

* ಅತಿಯಾದ ಮಳೆ

*ಹೆಚ್ಚಾದ ಮಳೆಯ ತೀವ್ರತೆ

* ಮಳೆ ಹಂಚಿಕೆಯಲ್ಲಿನ ವ್ಯತ್ಯಾಸ

* ಜಲಾಶಯಗಳಿಂದ ಹೆಚ್ಚಾದ ನೀರಿನ ಬಿಡುಗಡೆ

*ಸಾಗರಗಳಲ್ಲಿ ವಾಯುಭಾರ ಕುಸಿತ

೨೦೦೯ರಲ್ಲಿ ಬಂಗಾಳಕೊಲ್ಲಿಯಲ್ಲಿ ಉಂಟಾದ ವಾಯುಭಾರ ಕುಸಿತ, ಕೇವಲ ನಾಲ್ಕು ದಿನಗಳಲ್ಲಿ ಸುರಿದ ೩೦೦ ಮಿ. ಮೀ ಗೂ ಹೆಚ್ಚಿನ ಮಳೆಯಿಂದಾಗಿ (ರಾಜ್ಯದ ಉತ್ತರ ಭಾಗದ ವಾಡಿಕೆಯ ಮಳೆ ಸರಾಸರಿ <೧೦೦೦ ಮಿ. ಮೀ) ಮತ್ತು ಬಂಗಾಳ ಕೊಲ್ಲಿಯಲ್ಲಿ ಉಂಟಾದ ವಾಯುಭಾರ ಕುಸಿತದಿಂದ ಬಿದ್ದ ಹೆಚ್ಚು ಮಳೆಯಿಂದ ನೆರೆಯ ಮಹಾರಾಷ್ಟ್ರದ ಜಲಾಶಯಗಳಿಂದ ಬಿಟ್ಟ ಹೆಚ್ಚಾದ ನೀರು ಎಲ್ಲವೂ ಸೇರಿಕೊಂಡು ಉತ್ತರ ಕರ್ನಾಟಕದ ಭಾಗದಲ್ಲಿ ಪ್ರವಾಹ ಉಂಟಾಗಿ ಜನರು ತೊಂದರೆಯನ್ನು ಅನುಭವಿಸಬೇಕಾಯಿತು.

೨೦೧೭ರ ಜುಲೈ ತಿಂಗಳಲ್ಲಿ ಸುರಿದ ಬಾರಿ ಮಳೆ ಬೆಂಗಳೂರಿನ ಉತ್ತರ ಮತ್ತು ಪೂರ್ವ ಭಾಗದ ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿ ಅಪಾರವಾದ ಆಸ್ತಿ ಪಾಸ್ತಿಯ ಹಾನಿಯಾಯಿತು.

೨೦೧೮ರಲ್ಲಿ ಸುರಿದ ಬಾರಿ ಮುಂಗಾರು ಮಳೆ ರಾಜ್ಯದ ಮಲೆನಾಡಿನ ಭಾಗಗಳಲ್ಲಿ ಅದರಲ್ಲೂ ಪ್ರಮುಖವಾಗಿ ಕೊಡಗು ಜಿಲ್ಲೆಯಲ್ಲಿ ಉಂಟುಮಾಡಿದ ಅನಾಹುತವನ್ನು ನಾವೆಲ್ಲ ಮಾಧ್ಯಮಗಳಲ್ಲಿ ನೋಡಿದ್ದೇವೆ. ಈ ಮಳೆ ಕೊಡಗು ಜಿಲ್ಲೆಯ ಭೂ ಚಿತ್ರಣವನ್ನೇ ಬದಲಿಸಿ ಹಲವರ ಬದುಕನ್ನು ನೀರು ಪಾಲು ಮಾಡಿತು. ಇದರಿಂದ ಉಂಟಾದ ಭೂ ಕುಸಿತದ ಪರಿಣಾಮವೂ ಸಹ ಭೀಕರವಾಗಿಯೇ ಇತ್ತು. ಇದೇ ಸಮಯದಲ್ಲಿ ಮಂಗಳೂರು ಸಹ ಇದೇ ಪರಿಸ್ಥಿತಿಯನ್ನು ಅನುಭವಿಸಿತು.

ಇನ್ನು ೨೦೧೯ರ ಕರಾಳ ನೆನಪಿನ್ನೂ ಮರೆಯಾಗಿಲ್ಲ ಉತ್ತರ ಕರ್ನಾಟಕದ ಒಳನಾಡಿನ ಹಲವಾರು ಜಿಲ್ಲೆಗಳು ಜಲಾವೃತ್ತಗೊಂಡಿದ್ದವು. ಆಗಸ್ಟ್ ೩ ರಿಂದ ೧೦ ರವರೆಗೆ ಬಾರೀ ಮಳೆಯ ಜೊತೆಗೆ ಮಹಾರಾಷ್ಟ್ರದಿಂದ ಬಿಟ್ಟ ಜಲಾಶಯದ ನೀರೂ ಸೇರಿ ಭೀಕರವಾದ ಪರಿಣಾಮವನ್ನು ಉಂಟು ಮಾಡಿತು. ಅಪಾರವಾದ ಬೆಳೆ ನಷ್ಟವುಂಟಾಗಿ ಅದರ ಪರಿಣಾಮ ಹಲವಾರು ರೈತ ಕುಟುಂಬಗಳು ಬವಣೆಯನ್ನು ಅನುಭವಿಸಿದವು. ಇಂಥಹ ಪರಿಸ್ಥಿತಿ ಮರುಕಳಿಸುತ್ತದೆ ಎನ್ನುವುದು ವಿಜ್ಞಾನಿಗಳ ಅಭಿಪ್ರಾಯ.

**ಆಲಿಕಲ್ಲು ಮಳೆ**

ನಮ್ಮ ರಾಜ್ಯದಲ್ಲಿ ಅಷ್ಟೇನೂ ಪ್ರಭಾವಶಾಲಿಯಾಗಿರದಿದ್ದ ಆಲಿಕಲ್ಲು ಮಳೆ ಇತ್ತೀಚಿನ ದಿನಗಳಲ್ಲಿ ಮುಂಗಾರು ಪೂರ್ವದಲ್ಲಿ ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಕಾಣಿಸಿಕೊಂಡಿದೆ. ಇದು ದ್ರಾಕ್ಷಿ, ದಾಳಿಂಬೆ, ಮಾವಿನ ಇಳುವರಿ ಮತ್ತು ಹಲವಾರು ಬೆಳೆಗಳಿಗೆ ಸಹ ಹಾನಿಯನ್ನುಂಟು ಮಾಡುತ್ತಿದೆ. ಕರ್ನಾಟಕ ಸರಕಾರದ ಮಾಹಿತಿಯ ಪ್ರಕಾರ ೨೦೧೪ರಲ್ಲಿ ಸುರಿದ ಆಲಿಕಲ್ಲು ಮಳೆ ಸುಮಾರು ೧೦೦೦ ಕೋಟಿಗಿಂತಲೂ ಹೆಚ್ಚು ಬೆಳೆ ಹಾನಿಯನ್ನು ಮಾಡಿದೆ ಎಂದು ಅಂದಾಜು ಮಾಡಿದ್ದಾರೆ.

**ಸಿಡಿಲು**

ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ೮೦ ರಿಂದ ೧೦೦ ಜನರು ಸಿಡಿಲು ಬಡಿತದಿಂದ ಸಾವನ್ನು ಅಪ್ಪುತ್ತಾರೆ ಮತ್ತು ಇದು ಬೇರೆ ಯಾವುದೇ ರೀತಿಯ ನೈಸರ್ಗಿಕ ವಿಕೋಪಗಳಿಂದ ಉಂಟಾಗುವ ಸಾವಿಗಿಂತ ಹೆಚ್ಚು ಎಂದರೆ, ಬಹುಶಃ ಆಶ್ಚರ್ಯವಾಗುತ್ತದೆ. ಆದರೆ ಇದು ವಾಸ್ತವ. ಇದರಿಂದ ಹೆಚ್ಚು ಪ್ರಮಾಣದ ಜಾನುವಾರು ಮತ್ತು ಬೆಳೆ ಹಾನಿ ಕೂಡಾ ಆಗುತ್ತದೆ. ೨೦೦೯ ರಿಂದ ೨೦೧೭ ರ ವರೆಗಿನ ಅವಧಿಯಲ್ಲಿ ೯೯೫ ಜನ ಸಿಡಿಲು ಬಡಿತದಿಂದ ಸತ್ತಿರುವ ದಾಖಲೆಯಿದೆ. ೨೦೧೮ರಲ್ಲಿ ಸುಮಾರು ೧೩೪ ಜನ ಹಾಗೂ ೨೦೧೯ರಲ್ಲಿ ೩೪ ಜನ (ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿಯ ಪ್ರಕಾರ) ಸಿಡಿಲು ಬಡಿತದಿಂದ ಸಾವನ್ನಪ್ಪಿದ್ದಾರೆ.

**ಉಷ್ಣ ಮಾರುತಗಳು**

ರಾಜ್ಯದ ಉತ್ತರ ಒಳನಾಡು ಅದರಲ್ಲೂ ಕಲ್ಯಾಣ ಕರ್ನಾಟಕದ ಭಾಗದಲ್ಲಿ ಉಷ್ಣಮಾರುತಗಳು ಬೀಸುತ್ತವೆ. ದಿನದ ಉಷ್ಣಾಂಶ ಸರಾಸರಿಗಿಂತ ೩-೪ ಡಿಗ್ರಿ ಸೆಲ್ಸಿಯಸ್ ಗಿಂತ ಹೆಚ್ಚಾದ ಸಂದರ್ಭದಲ್ಲಿ ಉಷ್ಣಮಾರುತಗಳು ಬೀಸುತ್ತವೆ. ಇದರಿಂದ ಸಾವು ಕೂಡಾ ಸಂಭವಿಸಿದ ಉದಾಹರಣೆಗಳಿವೆ.



**ಚಂಡಮಾರುತ**

ಸಾಗರಗಳ ನೀರಿನ ಮೇಯಲ್ಲಿ ಉಂಟಾಗುವ ಬದಲಾವಣೆಯ ಪರಿಣಾಮವಾಗಿ ಸಾಗರದಲ್ಲಿ ಚಂಡಮಾರುತಗಳು ಏಳುತ್ತವೆ. ಈ ವಿದ್ಯಮಾನ ಭಾರತದ ಪೂರ್ವ ಕರಾವಳಿಯಲ್ಲಿ ಅಂದರೆ ಬಂಗಾಳ ಕೊಲ್ಲಿಯಲ್ಲಿ ಬಹಳ ಸಾಮಾನ್ಯವಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಭಾರತದ ಪಶ್ಚಿಮ ಕರಾವಳಿ ಎಂದರೆ ಅರಬ್ಬಿ ಸಮುದ್ರದಲ್ಲಿ ಚಂಡಮಾರುತಗಳು ಏಳುತ್ತಿರುವುದು ಆತಂಕವನ್ನುಂಟು ಮಾಡಿದೆ. ಇವುಗಳ ಸಂಖ್ಯೆಯಲ್ಲಿ ಕೂಡಾ ಹೆಚ್ಚಳ ಕಂಡು ಬರುತ್ತಿದೆ. ೨೦೧೫, ೨೦೧೭, ೨೦೧೮, ೨೦೧೯ರಲ್ಲಿ ಅರಬಿ ಸಮುದ್ರದಲ್ಲಿ ಉಂಟಾದ ಚಂಡಮಾರುತಗಳು ಕರ್ನಾಟಕದ ೩೨೦ ಕಿ.ಮೀ ಕರಾವಳಿ ಪ್ರದೇಶವನ್ನು ಹಾನಿಗೀಡು ಮಾಡಿವೆ.

**ಭೂಕುಸಿತ**

ಮಳೆಗಾಲದಲ್ಲಿ ಮಲೆನಾಡು ಮತ್ತು ಘಟ್ಟ ಪ್ರದೇಶಗಳಲ್ಲಿ ಭೂಕುಸಿತ ಸರ್ವೇ ಸಾಮಾನ್ಯವಾದರೂ ಸಹ, ಕಳೆದ ವರ್ಷ ಹಾಗೂ ಅದರ ಹಿಂದಿನ ವರ್ಷ ಸಂಭವಿಸಿದ ಕೊಡಗು ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಭೂಕುಸಿತಗಳು ಗಣನೀಯ ಪ್ರಮಾಣದ ಹಾನಿಯನ್ನು ಉಂಟುಮಾಡಿವೆ.

**ಭೂಕಂಪಗಳು**

ಕರ್ನಾಟಕವು ಡೆಕ್ಕನ್ ಪ್ರಸ್ಥ ಭೂಮಿಯ ಭಾಗವಾಗಿದ್ದು ಗಟ್ಟಿಯಾದ ಕಠಿಣ ಶಿಲಾಪದರದ ಮೇಲೆ ಇರುವುದರಿಂದ ಇಲ್ಲಿ ತೀವ್ರ ತರದ ಭೂಕಂಪನಗಳು ಉಂಟಾಗುವುದು ಕಡಿಮೆ. ಆದುದರಿಂದ ಈ ಪ್ರದೇಶ ಭೂಕಂಪನ ವಲಯ ೨ ಮತ್ತು ೩ ರಲ್ಲಿ ಬರುತ್ತದೆ. ಇಲ್ಲಿ ಇದುವರೆಗೆ ಗಂಬೀರ ಪ್ರಮಾಣದ ಭೂಕಂಪನಗಳು ಉಂಟಾಗಿಲ್ಲ.

**ಕಾರಣಗಳು**

ಕರ್ನಾಟಕದಲ್ಲಿ ಸಂಭವಿಸುವ ಹಲವು ನೈಸರ್ಗಿಕ ವಿಕೋಪಗಳು ಪ್ರಾಕೃತಿಕವೇ ಆಗಿದ್ದರೂ ಕೂಡಾ ಇತ್ತೀಚಿನ ಮಾನವ ಚಟುವಟಿಕೆಗಳು ಇವುಗಳ ತೀವ್ರತೆಯನ್ನು ಹೆಚ್ಚಿಸುತ್ತಿರುವುದು ಅಧ್ಯಯನಗಳಿಂದ ಕಂಡು ಬಂದ ವಿಷಯವಾಗಿದೆ. ಮಳೆಯ ಅಸಮರ್ಪಕ ಹಂಚಿಕೆ ಮತ್ತು ವೈಖರಿಯಲ್ಲಿನ ವ್ಯತ್ಯಾಸಕ್ಕೆ ಕಾರಣ "ಜಾಗತಿಕ ತಾಪಮಾನದ ಏರಿಕೆ" ಕಾರಣ. ಉಷ್ಣವಲಯದ ಪ್ರದೇಶದಲ್ಲಿರುವ ನಮಗೆ ಇದರ ಗಂಭೀರತೆ ಸ್ವಲ್ಪ ತಡವಾಗಿಯೇ ಅನುಭವಕ್ಕೆ ಬರುತ್ತಿದೆ. ಏರುತ್ತಿರುವ ಜಾಗತಿಕ ತಾಪಮಾನದ ಪರಿಣಾಮವಾಗಿ, ಉಂಟಾಗುತ್ತಿರುವ ಹವಾಗುಣ ವೈಪರಿತ್ಯದಿಂದ ಭೂಮಿಯ ಉತ್ತರಾರ್ಧ ಗೋಳದಲ್ಲಿ ಆಗುತ್ತಿರುವ ಬದಲಾವಣೆಗಳು ಈಗಾಗಲೇ ಗಂಭೀರ ಪರಿಣಾಮವನ್ನುಂಟು ಮಾಡಿವೆ. ನಮ್ಮಲ್ಲಿ ಉಂಟಾಗುತ್ತಿರುವ ಮಳೆಯ ಏರು ಪೇರು, ಆಲಿಕಲ್ಲು ಮಳೆಯಲ್ಲಿನ ಹೆಚ್ಚಳ, ಅರಬಿಸಮುದ್ರದಲ್ಲಿನ ಚಂಡಮಾರುತಗಳು ಇವೆಲ್ಲಕ್ಕೂ ಏರುತ್ತಿರುವ ಜಾಗತಿಕ ತಾಪಮಾನದ ಏರಿಕೆ ಕಾರಣವಿರಬಹುದೆಂದು ಗ್ರಹಿಸಲಾಗಿದೆ. ಇದಕ್ಕೆ ಪೂರಕವೆಂಬಂತೆ ಪಶ್ಚಿಮ ಘಟ್ಟಗಳ ಹಲವು ಮರಗಳ ಹೂ ತಳೆಯುವಿಕೆಯಲ್ಲಿ ತಡವಾಗಿದೆ ಮತ್ತು ಇದು ಮತ್ತೂ ಕೆಲವು ಸರಪಳಿ ಪ್ರಕ್ರಿಯೆಗಳಿಗೆ ಕಾರಣವಾಗಿದೆ.

ಕೃತಿಕ ವಿಕೋಪ ಕಲ್ಯಾಣ ಕಿರಣ

ಜಾಗತಿಕ ತಾಪಮಾನದ ಏರಿಕೆ ಮತ್ತು ಹವಾಗುಣ ಬದಲಾವಣೆಗೆ ಕಾರಣ ಅವುಗಳನ್ನ ತಡೆಗಟ್ಟುವ ಅನಿವಾರ್ಯತೆ ಮತ್ತು ಅದಕ್ಕಾಗಿ ಏನು ಮಾಡಬೇಕು? ಈ ಎಲ್ಲ ವಿಷಯಗಳು ಈಗ ನಮಗೆ ತಿಳಿದಿವೆ. ಜಾಗತಿಕ ಮಟ್ಟದಲ್ಲಿ, ವಿಶ್ವ ವೇದಿಕೆಗಳಲ್ಲಿ ಹಲವಾರು ಪ್ರಯತ್ನಗಳು ಮತ್ತು ಒಪ್ಪಂದಗಳು ನಡೆಯುತ್ತಲೇ ಇವೆ ಆದರೆ ಇದುವರೆಗೆ ಆಗಬೇಕಾದ ಕೆಲಸ ಆಗಿಲ್ಲ. ನಿರ್ದಿಷ್ಟ ಗುರಿಯನ್ನಿಟ್ಟು ಕೊಂಡು ಕಾರ್ಬನ್ ಡೈ ಆಕ್ಸಿಡಿನ ಹೊರಹಾಕುವಿಕೆಯನ್ನು ಕಡಿಮೆ ಮಾಡಲು ಸಾಧ್ಯವಾಗಿಲ್ಲ.

**ಪ್ರಾಕೃತಿಕ ವಿಕೋಪಗಳನ್ನು ಎದುರಿಸುವ ಬಗ್ಗೆ.**

ನೈಸರ್ಗಿಕ ವಿಕೋಪಗಳನ್ನು ಸರಿಯಾದ ವಿಧಾನದಲ್ಲಿ ಎದುರಿಸಲು ಈ ಹಂತಗಳನ್ನು ಅನುಸರಿಸಬೇಕಾಗುತ್ತದೆ.

೧. ಸನ್ನದ್ಧತೆ

೨. ಪ್ರತಿಕ್ರಿಯೆ

೩. ಚೇತರಿಕೆ

೪. ಪುನರ್‌ನಿರ್ಮಾಣ

**ಸನ್ನದ್ಧತೆ**

ಇದು ವಿಕೋಪಗಳು ಸಂಭವಿಸುವ ಮುಂಚೆಯೇ ತೆಗೆದುಕೊಳ್ಳಬೇಕಾದ ಕ್ರಮವಾಗಿದೆ. ಈ ಹಂತದಲ್ಲಿ ಲಭ್ಯವಿರುವ ತಂತ್ರಜ್ಞಾನವನ್ನು ಬಳಸಿಕೊಂಡು, ಸದಾ ಗಮನದಲ್ಲಿರಿಸಿಕೊಂಡು ಸೂಕ್ತ ಮಾಹಿತಿಯನ್ನು ಜನರಿಗೆ ಒದಗಿಸ ಬೇಕಾಗುತ್ತದೆ. ಈ ಮಾಹಿತಿ ಆ ಪ್ರದೇಶದ ಎಲ್ಲ ಜನರಿಗೆ ತಲುಪುವಂತೆ ಸಂಪರ್ಕ ಜಾಲವನ್ನು ಸಿದ್ಧಪಡಿಸಿಕೊಳ್ಳಬೇಕು. ಮಾಹಿತಿ ದೊರೆತ ನಂತರ ಜನರು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಯನ್ನು ತಿಳಿಸಿ ಸಣ್ಣದೊಂದು ತರಬೇತಿಯನ್ನು ಕೊಟ್ಟರೆ ಆಗಬಹುದಾದ ಹಾನಿಯನ್ನು ತಗ್ಗಿಸಬಹುದು. ಇದಕ್ಕಾಗಿ ಮಾಧ್ಯಮಗಳನ್ನು ಸಹ ಬಳಸಿಕೊಳ್ಳಬಹುದು.

**ಪ್ರತಿಕ್ರಿಯೆ**

ಯಾವುದೇ ನೈಸರ್ಗಿಕ ವಿಕೋಪ ಸಂಭವಿಸಿದಾಗ ಅಲ್ಲಿಯ ಜನತೆ ಹೇಗೆ ಪ್ರತಿಕ್ರಿಯಿಸುತ್ತಾರೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ಇದರೊಂದಿಗೆ ಕಾರ್ಯಗತಗೊಳ್ಳಬೇಕಾದ ಅಧಿಕಾರಿ ವರ್ಗ ಅವಶ್ಯಕ ವಸ್ತುಗಳಾದ ಔಷಧಿ, ಆಹಾರ, ನೀರು ಮುಂತಾದವುಗಳೊಂದಿಗೆ ಎಷ್ಟು ಶೀಘ್ರ ಸ್ಥಳಕ್ಕೆ ತಲುಪುತ್ತಾರೆ ಎನ್ನುವುದು ಬಹಳ ಮಹತ್ವದ್ದಾಗಿರುತ್ತದೆ. ಈ ಸಂದರ್ಭದಲ್ಲಿ ಸಾಂಕ್ರಾಮಿಕ ರೋಗಗಳು ಹರಡುವುದು ಬಹಳ ಸಾಮಾನ್ಯವಾದುದರಿಂದ ಹಾಗಾದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕಾಗುತ್ತದೆ.

**ಚೇತರಿಕೆ**

ಯಾವುದೇ ಪ್ರದೇಶದಲ್ಲಿ ನೈಸರ್ಗಿಕ ವಿಕೋಪವೊಂದು ಸಂಭವಿಸಿದಾಗ, ಮೊಟ್ಟ ಮೊದಲು ಅಲ್ಲಿಯ ಜನರನ್ನು ಮಾನಸಿಕ ಆಘಾತದಿಂದ ಹೊರಬರುವಂತೆ ನೋಡಿಕೊಳ್ಳಬೇಕು. ಅದಕ್ಕೆ ಸೂಕ್ತವ್ಯವಸ್ಥೆಯನ್ನು ಒದಗಿಸಬೇಕು. ವಿಕೋಪದಿಂದ ಹಾನಿಯನ್ನು

ಲೆಕ್ಕಹಾಕಿ ಸೂಕ್ತ ಪರಿಹಾರದ ಪ್ರಮಾಣವನ್ನು ಅಂದಾಜು ಮಾಡಬೇಕು. ಇಂಥಹ ಕೆಲಸಗಳಿಗೆ ಮೊದಲೇ ತರಬೇತಿಯನ್ನು ನೀಡಿದ್ದರೆ ನಂತರ ಕಾರ್ಯನಿರ್ವಹಿಸುವುದು ಸುಲಭವಾಗುತ್ತದೆ.

ಪುನರ್ನಿಮರ್ಾಣ

ವಿಕೋಪ ಸಂಭವಿಸಿ ಎಲ್ಲವೂ ಒಂದು ಹಂತಕ್ಕೆ ಬಂದ ನಂತರ ಪರಿಸ್ಥಿತಿಯನ್ನು ಮತ್ತೆ ಮೊದಲಿನ ಸಹಜ ಸ್ಥಿತಿಗೆ ತರುವುದು ಬಹಳ ಮುಖ್ಯ ಕೆಲಸ. ಇದಕ್ಕಾಗಿ ಬಹಳ ಜನರು ತೊಡಗಿಸಿಕೊಳ್ಳಬೇಕಾಗುತ್ತದೆ. ಪುನರ್ವಸತಿ, ಶಾಲೆಗಳ ಮರು ನಿರ್ಮಾಣ, ಬೆಳೆಹಾನಿಯ ಅಂದಾಜು ಮಾಡಿ ಪರಿಹಾರ ಒದಗಿಸುವುದು, ಇವೆಲ್ಲವೂ ಇಲ್ಲಿ ಬರುತ್ತವೆ. ಪ್ರವಾಹ, ಭೂಕಂಪಗಳಂಥಹ ಪರಿಸ್ಥಿತಿಯಲ್ಲಿ ಸಾಂಕ್ರಾಮಿಕ ರೋಗಗಳು ಹರಡಿದ್ದರೆ, ಅವುಗಳ ನಿವಾರಣೆಗೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇವು ನಿಧಾನವಾದಷ್ಟೂ ಪರಿಸ್ಥಿತಿ ಹದಗೆಡುವುದರಿಂದ ತ್ವರಿತಗತಿಯಲ್ಲಿ ಈ ಕೆಲಸ ಆಗುವುದು ಅವಶ್ಯಕ.

**ಪ್ರಾಕೃತಿಕ ವಿಕೋಪಗಳ ನಿರ್ವಹಣೆ**

ನಮ್ಮ ರಾಜ್ಯದಲ್ಲಿ ಪ್ರಾಕೃತಿಕ ವಿಕೋಪಗಳ ನಿರ್ವಹಣೆಗೆ ಎಂದೇ ೧೯೮೮ ರಲ್ಲಿ ನೈಸರ್ಗಿಕ ವಿಕೋಪ ನಿರ್ವಹಣೆ ಮತ್ತು ಉಸ್ತುವಾರಿ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಇದು ನೈಸರ್ಗಿಕ ವಿಪತ್ತುಗಳ ನಿರ್ವಹಣೆಯನ್ನು ಮಾಡುವುದರ ಜೊತೆ ಜೊತೆಗೆ, ನೈಸರ್ಗಿಕ ವಿಪತ್ತುಗಳನ್ನು ಅಧ್ಯಯನ ಮಾಡಿ ಅವುಗಳ ಬಗೆಗೆ ಎಚ್ಚರಿಕೆಯನ್ನು ರವಾನಿಸಿ ವಿಕೋಪವನ್ನು ಎದುರಿಸಲು ಸಿದ್ಧವಾಗಿಸುತ್ತದೆ.

ಕರ್ನಾಟಕ ರಾಜ್ಯ ನೈಸರ್ಗಿಕ ನಿರ್ವಹಣೆ ಮತ್ತು ಉಸ್ತುವಾರಿ ಕೇಂದ್ರವು ಜಿ.ಪಿ.ಎಸ್ ಸಹಿತ ಸೌರಶಕ್ತಿ ಆಧಾರಿತ ದೂರ ಸಂವೇದಿ ತಂತ್ರಜ್ಞಾನವನ್ನು ಬಳಸುವ ಮಳೆಮಾಪನ ಕೇಂದ್ರವನ್ನು ರಾಜ್ಯದ ಎಲ್ಲ ಕಡೆಯಲ್ಲಿ ಸ್ಥಾಪಿಸಿದೆ. (ಇವು ರಾಜ್ಯದ ೭೪೭ ಹೋಬಳಿ ಮತ್ತು ೬೪೯೫ ಗ್ರಾಮ ಪಂಚಾಯತಿಗಳಲ್ಲಿ ಸ್ಥಾಪಿಸಲಾಗಿದೆ) ಈ ಕೇಂದ್ರ ಮಳೆ ಮಾಹಿತಿ ಮತ್ತು ನಕ್ಷೆಯನ್ನು ತಯಾರಿಸಿ ನಿಜ ಸಮಯದಲ್ಲಿ ಎಸ್.ಎಮ್.ಎಸ್ ಮುಖಾಂತರ ಮಾಹಿತಿ ಒದಗಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

ಉಷ್ಣ ಮಾರುತಗಳಿಂದಾಗಬಹುದಾದ ಹಾನಿಯನ್ನು ತಪ್ಪಿಸಲು ಮೊಬೈಲ್ ಫೋನ್‌ಳ ಮೂಲಕ ಮಾಹಿತಿಯನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ಸಿಡಿಲಿನಿಂದಾಗುವ ಹಾನಿಯನ್ನು ತಡೆಯಲು “ಸಿಡಿಲು” ಎಂಬ ಮೊಬೈಲ್ ಆಪ್ ನ್ನು ಸಿದ್ಧಪಡಿಸಿ ಕೊಡಲಾಗಿದೆ.

**ವರುಣಮಿತ್ರ**

೯೧೪೩೩ ೪೫೪೩೩/೦೮೦-೬೭೭೩೫೯೯೯ ಇವು ವರುಣಮಿತ್ರ ಸಹಾಯವಾಣಿ ಕೇಂದ್ರದ ದೂರವಾಣಿ ಸಂಖ್ಯೆಗಳಾಗಿದ್ದು ಇದರ ಮುಖಾಂತರ ರೈತರಿಗೆ ಮಾಹಿತಿಯನ್ನು ಒದಗಿಸಲಾಗುತ್ತಿದೆ. ದಿನದ ೨೪ ಗಂಟೆಯೂ ಕಾರ್ಯ ನಿರ್ವಹಿಸುವ ಈ ದೂರವಾಣಿ ರೈತರಿಗೆ ಹವಾಮಾನ ಮುನ್ಸೂಚನೆ, ಮಳೆ ಮಾರುತಗಳು, ಮತ್ತು ಮಳೆಯ ಮಾಹಿತಿ,



ಸಿಡಿಲಿನ ಬಗೆಗೆ ಮಾಹಿತಿಯನ್ನು ಒದಗಿಸುವ ಕಾರ್ಯವನ್ನು ಮಾಡುತ್ತಿದ್ದು ಬಹಳ ಜನ ರೈತರು ಇದರ ಮಾಹಿತಿಯನ್ನು ಪಡೆಯುತ್ತಿದ್ದಾರೆ.

**ನಾವೇನು ಮಾಡಬೇಕು?**

ಇದೆಲ್ಲವನ್ನು ತಿಳಿದ ಮೇಲೆ ನಾವೇನು ಮಾಡಬೇಕು ? ಎಂಬ ಪ್ರಶ್ನೆ ಎದುರಾಗುವುದು ಸಹಜ ಹೇಗೂ ಇದು ನಿಸರ್ಗವೇ ಉಂಟು ಮಾಡುತ್ತಿರುವ ವಿಕೋಪವಾದುದರಿಂದ ನಾವೇನು ಮಾಡಲು ಸಾಧ್ಯ ಎಂಬ ನೆಪವೊಡ್ಡಿ ಕೈಕಟ್ಟಿ ಕುಳಿತುಕೊಳ್ಳುವಂತಿಲ್ಲ. ಏಕೆಂದರೆ ಇವು ಇತ್ತೀಚಿನ ದಿನಗಳಲ್ಲಿ ಹಾಗೂ ವಿಜ್ಞಾನಿಗಳು ಹೇಳುವ ಪ್ರಕಾರ ಮುಂಬರುವ ದಿನಗಳಲ್ಲಿ ಮತ್ತು ಹೆಚ್ಚಾಗಲು ಕಾರಣ ಮಾನವನ ಚಟುವಟಿಕೆಗಳು. ನಾವೇ ಹಾಳು ಮಾಡಿದ ಈ ಭೂಮಿಯನ್ನು ನಾವೇ ಸರಿಪಡಿಸಬೇಕಾಗಿದೆ ಮೊದಲು ಸಸಿಯೊಂದನ್ನು ನೆಡೋಣ, ಕ್ರೀ ರೆಡ್ ಇಂಡಿಯನ್‌ರಲ್ಲಿ ಕವನವೊಂದು ಹೀಗಿದೆ.

ಕಟ್ಟ ಕಡೆಯ ಮರವನ್ನು ಕತ್ತರಿಸಿ ಹಾಕಿದ ನಂತರ,

ಕಟ್ಟ ಕಡೆಯ ಮೀನನ್ನು ಹಿಡಿದು ತಿಂದ ನಂತರ,

ಕಟ್ಟ ಕಡೆಯ ನದಿಗೆ ವಿಷ ಸುರಿದ ನಂತರ,

ಗೆಳೆಯ ಆಗಷ್ಟೆ ನಿನಗೆ ಗೊತ್ತಾಗಲಿದೆ.

## ಅಧ್ಯಕ್ಷ ಭಾಷಣ:

## ರೈತ ಮತ್ತು ಮಾರುಕಟ್ಟೆ

**ಹನುಮನಗೌಡ ಬೆಳಗುರ್ಕಿ**

ಕನ್ನಡ ನಮ್ಮ ಭಾಷೆ, ನಮ್ಮ ಬದುಕು. ಕೃಷಿಯು ನಮ್ಮ ಶ್ರಮ ಸಂಸ್ಕೃತಿಯ ಪ್ರತೀಕ ನಮ್ಮ ಭಾಷೆಗೂ ನಮ್ಮ ಕೃಷಿಗೂ ಅವಿನಾಭಾವ ಸಂಬಂಧ ಹೇಗಿದೆ ಎನ್ನುವುದನ್ನು ನಮ್ಮ ಜಾನಪದ ಸಾಹಿತ್ಯದ ಭಜನೆ, ಹಂತಿಪದಗಳು, ಸುಗ್ಗಿಹಾಡು ಮುಂತಾದವುಗಳಿಂದ ತಿಳಿಯಬಹುದಾಗಿದೆ.

ಭಾರತದಲ್ಲಿ ಜಗತ್ತಿನ ಜನಸಂಖ್ಯೆಯ ಶೇ ೧೮ ರಷ್ಟು ಜನಸಂಖ್ಯೆ ಅದೇ ರೀತಿ ಜಗತ್ತಿನ ಶೇ ೨.೪ ರಷ್ಟು ಭೂಮಿ, ಶೇ ೪ ನೀರಿನ ಲಭ್ಯತೆ ಇದೆ.

ಭಾರತದಲ್ಲಿ ೨೦೨೦ ಕ್ಕೆ ೧೩೭ ಕೋಟಿ ಜನಸಂಖ್ಯೆ ಅಂದಾಜಿಸಲಾಗಿದ್ದು ೧೪ ಕೋಟಿ ರೈತರು, ಅದೇ ೧೪ ರಿಂದ ೧೫ ಕೋಟಿ ಕೃಷಿ ಕಾರ್ಮಿಕರು ಹೊಂದಿದ್ದು ಒಟ್ಟು ಜನಸಂಖ್ಯೆಯ ಶೇ. ೭೦ ಜನ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು ಶೇ. ೬೦ ರಷ್ಟು ಜನ ಕೃಷಿಯನ್ನು ಅವಲಂಬಿಸಿದ್ದಾರೆ.

ಭಾರತದಲ್ಲಿ ೪೦ ಕೋಟಿ ಎಕರೆ ಬಿತ್ತನೆ ಭೂಮಿ ಇದ್ದು ಇದರಲ್ಲಿ ಶೇ. ೩೫ ರಷ್ಟು ಅಂದರೆ ೧೫ ಕೋಟಿ ಎಕರೆ ಅಷ್ಟು ನೀರಾವರಿ ಕ್ಷೇತ್ರ ಹೊಂದಲಾಗಿದೆ.

ಅದೇ ರೀತಿ ಕರ್ನಾಟಕದಲ್ಲಿ ೨೦೨೦ ರ ವೇಳೆಗೆ ಒಟ್ಟು ಜನಸಂಖ್ಯೆ ೭ ಕೋಟಿ ಎಂದು ಅಂದಾಜಿಸಲಾಗಿದ್ದು ಸುಮಾರು ೪.೫ ಕೋಟಿ ಜನ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು ಶೇ. ೬೦ ರಷ್ಟು ಕೃಷಿ ಅವಲಂಬಿಸಿದ್ದಾರೆ. ಹಾಗೂ ೭೮ ಲಕ್ಷ ರೈತ ಹಿಡುವಳಿದಾರರು, ೧.೨೫ ಕೋಟಿ ಕೃಷಿ ಕಾರ್ಮಿಕರಿದ್ದಾರೆ ಎಂದು ಅಂದಾಜಿಸಲಾಗಿದೆ. ರೈತರ, ರೈತ ಕಾರ್ಮಿಕರ ಸಂಖ್ಯೆಯನ್ನು ನಿಖರವಾಗಿ ಲೆಕ್ಕ ಹಾಕಬೇಕಾಗಿರುವುದು ಅತ್ಯವಶ್ಯಕವಾಗಿರುತ್ತದೆ.

**ಭಾರತದಲ್ಲಿ ಕೃಷಿ ಉತ್ಪಾದನೆ:**

ದೇಶದಲ್ಲಿ ೨೮೫ ದಶಲಕ್ಷ ಆಹಾರ ಧಾನ್ಯಗಳು ೩೦೦ ದಶಲಕ್ಷ ಟನ್ ಕಾಯಿಪಲ್ಲೆ ಹಾಗೂ ಹಣ್ಣುಗಳು ೨೦೦ ದಶಲಕ್ಷ ಹಾಲು/ಹಾಲಿನ ಉಪ ಉತ್ಪನ್ನಗಳನ್ನು ಉತ್ಪಾದಿಸಲಾಗುತ್ತದೆ.

**ಕರ್ನಾಟಕದಲ್ಲಿ ಕೃಷಿ ಉತ್ಪಾದನೆ:**

ಕರ್ನಾಟಕದಲ್ಲಿ ೨೦೨೦ ಕ್ಕೆ ೧೨೧ ಲಕ್ಷ ಟನ್ ಆಹಾರ ಧಾನ್ಯ, ೧೭ ಲಕ್ಷ ಟನ್

ದ್ವಿದಳ ಧಾನ್ಯಗಳು, ೧೧ ಲಕ್ಷ ಟನ್ ಎಣ್ಣೆ ಕಾಳುಗಳು ಹಾಗೂ ೧೫ ಲಕ್ಷ ಟನ್ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತಿದೆ ಎಂದು ಅಂದಾಜಿಸಲಾಗಿದೆ. ತೋಟಗಾರಿಕಾ ಬೆಳೆಗಳಲ್ಲಿ ಅಡಿಕೆ/ತೆಂಗು ೯ ಲಕ್ಷ ಟನ್, ಸಾಂಬಾರು ಬೆಳೆಗಳಾದ ಶುಂಠಿ, ಅರಿಶಿಣ, ಕರಿಮೆಣಸು ೪ ಲಕ್ಷ ಟನ್‌ಗಳಷ್ಟು, ತರಕಾರಿ ೪೮ ಲಕ್ಷ ಟನ್, ಹಣ್ಣುಗಳು ೪೬ ಲಕ್ಷ ಟನ್, ೩ ಕೋಟಿ ಟನ್‌ಗಳಷ್ಟು ಕಬ್ಬು ಉತ್ಪಾದನೆ ಅಂದಾಜಿಸಲಾಗಿದೆ.

**ಕರ್ನಾಟಕದಲ್ಲಿ ನೀರಾವರಿ:**

ಕರ್ನಾಟಕದಲ್ಲಿ ಸಪ್ತ ನದಿಗಳಾದ ಕೃಷ್ಣ, ಕಾವೇರಿ, ಗೋದಾವರಿ, ಪೆನ್ನಾರ ಉತ್ತರ, ಪೆನ್ನಾರ ದಕ್ಷಿಣ, ಕಾಳಿ, ಶರಾವತಿ ನದಿಗಳು ಹರಿಯುತ್ತಿವೆ. ಪೆನ್ನಾರ ಉತ್ತರ ಹಾಗೂ ಪೆನ್ನಾರ ದಕ್ಷಿಣ ಕಡಿಮೆ ದೂರಕ್ಕೆ ಹರಿಯುತ್ತಿದ್ದು ಬಹಳ ಕಡಿಮೆ ನೀರಿನ ಬಳಕೆ ಆಗುತ್ತಿದೆ. ಕಾಳಿ ನದಿಯು ಪಶ್ಚಿಮಾಭೀಮುಖವಾಗಿ ಹರಿಯುತ್ತಿದ್ದು ಸುಮಾರು ೨೦೦೦ ಟಿ.ಎಂ.ಸಿ. ನೀರು ಸಮುದ್ರ ಸೇರುತ್ತಿದ್ದು ಅದರಲ್ಲಿ ೧೦೦೦ ಟಿ.ಎಂ.ಸಿ. ವಿದ್ಯುತ್ ಉತ್ಪಾದನೆಗಾಗಿ ಬಳಸಿಕೊಳ್ಳಲಾಗಿದೆ ಪ್ರಮುಖವಾಗಿ ಕಾವೇರಿ ಹಾಗೂ ಕೃಷ್ಣಾ ನದಿಗಳ ನೀರನ್ನು ಕೃಷಿಗೆ, ಕುಡಿಯಲು ಹಾಗೂ ಉದ್ದಿಮೆಗಳಿಗೆ ಪ್ರಮುಖ ಆಧಾರವಾಗಿದೆ. ಕರ್ನಾಟಕ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಆಲಮಟ್ಟಿ, ಬಸವಸಾಗರ, ಘಟಪ್ರಭಾ, ಮಲಪ್ರಭಾ, ಅಮರ್ಜಾ, ತುಂಗಭದ್ರಾ, ಭದ್ರಾ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಕೃಷ್ಣರಾಜಸಾಗರ, ಕಬಿನಿ, ಹೇಮಾವತಿ, ಹಾರಂಗಿ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ಇದರ ಜೊತೆಗೆ ಪುರಾತನ ಕಾಲದಿಂದಲೂ ಇರುವ ಕೆರೆ ಅಚ್ಚುಕಟ್ಟುಗಳು, ಕೊಳವೆ ಬಾವಿಗಳಿಂದಲು ನೀರಾವರಿ ಮಾಡಲಾಗುತ್ತಿದೆ.

ನ್ಯಾಯಮೂರ್ತಿ ಬಚಾವತರ ನ್ಯಾಯಾಧೀಕರಣದ ಆದೇಶದ ಪ್ರಕಾರ ೭೩೪ ಟಿ.ಎಂ.ಸಿ. ನೀರು ಬಳಸಲು ಅವಕಾಶವಿತ್ತು. ಇತ್ತೀಚೆಗೆ ನ್ಯಾಯಮೂರ್ತಿ ಬ್ರಿಜೇಶ್ ಕುಮಾರ ನ್ಯಾಯಾಧೀಕರಣದ ಆದೇಶದ ಅನ್ವಯ ೯೧೧ ಟಿ.ಎಂ.ಸಿ. ನೀರು ಬಳಸಲು ಆದೇಶಿಸಲಾಗಿತ್ತು. ಕೆಳಗಿನ ರಾಜ್ಯದ ವಿವರಣಾ ಅರ್ಜಿ (interpretation application) ಸಮಯದಲ್ಲಿ ತುಂಗಭದ್ರಾ ನದಿಯಲ್ಲಿ ಹೆಚ್ಚುವರಿಯಾಗಿ ೪೦ ಟಿ.ಎಂ.ಸಿ. ಬಳಸಲು ಮಾಡಿದ ಆದೇಶವನ್ನು ಮಾರ್ಪಡಿಸಿ ೪ ಟಿ.ಎಂ.ಸಿ. ನೀರನ್ನು ಕಡಿಮೆಮಾಡಲಾಗಿದೆ. ಒಟ್ಟಾರೆ ಕರ್ನಾಟಕಕ್ಕೆ ೯೦೭ ಟಿ.ಎಂ.ಸಿ. ನೀರು ಬಳಸಲು ಅವಕಾಶವಿದೆ.

ಕರ್ನಾಟಕದಲ್ಲಿ ಎಲ್ಲಾ ಡ್ಯಾಮುಗಳಲ್ಲಿ ಕಾಳಿ ಯೋಜನೆ ಸೇರಿದಂತೆ ೧೦೦೦ ಟಿ.ಎಂ.ಸಿ. ಸಂಗ್ರಹಕ್ಕೆ ಅವಕಾಶವಿದ್ದು ಸುಮಾರು ೫೦೦ ಟಿ.ಎಂ.ಸಿ. ಅಂತರ್ಜಲದಿಂದ ಬಳಸಿಕೊಳ್ಳಲಾಗುತ್ತಿದೆ. ಒಟ್ಟಾರೆ ಕರ್ನಾಟಕದಲ್ಲಿ ಎಲ್ಲಾ ಮೂಲಗಳಿಂದ ೩೬ ಲಕ್ಷ ಹೇಕ್ಟರ್ ಅಂದರೆ ೮೫ ಲಕ್ಷ ಎಕರೆಯಷ್ಟು ಭೂಮಿ ನೀರಾವರಿಗೆ ಒಳಪಡಿಸಲಾಗಿದೆ.

ಪ್ರಧಾನಮಂತ್ರಿಗಳ ಘೋಷಣೆ - ಪ್ರತಿ ಹೊಲಕ್ಕೂ ನೀರು (ಹರ್ ಖೇತೊಕೊ ಪಾನಿ) ಪ್ರತಿ ಹನಿ ನೀರಿಗೆ ಹೆಚ್ಚು ಬೆಳೆ (Each Drop More Crop) ಆಧರಿಸಿ, ಪ್ರಧಾನ ಮಂತ್ರಿ ಕೃಷಿ ಶಿಂಚಾಯಿ ಯೋಜನೆಯ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಜನ ಬಳಕೆಗೆ ನಗರ ಪ್ರದೇಶದಲ್ಲಿ ೧೩೦ ಲೀಟರ್, ಪ್ರಾಣಿಗಳ ಬಳಕೆಗೆ ಆನೆಗೆ ೧೦೦



ಲೀಟರ್, ಮೇಕೆಗೆ ೬ ಲೀಟರ್‌ನಂತೆ ವಿವಿಧ ಪ್ರಾಣಿಗಳಿಗೆ ಇಂತಿಷ್ಟು ಎಂದು ಅಂದಾಜಿಸಿ ಒಟ್ಟು ಜನ ಬಳಕೆಗೆ ೧೦೦ ಟಿ.ಎಂ.ಸಿ, ಉದ್ದಿಮೇಗಳಿಗೆ ೧೦೦ ಟಿ.ಎಂ.ಸಿ, ಒಕ್ಕಲುತನಕ್ಕೆ ೨೮೦೦ ಟಿ.ಎಂ.ಸಿ. ಬೇಕಾಗಬಹುದಾದ ನೀರಿನ ಪ್ರಮಾಣ ಅಂದಾಜಿಸಿ, ರಾಜ್ಯ ನೀರಾವರಿ ಯೋಜನೆ ರೂಪಿಸುವುದರ ಜೊತೆಗೆ ರಾಜ್ಯದಲ್ಲಿನ ೩೦ ಜಿಲ್ಲೆಗಳಿಗೆ ನೀರಿನ ಅವಶ್ಯಕತೆ, ಲಭ್ಯತೆ ಅಂದಾಜಿಸಿ ಯೋಜನೆ ತಯಾರಿಸಿದೆ. ಇದಕ್ಕಾಗಿ ಒಂದು ಲಕ್ಷ ೭೦ ಸಾವಿರ ಕೋಟಿ ರೂ.ಗಳು ಬೇಕಾಗಬಹುದು ಎಂದು ಅಂದಾಜಿಸಲಾಗಿದೆ.

ಕೇಂದ್ರ ಸರ್ಕಾರ ಜಲಶಕ್ತಿ ಇಲಾಖೆ ರಚಿಸಿ, ಜಲ ಮಿಷನ್ ಅಟಲ್ ಭೂ-ಜಲ ಯೋಜನೆ ರೂಪಿಸಿ ದೇಶದಲ್ಲಿಯೇ ನೀರಿನ ಕೊರತೆಯನ್ನು ನೀಗಿಸಲು ಶ್ರಮಿಸುತ್ತಿದೆ.

**ಕರ್ನಾಟಕದಲ್ಲಿ ಭೂಮಿ-ಬೀಜ-ಬೆಳೆ ಸದ್ಬಳಕೆ:**

ಕರ್ನಾಟಕದಲ್ಲಿ ೨.೫ ಕೋಟಿ ಎಕರೆ ಬಿತ್ತನೆ ಭೂಮಿ ಇದ್ದು, ಇದನ್ನು ವಿವಿಧ ಹವಮಾನ ಭೂಮಿಯ ಮಾದರಿ, ಫಲವತ್ತತೆಗಳನ್ನಾಧರಿಸಿ ೧೦ ಕೃಷಿ ವಲಯಗಳನ್ನಾಗಿ ವಿಂಗಡಿಸಲಾಗಿದೆ. ೭೮ ಲಕ್ಷ ಭೂಹಿಡುವಳಿದಾರರಿದ್ದು, ಸಣ್ಣ, ಅತೀ ಸಣ್ಣ ರೈತರ ಪ್ರಮಾಣ ಶೇ. ೮೫ ರಷ್ಟಾಗಿದೆ. ಬಿತ್ತನೆ ಭೂಮಿಯಲ್ಲಿ ಸುಮಾರು ೧ ಕೋಟಿ ಎಕರೆಯಲ್ಲಿ ಏಕದಳ ಧಾನ್ಯಗಳು, ೬೪ ಲಕ್ಷ ಎಕರೆಯಲ್ಲಿ ದ್ವಿದಳ ಧಾನ್ಯಗಳು, ೨೫ ಲಕ್ಷ ಎಕರೆಯಲ್ಲಿ ಎಣ್ಣೆಕಾಳು, ೧೫ ಲಕ್ಷ ಎಕರೆಯಲ್ಲಿ ಹತ್ತಿ, ೭ ಲಕ್ಷ ಎಕರೆಯಲ್ಲಿ ತರಕಾರಿ, ೮ ಲಕ್ಷ ಎಕರೆಯಲ್ಲಿ ಹಣ್ಣಿನ ಬೆಳೆಗಳು, ೨೫ ಲಕ್ಷ ಎಕರೆಯಲ್ಲಿ ಅಡಕೆ, ತೆಂಗು, ತಾಳೆ, ೩ ಲಕ್ಷ ಎಕರೆಯಲ್ಲಿ ಸಾಂಬಾರು ಬೆಳೆಗಳು, ೧೫ ಲಕ್ಷ ಎಕರೆಯಲ್ಲಿ ಕಬ್ಬು ಬೆಳೆಯಲಾಗುತ್ತಿದೆ. ಇದರ ಜೊತೆಗೆ ಸಿರಿಧಾನ್ಯಗಳು, ರೆಷ್ಮೆ, ಪುಷ್ಪಗಳನ್ನು ಬೆಳೆಯಲಾಗುತ್ತಿದೆ.

ಇತ್ತೀಚಿನ ಅಂದಾಜಿನ ಪ್ರಕಾರ ಸುಮಾರು ೨೦ ಲಕ್ಷ ಎಕರೆ ಭೂಮಿ ಬೀಳು ಬಿಡಲಾಗಿದೆ. ಇದನ್ನು ಖಾಯಂ ಬೀಳು, ಹಂಗಾಮಿನ ಬೀಳುಗಳೆಂದು ವಿಂಗಡಿಸಲಾಗಿದೆ. ಬೆಳೆ ಸಮೀಕ್ಷೆಗಾಗಿ ದೇಶದಲ್ಲಿಯೇ ಮಾದರಿಯ ರೀತಿ ಕರ್ನಾಟಕದಲ್ಲಿ ಬೆಳೆದರ್ಶಕ (Crop Survey Fruit) ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ.

ಮೇಲ್ಕಾಣಿಸಿದ ಎಲ್ಲಾ ಬೆಳೆಗಳನ್ನು ಬೆಳೆಯಲು ರೈತರು ತಾವೇ ಬೆಳೆದ ಬೀಜಗಳನ್ನು ಬಳಸುತ್ತಾರೆ. ಸಂಕರಿತ (Hybrid) ತಳಿಗಳಲ್ಲಿ ಹೆಚ್ಚಾಗಿ ಖಾಸಗಿ ಕಂಪನಿಗಳನ್ನೇ ಅವಲಂಬಿಸಲಾಗಿದೆ. ಅದರಲ್ಲೂ ತರಕಾರಿ ಬೆಳೆಗಳಲ್ಲಿ ಖಾಸಗಿ ಕಂಪನಿಗಳ ಸಂಕರಿತ ಬೀಜಗಳನ್ನೇ ಬಳಸುತ್ತಾರೆ.

ಮಾರುಕಟ್ಟೆಯಲ್ಲಿ ಲಭ್ಯವಿರುವ ಖಾಸಗಿ ಕಂಪನಿಗಳ ಬೀಜಗಳಲ್ಲದೇ ಕರ್ನಾಟಕದ ಪ್ರತಿಷ್ಠಿತ ಸಂಸ್ಥೆಯಾದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ಅಭಿವೃದ್ಧಿಪಡಿಸಿದ ಬೀಜಗಳನ್ನು, ಕರ್ನಾಟಕದ ಹೆಮ್ಮೆಯ ಸಂಸ್ಥೆಯಾದ ಕರ್ನಾಟಕ ಬೀಜ ನಿಗಮ, ಬೀಜ ಸರಬರಾಜು ಮಾಡಿದ ಬೀಜಗಳನ್ನು ಬಳಸಲಾಗುತ್ತಿದೆ. ರಾಯಚೂರಿನಲ್ಲಿರುವ ಕೇಂದ್ರ ಸರ್ಕಾರದ ಬೀಜ ಫಾರ್ಮ್‌ನಲ್ಲಿ ಬೀಜೋತ್ಪಾದನೆ ಮಾಡಲಾಗುತ್ತದೆ. ದೇಶದಲ್ಲಿಯೇ ಬೀಜೋತ್ಪಾದನೆ ಹಬ್ ಎಂದು ಹೆಸರಾಗಿರುವ ಹಾವೇರಿ ಜಿಲ್ಲೆಯಲ್ಲಿ ಖಾಸಗಿ ಕಂಪನಿಗಳು ಬೀಜೋತ್ಪಾದನಾ ಕಾರ್ಯಗಳನ್ನು ವಿಸ್ತರಿಸಿಕೊಂಡಿದ್ದಾರೆ. ದೇಶದಲ್ಲಿ ಬೀಜಕಾಯ್ದೆ



ಜಾರಿಯಲ್ಲಿದ್ದು ರೈತ ಸ್ನೇಹಿ ಆಗಿಲ್ಲ ಎನ್ನುವುದು ರೈತರ ಒಟ್ಟಾಭಿಪ್ರಾಯವಾಗಿದೆ.

**ಪ್ರಾಕೃತಿಕ ವಿಕೋಪ / ಕೃಷಿ ಗಂಡಾಂತರಗಳು:**

ಕೃಷಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳಾದ ನೆಲ, ಜಲ, ಗಾಳಿ, ಬಿಸಿಲು ಬಳಸಿಕೊಂಡು ಉತ್ಪಾದನೆ ಮಾಡಲಾಗುತ್ತದೆ. ನೈಸರ್ಗಿಕ ಸಂಪನ್ಮೂಲಗಳ ಅನಿಷ್ಚಿಯಿಂದಾಗಿ ನೈಸರ್ಗಿಕ ಕಾಲ ಕಾಲಕ್ಕೆ ಬದಲಾವಣೆ, ವಿಕೋಪಗಳು ಉಂಟಾಗುತ್ತವೆ. ಇದರಿಂದಾಗಿ ಉತ್ಪಾದನೆ ಗಂಡಾಂತರಗಳನ್ನು ಎದುರಿಸಲಾಗುತ್ತಿದೆ. ಕರ್ನಾಟಕದಲ್ಲಿ ಕಾಲಕಾಲಕ್ಕೆ ನೆರೆ, ಬರ ಮುಂತಾದವುಗಳಿಂದಾಗಿ ಅಪಾರ ನಷ್ಟ ಉಂಟಾಗಿ ಜನಜೀವನ ಅಸ್ತವ್ಯಸ್ತವಾಗುತ್ತಿದೆ. ನೆರೆ ಪೀಡಿತರ ಬದುಕು ಊಹಿಸಲು ಅಸಾಧ್ಯ. ತಿರುಗಿ ಬದುಕು ಕಟ್ಟಿಕೊಳ್ಳುವುದು ಹರಸಾಹಸ, ನೆರೆಯ ಅವಾಂತರಗಳನ್ನು ಹೇಳಲು, ಬರೆಯಲು ಸಾಧ್ಯವಾಗದಷ್ಟು ಭೀಕರ ಹಾಗೂ ಬದುಕು ಕಟ್ಟಿಕೊಳ್ಳಲು ಸರ್ಕಾರದ ಸಹಾಯದಿಂದಲೂ ಸಾಧ್ಯವಾಗದಷ್ಟು ಇದೆ. ನೈಸರ್ಗಿಕ ವಿಕೋಪಗಳಿಗೆ ವಿಜ್ಞಾನಿಗಳು, ತಜ್ಞರು ವಿಶ್ಲೇಷಿಸುವುದು ನೈಸರ್ಗಿಕ ಸಂಪನ್ಮೂಲಗಳ ಅವೈಜ್ಞಾನಿಕ ಬಳಕೆ, ಕಾಡು ನಾಶ ಮುಂತಾದವುಗಳು. ರಾಜ್ಯದಲ್ಲಿ ೧೯೯೨, ೨೦೦೯, ೨೦೧೯ ರ ನೆರೆ ಅವಾಂತರಗಳಿಂದ ಆಗಿರುವ ಅನಾಹುತಗಳನ್ನು ಕಣ್ಣಾರೆ ಕಂಡಿದ್ದೇವೆ.

ನೈಸರ್ಗಿಕ ವಿಕೋಪಗಳನ್ನು ಎದುರಿಸಲು ಕೇಂದ್ರದಲ್ಲಿ NDRF, ರಾಜ್ಯದಲ್ಲಿ SDRF ಪರಿಹಾರ ನಿಧಿ ಬಳಕೆ ಮಾಡಲಾಗುತ್ತಿದೆ. ಆದರೆ ಈ ಪರಿಹಾರಗಳು ಅತೀ ಕಡಿಮೆ, ಒಣ ಭೂಮಿಗೆ ಹೆಚ್ಚೆರ್‌ಗೆ ರೂ. ೬೮೦೦ ನೀರಾವರಿಗೆ

ರೂ. ೧೩೫೦೦, ತೋಟಗಾರಿಕೆಗೆ ರೂ. ೧೮೦೦೦ ನಿಗಧಿಗೊಳಿಸಲಾಗಿದೆ. ಇದರ ಜೊತೆಗೆ ರಾಜ್ಯ ಸರ್ಕಾರ ಅವಶ್ಯಕತೆಗೆ ಅನುಗುಣವಾಗಿ ಪರಿಹಾರ ಮೊತ್ತ ನಿಗಧಿಗೊಳಿಸುತ್ತಿದೆ. ಇತ್ತೀಚಿಗೆ ಮನೆ ಕಳೆದುಕೊಂಡವರಿಗೆ ೫ ಲಕ್ಷ ಹಾಗೂ ತಕ್ಷಣದ ಪರಿಣಾಮವಾಗಿ ರೂ. ೧೦ ಸಾವಿರಗಳನ್ನು ವಿತರಿಸುತ್ತಿದೆ ಒಟ್ಟಾರೆ ರಾಜ್ಯದಲ್ಲಿ ಇತ್ತೀಚಿನ ನೆರೆಯಿಂದ ಬೆಳೆ ನಷ್ಟ, ಆಸ್ತಿ (ಸಾರ್ವಜನಿಕ/ ಖಾಸಗಿ) ಆಸ್ತಿ ನಷ್ಟಗಳನ್ನು ರೂ. ೩೫೦೦೦ ಕೋಟಿ ಎಂದು ಅಂದಾಜಿಸಲಾಗಿದೆ.

ಬೆಳೆ ನಷ್ಟ ಭರಿಸಲು ಅತ್ಯುತ್ತಮವಾದ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆ ಜಾರಿಗೊಳಿಸಲಾಗಿದೆ. ಇದಕ್ಕಾಗಿ ಸಂರಕ್ಷಣೆ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ. ಈ ಯೋಜನೆಗಳಲ್ಲಿಯ, ಕೊರತೆಗಳನ್ನು ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸಬೇಕಾಗಿರುವುದು ಅತ್ಯವಶ್ಯಕವಾಗಿದೆ.

**ರೈತ ಮತ್ತು ಮಾರುಕಟ್ಟೆ:**

ಭಾರತ ಸ್ವಾತಂತ್ರ್ಯ ಬಂದಾಗ ದೇಶದ ಜನಸಂಖ್ಯೆ ೩೩ ಕೋಟಿ, ಅಂದಿನ ಜನಸಂಖ್ಯೆಗೆ ಸಾಕಾಗುತ್ತಿಲ್ಲ ಎಂದು PL ೪೮೦ ಕಾಯಿದೆ ಅನುಸಾರ ಧಾನ್ಯಗಳನ್ನು ಹೊರ ದೇಶಗಳಿಂದ ತರಿಸಿ, ಹಂಚಲಾಗುತ್ತಿತ್ತು. ದೇಶಕ್ಕೆ ಆಹಾರ ಭದ್ರತೆ ಇಲ್ಲದೆ ಇದ್ದರೆ, ಸ್ವಾತಂತ್ರ್ಯ ಭದ್ರತೆ ಇರುವುದಿಲ್ಲವೆಂದು ಪರಿಗಣಿಸಿ, ಆಹಾರ ಉತ್ಪಾದನೆ ಹೆಚ್ಚಿಸಲು ವಿಜ್ಞಾನಿಗಳಿಂದ, ಸಂಶೋಧಕರಿಂದ ಸಲಹೆ ಪಡೆದು ಸರ್ಕಾರ ವಿವಿಧ ಇಲಾಖೆಗಳನ್ನು ಸ್ಥಾಪಿಸಿ ಹಣಕಾಸು ಸಂಸ್ಥೆಗಳನ್ನು ಸ್ಥಾಪಿಸಿ ವಿವಿಧ ಸೌಲಭ್ಯಗಳನ್ನು ಬಳಸಿಕೊಂಡು

ಹೆಚ್ಚು ಬೆಳೆಯಲು ರೈತರನ್ನು ಉತ್ತೇಜಿಸಿ ಹೆಚ್ಚು ಬೆಳೆಯಲಾಗಿದೆ. ನಮ್ಮ ದೇಶಕ್ಕೆ ಸಾಕಾಗುವಷ್ಟಲ್ಲದೇ ಹೊರ ದೇಶಕ್ಕೆ ನಿರ್ಯಾತ ಮಾಡುವಷ್ಟು ಬೆಳೆ ಬೆಳೆಯಲಾಗಿದೆ. ಬೆಳೆದಿರುವ ೨೮೫ ದಶ ಲಕ್ಷ ಟನ್ ಆಹಾರ ಧಾನ್ಯ, ೩೦೦ ದಶ ಲಕ್ಷ ತರಕಾರಿ ಹಣ್ಣುಗಳು, ೧೦೦ ದಶ ಲಕ್ಷ ಟನ್ ಹೈನೋತ್ಪಾದನೆಗಳನ್ನು, ಮಾರುಕಟ್ಟೆ ಮಾಡುವುದೇ ಸವಾಲಾಗಿದೆ.

**ಕೃಷಿ ಉತ್ಪನ್ನಗಳ ಮಾರಾಟ**

ಕೃಷಿ / ಒಕ್ಕಲುತನ ಎನ್ನುವುದು ಮೂರು ತಾಳಿನ ಕೂರಿಗೆ, ಒಂದು ತಾಳು ರೈತ, ಒಂದು ತಾಳು ಕಾರ್ಮಿಕ, ಮತ್ತೊಂದು ತಾಳು ಆಯಗಾರ ಎನ್ನುವ ಸಂಸ್ಕೃತಿಯನ್ನಾಧರಿಸಿ ಬೆಳೆದ ಬೆಳೆಗಳನ್ನು ಹಂಚಿಕೊಳ್ಳಲಾಗುತ್ತಿತ್ತು. ಇದರಿಂದಾಗಿ ಬಹುತೇಕ ವಸ್ತುಗಳ ವಿನಿಮಯ ಮಾಡಿಕೊಳ್ಳುತ್ತಿದ್ದರು. ರೈತರು ವಾರ್ಷಿಕವಾಗಿ ವಾಣಿಜ್ಯ ಬೆಳೆಗಳಾದ ಹತ್ತಿ, ಮೆಣಸಿನಕಾಯಿ, ಬೆಲ್ಲ ಮುಂತಾದವುಗಳನ್ನು ಮಾರಾಟ ಮಾಡಿ, ವರ್ಷಕ್ಕೆ ತಮ್ಮ ತಮ್ಮ ಮನೆಗಳಿಗೆ ಬೇಕಾಗುವ ಕಿರಾಣಿ, ಬಟ್ಟೆಗಳನ್ನು ಖರೀದಿಸಿಕೊಳ್ಳುವ ವಾಡಿಕೆ ಹೊಂದಿದ್ದರು. ನಾಗರೀಕತೆ ಬೆಳೆದಂತೆ ಕೃಷಿ ವಸ್ತು ಕೊಂಡೊಕೊಳ್ಳುವಿಕೆಯಲ್ಲಿ ಹಣವನ್ನು ವಿನಿಮಯ ಮಾಧ್ಯಮವಾಗಿ ಹೆಚ್ಚು ಬಳಸಿಕೊಳ್ಳಲಾಗುತ್ತಿದೆ. ಹೀಗಾಗಿ ಹಣವು ಕೃಷಿ ಚಟುವಟಿಕೆಯಲ್ಲಿ ಬಹಳ ಪ್ರಮುಖ ಪಾತ್ರವಹಿಸುತ್ತದೆ.

ಮಾರುಕಟ್ಟೆಗಳನ್ನು ಕೊಳ್ಳುವವನ ಮಾರುಕಟ್ಟೆ, ಅಂದರೆ ಖರೀದಿಸುವರೆ ಉತ್ಪನ್ನಗಳ ಧಾರಣೆ ನಿರ್ಧರಿಸುತ್ತಾರೆ, ಮಾರುವವನ ಮಾರುಕಟ್ಟೆ ಅಂದರೇ ಮಾರಾಟಗಾರನೇ ವಸ್ತುಗಳ ಬೆಲೆಯನ್ನು ನಿರ್ಧರಿಸುತ್ತಾನೆ. ಕೃಷಿ ಉತ್ಪನ್ನಗಳನ್ನು ಕೊಳ್ಳುವವರ ಮಾರುಕಟ್ಟೆಯಲ್ಲಿ ("Buyers Market) ಮಾರಾಟ ಮಾಡಲಾಗುತ್ತದೆ. ರೈತರು ತಮಗೆ ಬೇಕಾಗುವ ಪರಿಕರಗಳನ್ನು ಮಾರುವವರ ಮಾರುಕಟ್ಟೆ(Sellers Market)ಯಲ್ಲಿ ಖರೀದಿಸುತ್ತಾರೆ. ಹೀಗಾಗಿ ರೈತರ ಪರಿಸ್ಥಿತಿ, ಕೇಳಿದಷ್ಟಕ್ಕೆ ತನ್ನ ಉತ್ಪನ್ನ ಕೊಟ್ಟು, ತನಗೆ ಬೇಕಾಗಿದ್ದನ್ನು ಹೇಳಿದಷ್ಟಕ್ಕೆ ತರಬೇಕು. ಇದರಿಂದ ರೈತರು ಮಾರುವಾಗಲು, ಕೊಳ್ಳುವಾಗಲು ಶೋಷಣೆಗೆ ಒಳಗಾಗುತ್ತಾರೆ. ಇದರಿಂದಾಗಿ ಮಾಡಿದ ಸಾಲಗಳು ತೀರದೆ ಪರಿತಪಿಸುತ್ತಿದ್ದಾರೆ. ಅಲ್ಲದೇ ಅತ್ಯಂತ ಮೌಲ್ಯಯುಕ್ತ ತಮ್ಮ ಜೀವವನ್ನೇ ಕಳೆದುಕೊಳ್ಳುವ ಆವೇಶದ ತೀರ್ಮಾನಕ್ಕೆ ಒಳಗಾಗುತ್ತಿದ್ದಾರೆ.

**ಕೃಷಿ ಮಾರಾಟ ಪದ್ಧತಿಗಳು:**

ಕೃಷಿ ವಸ್ತುಗಳನ್ನು ಠೋಕ್ ಮಾರುಕಟ್ಟೆ (Whole Sale Market) ಚಿಲ್ಲರೆ ಮಾರುಕಟ್ಟೆ (Retail Market) ಮುಂತಾದ ಕಡೆ ಮಾರಾಟ ಮಾಡಲಾಗುತ್ತದೆ. ರೈತರು ನಿಯಂತ್ರಿತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದಕ್ಕಿಂತ ಮನೆ ಬಾಗಿಲಲ್ಲಿಯೇ ಮಾರಾಟ ಮಾಡುವುದು ಪಾರದರ್ಶಕ ಹಾಗೂ ಲಾಭದಾಯಕ ಎಂದು ಹೊಲದಲ್ಲಿ | ಮನೆಯಲ್ಲಿ ಮಾರಾಟ ಮಾಡುತ್ತಿರುವುದನ್ನು ಗಮನಿಸಬಹುದಾಗಿದೆ. ಹೀಗಾಗಿ ನಿಯಂತ್ರಿತ

ಮಾರುಕಟ್ಟೆಯಲ್ಲಿ ಶೇ. ೧೫ ರಷ್ಟು ಮಾತ್ರ ಮಾರಾಟವಾಗುತ್ತಿರುವುದನ್ನು ಅಂಕಿ ಅಂಶಗಳಿಂದ ಗಮನಿಸಬಹುದಾಗಿದೆ.



**ಕೃಷಿ ಉತ್ಪಾದನಾ ವೆಚ್ಚ ಹಾಗೂ ಬೆಲೆ ನೀತಿ:**

ಕೃಷಿ / ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಮಾಗಿ ಉಳಿಮೆ, ಭೂಮಿ ತಯಾರಿ, ಬಿತ್ತನೆ, ಕಳೆ, ಅಂತರ್ ಬೇಸಾಯ, ಪ್ರಾಣಿ, ಪಕ್ಷಿಗಳಿಂದ ಬೆಳೆ ರಕ್ಷಣೆ, ರೋಗರುಜಿನಗಳ ಹತೋಟಿ ಕ್ರಮಗಳು, ಬೆಳೆ ಕೊಯ್ಲು, ರಾಶಿ ಮಾಡುವುದು, ಕಾಯಿ, ಹಣ್ಣು, ಹತ್ತಿ ಬಿಡಿಸುವುದು, ಧಾನ್ಯ ಸಂಗ್ರಹಣೆ, ಮೇವು ಸಂಗ್ರಹಣೆ ಈ ಎಲ್ಲಾ ಚಟುವಟಿಕೆಗಳಿಗಾಗಿ ಬೀಜ, ಗೊಬ್ಬರ, ಔಷಧಿಗಳ ಖರೀದಿ, ಆಳುಗಳ ಕೂಲಿ, ಎತ್ತುಗಳ ನಿರ್ವಹಣೆ/ಖರೀದಿ, ಉತ್ಪಾದನಾ ಸಾಧನಗಳಾದ ಕೂರಿಗೆ ಕುಂಟೆ, ರಂಟೆ ಟಾರ್ಪಲ್‌ಗಳು ಮುಂತಾದವುಗಳ ಖರೀದಿಗಾಗಿ ನಿರ್ವಹಣೆಗಾಗಿ, ಬಾಡಿಗೆ ಯಂತ್ರಗಳ ಖರೀದಿ/ನಿರ್ವಹಣೆ ಮತ್ತು ಇತ್ತೀಚೆಗೆ (ಕರ್ನಾಟಕದಲ್ಲಿ ಭೂಗೇಣಿಗೆ ಕಾನೂನಿನ ಮಾನ್ಯತೆ ಇಲ್ಲದಿದ್ದರು) ವೆಚ್ಚ ಮಾಡಬೇಕಾಗುತ್ತದೆ. ಇದರಿಂದಾಗಿ ಕೇಂದ್ರ ಕೃಷಿ ವೆಚ್ಚ ಮತ್ತು ಬೆಲೆ ಆಯೋಗ ಹಾಗೂ ಕರ್ನಾಟಕ ಕೃಷಿ ಬೆಲೆ ಆಯೋಗವು ಕೃಷಿ ವೆಚ್ಚಗಳನ್ನು ಚರ ವೆಚ್ಚ (Variable Cost) ಮತ್ತು ಸ್ಥಿರ ವೆಚ್ಚ (Fixed Cost) ಗಳನ್ನು ಲೆಕ್ಕ ಹಾಕುತ್ತದೆ.

ಚರ ವೆಚ್ಚಗಳೆಂದರೆ ರೈತರು ಬೆಳೆ ಉತ್ಪಾದನೆ ಮಾಡಿದಾಗ ಬೀಜ, ಗೊಬ್ಬರ, ಕೂಲಿ, ಪರಿಕರಗಳು, ಯಂತ್ರಗಳಿಗೆ ಮಾಡುವ ವೆಚ್ಚಗಳಾಗಿದ್ದು, ಜೊತೆಗೆ ಕುಟುಂಬದ ಶ್ರಮ (A+FL) ಲೆಕ್ಕಹಾಕಿ ಇದಕ್ಕೆ ಭೂಗೇಣಿ (ಸ್ವಂತ ಅಥವಾ ಹೊರಗಿನಿಂದ ಪಡೆದ) ಲೆಕ್ಕಹಾಕಿ (C) ಇದಕ್ಕೆ ನಿರ್ವಹಣಾ ವೆಚ್ಚ ಸೇರಿಸಿದರೆ ಸಮಗ್ರ ವೆಚ್ಚ (C) ಒಟ್ಟಾರೆ, ಚರ ವೆಚ್ಚ + ಭೂಗೇಣಿ + ನಿರ್ವಹಣಾ ವೆಚ್ಚಗಳಾಗಿರುತ್ತದೆ. (A + FL+ Rental Value + Managerial Cost = C) ಪರಿಗಣಿಸಿ ಸಮಗ್ರ ವೆಚ್ಚ ಲೆಕ್ಕ ಹಾಕಲಾಗುತ್ತದೆ.

**ಬೆಲೆ ನೀತಿ**

ಕೃಷಿ ಉತ್ಪನ್ನಗಳು ಕೊಳ್ಳುವವನ ಮರುಕಟ್ಟೆಯಲ್ಲಿ ಮಾರಾಟವಾಗುತ್ತಿರುವುದರಿಂದ ನಷ್ಟವಾಗುತ್ತದೆ ಎಂದು ಪರಿಗಣಿಸಿ ಕೇಂದ್ರ ಸರ್ಕಾರ ಪ್ರತಿ ವರ್ಷ ಎರಡು ಹಂಗಾಮುಗಳಲ್ಲಿ ಬೆಲೆ ನೀತಿ ಪ್ರಕಟಿಸಿ, ಕನಿಷ್ಠ ಬೆಂಬಲ ಬೆಲೆ ಘೋಷಿಸುತ್ತದೆ. ಮಾರುಕಟ್ಟೆಯಲ್ಲಿ ಘೋಷಿತ ಬೆಂಬಲ ಬೆಲೆಗಿಂತಲೂ ಕಡಿಮೆಯಾದಾಗ ಮಾರುಕಟ್ಟೆ ಮಧ್ಯ ಪ್ರವೇಶ ಮಾಡಿ ಖರೀದಿಸುತ್ತದೆ. ಇದಕ್ಕಾಗಿ ಆಹಾರ ನಿಗಮ (FCI) ಭಾರತೀಯ ಸಹಕಾರ ಕೃಷಿ ಮಾರಾಟ ಮಹಾ ಮಂಡಳಿ

(NAFED) ಗಳನ್ನು ಸ್ಥಾಪಿಸಿದೆ. ಅದೇ ರೀತಿ ಕರ್ನಾಟಕ ಸರ್ಕಾರ ಘೋಷಿತ ಬೆಂಬಲ ಬೆಲೆ ಜೊತೆಗೆ ಅವಶ್ಯಕತೆಗನುಗುಣವಾಗಿ ಪ್ರೋತ್ಸಾಹಧನ (Incentive Price) ನೀಡಿ ಖರೀದಿಸಲು ಕರ್ನಾಟಕ ಆಹಾರ ಹಾಗೂ ನಾಗರೀಕ ಸರಬರಾಜು ನಿಗಮ (KFCFC) ಮತ್ತು ಕರ್ನಾಟಕ ಸಹಕಾರಿ ಮಾರಾಟ ಮಂಡಳಿ (KSCMF) ಗಳನ್ನು ಸ್ಥಾಪಿಸಿದೆ.

ಒಟ್ಟಾರೆ ಸಂವಿಧಾನಾತ್ಮಕವಾಗಿ ಕೃಷಿ, ರಾಜ್ಯ ವಿಷಯವಾಗಿದ್ದರೆ, ಕೃಷಿ ಉತ್ಪನ್ನಗಳ ಬೆಲೆಯು ಕೇಂದ್ರ ವಿಷಯವಾಗಿದೆ. ಹೀಗಾಗಿ ಕೃಷಿ ಉತ್ಪನ್ನಗಳ ಬೆಲೆ ನಿಗದಿಯಲ್ಲಿ ರಾಜ್ಯ ಸರ್ಕಾರದ ಪಾತ್ರ ಪ್ರೋತ್ಸಾಹ ಬೆಲೆ ಕೊಡುವುದಕ್ಕೆ ಸೀಮಿತವಾಗಿದೆ.



ಇಂದಿನ ಜಾಗತೀಕರಣ ವ್ಯವಸ್ಥೆಯಲ್ಲಿ ಕೃಷಿ ಉತ್ಪನ್ನಗಳ ಬೆಲೆಯು ದೇಶೀಯ ಉತ್ಪಾದನೆ ಹಾಗೂ ದೇಶೀಯ ಬೇಡಿಕೆಗೆ ಮಾತ್ರ ಸೀಮಿತವಾಗಿರದೇ ಜಗತ್ತಿನಲ್ಲಿಯ ಉತ್ಪಾದನೆ ಬೇಡಿಕೆ ದೇಶದ ಆಮದು ಮತ್ತು ರಫ್ತುಗಳ ಮೇಲೆ ಅವಲಂಬಿತವಾಗಿರುತ್ತದೆ. ರೈತರು ಮಳೆ ಹವಾಗುಣ, ಮಣ್ಣು ಮಾತ್ರವಲ್ಲದೇ ಕಳೆದ ಹಂಗಾಮಿನ ಮಾರುಕಟ್ಟೆ ದರ ಆಧರಿಸಿ ಮುಂದಿನ ಹಂಗಾಮಿನ ಬೆಳೆ ತೀರ್ಮಾನ ಮಾಡುತ್ತಿದ್ದಾರೆ. ಇದರಿಂದಾಗಿ ಮಾರುಕಟ್ಟೆ ದರಗಳು ಏರಿಳಿತವಾಗಿ ಅದರಲ್ಲೂ ಸುಗ್ಗಿಯಲ್ಲಿ ಬೆಲೆಗಳ ಇಳಿಕೆಯಾಗಿ ರೈತರು ಸಂಕಷ್ಟಗೊಳಗಾಗುತ್ತಿದ್ದಾರೆ. ಪ್ರತಿ ವರ್ಷ ನಷ್ಟ ಹೊಂದುತ್ತಿದ್ದಾರೆ.

ಕೇಂದ್ರ ಸರ್ಕಾರವು ಬೆಲೆ ನೀತಿ ಮಾಡುವಾಗ ಚರ ವೆಚ್ಚ + ಕುಟುಂಬ ಶ್ರಮ ಲೆಕ್ಕ ಹಾಕಿ, ಡಾ. ಎಂ.ಎಸ್. ಸ್ವಾಮಿನಾಥನ್ ವರದಿಯಂತೆ ಶೇ.೫೦ ಸೇರಿಸಿ ಬೆಂಬಲ ಬೆಲೆ ಘೋಷಿಸಿದೆ. ಆದರೆ ರೈತರಿಗೆ ಇದರಿಂದ ಹೆಚ್ಚಿನ ಅನುಕೂಲವಾಗಿಲ್ಲ. ಹೀಗಾಗಿ ರೈತರು ಚರ ವೆಚ್ಚ + ಕುಟುಂಬ ಶ್ರಮ + ಭೂಗೇಣಿ ಸೇರಿಸಿ ಒಟ್ಟು ವೆಚ್ಚಕ್ಕೆ (C) ಶೇ. ೫೦ ರಷ್ಟು ಸೇರಿಸಿ ಬೆಂಬಲ ಬೆಲೆ ಘೋಷಿಸಲು ಹಕ್ಕೋತ್ತಾಯಿಸುತ್ತಿದ್ದಾರೆ. ಕರ್ನಾಟಕ ಕೃಷಿ ಬೆಲೆ ಆಯೋಗ ಲೆಕ್ಕ ಹಾಕಿದ ಒಟ್ಟು ವೆಚ್ಚವನ್ನು (C) ೧೭ ಬೆಳೆಗಳಿಗೆ ಲೆಕ್ಕ ಹಾಕಿದೆ. ಈ ವೆಚ್ಚಕ್ಕೆ ಹೋಲಿಸಿದಾಗ ಘೋಷಿತ ಬೆಂಬಲ ಬೆಲೆಗಳಾಗಲಿ | ಹಾಗೂ ಮಾರುಕಟ್ಟೆ ಬೆಲೆಗಳಾಗಲಿ (ತೋಟಗಾರಿಕಾ ಬೆಲೆಗಳಾದ ತೆಂಗು, ಅಡಿಕೆ, ಮಾವು, ದ್ರಾಕ್ಷಿ ಹೊರತುಪಡಿಸಿ) ಕೃಷಿ ಬೆಳೆಗಳಿಗೆ ಲಾಭದಾಯಕವಾಗಿಲ್ಲ.

**ನಿಯಂತ್ರಿತ ಮಾರುಕಟ್ಟೆಗಳು:**

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ರೈತರಿಗೆ ಸ್ಪರ್ಧಾತ್ಮಕ ಬೆಲೆ ಸಿಗಬೇಕೆಂದು ನಿಯಂತ್ರಿತ ಮಾರುಕಟ್ಟೆಗಳನ್ನು ೧೯೬೬ ಕಾಯ್ದೆಯನುಸಾರ ಸ್ಥಾಪಿಸಿದೆ. ಇತ್ತೀಚೆಗೆ ಕೇಂದ್ರ ಸರ್ಕಾರ ಒಕ್ಕಲುತನ ಹುಟ್ಟುವಳಿ ಹಾಗೂ ಜಾನುವಾರು ಮಾರುಕಟ್ಟೆ ಮಾದರಿ ಕಾಯ್ದೆ (Agricultural Produce & Live Stock Marketing Modal Act) ರೂಪಿಸಿ ಎಲ್ಲಾ ರಾಜ್ಯ/ಕೇಂದ್ರಾಡಳಿತ ಸರ್ಕಾರಗಳಿಗೆ ಅಳವಡಿಸಿಕೊಳ್ಳಲು ಸಲಹೆ ನೀಡಿದೆ.

**ಭಾರತದಲ್ಲಿ ನಿಯಂತ್ರಿತ ಮಾರುಕಟ್ಟೆಗಳು:**

ಭಾರತದಾದ್ಯಂತ ೨೪೭೭ ಪ್ರಮುಖ ಮಾರುಕಟ್ಟೆಗಳು ಹಾಗೂ ೪೮೪೩ ಉಪ ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿದೆ. ಇ-ಮಾರುಕಟ್ಟೆ ವ್ಯವಸ್ಥೆಯನ್ನು ಜಾರಿ ಮಾಡಿದೆ. ರಫ್ತು ಅಭಿವೃದ್ಧಿಗಾಗಿ ಕೃಷಿ ಉತ್ಪನ್ನ ರಫ್ತು ಅಭಿವೃದ್ಧಿ ಪ್ರಾಧಿಕಾರ (APEDA) ಸ್ಥಾಪಿಸಿದೆ.

**ಕರ್ನಾಟಕದಲ್ಲಿ ನಿಯಂತ್ರಿತ ಮಾರುಕಟ್ಟೆಗಳು:**

ಕರ್ನಾಟಕ ರಾಜ್ಯದಲ್ಲಿ ರೈತರು ಮತ್ತು ಗ್ರಾಹಕರ ಹಿತವನ್ನು ಗಮನದಲ್ಲಿರಿಸಿಕೊಂಡು ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಹಾಗೂ ಅಭಿವೃದ್ಧಿ) ಅಧಿನಿಯಮ ೧೯೬೬ ರಡಿ ನಿಯಂತ್ರಿತ ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿದೆ. ರಾಜ್ಯದಲ್ಲಿ ೧೬೨ ಮುಖ್ಯ ಮಾರುಕಟ್ಟೆಗಳು ಹಾಗೂ

೩೫೨ ಉಪ ಮಾರುಕಟ್ಟೆಗಳಲ್ಲಿ ವಾರ್ಷಿಕವಾಗಿ ಅಂದಾಜು ರೂ.೫೦ ಸಾವಿರ ಕೋಟಿಗಳ ವ್ಯವಹಾರ ಜರುಗುತ್ತಿದೆ. ೨೦೧೭-೧೮ನೇ ಸಾಲಿನಲ್ಲಿ ರೂ. ೪೮೪,೭೯ ಕೋಟಿ ಮಾರುಕಟ್ಟೆ ಶುಲ್ಕ ಹಾಗೂ ರೂ. ೪೩.೮೨ ಕೋಟಿ ಬಳಕೆದಾರರ ಶುಲ್ಕ ಸಂಗ್ರಹಣೆಯಾಗಿದೆ. ಕರ್ನಾಟಕ ಕೃಷಿ ಉತ್ಪನ್ನ ರಫ್ತು ಉತ್ತೇಜನ (KAPEC) ಸಂಸ್ಥೆಯನ್ನು ಸ್ಥಾಪಿಸಿದೆ.

**ಕೃಷಿ ಮಾರಾಟ ಇಲಾಖೆ:**

ಕೃಷಿ ಮಾರಾಟ ಇಲಾಖೆಯು ಸಹಕಾರ ಸಚಿವಾಲಯದಡಿ ಸೇವೆ ಸಲ್ಲಿಸುತ್ತಿದ್ದು, ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ. ರಾಜ್ಯದ ಜಿಲ್ಲೆಗಳಲ್ಲಿ ಕೃಷಿ ಮಾರಾಟ ನಿರ್ದೇಶಕರಿಗೆ ಸಹಾಯಕರಾಗಿ ಉಪ / ಸಹಾಯಕ ನಿರ್ದೇಶಕರುಗಳು ಕಾರ್ಯ ನಿರ್ವಹಿಸುತ್ತಾರೆ. ಕೃಷಿ ಮಾರಾಟ ಇಲಾಖೆಯು ಕೃಷಿ ಮಾರಾಟ ವ್ಯವಸ್ಥೆ ಸುಧಾರಣೆಗಾಗಿ ಕೃಷಿ ಮಾರಾಟ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತಂದಿರುವುದಲ್ಲದೆ, ಕರ್ನಾಟಕ ಕೃಷಿ ಮಾರಾಟ ನೀತಿ ೨೦೧೩ನ್ನು ಜಾರಿಗೆ ತಂದಿದೆ. ಇದರಿಂದಾಗಿ ಕೃಷಿ ಮಾರಾಟ ಕ್ಷೇತ್ರದಲ್ಲಿ ತಂತ್ರಜ್ಞಾನ ಅಳವಡಿಸುವ ಮೂಲಕ ಆನ್‌ಲೈನ್ ವ್ಯಾಪಾರವನ್ನು ಜಾರಿಗೆ ತರಲಾಗಿದೆ. ಏಕೀಕೃತ ಮಾರುಕಟ್ಟೆ ವ್ಯವಸ್ಥೆಯಿಂದ ರೈತರು, ವರ್ತಕರು, ದಲ್ಲಾಳಿಗಳು ಹಾಗೂ ಎಲ್ಲಾ ಮಾರಾಟ ಭಾಗೀದಾರರಿಗೆ ಪ್ರಯೋಜನವಾಗುವ ರೀತಿಯಲ್ಲಿ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸುವ ದೃಷ್ಟಿಯಿಂದ ಈ ವ್ಯವಸ್ಥೆಯ ಮೂಲಕ ಖರೀದಿದಾರರಿಗೆ ಗರಿಷ್ಠ ೧೦ ವರ್ಷಗಳ ಕಾಲಾವಧಿಗಾಗಿ ರಾಜ್ಯದೆಲ್ಲೆಡೆ ವ್ಯವಹಾರ ನಡೆಸುವ ಏಕೀಕೃತ ಲೈಸೆನ್ಸ್ ನೀಡುವ ವ್ಯವಸ್ಥೆ ಜಾರಿಗೆ ತರಲಾಗಿದೆ.

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ ೧೯೬೬ರಡಿ ಸ್ಥಾಪನೆಯಾದ ಶಾಸನಬದ್ಧ ಮಂಡಳಿಯಾಗಿದೆ. ರಾಜ್ಯ ಸರ್ಕಾರದ ಕೃಷಿ ಮಾರುಕಟ್ಟೆ ಮಂತ್ರಿಗಳು ಅಧ್ಯಕ್ಷರಾಗಿದ್ದು, ಸಹಕಾರ ಮತ್ತು ಕೃಷಿ ಹಾಗೂ ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮಂಡಳಿಯ ಸದಸ್ಯರಾಗಿದ್ದು, ರಾಜ್ಯದ ಜಿಲ್ಲೆಯ ಮಾರುಕಟ್ಟೆ ಸಮಿತಿಗಳ ಅಧ್ಯಕ್ಷರುಗಳಿಂದ ಆಯ್ಕೆಯಾದ ಜಿಲ್ಲೆಗೆ ಒಬ್ಬರಂತೆ ಸದಸ್ಯರಾಗಿರುತ್ತಾರೆ. ಕೃಷಿ ಮಾರಾಟ ಇಲಾಖೆಯ ನಿರ್ದೇಶಕರು ವ್ಯವಸ್ಥಾಪಕ ನಿರ್ದೇಶಕರಾಗಿರುತ್ತಾರೆ. ಕೃಷಿ ಮಾರಾಟ ಮಂಡಳಿಯು ಮಾರುಕಟ್ಟೆ ಸಮಿತಿಗಳ ಉತ್ತೇಜನಕಾರಿ, ಪ್ರಚಾರ ಮತ್ತು ತರಬೇತಿ ಕಾರ್ಯನಿರ್ವಹಿಸುವುದಲ್ಲದೆ, ರೈತ ಸಂಜೀವಿನಿ ಯೋಜನೆ, ಆವರ್ತ ನಿಧಿ ಯೋಜನೆ, ಶ್ರಮಿಕರ ವಿಮಾ ಯೋಜನೆಯಂತಹ ಪ್ರಮುಖ ಕಾರ್ಯಕ್ರಮಗಳನ್ನು ನಿರ್ವಹಿಸುತ್ತದೆ.

**ಮಾರುಕಟ್ಟೆಗಳ ವ್ಯವಹಾರವನ್ನು ಉನ್ನತೀಕರಿಸುವಲ್ಲಿ ರೇಮ್ಸ್ (REMS) ಸಂಸ್ಥೆ:**

ರೇಮ್ಸ್ ಸಂಸ್ಥೆಯು ರಾಜ್ಯ ಸರ್ಕಾರ ಹಾಗೂ NCDEX.ಸಂಸ್ಥೆಯ ಸಹಭಾಗಿತ್ವದಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿನ ಸಂಸ್ಥೆಯಾಗಿದೆ. ರಾಜ್ಯದ ಮಾರುಕಟ್ಟೆಗಳಲ್ಲಿ ರೇಮ್ಸ್ (REMS) ಸಂಸ್ಥೆಯು ಆನ್‌ಲೈನ್ ಮಾರಾಟದ ಮೂಲಕ



ರೈತರಿಗೆ ಲಾಭದಾಯಕ ನೆಲೆ ದೊರಕಿಸಿಕೊಡುವ ವ್ಯವಸ್ಥೆ, ಗಣಕೀಕರಣ ವ್ಯವಸ್ಥೆ, ಶ್ರೇಣೀಕರಣ ವ್ಯವಸ್ಥೆ, ಲೈಸೆನ್ಸ್ ವ್ಯವಸ್ಥೆಗಳಂತಹ ಕಾರ್ಯಕ್ರಮಗಳನ್ನು ಆಧುನೀಕರಿಸಿ ರೂಪಿಸಲು ಸಹಕರಿಸುತ್ತಿದೆ. ರಾಜ್ಯದ ಮಾರುಕಟ್ಟೆಗಳಲ್ಲಿ ಶುದ್ಧೀಕರಣ ಹಾಗೂ ಶ್ರೇಣೀಕರಣ ಯಂತ್ರೋಪಕರಣಗಳನ್ನು ಒದಗಿಸಲಾಗಿದೆ.

**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು:**

ಭೂ ಹಿಡುವಳಿದಾರರಿಂದ, ಆಯ್ಕೆಯಾದ ಸದಸ್ಯರುಗಳು ಮತ್ತು ವ್ಯಾಪಾರಿಗಳಿಂದ, ಸಂಸ್ಕರಣಾ ಘಟಕಗಳಿಂದ, TAPCMSಗಳಿಂದ ಜೊತೆಗೆ ನಾಮ ನಿರ್ದೇಶಿತ ಸರ್ಕಾರಿ ಮತ್ತು ಸರ್ಕಾರೇತರ ಸದಸ್ಯರುಗಳಿಂದ ರಚಿತವಾಗಿರುತ್ತದೆ. ಒಟ್ಟಾರೆ ಎಲ್ಲಾ ಕ್ಷೇತ್ರಗಳಿಂದ ೧೮ ಸದಸ್ಯರುಗಳಿರುತ್ತಾರೆ. ದೈನಂದಿನ ವಹಿವಾಟನ್ನು ನಿರ್ವಹಿಸಲು ರೈತ ಸದಸ್ಯರಿಂದ ಆಯ್ಕೆಯಾದಂತಹ ಅಧ್ಯಕ್ಷ ಮತ್ತು ಉಪಾಧ್ಯಕ್ಷರೊಂದಿಗೆ ಸರ್ಕಾರದಿಂದ ನೇಮಕಗೊಂಡ ಕಾರ್ಯದರ್ಶಿಗಳು ನಿರ್ವಹಿಸುತ್ತಾರೆ. ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ, ಮಾರುಕಟ್ಟೆ ವ್ಯವಸ್ಥೆಯ ಅಭಿವೃದ್ಧಿ, ಕೃಷಿ ಸಂಸ್ಕರಣೆಗೆ ಪ್ರೋತ್ಸಾಹ, ಕೃಷಿ ಸಂಬಂಧಿತ ರಫ್ತಿನಲ್ಲಿ ಸುಧಾರಿತ ಕ್ರಮಗಳು, ಕೃಷಿ ಉತ್ಪನ್ನಗಳಿಗಾಗಿ ಮಾರುಕಟ್ಟೆಗಳ ಸ್ಥಾಪನೆ ಮತ್ತು ಮಾರುಕಟ್ಟೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶ ಹೊಂದಿವೆ.

ನಿಯಂತ್ರಿತ ಮಾರುಕಟ್ಟೆಗಳು ರೈತರು ತಂದ ಉತ್ಪನ್ನಗಳನ್ನು ಬಹಿರಂಗ ಹರಾಜು, ಪರಸ್ಪರ ಒಪ್ಪಂದ ಹಾಗೂ ಟೆಂಡರ್ ಮೂಲಕ ಮಾರಾಟ ಮಾಡುವ ವ್ಯವಸ್ಥೆ ಹೊಂದಿದೆ. ಸುಮಾರು ೧೨೯ ವಿವಿಧ ಕೃಷಿ ಹಾಗೂ ತೋಟಗಾರಿಕಾ ಉತ್ಪನ್ನಗಳನ್ನು ಹಾಗೂ ೧೧ ತರಹದ ಜಾನುವಾರುಗಳ ಮಾರಾಟವನ್ನು ನಿಯಂತ್ರಣ ಕಕ್ಷೆಯಲ್ಲಿ ತರಲಾಗಿದೆ. ೨೦೧೭- ೧೮ ರ ಕೃಷಿ ಮಾರಾಟ ಇಲಾಖೆಯ ಅಂಕಿ ಅಂಶದಂತೆ, ಸುಮಾರು ೧.೭೭ ಲಕ್ಷ ಪೇಟೆ ಕಾರ್ಯಕರ್ತರುಗಳು ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸುತ್ತಿದ್ದಾರೆ. ಇವುಗಳ ಪೈಕಿ ೩೩೫೨೭ ವರ್ತಕರು,

೧೦೨೭೩ ದಲ್ಲಾಳರು, ೧೬೨೭೧ ಆಮದುದಾರರು, ೧೮೧೪೨ ರಫ್ತುದಾರರು, ೧೯೫೧೯ ಹಮಾಲರು ಹಾಗೂ ೧೭೫೭೪ ದಾಸ್ತಾನುದಾರರು ಪ್ರಮುಖ ಪೇಟೆ ಭಾಗೀದಾರರಾಗಿರುತ್ತಾರೆ.

ರೈತರಿಗೆ ಸಹಕಾರಿಯಾಗಲು ಹಾಗೂ ರಕ್ಷಿಸಲು ರೈತ ಸಂಜೀವಿನಿ ಯೋಜನೆ, ಅಡಮಾನ ಸಾಲ ಯೋಜನೆ, ಗೋದಾಮುಗಳ ನಿರ್ಮಾಣ, ಹೊಲ ರಸ್ತೆಗಳು, ಗ್ರಾಮೀಣ ಸಂತೆಗಳು ಹಾಗೂ ಇತರೆ ರೈತಪರ ಯೋಜನೆಗಳನ್ನು ಅಳವಡಿಸಲಾಗಿದೆ.

**ಕೃಷಿ ಉತ್ಪನ್ನಗಳ ಮಾರಾಟ ಪದ್ಧತಿಗಳು:**

ಕರ್ನಾಟಕದಲ್ಲಿ ಕೃಷಿ ಉತ್ಪನ್ನಗಳನ್ನು ರೈತರು ತಮ್ಮ ಹೊಲದಲ್ಲಿ | ಮನೆ ಬಾಗಿಲಿನಲ್ಲಿ ಅಥವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ ತಂದು ಮಾರಾಟ ಮಾಡುವ ಪದ್ಧತಿಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಅಳವಡಿಸಿಕೊಂಡಿದ್ದಾರೆ. ಆದರೆ ರೈತರು ಮಾರುಕಟ್ಟೆ ಸಮಿತಿಯಲ್ಲಿ ಮಾರಾಟ ಮಾಡುವುದಕ್ಕಿಂತಲೂ ಮನೆ ಬಾಗಿಲಲ್ಲಿ ಮಾರಾಟ ಮಾಡುವುದು ಪಾರದರ್ಶಕ ಹಾಗೂ ಲಾಭದಾಯಕ ಎಂದು ಪರಿಗಣಿಸುತ್ತಿದ್ದಾರೆ.



ಇದನ್ನು ಕರ್ನಾಟಕದಲ್ಲಿ ಮಾರುಕಟ್ಟೆಗಳಲ್ಲಿ ಮಾರಾಟವಾದ ಪ್ರಮಾಣದಿಂದ ಅವಲೋಕಿಸಬಹುದಾಗಿದೆ. ಒಟ್ಟಾರೆ ಬೇಸಾಯ ಎನ್ನುವುದು ಹೀನಾಯ / ನೀಸಾಯ ಎನ್ನುವಂತಾಗಿದೆ.

ಭಾರತದಲ್ಲಿ ರೈತ ಸಾಲದಲ್ಲಿ ಹುಟ್ಟುತ್ತಾನೆ, ಸಾಲದಲ್ಲಿ ಬೆಳೆಯುತ್ತಾನೆ, ಸಾಲದಲ್ಲಿ ಸಾಯುತ್ತಾನೆ ಎನ್ನುವಂತಹ ಪರಿಸ್ಥಿತಿ ಕಟು ಸತ್ಯವಾಗಿದೆ. ಈ ಎಲ್ಲಾ ಕಾರಣಗಳಿಂದ ಯುವಕರು ಕೃಷಿಯಿಂದ ವಿಮುಖವಾಗುತ್ತಿದ್ದಾರೆ. ಕೃಷಿ ಮಾಡುವ ಯುವಕನಿಗೆ ಮಗಳನ್ನು ಮದುವೆ ಮಾಡಿಕೊಡಲು ಹೆಣ್ಣುಮಕ್ಕಳ ತಂದೆ-ತಾಯಿಗಳು ಹಿಂದೇಟು ಹಾಕುತ್ತಿದ್ದಾರೆ.

ಇದನ್ನೆಲ್ಲಾ ಸರಿದೂಗಿಸಲು ಸರಿಯಾದ ಕೃಷಿ ನೀತಿ ಅಂದರೆ ಬೆಳೆ ಯೋಜನೆ, ನೀರಾವರಿ ನೀತಿ, ಹೊಲಕ್ಕೊಂದು ಕೆರೆ, ಸಾಲ ನೀತಿ, ಮಾರುಕಟ್ಟೆ ನೀತಿ ಅಂದರೆ "ಮಾರಿಕಟ್ಟೆಯೆಡೆ ರೈತನಲ್ಲ ರೈತನೆಡೆ ಮಾರುಕಟ್ಟೆ" (ಸಂಚಾರಿ ಖರೀದಿ ಕೇಂದ್ರಗಳು) ಆಮದು, ರಫ್ತು ನೀತಿ, ಬೆಲೆ ನೀತಿ, ಮೌಲ್ಯವರ್ಧನೆ ಕೃಷಿ ಗಂಡಾಂತರ ನಿರ್ವಹಣೆ ಅಂದರೆ, ಬೆಳೆ ವಿಮೆ ಯೋಜನೆ ರೈತ ಸ್ನೇಹಿ ಮಾಡುವುದು, ಗುಂಪು ಮಾರಾಟ, ನೇರ ಖರೀದಿ ಕೇಂದ್ರಗಳು (DPC) ಮುಂತಾದವುಗಳನ್ನು ರಚಿಸಿ ಸೂಕ್ತ ಬೆಲೆ ನೀಡಿದಾಗ ಪ್ರಧಾನ ಮಂತ್ರಿಗಳ

ಮಹತ್ವಾಕಾಂಕ್ಷೆಯಾದ ರೈತರ ಆದಾಯ ದ್ವಿಗುಣ ಯೋಜನೆ ಸಾಕಾರವಾಗುವುದರ ಜೊತೆಗೆ ೨೦೨೨ ಕ್ಕೆ ಸ್ವಾತಂತ್ರೋತ್ಸವದ ವಜ್ರ ಮಹೋತ್ಸವ ಆಚರಣೆ ಅರ್ಥಪೂರ್ಣವಾಗುತ್ತದೆ.

ಅದೇ ರೀತಿ ಕರ್ನಾಟಕದಲ್ಲಿ ಆಹಾರ ಭದ್ರತೆ, ಪೌಷ್ಟಿಕ ಭದ್ರತೆಗಾಗಿ ಪಡಿತರ ವ್ಯವಸ್ಥೆ ಸದೃಢಗೊಳಿಸಲು, ಪಡಿತರ ಹಾಗೂ ಪಡಿತರೇತರ ಜನಸಂಖ್ಯೆಗೆ ಬೇಕಾಗುವ ಉತ್ಪಾದನೆ ಖರೀದಿ ವಿತರಣೆಗಾಗಿ "ಮುಖ್ಯಮಂತ್ರಿ ಅನ್ನಪೂರ್ಣ ಯೋಜನೆ ರೂಪಿಸಿ ಸನ್ಮಾನ್ಯ ಮುಖ್ಯಮಂತ್ರಿಗಳ ಮಹತ್ವಾಕಾಂಕ್ಷೆಯಾದ ಚಿಂತೆ ರಹಿತ ರೈತ ಸುಖಿ ರೈತ ಸಾಕಾರಗೊಳ್ಳಲು ಸಾಧ್ಯವಾಗುತ್ತದೆ.

ಈ ಸಂದರ್ಭದಲ್ಲಿ ಸಾಹಿತ್ಯ ಪರಿಷತ್‌ನವರು ನನ್ನನ್ನು ಆಹ್ವಾನಿಸಿ, ಕೃಷಿ ಮತ್ತು ನೀರಾವರಿ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಒಂದೆರಡು ಮಾತುಗಳನ್ನಾಡಲು ಅವಕಾಶ ಮಾಡಿದ್ದಕ್ಕೆ ಸರ್ವರಿಗೂ ಹಾಗೂ ತಮ್ಮೆಲ್ಲರಿಗೂ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

# ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ

## ವೈದ್ಯ ವಿಜ್ಞಾನ

**- ಡಾ|| ಎಸ್.ಎಸ್.ಪಾಟೀಲ್ ಮಂದರವಾಡ**

ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಕಲಬುರಗಿಯಲ್ಲಿ ವೈದ್ಯ ವಿಜ್ಞಾನಕ್ಕೂ ಮಹತ್ವಕೊಟ್ಟಿದ್ದು, ತುಂಬಾ ಸಂತಸ, ನಾನು ಒಬ್ಬ ಸಾಹಿತಿಯೂ ಆದಕಾರಣ ವೈದ್ಯಕೀಯ ವಿಷಯದ ಮೇಲೆ ನಾನು ಬರೆದ ಕವನದೊಂದಿಗೆ ಶುರುಮಾಡುತ್ತೇನೆ.

ನಮ್ಮಜ್ಜ ತಿನ್ನುತ್ತಿದ್ದ ತರಕಾರಿ

ನಾವು ತಿನ್ನುತ್ತೇವೆ ಆಹಾರ ವಿಷಕಾರಿ

ನಮ್ಮಜ್ಜ ತಿನ್ನುತ್ತಿದ್ದ ತರಕಾರಿ

ನಾವು ತಿನ್ನುತ್ತೇವೆ ಆಹಾರ ವಿಷಕಾರಿ

ಅವನ ಮುಪ್ಪು ಎಂಬತ್ತಕ್ಕೆ

ನಮ್ಮ ಮುಪ್ಪು ಅದರರ್ಧಕ್ಕೆ

ಅವನ ಮುಪ್ಪು ಎಂಬತ್ತಕ್ಕೆ

ನಮ್ಮ ಮುಪ್ಪು ಅದರರ್ಧಕ್ಕೆ

ಮುಪ್ಪಿನಲ್ಲೂ ನಡೆಯುತ್ತಿದ್ದ ಕಾಲು ಊರಿ

ನಾವು ನಡೆಯುತ್ತೇವೆ ಒಂದು ಕೋಲು ಉರಿ,

ಮುಪ್ಪಿನಲ್ಲೂ ನಡೆಯುತ್ತಿದ್ದ ಕಾಲು ಊರಿ

ನಾವು ನಡೆಯುತ್ತೇವೆ ಒಂದು ಕೋಲು ಊರಿ

ತಲೆ ಬೋಳಾಗಲಿಲ್ಲ ಕೊನೆಯಲಿ

ನಮ್ಮ ತಲೆ ಬೋಳಾಗಲು ಕೂದಲೆಲ್ಲಿ?

ತಲೆ ಬೋಳಾಗಲಿಲ್ಲ ಕೊನೆಯಲಿ

ನಮ್ಮ ತಲೆ ಬೋಳಾಗಲು ಕೂದಲೆಲ್ಲಿ? ಮೂಡರ ಗಂಡ (ಕಾವ್ಯನಾಮ)

ವೈದ್ಯ ವಿಜ್ಞಾನ ಅನ್ನುವುದು ಶುರುವಾಗಿದ್ದು, ಬಹುಶಃ ಮನುಷ್ಯ ಹುಟ್ಟಿದ್ದಾಗಿನಿಂದ ಅಂತಹ ಹೇಳಬಹುದು. ಏಕೆಂದರೆ ಮನುಷ್ಯ ಹುಟ್ಟಿದ್ದಾಗಿನಿಂದ ರೋಗಗಳು ಇದ್ದೆ ಇವೆ, ಆಗ ಮನೆಯ ಮದ್ದಿನಿಂದ ಉಪಚಾರ ಮಾಡಲಾಗುತ್ತಿತ್ತು. ಅದಕ್ಕೆ ಉಪಚಾರ ಎಂದು ಕರೆಯುತ್ತಿದ್ದರು. ಪುರಾತನ ಕಾಲದಲ್ಲಿ ಋಷಿಮುನಿಗಳು ಕೆಲ ಗಿಡಮೂಲ ಔಷಧಿಗಳಿಂದ ಉಪಚಾರ ಮಾಡುತ್ತಿದ್ದರು. ಜಗತ್ತಿನಲ್ಲಿಯೇ ವೈದ್ಯ ವಿಜ್ಞಾನಕ್ಕೆ ಆಧಾರಸ್ತಂಭ ಎಂದರೆ ಭಾರತ ದೇಶ ಎಂದರೆ ತಪ್ಪಾಗಲಾರದು. ಸರಿಸುಮಾರು ಐದು ಸಾವಿರ ವರ್ಷಗಳ ಹಿಂದಿನಿಂದ ವೇದಗಳಲ್ಲಿ ಗಿಡಮೂಲಿಕೆ ಔಷಧಿಗಳ ಬಗ್ಗೆ ಉಲ್ಲೇಖವಾಗಿದೆ. ಅಂದರೆ ಮೂರು ಸಾವಿರ



ಬಿ.ಸಿ (ಕ್ರಿ.ಪೂ) ಹೀಗೆ ಮನೆಯ ಮದ್ದಿನಿಂದ ಋಷಿಮುನಿಗಳಿಂದ ಶುರುವಾದ ಭಾರತೀಯ ಆಯುರ್ವೇದಾ ಚಿಕಿತ್ಸಾ ಪದ್ಧತಿಯಾಗಿ ವೈಜ್ಞಾನಿಕ ರೂಪವನ್ನು ಪಡೆದುಕೊಂಡಿದೆ. ಸರಿಸುಮಾರು ೩೦೦೦ ವೈದ್ಯಕೀಯ ಗಿಡಮೂಲಿಕೆಗಳನ್ನು ಸಂಶೋಧನೆ ಮಾಡಲಾಗಿದೆ. ಅವುಗಳಲ್ಲಿ ಅತಿ ಹೆಚ್ಚಿನ ಔಷಧಿ ಸಸ್ಯಗಳು ಭಾರತದಲ್ಲಿಯೇ ಇವೆ. ಭಾರತ ದೇಶ ಜಗತ್ತಿನಲ್ಲಿಯೇ ವೈದ್ಯ ವಿಜ್ಞಾನದ ರಾಜಧಾನಿ ಎಂದರೆ ತಪ್ಪಾಗಲಾರದು.

ಶುಶೂತ ಭಾರತದ ಮೂಲ ಮತ್ತು ಪುರಾತನ ವೈದ್ಯರು, ಪ್ಲಾಸ್ಟಿಕ ಶಸ್ತ್ರಚಿಕಿತ್ಸೆ ಜನಕ ಎಂದು ಕರೆಯಲಾಗುತ್ತದೆ. (ಫಾದರ ಆಫ್ ಪ್ಲಾಸ್ಟಿಕ ಸರ್ಜರಿ) ೬೦೦ನೇ ಬಿ.ಸಿ. (ಕ್ರಿ.ಪೂ) ಔಷಧಿ ಮತ್ತು ಶಸ್ತ್ರ ಚಿಕಿತ್ಸೆ ಎಂಬ ಪುಸ್ತಕ ಬರೆದರು. ಸರಿ ಸುಮಾರು ೧೧೦೦ ಗೋಗಗಳ ಬಗ್ಗೆ ಉಲ್ಲೇಖಿಸಿದ್ದಾರೆ. ಪುರಾತನ ಕಾಲದಲ್ಲಿ ಭಾರತ ದೇಶದಲ್ಲಿ ತೀವ್ರತರಹದ ಅಪರಾಧಿಗಳಿಗೆ ಮೂಗನ್ನು ಕೊಯ್ಯುವ ಶಿಕ್ಷೆ ಇತ್ತು. ಮೂಗು ಸೌಂದರ್ಯದ ಮುಖ್ಯಬಿಂದು ಅದನ್ನು ಅರಿತ ಶುಶೂತರವರು ರೈನೋ ಪ್ಲಾಸ್ಟಿಕ ಎಂಬ ಶಸ್ತ್ರ ಚಿಕಿತ್ಸೆ ಮಾಡತೊಡಗಿದನು. ಇಂದಿಗೂ ಅಂದರೆ ಸುಮಾರು ೨ ಸಾವಿರ ವರ್ಷಗಳಿಂದ ರೈನೋ ಪ್ಲಾಸ್ಟಿ ಎಂಬ ಶಸ್ತ್ರ ಚಿಕಿತ್ಸೆ ಚಾಲ್ತಿಯಲ್ಲಿದೆ.

ಚರಕ ಎಂಬ ವೈದ್ಯ ೩೦೦ನೇ ಬಿ.ಸಿ. (ಕ್ರಿ.ಪೂ)ಯಲ್ಲಿ ಚರಕ ಸಂಹಿತೆ ಎಂಬ ಆರ್ಯುವೇದ ಔಷಧಿ ಚಿಕಿತ್ಸೆಯ ಗ್ರಂಥವನ್ನು ಬರೆದರು. ಅದಕ್ಕೆ ಅವರನ್ನು ಔಷಧಿ ಚಿಕಿತ್ಸೆಯ ಜನಕ ಎಂದು ಕರೆಯಲಾಗುತ್ತದೆ. (ಫಾದರ ಆಫ್ ಮೆಡಿಷನ್)

ಅಲೋಪಥಿ ಎಂಬ ಔಷಧ ಪದ್ಧತಿ ಜಗತ್ತಿನಾದ್ಯಂತ ನಾವು ಕಾಣಬಹುದು. ವಿಶೇಷವಾಗಿ ತುರ್ತು ಪರಿಸ್ಥಿತಿಯಲ್ಲಿ ಹಾಗೂ ಶಸ್ತ್ರ ಚಿಕಿತ್ಸೆಯಲ್ಲಿ ಅತೀ ಅವಶ್ಯಕ, ಇದಲ್ಲದೆ ಹೊಮಿಯೋಪಥಿ, ಸಿದ್ಧ, ರೇಖಿ, ಚೀನಿ, ಟಿಬೆಟಿಯನ್, ಅಕ್ಯೂಪೇಶ, ಅಕ್ಯೂಪಂಚರ, ಯುನಾನಿ, ಯೋಗ, ನ್ಯಾಚುರೋಪತಿ, ಹೀಗೆ ಹಲವಾರು ವೈದ್ಯ ಪದ್ಧತಿ

ಕಾಣಬಹುದು. ಇವುಗಳಲ್ಲಿ ಹೋಮಿಯೋಪತಿ ತುಂಬಾ ಪರಿಣಾಮಕಾರಿ ಹಾಗೂ ಯಾವುದೇ ಅಡ್ಡ ಪರಿಣಾಮ ಇಲ್ಲದೆ ಎಲ್ಲಾ ವರ್ಗದವರಿಗೂ ಕೈಗೆಟಕುವಂತಹ ಕಡಿಮೆ ಖರ್ಚಿನ ವೈದ್ಯ ಪದ್ಧತಿ. ಪ್ರಸ್ತುತ ೧೦೦ಕ್ಕೂ ಹೆಚ್ಚು ದೇಶಗಳಲ್ಲಿ ಚಾಲ್ತಿಯಲ್ಲಿದೆ.

**ಹೋಮಿಯೋಪತಿ ನೈಸರ್ಗಿಕ ಹೋಲಿಕೆಯ ನಿಯಮದ ಮೇಲೆ ನಿಂತಿರುವ ಚಿಕಿತ್ಸಾ ವಿಧಾನ**

ಹೋಮಿಯೋಪತಿ ಹೋಲಿಕೆಯ ನಿಮಯದ ಮೇಲೆ ನಿಂತಿರುವ ಒಂದು ವೈಜ್ಞಾನಿಕ ವೈದ್ಯ ಪದ್ಧತಿ, ಸಮನಾಗಿರುವುದು ಸಮಾನಾಗಿರುವುದನ್ನು ಗುಣಪಡಿಸುವ ತತ್ವ ರೋಗಿಯಲ್ಲಿ ಕೆಲವೊಂದು ಮಾನಸಿಕ, ಲೈಂಗಿಕ ಹಾಗೂ ದೈಹಿಕ ರೋಗ ಸೂಚಕ ಲಕ್ಷಣಗಳಿರುತ್ತವೆ. ಅದೇ ತರಹ ಪ್ರತಿಯೊಂದು ಔಷಧಿಯಲ್ಲೂ ನಿರ್ದಿಷ್ಟವಾದ ಲಕ್ಷಣಗಳಿರುತ್ತವೆ. ಇವೆರಡೂ ಒಂದಾದಾಗ, ಅಂದರೆ ರೋಗಿಯ ಚಿಹ್ನೆಗಳಿಗೆ ಸರಿ ಹೊಂದುವಂತಹ ಮದ್ದನ್ನು ಕೊಟ್ಟಾಗ ಮತ್ತು ಆ ಔಷಧಕ್ಕೂ ಅದೆ ಚಿಹ್ನೆಗಳಿರುವುದರಿಂದ ಹೋಲಿಕೆಯ ನಿಯಮದ ಅದ್ಭುತ ಪ್ರಭಾವ ಬೀರಿ ರೋಗ ಸಂಪೂರ್ಣವಾಗಿ ಗುಣವಾಗುತ್ತದೆ. ಈ ಚಿಕಿತ್ಸಾ ಪದ್ಧತಿಯನ್ನು ಜರ್ಮನಿಯ ವಿಜ್ಞಾನಿ ಡಾ|| ಸ್ಯಾಮುವೆಲ್ ಹಾನಿಮನ್ ಕ್ರಿಶ. ೧೭೯೬ರಲ್ಲಿ ಜಗತ್ತಿಗೆ ಕೊಡುಗೆಯಾಗಿ ನೀಡಿದರು.



ವೃತ್ತಿಯಲ್ಲಿ ಅಲೋಪತಿಕ್ ವೈದ್ಯರಾಗಿದ್ದ ಅವರು ವೈದ್ಯಕೀಯ ವೃತ್ತಿಯಲ್ಲಿ ಸಾಕಷ್ಟು ರೋಗಿಗಳನ್ನು, ಸ್ವತಃ ತನ್ನ ಮಕ್ಕಳನ್ನೇ ಗುಣಮುಖರನ್ನಾಗಿ ಮಾಡಲು ವಿಫಲರಾದಾಗ ಅಸಹಾಯಕರಾಗಿ ಅಲೋಪತಿಕ್ ವೈದ್ಯಕೀಯ ವೃತ್ತಿಗೆ ವಿದಾಯ ಹೇಳಿದರು. ಹಲವು ಭಾರಿ ಅವರಿಗೆ ಕಾಡಿದ ಸಮಸ್ಯೆಯೆಂದರೆ, ಅಲೋಪತಿಕ್ ಔಷಧಿಗಳಿಂದಾಗುವ ಪಾರ್ಶ್ವ ಪರಿಣಾಮಗಳು, ಎಷ್ಟೋ ಬಾರಿ ತಮ್ಮಿಂದ ತಮಗೆ ಕೇಳಿಕೊಂಡ ಪ್ರಶ್ನೆಯೆಂದರೆ ರೋಗಿಯು ರೋಗದಿಂದ ಸತ್ತನೋ, ಅಥವಾ ಆ ರೋಗಕ್ಕೆ ಕೊಟ್ಟ ಅಲೋಪತಿಕ್ ಔಸಧಿಗಳ ಪಾರ್ಶ್ವ ಪರಿಣಾಮಗಳಿಂದ ಸತ್ತನೋ ಎಂಬುದು. ಅಪ್ರತಿಮ ಜ್ಞಾನಿಯಾಗಿದ್ದ ಅವರು ಅಲೊಪತಿ ವೈದ್ಯಕೀಯ ವೃತ್ತಿಗೆ ವಿದಾಯ ಹೇಳಿ ಸುಮ್ಮನೆ ಕೊಡಲಿಲ್ಲ ವೈದ್ಯಕೀಯ ವೃತ್ತಿಯ ಸುಧಾರಣೆಯ ಭಾರಿ ಅಗತ್ಯವಿದೆ ಎಂದು ತಮ್ಮ ನಿರಂತರ ಸಂಶೋಧನೆಯ ಮೂಲಕ ಹೋಮಿಯೋಪತಿ ವಿಧಾನ ಕಂಡುಹಿಡಿದರು.

ಡಾ|| ಸ್ಯಾಮುಯಲ್ ಹಾನೆಮನ್ನರ ಜೀವನ ಚರಿತ್ರೆ ಮತ್ತು ಸಾಧನೆಯ ಸಾಲುಗಳನ್ನು ಓದಿದರೆ ಮಾನವ ಜನಾಂಗದ ಬಗ್ಗೆ ಹೆಮ್ಮೆ ಮೂಡುವುದಲ್ಲದೆ ಧನ್ಯ ಎನಿಸುವುದು. ಹದಿನೆಂಟನೇ ಶತಮಾನದ ಮಹಾನ್ ಮೇಧಾವಿಯಾಗಿದ್ದ ಅವರು ಜನಿಸಿದ್ದು (೧೦-೪-೧೭೫೫) ಒಬ್ಬ ಬಡ ಚಿತ್ರ ಕಲಾವಿದನ ಕುಟುಂಬದಲ್ಲಿ, ಆರ್ಥಿಕವಾಗಿ

ದುರ್ಬಲರಾಗಿದ್ದ ಅವರ ತಂದೆ ಹಾನೆಮನ್ನರ ಶಿಕ್ಷಣವನ್ನು ಪ್ರಾಥಮಿಕ ಹಂತದಲ್ಲಿ ಮೊಟಕುಗೊಳಿಸಿ ಒಂದು ಕಿರಾಣಿ ಅಂಗಡಿಯಲ್ಲಿ ಕೆಲಸಕ್ಕೆ ಇಟ್ಟರು. ಆದರೆ ವಿದ್ಯೆಯ ನೆರಳಲ್ಲಿ ಬೆಳೆಯಬೇಕೆಂಬ ಮಹಾದಾಸೆ ಹೊತ್ತಿದ್ದ ಬಾಲಕ (ಹಾನೆಮನ್) ಅಲ್ಲಿಂದ ಓಡಿಬಂದು ತಮ್ಮ ತಾಯಿ- ತಂದೆಗೆ ಬೇಡಿಕೊಂಡು ಹಠದಿಂದ ವಿದ್ಯೆಯನ್ನು ಮುಂದುವರೆಸಿ ಕಠಿಣ ಪರಿಶ್ರಮದಿಂದ ಉನ್ನತ ಜ್ಞಾನ ಪಡೆದರು. ಓದಬೇಕು, ಓದಿ ಸಾಧಿಸಬೇಕು ಎನ್ನುವ ಅಚಲ ನಿರ್ಧಾರ ಹೊಂದಿದ ಅವರಿಗೆ ತನ್ನ ಬಡತನ ಎಂದೆಂದು ತಡೆಗೋಡೆಯಾಗಲಿಲ್ಲ. ಸರ್ವಕಷ್ಟಗಳನ್ನು ಮೆಟ್ಟಿ ನಿಂತ ಅವರು ಹದಿನಾಲ್ಕು ಭಾಷೆಗಳನ್ನು ಅರಿತ ಭಾಷಾ ಪಂಡಿತರಾಗಿದ್ದರು. ತಮ್ಮ ಅರ್ಧ ಜೀವನವನ್ನು ಭಾಷಾಂತರಿಸುವ ವೃತ್ತಿಯಲ್ಲಿ ಕಳೆದರು.

ಅವರ ಸಾಧನೆ ಅಪಾರ ಅವುಗಳಲ್ಲಿ ಕೆಲವೆಂದರೆ, ೨೪ ಹೊತ್ತಿಗೆಗಳ ಭಾಷಾಂತರ, ಹೋಮಿಯೋಪತಿ ವೈದ್ಯಕೀಯ ಸಂಶೋಧನೆ, ೭೦ ಲೇಖನಗಳು, ೧೦೦ ನಿಬಂಧಗಳು, ೨೪ ಹೊತ್ತಿಗೆಗಳು, ರಸಾಯನಶಾಸ್ತ್ರದಲ್ಲಿ ಅನೇಕ ಸಂಶೋಧನೆಗಳು, ತಮ್ಮ ಕುಟುಂಬ ಮತ್ತು ವಿದ್ಯಾರ್ಥಿಗಳ ಮೇಲೆ ಪ್ರಯೋಗ ಮಾಡಿ ೯೯ ಔಷಧಿಗಳ ಸಂಶೋಧನೆ ಹಾಗೂ ಫಲಕಾರಿಯಾದ ವೈದ್ಯಕೀಯ ವೃತ್ತಿ, ಇತ್ಯಾದಿ.

ಹೋಮಿಯೋಪತಿ ಚಿಕಿತ್ಸಾ ವಿಧಾನದ ಸಾಕಷ್ಟು ಖಚಿತ ನಿಯಮಗಳನ್ನು ಅವರು ಹೇಳಿಕೊಟ್ಟರು. ಕೆಲವು ಅತಿ ಮುಖ್ಯವಾದವುಗಳು ಈ ಕೆಳಗಿನಂತಿವೆ.

* ಹೋಮಿಯೋಪಥಿ ಇತರ ಯಾವುದೇ ವೈದ್ಯಕೀಯ ವಿಧಾನಗಳಿಗಿಂತ ಹೆಚ್ಚು ಸುರಕ್ಷಿತ ವೈಜ್ಞಾನಿಕ ಪದ್ಧತಿಯಾಗಿದೆ. ಯಾವುದೇ ಔಷಧಿಯನ್ನು ರೋಗಿಗೆ ಕೊಡುವುದಕ್ಕಿಂತ ಮೊದಲು ಆ ಔಷಧಿಯನ್ನು ಆರೋಗ್ಯವಂತ ಮಾನವನ ಮೇಲೆ ಪರೀಕ್ಷಿಸಲಾಗಿರುತ್ತದೆ.

* ಹೋಮಿಯೋಪಥಿಯಲ್ಲಿ ಔಷಧಿಯ ದುಷ್ಪರಿಣಾಮ ಕಡಿಮೆ. ವಿಶೇಷ ರೀತಿಯಲ್ಲಿ (Drug Dynamization) ತಯಾರಿಸಲ್ಪಡುವ ಈ ಔಷಧಿ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

* ಒಂದು ಬಾರಿಗೆ ಒಂದೇ ಮದ್ದು ಉಪಯೋಗಿಸಲ್ಪಡುವುದು

* ಕಣ್ಣಿಗೆ ಕಾಣದೇ ಇರುವ ಸ್ವಯಂ ಪ್ರೇರಿತ ಕಾರ್ಯಶಕ್ತಿಯ (Vital force) ಮಹತ್ವವನ್ನು ಈ ತತ್ವದಲ್ಲಿ ಅಳವಡಿಸಲಾಗಿದೆ.

* ದೀರ್ಘ ಕಾಲದ ರೋಗದ ಕಾರಣವನ್ನು (Chromic miasm) ಚಿಕಿತ್ಸಾ ಪದ್ಧತಿಯಲ್ಲಿ ಗಮನಕ್ಕೆ ತೆಗೆದುಕೊಳ್ಳಲಾಗುವುದು.

ಇನ್ನೊಂದು ಮುಖ್ಯ ಅಂಶವೆಂದರೆ, ಹೋಮಿಯೋಪತಿಯಲ್ಲಿ ರೋಗಿಯ ದೈಹಿಕ, ಮಾನಸಿಕ ಮತ್ತು ಇನ್ನಿತರ ಸ್ತಿತಿಗತಿ ತುಂಬಾ ಮುಖ್ಯ, ಮನುಷ್ಯನ ಇಡೀ ವ್ಯಕ್ತಿತ್ವ ಅಂದರೆ ಆತನ ಮಾನಸಿಕ ಸ್ಥಿತಿಗತಿ, ಭಾವನೆಗಳು, ಹಿನ್ನಲೆ ಆತ ದುಡಿಯುತ್ತಿರುವ ಪರಿಸರ, ಆತನ ಅಭ್ಯಾಸಗಳು, ಇಷ್ಟವಾದ ಹಾಗೂ ಇಷ್ಟವಿಲ್ಲದ ಪದಾರ್ಥ, ಸಾಮಾಜಿಕ, ಕೌಟುಂಬಿಕ, ಲೈಂಗಿಕ ಸಂಬಂಧ, ಜೀವನಶೈಲಿ ಇವೆಲ್ಲ ಪರಿಶೀಲಿಸಿ ಔಷಧಿ, ನೀಡಲಾಗುತ್ತದೆ. ಹೋಮಿಯೋಪಥಿ ಮನಸ್ಸಿನ ಗುಣಲಕ್ಷಣಗಳನ್ನು ಬಹಳಷ್ಟು ಆಳವಾಗಿ ಮತ್ತು ನಿಖರವಾಗಿ ಗುರುತಿಸುತ್ತದೆ. ಆಧುನಿಕ ಮನಶಾಸ್ತ್ರವು ಸಹ ಗಮನಿಸದೇ ಇರುವಂತಹ ಅನೇಕ ಮಾನಸಿಕ ಕುರುಹುಗಳನ್ನು ಹೋಮಿಯೋಪಥಿಯಲ್ಲಿ ಆಳವಾಗಿ ಅಭ್ಯಸಿಸಿ ಗುಣಮುಖವನ್ನಾಗಿ ಮಾಡುತ್ತದೆ. ಉದಾಹರಣೆಗೆ ಕ್ಯಾಂಫರ್ ಎಂಬ ಔಷಧಿಯ ವಿಶ್ಲೇಷಣೆ- ತನ್ನ ಪ್ರತಿಬಿಂಬವನ್ನು ನೋಡಬೇಕಾಗುತ್ತದೆ ಎಂದು ಕನ್ನಡಿಗೆ ಹೆದರುತ್ತಾನೆ. ರಾತ್ರಿ ಆ ಭಯ ಎಷ್ಟಿರುತ್ತದೆ ಎಂದರೆ ಎದ್ದು ಹೋಗಿ ಕನ್ನಡಿಯನ್ನೇ ಒಡೆಯುವಷ್ಟು ವಾಹನ ತನಗೆ ಡಿಕ್ಕಿ ಹೊಡಯುತ್ತದೆಯೋ ಎಂಬ ಭಯ (ಆರ್ಸ-ಅಲ್ಬ) ತಾನು ಸಾಯುವುದು ಖಚಿತವೆಂದು ಭಾವಿಸುವುದು ಹಾಗೂ ತನ್ನ ಸಾವಿನ ಬಗ್ಗೆ ನಿರ್ದಿಷ್ಟ ದಿನ ಹಾಗೂ ಸಮಯದ ಭವಿಷ್ಯ ನುಡಿಯುವುದು (ಅಕೋನೈಟ್).

ಮನುಷ್ಯ ಆರೋಗ್ಯವಾಗಿರಬೇಕಾದರೆ, ಬದುಕು ಸರಳ, ಶ್ರಮಿಕ ಮತ್ತು ವೈಜ್ಞಾನಿಕವಾಗಿರಬೇಕು.

ಉಂಡು ಕೆಂಡವ ಕಾಯಿಸಿಕೊಂಡು

ಶಥಪಥವ ಹಾಕಿದೊಡೆ

ವೈದ್ಯನ ಬಂಡಾಟ ಬೇಡೆಂದ ಸರ್ವಜ್ಞ||

೯೦% ಪ್ರತಿಶತ ಖಾಯಿಲೆಗಳು ಸಾಂಕ್ರಾಮಿಕ,

೧೦% ಪ್ರತಿಶತ ಖಾಯಿಲೆಗಳು ಆನುವಂಶಿಕ

೨೦% ಪ್ರತಿಶತ ಖಾಯಿಲೆಗಳು ವಯೋಸಹಜ

೪೦% ಪ್ರತಿಶತ ಖಾಯಿಲೆಗಳು ತಪ್ಪು ಜೀವನ ಪದ್ಧತಿ ಆಹಾರ ಪದ್ಧತಿ ಹಾಗೂ ಕೆಟ್ಟ ಚಟಗಳು.



೧೦% ಪ್ರತಿಶತ ಖಾಯಿಲೆಗಳಿಗೆ ಕಾರಣ ಗೊತ್ತಿಲ್ಲ.

ಮಾನಸಿಕ ಆರೋಗ್ಯಕ್ಕೆ ಬಸವಣ್ಣನವರ ವಚನ-ಕಳಬೇಡ, ಕೊಲಬೇಡ ಹುಸಿಯ ನುಡಿಯಲು ಬೇಡ ಮುನಿಯ ಬೇಡ ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ ಇದಿರು ಹಳಿಯಲು ಬೇಡ ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ,

ಪ್ರತಿನಿತ್ಯ ಬೆಳಿಗ್ಗೆ ವಾಯುವಿಹಾರ, ನಿಯಮಿತ ಆಹಾರ, ಹೆಚ್ಚಿನ ನೀರು ಸೇವನೆ, ಕಡಿಮೆ ಕೊಬ್ಬಿನ ಹಾಗೂ ಕಡಿಮೆ ಸಕ್ಕರೆಯ ಪ್ರಮಾಣದ ಆಹಾರ ಸೇವನೆ, ಚಿಂತೆ, ಸಿಟ್ಟು ಮತ್ತು ಅಸೂಯೆ ರಹಿತ ಜೀವನ ಹಾಗೂ ದುಶ್ಚಟಗಳಿಂದ ದೂರವಿರುವುದೇ ಆರೋಗ್ಯ ಬದುಕಿನ ಗುಟ್ಟು.

ಹಸಿವಿಲ್ಲದುಣಬೇಡ

ಹಸಿದು ಮತ್ತಿರಬೇಡ

ಬಿಸಗೂಡಿ ತಂಗುಳುಣಬೇಡ

ವೈದ್ಯನ

ಬೆಸಸಲೇ ಬೇಡ ಸರ್ವಜ್ಞ

ನಮ್ಮ ಆಹಾರ ಪದ್ಧತಿಯಲ್ಲಿ ನಾಲ್ಕು ಪದಾರ್ಥಗಳು ಕಡಿಮೆ ಸೇವನೆ ಮಾಡಿದರೆ ಆರೋಗ್ಯ ಚೆನ್ನಾಗಿರುತ್ತದೆ.

(೧) ಸಕ್ಕರೆ: (೨) ಮೈದಾ

(೩) ಅಕ್ಕಿ (೪) ಅತಿಯಾದ ಕೊಬ್ಬು

# ಪರಿಸರ ವಿಜ್ಞಾನ

**ಡಾ.ಹೆಚ್.ಎಸ್.ಎಂ. ಪ್ರಕಾಶ್**

ಪರಿಸರ ವಿಜ್ಞಾನ ಸಾಹಿತ್ಯವು ಕನ್ನಡದ ಸಮಗ್ರ ಸಾಹಿತ್ಯದ ಭಾಗವಾಗಿ ಕಳೆದ ನಾಲ್ಕು ದಶಕಗಳಿಂದಲೂ ಬೆಳೆದು ಬಂದಿದೆ. ಹಲವಾರು ಸಾಹಿತಿಗಳು ಹಾಗೂ ವಿಜ್ಞಾನಿಗಳು ಇದಕ್ಕೆ ಬಹಳವಾಗಿ ಕೊಡುಗೆಯನ್ನು ಕೊಟ್ಟಿದ್ದಾರೆ. ಅವರಲ್ಲಿ ಪ್ರಮುಖರು ಶಿವರಾಮ ಕಾರಂತರು, ಬಿ.ಜಿ.ಎಲ್. ಸ್ವಾಮಿ, ಕುವೆಂಪು, ತೇಜಸ್ವಿ, ಕೃಷ್ಣಾನಂದ ಕಾಮತ್, ಕೃಷ್ಣ ಭಟ್, ನಾಗೇಶ್ ಹೆಗಡೆ, ಟಿ.ಆರ್. ಅನಂತರಾಮು, ಮಾಧವ ಗಾಡೀಲ್, ಕಸ್ತೂರಿ ರಂಗನ್, ರಾಧಾಕೃಷ್ಣ ಭಡ್ತಿ, ಶಿವಾನಂದ ಕಳವೆ ಮುಂತಾದವರು. ಪರಿಸರ ಕಾಳಜಿಯನ್ನು ಪ್ರಜ್ಞೆಯನ್ನು ಜನರಲ್ಲಿ ರೂಪಿಸಲು ಸರಕಾರ ಮತ್ತು ಸರಕಾರೇತರ ಸಂಘ ಸಂಸ್ಥೆಗಳೂ ಸಹ ಶ್ರಮಿಸಿವೆ.

ಪರಿಸರದ ವ್ಯಾಖ್ಯಾನ ಬಹುಸ್ತರಗಳನ್ನುಳ್ಳದ್ದು, ಸಾಮಾನ್ಯವಾಗಿ ನಮ್ಮ ಸುತ್ತಮುತ್ತಲಿನ ಪರಿಸರದ ಬಗ್ಗೆ ನಾವು ಮಾತನಾಡುತ್ತೇವೆ. ಅದರಲ್ಲಿಯೂ ಹಸಿರು ವಾತಾವರಣದ ಬಗ್ಗೆ ಎಲ್ಲರ ಗಮನವಿದೆ. ಹಾಗಾಗಿ ಬಹಳಷ್ಟು ಸಂದರ್ಭಗಳಲ್ಲಿ ಪರಿಸರ ಎಂದರೆ ಜೀವವೈವಿಧ್ಯದ ಬಗ್ಗೆ, ನದಿ, ತೊರೆ, ಚಿಲುಮೆಗಳ ಬಗ್ಗೆ, ಕಾಡು, ತೋಪು, ತೋಟಗಳ ಬಗ್ಗೆ, ಪ್ರಾಣಿ ಪಕ್ಷಿಗಳ ಬಗ್ಗೆ, ಕೆರೆಕುಂಟೆಗಳ ಬಗ್ಗೆ, ಹೊಲ, ಗದ್ದೆ, ತೋಟಗಳ ಬಗ್ಗೆ, ಮಳೆ, ಬೆಳೆ, ಪ್ರವಾಹ, ಬರ, ಕ್ಷಾಮಗಳ ಬಗ್ಗೆ ನಾವು ಮಾತನಾಡುತ್ತೇವೆ. ನಮ್ಮ ಮನೆಯ ಪರಿಸರ, ಶಾಲಾ ಕಾಲೇಜಿನ ಪರಿಸರ, ಕಚೇರಿ ಪರಿಸರ, ಕಾರ್ಖಾನೆ ಪರಿಸರದ ಗ್ರಾಮೀಣ ಪರಿಸರದ ಬಗ್ಗೆಯೂ ಮಾತನಾಡುತ್ತೇವೆ. ಆಗೊಮ್ಮೆ ಈಗೊಮ್ಮೆ ಗಣಿ ಪರಿಸರದ ಬಗ್ಗೆ, ವಾಯು ಮಾಲಿನ್ಯದ ಬಗ್ಗೆ, ಜಲಮಾಲಿನ್ಯದ ಬಗ್ಗೆ, ಪರಿಸರ ನಾಶದ ಬಗ್ಗೆ, ಕಾಡು ನಾಶದ ಬಗ್ಗೆ ಮಾತನಾಡುತ್ತೇವೆ.

ಭೂಮಿಯು ಸಾಕಷ್ಟು ವಿಶಾಲವಾಗಿರುವುದರಿಂದ ಅನೇಕಾನೇಕ ಭೌಗೋಳಿಕ ಮತ್ತು ಭೂವೈಜ್ಞಾನಿಕ ಪರಿಸರಗಳನ್ನು ಸಹ ಹೊಂದಿದೆ. ಹಿಮಾವೃತ ಪ್ರದೇಶಗಳು, ಮರಳುಗಾಡು, ಕಣಿವೆ ಪ್ರಪಾತಗಳು, ಹುಲ್ಲುಗಾವಲುಗಳು, ನದಿ ಬಯಲುಗಳು, ಪ್ರಸ್ಥಭೂಮಿ, ಪಶ್ಚಿಮ/ಪೂರ್ವ ಘಟ್ಟಗಳು, ಸಮುದ್ರ ತೀರಗಳು, ಒಳನಾಡು ಬಯಲು ಪ್ರದೇಶ, ಹಿನ್ನೀರ ತಾಣಗಳು, ಸುಂದರ ಬನ್ಸ್‌ಜಾಗು ಪ್ರದೇಶ, ಚಿಲ್ಕ, ಪುಲಿಕಾಟ್‌ನಂತಹ ಸರೋವರಗಳು, ಲಡಕ್ ಶೀತ ಮರುಭೂಮಿ, ಸದಾ ಹಸರಿನ ದಟ್ಟಡವಿಗಳು, ಗುಹೆಗಳು, ಜಲಪಾತಗಳು ಇತ್ಯಾದಿ ಸುಂದರ ಪರಿಸರಗಳಿವೆ. ಇವುಗಳಲ್ಲಿ ಗಮನಾರ್ಹವಾದ ಬದಲಾವಣೆಗಳು ಕಂಡುಬಂದಾಗ ನಾವು ಪರಿಸರ ಬದಲಾವಣೆ ಎನ್ನುತ್ತೇವೆ. ಇದಕ್ಕೆ

ಹವಾಮಾನ ಬದಲಾವಣೆಯೇ ಕಾರಣವಾದುದರಿಂದ ಹವಾಮಾನ ಬದಲಾವಣೆಯ ಬಗ್ಗೆ ನಾವು ಮಾತನಾಡುತ್ತೇನೆ. ಈ ರೀತಿಯ ಹವಾಮಾನ ಬದಲಾವಣೆ ಇತ್ತೀಚಿನ ದಿನಗಳಲ್ಲಿ ಅಂದರೆ ಕಳೆದ ೩-೪ ವರ್ಷಗಳಿಂದ ಹೆಚ್ಚಾಗುತ್ತ ಬಂದಿದೆ.

ಈ ರೀತಿಯ ಬದಲಾವಣೆ ಸ್ಥಾನಿಕ, ಪ್ರಾಂತೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಂಡುಬಂದಾಗ ಅದಕ್ಕೆ ಪೂರಕವಾಗಿ ಅಲ್ಲಿಯವರು ಅದಕ್ಕೆ ತಕ್ಕ ಹಾಗೆ, ಅವರಿಗೆ ತೋಚಿದ ಹಾಗೆ ಕಾರಣಗಳನ್ನು ನೀಡುತ್ತಾರೆ. ಉದಾಹರಣೆಗೆ: ಅರಣ್ಯನಾಶ, ಅಂತರ್ಜಲದ ದುರ್ಬಳಕೆ, ಪ್ಲಾಸ್ಟಿಕ್ ಬಳಕೆ, ಗಣಿಗಾರಿಕೆ, ವಾಹನಗಳ ಹೆಚ್ಚಳದಿಂದಾದ ಇಂಗಾಲದ ದ್ವಿಆಕ್ಸೈಡ್ ಹೆಚ್ಚಳದಿಂದಾದ ವಾಯು ಮಾಲಿನ್ಯ, ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲಿನ ದಹನದಿಂದ ಬಿಡುಗಡೆಯಾದ ಇಂಗಾಲದ ದ್ವಿಆಡ್‌ನ ಪರಿಣಾಮ ಇತ್ಯಾದಿ. ಇತ್ತೀಚಿನ ದಿನಗಳಲ್ಲಿ ಈ ಕಡೆಯ ಅಂಶದ ಬಗ್ಗೆ ಹೆಚ್ಚೆಚ್ಚು ಚರ್ಚೆಗಳಾಗುತ್ತವೆ. ಕಳೆದ ಹತ್ತಿಪ್ಪತ್ತು, ವರ್ಷಗಳಿಂದ ನಾಗರೀಕರಣ ಹೆಚ್ಚಾಗಿ, ವಾಹನ ಪ್ರದೂಷಣೆ ಹೆಚ್ಚಾಗಿರುವುದನ್ನು ಗಮನಿಸಿದ ಹವಾಮಾನ ಪಂಡಿತರು ಅದರಲ್ಲಿಯೂ ವಿಶೇಷವಾಗಿ ಅಮೆರಿಕದ ಉಪಾಧ್ಯಕ್ಷರಾಗಿದ್ದ ದಿ| ಅಲ್‌ಗೋರೆ ಮತ್ತು ಭಾರತದ ವಿಜ್ಞಾನಿ ದಿ| ಆರ್.ಕೆ. ಪಚೋರಿಯವರು ಬದಲಾಗುತ್ತಿರುವ ಹವಾಮಾನಕ್ಕೆ ಕಾರಣ ಹಸಿರು ಮನೆ ಪರಿಣಾಮ ಎಂದು ಪ್ರಚಾರ ಮಾಡಿ, ಸಂಯುಕ್ತ ರಾಷ್ಟ್ರ ಸಂಸ್ಥೆಯ ಸಮಿತಿಯೊಂದನ್ನು ರಚಿಸಿ ಕಳೆದ ಒಂದು ಶತಮಾನದ ಹವಾಮಾನ ಸಂಬಂಧಿತ ದತ್ತಾಂಶಗಳನ್ನು ಗಣಕಯಂತ್ರದಲ್ಲಿ ವಿಶ್ಲೇಷಿಸಿ ಮುಂದಿನ ಒಂದು ಶತಮಾನದಲ್ಲಿ ಆಗಬಹುದಾದ ಜಾಗತಿಕ ಹವಾಮಾನ ಬದಲಾವಣೆಗಳ ಬಗ್ಗೆ ಪ್ರಚಾರ ಮಾಡಿ ಆತಂಕವನ್ನುಂಟು ಮಾಡಿದರು. ಸಮುದ್ರಮಟ್ಟ ಏರುವಿಕೆ, ಮಂಜುಗಡ್ಡೆ ಕರಗುವಿಕೆ, ಜಾಗತಿಕ ಉಷ್ಣತೆ ಏರುವಿಕೆಗಳ ಬಗ್ಗೆ ಭಯ ಹುಟ್ಟಿಸುವಂತಹ ಅಂಶಗಳನ್ನು ಪ್ರಚಾರ ಮಾಡಿದರು. ಈ ಸಿದ್ಧಾಂತವನ್ನು ನಾಲ್ಕು ಬೃಹದ್ಗಂಥಗಳನ್ನಾಗಿ ಪ್ರಕಟಿಸಿದರು. ಈ ಕಾರ್ಯಕ್ಕಾಗಿ ಅವರಿಗೆ ನೋಬೆಲ್ ಪ್ರಶಸ್ತಿಯೂ ಲಭಿಸಿತು.

ತದನಂತರದಲ್ಲಿ ಅನೇಕ ಪರಿಸರ ವಿಜ್ಞಾನಿಗಳು ಅವರು ಮುಂದಿಟ್ಟಿದ್ದ ದತ್ತಾಂಶಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿ ಬಹುತೇಕವಾಗಿ ಉಪೇಕ್ಷೆಯಿರುವುದು ಕಂಡುಬಂದಿತ್ತು. ಗಣಕಯಂತ್ರದ ಸರಾಸರಿಯ ಮೌಲ್ಯಮಾಪನವು ನಿಜ ಪರಿಸ್ಥಿತಿಯಲ್ಲಿ ಕಂಡುಬರದೇ ಇರುವುದನ್ನು ಗಮನಿಸಿ ಈ ಸಿದ್ಧಾಂತದಲ್ಲಿ ಹುರುಳಿಲ್ಲ, ಇದು ಸುಳ್ಳು ಎಂದು ವಾದ ಮಾಡಿದರು. ಇದಕ್ಕೆ ಸಂಬಂಧಿಸಿದ ಪ್ಯಾರಿಸ್ ಶೃಂಗಸಭೆ (೨೦೦೫), ನಂತರದ ಬ್ಯಾಂಕಾಕ್ ಸಭೆ (೨೦೦೯), ಸ್ಪೇನಿನ ಮ್ಯಾಡ್ರಿಡ್ ಸಭೆ (೨೦೦೯) ಹಾಗೂ ೨೦೨೦ರ ದಾವೋಸ್‌ನ ಆರ್ಥಿಕ ಸಭೆಯಲ್ಲಿಯೂ ವಿಸ್ತ್ರತವಾಗಿ ಚರ್ಚೆಯಾಯಿತು. ಅಮೆರಿಕಾದ ಅಧ್ಯಕ್ಷರಾದ ಡೊನಾಲ್ಡ್ ಟ್ರಂಪ್‌ರವರು ಇದಕ್ಕೆ ಪೂರಕವಾಗಿ ನೀಡುತ್ತಿದ್ದ ಯಥಾಪ್ರಕಾರದ ಕೋಟ್ಯಾಂತರ ಡಾಲರ್‌ಗಳ ಅನುದಾನವನ್ನು ನಿಲ್ಲಿಸಿದರು. ಅವರು ಹೇಳಿದ ಹಾಗೆ ಹವಾಮಾನ

ಸಂಬಂಧಿತ ಸಂಶೋಧನೆಗಳಿಂದ ಯಾವುದೇ ಪ್ರಯೋಜನವಿಲ್ಲ. ಇವೆಲ್ಲವೂ ಭಾಗಶಃ ಸಂಶೋಧನೆಗಳು, ಸಂಶೋಧನೆಯನ್ನು ಮಾಡಲಿ ಬಿಡಲಿ, ಹವಾಮಾನ



ಬದಲಾವಣೆ ತನ್ನ ಪಾಡಿಗೆ ತಾನು ಕಾಲದಿಂದ ಕಾಲಕ್ಕೆ ಜರುಗುತ್ತಿರುತ್ತದೆ. ಅದಕ್ಕೆ ತಕ್ಕ ಹಾಗೆ ನಾವು ಬದಲಾಗಬೇಕು. “ನನ್ನ ಉದ್ದೇಶ ನನ್ನ ದೇಶಕ್ಕೆ ಕೋಟ್ಯಾಂತರ ಡಾಲರ್‌ಗಳನ್ನು ಉಳಿಸುವುದಲ್ಲ. ಆದರೆ, ಈ ಸಿದ್ಧಾಂತವು ಹಸಿ ಸುಳ್ಳು” ಎಂದರು. ಇಷ್ಟು ಆತ್ಮವಿಶ್ವಾಸದಿಂದ, ದೃಢತೆಯಿಂದ ಅವರು ಹೇಳಲು ಕಾರಣ ಏನಿರಬಹುದು ಎಂದು ಯೋಚಿಸಿದಾಗ ಕಂಡು ಬರುವ ಅಂಶವೇನೆಂದರೆ, ಟ್ರಂಪ್ ಅವರ ಪೂರ್ವಜರು ಕ್ರಿಶ. ೧೮೧೫ರಲ್ಲಿ ಮೂರು ಲಕ್ಷ ಜರ್ಮನ್‌ರೊಂದಿಗೆ ಜರ್ಮನಿಯಿಂದ ಅಮೆರಿಕಾಕ್ಕೆ ವಲಸೆ ಬಂದಿದ್ದರು.

ಆಗ ಜರ್ಮನಿಯಲ್ಲಿ ಮತ್ತು ಯೂರೋಪ್‌ನ ಎಲ್ಲೆಡೆ ಅಗಾಧವಾದ, ಭೀಕರ ಕ್ಷಾಮ ಪರಿಸ್ಥಿತಿಯುಂಟಾಗಿತ್ತು. ೧೮೧೫ರಿಂದ ೧೮೨೧ರವರೆಗೆ ಭೀಕರ ಮಳೆ, ಪ್ರವಾಹ, ಹೊಗೆ, ಬೂದಿಯಿಂದ ಆವೃತವಾಗಿತ್ತು. ಪ್ರಪಂಚದಾದ್ಯಂತ ಕ್ಷಾಮದಿಂದಾಗಿ ಆಹಾರ ಉತ್ಪತ್ತಿ ಕುಂಠಿತವಾಗಿ ಸಾವು, ಸಾವಿನಿಂದ ದಂಗೆ, ದಂಗೆಯಿಂದ ಕ್ರಾಂತಿ, ಕ್ರಾಂತಿಯಿಂದ ಸಾಮ್ರಾಜ್ಯಗಳ ಪತನವಾಗಿತ್ತು. ೧೮೧೬ನೇ ವರ್ಷವನ್ನು ಬೇಸಿಗೆಯಿಲ್ಲದ ವರ್ಷವೆಂದು ಕರೆದಿದ್ದಾರೆ. ೧೮೧೭, ೧೮೧೮, ೧೮೧೯ನೇ ವರ್ಷಗಳನ್ನು ಭಿಕ್ಷುಕರ ವರ್ಷಗಳೆಂದು ಕರೆದಿದ್ದಾರೆ. ಗ್ರಾಮೀಣ ಪ್ರದೇಶದಿಂದ ಗುಳೆ ಹೊರಟ ಜನರು ನಗರಗಳಲ್ಲಿ ಎಲ್ಲೆಲ್ಲಿಯೂ ಆಹಾರಕ್ಕಾಗಿ ಕೈಚಾಚುತ್ತಿದ್ದರು. ೧೮೧೬ರಲ್ಲಿ ಮಧ್ಯಾಹ್ನದ ವೇಳೆ ಕತ್ತಲು ಆವರಿಸಿತ್ತು. ಜನರು ಮೋಂಬತ್ತಿಗಳನ್ನು ಉರಿಸಿ ಬದುಕಿದ್ದರು. ಉಸಿರಾಟದ ತೊಂದರೆ ಕಾಣಿಸಿ ಸಾವಿರಾರು, ಲಕ್ಷಾಂತರ ಮಂದಿ ಸಾಯುತ್ತಿದ್ದರು. ೧೮೧೬ರಲ್ಲಿ ಪ್ರಪಂಚದಾದ್ಯಂತ ಭೀಕರ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡಿದ್ದರಿಂದ ಮಿಲಿಯಾಂತರ ಜನರು ಅಸುನೀಗಿದರು. ಇದೆಲ್ಲವನ್ನು ಪ್ರಸಿದ್ಧ ಕವಿ ಲಾರ್ಡ್ ಬೈರನ್ ತನ್ನ ಪ್ರಸಿದ್ಧ ಕವನ, ೮೨ ಸಾಲುಗಳ ದುರಂತಮಯ ಪದ್ಯ “ಕಗ್ಗತ್ತಲು” (Darkness)ನಲ್ಲಿ ನೈಜವಾಗಿ ಹಿಡಿದಿಟ್ಟಿದ್ದಾನೆ. ಇದನ್ನು ಈ ಲೇಖಕರು ಕನ್ನಡಕ್ಕೆ ಅನುವಾದಿಸಿದ್ದಾರೆ. ಲಂಡನ್‌ನಲ್ಲಿ ಸತತವಾಗಿ ೧೩೦ ದಿನಗಳು ಕಾಲ ಸುರಿಯುತ್ತಿದ್ದ ಮಳೆ, ಚಳಿಯಿಂದ ತಪ್ಪಿಸಿಕೊಳ್ಳಲು ಲಾರ್ಡ್ ಬೈರನ್ ಮತ್ತು ಮೇರಿ ಶೆಲ್ಲಿ ಜಿನೀವಾದ ಸರೋವರದ ಬಳಿಯ ಎರಡು ಮನೆಗಳಲ್ಲಿ ತಂಗಿರುತ್ತಾರೆ. ಅಲ್ಲಿಯೂ ಅಂತಹುದೇ ಪರಿಸ್ಥಿತಿಯಿತ್ತು. ಸಾವಿನ ಘೋರ ಮುಖವನ್ನು ಮೇರಿ ಶೆಲ್ಲಿ ತನ್ನ ಫ್ರಾಂಕನ್‌ಸ್ಟೈನ್ ಕಾದಂಬರಿಯಲ್ಲಿ ಹಿಡಿದಿಟ್ಟಿದ್ದಾಳೆ. ಆಗ, ಮೇರಿ ಮತ್ತು ಲಂಡನ್‌ನಲ್ಲಿದ್ದ ಅವಳ ಸಹೋದರಿಯ ನಡುವಿನ ಪತ್ರವ್ಯವಹಾರದಲ್ಲಿ ಈ ಮಾಹಿತಿಯೆಲ್ಲವೂ ಸೆರೆಯಾಗಿದೆ. ಈ ಸಾಹಿತ್ಯ ರೂಪವೇ ಇಂದು ನಮಗೆ ಉಪಲಬ್ಧವಿರುವ ಅಮೂಲ್ಯವಾದ ಮಾಹಿತಿಯಾಗಿದೆ.

ಇಡೀ ಭೂಮಿಯ ಜೀವ ಸಂಕುಲವನ್ನು ನಲುಗಿಸಿದ ಅಂದಿನ ಜಾಗತಿಕ ಹವಾಮಾನ ಬದಲಾವಣೆಗೆ ೧೮೧೫ ಏಪ್ರಿಲ್ ೧೫ರಂದು ಬೃಹತ್ ಪ್ರಮಾಣದಲ್ಲಿ ಸ್ಫೋಟಿಸಿದ್ದ ಸೂಪರ್ ವೋಲ್ಕನೊ "ತಂಬೋರಾ" ಕಾರಣವಾಗಿತ್ತು. ಅದರ ಬಾಯಿಂದ ಹೊರಚಿಮ್ಮಿದ ಆವಿ, ಬೂದಿ, ಅನಿಲಗಳ ಮೋಡದ ರಾಶಿ ೯೨.೫ ಕಿಲೋ ಮೀಟರ್ ಎತ್ತರಕ್ಕೇರಿತ್ತು. ಕಳೆದ ಹತ್ತು ಸಾವಿರ ವರ್ಷಗಳಲ್ಲಿ ಆದಂತಹ ಅತಿ ದೊಡ್ಡ ಭೀಕರ ಸ್ಫೋಟ ಇದಾಗಿತ್ತು. ತಂಬೋರಾ ಜ್ವಾಲಾಮುಖಿ ಇಂಡೋನೇಷ್ಯಾದ ಸುಂಭವ ದ್ವೀಪದಲ್ಲಿದೆ.



ಅಲ್ಲಿಂದ ಮೇಲೇರಿದ ಅಗಾಧವಾದ ಬೂದಿಯ ರಾಶಿ ೯೨.೫ ಕಿ.ಮಿ. ಎತ್ತರಕ್ಕೇರಿ ನಿಧಾನವಾಗಿ ಎಲ್ಲಾ ದಿಕ್ಕುಗಳಲ್ಲಿಯೂ ಹರಡುತ್ತ ನಭದಲ್ಲೆಲ್ಲ ಹರಡಿ ಭೂಮಿಯ ಸುತ್ತ ಒಂದು ಪದರವಾಯಿತು. ಹಲವಾರು ವರ್ಷಗಳವರೆಗೆ ಇದು ಸೂರ್ಯನ ರಶ್ಮಿಯನ್ನು ಪ್ರತಿಫಲಿಸಿದ್ದರಿಂದಾಗಿ ಇದರ ಕೆಳಗೆ ಅಂದರೆ ಭೂಮಿಯ ಮೇಲೆಯಲ್ಲಿ ತಣ್ಣಗಿನ ಅನುಭವವಾಯಿತು. ಸೂರ್ಯ ರಶ್ಮಿಯಿಲ್ಲದೆ ದ್ಯುತಿ ಸಂಶ್ಲೇಷಣೆ ಕ್ರಿಯೆಯಿಲ್ಲದೆ ಆಹಾರ ಉತ್ಪತ್ತಿ ನಿಂತು ಹೋಯಿತು. ಬದುಕಿದ್ದ ಜನರು ತುರಿಕೆ' ಸೊಪ್ಪಿನಂತಹ ಒರಟು ಕುರುಚಲು ಸಸಿಗಳನ್ನು ಬೇಯಿಸಿ ಅದರ ನೀರನ್ನು ಕುಡಿದು ಜೀವ ಹಿಡಿದುಕೊಂಡಿದ್ದರು. ಎಲ್ಲೆಲ್ಲೂ ಹಾಹಾಕಾರವುಂಟಾಯಿತು. ಆರ್ಥಿಕತೆ ಕುಸಿಯಿತು. ಹಣದುಬ್ಬರ ಹೆಚ್ಚಾಯಿತು. ಇದೆಲ್ಲವನ್ನು ಬಲ್ಲ ಟ್ರಂಪ್ ಅವರು ಪ್ಯಾರಿಸ್ ಒಪ್ಪಂದದಿಂದ ಅಧಿಕೃತವಾಗಿ ಹೊರಬಂದಿದ್ದಾರೆ. ಇದನ್ನು ನಾನು 'ವೈಟ್ ಹೌಸ್ ಎಫೆಕ್ಟ್ ಆನ್ ಗ್ರೀನ್ ಹೌಸ್ ಎಫೆಕ್ಟ್' ಎಂದು ಕರೆದಿದ್ದೇನೆ. ಇತ್ತೀಚಿನ ದಿನಗಳಲ್ಲಿ ಗ್ರೆಟ್ ಟ್ಯುನ್‌ಬರ್ಗ್ ಎಂಬ ಸ್ವೀಡನ್‌ನ ೧೬ ವರ್ಷದ ಶಾಲಾಬಾಲಕಿ ಲಂಡನ್ ಹಾಗೂ ಇನ್ನಿತರ ದೇಶಗಳಲ್ಲಿ ರಸ್ತೆಗಿಳಿದು ಸಾವಿರಾರು ಯುವಕ ಯುವತಿಯರೊಂದಿಗೆ ಸರ್ಕಾರಗಳ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದಾಳೆ. ಅವಳ ಉದ್ದೇಶ ಹವಾಮಾನ ಬದಲಾವಣೆಗೆ ಸೂಕ್ತ ರೀತಿಯಲ್ಲಿ ಸ್ಪಂದಿಸಿ ಅಗತ್ಯ ಕ್ರಮಗಳನ್ನು ತೆಗೆದುಕೊಂಡು ಮಾನವ ಕುಲವನ್ನು ರಕ್ಷಿಸಿ ಎನ್ನುವುದು. ಇಂಗಾಲದ ದ್ವಿಆಕ್ಸೆಡ್ ಹೊರ ಸೂಸುವಿಕೆಯನ್ನು ಕಡಿಮೆ ಮಾಡಿ ವಿದ್ಯುತ್ ಚಾಲಿತ ವಾಹನಗಳನ್ನು ಬಳಸುವ ನೀತಿಯನ್ನು ಅನುಸರಿಸಿ ಎಂದು ಹೇಳುತ್ತಿದ್ದಾಳೆ. ಅದಕ್ಕೆ ಬೇಕಾದ ವಿದ್ಯುತ್ ಉತ್ಪಾದನೆಯ ಬಗ್ಗೆ ಅವಳು ಹೇಳುತ್ತಿಲ್ಲ. ಏಕೆಂದರೆ, ಅಣುವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲು ಹೊರಟರೆ ಇದೇ ಪರಿಸರವಾದಿಗಳು ಬ್ಯಾನರ್ ಹಿಡಿದು ಪ್ರತಿಭಟಿಸುತ್ತಾರೆ. ಹೀಗೆ, ಇದು ಒಂದು ಪ್ರತಿಭಟನೆಯ, ಚಳುವಳಿಯ ಚಟುವಟಿಕೆಯಾಗಿದೆ. ಗ್ರೇಟಾ ಟ್ಯುನ್ ಬರ್ಗ್‌ಗೆ ಭಾಷಣವನ್ನು ಬರೆದುಕೊಡುವವರಿದ್ದಾರೆ. ಪ್ರತಿಭಟನಾ ಮೆರವಣಿಗೆಯ ಖರ್ಚನ್ನು ನೀಡುವವರಿದ್ದಾರೆ. ಹೀಗೆ, ಒಂದು ಅಂತರರಾಷ್ಟ್ರೀಯ ಸ್ವಹಿತಾಸಕ್ತಿಯು ಕೆಲಸ ಮಾಡುತ್ತಿದೆ. ಇಂಗಾಲದ ತೆರಿಗೆ ಬಗ್ಗೆ ಮಾತನಾಡುವ ಇವರು ಸೌರವಿದ್ಯುತ್ ಮತ್ತು ಪವನ ವಿದ್ಯುತ್ ಘಟಕಗಳನ್ನು ಬಡರಾಷ್ಟ್ರಗಳಿಗೆ ಮಾರಿ ಅಧಿಕ ಲಾಭವನ್ನು ಪಡೆದಿದ್ದಾರೆ. ಇದು ಪರಿಸರದ ಹೆಸರಿನಲ್ಲಿ, ಹವಾಮಾನ ಬದಲಾವಣೆಯ

ಹೆಸರಿನಲ್ಲಿ ನಡೆಯುತ್ತಿರುವ ದೊಡ್ಡಮಟ್ಟದ ಮೋಸದ ಜಾಲ. ಇದನ್ನು ಮಾನವತೆಯ ಮೇಲಿನದಗಾಕೋರತನ ಎಂದು ಬಣ್ಣಿಸಲಾಗಿದೆ. ಪಚೌರಿಯವರ ಹವಾಮಾನ ಬದಲಾವಣೆಯ ಸಿದ್ಧಾಂತವನ್ನು ಶತಮಾನದ ಸುಳ್ಳು ಎಂದು ಕರೆಯಲಾಗಿದೆ.

ಹಾಗಿದ್ದಲ್ಲಿ ಸತ್ಯ ಯಾವುದು ಎಂದು ನಾವು ಚಿಂತನೆಗೆ ತೊಡಗಿದಲ್ಲಿ ನಮಗೆ ಕಂಡು ಬರುವುದೇನೆಂದರೆ ಶತಮಾನಗಳ ಹಿಂದೆ, ಸಾವಿರಾರು ವರ್ಷಗಳ ಹಿಂದೆ, ಲಕ್ಷಾಂತರ, ಕೋಟ್ಯಾಂತರ ವರ್ಷಗಳ ಹಿಂದಿನಿಂದಲೂ ಅಂದರೆ ಭೂಮಿ ಹುಟ್ಟಿದಂದಿನಿಂದಲೂ ಈ ರೀತಿಯ ಹವಾಮಾನ ಬದಲಾವಣೆಗಳು ಜರುಗುತ್ತಲೇ ಇವೆ. ಇಂದು ಕಂಡುಬರುತ್ತಿರುವ ಬದಲಾವಣೆಗಿಂತಲೂ ನೂರು ಪಟ್ಟು ಸಾವಿರ ಪಟ್ಟು ದೊಡ್ಡ ಪ್ರಮಾಣದ ಘಟನೆಗಳು ಜರುಗಿವೆ. ಡೈನೋಸಾರ್‌ಗಳ ಅವನತಿಯ ಕಾಲದಲ್ಲಿ ಅಂದರೆ ೬೫ ಕೋಟಿ ವರ್ಷಗಳು



ಹಿಂದೆ ಎಲ್ಲಾ ಜೀವ ಸಂಕುಲಗಳು ನಾಶವಾಗಿದ್ದವು. ಇದನ್ನು ಸಮೂಹ ವಿನಾಶವೆಂದು ಕರೆದಿದ್ದಾರೆ. ಭೂ ಚರಿತ್ರೆಯಲ್ಲಿ ಈ ರೀತಿಯ ಸಮೂಹ ವಿನಾಶವು ಐದು ಬಾರಿ ನಡೆದಿದೆ. ಇದೆಲ್ಲಕ್ಕೂ ಶಿಲಾಪದರಗಳಲ್ಲಿ, ಪಳೆಯುಳಿಕೆಗಳಲ್ಲಿ ಪುರಾವೆಗಳಿವೆ. ಅಂತಹ ಸಮಯಗಳಲ್ಲಿ ವಿಶ್ವದ ನಾನಾ ಭಾಗಗಳಲ್ಲಿ ಸಾವಿರಾರು ಜ್ವಾಲಾಮುಖಿಗಳು ಏಕಕಾಲಕ್ಕೆ ಸ್ಫೋಟಿಸಿದ ಪರಿಣಾಮವಾಗಿ ದೊಡ್ಡಮಟ್ಟದ ಹವಾಮಾನ ಬದಲಾವಣೆಯುಂಟಾಗಿತ್ತು.

ಕಳೆದ ಒಂದೆರಡು ಶತಮಾನಗಳ ಉದಾಹರಣೆಗಳನ್ನು ತೆಗೆದುಕೊಳ್ಳುವುದಾದರೆ, ೧೭೮೩ರಲ್ಲಿ ಸ್ಫೋಟಿಸಿದ 'ಲಾಕಿ' ಜ್ವಾಲಾಮುಖಿಯಿಂದಾಗಿ (ಐಸ್‌ಲ್ಯಾಂಡ್‌ನಲ್ಲಿದೆ) ಏಷ್ಯಾ ಯೂರೋಪ್‌ಗಳಲ್ಲಿ ಮಿಲಿಯಂತರ ಜನರು ಸತ್ತಿದ್ದರು. ಅದರ ಬೂದಿಯು ಸೂರ್ಯಾಸ್ತ ಸಮಯದಲ್ಲಿ ನೇರಳೆ ಬಣ್ಣಕ್ಕೆ ಕಾರಣವಾಗಿತ್ತು. ಈ ವಿಚಿತ್ರ ದೃಶ್ಯಗಳನ್ನು ಅಂದಿನ ಪ್ರಸಿದ್ಧ ಕಲಾಕಾರರು ತಮ್ಮ ಚಿತ್ರಗಳಲ್ಲಿ ಸೆರೆಹಿಡಿದಿದ್ದಾರೆ. ೧೮೮೩ರಲ್ಲಿ ಸ್ಫೋಟವಾದ ಕ್ರಾಕಟೋವ (ಸುಂಡ ಸ್ಟೈಟ್‌ನಲ್ಲಿದೆ, ಇಂಡೋನೇಷ್ಯಾ) ಜ್ವಾಲಾಮುಖಿಯು ೪೫ ಕಿಲೋಮೀಟರ್‌ಗಳ ಎತ್ತರಕ್ಕೇರಿತ್ತು. ಆಗ ಸೃಷ್ಟಿಯಾದ ಸುನಾಮಿಯಿಂದಾಗಿ ೩೦,೦೦೦ ಜನರು ಸತ್ತಿದ್ದರು. ಅಲೆಯು ಮದರಾಸಿನವರೆಗೂ ತಲುಪಿತ್ತು. ೧೯೦೫ರ ಕೊಲಂಬಿಯಾದ ನೆವದೋಸ್ ದ ರುಯಿಸ್ ಎಂಬ ಜ್ವಾಲಾಮುಖಿಯು ಅಧಿಕ ಗಂಧಕದ ದ್ವಿಆಕ್ಸೈಡ್‌ನ್ನು ಬಿಡುಗಡೆ- ಮಾಡಿದ್ದರಿಂದಾಗಿ ಅದರ ಕಣಗಳು ವಾಯುಮಂಡಲದಲ್ಲಿ ಚದುರಿಹೋಗಿ ಎರಡು ವರ್ಷಗಳವರೆಗೆ ಶೀತಲ ವಾತಾವರಣವನ್ನುಂಟು ಮಾಡಿತ್ತು. ೨೦೦೯ರಲ್ಲಿ ಸುಮಾತ್ರಾದ ಸಿನಾಬುಂಗ್ ಜ್ವಾಲಾಮುಖಿ ಸ್ಫೋಟಿಸಿದ್ದರ ಜೊತೆಯಲ್ಲಿ ಹೊರಬಂದ ಅಗಾಧವಾದ ಆವಿಯು ರಾಯಚೂರು ಪ್ರಾಂತ್ಯದಲ್ಲಿ ಪ್ರವಾಹವನ್ನುಂಟು ಮಾಡಿತ್ತು. ಆಗ ಮಂತ್ರಾಲಯ ಮುಳುಗಿತ್ತು. ೨೦೧೦ರಲ್ಲಿ ಸ್ಫೋಟವಾದ ಐಸ್‌ಲೆಂಡ್‌ನ ಹೆಗ್ಡೆ ಎನ್ನುವ ಜ್ವಾಲಾ ಮುಖಿಯಿಂದ

ಎತ್ತರಕ್ಕೆ ಬೆಳೆದು ಸಮುದ್ರದ ನೀರಿನ ಮೇಲೆ ಹೊರಹೊಮ್ಮಿದಾಗ ಅವುಗಳನ್ನು ನಾವು ದ್ವೀಪಗಳೆಂದು ಕರೆಯುತ್ತೇವೆ. ಇಂಥಹ ದ್ವೀಪಾವಳಿಗಳು ಪ್ರಪಂಚದ ಸುತ್ತಲೂ ಇವೆ. ಇವುಗಳನ್ನು ಜ್ವಾಲಾಮುಖಿಯ ಆರ್ಕ್ ಅಥವಾ ಆರ್ಚಿಪೆಲಾಗೋ ಎನ್ನುತ್ತಾರೆ. ಇತ್ತೀಚೆಗೆ ಮೂರು ದ್ವೀಪಗಳು ಬೆಳಕನ್ನು ಕಂಡಿವೆ. ಉದಾ: (೧) ಸರ್ಟೆ ದ್ವೀಪ, ಐರ್ಯಲ್ಯಾಂಡಿನ ಪಕ್ಕದಲ್ಲಿ (೨) ಕರಾಚಿ ನಗರದ ದಕ್ಷಿಣದ ಸಮುದ್ರ ಭಾಗದಲ್ಲಿ, ಹೊರಹೊಮ್ಮದೆ, ನೀರಿನ ಒಳಗೇ ಉಳಿಯುವ ಜ್ವಾಲಾಮುಖಿ ದ್ವೀಪಗಳು ಸ್ಫೋಟಿಸಿದಾಗ ಹೊರಬಂದು ಹರಿಯುವ ಲಾವಾರಸದ ಉಷ್ಣತೆಯು ೧೦೦೦ ಡಿಗ್ರಿ ಸೆಲ್ಸಿಯಸ್ ಇದ್ದು, ಇಷ್ಟು ಅಗಾಧ ಶಾಖವು ನೀರು ಬಿಸಿ ಮಾಡುತ್ತದೆ. ಅದರಿಂದ ಆವಿಯು ಉತ್ಪತ್ತಿಯಾಗಿ ಆ ಪ್ರದೇಶದ ಮೇಲಿನ ಆಗಸಕ್ಕೆ ಚಿಮ್ಮುತ್ತದೆ. ಈ ಆವಿ ಮೋಡಕಟ್ಟಿ ಚಲಿಸುತ್ತದೆ. ವೇಗವಾಗಿ ಚಲಿಸುವ ಮೋಡ ರಾಶಿಗಳು ಚಂಡಮಾರುತಗಳಾಗುತ್ತವೆ. ಇದನ್ನು ಹವಾಮಾನ ವಿಜ್ಞಾನಿಗಳು ಎಲ್‌ನೋ ಎಂದು ಕರೆದಿದ್ದಾರೆ. ಸಮುದ್ರದ ಮೇಲಿನ ಶಾಖವು ೨೪ರಿಂದ ೨೬ ಡಿಗ್ರಿಗೆ ಹೆಚ್ಚಾದಾಗ ಎಲ್‌ನೋ ಎನ್ನುತ್ತಾರೆ. ಇದು ಸೌರಶಕ್ತಿಯಿಂದ ಆದ ಏರಿಕೆ ಎಂದು ಹೇಳುತ್ತಾರೆ. ಆದರೆ, ನೀರಿನೊಳಗಡೆ ಇರುವ ಸಾವಿರಾರು ಬರ್ನ್ೕರಗಳ ಬಗ್ಗೆ ಅವರು ಗಮನ ಹರಿಸುವುದಿಲ್ಲ. ಇದು ಯಾರ ಗಮನಕ್ಕೂ ಬರುವುದಿಲ್ಲ. ಏಕೆಂದರೆ, ಆ ಆಳದಲ್ಲಿ ಯಾವ ವೀಕ್ಷಣಾಲಯಗಳೂ ಇಲ್ಲ. ಯಾವ ವರದಿಗಳೂ ಬರುವುದಿಲ್ಲ. ಆದರೆ, ಸಮುದ್ರ ತಳದಲ್ಲಿ ಉಂಟಾದ ಭೂಕಂಪನಗಳ ಮಾಪನದ ವರದಿಗಳು

ಸಿಗುತ್ತವೆ. ಅವುಗಳನ್ನು ಅರ್ಥೈಸಿಕೊಳ್ಳುವುದರಿಂದ ಹೊರಹರಿದು ಬಂದ ಲಾವಾರಸದ ಪ್ರಮಾಣವನ್ನು ಲೆಕ್ಕಹಾಕಿ, ಅದರಿಂದಾದ ನೀರಿನ ಉಷ್ಣತೆಯಲ್ಲಿನ ಏರಿಕೆಯನ್ನು ಗ್ರಹಿಸಬಹುದು. ತದನಂತರದಲ್ಲಿ ಉಂಟಾಗಬಹುದಾದ ಆವಿಯ ಪ್ರಮಾಣ, ಮೋಡ ಕಟ್ಟುವಿಕೆ, ಚಲನೆ, ಚಂಡಮಾರುತಗಳ ಸಾಧ್ಯಸಾಧ್ಯತೆಗಳನ್ನು ಅರಿಯಬಹುದು.

ಈ ರೀತಿಯ ಚಂಡಮಾರುತಗಳು ಪೆಸಿಫಿಕ್ ಸುತ್ತಲಿನ ಜ್ವಾಲಾಮುಖಿಯ ಪರಿಸರದಿಂದಾಗಿ ಶಾಂತಸಾಗರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುತ್ತವೆ. ಈ ಪರಿಸರವನ್ನು 'ರಿಂಗ್ ಆಫ್ ಫೈರ್'' ಎನ್ನುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ 'ಎಲ್ ನಿನೋ' ಇಲ್ಲಿಯೇ ಕಾಣಿಸಿಕೊಳ್ಳುವುದು. ಇತ್ತೀಚಿನ ವರ್ಷಗಳಲ್ಲಿ ಸ್ವಲ್ಪ ಮಟ್ಟಿಗೆ' ಎಲ್‌ನೋ ಸದರ್ನ್ ಆಸಿಲೇಷನ್' ಎಂದು ಕರೆಯಲ್ಪಡುವ ಚಂಡಮಾರುತಗಳು ಹಿಂದೂ ಮಹಾಸಾಗರ ಮತ್ತು ಅರಬ್ಬಿ ಸಮುದ್ರಗಳಲ್ಲಿಯೂ ಕಾಣಿಸಿಕೊಳ್ಳುತ್ತಿವೆ. ಏಕೆಂದರೆ ಇವುಗಳ ಸಮುದ್ರ ತಳದಲ್ಲಿಯೂ ಲಾವಾರಸ ಹರಿದು ಬಂದಿರುವ ಸೂಚನೆಗಳು ದೊರೆಯುತ್ತವೆ. ಈ ರೀತಿ ಲಾವಾರಸ ಹರಿದು ಬಂದು ಅದರ ಸುತ್ತಲಿನ ನೀರಿನ ರಾಸಾಯನಿಕ ಸಂಯೋಜನೆಯನ್ನು ಬದಲಿಸಿದ ಅಲ್ಲಿದ್ದ ಲಕ್ಷಾಂತರ ಜಲಜೀವಿಗಳು ಸತ್ತು ಸಮುದ್ರ ದಡಕ್ಕೆ ತೇಲಿ ಬರುತ್ತವೆ. ಇದು ಪರೋಕ್ಷವಾಗಿ ಲಾವಾ ಚಟುವಟಿಕೆಯನ್ನು ಸೂಚಿಸುತ್ತದೆ.

ಕಳೆದ ಎರಡು ವರ್ಷಗಳು ಅಂದರೆ ೨೦೧೮ ಮತ್ತು ೨೦೧೯ರ ಮುಂಗಾರಿನ ತಿಂಗಳುಗಳು ಅಸ್ವಾಭಾವಿಕ ಎನ್ನಬಹುದಾದಷ್ಟು ಅತಿ ತೀವ್ರವಾದ ಪ್ರವಾಹವನ್ನು ಕಂಡವು. ಶತಮಾನದ ಹಿಂದೆ ೧೯೨೪ರಲ್ಲಿ ಜರುಗಿದ ಜಲಪ್ರಳಯವನ್ನು ನೆನಪಿಸುವಷ್ಟರ ಮಟ್ಟಿಗೆ



ಪ್ರಳಯವುಂಟಾಗಿ ಕರ್ನಾಟಕದ ಪಶ್ಚಿಮಘಟ್ಟಗಳ ಜಿಲ್ಲೆಗಳಲ್ಲಿ ಮತ್ತು ಕೇರಳದಲ್ಲಿ ಅಪಾರ ಹಾನಿಯುಂಟು ಮಾಡಿತು. ೨೦೧೯ರಲ್ಲಿ ಭಾರತದ ಬಹುತೇಕ ರಾಜ್ಯಗಳಲ್ಲಿ ಪ್ರವಾಹವುಕ್ಕಿ ಅಪಾರ ನಷ್ಟವುಂಟಾಯಿತು. ಕೃಷಿ ಉತ್ಪಾದನೆ ಕುಂಠಿತವಾಗಿ ಆರ್ಥಿಕತೆ ಕುಸಿದಿದೆ. ರೈತರ ಸಾಲ ಮನ್ನಾ, ನೆರೆ ಪರಿಹಾರ, ಚಂಡಮಾರುತಗಳಿಂದಾದ ನಷ್ಟ, ಭೂಕುಸಿತಗಳಿಂದಾದ ಹಾನಿಯನ್ನು ಸರಿಪಡಿಸುವುದಕ್ಕಾಗಿನ ಖರ್ಚು ಇವೆಲ್ಲವುಗಳಿಂದ ಇಡೀ ದೇಶದ ಆರ್ಥಿಕತೆಯು ಕುಸಿದಿದೆ.

ಕಳೆದ ಎರಡು ವರ್ಷಗಳಲ್ಲಿ ಅಪರೂಪವೆಂಬಂತೆ ಅಥವಾ ಕಾಕ ತಾಳೀಯವೆಂಬಂತೆ ಹವಾಯಿ ದ್ವೀಪದ ಕಿಲೋವಾ ಜ್ವಾಲಾಮುಖಿಯು ೨೯ ಅಗಾಧವಾದ ಬಿರುಕುಗಳ ಮೂಲಕ ನಾಲ್ಕೈದು ತಿಂಗಳುಗಳವರೆಗೆ ಅಪಾರ ಪ್ರಮಾಣದ ಲಾವಾರಸವನ್ನು ಹೊರಚಿಮ್ಮಿತ್ತು. ಲಾವಾರಸ ೨೦೦ರಿಂದ ೩೦೦ ಮೀಟರ್‌ವರೆಗೆ ಚಿಮ್ಮಿ ಕೆಂಪು

ಚಿಲುಮೆಯಂತೆ ಕಂಡು ಬಂದಿತು. ೩ ಕಿಲೋ ಮೀಟರ್‌ವರೆಗೆ ನದಿಯಂತೆ ಹರಿದು ಸಮುದ್ರಕ್ಕೆ ಬಿದ್ದಾಗ ಅಪಾರ ಪ್ರಮಾಣದ ನೀರು ಆವಿಯಾಗಿ ಮೋಡಗಟ್ಟಿ ಪಶ್ಚಿಮಕ್ಕೆ ಚಲಿಸಿ ಪಶ್ಚಿಮಘಟ್ಟಗಳಲ್ಲಿ ಅಧಿಕ ಕುಂಭದ್ರೋಣ ಮಳೆ ಸುರಿಸಿ ಪ್ರವಾಹವನ್ನುಂಟುಮಾಡಿತು. ೧೯೨೪ರಲ್ಲಿಯೂ ಇದೇ ರೀತಿಯಲ್ಲಿ ಕಿಲೋವಾ VE14 ರ ಸ್ತರದಲ್ಲಿ ಸ್ಫೋಟವಾಗಿತ್ತು. (ವೋಲ್ಯಾನಿಕ್ ಎಕ್ಸ್‌ಪ್ಲೋಸಿವಿಟಿ ಇಂಡೆಕ್ಸ್). ಇದೇ ಸಮಯದಲ್ಲಿ ಮಾರಿಷಸ್ ಬಳಿಯ ಫೋರೇಸಾ ಎಂಬ ದೈತ್ಯ ಜ್ವಾಲಾಮುಖಿಯೂ ಸಹ ಅದೇ ಸ್ತರದಲ್ಲಿ ಸ್ಫೋಟವಾಗಿ ಅಪಾರ ಪ್ರಮಾಣದ ಲಾವಾರಸ ಸಮುದ್ರಕ್ಕೆ ಬಿದ್ದು ಆವಿಯಾಗಿ ಮೋಡವಾಗಿ ಅರಬ್ಬಿ ಸಮುದ್ರದಲ್ಲಿ ಆರು ಚಂಡ ಮಾರುತಗಳನ್ನು ಸೃಷ್ಟಿಸಿತು (೨೦೧೯), ಭೌಗೋಳಿಕವಾಗಿ ಈ ಎರಡೂ ಪ್ರದೇಶಗಳು ಸಾವಿರಾರು ಕಿಲೋಮೀಟರ್ ದೂರದಲ್ಲಿದ್ದರೂ ವಾಯು ಮಂಡಲವು ಒಂದೇ ಆಗಿದೆ. ಅದರಲ್ಲಿ ಯಾವುದೇ LOC (ಎಲ್‌ಓಸಿ) ಅಥವಾ ಚೆಕ್ ಪೋಸ್ಟ್ ಇಲ್ಲ. ಒಂದು ಸಾಗರದಿಂದ ಇನ್ನೊಂದು ಸಾಗರಕ್ಕೆ ಸಲೀಸಾಗಿ ಚಲಿಸುತ್ತವೆ.

ಈ ರೀತಿಯ ಪ್ರವಾಹ ಪರಿಸ್ಥಿತಿಯ ಸಾಧ್ಯತೆಯನ್ನು ಕೊಡಗಿನ ಮಟ್ಟಿಗೆ ಅಂದರೆ ಆಗಸ್ಟ್ ೨೦೧೯ರ ಪ್ರವಾಹದ ಮುನ್ಸೂಚನೆಯನ್ನು ಏಪ್ರಿಲ್ ೨೦೧೯ರಲ್ಲಿಯೇ ಈ ಲೇಖಕರು ಭೂವೈಜ್ಞಾನಿಕ ಮಾಹಿತಿಯ ಆಧಾರದ ಮೇಲೆ ನಿಖರವಾಗಿ ಹೇಳಿದ್ದರು. ಅದರಂತೆಯೇ ಆಗಸ್ಟ್ ೨೦೧೯ರಲ್ಲಿ ಕೊಡಗು, ಚಿಕ್ಕಮಗಳೂರು, ಉಡುಪಿ ಜಿಲ್ಲೆಗಳಲ್ಲಿ ಪ್ರವಾಹವುಂಟಾಗಿ ಅಧಿಕ ನಷ್ಟವುಂಟಾಯಿತು. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹಿಂದೆಂದೂ ಕಂಡರಿಯದ ರೀತಿಯ ಮೂರು ಪ್ರವಾಹಗಳು ಜರುಗಿ ಸಾವಿರಾರು ಜನರು ಬೀದಿ ಪಾಲಾದರು. ನಾವು ಸಾಮಾಜಿಕ ಪರಿಸರ ಎಂದು ಕರೆಯುವ ನೂರಾರು ಹಳ್ಳಿಗಳ ಸಂಪೂರ್ಣ ಪರಿಸರವೇ ಬದಲಾಗಿ ಹೋಯಿತು.

ಇದೇ ರೀತಿಯಾಗಿ ಫಿಲಿಪೈನ್ಸ್ ದೇಶದ ತಾಲ್ ಎಂಬ ದೈತ್ಯ ಜ್ವಾಲಾಮುಖಿ ಜನವರಿ ೧೨, ೨೦೨೦ ರಂದು ೫೫೦೦೦ ಅಡಿಗಳವರೆಗೆ ಸ್ಫೋಟಿಸಿದ ಪರಿಣಾಮವಾಗಿ ಹೊರಹೊಮ್ಮಿದ ಕಪ್ಪು ಬೂದಿ ಸುತ್ತಮುತ್ತಲಿನ ಬತಂಗಾಸ ಪ್ರಾಂತ್ಯದಲ್ಲಿನ ಗಿಡಮರ, ಮನೆಗಳು, ರಸ್ತೆ, ಸರೋವರ ಎಲ್ಲಾ ಕಡೆಯಲ್ಲಿ ಒಂದರಿಂದ ಎರಡು ಅಡಿಗಳಷ್ಟು

ಶೇಖರಣೆಯಾದ ಪರಿಣಾಮವಾಗಿ ಅಲ್ಲೋಲ ಕಲ್ಲೋಲವಾಯಿತು. ದಿನಕ್ಕೆ ೫೫೦೦ ಟನ್‌ಗಳಷ್ಟು ಗಂಧಕದ ದ್ವಿಆಡ್ ಹೊರಹೊಮ್ಮಿದ ಪರಿಣಾಮವಾಗಿ ಗಂಟಲು ಉರಿ ಶುರುವಾಗಿ ಉಸಿರಾಟಕ್ಕೆ ತೊಂದರೆಯಾಯಿತು. ನೂರಾರು ಹಳ್ಳಿಗಳಲ್ಲಿ ೨ ಲಕ್ಷ ಜನರನ್ನು ೧೦ ಕಿ.ಮೀ. ದೂರದ ನಗರದಲ್ಲಿನ ಶಿಬಿರಗಳಿಗೆ ಸ್ಥಳಾಂತರಿಸಲಾಯಿತು. ಯಾವ ಸಾವು ನೋವು ಸಂಭವಿಸಲಿಲ್ಲ.

ಇದಕ್ಕೆ ಮುಂಚೆ ಡಿಸೆಂಬರ್ ೨೮, ೨೦೧೯ರಂದು ನ್ಯೂಜಿಲ್ಯಾಂಡಿನ ಪೂರ್ವದಲ್ಲಿರುವ ವೈಟ್ ದ್ವೀಪದ ಜ್ವಾಲಾಮುಖಿಯು ಸ್ಫೋಟಿಸಿದ್ದರಿಂದ ಆ ಸಮಯದಲ್ಲಿ ಅಲ್ಲಿದ್ದ ೨೭ ಯಾತ್ರಿಕರು ಸತ್ತು ಹೋದರು. ಅವರಲ್ಲಿ ಇಬ್ಬರು ಬೆಂಗಳೂರಿನ ದಂಪತಿಯಾಗಿದ್ದರು. ಬಿಳಿಕಲ್ಲಿನಿಂದ (ರಯೋಲೈಟ್) ಮಾಡಲ್ಪಟ್ಟ ಆ ದ್ವೀಪವು ನಯನ ಮನೋಹರವಾದ ಅದರ ಮೇಯಲ್ಲಿನ ಹಳದಿ ಗಂಧಕದ ಪದರವನ್ನು ನೋಡುವುದು ಇನ್ನೂ ಸುಂದರ. ಕುದಿಯುವ ನೀರು, ಮೇಲೆ ಚಿಮ್ಮುವ ಬಿಸಿನೀರ ಬುಗ್ಗೆಗಳು, ಕೆಸರಿನ ಕುಂಟೆಗಳು ಇತ್ಯಾದಿಗಳನ್ನು ನೋಡಲು ಸಾವಿರಾರು ಯಾತ್ರಿಕರು ಹೋಗುತ್ತಾರೆ.

ಅದೇ ರೀತಿಯಾಗಿ ತಾಲ್ ಜ್ವಾಲಾಮುಖಿಯಲ್ಲಿನ ಸರೋವರದೊಳಗಿನ ಸರೋವರದಲ್ಲಿನ ಬಿಸಿನೀರಿನಲ್ಲಿ ಈಜಾಡುವ ರೋಚಕ ಅನುಭವಕ್ಕಾಗಿ ಸಾವಿರಾರು ಯಾತ್ರಿಕರು ಹೋಗುತ್ತಾರೆ. ೨೦ ಕಿ.ಮೀ. ವ್ಯಾಸದ ಹಸಿರು ಸರೋವರವೇ ಒಂದು ಬೃಹತ್ ಜ್ವಾಲಾಮುಖಿಯ ಬಾಯಿ (ಕ್ರೇಟರ್), ಅದರ ಮಧ್ಯದಲ್ಲಿ ಒಂದು ಜ್ವಾಲಾಮುಖಿ ೩೩೧ ಮೀ. ಎತ್ತರಕ್ಕೆ ಬೆಳೆದಿದೆ. ಅದರ ಮಧ್ಯದಲ್ಲಿ ೧ ಕಿ.ಮೀ. ವ್ಯಾಸದ ಹಸಿರು ಬಣ್ಣದ ಬಿಸಿ ನೀರಿದೆ. ಹೊರಗಿನ ಸರೋವರದಲ್ಲಿ ಈಜಿ ಮಧ್ಯದ ಬೆಟ್ಟವನ್ನು ಹತ್ತಿ ಶೃಂಗದಲ್ಲಿರುವ ಸರೋವರದಲ್ಲಿ ಈಜುವುದೇ ಒಂದು ಅನಿರ್ವಚನೀಯ ಅನುಭವ.

ಜನವರಿ ೧೨, ೨೦೨೦ರ ನಂತರ ಇದು ಈಗ ಸ್ತಬ್ಧವಾಗಿದೆ. ಆ ದಿನ ನಾನು ಪಬ್ಲಿಕ್ ಟಿ.ವಿಗೆ ನೀಡಿದ ಸಂದರ್ಶನವೊಂದರಲ್ಲಿ ಹೇಳಿದ ಪ್ರಕಾರ "ಹೊರ ಬಂದ ಅಗಾಧ ಪ್ರಮಾಣದ, ಅಪರೂಪದ ಗಂಧಕದ ದ್ವಿಆಡ್‌ನಿಂದಾಗಿ ಹೊಸ ವೈರಾಣುಗಳ ಉತ್ಪತ್ತಿಯಾಗುತ್ತದೆ. ಹೊಸ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಳ್ಳುತ್ತವೆ." ಇದಕ್ಕೆ ಪೂರಕವಾಗಿ ಹೊರಹೊಮ್ಮಿದ ಬೂದಿ, ಅನಿಲ, ಆವಿಗಳ ಮೋಡದ ರಾಶಿಯಲ್ಲಿ ನೂರಾರು ನೇರಳೆ ಬಣ್ಣದ ಮಿಂಚುಗಳು ಕಾಣಿಸಿಕೊಂಡವು. ಈ ಅಧಿಕ ವಿದ್ಯುತ್ ಶಕ್ತಿಯಿರುವ ಪರಿಸರದಲ್ಲಿ ಸೂಕ್ಷ್ಮ ಜೀವಿಗಳ ಉಗಮವಾಗುವುದರ ಬಗ್ಗೆ ಪ್ರಾಚ್ಯಜೀವ ಶಾಸ್ತ್ರದಲ್ಲಿ ಉಲ್ಲೇಖವಿದೆ. ಹೀಗೆ ಇಲ್ಲಿ ಉತ್ಪತ್ತಿಯಾದ ವೈರಾಣುಗಳು ಮತ್ತು ಗಂಧಕದ ದ್ವಿಆಡ್‌ವುಳ್ಳ ಮೋಡವು ಉತ್ತರಕ್ಕೆ ಚಲಿಸಿ ವುಹಾನ್ ನಗರದ ಮೇಲೆ ನೆಲೆಯಾಗಿರಬಹುದು. ಅಲ್ಲಿ ವೈರಾಣುಗಳು (ಕರೋನಾ-೧೯, ಕೋವಿಡ್) ವೇಗವಾಗಿ ವರ್ಧಿಸಲ್ಪಟ್ಟು ರೋಗವನ್ನು ಹರಡಿರಬಹುದು. ಈ ರೀತಿಯ ಮೋಡದ ಅಂಶಗಳು ಗಾಳಿಯೊಂದಿಗೆ ವಿವಿಧ ದಿಕ್ಕುಗಳಿಗೆ ಪಸರಿಸಿ ಇಂದು ೧೦೦ ದೇಶಗಳಲ್ಲಿ ಈ ಹೊಸ ಸಾಂಕ್ರಾಮಿಕರೋಗವು ಸಾವಿರಾರು ಸಾವುಗಳಿಗೆ ಕಾರಣವಾಗಿದೆ. ಇದಕ್ಕೆ ಸೂಕ್ತ

ಔಷಧಿಯನ್ನು ಇನ್ನೂ ಕಂಡುಹಿಡಿಯಬೇಕಿದೆ. ಇಂದಿನ ಆಧುನಿಕ ವೈದ್ಯಕೀಯ ಯುಗದಲ್ಲಿ ಇದರ ನಿಯಂತ್ರಣ ಸಾಧ್ಯವಿದೆ. ಆದರೆ



ಹೋದ ಶತಮಾನಗಳಲ್ಲಿ ಕಾಣಿಸಿಕೊಂಡಿದ್ದ ಸಾಂಕ್ರಾಮಿಕ ರೋಗಗಳಿಗೆ ಯಾವ ಔಷಧಿಯೂ ಇರಲಿಲ್ಲ. ಆಸ್ಪತ್ರೆಗಳೂ ಸುಸಜ್ಜಿತವಾಗಿರಲಿಲ್ಲ.

ಈ ಮೇಲೆ ವಿವರಿಸಿದ ಅಂಶಗಳು ವೈಜ್ಞಾನಿಕ ಹಿನ್ನೆಲೆ ಇಲ್ಲದ ಓದುಗರಿಗೆ ತಕ್ಷಣಕ್ಕೆ ಉತ್ಪ್ರೇಕ್ಷೆ ಎನ್ನಿಸಬಹುದು. ಒಮ್ಮೆ ಯೋಚಿಸಿ, ಜುಲೈ ತಿಂಗಳಿನಲ್ಲಿ ಕಾಣಿಸಿಕೊಳ್ಳುವ ಗಾಳಿಯ ಮೂಲಕ ಹರಡುವ ವೈರಾಣುಗಳೂ ಸಹ ವಾಯು ಪದರದಲ್ಲಿಯೇ ಉತ್ಪತ್ತಿಯಾಗುತ್ತವೆ. ಇತ್ತೀಚೆಗೆ ನೆಬುಲ, ನಿಫ, ಜೈಕಾ, ಹೆಚ್೧ ಎನ್೧ ಎಂಬ ಹೊಸ ವೈರಾಣುಗಳು ದಾಳಿ ಮಾಡುತ್ತಿವೆ. ಮುಂದೆ ಇನ್ನೂ ಯಾವ ರೂಪಗಳು ಕಾಣಿಸಿಕೊಳ್ಳುತ್ತವೆಯೋ? ಇದೆ ನಿಸರ್ಗದ ನಿಗೂಢ, ವಿಸ್ಮಯ.

ಹೀಗೆ, ಯಾವ ರೀತಿ ಜ್ವಾಲಾಮುಖಿಗಳು ಸ್ಫೋಟವಾದಾಗ ಸುತ್ತಲಿನ ಪರಿಸರವು ಒಮ್ಮೆಗೇ ಬದಲಾಗುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬಹುದು. ಅಮೆರಿಕಾದ ಯೆಲ್ಲೋಸ್ಟೋನ್ ನ್ಯಾಷನಲ್ ಪಾರ್ಕ್‌ನಲ್ಲಿನ ಜ್ವಾಲಾಮುಖಿಯು ಸ್ಫೋಟವಾದರೆ ನೂರು ವರ್ಷಗಳ ಕಾಲ ಇಡೀ ಭೂಮಿಗೆ ಪರಿಣಾಮವಾಗುತ್ತದೆ. ಇದೇ ರೀತಿ ಇನ್ನೂ ಎಂಟು ಸೂಪರ್ ವೋಲ್ಕೈನೋಗಳು ತಮ್ಮ ಸರದಿಗಾಗಿ ಕಾದಿವೆ. ಇವುಗಳ ಸ್ಫೋಟದಲ್ಲಿಯೂ ಒಂದು ಆವರ್ತನ ಇದೆ. ಕೆಲವು ನೂರು ವರ್ಷಗಳಿಗೆ ಒಮ್ಮೆ ಸ್ಫೋಟಿಸಿದರೆ ಇನ್ನೂ ಕೆಲವು ಜ್ವಾಲಾಮುಖಿಗಳು ಸಾವಿರ, ಲಕ್ಷ ವರ್ಷಗಳಿಗೊಮ್ಮೆ ಸ್ಫೋಟಿಸುತ್ತವೆ. ಇವುಗಳನ್ನು ನಿಯಂತ್ರಿಸುವುದು ಪ್ಲೇಟ್ ಟೆಕ್ಟಾನಿಕ್ಸ್ ಎಂಬ ಪ್ರಕ್ರಿಯೆ. ಈ ಪ್ರಕ್ರಿಯೆಯ ಸಹಾಯದಿಂದ ಭೂಮಿ ತನ್ನ ಸಮತೋಲನವನ್ನು ತಾನೇ ಕಾಪಾಡಿಕೊಂಡು ಕಳೆದ ೪೫೦ ಕೋಟಿ ವರ್ಷಗಳಿಂದಲೂ ಆರೋಗ್ಯವಂತವಾಗಿ ಅಸ್ತಿತ್ವದಲ್ಲಿದೆ.

ಈ ಯಾವ ಅಂಶಗಳಿಗೂ ಗಮನ ಕೊಡದೆ ಹವಾಮಾನ ಪಂಡಿತರು ಇಂಗಾಲದ ದ್ವಿಆಕ್ಸೈಡ್ ಅನ್ನು ದೂಷಿಸುತ್ತಿರುವುದನ್ನು ಉಳಿದ ವಿಜ್ಞಾನಿಗಳು ವಿರೋಧಿಸುತ್ತಿದ್ದಾರೆ. ಗಟಾ ಟ್ಯುನ್‌ಬರ್ಗ್‌ಳ ವಿರುದ್ಧ ನವೋಮಿ ಸೈಪ್ ಎನ್ನುವ ಬಾಲಕಿ ಮಾತನಾಡುತ್ತಿದ್ದಾಳೆ. ಇವನ್ಯಾರಿಗೂ ಈ ರೀತಿಯ ಭೂವೈಜ್ಞಾನಿಕ ಅಂಶಗಳ ಪರಿಚಯವಿಲ್ಲ. ಒಂದು ರೀತಿಯಲ್ಲಿ ಹೇಳುವುದಾದರೆ ಹವಾಮಾನ ಬದಲಾವಣೆಯು ಭೂವಿಜ್ಞಾನದ ಸಮಸ್ಯೆಯಾಗಿದೆ. ಭೂವಿಜ್ಞಾನಿಗಳು ಇದಕ್ಕೆ ಉತ್ತರವನ್ನು ಹೇಳಬೇಕಾಗಿದೆ ಏಕೆಂದರೆ, ವಾಯುಪದರವು ಭೂಮಿಯ ನಾಲ್ಕು

ಪದರಗಳಲ್ಲಿ ಒಂದಾಗಿದೆ. ಶಿಲಾಪದರ, ಜಲಪದರ, ವಾಯುಪದರ ಮತ್ತು ಜೀವ ಪದರಗಳಿವೆ. ಶಿಲಾಪದರದಲ್ಲಿ ಯಾವುದೇ ಬದಲಾವಣೆಯಾದಾಗ ಅಂದರೆ ದೊಡ್ಡಮಟ್ಟದ ಭೂಕಂಪ ಅಥವಾ ಜ್ವಾಲಾಮುಖಿಯಾದಾಗ ಅದರ ನೇರ ಪರಿಣಾಮವು ವಾಯುಪದರ ಮತ್ತು ಜಲಪದರಗಳ ಮೇಲಾಗುತ್ತದೆ. ಪರೋಕ್ಷ ಪರಿಣಾಮವು ಮೇಲೆ ವಿವರಿಸಿದಂತೆ ಜೀವ ಪದರದ ಮೇಲಾಗುತ್ತದೆ.

ಕೊಡಗಿನಲ್ಲಿ ಆದಂತಹ ಎರಡು ಬೃಹತ್ ಪ್ರವಾಹಗಳಿಂದಾಗಿ ಅಲ್ಲಿನ ಪರಿಸರ ಸಂಪೂರ್ಣ ನಾಶವಾಗಿದೆ. ಹಾಗೆಯೇ ಚಿಕ್ಕಮಗಳೂರು ಜಿಲ್ಲೆಯ ಮೂಡಬಿದರೆ ಮತ್ತು ಕಳಸಾ ತಾಲ್ಲೂಕುಗಳಲ್ಲಿಯೂ ಅಪಾರವಾದ ಪರಿಸರ ಬದಲಾವಣೆ ಆಗಿದೆ. ಐವತ್ತರಿಂದ ನೂರು ಅಡಿಗಳಷ್ಟು ದಪ್ಪವಿದ್ದ ನುಣ್ಣನೆಯ ಮಣ್ಣಿನ ಪದರ ನೀರಿನಲ್ಲಿ ಕೊಚ್ಚಿಹೋಗಿ



ಕೆಸರಾಗಿ ಹಳ್ಳ, ತೊರೆ, ಉಪನದಿ, ನದಿಗಳಿಗೆ ಸೇರಿದೆ. ಆ ಮಣ್ಣಿನಲ್ಲಿದ್ದ ಎರೆಹುಳ್ಳು, ಇರುವೆ, ಗೊದ್ದ, ಇಲಿ, ಹಾವು ಇತ್ಯಾದಿಗಳೆಲ್ಲ ಕೊಚ್ಚಿ ಹೋಗಿವೆ. ಮರದಲ್ಲಿದ್ದ ಜೇನು, ಜೇಡ, ಪ್ರಾಣಿಪಕ್ಷಿಗಳ ಗೂಡುಗಳೆಲ್ಲಾ ನಾಶವಾಗಿವೆ. ಅಡಿಕೆ, ಕಾಫಿ, ಮೆಣಸಿನಂಥಹ ವಾಣಿಜ್ಯ ಬೆಳೆಗಳು ನಾಶವಾಗಿ ಕೃಷಿ ಪರಿಸರವೇ ಸಂಪೂರ್ಣ ನಾಶವಾಗಿದೆ. ಫಲವತ್ತಾದ ಮಣ್ಣಿನ ಪದರವಿಲ್ಲದೆ ಬೆಳೆ ಇಳುವರಿಯು ಕುಸಿಯುತ್ತದೆ. ನುಣ್ಣನೆಯ ಮಣ್ಣು, ಕೊಚ್ಚಿ ಹೋಗಿ ದಪ್ಪ ಕಣಗಳು ಉಳಿದು ಮರುಭೂಮಿ ಸದೃಶವಾಗುತ್ತದೆ. ಹಾಗೆಯೇ, ಬರ ಪ್ರದೇಶಗಳಲ್ಲಿ ಅತಿ ಕಡಿಮೆ ಮಳೆಯಾಗುವುದರಿಂದ ಸವಕಳಿ ಕಡಿಮೆಯಾಗಿ ಹೊಸ ಮಣ್ಣಿನ ಉತ್ಪತ್ತಿಯಾಗದೆ ಫಲವತ್ತತೆ ಕಡಿಮೆಯಾಗಿ ಮರುಭೂಮಿ ಸದೃಶ ಪರಿಸರ ನಿರ್ಮಾಣವಾಗುತ್ತದೆ. ಹೀಗೆ ಕಾಲನುಕಾಲದಲ್ಲಿ ಹರಿದ್ವರ್ಣ ಮಳೆ ಕಾಡುಗಳು ಮರುಭೂಮಿಗಳಾಗಿ ಮರುಭೂಮಿಗಳು ಹಸಿರು ಕಾಡುಗಳಾಗುತ್ತವೆ. ಇಂದು ಹರಿಯುತ್ತಿರುವ ನದಿ ಪಾತ್ರಗಳು ತುಂಬಿ ಹೋಗಿ ಪಕ್ಕಕ್ಕೆ ಸರಿದು ಹರಿಯಲಾರಂಭಿಸುತ್ತವೆ. ಸತತವಾಗಿ ಕಡಿಮೆ ಮಳೆ ಬೀಳುವುದರಿಂದ ನದಿಗಳು ಬತ್ತಿ ಹೋಗುತ್ತವೆ. ಹೀಗೆ ಪರಿಸರವು ಸದಾ ಬದಲಾಗುವ ಪ್ರಕ್ರಿಯೆಗಳ ಫಲಿತವಾಗಿದೆ. ನಮ್ಮ ಗ್ರಹಿಕೆ, ಅನಿಸಿಕೆಗಳಿಗೂ ಮೀರಿದ ಜಾಗತಿಕ ಅಂಶಗಳನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಂಡು ಪರಿಸರದ ಬಗ್ಗೆ ಮಾತನಾಡಬೇಕು. ಕರ್ನಾಟಕದ ಪರಿಸರ, ನೆಲ, ಜಲದ ಬಗ್ಗೆ ಮಾತನಾಡುವಾಗ ಈ ನೆಲವು ಭಾರತದ ಒಂದು ಭಾಗ, ಭಾರತವು ಭೂಮಿಯ ಒಂದು ಭಾಗ ಎನ್ನುವುದನ್ನು ಮರೆಯದೆ ಇಡೀ ಭೂಮಿಯನ್ನು ಒಂದು ಘಟಕವನ್ನಾಗಿ ನೋಡಿದಾಗ ಗೋಚರಿಸುವುದೇನೆಂದರೆ ಭೂಮಿಯ ಒಂದು ಭಾಗದಲ್ಲಿ ಆದ ಬದಲಾವಣೆಯು ಇನ್ನೊಂದು ಭಾಗದ ಮೇಲೆ ಪರಿಣಾಮವನ್ನು ಬೀರಬಹುದು ಎಂದು ಆಲೋಚಿಸಬೇಕು. ಈ ರೀತಿಯಾಗಿ ಭೂಮಿಯನ್ನು ಒಂದು ಘಟಕವನ್ನಾಗಿ ಭೂವಿಜ್ಞಾನದ ಸಹಾಯದಿಂದ ಅರಿತುಕೊಂಡರೆ ಸಮಗ್ರ ಭೂ ಪರಿಸರದ ತಿಳಿವು ನಮಗೆ ಲಭಿಸುತ್ತದೆ.

## ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ

**- ಡಾ.ಟಿ.ಆರ್. ಅನಂತರಾಮು**

ವಿಜ್ಞಾನ ಮತ್ತು ಸಾಹಿತ್ಯ ಸೃಜನಶೀಲ ಮನಸ್ಸಿನ ಎರಡು ಮುಖಗಳು ಎಂದು ತತ್ತ್ವಶಃ ಒಪ್ಪಿದ್ದರೂ, ಜನಸಾಮಾನ್ಯರಿಗೆ ಸಾಹಿತ್ಯದ ಸೆಳೆತವೇ ಹೆಚ್ಚು. ಇದಕ್ಕೆ ಕಾರಣವೂ ಉಂಟು. ಸಾಹಿತ್ಯ ಭಾವಪ್ರಧಾನವಾದ್ದು, ಬದುಕನ್ನು ಪ್ರತಿಬಿಂಬಿಸುವಂಥದ್ದು, ಇದಕ್ಕೆ ವಿರುದ್ಧವೆಂಬಂತೆ ವಿಜ್ಞಾನವನ್ನು ಅರ್ಥೈಸಿಕೊಳ್ಳುವುದು ಶ್ರಮ ಬೇಡುತ್ತದೆ, ಭಾವಕ್ಕೆ ಅಲ್ಲಿ ಜಾಗವಿಲ್ಲ. ತತ್ತ್ವ, ಸಿದ್ಧಾಂತ, ಪ್ರಯೋಗ, ಸೂತ್ರಗಳ ಮೂಲಕ ಅರ್ಥಮಾಡಿಕೊಳ್ಳಲು ಬೌದ್ಧಿಕ ಕಸರತ್ತು ಬೇಕು. ಹಚ್ಚೇವು ಕನ್ನಡದ ದೀಪ' ಹಾಡನ್ನು ಕೇಳುವಾಗ ಅಥವಾ ಹಾಡುವಾಗ ಆಗುವ ಭಾವಾನಂದವೇ ಬೇರೆ, ಐನ್‌ಸ್ಟೈನ್ ಅವರ ಸಮೀಕರಣವನ್ನು ಅರ್ಥಮಾಡಿಕೊಳ್ಳಲು ಬೇಕಾದ ಮಾನಸಿಕ ಸಿದ್ಧತೆಯೇ ಬೇರೆ. ಇಲ್ಲಿ ಭಾವಕ್ಕೆ ಅವಕಾಶವಿಲ್ಲ. ಹಾಗೆಂದು ಈ ಜ್ಞಾನವನ್ನು ನಿರಾಕರಿಸಲಾಗದು. ಆದರೆ ವಿಜ್ಞಾನದ ಫಲಶ್ರುತಿಯೇ ಆದ ತಂತ್ರಜ್ಞಾನಕ್ಕೆ ಸಮಾಜದಲ್ಲಿ ದೊಡ್ಡ ಸ್ಥಾನವಿದೆ. ದಿನನಿತ್ಯದ ಬದುಕನ್ನು ನಡೆಸಬಲ್ಲ, ಆ ಮೂಲಕವೇ ಆಳಬಲ್ಲ ಚೈತನ್ಯ ತಂತ್ರಜ್ಞಾನಕ್ಕಿದೆ. ಇದು ಎಷ್ಟು ಪ್ರಭಾವಿ ಎಂದರೆ ಸಮಾಜದ ದಿಕ್ಕನ್ನೇ ಬದಲಾಯಿಸುವಷ್ಟು ಶಕ್ತ. ಇದಕ್ಕೆ ಒಂದೇ ಒಂದು ಉದಾಹರಣೆ ಸಾಕು. ನಾವೀಗ ಮೊಬೈಲ್ ಇಲ್ಲದೆ ಬದುಕೇ ಇಲ್ಲ ಎನ್ನುವ ಸ್ಥಿತಿಗೆ ಮುಟ್ಟಿದ್ದೇವೆ. ಖುಷಿಯಾಗಿಯೇ ತಂತ್ರಜ್ಞಾನದ ದಾಸರಾಗಿದ್ದೇವೆ. ಅಕ್ಷರಸ್ಥರು ಮತ್ತು ಅನಕ್ಷರಸ್ಥರ ನಡುವಿನ ಗೆರೆಯನ್ನೇ ಇದು ಅಳಿಸಿ ಹಾಕಿಬಿಟ್ಟಿದೆ. ಸಮಾಜದ ಆರೋಗ್ಯಕರ ಮುನ್ನಡೆಗೆ ವಿಜ್ಞಾನವೂ ಬೇಕು, ಅದರ ತನುಜಾತೆಯಾದ ತಂತ್ರಜ್ಞಾನವೂ ಬೇಕು. ಜ್ಞಾನದ ಪರಿಧಿಯನ್ನು ವಿಸ್ತರಿಸುವ ಶಕ್ತಿ ವಿಜ್ಞಾನಕ್ಕಿದೆ.

ಇತ್ತೀಚೆಗೆ ವಿಜ್ಞಾನವನ್ನು ಮೆಚ್ಚುವ ಜನಸಾಮಾನ್ಯರ ಸಂಖ್ಯೆಯು ನಿಧಾನಗತಿಯಲ್ಲಾದರೂ ಹೆಚ್ಚುತ್ತಿದೆ. ಇದನ್ನು ಮತ್ತಷ್ಟು ಸಮೃದ್ಧಗೊಳಿಸಲು ಸರಳವಾಗಿ ಆದರೆ ಮೂಲಕ್ಕೆ ಚ್ಯುತಿಬರದಂತೆ ವಿಜ್ಞಾನದ ಸಮಕಾಲೀನ ಸಂಗತಿಗಳನ್ನು ಸಂವಹನಿಸುವ ತಜ್ಞರು ದೊಡ್ಡ ಪ್ರಮಾಣದಲ್ಲಿ ಮುಂದೆ ಬರಬೇಕಾಗಿದೆ. ಮಾತೃಭಾಷೆಯಲಿ ವಿಜ್ಞಾನವನ್ನು ಅರ್ಥಮಾಡಿಕೊಳ್ಳುವುದು ಸುಲಭ. ಈ ಸತ್ಯವನ್ನು ಈಗಾಗಲೇ ಪ್ರಮಾಣೀಕರಿಸಲಾಗಿದೆ. ಗ್ರಾಮೀಣ ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ಓದಿ ರಾಜ್ಯಮಟ್ಟದ ಪರೀಕ್ಷೆಗಳನ್ನು ಬರೆದು ವಿಜ್ಞಾನ ಮತ್ತು ಗಣಿತದಲ್ಲಿ ನೂರಕ್ಕೆ ನೂರು ಅಂಕ ಗಳಿಸಿರುವ ನೂರಾರು ಉದಾಹರಣೆಗಳು ನಮ್ಮ ಕಣ್ಣಮುಂದಿವೆ. ಇಲ್ಲೊಂದು ವಿಶೇಷ ಪರಿಶ್ರಮವನ್ನು ಹೇಳಬೇಕಾಗುತ್ತದೆ. ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಸೃಷ್ಟಿಸುವಲ್ಲಿ ಮೊದಲನೆಯದಾಗಿ ಮೂಲ ರೂಪದಲ್ಲಿ ಸರಿಯಾಗಿ ವಿಜ್ಞಾನವನ್ನು ಅರ್ಥಮಾಡಿಕೊಂಡಿರಬೇಕು. ಅದನ್ನು ಕನ್ನಡದಲ್ಲಿ ಹೇಳುವ ಜಾಣೆ ಇರಬೇಕು. ಅಂದರೆ ಎರಡೂ ಭಾಷೆಯಲ್ಲಿ ಪರಿಣತರಾಗಬೇಕಾಗುತ್ತದೆ.

ಹೆಚ್ಚಿನ ಪಾಲು ವಿಜ್ಞಾನದ ಪ್ರಗತಿ ನಮಗೆ ತಲುಪುವುದು ಇಂಗ್ಲಿಷ್ ಮೂಲದಿಂದಲೇ. ಹೀಗಾಗಿಯೇ ಸಾಹಿತ್ಯ ಬರೆಯುವವರಿಗಿಂತ ವಿಜ್ಞಾನವನ್ನು ಕನ್ನಡದಲ್ಲಿ ಸಂವಹನೆ ಮಾಡುವವರ ಸಂಖ್ಯೆ ಕಡಿಮೆ ಇದೆ. ಹಿಂದೆಯೂ ನಮ್ಮ ಹಿರಿಯ ತಲೆಮಾರಿನವರು ಕನ್ನಡದಲ್ಲಿ ವಿಜ್ಞಾನವನ್ನು ಬೋಧಿಸಲು ಅಥವಾ ಬರೆಯಲು ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ, ಯಶಸ್ವಿಯಾಗಿದ್ದಾರೆ. ವಿಜ್ಞಾನದ ಬಗ್ಗೆ ಕುತೂಹಲ ಮೂಡಿಸಿದ್ದಾರೆ.

ಕನ್ನಡ ವಿಜ್ಞಾನ ಸಾಹಿತ್ಯಕ್ಕೆ, ಕನ್ನಡ ಸಾಹಿತ್ಯಕ್ಕಿರುವಂತೆ ಸಾವಿರಾರು ವರ್ಷಗಳ ಇತಿಹಾಸವಿಲ್ಲ. ಹೆಚ್ಚಿನ ಪಾಲು ವಿಜ್ಞಾನ ಸಾಹಿತ್ಯ ಇಂಗ್ಲಿಷ್‌ನಲ್ಲಿ ಸೃಷ್ಟಿಯಾದದ್ದು ಕೈಗಾರಿಕಾ ಕ್ರಾಂತಿಯ ನಂತರವೇ. ಭಾರತವನ್ನು ಬ್ರಿಟಿಷರು ಆಳಿದ್ದರಿಂದ ನಮಗೆ ಇಂಗ್ಲಿಷ್ ಅನಿವಾರ್ಯವಾಯಿತು. ವಿದ್ಯಾಭ್ಯಾಸದ ಎಲ್ಲಾ ಹಂತಗಳಲ್ಲೂ ಇಂಗ್ಲಿಷ್ ನಮ್ಮ ಭಾವವನ್ನು ಆಳತೊಡಗಿತು. ಹತ್ತೊಂಬತ್ತನೇ ಶತಮಾನದ ಕೊನೆಯ ಭಾಗದಲ್ಲಿ ನಮ್ಮಲ್ಲಿ ವಿಜ್ಞಾನ ಲೇಖನಗಳು ಅಲ್ಲಲ್ಲೇ ಪ್ರಕಟವಾಗತೊಡಗಿದವು. ಆ ಪೈಕಿ ಹೆಚ್ಚಿನವು ಜನಾರೋಗ್ಯ, ಕೃಷಿ, ಗಣಿತ, ಭೂಗೋಳ, ಖಗೋಳಗಳಿಗೆ ಸಂಬಂಧಿಸಿದವು. ಅವು ಅನುಸರಿಸಿದ್ದು ಸರಳ ನಿರೂಪಣೆ ಮತ್ತು ಆಗ ರೂಢಿಯಲ್ಲಿದ್ದ ಭಾಷೆ, ಒಂದೆರಡು ಉದಾಹರಣೆಗಳನ್ನು ನೋಡಬಹುದು- 'ಇಂಡಿಯಾ ದೇಶದ ವಿಶೇಷ ಅಪಾಯಕರವಾದ ಜಾನುವಾರು ರೋಗಗಳನ್ನು ಕುರಿತ ಸಂಕ್ಷಿಪ್ತ ಗ್ರಂಥವು' (೧೮೫೮). 'ಸಹಸ್ರಾರ್ಧ ವೃಕ್ಷಾದಿಗಳ ವರ್ಣನೆ' (೧೮೭೪), 'ವ್ಯವಸಾಯ ಕ್ರಮಬೋಧಿನಿ' (೧೮೭೯), ಗ್ರಹಣಗಳಾಗುವುದು ಹ್ಯಾಗೆ' (೧೮೮೪). ಇಂಥ ಕೃತಿಗಳನ್ನು ಹೆಚ್ಚಿನ ಪಾಲು ಹೊರತಂದಿದ್ದು, ಆಗಿನ ಕ್ರಿಶ್ಚಿಯನ್ ಲಿಟರರಿ ಸೊಸೈಟಿ, ಬಾಸಲ್ ಮಿಷನ್, ಮೈಸೂರು ಗವರ್ನಮೆಂಟ್ ಪ್ರೆಸ್, ಜಿ.ಟಿ.ಎ. ಪ್ರೆಸ್ ಮುಂತಾದವು. ಮುಖ್ಯವಾಗಿ ಬೋಧನೆಗೆ ಅವಶ್ಯಕತೆ ಇದ್ದ ಗ್ರಂಥಗಳು ಈ ಮಾದರಿಯವು. ಇದೇ ಸಂದರ್ಭದಲ್ಲಿ ೧೮೮೧ರಲ್ಲಿ ಪ್ರಾರಂಭಿಸಿದ 'ಹಿತಬೋಧಿನಿ', ೧೮೮೮ರಲ್ಲಿ ಪ್ರಾರಂಭವಾದ 'ಹಿತೋಪದೇಶ' ಪತ್ರಿಕೆಗಳು ವಿಜ್ಞಾನ ಸಂಗತಿಗಳಿಗೆ ಪುಟಕೊಟ್ಟವು. ಜನ ವಿಜ್ಞಾನದತ್ತ ಆಕರ್ಷಿತರಾಗಲು ಈ ಪತ್ರಿಕೆಗಳು ಪ್ರೇರಣೆ ಕೊಟ್ಟವು.

ಸಣ್ಣ ಝರಿಗಳಾಗಿ ಕಾಣಿಸಿಕೊಂಡ ವಿಜ್ಞಾನ ಬರಹಗಳು ದೊಡ್ಡ ತೊರೆಯಾಗಿ ಹರಿಯಲು ಪ್ರಾರಂಭಿಸಿದ್ದು ೨೦ನೇ ಶತಮಾನದ ಆರಂಭದಲ್ಲಿ, ಸೆಂಟ್ರಲ್ ಕಾಲೇಜಿನ ಭೌತವಿಜ್ಞಾನ ಬೋಧಿಸುತ್ತಿದ್ದ, ಕನ್ನಡ ಸಾಹಿತ್ಯ ಪರಿಷತ್ತನ್ನು ಕಟ್ಟಿ ಬೆಳೆಸಿದವರಲ್ಲಿ ಒಬ್ಬರಾದ ಬೆಳ್ಳಾವೆ ವೆಂಕಟನಾರಣಪ್ಪ ಮತ್ತು ಅವರ ಗುರು ಹವಾಮಾನ ತಜ್ಞನಂಗಪುರಂ ವೆಂಕಟೇಶ ಅಯ್ಯಂಗಾರ್ ಅವರು ಧೈರ್ಯವಹಿಸಿ 'ವಿಜ್ಞಾನ ಪ್ರಚಾರಿಣಿ ಸಮಿತಿ' ಎಂಬ ಸಂಸ್ಥೆಯೊಂದನ್ನು ಹುಟ್ಟುಹಾಕಿ, ಅದರ ಮೂಲಕ 'ವಿಜ್ಞಾನ' ಎಂಬ ಮಾಸಿಕ ಪತ್ರಿಕೆ ಹೊರತಂದದ್ದು ದೊಡ್ಡ ಸಾಹಸವೇ. ಆಗಿದ್ದ ವಾತಾವರಣ ಸಂಪೂರ್ಣ ಇಂಗ್ಲಿಷ್‌ಮಯವಾಗಿತ್ತು ಎಂಬುದು ತಿಳಿದ ಸಂಗತಿಯೇ. ಆಗಲೂ ಲಭ್ಯವಿದ್ದ ಸೈಂಟಿಫಿಕ್ ಅಮೆರಿಕನ್', 'ನೇಚರ್', 'ಪಾಪ್ಯುಲರ್ ಸೈನ್ಸ್' ಪತ್ರಿಕೆಗಳಿಂದ ಆಯ್ದ ಕೆಲವು ಲೇಖನಗಳನ್ನು ಕನ್ನಡಕ್ಕೆ ಅನುವಾದ ಮಾಡಿ, ಪ್ರಕಟಣೆಮಾಡುವ ಸಾಹಸ ಈ ಇಬ್ಬರದ್ದು. ಆಗ ಕೊಡುತ್ತಿದ್ದ ವಿಜ್ಞಾನ ಶೀರ್ಷಿಕೆಗಳು

ಕುತೂಹಲ ಕೆರಳಿಸುತ್ತಿದ್ದವು. 'ವಿದ್ಯುಚ್ಛಕಟಂ ಕಥೆ' (ಎಲೆಕ್ಟ್ರಿಕ್ ಟ್ರೈನ್), 'ಆರ್ಕಿಮಿಡೀಸನು ಅಕ್ಕಸಾಲೆಯ ಮೋಸವನ್ನು ಕಂಡುಹಿಡಿದದ್ದು, 'ವಿದ್ಯುತ್



ಎಂಬ ರಾಕ್ಷಸನನ್ನು ನರನು ಕೈವಶಮಾಡಿಕೊಂಡದ್ದು', 'ಸಸ್ಯಗಳ ವಿವಾಹಕ್ರಮ'. ಇಂಥ ಶೀರ್ಷಿಕೆಗಳಿಂದ ಓದುವವರನ್ನು ಉದ್ದೀಪನಗೊಳಿಸುವುದು ಸಂಪಾದಕರ ಪ್ರಯತ್ನ, ವಿಜ್ಞಾನವೆಂದರೆ ಆಗ ಚೋದ್ಯ, ಬೆರಗು, ನಿಗೂಢ ಎನ್ನುವ ಕಾಲಘಟ್ಟ. ವಿಷಾದವೆಂದರೆ ಪ್ರಾರಂಭವಾದ ಎರಡೇ ವರ್ಷದಲ್ಲಿ ೨೪ ಸಂಚಿಕೆಗಳನ್ನು ಇತ್ತು, ಕೊನೆಗೆ ಪೋಷಕರಿಲ್ಲದೆ ಪ್ರಕಟಣೆ ನಿಂತುಹೋಯಿತು (ಈ ಎರಡೂ ಸಂಪುಟಗಳನ್ನು ಮೂಲ ಅಕ್ಷರ ವಿನ್ಯಾಸ ಉಳಿಸಿಕೊಂಡು ಉದಯಭಾನು ಕಲಾಸಂಘ ೨೦೧೩ರಲ್ಲಿ ಮರುಮುದ್ರಣಮಾಡಿದೆ).

**ವಿಜ್ಞಾನಕ್ಕೆ ಚಿಮ್ಮು ಹಲಗೆ**

ಕನ್ನಡ ವಿಜ್ಞಾನ ಸಾಹಿತ್ಯಕ್ಕೆ ಹೊಸ ತಿರುವು ನೀಡುವ ಕಾಲ ಒದಗಿಬಂತು. ಮುಂಚೂಣಿಯಲ್ಲಿ ಕೆಲಸ ಮಾಡಿದವರು ಡಾ. ಶಿವರಾಮ ಕಾರಂತರು. ಅವರು ಸಾಹಿತ್ಯಕ್ಕೆ ತೋರಿದ ಆಸಕ್ತಿಯನ್ನು ವಿಜ್ಞಾನಕ್ಕೂ ವಿಸ್ತರಿಸಿಕೊಂಡರು. ಅವರ ಸಾಹಿತ್ಯದಲ್ಲಿ ಒಟ್ಟು ವಿಜ್ಞಾನ ಕೃಷಿಯೇ ಸುಮಾರು ೮೦೦೦ ಪುಟಗಳಷ್ಟಿದೆ. ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿ ಆಗ ಹಲವು ಕೊರತೆಗಳಿದ್ದವು. ಸರಿಯಾದ ವಿಜ್ಞಾನ ಪಠ್ಯಕ್ರಮವಿರಲಿಲ್ಲ. ಬೋಧಿಸುವವರು ಕೂಡ ಹೆಚ್ಚಿನ ಆಸಕ್ತಿಯನ್ನೇನೂ ತೋರಿಸಿರಲಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಹಲವು ಪ್ರಯೋಗಗಳನ್ನು ಮಾಡಿ ಕಾರಂತರು 'ಬಾಲಪ್ರಪಂಚ'-ವಿಜ್ಞಾನ ವಿಶ್ವಕೋಶ ಕೃತಿ ರಚನೆ ಮಾಡಿದರು. ಇದೊಂದು ಹೊಸ ಪ್ರಯತ್ನ ಅಷ್ಟೇ ಅಲ್ಲ. ಕನ್ನಡದಲ್ಲಿ ವಿಶ್ವಕೋಶ ರಚನೆಗೆ ಮಾಡಿದ ಮೊದಲ ಪ್ರಯತ್ನ ಕೂಡ. ಮೂರು ಸಂಪುಟಗಳಲ್ಲಿ ೧೯೩೬ರಲ್ಲಿ ಹೊರಬಂದ ಈ ವಿಶ್ವಕೋಶ ರಚಿಸಲು ಕಾರಂತರು ಹಲವು ಮೂಲಗಳನ್ನು ಆಶ್ರಯಿಸಬೇಕಾಯಿತು. ಏಕೆಂದರೆ ಕಾರಂತರು ಕಾಲೇಜಿನಲ್ಲಿ ವಿಜ್ಞಾನ ಕಲಿತವರಲ್ಲ. ಆದರೆ ಅವರ ವ್ಯಾಪಕ ಓದು, ಪ್ರಪಂಚಜ್ಞಾನ, ತಕ್ಕ ಭಾಷಾ ಪರಿಣತಿ ಇಂಥ ದೊಡ್ಡ ಕೆಲಸಕ್ಕೆ ಕೈಹಾಕಲು ಶಕ್ತಿಕೊಟ್ಟವು. ಆರ್ಥರ್ ಮೀ ಬರೆದ 'ದಿ ಬುಕ್ ಆಫ್ ನಾಲೆಡ್ಜ್' ಎಂಬ ಮಕ್ಕಳ ವಿಜ್ಞಾನ ಸಂಪುಟವೂ ಸೇರಿದಂತೆ ಅವರ ಸಂಗ್ರಹದಲ್ಲಿ ಅನೇಕ ಕೃತಿಗಳು ಇದ್ದವು. ಕನ್ನಡದ ಮಕ್ಕಳಿಗೆ ಈ ಬಗೆಯ ಜ್ಞಾನವನ್ನು ಕೊಡಬಾರದೇಕೆ ಎಂದು ಚಿಂತಿಸಿದರು. ಅವರ ಯೋಜನೆಯೋ ವಿಶಾಲ ವ್ಯಾಪ್ತಿಯದು. ಇಡೀ ಮೂರು ಸಂಪುಟಗಳಲ್ಲಿ ಪ್ರಕೃತಿ ವಿಜ್ಞಾನ, ನಾಡುಗಳು- ನೆಲೆವೀಡುಗಳು, ಸಾಹಿತ್ಯ-ಕಲೆ, ಕ್ರೀಡಾವನ ಇತಿಹಾಸರಂಗ, ಭೌತವಿಜ್ಞಾನ, ಯಂತ್ರಯುಗ, ವಿಶ್ವಕರ್ಮರ ಸಾಹಸ, ಜೀವನ ಚರಿತ್ರೆ, ಉದ್ಯೋಗರಾಜ್ಯ, ಏನು ಎಂಥದು, ಸಮಾಜ ವಿಜ್ಞಾನ ಎಂಬ ಬೇರೆ ಬೇರೆ ವಿಭಾಗಗಳನ್ನು ಇದರಲ್ಲಿ ಸೇರಿಸಿದರು. ನಾವು ಈ ಹಂತದಲ್ಲಿ ಇನ್ನೊಂದು ಸಂಗತಿಯನ್ನು

ನೆನಪಿನಲ್ಲಿಡಬೇಕು. ಅವರ ಈ ಬರಹದ ಕಾಲಘಟ್ಟದಲ್ಲಿ ಜಗತ್ತು ಮೊದಲ ಮಹಾಯುದ್ಧವನ್ನು ಮುಗಿಸಿತ್ತು. ವಿಜ್ಞಾನ, ಇದರ ನಂತರ ದಾಪುಗಾಲು ಹಾಕುತ್ತಹೋಯಿತು. ಎಲ್ಲ ಕ್ಷೇತ್ರಗಳಲ್ಲೂ ಮುನ್ನಡೆ ಸಾಧಿಸಿತ್ತು. ಕಾರಂತರ ಈ ವಿಶ್ವಕೋಶ ಹೊಸಬಗೆಯ ಚಿಂತನೆಗೆ ಕನ್ನಡಿಗರಿಗೆ ವಿಶೇಷವಾಗಿ ಮಕ್ಕಳಿಗೆ ಅವಕಾಶಕೊಟ್ಟಿತು. ಕನ್ನಡದಲ್ಲಿ ವಿಜ್ಞಾನ ಕಸುವಿಗೆ ಈ ಸಂಪುಟಗಳು ಚಿಮ್ಮು ಹಲಗೆಯಾದವು. ಆದರೆ ಈ ಸಂಪುಟಗಳ ಪೂರ್ಣ ಮಾರಾಟವಾಗಲು ಹತ್ತಕ್ಕೂ ಮಿಕ್ಕಿ ವರ್ಷಗಳು ಬೇಕಾದವು ಎಂದು ಕಾರಂತರೇ ಕನ್ನಡಿಗರ ಆಲಸ್ಯ ಕುರಿತು ಒಂದೆಡೆ ಬರೆದಿದ್ದಾರೆ. ಅವರು ಅಧೀರರಾಗಲಿಲ್ಲ- ವಿಜ್ಞಾನಾಕರ್ಷಣೆ ಕಡಿಮೆಯೂ ಆಗಲಿಲ್ಲ. ಬದಲು ೧೯೫೯ರಿಂದ ತೊಡಗಿ



೧೯೬೪ರವರೆಗೆ ನಾಲ್ಕು ಸಂಪುಟಗಳಲ್ಲಿ 'ಈ ಜಗತ್ತು', 'ಜೀವ-ಜೀವನ', 'ವಸ್ತು-ಚೈತನ್ಯ' ಮತ್ತು 'ವಿಜ್ಞಾನ ಸಾಧನ' (ವಿಜ್ಞಾನ ಪ್ರಪಂಚ ಮಾಲಿಕೆ) ಕೃತಿಗಳನ್ನು ತಂದರು. ಆಗ ಪರಿಚಿತವಿದ್ದ ಎಲ್ಲ ವಿಜ್ಞಾನ ಶಾಖೆಗಳ ಬಗ್ಗೆಯೂ ಬರೆದಿದ್ದಾರೆ. ಇಂಥ ಸಾಹಸವನ್ನು ಯಾವ ಸಾಹಿತಿಯೂ ಮಾಡಿಲ್ಲ. ಇದರಲ್ಲಿ ಕಾರಂತರು ಅನೇಕ ತಾಂತ್ರಿಕ ಪದಗಳ ಬಗ್ಗೆ ತಾವೇ ಸಂವಾದಿ ಪದಗಳನ್ನು ಟಂಕಿಸಿದ್ದಾರೆ-ಇದನ್ನು ಎಲ್ಲರೂ ಒಪ್ಪುವುದಿಲ್ಲ.

**ವಿಜ್ಞಾನದ ಪರಿಧಿಯ ವಿಸ್ತರಣೆ**

ವಿಜ್ಞಾನದ ಮೂಲಭೂತ ಗುಣವೆಂದರೆ ಹೊಸ ಹೊಸ ಆವಿಷ್ಕಾರ ಮತ್ತು ಉಪಜ್ಞೆಗಳು. ಎಷ್ಟೇ ಬಾರಿ ಪ್ರಯೋಗಮಾಡಲಿ ಫಲಿತಾಂಶ ಒಂದೇ ಇರಬೇಕು. ಇಲ್ಲಿ ಹಿರಿಯರು, ಕಿರಿಯರು, ಎಂಬ ಭೇದಕ್ಕೆ ಮನ್ನಣೆ ಇಲ್ಲ. ಹಾಗೆಯೇ ಗಂಡು-ಹೆಣ್ಣೆಂಬ ಲಿಂಗಭೇದ ಕೂಡ ಈ ಕ್ಷೇತ್ರದಲ್ಲಿ ಸಲ್ಲದು. ವಿಜ್ಞಾನವನ್ನು ಬೆಂಬತ್ತುವುದೆಂದರೆ ಅದು ಒಂದು ಬಗೆಯ ತಪಸ್ಸೇ ಸರಿ. ಕನ್ನಡದಲ್ಲಿ ಈ ಕ್ಷೇತ್ರದ ಬೆಳವಣಿಗೆಯನ್ನು ಪರಿಚಯಿಸುವಾಗ ಯಾವ ಅಂಶಗಳು ಜನರಿಗೆ ಹೇಗೆ ಮುಟ್ಟಿಸಬೇಕು? ನಿರೂಪಣೆ ಹೇಗಿರಬೇಕು? ಎಂಬ ಯೋಚನೆ ಬೇಕು. ಪಾರಿಭಾಷಿಕ ಶಬ್ದಗಳನ್ನು ಉಳಿಸಿಕೊಳ್ಳುವುದು ಮತ್ತು ಹೊಸ ಪದಗಳನ್ನು ಟಂಕಿಸುವುದು ಪರಿಣತಿ ಬೇಡುತ್ತದೆ. ಕನ್ನಡದಲ್ಲಿ ಹೇಳುವಾಗ ಕನ್ನಡದ ಸೊಗಡನ್ನೂ ಬಳಸಿಕೊಳ್ಳಬೇಕು ಹಾಗೆಯೇ ಏಕೆ? ಏನು? ಹೇಗೆ? ಎಂಬ ಪ್ರಶ್ನೆಗಳು ಎದ್ದಾಗ ಸಮಂಜಸ ಉತ್ತರಗಳನ್ನು ನೀಡಬೇಕು. ವಿಜ್ಞಾನವನ್ನು ಬೋಧಿಸುವವರೇ ವಿಜ್ಞಾನ ಸಂವಹನ ಕಾರರಾದಾಗ ಅವರ ಬರವಣಿಗೆ ಮತ್ತು ಮಾತಿಗೆ ಹೆಚ್ಚು ತೂಕಬರುತ್ತದೆ ಎಂಬುದು ನಿರೀಕ್ಷೆ. ಇಂಥ ಪ್ರಯೋಗಮಾಡಿ ಸಫಲರಾದವರು ಸೆಂಟ್ರಲ್ ಕಾಲೇಜಿನಲ್ಲಿ ಭೌತವಿಜ್ಞಾನ ಬೋಧಿಸುತ್ತಿದ್ದ ಪ್ರೊ, ಆರ್.ಎಲ್. ನರಸಿಂಹಯ್ಯನವರು (ಪ್ರಸಿದ್ಧ ವಿಜ್ಞಾನಿ ರೊದ್ದಂ ನರಸಿಂಹ ಅವರ ತಂದೆ), ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಬೆಳೆಯಲು ಭದ್ರ ಬುನಾದಿ ಹಾಕಿದವರು. ವಿಶೇಷವಾಗಿ ಜನಪ್ರಿಯ ವಿಜ್ಞಾನ ಸಾಹಿತ್ಯದ ಕಡೆ ಅವರ ಗಮನ. ಈ ಹೊತ್ತಿಗೆ ಎರಡನೇ ಮಹಾಯುದ್ಧ ಮುಗಿದಿತ್ತು. ವಿಜ್ಞಾನ-

ತಂತ್ರಜ್ಞಾನಗಳು ಇನ್ನಷ್ಟು ದೂರಕ್ಕೆ, ಅಷ್ಟೇ ಎತ್ತರಕ್ಕೆ ಜಿಗಿದಿದ್ದವು. ಇವುಗಳನ್ನೆಲ್ಲ ಆರ್.ಎಲ್.ಎನ್. ಶೋಧಕ ಕಣ್ಣುಗಳಿಂದ ಗಮನಿಸುತ್ತಿದ್ದರು. ಸಮಕಾಲೀನ ವಿಜ್ಞಾನದ ಸಂಗತಿಗಳನ್ನು ಕನ್ನಡದಲ್ಲಿ ತರಲೇಬೇಕೆಂಬ ಸಾತ್ವಿಕ ಹಠ ಅವರದು. ಇದರ ಫಲವಾಗಿಯೇ ಹೊರಬಂದ ಕೃತಿಗಳು 'ಶಬ್ದಪ್ರಪಂಚ', 'ಜಗತ್ತಿನ ಹುಟ್ಟು-ಸಾವು', 'ಶಕ್ತಿ', 'ನಕ್ಷತ್ರದರ್ಶನ, 'ರೇಡಾರ್', 'ಸಾಮಾನ್ಯ ವಿಜ್ಞಾನ', 'ಚಂದ್ರಲೋಕ ಯಾತ್ರೆ'-ಈ ಕೃತಿಗಳ ಮೂಲಕ ಜ್ಞಾನ ಪ್ರವೇಶಕ್ಕಾಗಿ ಹೊಸ ಕಿಟಕಿಗಳನ್ನು ತೆರೆದರು. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಮೂಲ ಪದಗಳ ಜೊತೆಗೆ ಹೊಸ ವಿಜ್ಞಾನ ಪದಗಳನ್ನು ಟಂಕಿಸುತ್ತ ಬಂದು (ಶ್ವೇತಕುಬ್ಜ, ಸಮಸ್ಥಾನಿ ಇತ್ಯಾದಿ). ಹಾಗೆಯೇ ಕನ್ನಡದ ಪ್ರಮುಖ ದಿನಪತ್ರಿಕೆ, ವಾರಪತ್ರಿಕೆ, ವಿಶೇಷಾಂಕಗಳಿಗೆ ಸಾಮಾನ್ಯರೂ ಗ್ರಹಿಸುವಂತೆ ವಿಜ್ಞಾನ ಲೇಖನಗಳನ್ನು ಬರೆದರು. ತಾವೊಬ್ಬರೇ ವಿಜ್ಞಾನದ ನಿಘಂಟು ರಚಿಸಲು ಹೊರಟರು. ಮುಕ್ಕಾಲು ದಾರಿ ಕ್ರಮಿಸಿದ್ದರೂ ಕೂಡ, ಅವರ ಕೈಯ್ಯಲ್ಲಿ ಕನ್ನಡದ ವಿಜ್ಞಾನ 'ಸುಲಿದ ಬಾಳೆಯ ಹಣ್ಣಿನಂದದಿ' ಎನ್ನಿಸಿತು. ಶಬ್ದ ಕುರಿತು ಬರೆಯುವಾಗ ನಾದಕ್ಕೂ ಒತ್ತುಕೊಟ್ಟು ಸಂಗೀತದ ನೆಲೆಯಲ್ಲಿ ವಿಜ್ಞಾನವನ್ನು ಕಂಡರು. ಆ ಕಿರುಕೃತಿಯನ್ನು ಈಗಲೂ ವಿಜ್ಞಾನ ಮತ್ತು ಕಲೆಯ ಸಂಗಮ ಎನ್ನುವುದುಂಟು.



ಆರ್.ಎಲ್. ನರಸಿಂಹಯ್ಯನವರ ಕನ್ನಡ ವಿಜ್ಞಾನ ಪರಿಚಾರಿಕೆಯನ್ನು ಕನ್ನಡದ ಅತಿರಥಿ ಮಹಾರಥಿಗಳು ಮೆಚ್ಚಿದರು. ನಿಟ್ಟೂರು ಶ್ರೀನಿವಾಸ ರಾವ್, ಡಿ.ಎಲ್. ನರಸಿಂಹಚಾರ್, ಪು.ತಿ.ನ. ಜಿ.ಪಿ. ರಾಜರತ್ನಂ, ಶಿವರಾಮ ಕಾರಂತ, ಎ.ಎನ್. ಮೂರ್ತಿರಾವ್, ಜೆ.ಆರ್. ಲಕ್ಷ್ಮಣರಾವ್ ಅವರೊಡನೆ ಆರ್.ಎಲ್.ಎನ್.ಗೆ ನಿಕಟ ಸಂಪರ್ಕವಿತ್ತು, ವಿಚಾರ ವಿನಿಮಯವಿತ್ತು. ಪು.ತಿ.ನ. ಅವರು ಒಂದೆಡೆ ಆರ್.ಎಲ್. ಎನ್. ಅವರನ್ನು ಕುರಿತು 'ನರಸಿಂಹಯ್ಯನವರು ತಮ್ಮ ತೀಕ್ಷ್ಮವೂ ಸಂತತ ಕುತೂಹಲಿಯೂ ಆದ ವೈಜ್ಞಾನಿಕ ನಿಷ್ಠೆಯಿಂದ ತಮ್ಮ ಭಾವಾಕರತೆಯನ್ನು ಹೆಚ್ಚಿ ಮಾಡಿಕೊಳ್ಳುತ್ತಿದ್ದರೇ ವಿನಾ ಕುಂಠಿತಗೊಳಿಸಿಕೊಳ್ಳಲಿಲ್ಲ' ಎಂದಿದ್ದಾರೆ. ಕನ್ನಡ ವಿಜ್ಞಾನಕ್ಕೆ ಸಂಬಂಧಿಸಿದಂತೆ ಆರ್.ಎಲ್. ಎನ್. ದ್ರೋಣಾಚಾರ್ಯರೇ ಸರಿ, ವಿಜ್ಞಾನದ ಕಾಲುದಾರಿಯನ್ನು ಹೆದ್ದಾರಿಯನ್ನಾಗಿ ಮಾರ್ಪಡಿಸಿದ ಕೀರ್ತಿ ಅವರದು.

**ವಟವೃಕ್ಷದ ಟಿಸಿಲುಗಳು**

ವಿಜ್ಞಾನ ಸಾಹಿತ್ಯಕ್ಕೆ ದೊಡ್ಡ ಕ್ಯಾನ್ವಾಸ್ ಕೊಟ್ಟವರು, ಆರ್.ಎಲ್. ನರಸಿಂಹಯ್ಯನವರ ಹಾದಿಯಲ್ಲಿ ನಡೆದ ಮೂವರು ಅಧ್ಯಾಪಕರು-ಪ್ರೊ. ಜೆ.ಆರ್. ಲಕ್ಷ್ಮಣರಾವ್, ಜಿ.ಟಿ. ನಾರಾಯಣರಾವ್ ಮತ್ತು ಆಡ್ಯನಡ್ಕ ಕೃಷ್ಣಭಟ್ ಅವರು. ಈ ದೃಷ್ಟಿಯಿಂದ ೬೦-೭೦ರ ಕಾಲಘಟ್ಟದಲ್ಲಿ ದೊಡ್ಡ ಪ್ರಮಾಣದಲ್ಲಿ ವಿಜ್ಞಾನ ಸಾಹಿತ್ಯ ಸೃಷ್ಟಿಯಾಯಿತು. ಈ ಪ್ರಕ್ರಿಯೆಯಲ್ಲಿ ವಿವಿಧ ಕ್ಷೇತ್ರದ ವಿಜ್ಞಾನಗಳಿಗೆ ಬಹು ದೊಡ್ಡ ಜಿಗಿತ ಸಿಕ್ಕಿತು. ಜೆ.ಆರ್. ಲಕ್ಷ್ಮಣರಾವ್ ಅವರು ರಸಾಯನ ವಿಜ್ಞಾನದ ಅಧ್ಯಾಪಕರಾಗಿ ಕೆಲಸ ಮಾಡಿದರು. ಇವರು ರಚಿಸಿದ 'ಲೂಯಿ ಪಾಶ್ಚರ್', 'ಮೇಘನಾದ ಸಹಾ', 'ಆರ್ಕಿಮಿಡಿಸ್' ಕೃತಿಗಳು ಜೀವನ ಚಿತ್ರಗಳನ್ನು ಬರೆಯಲು ಈಗಲೂ ಮಾದರಿಯಾಗಿವೆ. ಅವರ ಗೆಲಿಲಿಯೋ ಕೃತಿ ನಾಟಕವಾಗಿ ಹಲವು ಪ್ರದರ್ಶನಗಳನ್ನು ಕಂಡಿತು. ಜನಸಾಮಾನ್ಯರಿಗೆ ಎಂಥ ವಿಜ್ಞಾನ ಬೇಕು? ಎಂದು ಕೇಳುತ್ತಲೇ ಮಾರ್ಗಸೂತ್ರಗಳನ್ನು ಕೊಡುವುದರ ಜೊತೆಗೆ ಅಂಥ ಕೃತಿಗಳನ್ನೇ ಹೊರತಂದರು. ೧೯೬೯ರಲ್ಲಿ ಪ್ರಬುದ್ಧ ಕರ್ನಾಟಕದ ಎರಡು ಚೆನ್ನದ ಸಂಚಿಕೆಗಳನ್ನು ಸಂಪಾದಿಸುವ ಹೊಣೆ ಇವರದಾಗಿತ್ತು. ವಿಜ್ಞಾನಿಗಳು, ವಿಜ್ಞಾನದ ಇತಿಹಾಸವನ್ನು ಒಳಗೊಂಡಿರುವ ಈ ಸಂಪುಟಗಳು ಕನ್ನಡ ವಿಜ್ಞಾನ ಸಾಹಿತ್ಯಕ್ಕೆ ಕೊಟ್ಟ ಅಪೂರ್ವ ಕೊಡುಗೆ, ಕುವೆಂಪು ಅವರ ವಿಜ್ಞಾನದ ಪ್ರೀತಿ ಇವರಿಗೆ ಪ್ರೇರಣೆ ಕೊಟ್ಟಿತು. ಮುಂದೆ ವಿಜ್ಞಾನ ಸಾಹಿತ್ಯವನ್ನು ಪೋಷಿಸಲು 'ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು' ಎಂಬ ಸಂಸ್ಥೆಯನ್ನು ಹುಟ್ಟುಹಾಕಲು ಇವರು ಭದ್ರ ಬುನಾದಿ ಹಾಕಿದರು. ವಿಜ್ಞಾನ ಲೇಖಕರು ಪಾರಿಭಾಷಿಕ ಶಬ್ದಗಳ ನಿಖರತೆಯ ಬಗ್ಗೆ ಗೊಂದಲದಲ್ಲಿದ್ದಾಗ ಹಿರಿಯ ವಿಜ್ಞಾನ ಲೇಖಕ ಪ್ರೊ. ಅಡ್ಯನಡ್ಕ ಕೃಷ್ಣಭಟ್ ಅವರ ಜೊತೆಗೂಡಿ 'ಇಂಗ್ಲಿಷ್-ಕನ್ನಡ ಶಬ್ದಕೋಶ'ವನ್ನು ಹೊರತಂದರು. ಅನುವಾದಕರಿಗೆ ಇದು ಪರಾಮರ್ಶನ ಗ್ರಂಥವಾಗಿ ಈಗಲೂ ಬಳಕೆಯಾಗುತ್ತಿದೆ.

ಜಿ.ಟಿ. ನಾರಾಯಣರಾವ್ ಅವರು ಗಣಿತ ಬೋಧಕರು. ವಿಜ್ಞಾನ ಸಾಹಿತ್ಯ ಎತ್ತರಕ್ಕೆ ಬೆಳೆಯಲು ಸಾಹಿತ್ಯ ಹೇಗೆ ನೆರವಾಗುತ್ತದೆ ಎಂದು ತೋರಿಸಿಕೊಟ್ಟವರು. ವ್ಯಕ್ತಿ ಚಿತ್ರಣಗಳನ್ನು ಬರೆಯುವಲ್ಲಿ ಸಿದ್ಧಹಸ್ತರು. 'ಶ್ರೀನಿವಾಸ ರಾಮಾನುಜಂ', 'ಐನ್‌ಸ್ಟೈನ್

ಬಾಳಿದರಿಲ್ಲಿ', 'ಸಪ್ತಸಾಗರದಾಚೆಯಲ್ಲೋ' ಮುಂತಾಗಿ ವಿಜ್ಞಾನವನ್ನೇ ಕುರಿತಂತೆ ೫೦ಕ್ಕೂ ಮಿಕ್ಕಿ ಕೃತಿಗಳನ್ನು ಪ್ರಕಟಿಸಿದ್ದಾರೆ. ಸಾಹಿತ್ಯ ಮತ್ತು ವಿಜ್ಞಾನದ ನಡುವೆ ಪವಿತ್ರ ಮೈತ್ರಿಗೆ ದುಡಿದವರು. ಭಾಷೆಯನ್ನು ಎಚ್ಚರಿಕೆಯಿಂದ ಬಳಸಬೇಕೆಂದು ಅವರು ತೋರಿಸಿಕೊಟ್ಟಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ ೧೯೬೯ರಿಂದ ೨೦೦೧ಳರವರೆಗೆ ಹೊರತಂದ ೧೪ ಸಂಪುಟಗಳ 'ಕನ್ನಡ ವಿಶ್ವಕೋಶ'ದಲ್ಲಿ ವಿಜ್ಞಾನ ವಿಭಾಗದ ಸಂಪಾದಕರಾಗಿ ಸಾವಿರಾರು ವಿಜ್ಞಾನ ಲೇಖನಗಳನ್ನು ಪರಿಷ್ಕರಿಸಿರುವುದು ಇವರ ಸಾಮರ್ಥ್ಯಕ್ಕೆ ಸಾಕ್ಷಿ. ಕನ್ನಡವು ವಿಜ್ಞಾನ ಭಾಷೆಯಾಗಿ ಬೆಳೆದಿದೆಯೆಂದು ಈ ೧೪ ಸಂಪುಟಗಳು ಎತ್ತಿತೋರಿಸಿವೆ. ಪ್ರತಿ ತಾಂತ್ರಿಕ ಪದಕ್ಕೆ ಶಿಷ್ಟತೆಯನ್ನು ಕೊಟ್ಟು ಕನ್ನಡದಲ್ಲಿ ವಿಜ್ಞಾನ ಬರೆಯುವವರಿಗೆ ಧೈರ್ಯ ತುಂಬಿದವರು. ಆಕಾಶ ವೀಕ್ಷಣೆಗೆ ರೇಡಿಯೋ ಬಳಸಿಕೊಂಡು ಹೊಸ ಜಗತ್ತನ್ನೇ ಅನಾವರಣಗೊಳಿಸಿದರು. ಈಗಲೂ ಇದೊಂದು ಚಾರಿತ್ರಿಕ ಮಹತ್ವದ ಸಂಗತಿಯಾಗಿದೆ.

ಕನ್ನಡ ವಿಜ್ಞಾನ ಸಾಹಿತ್ಯವನ್ನು ಪ್ರತಿ ಹಂತದಲ್ಲೂ ಗಟ್ಟಿಗೊಳಿಸುತ್ತ ಹೋದವರು ಭೌತವಿಜ್ಞಾನ ಅಧ್ಯಾಪಕರಾದ ಅಡ್ಯನಡ್ಕ ಕೃಷ್ಣಭಟ್ ಅವರು. ಅವರ ಬಹುಮುಖ್ಯ ಕಾಣಿಕೆ ನಿರಂಜನರ ಸಂಪಾದಕತ್ವದಲ್ಲಿ ಬಂದ 'ಜ್ಞಾನಗಂಗೋತ್ರಿ' ಕಿರಿಯರ ವಿಶ್ವಕೋಶದ ವಿಜ್ಞಾನ ವಿಭಾಗದ ಸಂಪಾದಕತ್ವ ಆ ಹೊತ್ತಿಗೆ ಪ್ರಚಲಿತವಿದ್ದ ಮತ್ತು ಜಗತ್ತಿನ ಗಮನ ಸೆಳೆದಿದ್ದ ಎಲ್ಲ ಸಂಗತಿಗಳನ್ನೂ ಕಿರಿಯರ ವಿಶ್ವಕೋಶದಲ್ಲಿ ಸೇರಿಸಿರುವುದು ಇವರ ವಿದ್ವತ್ತಿಗೆ ಒಂದು ನಿದರ್ಶನ. 'ಫಿಸಿಕ್ಸ್ ಮತ್ತು ಐನ್‌ಸ್ಟೈನ್', 'ಗ್ರಹಣ', 'ಗಗನಯುಗ', 'ಸಿ.ವಿ. ರಾಮನ್', 'ಮನುಷ್ಯನ ಕಥೆ' ಮುಂತಾದ ಕೃತಿಗಳಲ್ಲಿ ವಿಜ್ಞಾನ ನಿಸ್ಸಾರವಾಗದಂತೆ ನೋಡಿಕೊಂಡು ಹೊಸ ತಲೆಮಾರಿಗೆ ಪ್ರೇರಕರಾದವರು. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಮುಖಪತ್ರಿಕೆ 'ಬಾಲವಿಜ್ಞಾನ'ದ ಪ್ರಧಾನ ಸಂಪಾದಕರಾಗಿ ವಿಜ್ಞಾನ ಪತ್ರಿಕೆಗಳು ಹೇಗಿರಬೇಕು ಎಂದು ತೋರಿಸಿಕೊಟ್ಟವರು. ಈ ಮೂವರೂ ವಿಜ್ಞಾನ ಸಾಹಿತ್ಯ ಬೆಳೆಸುವ ಕಾಲಘಟ್ಟದಲ್ಲಿ ವಿಜ್ಞಾನದಲ್ಲಿ ಅಭೂತಪೂರ್ವ ಬೆಳವಣಿಗೆಗಳಾಗುತ್ತಿದ್ದವು. ವಿಶೇಷವಾಗಿ ಜೀವಿವಿಜ್ಞಾನ, ತಂತ್ರಜ್ಞಾನಕ್ಕೆ ತಳಕುಹಾಕಿಕೊಂಡಿತು. ಖಗೋಳವಿಜ್ಞಾನ ಭೌತವಿಜ್ಞಾನದ ಮೂಲಸೂತ್ರಗಳನ್ನು ಅನುಸರಿಸಿಕೊಂಡು ದೊಡ್ಡ ಪ್ರಮಾಣದಲ್ಲಿ ವಿಸ್ತರಣೆಯಾಗಿತ್ತು. ಇಂಥ ಬೆಳವಣಿಗೆಗಳನ್ನು ಶಕ್ತಯುತವಾಗಿ ಲೇಖನ ಮತ್ತು ಕೃತಿಗಳ ಮೂಲಕ ಹಿಡಿದಿಟ್ಟು ಒಂದು ಹೊಸ ಪರಂಪರೆಯನ್ನೇ ಸೃಷ್ಟಿಸಿದರು. ನಮ್ಮ ತಲೆಮಾರಿನ ಲೇಖಕರ ಅವರು ನಿರ್ಮಿಸಿದ ಹಾದಿಯಲ್ಲೇ ಗಮನಿಸುತ್ತಿದ್ದಾರೆ.

**ವಿಜ್ಞಾನಕ್ಕೆ ಸಾಹಿತ್ಯದ ಗಂಧ**

ವಿಜ್ಞಾನಕ್ಕೆ ಬಿಗಿಮೊಗವಿದೆ ಎಂದು ಭಾವಿಸಿದ್ದ ಕನ್ನಡ ಓದುಗರಿಗೆ ತಮ್ಮ ಅಭಿಪ್ರಾಯ ಬದಲಾಯಿಸುವಂಥ ಕಾಲವೂ ಬಂತು. ಈ ಹೊಸಗಾಳಿಗೆ ಕಾರಣರಾದವರು 'ಮೂವರು ಮಾನ್ಯರು'-ಪ್ರೊ. ಬಿ.ಜಿ.ಎಲ್. ಸ್ವಾಮಿ ಅವರು ಹೆಚ್ಚು ಜೀವಿತಾವಧಿಯನ್ನು ಸವೆಸಿದ್ದು ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ, ತಮಿಳು ತಲೆಗಳ ನಡುವೆಯೇ ಕೂತು

ಕನ್ನಡದ ವಿಶಿಷ್ಟ ಕೃತಿಗಳನ್ನು ಬರೆದರು. ಅವರು ಬರೆದ 'ಹಸುರು ಹೊನ್ನು' ಕನ್ನಡದ ಮನೆಮಾತಾಯಿತು. ಜನಸಾಮಾನ್ಯರು ವಿಜ್ಞಾನದ ಸ್ವಾದ ಕಂಡುಕೊಂಡರು. ಕನ್ನಡ



ಸಾರಸ್ವತ ಸಾಗರಕ್ಕೆ ಹೊಸ ನೀರು ಹರಿಯಿತು. ಸಸ್ಯವಿಜ್ಞಾನದ ವಿದ್ಯಾರ್ಥಿಗಳಿಗೆ ಕಾಡಿನ ಪರಿಚಯ, ಅಲ್ಲಿನ ವಿಶೇಷ ಸಸ್ಯಗಳ ಪರಿಚಯ ಮಾಡುವುದು ಕೃತಿಯ ಹೂರಣವಾದರೂ ಇಲ್ಲಿ ಹಾಸ್ಯವಿದೆ, ಶಾಸ್ತ್ರೀಯ ಅಧ್ಯಯನವಿದೆ, ಪ್ರವಾಸಿ ಸಾಹಿತ್ಯದ ನಿರೂಪಣೆ ಇದೆ. ಹಲವು ಭಾಷೆಗಳನ್ನು ಬಲ್ಲ ಬಿ.ಜಿ.ಎಲ್. ಸ್ವಾಮಿ ಅವರ ವಿದ್ವತ್ತು ಸಸ್ಯ ವಿವರಣೆಯಲ್ಲಿ ಎದ್ದು ಕಾಣುತ್ತದೆ. ಮನುಷ್ಯ-ಮನುಷ್ಯರ ನಡುವಿನ ಸಂಬಂಧ, ಅಧ್ಯಾಪಕ-ವಿದ್ಯಾರ್ಥಿಗಳ ಸಂಬಂಧ ಎಲ್ಲವೂ ಕೃತಿಯಲ್ಲಿ ಮುಪ್ಪರಿಗೊಂಡು ಓದುಗರಿಗೆ ವಿಶಿಷ್ಟ ಅನುಭವ ಕೊಟ್ಟ ಕೃತಿ 'ಹಸುರು ಹೊನ್ನು' (೧೯೭೬), ಇದನ್ನು ಕುರಿತು ಕವಿ ಪ್ರೊ. ಕೆ.ಎಸ್. ನಿಸಾರ್ ಅಹಮದ್ ಅವರು ಮೌಲಿಕ ಮಾತುಗಳನ್ನಾಡಿದ್ದಾರೆ: 'ವಿಜ್ಞಾನಿಯೊಬ್ಬ ತನಗಿರುವ ಮಿತಿಯಲ್ಲಿ ತನ್ಮಯತೆಯಿಂದ, ಭಾವುಕತೆಯಿಂದ ಬರೆಯಲು ಸಾಧ್ಯ ಹಾಗೆ ಬರೆದಾಗ ಶುಷ್ಕವಾಗಬಹುದಾದ ವೈಜ್ಞಾನಿಕ ಮಾಹಿತಿಗಳಿಗೂ ಲವಲವಿಕೆಯ ರಂಗುರಂಗಿನ ಕಳೆ ಪ್ರಾಪ್ತವಾಗಬಹುದು'. (ಇದು ಬರಿ ಬೆಡಗಲ್ಲೋ ಅಣ್ಣ-೧೯೮೦).

ಇಂಥ ಪ್ರಯೋಗವೊಂದು ಕನ್ನಡದಲ್ಲಿ ಯಾರೂ ಮಾಡಿರಲಿಲ್ಲ. ಬಿ.ಜಿ.ಎಲ್. ಅವ ಕರ್ತೃ ಶಕ್ತಿ ಪ್ರತಿ ಅಧ್ಯಾಯದಲ್ಲೂ ಎದ್ದುಕಾಣುತ್ತದೆ. 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ', 'ಸಾಕ್ಷಾತ್ಕಾರದ ದಾರಿಯಲ್ಲಿ', 'ಫಲಶ್ರುತಿ', 'ದೌರ್ಗಂಧಿಕಾಪಹರಣ' ಓದಿದವರಿಗೆ ತಾವು ಓದುತ್ತಿರುವುದು ವಿಜ್ಞಾನವಲ್ಲ ಬದಲು ಸಾಹಿತ್ಯ ಕೃತಿಯನ್ನು ಎಂಬ ಅನುಭವವಾಗ ಬಹುದು. 'ಕನ್ನಡ ನುಡಿ', 'ಜೀವನ', 'ಪ್ರಬುದ್ಧ ಕರ್ನಾಟಕ' ಸ್ವಾಮಿಯವರ ಅಪೂರ್ವ ಸಿದ್ಧಿಯ ಪ್ರತೀಕಗಳಾಗಿ ನಿಲ್ಲುತ್ತವೆ. ಶಾಸ್ತ್ರೀಯ ವಿಷಯಗಳನ್ನು ರಸಪಾಕದಲ್ಲಿ ಅದ್ದಿ ತೆಗೆಯುವುದು ಸುಲಭದ ಸಾಧನೆಯಲ್ಲ.

ಸಾಹಿತ್ಯ ಸಹಜವಾಗಿಯೇ ವಿಜ್ಞಾನ ಕೃತಿಗಳಲ್ಲಿ ಮೈದಳೆದು ಹೊಸ ಪರಿಮಳ ನೀಡಿದ ವಿಜ್ಞಾನ ಲೇಖಕರಲ್ಲಿ ಡಾ. ಕೃಷ್ಣಾನಂದ ಕಾಮತ್ ಅವರು ಮುಂಚೂಣಿಯಲ್ಲಿರುವ ಲೇಖಕರ ಪೈಕಿ ಒಬ್ಬರು. ನ್ಯೂಯಾರ್ಕ್ ವಿಶ್ವವಿದ್ಯಾಲಯದಿಂದ ಕೀಟ ವಿಜ್ಞಾನದಲ್ಲಿ ಡಾಕ್ಟೋರೇಟ್ ಪಡೆದು ಮರಳಿದ ಕಾಮತ್ ಅವರು ಪ್ರವಾಸ, ಬರವಣಿಗೆಯಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಿದರು. ವಿಷಯ ಮತ್ತು ನಿರೂಪಣೆಯಲ್ಲಿ ಹೊಸ ಮಾರ್ಗ ಅನುಸರಿಸಿ ಕನ್ನಡಿಗರು ಮರೆಯಲಾಗದಂಥ ಕೃತಿ ಕೊಟ್ಟವರು. 'ಪ್ರಾಣಿ ಪರಿಸರ', 'ಕೀಟ ಪ್ರಪಂಚ', 'ಸಸ್ಯ ಪರಿಸರ', 'ಇರುವೆಯ ಇರುವು', 'ಕಾಗೆಯ ಕಾಯಕ', 'ಸರ್ಪ ಸಂಕುಲ' ಕೃತಿಗಳ ಮೂಲಕ ಹೊಸ ಬಗೆಯ ತಿನಿಸು ಕೊಟ್ಟವರು.

ಈ ಕಾಲಘಟ್ಟದಲ್ಲಿ ವಿಜ್ಞಾನವನ್ನು ಸಾಹಿತ್ಯ ದರ್ಜೆಗೆ ಏರಿಸಿದ ಮತ್ತೊಬ್ಬ ಲೇಖಕ ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅವರ ಹೆಸರು ಹೇಳಿದರೆ ಸಾಕು ಕನ್ನಡಿಗರು ಅವರ 'ಕರ್ವಾಲೋ' ಕೃತಿಯನ್ನು ಕಣ್ಣಮುಂದೆ ತಂದುಕೊಳ್ಳುತ್ತಾರೆ. ಈಗಲೂ ಅದು ಅಗಾಧ ಬೇಡಿಕೆಯಲ್ಲಿರುವ ಕೃತಿ, ಮತ್ತೆ ಮತ್ತೆ ಮರುಮುದ್ರಣವಾಗುತ್ತಿರುವ ಕೃತಿ, ಹಾರುವ ಓತಿ 'ಕರ್ವಾಲೋ' ಕೃತಿಯ ಕೇಂದ್ರಬಿಂದು, ಮಂದಣ್ಣ, ರಾಮಯ್ಯ, ಲಕ್ಷ್ಮಣ ಇವರು ಬದುಕಿನಿಂದ ಎದ್ದುಬಂದು ನಮ್ಮ ಬಳಿಯೇ ಮಾತನಾಡುತ್ತಿದ್ದಾರೋ ಎಂಬ ಭಾವನೆ ಬರುವಂತೆ ಮಾಡುವುದು ಉತ್ಕೃಷ್ಟ ಕಲಾಕಾರನಿಗೆ ಮಾತ್ರ ಸಾಧ್ಯ. ಆಪ್ತ ಪರಿಸರವನ್ನು ನಿರ್ಮಾಣ ಮಾಡುವುದೇ ತೇಜಸ್ವಿ ಅವರ ಕೃತಿಗಳ ಧರ್ಮ. ಕೃತಿಯ ಕೊನೆಗೆ ಹಾರುವ



ಓತಿಯನ್ನು ನೋಡಿದ ಸಂಭ್ರಮವನ್ನು ತೇಜಸ್ವಿ ವಿವರಿಸುವ ಪರಿ ಅದ್ಭುತ. ಇದು ಯಾವುದೇ ಓದುಗನನ್ನು ಪುಟಕ್ಕೆ ಅಂಟಿಕೊಳ್ಳಲು ಪ್ರೇರೇಪಿಸುವ ಕೃತಿಗಳಲ್ಲಿ ಒಂದು. ತೇಜಸ್ವಿ ಅವರ 'ಪರಿಸರದ ಕಥೆಗಳು' ಸ್ವಾನುಭವದ ಮೇಲೆ ನಿಂತಿರುವುದರಿಂದ ಓದುಗರಿಗೆ ಮತ್ತಷ್ಟು ಆಪ್ತವಾಗುತ್ತದೆ.

**ವಿಶ್ವವಿದ್ಯಾಲಯಗಳ ವಿಜ್ಞಾನ ಕೈಂಕರ್ಯ**

ಮದ್ರಾಸ್ ವಿಶ್ವವಿದ್ಯಾಲಯ ಆರಂಭದಿಂದಲೂ ದಕ್ಷಿಣ ಭಾರತ ಭಾಷೆಗಳಿಗೆ ಪ್ರಕಟಣೆಯಲ್ಲಿ ಪ್ರಾಮುಖ್ಯ ಕೊಡುತ್ತ ಬಂದಿದೆ. ಕನ್ನಡದ ಬಗ್ಗೆಯೂ ಅದೇ ಆಸಕ್ತಿಯನ್ನು ತೋರಿ ೧೯೧೨ರಲ್ಲಿ ರೆವೆರೆಂಡ್ ಐ ಫಿಡೆರರ್ ಅವರ ಇಂಗ್ಲಿಷ್ ಕೃತಿಯನ್ನು 'ಹಿಂದೂ ದೇಶದ ಸಸ್ಯ ಶಾಸ್ತ್ರವು' ಎಂದು ಅನುವಾದ ಮಾಡಿಸಿ ಪ್ರಕಟಿಸಿತು. ಇದರ ಜೊತೆಗೆ ವಿಜ್ಞಾನ ಹಸ್ತಪ್ರತಿಗಳಿಗೆ ಬಹುಮಾನವನ್ನು ಕೊಡುವ ಪರಿಪಾಟವನ್ನು ಬೆಳೆಸಿತು. 'ಪರಮಾಣು ಚರಿತ್ರೆ', 'ಖಗೋಳಶಾಸ್ತ್ರ' 'ನ್ಯೂಕ್ಲಿಯರ್ ಫಿಸಿಕ್ಸ್' ಇವೇ ಮುಂತಾದ ಇಂಗ್ಲಿಷ್ ಕೃತಿಗಳ ಕನ್ನಡ ಅನುವಾದವನ್ನು ಇದೇ ವಿಶ್ವವಿದ್ಯಾಲಯ ಪ್ರಕಟಿಸಿದೆ.

ಮೈಸೂರು ವಿಶ್ವವಿದ್ಯಾನಿಲಯವು ಕನ್ನಡ ವಿಜ್ಞಾನ ಪ್ರಸರಣೆಯಲ್ಲಿ ಎಲ್ಲ ವಿಶ್ವವಿದ್ಯಾನಿಲಯ ಮೊದಲ ಪ್ರಕಟಣೆಯಾಗಿ ಎಸ್.ಎನ್. ನರಹರಯ್ಯ ಅವರು ಬರೆದ "ಖಗೋಳ ಶಾಸ್ತ್ರ' ಎಂಬ ಮೊದಲ ಗ್ರಂಥವನ್ನು ಪ್ರಕಟಿಸಿತು. ವಿಶೇಷವೆಂದರೆ ಇದನ್ನು ಬರೆದವರು ನ್ಯಾಯವಾದಿಗಳು. ಇದರ ಹಿಂದೆಯೇ ಆಗಿನ ಕಾಲಘಟ್ಟದಲ್ಲಿ ಜೀವವಿಜ್ಞಾನವನ್ನು ಬೋಧಿಸಲು ಯಾವುದೇ ಪಠ್ಯವಾಗಲಿ, ಆಕರ ಗ್ರಂಥವಾಗಲಿ ಕನ್ನಡದಲ್ಲಿ ಇರಲಿಲ್ಲ. ಭೌತವಿಜ್ಞಾನದ ಅಧ್ಯಾಪಕರಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಬೆಳವಣಿಗೆಗೆ ಪ್ರಮುಖರಾದವರಲ್ಲಿ ಒಬ್ಬರಾದ ಬೆಳ್ಳಾವೆ

ವೆಂಕಟನಾರಣಪ್ಪ ಅವರಿಂದ 'ಜೀವವಿಜ್ಞಾನ' ಎಂಬ ಕೃತಿಯನ್ನು ಬರೆಸಿ ಪ್ರಕಟಿಸಿತು. (೧೯೩೦). ಅನಂತರ ಜನಪ್ರಿಯ ವಿಜ್ಞಾನ ಸಾಹಿತ್ಯಕ್ಕೆ ಬಹುದೊಡ್ಡ ಕಾಣಿಕೆ ನೀಡಿತು. ಇದರಲ್ಲಿ ಬಹು ಮುಖ್ಯವಾದದ್ದು ನಾಲ್ಕು ಸಂಪುಟಗಳಲ್ಲಿ ಈಗ ಹೊರಬಂದಿರುವ ಇಂಗ್ಲಿಷ್-ಕನ್ನಡ ನಿಘಂಟು. ಇದನ್ನು ಪ್ರಕಟಿಸಬೇಕೆಂದು ಮೊದಲು ಸೂಚಿಸಿದ್ದೇ ಬೆಳ್ಳಾವೆ ವೆಂಕಟನಾರಣಪ್ಪನವರು. ಅವರಿಗೆ ಪಾರಿಭಾಷಿಕ ಶಬ್ದಗಳಿಗೆ ನಿಖರವಾದ ಕನ್ನಡ ಸಂವಾದಿ ಪದಗಳು ಲಭ್ಯವಾಗಬೇಕೆಂಬ ಇರಾದೆ ಇತ್ತು. ಈಗ ನಾಲ್ಕು ಸಂಪುಟಗಳು ಸೇರಿ ೧೪,೦೦೦ ಪದಗಳಿಗೂ ಮಿಕ್ಕಿ ವಿಜ್ಞಾನ ತಂತ್ರಜ್ಞಾನ ಪದಗಳಿಗೆ ಕನ್ನಡ ಪದಗಳಿವೆ. ವಿಶೇಷವೆಂದರೆ ಉಚ್ಚಾರಣೆಯನ್ನೂ ನೀಡಲಾಗಿದೆ. ಈ ಮಹತ್ಕಾರ್ಯದಲ್ಲಿ ಭಾಗಿಯಾದವರು ಬೆಳ್ಳಾವೆ ವೆಂಕಟನಾರಣಪ್ಪನವರು, ಪು.ತಿ. ನರಸಿಂಹಾಚಾರ್ ಅವರು. ಕೆ. ಶಿವರಾಮ ಕಾರಂತರು, ಆರ್.ಎಲ್. ನರಸಿಂಹಯ್ಯನವರು ಮತ್ತು ಜೆ.ಆರ್. ಲಕ್ಷ್ಮಣರಾವ್ ಅವರು, ಅನುವಾದಕರಿಗೆ ಈ ಗ್ರಂಥ ಉಪಯುಕ್ತವಾಗಿ ಒದಗಿಬಂದಿದೆ.

೧೯೬೯ರಿಂದ ೨೦೧೪ರವರೆಗ ೧೪ ಸಂಪುಟಗಳಲ್ಲಿ ಹೊರಬಂದ 'ಕನ್ನಡ ವಿಶ್ವಕೋಶ' ಒಂದು ಅಪೂರ್ವ ಪ್ರಯೋಗ. ಇದರ ವಿಜ್ಞಾನ ವಿಭಾಗದ ಸಂಪಾದಕರಾಗಿ ತಮ್ಮ ಜ್ಞಾನವನ್ನು ಎರೆದುಕೊಟ್ಟವರು, ಗಣಿತ ಪ್ರಾಧ್ಯಾಪಕ ಜಿ.ಟಿ. ನಾರಾಯಣ ರಾವ್ ಅವರು. ಇದರಲ್ಲಿ ೫,೦೦೦ ಮಿಕ್ಕಿ ವಿಜ್ಞಾನ, ತಾಂತ್ರಿಕ ಲೇಖನಗಳಿವೆ. ಪಾರಿಭಾಷಿಕ ಪದಗಳು



ಏಕರೂಪವಾಗಿ ಇರಬೇಕೆಂಬ ಉದ್ದೇಶದಿಂದ ಜಿ.ಟಿ.ಎನ್. ವಿಜ್ಞಾನ ತಂತ್ರಜ್ಞಾನ ಲೇಖನಗಳನ್ನು ಬಹುತೇಕ ಮರುಸೃಷ್ಟಿ ಮಾಡಿರುವುದು ಒಂದು ವಿಶೇಷ. ಕೆಲವು ಕ್ಷೇತ್ರಗಳ ಲೇಖನಗಳು ಇಂಗ್ಲಿಷ್ ಭಾಷೆಯಲ್ಲಿ ಇದ್ದುದರಿಂದ ಅವರೇ ಅನುವಾದ ಮಾಡುವ ಕೆಲಸವನ್ನೂ ಪ್ರೀತಿಯಿಂದ ಮಾಡಿದರು. ಈ ಇಡೀ ೧೪ ಸಂಪುಟಗಳ ಸಿ.ಡಿ. ರೂಪವನ್ನು ೨೦೦೬ರಲ್ಲಿ ಕನ್ನಡ ಗಣಕ ಪರಿಷತ್ತು ಹೊರತಂದಾಗ ಹೊಸದಾಗಿ ಅನೇಕ ಅಂಶಗಳನ್ನು ಹಿಂದಿದ್ದ ಲೇಖನಗಳಿಗೆ ಸೇರಿಸಲಾಯಿತು. ಇದರ ಜೊತೆಗೆ ಶ್ರವ್ಯ ಮತ್ತು ದೃಶ್ಯವಿರುವ ಹಲವು ನಮೂದುಗಳು ಇದರಲ್ಲಿದೆ. ಕನ್ನಡ, ವಿಜ್ಞಾನ ಭಾಷೆಯೂ ಹೌದು ಎಂದು ತೋರಿಸಿಕೊಟ್ಟದ್ದು ಈ ಸಂಪುಟಗಳ ಹೆಚ್ಚಳ.

ಇದೇ ವಿಶ್ವವಿದ್ಯಾನಿಲಯ ನಾಲ್ಕಾಣೆ ಪುಸ್ತಕಗಳಾಗಿ ಕಿರಿಗಾತ್ರದ ಪುಸ್ತಕಗಳನ್ನು 'ಪ್ರಚಾರೋಪನ್ಯಾಸ ಮಾಲೆ' ಎಂಬುದರಡಿಯಲ್ಲಿ ಪ್ರಕಟಿಸಿತು. ತಜ್ಞರು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಉಪನ್ಯಾಸ ನೀಡಿ, ಅದನ್ನು ಪುಸ್ತಕ ರೂಪದಲ್ಲಿ ತರಬೇಕೆಂಬ ಯೋಜನೆ ಈ ಮೂಲಕ ಅದ್ಭುತ ಯಶಸ್ಸು ಕಂಡಿತು. 'ಲೂಯಿಪಾಶ್ಚರ್', 'ಪ್ರಾಚೀನ ಭಾರತೀಯರ ಎಂಜಿನಿಯರಿಂಗ್ ಕೌಶಲ' ಮುಂತಾದವು ಈ ಮಾಲೆಯಲ್ಲೇ ಪ್ರಕಟವಾದವು. ಈ ವಿಶ್ವವಿದ್ಯಾನಿಲಯದ

ಪ್ರಸಾರಾಂಗ ವಿಜ್ಞಾನ ಪ್ರಸಾರಕ್ಕಾಗಿ ಇನ್ನೂ ಕೆಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ಒಂದು 'ಗೃಹಸರಸ್ವತಿ ಗ್ರಂಥ ಮಾಲೆ'. “ನಿಮ್ಮ ದೇಹವನ್ನು ತಿಳಿಯಿರಿ', 'ಸಾಮಾನ್ಯ ರೋಗಗಳು', 'ವೈದ್ಯವಿಜ್ಞಾನ ಸಾಧಕರು ಮುಂತಾದ ೩೦ಕ್ಕೂ ಹೆಚ್ಚು ಕೃತಿಗಳನ್ನು ಹೊರತಂದಿದೆ. ಇದರ ಜೊತೆಗೆ ಆರ್.ಎಲ್. ನರಸಿಂಹಯ್ಯ ಸ್ಮಾರಕ ಪುಸ್ತಕಗಳು ಅಷ್ಟೇ ಜನಪ್ರಿಯವಾಗಿವೆ. ಪರಿಸರ ಮಾಲಿನ್ಯ', 'ಕಂಪ್ಯೂಟರ್', ಸೌರಶ್ಯತಿ' ಮುಂತಾದವು ಈ ಮಾಲೆಯ ಬಂದಿವೆ. ವಿಶೇಷವೆಂದರೆ ೧೯೭೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಸಂಸ್ಥೆಯ ಮೂಲಕ ಒಂದು ವಿಜ್ಞಾನ ಕಮ್ಮಟವನ್ನೂ ಏರ್ಪಡಿಸಿತ್ತು- 'ವಿಜ್ಞಾನ ಸಾಹಿತ್ಯ ನಿರ್ಮಾಣ' (೧೯೬೧). ಇದರ ಮುಖ್ಯ ಉದ್ದೇಶ ಪಾರಿಭಾಷಿಕ ಪದಗಳ ಬಳಕೆ; ಅವಕ್ಕೆ ಶಿಷ್ಟತೆ ಒದಗಿಸುವುದು, ಅನುವಾದಗಳಲ್ಲಿ ತಳೆಯಬೇಕಾದ ನಿಲುವು ಮುಂತಾದವು. ಇದರಲ್ಲಿ ಶಿವರಾಮ ಕಾರಂತರು, ಜೆ.ಆರ್. ಲಕ್ಷ್ಮಣರಾವ್, ಜಿ.ಟಿ. ನಾರಾಯಣರಾವ್, ಕವಿ ಮತ್ತು ಭೂವಿಜ್ಞಾನ ಅಧ್ಯಾಪಕ ಕೆ.ಎಸ್. ನಿಸಾರ್ ಅಹಮದ್ ಅವರು ಭಾಗವಹಿಸಿದ್ದರು.

ಮೈಸೂರು ವಿಶ್ವವಿದ್ಯಾನಿಲಯದ ಬಹುಮುಖ್ಯ ಪತ್ರಿಕೆ 'ಪ್ರಬುದ್ಧ ಕರ್ನಾಟಕ'ವನ್ನು ಎ.ಆರ್. ಕೃಷ್ಣಶಾಸ್ತ್ರಿಗಳು ೧೯೧೯ರಲ್ಲಿ ಪ್ರಾರಂಭಿಸಿದರು. ಈ ಪತ್ರಿಕೆ ೧೯೨೯ರಿಂದ ವಿಜ್ಞಾನ ಲೇಖನಗಳನ್ನೂ ಪ್ರಕಟಿಸುತ್ತ ಬಂತು. ೧೯೬೩ರ ನಂತರ ವಿಜ್ಞಾನ ವಿಶೇಷಾಂಕಗಳನ್ನು ಪ್ರಕಟಿಸುವ ಮೂಲಕ ಹೊಸ ಹೆಜ್ಜೆ ಇಟ್ಟಿತು. ೧೯೬೯ರಲ್ಲಿ ಪ್ರಬುದ್ಧ ಕರ್ನಾಟಕದ ಚಿನ್ನದ ಸಂಚಿಕೆಗಳು ಬಂದ ನಂತರ ವಿಜ್ಞಾನಕ್ಕೆ ಮೀಸಲಾದ 'ವಿಜ್ಞಾನ ಕರ್ಣಾಟಕ' ಪತ್ರಿಕೆ ಪ್ರಾರಂಭವಾಯಿತು. ಮೊದಲ ಸಂಚಿಕೆಯಲ್ಲೇ ಡಾ. ಹರಗೋವಿಂದ ಖುರಾನ, ಗುರುತ್ವಾಕರ್ಷಣೆ, ಆಧುನಿಕ ಡಾರ್ವಿನಿಸಂ, ಲೇಖನಗಳನ್ನು ಪ್ರಕಟಿಸಿ ಓದುಗರಲ್ಲಿ ಆಸಕ್ತಿ ಕೆರಳಿಸಿತು. ಇದರ ಜೊತೆಗೆ ಸಿ.ವಿ. ರಾಮನ್, ಐನ್‌ಸ್ಟೈನ್, ಡಾರ್ವಿನ್, ವಿಶೇಷಾಂಕಗಳನ್ನು ಪ್ರಕಟಿಸಿದ್ದು ಅವು ಈಗಲೂ ಸಂಗ್ರಹಯೋಗ್ಯ ಸಂಚಿಕೆಗಳಾಗಿವೆ.

ಮೈಸೂರು ವಿಶ್ವವಿದ್ಯಾನಿಲಯನ್ನು ಅನುಸರಿಸಿ, ಬೆಂಗಳೂರು ವಿಶ್ವವಿದ್ಯಾಲಯ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ೬೦ರ ದಶಕದಲ್ಲೇ 'ಪ್ರಚಾರೋಪನ್ಯಾಸ ಮಾಲೆ'ಯನ್ನು ಪ್ರಾರಂಭಿಸಿದವು. ೧೯೨೨ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ 'ವಿಜ್ಞಾನ ಭಾರತಿ' ಷಣ್ಮಾಸ ಪತ್ರಿಕೆಯನ್ನು ಹೊರತಂದಿತು. ೧೯೭೨ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಹೊರತಂದ 'ಜನಪ್ರಿಯ ವಿಜ್ಞಾನ ಪತ್ರಿಕೆ' ವಿಜ್ಞಾನ ಸಾಧಕರ ಮತ್ತು ಸಮಕಾಲೀನ ವಿಜ್ಞಾನ ವಿದ್ಯಮಾನಗಳನ್ನು ಕುರಿತು ಅತ್ಯುತ್ತಮ ಲೇಖನಗಳನ್ನು ಪ್ರಕಟಿಸುತ್ತ ಬಂತು. ಆಡಳಿತಾತ್ಮಕ ಕಾರಣಗಳನ್ನು ನೀಡಿ ೧೯೯೫ರಲ್ಲಿ ಇದರ ಪ್ರಕಟಣೆ ನಿಂತುಹೋಯಿತು. ಹಂಪಿ ವಿಶ್ವವಿದ್ಯಾಲಯ ಕೂಡ ಕೆಲವು ಮೌಲಿಕ ಕೃತಿಗಳನ್ನು, ವಿಶ್ವಕೋಶಗಳನ್ನು ಹೊರತಂದಿವೆ. ಇವುಗಳಲ್ಲಿ ಪ್ರಮುಖವಾದವು ಪ್ರೊ. ಜಿ. ರಾಮಕೃಷ್ಣ ಅವರು ಬರೆದ 'ಭಾರತೀಯ ವಿಜ್ಞಾನದ ಹಾದಿ', ಇದಲ್ಲದೆ 'ಭೌತವಿಜ್ಞಾನ', 'ಸಂಕ್ಷಿಪ್ತ ಭೌತವಿಜ್ಞಾನ ಚರಿತ್ರೆ', 'ಸಂಕ್ಷಿಪ್ತ ಖಗೋಳ ವಿಜ್ಞಾನ ಚರಿತ್ರೆ' 'ಸಂಕ್ಷಿಪ್ತ ರಸಾಯನ ವಿಜ್ಞಾನ ಚರಿತ್ರೆ' ಮುಂತಾದ ಕೃತಿಗಳು. ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಇತಿಹಾಸವನ್ನು ಓದಲು ಬಯಸುವವರಿಗೆ ಅತ್ಯುತ್ತಮ ಪರಾಮರ್ಶನ ಗ್ರಂಥಗಳಾಗಿವೆ. ಇವಲ್ಲದೆ 'ವೈದ್ಯವಿಶ್ವಕೋಶ'. 'ಪ್ರಾಣಿ, ಪಕ್ಷಿ ಸಂಪುಟ' ಇವುಗಳನ್ನು ಕೂಡ ಕನ್ನಡ ವಿಶ್ವವಿದ್ಯಾಲಯ ಹೊರತಂದಿದೆ. ೧೯೯೩ರಲ್ಲಿ ಇದೇ ವಿಶ್ವವಿದ್ಯಾಲಯ ಪ್ರಾರಂಭಿಸಿದ 'ವಿಜ್ಞಾನ ಸಂಗಾತಿ' ಎಂಬ ಪತ್ರಿಕೆ ಓದುಗದಲ್ಲಿ ಹೊಸ ಸಂಚಲನ ಮೂಡಿಸಿತು. ಆರಂಭಕ್ಕೆ `ಸೈನ್ಸ್ ರಿಪೋರ್ಟರ್' ಎಂಬ ಇಂಗ್ಲಿಷ್ ಪತ್ರಿಕೆಯನ್ನು ಅನುಸರಿಸಿ ಲೇಖನಗಳನ್ನು ಪ್ರಕಟಿಸಿತು. ಮಧ್ಯೆ ನಿಂತುಹೋಗಿತ್ತು ಮತ್ತೆ ಪ್ರಕಟಣೆಯನ್ನು ಈಗ ಮುಂದುವರಿಸಿದೆ. ಮಾರುಕಟ್ಟೆಯಲ್ಲಿ ಲಭಿಸದ ಹೊರತು ಇಂಥ ಪತ್ರಿಕೆಗಳ ಮಹತ್ವ ವಿಜ್ಞಾನಾಸಕ್ತರಿಗೆ ತಿಳಿಯುವುದಿಲ್ಲ.

**ಸಂಘ ಸಂಸ್ಥೆಗಳ ಕೊಡುಗೆ**

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಆರಂಭದಿಂದಲೂ ವಿಜ್ಞಾನ ಪ್ರಚಾರಕ್ಕೆ ಒತ್ತುಕೊಟ್ಟಿದೆ. ೧೯೧೬ರಲ್ಲಿ ಸಂಸ್ಥೆಯ ಮುಖಪತ್ರಿಕೆಯಾಗಿ ಹೊರಬಂದ 'ಕನ್ನಡ ನುಡಿ'ಯಲ್ಲಿ ಖ್ಯಾತನಾಮ ಸಾಹಿತಿಗಳು, ವಿಜ್ಞಾನ ಬೋಧಕರು ಲೇಖನಗಳನ್ನು ಬರೆದಿದ್ದಾರೆ-ನಂಗಪುರಂ ವೆಂಕಟೇಶ ಐಯ್ಯಂಗಾರ್, ಬಿ.ಜಿ.ಎಲ್. ಸ್ವಾಮಿ, ಜಿ.ಟಿ. ನಾರಾಯಣ ರಾವ್, ಪಿ. ಶ್ರೀನಿವಾಸ ರಾವ್ ಮುಂತಾದವರು. ೧೯೩೦ರಲ್ಲಿ ನಂಗಪುರಂ ವೆಂಕಟೇಶ ಐಯ್ಯಂಗಾರ್ ಅವರು ಅನುವಾದ ಮಾಡಿದ 'ಜ್ಯೋತಿರ್ವಿನೋದಿನಿ' ಎಂಬ ಪುಸ್ತಕ ಕನ್ನಡ ಸಾಹಿತ್ಯ ಪರಿಷತ್ತಿನ ಮಹತ್ವದ ಪ್ರಕಟಣೆಗಳಲ್ಲಿ ಒಂದು, ಮುಂದೆ ಈ ಸಂಸ್ಥೆ ಬಹು ಮುಖ್ಯ ಲೇಖಕರಿಂದ ಅನೇಕ ವಿಜ್ಞಾನ ಕೃತಿಗಳನ್ನು ಹೊರತಂದಿತು. ಡಾ. ಎಂ. ಶಿವರಾಂ ಅವರ 'ಮನೋಮಂಥನ, ಸೂ ಸುಬ್ರಹ್ಮಣ್ಯಂ ಅವರ 'ಸೂರ್ಯ', ವಿ. ಚೆಲುವರಾಜ ಐಯ್ಯಂಗಾರ್ ಅವರ 'ನಕ್ಷತ್ರಗಳು ಮತ್ತು ಗ್ರಹಗಳು' ಇವುಗಳಲ್ಲಿ ಕೆಲವು. ೧೯೭೯ನೇ ವರ್ಷವನ್ನು ಯುನೆಸ್ಕೋ, 'ಅಂತಾರಾಷ್ಟ್ರೀಯ ಮಕ್ಕಳ ವರ್ಷ'ವೆಂದು ಘೋಷಿಸಿದಾಗ, ಪರಿಷತ್ತು ೧೦೦ ಕೃತಿಗಳನ್ನು ಹೊರತಂದಿತು. ಇವುಗಳಲ್ಲಿ ಕೆಲವು 'ಗುಡುಗು-ಮಿಂಚು', 'ಮಿದುಳು', 'ಚಿನ್ನ', 'ದೂರದರ್ಶಕ', 'ಮನುಷ್ಯನ

ವಂಶಾವಳಿ, 'ಆರ್ಯಭಟ', 'ಬಿಸಿನೀರಿನ ಬುಗ್ಗೆಗಳು' ಮುಂತಾದವು. ಇವು ಅನೇಕ ಮುದ್ರಣಗಳನ್ನು ಕಂಡಿವೆ. ಈಗಲೂ ಪರಿಷತ್ತಿನಲ್ಲಿ ಲಭ್ಯ.



ಕನ್ನಡ ಸಾಹಿತ್ಯ ಪರಿಷತ್ತು ಹಲವು ದತ್ತಿ ನಿಧಿಗಳ ಮೂಲಕ ಹೊಸ ಹೊಸ ವಿಜ್ಞಾನ ಪುಸ್ತಕಗಳನ್ನು ಹೊರತರುತ್ತಿದೆ. ೨೦೧೫ರಲ್ಲಿ ಶತಮಾನೋತ್ಸವ ಆಚರಿಸುವ ಸಲುವಾಗಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಮಾಲೆಯನ್ನು ಪ್ರಾರಂಭಿಸಿತು. ಇದರಲ್ಲಿ ವಿಜ್ಞಾನ- ತಂತ್ರಜ್ಞಾನ ಸಂಪುಟ (ಸಂಪಾದನೆ ಟಿ.ಆರ್. ಅನಂತರಾಮು) ಕನ್ನಡದ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಪರಾಮರ್ಶನ ಗ್ರಂಥವೆಂದು ಪರಿಗಣಿತವಾಗಿದೆ.

ಪ್ರತಿವರ್ಷ ನಡೆಯುವ 'ಸಾಹಿತ್ಯ ಸಮ್ಮೇಳನ'ದಲ್ಲಿ ವಿಜ್ಞಾನ ಗೋಷ್ಠಿಗಳಿಗೂ ಪರಿಷತ್ತು ಅವಕಾಶ ಕಲ್ಪಿಸುತ್ತಿದೆ. ಆ ಮೂಲಕ ಕನ್ನಡಿಗರಲ್ಲಿ ವಿಜ್ಞಾನಾಸಕ್ತಿಯನ್ನು ಬೆಳೆಸುತ್ತಿದೆ.

೧೯೪೬ರಲ್ಲೇ ಆಗಿನ ಮೈಸೂರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿ 'ಪುಸ್ತಕ ಪ್ರಪಂಚ' ಎಂಬ ಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿತು. ಮುಖ್ಯವಾಗಿ ವನಸಾಕ್ಷರರಿಗೆ ಸಾಹಿತ್ಯ ಮತ್ತು ವಿಜ್ಞಾನವನ್ನು ಪರಿಚಯಿಸುವುದು ಇದರ ಉದ್ದೇಶವಾಗಿತ್ತು. ಹೆಚ್ಚಿನ ಪಾಲು, 'ರೀಡರ್ ಡೈಜೆಸ್ಟ್' ಪತ್ರಿಕೆಯಲ್ಲಿ ಬಂದ ಜನಪ್ರಿಯ ಲೇಖನಗಳನ್ನು ಅನುವಾದ ಮಾಡಿಸಿ ಪ್ರಕಟಿಸಲು ಪ್ರಾರಂಭಿಸಿತು. ೨೦೦೧ರಲ್ಲಿ ಈ ಪ್ರಕಟಣೆಯೂ ನಿಂತುಹೋಯಿತು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ೧೯೮೦ರಲ್ಲಿ ಅಸ್ತಿತ್ವಕ್ಕೆ ಬಂದ ಮೇಲೆ ಸಂಸ್ಥೆ 'ಬಾಲವಿಜ್ಞಾನ' ಎಂಬ ಮಾಸಪತ್ರಿಕೆಯನ್ನು ನಿರಂತರವಾಗಿ ಪ್ರಕಟಿಸುತ್ತಿದೆ. ಇದರ ಸಂಪಾದಕತ್ವವನ್ನು ವಹಿಸಿಕೊಂಡವರು ಜೆ.ಆರ್. ಲಕ್ಷ್ಮಣರಾವ್, ಅನಂತರ ಅಡ್ಯನಡ್ಕ ಕೃಷ್ಣ ಭಟ್ ಅವರು. ಇದರ ಜೊತೆಗೆ ಈ ಇಬ್ಬರು ಲೇಖಕರು ಹೊರತಂದಿರುವ ಇಂಗ್ಲಿಷ್-ಕನ್ನಡ ವಿಜ್ಞಾನ ಶಬ್ದದೋಶ (೧೯೯೦) ವಿಜ್ಞಾನ ಲೇಖಕರಿಗೆ ಪಾರಿಭಾಷಿಕ ಪದಗಳ ಬಳಕೆಯ ಬಗ್ಗೆ ಸಂದಿಗ್ಧದಲ್ಲಿದ್ದಾಗ ಉತ್ತಮ ಪರಾಮರ್ಶನ ಗ್ರಂಥವಾಗಿ ಒದಗಿಬಂದಿದೆ. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ವಿವಿಧ ಶಾಖೆಗಳಿಗೆ ಸೇರಿದ ೧೫೦ಕ್ಕೂ ಮಿಕ್ಕಿ ವಿಜ್ಞಾನ ಕೃತಿಗಳನ್ನು ಹೊರತಂದಿದೆ. ಬಹುತೇಕ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ಇದರ ಶಾಖೆಗಳಿವೆ. ಮೂಢನಂಬಿಕೆಗಳ ವಿರುದ್ಧ ಸಂಪನ್ಮೂಲ ವ್ಯಕ್ತಿಗಳು ಜನಜಾಗೃತಿ ಮೂಡಿಸುತ್ತಿದ್ದಾರೆ. ಇದಲ್ಲದೆ ವಿಜ್ಞಾನಿ-ವಿದ್ಯಾರ್ಥಿ ಎಂಬ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಹಮ್ಮಿಕೊಂಡು ಪರಿಣತ ವಿಜ್ಞಾನಿಗಳು, ಯಾವುದಾದರೂ ಪ್ರಚಲಿತ ವಿಜ್ಞಾನ ಸಂಗತಿಗಳ ಬಗ್ಗೆ ಮಾತನಾಡುವ ಮತ್ತು ವಿದ್ಯಾರ್ಥಿಗಳೊಡನೆ

ಸಂವಾದ ಮಾಡುವ ಹೊಸಬಗೆಯ ಯೋಜನೆಯನ್ನು ಜಾರಿಗೆ ತಂದಿತು. ಇದು ವಿಜ್ಞಾನಿಗಳಿಗೂ ವಿದ್ಯಾರ್ಥಿಗಳಿಗೂ ಹೊಸ ಅನುಭವ.

ಕನ್ನಡ ಪುಸ್ತಕ ಪ್ರಾಧಿಕಾರ ೧೯೯೪ರಲ್ಲಿ ಅಸ್ತಿತ್ವಕ್ಕೆ ಬಂದ ಮೇಲೆ ಇದರ ಮೊದಲ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್ ಅವರು ಎರಡು ಮಾಲೆಗಳಲ್ಲಿ ಅನೇಕ ವಿಜ್ಞಾನ ಕೃತಿಗಳನ್ನು ಹೊರತಂದರು. ಒಂದು 'ವಿಜ್ಞಾನ ದೀಪಮಾಲೆ'- ಗೆಲಿಲಿಯೋ, ಎಡಿಸನ್, ಫ್ಲೆಮಿಂಗ್, ಸಿ.ಎನ್.ಆರ್. ರಾವ್ ಇವೇ ಮುಂತಾದವು ಇದರಡಿಯಲ್ಲಿ ಬಂದ ಕೃತಿಗಳು. 'ಮೂಲಭೂತ ಶೈಕ್ಷಣಿಕ ಮಾಲೆ'ಯಲ್ಲಿ ಸೌರಶಕ್ತಿ, ಅಂತರಿಕ್ಷಯಾನ, ಶಬ್ದ- ಶ್ರವಣ ಮುಂತಾದ ಕೃತಿಗಳು. ಇವು ಬಹು ಬೇಗ ಜನಪ್ರಿಯವಾಗಿ ಅನೇಕ ಮುದ್ರಣಗಳನ್ನು ಕಂಡಿವೆ. ಕರ್ನಾಟಕ ವಿಜ್ಞಾನ-ತಂತ್ರಜ್ಞಾನ ಅಕಾಡೆಮಿ ೨೦೦೫ರಲ್ಲಿ ಅಸ್ತಿತ್ವಕ್ಕೆ ಬಂದ ಮೇಲೆ



"ವಿಜ್ಞಾನಲೋಕ' ಎಂಬ ಪತ್ರಿಕೆಯನ್ನು ಹೊರತರುತ್ತಿದೆ. ಕರ್ನಾಟಕದ ಪ್ರಮುಖ ವಿಜ್ಞಾನ ಲೇಖಕರು ಈ ಪತ್ರಿಕೆಗೆ ಬರೆಯುತ್ತಿದ್ದಾರೆ. ಡಾ. ಪಿ.ಎಸ್. ಶಂಕರ್ ಈ ಪತ್ರಿಕೆಯ ಸಂಪಾದಕರು, ಕನ್ನಡದಲ್ಲಿ ಉತ್ತಮ ವಿಜ್ಞಾನ ಕೃತಿಗಳನ್ನು ಬರೆದವರನ್ನು ಗುರುತಿಸಿ ಈ ಸಂಸ್ಥೆ ಪ್ರಶಸ್ತಿಗಳನ್ನು ನೀಡುತ್ತ ಬಂದಿದೆ.

೧೯೫೭ರಲ್ಲಿ ಪ್ರಾರಂಭವಾದ 'ನ್ಯಾಷನಲ್ ಬುಕ್ ಟ್ರಸ್ಟ್' ಭಾರತದ ಸರ್ಕಾರದ ಒಂದು ಪ್ರಕಟಣ ಸಂಸ್ಥೆ. ೧೬ ಭಾಷೆಗಳಲ್ಲಿ ಈವರೆಗೆ ೧೮,೦೦೦ಕ್ಕೂ ಮಿಕ್ಕಿ ಕೃತಿಗಳನ್ನು ಪ್ರಕಟಿಸಿದೆ. ಇಂಗ್ಲಿಷ್‌ನಲ್ಲಿ ಮೊದಲು ಕೃತಿ ರಚನೆ ಮಾಡಿ, ಅವುಗಳನ್ನು ಪ್ರಾದೇಶಿಕ ಭಾಷೆಗೆ ಅನುವಾದಮಾಡಿಸಿ ಒಂದು ದೊಡ್ಡ ಹೆಜ್ಜೆಯನ್ನೇ ಹಾಕಿದೆ. ಇದರಲ್ಲೂ 'ಜನಪ್ರಿಯ ವಿಜ್ಞಾನ ಮಾಲೆ'ಯಡಿ ಕನ್ನಡದ ಅನೇಕ ಅನುವಾದ ಕೃತಿಗಳು ಬಂದಿವೆ. 'ಹವಾಮಾನ ರೀತಿ-ನೀತಿ, "ಏಡ್ಸ್ ಕಾಯಿಲೆಯ ಸವಾಲು', 'ಶಕ್ತಿ' ಮುಂತಾದ ಕೃತಿಗಳು ಈ ಮಾಲೆಯಲ್ಲಿ ಪ್ರಕಟವಾಗಿವೆ. ಇದೇ ಸಂಸ್ಥೆಯ 'ರಾಷ್ಟ್ರೀಯ ಜೀವನ ಚರಿತ್ರೆ' ಮಾಲೆಯಲ್ಲಿ 'ಮೇಘನಾದ ಸಹಾ', 'ಮೋಕ್ಷಗುಂಡಂ ವಿಶ್ವೇಶ್ವರಯ್ಯ', 'ರಾಮನ್ ಮತ್ತು ಅವರ ಪರಿಣಾಮ' ಮುಂತಾದ ಅನುವಾದ ಕೃತಿಗಳು ಹೊರಬಂದಿವೆ. ಇವು ಕೂಡ ಬೇಗ ಪ್ರಸಿದ್ಧಿ ಪಡೆದು ಅನೇಕ ಮುದ್ರಣಗಳನ್ನೂ ಕಂಡಿವೆ. ಅನುವಾದದ ವಿಚಾರದಲ್ಲಿ ಈಗಲೂ ನ್ಯಾಷನಲ್ ಬುಕ್ ಟ್ರಸ್ಟ್ ಸಂಸ್ಥೆ ಮುಂಚೂಣಿಯಲ್ಲಿದೆ.

**ಖಾಸಗೀ ಪ್ರಕಾಶನಗಳ ವಿಜ್ಞಾನ ಪ್ರೀತಿ**

ಲಾಗಾಯ್ತಿನಿಂದ ಖಾಸಗೀ ಪ್ರಕಾಶನ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ಕನ್ನಡ ವಿಜ್ಞಾನ ಸಾಹಿತ್ಯದ ಕೃತಿಗಳನ್ನು ಪ್ರಕಟಿಸುತ್ತಿವೆ. ಈ ಪೈಕಿ ೧೯೭೪ರಲ್ಲಿ ಕರ್ನಾಟಕ ಸಹಕಾರಿ ಪ್ರಕಾಶನದ ಮೂಲಕ 'ಜ್ಞಾನಗಂಗೋತ್ರಿ' ಎಂಬ ವಿಶ್ವಕೋಶ ಏಳು ಸಂಪುಟಗಳಲ್ಲಿ ಹೊರತಂದಿತು. ಇದರ ಪ್ರಧಾನ ಸಂಪಾದಕರು ಹೆಸರಾಂತ ಸಾಹಿತಿ ನಿರಂಜನ ಅವರು. ಸಂಪಾದಕರಾಗಿ ಪ್ರೊ, ಎಲ್.ಎಸ್. ಶೇಷಗಿರಿ ರಾವ್ ಅವರು ತಮ್ಮ ಜ್ಞಾನಧಾರೆಯನ್ನೇ ಈ ಯೋಜನೆಗೆ ಹರಿಸಿದ್ದಾರೆ. ಸರ್ಕಾರವೇ ಹಣಕಾಸಿನ ಜವಾಬ್ದಾರಿಯನ್ನು ನಿರ್ವಹಿಸಿತು. ಈ ಏಳು ಸಂಪುಟಗಳ ಪೈಕಿ 'ಜೀವಜಗತ್ತು', 'ಭೌತಜಗತ್ತು', 'ಯಂತ್ರಜಗತ್ತು' ಸಂಪುಟಗಳನ್ನು ಖ್ಯಾತವಿಜ್ಞಾನ ಲೇಖನ, ಭೌತವಿಜ್ಞಾನ ಬೋಧಕ ಅಡ್ಯನಡ್ಕ ಕೃಷ್ಣಭಟ್ ಸಂಪಾದಿಸಿಕೊಟ್ಟರು. ಆಗಿನ ಕಾಲಘಟ್ಟದ ಬಹುತೇಕ ಎಲ್ಲ ವೈಜ್ಞಾನಿಕ ಸಂಗತಿಗಳನ್ನು ಗಮನಿಸಿ ವಿಶ್ವಕೋಶಗಳಲ್ಲಿ ಅವನ್ನು ಅಳವಡಿಸಿ ಹೊಸ ಮೆರಗನ್ನು ಕೊಟ್ಟಿದ್ದಾರೆ. ವಿನ್ಯಾಸ, ವಿಷಯ, ಚಿತ್ರಗಳ ಯಥೋಚಿಕ ಬಳಕೆ, ನಿರೂಪಣೆಯ ದೃಷ್ಟಿಯಿಂದ ಈ ಸಂಪುಟಗಳು ಅನನ್ಯ ಎನ್ನಬಹುದು. 'ಸಂಚಿ ಫೌಂಡೇಶನ್' ಎಂಬ ಟ್ರಸ್ಟ್ ಈ ಏಳು ಸಂಪುಟಗಳನ್ನು ಡಿಜಟಲೀಕರಣ ಮಾಡುವ ಯೋಜನೆಯನ್ನು ರೂಪಿಸಿದೆ.

ಐ.ಬಿ.ಎಚ್. ಎಂದೇ ಕನ್ನಡಿಗರಿಗೆ ಪರಿಚಿತವಾದ 'ಇಂಡಿಯನ್ ಬುಕ್ ಹೌಸ್ ೭೦ರ ದಶಕದಲ್ಲಿ 'ಮೂಲವಿಜ್ಞಾನ ಪಾಠಮಾಲೆ' ಎಂಬ ಸರಣಿಯನ್ನು ಪ್ರಾರಂಭಿಸಿತು. ಇದರಲ್ಲಿ ಅನುವಾದಗಳಿಗೆ ಹೆಚ್ಚು ಪ್ರಾಮುಖ್ಯ ನೀಡಿತು. 'ಶಬ್ದ', 'ವಿದ್ಯುತ್', 'ಉಷ್ಣ ', 'ಬೆಳಕು'



ಮುಂತಾದವು ಈ ಮಾಲೆಯಲ್ಲಿ ಹೊರಬಂದವು. ಇದರಂತೆ 'ಇಕೋ' ಮಾಲೆಯಲ್ಲಿ 'ಭೂಮಿ ಮತ್ತು ಅದರ ಕಥೆ', 'ಭಾರತೀಯ ರಾಕೆಟ್‌ಗಳು', 'ಕೀಟಗಳು', 'ಮರಗಳು' ಮುಂತಾದ ಕೃತಿಗಳು ಹೊರಬಂದವು. ಕನ್ನಡದಲ್ಲಿ ಅತಿ ಹೆಚ್ಚು ವಿಜ್ಞಾನ ಕೃತಿಗಳನ್ನು ಪ್ರಕಟಿಸಿದರ ಶ್ರೇಯ 'ನವಕರ್ನಾಟಕ ಪ್ರಕಾಶನ' ಸಂಸ್ಥೆಯದು. ಕಳೆದ ೭೦-೮೦ರ ದಶಕದಲ್ಲಿ ರಷ್ಯದ 'ಮಿರ್' ಸಂಸ್ಥೆಯ ಜೊತೆಗೂಡಿ ಅನೇಕ ರಷ್ಯನ್ ಪುಸ್ತಕಗಳನ್ನು ಕನ್ನಡಕ್ಕೆ ತಂದಿತು. 'ಮನೋರಂಜನೆಗಾಗಿ ಭೌತಶಾಸ್ತ್ರ', 'ಎಳೆಯರಿಗಾಗಿ ಜೀವ ವಿಜ್ಞಾನದ ಸಮಸ್ಯೆಗಳು', 'ಅಣುಗಳು', 'ನಾನೇಕ ಅಪ್ಪನಂತೆ' ಮುಂತಾದ ಕೃತಿಗಳು ಹೊರಬಂದವು. ಅವು ಇಂದೂ ಬೇಡಿಕೆಯಲ್ಲಿರುವ ಜನಪ್ರಿಯ ಕೃತಿಗಳು. ಇದೇ ಸಂಸ್ಥೆ ಹೊರತಂದ 'ಜ್ಞಾನವಿಜ್ಞಾನ ಕೋಶ'ದಲ್ಲಿ (ಸಂಪಾದಕರು: ಪ್ರೊ. ಎಂ.ಎ. ಸೇತುರಾವ್ ಮತ್ತು ಕೆ.ಎಲ್. ಗೋಪಾಲಕೃಷ್ಣರಾವ್), ೨೫ ವಿಜ್ಞಾನ ಶಾಖೆಗಳನ್ನೊಳಗೊಂಡಂತೆ ೧೦೦೦ಕ್ಕೂ ಮಿಕ್ಕಿ ಲೇಖನಗಳಿವೆ.

೧,೬೦೦ಕ್ಕೂ ಮಿಕ್ಕಿ ವರ್ಣಚಿತ್ರಗಳಿವೆ. ೧೯೯೮ರಲ್ಲಿ ಇದು ಪ್ರಕಟವಾಗಿ ಈಗ ೨೦,೦೦೦ ಪ್ರತಿಗಳು ಮಾರಾಟವಾಗಿವೆ. ಈಗಲೂ ಇದಕ್ಕೆ ಸತತ ಬೇಡಿಕೆ ಇದೆ.

ಇದೇ ಸಂಸ್ಥೆ ಹೊರತಂದ 'ವಿಜ್ಞಾನ ತಂತ್ರಜ್ಞಾನ ಪದಸಂಪದ' ೧೪,೦೦೦ ತಾಂತ್ರಿಕ ಪದಗಳಿಗೆ ಕನ್ನಡ ಪದಗಳನ್ನೂ ನೀಡಿರುವುದ ಜೊತೆಗೆ ವಿವರಣೆಯನ್ನೂ ಕೊಡುತ್ತದೆ. ಇದು ಪ್ರೌಢಶಾಲಾ ಮಕ್ಕಳಿಂದ ಹಿಡಿದು ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೂ ಅತ್ಯಗತ್ಯ ಮಾಹಿತಿಯನ್ನು ನೀಡುತ್ತದೆ. ಇನ್ನೊಂದು ಯೋಜನೆ 'ವಿಶ್ವಮಾನ್ಯರು' ದೇಶ ವಿದೇಶಗಳ ವಿಜ್ಞಾನಿಗಳ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಪರಿಚಯಮಾಡಿಕೊಡುವ ಕೃತಿಗಳು ಬಹುಬೇಗ ಮರುಮುದ್ರಣಗಳನ್ನು ಕಾಣುತ್ತಿವೆ. ಇನ್ನೊಂದು ಮಹತ್ತರ ಕೃತಿ 'ವಿಜ್ಞಾನದ ಹೆದ್ದಾರಿಯಲ್ಲಿ ಮಹಾತಿರುವು' (ಸಂಪಾದಕರು: ಟಿ.ಆರ್. ಅನಂತರಾಮು, ಇದರಲ್ಲಿ ವಿಜ್ಞಾನದಲ್ಲಿ ೧೯ನೇ ಶತಮಾನದವರೆಗಿನ ಸಾಧನೆ ಮತ್ತು ೨೦ನೇ ಶತಮಾನದಲ್ಲಿ ವಿಜ್ಞಾನ ಕ್ಷೇತ್ರದಲ್ಲಾದ ಅಪೂರ್ವ ಬೆಳವಣಿಗೆ ಕುರಿತು ಆಯಾ ಕ್ಷೇತ್ರದ ವಿಜ್ಞಾನ ಲೇಖಕರು ಬರೆದಿದ್ದಾರೆ.

ಕನ್ನಡದ ಮತ್ತೊಂದು ಪ್ರಕಾಶನ ಸಂಸ್ಥೆ ಸಪ್ನಾ ಬುಕ್ ಹೌಸ್" , ಕನ್ನಡದ ವೈವಿಧ್ಯ ವಿಜ್ಞಾನಿಗಳ ಸಂಕ್ಷಿಪ್ತ ಜೀವನ-ಸಾಧನೆಯ ಪರಿಚಯವಿದೆ. ಇದನ್ನು ಸಂಪಾದಿಸಿದವರು ನಾಡಿನ ಪ್ರಸಿದ್ಧ ಲೇಖಕರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರು. 'ಸಿಗಂಡ್ ಫ್ರಾಯ್ಡ್', 'ವರಾಹಮಿಹಿರ', 'ವಿಲಿಯಂ ಹಾರ್ವೆ' ಮುಂತಾದ ಕೃತಿಗಳು ಇದರಲ್ಲಿ ಸೇರಿವೆ. 'ವರ್ಣಯಮ ಮಕ್ಕಳ ಪುಸ್ತಕಗಳು ಮಾಲೆ'ಯಲ್ಲಿ 'ವಿಸ್ಮಯಕಾರಿ ಭೂಮಿ', 'ವಿಜ್ಞಾನ ಪ್ರಪಂಚ', 'ವಿಶಿಷ್ಟ ಪ್ರಾಣಿಗಳು' ಹಾಗೂ 'ಜ್ಞಾನ-ವಿಜ್ಞಾನ ಮಾಲೆ'ಯಲ್ಲಿ 'ಮಾರ್ಕೋನಿ', 'ಡಾರ್ವಿನ್', 'ಗ್ರಹಾಂಬೆಲ್', 'ಲೂಯಿ ಪಾಶ್ಚರ್' ಮುಂತಾದವರ ಪರಿಚಯವಿದೆ. ಇದಲ್ಲದೆ 'ಜ್ಞಾನ ದೀಪ ಮಾಲೆ' ಎಂಬ ಇನ್ನೊಂದು ಮಾಲೆಯಲ್ಲಿ 'ಅರಣ್ಯ', 'ಮನೋವಿಜ್ಞಾನ', 'ಅವಶ್ಯಕ ತಂತ್ರಜ್ಞಾನ', 'ದೇಹ ಮತ್ತು ಆರೋಗ್ಯ', 'ರಸಾಯನ ವಿಜ್ಞಾನ', 'ಪ್ರಾಣಿಶಾಸ್ತ್ರ, 'ಭೂವಿಜ್ಞಾನ', ಮುಂತಾದ ಕೃತಿಗಳು ಹೊರಬಂದಿವೆ.

ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ತು, 'ಭಾರತ-ಭಾರತಿ' ಪುಸ್ತಕ ಮಾಲೆಯಲ್ಲಿ ೫೦೦ಕ್ಕೂ ಮಿಕ್ಕಿ ಜೀವನ ಚರಿತ್ರೆಗಳನ್ನು ಪ್ರಕಟಿಸಿದೆ. ಇದರಲ್ಲಿ ಖ್ಯಾತನಾಮ ಭಾರತೀಯ ವಿಜ್ಞಾನಿಗಳೂ ಸೇರಿದ್ದಾರೆ. 'ವಿಕ್ರಂ ಸಾರಾಭಾಯಿ', 'ಎಂ.ಎಸ್. ಕೃಷ್ಣನ್', 'ಸಿ.ವಿ. ರಾಮನ್', 'ಸಲೀಂ ಅಲಿ', ಮುಂತಾದವರ ಸಾಧನೆ ಕುರಿತು ಈ ಸಂಸ್ಥೆ ಪ್ರಕಟಿಸಿದೆ.

ವಿಜ್ಞಾನ ಪ್ರಕಟಣೆಯಲ್ಲಿ ಆಸಕ್ತಿ ತಳೆದ ಅನೇಕ ಖಾಸಗಿ ಪ್ರಕಾಶನ ಸಂಸ್ಥೆಗಳಲ್ಲಿ- ಮನೋಹರ ಗ್ರಂಥಮಾಲೆ, ಡಿ.ವಿ.ಕೆ. ಪ್ರಕಾಶನ, ಕಾವ್ಯಾಲಯ, ಅತ್ರಿ ಬುಕ್ ಸೆಂಟರ್, ವಸಂತ ಪ್ರಕಾಶನ, ಅಂಕಿತ ಪ್ರಕಾಶನ, ಗೀತಾ ಬುಕ್ ಹೌಸ್ ಮುಂತಾದವನ್ನು ಸ್ಮರಿಸಬಹುದು.

**ಮಾಧ್ಯಮದಲ್ಲಿ ವಿಜ್ಞಾನ**

ಶ್ರವ್ಯ ಮಾಧ್ಯಮವಾಗಿ ಬಹು ದೊಡ್ಡ ಹೆಸರು ಮಾಡಿರುವ ಆಕಾಶವಾಣಿ ಮೊದಲಿನಿಂದಲೂ ಅದು ರೂಪಿಸುವ ಗುಣಮಟ್ಟದ ಕಾರ್ಯಕ್ರಮಗಳಿಗೆ ಹೆಸರುವಾಸಿ. ವಿಶೇಷವೆಂದರೆ ಅನಕ್ಷರಸ್ಥರನ್ನೂ ಅದು ಮುಟ್ಟುವುದು. ೧೯೭೦ರಿಂದಾಚೆಗೆ ಅತ್ಯಂತ ದೊಡ್ಡ ಪ್ರಮಾಣದಲ್ಲಿ ವಿಜ್ಞಾನ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತ ಬಂದಿದೆ. ಆಧುನಿಕ ವಿಜ್ಞಾನ ಕ್ಷೇತ್ರಗಳಲ್ಲಾದ ಬೆಳವಣಿಗೆಗೆ ಸಂಬಂಧಿಸಿದಂತೆ 'ವಿಜ್ಞಾನದ ಮುನ್ನಡೆ' ಕಾರ್ಯ ಕ್ರಮ, ವಿಜ್ಞಾನದ ಯಾವುದಾದರೂ ಪ್ರಮುಖ ವಿಷಯಕ್ಕೆ ಸೀಮಿತವಾದಂತೆ ಪ್ರತಿ ತಿಂಗಳು 'ವಿಜ್ಞಾನ ಭಾರತಿ' ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿರುವುದರ ಜೊತೆಗೆ ಖ್ಯಾತ ವಿಜ್ಞಾನಿ ಗಳ ಸಂದರ್ಶನಗಳನ್ನೂ ಅದು ಬಿತ್ತರಿಸುತ್ತಿದೆ. ಇದಲ್ಲದೆ ಪ್ರತಿ ವರ್ಷವೂ ಸರಣಿಗಳನ್ನು ರೂಪಿಸುತ್ತಿದೆ. 'ಧರೆಯ ಸಿರಿ', 'ವಿಜ್ಞಾನಯಾನ', ವನ್ಯಜೀವಿಗಳ ರಮ್ಯಲೋಕ', ಸಸ್ಯಸಂಜೀವಿನಿ', 'ಪರಿಸರ ಪಾಠಶಾಲೆ', 'ನಿಸರ್ಗ ಸಂಪದ' ಇವು ಸರಣಿ ಕಾರ್ಯಕ್ರಮಗಳಲ್ಲಿ ಕೆಲವು. ಈ ವರ್ಷ ಜಾಗತಿಕ ಉಷ್ಣತೆ ಹೆಚ್ಚಳ ಕುರಿತು ಸರಣಿ ಕಾರ್ಯಕ್ರಮವೊಂದನ್ನು ರೂಪಿಸಿ ಪ್ರಸಾರ ಮಾಡುತ್ತಿದೆ. ಟಿ.ವಿ. ವಾಹಿನಿಗಳ ಸೆಳೆತದ ಮಧ್ಯೆಯೂ ಆಕಾಶವಾಣಿ ಸಮಾಜಕ್ಕೆ ಬೇಕಾದ ಅತ್ಯುತ್ತಮ ಕಾರ್ಯಕ್ರಮಗಳನ್ನು ಬಿತ್ತರಿಸುವುದರ ಮೂಲಕ ತನ್ನ ಎಂದಿನ ಜನಪ್ರಿಯತೆಯನ್ನು ಈಗಲೂ ಉಳಿಸಿಕೊಂಡಿದೆ.

ಜವಾಹರ್‌ಲಾಲ್ ನೆಹರೂ ತಾರಾಲಯ, ಶ್ರವ್ಯ ಮತ್ತು ದೃಶ್ಯ ಮಾಧ್ಯಮವಾಗಿ ಬೆಂಗಳೂರು ಹೈಗ್ರೆಂಡ್ಸ್ ನಲ್ಲಿ ನಿರಂತರವಾಗಿ ವೈಜ್ಞಾನಿಕ ಕಾರ್ಯಕ್ರಮಗಳನ್ನು ನಡೆಸಿ ಕೊಂಡು ಬರುತ್ತಿದೆ. ೧೯೮೯ರಲ್ಲಿ ಬೆಂಗಳೂರಿನ ಮಹಾನಗರ ಪಾಲಿಕೆಯ ಬೆಂಬಲದಿಂದ ಅದು ಪ್ರಾರಂಭವಾಯಿತು. ಈಗ ಇದರ ಹೊಣೆಯನ್ನು ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಂಬ ಸ್ವಾಯತ್ತ ಸಂಸ್ಥೆ ವಹಿಸಿಕೊಂಡಿದೆ. ಇದರಲ್ಲಿನ 'ಸೈ ಥಿಯೇಟರ್ ಬಳಸಿ ಅನೇಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದೆ. ಆಕಾಶ ವೀಕ್ಷಣೆಯಲ್ಲಿ ಗ್ರಹಣಗಳ ಸ್ಥಾನ, ರಾಶಿವಿನ್ಯಾಸದ ಪರಿಚಯ ವಿದ್ಯಾರ್ಥಿಗಳಲ್ಲಿ ನವೋತ್ಸಾಹವನ್ನು ಮೂಡಿಸುತ್ತಿದೆ. ಇದಲ್ಲದೆ ದೂರದರ್ಶಕಗಳ ಮೂಲಕ ಗ್ರಹಣದ ವೀಕ್ಷಣೆ, ಶನಿ ಗ್ರಹದ ಉಂಗುರ ವೀಕ್ಷಣೆ, ಜನಪ್ರಿಯ

ಕಾರ್ಯಕ್ರಮಗಳಲ್ಲಿ ಒಂದು. ಶಿಕ್ಷಕರಿಗೆ ವಿಜ್ಞಾನ ಕಮ್ಮಟ ಏರ್ಪಡಿಸುತ್ತ ಬಂದಿದೆ. ಪ್ರತಿ ತಿಂಗಳ ಮೂರನೇ ಭಾನುವಾರ ವಿಜ್ಞಾನ ಚಲನಚಿತ್ರ ವೀಕ್ಷಣೆಯೂ ಉಂಟು. ಇಲ್ಲಿನ ಕಾರ್ಯಕ್ರಮಗಳು ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿರುತ್ತವೆ. ಇದರಿಂದಾಗಿ ಗ್ರಾಮೀಣ ವಿದ್ಯಾರ್ಥಿಗಳು ಅತ್ಯಾಸಕ್ತಿಯಿಂದ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ನೆಹರೂ ತಾರಾಲಯದ ರೂವಾರಿ ಪ್ರಸಿದ್ಧ ವಿಜ್ಞಾನಿ ಪ್ರೊ. ಸಿ.ವಿ. ವಿಶ್ವೇಶ್ವರ ಅವರು.

**ಆಧುನಿಕ ವಿಜ್ಞಾನ ಸವಾಲುಗಳು**

೧೯೮೦ರ ನಂತರ ವಿಜ್ಞಾನದ ಎಲ್ಲ ಕ್ಷೇತ್ರಗಳೂ ಭಾರಿ ಜಿಗಿತ ಕಂಡವು. ವಿಶೇಷವಾಗಿ ಅಂತರಿಕ್ಷ ಕುರಿತಂತೆ ದೊಡ್ಡ ಪ್ರಮಾಣದ ಶೋಧಗಳಾದವು. ಅನ್ಯ ಸೌರಮಂಡಲದ ಗ್ರಹಗಳ ಬಗ್ಗೆಯೂ ವಿಜ್ಞಾನಿಗಳಿಗೆ ಆಸಕ್ತಿ ಮೂಡಿ ಅಭೂತಪೂರ್ವ ತಿಳಿವು ಹರಿಯಿತು. ಇದರಂತೆ ಜೀವವಿಜ್ಞಾನ ಕ್ಷೇತ್ರ ತಂತ್ರಜ್ಞಾನದೊಂದಿಗೆ ಬೆಸೆದುಕೊಂಡಿತು. ಕೆಚ್ಚಲಿನಿಂದ ತೆಗೆದ ಕುರಿಯ ಜೀವಕೋಶದಿಂದ 'ಡಾಲಿ' ಎಂಬ ಕುರಿಮರಿಯನ್ನೇ ಸೃಷ್ಟಿಸಲಾಯಿತು. ವೈದ್ಯಕೀಯ ದಲ್ಲಂತೂ ಹೊಸ ಕ್ರಾಂತಿಯೇ ಆಯಿತು. ಈಗ ಅದು ಜೀನ್ ಎಡಿಟಿಂಗ್‌ವರೆಗೆ ತಲುಪಿ ಮನುಷ್ಯನಿಗೆ ಕಾಯಿಲೆ ಬರುವ ಮೊದಲೇ ಅದರ ಮೂಲವನ್ನು ಹುಡುಕುವಲ್ಲಿ ಮತ್ತು ನಿಭಾಯಿಸುವಲ್ಲಿ ಭಾರಿ ಮುನ್ನಡೆ ಸಾಧಿಸಿದೆ. ಹಾಗೆಯೇ ಮಾಹಿತಿ ತಂತ್ರಜ್ಞಾನ ಮಹಾ ಸ್ಫೋಟವನ್ನೇ ಕಂಡಿತು. ಮೊಬೈಲ್‌ಗಳು ಬಳಕೆಗೆ ಬಂದಮೇಲೆ ಸಾಮಾಜಿಕ ಜೀವನ ಶೈಲಿಯೇ ಬದಲಾಯಿತು. ಇವುಗಳನ್ನು ಜನಸಾಮಾನ್ಯರಿಗೆ ಹೆಚ್ಚು ವೈಜ್ಞಾನಿಕ ಭಾರವಿಲ್ಲದೆ ತಿಳಿಯಪಡಿಸುವ ಹೊಣೆಯೂ ವಿಜ್ಞಾನ ಲೇಖಕರಿಗೆ ಸವಾಲಾಗಿದೆ. ಕನ್ನಡದ ಮಟ್ಟಿಗೆ ದೊಡ್ಡ ಪಡೆಯೇ ವಿಜ್ಞಾನ ಸಂವಹನೆಯಲ್ಲಿ ತೊಡಗಿದೆ. ಇನ್ನೂ ವಿಶೇಷವೆಂದರೆ ವಿಭಿನ್ನ ವಿಜ್ಞಾನ ಕ್ಷೇತ್ರಗಳಲ್ಲಿ ಕೆಲಸ ಮಾಡುವವರು ಕೂಡ ಇಂದು ಅತ್ಯಂತ ಗಂಭೀರವಾಗಿ ವಿಜ್ಞಾನ ಸಂವಹನೆಯಲ್ಲಿ ತೊಡಗಿದ್ದಾರೆ. ಇದಕ್ಕೆ ಅನುಕೂಲಕರವೆಂಬಂತೆ ನಿಘಂಟುಗಳು ಕನ್ನಡ ದಲ್ಲಿ ಲಭ್ಯವಿದೆ. ಕಾಲಕಾಲಕ್ಕೆ ಅವು ಪರಿಷ್ಕರಣೆಯಾಗಿ ಲೇಖಕರಿಗೆ ಹೊಸ ಶಬ್ದಗಳಿಗೆ ಅರ್ಥ ವನ್ನೂ ನೀಡುತ್ತಿವೆ. ಅಂತರಜಾಲ ಬಳಕೆಗೆ ಬಂದಮೇಲೆ ವಿಜ್ಞಾನ ಲೇಖಕರು ಪುಸ್ತಕ ಭಂಡಾರಗಳಿಗಿಂತ ಈ ಮೂಲಗಳನ್ನೇ ಹೆಚ್ಚು ಅವಲಂಬಿಸುತ್ತಿದ್ದಾರೆ. ಆದರೂ ವಿಜ್ಞಾನವು ಲೇಖಕರ ಕೈಜಾರಿ ಮುಂದೆ ಹೋಗುವಷ್ಟು ಪ್ರಬಲವಾಗಿದೆ. ಇಂಥ ಸಂದರ್ಭದಲ್ಲಿ ಹೊಸ ತಲೆಮಾರಿನ ಲೇಖಕರನ್ನು ವಿಜ್ಞಾನ ಸಂವಹನ ಕ್ಷೇತ್ರ ಹೆಚ್ಚು ಆಕರ್ಷಿಸಬೇಕಾಗಿದೆ. ಬಹಳಷ್ಟು ಹೊಸ ಬರಹಗಾರರು ತಂತ್ರಜ್ಞಾನದತ್ತ ತಿರುಗುತ್ತಿದ್ದಾರೆ. ಇದರಿಂದ ಆದ ಒಂದು ಲಾಭ ವೆಂದರೆ ಹಿಂದಿನ ತಲೆಮಾರಿನವರ ಅನೇಕ ಮಹತ್ತರ ವಿಜ್ಞಾನ ಕೃತಿಗಳು ಡಿಜಿಟಲೀಕರಣ ಗೊಳ್ಳುತ್ತಿವೆ. ಅಂದರೆ ಮುಂದಿನ ತಲೆಮಾರಿಗೆ ಹಿಂದಿನವರು ರಚಿಸಿದ ಕೃತಿಗಳು ಉಳಿದು ಕೊಳ್ಳುತ್ತವೆ. ವಿಜ್ಞಾನ ತಂತ್ರಜ್ಞಾನ ಸಮ್ಮಿಳಿತವಾಗಿ ಹಒಸ ಮಾರ್ಗ ತೆರೆದುಕೊಳ್ಳುತ್ತಿದೆ. ಆದರೆ ಶುದ್ಧವಿಜ್ಞಾನವಿಲ್ಲದೆ ತಂತ್ರಜ್ಞಾನವಿಲ್ಲ-ಇದರ ತಿಳಿವನ್ನು ಜನಸಾಮಾನ್ಯರಿಗೂ ಹಂಚುವ ಕೆಲಸ ನಿರಂತರವಾಗಿ ನಡೆಯಬೇಕು.

## ಓದುಗರ ಗಮನಕ್ಕೆ

ಈ ಅಧ್ಯಕ್ಷೀಯ ಭಾಷಣದಲ್ಲಿ 'ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ' ಕುರಿತ ಪ್ರಸ್ತಾಪವಿದೆ. ಆದರೆ ಕೃಷಿ, ಅಂತರಿಕ್ಷ, ವೈದ್ಯಕೀಯ, ಪರಿಸರ, ವೈಜ್ಞಾನಿಕ ಕಥೆ, ಕಾದಂಬರಿ, ಅನುವಾದದ ಬಗ್ಗೆ ಹೆಚ್ಚು ಮಾಹಿತಿ ಬಯಸುವವರು, ಕನ್ನಡ ಸಾಹಿತ್ಯ ಪರಿಷತ್ತು ೨೦೧೫ರಲ್ಲಿ ಶತ ಮಾನೋತ್ಸವ ಆಚರಿಸುವ ಸಂದರ್ಭದಲ್ಲಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ'ಯ ಭಾಗವಾಗಿ ಹೊರತಂದ 'ವಿಜ್ಞಾನ-ತಂತ್ರಜ್ಞಾನ: ಸಂಪುಟ-೧೪'- ಈ ಕೃತಿಯಲ್ಲಿರುವ ಮೇಲೆ ಸೂಚಿಸಿ ರುವ ಕ್ಷೇತ್ರಗಳ ಬಗ್ಗೆ ವಿವರವಾಗಿ ಓದಬಹುದು. ಇದರಲ್ಲಿ ಕಳೆದ ನೂರು ವರ್ಷದ ಕನ್ನಡ ವಿಜ್ಞಾನ ಸಾಹಿತ್ಯ ಚರಿತ್ರೆಯ ವಿವರಗಳನ್ನು ದಾಖಲಿಸಿದೆ.

# ಜಾನಪದ ಜಗತ್ತು

# ಜನಪದ ಸಾಹಿತ್ಯ

**- ಡಾ. ಶೈಲಜಾ ಎನ್. ಬಾಗೇವಾಡಿ**

'ಬೆಳಗಾಗಿ ನಾನೆದ್ದು ಯಾರಾರ ನೆನೆಯಲಿ

ಎಳ್ಳು ಜೀರಿಗೆ ಬೆಳೆವಂತ ಭೂಮಿತಾಯಿನ

ಎದ್ದೊಂದು ಗಳಿಗೆ ನೆನೆದೇನ

ಭೂಮಿತಾಯಿ ಹಾಗೂ ಕನ್ನಡ ತಾಯಿಯನ್ನು ವಂದಿಸುತ್ತ ೮೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 'ಜಾನಪದ ಜಗತ್ತು' ಗೋಷ್ಠಿಯ ಅಧ್ಯಕ್ಷರಾದ ಬಿ.ಆರ್. ಪೋಲಿಸ್ ಪಾಟೀಲರಿಗೆ, ನನ್ನೊಂದಿಗೆ 'ಜನಪದ ಸಾಹಿತ್ಯದ ಇತ್ತೀಚಿನ ಒಲವುಗಳು' ಕುರಿತು ಪ್ರಬಂಧ ಮಂಡಿಸಲಿರುವ ಡಾ. ರಾಜಶ್ರೀಯವರಿಗೆ, 'ಜನಪದ ಕಲೆಗಳ ಕುರಿತು' ಪ್ರಬಂಧ ಮಂಡಿಸಲಿರುವ ಡಾ. ಹನುಮಂತರಾವ ದೊಡ್ಡಮನಿಯವರಿಗೆ ಹಾಗೂ ಕನ್ನಡ ನುಡಿ ತೇರಿನಲ್ಲಿ ಭಾಗವಹಿಸಿರುವ ಸಮಸ್ತ ಕನ್ನಡ ಜನಪದ ಮನಸ್ಸುಗಳಿಗೆ ನನ್ನ ಅನಂತ ಶರಣು ಶರಣಾರ್ಥಿ,

ಜನರಿಂದ, ಜನರಿಗಾಗಿ, ಜನರಿಗೋಸ್ಕರ ಇರುವ ಸಾಹಿತ್ಯವೇ ಜನಪದ ಸಾಹಿತ್ಯ ಇದು ಹೃದಯದಿಂದ ಹೃದಯಕ್ಕೆ ಹರಿಯುವ ಅನುಭವ ದ್ರವ್ಯ. ಅನಾಮಿಕತೆ, ಸರಳತೆ, ಜನಪದ ಸಾಹಿತ್ಯದ ಮೂಲ ಸೂತ್ರಗಳು. ಅದರಲ್ಲಿರುವುದು ಬದುಕಿನ ಅಂತಃಸತ್ವ ಜೀವನದ ಸಂದೇಶ ಇದರ ಮೂಲನೆಲೆ ಬದುಕಿನ ಅನುಭಾವಗಳ ಅನುಸಂಧಾನ. ಆದರೆ ಕೆಲವು ವಿದ್ವಾಂಸರ ಪ್ರಕಾರ

'ಪಂಡಿತರುಂ ವಿವಿಧಕಳಾ

ಮಂಡಿತರುಂ ಕೇಳತಕ್ಕ ಕೃತಿಯ ಕ್ಷಿತಿಯೊಳ್

ಕಕಂಡರ್ ಕೇಳ್ಕೊತೆ ಗೊರವರ

ತುಂಡುಚಿಯೇ ಬೀದಿವರೆಯೇ ಬೀರನ ಕತೆಯೇ'

ಎಂದು ಮಧುರಕವಿ ಜನಪದ ಸಾಹಿತ್ಯವನ್ನು ಕುರಿತು ಲಘುವಾಗಿ ಮಾತನಾಡಿರುವರು. ಶಾಸ್ತ್ರದಿಂದಲೂ, ಸಂಸ್ಕೃತ ಪ್ರತಿಭೆಯಿಂದಲೂ ರಚಿತವಾದ ಪ್ರೌಢಸಾಹಿತ್ಯವೇ ಸಾಹಿತ್ಯವೆಂದು, ಜನಸಾಮಾನ್ಯರು ಹೇಳುವ ಹಾಡುಗಳು ಸಾಹಿತ್ಯವಲ್ಲವೆಂದು ಕೆಲವರ ಭಾವನೆಯಾಗಿತ್ತು. ಆದರೆ ಮಾನವನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಜಾನಪದವು ಅತ್ಯಂತ ಮಹತ್ತರ ವಿಷಯವಾಗಿದೆ. ಈ ಐತಿಹಾಸಿಕ ವಿಜ್ಞಾನವು ಬರಿಯ

ಊಹೆಯನ್ನೇ ಅವಲಂಬಿಸಿರುವ ಶಾಸ್ತ್ರವಾಗಿರದೆ ವಾಸ್ತವಿಕ ಆಧಾರಗಳ ಮೇಲೆ ಬೆಳೆಯುತ್ತಿರುವ ವಿಜ್ಞಾನದ ವಿಷಯವಾಗಿದೆ.

ಕನ್ನಡ ಭಾಷೆಗೆ ಸುಮಾರು ೨೫೦೦ ವರ್ಷಗಳ ಇತಿಹಾಸವಿದೆ. ಸಾಹಿತ್ಯಕ್ಕೆ ೧೫೦೦ ವರ್ಷಗಳಿಗೂ ಮಿಗಿಲಾದ ಪ್ರಾಚೀನತೆ ಇದೆ. ಆದರೆ ಅದಕ್ಕೂ ಮಿಗಿಲಾದ ಪ್ರಾಚೀನತೆ ಜನಪದ ಸಾಹಿತ್ಯಕ್ಕಿದೆ. ಮೂಲತಃ ಮಾನವನ ವೈಯಕ್ತಿಕ ಹಾಗೂ ಸಾಮಾಜಿಕ ಅವಶ್ಯಕತೆಯ ಫಲ ಜನಪದ ಸಾಹಿತ್ಯವಾಗಿದೆ. ಹಾಗಾಗಿ ಬಿ.ಎಂ. ಶ್ರೀಯವರು 'ಜನವಾಣಿ ಬೇರು ಕವಿವಾಣಿ ಹೂವು' ಎಂದಿದ್ದಾರೆ. ಶಿಷ್ಟಸಾಹಿತ್ಯಕ್ಕೆ ಜನಪದ ಸಾಹಿತ್ಯವೇ ಮೂಲ ನೆಲೆಯಾಗಿದೆ.

**ಹಿನ್ನೆಲೆ:** ಜಾನಪದಕ್ಕೆ Folklore ಎಂಬ ಪದವನ್ನು ಮೊಟ್ಟಮೊದಲಿಗೆ ಬಳಸಿದವರು ವಿಲಿಯಂ ಜಾನ್ ಥಾಂಸ್. ಇನ್ನು ಕನ್ನಡದಲ್ಲಿ ಜನಪದ ಸಾಹಿತ್ಯವೆಂದು ಮೊದಲಬಾರಿಗೆ ಬಳಕೆ ಮಾಡಿದ್ದು ಗರತಿಯ ಹಾಡುವಿನ ಮುನ್ನುಡಿಯಲ್ಲಿ ಬಿ.ಎಂ.ಶ್ರೀ ಹಾಗೂ ದ.ರಾ. ಬೇಂದ್ರೆಯವರು ಬಳಸಿದ್ದಾರೆ. Folk ಎಂದರೆ 'ಜನಪದ' ವಾದರೆ lore ಎಂದರೆ ಜ್ಞಾನ (Learning or knowledge) ಎಂದರ್ಥ. Folklore ಎನ್ನುವುದಕ್ಕೆ ಜಾನಪದ ಎನ್ನುವ ಅರ್ಥದಲ್ಲಿ ಬಳಸುತ್ತೇವೆ. ಜನಪದವನ್ನು ಕುರಿತಾದದ್ದು ಜಾನಪದ, ಜಾನಪದ ಎಲ್ಲ ಜನಪದ ಸಮೂಹಗಳನ್ನು ಒಳಗೊಂಡದ್ದು, ಜನಪದ ಸಾಹಿತ್ಯ ಜಾನಪದದ ಒಂದು ಭಾಗ. ಜನಪದ ಕಲೆ, ಜನಪದ ನೃತ್ಯ, ಜನಪದ ವೈದ್ಯ, ಜನಪದ ಉಡುಗೆ, ಜನಪದ ಕೃಷಿ ಇವೆಲ್ಲವೂ ಕೂಡಿದಾಗ ಜಾನಪದವಾಗುವುದು.

ಜನಪದ ಸಾಹಿತ್ಯ ಎನ್ನುವುದು ವಾಙ್ಮಯ ರೂಪದ್ದಾಗಿದೆ. ಇದರಲ್ಲಿ ಮುಖ್ಯವಾಗಿ ನಾಲ್ಕು ಪ್ರಕಾರಗಳನ್ನು ಗುರುತಿಸುತ್ತೇವೆ. ೧) ಕಥೆಗಳು ೨) ಗೀತೆಗಳು ೩) ಒಗಟುಗಳು ೪) ಗಾದೆಗಳು.

**ಜನಪದ ಕಥೆ :** ಜನಪದ ಕಥೆಗಳ ಕ್ಷೇತ್ರ ತುಂಬಾ ವಿಶಾಲವಾದುದು, ಜಗತ್ತಿನ ಜನಪದ ಕಥೆಗಳ ತವರು ಭಾರತವೆನ್ನುತ್ತಾರೆ ವಿದ್ವಾಂಸರು, ಕನ್ನಡದ ಅಸಂಖ್ಯ ಕತೆಗಳನ್ನು ಸಂಗ್ರಹಿಸಿ ವಿಂಗಡಿಸಿ ವಿವರಿಸುತ್ತಾ ಹೋದಲ್ಲಿ ದೊರೆಯುವ ವಿಸ್ತಾರವಾದ ಲೋಕಾನುಭವ ನಮ್ಮ ಮುಂದಿನ ಬದುಕನ್ನು ರೂಪಿಸಲು ಶ್ರೇಷ್ಠ ಮಟ್ಟದ ನಿಧಿಯಾಗುತ್ತದೆ. ಜನಪದ ಕಥೆಗಳಿಂದ ಆರೋಗ್ಯ ಪೂರ್ಣವಾದ ಹೊಸ ಸಮಾಜವನ್ನು ನಿರಿಸಲು ಹೆಚ್ಚಿನ ಪೂರಕ ಸಾಮಗ್ರಿ ದೊರೆಯುತ್ತದೆ.

ಜನಪದ ಕಥೆಗಳಲ್ಲಿ ಹಲವು ಪ್ರಕಾರಗಳನ್ನು ವಿಂಗಡಿಸಬಹುದು. ಐತಿಹ್ಯ (Leg- end), ಕಿನ್ನರ ಕಥೆಗಳು (Fairy tales), ಪ್ರಾಣಿ ಕಥೆಗಳು (Animal tales), ನೀತಿ ಕಥೆಗಳು (Fables), ಹಾಗೂ ಪುರಾಣ (myth)

**ಐತಿಹ್ಯಗಳು:** ವಿವರಣಾತ್ಮಕವಾಗಿ ಸೃಷ್ಠಿ ಹಾಗೂ ಆರಂಭವನ್ನು ಕುರಿತಿರುತ್ತದೆ.

ಐತಿಹಾಸಿಕ ಹಾಗೂ ಅರ್ಧ ಐತಿಹಾಸಿಕ ಸಂಗತಿಗಳನ್ನು, ವ್ಯಕ್ತಿಗಳನ್ನು ಉದ್ದೇಶಿಸಿ ದವಾಗಿರುತ್ತದೆ. ಉದಾಹರಣೆ ಸುರಪುರ ಸಂಸ್ಥಾನಕ್ಕೆ ಸಂಬಂಧಿಸಿದ ಐತಿಹ್ಯವಿದೆ. ಸುರಪುರ ನಾಯಕರ ಮೊದಲ ಕೇಂದ್ರ ಸ್ಥಳ ವಾಗಣಗೇರಿ ಆಗಿತ್ತು. ಪಿತಾಂಬರ ಬಹಿರಿ ಪಿಡ್ಡನಾಯಕನು (೧೬೮೭-೧೨೬) ಬೇಟೆಯಾಡಲು ಈಗಿನ ಸುರಪುರ ಇರುವ ಗುಡ್ಡಕ್ಕೆ ಬಂದನು. ಅಲ್ಲಿ ತನ್ನ ಜೊತೆಗೆ ತಂದಿದ್ದ ಬೇಟೆನಾಯಿ ಒಂದು ಮೊಲದ ಬೆನ್ನಟ್ಟಿತು. ನಂತರ ವಿಚಿತ್ರವೆಂದರೆ ಮೊಲವೆ ನಾಯಿಯನ್ನು ಹಿಡಿಯಿತು. ಈ ಸೋಜಿಗ ಕಂಡು ನಾಯಕನು ತನ್ನ ಮೂಲ ಸ್ಥಳ ವಾಗಣಗೇರಿಯನ್ನು ಬದಲಾಯಿಸಿ ಸುರಪುರವನ್ನು ತನ್ನ ಕೇಂದ್ರ ಸ್ಥಾನವನ್ನಾಗಿಸಿದನು (೧೭೦೫) ಇಲ್ಲಿ ಮೊಲವು ನಾಯಿಯನ್ನು ಹಿಡಿಯುವ ಸಂಗತಿ ಅಸಾಧ್ಯವಾದರೂ ನಾಯಕನು ಸುರಪುರವನನು ನಿರ್ಮಿಸಿ ವಾಗಣಗೇರಿಯಿಂದ ತನ್ನ ಆಡಳಿತ ಕೇಂದ್ರವನ್ನು ಸುರಪುರಕ್ಕೆ ಬದಲಾಯಿಸಿದನೆಂಬುದು ಸತ್ಯ ಸಂಗತಿಯಾಗಿದೆ. ಹೀಗಾಗಿ ಇದೊಂದು ಸತ್ಯ ಘಟನೆಯೆಂದು ಭಾವಿಸಲಿಕ್ಕೆ ಸಾಧ್ಯವಾಗದಿದ್ದರೂ ಐತಿಹ್ಯವಾಗಿ ಗುರುತಿಸಬಹುದು. ಇಂತಹ ನೂರಾರು ಐತಿಹ್ಯಗಳು ಇನ್ನು ನಮ್ಮೊಂದಿಗೆ ಜೀವಾಂತವಾಗಿವೆ.

**ಕಿನ್ನರ ಕಥೆಗಳು:** ಪೂರ್ಣವಾಗಿ ಕಾಲ್ಪನಿಕತೆಯಿಂದ ಕೂಡಿದ್ದು ಹೆಚ್ಚು ಜನಪ್ರಿಯತೆಯನ್ನು ಪಡೆದಿವೆ. ಇದು ಮಕ್ಕಳ ನೆಚ್ಚಿನ ಜನಪದ ಕಥಾ ಪ್ರಕಾರವಾಗಿದೆ. ಕಿನ್ನರ ಕಥೆಗಳು ದೇಶ ಪರಟನೆ ಮಾಡುವಷ್ಟು ಮಿಕ್ಕ ಕಥೆಗಳು ಹರಡಿಕೊಳ್ಳುವುದಿಲ್ಲ. ಕೇಳುಗರಲ್ಲಿ ಕುತೂಹಲ, ಕಲ್ಪನಾಶಕ್ತಿಯನ್ನು ಹೆಚ್ಚಿಸುತ್ತವೆ.

**ಪ್ರಾಣಿ ಕಥೆಗಳು:** ಜಗತ್ತಿನ ಎಲ್ಲಡೆಯೂ ಕಂಡುಬರುವ ಜನಪದ ಕಥಾ ಪ್ರಕಾರವೆಮದರೆ ಪ್ರಾಣಿ ಕಥೆಗಳು ಇವುಗಳಲ್ಲಿ ಹೆಚ್ಚಾಗಿ ನೀತಿ ಕಥೆಗಳಿರುತ್ತವೆ. ಉದಾಃ ಜಾತಕ ಕಥೆಗಳು ಇತ್ಯಾದಿ.

**ಪುರಾಣಗಳು:** ಇಂದಿನ ಲೋಕದ ಪೂರ್ವಸ್ಥಿತಿಯ ಸುತ್ತ ಸಾಮಾನ್ಯವಾಗಿ ಈ ಪುರಾಣ ಕಥೆಗಳು ಹೆಣೆದುಕೊಂಡಿರುತ್ತವೆ. ಸ್ಥಿತಿಲಯಗಳಿಗೂ ಇವು ಅನೇಕ ವೇಳೆ ಸಂಬಂಧಪಟ್ಟವಾಗಿರುತ್ತವೆ. ಇದರಿಂದ ಪುರಾಣ ಕಥೆ ಐತಿಹ್ಯಕ್ಕೆ ಸಮೀಪವಾಗುವುದು. ದೇವತೆಗಳ ಸಾಹಸಕ್ಕೆ ಬಣ್ಣ ಹಾಕಿದಾಗ ಅವು ಕಿನ್ನರ ಕಥೆಗಳು ಆಗಬಹುದು. ಹಲವು ಪುರಾಣ ಕಥೆಗಳಲ್ಲಿ ಪ್ರಾಣಿಗಳು ಪ್ರಧಾನವಾಗಿರಬಹುದು. ಕೆಲವೊಮ್ಮೆ ನೀತಿಯೂ ಹೇಳುತ್ತವೆ. ಹಾಗಾಗಿ ಪುರಾಣ ಕಥೆಗಳು ಸಂಕೀರ್ಣ ಸ್ವರೂಪವನ್ನು ಪಡೆಯುತ್ತವೆ. ಅನೇಕ ಸಂದರ್ಭಗಳಲ್ಲಿ ಐತಿಹ್ಯಗಳನ್ನು ಪುರಾಣಗಳನ್ನು ವಿಂಗಡಿಸಲು ಕಷ್ಟವಾಗುತ್ತದೆ. ಆದರೆ ಮುಖ್ಯ ವ್ಯತ್ಯಾಸವೆಂದರೆ ಪುರಾಣಗಳ ಆವರಣ ದೈವಿಕ ಪಾತ್ರಗಳಿಂದ ಕೂಡಿರುತ್ತವೆ.

**ಲಕ್ಷಣ:** ಒಟ್ಟಾರೆ ಜನಪದ ಕಥೆಗಳ ಲಕ್ಷಣ ಇಂತಿದೆ. ಈ ಕಥೆಗಳು ಮುಖ್ಯ ಕ್ರಿಯೆಯಿಂದ ಯಾವತ್ತು ಆರಂಭವಾಗುವುದಿಲ್ಲ. ಅವಸರದಿಂದ ಮುಕ್ತಾಯವಾಗುವುದಿಲ್ಲ. ಆರಂಭದಲ್ಲಿ ನಿಧಾನವಾದ ಪ್ರವೇಶ, ಕಥೆ ಕೇಂದ್ರ ಬಿಂದುವನ್ನು ದಾಟಿದರೂ ಮುಗಿಯದೆ

ಇರಬಹುದು. ಪುನರಾವರ್ತನೆ ಸರ್ವಸಾಮಾನ್ಯ ಪಾತ್ರಗಳ ನಿರ್ವಹಣೆ ನೇರ ಸರಳ ಕಥನಗತಿಯಲ್ಲಿ ಉಪಕಥೆಗಳಿರುವುದಿಲ್ಲ. ಉಪಕಥೆಗಳು ಬಂದರೆ ಅದು ಜನಪದ ಜಾಯಮಾನದ್ದಲ್ಲ. ಇವುಗಳಲ್ಲಿ ವೈವಿಧ್ಯತೆಯನ್ನು ಸಾಧಿಸಬೇಕೆಂಬ ಹಂಬಲವಿಲ್ಲ. ಸರಳತೆ ಸುಲಭೀಕರಣಗಳು ಈ ಕಥೆಗಳ ಪ್ರಧಾನ ಲಕ್ಷಣಗಳು. ಇಲ್ಲಿ ಮನರಂಜನೆ ಮತ್ತು ನೀತಿಬೋಧೆ ಕಂಡುಬಂದರೂ ಆಳದಲ್ಲಿ ಅನ್ಯಾಯದ ವಿರುದ್ಧದ ಪ್ರತಿಭಟನೆಯ ಎಳೆಗಳಿವೆ. ಕನಸುಗಾರಿಕೆ ಇದೆ. ನಾಯಕ ಮತ್ತು ನಾಯಕಿಯರ ನಡುವೆ ಪ್ರತಿನಾಯಕನ ನಾನಾ ಬಗೆಯ ಹಾವಳಿಯ ನಡುವೆಯೂ ನಾಯಕನ ಗೆದ್ದು ಕಥೆ ಸುಖಾಂತವಾಗುತ್ತದೆ. ಕೆಲವೊಮ್ಮೆ ನಂಬಿದ ಮೌಲ್ಯಗಳು ಅಪಮೌಲ್ಯವಾಗುವುದನ್ನು ತಡೆಯುವ ಅನೇಕ ಕಥೆಗಳನ್ನು ಕಾಣುತ್ತೇವೆ. ಉದಾ: ತಾಯಿ ಮಗನ ಅನೈತಿಕ ಸಂಬಂಧದ ಶಟವಿ ಕಥೆ

**ಜನಪದ ಗೀತೆ:** ಜನಪದ ಸಾಹಿತ್ಯ ಶ್ರಮಿಕ ಸಾಹಿತ್ಯವಾಗಿದೆ. ದುಡಿಮೆ ಮತ್ತು ವಿಶ್ರಾಂತಿಯ ಮಧ್ಯದಲ್ಲಿ ಕಟ್ಟಿದ ಬದುಕಿನ ಸಾಹಿತ್ಯ ಇವುಗಳಲ್ಲಿ ಕೆಲಸದ ಹಾಡುಗಳು, ಮಕ್ಕಳ ಹಾಡುಗಳು, ಸಂಪ್ರದಾಯ ಹಾಡುಗಳು, ಲಾವಣಿ ಇತ್ಯಾದಿ ಈ ಹಾಡುಗಳು ನಿರಂತರ ಬೆಳೆಯುತ್ತಲೆ ಇರುತ್ತವೆ. ಒಬ್ಬರಿಂದ ಇನ್ನೊಬ್ಬರಿಗೆ ತಲುಪುತ್ತಾ ಹೊಸ ರೂಪ ಪಡೆಯುತ್ತಲೇ ಇರುತ್ತದೆ. ಹಾಗಾಗಿ ಇದು ಯಾರ ಸ್ವಂತ ರಚನೆಯಲ್ಲ. ಇದು ಜನಸಮುದಾಯದ ಸ್ವತ್ತು.

ಜನಪದ ಹಾಡುಗಳ ಬಹುಪಾಲು ರಚನೆಯ ಕೀರ್ತಿ ಮಹಿಳೆಯರದ್ದು, ಇವರೆಲ್ಲ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎನ್ನುವಂತೆ ಅಕ್ಷರ ಜ್ಞಾನವಿಲ್ಲದಿದ್ದರೂ ಜನಪದ ಹಾಡುಗಳ ರಚನೆಯಲ್ಲಿ ಅವರ ಪಾತ್ರ ಮಹತ್ವದ್ದು. ಮಹಿಳೆಯರು ತಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡು ಅದರ ಏಕತಾನತೆಯಿಂದ ಮುಕ್ತರಾಗಿ ಕೆಲಸದಲ್ಲಿ ಸ್ಫೂರ್ತಿ ಪಡೆಯಲು ರಚನೆಗೊಂಡ ಸಾಹಿತ್ಯ.

'ಹಲಗೆಯ ಹಿಡಿದಿಲ್ಲ ಬಳಪದಿ ಬರದಿಲ್ಲ

ಶ್ರೀಗುರುವು ನಮಗೆ ಕಲಿಸಿಲ್ಲ ಕೇಳಿರಕ್ಕೆ

ಲೆಕ್ಕಣಿಕೆ ನಮಗ ಗೊತ್ತಿಲ್ಲ

ಜನಪದ ಮಹಿಳೆ, ಕುಟ್ಟುವಾಗ, ಬೀಸುವಾಗ, ಕಳೆ ಕೀಳುವಾಗ ಮಕ್ಕಳೊಂದಿಗೆ ಇದ್ದಾಗ ಹೀಗೆ ಕುಟುಂಬದ ಒಟ್ಟು ಬದುಕನ್ನು ಕಟ್ಟಿಕೊಡುವಾಗ ಹೆಣ್ಣಿನ ಜೀವನಶ್ರದ್ಧೆ ಜನಪದ ಕಾವ್ಯದಲ್ಲಿ ಮೂಡಿ ಬಂದಿದೆ. ಅವಳಿಗೆ ಇರುವ ಸೀಮಿತ ಕ್ಷೇತ್ರಗಳ ಅನುಭವಗಳಿಗೆ ಮಾತಿನ ರೂಪ ನೀಡುವ ಸಂದರ್ಭ ಬಂದಾಗ ಈ ಮಿತಿಗಳ ಒಳಗೂ ತನ್ನನ್ನು ಆವರಿಸಿರುವ ಸಂಗತಿಗಳನ್ನು ಅಚ್ಚುಕಟ್ಟಾಗಿ ಚಿತ್ರಿಸುತ್ತಾಳೆ.

ಜೀವನದಲ್ಲಿ ಬರುವ ಸುಖ ದುಃಖಗಳು, ಹುಟ್ಟು-ಸಾವುಗಳು ದಾಂಪತ್ಯದ ಸರಸ- ವಿರಸಗಳು ಹಾಡುಗಳಲ್ಲಿ ದಾಖಲಾಗಿವೆ. ಗರತಿಯರಲ್ಲಿ ಧಾರೆಯಾಗಿ ಹರಿಯುವ ಮಮತೆ, ಮಾಧುರ್ಯ, ತ್ಯಾಗ ಸಹನೆಯ ಗುಣಗಳು ಅವರ ಹಾಡುಗಳಲ್ಲಿ ಗೋಚರಿಸುತ್ತದೆ. ತಂದೆ-



ತಾಯಿಗಳ ಬಗ್ಗೆ ಅವರಿಗಿರುವ ಗೌರವ ಹೀಗೆ ಒಡಮೂಡಿದೆ.

'ತಂದೀನ ನೆನದರ ತಂಗೂಳೆ ಬಿಸಿಯಾಯ್ತು

ಗಂಗಾದೇವಿ ನನ್ನ ಹಡದವ್ವ ನೆನದರ

ಮಾಸೀದ ತಲೆಯು ಮಡಿಯಾಯ್ತು.

ಇನ್ನು ಒಡಹುಟ್ಟಿದವರ ಕುರಿತಾಗಿ ಕಕ್ಕುಲಾತಿಯ ನುಡಿಗಳು ಇಂತಿವೆ. 'ಹೆಣ್ಣಿನ ಜನಮಕ ಅಣ್ಣತಮ್ಮರು ಬೇಕು, ಬೆನ್ನ ಕಟ್ಟುವರು ಸಭೆಯೊಳಗ ಸಾವಿರ ಹೊನ್ನ ಕಟ್ಟುವರು ಉಡಿಯೊಳಗ' ಅಕ್ಕ-ತಂಗಿಯರ ಬಗ್ಗೆ ಇರುವ ಮಮಕಾರಗಳು ಅವಳ ಬದುಕಿನ ಶ್ರದ್ಧೆಗಳನ್ನು ತೋರುತ್ತವೆ. 'ಹಾಲುಂಡ ತವರನ್ನು ಏನೆಂದು ಹರಸಲಿ? ಹಬ್ಬಲಿ ಅವರ ರಸಬಳ್ಳಿ' ಎಂದು ಹಾರೈಸುತ್ತಾಳೆ. ಮಕ್ಕಳು, ಗಂಡ, ತಮ್ಮಂದಿರು ತಪ್ಪು ಮಾಡಿದರೂ ಅದನ್ನು ಹೊಟ್ಟೆಯಲ್ಲಿ ಹಾಕಿಕೊಂಡು ತ್ಯಾಗಮಯಿಯಾಗುತ್ತಾಳೆ. 'ಕೂಸು ಇದ್ದ ಮನಿಗೆ ಬೀಸಣಿಗೆಯಾತಕ, ಕೂಸೂ ಕಂದಮ್ಮ ಒಳಹೊರಗ ಆಡಿದರ ಬೀಸಣಿಕೆ ಗಾಳಿ ಸುಳಿದಾವ' ಎಂದು ಮಕ್ಕಳ ಮೇಲಿನ ವಾತ್ಸಲ್ಯ ತೋರುವಳು. ಇನ್ನು ಗಂಡ ಹೆಂಡಿರ ಜಗಳ ಗಂಧ ತೀಡಿದಂಗ ಎನ್ನುವಂತೆ.

'ಮಡದೀನ ಬಡಿದಾನ ಮನದಾಗ ಮರಗ್ಯಾನ

ಒಳಗೋಗಿ ಸೆರಗ ಹಿಡಿಯೂತ ಕೇಳ್ಯಾನ

ನಾ ಹೆಚ್ಚ ನಿನ್ನ ತವರೆಷ್ಟೋ

ಎಂದು ಸಮಾಧಾನಿಸುವನು. ಸತಿಪತಿಗಳ ಒಲುಮೆ ಇಲ್ಲಿ ಕಂಡುಬಂದರು. ಕೆಲವೊಮ್ಮೆ ಪತಿರಾಯನ ಬೇರೆ ಸಂಬಂಧವನ್ನು ಕುರಿತು ಆಕೆಗೆ ಗೊತ್ತಾದಾಗ ಅವಳು ಹೇಳುವ ಮಾತುಗಳು ಆಶ್ಚರ್ಯ ಹುಟ್ಟಿಸುವಂತದ್ದು

ನಕ್ಕರ ನಗಲೆವ್ವ ನಗೆಮುಖದ ಕ್ಯಾದಿಗಿ

ನಾ ಮುಚ್ಚಿ ಮುಡಿದ ಪರಿಮಳದಾ ಹೂವ

ಅವಳೊಂದ ಬಾರಿ ಮುಡಿಯಲಿ

ಎಂಬ ಉದಾತ್ತ ನುಡಿಗಳನ್ನಾಡುತ್ತಾಳೆ. ಹಾಗಂತ ಸುಮ್ಮನಾಗದೆ ಗಂಡನಿಗೆ ಪ್ರಶ್ನಿಸುತ್ತಾಳೆ. “ಅಂಗಿ ಮ್ಯಾಲಂಗಿ ಛಂದೇನೋ ನನ್ನ ರಾಯ' ರಂಬಿಮ್ಯಾಲ, ಪ್ರತಿರಂಬಿ ಬಂದರ ಛಂದೇನೋ ನನ್ನರಾಯ ಎಂದು ನ್ಯಾಯ ಕೇಳುತ್ತಾಳೆ. ಈ ತರಹದ ಗರತಿಯರ ಹಾಡುಗಳಲ್ಲಿ ಹೆಣ್ಣಿನ ಬದುಕಿನ ನೋಟಗಳನ್ನು ತವರುಮನೆ ಹಾಗೂ ಗಂಡನ ಮನೆಯ ನಡುವೆ ಹೊಯ್ದಾಡುವ ಮನಸ್ಸನ್ನು ನಿಯಂತ್ರಣಕ್ಕೆ ತಂದುಕೊಳ್ಳುತ್ತಾ ಎರಡರ ಅಭಿವೃದ್ಧಿಗಾಗಿ ಹಂಬಲಿಸುವ ತುಡಿತವನ್ನು ಕಾಣಬಹುದು. ಇಡೀ ಕುಟುಂಬಕ್ಕಾಗಿ ತಾನು ಗಂಧದ ಕೊರಡಿನಂತೆ ತೇದುಕೊಂಡರೂ ಪರಿಮಳ ಸೂಸುವ ಪರಿಯನ್ನು ಕಾಣಬಹುದು.

ಜನಪದರಿಗೆ ಬಡತನವು ಬದುಕಿನ ಅವಿಭಾಜ್ಯ ಅಂಗವಾಗಿಯೆ ರೂಢಿಯಲ್ಲಿದ್ದು,



ಜೀವಂತ ಶವಗಳಾಗಿ ಬಡತನದ ಬೇಗೆಯಲ್ಲಿ ಬೆಂದಿರುವ ಅವರಿಗೆ ಹೊಸತಾಗಿ ಸಾವು ಬೇಕಿಲ್ಲ. ಸತ್ತನಂತರ ಸುಡುವುದರ ಅಗತ್ಯವು ಇಲ್ಲ ಎನ್ನುತ್ತಾಳೆ.

'ಬಡವರು ಸತ್ತರೆ ಸುಡುವುದಕ್ಕೆ ಸೌದಿಲ್ಲ

ಒಡಲ ಬೆಂಕೀಲಿ ಹೆಣಬೆಂದೊ-ದೇವರ

ಬಡವರಿಗೆ ಸಾವ ಕೊಡಬ್ಯಾಡ

ಇಂತಹ ಹಾಡುಗಳು ಜನಪದ ಸಾಹಿತ್ಯದಲ್ಲಿ ಮಾತ್ರ ದೊರಕಲು ಸಾಧ್ಯ. ಜನಪದ ಕಾವ್ಯದಲ್ಲಿ ಸಿಕ್ಕಂತಹ ಜೀವನಾನುಭವ ಶಿಷ್ಠ ಕಾವ್ಯದಲ್ಲಿ ಸಿಗಲಾರದು.

**ಕಥನ ಕಾವ್ಯಗಳು:** ಕಥನಕಾವ್ಯಗಳಲ್ಲಿ ಬದುಕಿನ ಜೀವನ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ. ಜನಪದರು ತಾವು ಒಪ್ಪಿಕೊಂಡ ವೈಯಕ್ತಿಕ ಹಾಗೂ ಸಾಮಾಜಿಕ ಮೌಲ್ಯಗಳ ಪ್ರತಿಪಾದನೆಯನ್ನು ಇಂತಹ ಹಾಡುಗಳಲ್ಲಿ ಮಾಡುತ್ತಾರೆ. ಕೆಲವು ಕಥಾನಕಗಳು ರಚನೆಯಲ್ಲಿ ಅತ್ಯಂತ ದೀರ್ಘವಾಗಿದ್ದು ಇಡೀ ರಾತ್ರಿ ಹಾಡುವಂತಿರುತ್ತವೆ.

ಉದಾ: ಚೆನ್ನಮ್ಮನ ದಂಡಿ ಕಥನ ಕಾವ್ಯ ಸಾಮಾಜಿಕ ಮತ್ತು ವೈಯಕ್ತಿಕ ತಾಕಲಾಟಗಳಲ್ಲಿ ಜನಒಪ್ಪಿತ ಸಾಮಾಜಿಕ ಮೌಲ್ಯವೇ ಜಯಿಸುತ್ತದೆ. ವೈಯಕ್ತಿಕ ಮೌಲ್ಯ ತ್ಯಾಗ ಮಾಡಬೇಕಾಗುತ್ತದೆ.

**ಉದಾಹರಣೆ:** ಕಾಶೀಬಾಯಿ ಕಥಾನಕದಲ್ಲೂ ಸಾಮಾಜಿಕ ಮೌಲ್ಯದ ಎದುರು ವೈಯಕ್ತಿಕ ಮೌಲ್ಯ ಬಲಿಯಾಗುತ್ತದೆ. ಕಾಮುಕ ಸ್ಟೇಶನ್ ಮಾಸ್ತರ್‌ನಿಂದ ತಪ್ಪಿಸಿಕೊಳ್ಳಲು ತಾನು ಹೆತ್ತ ಕಂದಮ್ಮನನ್ನು ಬಲಿಕೊಡುತ್ತಾಳೆ. ಇಲ್ಲಿ ಪಾತಿವೃತ್ಯದ ಮುಂದೆ ಜೀವವು ಮಹತ್ವ ಪಡೆಯುವುದಿಲ್ಲ. ಕೆರೆಗೆ ಹಾರದ ಕಥೆಯಲ್ಲು ಕೂಡ ಭಾಗೀರಥಿ ಬಲಿಯಾಗುವುದು ಒಂದು ಸಾಮಾಜಿಕ ಕಾರ್ಯಕ್ಕೆ ಆಕೆಯ ಗೆಳತಿ 'ಇಟ್ಟಂಗ ಇರಬೇಕು' ಎಂದಾಗ ಭಾಗೀರಥಿ ಮರುಮಾತಾಡದೆ ಬಂದು ಬಲಿಯಾಗುತ್ತಾಳೆ. ಅವಳು ಅದನ್ನು ವಿರೋಧಿಸಬಹುದಿತ್ತು ಆದರೆ ಇಲ್ಲಿ ಸ್ವಾರ್ಥತಲೆ ಎತ್ತದೆ ಸಮಷ್ಟಿ ಪ್ರಜ್ಞೆಗೆ ತಲೆಬಾಗುತ್ತಾಳೆ.

**ಲಾವಣಿ:** ಎಂದರೆ Ballad ಎಂದರ್ಥ. ಲಾವಣಿ ತೀರ ಪ್ರಾಚೀನವಾದುದಲ್ಲ ಮಧ್ಯಕಾಲೀನ ಬೆಳವಣಿಗೆ ಲಾವಣಿ ತುಂಬಾ ಕಲಾತ್ಮಕವಾದ ಹಾಗೂ ಕ್ಲಿಷ್ಟಕರವಾದ ಸಾಹಿತ್ಯ ಪ್ರಕಾರ, ಸಂಗೀತವು ಅದರೊಂದಿಗೆ ಮೆಳೆಸಿದೆ, ಲಾವಣಿ ಏಕವ್ಯಕ್ತಿಯ ರಚನೆಯಾಗಿದ್ದು ಇತ್ತೀಚೆಗೆ ಲಾವಣಿಕಾರರ ಹೆಸರುಗಳು ದಾಖಲಾಗತೊಡಗಿವೆ. ಹೆಣ್ಣಿನ ನೋವು ನಲಿವುಗಳನ್ನು ಚಿತ್ರಿಸುವ ಹೆಣ್ಣು ಮಕ್ಕಳ ಲಾವಣಿಗಳು ಶಕ್ತಿಯುತವಾಗಿವೆ. ಹೆಣ್ಣು ತನ್ನ ಜೀವನದಲ್ಲಿ ಅನುಭವಿಸಿದ ಸಂಕಟವೇ ಇಲ್ಲಿ ಮಡುಗಟ್ಟಿದೆ. ಉದಾಹರಣೆ ಉತ್ತರದೇವಿ, ಗುಣಸಾಗರಿ, ನಾಗವ್ವ, ಹೊನ್ನಲದೇವಿ ಇತ್ಯಾದಿ ಇವರು ಚಿಕ್ಕ ವಯಸ್ಸಿನಲ್ಲಿ ನಾನಾ ಬಗೆಯ ಚಿತ್ರಹಿಂಸೆಗಳನ್ನು ಅನುಭವಿಸಿ ಅದನ್ನು ಸಂದರ್ಭ ಸಿಕ್ಕಾಗ ಲಾವಣಿ ರೂಪದಲ್ಲಿ ದಾಖಲಾದರು ಎಲ್ಲೂ ರೊಚ್ಚು ಮತ್ತು ಪ್ರತಿಭಟನೆ ಇಲ್ಲದ್ದು ಖೇದುದ ಸಂಗತಿ.

**ಸಂಪ್ರದಾಯದ ಹಾಡುಗಳು:** ಗುಳ್ಳವ್ವನ ಪೂಜೆ, ಶೀಗಿಗೌರಿಪೂಜೆ, ಕೊಂತಿಪೂಜೆ,

ಜೋಕುಮಾರ ಪೂಜೆ ಹೀಗೆ ಗೊತ್ತಾದ ದಿನಗಳಲ್ಲಿ ಪ್ರತಿವರ್ಷ ಹೆಣ್ಣುಮಕ್ಕಳೆಲ್ಲ-ಒಟ್ಟಾಗಿ ಸೇರಿ ಪೂಜೆ ಮಾಡಿ ಹಾಡುವ ವಿಶಿಷ್ಟ ಸಂಪ್ರದಾಯಗಳು ಕರ್ನಾಟಕದಲ್ಲಿ ರೂಢಿಯಲ್ಲಿವೆ.

**ಗಂಡಸರ ಹಾಡುಗಳು:** ಕೋಲಾಟ, ಅಂಟಿಗೆ-ಪಂಟಿಗೆ, ಡೊಳ್ಳಿನ ಪದಗಳು, ಕಂಬಿ ಪದಗಳು, ಹಂತಿ ಪದಗಳು ಮತ್ತು ಮೊಹರಂ ಪದಗಳು ಹೀಗೆ ಅನೇಕ ಬಗೆಗಳಿವೆ.

**ಮೊಹರಂ ಹಾಡು:** 'ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮುಂ ಧರ್ಮಮುಮಂ'-ಶ್ರೀ ವಿಜಯ ಹೇಳುವಂತೆ ಅನ್ಯರ ವಿಚಾರಗಳನ್ನು, ಧರ್ಮಗಳನ್ನು ಸಹಿಸುವುದೇ ನಿಜವಾದ ಸಂಪತ್ತು ಎಂದಿದ್ದಾನೆ. ಅದನ್ನು ನಾವು ಜನಪದರಲ್ಲಿ ಕಾಣುತ್ತೇವೆ. ಹಿಂದೂ ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿ ಮೊಹರಂ ಹಬ್ಬ ಆಚರಣೆಗೊಳ್ಳುತದ್ದು, ಮುಸಲ್ಮಾನ ಸಂಸ್ಕೃತಿಯನ್ನು ಹಿಂದುಗಳು ತಮ್ಮ ಸಂಸ್ಕೃತಿಯೆಂದು ಒಪ್ಪಿಕೊಂಡು ಆಚರಿಸುವ ಹೆಗ್ಗಳಿಕೆ ಈ ನೆಲದ್ದು. ಪರಧರ್ಮ ಸಹಿಷ್ಣುತೆಗೆ ಮೊಹರಂ ಉತ್ತಮ ಉದಾಹರಣೆಯಾಗಿದೆ. ಹುತಾತ್ಮ ಇಮಾಮರ ಆದರ್ಶದ ನೆನಪಾಗಿ ಮೊಹರಂ ಹಬ್ಬ ಆಚರಿಸುತ್ತಿದ್ದು ಗ್ರಾಮೀಣ ಭಾಗದಲ್ಲಿ ಉತ್ಸಾಹಿ ಯುವಕರು ಕರ್ಬಲಾ ಮೇಳ ಕಟ್ಟಿ ಹಾಡುತ್ತಾ ಸಾಗುತ್ತಾರೆ.

'ಹಜರತ ಅಲಿ ಇದ್ದರೂ ಮದಿನಾ ಶಾರದಲ್ಲಿ

ದಾಂಢಪಟ್ಟಮನಿ ಗರಡಿಯಲ್ಲಿ

ಸಾಮಶಕ್ತಿ ಮಾಡತಿದ್ದರೂ ನೇಮದಲ್ಲಿ

ಹಜರತ ಅಲಿ ಅನಿಸಿದರೆ ಶಿವನ ಹುಲಿ'

ಹೀಗೆ ರಿವಾಯ್ತು ಹಾಡುಗಳು ಈ ನೆಲದ ಜನಜೀವನದಲ್ಲಿ ಹಾಸುಹೊಕ್ಕಾಗಿವೆ ಎರಡು ಸಂಸ್ಕೃತಿಯ ಸುಂದರ ಸಮಾಗಮ ಮೊಹರಂ ಹಬ್ಬದಲ್ಲಿ ಕಾಣಬಹುದು.

**ಗಾದೆ:** The wisdom of many and the wit of one ಆದ್ದರಿಂದಲೇ ಗಾದೆ ವೇದಗಳಿಗೆ ಸಮವೆನ್ನುವರು. ಗಾದೆಗಳ ತಂತ್ರ ನೇರ ಸರಳ, ಪ್ರಾಸ, ಒಳಪ್ರಾಸ ಪುನರಾವರ್ತನೆ ಎದ್ದು ಕಾಣುವ ಲಕ್ಷಣಗಳು. ಗಾದೆಗಳಲ್ಲಿ ಹಲವಾರು ಪ್ರಕಾರಗಳಿವೆ. ಆರೋಗ್ಯ, ವಾತಾವರಣ, ಮುಂಜಾಗ್ರತೆ, ನೀತಿ ನಿಯಮಗಳ ಕುರಿತಾಗಿ ಹೀಗೆ ಹಲವು ಸಂಗತಿಗಳನ್ನು ಗಾದೆಗಳಲ್ಲಿ ಕಾಣಬಹುದು. ಚಿಕ್ಕದರಲ್ಲಿ ದೊಡ್ಡದನ್ನು ಕಾಣುವ ಮಹಾಸಾಹಸ ಮಾಡುತ್ತವೆ. ಒಂದು ಜನಾಂಗದ ಜಾಣ ಜೀವನಾನುಭವ, ಅಭಿವ್ಯಕ್ತಿಯ ವೈಶಿಷ್ಟ್ಯತೆ ಜನಪದ ಸಾಹಿತ್ಯದಲ್ಲಿ ಮಾತ್ರ ಲಭ್ಯ ಗಾದೆ ವಿಶಾಲವಾದ ಜೀವನಾನುಭವದ ಆಧಾರದಿಂದ ರೂಪಗೊಂಡ ಸಂಕ್ಷಿಪ್ತ ಅಭಿವ್ಯಕ್ತಿಯಾಗಿದೆ. ಗಾದೆ ಒಟ್ಟು ಸಮಾಜದ ಆಸ್ತಿ. ಯಾವ ಮತಧರ್ಮದ ಹಿಡಿತಕ್ಕೆ ಸಿಕ್ಕುವಂತಿಲ್ಲ ಇದಕ್ಕೆ ಯಾರ ಮುಲಾಜು ಇಲ್ಲ. ಜನಸಾಮಾನ್ಯರ

ನುಡಿಗಳಲ್ಲಿ ಗಾದೆಗಳು ಉಸಿರಾಡುತ್ತವೆ. ಇದು ಜೀವನಾನುಭವದ ಸಾರ. ಸಾರ್ವತ್ರಿಕವಾದ ಸತ್ಯ ಮಿಳಿತವಾಗಿರುತ್ತದೆ.



ಗಾದೆ ಮಾತುಗಳು ಮಾತಿಗೆ ವ್ಯಂಜಕವಾಗಿ, ಸಮರ್ಥನೆಗೆ ವಸ್ತುಗಳಾಗಿ ಬಳಕೆಯಾಗುತ್ತಿರುತ್ತದೆ. ಗಾದೆಗಳನ್ನು ಸಾಮಾನ್ಯರ ಬಿಡಿಗವಿತೆಗಳು, ತತ್ವಶಾಸ್ತ್ರವೆನ್ನಬಹದು. ಇದರಲ್ಲಿ ಜ್ಞಾನದ ಆಗರ, ಅನುಭವದ ಸಾಗರವಿರುತ್ತದೆ. ಇದನ್ನು ಲೋಕೋಕ್ತಿ, ಸಾರೋಕ್ತಿ, ಸುತ್ತೋಕ್ತಿ ಎಂದು ವಿನ್ಯಾಸಗಳ ಮೇಲೆ ಗುರುತಿಸಬಹುದು. ಇವು ಗದ್ಯಪ್ರಕಾರದ ಅನರ್ಗ ರತ್ನಗಳಾಗಿವೆ. ಜನಸಾಮಾನ್ಯರ ಬದುಕಿನ ಚರಿತ್ರೆಗಳು ಈ ಗಾದೆಗಳಲ್ಲಿ ಕಂಡುಬರುತ್ತದೆ.

“ಬಂದಾಂಗ ಇದ್ದರ ಬಂಧಾನವಿಲ್ಲ'

'ತಾಯಿ ಇದ್ದರೆ ತೌರು ಹೆಚ್ಚು, ತಂದೆ ಇದ್ದರೆ ಬಳಗ ಹೆಚ್ಚು

'ನೂಲಿದ್ದಂಗ ಸೀರೆ, ತಾಯಿ ಇದ್ದಂಗ ಮಗಳ'

'ಮಾತನಾಗ ಇದ್ದರೆ ಮಕ್ಕಳು, ರೀತಿಯೊಳಗ ಇದ್ದರೆ ಸೊಸೆಯಂದಿರು

'ರೋಣಿ ಮಳಿ ಆದ್ರಓಣಿಯೆಲ್ಲ ಕಾಳು'

'ಮಲತಾಯಿಗೆ ಮಾವು ಬಂದು ಬೆಳದಿಂಗಳದಾಗ ಹೇನು ನೋಡಿದಳಂತ

'ಅಕ್ಕ ಸತ್ತರ ಸಮವಾಸ್ಯೆ ನಿಲ್ಲಲ್ಲ'

'ಮಳಿ ಬಂದ್ರಕೇಡಲ್ಲ ಮಗ ಉಂಡ್ರ ಕೇಡಲ್ಲ

'ಹೆಣ್ಣಮಕ್ಕಳ ಬಾಯಾಗ ಮಾತ ನಿಲ್ಲಲ್ಲ ಗಂಡಸರ ಬಗಲಾಗ ಕೂಸ ನಿಲ್ಲಲ್ಲ

ಆಷಾಢದ ಗಾಳಿ ಬೀಸಿ ಬೀಸಿ ಹೊಡೆಯುವಾಗ, ಹೇಸಿ ನನ್ನ ಜೀವ ಹೆಂಗಸಾಗಬಾರದಿತ್ತೆ,

ಹೀಗೆ ಜೀವಾನುಭವವೇ ರೂಪತಾಳಿದಂತೆ ಈ ಗಾದೆಗಳಲ್ಲಿ ಕಂಡುಬರುತ್ತವೆ. ಕಾಲಾತೀತವಾದ ದೇಶಾತೀತವಾದ ಅನುಭವ ದ್ರವ್ಯಗಳು ಗಾದೆಗಳಲ್ಲಿ ಮಡು ಗಟ್ಟಿ ನಿಂತಿವೆ.

**ಒಗಟು:** ಒಗಟುಗಳಲ್ಲಿ ಜನಪದರ ಮನರಂಜನೆ, ಲೋಕದ ತಿಳುವಳಿಕೆ, ಬುದ್ಧಿ ಪರೀಕ್ಷೆ ಮಿಳಿತವಾಗಿರುತ್ತದೆ. ಬದುಕಿನ ನಿಗೂಢತೆಯ ಪ್ರತೀಕಗಳಂತೆ ಒಗಟುಗಳು ರಚನೆಗೊಂಡು ನಿಗೂಢತೆಯನ್ನು ಶೋಧಿಸುತ್ತಿರುತ್ತದೆ. ಇವುಗಳಲ್ಲಿ ಬದುಕಿನ ಅನುಭವಗಳೇ ಮಡುಗಟ್ಟಿ ಸಾಂಕೇತಿಕವಾದ ಪ್ರತಿಮೆ ಹಾಗೂ ರೂಪಕಗಳ ಮೂಲಕ ವ್ಯಕ್ತವಾಗುತ್ತಿರುತ್ತದೆ. ಒಗಟಿನಲ್ಲಿ ಉಪಮಾನ, ಉಪಮೇಯಗಳೇ ಸ್ವಾರಸ್ಯಕರವಾಗಿ ನಿರೂಪಿತಗೊಳ್ಳುತ್ತದೆ ಒಗಟುಗಳು ರೂಪ ಪ್ರಧಾನ, ಕ್ರಿಯಾಪ್ರಧಾನ, ಅರ್ಥಪ್ರಧಾನವಾಗಿ ರಚನೆಗೊಂಡಿರುತ್ತವೆ.

ಚಿಕ್ಕ ಮನೆಗೆ ಚಿನ್ನದ ಬೀಗ (ಮೂಗುತಿ)

ಬಣ್ಣದ ಸೀರೆ ಉಟಗೊಂಡು ಮಣ್ಣಾಗ ಕುಂತಾಳ (ಗಜ್ಜರಿ)

ಕೊಕ್ಕಿನಾಗ ಮುತ್ತು ಕಟ್ಟಿಕೊಂಡು ಬಾಲದಾಗ ನೀರು ಕುಡಿತೈತಿ (ದೀಪ)

ಹಿಡಿಯಾಕ ಹೋದ್ರ ಕಡಿಯಾಕ ಬಾಳ (ಬೆಂಕಿ)

ಬಟಾಬಯಾಲಾಗವೊಂದು ಚಿಕ್ಕ ರುಪಾಯಿ (ಚಂದ್ರ)

ಊರಿಗೆಲ್ಲ ಒಂದೆ ಕಂಬ್ಳಿ (ಆಕಾಶ)

"ಅಣ್ಣ ತಮ್ಮ ಇಬ್ಬರು ನಾ ಮುಂದೆ, ತಾ ಮುಂದೆ ಎಂದು ಹೋಗುತ್ತಾರೆ

ಆದರೆ ಯಾರೂ ಮುಂದೆ ಹೋಗುವುದಿಲ್ಲ' -ಕಾಲುಗಳು

ಸಾಮಾನ್ಯರ ಅನುಭವದ ಅಭಿವ್ಯಕ್ತಿಯಾಗಿ ಒಗಟುಗಳು ಮೂಡಿಬರುತ್ತವೆ. ಪ್ರಕೃತಿಯಲ್ಲಿ ತಾನು ಕಂಡ ಅನೇಕ ವಸ್ತುಗಳನ್ನು ಬೇರೊಂದು ಕ್ರಿಯೆಯ ಮೂಲಕ ಚಮತ್ಕಾರ ಪೂರ್ಣವಾಗಿ ಸುಂದರವಾದ ಸಾಲುಗಳಲ್ಲಿ ಹೇಳುವ ಒಗಟುಗಳು ವಿಶೇಷವಾಗಿ ಕಂಡುಬರುತ್ತದೆ. ಒಗಟುಗಳನ್ನು ಬಿಡಿಸಬಲ್ಲವರು ಬದುಕಿನ ಒಗಟುಗಳನ್ನು ಬಿಡಿಸುತ್ತಾರೆಂಬುದೆ ಜನಪದರ ನಂಬಿಕೆ.

**ಬೈಯ್ಯುಳ:** ಮಾತಿನ ನಡುವೆ ಕಂಡುಬರುವ ಬೈಯ್ಸಳಗಳು ಜನಪದರ ಭಾಷೆಯಲ್ಲಿ ಕಾವ್ಯಮಯವಾಗಿರುತ್ತದೆ. ಅವು ಕೆಲವೊಮ್ಮೆ ತುಂಬಾ ಸುಂದರವಾದ ರೂಪಕಗಳಾಗಿರುತ್ತವೆ. ಗ್ರಾಮೀಣ ಭಾಗದ ಜನರಲ್ಲಿ ಬೈಯ್ಯುಳಗಳು ಭಾಷೆಯಲ್ಲಿ ಮಿಳಿತಗೊಂಡು ಮಾತಿನ ಪ್ರಖರತೆ ಹೆಚ್ಚಿಸುತ್ತದೆ.

**ಜನಪದ ನಾಟಕಗಳು:** ಇವುಗಳನ್ನು ಆಟ, ಮೇಳ, ಅಟ್ಟದಾಟ, ಬೈಲ್ಕತೆ, ಬಯಲಾಟ ಪ್ರಸಂಗ ಯಕ್ಷಗಾನ ಇತ್ಯಾದಿ ಹೆಸರುಗಳಿಂದ ಕರೆಯುವರು ಸಂಗೀತ, ನೃತ್ಯ, ಅಭಿನಯ ಸಾಹಿತ್ಯ ಎಲ್ಲವೂ ಕೂಡಿರುವ ಈ ನಾಟಕಗಳು ರಾತ್ರಿ ಪೂರ್ತಿ ನಡೆಯುತ್ತವೆ. ಪುರಾಣ ಪುಣ್ಯಕಥೆಗಳೆ ಇವುಗಳ ವಸ್ತು, ಬಯಲಿನಲ್ಲಿ ನಡೆಯುವ ನಾಟಕಗಳಾದ್ದರಿಂದ ಬಯಲಾಟಗಳೆಂದು ಕರೆಯುವರು. ದೊಡ್ಡಾಟ, ಸಣ್ಣಾಟ, ಶೀಕೃಷ್ಣ ಪಾರಿಜಾತ, ಯಕ್ಷಗಾನ, ಗೊಂಬೆಯಾಟ ಇತ್ಯಾದಿ ಪ್ರಕಾರಗಳಲ್ಲಿ ನಾಡಿನಾದ್ಯಂತ ಪ್ರದರ್ಶನಗೊಳ್ಳುವ ಜನಪದ ಕಲಾ ಪ್ರಕಾರವಾಗಿವೆ. ಮೊದಲು ಮೌಖಿಕ ಪರಂಪರೆಯಲ್ಲಿದ್ದು ತದನಂತರ ಖಚಿತವಾದ ಲಿಖಿತ ರೂಪದ ಮಾತುಗಳೊಂದಿಗೆ ಗೊತ್ತಾದ ಕವಿಯಿಂದ ರಚನೆಗೊಂಡಿವೆ. ಜನಪದ ಸಾಹಿತ್ಯದ ಹರವು ವಿಸ್ತಾರವಾಗಿದ್ದು ಅದರ ಸ್ಥೂಲವಾಗಿ ಪರಿಚಯಿಸುವ ಪ್ರಯತ್ನ ಮಾಡಿರುವೆ.

ಜನಪದ ಸಾಹಿತ್ಯ ಸಮುದಾಯದ ಪ್ರತಿಬಿಂಬ ಕೆಲವೇ ಜನ ಮೆಚ್ಚುವ ಸಾಹಿತ್ಯ ಸೃಷ್ಟಿಗಿಂತ ಬಹುಜನರ ಬದುಕು ಸುಧಾರಿಸುವ ಸರಳ ಸಾಹಿತ್ಯ ಸೃಷ್ಟಿಯಾಗಲಿ ಜನಸಾಮಾನ್ಯರು ಕೇವಲ ಒಂದು ವಿಶಿಷ್ಟ ಪ್ರದೇಶ ಜನಾಂಗಗಳಿಗೆ ಸಂಬಂಧ ಪಟ್ಟವರಾದರೂ ಯಾವ ನಾಗರಿಕತೆಯ ಉಪಾದಿಗಳಿಗೂ ಪಕ್ಕಾಗದ ಅವರ ವಿಚಾರ, ನಡೆನುಡಿಗಳು ವಿಶ್ವಮೂಲವಾದವುಗಳು.

ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಮಾನವಶಾಸ್ತ್ರ ಪ್ರಾಧ್ಯಾಪಕರಾದ ಅಲೆನ್ ಡಂಡಸ್ ಹೇಳಿದ್ದು 'ಭಾರತವು ಜೀವಂತ ಜಾನಪದ ಸಂಪದ್ಯುಕ್ತ ಉಗ್ರಾಣ, ಈ ಮಹತ್ವಪೂರ್ಣ ಸಾಂಪ್ರದಾಯಿಕ ಸಂಪತ್ತನ್ನು ಸದುಪಯೋಗ ಪಡಿಸಿಕೊಳ್ಳುವುದಾದರೆ ಭಾರತೀಯ ಜಾನಪದ ವಿದ್ವಾಂಸರು ಜಗತ್ತಿನಲ್ಲಿಯೇ

ಅತ್ಯುತ್ತಮರಾಗಬಹುದು. ಭಾರತದಲ್ಲಿ ಜಾನಪದ ಸಂಶೋಧನೆಗಳಿಗಿರುವ ಅವಕಾಶಗಳು ಜಗತ್ತಿನಲ್ಲಿ ಬೇರೆ ಕಡೆ ಇಲ್ಲ.

ಜನಪದ ಸಾಹಿತ್ಯ ಜನರ ಬದುಕಿನ ಚರಿತ್ರೆಯನ್ನೇ ಹೊತ್ತಿದೆ. ಜನಪದರ ಜೀವನ



ಮೌಲ್ಯಗಳನ್ನು ಅರಿಯುವ ವೈಜ್ಞಾನಿಕ ದೃಷ್ಟಿಯಲ್ಲಿ ವಸ್ತುನಿಷ್ಠವಾಗಿ ತಂತ್ರಜ್ಞಾನ ಬಳಸಿ ಅವುಗಳನ್ನು ಕಾಪಿಡುವ ಕಾರ್ಯವಾಗಬೇಕಾಗಿದೆ. ಪ್ರಸ್ತುತವಾಗಿ ಮೌಲ್ಯಗಳು ಅಪ ಮೌಲ್ಯಗಳಾಗುತ್ತಿರುವ ಸಂದರ್ಭದಲ್ಲಿ ಜನಪದ ಸಾಹಿತ್ಯದ ಓದುವಿಕೆ ಅವಶ್ಯವೆನ್ನಿಸುತ್ತದೆ. ಸಹನೆ, ತಾಳ್ಮೆ, ಹೊಂದಾಣಿಕೆ, ನೆಮ್ಮದಿ ಎಂಬ ಪದಗಳು ಅರ್ಥಕಳೆದುಕೊಳ್ಳುತ್ತಿವೆ. ಜಾತಿ, ಮತ, ಧರ್ಮಗಳ ಮೀರಿದ ಅನುಭಾವ ಸಾಹಿತ್ಯವೇ ಜನಪದ ಸಾಹಿತ್ಯ ರಚನಾಕಾರ ಸಾಮಾನ್ಯನಾಗಿರಬಹುದು. ಆದರೆ ಅವರ ತತ್ವ ಸಂದೇಶ ಅರಿವು ಅಸಾಮಾನ್ಯವಾಗಿದೆ. ಅದರಲ್ಲೂ ಮಹಿಳೆಯರು ಕಷ್ಟ ಸಹಿಷ್ಣುಗಳು, ಉದಾತ್ತ ಆಲೋಚನೆಯುಳ್ಳವರಾಗಿದ್ದು, ವ್ಯಕ್ತಿ ಕೇಂದ್ರಿತವಾಗಿ ಏನನ್ನು ಚಿಂತಿಸದೆ, ಸಮಷ್ಠಿಯ ಕುರಿತು ಚಿಂತಿಸುವ ಮನೋಭಾವ ಅಕ್ಷರವಂಚಿತ ಸಮುದಾಯದವರದ್ದು, ಅಂತವರು ಸಾಹಿತ್ಯ ಕೃಷಿಗೈದಿದ್ದು ಅದ್ಭುತ ಸಂಗತಿಯೆ ಸರಿ. ಸದ್ಯ ಅದನ್ನು ವೈಜ್ಞಾನಿಕವಾಗಿ ಅಭ್ಯಸಿಸಿ ಹೊಸ ತಲೆಮಾರಿನವರಿಗೆ ವರ್ಗಾಯಿಸುವ ಮಹತ್ವದ ಜವಾಬ್ದಾರಿ ಜಾನಪದ ವಿದ್ವಾಂಸರ ಕರ್ತವ್ಯ.

ಹಾಡಿದವ್ವನಕಿನ್ನ ಕೇಳಿದವ್ವನ ಕಿನ್ನ

ಸುಮ್ಮನೆ ಕುಂತವ್ವಗ ಭಲೆ ಪುಣ್ಯ ಸುಯ್

ಸುಮ್ಮನೆ ಕುಂತವ್ವಗ ಭಲೆ ಮಣ್ಯ ಶರಣಮ್ಮ

ನಿನಗ ಪುತ್ರ ಸಂತಾನ ಜಯ ಜಯ |

ಎಂದು ಹೇಳುತ್ತಾ ಅವಕಾಶ ನೀಡಿದ ಕನ್ನಡ ಸಾಹಿತ್ಯ ಪರಿಷತ್ತಿನವರಿಗೂ, ತಮಗೆಲ್ಲರಿಗೂ ಮತ್ತೊಮ್ಮೆ ಧನ್ಯವಾದಗಳು.

**ಜನಪದ ಕಲೆಗಳು**

**- ಡಾ. ಹನುಮಂತರಾವ್ ಬಿ. ದೊಡ್ಡಮನಿ**

**ಪೀಠಿಕೆ:** ಜಾನಪದ ಕಲೆಗಳು ಜನಸಾಮಾನ್ಯರ ಬಾಯಿಂದ ಕಿವಿಗೆ, ಕಿವಿಗೆ ಕಿವಿಯಿಂದ ಬಾಯಿಗೆ ಕಂಠಸ್ಥವಾಗಿ ಹರಡಿಕೊಂಡು ಬಂದಿರುವ ಜನಪದ ಸಾಹಿತ್ಯವಾಗಿದೆ. ಕಲೆಯಿಂದಲೇ ಕಲೆ ಬದುಕುವುದು ಒಂದು ಕಲೆಯಾಗಿದೆ. ಜಾನಪದ ಕಲೆಗಳು ಮಾನವನಷ್ಟೇ ಪ್ರಾಚೀನವಾದವುಗಳು. ಪ್ರಕೃತಿ ಪರಿಸರ ಪರಿವೀಕ್ಷಣೆಯಿಂದಲೋ ಅರಿತಿರುವುದು ಒಂದೆಡೆ ದಾಖಲಿಸಬೇಕೆಂಬುದು ಮನುಷ್ಯ ಸಹಜ ಗುಣದಿಂದಲೋ ಕಲೆಗಳು ಅಸ್ತಿತ್ವಕ್ಕೆ ಬಂದವು. ಕಲೆಗಳು ಮನಸ್ಸಿಗೆ ಶಾಂತಿ, ನೆಮ್ಮದಿ, ಸಂತೋಷ ನೀಡುವುದಲ್ಲದೆ, ಪೀಳಿಗೆಯಿಂದ ಪೀಳಿಗೆಗೆ ಮುಂದೆಯೂ ಅನುಕರಣೀಯ ಆಕರಗಳಾಗಲೆಂಬ ಭಾವನೆ ಅಡಗಿರುತ್ತದೆ. ಜನಪದ ಸಂಸ್ಕೃತಿಯ ಪ್ರತಿಯೊಂದು ಹೆಜ್ಜೆಯಲ್ಲಿಯೂ ಜನಪದ ಕಲೆಗಳು ಕಾಣುತ್ತೇವೆ. ಜನಪದರ ಬದುಕೆ ಒಂದು ಕಲೆಯಾಗಿದೆ. ಆ ಮುಗ್ಧ ಜನಪದರು ತಿಳಿದೋ ತಿಳಿಯದೆಯೋ ಅವರ ಬದುಕಿನಲ್ಲಿ ಕಲೆ ಹಾಸು ಹೊಕ್ಕಾಗಿದೆ. ಬದುಕಿನ ಅಸ್ಥಿರತೆ ಮರೆತು ಅಮರತ್ವ ತಂದುಕೊಳ್ಳಲು, ತಮ್ಮ ಅಸ್ತಿತ್ವಕ್ಕಾಗಿ ಹೋರಾಡಲು ಜೀವನದಲ್ಲಿ ಉತ್ಸಾಹ, ಉಲ್ಲಾಸ ಪಡೆಯಲು ದೈವಾರಾಧನೆಯ ಹಿನ್ನೆಲೆಯಲ್ಲಿ ಜನಪದ ಹಾಡುಗಳು ಕುಣಿತಗಳು ಹುಟ್ಟಿಕೊಂಡಿವೆ.

**ಆಣಿ-ಪೀಣಿ**

ಹಿಂದಿನ ಹೈದ್ರಾಬಾದ ಕರ್ನಾಟಕ ಇಂದಿನ ಕಲ್ಯಾಣ ಕರ್ನಾಟಕ ನೂತನ ಹೆಸರಿನಿಂದ ಪ್ರಜ್ವಲಿಸುತ್ತಿರುವ ಭಾಗದಲ್ಲಿ ಆಣಿ-ಪೀಣಿ ಎಂಬ ಕಲೆಯು ಜನಜನಿತವಾಗಿದೆ. ದೀಪಾವಳಿ ಹಬ್ಬದ ಚತುರ್ದಶಿ ಮತ್ತು ಬಲಿಪಾಡ್ಯಮಿ ದಿನಗಳ ಸಂದರ್ಭದಲ್ಲಿ ದನಕರುಗಳ, ಕುರಿ ಮರಿಗಳ, ಎತ್ತು-ಹೋರಿಗಳ, ಎಮ್ಮೆ ಕೋಣಗಳ ಮೇಲೆ ಹಾಡುಗಳು ಕಟ್ಟಿ ಹಾಡು ಹೇಳುತ್ತ ಬೆಳಗುವರು. ಮನೆಯವರಿಂದ ಪಟಾಕಿ ಪಡೆದು ಹಾರಿಸುವರು. ಚರ್ತದ್ರಶಿ ಮತ್ತು ಪಾಡ್ಯದ ದಿನಗಳಂದು ಸಂಜೆ ಸಮಯಕ್ಕೆ ತಮ್ಮ ತಮ್ಮ ಮನೆಯ ಮುಂದೆ ದೀಪಗಳು ಹಚ್ಚಿ ಇಡುವರು. ರಾತ್ರಿ ಸಮಯಕ್ಕೆ ದನ-ಕುರಿ ಕಾಯುವ ಹುಡುಗರು ತಮ್ಮ ಹಾಗೂ ಊರಿನವರ ಹಸು-ಕರುಗಳಿಗೂ, ಎತ್ತು-ಹೋರಿಗಳಿಗೂ, ಕುರಿ-ಮರಿಗಳಿಗೂ, ಎಮ್ಮೆಗಳಿಗೂ ದೀಪ ಬೆಳಗಿ ಹಾಡುವ ಕಲೆಯೇ ಆಣಿ-ಪೀಣಿ, ಕಲೆ ಆಗಿರುವುದು ದನ ಕಾಯುವ ಹುಡುಗರು ಇಳಿ ಹೊತ್ತಿನ ಸಮಯದಲ್ಲಿ ನೀರು ಹರಿವ ಹಳ್ಳದಲ್ಲಿ ಬೆಳೆದಿರುವ ಜೇಕು ತಂದು ಹೆಳಲಿನಾಕಾರದಿ ಹೆಣೆದು ಮೂರು ಹೆಡೆ ಆಕಾರದಲ್ಲಿ ತಯಾರಿಸಿದ ಜೆ ಕಿನ ಹೆಣಿಕೆಗಳು, ಜೋಡಿಸಿದಾಗ ಅದು ಕುಂಚಿಗೆ ಆಕಾರವಾಗುತ್ತದೆ. ಅದರ ಜೋಡಿಕೆಯ ಕೆಳಭಾಗದಲ್ಲಿ ಕೈ ಹಿಡಿಯಲು ಹಿಡಿಕೆಯಾಗುವುದು. ಒಳಗೆ ಪಣತಿ ಅಥವಾ ತೆಂಗಿನ ಪಟ್ಟಿ ಹಿಡಿಸುವಷ್ಟು

ಜಾಗವು ಸಿಗುತ್ತದೆ. ಅದರೊಳಗೆ ಪಣತಿಯಿಟ್ಟು ಅರಳಿಯ ಬತ್ತಿ ಹೊಸೆದು ಪಣತಿಯೊಳಗಿಟ್ಟು, ಒಳ್ಳೆಣ್ಣೆ ಹಾಕಿ ದೀಪ ಹಚ್ಚುವರು. ಈ ಚಿತ್ತಾರಕ್ಕೆ ಆಣಿ-ಪೀಣಿ ಎಂದು ಕರೆಯುವವರು. ಆಣಿ-ಪೀಣಿಯಿಂದ ಪ್ರಾಣಿಗಳಿಗೆ ಬೆಳಗುವ ಕಾರ್ಯ ಮುಕ್ತಾಯವಾದಾಗ, ಅದರೊಂದಿಗೆ ಹುಡುಗರೆಲ್ಲರೂ ಸಾಗುತ್ತ ದೇವರ ಗುಡಿ ಪ್ರವೇಶಿಸಿ ದೇವರ ಮೂರ್ತಿಗೆ ಬೆಳಗಿ, ದೇವರ ಗುಡಿಯ ಪಡಸಾಲೆಯೊಳಗೆ ಇಟ್ಟು ನಮಸ್ಕಾರಗಳು ಅರ್ಪಿಸಿ ಅವರವರ ಮನೆಗೆ ಹೋಗುವರು.

ಆಣಿ-ಪೀಣಿ ಹಾಡು:- "ಹೋರಿ ಹೋರಿ ಹ್ಯಾಂಗಿರಬೇಕು

ತೆನಿ ತಿಂದು ಸೊಕ್ಕಿರಬೇಕು

ನೂಲಿನ ಮಗಡ ಹಾಕಿರಬೇಕು

ಝುಂಗ್ ಕಟ್ಟಿ ಜೆಡಿಸಿರಬೇಕು

ಆಣಿ-ಪೀಣಿ ನಮ್ಮ ಹೋರಿ ಮ್ಯಾಲಚೆಕ್ಕೋ...:೧"

"ಆಕಳ ಆಕಳ ಇದಿರಬೇಕು

ಆಕಳ ಗಿಣ್ಣ ಕಾಸಿರಬೇಕು

ಘರಕ ಘರಕ ಸುರಿದಿರಬೇಕು

ಅಡಕಿಲ ಸಂದ್ಯಾಗ ಹೆತಿರಬೇಕು

ಅತ್ತಿ ಕೈಯಲಿಂಗ ಬಳಸಿರಬೇಕು

ಮಾವನ ತಲಿಮ್ಯಾಲ ಹೊರಿಸಿರಬೇಕು

ಆಣಿ-ಪೀಣಿ ನಮ್ಮ ಆಕಳ ಮ್ಯಾಲ ಚೆಕ್ಕೋ...೨"

ಆಣಿ-ಪೀಣಿ ಹಾಡುಗಳು ಹಾಡುವುದರಿಂದ ದನಕರುಗಳಿಗೂ ಎತ್ತು- ಹೋರಿಗಳಿಗೂ, ಕುರಿ-ಮರಿಗಳಿಗೂ, ಎಮ್ಮೆ ಕೋಣಗಳಿಗೂ ಬಂದಿರುವ ರೋಗ ನಿವಾರಣೆಯಾಗಲೆಂದು ಆಣಿ-ಪೀಣಿ ಬೆಳಗುವರು. ದೇವತೆಗಳು ಮನುಷ್ಯರಂತೆ ಪ್ರಾಣಿಗಳಿಗೂ ರಕ್ಷಣೆ ನೀಡಲೆಂಬುವ ಸಂಕೇತ ಇದರಲ್ಲಡಗಿದೆ. ದನ ಕಾಯುವ ಹುಡುಗರು ಹಾಡು

ಹೇಳುತ್ತ ಪಟಾಕಿ ಹಾರಿಸುತ್ತ ಸಂಭ್ರಮಿಸುತ್ತಾರೆ. ಆಣಿ-ಪೀಣಿಯೊಂದಿಗೆ ಹಾಡುಗಳು ಕೂಡ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಈ ಕಲೆ ಜೀವಂತವಾಗಿದೆ.

**ಆಲಾಯಿ ಕುಣಿತ**

ಆಲಾಯಿ ಕುಣಿತವು ಮೊಹರಂ ಹಬ್ಬದ ಸಂದರ್ಭದಲ್ಲಿ ಪ್ರದರ್ಶಿಸುವ ಕಲೆಗಳಲ್ಲಿ ಆಲಾಯಿ ಕುಣಿತವು ಒಂದಾಗಿದೆ. ದೇವರ ಫಂಜೆಯ ಮುಂದೆ ಒಂದು ಗುಂಡಿ ತೋಡಿ ಅದರೊಳಗೆ ಬೆಂಕಿ ಹಾಕುತ್ತಾರೆ. ಈ ಕುಣಿತದಲ್ಲಿ ಹಿಂದೂ-ಮುಸ್ಲಿಂ ಭೇದವಿಲ್ಲದೆ ಎಲ್ಲರೂ ಸೌಹಾರ್ದಯುತವಾಗಿ ಭಾಗವಹಿಸುತ್ತಾರೆ. ಕಲಾವಿದರು ಪಂಚೆ ಅಥವಾ ಲುಂಗಿ ಉಟ್ಟುಕೊಂಡು ಟೊಂಕಕ್ಕೆ ಬಣ್ಣದ ಬಟ್ಟೆ, ಕಾಲಿಗೆ ಗೆಜ್ಜೆ ಕಟ್ಟಿರುತ್ತಾರೆ. ಇದರಲ್ಲಿ ೧೦-೩೦ ಜನ ಕಲಾವಿದರಿರುತ್ತಾರೆ. ೧೪ ಜನರು ಹೆಜ್ಜೆ ಹಾಕಿದರೆ, ಉಳಿದವರು ಸನಾದಿ, ಶೃತಿ, ಚಿಟ್ಟ ಹಲಗೆ ವಾದ್ಯಗಳು ಬಾರಿಸಿ ಹಾಡು ಹೇಳುವರು.



ಮೊಹರಂ ತಿಂಗಳ ಏಳನೆಯ ದಿನ ಮಹ್ಮದ ಪೈಗಂಬರರ ಮೊಮ್ಮಕ್ಕಳಾದ ಹಸನ- ಹುಸೇನರು ಕರ್ಬಲ್ ಭೂಮಿಯ ರಣರಂಗದಲ್ಲಿ ತಮ್ಮ ಅರವತ್ತು ಜನರು ಅನುಯಾಯಿಗಳೊಂದಿಗೆ ಮಜೀದನ ಸೈನ್ಯದೊಡನೆ ಯುದ್ಧ ಮಾಡುವಾಗಲೇ ಪ್ರಾಣಬಿಟ್ಟರು. ಆ ಐತಿಹಾಸಿಕ ಬಲಿದಾನದ ಹಿನ್ನೆಲೆಯಾಗಿಯೇ ಹೆಜ್ಜೆಯ ಕುಣಿತ ನಡೆಸುವರು. ಮೊಹರಂ ತಿಂಗಳ ಐದನೆಯ ದಿವಸದಿಂದ ಕರಬಲ್ ಹಾಡುಗಳು ಹಾಡುತ್ತ ಆಲಾಯಿ ಗುಂಡಿ ಸುತ್ತಲೂ ಕುಣಿಯುತ್ತಾರೆ. ಉತ್ತರ ಕನ್ನಡದಲ್ಲಿ ಹತ್ತನೆಯ ದಿವಸ ಅಗ್ನಿಕುಂಡದಲ್ಲಿ ಹಾಯ್ದುತ್ತಾರೆ. ಕೆಲವು ಪ್ರದೇಶಗಳಲ್ಲಿ ಹೆಜ್ಜೆ ಕುಣಿತ ಒಂಬತ್ತು ದಿನಗಳಲ್ಲಿಯೇ ಮುಕ್ತಾಯ ಮಾಡಿದರೆ, ಕೆಲವು ಭಾಗಗಳಲ್ಲಿ ಹತ್ತನೆಯ ದಿವಸಗಳವರೆಗೂ ಆಲಾಯಿ ಕುಣಿತ ನಡೆಯುತ್ತದೆ.

ನಮ್ಮ ಕಲ್ಯಾಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕ ಭಾಗಗಳಲ್ಲಿ ಪ್ರಚಲಿತವಿರುವ ನಂಬಿಕೆ ಪ್ರಕಾರ ಆಲಾಯಿ ಕುಣಿತ ಹಸನ-ಹುಸೇನ ವೀರ, ಧೀರ, ಶೂರ ಯುವಕರು. ಧರ್ಮ ಯುದ್ಧದಲ್ಲಿ ಭಾಗವಹಿಸಿ ವೈರಿಗಳನ್ನು ಸದೆ ಬಡೆದು ಗೆದ್ದಿರುವುದರ ಹಿನ್ನೆಲೆಯಾಗಿದೆ. ಕತ್ತಲೆ ಅಥವಾ ಖತಲ್ ರಾತ್ರಿಯಲ್ಲಿ ದೇವರುಗಳು ಹೊತ್ತು ದರ್ಗಾಗಳಿಗೆ ದರ್ಶನ ನೀಡಿ, ಹೇಳಿಕೆ ಹೇಳುವ ಸಂಪ್ರದಾಯವಿದೆ.

ಕರ್ಬಲ್ ಹಾಡು

ಧರ್ಮಕ್ಕ ಸತ್ತವರಾ ಸಿಗತಾರ ಕೋಟಿಗೊಬ್ಬ ಜನರಾ

ಮುಸಲ್ಮಾನ ಮಂದ್ಯಾಗ ದೊರಿತಾರ ಹುಸೇನ ಸಾಹೇಬರಾ|

ಮಜೀದನ ಅವತಾರ ನಡೆಸಿತು ಅಧಿಕಾರ ಭರಪೂರಾ|

ನೋಡಲಾಗದೆ ಎದುರಾಗಿ ನಿಂತಾರೆ ಹಜಿರತ್ ಹುಸೇನರಾ|

ಲಡಾಯಿ ತಯ್ಯಾರಾದರ ಒಂಟಿ ಮ್ಯಾಲೆ ಸವಾರಾ

ಹೊಂಟಿ ನಿಂತಾರೊ ಕರಬಲಾ ಭೂಮಿಗೆ ಬಂಧು ಬಳಗಾಪೂರಾ

ಆಲ್ಯಾಣದಾಗವರ ಕಾಣದ ಮೂರು ದಿವಸ ನೀರಾ

ಕುಡುದಾರೋ ಕಣ್ಣೀರಾ ಮಕ್ಕಳು ಹುಡುಗರು ಹೆಂಗಸರಾ

ಜಂಗ್ ಎದುರಾ-ಬದರಾ ವೈರಿಯ ಮೋಸಕ ಜಯಕಾರಾಗ

ಶರಣು ಹೋಗದವರಾ ಸ್ವರ್ಗಕ್ಕೆ ಹೋದಾರೊ ಹಜಿರತರಾ

ಹಸನ-ಹುಸೇನರು ಧರ್ಮಕ್ಕಾಗಿ ಹೋರಾಡಿ ಲೌಕಿಕದಲ್ಲಿ ಸೋತಂತೆ ಕಂಡರೂ ಪ್ರಪಂಚದಲ್ಲಿ ಸತ್ಯದ ನಿತ್ಯತ್ಯವನ್ನು ಮನಗಾಣಿಸಿಕೊಟ್ಟು ವೀರ ಮರಣ ಹೊಂದಿದ ಹಜರತ್ ಹುಸೇನರಂತಹವರು. ಇಂಥವರು ಕೋಟಿಗೊಬ್ಬರು ಸಿಗುವರೆಂದು ನಮ್ಮೂರಿನ ಸಾಹಿತಿಗಳಾದ ಶ್ರೀ ಅಬ್ಬಾಸ ಆಲಿ. ಎ. ನದಾಫ ಅವರು ಅಭಿಪ್ರಾಯ ಪಡುತ್ತಾರೆ.

**ಏಕತಾರಿ ಮೇಳ:**

"ತಾಳತಂಬೂರಿ ಕೈಯಲ್ಲಿ ಶಿವ-ಶಂಭನ ಭಜನಾ ಮನದಲ್ಲಿ" ಎಂಬುವ ತತ್ವಕಾರರ ವಾಣಿಯಂತೆ ಏಕತಾರಿ, ತಂಬೂರಿ ಹಿಡಿದು ಗುಂಪುಗೂಡಿ ಹಾಡುವುದೇ ಏಕತಾರಿ ಮೇಳವಾಗಿದೆ. ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಈ ಮೇಳಗಳು ಕಂಡು ಬರುತ್ತದೆ. ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕ ದಕ್ಷಿಣ, ಮಧ್ಯ ಕರ್ನಾಟಕಗಳಲ್ಲೂ ಕಂಡುಬರುವ ಕಲೆಯಾಗಿದೆ. ಈ ಕಲೆಯಲ್ಲಿ ತತ್ವಪದಕಾರರು ಅತಿ ಹೆಚ್ಚು ಪ್ರಾಮುಖ್ಯತೆ ಪಡೆದಿವೆ. ಈ ಮೇಳಕ್ಕೆ ತಂಬೂರಿ ಮೇಳದವರೆಂತಲೂ ಕರೆಯುತ್ತಾರೆ. ಏಕತಾರಿ ಮೇಳದಲ್ಲಿ ಒಬ್ಬ ಗುರು ಇರುತ್ತಾನೆ. ಗುರು ಹೇಳಿಕೊಡುವ ಪಾಠಗಳು ಶಿಷ್ಯ ಬಳಗದವರು ಕಲಿಯುವವರು. ಆ ಶಿಷ್ಯರಲ್ಲಿ ಮುಂದೆ ಒಳ್ಳೆಯ ಕಂಠ ಇರುವ ಓರ್ವನು ಗುರುಗಳಿಂದ ಕಲಿತ್ತಿರುವ ಹಾಡಿಗ ಅನುಭವದ ಮೇಲೆ ನೂತನ ಗುರುವಾಗಿ ಶಿಷ್ಯರಿಗೆ ಬೆಳೆಸಿ ತಾನೂ ಬೆಳೆದು ಗುರುವಾಗುತ್ತಾನೆ. ಹೀಗೆ ತತ್ವಪದಗಳು ಬಾಯಿಂದ ಕಿವಿಗೆ, ಕಿವಿಯಿಂದ ಬಾಯಿಗೆ ಕಂಠಸ್ಥವಾಗಿ ಹರಿದು ಬಂದಿರುತ್ತವೆ. ಈ ತಂಡಕ್ಕೆ ಏಕತಾರಿಯೇ ಮುಖ್ಯ ವಾದ್ಯವಾಗಿದೆ. ಇತ್ತೀಚೆಗೆ ಹಾರ್ಮೋನಿಯಂ ಬಳಸುವುದು ರೂಢಿಗತವಾಗಿದೆ. ಹೀಗೆ ಹಾಡುವ ಏಕತಾರಿಗೆ ಶೃತಿಯಾಗಿ ತಾಳ, ದುಮ್ಮುಡಿಗಳಿಲ್ಲದೆ ಕೆಲವು ಭಾಗದಲ್ಲಿ ಢಗ್ಗಾ-ಜಾಂಗಟೆ ಬಳಸುವ ವಾಡಿಕೆಯಿದೆ.

ಏಕತಾರಿ ಮೇಳದಲ್ಲಿ ಬರುವ ಹಾಡುಗಳು ಹೆಚ್ಚಾಗಿ ತತ್ವ ಪ್ರಧಾನ ಆಗಿವೆ. ಏಕತಾರಿ ಮೇಳದವರು ಸಾಮಾನ್ಯವಾಗಿ ತತ್ವಪದಗಳನ್ನು, ದಾಸರ ಹಾಡುಗಳನ್ನು ಶಿಶುನಾಳ ಶರೀಫ ಸಾಹೇಬರ, ಕಡಕೋಳ ಮಡಿವಾಳಪ್ಪನವರ, ಸ್ವಾಗಳ್ಳಿ ಹೊನ್ನಪ್ಪ ಮಹಾರಾಜರ, ಜಂಬಗಿಶರಣರ ಪದಗಳೆಲ್ಲಾ ಏಕತಾರಿ ಮೇಳದ ಹಾಡುಗಳಾಗಿವೆ. "ಓಂನಾಮದೊಂದಿಗೆ ಆರಂಭವಾಗುವ ಮೇಳ ಶಿವನ ಘೋಷಣೆಯೊಂದಿಗೆ... ಮುಕ್ತಾಯವಾಗಿರುತ್ತದೆ. ಪ್ರತಿಯೊಂದು ಹಾಡು ಮುಗಿದಾಗ "ಶಿವ-ಪಾರ್ವತಿ ಹರಹರಾ" ಎಂದು ನಾಯಕ ಪ್ರಾರಂಭಿಸುತ್ತಿದ್ದಂತೆ ಉಳಿದವರೆಲ್ಲಾ ಮಹಾದೇವ... ಎಂದು ಧ್ವನಿಗೂಡಿಸುವರು.

"ಏಕತಾರಿ ಕಾಯಾಗ ಏನಾದ ಗುರು ನಾಮಾಮೃತ ತುಂಬ್ಯಾದ" ಎಂಬ ಪಲ್ಲವಿ- ದೇಹವೇ ಏಕತಾರಿ ಕಾಯಿ ಜೀವವೇ ಬಿದರಿನಕೋಲು, ವರಾಯದ ತಂತಿ ಬಿಗಿದು, ಅಜ್ಞಾನದ ಬೆಳಕು ಜೆಡದಿದೆ ಎಂಬುವ ಮಾತು ತಾತ್ವಿಕವಾಗಿ ನಿರೂಪಿಸುವುದು. ದೀರ್ಘವಾಗಿ ರಾಗ ಎಳೆಯುವುದು. ಧ್ವನಿ ತಾರಕಕ್ಕೇರಿದಾಗ ಸಮೂಹ ರಾಗವಾಗಿ ಹೊಮ್ಮುವ ಶಬ್ದಗಳಲ್ಲಿ ಉದಾತ್ತ ಜೀವನ ರೀತಿಯೂ ಇರುತ್ತದೆ. ಇದರೊಳಗೆ ಸಮಾಜ ವಿಮರ್ಶೆಯೂ ಇರುವುದು.

ಉದಾ:

೧) ಮಾಯೆ ಪ್ರಪಂಚ ಇದೊಂದು | ಮೋಹಿಸಿ ಕುಳಿತೆ ನಾಽ ಬಂದು |

- ಕಡಕೋಳ ಮಡಿವಾಳಪ್ಪ

೨)	ಸೋರುತಿಹುದು ಮನೆಯ ಮಾಳಿಗೆ | ಅಜ್ಞಾನದಿಂದ ಸೋರುತಿಹುದು ಮನೆ ಮಾಳಿಗೆ



- ಶಿಶುನಾಳ ಶರೀಫ್

೩)	ಹೂವಾದವ್ವ ತಂಗಿ ಹೂವಾದ ಹೂವಿನ ಮರೆತರೆ ನೋವಾದ |

- ಕ್ಯಾಗಳ್ಳಿ ಹೊನ್ನಪ್ಪ ಮಹಾರಾಜರು

೪)	ಅಲ್ಲಾ ಹೌದು ಬಲ್ಲವನಿಗೆ ತಿಳಿತ್ಯಾದ ಮಲ್ಲಿಗಿನಾಥರ ಹೋಗಾನು ಬಾ |

**ಜಂಬಗಿ ಶರಣರು**

ಗೀಗೀ ಮೇಳ:- ಗೀಗೀ ಮೇಳವು ಒಂದು ವಿಶಿಷ್ಟವಾದ ಪ್ರಸಿದ್ಧ ಕಲೆಯಾಗಿದೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ಈ ಕಲೆ ಕಂಡು ಬರುತ್ತದೆ. ಜಾತ್ರೆ-ಉತ್ಸವಗಳಲಿ ಹಬ್ಬ- ಹರಿದಿನಗಳಲ್ಲಿ ಏರ್ಪಡಿಸುವ ಪದ್ಧತಿ ಬಹುಕಾಳದಿಂದಲೂ ನಡೆದು ಬಂದಿದೆ. ಇಂಥದೇ ಸಮಯದಲ್ಲಿ ನಡೆಯಬೇಕೆಂಬ ನಿಯಮವಿಲ್ಲ. ಈ ಕಲೆಗೆ ಕಲ್ಲಿ-ತುರಾಯಿ, ಹರದೇಶಿ- ನಾಗೇಶಿ, ಹಾಡಕ್ಕಿಯವರೆಂತಲೂ ಕರೆಯುವ ಪದ್ಧತಿ ಆಯಾ ಪ್ರದೇಶಕ್ಕನುಗುಣವಾಗಿ ಬಳಕೆಯಲ್ಲಿದೆ.

ಗೀಗೀ ಮೇಳದ ಕಲಾವಿದರು ಬೇರೊಂದು ಪ್ರದೇಶದಿಂದ ಬಂದಾಗ ಅವರೊಂದಿಗೆ ಸ್ಪರ್ಧೆಗಾಗಿ ಮತ್ತೊಂದು ಮೇಳದವರಿಗೆ ಕರೆಸುವ ರೂಢಿಯಿದೆ. ಆದ್ದರಿಂದ ಸವಾಲ್- ಜವಾಬ್ ಹಾಡುಗಾರರೆಂದು ಕರೆಯುವ ಪದ್ಧತಿಯಿದೆ. ಪುರಾಣ ಕಥೆಗಳು ಗಾದೆ, ಒಗಟು, ಚಾರಿತ್ರಿಕ ಘಟನೆ, ರಾಮಾಯಣ ಮಹಾಭಾರತ, ಮನುಷ್ಯ ಸ್ವಭಾವಗಳು, ಪ್ರಾದೇಶಿಕ ಘಟನೆಗಳು ಮುಂತಾದ ವಿಷಯಗಳ ಆಧಾರವಾಗಿಟ್ಟುಕೊಂಡು ತಮ್ಮ ಮೇಳಕ್ಕೆ ಎತ್ತಿಹಿಡಿಯುತ್ತಾರೆ. ಬೆಳಗಾವಿ, ಮೈಸೂರು ಭಾಗಗಳಲ್ಲಿ ಈ ಕಲೆಗೆ ಕಲ್ಲಿ-ತುರಾಯಿಯೆಂದು ಕರೆಯುತ್ತಾರೆ. ನಮ್ಮ ನಮ್ಮ ಕಲಬುರಗಿ ಭಾಗದಲ್ಲಿ ಗೀಗೀ, ಹರದೇಶಿ-ನಾಗೇಶಿ, ಹಾಡಕ್ಕಿಯವರೆಂದು ಕರೆಯುತ್ತಾರೆ. ಇದು ಉತ್ತರ ಕರ್ನಾಟಕದ ಜನಪ್ರಿಯ ಕಲೆಯಾಗಿದೆ. ಗೀಗೀ ಮೇಳದವರು ಪ್ರತಿಯೊಂದು ಸಾಲಿನಲ್ಲಿ ಕೊನೆಗೆ ಗೀಮ ಗೀಮ ಗೀಮ ಅಥವಾ ಜೀಮ್ ಜೀಮ್ ಜೀಮ ಎಂದು ಹೇಳುವುದರ ಹಿನ್ನೆಲೆಯಾಗಿ ಗೀಗೀ ಹಾಡುಗಾರರೆಂದು ಕರೆಯುವರು.

ಗೀಗೀ ಮೇಳದವರು ತಮ್ಮ ಹಾಡಿನ ಮೂಲಕ ಪ್ರೇಕ್ಷಕರಿಗೆ ಧರ್ಮ ತತ್ವ, ನೀತಿ ಬೋಧಿಸುತ್ತಾರೆ. ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಡಾ. ಬಾಬಾಸಾಹೇಬ ಅಂಬೇಡ್ಕರ್, ಬಸವಣ್ಣ, ಇತಿಹಾಸ, ಸೃಷ್ಟಿಸಿದ ವೀರರ, ಧೀರರ ಕಥೆಗಳು ವಿವಿಧ ತರಹದಿಂದ ಹಾಡುವ ಕಲೆ ಇವರದಾಗಿದೆ. ಭಾರತ ಸ್ವಾತಂತ್ರ್ಯ ಸಂಗ್ರಾಮದ ಅನೇಕ ಹಾಡುಗಳು, ಸಮಕಾಲೀನ ಜೀವನದ ರೀತಿ-ನೀತಿಗಳು ತಿಳಿಸುವ ಸ್ವಾರಸ್ಯಕರ ಹಾಡುಗಳು ಕಟ್ಟಿ ಹಾಡುವರು. ಗೀಗೀ ಮೇಳ ದಕ್ಷಿಣ ಕರ್ನಾಟಕದಲ್ಲಿ ಜನಪ್ರಿಯವಾಗಿರುವ 'ಲಾವಣಿ' ಕಲೆಗಳ ಒಂದು ರೂಪವೆಂದು ಹೇಳಬಹುದು. ಗೀಗೀ ಮೇಳದಲ್ಲಿ ಮೂರು ಜನರು ಕಲಾವಿದರಿರುತ್ತಾರೆ. ತಲೆಗೊಂದು ರುಮಾಲು ಕಾಸೆಯುಟ್ಟಿ ಬಿಳಿ ಪಂಚೆ, ಬಿಳಿ ನಿಲಾವಂಗಿಯ ಜುಬ್ಬ ಅದರ ಮೇಲೆ ಜಾಕೀಟು ಹಾಕುವರು. ಟೊಂಕಕ್ಕೆ ಕೆಂಪು ವಸ್ತ್ರ ಕಟ್ಟುವರು. ನಮ್ಮ ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕ ಕಡೆಗೆ ಸಾಮಾನ್ಯ ವೇಷ ಹಾಕಿ,



ತಲೆಗೆ ಕಪ್ಪು ಇಲ್ಲವೆ ಚಾಕಲೇಟ ಬಣ್ಣದ ಟೊಪ್ಪಿಗೆ ಅಥವಾ ಗಾಂಧಿ ಟೊಪ್ಪಿಗೆ ಹಾಕುವರು. ಮುಖ್ಯ ಹಾಡುಗಾರ ಡಪ್ಪು ಬಾರಿಸುತ್ತ ಮುಂದೆ ಹಾಡಿದರೆ, ಹಿಂದೆ ತುಂತುಹೆ, ತಾಳು ಹಾಕುವ ಇಬ್ಬರೂ ಪ್ರತಿ ಸಾಲಿಗೊಮ್ಮೆ, ಮುಮ್ಮೇಳದವನು ಹೇಳಿರುವ ಅರ್ಧ ಸಾಲಿಗೆ ಗೀಯ ಗೀಯ ಗೀಯ ಹೇಳುವರು. ಗೀಗೀ ಮೇಳದ ಸಾರಸ್ಯ ಇರುವುದು ಕೊನೆಯ ಸಾಲಿನಲ್ಲಿ ಮಾತ್ರ ಹಾಡಿನ ಮಧ್ಯ ಮಧ್ಯೆ ತಮ್ಮ ನಾಯಕನಿಗೆ ಹುರಿದುಂಬಿಸಲು ಹಾಂ, ಹೇಳ್ಪಾ, ಏನು ಹೇಳ್ಪಾ ಎನ್ನುವರು. ಈ ತಂಡದವರು ಆಶು ಕವಿಗಳಿದ್ದಂತೆ, ವೇದಿಕೆ ಮೇಲೆ ನಿಂತಾಗಲೇ ತಮ್ಮ ಕಣ್ಣಿಗೆ ಕಾಣುವುದನ್ನು ಹಾಡುಕಟ್ಟಿ ಹಾಡುವ ಕೌಶಲ್ಯತೆ ಅವರಲ್ಲಿರುವುದು. ರೇಷನ್ ಪದ್ಧತಿ, ವೇಶ್ಯೆಯರು, ಮಟಕ, ಜೂಜು, ಆಧುನಿಕ ಸಿನಿಮಾ ನಾಟಕಗಳು, ಸಾಮಾಜಿಕ ಪಿಡುಗುಗಳು, ಅತಿವೃಷ್ಟಿ, ಅನಾವೃಷ್ಟಿ ಪ್ರಚಲಿತ ಜೀವನಕ್ಕೆ ಸಂಬಂಧ ಪಡುವ ಹಲವಾರು ಉಪಾಯಗಳ ಹಾಡು ಕಟ್ಟಿ ಪ್ರಾಸಬದ್ಧ ಪದಗಳ ದ್ವಂದ್ವಾರ್ಥ ಬಹಳ ಸ್ವಾರಸ್ಯವಾಗಿರುತ್ತದೆ. ಔರಂಗ ಜೇಬನ ಆಸ್ಥಾನದಲ್ಲಿ ಷಹಾಲಿ ಮತ್ತು ತುಕಾನ ಗಿರಿ ಎಂಬುವರು ಸವಾಲ್- ಜವಾಬ್ ಎಂದು ಕರೆದರು. ಇದನ್ನು ಹಿ.ಚಿ. ಬೋರಲಿಂಗಯ್ಯನವರು ಸಂಪಾದಿಸಿರುವ ಕನ್ನಡ ವಿಶ್ವವಿದ್ಯಾಲಯದ ಕರ್ನಾಟಕದ ಜನಪದ ಕಲೆಗಳ ಕೋಶ" ಎಂಬ ಗ್ರಂಥದಲ್ಲಿ ಟಿ.ಎಸ್. ರಾಜಪ್ಪ ಅವರು ತಮ್ಮ ಲೇಖನದಲ್ಲಿ ಔರಂಗ ಜೇಬರ ಪ್ರಸ್ತಾಪ ಮಾಡಿದ್ದಾರೆ.

ಹರದೇಶಿ-ನಾಗೇಶಿ ಮೇಳದಲ್ಲಿ ಎರಡು ತಂಡಗಳಿರುತ್ತವೆ. ಒಂದು ಗಂಡಿನ ಪಕ್ಷ ಶ್ರೇಷ್ಠವೆಂದು ಹಾಡಿದರೆ, ಮತ್ತೊಂದು ಹೆಣ್ಣಿನ ಪಕ್ಷ ಶ್ರೇಷ್ಠವೆಂದು ಹಾಡುವರು. ಹರದೇಶಿಯವರು ಗಂಡುದೇವತೆ ಶ್ರೇಷ್ಠವೆಂದು ಹಾಡಿದರೆ, ನಾಗೇಶಿಯವರು ಶ್ರೇಷ್ಠವೆಂದು ಹಾಡುವರು. ಉರ್ದುದಲ್ಲಿ "ಲಸಾಕಮ್ಮತರ" ಎಂದು ಕರೆದರೆ, ಕನ್ನಡದ 'ಲಾವಣಿ' ಪದಕ್ಕೆ ಸಂವಾದಿಯಾಗಿರುವ ಇಂಗ್ಲಿಷಿನ 'ಬ್ಯಾಲೆಡ" ಎಂದು ಕರೆಯುತ್ತಾರೆ. ಈ ಹಾಡುಗಳಲ್ಲಿ ಭಾಷೆಯ ಬೆಡಗು

“ರಸಿಕರು ಆಡುವ ಮಾತು ಶಶಿ ಉದುಶಿ ಬಂದಂತೆ”  ಕೆಲವು ಸಲ ಅಶ್ಲೀಲ ಪದಗಳು ತನ್ನಿಂದ ತಾನೇ ನುಗ್ಗಿ ಬರುತ್ತವೆ. ಗೀಗೀ ಮೇಳದ ಸಾಮಾನ್ಯ ವಾದ್ಯಗಳೊಂದಿಗೆ ಸವಾಲ್-ಜವಾಬ್ ನಡೆಯುತ್ತದೆ. ಕಲಾವಿದರು ತಮ್ಮ ತಂಡದ ಪರವಾಗಿ ಎದೆತಟ್ಟಿ-ಕೈಯೆತ್ತಿ ಅಭಿಮಾನದಿಂದ ಹಾಡುಗಳ ಮೂಲಕ ವರ್ಣಿಸುತ್ತಾರೆ. ಕಲ್ಲಿ-ತುರಾಯಿ ನಡೆಯುವ ಜಾಗದಲ್ಲಿ ಜನರು ಗುಂಪುಗೂಡಿ ವಾದ-ವಿವಾದಕ್ಕೆ ಪ್ರೋತ್ಸಾಹ ಕೊಟ್ಟು ಚಪ್ಪಾಳೆ ತಟ್ಟುವರು. ಗ್ರಾಮೀಣರು ಹಬ್ಬ-ಹರಿದಿನಗಳಲಿ, ಜಾತ್ರೆ- ಉತ್ಸವದ ವಿಶೇಷ ಸಂದರ್ಭಗಳಲ್ಲಿ ಗೀಗೀ ಮೇಳದವರಿಗೆ ಕರೆಯಿಸಿ ಗೀಗೀ ಹಾಡು ಹಾಡಿಸುವರು. ತಮ್ಮೂರ ಜಾತ್ರೆಗೆ ಪರಸ್ಥಳದಿಂದ ಬಂದಿರುವ ಜನರಿಗೂ ಸಂತುಷ್ಟ ಪಡಿಸುತ್ತಾರೆ. ಕಲಾವಿದರು ನೀಡಿದ ಪ್ರದರ್ಶನಕ್ಕೆ ಪ್ರತಿಯಾಗಿ, ಪ್ರೇಕ್ಷಕರು ತಮ್ಮ ಯೋಗ್ಯತೆಗೆ ತಕ್ಕಂತೆ ಆಮೇರಿ (ಬಹುಮಾನ) ಮಾಡುವರು. ಜಾತ್ರೆ ಹಮ್ಮಿಕೊಂಡಿರುವ ಊರಿನವರು ಅಡಕೆ ಕೊಟ್ಟು ಬೀದಾಯಿ ಮಾತಾಡಿ ಇವರಿಗೆ ಕರಿಸಿರುತ್ತಾರೆ. ತಾವು ಮಾತಾಡಿರುವಂತೆ ಹಣಕೊಟ್ಟು, ಕಳಿಸುತ್ತಾರೆ. ಗೀಗೀ ಹಾಡುಗಾರರು, ಕಲಬುರಗಿ, ಬೀದರ, ಮಾದಗಿರಿ, ಬೆಳಗಾವಿ, ಧಾರವಾಡ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳಲ್ಲಿಯೂ ಈ ಕಲಾವಿದರು ಬಹು ಸಂಖ್ಯೆಯಲ್ಲಿದ್ದಾರೆ.



**ಡೊಳ್ಳು ಕುಣಿತ :** ಜನಪದ ಕಲೆಗಳಲ್ಲಿಯೇ ಗಂಡು ಕಲೆಯೆಂದು ಹೆಸರಾದ ಡೊಳ್ಳು ಕುಣಿತ ಪುರುಷರಿಗೆ ಮಾತ್ರ ಮೀಸಲಾದ ಕುಣಿತವಾಗಿದೆ. ಇತ್ತೀಚೆಗೆ ಹೆಣ್ಣು ಮಕ್ಕಳು ಕೂಡಾ ಡೊಳ್ಳು ಕುಣಿತ ಮಾಡುತ್ತಿರುವುದು ಸಂವಹನ ಮಾಧ್ಯಮದಿಂದ ಕಂಡುಬರುತ್ತಿದೆ. ಡೊಳ್ಳು ಕುಣಿತಕ್ಕೆ ಅಟ್ಟಕಟ್ಟಾದ ಮೈಕಟ್ಟುಳ್ಳ, ಪ್ರಬಲ ಶಕ್ತಿಯುಳ್ಳವರಾಗಿರಬೇಕು. ಈ ಕಲೆ ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕದ ಬಹು ಭಾಗಗಳಲ್ಲಿ ಹಾಗು ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಡೊಳ್ಳು ಕುಣಿತ ವೈಶಿಷ್ಟ್ಯ ಪೂರ್ಣಶೈಲಿಗಳಿಂದ ಕೂಡಿದೆ. ಡೊಳ್ಳು ಕುಣಿತ ಒಂದು ರೀತಿಯ ಜನಪದ ಶಾಸ್ತ್ರೀಯ ಕಲೆಯಾಗಿ ಬೆಳೆದಿದೆ. ಡೊಳ್ಳು ಬಾರಿಸುವಾಗ, ಕುಳಿತು ಬಾರಿಸುವುದು, ಲಾಗ ಹಾಕುವುದು, ಹಾರಿ ಬಾರಿಸುವುದು, ಮಂಡಿ ಬಡಿತ, ಮರುಗಾಲ ಬಡಿತ, ಗಾಡಿ ಚಕ್ರದ ಬಡಿತ ಇತ್ಯಾದಿ ಕುಣಿತಗಳು ಮಾಡುವರು. ಜಾಂಗ ಬಾರಿಸುತ್ತ ಡೊಳ್ಳು ಬಾರಿಸುತ್ತ ಕುಣಿಯುವುದರಿಂದ ಡೊಳ್ಳು ಕುಣಿತವೆಂದು ಕರೆಯುತ್ತಾರೆ.

**ಬಯಲಾಟ:** ಮಾನವನ ಬುದ್ಧಿ ಬೆಳವಣಿಗೆಗೆ ಬಯಲಾಟಗಳು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮಹತ್ವದ ದಾಖಲೆಗಳಾಗಿವೆ. ಬಯಲಾಟವು ಮೂಲತಃ ದೈವಿ ಆರಾಧನೆಗಾಗಿ ಹುಟ್ಟಿಕೊಂಡಿರುವ ಆಟವಾಗಿದೆ. ಗ್ರಾಮದೇವತೆಯ ಗರ್ಭಗುಡಿಯಲ್ಲಿ ಬಯಲಾಟ ಹುಟ್ಟಿಕೊಂಡಿತು. ಅಲ್ಲಿ ಜನರಿಗೆ ಜಾಗ ಸಾಲದ್ದರಿಂದ ಪಡಸಾಲೆವರೆಗೂ ಬೆಳೆದು ಬಂತು. ಅಲ್ಲಿಯೂ ಜನಸಂದಣಿ ಸೇರುವುದರಿಂದ ಪಾರಾಂಗಣಕ್ಕೆ ಬಂತು.

ಪಾರಾಂಗಣದಲ್ಲಿಯೂ ಜನದಟ್ಟಣೆ ಅಧಿಕವಾಗಿದ್ದರಿಂದ ಬಯಲಿಗೆ ಬಂದು ಬಯಲಾಟವಾಯಿತು. ಬಟಾಬಯಲಿನಲ್ಲಿ ಆಡುವ ಆಟಕ್ಕೆ ಬಯಲಾಟವೆಂದು ಕರೆಯುತ್ತಾರೆ.

ತಮಿಳು ತೇರು ಕೂತ್ತು ತೇರು-ಬೀದಿ ಕೂತ್ತು-ಆಟ

ಕರ್ನಾಟಕ ಬಯಲಾಟ ಬಯಲು + ಆಟ

ಆಂಧ್ರಬೀಧೀ ನಾಟಕವೀದೀ-ವೀದ ನಾಟಕ-ಆಟ

ಕೇರಳ ರಾಮನಾಟ್ಟಂ ಅಟ್ಟ ಕಥಾ ಕಥಕ್ಕಳಿ

**ದೊಡ್ಡಾಟ**

ದೊಡ್ಡಾಟದಲ್ಲಿ ದೇವತೆಗಳಿಗಾಗಿ ಆಟ್ಟದ ಮೇಲೆ ಅಟ್ಟ ಕಟ್ಟಿರುತ್ತಾರೆ. ಕುರ್ಚಿ ಬೆಂಚುಗಳು ಹಾಕಿರುತ್ತಾರೆ. ದೊಡ್ಡಾಟದಲ್ಲಿ ಪಾತ್ರಧಾರಿಗಳು ಒಂದು ಮಗ್ಗಲಿನ ಪರದೆಯಿಂದ ಬಂದು ಅದೇ ಮಗ್ಗಲ ಪರದೆಯಿಂದ ಹಿಂದುರುಗುತ್ತಾರೆ. ದೊಡ್ಡಾಟ ಸ್ತ್ರೀಪಾತ್ರಗಳು ಬರುವಾಗ ಶಾಲು ಮರೆಮಾಡಿ ಹಿಡಿದು ಪ್ರೇಕ್ಷಕರ ಕುತೂಹಲ ಕೆರಳಿಸುವರು. ದೊಡ್ಡಾಟದಲ್ಲಿ ದುಷ್ಟ ಸಂಕೇತವಾಗಿ ರಾಕ್ಷಸ ಪಾತ್ರಗಳು ಪ್ರೇಕ್ಷಕರ ಮಧ್ಯದಿಂದಲೇ ಹಲಗೆ, ನಗಾರಿ ವಾದ್ಯಗಳು ಬಾರಿಸುತ್ತಲೇ ರಂಗಪ್ರವೇಶ ಮಾಡುತ್ತಿರುತ್ತೇವೆ. ದೊಡ್ಡಾಟದಲ್ಲಿ ಅಡ್ಡ ಸೋಂಗಗಳು ಹೊರಗಿನಿಂದಲೆ ರಂಗ ಮಂಟಪಕ್ಕೆ ಬಂದು ತಮ್ಮ ಕಲೆ ಅಭಿವ್ಯಕ್ತಪಡಿಸಿ ರಂಗ ಮಂಟಪದಿಂದಲೇ ಹೊರಹೋಗುತ್ತಾರೆ. ಇಲ್ಲಿ ಸಾರಥಿ ಇರುತ್ತಾನೆ. ರಂಗ ಪ್ರವೇಶಿಸಿದ ಪಾತ್ರಗಳಿಗೆ ದೊಡ್ಡಾಟದಲ್ಲಿ ತೆಂಗು, ಲಿಂಬೆಹಣ್ಣು ನೀವಾಳಿಸಿ ದೃಷ್ಟಿ ತೆಗೆಯುತ್ತಾರೆ. ಇಲ್ಲಿ ಮುಖದ ಮೇಲಿಂದ ಇಳಿಸಿ ಒಗೆಯುತ್ತಾರೆ. ದೊಡ್ಡಾಟದಲ್ಲಿ ಮೊದ್ಲು ದೀವಟಿಗೆ ಕ್ರಮೇಣ

ಚಿಮಣಿ, ಹಿಲಾಲು, ಗ್ಯಾಸ್, ಗ್ರಾಸ್ ಬತ್ತಿ, ಹತ್ತಿಕಾಳದಲ್ಲಿ ಒಳ್ಳೆಣ್ಣೆ ಹಾಕಿ ಹಚ್ಚಿದ ಬೆಳಕು ವಿದ್ಯುತ್ ದೀಪ ಬಳಸಲು ಆರಂಭಿಸಿದರು. ದೊಡ್ಡಾಟದ ವೇಷ-ಭೂಷಣಗಳು ಭರ್ಜರಿ ಆಗಿರುತ್ತವೆ. ಮುಖ-ಕೈ-ಕಾಲುಗಳಿಗೆಲ್ಲ ಕೆಂಪು-ಬಿಳಿ, ನೀಲಿ ಮಿಶ್ರಿತ ಬಣ್ಣಗಳು ಬಳಿದು ಸೌಂದರ್ಯ ಹೆಚ್ಚಿಸುತ್ತಾರೆ. ದೊಡ್ಡಾಡದಲ್ಲಿ ಉಣ್ಣೆಗುರಿ ಕೂದಲಿನಿಂದ ಮೀಸೆ ತಯಾರಿಸಿ ಹಚ್ಚುತ್ತಾರೆ. ತಲೆ ಮತ್ತು ಭುಜಕ್ಕೆ ದೊಡ್ಡಾಟದಲ್ಲಿ ಕಿರೀಟವಿದ್ದು ತಲೆ ಮೇಲೆ ಕಪ್ಪು ಕೂದಲು ಇಳಿಬಿಟ್ಟಿರುತ್ತಾರೆ. ಪಾತ್ರಧಾರಿಯ ಭುಜದ ಮೇಲಿಂದ ಕಾಲಿನವರೆಗೂ ದೊಡ್ಡಾಟದಲ್ಲಿ ಬಣ್ಣದ ಬಟ್ಟೆ ಕಟ್ಟಿರುತ್ತಾರೆ. ದೊಡ್ಡಾಟದಲ್ಲಿ ಸ್ತ್ರೀಪಾತ್ರಗಳಿಗೆ ತಲೆಗೆ ಚಿಕ್ಕ ಕಿರೀಟ, ಜರತಾರಿ ಸೀರೆ, ಚಿತ್ರಮಾಲಾ ಕುಪ್ಪಸ ಕೊರಳಲ್ಲಿ ಊರಿನ ಸ್ತ್ರೀಯರ ಆಭರಣ ಕೈಯಲ್ಲಿ ಬಳೆಗಳು, ಹಣೆಯಲ್ಲಿ ಕುಂಕುಮ ಇಟ್ಟು ತದರೂಪ ಸ್ತ್ರೀಯರಂತೆ ಕಾಣುತ್ತಾರೆ. ದೊಡ್ಡಾಟದಲ್ಲಿ ದೇವತೆಗಳ ಪಾತ್ರಗಳು ಸೌಮ್ಯತೆಯಿಂದಿದ್ದು ಗಡ್ಡಾ-ಮೀಸೆ ಆಯಾ ದೇವತೆಗಳ ಉಡಿಗೆ- ತೊಡಿಗೆ ಧರಿಸುವರು. ದೊಡ್ಡಾಟದಲ್ಲಿ ರಾಕ್ಷಸರ ಪಾತ್ರಗಳಿಂದ ಜನರಲ್ಲಿ ಭಯ ಹುಟ್ಟಿಸುವಂತೆ ವಿಚಿತ್ರವಾದ ವೇಷ ಹಾಕಿರುತ್ತಾರೆ. ದೊಡ್ಡಾಟದಲ್ಲಿ ಮುಮ್ಮೇಳ-ಹಿಮ್ಮೇಳ ಇರುತ್ತಾರೆ. ಮುಮ್ಮೇಳದವರು ಪಾತ್ರದೊಂದಿಗೆ ಹಾಡಿದ್ದರೆ, ಹಿಮ್ಮೇಳದವರು ಜೋರಾಗಿ ಕೋರಸ ಕೊಡುತ್ತಾರೆ. ದೊಡ್ಡಾಟದಲ್ಲಿ ಸಾರಥಿ ಪಾತ್ರಕ್ಕೆ ನಿಗದಿಯಾದ ವೇಷ-ಭೂಷಣವಿಲ್ಲ. ಹಾಸ್ಯವನ್ನುಂಟು ಮಾಡುವ ವಿಚಿತ್ರ ವೇಷ ಧರಿಸಿ ಜನರನ್ನು ರಂಜಿಸುತ್ತಾನೆ. ಹರಕು ಮುರುಕು ವೇಷದಿಂದಲೇ ಅವನ ಪಾತ್ರಕ್ಕೆ ಶೋಭೆ ಒದಗುತ್ತದೆ. ದೊಡ್ಡಾಟದಲ್ಲಿ ಪಾತ್ರಗಳು ಕುಣಿಯುತ್ತ ಹಾಡು ಹೇಳುತ್ತ ಶಬ್ಬಾಶ್, ಶಬ್ಬಾಶ್, ಎನ್ನುತ್ತ ಹೇಳುತ್ತೇನೆ ಕೇಳುವಂತವನಾಗು, ಅದೇನಿರುವುದು ಹೇಳುವಂತವನಾಗು ಎಂದು ಹಾಡು ಆರಂಭಿಸುತ್ತಾರೆ. ದೊಡ್ಡಾದಲ್ಲಿ ಉಕ್ಕಿನ ಗುಂಬು ತಾಳುಗಳು, ಹಾರ್ಮೋನಿಯಂ, ತಬಲಾ ಮೃದುಂಗ ಬಾರಿಸುತ್ತಾರೆ

**ಸಣ್ಣಾಟ**

ಸಣ್ಣಾಟದಲ್ಲಿ ಚಿಕ್ಕದಾದ ಅಟ್ಟಕಟ್ಟಿ ಇಲ್ಲಿ ಕುರ್ಚಿ ಬೆಂಚುಗಳು ಹಾಕಿರುವುದಿಲ್ಲ. ಸಣ್ಣಾಟದ ಪಾತ್ರಧಾರಿಗಳು ಒಂದೇ ಮಗ್ಗಲಿನ ಪರದೆಯಿಂದ ಬಂದು ಅದೇ ಮಗ್ಗುಲಿಂದಲೇ ಒಳಹೋಗುತ್ತಾರೆ. ಸಣಾಟದ ಸ್ತ್ರೀಪಾತ್ರಗಳು ಬರುವಾಗಲೂ ಶಾಲು ಮರೆ ಹಿಡಿದು ಪ್ರೇಕ್ಷಕರ ಕುತೂಹಲ ಕೆರಳಿಸುವರು. ಸಣ್ಣಾಟದಲ್ಲಿ ರಾಕ್ಷಸ ಪಾತ್ರಗಳು ಇರುವುದಿಲ್ಲ. ದುಷ್ಟ ಗುಣದ ವ್ಯಕ್ತಿಗಳು ಇರುತ್ತಾರೆ. ಸಣ್ಣಾಟದಲ್ಲಿಯೂ ಅಡ್ಡ ಸೊಲಿಗಗಳು ದೊಡ್ಡಾಟದಲ್ಲಿ ಇರುವಂತೆ ಬಂತು ಹೋಗುತ್ತಾರೆ.ಪಾತ್ರಧಾರಿಗಳಿಗೆ ಸಣ್ಣಾಟದಲ್ಲಿ ತೆಂಗು ಒಡೆಯದೆ, ದೃಷ್ಟಿ ತೆಗೆಯದೆ ಹಾಗೆಯೇ ಪರಿಚಯಿಸಿ ಮಾತನಾಡಿಸುವರು. ಸಣ್ಣಾಟದಲ್ಲೂ ದೀವಟಿಗೆ, ಕ್ರಮೇಣ, ದೊಡ್ಡ ಚಿಮಣಿ ಗ್ಯಾಸ್, ಕಂದೀಲುಗಳು ಬಳಸುತ್ತಾರೆ. ಸಣ್ಣಾಟದ ವೇಷ-ಭೂಷಣ ಸಾಧಾ-ಸೀದಾ ರಾಜರ ಪಾತ್ರಗಳಿದ್ದರೆ ರಾಜಪೋಷಾಕ ಹಾಕಿರುತ್ತಾರೆ. ಮುಖಕ್ಕೆ ಕೆಂಪು, ಬಿಳಿ ಮಿಶ್ರಿತ ಬಣ್ಣ ಬಳಿದು ಸೌಂದರ್ಯ ವೃದ್ಧಿಸುತ್ತಾರೆ. ಸಣ್ಣಾಟದಲ್ಲಿ ರಾಜಪೋಷಾಕವಿದ್ದು ಇಲ್ಲಿಯೂ ಕಪ್ಪು ಕೂದಲು ಬಿಟ್ಟಿರುತ್ತಾರೆ. ಸಣ್ಣಾಟದಲ್ಲಿ ರಾಜ ಪೋಷಾಕವಿದ್ದು ಇಲ್ಲಿಯೂ ತಲೆಗೆ ಕಪ್ಪು ಕೂದಲು ಇಳಿಬಿಟ್ಟಿರುತ್ತಾರೆ. ಸಣ್ಣಾಟದಲ್ಲಿ ರಾಜರ ಮನೆತನದ ಪಾತ್ರಗಳಿಗೆ ಬೆನ್ನಿಗೆ ಬಟ್ಟೆ ಕಟ್ಟಿರುತ್ತಾರೆ. ಸಾಮಾನ್ಯ ಪಾತ್ರಧಾರಿಗಳಿಗಿಲ್ಲ. ಸಣ್ಣಾಟದಲ್ಲಿ

ಸ್ತ್ರೀಪಾತ್ರಗಳಿಗೆ ಇಲ್ಲಿಯೂ ಚಿಕ್ಕ ಕಿರೀಟ ಧರಿಸಿ ಕೈಗೆ ಬಳೆಗಳು, ಆಭರಣಗಳು ಕೊರಳಿಗೆ ಹಾಕಿ ಕುಂಕುಮವಿಟ್ಟು ಸ್ತ್ರೀಯರಂತೆ



ಕಾಣುತ್ತಾರೆ. ಸಣ್ಣಾಟದಲ್ಲಿಯೂ ಆಯಾ ದೇವತೆಗಳ ಉಡುಗೆ ತೊಡಿಗೆಗಳು ಧರಿಸಿರುತ್ತಾರೆ. ಸಣ್ಣಾಟದಲ್ಲಿ ದುಷ್ಟಪಾತ್ರಗಳು ಇರುತ್ತಾರೆ. ಸಣ್ಣಾಟದಲ್ಲಿಯೂ ಹಿಮ್ಮೇಳ ಮುಮ್ಮೇಳದವರು ಇರುತ್ತಾರೆ. ಮುಮ್ಮೇಳದವರು ಪಾತ್ರದೊಂದಿಗೆ ಹಾಡಿದರೆ, ಹಿಮ್ಮೇಳದವರು ಕೋರಸ್ ಕೊಡುವರು. ಸಣ್ಣಾಟದಲ್ಲಿ ಡಪ್ಪು ಬಾರಿಸುವವರೆ ಸಾರಥಿ ಕಾರ್ಯ ನಿರ್ವಹಿಸುತ್ತಾರೆ. ವೇಷ-ಭೂಷಣ ಸೀಧಾ-ಸಾದಾ ಆಗಿರುತ್ತವೆ. ಸಣ್ಣಾಟದಲ್ಲಿಯೂ ಪಾತ್ರಗಳು ದೊಡ್ಡಾಟದಂತೆ, ವಾದ-ಸಂವಾದ ಹೇಳುತ್ತೇನೆ ಕೇಳುವಂತವನಾಗು ಅದೇನಿರುವುದು ಹೇಳುವಂತವನಾಗು ಎಂದು ಹಾಡು ಹೇಳುವರು. ಸಣ್ಣಾಟದಲ್ಲಿ ಹಿತ್ತಾಳೆ ತಾಳುಗಳು, ಪಿಟೀಲು, ಹಾರ್ಮೋನಿಯಂ ಬಾರಿಸುತ್ತಾರೆ.

**ಪಾರಿಜಾತ**

ಸಣ್ಣಾಟದಂತೆ ಪಾರಿಜಾತದಲ್ಲೂ ಅಟ್ಟಕಟ್ಟಿ ಕುರ್ಚಿ ಬೆಂಚು ಹಾಕುವುದಿಲ್ಲ. ಪಾರಿಜಾತದಲ್ಲೂ ಒಂದು ಮಗ್ಗಲಿನಿಂದ ಬಂದು, ಒಂದೇ ಮಗ್ಗಲಿನಿಂದ ಒಳ ಹೋಗುತ್ತಾರೆ. ಸ್ತ್ರೀ ಪಾತ್ರಗಳು ಬರುವಾಗ ಪಾರಿಜಾತದಲ್ಲೂ ಶಾಲು ಮರೆ ಹಿಡಿದು ಪ್ರೇಕ್ಷಕರ ಕುತೂಹಲ ಕೆರಳಿಸುವರು. ಪಾರಿಜಾತದಲ್ಲೂ ರಾಕ್ಷಸ ಪಾತ್ರಗಳು ಇರುವುದಿಲ್ಲ. ಆದರೆ ಶ್ರೀಕೃಷ್ಣನೆ ಕಬರವಂಜ ವೇಷ ಹಾಕಿ ಶಕೂನ ಹೇಳುತ್ತಾನೆ. ಪಾರಿಜಾತದಲ್ಲಿ ಧೂತಿ ಪಾತ್ರವು ಎಲ್ಲಾ ಪಾತ್ರಗಳಂತೆಯೇ ನಟನೆ ಮಾಡಿ ನಕ್ಕು ನಗಿಸುತ್ತಾನೆ. ಪಾರಿಜಾತದಲ್ಲೂ ಪೂಜೆ ಮಾಡುತ್ತಾರೆ. ಶ್ರೀಕೃಷ್ಣ-ರುಕ್ಮಿಣಿ, ಸತ್ಯಭಾಮ ಪಾತ್ರಗಳಿಗೆ ತೆಂಗು ಒಡೆಯುತ್ತಾರೆ. ಪಾರಿಜಾತದಲ್ಲೂ ದೀವಟಿಗೆ ಕ್ರಮೇಣ ದೊಡ್ಡ ಚಿಮಣಿ, ಗ್ಯಾಸ್, ಕಂದೀಲುಗಳು ಬಳಸುವರು. ಪಾರಿಜಾತದಲ್ಲಿ ಶ್ರೀಕೃಷ್ಣನ ಉಡುಗೆ ತೊಡಿಗೆ, ರುಕ್ಮಿಣಿ ಸತ್ಯಭಾಮರ ಉಡಿಗೆ ತೊಡಿಗೆ, ಸೀರಿಕುಪ್ಪಸ ಹೂಮಾಲೆಗಳು ಪಾರಿಜಾತ ಪುಷ್ಪಂ ಧರಿಸುವ ಪದ್ಧತಿಯಿದೆ. ಪಾರಿಜಾತದಲ್ಲಿ ಪಾತ್ರಧಾರಿಗಳ ಮುಖಕ್ಕೆ ಮೀಸೆ ತೆಗೆಯುವುದಿಲ್ಲ. ಪಾರಿಜಾತದಲ್ಲಿ ಶ್ರೀಕೃಷ್ಣ- ರುಕ್ಮುಣಿ, ಸತ್ಯಭಾಮೆಯರ ಉಡಿಗೆತೊಡುಗೆಗಳು ಇರುತ್ತವೆ. ಪಾರಿಜಾತದಲ್ಲಿ ರಾಜಕಾರಣಿಯರ ಪಾತ್ರಧಾರಿಗಳು ಇರುವುದಿಲ್ಲ. ಪಾರಿಜಾತದಲ್ಲಿ ಸ್ತ್ರೀಪಾತ್ರಗಳು ತಮ್ಮ ಹೆಸರಿಗೆ ತಕ್ಕ ಉಡುಗೆ ಧರಿಸಿರುತ್ತಾರೆ. ಇವರು ದೇವಲೋಕದ ಕನ್ನೆಯರೆಂದೇ ಭಾವಿಸುತ್ತಾರೆ. ಪಾರಿಜಾತದಲ್ಲಿ ಗಡ್ಡ-ಮೀಸೆ ತೆಗೆಯುವ ಅವಶ್ಯಕತೆಯಿಲ್ಲ ಅವರ ಹೆಸರಿಗೆ ಉಡಿಗೆ ತೊಡಿಗೆ ಧರಿಸಿರುತ್ತಾರೆ. ಪಾರಿಜಾತದಲ್ಲಿ ದುಷ್ಟಪಾತ್ರಗಳು ಇರುವುದಿಲ್ಲ. ಶ್ರೀಕೃಷ್ಣ ಕೊರವಂಜಿ ವೇಷ ಧರಿಸಿ ಶಕೂನ ಹೇಳುತ್ತಾನೆ. ಪಾರಿಜಾತದಲ್ಲಿಯೂ ಮುಮ್ಮೇಳ ಹಿಮ್ಮೇಳದವರಿರುತ್ತಾರೆ. ಪಾತ್ರದೊಂದಿಗೆ ತಮ್ಮ ಕಂಚಿನ ಕಂಠದಿಂದ ರಾಗ ಬದ್ಧವಾಗಿ ಹಾಡು ಹಾಡುತ್ತಾರೆ.

ಪಾರಿಜಾತದಲ್ಲಿ ಧೂಲೆಮ ಪಾತ್ರವೇ ಸಾರಥಿಯ ಕಾರ್ಯ ನಿರ್ವಹಿಸುವನು ಉಡುಗೆ ಸಾಮಾನ್ಯವಾದವುಗಳು ಇರುತ್ತವೆ. ಪಾರಿಜಾತದಲ್ಲಿಯೂ ಪಾತ್ರಧಾರಿಗಳು ದೊಡ್ಡಾಟದಂತೆ ನಡೆಯಿಸಿಕೊಳ್ಳುತ್ತಾರೆ. ಅದೇ ರೀರಿಯಾಗಿ ಇಲ್ಲಿಯೂ ನಡೆಯುತ್ತದೆ. ಪಾರಿಜಾತದಲ್ಲಿ ಉಕ್ಕಿನ ಗೂಬು ತಾಳಗಳು ಹಾರ್ಮೋನಿಯಂ ತಬಲಾ ಬಾರಿಸುತ್ತಾರೆ.

**ಯಕ್ಷಗಾನ**

ಯಕ್ಷಗಾನದಾಟಕ್ಕೆ ವಿಶಾಲವಾದ ಸ್ಥಳ ಎತ್ತರವಾದ ಅಟ್ಟ ರಂಗಮಂಟಪ ಇರಬೇಕು.



ಯಕ್ಷಗಾನದ ಪಾತ್ರೆಗಳು ಎರಡೂ ಮಗ್ಗಲುಗಳಿಂದಲೂ ಬಂದು ಹೋಗುವ ಪದ್ಧತಿಯಿದೆ. ಯಕ್ಷಗಾನದ ಸ್ತ್ರೀಪಾತ್ರಗಳು ಹೀಗೆ ಬರಬೇಕೆಂಬ ನಿರ್ಬಂಧವಿಲ್ಲ. ಸುತ್ತಲಿನಿಂದಲೂ ತಿರುಗಾಡಿ ಕುಣಿಯುತ್ತಾರೆ. ಯಕ್ಷಗಾನದಲ್ಲಿ ರಾಕ್ಷಸ ಪಾತ್ರಗಳು ಇರುತ್ತಾರೆ. ಯಕ್ಷಗಾನದಲ್ಲಿ ಹನುಮನಾಮಕ ಪಾತ್ರ ಎಲ್ಲರಿಗೂ ಎಲ್ಲರಿಗೂ ರಂಜಿಸುತ್ತಾನೆ. ರಂಜಿಸುತ್ತಾನೆ. ಯಕ್ಷಗಾನದಲ್ಲಿ ಆಟ ಆರಂಭಿಸುವುದಕ್ಕಿಂತ ಮೊದಲೇ ಪೂಜೆ ಕಾರ್ಯ ನೆರವೇರಿಸುತ್ತಾರೆ. ಯಕ್ಷಗಾನದಲ್ಲಿ ಪೆಟ್ರೊಮ್ಯಾಕ್ಸ್, ದೊಡ್ಡ ಚಿಮಣಿ, ಕಂದೀಲುಗಳು ಹತ್ತಿ ಕಾಳಿನ ಬೆಳಕು ವಿದ್ಯುತ್ ಬಳಕೆಯು ಮಾಡುತ್ತಿರುತ್ತಾರೆ. ಯಕ್ಷಗಾನದ ಪಾತ್ರಧಾರಿಗಳಿಗೆ ತಕ್ಕ ವೇಷ-ಭೂಷಣಗಳು ಒಂದು ರೀತಿಯ ಮನರಂಜನೆ ಪ್ರೇಕ್ಷಕರಲ್ಲಿ ಕುತೂಹಲ ಕೆರಳಿಸುವ ವಿದ್ಯೆಯು ಕಂಡುಬರುತ್ತದೆ. ಯಕ್ಷಗಾನದಲ್ಲಿ ಆಕರ್ಷಕವಾಗಿ ದಟ್ಟವಾದ ಕೂದಲಿನ ಮೀಸೆ ಹಚ್ಚಿರುತ್ತಾರೆ. ಯಕ್ಷಗಾನದಲ್ಲಿ ಎಲ್ಲಾ ಪಾತ್ರಗಳಿಗೂ ಅಲಂಕೃತವಾದ ಆಕರ್ಷಕ ಉಡಿಗೆತೊಡಿಗೆಗಳು ಇರುತ್ತವೆ. ಯಕ್ಷಗಾನದಲ್ಲಿ ರಾಜ-ರಾಣಿಯರ ಪಾತ್ರಗಳು ಆಯಾ ಪಾತ್ರಕ್ಕೆ ತಕ್ಕ ಉಡಿಗೆ-ತೊಡಿಗೆ ಧರಿಸಿರುವೇ ಯಕ್ಷಗಾನದಲ್ಲಿ ಸ್ತ್ರೀ ಪಾತ್ರಗಳು ಸಹ ಆಕರ್ಷಕ ರೀತಿಯಲ್ಲಿ ಕೊರಳಿಗೆ ದಪ್ಪಾದ ಮಣಿಗಳ ಸರಗಳು ಹಾಕಿರುವರು. ಬಿಗಿಯಾದ ಉಡುಗೆ ಧರಿಸಿರುತ್ತಾರೆ. ಯಕ್ಷಗಾನದಲ್ಲಿ ಗಡ್ಡ-ಮೀಸೆ ಭಯಾನಕ ರೀತಿಯಲ್ಲಿ ಹಚ್ಚುವರು. ದೇವತೆಗಳ ಪಾತ್ರಕ್ಕೆ ತಕ್ಕ ಉಡಿಗೆ-ತೊಡಿಗೆ ಧರಿಸುತ್ತಾರೆ. ಯಕ್ಷಗಾನದಲ್ಲೂ ರಾಕ್ಷಸ ಪಾತ್ರಗಳಿರುತ್ತಾರೆ ಭಯಾನಕ ರೀತಿಯ ವೇಷ- ಭೂಷಣ ಧರಿಸಿರುತ್ತಾರೆ ಯಕ್ಷಗಾನದಲ್ಲಿ ಮೇಳಗಳೀರುತ್ತವೆ. ರಾಗಬದ್ಧವಾಗಿ ಅರ್ಥಗರ್ಭಿತವಾದ ರೀತಿಯಲ್ಲಿ ಹಾಡುತ್ತಾರೆ. ಇಲ್ಲಿ ಹನುಮನಾಯಕ ಇರುತ್ತಾನೆ. ಭಾಗವತರು ಇಲ್ಲಿ ಎಲ್ಲರಿಗೂ ಪರಿಚಯಿಸುತ್ತಾನೆ. ಈ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಯಕ್ಷಗಾನದಲ್ಲಿಯೂ ಪಾತ್ರಧಾರಿಗಳು ಕುಣಿಯುತ್ತಾರೆ. ಇಲ್ಲಿಯೂ ಸಂವಾದ ನಡೆಯುತ್ತದೆ. ಹಾಡಿನೊಂದಿಗೆ ಕುಣಿತವು ಮಾಡುತ್ತಿರುತ್ತಾರೆ. ಯಕ್ಷಗಾನದಲ್ಲೂ ಉಕ್ಕಿನ ಗುಂಬು ತಾಳಗಳು ಪೇಟಿ ತಬಲಾ, ಮದ್ದಳೆ ಬಾರಿಸುತ್ತಾರೆ.

ಸಾರಥಿಯ ಮಧುರ ಮಾತುಗಳು ಚುಚ್ಚಿ ಹೇಳುವ, ಅಣಕದೊಂದಿಗೆ ಹೊಗಳುವ ಮಾತುಗಳು ಹೀಗಿವೆ. ರಾಜರ, ರಾಜಕುಮಾರರ ಪಾತ್ರಗಳು ದೇವದೇವತೆಯ ಪಾತ್ರಗಳು ಬಂದಾಗ ಹೀಗೆ ಹೇಳುತ್ತಾರೆ. ಇಲ್ಲಿ ಸಹೃದಯ ವಿಮರ್ಶಕನಾಗಿರುವ ಸಾರಥಿ ಹೇಳುವ ಕೊನೆ ಸಾಲುಗಳು ಇಂತಿವೆ...ದೊರೆಯೇ ಹತ್ತಿಕಟ್ಟಿಗೆ ಹೊರೆಯೇ ಬುದ್ಧಿ ನಿದ್ಧಿಗಟ್ಟಿ ಬಿದ್ದಿ, ದೊರೆಯೇ ಕರಸೂರದವರೆಯೆ, ದೇವಾ ದಿವ್ಯಾ ಪ್ರಭಾವ, ರಾಜಾ ರವಿಕೋಟಿ ತೇಜಸ್ವಾಮಿ ಭಕ್ತ ಜನಪ್ರೇಮಿ ತಾಯಿ ನಿಮ್ಮ ಕಣ್ಣಾಗ ಹಣ್ಣ ಮೆಣಸಿನಕಾಯಿ ತಾಯಿ ಮಧೂರ ಮಾವಿನ ಕಾಯಿ, ತಾಯಿ ಜನನಿ ಕಲಹಂಸ ಗಾಮಿನಿ, ಮಾತೆ ಲೋಕ ಪ್ರಖ್ಯಾತೆ ಎಂದು ಪ್ರೇಕ್ಷಕರನ್ನು ನಗೆಯಗದ್ದಲಲ್ಲಿ ಮುಳುಗಿಸುವನು. ಸಾರಥಿ ತನ್ನ ಮಾತುಗಳನ್ನು ಹೇಳಿ ಬಂದಿರುವ ಪಾತ್ರಧಾರಿಗಳಿಗೆ ಮಾತಾಡಿಸುವ ರೀತಿ ಜನಪದರನ್ನು ಬೆರಗು ಗೊಳಿಸು ವುದಾಗಿದೆ.

## ಅಧ್ಯಕ್ಷ ಭಾಷಣ:

## ಬಯಲಾಟ ಮತ್ತು ಯಕ್ಷಗಾನ

**ಜ. ಆರ್. ಪೊಲೀಸ ಪಾಟೀಲ**

ಬಯಲಿನಲ್ಲಿ ಆಡುವ ಆಟಕ್ಕೆ ಬಯಲಾಟ ಎಂಬ ಅರ್ಥವನ್ನು ಕಲ್ಪಿಸಲಾಗಿದೆ. ವೃತ್ತಿಪರವಲ್ಲದ ಜನಪದೀಯ ರಂಗ ಪ್ರಯೋಗಗಳೆಲ್ಲವನ್ನೂ ಸ್ಥೂಲವಾಗಿ ಬಯಲಾಟಗಳೆಂದೇ ಕರೆಯಲಾಗುತ್ತಿದೆ. ಕರಾವಳಿ ಹಾಗೂ ಮಲೆನಾಡಿನ ಕೆಲ ಗಡಿಪ್ರದೇಶಗಳಲ್ಲಿ ಇವುಗಳನ್ನು ಯಕ್ಷಗಾನಗಳೆಂದು ಕರೆಯುತ್ತಿದ್ದರೆ ಉತ್ತರ ಕರ್ನಾಟಕದಲ್ಲಿ ಬಯಲಾಟ ಎಂಬ ಹೆಸರು ಉಳಿದುಕೊಂಡಿದೆ.

ಮೂಡಲಪಾಯ, ಘಟ್ಟದಕೋರೆ, ಯಕ್ಷಗಾನ, ಸಣ್ಣಾಟ, ರಾಧಾನಾಟ, ಶ್ರೀಕೃಷ್ಣಪಾರಿಜಾತ, ತೊಗಲುಗೊಂಬೆಯಾಟ, ಸೂತ್ರದ ಗೊಂಬೆಯಾಟ, ಕೇಳಿಕೆ ಹೀಗೆ ಬಯಲಾಟಗಳ ಪ್ರಕಾರಗಳನ್ನು ಗುರುತಿಸಲಾಗಿದೆ. ಜನರಂಜನ, ಜನಶಿಕ್ಷಣ, ಜನಕಲ್ಯಾಣದ ಉದ್ದೇಶ ಹೊಂದಿ ಬೆಳಕಿಗೆ ಬಂದ ಈ ಎಲ್ಲ ಆಟಗಳಲ್ಲೂ ನೀತಿ ಹಾಗೂ ಆಧ್ಯಾತ್ಮಕ್ಕೆ ಅಗ್ರಪಟ್ಟ, ಪುರಾಣ, ಭಾಗವತ, ಮಹಾಕಾವ್ಯ, ಕೀರ್ತನ ಹಾಗೂ ಜನಪದ ಕತೆಗಳಿಂದ ಜನ್ಮತಳೆದ ಬಯಲಾಟಗಳ ಜೀವಾಳ ಸಂಗೀತ ಹಾಗೂ ನೃತ್ಯ.

**ಮೂಡಲಪಾಯ :** ಉತ್ತರ ಕರ್ನಾಟಕದ ಬೆಳಗಾಂವಿ, ವಿಜಯಪುರ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಕಲ್ಯಾಣ ನಾಡಿನ ಕಲಬುರ್ಗಿ, ಬಳ್ಳಾರಿ ಜಿಲ್ಲೆಗಳಲ್ಲಿ ತನ್ನ ಶಕ್ತಿಯುತ ನೆಲೆ ಕಂಡುಕೊಂಡ ಮೂಡಲಪಾಯ (ದೊಡ್ಡಾಟ) ಕುಣಿತ ಪ್ರಧಾನವಾದ ಆಟ. ನಟರಿಗೆ ಕುಣಿದಂತೆ ಪುಟಿತ ಕೊಡುವ ಹಲಗೆಗಳಿಂದ ರಂಗಮಂಚ ನಿರ್ಮಾಣ ಮಾಡುವುದರಿಂದ ಈ ಆಟದಲ್ಲಿ ಶಕ್ತಿವಂತನೇ ಧೀಮಂತ.

ದೊಡ್ಡಾಟದ ಕುಣಿತಗಳಿಗೆ ಶಾಸ್ತ್ರೀಯತೆಯಿದೆ. ಜೊತೆಗೆ ಸ್ಥಳೀಯರ ಪ್ರತಿಭೆಯ ಸಾಂಗತ್ಯವೂ ಇರುತ್ತದೆ. ಈ ಕುಣಿತಗಳಿಗೆ ಹೆಜ್ಜೆಗಳ ಲೆಕ್ಕಾಚಾರವಿದೆ. (ಮೂರು ಹೆಜ್ಜೆ, ನಾಲ್ಕು ಹೆಜ್ಜೆ, ಆರು ಹೆಜ್ಜೆಕುಣಿತ, ಹೂವೆತ್ತುವ ಕುಣಿತ) ಇಲ್ಲಿ ಅಭಿನಯ, ಸಾಹಿತ್ಯ ಹಾಗೂ ಮನೋವೈಜ್ಞಾನಿಕ ಚಿತ್ರಣಕ್ಕೆ ಆದ್ಯತೆಯಿಲ್ಲ.

ಮೂಡಲಪಾಯದ ಬಹುತೇಕ ಕತೆಗಳು ಕಾಳಗದ ಕತೆಗಳು. ವೀರ ಅಭಿಮನ್ಯು, ಬಭ್ರುವಾಹನ, ಕುರುಕ್ಷೇತ್ರ, ಕಾರ್ತವೀರಾರ್ಜುನ, ಆಲ್ಯಾಣಕುಮಾರ, ದೌಪದಿ ವಸ್ತ್ರಾಪಹರಣ, ಕಿರಾತಾರ್ಜುನ ಕಾಳಗ, ಕರ್ಣಾರ್ಜುನ ಯುದ್ಧ ಇತ್ಯಾದಿ. ಪೀಠಿಕಾಪ್ರಸಂಗ (ಮಾತು), ನಾಮಾಂಕಿತದ ಮಾತು, ಸಭಾ ಮಾತು, ಕಾಳಗ ಅಥವಾ ಕಲ್ಯಾಣ... ಈ ಎಲ್ಲ ಮಾತುಗಳಲ್ಲಿ ಹಾಡು ಮತ್ತು ಮಾತುಗಳ ಪುನರಾವರ್ತನೆಯಿರುತ್ತದೆ.

ಝುಗಝುಗಿಸುವ ವೇಷಭೂಷಣಗಳು, ಅತಿಯೆನ್ನಿಸುವ ಪ್ರಸಾಧನ, ಎದೆಕವಚ,

ಭುಜಕೀರ್ತಿ, ಕೈಕಟ್ಟು, ಕಿರೀಟ, ಮುತ್ತಿನ ಹಾರ ಎಲ್ಲದರಲ್ಲೂ ಅಬ್ಬರಕ್ಕೆ ಆದ್ಯತೆ. ಈ ಕಾರಣದಿಂದಲೇ ಇವುಗಳನ್ನು ಹಿರೇಆಟ, ಅಟ್ಟದ ಆಟ ಎಂದೂ ಕರೆಯಲಾಗುತ್ತಿತ್ತು.

ಪುರುಷ ಪಾತ್ರಗಳಿಗೆ ಹೋಲಿಸಿದರೆ ಸ್ತ್ರೀಪಾತ್ರಗಳ ಕುಣಿತ ಹಾಗೂ ವೇಷಭೂಷಣ ನಾಜೂಕಿನವು, ಸ್ತ್ರೀಪಾತ್ರಗಳ ಕುಣಿತಗಳಲ್ಲಿ ಇಡೀ ದೇಹಕ್ಕೆ ವ್ಯಾಯಾಮವಾಗುವಂತೆ ನೃತ್ಯ ಸಂಯೋಜಿಸಲಾಗುತ್ತದೆ. ಒಟ್ಟಿಗೇ ಕುಣಿಯುವ ನಾಲ್ಕೈದು ಸ್ತ್ರೀ ಪಾತ್ರಗಳ ಮೇಳ ನೃತ್ಯ ಆಕರ್ಷಕವಾಗಿರುತ್ತದೆ.

ಹತ್ತೊಂಭತ್ತನೇ ಶತಮಾನದ ಮಧ್ಯಭಾಗದಲ್ಲಿ ಉಚ್ಚ್ರಾಯಸ್ಥಿತಿ ತಲುಪಿದ್ದ ದೊಡ್ಡಾಟದ ಸಂಗೀತ ಆರಂಭದಲ್ಲಿ ದಕ್ಷಿಣಾದಿ (ಕರ್ನಾಟಕಿ)ಯಾಗಿದ್ದರೂ ಬರಬರುತ್ತ ಹಿಂದುಸ್ತಾನಿ ಶೈಲಿಯತ್ತ ತಿರುಗಿತು ಆದರೆ ಈ ಎರಡೂ ಶೈಲಿಗಳಲ್ಲಿ ಶಾಸ್ತ್ರ ಶುದ್ಧತೆ ಕಂಡು ಬರಲಿಲ್ಲ. ಕಲಿಯುವವರಲ್ಲಾಗಲಿ, ಕಲಿಸುವವರಲ್ಲಾಗಲಿ ಶಾಸ್ತ್ರೀಯತೆಯ ಶಿಸ್ತು ಕಂಡು ಬರಲಿಲ್ಲ ಎಂಬುದಕ್ಕೆ ಇವರಲ್ಲಿ ಬಹಳಷ್ಟು ಮಂದಿ ನಿರಕ್ಷರಿಗಳೂ, ಅಲ್ಪಶಿಕ್ಷಿತರೂ ಆಗಿದ್ದುದು ಕಾರಣವಾಗಿರಬೇಕು.

ಆರಂಭದ ಹಂತದ ಮೂಡಲಪಾಯ ಕೃತಿ ಕರ್ತೃಗಳು ಸುಶಿಕ್ಷಿತರೂ, ಸಂಗೀತಜ್ಞರೂ ಆಗಿರುತ್ತಿದ್ದು ಹಾಡುಗಳನ್ನು ತಾವೇ ರಚಿಸಿ, ರಾಗ ಸಂಯೋಜಿಸಿ ತರಬೇತಿ ನೀಡುತ್ತಿದ್ದರು ಮಾತ್ರವಲ್ಲ, ಪ್ರಕಟಿತ ಅಥವಾ ಹಸ್ತಪ್ರತಿಗಳಲ್ಲಿ ರಾಗ, ತಾಳಗಳನ್ನು ಸೂಚಿಸುತ್ತಿದ್ದರು.

ಭಾಗವತರು ಇದನ್ನು ಮುಂದಿಟ್ಟುಕೊಂಡೇ ಕತೆಯನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದರು. ಬರಬರುತ್ತಾ ಇವರಲ್ಲೂ ಶಿಸ್ತು ಹಾಗೂ ಬದ್ಧತೆ ಕಡಿಮೆಯಾಗಿ ಆಭಾಸವಾಗತೊಡಗಿತು.

ಹಿಂದೋಳ, ಜಿಂಜೋಟಿ, ಕೇದಾರಪ್ತಿಳ, ಭೈರವಿ, ತೋಡಿ, ಕಲ್ಯಾಣಿ, ಭೀಮಪಲಾಸ್, ರೇಗುಗೌ, ಮುಂತಾದವು ಈ ಆಟಗಳ ಪ್ರಧಾನ ರಾಗಗಳಾಗಿರುತ್ತಿದ್ದರೆ. ಆದಿ ತಾಳ, ಝಂಪಾ ಹಾಗೂ ಏಕತಾಳಗಳು ಪ್ರಧಾನವಾಗಿರುತ್ತಿದ್ದವು. ದಕ್ಷಿಣಾದಿ ಸಂಗೀತದಲ್ಲಿ ಮದ್ದಳೆ ಪ್ರಧಾನ ವಾದ್ಯವಾಗಿರುವುದರಿಂದ ಆರಂಭದಲ್ಲಿ ದೊಡ್ಡಾಟದಲ್ಲೂ ಪ್ರಧಾನ ವಾದ್ಯವಾಗಿತ್ತು. ಬರಬರುತ್ತ ಅದರ ಬಳಕೆ ಕಡಿಮೆಯಾಗಿ ತಬಲಾ ಅದರ ಸ್ಥಾನದಲ್ಲಿ ಬಂದಿದೆ.

ಭಾಗವತ ಮುಮ್ಮೇಳ ನಿರ್ವಹಿಸುತ್ತ ಕಥೆ ಮುನ್ನಡೆಸುತ್ತಾನೆ. ಹಿಮ್ಮೇಳದವರು ಅವನನ್ನು ಅನುಕರಿಸುತ್ತ ತಾರಸಪ್ತಕ (ಏರುದನಿ)ದಲ್ಲಿ ಹಾಡುತ್ತಾರೆ. ಸಮರ್ಥ ಹಿಮ್ಮೇಳದ ಕೊರತೆಯಿಂದಲೂ ದೊಡ್ಡಾಟ ಸೊರಗಿದ್ದನ್ನು ಗಮನಿಸಿದ್ದೇವೆ. ಆಗ ಸುಂದರಿ ಅಥವಾ ಮುಖವೀಣೆ ಹಿಮ್ಮೇಳದ ಕೊರತೆ ತುಂಬಲೆಂದೇ ಬಂದಿತೇನೊ

ಮೊದಮೊದಲು ಶ್ರುತಿಗಾಗಿ ಸೋರೆ ಬುರುಡೆ ಉಪಯೋಗಿಸಲಾಗುತ್ತಿತ್ತು. ನಂತರ ಹಾರ್ಮೋನಿಯಂ ಉಪಯೋಗಿಸಲಾರಂಭಿಸಿದರು.



ಸಾರಥಿ ಅಥವಾ ಹನುಮನಾಯಕ ಹಾಸ್ಯ ಸನ್ನಿವೇಶಗಳನ್ನು ಸೃಷ್ಟಿಸಿ ಕತೆ ಮುನ್ನಡೆಸುತ್ತಿದ್ದ.

ಆದ್ದರಿಂದ ದೊಡ್ಡಾಟಗಳಲ್ಲಿ ಸಾರಥಿ (ಭಾಗವತ)ಗೆ ಉಳಿದೆಲ್ಲ ಪಾತ್ರಗಳಿಗಿಂತ ಹೆಚ್ಚಿನ ಸ್ವಾತಂತ್ರ್ಯವಿದೆ.

ದೊಡ್ಡದು ಯಾವುದಿದ್ದರೂ ಅದಕ್ಕೆ ಅಸ್ತಿತ್ವದ ಪ್ರಶ್ನೆ ಎದುರಾಗುತ್ತದೆ. ಈ ಕಾರಣಕ್ಕೆ ಮ್ಯಾಮಥ್ ಹಾಗೂ ಡಾನ್ನುಸೋ ಅಳಿದವೇನೊ. ಹೀಗೆ ಈ ದೊಡ್ಡಾಟಕ್ಕೆ ಅಗತ್ಯವಾದ ಬಂಡವಲು, ಶ್ರಮ ಹಾಗೂ ಸಮಯ ಗ್ರಾಮೀಣರಿಗೆ ಹೊರೆಯಾಗಿದ್ದರಿಂದಲೋ ಏನೊ ಬರಬರುತ್ತಾ ಅವರು ಸಣ್ಣದರತ್ತ ಮುಖ ಮಾಡಿದ್ದರಿಂದ ಸಣ್ಣಾಟಗಳು ಹುಟ್ಟಿಕೊಂಡವು.

**ಸಣ್ಣಾಟಗಳು :** (ಮೂಡಲಪಾಯ) ದೊಡ್ಡಾಟದ ಆಡಂಬರದಿಂದ ಹೊರ ಬಂದು ಕಡಿಮೆ ಖರ್ಚು ಹಾಗೂ ಶ್ರಮದಿಂದ ಸಿದ್ಧಪಡಿಸಲಾದ ರಂಗಪ್ರಕಾರವೇ ಸಣ್ಣಾಟ.

ಇದನ್ನು ಡಪ್ಪಿನಾಟ (ದಪ್ಪಿನಾಟ) ಎಂದೂ ಕರೆಯುತ್ತಿದ್ದರು. ಡಪ್ಪಿನ ಲಯಕ್ಕೆ ಹೊಂದುವಂಥ ಹಾಡು ಹಾಗೂ ಲಘು ಕುಣಿತಗಳು ಇದರ ವೈಶಿಷ್ಟ್ಯ.

ಎರಡು ಹಂತಗಳಲ್ಲಿ ಈ ಡಪ್ಪಿನಾಟದ ಬೆಳವಣಿಗೆಯನ್ನು ಗುರುತಿಸಬಹುದು. ಒಂದು : ಇಪ್ಪತ್ತನೇ ಶತಮಾನದ ಮೊದಲೆರಡು ದಶಕಗಳು. (ಆಗ ಅವು ಗೀತರೂಪಕಗಳಾಗಿರುತ್ತಿದ್ದವು.

**ಎರಡು :** ಇಪ್ಪತ್ತನೇ ಶತಮಾನದ ಮೂರನೆಯ ದಶಕದಿಂದೀಚೆನದು.

ಈ ಹಂತದಲ್ಲಿ ಶೃತಿಕಾರರು ಹಾಡುಗಳ ಜೊತೆಗೆ ಸಂಭಾಷಣೆಗಳನ್ನು ಸೇರಿಸಿದರು.

ರಾಧಾನಾಟ, ರೂಪಸೇನ, ಸಂಗ್ಯಾಬಾಳ್ಯಾ, ತಿರುನೀಲಕಂಠ, ಮಾಯಿ ಆಟ, ಕಡ್ಲಿಮಟ್ಟಿ ಸ್ಟೇಶನ್ ಮಾಸ್ತರ ಇತ್ಯಾದಿ ಡಪ್ಪಿನಾಟಗಳಲ್ಲಿ ಹೆಚ್ಚು ಹೆಸರು ಮಾಡಿದಂಥವು ಇವು ಕವಿಕೃತಮಾತ್ರವಾಗಿರದೆ ಇವುಗಳ ಬೆಳವಣಿಗೆಯಲ್ಲಿ ನಟವರ್ಗದವರ ಕೊಡುಗೆಯೂ ಸೇರಿ ಇವು ಸಮೂಹ ಸೃಷ್ಟಿ ಎಂದೇ ಹೇಳಬೇಕಾಗುತ್ತದೆ.

ರಾಧಾನಾಟದ ಮೇಲೆ ಪಕ್ಕದ ರಾಜ್ಯ ಮಹಾರಾಷ್ಟ್ರದ ತಮಾಶಾದ ಪ್ರಭಾವವಾದದ್ದರಿಂದ ಇದರಲ್ಲಿ ರಾಧಾ, ಗಲ್ಲೋಜಿ, ಸಖಾರಾಮ ತಾತ್ಯಾದಂಥ ಪಾತ್ರಗಳು ಸೇರಿಕೊಂಡವು. ಈ ಆಟದಲ್ಲಿ ಶೃಂಗಾರ ಹಾಗೂ ಹಾಸ್ಯರಸಕ್ಕೆ ಆದ್ಯತೆ ನೀಡಲಾಯಿತು.

ಸಣ್ಣಾಟಗಳ ಬೆಳವಣಿಗೆಯ ಎರಡನೇ ಹಂತದಲ್ಲಿ ವೃತ್ತಿ ರಂಗಭೂಮಿಯ ಪ್ರಭಾವವಾದುದೂ ಗಮನಕ್ಕೆ ಬರುತ್ತದೆ. ಬೆಳಗಾಂವಿ ಜಿಲ್ಲೆಯ ಕಾದ್ರೊಳ್ಳಿಯ ಶ್ರೀ ನೀಲಕಂಠಪ್ಪ ಪತ್ತಾರ, ಇಟಗಿ ಎಂಬ ಪಕ್ಕದ ಹಳ್ಳಿಯಲ್ಲಿ ಪ್ರಯೋಗನಿರತವಾಗಿದ್ದ ಒಂದು ನಾಟಕ ಮಂಡಳಿಯಲ್ಲಿ ಸ್ತ್ರೀ ಪಾತ್ರ ನಿರ್ವಹಿಸುತ್ತಿದ್ದವ ನಂತರದ ವರ್ಷಗಳಲ್ಲಿ ಹಲವು ಡಪ್ಪಿನಾಟಗಳನ್ನು ರಚಿಸಿ ನಿರ್ದೇಶಿಸಿದ್ದು ಗಮನಸೆಳೆಯುತ್ತದೆ. ತಿರುನೀಲಕಂಠ ಈತ ರಚಿಸಿ ಪ್ರಯೋಗಿಸಲಾದ ಶ್ರೇಷ್ಠ ಡಪ್ಪಿನಾಟವಾಗಿದೆ. ಇದಕ್ಕೆ ಕಾದೊಳ್ಳಿ ಆಟ ಅಥವಾ ಕಾದ್ರೊಳ್ಳಿ ಧರತಿ ಎಂದು ಕರೆಯಲಾಗುತ್ತಿತ್ತು.



೧೯೪೦ರ ನಂತರದ ವರ್ಷಗಳಲ್ಲಿ ಅನೇಕ ಡಪ್ಪಿನಾಟಗಳ ರಚನೆ ಮಾಡಿದ ಹಣ್ಣಿಕೇರಿಯ ಶಿವಾನಂದ ಕವಿಯ ಮೇಲೂ ನೀಲಕಂಠಪ್ಪನ ಪ್ರಭಾವ ತುಂಬ ಗಾಢವಾಗಿತ್ತು.

ಅನಸೂಯ, ಭಕ್ತಪ್ರಹ್ಲಾದ, ವಿಶ್ವಾಮಿತ್ರ, ಲವಕುಶದಂಥ ಪೌರಾಣಿಕ ಆಟಗಳು, ಸಂಗೊಳ್ಳಿ ರಾಯಣ್ಣ, ಕೆಳದಿ ಚೆನ್ನಮ್ಮ, ಧರ್ಮಸಾಮ್ರಾಜ್ಯದಂಥ ಐತಿಹಾಸಿಕ ಆಟಗಳು, ಬಲವಂತ-ಬಸವಂತ, ಮದಗ ಮಾಸೂರ ಕೆಂಚಮ್ಮ, ಧರ್ಮ ದೇವತೆ ಇಂಥ ಜಾನಪದ ಆಟಗಳು ನಿಜಗುಣ ಶಿವಯೋಗಿ, ತಿರುನೀಲಕಂಠ, ಅಲ್ಲಮಪ್ರಭು, ಕಬೀರದಾಸ, ಅಕ್ಕಮಹಾದೇವಿ, ಸಂತ ತುಕಾರಾಮ, ಇಂಥ ಸಂತ- ಶರಣರಾಟಗಳು

ಸಂಗ್ಯಾಬಾಳ್ಯ, ರೂಪಸೇನ, ಕಟ್ಟಿಚೆನ್ನ, ಸಾವುಕಾರನಾಟ ಇಂಥ ಸಾಮಾಜಿಕ ಡಪ್ಪಿನಾಟಗಳು ಕನ್ನಡ ಜಾನಪದ ರಂಗಭೂಮಿಯನ್ನು ಶ್ರೀಮಂತಗೊಳಿಸಿದ್ದವು. ಆದರೆ ಇಂದು ಈ ಪರಂಪರೆಯ ಕೊಂಡಿ ಕಳಚಿ ಬಿದ್ದ ಅನುಭವವಾಗುತ್ತಿದೆ. ತೊಗಲುಗೊಂಬೆಯಾಟ, ಸೂತ್ರದ ಗೊಂಬೆಯಾಟಗಳಂತೂ ಇನ್ನೂ ಅಪರೂಪವಾಗುತ್ತಿವೆ.

ಸದ್ಯದ ಪರಿಸ್ಥಿತಿಯಲ್ಲಿ ಜಾನಪದ ರಂಗಭೂಮಿಯನ್ನು ಅತ್ಯಂತ ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೊರಟಿರುವವರು ಕರಾವಳಿ ಹಾಗೂ ಮಲೆನಾಡಿನ ಪ್ರದೇಶದ ಕಲಾರಸಿಕರು. ಯಕ್ಷಗಾನ ಈಗಲೂ ಅತ್ಯಂತ ಯಶಸ್ವಿ ರಂಗಪ್ರಯೋಗಗಳನ್ನು ಕಂಡು ದೇಶ-ವಿದೇಶಗಳಲ್ಲೆಲ್ಲ ಪ್ರದರ್ಶಿತಗೊಳ್ಳುತ್ತಿರುವುದು ತುಂಬ ಆಶಾದಾಯಕವಾದ ಬೆಳವಣಿಗೆ

ಯಕ್ಷಗಾನ ಸಾಹಿತ್ಯ, ಸಂಗೀತ, ನೃತ್ಯ, ಅಭಿನಯ, ಕಲೆಗಾರಿಕೆಗಳನ್ನೊಳಗೊಂಡಿರುವ ಸಂಕೀರ್ಣರಂಗಪ್ರಕಾರ ಸ್ವಪ್ರತಿಭೆಯಿಂದ ಸ್ಪುರಿಸುವ ಮಾತುಗಾರಿಕೆ ಹಾಗೂ ರೋಚಕ ಪೌರಾಣಿಕ ಕಥೆಗಳ ಅನಾವರಣ ಈ ಕಲೆಯ ವೈಶಿಷ್ಟ್ಯ.

ಅದ್ಭುತವಾದ ಮುಖವರ್ಣಿಕೆ, ವೇಷಭೂಷಣ ಹಾಗೂ ಬಣ್ಣಗಾರಿಕೆ. ಭಾರತೀಯ ಸಂಸ್ಕೃತಿ, ಕಲೆ, ಸದಾಚಾರಗಳನ್ನು ಬಿಂಬಿಸುವ ಕಲಾಪ್ರಕಾರ ಯಕ್ಷಗಾನ, ಧರ್ಮರಕ್ಷಣೆ, ಧರ್ಮಪ್ರಸಾರ, ಶಿಷ್ಟಾಚಾರ ಸಂವಹನ ಇದರ ಗುರಿ.

ಆಧ್ಯಾತ್ಮದ ಮೂಲಕ ಜೀವನ ದರ್ಶನ ಮೂಡಿಸುವ ಉದ್ದೇಶ ಈ ಕಲೆಗೆ ಇದೆ. ಪುರಾಣ, ಇತಿಹಾಸ, ಮಹಾಕಾವ್ಯ, ಶ್ರೀಮದ್ಭಾಗವತಗಳ ಆಖ್ಯಾನಗಳೇ ಯಕ್ಷಗಾನದ ಪ್ರಮುಖ ಹಾಗೂ ಪ್ರಸಿದ್ಧ ಪ್ರಸಂಗಗಳಾಗಿರುತ್ತವೆ.

ದ್ವೈತ, ಅದ್ವೈತ, ಶಕ್ತಿವಿಶಿಷ್ಟಾದ್ವೈತ, ಚಾರ್ವಾಕ ಇತ್ಯಾದಿ ಗಹನವಾದ ವಿಷಯಗಳ ಚರ್ಚೆ ಇವುಗಳ ಮೂಲಕ ನಡೆಯುತ್ತದೆ.

ಇದರ ಪ್ರಾಚೀನತೆಯ ಬಗ್ಗೆ: ೧೪ ನೆಯ ಶತಮಾನದಲ್ಲಿ (೧೩೬೦ರಲ್ಲಿ) ದೊರೆತ ಆದಿಪರ್ವ ಅತ್ಯಂತ ಪ್ರಾಚೀನ ಯಕ್ಷಗಾನ ರಂಗಕೃತಿ ಎನ್ನಲಾಗುತ್ತಿದೆ.

ಕುಂಬಳೆಯ ಕವಿ ಪಾರ್ತಿಸುಬ್ಬನನ್ನು ಯಕ್ಷಗಾನದ ಆದ್ಯರಲ್ಲೊಬ್ಬನೆಂದು ಹೇಳಲಾಗುತ್ತಿದೆ. ಅದುವರೆಗೆ ಯಾರೂ ಬರೆಯದಿದ್ದ ರಾಮಾಯಣದ ಪ್ರಸಂಗಗಳನ್ನಾಧರಿಸಿದ ಯಕ್ಷಗಾನ ಪ್ರಸಂಗಗಳನ್ನು ಮೊದಲು ಬರೆದವ ಈತನೇ ಎಂದು ಹೇಳಲಾಗುತ್ತದೆ. ಈತನಲ್ಲದೆ ಕವಿ ಮುದ್ದಣ (ನಂದಳಿಕೆ ಲಕ್ಷ್ಮೀನಾರಾಯಣಪ್ಪ) ಕೂಡ

ಯಕ್ಷಗಾನ ಪ್ರಸಂಗ ಕರ್ತೃವಾಗಿದ್ದನೆಂದು ಹೇಳಲಾಗುತ್ತಿದೆ. ಹಾಗೆ ಬಾರಕೂರಿನ ದೇವದಾಸ್ ಮತ್ತೊಬ್ಬ ಶ್ರೇಷ್ಠ ಪ್ರಸಂಗ ಕರ್ತೃ,

ಆರಂಭದಲ್ಲಿ ಇದೊಂದು ಸಂಗೀತ ಶೈಲಿಯಾಗಿದ್ದುದು ಬರಬರುತ್ತ ಕಾವ್ಯಶೈಲಿಯ ಸ್ವರೂಪ ಪಡೆದುಕೊಂಡಿತು. ಇದರ ಸೃಷ್ಟಿಯ ಕುರಿತು ವಿಶಿಷ್ಟವಾದ ಅಭಿಪ್ರಾಯವಿದೆ. ಶಿಷ್ಟಕ್ಕೇರಲಾಗದೆ, ಜಾನಪದಕ್ಕಿಳಿಯಲೊಲ್ಲದ ಮಧ್ಯಮ ವರ್ಗದವರಿಗೆ ತಮ್ಮದೇ ಆದ ರಂಗ ಭೂಮಿಯ ಅಗತ್ಯಕಂಡುಬಂದಾಗ ಯಕ್ಷಗಾನ ಬಯಲಾಟ ಜನ್ಮ ತಾಳಿತಂತೆ.

ಕ್ರಿ.ಶ. ೧೪೫೦ರಷ್ಟು ಹಿಂದೆಯೇ ಯಕ್ಷಗಾನ ಪ್ರಯೋಗ ಕಂಡ ಉದಾಹರಣೆ ಸಿಗುತ್ತದೆ ಎನ್ನುತ್ತಾರೆ ವಿದ್ವಾಂಸರು. ಯಕ್ಷಗಾನ ಪ್ರಸಂಗಕರ್ತರ ಹಾಗೂ ತಾಳಮದ್ದಳೆಯ ಅರ್ಥಧಾರಿಗಳ ಪಾಂಡಿತ್ಯ, ವಿನಯ ಹಾಗೂ ಬದ್ಧತೆ ಮತ್ತು ಪ್ರೇಕ್ಷಕರ ತನ್ಮಯತೆಯ ಸ್ತಂಭಗಳ ಮೇಲೆ ಈ ಯಕ್ಷಗಾನದ ಭವ್ಯ ಸೌಧ ನಿರ್ಮಾಣಗೊಂಡಿದೆ. ಈ ಯಕ್ಷಗಾನ ಪ್ರಸಂಗಕರ್ತರು ಕಥೆ ಹಾಗೂ ಭಕ್ತಿ-ಭಾವಗಳಿಗೆ ನೀಡಿದ ಆದ್ಯತೆಯನ್ನು ವ್ಯಾಕರಣ ಹಾಗೂ ಛಂದಸ್ಸುಗಳಿಗೆ ನೀಡಲಿಲ್ಲ.

ಕಾರಂತರಂಥ ಹಿರಿಯ ವಿದ್ವಾಂಸರು, ಶೇಣಿ ಗೋಪಾಲ ಕೃಷ್ಣಭಟ್ಟರು, ಕೇಶವಾನಂದ ಭಾರತಿ ಸ್ವಾಮಿಗಳು ಎಡನೀರು ಮಠ, ಕೆರೆಮನೆ ಶಂಭು ಹೆಗಡೆ ಅವರು, ಮೂಡುಬೈಲು ಗೋಪಾಲಕೃಷ್ಣ ಶಾಸ್ತ್ರಿಗಳು, ಡಾ. ಪಾದೇಕಲ್ಲು ವಿಷ್ಣುಭಟ್ಟರು, ಡಾ. ಎಂ. ಪ್ರಭಾಕರ ಜೋಷಿ ಮುಂತಾದ ದಿಗ್ಗಜರ ಸೇವೆ ಸ್ಮರಣಾರ್ಹ ಅಷ್ಟೇ ಅಲ್ಲ. ಆ ಭಾಗದ ಸುಸಂಸ್ಕೃತ ಪ್ರೇಕ್ಷಕರು ಹಾಗೂ ಪ್ರಾಯೋಜಕರ ಪ್ರೋತ್ಸಾಹವೂ ಸ್ಮರಣೀಯವಾಗಿದೆ.

ನಿರಕ್ಷರಿಗಳೂ ಅಲ್ಲದ, ವಿದ್ವಾಂಸರೂ ಅಲ್ಲದ ದೇಸಿ ಚತುರರಿಂದ ಈ ಕಲೆ ಉಳಿದು ಬೆಳೆದು ಬಂದಿದೆ ಎಂದು ಹೇಳಲು ಎಷ್ಟೂ ಹಿಂಜರಿಕೆಯಿಲ್ಲ.

# ಮಕ್ಕಳ ಸಾಹಿತ್ಯ ಗೋಷ್ಠಿ

## ಮಕ್ಕಳ ಸಾಹಿತ್ಯದಲ್ಲಿ ಹೊಸ ಆಯಾಮಗಳು

**ಎ. ಕೆ. ರಾಮೇಶ್ವರ**

ಹಿಂದಣ ಅನಂತವನು ಮುಂದಣ ಅನಂತವನು,

ಒಂದು ದಿನ ಒಳಕೊಂಡಿತ್ತು ನೋಡಾ !

ಒಂದು ದಿನ ಒಳಕೊಂಡ ಮಾತನಾಡುವ

ಮಹಾಂತನ ಬಲ್ಲವರಾರಯ್ಯ !

ಆದ್ಯರು ವೇದ್ಯರು ಅನಂತ ಕಾಲದ ಹಿರಿಯರು

ಕಾಲದ ಅನಂತವನರಿಯದೆ

ಹಾಗೇ ಹೋದರು ಗುಹೇಶ್ವರ

ವ್ಯೋಮ ಕಾಯ ನಿರಂಜನ ಶರಣ ಅಲ್ಲಮ ಪ್ರಭುಗಳು ಹೇಳಿದ ಈ ಮಾತುಳು ನಿತ್ಯ ನೂತನ, ಸತ್ಯ ಸುಂದರ ನುಡಿಗಳು. ಭೂತ, ಭವಿಷ್ಯ ವರ್ತಮಾನಗಳನ್ನು ಕುರಿತು ಹೆಳಿದ ಈ ವಚನ ಕೇವಲ ನುಡಿಗಡಣವಲ್ಲ ಇಡೀ, ವಚನ ಮಂತ್ರಮಯವಾಗಿದೆ. ನಾವು ಇಂದು ಭೂತ ಕಾಲವನ್ನು ಕುರಿತು ವರ್ತಮಾನದಲ್ಲಿ ಮೆಲಕು ಹಾಕುತ್ತ, ಭೂತ ಕಾಲದಲ್ಲಿ ನಡೆದು ಹೋದ ಒಳ್ಳೆಯ ಅಂಶಗಳನ್ನು ವರ್ತಮಾನದಲ್ಲಿ ಮತ್ತೊಮ್ಮೆ ತಿರುವಿ ಹಾಕುತ್ತ ಅವುಗಳನ್ನು ಅನುಷ್ಠಾನಕ್ಕೆ ತಂದರೆ ಭವಿಷ್ಯದಲ್ಲಿ ಆರೋಗ್ಯಕರ ಸಮಾಜಕ್ಕೆ ನಾಂದಿಯಾಗಬಲ್ಲವು. ಉದಾಹರಣೆಗೆ ಕೃತ ಯುಗದಲ್ಲಿ ರಾಜಹರಿಶ್ಚಂದ್ರನು ರಾಜ್ಯಭಾರ ಮಾಡುತ್ತಿದ್ದ. ಸತ್ಯ, ನ್ಯಾಯ, ನಿಷ್ಠೆಯನ್ನೊಳಗೊಂಡ ಅವನ ಆಡಳಿತದ ವೈಖರಿಯನ್ನು ನೋಡಿ ಋಷಿ, ಮುನಿಗಳು ಬಾಯಿ ಬಿಡುವಂತಿತ್ತು. ಇಂತಹ ಪರಾಕ್ರಮಿ, ಪ್ರಾಮಾಣಿಕ ಅರಸ, ರಾಜ್ಯಾ ಹರಿಶ್ಚಂದ್ರನ ನಾಟಕ ಕಲಿಯುಗದಲ್ಲಿ ಬಾಲಕ ಮೋಹನದಾಸ, ಕರಮಚಂದ್ರ ಗಾಂಧಿ ನೋಡಿ ಪ್ರಭಾವಿತನಾಗಿ, ನಾನೂ ದೊಡ್ಡವನಾದ ಮೇಲೆ ಕೈಕೊಂಡ ಕೆಲಸ ಅತ್ಯಂತ ನಿಷ್ಠೆ ಪ್ರಾಮಾಣಿಕತೆಯಿಂದ ಮಾಡಬೇಕು ಎಂಥ ಸಂಕಟ ಬಂದರೂ ನಾನು ಕೈಕೊಂಡ ಕೆಲಸಕ್ಕೆ ಚ್ಯುತೆ-ಬರದ ಹಾಗೆ ದಿಟ್ಟ ಹೆಜ್ಜೆ ಹಾಕಿ ಮುನ್ನಡೆಯಬೇಕೆಂದು ಮನದಲ್ಲಿ ಮಂಡಿಗೆತ್ತಿನುತ್ತ ಮನೆಗೆ ಬಂದ. ಮುಂದೆ ದೊಡ್ಡವನಾಗಿ ಬ್ಯಾರಿಷ್ಟ ಪದವಿ ಪಡೆದು ನ್ಯಾಯವಾದಿಯಾಗಿ ಸೇವೆ ಸಲ್ಲಿಸುತ್ತ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮಿಕಿ ಎಂಥ ಸಂಕಟ ಬಂದರೂ ತಾನು ಪಾಲಿಸುತ್ತ ಬಂದ ಸತ್ಯ; ಅಹಿಂಸೆ ಅಸ್ತ್ರಳಿಗೆ ಚ್ಯುತೆ ಬರದಂತೆ ಹೋರಾಡುತ್ತ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಮಹಾತ್ಮಾ ಗಾಂಧೀಜಿ ಅವರ ಹೋರಾಟದ ಬದುಕು ನಿತ್ಯ ನೂತನವಾಗಿದೆ. ನಮ್ಮ ಮಕ್ಕಳು ಮಹಾತ್ಮರ ಜೀವನ ಚರಿತ್ರೆ, ಅವರೊಡನೆ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಹುತಾತ್ಮರ ಚರಿತ್ರೆಯನ್ನು ಓದುತ್ತ ದಿಟ್ಟ ಹೆಜ್ಜೆ ಇಟ್ಟು ಮುಂದೆ ಬರಬೇಕು. ಪ್ರೊ.

ಎಂ. ಗೋಪಾಲಕೃಷ್ಣ ಅಡಿಗರು ಹೇಳಿದಂತೆ “ಕಟ್ಟುವೆವು ನಾವು ಹೊಸ ನಾಡೊಂದನ್ನು ರಸದ ಬೀಡೊಂದನ್ನು” ಎಂದು ಹಾಡುತ್ತ ಸ್ವಚ್ಛ, ನಿರ್ಮಲ ಸಮಾಜಕ್ಕೆ ನಾಂದಿ ಹಾಡಬೇಕು. ತ್ರೇತಾಯುಗದಲ್ಲಿ



ಶ್ರೀ ರಾಮಚಂದ್ರ ಲಕ್ಷ್ಮಣ ಮತ್ತು ಸೀತಾದೇವಿ ವನವಾಸಕ್ಕೆ ಹೋದಾಗ ಶ್ರೀ ರಾಮಚಂದ್ರನ ಸಹೋದರ ಭರತ ಅಣ್ಣನ ಪಾದುಕೆ ತಂದು ಸಿಂಹಾಸನದ ಮೇಲಿಟ್ಟು ರಾಜ್ಯ ಭಾರ ಮಾಡಿದ್ದು, ಪುರಾಣದ ಕಥೆಯಲ್ಲಿ ಭಾರತೀಯರ ಸಂಸ್ಕಾರ, ಸಂಸ್ಕೃತಿಯ ನಿತ್ಯ ಸತ್ಯ ಕಥೆ. ಅಂತಹ ಸಂಸ್ಕಾರ, ಸಂಸ್ಕೃತಿ ನಮ್ಮ ರಾಜಕಾರಣಿಗಳು ಮರೆಯದೆ ತ್ಯಾಗ, ನಿಷ್ಠೆಪ್ರಾಮಾಣಿಕೆಯಿಮದ ದೇಶ ಸೇವೆ ಮಾಡುತ್ತ, ಜನ ಹಿತವನ್ನು ಬಯಸುತ್ತ ಪ್ರಜಾ ಪ್ರಭುತ್ವದ ಪ್ರಣಾಳಿಕೆ ಜಗತ್ತಿನೆತ್ತರ ಏರಿಸಬೇಕು. ಅದು ನಮ್ಮ ಮಕ್ಕಳು ಅವರ ಆದರ್ಶದ ಬದುಕು ಹೋರಾಟ ಜೀವನ ನೋಡಿ ಪ್ರಭಾವಿತರಾಗಬೇಕು ಎಂದು ನಾವು ಕಟ್ಟಿದ ಕನಸ್ಸು ನನಸಾಗಬೇಕು.

ದ್ವಾಪರ ಯುಗದಲ್ಲಿ ದ್ರೋಣಾಚಾರ್ಯರು ಕೌರವರಿಗೂ ಪಾಂಡವರಿಗೂ ಗುರುಗಳು, ಧನುರ್ವಿದ್ಯೆಯಲ್ಲಿ ದ್ರೋಣರು ಪ್ರವೀಣರು, ಪಾರಾಂಗತರು. ಅವರ ಹತ್ತಿರ “ಏಕಲವ್ಯ ಬಂದು ಪ್ರಾಂಜಲ ಮನಸ್ಸಿನಿಂದ ನನಗೂ ಧನುರ್ವಿದ್ಯೆ ಕಲಿಸಬೇಕೆಂದು ಮಂಡೆಯೂರಿ ಪ್ರಾರ್ಥಿಸಿದ ದ್ರೋಣಾಚಾರ್ಯರು 'ಮಗು, ನಾನು ರಾಜಕುಮಾರರಿಗಷ್ಟೆ ಈ ವಿದ್ಯೆ ಹೇಳಿಕೊಡಬೇಕು. ಬೇಡ ಪುತ್ರನಾದ ನಿನಗೆ ಕಲಿಸಲಾಗುವುದಿಲ್ಲ” ಎಂದು ಹೇಳಿದರು.

ಆಗ ಏಕಲವ್ಯ ದ್ರೋಣಾಚಾರ್ಯರ ಮೂರ್ತಿ ಇಟ್ಟು ತದೇಕ ಚಿತ್ತದಿಂದ ಸಾಧನೆ ಮಾಡುತ್ತ ಧನುರ್ವಿದ್ಯೆಯಲ್ಲಿ ಪಾರಂಗತನಾಗುತ್ತಾನೆ. ಈ ವಿಷಯ ತಿಳಿದು ದ್ರೋಣಾಚಾರ್ಯರು ಏಕಲವ್ಯನ ಹತ್ತಿರ, ಗುರುದಕ್ಷಿಣೆ ಕೇಳಿ ಹೆಬ್ಬೆರಳು ಪಡೆಯುತ್ತಾರೆ. ದ್ವಾಪರ ಯುಗದಲ್ಲಿ ದ್ರೋಣರು ಮಾಡಿದ ಕ್ರೂರಕೃತ್ಯ ಇಂದು ಕಲಿಯುಗದಲ್ಲಿ ಅಪಹಾಸ್ಯಕ್ಕೆ ಈಡಾದದ್ದು ನೀವೆಲ್ಲ ಓದಿ ನೋಡುತ್ತಿದ್ದೀರಿ, ಕೇಳಿ ತಿಳಿದುಕೊಳ್ಳುತ್ತಿದ್ದೀರಿ.

ಸಮಾಜ ಚಿಂತಕರಾದ ಅಲ್ಲಮ ಪ್ರಭುಗಳು ಶಿಕ್ಷಣ ತಜ್ಞರೂ ಆಗಿದ್ದರು. ಅವರು ಇನ್ನೊಂದು ವಚನದಲ್ಲಿ “ಕಲಿಯುಗದಲ್ಲಿ ಗುರು ವಂದಿಸಿ ಕಲಿಸದರೆ ಆಗಲಿ ಮಹಾ ಪ್ರಸಾದವೆಂಬೆನಯ್ಯ, ಗುಹೇಶ್ವರ ನಿನ್ನ ಕಾಲ ಕಟ್ಟಳೆಗೆ ನಾನು ಬೆರಗಾದೆನಯ್ಯ” ಎಂದು ವಿಷಾದ ವ್ಯಕ್ತಪಡಿಸುತ್ತಾರೆ. ನಮ್ಮ ಶರಣರು ಕನ್ನಡದ ಬೇಸಾಯಗಾರರು ನಂಬಿ ಕರೆದರೆ “ಓ! ಎನ್ನನೇ ಶಿವನು” ಎಂದು ಕನ್ನಡದಲ್ಲಿ ಶಿವನನ್ನೇ ಮಾತಾಡಿಸಿದ ನವಮನ್ವಂತರರು. ಅವರ ಮಾತೃಭಾಷೆ ಕನ್ನಡ. ನಮ್ಮದು ಕನ್ನಡ ನಾಡು ನಾವು ಕನ್ನಡಿಗರು ನಮ್ಮ ನಾಡು ಕನ್ನಡ, ನಮ್ಮ ನುಡಿಯೂ ಕನ್ನಡ ನಮ್ಮ ಇರುವಿಕೆ ಕನ್ನಡ. ನಮ್ಮ ಸಭ್ಯತೆ ಕನ್ನಡ, ನಮ್ಮ ಸಂಸ್ಕೃತಿ ಕನ್ನಡ ಈ ವಿಷಯವನ್ನು ಮರೆತು ಇಂಗ್ಲೀಷ್

ಭಾಷೆಗೆ ಮಾರು ಹೋಗುವ ನಮ್ಮ ಮಕ್ಕಳಿಗೆ ನಾಡು ನುಡಿ ಗೌರವವನ್ನು ಉಳಿಸಲು, ಬೆಳಸಲು ವಂದಿಸಿ ಕಲಿಸುವ ಕಾಲ ಇದಾಗಿದೆ ಎಂದು ನನಗೆನಿಸುತ್ತದೆ. ನಮ್ಮ ಕನ್ನಡ ಭಾಷೆಯ ಮಹತ್ವವನ್ನು ಸತ್ವವನ್ನು ಕನ್ನಡ ಮಕ್ಕಳ ಕವಿ ಮಹಾಲಿಂಗ ರಂಗರು,

"ಸುಲಿದ ಬಾಳೆಯ ಹಣ್ಣಿನಂದದಿ

ಕಳೆದ ಸಿಗುರಿನ ಕಬ್ಬಿನಂದದಿ

ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿಹ

ಲಲಿತವಹ ಕನ್ನಡದ ನುಡಿಯಲಿ

ತಿಳಿದು ತನ್ನೊಳು ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೆ

ಸಂಸ್ಕೃತದಲ್ಲಿನ್ನೇನು?



ಎಂದು ನಮ್ಮ ಕನ್ನಡ ನುಡಿ ಅನ್ನ ಕೊಡುವ ಭಾಷೆ, ಚಿನ್ನ ಕೊಡುವ ಭಾಷೆ ಶ್ರೀಗಂಧ ಕಂಪು ಬೀರುವ ಭಾಷೆ ಅಷ್ಟೇ ಅಲ್ಲ ಕನ್ನಡದಲ್ಲಿ ತನ್ನನ್ನು ತಾನು ತಿಳಿದುಕೊಂಡು ಮುನ್ನಡೆದರೆ ಮೋಕ್ಷವಾಗುವದೆಂದು ಘಂಟಾ ಘೋಷವಾಗಿ ಹೇಳುತ್ತಾರೆ. ಸಂಸ್ಕೃತ ತನ್ನ ಪ್ರಭಾವ ಬೀರಿದ್ದ ಕಾಲದಲ್ಲಿ ಕನ್ನಡ ಭಾಷೆಯ ಹಿರಿಮೆ, ಗರಿಮೆಯನ್ನು ಎತ್ತಿ ಹಿಡಿದು ಕನ್ನಡಿಗರನ್ನು ಎಚ್ಚರಿಸಿ ಕನ್ನಡದ ಮುನ್ನಡೆಗೆ ನಾಂದಿ ಹಾಡಿದ ಮಹಾಲಿಂಗ ರಂಗರು ತ್ರಿಕಾಲ ವಂದ್ಯರಲ್ಲವೆ?

ನಿಜ, ಯಾವ ಕಾಲವೇ ಇರಲಿ ಮಕ್ಕಳು ಮಕ್ಕಳೇ ಅವರೇ ಇಡೀ ಜಗತ್ತಿನ ಅಮೂಲ್ಯ ಆಸ್ತಿ, ಆರೋಗ್ಯಕರ ಸಮಾಜದ ಸಂಪತ್ತು. ಭವಿಷ್ಯದ ಆಶಾಕಿರಣ ಅವರನ್ನು ಮನೆಯಲ್ಲಿ ತಾಯಿ ತಂದೆಗಳು, ಶಾಲೆ ಕಾಲೇಜುಗಳಲ್ಲಿ ಶಿಕ್ಷಕ, ಶಿಕ್ಷಕಿಯರು ಕವಿಗಳು, ಸಾಹಿತಿಗಳು ಸಂಘ-ಸಂಸ್ಥೆಗಳು ಆಳುವ ಸರಕಾರ ಕೇಳು ನಾಯಕರು ಮಕ್ಕಳ ಕಡೆಗೆ ವಿಶೇಷ ಗಮನಕೊಡುವ ಕಾಲ ಇದಾಗಿದೆ. ಇಂದು ಎಚ್ಚತ್ತಶಿಕ್ಷಣ ಎತ್ತ ಸಾಗಿದೆಯೆಂದರೆ "ಕುರುಡನ ಮೇಲೆ ಕುಂಟ ಕುಳಿತು ಹೊರಟಂತಾಗಿದೆ." ಮಕ್ಕಳ ಸಾಹಿತ್ಯದ ಪರಿಸ್ಥಿತಿಯೂ ಕರುಣಗಂಭೀರವಾಗಿದೆ. ಮಕ್ಕಳ ಶಿಕ್ಷಣ, ಮಕ್ಕಳ ಸಾಹಿತ್ಯ ಬೇರೆ ಬೇರೆ ಅಲ್ಲ. ಒಂದೇ ನಾಣ್ಯದ ಎರಡು ಮುಖಗಳು. ಮಕ್ಕಳ ಸಾಹಿತ್ಯ ಮಗುವಿನ ಶಿಕ್ಷಣಕ್ಕೆ ಪ್ರೇರಣ ನೀಡುತ್ತದೆ. ಮಗು ಮೊದಲು ಕಲಿಯಬೇಕಾದುದು ಶಿಸ್ತು, ಸಭ್ಯತೆ, ಸಂಸ್ಕೃತಿ, ಸಂಸ್ಕೃತಿಯೊಂದಿಗೆ ಮಗುವಿನ ಶಿಕ್ಷಣ ಪ್ರಾರಂಭವಾಗಬೇಕು. ಮಗು ತನ್ನ ಪಕ್ಕದಲ್ಲಿ ಕುಳಿತ ತನ್ನ ಗೆಳೆಯನ ಪಾಟೀಚೀಲದಲ್ಲಿ ಪೆನ್ಸಿಲ್, ಸೀಸಕಡ್ಡಿ ಅಥವಾ

ರಬ್ಬರ್ ಕದಿಯಬಾರದೆಂಬ 'ಅರಿವು' ಎಂದು ಅವನಿಗೆ ಮಾಡಿತೋ ಅಂದೇ ಮಗುವಿನ ಶಿಕ್ಷಣ ಪ್ರಾರಂಭ ಎಂದು ಶಿಕ್ಷಣ ತಜ್ಞರ ಅಭಿಪ್ರಾಯ. ಮೂರು ವರ್ಷದ ಬುದ್ಧಿ ನೂರು ವರ್ಷದವರೆಗೆ ಮಗು ತನ್ನ ಬಾಲ್ಯದಲ್ಲಿಯೇ ಅಳವಡಿಸಿಕೊಂಡ ಈ ಗುಣ ಗೌರ ಅವನನ್ನು ಬಹು ಎತ್ತರಕ್ಕೆ ಕರೆದೊಯ್ಯುತ್ತದೆ. ಆಗ ಅವನು ಬೆಳೆದು ದೊಡ್ಡ ವ್ಯಕ್ತಿಯಾಗುತ್ತಾನೆ. ರಾಜ್ಯದ, ರಾಷ್ಟ್ರದ ಶಕ್ತಿಯಾಗುತ್ತಾನೆ, ಸಂಪತ್ತಾಗುತ್ತಾನೆ.

ಮಕ್ಕಳ ಶಿಕ್ಷಣಕ್ಕೆ ತಾಯಿಯೇ ಮೊದಲ ಗುರು, ಮನೆಯಿಂದಲೇ ಅವನ ಶಿಕ್ಷಣ ಪ್ರಾರಂಭವಾಗುತ್ತದೆ. ತಾಯಿ ತಾನು ಮಾತನಾಡುವ ಭಾಷೆಯಲ್ಲಿ ಮಕ್ಕಳ ಶಿಕ್ಷಣ ಪ್ರಾರಂಭವಾಗುತ್ತದೆ. ಅಂತೆಯೇ ಮಕ್ಕಳ ಕವಿ ಎಲ್. ಗುಂಡಪ್ಪ ಅವರು

“ಮನೆಯೇ ಮೊದಲು ಪಾಠಶಾಲೆ

ಜನನಿ ತಾನೇ ಮೊದಲ ಗುರು

ಜನನಿಯಿಂದ ಪಾಠ ಕಲಿತ

ಜನರು ಧನ್ಯರು”

ಎಂದು ಹೃದಯ ತುಂಬಿ ಹಾಡಿ ಮಕ್ಕಳ ಶಿಕ್ಷಣಕ್ಕೆ ಸಾಹಿತ್ಯಕ್ಕೆ ಸ್ಫೂರ್ತಿ ನೀಡಿದ್ದಾರೆ. ಮಕ್ಕಳು ಸುಶ್ರಾವ್ಯ ಧ್ವನಿಯಲ್ಲಿ ಉಕ್ಕಿಬಂದ ಮಾತು “ಜನನಿಯಿಂದ ಪಾಠ ಕಲಿತ ಜನರು ಧನ್ಯರು” ಎಂದು ಹೇಳುವ ನುಡಿ ಮುತ್ತು ಕನ್ನಡ ಭಾಷೆಯ ಸವಿ ತುತ್ತು ಈ ಮುತ್ತು ಸವಿತುತ್ತು ಮಕ್ಕಳ ಜಗತ್ತನ್ನು ಬೆಳ್ಳನೇ ಬೆಳಗುತ್ತದೆ.

ಕಾಲ ಚಕ್ರದ ಏರಿಳಿತದಿಂದ ಭಾರತದೇಶ ಅನಂತ ಕಷ್ಟ ಕೋಟಲೆಗೆ ಒಳಗಾದರೂ ತನ್ನ ಜಾಯಮಾನವನ್ನು ಕಾಯ್ದುಕೊಂಡು ಬರುವಲ್ಲಿ ಹಿಂದೇಟು ಹಾಕಲಿಲ್ಲ. ಮೊಗಲರಂತೆ

ಬ್ರಿಟಿಷರು ಭಾರತಕ್ಕೆ ಬಂದು ತಮ್ಮ ಚಕ್ರಾಧಿಪತ್ಯವನ್ನು ಸ್ಥಾಪಿಸಿದರು. ಬ್ರಿಟಿಷರು ತಮ್ಮ ಆಡಳಿತಕ್ಕೆ ತಕ್ಕಂತೆ ದೇಶವನ್ನು ಒಡೆದು ಚಿದ್ರಗೊಳಿಸಿದರು. ಅದರಂತೆ ಕನ್ನಡ ನಾಡಿನ ಸ್ಥಿತಿಯೂ ಆಯಿತು. ಹಾಗೇ ಹೀಗೆ ಕನ್ನಡ ನಾಡು ಹರಿದು ಹಂಚಾಗಿ ಹೋಯಿತು. ಕನ್ನಡಿಗರು ಒಡೆದು ಚೆಲ್ಲಾಪಿಲ್ಲಿಯಾದರು. 'ಕನ್ನಡ ಭಾಷೆಗೆ' ನೆಲೆಯಿಲ್ಲದಂತಾಯಿತು. ಬೆಲೆಯಿಲ್ಲದಂತಾಯಿತು, ಆ ಸಂದರ್ಭದಲ್ಲಿ ನಿಜಾಂ ಪ್ರಾಂತ್ಯಕ್ಕೆ ಒಳಗಾದ ಕಲಬುರಗಿ, ಬೀದರ, ರಾಯಚೂರು, ಅಚ್ಚ ಕನ್ನಡ ಪ್ರದೇಶಗಳ ಜನರು ಕಂಗಾಲಾದರು. ಆಡುವ ಭಾಷೆ ಕನ್ನಡ, ಆಡಳಿತ ಭಾಷೆ ಉರ್ದು ಇಂತಹ ವಿಷಮ ಸ್ಥಿತಿಯಲ್ಲಿ ಕಲಬುರ್ಗಿಯಲ್ಲಿ ಶ್ರೀ ಶರಣ ಬಸವೇಶ್ವರ ಸಂಸ್ಥಾನದ ಏಳನೆಯ ಪೀಠಾಧಿಪತಿಗಳಾದ ಪೂಜ್ಯ ದೊಡ್ಡಪ್ಪ ಅಪ್ಪಾ ಅವರು ಹೆಣ್ಣು ಮಕ್ಕಳಿಗಾಗಿ ಮಹಾದೇವಿ ಕನ್ಯಾ ಕನ್ನಡ ಶಾಲೆಯನ್ನು ಪ್ರಾರಂಭಿಸಿದರು. ಅದರಂತೆ ಬೀದರ ಜಿಲ್ಲೆಯ ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದೇವರು ಹೊರಗೆ ಉರ್ದು ಬೋರ್ಡ್ ಹಾಕಿ ಒಳಗೆ ಕನ್ನಡ ಶಾಲೆಯನ್ನು ಪ್ರಾರಂಭಿಸಿ ಕನ್ನಡ ಭಾಷೆ, ಸಂಸ್ಕಾರ, ಸಭ್ಯತೆಯನ್ನು ಉಳಿಸಿ ಬೆಳೆಸಿಕೊಂಡ ಬಂದದ್ದು ನಾವು ಎಂದೂ ಮರೆಯಬಾರದು.

ಮಹಾತ್ಮಗಾಂಧೀಜಿ ಅವರ ಮುಂದಾಳತ್ವದಲ್ಲಿ ಅಸಂಖ್ಯಾತ ಭಾರತೀಯರ ತ್ಯಾಗ, ಬಲಿದಾನಗಳಿಂದ ೧೯೪೭ ಆಗಸ್ಟ್ ೧೫ ರಂದು ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು. ಅದರಂತೆ ಅಸಂಖ್ಯಾತ ಕನ್ನಡಿಗರ ಅವಿಶ್ರಾಂತ ಹೋರಾಟದಿಂದ ೧೯೫೬ ನವೆಂಬರ್ ಒಂದರಂದು ಕರ್ನಾಟಕ ಏಕೀಕರಣವಾಯಿತು. ಕನ್ನಡಿಗರೆಲ್ಲರೂ ಒಂದಾದೆವು. ೧೯೬೦-೬೧ರಲ್ಲಿ ಕನ್ನಡ ನಾಡಿನಲ್ಲಿ ಕಡ್ಡಾಯ ಶಿಕ್ಷಣ ಜಾಯಿಯಾಯಿತು. ಕೋಳಿಕೂಗುವ ಪ್ರತಿಯೊಂದು ಊರಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳು, ಹಿರಿಯ ಪ್ರಾಥಮಿಕ ಶಾಲೆಗಳು ಮಾದರಿ ಪ್ರಾಥಮಿಕ ಶಾಲೆಗಳು ಅಸ್ತಿತ್ವಕ್ಕೆ ಬಂದವು. ಜಾಗೃತರಾದ ಮಕ್ಕಳು ಕನ್ನಡ ಶಾಲೆಗಳಿಗೆ ತಂಡೋಪ ತಂಡಗಳಲ್ಲಿ ಶಾಲೆಗೆ ಬಂದು ಸೇರತೊಡಗಿದರು.

ಮಕ್ಕಳ ಸಾಹಿತ್ಯದೊಡನೆ ಮಕ್ಕಳ ಶಿಕ್ಷಣ ತುಂಬ ಫಲಕಾರಿಯಾಗಿ ಪರಿಣಮಿಸತೊಡಗಿತು. ಭಾರತ ದೇಶದಲ್ಲಿ ಅದರಲ್ಲಿಯೂ ವಿಶೇಷವಾಗಿ ಕನ್ನಡ ನಾಡಿನಲ್ಲಿ ಕನ್ನಡ ಶಾಲೆಗಳು, ಅರ್ಧಶತಮಾನದವರೆಗೆ ತುಂಬ ವಿಜೃಂಭಣೆಯಿಂದ ಬೆಳೆದು ಬಂದವು. ಶಾಲೆಗಳು ಬೆಳೆದಂತೆ ಮಕ್ಕಳ ಸಾಹಿತ್ಯವೂ ಬೆಳೆದು ಬಂದಿತು.

ಭಾರತ ದೇಶದ ಪ್ರಥಮ ಪ್ರಧಾನಮಂತ್ರಿ ಪಂಡಿತ ಜವಾಹರಲಾಲ ನೆಹರೂ ಅವರು ತಮ್ಮ ರಾಜಕೀಯ ಜೀವನದ ಬೇಸರವನ್ನು ಮಕ್ಕಳ ಮಧ್ಯದಲ್ಲಿ ಪರಿಹರಿಸಿಕೊಳ್ಳುತ್ತಿದ್ದರು ಮಕ್ಕಳೂ ಸಹ ಅಕ್ಕರೆಯಿಂದ ಅವರನ್ನು ಚಾಚಾ ನೆಹರು" ಎಂದು ಕರೆಯುತ್ತಿದ್ದರು. ಅವರಿಗೆ ಗುಲಾಬಿ ಹೂವು ಕೊಟ್ಟು ಪ್ರೋತ್ಸಾಹಿಸುತ್ತಿದ್ದರು. ಒಮ್ಮೆ ಪಂಡಿತಜೀ ಅವರನ್ನು ಅವರ ಸ್ನೇಹಿತರು ಭಾರತದ ಭವಿಷ್ಯವನ್ನು ಕುರಿತು ಕೇಳಿದಂತೆ. ಆಗ ಪಂಡಿತ ಜವಹಾರ್‌ಲಾಲ ನೆಹರೂ ಅವರು ಭಾರತ ದೇಶದ ಭವಿಷ್ಯ ಪಂಚಾಂಗದಲ್ಲಿಲ್ಲ. ನಕ್ಷತ್ರ, ಗ್ರಹಗಳನ್ನು

ನೋಡುವುದರಲಿಲ್ಲ. "ಭಾರತದ ದೇಶದ ಭವಿಷ್ಯ ಮಕ್ಕಳ ಕಣ್ಣು ಕಿರಣಗಳಲ್ಲಿ ಆ ಕಣ್ಣುಗಳಲ್ಲಿ ಪ್ರಕಾಶವಿದ್ದರೆ ಮನಸ್ಸಿನಲ್ಲಿ ಉಲ್ಲಾಸವಿದ್ದರೆ ನಮ್ಮ ದೇಶದ ಭವಿಷ್ಯ ಉಜ್ವಲವಾಗಿರುತ್ತದೆ" ಎಂದು ಹೇಳಿದಂತೆ ಇಂದಿನ ಮಕ್ಕಳು



ನಾಳಿನ ನಾಗರಿಕರು" ಅವರು ಉತ್ತಮ ಶಿಕ್ಷಣ ಪಡೆದು ಜ್ಞಾನಿಗಳಾದರೆ ಭಾರತ ದೇಶ ಭವಿಷ್ಯ ಉಜ್ವಲವಾಗಿ ಬೆಳಗುವುದು. ಈ ಮಾತಿನಲ್ಲಿ ಎಳ್ಳಷ್ಟು ಸಂಶಯವಿಲ್ಲ. ಪ್ರಧಾನಮಂತ್ರಿ ಪಂಡಿತ ಜವಹಾರ್‌ಲಾಲ ನೆಹರೂಜಿ ಅವರ ಹತ್ತಿರ ಅವರ ಅನುಯಾಯಿಗಳು, ಸ್ನೇಹಿತರು ಅವರ ಹುಟ್ಟು ಹಬ್ಬ ಆಚರಿಸಲು ಮುಂದಾದರು ಆಗ ಪಂಡಿತ ಜವಹಾರಲಾಲ ನೆಹರೂಜಿ ಅವರು "ಪ್ರಜಾಪ್ರಭುತ್ವವುಳ್ಳ ಸ್ವತಂತ್ರ ಭಾರತದಲ್ಲಿ ವ್ಯಕ್ತಿ ಪೂಜೆಗೆ ಅವಕಾಶವಿಲ್ಲ. ಇರಬಾರದು" ಎಂದು ಹೇಳಿದರು. ಇಲ್ಲಿ ನಿಮ್ಮ ಹುಟ್ಟು ಹಬ್ಬದ ನೆನಪು ಭಾರತೀಯರಾದ ನಮಗೆ ಅವಶ್ಯವೆಂದು ಹೇಳಿದಾಗ ನನ್ನ ಹುಟ್ಟು ಹಬ್ಬದ ಬದಲು ಮಕ್ಕಳ ಹುಟ್ಟು ಹಬ್ಬವನ್ನಾಗಿ ಆಚರಿಸಬೇಕೆಂದು ಅನುಮತಿ ನೀಡಿದರು. ಇಂದು ನವೆಂಬರ್ ೧೪ ಮಕ್ಕಳ ದಿನಾಚರಣೆಯನ್ನು ಇಡೀ ಭಾರತದಾದ್ಯಂತ ಒಳ್ಳೆಯ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಆ ದಿನ "ಮಕ್ಕಳ ಹಕ್ಕು" ಅವರ ಶಿಕ್ಷಣ, ಸಂಸ್ಕೃತಿ ಸಭ್ಯತೆ ಇತ್ಯಾದಿ ಕುರಿತು ಚರ್ಚಿಸಲಾಗುತ್ತದೆ. ಅಷ್ಟೇ ಅಲ್ಲ ಕಲೆ, ಸಾಹಿತ್ಯ, ಶೌರ್ಯ, ಸಾಹಸದಲ್ಲಿ ತೊಡಗಿದರು ಮಕ್ಕಳನ್ನು ಗುರುತಿಸಿ ಅವರಿಗೆ ರಾಷ್ಟ್ರಪ್ರಶಸ್ತಿ ನೀಡಿ ರಾಷ್ಟ್ರ ಮಟ್ಟದಲ್ಲಿ ಗೌರವಿಸಲಾಗುತ್ತದೆ. ಹೀಗೆ ಶಾಲೆಗಳನ್ನು ಮಕ್ಕಳನ್ನು ಗೌರವಿಸಲು ಆದ್ಯತೆ ನೀಡಿದ ಭಾರತ ಸರ್ಕಾರಕ್ಕೆ ನಾವು ಧನ್ಯವಾದಗಳನ್ನು ಹೇಳಲೇ ಬೇಕು. ಮಕ್ಕಳ ದಿನಾಚರಣೆಯನ್ನು ಕುರಿತು ಖ್ಯಾತ ಮಕ್ಕಳ ಕವಿ ಶಂ.ಗು. ಬಿರಾದಾರ

"ತನ್ನ ಹುಟ್ಟು ಹಬ್ಬವನ್ನು
ಚಾಚಾ ನಮಗೆ ಕೊಟ್ಟನು
ತನ್ನ ಪ್ರೀತಿ ಕರುಣೆಗಳನ್ನು
ನಮ್ಮ ಮನದಿ ನೆಟ್ಟನು"

ಪಂಡಿತ ಜವಹಾರಲಾಲ ನೆಹರು ಹುಟ್ಟು ಹಬ್ಬದ ಸವಿಯನ್ನು ಸ್ಮರಿಸಿಕೊಳ್ಳುತ್ತಾರೆ. ಶಂ.ಗು. ಬಿರಾದಾರರು. ಅದರಂತೆ ಡಾ. ಎಸ್. ರಾಧಾಕೃಷ್ಣನ್‌ರು ಭಾರತದ ರಾಷ್ಟ್ರಪತಿಗಳಾಗಿದ್ದಾಗ ಅವರ ಹುಟ್ಟುಹಬ್ಬವನ್ನು ಆಚರಿಸಲು ಯತ್ನಿಸಿದಾಗ ಡಾ. ಎಸ್. ರಾಧಾಕೃಷ್ಣನ್‌ರು ಮಕ್ಕಳಿಗೆ ಶಿಕ್ಷಣ ನೀಡಿ ಅವರನ್ನು ಜ್ಞಾನ ಮೂರ್ತಿಗಳನ್ನಾಗಿ ಮಾಡುವ ಶಿಕ್ಷಕರು ನಿಜವಾದ ಅರ್ಥದಲ್ಲಿ ರಾಷ್ಟ್ರ ರಚನಾ ಶಿಲ್ಪಿಗಳು ನನ್ನ ಹುಟ್ಟು ಹಬ್ಬದ ಬದಲು ಶಿಕ್ಷಕರ ದಿನಾಚರಣೆ

ಆಚರಿಸಬಹುದು ಎಂದು ಸೂಚಿಸಿದರು. ಪ್ರತಿವರ್ಷ ಸೆಪ್ಟೆಂಬರ್ ೫ ಶಿಕ್ಷಕರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ. ಆಗ ರಾಜ್ಯ ಸರಕಾರಗಳು, ಕೇಂದ್ರ ಸರ್ಕಾರ ಉತ್ತಮ ಶಿಕ್ಷಕರನ್ನು ನಮ್ಮ ಮಕ್ಕಳು ಮತ್ತು ಶಿಕ್ಷಕರು ಇಂತಹ ಗೌರವಕ್ಕೆ ಪಾತ್ರರಾಗುತ್ತಿರುವುದು. ನಮಗೆ ಹೆಮ್ಮೆ ಅಲ್ಲವೆ? ಅವರ ಹುಟ್ಟು ಹಬ್ಬವನ್ನು ಸ್ಮರಿಸಿಕೊಂಡು ಮಕ್ಕಳ ಕವಿ ಎ.ಕೆ. ರಾಮೇಶ್ವರರು

"ನಿಮ್ಮ ಪುಣ್ಯದ ಬಲದಿ ದೊರಕಿತು

ಶಾಲಾ ಗುರುವಿಗೆ ವಂದನೆ

ಪ್ರಶಸ್ತಿ ಪಡೆದು ಮರೆತು, ಬಿಟ್ಟರು ತಮ್ಮ ಬದುಕಿನ ವೇದನೆ

ಎಂದು ಹೃದಯ ತುಂಬಿ ಸ್ಮರಿಸಿಕೊಳ್ಳುತ್ತಾರೆ"

ಇಷ್ಟೆಲ್ಲ ಸವಲತ್ತು ಗೌರವಗಳಿದ್ದರೂ ಕನ್ನಡ ಶಾಲೆ, ಕನ್ನಡ ಭಾಷೆ,



ಕುಂಟಿತವಾಗತೊಡಗಿವೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಬಾಲ ವಿಕಾಸ ಅಕಾಡೆಮಿ, ಬಾಲ ಭವನ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳಿದ್ದರೂ ಕನ್ನಡ ಶಾಲೆಗಳು ಕುಂಟಿತಗೊಳ್ಳತೊಡಗಿವೆ. ಕನ್ನಡ ಶಾಲೆಗಳಲ್ಲಿ ಸೈಕಲ್ಲು, ಮಕ್ಕಳಿಗೆ ಸಮವಸ್ತ್ರ ಮಕ್ಕಳಿಗೆ ಕಾಲು ಚೀಲ ಬೂಟು, ಓದುವ ಪುಸ್ತಕ, ಬರೆಯುವ ಪೆನ್ಸಿಲು, ಮಧ್ಯಾಹ್ನದ ಬಿಸಿಯೂಟ 'ಕುಡಿಯಲು ಹಾಲು' ಸ್ಕಾಲರಶಿಪ್ ಅಷ್ಟೇಲ್ಲ ಪ್ರತಿಭಾವಂತ ಶಿಕ್ಷಕರು, ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣ ಸಮಿತಿ ಮಕ್ಕಳ ಪಾಲಕರೇ ಇರುತ್ತಿರುವಾಗ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಲಿದೆ. ಒಂದೊಂದಾಗಿ ಕನ್ನಡ ಶಾಲೆಗಳು ಮುಚ್ಚುತ್ತಲಿವೆ. ಪ್ರಗತಿ ಪಥದಲ್ಲಿ ಇಲ್ಲ. ಇದಕ್ಕೆ ಕಾರಣ ಇಲ್ಲದೇ ಇಲ್ಲ. ಸರಕಾರ, ಶಾಲೆಗಳ ಅಭಿವೃದ್ಧಿಗಾಗಿ ಹಣ ಬಿಡುಗೆ ಮಾಡುತ್ತದೆ. ಎಸ್.ಡಿ.ಎಂ.ಸಿ. ಗಳ ಅಧ್ಯಕ್ಷರು ಸದಸ್ಯರ ಲಕ್ಷವೆಲ್ಲ ಬಿಡುಗಡೆಯಾದ ಹಣದ ಕಡೆ ಸಂಬಂಧಪಟ್ಟ ಮೇಲಾಧಿಕಾರಿಗಳ ಕಾಕ ದೃಷ್ಟಿಯೂ ಇದೇ ಹಣದ ಕಡೆಗೆ ಶಾಲಾ ಮಕ್ಕಳ ಶಿಕ್ಷಣ, ಅವರ ಅಭಿವೃದ್ಧಿ ಕಡೆ, ಇವರ ಲಕ್ಷವೇ ಇಲ್ಲದಂತಾಗಿ ಸರಕಾರ ನೀಡಿದ ಹಣ ಸಮರ್ಪಕ ರೀತಿಯಲ್ಲಿ ಬಳಕೆಯಾಗಲಿಲ್ಲ. ಒಂದಿಷ್ಟು ಆಗಿದ್ದರೆ ಭೌತಿಕ ಬೆಳವಣಿಗೆಯಾಗಿರಬೇಕು. ಮಕ್ಕಳ ಬೌದ್ಧಿಕ ಬೆಳವಣಿಗೆಯಾಗಲಿಲ್ಲ. ಸರಕಾರಿ ಶಾಲೆಗಳ ಅಧಿಕಾರಿಗಳು, ಶಾಲಾಭಿವೃದ್ಧಿ ಮಂಡಳ ಇವರಿಬ್ಬರ ಸಮನ್ವಯದ ಕೊರತೆ ಎದ್ದು ಕಾಣತೊಡಗಿತು. ಶಾಲೆಗಳ ಸ್ಥಿತಿಗತಿ, ಶಾಲಾ ಶಿಕ್ಷಕರ ಬೋಧನೆ, ಸಾಧನೆಯ ಕಡೆಗೆ ಕಣ್ಣು ಹಾಯಿಸಿ ನೋಡಲಿಲ್ಲ. ಸಾಲದ್ದಕ್ಕೆ ಇದೇ ಸಂದರ್ಭದಲ್ಲಿ ಸರಕಾರ ಹಾದಿಗೊಂದು ಬೀದಿಗೊಂದರಂತೆ ಖಾಸಗಿ ಶಾಲೆಗಳಿಗೆ

ಆದೇಶ ನೀಡತೊಡಗಿತು. ಖಾಸಗಿ ಶಾಲೆಗಳಲ್ಲಿ ಮಕ್ಕಳಿಗೆ ಆಕರ್ಷಕವಾದ ಕೋಟು, ಟೈ, ಭೂಟು, ಹ್ಯಾಟ್ ಕೊಟ್ಟು ಮಮ್ಮಿ, ಡ್ಯಾಡಿ, ಅಂಕಲ್, ಆಂಟಿ, ಕೇವಲ ನಾಲ್ಕು ಅಕ್ಷರ ಕಲಿಸಿ ಪ್ರಾರಂಭದಲ್ಲಿ ಬ್ರಿಟಿಷರು ಯಾವ ರೀತಿಯಲ್ಲಿ ತಮ್ಮ ಆಂಗ್ಲ ಭಾಷೆಯಿಂದ ಭಾರತಿಯರನ್ನು ಮರಳುಗೊಳಿಸಿ ದೇಶವನ್ನು ಕಬಳಿಸಿದರೋ, ಅದೇ ರೀತಿಯಲ್ಲಿ ಖಾಸಗಿ ಶಾಲೆಗಳು ಮಮ್ಮಿ, ಡ್ಯಾಡಿ, ಅಕ್ಷರಗಳನ್ನು ಕಲಿಸಿ ಕನ್ನಡ ಶಾಲೆಗಳನ್ನು ಮೂಲಿಗೊತ್ತ ಬಂದವು, ಬರುತ್ತಲಿವೆ.

೨೦೧೪ ರಲ್ಲಿ ಸುಪ್ರೀಮ್ ಕೋರ್ಟ ಯಾವ ಮಾಧ್ಯಮದಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಬೇಕೆಂಬ ವಿಷಯ ಪಾಲಕರಿಗೆ ಸೇರಿದ್ದು ಎಂಬ ತೀರ್ಪು ಹೊರ ಬರುತ್ತಲೇ ಕನ್ನಡ ಮಾಧ್ಯಮದ ಖಾಸಗಿ ಶಾಲೆಗಳು ಅಧಿಕೃತವಾಗಿ ಆಂಗ್ಲ ಮಾಧ್ಯಮ ಶಾಲೆಗಳಾಗಿ ಪರಿವರ್ತನೆಗೊಂಡವು. ಸಾಲದಕ್ಕೆ ಪ್ರತಿವರ್ಷ ಒಂದೂವರೆ; ಎರಡಲಕ್ಷದ ಮಕ್ಕಳವರೆಗೆ ಆರ್.ಟಿ.ಈ. ಕಾನೂನಿನಡಿಯಲ್ಲಿ ಸರ್ಕಾರವೇ ಶುಲ್ಕ ಭರಿಸಿ ಆಂಗ್ಲ ಮಾಧ್ಯಮ ಶಾಲೆಗಳಿಗೆ ಕಳಿಸಿಕೊಡುತ್ತಲಿದೆ. ೨೦೧೮-೨೦೧೯ ರ ಶೈಕ್ಷಣಿಕ ಅವಧಿಯಲ್ಲಿ ಸುಮಾರು ಮೂರುವರೆ ಲಕ್ಷದಿಂದ ನಾಲ್ಕು ಲಕ್ಷ ಮಕ್ಕಳು ಆಂಗ್ಲಮಾಧ್ಯಮ ಶಾಲೆ ಸೇರಿಸಿದ್ದಾರೆ. ಸರಕಾರ ಕನ್ನಡಶಾಲೆಗಳನ್ನು ಪ್ರೋತ್ಸಾಹಿಸುವುದನ್ನು ಬಿಟ್ಟು ಆರ್.ಟಿ.ಇ. ಕಾನೂನಡಿಯಲ್ಲಿ ನಮ್ಮ ಸರಕಾರ ಖುದ್ದಾಗಿ ಎದುರುನಿಂತು ಆಂಗ್ಲ ಮಾಧ್ಯಮಶಾಲೆಗಳಿಗೆ ಮಕ್ಕಳ ಶುಲ್ಕವನ್ನು ಭರಿಸಿ ಕಳಿಸಕೊಡುತ್ತಲಿದೆ. ಖಾಸಗಿಯವರು ಬೇಡಿದ ಸೌಲಭ್ಯವನ್ನು ಸೌಕರ್ಯವನ್ನು ಸರಕಾರವೇ ಭರಿಸುತ್ತದೆ. ಹೀಗೆ ಮಾಡಿದರೆ ಕನ್ನಡಿ ನಾಡಿನಲ್ಲಿ ಕನ್ನಡ ಶಾಲೆಗಳು ಹೇಗೆ ಉಳಿಯುತ್ತವೆ ನೀವೆ ವಿಚಾರಿಸಿರಿ. ಎಂದು ಗುಡುಗಿದ್ದಾರೆ.



ಕನ್ನಡ ನಾಡಿನಲ್ಲಿ ಕನ್ನಡ ಭಾಷೆಗೆ ಅಗ್ರಸ್ಥಾನವಿದೆ. ಕನ್ನಡ ನಮ್ಮ ಮಾತೃಭಾಷೆ, ಕನ್ನಡ ನಮ್ಮ ಸಂಸ್ಕೃತಿ ಕನ್ನಡ ನಮ್ಮ ಇರುವಿಕೆ, ಬದುಕು, ನಮ್ಮ ಭಾಷೆಯನ್ನು ಕಳೆದುಕೊಂಡರೆ ನಾವು ನಮ್ಮ ಬದುಕನ್ನು ಕಳೆದುಕೊಂಡಂತೆ ನಮ್ಮ ಬದುಕನ್ನು ಉಳಿಸಿಕೊಂಡು ನಮ್ಮ ಸಂಸ್ಕೃತಿ ಬೆಳೆಸಿಕೊಂಡು ಯಾವ ಭಾಷೆಯನ್ನಾದರೂ ಅವರು ಕಲಿಯಬಹುದು. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಕನ್ನಡ ಭಾಷೆಯೇ ನಿಜವಾಗಿ 'ಅನ್ನದ ಭಾಷೆ' ಇಂಗ್ಲೀಷಭಾಷೆ ತಾಯಿ ತಂದೆಗಳನ್ನು ವೃದ್ಧಾಶ್ರಮಕ್ಕೆ ಅಟ್ಟಿ ತನ್ನಷ್ಟಕ್ಕೆ ತಾನು ಬದಕುವುದನ್ನು ಕಲಿಸುವ ಸ್ವಾರ್ಥ ಭಾಷೆ ಎಂದು ಹೇಳುವ ಮಕ್ಕಳ ಕವಿ ಶಂ.ಗು. ಬಿರಾದಾರರು

"ಏತಕಮ್ಮಾ ಎಲ್ಲ ಜನರು

ನನಗೆ ಬುದ್ಧಿಯ ಹೇಳ್ವರು

ನಾನು ಹೇಳುವ ಒಂದು ಮಾತನ್ನು

ಯಾರು ಯಾರೂ ಕೇಳರು"

ಎಂದು ಇಂದು ನಮ್ಮ ಮಕ್ಕಳು ಧ್ವನಿ ಎತ್ತಿ ಕೇಳುವ, ಹೇಳುವ ಸಾಮರ್ಥ್ಯವನ್ನು ಪಡೆದಿದ್ದಾರೆ, ನಮ್ಮ ಹಿರಿಯರು ಮಾಡುವ ತಪ್ಪನ್ನು ಎತ್ತಿ ತೋರಿಸಿ.

"ತಾವೇ ತಮ್ಮಯ ಮಾತಿನಂತೆಯೇ

ಏತಕೆಲ್ಲರು ನಡೆಯರು"

ಕೇಳುತ್ತಿರುವುದು ಅವರ ಪ್ರಬುದ್ಧತೆಗೆ ಸಾಕ್ಷಿಯಾಗಿದೆ. ಅವರ ಮಾತುಗಳನ್ನು ಕೇಳುತ್ತಿದ್ದಂತೆ ಸ್ವಾಮಿ ವಿವೇಕಾನಂದರು ಹೇಳಿದ ಮಾತುನೆನಪಾಗುತ್ತದೆ. ನಮ್ಮ ಮಕ್ಕಳು ಕೇವಲ ಮಕ್ಕಳಲ್ಲ ಅವರು "ಅಮೃತ ಪುತ್ರರು" ಅದರಲ್ಲಿ ಇಂದಿನ ಮಕ್ಕಳು ತುಂಬಾ ಜಾಣರು. ಬುದ್ಧಿವಂತರು, ಅವರ ಬೆಳೆವಣಿಗೆಯಲ್ಲಿ ನಮ್ಮ ದೇಶದ ಭವಿಷ್ಯ ಅಡಗಿದೆ. ಇಂಥ ಮಕ್ಕಳಿಗೆ ನಾವು ಆಸ್ತಿಯನ್ನು ಮಾಡುವುದು ಅವಶ್ಯಕತೆ ಇಲ್ಲ. ಅವರಿಗೆ ನಿಜವಾದ ಜ್ಞಾನವನ್ನು ಕೊಟ್ಟು ನಾಡಿನ ಆಸ್ತಿಯನ್ನಾಗಿ ಮಾಡುವುದು ನಮ್ಮ ಹಕ್ಕು ಮತ್ತು ಕರ್ತವ್ಯವಾಗಿದೆ.

ಇಂದು ನಮ್ಮ ಮಕ್ಕಳು ಓದುತ್ತಿರುವುದು ಕೇವಲ ಹೆಚ್ಚು ಮಾರ್ಕ್ಸ್‌ಗಳನ್ನು ಪಡೆಯುವ ದೃಷ್ಟಿಯಿಂದ, ಜ್ಞಾನದೃಷ್ಟಿಯಿಂದ ಅಲ್ಲ. ಮಗು ಜ್ಞಾನಿಯಾದರೆ ಸಮಾಜಕ್ಕೆ ಹಾನಿಯಾಗುವುದಿಲ್ಲ ಕೇವಲ ಅಂಕಗಳನ್ನು ಪಡೆದು ದೊಡ್ಡ ದೊಡ್ಡ ಹುದೆಯಲ್ಲಿದ್ದು ಸಮಾಜವನ್ನು ಹಾಳು ಗೆಡಹುತಲಿದ್ದಾರೆ. ಇಂದು ಓದಿದವರಿಂದಲೇ ಸಮಾಜ ಅನಂತ ಕಷ್ಟಕ್ಕೀಡಾಗುತ್ತದೆ ಎಂಬ ಕೂಗು ಎಲ್ಲ ಕಡೆಗೂ ಕೇಳಿ ಬರುತ್ತಲಿದೆ.

ಭಾರತ ಹಳ್ಳಿಗಳಿಂದ ತುಂಬಿದ ಸುಂದರವಾದ ದೇಶ, ಹಳ್ಳಿಗಳಲ್ಲಿ ಕೃಷಿಯೇ ಪ್ರಧಾನವಾದ ಕೆಲಸ ಓದಿ ಬರೆದ ನಮ್ಮ ಮಕ್ಕಳು ಕೃಷಿ ಕೆಲಸದಲ್ಲಿ ತೊಡಗಿದ್ದರೆ ಬರಡಾಗುತ್ತಿರುವ ಹಳ್ಳಿಗಳು ತುಂಬಿಕೊಳ್ಳುತ್ತವೆ. ಕೋಟಿ ವಿದ್ಯೆಗಳು ಮೇಟಿ ರಾಟಿಗಳ ಕೆಳಗೆ ಎಂಬ ನಮ್ಮ ಹಿರಿಯರ ಮಾತು ಅಕ್ಷರ ಸಹಸತ್ಯ.

ಇವನೇ ನೋಡು ಅನ್ನದಾತ

ಹೊಲದಿ ದುಡಿದ ದುಡಿವನು

ನಾಡ ಜನರು ಬದುಕಲೆಂದು

ದವಸ ಧಾನ್ಯ ಬೆಳೆವನು

ಮಕ್ಕಳ ಕವಿ 'ಸತ್ಯಾರ್ಥಿ' ಅವರು ಬರೆದ ಈ ಗೀತೆ ರೈತನ ಹಿರಿಮೆ, ಗರಿಮೆ ದುಡಿಮೆಯನ್ನು ಎತ್ತಿ ತೋರಿಸುತ್ತದೆ.

ಹೀಗೆ ಯುವಕರು ದುಡಿಮೆಯಲ್ಲಿ ತೊಡಗಿದರೆ ಅವರ ದಾರಿದ್ರವೇ ದೂರವಾಗುವುದು, "ಕಟ್ಟೆಯ ಕಲ್ಲು ಕಟ್ಟೆಗೆ ಕೂತಂತಾಗುತ್ತದೆ." ಆಗ ಹಳ್ಳಿಯ ಭಾಷೆ ಸಂಸ್ಕೃತಿ ಮೈತುಂಬಿಕೊಳ್ಳುತ್ತದೆ. ಕನ್ನಡ ಭಾಷೆಯೊಡನೆ ಇಂಗ್ಲೀಷಗೂ ಬೆಲೆ ಬರುತ್ತದೆ.

ಆಂಗ್ಲ ಭಾಷೆಯಲ್ಲಿ ಓದಿ ಪರದೇಶಕ್ಕೆ ಹೋಗಿ ದುಡಿಯುವುದಕ್ಕಿಂತ ಕನ್ನಡದೊಡನೆ ಇಂಗ್ಲೀಷ ಭಾಷೆಯನ್ನು ಕಲಿತು ಹಳ್ಳಿಗೆ ಬಂದು ತಂದೆ, ತಾಯಿ ಅಕ್ಕ ತಂಗಿ ಅಣ್ಣ ತಮ್ಮಂದಿರೊಡನೆ ಅಕ್ಕರೆಯಿಮದ ಬಾಳಿದರೆ ಪುರಂದರದಾಸರು ಹೇಳಿದಂತೆ ಈ "ಪರಿಯ ಸೊಬಗಾ ದೇವರಲಿ ಕಾಣೆ" ಎಂಬ ಮಾತಿನ ಸತ್ಯ ಸಾಕ್ಷಾತ್ಕಾರವಾಗುತ್ತದೆ. ಆಗ ಜೀವನದ ಪಾವನವಾಗುತ್ತದೆ. "ಲೆಕ್ಕಗಮಿತಾಕ್ಷರರು ಬೆಳೆದ ಮೆರೆದಿಹನಾಡು" ಹೊಸ ಹೊಸ ತಂತ್ರಜ್ಞಾನದಿಂದ, ವಿಜ್ಞಾನದಿಂದ ಬೆಳಗುವುದರಲ್ಲಿ ಸಂದೇಹವಿಲ್ಲ.

ಎಂಬತ್ತೈದನೆಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಪ್ರೊ. ಎಚ್.ಎಸ್. ವೆಂಕಟೇಶ ಮೂರ್ತಿ ಅವರೂ ಸಹ

ಕನ್ನಡ ನಾಡಿನಲ್ಲಿ ಕನ್ನಡ ಉಳಿಯಬೇಕಾದರೆ ಕನ್ನಡ ಶಾಲೆಗಳು ಅರ್ಥಪೂರ್ಣವಾಗಿ ನಡೆಯಬೇಕು. ಅದಕ್ಕೆ ಪೂರಕವಾಗಿ ಮಕ್ಕಳ ಸಾಹಿತ್ಯ ಹೊಸ ಹೊಸ ಆಯಾಮಗಳೊಂದಿಗೆ ರಚನೆಯಾಗಬೇಕು. ಕನ್ನಡ ಶಾಲೆಯಲ್ಲಿ, ಕನ್ನಡ ಮಾಧ್ಯಮದಲ್ಲಿ ಓದಿದ ಮಕ್ಕಳಿಗೆ ಸರಕಾರ ವಿವಿಧ ಹುದ್ದೆಯಲ್ಲಿ ಅವರಯೋಗ್ಯತೆಯ ಮೇರೆಗೆ ಕೆಲಸ ಮಾಡಲು ಅವಕಾಶ ಕಲ್ಪಿಸಿಕೊಡಬೇಕು. ಆಗ ಅಂತಹ ವಿದ್ಯಾವಂತರು ತಮ್ಮನ್ನು ತಾವು ರಕ್ಷಿಸಿಕೊಂಡು ನಾಡು-ನುಡಿ ಸೇವೆ ಮಾಡಲು ಸಮರ್ಥರಾಗುತ್ತಾರೆ. ಇಂತಹ ಅರ್ಥಪೂರ್ಣ ಅವಕಾಶ ಸರಕಾರ ಕಲ್ಪಿಸಿಕೊಟ್ಟು ಕನ್ನಡ ಶಾಲೆಗಳನ್ನು ಉಳಿಸಿಕೊಳ್ಳಬೇಕು. ಮಕ್ಕಳ ಸಾಹಿತ್ಯ ಬೆಳಸಬೇಕು. ಇಂದು ಮಕ್ಕಳ ಸಾಹಿತ್ಯ ಕೇಳುವವರೇ ಇಲ್ಲ, ಮಕ್ಕಳ ಸಾಹಿತಿಗಳು ನಿರಾಶರಾಗುತ್ತಿದ್ದಾರೆ. ಸರಕಾರ ಮಕ್ಕಳ ಸಾಹಿತ್ಯಕ್ಕೆ ಹೆಚ್ಚಿನ ಅವಕಾಶ ಕಲ್ಪಿಸಿಕೊಟ್ಟು ಅವರನ್ನು ಪ್ರೋತ್ಸಾಹಿಸಬೇಕು.

"ಕನ್ನಡ ಕಸ್ತೂರಿ, ಕನ್ನಡ ಪಾವನ ತುಳಸಿ ಕನ್ನಡ ಬಿಲ್ಲ ಪತ್ರಿ, ಕನ್ನಡ ಕನ್ನಡ ಹಾ ಸವಿಗನ್ನಡ"

## ಮಕ್ಕಳ ಮೇಲೆ ತಂತ್ರಜ್ಞಾನದ ಪ್ರಭಾವ

**- ರಾಜಶೇಖರ ಕುಕ್ಕುಂದ**

ಸರಿ ಸುಮಾರು ೪೫ ವರುಷಗಳ ಹಿಂದಿನ ಮಾತು. ನಾನಾಗ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದೆ. ಕಲಬುರ್ಗಿ ಪಟ್ಟಣದಲ್ಲಿ ಓದುತ್ತಿದ್ದೆನಾದರೂ ಬೇಸಿಗೆ-ದಸರೆಯ ರಜೆ ಸಿಕ್ಕಾಗಲೆಲ್ಲಾ ನನ್ನ ಠಿಕಾಣಿ ನಮ್ಮ ಹಳ್ಳಿಯಲ್ಲಿಯೇ. ಅಪ್ಪ ಒಂದು ರೇಡಿಯೋ ಕೊಂಡುಕೊಂಡಿದ್ದರು. ನೀವು ನಂಬುತ್ತೀರೋ, ಇಲ್ಲವೋ ಆ ನಮ್ಮ ಇಡೀ ಹಳ್ಳಿಯಲ್ಲಿ ಅದೊಂದೇ ರೇಡಿಯೋ! ಸುದ್ದಿ ಕೇಳಲು ಊರಿನ ಜನ ನಮ್ಮ ಮನೆಗೆ ಬರಬೇಕಿತ್ತು. ಅಪ್ಪನನ್ನು ಬಿಟ್ಟರೆ ಮನೆಯಲ್ಲಿ ಯಾರೂ ರೇಡಿಯೋ ಮುಟ್ಟುತ್ತಿರಲಿಲ್ಲ. ಅಪ್ಪ ಹೊರಗಡೆ ಹೋದಾಗ ಯಾರೂ ಇಲ್ಲದ್ದು ಖಾತ್ರಿಯಾದರೆ ನಾನು ರೇಡಿಯೋ ಮುಟ್ಟಿ ಅದರ ಸ್ವಿಚ್ ಒತ್ತಿ ಕಿತಾಪತಿ ಮಾಡಿದ್ದುಂಟು. ನನಗೋ ಅದು ಕಂಡರೆ ಸೋಜಿಗ! ಇದರೊಳಗಿಂದ ಹಾಡು, ಮಾತು ಎಲ್ಲ ಹೇಗೆ ಕೇಳಿಸುತ್ತದೆ? ಇದರೊಳಗ್ಯಾರಿದ್ದಾರು? ಎಂದೆಲ್ಲ ನನಗೆ ಅನಿಸುತ್ತಿತ್ತು.

ಸರಿಸುಮಾರು ೪೦ ವರುಷಗಳ ಹಿಂದಿನ ಮಾತು. ಕರ್ನಾಟಕದಲ್ಲಿ ಪ್ರಪ್ರಥಮವಾಗಿ ನಮ್ಮ ಕಲಬುರ್ಗಿಯಲ್ಲಿ ದೂರದರ್ಶನ ಕೇಂದ್ರ ಆರಂಭವಾಯಿತು. ಅಲ್ಲಿಯ ಜನಕ್ಕೆ ಸಂಭ್ರಮವೋ ಸಂಭ್ರಮ! ನಿಜವಾಗಿಯೂ ನಮಗದು ದೂರದರ್ಶನವೇ ಆಗಿತ್ತು ಯಾಕೆಂದರೆ ನಮಗೆ ಟೀವಿ ಸಮೀಪಿಸಿ ನೋಡುವ ಭಾಗ್ಯವೇ ಇರಲಿಲ್ಲ. ಆಗ ಇಡೀ ಕಲಬುರ್ಗಿಯಲ್ಲಿ ಸಾರ್ವಜನಿಕರಿಗಾಗಿ ಪಬ್ಲಿಕ್ ಗಾರ್ಡನ್ ಬಿಟ್ಟರೆ ನಾಲ್ಕಾರು ಸಿರಿವಂತರ ಮನೆಗಳ ಹಜಾರದಲ್ಲಿ ಟೀವಿಗಳ ಬೆಳಕು ಹರಡಿಕೊಳ್ಳುತ್ತಿತ್ತು. ಆಗೆಲ್ಲಾ ಬ್ಲ್ಯಾಕ್ ಅಂಡ್ ವೈಟ್ ಟೀವಿಗಳೇ, ಪಬ್ಲಿಕ್ ಗಾರ್ಡನ್ನಿನಲ್ಲಿ ಮೆಷ್ ಹಾಕಿರುವ ಕಿಟಕಿಯ ಹಿಂದೆ ದೊಡ್ಡ ಹಂಡೆಯಂತಹ ಟೀವಿಯೊಂದು ಶನಿವಾರ ಸಂಜೆಗೆ ನಮಗೆ ಸಿನೆಮಾ ತೋರಿಸಲು ಕಾದಿರುತ್ತಿತ್ತು. ಆ ಸಂಜೆಯ ಹೊತ್ತಲ್ಲಿ ಸೊಳ್ಳೆಗಳನ್ನು ಲೆಕ್ಕಿಸದೇ ನೆರೆಯುತ್ತಿದ್ದ ಸಾವಿರಾರು ಮಂದಿಯಲ್ಲಿ ನಮ್ಮ ಕುಂಡಿಗೊಂದಿಷ್ಟು ಜಾಗ ಮಾಡಿಕೊಂಡು ಟೀವಿ ಆನ್ ಮಾಡಲು ಬರುವ ಆ 'ಅಣ್ಣನಿಗಾಗಿ ಕಾಯುತ್ತಿದ್ದೆವು. ರಾಜಕುಮಾರ ಬಿಟ್ಟರೆ ನಮಗೆ ನೆಕ್ಸ್ ಹೀರೋ ಅಂದ್ರೆ ಅವನೇ. "ದೊಡ್ಡವರಾದಾಗ ನಮಗೂ ಇಂಥಾ ಅವಕಾಶ ಸಿಗಲಿ ದೇವರೇ" ಅಂತ ಮನಸ್ಸಿನಲ್ಲಿ ಅಂದುಕೊಳ್ಳುತ್ತಿದ್ದೆವು.

ಮಕ್ಕಳಿಗೆ ತಂತ್ರಜ್ಞಾನ ಹೇಗೆ ಕುತೂಹಲ ಮೂಡಿಸುತ್ತದೆ, ಆಕರ್ಷಣೆ ಮಾಡುತ್ತದೆ ಎನ್ನುವುದಕ್ಕೆ ಈ ಎರಡು ಉದಾಹರಣೆಗಳು ಸಾಕು.

ಶಿಕ್ಷಣದ ರೂಪುರೇಷೆಗಳಲ್ಲಿ ಈಗ ಸಾಕಷ್ಟು ಬದಲಾವಣೆಗಳಾಗಿವೆ. ಆಧುನಿಕ ತಂತ್ರಜ್ಞಾನ ಅದಕ್ಕೆ ಸಹಕಾರಿಯಾಗಿ ನಿಂತಿದೆ; ಅರ್ಥಪೂರ್ಣ ಬೋಧನೆ ಮತ್ತು ಕಲಿಕೆ ಸುಲಭವಾಗಿದೆ ಎಂಬ ಮಾತನ್ನು ಯಾರೂ ಅಲ್ಲಗಳೆಯುವಂತಿಲ್ಲ. ಶಾಲೆಗಳಲ್ಲಿ ಪಾಟಿ- ಬಳಪ ಎಂದೋ ಮರೆಯಾಗಿ ಹೋಗಿದೆ; ಪಾಟಿ-ಚೀಲವೂ ಮರೆಯಾಗುವ ಸನ್ನಾಹದಲ್ಲಿದೆ; ಇನ್ನು ತರಗತಿಯಿಂದ ಗುರುಗಳೂ ಮಾಯವಾಗುವ ದಿನಗಳು ಬಹು ದೂರವಿಲ್ಲ. ಈಗ ಮಕ್ಕಳಿಗೆ ಬೆರಳ ತುದಿಯಲ್ಲಿಯೇ ಮಾಹಿತಿ; ಮಾಹಿತಿಗೆ ಯಾವ ಕೊರತೆಯಿಲ್ಲ; ಕಲಿಕೆಗೆ



ಯಾವ ಕಟ್ಟಳೆಗಳಿಲ್ಲ. ಎಲ್ಲಿ ಬೇಕಾದರೂ, ಯಾರು ಬೇಕಾದರೂ, ಯಾವಾಗ ಬೇಕಾದರೂ, ಏನು ಬೇಕಾದರೂ, ಹೇಗೆ ಬೇಕಾದರೂ ಕಲಿಯಲು ಅವಕಾಶವಾಗಿರುವುದು ತಂತ್ರಜ್ಞಾನದಿಂದಲೇ, ಅಲ್ಲವೇ?

ತಂತ್ರಜ್ಞಾನವು ನಮಗೆ ಎಷ್ಟು ಅನುಕೂಲವೋ ಅಷ್ಟೇ ಅಪಾಯಕಾರಿ, ಅದನ್ನು ಜಾಣತನದಿಂದ, ಎಚ್ಚರಿಕೆಯಿಂದ ಮತ್ತು ಜವಾಬ್ದಾರಿಯಿಂದ ಉಪಯೋಗಿಸುವ ಕಲೆ ನಮಗೆ, ಮುಖ್ಯವಾಗಿ ಮಕ್ಕಳಿಗೆ ಗೊತ್ತಿರಬೇಕು. ಮಕ್ಕಳು ತಂತ್ರಜ್ಞಾನಕ್ಕೆ ಬಹುಬೇಗ ಆಕರ್ಷಿತರಾಗುತ್ತಾರೆ. ಅವರು ಚಂಚಲ ಸ್ವಭಾವದವರು; ಅವರಿಗೆ ಸ್ವ-ನಿಯಂತ್ರಣ ಸಾಮರ್ಥ್ಯ ಕಡಿಮೆ. ಮಕ್ಕಳು ಹೀಗೆ ತಂತ್ರಜ್ಞಾನದ ಸೆಳೆತಕ್ಕೆ ಸಿಕ್ಕರೆ ಅವರ ಬಾಲ್ಯದ ಗತಿಯೇನು? ಬಾಲ್ಯ ಕಳೆದುಕೊಂಡ ಅವರ ಮುಂದಿನ ಬಾಳಿನ ಭವಿಷ್ಯವೇನು? ಎಂಬುದನ್ನು ನಾವು ಗಂಭೀರವಾಗಿ ಪರಿಗಣಿಸುವ ಅವಶ್ಯಕತೆ ಇದೆ.

ನಮ್ಮ ಆಹ್ಲಾದಕರ ಸ್ಥಿತಿಯಲ್ಲಿ ಮೆದುಳಿನಲ್ಲಿ ಡೋಪಮಿನ್ ಎನ್ನುವ ರಾಸಾಯನಿಕ ಉತ್ಪತ್ತಿಯಾಗುತ್ತದೆ. ಇದು ಅತ್ಯಂತ ಕಡಿಮೆಯಾದರೂ ಅಥವಾ ಹೆಚ್ಚಾದರೂ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಮಕ್ಕಳು ಆಟದಲ್ಲಿ ತೊಡಗಿದಾಗ ಡೋಪಮಿನ್ ಸ್ವಾಭಾವಿಕವಾಗಿ ಅಲ್ಪ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆ. ಆಗ ಅವರಿಗೆ ಸಂತೋಷದ ಭಾಸವಾಗುತ್ತದೆ. ಆದರೆ ಸದಾ ಕಂಪ್ಯೂಟರ್‌ನಲ್ಲಿ ಆಟವಾಡುವುದು, ಫೇಸ್ಬುಕ್, ವಾಟ್ಸಾಪ್ ಇನ್ಸ್ಟಾಗ್ರಾಮ್ - ನಲ್ಲಿ ಮುಳುಗುವುದು ಡೋಪಮಿನ್ ಹೆಚ್ಚಾಗಲು ಕಾರಣವಾಗುತ್ತದೆ. ಇದರಿಂದ ಮಕ್ಕಳಿಗೆ ಹೆಚ್ಚು ಖುಷಿ ಮತ್ತು ಸುಖಾನುಭವ ಆಗುತ್ತದೆ. ಆಗ ಆಟಗಳನ್ನು ಮತ್ತೆ ಮತ್ತೆ ಆಡಬೇಕೆನಿಸುತ್ತದೆ. ಇದರಿಂದ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಡೋಪಮಿನ್ ಉತ್ಪತ್ತಿಯಾಗುತ್ತದೆ. ಇದು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಡೋಪಮಿನ್ ಕಡಿಮೆಯಾದರೆ ಮನುಷ್ಯ ಖಿನ್ನತೆಗೆ ಒಳಗಾಗುತ್ತಾನೆ. ಹೆಚ್ಚಾದರೆ ಮನೋವಿಕೃತಕ್ಕೆ ಒಳಗಾಗುತ್ತಾನೆ. ಮಕ್ಕಳಂತೂ ಈ ಕಂಟಕಕ್ಕೆ ಬೇಗ ಬಲಿಯಾಗುತ್ತಾರೆ.

“ಆರರಲ್ಲಿ ಕಲಿತದ್ದು ಅರವತ್ತರವರೆಗೆ” ಎಂಬ ಗಾದೆ ಮಾತಿದೆ. 'ಬಾಲ್ಯ'ದ ಬೆಳವಣಿಗೆ ಅತ್ಯಂತ ಮಹತ್ವವಾದದ್ದು. ತಂದೆ-ತಾಯಿ, ಅಕ್ಕ-ತಂಗಿ, ಅಣ್ಣ-ತಮ್ಮ, ಬಂಧುಮಿತ್ರರ ಸಹಜ ಒಡನಾಟದಲ್ಲಿ ಅದು ರೂಪುಗೊಳ್ಳಬೇಕು. ತಂತ್ರಜ್ಞಾನ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಬೇಕೇ ಹೊರತು ಮಾರಕವಾಗಬಾರದು. ತಂತ್ರಜ್ಞಾನ ಕೆಟ್ಟದ್ದಲ್ಲ; ಆದರೆ, ಅದು ಹೇಗೆ ದಾರಿ ತಪ್ಪಿಸುತ್ತದೆ ಎನ್ನುವುದರ ಕುರಿತು ಮಕ್ಕಳಿಗೆ ತಿಳುವಳಿಕೆ ನೀಡಬೇಕು. ಬಾಲ್ಯದಲ್ಲಿ ಮಕ್ಕಳಿಗೆ ಕುತೂಹಲ ಆಸೆ ಇರುವುದು ಸಹಜ, ತಂತ್ರಜ್ಞಾನ ಅವರಿಗೆ ತಪ್ಪು ದಾರಿಗೆ ಎಳೆದುಕೊಂಡು ಹೋಗಲು ಸಜ್ಜಾಗಿರುತ್ತದೆ. ಮಗು ಪಠ್ಯಕ್ಕೆ ಸಂಬಂಧಿಸಿದ ವಿಷಯವೇನನ್ನೋ ಹಾಡುಕುತ್ತಿರುವಾಗಲೂ ಒಮ್ಮೊಮ್ಮೆ ಅದಸ್ಮಾತಾಗಿ ಅಶ್ಲೀಲ ಜಾಲತಾಣಗಳು ತೆರೆದುಕೊಳ್ಳುತ್ತವೆ. ಒಂದು ಸಮೀಕ್ಷೆ ಪ್ರಕಾರ ಸುಮಾರು ೫೦ ಲಕ್ಷ ಜಾಲತಾಣಗಳು ಅಶ್ಲೀಲತೆಯ ಪ್ರದರ್ಶನಕ್ಕೆಂದೇ ಹುಟ್ಟಿಕೊಂಡಿವೆ. ತಿಳುವಳಿಕೆಯೊಂದೇ ಇಲ್ಲಿ ಮಕ್ಕಳನ್ನು ಕಾಪಾಡಬಹುದು.

ಯುರೋಪಿನಲ್ಲಿ ಒಂದು ಗಾದೆ ಮಾತಿದೆ: “You have hands and legs. If you do not use them, you will definitely loose them."De dogg ಫಲಾನುಭವಿಗಳಾದ ನಮಗೂ, ನಮ್ಮ ಮಕ್ಕಳಿಗೂ ಅನ್ವಯಿಸುತ್ತದೆ. ಮನೆಯಿಂದ ಕಾಲು ಹೊರಗಿಟ್ಟರೆ ಲಿಫ್ಟ್, ಕಾರು; ಕಾರಿನಿಂದ ಕಾಲು ಹೊರಗಿಟ್ಟರೆ ಎಸ್ಕಲೇಟರು, ಮತ್ತೆ



ತಾನಾಗಿ ತೆರೆಯುವ ಡೋರು. ಹೀಗಾಗಿ ಮಕ್ಕಳೇನು? ನಾವೇನು? ಕೈಕಾಲು ಆಡಿಸಿದಿದ್ದರೆ ಉಳಿಯುವುದೇನು? ಸೆಲ್ ಫೋನೇ ಅಲಾರಾಂ ಕೊಟ್ಟು ನಮ್ಮನ್ನು ಬೆಳಿಗ್ಗೆ ಎಬ್ಬಿಸಬೇಕು, ಹಾಡು ಹೇಳುತ್ತಾ ರಾತ್ರಿ ಮಲಗಿಸಬೇಕು; ತಾತಾ, ಮಾಮಾ, ಚಿಂಟೂ, ಪಿಂಟೂ, ಪಕ್ಕದ್ಮನೆ ಆಂಟಿ, ಎಂದೋ ಟ್ರೈನ್ ನ್ಯಾಗ ಸಿಕ್ಕ ಅಂಕಲ್ ಮುಂತಾದವರ ಕಾಂಟ್ಯಾಕ್ಟ್ ನಂಬರ್‌ಗಳನ್ನೆಲ್ಲಾ ಸೆಲ್ ಫೋನ್ನಲ್ಲಿ ತುಂಬಿ ತುಂಬಿ ಇಟ್ರೆ ನಮ್ಮ ತಲೆಯಲ್ಲಿ ಉಳಿಯುವುದೇನು? ಹೀಗೆ ನಾವು ಏನನ್ನು ಬಳಸುವುದಿಲ್ಲವೂ ಅದನ್ನೆಲ್ಲಾ ಕೇಳಿಕೊಂಡು ವಿಕಲಚೇತನರಾಗುವುದರಲ್ಲಿ ಸಂಶಯವಿಲ್ಲ. ಆ ಯುರೋಪಿನ ಗಾದೆಯನ್ನು ನಾನು beno Bege "You have hands and legs. If you do overuse them, you will definitely loose them.” ಉದಾಹರಣಗೆ ಒಂದು ಟೀವಿ ಲೈಫ್ ೩೫,೦೦೦ ಗಂಟೆಗಳು ಎಂದಿಟ್ಟುಕೊಳ್ಳಿ. ಟೀವಿ ಕೊಂಡ ದಿನದಿಂದ ನಿರಂತರವಾಗಿ ದಿನದ ೨೪ ತಾಸುಗಳ ಕಾಲವೂ ಅದನ್ನು ಉಪಯೋಗಿಸುವುದಾದರೆ ಅದು ಕೇವಲ ೪ ವರ್ಷ ಬಾಳಿಕೆ ಬರುತ್ತದೆ. ಒಂದು ವೇಳೆ ದಿನಕ್ಕೆ ನಾಲ್ಕು ತಾಸು ಮಾತ್ರವೇ ಉಪಯೋಗಿಸುವುದಾದರೆ ಅದರ ಬಾಳಿಕೆ ೨೪ ವರ್ಷಕ್ಕೆ ವೃದ್ಧಿಸುತ್ತದೆ. ಎಂಥ ವಿಚಿತ್ರವಲ್ಲವೆ? ನಮಗೂ

ದೇವರು ನಮ್ಮ ಕಣ್ಣು, ಕಿವಿ, ಕೈ, ಕಾಲು ಮಂಡಿ ಎಲ್ಲದಕ್ಕೂ ಒಂದಿಷ್ಟು ಆಯಸ್ಸು ಕೊಟ್ಟಿದ್ದಾನೆ. ಅಷ್ಟೇ ಅಲ್ಲ, ಕಣ್ಣಿಗೆ ಬೀಳುವ ಬೆಳಕಿನ ತೀವ್ರತೆ, ಕಿವಿಗೆ ಬೀಳುವ ಶಬ್ದದ ತೀವ್ರತೆ ಹೀಗೆ ಎಲ್ಲದಕ್ಕೂ ಒಂದು ಮಿತಿ ಎಂಬುದನ್ನು ಇಟ್ಟಿದ್ದಾನೆ. ಸ್ಥಿತಿ ಹೀಗಿರುವಾಗ ಬೆಳೆಯುವ ಮಕ್ಕಳನ್ನು ಬಹಳ ಜಾಗರೂಕತೆಯಿಂದ ನೋಡಿಕೊಳ್ಳುವ ಜವಾಬ್ದಾರಿ ನಮ್ಮ ಮತ್ತು ನಿಮ್ಮೆಲ್ಲರ ಮೇಲಿದೆ. ಒಂದು ವಾಹನ ಸುಸ್ಥಿತಿಯಲ್ಲಿದ್ದರೆ ಮಾತ್ರ ಓಡುತ್ತೆ. ಅದರ ಟೈಯರ್ ಪಂಕ್ಚರ್ ಆದರೆ, ಬ್ರೇಕ್ ಫೇಲಾದರೆ, ಹೆಡ್ಲೈಟ್ ಹೋದರೆ ನಡೆಸೋಕಾಗಲ್ಲ. ನಮ್ಮ ಸ್ಥಿತಿಯೂ ಅದರ ಹಾಗೆಯೇ, ಅಲ್ಲವೇ.

ಮಕ್ಕಳೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರೇ ಪರೀಕ್ಷಾಪೇ ಚರ್ಚೆಯಲ್ಲಿ ತೊಡಗಿದಾಗ ಹೇಳಿದ ಮಾತು: “ಪ್ರತಿ ಮನೆಯಲ್ಲಿ ಒಂದು ಖಾಲಿ ಕೋಣೆ ತಂತ್ರಜ್ಞಾನ ಮುಕ್ತವಾಗಿರಲಿ ತಂತ್ರಜ್ಞಾನವನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು; ಅದು ನಮ್ಮ ಸಮಯ ಹಾಳು ಮಾಡಬಾರದು; ಅದುವೇ ನಮ್ಮನ್ನು ಆಳುವಂತಾಗಬಾರದು.” ಅವರ ಈ ಮಾತು ಎಷ್ಟು ಪ್ರಸ್ತುತವಾದುದುದಲ್ಲವೆ? ನಿಜವಾಗಿಯೂ ನಮ್ಮ ಮನೆಗಳಲ್ಲಿ ಈಗ ದೇವರ ಕೋಣೆಗಳಿಗಿಂತಲೂ ಒಂದು ಖಾಲಿ ಕೋಣೆಯ ಅವಶ್ಯಕತೆ ಇದೆ. ಆ ಖಾಲಿ ಕೋಣೆಯು ಸಂಪೂರ್ಣ ತಂತ್ರಜ್ಞಾನ ಮುಕ್ತವಾಗಿ ಮನೆಯಲ್ಲಿ ಮಕ್ಕಳಾದಿಯಾಗಿ ಎಲ್ಲರಿಗೂ ಮನಸ್ಸಿಗೆ ನೆಮ್ಮದಿ ನೀಡುವ ತಾಣವಾಗುವುದರಲ್ಲಿ ಸಂದೇಹವಿಲ್ಲ.

ಈ ತಂತ್ರಜ್ಞಾನ ಮಕ್ಕಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬ ವಿಷಯದ ಮೇಲೆ ಸಾಕಷ್ಟು ಸಂಶೋಧನೆಗಳು ನಡೆಯುತ್ತಿವೆ. ಆದರೆ ಅದು ಸರಳ ಸಾಧ್ಯವಾದುದೇನಲ್ಲ. ಸಂಶೋಧನೆ ಮುಗಿಯುವ ಹೊತ್ತಿಗೆ ಎಷ್ಟು ಅನಾಹುತಗಳು ಕಾದಿವೆಯೋ?

ಮಕ್ಕಳ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಮತ್ತು ಬೌದ್ಧಿಕವಾದ ಸಮಗ್ರ ವ್ಯಕ್ತಿತ್ವ ವಿಕಸನದಲ್ಲಿ ತಂತ್ರಜ್ಞಾನದ ಪಾಲು ಇದ್ದೇ ಇದೆ; ಆದರೆ ಅದನ್ನು ಎಚ್ಚರಿಕೆಯಿಂದ ಬಳಸುವ ಜಾಣೆ ನಮ್ಮಲ್ಲಿ ಬೇಕು. ಆದಷ್ಟು ನಮ್ಮ ಮಕ್ಕಳು ತಂತ್ರಜ್ಞಾನದ ವ್ಯಸನಿಗಳಾಗದೇ ಪ್ರಕೃತಿಯ ಮಡಿಲಲ್ಲಿ ಸಹಜ-ಸುಂದರ ಬಾಲ್ಯ ಅನುಭವಿಸುವಂತಾಗಲಿ ಎಂಬುದೇ ನನ್ನ ಆಶಯ.

## ಮಕ್ಕಳ ಸಾಹಿತ್ಯ ಸಮೀಕ್ಷೆ

**- ಜಂಬುನಾಥ ಕಂಚ್ಯಾಣಿ**

ಮಕ್ಕಳ ಸಾಹಿತ್ಯವೀಗ ಪ್ರೌಢ ಸಾಹಿತ್ಯದಂತೆ ವ್ಯಾಪಕವಾಗಿ ಬೆಳೆದಿದೆ. ಮಕ್ಕಳ ಸಾಹಿತ್ಯ ರಚನಾಕಾರರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗತೊಡಗಿದೆ. ಹೀಗಾಗಿ ಮಕ್ಕಳನ್ನು ಪ್ರೀತಿಸುವವರು ಮಕ್ಕಳ ಸಾಹಿತ್ಯದ ಕಡೆಗೆ ತಮ್ಮ ಗಮನ ನೀಡುತ್ತಿದ್ದಾರೆ. ಮಕ್ಕಳ ಸಾಹಿತ್ಯ ಸಾಗಿಬಂದ ನಡೆಯನ್ನು ಅವಲೋಕಿಸಿದರೆ ಅದರ ಏಳಿಗೆಗಾಗಿ ಶ್ರಮಿಸಿದ ನೂರಾರು ಹಿರಿಕಿರಿಯ ಸಾಹಿತಿಗಳ ಶ್ರಮದಫಲ ಹಾಗೂ ಸುದೀರ್ಘ ಇತಿಹಾಸವಿರುವುದು ತಿಳಿಯುತ್ತದೆ.

ಮನುಷ್ಯನಿಗೆ ಬಾಲ್ಯಾವಸ್ಥೆ ಎಷ್ಟು ಪ್ರಮುಖವೋ ಬಾಲ ಸಾಹಿತ್ಯವೂ ಅಷ್ಟೇ ಮಹತ್ವದ್ದಾಗಿದೆ. ಮಾನವನ ವ್ಯಕ್ತಿತ್ವ ವಿಕಾಸಕ್ಕೆ ಮಗುವಿದ್ದಾಗ ಪಡೆದುಕೊಂಡ ಸಂಸ್ಕಾರವೇ ಬುನಾದಿಯಾಗುತ್ತದೆ. ಒಬ್ಬ ವ್ಯಕ್ತಿಯ ಜೀವನ ವಿಧಾನ ಹಾಗೂ ವ್ಯಕ್ತಿತ್ವಗಳು ಅವನು ಬಾಲ್ಯಾವಸ್ಥೆಯಲ್ಲಿ ಪಡೆದ ಸಂಸ್ಕಾರ ಮತ್ತು ಸಾಂಸ್ಕೃತಿಕ ತರಬೇತಿಗಳನ್ನು ಅವಲಂಬಿಸಿರುತ್ತವೆ. ಎಂದು ಶ್ರೇಷ್ಠ ಮನೋವಿಜ್ಞಾನಿ ಸಿಗಂಡ್ ಫ್ರಾಯಿಡ್ ಹೇಳಿದ್ದಾರೆ. ಮಗುವಿನ ಸುಂದರ ವ್ಯಕ್ತಿತ್ವ ನಿರ್ಮಾಣಕ್ಕೆ ಅನುವಂಶೀಯತೆ, ಕೌಟುಂಬಿಕ ಪರಿಸರ, ಸಮಾಜ, ಶಿಕ್ಷಣ ಹಾಗೂ ಓದಿಕೊಂಡ ಸಾಹಿತ್ಯಗಳು ಕಾರಣವಾಗುತ್ತವೆ. ಸರ್ವರೊಳು ಒಂದೊಂದು ನುಡಿ ಕಲಿತು ವಿದ್ಯೆಯ ಪರ್ವತವಾಗುವಂತೆ ಮಗುವಿನ ಶರೀರ, ಮನಸ್ಸು, ಭಾವನೆ ಮತ್ತು ಬುದ್ಧಿಗಳು ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ವಿಕಾಸವಾಗುತ್ತವೆ. ಈ ವಿಕಾಸಕ್ರಿಯೆಗೆ ಸಾಹಿತ್ಯ ಸಂಸ್ಕಾರವೂ ಪ್ರಮುಖ ಕಾರಣವಾಗುತ್ತದೆ.

**ಮಕ್ಕಳ ಸಾಹಿತ್ಯ ಸ್ವರೂಪ:**

ಮಕ್ಕಳಿಗಾಗಿ ಬರೆದ ಮಕ್ಕಳು ಇಷ್ಟಪಡುವ ಬರಹ ಮಕ್ಕಳ ಸಾಹಿತ್ಯವೆನಿಸುತ್ತದೆ ಎಂದು ಡಾ. ಜಿ.ಪಿ. ರಾಜರತ್ನಂ ಅವರು ಹೇಳಿದ್ದಾರೆ. ಒಂದು ಮಗು ಪ್ರೀತಿಸುವ ಬರಹವು ಇನ್ನೊಂದು ಮಗುವಿಗೆ ಇಷ್ಟವಾಗುವುದಿಲ್ಲ. ಆಗ ಎಲ್ಲ ಮಕ್ಕಳು ಬಯಸುವ ಕಥೆ, ಕವನಗಳನ್ನು ರಚಿಸುವುದು ಕಷ್ಟವೆನಿಸುತ್ತದೆ. ಒಂದೇ ವಯಸ್ಸಿನ ಹಾಗೂ ಸಮಾನ ಬೌದ್ಧಿಕ ಸಾಮರ್ಥ್ಯವುಳ್ಳ ಬಹುತೇಕ ಮಕ್ಕಳ ಬಯಕೆ, ಮನಾಭಿಲಾಷೆಗಳು ಒಂದೇ ತೆರನಾಗಿ ಇವುವವೆಂಬ ಶಿಕ್ಷಣ ತಜ್ಞರ ಅಭಿಪ್ರಾಯದ ಹಿನ್ನೆಲೆಯಲ್ಲಿ ಶೈಕ್ಷಣಿಕ ಪಠ್ಯವನ್ನು ರಚಿಸುತ್ತಾರೆ. ಅದಕ್ಕೆ ಪೂರಕವಾದ ಸಾಹಿತ್ಯವನ್ನೂ ನೀಡಬಹುದಾಗಿದೆ. ಬೇರೆ ಬೇರೆ ವಯಸ್ಸಿನ ಮಕ್ಕಳ ಗ್ರಹಣಶಕ್ತಿ ವಿಭಿನ್ನವಾಗಿರುವುದರಿಂದ ಅವರಿಗೆ ನೀಡುವ ಶಬ್ದ ಭಂಡಾರ ಬೇರೆಯಾಗಿರಬೇಕು. ಮಕ್ಕಳ ಸರ್ವತೋಮುಖ ವಿಕಾಸವನ್ನು ಗಮನಿಸಿ ವಿಶಿಷ್ಟ ಸಾಹಿತ್ಯವನ್ನು ನೀಡಬೇಕು.

ಮಕ್ಕಳ ಸಾಹಿತ್ಯದ ಸ್ವರೂಪ ಹಾಗೂ ರೂಪುರೇಷಗಳನ್ನು ಕುರಿತಾಗಿ ಶ್ರೀ. ಆ.ಹೋ. ನಾರಾಯಣಸ್ವಾಮಿಯವರು ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮಕ್ಕಳ ಮನಸ್ಸನ್ನು ಅರಳಿಸುವ, ಕುತೂಹಲ ಕೆರಳಿಸುವ, ಕಲ್ಪನೆಯನ್ನು ಉತ್ತೇಜಿಸುವ, ಭಾವನೆಗಳನ್ನು ಪ್ರಚೋದಿಸುವ, ವಿಚಾರಗಳನ್ನು ಚುರುಕುಗೊಳಿಸುವ, ವಿಜ್ಞಾನ ತತ್ತ್ವಗಳನ್ನು ತಿಳಿಸುವ, ಸುಪ್ತ ಶಕ್ತಿಗಳನ್ನು ಜಾಗೃತಗೊಳಿಸುವ, ಮನಸ್ಸಿಗೆ ರಂಜನೆ ಹಾಗೂ ಆನಂದ ನೀಡುವ ಅಂಶಗಳಿಂದ ಕೂಡಿದ ಸಾಹಿತ್ಯವನ್ನು ರಚಿಸುವುದೇ ಮಕ್ಕಳ ಸಾಹಿತ್ಯದ ಉದ್ದೇಶವಾಗಬೇಕು.

ಮಕ್ಕಳ ಪುಸ್ತಕಗಳು ಕೌನ್ ಆಕಾರದಲ್ಲಿರಬೇಕು. ವರ್ಣರಂಜಿತ ಸುಂದರ ಮತ್ತು ಆಕರ್ಷಕ ಮುಖಪುಟವನ್ನು ಹೊಂದಿರಬೇಕು. ಹದಿನಾಲ್ಕು ಇಲ್ಲವೆ ಹದಿನಾರು ಪಾಯಿಂಟ್ ಗಾತ್ರದ ಅಕ್ಷರಗಳಲ್ಲಿ ಗ್ರಂಥ ಮುದ್ರಣವಾಗಿರಬೇಕು. ಪ್ರತಿ ಕವನ ಕಥೆಗೆ ಸರಿ ಹೊಂದುವಂಥ ಬಣ್ಣದ ಚಿತ್ರಗಳಿರಬೇಕು. ಗ್ರಂಥ ಓದಿದಾಗ ಸಂತೋಷದ ಜೊತೆ ಜ್ಞಾನ, ನೀತಿ, ಸಚ್ಚಾರಿತ್ರ್ಯ ಅಳವಡಬೇಕು. ಗ್ರಂಥದ ವಸ್ತು ವಿಷಯವು ಸದ್ಗುಣಗಳ ಅಳವಡಿಕೆಗೆ ಪೂರಕವಾಗಿರಬೇಕು. ಧರ್ಮ, ಜಾತಿ, ಲಿಂಗ, ವರ್ಣ ಭೇದಗಳಿಂದ ಮುಕ್ತವಾಗಿರಬೇಕು. ಪ್ರಕೃತಿ ಪ್ರೇಮ ದೇಶಭಕ್ತಿ, ಭಾವೈಕ್ಯತೆ, ಮುಖಂಡತ್ವ ಗುಣ, ಸಾಮಾಜಿಕ ಮೌಲ್ಯಗಳ ಅನುಷ್ಠಾನ ಹೀಗೆ ವಿಶಿಷ್ಟಗುಣಗಳನ್ನು ಅಭಿವೃದ್ಧಿಪಡಿಸಬೇಕು. ಮೂಢನಂಬಿಕೆ ಸ್ಥಾನದಲ್ಲಿ ವೈಚಾರಿಕ ಹಾಗೂ ವೈಜ್ಞಾನಿಕ ಪ್ರಜ್ಞೆಯನ್ನು ಬಿತ್ತುವ ವಿಷಯ ವಸ್ತುವನ್ನು ಸೇರಿಸಬೇಕು. ಇದರಿಂದ ಮಗುವು ಸರ್ವತೋಮುಖ ಅಭಿವೃದ್ಧಿ ಹೊಂದುತ್ತದೆ.

ಮಾನವತಾವಾದಿ ಕುವೆಂಪು ಅವರು "ಮಕ್ಕಳನ್ನು ಜಟಿಲ ಸಮಸ್ಯೆಗಳಿಂದ ಮುಕ್ತಗೊಳಿಸಿ ವಿಶ್ವಮಾನವರನ್ನಾಗಿ ಮಾಡಲು ಪೂರಕವಾದ ಶಿಕ್ಷಣ ಮತ್ತು ಸಾಹಿತ್ಯ ಸಂಸ್ಕಾರ ನೀಡಬೇಕು" ಎಂದು ಹೇಳಿದ್ದಾರೆ, ಮಕ್ಕಳ ಸಾಹಿತಿಗಳು ತಾವು ಮಕ್ಕಳಿಗೆ ಏನು ಕೊಡಬೇಕೆನ್ನುವುದರ ಬಗ್ಗೆ ಸ್ಪಷ್ಟತೆಯನ್ನು ಹೊಂದಿಲ್ಲ. ತಾವು ಏನು ಬರೆದರೂ ಮಕ್ಕಳು ಸ್ವೀಕರಿಸುತ್ತಾರೆ ಎನ್ನುವ ಭಾವನೆಯನ್ನು ಬಿಡಬೇಕು. ಬರೆದದ್ದೆಲ್ಲವೂ ಸಾಹಿತ್ಯ ಎನಿಸುವುದಿಲ್ಲ. ಸತ್ವಯುತ ಸಾಹಿತ್ಯಕ್ಕೆ ನಿರ್ದಿಷ್ಟ ನಿಯಮಗಳಿವೆ, ಇತಿಮಿತಿಗಳಿವೆ. ಹಿರಿಯ ಸಾಹಿತಿಗಳು ಹಾಗೂ ನೀತಿ ಶಿಕ್ಷಣ ತಜ್ಞರು ಶಾಸ್ತ್ರೋಕ್ತವಾಗಿ ನಿಗದಿಪಡಿಸಿದ ಚೌಕಟ್ಟಿನಲ್ಲಿ ಸಾಹಿತ್ಯ ಸೃಷ್ಟಿಗೊಳ್ಳಬೇಕು.

**ಮಕ್ಕಳ ಸಾಹಿತ್ಯ ವಿಂಗಡಣೆ:**

ಮಕ್ಕಳ ವಯಸ್ಸು ಮತ್ತು ಮಾನಸಿಕ ಸ್ಥಿತಿಗತಿಯನ್ನಾಧರಿಸಿ ಶಿಕ್ಷಣ ತಜ್ಞರು ಹಾಗೂ ಹಿರಿಯ ಸಾಹಿತಿಗಳು ಮಕ್ಕಳ ಸಾಹಿತ್ಯವನ್ನು ಮೂರು ವರ್ಗಗಳಲ್ಲಿ ವಿಂಗಡಿಸಿದ್ದಾರೆ. ಅದನ್ನು ತಿಳಿಯುವ ಮೊದಲು ಮಕ್ಕಳೆಂದರೆ ಯಾರು? ಎನ್ನುವ ಪ್ರಶ್ನೆಗೆ ಉತ್ತರ ಹುಡುಕೋಣ. ಆಧ್ಯಾತ್ಮವಾದಿ, ಪ್ರವಾದಿ ಹಾಗೂ ಶ್ರೇಷ್ಠ ವಿಚಾರವಾದಿಯಾದ ಖಲೀಲ ಗಿಬ್ರಾನ್‌ರು ಮಕ್ಕಳ ಬಗ್ಗೆ ಹೀಗೆ ವ್ಯಾಖ್ಯಾನಿಸಿದ್ದಾರೆ. "ನಮ್ಮ ಮಕ್ಕಳು ನಮ್ಮ ಮಕ್ಕಳು ಮಾತ್ರವಲ್ಲ ಅವರು ಜೀವನದ

ಮಕ್ಕಳಾಗಿದ್ದಾರೆ. ಅವು ನಮ್ಮ ಮೂಲಕ ಬಂದಿವೆಯೇ ಹೊರತು ನಮಗೋಸ್ಕರವಲ್ಲ. ಅವರಿಗೆ ನಾವು ಪ್ರೀತಿಯನ್ನು ನೀಡಬೇಕಲ್ಲದೆ ನಮ್ಮ ಆಲೋಚನೆಗಳನ್ನಲ್ಲ. ಅವರ ದೇಹಗಳಿಗೆ ನಾವು ಕಾರಣವಾಗಿರಬಹುದು, ಅವರಾತ್ಮಗಳಿಗಲ್ಲ.



ಅವರನ್ನು ಅವರಂತಾಗಲೂ ಬಿಡಬೇಕು, ನಮ್ಮಂತಲ್ಲ, ನಮ್ಮ ಮಕ್ಕಳು ಜೀವಂತ ಬಾಣಗಳು, ನಾವು ಬಾಣಗಳನ್ನು ಚಿಮ್ಮುವ ಬಿಲ್ಲುಗಳು. ಒಟ್ಟಿನಲ್ಲಿ ನಮ್ಮ ಬದುಕು ನಮಗಾಗಿ ಕೊಟ್ಟಿರುವ ನ್ಯಾಸ ವಸ್ತುಗಳೆಂದರೆ ಮಕ್ಕಳು" . ದೇವಲೋಕದ ಸುಂದರ ಪುಷ್ಪಗಳಂತಿರುವ ಮಕ್ಕಳಿಗೆ ನೀಡಬೇಕಾದ ಶಿಕ್ಷಣ ಹಾಗೂ ಸಾಹಿತ್ಯ ವಿಶಿಷ್ಟ ಹಾಗೂ ಅರ್ಥಪೂರ್ಣವಾಗಿರಬೇಕು.

ವಯಸ್ಸು ಹಾಗೂ ಬುದ್ಧಿ ಸಾಮರ್ಥ್ಯಕ್ಕನುಗುಣವಾಗಿ ಮಕ್ಕಳನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. ಮಕ್ಕಳ ಗ್ರಹಣ ಶಕ್ತಿಯನ್ನು ಆಧರಿಸಿ ಸಾಹಿತ್ಯವನ್ನು ಮೂರು ಗುಂಪಾಗಿ ಮಾಡಿದ್ದಾರೆ. ಮೂರು ವರ್ಷದವರೆಗಿನ ಮಕ್ಕಳಿಗೆ ಓದಲು ಬರೆಯಲು ಹಾಗೂ ಸ್ಪಷ್ಟವಾಗಿ ಮಾತನಾಡಲು ಬರುವುದಿಲ್ಲ. ಅನುಕರಣೆ ಅವರ ಮುಖ್ಯ ಗುಣವಾಗಿರುತ್ತದೆ. ಹಿರಿಯರು ಹೇಳಿದ್ದನ್ನು ಸ್ಪಷ್ಟವಾಗಿ ಅರಿತುಕೊಂಡು ಸೂಕ್ತವಾಗಿ ವ್ಯವಹರಿಸುವ ಪ್ರೌಢತೆ ಇರುವುದಿಲ್ಲ. ಹೀಗಾಗಿ ಸಾಹಿತ್ಯದ ಬಗ್ಗೆ ಅರಿವಿರದ ಅವರನ್ನು ಮಕ್ಕಳೆಂದು ಪರಿಗಣಿಸಲಾಗುವುದಿಲ್ಲ. ಮೂರರಿಂದ ಹದಿನೈದು ವಯೋಮಾನದವರನ್ನು ಮಕ್ಕಳೆನ್ನಬಹುದು. ಹದಿನೈದಕ್ಕೆ ಹರೆಯ ಪ್ರವೇಶಿಸುವುದರಿಂದ ಹದಿನೈದರ ಮೇಲ್ಪಟ್ಟವರು ಯುವಕರೆನಿಸುತ್ತಾರೆ. ಈ ವಯೋಗುಂಪಿನ ಮಕ್ಕಳನ್ನು ಮತ್ತೆ ಮೂರು ವರ್ಗಗಳನ್ನಾಗಿ ಮಾಡುತ್ತಾರೆ. ಮೂರರಿಂದ ಆರರವರೆಗಿನವರನ್ನು ಶಿಶುಗಳೆಂದೂ ಅವರಿಗೆ ನೀಡುವ ಸಾಹಿತ್ಯವನ್ನು ಶಿಶು ಸಾಹಿತ್ಯವೆನ್ನುತ್ತಾರೆ. ಆರರಿಂದ ಒಂಭತ್ತರವರೆಗಿನವರನ್ನು ಬಾಲರೆಂದೂ, ಅವರಿಗಾಗಿ ರಚಿಸಲ್ಪಡುವ ಸಾಹಿತ್ಯವನ್ನು ಬಾಲ ಸಾಹಿತ್ಯವೆಂದು ಕರೆಯುತ್ತಾರೆ. ಕೊನೆಯಗುಂಪು ಒಂಬತ್ತರಿಂದ ಹದಿನೈದರ ವಯೋಮಾನದ್ದು. ಅವರಿಗೆ ನೀಡುವ ಮೇಲ್ಮಟ್ಟದ ಸಾಹಿತ್ಯವನ್ನು ಕೌಮಾರ ಸಾಹಿತ್ಯವೆನ್ನುವರು.

ಮೊದಲ ಗುಂಪಿನ ಮಕ್ಕಳ ಬುದ್ಧಿಮಟ್ಟ ಮಂದಗತಿಯಲ್ಲಿರುತ್ತದೆ. ಅವರಿಗೆ ಭಾಷೆಯ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಅಕ್ಷರ ಜ್ಞಾನವಿರುವುದಿಲ್ಲ. ಅವರು ಪಶು-ಪಕ್ಷಿಗಳನ್ನು ಇಷ್ಟಪಡುತ್ತಾರೆ. ಬಣ್ಣದ ಚಿತ್ರಗಳನ್ನು ನೋಡಿ ಖುಷಿಗೊಳ್ಳುತ್ತಾರೆ. ಅವರಿಗಾಗಿ ಮೂರು- ನಾಲ್ಕು ಸಾಲಿನ ಸರಳ ಶಬ್ದಗಳಿಂದ ಕೂಡಿದ ಪ್ರಾಸ ಪದ್ಯಗಳನ್ನು ರಚಿಸಬೇಕು. ಕಥೆಗಳೆಂದರೆ ಪಂಚಪ್ರಾಣ. ಏಕಾಗ್ರಚಿತ್ತದಿಂದ ಕಥೆ ಆಲಿಸುತ್ತಾರೆ. ತೊದಲು ನುಡಿಯಲ್ಲಿ ಹಾಡುತ್ತಾರೆ. ಕುಣಿಯುತ್ತಾರೆ, ಕಥೆ ಹೇಳಿ ಆನಂದ ಪಡುತ್ತಾರೆ. ಬೇರೆಯವರನ್ನು ಅನುಕರಿಸುವುದರಿಂದ ಸ್ಪಷ್ಟವಾಗಿ ಉಚ್ಚರಿಸಲು ಹೇಳಿಕೊಡಬೇಕು. ಶಿಶು ಪ್ರಾಸಗಳು ಪ್ರಾಸಬದ್ಧವಾದ ಪುಟ್ಟ ಪದ್ಯಗಳಾದರೂ ಅವುಗಳ ಅರ್ಥಗೌಣವಾಗಿರುತ್ತದೆ.

ಬಣ್ಣದ ಚಿತ್ರಗಳನ್ನು ಮೆಚ್ಚಿಕೊಳ್ಳುವ ಅವರು ರೇಖೆ ಮತ್ತು ಬಣ್ಣಗಳ ನಡುವೆ ಸಂಬಂಧ ಕಲ್ಪಿಸಿಕೊಳ್ಳುತ್ತಾರೆ. ಅವರಿಗೆ ಪುಟ್ಟ ಪುಟ್ಟ ಹಾಡು ಮತ್ತು ಕಥೆಗಳಾದರೆ ಸಾಕು, ಕುಣಿದು ಕುಪ್ಪಳಿಸುತ್ತಾರೆ.

ಆರರಿಂದ ಒಂಭತ್ತರ ಬಾಲಕ ಬಾಲಕಿಯರು ಬುದ್ಧಿಮಟ್ಟದಲ್ಲಿ ಬೆಳೆದಿರುತ್ತಾರೆ. ಓದಲು ಬರೆಯಲು ಸಮರ್ಥರಾಗಿರುತ್ತಾರೆ. ಅವರಿಗೆ ಸಾಭಿನಯದ ಕವಿತೆಗಳು ಇಷ್ಟವಾಗುತ್ತವೆ. ಪ್ರಾಣಿ-ಪಕ್ಷಿಗಳ ಪಾತ್ರಗಳ ಮೂಲಕ ನೀತಿಕಥೆಗಳನ್ನು ಹೇಳಬೇಕು. ಹಾಡುಗಳನ್ನು ಹಾಡುತ್ತ ಲಯಬದ್ಧವಾಗಿ ಕುಣಿಯುತ್ತಾರೆ. ಪುಸ್ತಕದಲ್ಲಿನ ಕಥೆ ಕವನಗಳನ್ನು ಓದಿ ಅರ್ಥೈಸಿಕೊಳ್ಳುತ್ತಾರೆ. ಅದರಲ್ಲಿನ ಪರೋಕ್ಷ ಸಂದೇಶ ನೀತಿಯನ್ನು ಅಳವಡಿಸಿಕೊಳ್ಳುತ್ತಾರೆ.



ಒಂಭತ್ತರಿಂದ ಹದಿನಾರರ ವಯಸ್ಸಿನ ಹಿರಿಯ ಮಕ್ಕಳನ್ನು ಕುಮಾರ ಕುಮಾರಿಯರೆನ್ನುವರು. ಇವರಿಗೆ ನೀಡುವ ಸಾಹಿತ್ಯವನ್ನು ಕೌಮಾರ ಸಾಹಿತ್ಯವೆನ್ನುವರು. ವಯಸ್ಸು, ಬುದ್ಧಿ ಮತ್ತು ವ್ಯವಹಾರಿಕ ಜ್ಞಾನ ವೃದ್ಧಿಯಾಗಿರುವುದರಿಂದ ಅವರಲ್ಲಿ ಸಾಮಾಜಿಕ ಪ್ರಜ್ಞೆ ಬೆಳೆದಿರುತ್ತದೆ. ಬದುಕಿನ ರೀತಿ ನೀತಿಯ ತಿಳಿವಳಿಕೆ ಇರುತ್ತದೆ. ಶಿಸ್ತು, ಸಹಕಾರ, ಸಹಾಯ ಸಹನಶೀಲತೆ, ಸಹಜೀವನ, ದಯೆ, ಪ್ರೀತಿ, ಕರುಣೆ, ಗುರುಹಿರಿಯರಿಗೆ ಗೌರವ, ಧೈರ್ಯ, ಸಾಹಸಗಳಂಥ ಉದಾತ್ತ ಗುಣಗಳನ್ನು ಬೆಳೆಸುವ ಸಾಹಿತ್ಯಬೇಕು. ರಾಷ್ಟ್ರಪ್ರೇಮ, ಜಾತ್ಯತೀತತೆ, ಸಮಾನತೆಯನ್ನು ಕುರಿತ ವಿಷಯವ್ಯಾಪ್ತಿಯ ಸಾಹಿತ್ಯ ಹೆಚ್ಚು ಸೂಕ್ತವಾಗುತ್ತದೆ. ಅವರಿಗೆ ಸ್ವಾತಂತ್ರ್ಯ ಹೋರಾಟಗಾರರ, ವಿಭೂತಿ ಪುರುಷರ, ಇತಿಹಾಸ ಪುರುಷರ, ಚರಿತ್ರೆಗಳನ್ನು ಹೇಳಿಕೊಡಬೇಕು.

ಮಕ್ಕಳ ಪುಸ್ತಕಗಳು ವಿಶಿಷ್ಟ ರೀತಿಯಲ್ಲಿ ರೂಪಗೊಳ್ಳಬೇಕು. ಯಾವ ವಯೋಮಾನದ ಮಕ್ಕಳಿಗೆ ಎಂಬ ಪರಿಜ್ಞಾನ ಇಟ್ಟುಕೊಂಡು ಶಬ್ದಗಳ ಆಯ್ಕೆ, ಚಿಕ್ಕ ವಾಕ್ಯಗಳ ಜೋಡಣೆ, ಜೋಡು ನುಡಿಗಳ ಬಳಕೆ, ಪುನಾರಾವರ್ತಿತ ಶಬ್ದಗಳು ಸಾಹಿತ್ಯದ ಮೆರಗನ್ನು ಹೆಚ್ಚಿಸುತ್ತವೆ.

**ವಿಷಯ ವಸ್ತು, ಭಾಷೆ ಹಾಗೂ ತಂತ್ರ**

ಕಥೆ ಕವನಗಳು ಮಕ್ಕಳ ಮನಸ್ಸನ್ನು ಸೆಳೆದು ಅವರನ್ನು ಸಂತೃಪ್ತರನ್ನಾಗಿಸಬೇಕಾದರೆ ಅವುಗಳ ವಿಷಯ ಸತ್ವಭರಿತವಾಗಿರಬೇಕು. ಬಾಹ್ಯ ರೂಪ ಮತ್ತು ಆಕಾರಗಳು ಆಕರ್ಷಕವಾಗಿರಬೇಕು. ಪುಸ್ತಕದ ಶೀರ್ಷಿಕೆ ಹಾಗೂ ವರ್ಣಚಿತ್ರಗಳು ಚಿತ್ತಾಕರ್ಷಕವಾಗಿದ್ದರೆ ಮಗು ಕೈಗೆತ್ತಿಕೊಂಡು ಕುತೂಹಲದಿಂದ ನೋಡುತ್ತದೆ. ನಂತರ ಒಳಪುಟಗಳನ್ನು ತೆರೆದು ಓದುತ್ತದೆ. ಹೊರ ಸೌಂದರ್ಯದಂತೆ ಒಳಗಿನ ತಿರುಳು ಮನ ತಣಿಯುವಂತಿದ್ದರೆ ಅದು ಯಶಸ್ವಿ ಕೃತಿ ಎನಿಸುತ್ತದೆ.

'ಕಂದನ ಕಿರಿ ಕಿರಿ ಇಂದೇನು ಹೇಳಲಿ

ಬಿಂದಿಗೆ ಹಾಲು ಸುರುವೆಂದ-ಸಂಜೀಯ

ಚಂದ್ರಮನ ತಂದು ನಿಲಿಸೆಂದ”

ಮಗುವಿನ ಮಾನಸಿಕ ತಲ್ಲಣ ಹೇಗಿರುತ್ತದೆಯೆಂದು ಹೇಳಲು ಬರುವುದಿಲ್ಲ. ಅದರ ಬೇಡಿಕೆ ವಿಲಕ್ಷಣವಾಗಿರುತ್ತದೆ. ಅದರ ಆಸೆ-ಆಕಾಂಕ್ಷೆ, ಒಲವು-ಗೆಲುವುಗಳನ್ನು ಅರ್ಥಮಾಡಿಕೊಳ್ಳದ ಹೊರತು ಬೇಡಿಕೆಯು ಈಡೇರುವುದಿಲ್ಲ. ಆಗ ಎಂಥ ಸಾಹಿತ್ಯ ಕೊಡಬೇಕೆನನ್ನುವುದರ ಬಗ್ಗೆ ಅರಿವಾಗುತ್ತದೆ. ಮಕ್ಕಳ ಮನಸ್ಸನ್ನು ಸಂತೃಪ್ತಗೊಳಿಸುವುದು ತಾಯಿ ಮತ್ತು ಶಾಲಾ ಶಿಕ್ಷಕರಿಗೆ ಮಾತ್ರ ಸಾಧ್ಯ ಇವರೊಡನೆ ಮಕ್ಕಳ ಮನಸ್ಸನ್ನು ಅರಿತ ಲೇಖಕರೂ ಬರುತ್ತಾರೆ. ಸಾಹಿತ್ಯದ ವಸ್ತು ವಿಷಯ, ತಂತ್ರ, ಭಾಷೆ ಹಾಗೂ ಶೈಲಿಗಳನ್ನು ಜಾಣೆ ಹಾಗೂ ಎಚ್ಚರದಿಂದ ಆಯ್ಕೆ ಮಾಡಬೇಕು.

ಮಕ್ಕಳ ಪರಿಸರದಲ್ಲಿರುವ ವಸ್ತುಗಳು ಮತ್ತು ಸಂಗತಿಗಳನ್ನು ವಿಷಯವನ್ನಾಗಿಸಿಕೊಂಡು ಸಾಹಿತ್ಯ ರಚಿಸಬೇಕು. ತಾಯಿ, ತಂದೆ, ಸೋದರ



ಸೋದರಿಯರು, ಸಾಕು ಪ್ರಾಣಿಗಳು, ಆಟಿಕೆಗಳು, ತಾರೆ, ಚಂದ್ರ, ಟಿ.ವಿ, ಮುಂತಾದ ವಸ್ತುಗಳನ್ನು ಪರಿಚಯಿಸುವುದು, ವಿಮಾನ, ರಾಕೆಟ್, ಪ್ಯಾರಾಪೂಟ್, ಕಂಪ್ಯೂಟರ್ ಕುರಿತ ಲೇಖನಗಳಿರಬೇಕು. ಹಿರಿಯ ಮಕ್ಕಳ ಬುದ್ಧಿಮಟ್ಟ ವಿಕಾಸಗೊಂಡಿರುವುದರಿಂದ ಜಾತೀಯತೆ, ಮೋಸ, ವಂಚನೆ, ಭ್ರಷ್ಟತೆ ಅಜ್ಞಾನದಂಥ ಜಟಿಲ ಸಮಸ್ಯೆಗಳನ್ನು ಎತ್ತಿಕೊಂಡು ಅವುಗಳಿಂದಾಗುವ ಅಪಾಯದ ಬಗ್ಗೆ ವಿವರಿಸಬೇಕು.

ಮಕ್ಕಳ ಭಾಷೆ ಸರಳ ಸುಂದರವಾಗಿರಬೇಕು. ಒತ್ತಕ್ಷರಗಳಿಲ್ಲದ ಚಿಕ್ಕ ಪದಗಳಿಂದ ವಾಕ್ಯಗಳನ್ನು ರಚಿಸಿದರೆ ಸರಳವಾಗಿ ಓದುತ್ತಾರೆ. ಆಡು ಭಾಷೆಯನ್ನು ಉಪಯೋಗಿಸಿದರೆ ಮತ್ತಷ್ಟು ಅನುಕೂಲ. ಮಕ್ಕಳು ಲಯವನ್ನು ಮೆಚ್ಚುವುದರಿಂದ ಸರಳ ಛಂದಸ್ಸಿನ ಮಾತ್ರಾಗಣ, ತಾಳ-ಗತಿ-ಪ್ರಾಸಗಳನ್ನು ಬಳಸಿಕೊಂಡರೆ ಮನಸ್ಸು ರಂಜನೀಯಗೊಳ್ಳುತ್ತದೆ. ಅವರು ಹಾಡನ್ನು ಸವಿಯುತ್ತ ಗುನುಗುನಿಸುತ್ತಾರೆ. ತಾಳಕ್ಕೆ ತಕ್ಕ ಹೆಜ್ಜೆ ಹಾಕಿ ಸಂಭ್ರಮಿಸುತ್ತಾರೆ. ಉಪಮಾ, ರೂಪಕ ಅಲಂಕಾರಗಳು ಸೌಂದರ್ಯವನ್ನು ಹೆಚ್ಚಿಸುತ್ತವೆ. “ಮಕ್ಕಳ ಸಾಹಿತ್ಯ ಸಂಸ್ಕೃತದ ಶಬ್ದಾಡಂಬರ, ಒಣ ಪಾಂಡಿತ್ಯ ಹಾಗೂ ಸಾಂಪ್ರದಾಯಿಕ ಅಭಿವ್ಯಕ್ತಿಯ ಅನುಕರಣದಿಂದ ಮುಕ್ತವಾಗಿರಬೇಕು. ಚೆನ್ನಾಗಿ ಪರಿಷ್ಕರಿಸಿದ ಪದವಿನ್ಯಾಸ ಹಾಗೂ ಮೋಜಿನ ಪದಗಳಿರಬೇಕು. ಸರಳತೆಯೇ ಅದರ

ಜೀವಾಳವಾಗಿರಬೇಕು. ಸ್ಪಷ್ಟತೆ, ಸರಳತೆ, ಮತ್ತು ಸಹಜತೆ ಇರಬೇಕೆಂದು" ಶ್ರೇಷ್ಠ ವಿದ್ವಾಂಸರಾದ ಜೆ. ಬ್ರಿಗೆಲ್‌ವರು ಹೇಳುತ್ತಾರೆ. ಇದರಿಂದ ಮಕ್ಕಳು ಎಂಥ ಭಾಷೆಯನ್ನು ನಿರೀಕ್ಷಿಸುತ್ತಾರೆಂದು ತಿಳಿಯುತ್ತದೆ.

ಮಕ್ಕಳಿಗಾಗಿ ಬರೆಯುವವರು ಪ್ರೌಢ ಸಾಹಿತ್ಯದ ರಚನೆಯಲ್ಲಿ ಉಪಯೋಗಿಸುವ ಜಟಿಲ ತಂತ್ರಗಳನ್ನು ಬಳಸಬಾರದು. ನೇರ ನಿರೂಪಣೆಯಲ್ಲಿ ಅವರ ಮನಸ್ಸನ್ನು ಗೆಲ್ಲಬೇಕು. ರಸ, ವಕ್ರತೆ, ರೀತಿ, ಧ್ವನಿ, ಪ್ರತಿಮೆ, ಸಂಕೇತಗಳನ್ನು ಬಳಸಿ ಗೊಂದಲವುಂಟು ಮಾಡದೆ ಪ್ರಾಸ, ಪದಗಳ ಪುನರಾವರ್ತನೆ, ಗೇಯತೆಗೆ ಹೆಚ್ಚಿನ ಪ್ರಾಶಸ್ತ್ರವನ್ನು ಕೊಡಬೇಕು. ತಂತ್ರದೊಡನೆ ಲೇಖಕರು ತಮ್ಮ ವೈಯಕ್ತಿಕ ಶೈಲಿಯನ್ನು ಉಪಯೋಗಿಸಿ ಮಕ್ಕಳ ಮನಸ್ಸನ್ನು ಗೆಲ್ಲಬೇಕು. ಒಟ್ಟಿನಲ್ಲಿ ಮಕ್ಕಳ ಸಾಹಿತ್ಯದ ಜೀವಾಳ ಸರಳತೆಯಾಗಿರಬೇಕು. ಮಕ್ಕಳ ಸಾಹಿತ್ಯ ಎಂದು ಮೊದಲಾಯಿತೆಂದು ಹೇಳುವುದು ಕಷ್ಟದ ವಿಷಯ. ಮಾನವನ ಹುಟ್ಟಿನೊಂದಿಗೆ ಭಾಷೆಯ ಉಗಮವಾಯಿತೆಂದೇ ಹೇಳಬಹುದು. ಮೊದಲು ಸಾಹಿತ್ಯ ಕಂಠಸ್ಥವಾಗಿತ್ತು. ಕಂಠಸ್ಥವಾದ ಹಾಡು, ಕತೆ, ಒಗಟು, ಗಾದೆಗಳನ್ನು ಜನಪದ ಸಾಹಿತ್ಯವೆಂದು ಕರೆದರು. ಕೆಲಸದ ದಣಿವನ್ನು, ಬೇಸರಿಕೆಯನ್ನು ಮರೆಯಲು ಮನಸ್ಸಿಗೆ ಆನಂದವನ್ನುಂಟು ಮಾಡಲು ಆರಂಭಗೊಂಡ ಸಾಹಿತ್ಯ ವ್ಯಾಪಕವಾಗಿ ಬೆಳೆಯಿತು. ಕೂಲಿಕಾರರು, ರೈತಾಪಿ ಶ್ರಮಜೀವಿಗಳು ತಮ್ಮ ಬದುಕಿನಲ್ಲಿ ಕಂಡುಂಡ ಅನುಭವಗಳನ್ನೇ ಜನಪದ ಸಾಹತ್ಯದ ಬಂಡವಾಳ ಮಾಡಿಕೊಂಡರು. ಮದುವೆ, ಮುಂಜಿವೆ, ಹಬ್ಬ-ಹರಿದಿನ, ಧಾರ್ಮಿಕ ಉತ್ಸವ, ಸುಗ್ಗಿಯ ಕಾಲದಲ್ಲಿ ಹಾಡಿದರು. ಹಾಡಿ ಕುಣಿದರು. ಕಥೆ ಹೇಳಿ ಸಂಭ್ರಮಿಸಿದರು. ಅನಕ್ಷರಸ್ಥನಾದ ಜನಪದ ಕವಿ ರಚಿಸಿದ ಹಾಡು, ಕತೆಗಳು ಬಾಯಿಯಿಂದ ಬಾಯಿಗೆ ಸಾಗುತ್ತ ಹಳ್ಳಿಯ ಜನರ ಮಸ್ತಕದಲ್ಲಿ ಉಳಿದುಕೊಂಡು ಬಂದಿವೆ.

ಯಾವಾಗ ಅಕ್ಷರ ಕಲಿಕೆ ಆರಂಭವಾಯಿತೋ ಅಂದು ಶಿಷ್ಟ ಸಾಹಿತ್ಯ ಹುಟ್ಟಿತು. ಶಿಷ್ಟ

ಮಕ್ಕಳ ಸಾಹಿತ್ಯಕ್ಕೆ ೧೫೦ ವರ್ಷಗಳ ಇತಿಹಾಸವಿದೆ. ಗ್ರಂಥರೂಪದಲ್ಲಿ ದೊರಕುವ ವಡ್ಡಾರಾಧನೆಯ ಕಥೆಗಳು, ಮುಪ್ಪಿನ ಷಡಕ್ಷರಿಗಳ ಹಾಡುಗಳು ಸರಳವಾಗಿದ್ದು ಮಕ್ಕಳಿಗೆ ಯೋಗ್ಯವಾಗಿವೆ. ಮಕ್ಕಳ ಸಾಹಿತ್ಯವೆಂಬ ಹಣೆಪಟ್ಟಿ ಕಟ್ಟಿಕೊಂಡ ಗ್ರಂಥಗಳು - ಪ್ರಕಟಗೊಂಡದ್ದು ೧೯ನೇ ಶತಮಾನದ ಮಧ್ಯಭಾಗದಲ್ಲಿ, ಧರ್ಮ ಪ್ರಸಾರಕ್ಕೆಂದು ಭಾರತಕ್ಕೆ ಬಂದ ವಿದೇಶಿ ಮಿಶನರಿಗಳು ಕನ್ನಡ ಕಲಿತರು. ಕನ್ನಡದ ಮಕ್ಕಳಿಗೆ ಕನ್ನಡ ಭಾಷೆಯಲ್ಲಿ ಹಾಡು, ಕತೆಗಳನ್ನು ರಚಿಸಿದರು. ಶಾಲೆಗಳನ್ನು ಪ್ರಾರಂಭಿಸಿದರು. ತಾವೇ ಪಠ್ಯಗಳನ್ನು ರಚಿಸಿದರು. ಕನ್ನಡ ಪಂಡಿತರಿಂದ ಹಾಡು, ಕತೆ, ಪ್ರಬಂಧ ಬರೆಸಿದರು. ೧೮೭೨ರಲ್ಲಿ ಜೆ. ಮ್ಯಾಕ್ ಎಂಬ ಪಾದ್ರಿ 'ಬಾಲ ಗೀತೆಗಳು' ಎಂಬ ಕೃತಿಯನ್ನು ಹೊರತಂದರು. ಬಹುತೇಕ ಅದೇ ಪುಸ್ತಕವೇ ಕನ್ನಡದ ಮಕ್ಕಳ ಸಾಹಿತ್ಯದ ಪ್ರಥಮ ಕೃತಿ ಆಗಿರಬೇಕೆಂಬುದು ವಿದ್ವಾಂಸರ ಅಭಿಮತವಾಗಿದೆ.

ನಂತರ ನಾಡಿನ ಶ್ರೇಷ್ಠ ಸಾಹಿತಿಗಳು, ವಿದ್ವಾಂಸರು ಮಕ್ಕಳಿಗಾಗಿ ಪಠ್ಯಪುಸ್ತಕ ಮತ್ತು ಗ್ರಂಥಗಳನ್ನು ಪ್ರಕಟಿಸಿದರು. ಮಂಗಳೂರಿನ ಪಂಜೆಮಂಗೇಶರಾಯ, ಮೈಸೂರ ಪ್ರಾಂತ್ಯದ ಚ. ವಾಸುದೇವ, ಧಾರವಾಡದ ಟೆಪ್ಪ ಚೆನ್ನಬಸಪ್ಪ, ಶಂಭುಲಿಂಗಪ್ಪ ಕುಲಕರ್ಣಿ, ವೆಂಕಟರಂಗೋಕಟ್ಟಿ ಮುಂತಾದವರು ಪಠ್ಯಪುಸ್ತಕ ರಚಿಸಿ ಶಿಕ್ಷಣ ಪ್ರಸಾರಕ್ಕೆ ಮಾರ್ಗಸೂಚಿಯಾದರು. ಜೊತೆಗೆ ಸ್ವತಂತ್ರ ಗ್ರಂಥಗಳನ್ನು ಬರೆದು ಮಕ್ಕಳ ಸಾಹಿತ್ಯಕ್ಕೆ ಭದ್ರಬುನಾದಿ ಹಾಕಿದರು. ಇವರ ಹಾದಿಯಲ್ಲಿ ಎಂ.ಎಸ್. ಪುಟ್ಟಣ್ಣ, ಹೊಯ್ಸಳ, ಜಿ.ಪಿ. ರಾಜರತ್ನಂ, ದೇವುಡು ನರಸಿಂಹಾಚಾರ್ಯ, ಮೇವುಂಡಿ ಮಲ್ಲಾರಿ, ಕುವೆಂಪು, ಡಿ.ವಿ. ಗುಂಡಪ್ಪ, ಸಾಲಿ ರಾಮಚಂದ್ರಾಯರು, ದ.ರಾ. ಬೇಂದ್ರೆ, ಶಿವರಾಮ ಕಾರಂತ, ಬೆಡಗೇರಿ ಕೃಷ್ಣಶರ್ಮ ಮುಂತಾದವರು ಕವನ, ಕತೆ ನಾಟಕ, ಚರಿತ್ರೆಗಳನ್ನು ಬರೆದು ಮಕ್ಕಳ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಇವರೆಲ್ಲರ ಮೇಲೆ ನವೋದಯ ಸಾಹಿತ್ಯದ ಪ್ರಭಾವ ಉಂಟಾದದ್ದು ಕಂಡು ಬರುತ್ತದೆ.

ಕನ್ನಡದಲ್ಲಿ ಸ್ವತಂತ್ರ ಕೃತಿಗಳು ಹುಟ್ಟುವ ಪೂರ್ವದಲ್ಲಿ ಜಗತ್ತಿನ ಬೇರೆ ಬೇರೆ ದೇಶಗಳ ವಿವಿಧ ಭಾಷೆಗಳಲ್ಲಿನ ಮಕ್ಕಳ ಗ್ರಂಥಗಳು ಕನ್ನಡ ಭಾಷೆಗೆ ಭಾಷಾಂತರಗೊಂಡದ್ದು ತಿಳಿಯುತ್ತದೆ. ಅವುಗಳಲ್ಲಿ ೧೦೩೧ರಲ್ಲಿ ರಚನೆಗೊಂಡ ದುರ್ಗಸಿಂಹನ ಕರ್ನಾಟಕ ಪಂಚತಂತ್ರಂ, ಸೋಮದೇವನ ಕಥಾ ಸರಿತ್ಸಾಗರ, ನಾರಾಯಣ ಪಂಡಿತನ ಹಿತೋಪದೇಶ, ಬುದ್ಧನ ಜಾತಕ ಕಥೆಗಳು, ಅಲಿಬಾಬಾ ಮತ್ತು ನಲವತ್ತು ಕಳ್ಳರು ಗ್ರಂಥಗಳು ಪ್ರಮುಖವಾಗಿವೆ. ಈಗ ಮಕ್ಕಳ ಸಾಹಿತ್ಯ ವಿಶಾಲವಾಗಿ ವಿಪುಲವಾಗಿ ಬೆಳೆದು ರಾರಾಜಿಸುತ್ತಲಿದೆ. ಮಕ್ಕಳ ಸಾಹಿತ್ಯದಲ್ಲಿ ಕಥೆ, ಕವನ, ನಾಟಕ, ಚರಿತ್ರೆ, ಪ್ರಬಂಧ, ಕಾದಂಬರಿ, ಪ್ರವಾಸಕಥನ, ಶಿಶುಪ್ರಾಸಗಳು ಸಾಕಷ್ಟು ಸಂಖ್ಯೆಯಲ್ಲಿ ಬಂದಿವೆ. ಆದ್ದರಿಂದ ಮಕ್ಕಳ ಸಾಹಿತ್ಯವನ್ನು ಪರಿಪೂರ್ಣ ಸಾಹಿತ್ಯವೆಂದು ಪರಿಗಣಿಸಬಹುದು.

ಮಕ್ಕಳ ಕಾವ್ಯವನ್ನು ಬರೆದು ಶ್ರೀಮಂತಗೊಳಿಸಿದ ಕವಿಗಳ ಸಂಖ್ಯೆ ಅಪಾರವಾಗಿದೆ. ಕಯ್ಯಾರ ಕಿಞಣ್ಣರೈ, ಬಿ.ಎ. ಸನದಿ, ಶಂ.ಗು. ಬಿರಾದಾರ, ಸಿಸು ಸಂಗಮೇಶ, ಕಂಚ್ಯಾಣಿ ಶರಣಪ್ಪ, ಈಶ್ವರ ಕಮ್ಮಾರ, ಪರಶುರಾಮ ಚಿತ್ರಗಾರ, ಸತ್ಯಾರ್ಥಿ, ಈಶ್ವರಚಂದ್ರ ಚಿಂತಾಮಣಿ,

ಸಂಗಮೇಶ ಹೊಸಮನಿ, ಎ.ಕೆ. ರಾಮೇಶ್ವರ, ಎಚ್.ಎಸ್. ವೆಂಕಟೇಶಮೂರ್ತಿ, ಟಿ.ಎಸ್. ನಾಗರಾಜಶೆಟ್ಟಿ, ಎಂ.ಡಿ. ಗೋಗೇರಿ, ಅಣ್ಣಾಜಿ ಪಡತಾರೆ, ಎಂ.ಎಂ. ಸಂಗಣ್ಣವರ, ಪ.ಗು. ಸಿದ್ದಾಪೂರ, ಬಿ.ಆರ್. ನಾಡಗೌಡ, ಚಂದ್ರಕಾಂತ ಕರದಳ್ಳಿ, ರಾಜಶೇಖರ ಕುಕ್ಕುಂದಾ ಮುಂತಾದವರು ಸತ್ವಪೂರ್ಣ ಕವನಗಳನ್ನು ಬರೆದಿದ್ದಾರೆ.

ಕಥೆಗಳನ್ನು ಬರೆದವರು ನೂರಾರು ಜನರಿದ್ದಾರೆ. ಎಂ.ಎನ್. ಕಾಮತ, ಚ.ಅ. ಕವಲಿ, ಎಂ.ಬಿ. ದನಾಪೂರ, ಪ. ರಾಮಕೃಷ್ಣಶಾಸ್ತ್ರಿ, ಜಯವಂತ ಕಾಡದೇವರ, ಕಾಡಣ್ಣ ಹೊಸಟ್ಟಿ, ಹ.ಮ. ಪೂಜಾರ, ಸಂಗಮೇಶ ಗುಜಗೊಂಡ, ಸಂಪಟೂರ ವಿಶ್ವನಾಥ, ಗಣೇಶ ನಾಡೋರ, ಕೃ. ನಾರಾಯಣರಾವ್, ರಾಜಶೇಖರ ಭೂಸನೂರಮಠ, ಮತ್ತೂರ ಸುಬ್ಬಣ್ಣ, ಎನ್. ವಾಸುದೇವ, ಜಂಬುನಾಥ ಕಂಚ್ಯಾಣಿ, ಅನುಪಮಾ ನಿರಂಜನ, ರುಕ್ಕಮ್ಮಾ, ನಾ. ಡಿಸೋಜಾ, ದು.ನಿಂ. ಬೆಳಗಲಿ, ರಸಿಕ ಪುತ್ತಿಗೆ, ಡಿ.ಎನ್. ಶ್ರೀನಾಥ, ಸಿದ್ದಯ್ಯಾ ಪುರಾಣಿಕ, ಎನ್.ಕೆ. ಸುಬ್ರಹ್ಮಣ್ಯ, ಹ.ಶಿ. ಭೈರನಟ್ಟಿ, ಗಾಯತ್ರಿ ಮೂರ್ತಿ ಮುಂತಾದವರು ವಿಜ್ಞಾನ ಸಾಹಿತ್ಯ ಹಾಗೂ ಕಾದಂಬರಿಗಳನ್ನೂ ರಚಿಸಿದ್ದಾರೆ.

ಶಾಲಾ ಉತ್ಸವ, ಸ್ನೇಹ ಸಮ್ಮೇಲನಗಳಲ್ಲಿ ಪ್ರಯೋಗಿಸಲು ಶಿಕ್ಷಕರು ಪ್ರಹಸನ ಹಾಗೂ ನಾಟಕಗಳನ್ನು ಬರೆದು ಮಕ್ಕಳಿಂದ ಆಡಿಸುತ್ತಿದ್ದರು. ನಂತರ ಸಾಹಿತಿಗಳು ಹೊಸ ಅಲೆಯ ನಾಟಕಗಳನ್ನು ಬರೆದು ನಾಟಕ ರಂಗವನ್ನು ಜಾಗೃತಗೊಳಿಸಿದರು. ವಿಷಯ, ಭಾವ ಹಾಗೂ ಪ್ರಯೋಗಗಳಲ್ಲಿ ಹೊಸತನವನ್ನು ತಂದರು. ಕಡಿಮೆ ಅವಧಿಯಲ್ಲಿ ಪ್ರಯೋಗಿಸಲ್ಪಡುವ ಏಕಾಂಕ ನಾಟಕಗಳು ಸೃಷ್ಟಿಗೊಂಡವು. ಅದಕ್ಕಾಗಿ ನಮ್ಮ ಹಿರಿಯ ಸಾಹಿತಿಗಳ ಕೊಡುಗೆ ಶ್ಲಾಘನೀಯವಾಗಿದೆ. ಕುವೆಂಪು, ಬಿ.ಎಂ. ಶ್ರೀ, ಕೆ.ವಿ.ಸುಬ್ಬಣ್ಣ, ಚಂದ್ರಶೇಖರ ಕಂಬಾರ, ರಾಮಚಂದ್ರ ಪಾಟೀಲ, ಎಸ್.ವಿ. ಶಿರಹಟ್ಟಿಮಠ, ಡಾ. ಶಿವರಾಮ ಕಾರಂತ, ಮೂರ್ತಿ ದೇರಾಜೆ, ವೈದೇಹಿ, ಬಿ.ವಿ. ಕಾರಂತ ಮುಂತಾದವರು ಮಕ್ಕಳ ನಾಟಕಗಳನ್ನು ಬರೆದು ರಂಗ ಭೂಮಿಯಲ್ಲಿ ಪ್ರದರ್ಶಿಸಿದ್ದಾರೆ.

**ಪ್ರಕಾಶನಗಳು ಹಾಗೂ ಮಾಧ್ಯಮಗಳು:**

ಮಕ್ಕಳ ಸಾಹಿತ್ಯದ ಪ್ರಸಾರ ಹಾಗೂ ಪ್ರಚಾರದಲ್ಲಿ ಮಾಧ್ಯಮಗಳ ಪಾತ್ರ ದೊಡ್ಡದಿದೆ. ಕನ್ನಡ ದಿನಪತ್ರಿಕೆ, ವಾರ ಪತ್ರಿಕೆ ಮತ್ತು ಅನೇಕ ಮಾಸಿಕ ಪತ್ರಿಕೆಗಳು ಮಕ್ಕಳ ಸಾಹಿತ್ಯಕ್ಕಾಗಿ ಕೆಲವು ಪುಟಗಳನ್ನು ಮೀಸಲಾಗಿಟ್ಟಿವೆ. ಇದರಿಂದ ಸಾಹಿತ್ಯದೊಡನೆ ಲೇಖಕರು ಬೆಳೆಯಲು ಸಾಧ್ಯವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು, ನ್ಯಾಷನಲ್ ಬುಕ್ ಟ್ರಸ್ಟ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಸಪ್ನಾ, ಐ.ಬಿ.ಎಚ್. ಪ್ರಕಾಶನ, ನವಕರ್ನಾಟಕ ಪಬ್ಲಿಕೇಶನ್, ಮನೋಹರ ಗ್ರಂಥ ಮಾಲೆ, ರಾಷ್ಟ್ರೋತ್ಥಾನ ಮುಂತಾದ ಪ್ರಕಟಣಾ ಹಾಗೂ ಪ್ರಕಾಶನ ಸಂಸ್ಥೆಗಳು ಮಕ್ಕಳಿಗೆ ಉಪಯುಕ್ತವಾದ ಸಾಕಷ್ಟು ಗ್ರಂಥಗಳನ್ನು ನೀಡಿವೆ. ಪತ್ರಿಕೆಗಳು, ರೇಡಿಯೋ, ದೂರದರ್ಶನ, ವಿಡಿಯೋ, ಸಿನೇಮಾ, ಕಂಪ್ಯೂಟರ್‌ಗಳು ಮಕ್ಕಳ ಸಾಹಿತ್ಯ ಕಾರ್ಯಕ್ರಮಗಳನ್ನು ಪ್ರಸಾರಗೊಳಿಸುತ್ತ ಬಂದಿವೆ.

ಮಕ್ಕಳಿಗಾಗಿಯೇ ಹಲವಾರು ಪತ್ರಿಕೆಗಳು, ನಿಯತಕಾಲಿಕೆಗಳು ಮೀಸಲಾಗಿ ಕಾರ್ಯ ಮಾಡುತ್ತಿವೆ. ಬಾಲಭಾರತಿ, ಚಂದಮಾಮಾ, ಬಾಲಮಿತ್ರ, ಬೊಂಬೆ ಮನೆ, ಮಕ್ಕಳ



ಮನೆ, ಪುಟಾಣಿ, ಸಂಧ್ಯಾ, ಚಿಲಿಪಿಲಿ, ಜೀವನ ಶಿಕ್ಷಣ, ಮಂಗಳ ಹಲವಾರು ಪತ್ರಿಕೆಗಳು ಚಾಲ್ತಿಯಲ್ಲಿವೆ. ಸಿಸು ಸಂಗಮೇಶ, ಅಪ್ಪಾಸ್ವಾಮಿ, ಕಂಚ್ಯಾಣಿ ಶರಣಪ್ಪ, ಚನ್ನವೀರ ಕಣವಿ ಮುಂತಾದ ಹಿರಿಯ ಸಾಹಿತಿಗಳ ಒತ್ತಾಸೆಯಿಂದ ಆರಂಭಗೊಂಡ ಮಕ್ಕಳ ಬಾಲ ವಿಕಾಸ ಅಕಾಡೆಮಿ ಪ್ರಾರಂಭಗೊಂಡು ಎಲ್ಲರ ಕನಸನ್ನು ನನಸುಗೊಳಿಸಿತು. ಆದರೆ ಅದು ಎಲ್ಲರ ಆಶಯ ಹಾಗೂ ನಿರೀಕ್ಷೆಯಂತೆ ಕಾರ್ಯ ಮಾಡದೆ ನಿರಾಸೆಯನ್ನು ಮೂಡಿಸಿದೆ. ಕೇವಲ ವರ್ಷಕ್ಕೊಮ್ಮೆ ಗ್ರಂಥಗಳಿಗೆ ಬಹುಮಾನ ಕೊಟ್ಟೋ, ಸಾಹಿತಿಗಳಿಗೆ ಪ್ರಶಸ್ತಿ ಕೊಟ್ಟೋ ಕೈತೊಳೆದುಕೊಂಡು ವರ್ಷವಿಡೀ ಕಾರ್ಯಕ್ರಮಗಳಿಲ್ಲದೆ ನಿಷ್ಕ್ರಿಯಗೊಂಡಿದೆ. ನುರಿತ, ಅನುಭವಸ್ಥ ಮಕ್ಕಳ ಸಾಹಿತಿಗಳನ್ನು ಅದರ ಅಧ್ಯಕ್ಷರನ್ನಾಗಿ ಮಾಡಿದರೆ ಅದರ ಉದ್ದೇಶಗಳು ಕೈಗೂಡಬಹುದೇನೊ? ಆ ನಿಟ್ಟಿನಲ್ಲಿ ಸರಕಾರ ಯೋಚಿಸಬೇಕಿದೆ.

**ಉಪಸಂಹಾರ:**

ಮಕ್ಕಳ ಸಾಹಿತ್ಯದಲ್ಲಿ ಕಥೆ, ಕವನ, ಚರಿತ್ರೆಗಳದೇ ಸಿಂಹಪಾಲು. ನಾಟಕ, ಕಾದಂಬರಿ, ಶಿಶು ಪ್ರಾಸಗಳು, ಪ್ರವಾಸ ಕಥನ ಹಾಗೂ ವಿಜ್ಞಾನ ಗ್ರಂಥಗಳ ಕೊರತೆಯಿದೆ. ಮಹಿಳಾ ಲೇಖಕಿಯರ ಸಂಖ್ಯೆ ಹೇಳಿಕೊಳ್ಳುವಂತಿಲ್ಲ. ಮಕ್ಕಳ ಬರಹಗಾರರ ಸಂಖ್ಯೆ ಹೆಚ್ಚುತ್ತಿರುವುದು ಸಂತೋಷದ ವಿಷಯವಾಗಿದೆ. ಆದರೆ ಸತ್ವಯುತ ಉತ್ತಮ ಕೃತಿಗಳ ಕೊರತೆ ಎದ್ದು ಕಾಣುತ್ತಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯಲ್ಲಿ ಮಕ್ಕಳ ಸಾಹಿತ್ಯದ ಒಂದು ಕೃತಿಗೆ ಮಾತ್ರ ಬಹುಮಾನ ಕೊಟ್ಟು ಕೈತೊಳೆದು ಬಿಡುತ್ತಾರೆ. ಮಕ್ಕಳ ಸಾಹಿತ್ಯದ ಒಂದು ಕೃತಿಗೆ ಮಾತ್ರ ಬಹುಮಾನ ಕೊಟ್ಟು ಕೈತೊಳೆದು ಬಿಡುತ್ತಾರೆ. ಮಕ್ಕಳ ಸಾಹಿತ್ಯದ ಕವನ, ಕಥೆ, ನಾಟಕ, ಕಾದಂಬರಿಗಳಿಗೆ ಪ್ರತ್ಯೇಕ ಬಹುಮಾನಗಳನ್ನು ನೀಡಬೇಕು. ಬಾಲ ವಿಕಾಸ ಅಕಾಡೆಮಿಯು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ವ್ಯಾಪಕವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವರಲ್ಲಿನ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವಾಗಬೇಕು. ಮಕ್ಕಳ ಸಾಹಿತ್ಯದಲ್ಲಿ ಪದಾರ್ಪಣ ಮಾಡುವ ಹಿರಿ-ಕಿರಿ ಬರಹಗಾರರು ಸಾಹಿತ್ಯ ರಚನಾ ತಂತ್ರ, ನಿಯಮಗಳ ಬಗ್ಗೆ ಅರಿವಿಲ್ಲದೆ ತಮಗೆ ತೋಚಿದಂತೆ ಸಾಹಿತ್ಯ ಬರೆಯುತ್ತಾರೆ. ಅಂಥವರಿಗೆ ಕಾರ್ಯಗಾರ, ಗೋಷ್ಠಿಗಳನ್ನು ಏರ್ಪಡಿಸಿ ಸೂಕ್ತ ತರಬೇತಿ ನೀಡಬೇಕಾದ ಅವಶ್ಯಕತೆ ಇದೆ. ಮಕ್ಕಳ ಸಾಹಿತ್ಯ ಕೃತಿಗಳನ್ನು ನಾಡಿನ ಎಲ್ಲಾ ಶಾಲಾ ಗ್ರಂಥಾಲಯಗಳಿಗೆ ಸರಬರಾಜು ಮಾಡಿದರೆ ಮಕ್ಕಳಿಗೆ ಹಾಗೂ ಬರಹಗಾರರಿಗೆ ಅನುಕೂಲವಾಗುತ್ತದೆ. ಸರಕಾರ

ಮತ್ತು ವಿವಿಧ ಅಕಾಡಿಮಿಗಳು ಮಕ್ಕಳ ಬಗ್ಗೆ ಮತ್ತು ಮಕ್ಕಳ ಲೇಖಕರ ಬಗ್ಗೆ ಉದಾಸೀನರಾಗದೆ ಅವರ ಕಲ್ಯಾಣ ಬಯಸುವ ಹೊಸ ಕಾರ್ಯಕ್ರಮಗಳನ್ನು ನಿಯೋಜಿಸಲು ಅರಿಕೆ ಮಾಡೋಣ.

ಹಿರಿಯ ಅಪ್ಪಟ ಮಕ್ಕಳ ಸಾಹಿತಿಗಳನ್ನು ಕುರಿತು ಅನೇಕ ಜನ ಸಾಹಿತಿಗಳು ವಿದ್ಯಾರ್ಥಿಗಳು ಮಹಾ ಪ್ರಬಂಧಗಳನ್ನು ಬರೆದು ಪಿಎಚ್.ಡಿ. ಪದವಿ ಪಡೆಯುತ್ತಿರುವುದು ಸ್ವಗತಾರ್ಹವಾಗಿದೆ. ಪಳಕಳ ಸೀತಾರಾಮ ಭಟ್ಟ, ಕಂಚ್ಯಾಣಿ ಶರಣಪ್ಪ, ಈಶ್ವರಚಂದ್ರ ಚಿಂತಾಮಣಿ, ಈಶ್ವರ ಕಮ್ಮಾರ, ಸಿಸು ಸಂಗಮೇಶ ಮುಂತಾದವರ ಬದುಕು-ಬರಹವನ್ನು ಕುರಿತು ಪಿಎಚ್.ಡಿ. ಪ್ರಬಂಧಗಳು ಬಂದಿವೆ. ಅಲ್ಲದೆ ಮಕ್ಕಳ ಸಾಹಿತ್ಯದ ಮೇಲೆಯೇ ಬೇರೆ



ಬೇರೆ ವಿಶ್ವವಿದ್ಯಾಲಯಗಳಿಂದ ಸಂಶೋಧನಾತ್ಮಕ ಗ್ರಂಥಗಳು ಪ್ರಕಟಗೊಂಡಿವೆ.

ನಿಂಗು ಸೊಲಗಿ, ರಾಜೇಂದ್ರ ಗಡಾದ, ಜಂಬುನಾಥ ಕಂಚ್ಯಾಣಿ, ಚಂದ್ರಗೌಡ ಕುಲಕರ್ಣಿ ಮುಂತಾದ ಹಿರಿಯ ಸಾಹಿತಿಗಳು ಮಕ್ಕಳ ಕವನ, ನಾಟಕ, ವಚನ, ಕಥೆಗಳನ್ನು ರಚಿಸುವಲ್ಲಿ ಹೊಸ ಪ್ರಯೋಗ ಮಾಡುತ್ತಿದ್ದಾರೆ. ಹೀಗೆ ನಿಂತ ನೀರಾದ ಮಕ್ಕಳ ಸಾಹಿತ್ಯ ಹೊಸತನವನ್ನು ಪಡೆದು ಅಲಂಕಾರಗೊಳ್ಳಲೆಂಬುದು ಎಲ್ಲರ ಆಶಯವಾಗಿದೆ.

ನಮ್ಮ ನಾಡಿನ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಮಕ್ಕಳ ಸಾಹಿತ್ಯದ ಅಧ್ಯಯನ ಪೀಠಗಳನ್ನು ತೆರೆದು ಸಂಶೋಧನೆಗೆ ಅವಕಾಶ ನೀಡಬೇಕು. ಪ್ರೌಢ ಸಾಹಿತ್ಯ ಸದೃಢಗೊಳ್ಳಬೇಕಾದರೆ ಮಕ್ಕಳ ಸಾಹಿತ್ಯ ಸಶಕ್ತವಾಗಬೇಕಿದೆ. ಆದ್ದರಿಂದ ಮಕ್ಕಳ ಸಾಹಿತ್ಯವನ್ನು ಸಂಗ್ರಹಿಸಿ ವಿಮರ್ಶೆಗೆ ಒಳಪಡಿಸಬೇಕು. ಇದರಿಂದ ಮಕ್ಕಳ ಸಾಹಿತ್ಯದ ಅಭಿವೃದ್ಧಿಯಾಗುವುದಲ್ಲದೆ ಮುಂಬರುವ ದಿನಗಳಲ್ಲಿ ಹೊಸ ಆಯಾಮದ ಸಾಹಿತ್ಯ ಸೃಷ್ಟಿಗೆ ಚಾಲನೆ ಕೊಟ್ಟಂತಾಗುತ್ತದೆ.

ಮಕ್ಕಳ ಸಾಹಿತ್ಯದ ವಿಮರ್ಶೆ ನಡೆಸಬೇಕಾಗಿರುವುದು ತುರ್ತು ಕಾರ್ಯಗಳಲ್ಲಿ ಒಂದಾಗಿದೆ. ಒಳ್ಳೆಯ ವಿಮರ್ಶಕರು ಯಾವ ಮುಲಾಜಿಲ್ಲದೆ ಪ್ರಾಮಾಣಿಕವಾಗಿ ಕೃತಿಗಳನ್ನು ವಿಮರ್ಶಿಸಿ ದೋಷಗಳನ್ನು ಎತ್ತಿ ತೋರಿಸಿ ಸಲಹೆ ನೀಡಿದರೆ ಮಾತ್ರ ಮಕ್ಕಳ ಸಾಹಿತ್ಯ ಬೆಳೆಯುತ್ತದೆ. ಇದರಿಂದ ಉತ್ತಮ ಲೇಖಕರು ಸೃಷ್ಟಿಯಾಗುತ್ತಾರೆ. ನಮ್ಮ ಮಕ್ಕಳಿಗೆ ಗುಣಮಟ್ಟದ ಸಾಹಿತ್ಯ ನೀಡಬೇಕಾದರೆ ಗುಣಮಟ್ಟದ ಲೇಖಕರು ಸಿದ್ಧವಾಗಬೇಕು. ಅದಕ್ಕಾಗಿ ವಿಮರ್ಶೆ ಮಹತ್ವದ ಪಾತ್ರವಹಿಸಬೇಕಾಗುತ್ತದೆ.

**ಅಧ್ಯಕ್ಷ ಭಾಷಣ:**

**ಭವಿಷ್ಯದ ಮಕ್ಕಳು ಮತ್ತು ಸಾಹಿತ್ಯ**

**- ಡಾ. ಮಾಲತಿ ಪಟ್ಟಣಶೆಟ್ಟಿ**

ಮಕ್ಕಳ ಸಾಹಿತ್ಯದ ಬಗ್ಗೆ ಚಿಂತಿಸುವಾಗ ಇಂದಿನ ಮಕ್ಕಳ ಮಾನಸಿಕ, ಶಾರೀರಿಕ, ವೈಚಾರಿಕ, ಸ್ವಾಸ್ಥ್ಯದ ಸ್ಥಿತಿಗತಿಗಳು ಸಂತಸದಾಯಕವೇನಿಲ್ಲ. ಜಗತ್ತಿನ ಹಲವಾರು ರಾಜ್ಯಗಳಲ್ಲಿ ಚಿಂತಾಜನಕವೇ ಆಗಿದೆ. ಭಾರತದ ಮಕ್ಕಳಲ್ಲಿ ನೂರಕ್ಕೆ ೬೦ ಜನ ಮಕ್ಕಳ ಅಪೌಷ್ಟಿಕತೆಯಿಂದಾಗಿ ಅವರ ಮಾನಸಿಕ, ವೈಚಾರಿಕ, ದೈಹಿಕ ಬಲಗಳು ಕುಂದಿವೆ. ಬಡತನವು ಇದಕ್ಕೆ ಮುಖ್ಯ ಕಾರಣವೆಂದರೆ ಪಾಲಕರ ನಿರ್ಲಕ್ಷ್ಯ, ಸರಕಾರದ ನಿರ್ಲಕ್ಷ್ಯಗಳನ್ನು ತಳ್ಳಿಹಾಕುವಂತಿಲ್ಲ. ನಿರಕ್ಷರತೆ ಎರಡನೆಯ ಶಾಪವಾಗಿ ಮಕ್ಕಳ ಭವಿಷ್ಯವನ್ನು ಹಾಳು ಮಾಡಿದೆ. ಜೀತಪದ್ಧತಿ, ಬಾಲಕರನ್ನು ದುಡಿಮೆಗಾಗಿ ಒತ್ತಾಯಪೂರ್ವಕ ತೊಡಗಿಸುವ ಪಾಲಕರು ತಮ್ಮ ಆರ್ಥಿಕ ಪರಿಸ್ಥಿತಿಗಾಗಿ ಮಕ್ಕಳನ್ನು ಚಿಕ್ಕವಯಸ್ಸಿನಲ್ಲೇ ತೊಡಗಿಸಿದಂಥ ಉದಾಹರಣೆಗಳು ಕಡಿಮೆಯೇನಿಲ್ಲ. ಇದೆಲ್ಲಕ್ಕೂ ಕ್ರೂರವಾದದ್ದು ಹಡೆದ ಮಕ್ಕಳನ್ನು ಭಿಕ್ಷೆ ಬೇಡಲು ಕಳಿಸುವುದು. - ಹೀಗೆ ಬಾಲ್ಯವೆಂಬ ನಂದನವನವನ್ನು ಕಿತ್ತುಕೊಳ್ಳುವ ಮಾತಾ-ಪಿತರನ್ನು, ಶಿಕ್ಷಕರನ್ನು, ದೇಶದ ನಾಯಕರನ್ನು ಅವರ ನಿರ್ಲಕ್ಷ್ಯತೆಗಾಗಿ ಅಪರಾಧಿ ಕಟಕಟೆಯಲ್ಲಿ ನಿಲ್ಲಿಸಲೇ ಬೇಕಾದ ಸ್ಥಿತಿ ಕಣ್ಣ ಮುಂದಿದೆ.

ಮಕ್ಕಳ ಒಟ್ಟು ಸಾಹಿತ್ಯದ ಬರವಣಿಗೆಯನ್ನು ಹಿರಿಯರಿಗಾಗಿ ಬರೆದ ಸಾಹಿತ್ಯದ ಬರವಣಿಗೆಗೆ ಹೋಲಿಸಿದಾಗ ಅದು ಅತ್ಯಂತ ಕಡಿಮೆ ಇದೆ. ಮಕ್ಕಳ ಸಾಹಿತ್ಯವನ್ನು ನಿರ್ಲಕ್ಷಿಸಿದವರಲ್ಲಿ ಹಿರಿಯ ಸಾಹಿತಿಗಳೂ ಇದ್ದಾರೆ.

ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣದ ಕಡೆಗೆ ನಮ್ಮ ಚುನಾಯಿತ ಶಾಸಕರ ಲಕ್ಷವೆಷ್ಟಿದೆ? ಶಿಕ್ಷಕರು ನೀಡುವ ಮಕ್ಕಳ ಶಿಕ್ಷಣದ ಗುಣಮಟ್ಟವಾದರೂ ಏನಿದೆ? ಅವರ ಜ್ಞಾನ, ಕಲಿಕಾ ಕ್ರಮಗಳು ಆಧುನಿಕಗೊಳ್ಳಲು ಎಷ್ಟು ಕಾರ್ಯಾಗಾರಗಳು ನಡೆಸಲ್ಪಡುತ್ತವೆ? ಹೋಗಲಿ ಮಕ್ಕಳಿಗಾಗಿದ್ದ ಶಾಲಾ ಕಟ್ಟಡಗಳ ಪರಿಸ್ಥಿತಿ ನೋಡಿದಾಗ, ಮೂಲಭೂತ ಸೌಕರ್ಯಗಳೂ ಇಲ್ಲದಿದ್ದಾಗ ನಾವು ಪ್ರಶ್ನಿಸಬೇಕಾದುದು ಸರ್ಕಾರದ ಜವಾಬ್ದಾರಿಯನ್ನು.

ಇಂದಿನ ಸರ್ಕಾರಗಳು ಮಕ್ಕಳಿಗೆ ಸಮವಸ್ತ್ರ, ಮಧ್ಯಾಹ್ನದ ಊಟ, ಪಠ್ಯಪುಸ್ತಕಗಳನ್ನು ಉಚಿತವಾಗಿ ಕೊಡುವುದು. ಮತ್ತು ನಿಶ್ಯುಲ್ಕ ಕಲಿಕೆ? ಇತ್ಯಾದಿ ಅನುಕೂಲತೆಗಳಿದ್ದರೂ ಮಕ್ಕಳಿಗಾಗಿ ಗಟ್ಟಿ ಕಟ್ಟಡ, ಸ್ವಚ್ಛ ಪರಿಸರ, ಶಾಲೆಗಳಿಗೆ ಬೇಕಾದ

ಸಂಖ್ಯೆಯಲ್ಲಿ ಶಿಕ್ಷಕರ ನೇಮಕಾತಿ? ಒಂದೇ ಎರಡೇ, ಯಾವುದರ ಬಗ್ಗೆ ಶಿಕ್ಷಣ ಇಲಾಖೆಗಳನ್ನು ದೂಷಿಸಬೇಕು? ಪರೀಕ್ಷೆಗಳಿಗಿಂತ ಮಕ್ಕಳಲ್ಲಿ ಮಾನವೀಯ ಗುಣಗಳನ್ನು ಅಳವಡಿಸಿ ಉತ್ತಮ ವ್ಯಕ್ತಿತ್ವ ಬೆಳೆಸುವ ಕಳಕಳಿ ಪಾಲಕರಿಗಿಲ್ಲ, ಶಿಕ್ಷಕರಿಗೆ, ನಾಯಕರಿಗೆ ಇಲ್ಲವೇ ಇಲ್ಲ.

ಇಂಥ ನಿರ್ಲಕ್ಷಗಳ ಜಗತ್ತಿನಲ್ಲಿ ಮಕ್ಕಳ ಮನಕ್ಕೆ ಮುದ ನೀಡುವ, ಅವರನ್ನು ಬೆಳೆಸುವ ಮಕ್ಕಳ ಸಾಹಿತ್ಯವೊಂದು ಆಶಾಕಿರಣವಾಗಬಲ್ಲದು. ಸಾಹಿತ್ಯ ಜಗತ್ತಿನಲ್ಲಿಯೂ ನಿರ್ಲಕ್ಷದ ಕಾರ್ಮೋಡಗಳಿವೆಯಾದರೂ ಅವರಿಗೆ ಬಾಲ್ಯದ ಬೆಳದಿಂಗಳನ್ನು ಮಕ್ಕಳ ಸಾಹಿತಿಗಳು ಕೊಡಬಲ್ಲರು. ಒಳ್ಳೆಯ ಶಾಲಾ ಪರಿಸರ, ಉತ್ತಮ ಪಠ್ಯ, ಪ್ರೀತಿಯಿಂದ ಕಲಿಸುವ ಶಿಕ್ಷಕ ವರ್ಗ, ಮಕ್ಕಳಿಗೆ ನೀಡಬೇಕಾದ ಸ್ವಾತಂತ್ರ್ಯವನ್ನು ಕೊಡುವ ಪಾಲಕರು? ಇವರೆಲ್ಲರ ಸಾಮೂಹಿಕ ಪ್ರಯತ್ನಗಳಿಂದ ನಾವು ಬಲಿಷ್ಠ ರಾಷ್ಟ್ರಗಳನ್ನು ಕಟ್ಟಬಲ್ಲೆವು !

ಇಂದಿನ ಮೂರು ಬಂದೀಖಾನೆಗಳೆಂದರೆ ಮನೆ, ಶಾಲೆ ಮತ್ತು ಸಮಾಜ. ಇವುಗಳಿಂದ ಮಕ್ಕಳನ್ನು ಬಿಡುಗಡೆ ಮಾಡಬೇಕಾಗಿದೆ. ಅವರನ್ನು ಸೂತ್ರದ ಗೊಂಬೆಗಳಾಗಿಸಿ ಅವರ ವಿಶಿಷ್ಟ ವ್ಯಕ್ತಿತ್ವವನ್ನು ಗೌರವಿಸಬೇಕೆಂದು ಮಕ್ಕಳ ಸಾಹಿತ್ಯಗೋಷ್ಠಿಯ ವೇದಿಕೆಯಿಂದ ಪಾಲಕರಿಗೆ, ಶಿಕ್ಷಕರಿಗೆ, ರಾಜ್ಯದ ನಾಯಕರಿಗೆ ನಾನು ವಿನಮ್ರತೆಯೊಂದಿಗೆ ಪ್ರಾರ್ಥಿಸುತ್ತೇನೆ. ನಮ್ಮ ಮಕ್ಕಳಿಗೆ ಅವರ ಬಾಲ್ಯದ ಹರುಷವನ್ನು ನಾವೆಲ್ಲರು ಕೊಡೋಣ ಎಂಬ ಪ್ರಮಾಣವನ್ನು ಈ ಸಂದರ್ಭದಲ್ಲಿ ಮಾಡೋಣ.

ನನಗೆ ನನ್ನ ಬಾಲ್ಯ ನೆನಪಾಗುತ್ತದೆ. ನನ್ನ ತಂದೆ ಧಾರವಾಡದ ಉತ್ತಮ ಶಾಲೆಗೆ ಕಳಿಸಿ ಮಾಡಿದ ಉಪಕಾರವನ್ನು ನಾನೆಂದಿಗೂ ಮರೆಯಲು ಸಾಧ್ಯವಿಲ್ಲ. ನನ್ನ ಕಲ್ಪನೆಯ ಆಕಾಶವನ್ನು ವಿಸ್ತರಿಸಿದ ಕವಿಗಳಾದ ಬೇಂದ್ರೆ, ಕುವೆಂಪು ಇವರನ್ನು ಸಹ ನಾನೆಂದೂ ಮರೆಯಲಾರೆ. ಬೇಂದ್ರೆಯವರ :

ಪಾತರಗಿತ್ತಿ ಪಕ್ಕ ನೋಡಿದೇನ ಅಕ್ಕ

ಹಸಿರು ಹಚ್ಚಿ ಚುಚ್ಚಿ ಮೇಲಕರಿಷಿಣ ಹಚ್ಚಿ

ಕುವೆಂಪು ಅವರ :

ದೇವರ ಪೆಪ್ಪರಮೆಂಟೇನಮ್ಮ

ಗಗನದೊಳಲೆಯುವ ಚಂದಿರನು

ಎಷ್ಟೇ ತಿಂದರೂ ಖರ್ಚು ಆಗದು....

ಇವು ನನ್ನ ೯ನೇ ವರ್ಷ ವಯಸ್ಸಿನ ಬಾಲ್ಯದಲ್ಲಿ ಮನ ಸೆಳೆದ ಕವಿತೆಗಳು, ನನ್ನಲ್ಲಿ ಕಲ್ಪನೆಯ ಶಕ್ತಿಗಳನ್ನು ಪ್ರೇರೇಪಿಸಿದ ಕವಿತೆಗಳು.

ಆದ್ದರಿಂದ ಮಕ್ಕಳ ಪಠ್ಯವನ್ನು ರಚಿಸುವ ಕಮಿಟಿಗಳು ಬಹಳ ಯೋಚಿಸಿ ಮಕ್ಕಳ ಬುದ್ಧಿ ಮಟ್ಟಕ್ಕೆ ಎಟುಕುವಂಥ ವಿಷಯ, ಭಾಷೆಯಲ್ಲಿ ಕವಿತೆ, ಕತೆ ಮತ್ತು ನಾಟಕಗಳ ಆಯ್ಕೆ ಮಾಡಬೇಕು.

ನ್ಯೂಟನ್ ಇಂಗ್ಲೆಂಡ್ ದೇಶದ ವಿಜ್ಞಾನಿ, ಗುರುತ್ವಾಕರ್ಷಣದ ಶಕ್ತಿ ಗುರುತಿಸಿದಾಗ ಇಡೀ ಜಗತ್ತಿನ ಜನ ಅವನನ್ನು ಹಾಡಿ ಹೊಗಳತೊಡಗಿತು. ಆದರೆ



ನ್ಯೂಟನ್ ಅಭಿನಂದಿಸುತ್ತಿದ್ದ ಮಹನೀಯರನ್ನು ಹೀಗೆ ವಿನಂತಿಸುತ್ತಾನೆ. “ಮಹನೀಯರೆ, ಸ್ವಲ್ಪ ತಡೆಯಿರಿ, ನಿಮ್ಮ ಹೊಗಳಿಕೆಗೆ ನಾನೊಬ್ಬನೇ ಕಾರಣನಲ್ಲ. ನನ್ನ ಹಿಂದಿನ ಪರಂಪರೆಯ ವಿಜ್ಞಾನಿಗಳ ಹೆಗಲ ಮೇಲೆ ನಿಲ್ಲಲು ಸಾಧ್ಯವಾಗಿದ್ದರಿಂದ ನನಗೆ ಗುರುತ್ವಾಕರ್ಷಣೆಯನ್ನು ಶೋಧಿಸಲು ಸಾಧ್ಯವಾಯಿತು” ಎಂದನಂತೆ. ಹಾಗೆಯೇ ೨೧ನೇ ಶತಮಾನದಲ್ಲಿ ರಚಿಸುತ್ತಿರುವ ಮಕ್ಕಳ ಸಾಹಿತ್ಯಗಳು ಇಂದು ಮಕ್ಕಳ ಸಾಹಿತ್ಯ ರಚನೆಯಲ್ಲಿ ಅವರ ಕಸುವು ಚೈತನ್ಯಗಳು ಮೂಡಿದ್ದರೆ, ನಮ್ಮ ಹಿರಿಯರ ಹೆಗಲಮೇಲೆ ನಿಂತು ಈ ಜಗತ್ತಿನ ಅನುಭವ ಪಡೆದಿದ್ದಾರೆಂಬುದು ವಾಸ್ತವ. ನಾನೂ ಸಹ ಹಿರಿಯರ ಮಕ್ಕಳ ಸಾಹಿತ್ಯವನ್ನು ಓದಿಕೊಂಡಿದ್ದೇನೆ. ಅವರ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ಮುಂದೆ ನನ್ನ ಸೃಜನಶೀಲತೆಗಾಗಿ ಹಾದಿ ಮಾಡಿಕೊಂಡಿದ್ದೇನೆ. ಹಾಗೆಯೇ ಮಕ್ಕಳ ಸಾಹಿತಿಗಳೂ, ಹಿರಿಯರ ಮಕ್ಕಳ ಸಾಹಿತ್ಯ ಕೃತಿಯಗಳನ್ನು ಓದಲೇಬೇಕಾದುದು ಅತ್ಯಗತ್ಯ. ಆದರೆ ಎಷ್ಟೋ ಹಿರಿಯರ ಸಾಹಿತ್ಯ ಕೃತಿಗಳು ಕೈಗೆಟುಕುವುದೇ ಇಲ್ಲ. ಆದ್ದರಿಂದ ಇದುವರೆಗಿನ ಸಮಗ್ರ ಮಕ್ಕಳ ಸಾಹಿತ್ಯದ ಸಂಪುಟಗಳನ್ನು ಸರಣಿಯಲ್ಲಿ ಪ್ರಕಟಿಸಬೇಕಾದ್ದು ಅನಿವಾರ್ಯ. ಇದಕ್ಕಾಗಿ ಸರ್ಕಾರವಾಗಲಿ, ಪರಿಷತ್, ಅಕಾಡೆಮಿ, ಪುಸ್ತಕ ಪ್ರಾಧಿಕಾರಗಳಾಗಲಿ, ಈ ಬೃಹತ್ ಯೋಜನೆಯನ್ನು ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಅದೇನು ಋಣಾನುಬಂಧವೋ ಬ್ರಿಟಿಷ್ ಧರ್ಮಗುರುಗಳು ಮತ್ತು ಅಧಿಕಾರಿಗಳಾದ ರೈಸ್, ಪ್ಲೇಟ್ ಮತ್ತು ಕಿಟೆಲ್‌ರವರು ಪ್ರಾಥಮಿಕ ಶಾಲೆಗಳಿಗಾಗಿ ಪಠ್ಯ ರಚನೆಗೆ ನಾಂದಿ ಹಾಕಿದರು. ನಾನು ಇತ್ತಿತ್ತಲಾಗಿ ಗಮನಿಸಿದ ಒಂದು ಅಪರೂಪದ ಮಾಹಿತಿಯ ಪ್ರಕಾರ ಪ್ರಥಮ ಕನ್ನಡ ಪುಸ್ತಕ “ಕನ್ನಡ ಬಾಲಬೋಧೆ'ಯನ್ನು ರಚಿಸಿದ ತೆರೆಮರೆಯಲ್ಲಿದ್ದ ಮಕ್ಕಳ ಸಾಹಿತಿ ಪಿತಾಮಹರು ಚೆನ್ನಪಟ್ಟಣದ ವಾಸುದೇವಯ್ಯನವರು. ಈ ಪುಸ್ತಕವು ಭಾರತದಲ್ಲಿ ಎಲ್ಲಿಯೂ

ಸಿಗುವುದಿಲ್ಲ. ಇದು ನ್ಯೂಯಾರ್ಕನ ಲೈಬ್ರರಿ ಆಫ್ ಕಾಂಗ್ರೆಸ್ಸಿನಲ್ಲಿ ಸಿಕ್ಕಿವೆ. ಅವರ ಮೊಮ್ಮಕ್ಕಳು ತಮ್ಮ ತಂದೆಯವರ ಪುಸ್ತಕದ ನೂರಾರು ಪ್ರತಿಗಳನ್ನು ಮಾಡಿ ಕನ್ನಡಿಗರಲ್ಲಿ ಹಂಚಿದ್ದಾರೆ. ಇದೊಂದು ಅಭಿನಂದನೀಯ ಕಾರ್ಯ.

"ಧರಣಿಮಂಡಲ ಮಧ್ಯದೊಳಗೆ ಮೆರೆಯುತಿಹ ಕರ್ನಾಟದೊಳು..... ಎಂಬ ಗೋವಿನ ಹಾಡು ಮತ್ತು ಕಣ್ಣ ಮುಚ್ಚೆ ಕಾಡೆಗೂಡೆ" ಯಂಥ ಜನಪ್ರಿಯ ಕವಿತೆಗಳು ಈ ಪುಸ್ತಕದಲ್ಲಿವೆ.

ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಕೃತಿಕಾರರು ಒಬ್ಬರೆ? ಇಬ್ಬರೇ? ಅಸಂಖ್ಯ ಸಾಹಿತಿಗಳಿದ್ದಾರೆ. ಸಮಯದ ಮಿತಿಯಿಂದಾಗಿ ನಾನು ಅವರ ಆಯ್ದ ಹೆಸರುಗಳನ್ನು ಮಾತ್ರ ಪಟ್ಟಿ ಮಾಡಬಲ್ಲೆ.

ಚೆನ್ನಪಟ್ಟಣದ ವಾಸುದೇವಾಚಾರ್ಯರು, ಪಂಜೇ ಮಂಗೇಶರಾಯರು, ತೋನ್ಸೆ ಮಂಗೇಶರಾಯರು, ಗಂಗಾಧರ ಮಡಿವಾಳೇಶ್ವರ ತುರುಮರಿ, ವೆಂಕಟ ರಂಗೊಲಿ ಕಟ್ಟಿ, ಎಂ.ಎಸ್. ಪುಟ್ಟಣ್ಣ, ಬಾಳಾಚಾರ್ಯ ಪತ್ರ, ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ, ಹೊನ್ನಾಪುರಮಠ, ಎನ್.ಎನ್. ಕಾನು, ಹರ್ಡೆಕರ ಮಂಜಪ್ಪ, ಆರ್ ಕಲ್ಯಾಣಮ್ಮ, ದೇವುಡು ನರಸಿಂಹಶಾಸ್ತ್ರಿಗಳು, ಶಿವರಾಮ ಕಾರಂತ, ಎಲ್. ಗುಂಡಪ್ಪ, ಬೇಂದ್ರೆ, ಕುವೆಂಪು, ಸಿಂಪಿ ಲಿಂಗಣ್ಣ, ಮೇವುಂಡಿ ಮಲ್ಲಾರಿ, ದಿನಕರ ದೇಸಾಯಿ, ಸಿದ್ಧಯ್ಯ



ಪುರಾಣಿಕ, ಸಿಸು ಸಂಗಮೇಶ, ಮ.ಗು. ಬಿರಾದಾರ, ಕಂಚ್ಯಾಣಿ ಶರಣಪ್ಪ, ಎಚ್.ಎಸ್.ವೆಂಕಟೇಶಮೂರ್ತಿ, ಸುಮತೀಂದ್ರ ನಾಡಿಗ ಇವರೆಲ್ಲರು ಮಕ್ಕಳ ಸಾಹಿತ್ಯವನ್ನು ಅಂದಿನಿಂದ ಇಂದಿನವರೆಗೂ ರಚಿಸಿದವರು, ರಚಿಸುತ್ತಾ ಬಂದವರು ಶಾಲಾ ಶಿಕ್ಷಕರೇ ಎಂಬ ಸಂಗತಿ ಅಚ್ಚರಿಯನ್ನು ಮೂಡಿಸುತ್ತದೆ. ಇದು ಅತ್ಯಂತ ಸತ್ಯ ಸಂಗತಿ ಕೂಡಾ. ಆದ್ದರಿಂದ ಒಟ್ಟಾರೆ ಎಲ್ಲ ಕನ್ನಡ ಶಾಲಾ ಶಿಕ್ಷಕರಿಗೆ ಹಾರ್ದಿಕ ಕೃತಜ್ಞತೆ ಸಲ್ಲಿಸಬೇಕು.

ಇಂದು ಕನ್ನಡದ ಹತ್ತಾರು ಪತ್ರಿಕೆಗಳಲ್ಲಿ ಮಕ್ಕಳಿಗಾಗಿ ಒಂದೋ, ಎರಡೋ, ಅರ್ಧಪುಟವೋ ಮೀಸಲಿರುತ್ತವೆ. ಆದರೆ ನಾವು ರಚಿಸಿದ ಮಕ್ಕಳ ಸಾಹಿತ್ಯವನ್ನು ಪತ್ರಿಕೆ ಪ್ರಕಟಿಸುವುದಿಲ್ಲ. ಆದ್ದರಿಂದ ಶಿಕ್ಷಕರೇ ಒಗ್ಗೂಡಿ ಒಂದು ನಿಯತಕಾಲಿಕ ಪತ್ರಿಕೆಯನ್ನು ಏಕೆ ಹೊರ ತರಬಾರದು?

ಮಕ್ಕಳ ಸಾಹಿತ್ಯವನ್ನು ಈ ಕೆಳಗಿನಂತೆ ವಿಭಜಿಸಬಹುದು :

೧) ಆದರ್ಶ ಬಿತ್ತುವ ಪತ್ರಿಕೆ ವೇದ-ಉಪನಿಷತ್ತು, ಪುರಾಣ, ಕಥೆ, ಈಸೋಪನ ಕತೆಗಳು, ಜಾತಕ ಫಲ, ಹಿತೋಪದೇಶ ಕತೆ ಮೊದಲಾದವು.

೨)	ಮನರಂಜನೆಗಾಗಿ ಪತ್ರಿಕೆ ಜಾನಪದ ಕಥೆಗಳು, ಅಜ್ಜಿ, ಅಜ್ಜನ ಕತೆಗಳು, ದಂತ ಕತೆಗಳು, ಅರೇಬಿಯನ್ ನೈಟ್ಸ್ ಮತ್ತು ಸಾಹಸದ ಕತೆಗಳು.

೩)	ಶೈಕ್ಷಣಿಕ ಸಾಹಿತ್ಯ ಮಕ್ಕಳ ಪಠ್ಯ ಪುಸ್ತಕಗಳು, ಮಕ್ಕಳ ಶಾಲಾ ಪತ್ರಿಕೆಗಳು

೪)	ಪತ್ರಿಕಾ ಸಾಹಿತ್ಯ ೧೯೫೦ರ ಮೊದಲು ಅನೇಕ ಪತ್ರಿಕೆಗಳಿದ್ದವು. ೧೯೫೦ರ ನಂತರ ತುತ್ತೂರಿ, ಪರಿಮಳ, ಬಾಲಮಿತ್ರ, ಚಂದಮಾಮ, ಮಗು ಮತ್ತು ಪಾಪಚ್ಚಿ ಮೊದಲಾದವುಗಳು.

ದೇಶದ ಮಾಜಿ ಉಪರಾಷ್ಟ್ರಪತಿಗಳಾಗಿದ್ದ ಸರ್ವಪಲ್ಲಿ ರಾಧಾಕೃಷ್ಣನ್ ಅವರನ್ನು ನಾವಿಲ್ಲಿ ನೆನೆಯಬೇಕು.

“ಮಕ್ಕಳ ವಿಕಾಸವು ಆರೋಗ್ಯಕರ ರೀತಿಯಲ್ಲಿ ಉಂಟಾಗಲು ಸಾಹಿತ್ಯವೇ ಮುಖ್ಯ ಸಾಧನ” ಅಂದರೆ ಸಾಹಿತ್ಯದ ಪಾಠಗಳು ಮಕ್ಕಳ ಎಳೆ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಬೀರಬಲ್ಲವು. ಹಾಗಿದ್ದರೆ ಇಂದಿನ ಮಕ್ಕಳಿಗೆಂಥ ಸಾಹಿತ್ಯ ಬೇಕು ಎಂಬುದರ ಬಗ್ಗೆ ಕೆಲ ಮುಖ್ಯ ಅಂಶಗಳನ್ನು ಗಮನಿಸೋಣ.

ಕಳೆದ ನೂರು ವರ್ಷಗಳಿಂದ ಅದೇ ಅದೇ ಸಾಹಿತ್ಯದ ಕತೆ, ಕವಿತೆ, ಪ್ರಬಂಧಗಳಿರುವುದರಿಂದ ಮಕ್ಕಳಿಗೆ ಬದಲಾವಣೆ ಬೇಕಿದೆ. ಈ ಕೆಳಗಿನ ಸಾಂಪ್ರದಾಯಿಕ ಕತೆ ಕವಿತೆಗಳು ಅವರಿಗೆ ಬೇಡವಾಗಿವೆ.

೧) ಅಜ್ಜಿಯ ಕತೆಗಳು

೨) ರಾಮಾಯಣ ಮಹಾಭಾರತದ ಕತೆಗಳು

೩) ಅಕ್ಬರ್ ಬೀರಬಲ್ ಕತೆಗಳು

೪) ತೆನಾಲಿ ರಾಮಕೃಷ್ಣ ಕತೆಗಳು

೫) ಬೇತಾಳದ ಕತೆಗಳು

೬) ಸಾಹಸದ ಕತೆಗಳು

ಮಕ್ಕಳಿಗೆ ಬೇಕಾದ ಕತೆಗಳಲ್ಲಿ ಅವರು ಇಷ್ಟಪಡುವುದು

೧) ಮಕ್ಕಳ ಮನೋಧರ್ಮವನ್ನು ಕುರಿತಾಗಿ

೨) ವೈಜ್ಞಾನಿಕ ಮನೋಭಾವನೆಯ ಕುರಿತಾಗಿ

೩) ಬಂಡಾಯ, ಪ್ರತಿಭಟನೆ, ಕ್ರಾಂತಿಗಳನ್ನು ಕುರಿತಾಗಿ

೪) ಜಾಗೃತವಾದ ಆಧುನಿಕ ಮೌಲ್ಯಗಳನ್ನು ಕುರಿತಾಗಿ

೫) ಕೈಗಾರಿಕಾ ಕ್ರಾಂತಿ, ಭಾರತದ ಸ್ವಾತಂತ್ರ್ಯದ ಹೋರಾಟ ಕುರಿತಾಗಿ

೬) ಆಧುನಿಕ ಸಮಾಜದ ಆಗು ಹೋಗುಗಗಳನ್ನು ಕುರಿತಾಗಿ

(ಒಟ್ಟಾರೆ ಆಧುನಿಕ ಪ್ರವೃತ್ತಿ, ಮನೋಭಾವ ಕುರಿತಾಗಿ)

ಇಂದಿನ ಮಕ್ಕಳಿಗೆ ಹಿಂದಿನಂತೆ ಉಪದೇಶಪರ, ನೀತಿ, ಕಟ್ಟಳೆಗಳು, ಸಂಪ್ರದಾಯಗಳನ್ನು ಕುರಿತು ಓದುವ, ತಿಳಿಯುವ ಮನಸ್ಸಿಲ್ಲ. ಮಕ್ಕಳ ಸಹಜ ನಡೆ ನುಡಿಗಳ ಸ್ವಾಭಾವಿಕತೆಯುಳ್ಳ ಸಾಹಿತ್ಯವು ಬೇಕಿದೆ. ಭವಿಷ್ಯದ ಅಥವಾ ಭೂತಕಾಲದ ಕತೆಗಳಿಗಿಂತ ವರ್ತಮಾನದ ಘಟನೆಗಳು ಆಧಾರಿತ ಸಾಹಿತ್ಯ ಇಷ್ಟವಾಗುತ್ತವೆ. ನಗರದ ಯಾಂತ್ರಿಕ, ಕೃತ್ರಿಮ ನಾಗರೀಕ ಜೀವನಕ್ಕಿಂತ ಕಾಡು, ಗ್ರಾಮೀಣ ಪರಿಸರ, ಪಕ್ಷಿಪ್ರಾಣಿಗಳ ಸಹಜ ವಾತಾವರಣದ ಹಿನ್ನೆಲೆ ಇಷ್ಟವಾಗುತ್ತವೆ.

ಇಂದು ಪುಸ್ತಕೀಯ ಭಾಷೆಗಿಂತ ಆಡುಮಾತಿನಲ್ಲಿ ಕತೆ ಕಾವ್ಯ ಕಾದಂಬರಿಗಳು ರಚಿತವಾಗಿವೆ. ಸಂಭಾಷಣೆಗಳೂ ಸಹ ಅಲ್ಲಲ್ಲಿ ಇವೆ. ಸರಳ ಭಾಷೆ, ಹೊಸ ಹೊಸ ಶಬ್ದ- ಪ್ರಯೋಗದ ಹೊಸ ವಾಕ್ಯ ರಚನೆಗಳಲ್ಲಿ ಸಾಹಿತ್ಯವಿಂದು ಅರಳಿಕೊಂಡಿದೆ. ಹಾಡಿಕೊಳ್ಳುವ ಪದ್ಯಕ್ಕಿಂತ ಓದಿಕೊಳ್ಳುವ ಪದ್ಯಗಳನ್ನು ಮಕ್ಕಳ ಕವಿಗಳು ಬರೆಯುತ್ತಿದ್ದಾರೆ. ನಾಟಕಗಳ ರಂಗ ಪ್ರಯೋಗಗಳಲ್ಲಿ ಭಾಗವಹಿಸಲು ಅನುಕೂಲವಾಗುವಂಥ ನಾಟಕಗಳ ರಚನೆ ಇಂದಿನ ಲೇಖಕರಿಂದ ಆಗುತ್ತಿದೆ. ಇಂದಿನ ಮಕ್ಕಳ ಸಾಹಿತ್ಯದ ರಚನೆ ಹೀಗೆ ಮಕ್ಕಳ ಆಧುನಿಕ ಬೇಡಿಕೆಗಳಿಗನುಸಾರವಾಗಿ ರಚನೆಗೊಂಡಿವೆ. ಉದಾಹರಣೆಗೆ ಇಂದಿನ ಪ್ರಮುಖ ಮಕ್ಕಳ ಸಾಹಿತಿಗಳ ಸಾಹಿತ್ಯವನ್ನೊದಿದಾಗ ಕಂಡು ಬರುವ ಮುಖ್ಯ ಲಕ್ಷಣಗಳನ್ನು ಹೀಗೆ ನೆನಪಿಸಿಕೊಳ್ಳಬಹುದು. ಡಾ.

ಎಚ್.ಎಸ್.ವೆಂಕಟೇಶಮೂರ್ತಿ ಯವರ ಸಾಹಿತ್ಯದಲ್ಲಿ ಮಕ್ಕಳ ಮುಗ್ಧತೆ, ಬೆರಗು, ಸರಳತೆಯಂಥ ಆಕರ್ಷಕ ಗುಣಗಳ ಅಭಿವ್ಯಕ್ತಿ ಇದೆ. ಇಲ್ಲಿ ಕಿನ್ನರ, ಗಂಧರ್ವಲೋಕದ ಸೊಬಗಿದೆ. ಡಾ. ಸುಮತೀಂದ್ರ ನಾಡಿಗರ ಮಕ್ಕಳ ಸಾಹಿತ್ಯದಲ್ಲಿ ತದ್ವಿರುದ್ಧವಾಗಿ ಕಲ್ಪನೆಗಿಂತ ವಾಸ್ತವಿಕತೆಗೆ ಹೆಚ್ಚು ಪ್ರಾಶಸ್ತ್ರವಿದೆ. ಶ್ರೀನಿವಾಸ ಉಡುಪರ ಸಾಹಿತ್ಯದಲ್ಲಿ ಹಾಸ್ಯಕ್ಕೆ ಪ್ರಾಧಾನ್ಯತೆ ಇದೆ. ಮನರಂಜನೆ, ಈ ಲೇಖಕರ ಮುಖ್ಯ ಗುರಿ ಹಾಸ್ಯವೆಂದು ಕಾಣುತ್ತದೆ.

ಡಾ. ಬೆಳಗೆರೆ ಕೃಷ್ಣಮೂರ್ತಿಯವರ ಕವಿತೆಗಳು ಪ್ರಾಸಬದ್ಧವಾಗಿ ಹಾಡಲು ಬರುವಂಥವು. ಡಾ. ಆನಂದ ಪಾಟೀಲರ ಮಕ್ಕಳ ಸಾಹಿತ್ಯ ತೀರ ಭಿನ್ನವೂ, ವಿಶಿಷ್ಟವೂ ಆಗಿದೆ. ಇವರು ಪ್ರಯೋಗಶೀಲರಾದ್ದರಿಂದ ಕಥೆ, ನಿರೂಪಣೆ ಭಾಷಾ ಪ್ರಯೋಗ ಎಲ್ಲ



ದೃಷ್ಟಿಯಿಂದಲೂ ಮಕ್ಕಳ ಆಧುನಿಕತೆಯ ಬೇಡಿಕೆಯಾಧಾರದ ಮೇಲೆ ರಚಿತವಾದವುಗಳು. ಇವರ ತ್ರೈಮಾಸಿಕ ತಂತ್ರಾಂಶದಲ್ಲಿರುವ 'ಸಂಧ್ಯಾ' ಎಂಬುದು. ಕಳೆದ ಮೂರು ದಶಕಗಳಿಂದ ಇದು ನಡೆಯುತ್ತಿದ್ದು ಜನಪ್ರಿಯತೆ ಗಳಿಸಿದೆ. ಶ್ರೀ ಟಿ.ಎಸ್.ನಾಗರಾಜಶೆಟ್ಟಿ ಅವರು ಸುದೀರ್ಘ ಕಾಲದಿಂದ ಮಕ್ಕಳ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡವರು.

ಇಂದಿನ ನಮ್ಮ ಮಕ್ಕಳಿಗಾಗಿ ಮತ್ತು ಮಕ್ಕಳ ಸಾಹಿತ್ಯಕ್ಕಾಗಿ ಆಗಬೇಕಾದ ಕೆಲಸಗಳ ಪಟ್ಟಿಯನ್ನು ಹೀಗೆ ಮಾಡಬಹುದು

ಅ) ವಿವಿಧ ವಯೋಮಾನದ ಅವಧಿಗನುಗುಣವಾಗಿ ಶಬ್ದಕೋಶಗಳ ರಚನೆ ಮತ್ತು ಮುದ್ರಣ.

ಆ) ಮಕ್ಕಳ ಸಮಗ್ರ ಸಾಹಿತ್ಯ ಸಂಪುಟಗಳ ರಚನೆ ಮತ್ತು ಮುದ್ರಣ.

ಇ) ವಯೋಮಾನಕ್ಕನುಗುಣವಾಗಿ ವೈಜ್ಞಾನಿಕ ಬರಹಗಳ ರಚನೆ ಮತ್ತು ಸಂಪುಟಗಳ ಮುದ್ರಣ.

ಈ) ಮಕ್ಕಳ ಪುಸ್ತಕದ ಚಿತ್ರಗಾರರಿಗೆ ಕಾರ್ಯಾಗಾರಗಳು

ಉ) ಮಕ್ಕಳ ಸಾಹಿತ್ಯ ಶಿಕ್ಷಕರಿಗಾಗಿ ಕಾರ್ಯಾಗಾರಗಳು

ಊ) ವಾರದ ವೇಳಾಪಟ್ಟಿಯಲ್ಲಿ ವಾರಕ್ಕೆ ಎರಡು ಪಿರೀಡು ಗ್ರಂಥಾಲಯದಲ್ಲಿ ಓದಲಿಕ್ಕೆ ಮೀಸಲು ಇಡುವುದು.

ಎ) ಪ್ರತಿ ತಿಂಗಳೂ ಶಿಕ್ಷಕ - ಪಾಲಕ - ನಾಯಕರೊಂದಿಗಿನ ಚರ್ಚಾ ಗೋಷ್ಠಿಗಳನ್ನು ಏರ್ಪಡಿಸುವುದು.

ಏ) ಟ್ಯೂಶನ್ ನಿಷೇಧಿಸಿ ಪಾಲಕರಿಗೆ ಹೋಮವರ್ಕ ಮಾಡಿಸುವ ಪದ್ಧತಿಯ ಕಲಿಕೆ.

ಐ) ಪ್ರತಿದಿನದ ಕೊನೆಯ ತಾಸಿನಲ್ಲಿ ಆಟಗಳನ್ನು ಆಡಿಸುವುದು.

ಒ) ಜಿಲ್ಲಾ, ತಾಲೂಕಾ ಸ್ಥಳಗಳಲ್ಲಿ ಬಾಲವಿಕಾಸ ಅಕಾಡೆಮಿಯ ಕಟ್ಟಡ, ಸಿಬ್ಬಂದಿ ಮತ್ತು ಪ್ರತಿ ರವಿವಾರ ಬೆಳಗಿನ ೧೦ ರಿಂದ ೧೨ - ಎರಡು ಗಂಟೆಗಳಿಗಾಗಿ ಹಾಡು, ನಾಟಕ, ಕನ್ನಡದ ಓದು, ಇತ್ಯಾದಿಗಳ ಕಾರ್ಯಕ್ರಮಗಳು.

ಕೊನೆಯ ವಿಷಯವಾದರೂ ಅತಿ ಮೌಲಿಕವಾದ ವಿಷಯ. ೬ ರಿಂದ ೧೪ರವರೆಗೆ ಕನ್ನಡ ಮಾಧ್ಯಮದಲ್ಲಿಯ ಕಲಿಕೆ ಆಗುವುದಕ್ಕಾಗಿ ಕನ್ನಡಿಗರ ಹೋರಾಟ ನಿರಂತರವಾಗಿ ನಡೆಯಬೇಕಾದದ್ದು ತಡವಾದರೂ ಅಪೇಕ್ಷಣೀಯ.

ಪ್ರತಿ ವಿಷಯದ ಕಲಿಕೆಗಾಗಿ ಪ್ರತಿ ೩ ತಿಂಗಳಿಗೊಮ್ಮೆ ರವಿವಾರದಂದು ಬೆಳಗಿನಿಂದ ಸಂಜೆಯವರೆಗೂ ವಿಷಯ ತಜ್ಞರಿಂದ ಶಿಕ್ಷಕರಿಗೆ ಕಲಿಕೆ.

ಅಭ್ಯಾಸದಲ್ಲಿ ಹಿಂದೆ ಉಳಿದ ಮಕ್ಕಳಿಗಾಗಿ ವಾರದಲ್ಲಿ ಎರಡು ಅವಧಿಯ ಕಲಿಕೆ.



ಶಾಲೆಯ ಕಟ್ಟಡದ ಭದ್ರತೆಯ ಸರ್ಟಿಫಿಕೇಟ ಮತ್ತು ರಜೆಗಳಲ್ಲಿ ಶಾಲೆಯ ಸ್ವಚ್ಛತೆ ಮತ್ತು ಸುಣ್ಣ ಬಣ್ಣಗಳಿಗಾಗಿ ಕಾಂಟ್ರಾಕ್ಟ್ ಕೊಡುವುದು ಅಗತ್ಯವಿದೆ.

ಪ್ರತಿಯೊಂದು ಶಾಲೆಗೆ ಆಟದ ಮೈದಾನ, ಹೂವಿನ ತೋಟ, ಮಧ್ಯಾಹ್ನದ ಊಟಕ್ಕಾಗಿ ಪ್ರತ್ಯೇಕ ಹಾಲ್, ಟೇಬಲ್ಲು, ಖುರ್ಚಿ ಮತ್ತು ಕುಡಿಯುವ ನೀರಿಗಾಗಿ ಮಕ್ಕಳ ಅನುಪಾತದಲ್ಲಿ ವಾಟರಪ್ಯೂರಿಫೈ ಹಾಗೂ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗಾಗಿ ಬೇರೆ ಬೇರೆ ಸ್ವಚ್ಛವಾದ ಶೌಚಾಲಯಗಳು.

ನಮ್ಮ ನಾಡಿಗೆ, ದೇಶಕ್ಕೆ ಒಂದು ಉತ್ತಮ ಭವಿಷ್ಯ ಬೇಕಾಗಿದೆ. ಮಕ್ಕಳ ಶಿಕ್ಷಣ, ಅವರಿಗಾಗಿ ಆಟ, ಊಟ, ವ್ಯಾಯಾಮಗಳತ್ತ ಎಲ್ಲರೂ ಗರಿಷ್ಠ ಗಮನ ಹರಿಸುವುದು ಇಂದಿನ ಪಾಲಕ, ಶಿಕ್ಷಕ, ನಾಯಕ, ಸಮಾಜರಕ್ಷಕರ ಜವಾಬ್ದಾರಿಯಾಗಿದೆ. ಈ ದಿಸೆಯಲ್ಲಿ ಎಲ್ಲರೂ ಕ್ರಿಯಾಶೀಲರಾಗಬೇಕಾದ ತುರ್ತು ಸಹ ಇದೆ.

# ತತ್ವಪದ - ಸೂಫಿ-ಬೌದ್ಧ ಸಾಹಿತ್ಯ

## ತತ್ವಪದ ಸಾಹಿತ್ಯ

**ಮಲ್ಲಿಕಾರ್ಜುನ ಕಡಕೋಳ**

ಬಾಯಿಲೊಂದಾಡ್ತೀರಿ!

ಮನಸಿನ್ಯಾಗೊಂದ ಮಾಡ್ತೀರಿ।

ಬರೆದಿಟ್ಟದ್ದೋದಿಕೊಂಡು|

ಭ್ರಾಂತಿಗೆಟ್ಟು ಹೋಗ್ತಿರಿ ॥೧॥

ಶೀಲವಂತರಂತೀರಿ

ಸುಳ್ಳೇ ಶೀಲ ಮಾಡ್ತೀರಿ।

ಸಂತೆಯೊಳಗಿನ ಲಿಂಗಕಟ್ಟಿಕೊಂಡು |

ಸತ್ತೇನಾಶ ಆಗಿಹೋಗ್ತಿರಿ ||೨||

ಮುಸಲ್ಮಾನತಂತೀರಿ।

ತುರ್ತು ಸುಂತಿ ಮಾಡ್ತೀರಿ!

ಉಸಲ ಬಿಟ್ಟು ಮಾತೇ ಕೊಟ್ಟು

ಬಿಸ್ಮಿಲ್ಲಾ ಅಂತೀರಿ ॥೩॥

ಬ್ರಾಹ್ಮಣರಂತ ಹೇಳ್ತಿರಿ |

ನೀರಾಗ ಮುಳಮುಳುಗೇಳೀರಿ

ಪಾಪದಿಂದ ಸುಟಗೊಂಡು|

ದೀಪಾ ಬಡಕೊಂಡು ಹೋಗ್ತಿರಿ॥೪॥

ಸಾಧುರಂತ ಹೇಳೀರಿ।

ಸೋಹಂ ಭಜನಿ ಮಾಡ್ತೀನಿ॥

ಅಡ್ಡ ದುಡ್ಡಿಗೆ ಆಸೆ ಮಾಡಿ ।

ದಡ್ಡರಾಗಿ ಹೋಗ್ತಿರಿ ॥೫॥

ಪಟ್ಟದ ಚರಮೂರ್ತಿ ಅಂತೀರಿ!

ಪರಮಾತ್ಮನ ನೆನಿತೀರಿ ॥

ಪರನಾರಿ ಸ್ನೇಹಮಾಡಿ।

ಗುಡ್ಡದ ಮಹಾಂತಗ ಹಾಕ್ತಿರಿ ॥೬॥



ಇದು ಕಡಕೋಳ ಮಡಿವಾಳಪ್ಪನವರ ತತ್ವಪದ, ಜಾತಿ, ಮತ, ಧರ್ಮ ಮತ್ತು ಅವುಗಳ ಆಚರಣೆಗೆ ವಸ್ತುನಿಷ್ಠ ನಿರಾಕರಣೆ ತೋರುವ ಪ್ರತಿಭಟನಾ ಕಾವ್ಯದ ಸಿಡಿಮದ್ದಿನ ನುಡಿಗಟ್ಟುಗಳಿವು.

ಯಾವುದನ್ನು ಒಂದೆರಡು ಶತಮಾನಗಳ ಕಾಲ ಕನ್ನಡ ಸಾಹಿತ್ಯ ಚರಿತ್ರೆಕಾರರು ಕತ್ತಲೆ ಯುಗಗಳೆಂದು ಕರೆದರೋ ಅಂತಹ ಕತ್ತಲೆ ಯುಗಗಳ ಬಯಲಲ್ಲೇ ಹುಟ್ಟಿಕೊಂಡ ಮಹಾಬೆಳಕಿನ ವಜ್ರ ಜಲಪಾತ ಧಾರೆಗಳೇ ತತ್ವಪದಗಳು, ಅಂತೆಯೇ ಇವತ್ತಿಗೂ ಅಮವಾಸ್ಯೆಯ ಕತ್ತಲು, ಹೆಣದ ಸಾನಿಧ್ಯ, ಊರಾಚೆಯ ಗವಿ, ಗುಡಿ, ಗುಂಡಾರ, ಗುಡಿಸಲು, ಗುಂಪಾ, ಕೊಂಪೆಗಳಲ್ಲಿ ಅನುರಣಿಸುವ ಹಾಡುಗಬ್ಬಗಳೇ ತತ್ವಪದಗಳು. ಅವು ಏಕಾಂತ ಮತ್ತು ಲೋಕಾಂತಗಳೆರಡಲ್ಲೂ ಪ್ರಸ್ತುತಗೊಳ್ಳುವ ಗಾಯನ ಪ್ರಸ್ಥಾನಗಳು. ಹೀಗೆ ಕತ್ತಲೆ ಯುಗದಲ್ಲಿ ಜನ್ಮ ತಾಳಿದ ತತ್ವಪದ ಸಾಹಿತ್ಯಕ್ಕು ಮತ್ತು ಮಡಿವಂತ ಮನಸುಗಳು ಅಶುಭ, ಅಮಂಗಳವೆಂದು ಭಾವಿಸಲಾಗುವ ಹೆಣ, ಸಾವು, ಅಮವಾಸ್ಯೆಯ ಕತ್ತಲೆಗೂ ಅವಿನಾಭಾವ ಸಂಬಂಧ. ಇವತ್ತಿಗೂ ತತ್ವಪದಗಳು ಯಥೇಚ್ಛವಾಗಿ ಬದುಕಿರುವ, ಕೇಳಿಬರುವ ಸಂದರ್ಭೋಚಿತ ಸಮಯ ಮತ್ತು ಜಾಗಗಳವು, ಗುರುಪುತ್ರ, ಪುತ್ರಿಯರು ಇಲ್ಲವೇ ಗುತು- ಶಿಶುಮಕ್ಕಳು ತಮ್ಮ ಅಂತರಂಗದ ಸಮಕ್ಷಮದಲ್ಲಿ ತನ್ನ ತಾನರಿವ, ತಾನೇ ತಾನಾಗಿ, ತಾನೆರಡೊಂದಾಗಿ ಜನ್ಮ ತಾಳುವ ಗದ್ಯಗೀತೆಗಳೇ ತತ್ವಪದ ಸಾಹಿತ್ಯ, ನಿಗಿನಿಗಿ ಕೆಂಡದ ಧುನಿಯ ಸುತ್ತಲೂ ದುಂಡಾಕಾರದಲ್ಲಿ ಕುಂತ ಸಾಧುಗಳು,

ಗುರು ಶಿಸುಮಕ್ಕಳು ಭಂಗಿ ಸೇವಿಸುತ್ತಾ ಧುನಿಯ ಅಗ್ನಿಕುಂಡಕ್ಕೆ ಸರಾಯಿ ಸುರಿಯುತ್ತಾ ಏಕತಾರಿ, ಚಿನ್ನಿ, ತಾಳ, ಚಳ್ಳಮ, ದಮಡಿ ನುಡಿಸುತ್ತಾ ತತ್ವಪದ ಹಾಡುವುದನ್ನು ಕನ್ನಡನಾಡಿನ ತುಂಬೆಲ್ಲ ಕಣ್ಣುಂಬಿಸಿಕೊಳ್ಳಬಹುದಾದ ಜನಸಂಸ್ಕೃತಿ,

ಅಷ್ಟು ಮಾತ್ರವಲ್ಲದೇ ಅಲ್ಲಿ ಕೆಂಡದ ಧುನಿಯ ಸುತ್ತಲೂ ತತ್ವಪದಗಳ ಕುರಿತಾಗಿ ವಿಕೃತ ಚರ್ಚೆಗಳು ಜರುಗುತ್ತವೆ. ಅನುಭವ ಮಂಟಪ ಮಾದರಿಯ ಅನುಭಾವ ಸಂವಾದ ಅದಾಗಿರುತ್ತದೆ. ಅವರು ಸೆರೆ, ಭಂಗಿ ಸೇವಿಸುವುದು ಅಲ್ಲಿ ನಗಣ್ಯ. ನಶೆ ಅವರ ಪಾಲಿಗದು ಒಂದು ಬಗೆಯ ಜ್ಞಾನ. ಅದು ಉತ್ಕಟೋನ್ಮಾದ ಜ್ಞಾನ ಎಂತಲೂ ಕರೆಯಬಹುದು. ಹೀಗಾಗಿ ಅದು ಧುನಿಯ ನಿಗಿನಿಗಿ ಕೆಂಡದ ಬೆಳಕಿನಲ್ಲಿ ಜರುಗುವ ತಾತ್ವಿಕತೆಯ ಸೂಕ್ಷ್ಮಾನುಸಂಧಾನ, ತತ್ವಪದ ಸಾಹಿತ್ಯ ಮತ್ತು ಸಾಮಾಜಿಕ ಚಿಂತನ-ಮಂಥನ ಅದಾಗಿರುತ್ತದೆ. ದಟ್ಟವಲ್ಲದಿದ್ದರೂ ಈ ಸಾಧುರ ಮ್ಯಾಳವು ಅನುಭವ ಮಂಟಪದ ಪುಟ್ಟ ನೆನಪು ಮೂಡಿಸುವುದನ್ನು, ಅದರ ಸಮೀಕರಣ, ನಾದ ಕಂಪನಗಳನ್ನು ಖಂಡಿತ ಅಲ್ಲಗಳೆಯಲಾಗದು. ಕಲ್ಯಾಣ ಕರ್ನಾಟಕದಲ್ಲಿ ಇಂತಹ ಸಾಧುರ ಮೇಳಗಳು ಹೆಚ್ಚಾಗಿ ಕಂಡುಬರುತ್ತವೆ. ಹಾಗೆಯೇ ಬಯಲುಸೀಮೆಯ ಬೇರೆ, ಬೇರೆ ಭಾಗಗಳಲ್ಲಿ ಬೇರೆ ಬೇರೆ ಹೆಸರಿನ ಸಂಪ್ರದಾಯಗಳಿರುವುದನ್ನು ಗುರುತಿಸಬಹುದು. ಆದರೆ ಅವು ಸ್ಥಳೀಯ ಹೆಸರಿನೊಂದಿಗೆ ಎಲ್ಲಕಡೆಗೂ ಗುರು ಮಾರ್ಗದ ಹೆಜ್ಜೆ ಗುರುತುಗಳದ್ದೇ ಹೆಗ್ಗಳಿಕೆ. ಅದೊಂದು ಸಾವಯವ ಸಂಬಂಧ.

**ಅನಾಹತ ನಾದದ ಕಾವ್ಯಮಾರ್ಗ**

ತತ್ವಪದಕಾರರು ತಾವು ದಿನನಿತ್ಯದ ಬದುಕಲ್ಲಿ ಕಂಡುಂಡ ಹತ್ತುಹಲವು ನೋವು

ನಲಿವು, ಸಾಮಾಜಿಕ ಅನಿಷ್ಟ. ಮನುಷ್ಯ ವಿರೋಧಿ ನಿಲುವುಗಳನ್ನು, ಪ್ರಭುತ್ವದ ಅನಾಚಾರಗಳನ್ನು ಯಾವ ಭಿಡೆ, ಮುಲಾಜು, ಮುರವತ್ತುಗಳಿಗೆ ಎಡೆ ಮಾಡಿಕೊಡದೆ ಪದಗಳ ಮೂಲಕ ಜಾಡಿಸಿ, ಹಾಡಿ ಪ್ರತಿಭಟಿಸಿದ್ದಾರೆ. ನಿರಕ್ಷರಿಗಳ ಈ ಸಾಕ್ಷರಮಂತ್ರಗಳು ಇತ್ತೀಚೆಗೆ ಗ್ರಂಥಗಳ ರೂಪದಲ್ಲಿ ಪ್ರಕಟಗೊಂಡಿವೆ. ತತ್ವಪದಗಳನ್ನು ಓದಿ ಅರಿಯುವ ಬದಲು ಹಾಡಿ ಇಲ್ಲವೇ ಹಾಡಿದ್ದನ್ನು ಆಲಿಸಿ ಅರಿಯುವುದೇ ಸೂಕ್ತ. ಹಾಗಾದಾಗಲೇ ಈ ಪದಗಳು ಮನಸಿಗೆ ಮುಟ್ಟಿ ಹಎಚ್ಚು ಅರ್ಥ ಆಗಬಲ್ಲವು. ನೂರಾರು ವರ್ಷಗಳ ಹಇಂದೆ, ಅಂದು ಯಾರೂ ಈ ಸಾಹಿತ್ಯವನ್ನು ಲೆಕ್ಕಣಿಕೆ ಹಿಡಿದು ಹಾಳೆಗಳ ಮೇಲೆ ಬರೆಯಲಿಲ್ಲ. ಅದು ಗುರು- ಶಿಶುಮಕ್ಕಳ ಮುಖಾಬಿಲೆಯಲ್ಲಿ ಜರುಗುವ ದೇಹ ಮತ್ತು ಧ್ವನಿಗಳ ಅನುಸಂಧಾನ. ಆಯಾಕಾಲದ ಸಾಮಾಜಿಕ ಘಟನೆಗಳ ಸಂದರ್ಭಗಳಲ್ಲಿ ಹಾಡುಗಳಾಗಿ ಹುಟ್ಟಿಕೊಂಡ ತತ್ವಪದವು ಪ್ರತಿಭಟನೆಯ ಕಾವ್ಯ. ಹಾಗಂತ ಪ್ರತಿಭಟನೆಯ ಪಂಥಕ್ಕಷ್ಟೇ ಅವನ್ನು ಸೀಮಿತಗೊಳಿಸಬಾರದು.

ಎಡ ಮತ್ತು ಬಲ ಪಂಥಗಳೆರಡರ ಅತಿರೇಕಗಳನ್ನು ಮೀರಿದ, ಎಂಥದೇ ಕಾಲಕ್ಕೂ ಅಂತಃಕರಣದ ಅಂತಃಪ್ರೋತವನ್ನು ಕಳಕೊಳ್ಳದ ಅನುಸಂಧಾನ ಮಾರ್ಗವೇ ತತ್ವಪದ ಸಾಹಿತ್ಯ ಕೆಲವು ಮಂದಿ ತತ್ವಪದ ಸಾಹಿತ್ಯ ಮೀಮಾಂಸಕರು ಅದನ್ನು 'ಮಧ್ಯಮ' ಮಾರ್ಗವೆಂತಲೂ, 'ವಿಹಂಗ' ಮಾರ್ಗವೆಂತಲೂ ಕರೆಯುತ್ತಾರೆ. ಇಷ್ಟು ಮಾತ್ರ ಖರೇ: “ಅಲ್ಲಿ ಯಾವುದೂ, ಯಾರೋ ಮುಖ್ಯ-ಅಮುಖ್ಯರೆಂಬುದೇ ಇಲ್ಲ. ಏನೂ ಇಲ್ಲದ ಮತ್ತು ಎಲ್ಲ ಇರುವ, ಇದ್ದುದ್ದೆಲ್ಲವ ಮತ್ತು ಇಲ್ಲದ್ದೆಲ್ಲವ, ಇದ್ದು ಮತ್ತು ಇಲ್ಲದ್ದೆನ್ನುವ, ಇಲ್ಲದ್ದು ಮತ್ತು ಇದ್ದದ್ದೆನ್ನುವ, ಇದ್ದದ್ದು ಮತ್ತು ಇಲ್ಲದ್ದು ಎಲ್ಲ ಒಂದೆನ್ನುವ... ಹೌದು ಅಲ್ಲೆನ್ನುವ, ಮತ್ತು ಅಲ್ಲ ಹೌದೆನ್ನುವ ಹೌದು ಅಲ್ಲ ಎಲ್ಲ ಬಲ್ಲ ಮಹಾತ್ಮರ ಅನುಸಂಧಾನದ ನಿರ್ಗುಣ ಗುರುಮಾರ್ಗವೇ ತತ್ವಪದ. ಅದು ಯಾವ ಏಟಿಗೂ ಸಿಗದ ಅನಾಹತ ನಾದದ ಕಾವ್ಯಮಾರ್ಗ.

ಹೀಗೆ ಗುರುಮಾರ್ಗದಲ್ಲಿ ಸಾಗಿಬಂದ ತತ್ವಪದಕಾರರು ತಮ್ಮ ಗುರುವಿನ ಮೇಲಿನ ಪ್ರೀತಿಯ ದ್ಯೋತಕವಾಗಿ ಗುರುವಿನ ಹೆಸರಿನ ಅಂಕಿತನಾಮಗಳನ್ನು ಪದದ ಕೊನೆಯಲ್ಲಿ ಸೇರಿಸಿ ಹಾಡುತ್ತಾರೆ. ಕೆಲವರು ತಆವು ವಾಸವಾಗಿದ್ದ ನೆಲ, ಊರು  ದೇಶದೊಳಧಿಕವಾದುದೆಂಬಂತೆ, ಅಂತಹ ವಾಸವುಳ್ಳ ಊರೆಂದು ಹಾಡುತ್ತಾರೆ. ಇಲ್ಲವೇ ಸ್ಥಳೀಯ ದೈವದಹೆಸರು ಕೊಂಡಾಡುವ ಅಂಕಿತಗಳನ್ನು ಸೇರಿಸುವುದು ವಾಡಿಕೆ. ಕೆಲವೊಮ್ಮೆ ಓರ್ವ ತತ್ವಪದಕಾರನ ಪದವನ್ನು ಬೇರೊಬ್ಬ ತತ್ವಮೊದಕಾರನ ಹೆಸರಿಗೆ ಸೇರಿಸಿ ಹಾಡುತ್ತಾರೆ. ಅದು ಭಜನೆ ಗಾಯಕರು ಮಾಡುವ ಅಚಾತುರ್ಯವೇ ಹೊರತು ಯಾವುದೇ ತತ್ವಪದಕಾರರು ಹಾಗೆ ಮಾಡಲಾರರು.

**ಸಿದ್ಧಪತ್ರಿ ಮತ್ತು ಬಿಲ್ವಪತ್ರೆಗಳು**

ಇವೆರಡು ತತ್ವಪದಗಳ ಹಾಡುಗಾರಿಕೆಯ ಪ್ರಮುಖ ಅಂಶಗಳು. ಅವರು ತತ್ವಮೊದ ಹಾಡಿಗೆ ಮುನ್ನ ಮತ್ತು ಹಾಡುತ್ತಲೇ ಸೇವಿಸುವ ಗಾಂಜಾದ ಹೆಸರೇ ಸಿದ್ದಪತ್ರಿ, ಗಾಂಜಾ ತಂಬಾಕು ಸಾಧಕರ ಪರಿಭಾಷೆಯಲ್ಲಿ ಸಿದ್ಧಪತ್ರಿ, ಸಾರಾಯಿ ಅವರ ಪರಿಭಾಷೆಯಲ್ಲಿ ಜ್ಯೋತಿ,

ಪರಂಜ್ಯೋತಿ, ಪರಮಶಂಕರಿಯಂತೆ.ಇನ್ನೇನು ಹಾಡುಗಾರಿಕೆ ಮುಗೀತು ಮಂಗಳಾರತಿ ಮಾಡಿ ಹಾಕುವುದೇ ಬಿಲ್ವಪತ್ರೆ, ಹಾಡುವ ಪ್ರಕ್ರಿಯೆಗೆ ಅದು ಅಂತ್ಯ ಎಂದುಕೊಂಡರೆ ಗಣಸ್ತುತಿಯೊಂದಿಗೆ ಮತ್ತೆ ಆರಂಭವೇ ಆಗುತ್ತದೆ. ತತ್ವಪದಕಾರರ ದೃಷ್ಟಿಯಲ್ಲಿ ಅದು ಅದಿ ಅಂತ್ಯವಿಲ್ಲದ ಜ್ಞಾನುಸಿಂಧು ಸಾಹಿತ್ಯ ಪ್ರಕಾರ, ಬರೀ ತತ್ವಪದಗಳಲ್ಲ ಅವು ತತ್ವಜ್ಞಾನ ಪದಗಳೂ ಹೌದು. ಕೈವಲ್ಯ, ಅನುಭಾವ, ಸ್ವರವಚನಗಳ ಸ್ವರೂಪದಲ್ಲಿ ಕನ್ನಡದ ವಿವೇಕ, ಅಸ್ಮಿತೆ, ಸಾಹಿತ್ಯದ ಶ್ರೀಮಂತಿಕೆಯನ್ನು ಎತ್ತಿಹಿಡಿದ ಅನನ್ಯ ಸಾಂಸ್ಕೃತಿಕ ಪರಂಪರೆಯೇ ತತ್ವಪದ ಸಾಹಿತ್ಯ ಈಗಲೂ ಅದು ಮೌಖಿಕ ಪರಂಪರೆಯಾಗಿ ಹೆಚ್ಚು ಪ್ರಚಲಿತ. ತತ್ವಪದಗಳು ಆಡುವ, ನುಡಿವ ಮಾತುಗಳಲ್ಲ. ಹಾಡುವ ಕಾವ್ಯಗಳು, ಅದು ಬಹುತ್ವ ಧ್ವನಿಸುವ ಬಹುಪಂಥೀಯ ಅನುಸಂಧಾನ. ಹಲವು ಮೀಮಾಂಸಗಳ ಮಹಾ ಮೊತ್ತವೇ ತತ್ತಪದ ಸಾಹಿತ್ಯ ಜತೆಗೆ ಹೇಳಲೇಬೇಕಾದ ಮತ್ತೊಂದು ಸತ್ಯ ಏನೆಂದರೆ ತತ್ವಪದ ಎಂಬುದು ಏಕಕಾಲಕ್ಕೆ ಸೃಜನ ಮತ್ತು ವಿಸರ್ಜನ ಮೀಮಾಂಸೆಯೂ ಹೌದು. ತನ್ನ ತಾನು ತಿಳಿಯುವ, ತನ್ನರಿವಿನ ಸಾಕ್ಷಾತ್ಕಾರ ತಾನೇ ಹುಡುಕಿಕೊಳ್ಳುವ ದಿಕ್ಸೂಚಿ ಕಾವ್ಯ

ಅದಕ್ಕೆಂದೇ ತತ್ವಪದಕಾರ ಹೇಳುವುದು ಹೀಗೆ...

"ತನ್ನ ತಾನು ತಿಳಿದ ಮೇಲೆ

ಇನ್ನೇನಿನ್ನೇನು

ತನ್ನಂತೆ ಸರ್ವರ ಜೀವ

ಮನ್ನಿಸಿ ಮೂಕಾದ ಮೇಲೆ

ಇನ್ನೇನಿನ್ನೇನೋ" ‖೧‖

ವಚನ ಸಾಹಿತ್ಯ ಆಂದೋಲನದ ಪ್ರಭಾವ, ಅದರಲ್ಲೂ ಅಲ್ಲಮ ಪ್ರಭುವಿನ ಪ್ರೇರಣೆ ಮತ್ತು ಪ್ರಭಾವದ ನೆರಳು ತತ್ವಪದಕಾರರ ಮೇಲೆ ಹಾಳತವಾಗಿ ದಟ್ಟೈಸಿದೆ.

ಹಾಗೆ ನೋಡಿದರೆ ಜಾಗತಿಕ ನೆಲೆಗಳಲ್ಲಿ ಗುರುತಿಸಲೇಬಹುದಾದಂತಹ ವಚನ ಸಾಹಿತ್ಯ ಚಳವಳಿಯನ್ನೇ ಎಂಟುನೂರು ವರ್ಷಗಳ ಕಾಳ ತಡವಾಗಿ ಗುರುತಿಸಿದ ನಮ್ಮ ಸಾಹಿತ್ಯ ಚರಿತ್ರೆಕಾರರು ತತ್ವಪದಗಳನ್ನು, ತತ್ವಪದಕಾರರನ್ನು ಪ್ರಜ್ಞಾಪೂರ್ವಕವಾಗಿಯೋ, ಇಲ್ಲವೆ ಅಪ್ರಜ್ಞಾಪೂರ್ವಕವಾಗಿಯೋ ಅಜ್ಞಾತದಲ್ಲಿರಿಸಿದರು. "ಸುಶಿಕ್ಷಿತರ ವೀಣೆಗಳು, ತತ್ವಪದಗಳ ಕರಿ ಕುಂಬಳಕಾಯಿಯ ಏಕತಾರಿಗಳನ್ನು ಹೊರಗಿಟ್ಟವು" ಎಂಬ ಅಲ್ಲಗಳೆಯಲಾಗದ ಮಾತಿದೆ. ಹೀಗಾಗಿ ತತ್ವಪದಕಾರರನ್ನು ಅಜ್ಞಾತಾವಧೂತರು, ಅನಾಮಿಕ ಅಚಲರು,

ಆರೂಢರೆಂಬ ಹೆಸರಿಂದ ಇತ್ತೀಚಿನ ವರ್ಷಗಳಲ್ಲಿ ಆಧುನಿಕ ಸಾಹಿತ್ಯ ಚರಿತ್ರೆಕಾರರು ಗುರುತಿಸಿ ಪ್ರತೀತಿಗೊಳಿಸುತ್ತಿರುವ ನಿದರ್ಶನಗಳಿವೆ. ಭಾರತೀಯ ಅಧ್ಯಾತ್ಮ, ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಸಂವಿಧಾನಗಳಲ್ಲಿ ಶ್ರಮಣ ಧಾರೆಗೆ ಮಹತ್ವದ ಸ್ಥಾನವಿದೆ. ಅಂತಹ ಶ್ರಮಿಕ, ಕಾಇಕ ಧಾರೆಗಳಿಂದ ಹುಟ್ಟಿಕೊಂಡುದು ತತ್ವಪದ ಸಾಹಿತ್ಯ ಎಲ್ಲ ಬಗೆಯ ಅಹಮಿಕೆಗಳನ್ನು ಕಳಕೊಳ್ಳುತ್ತಲೇ ಶೂನ್ಯಗೊಳ್ಳುವ, ಬಯಲು ಕಟ್ಟಿಕೊಳ್ಳುವ ಗುರುಮಾರ್ಗ ಪರಂಪರೆ ಅದು. ಅಲ್ಲಿ ಹಲವು ಕಾಡುಗಳ ಹತ್ತು ಹಲವು ಸಹಸ್ರ, ಸಾವಿರ ಬಗೆಯ ಮಹಾವೃಕ್ಷ, ಗಿಡ, ಮರಗಳ ಮಹಾಬೇರಗು, ಬೆಡಗುಗಳ ರಹಸ್ಯನಿಧಿಯ ಬೇರುಗಳಿಂದ ಅವತರಿಸಿದ್ದು ತತ್ವಪದ ಸಾಹಿತ್ಯ



ಹೌದು, ತುಂಬ ಸರಳ ಮತ್ತು ಸಹಜವಾಗಿ ಗಮನಿಸುವುದಾದರೆ: ತತ್ವಪದ ಎಂಬ ಪದದಲ್ಲೇ ಎರಡು ಪ್ರಮುಖ ಅರ್ಥ ಸಂಗತಿಗಳಿವೆ. ಒಂದೆನಯದು: ತತ್ವ ಅಂದರೆ ಫಿಲಾಸಪಿ, ಎರಡನೆಯದು: ಪದ ಅಂದರೆ ಹಾಡು, ಸಂಗೀತ ಜ್ಞಾನ, ಅದನ್ನು "ದರ್ಶನ ಕಾವ್ಯ" ಎಂತಲೂ ಕರೆಯಬಹುದು. ಪಶ್ಚಿಮ ಪ್ರಣೀತ, ವಸಾಹತುಶಾಹಿ ಕಣ್ಣುಗಳಿಂದ ವಿಭಜಿಸಿ, ಅವಲೋಕಿಸುವ ಆಧುನಿಕ ಕಾವ್ಯಮೀಮಾಂಸಗಳನ್ನು ಮೀರಿದ್ದು ತತ್ವ ಪದಸಾಹಿತ್ಯ ಮೀಮಾಂಸೆ. ಅದು ಜನಮಾನಸದ ಲೋಕ ಮೀಮಾಂಸೆ. ದಲಿತರಾದಿಯಾಗಿ ಬ್ರಾಹ್ಮಣರವರೆಗೆ ಎಲ್ಲ ಕುಲ, ಜಾತಿ, ಮತ, ಪಂಥಗಳ ಜನಸಾಮಾನ್ಯ ಕುಟುಂಬಗಳ ದುಡಿಯುವ ಜನರ ನಡುವಿನಿಂದ ಹುಟ್ಟಿ ಬಂದ ಲೋಕಜ್ಞಾನ ಸಾಹಿತ್ಯವದು. ನಿತ್ಯಬದುಕಿನ ಅನುಭಾವಿಕ ನೆಲೆಯ ಮಹಾ ಬಯಲ ಬೀಜಧ್ಯಾನವದು. ವಚನ ಹಾಗೂ ದಾಸ ಸಾಹಿತ್ಯದ ನಂತರದಲ್ಲಿ ಕನ್ನಡ ನಾಡಿನಾದ್ಯಂತ ಮೌನಕ್ರಾಂತಿಯಂತೆ ಮೈತಾಳಿದ್ದು ತತ್ವಪದ ಸಾಹಿತ್ಯ ಆಂದೋಲನ, ಒಂದು ಸಮೀಕ್ಷೆಯ ಅಂದಾಜಿನಂತೆ ಕನ್ನಡ ನಾಡಿನಲ್ಲಿ ಐದುನೂರಕ್ಕೂ ಹೆಚ್ಚು ಮಂದಿ ತತ್ವಪದಕಾರರು ಬಾಳಿ ಬದುಕಿದ್ದಾರೆ. ಒಂದೆರಡು ಜಿಲ್ಲೆಗಳು ನನ್ನ ಈ ಮಾತುಗಳಿಗೆ ಅಪವಾದವಾಗಿ ಕಾಣಬಹುದು.

ಇದುವರೆಗೆ ಅದೆಷ್ಟೇ ಅಧ್ಯಯನ, ಸಂಶೋಧನೆಗಳು ಜರುಗಿದರೂ ಅಗಮ್ಯ ಅಗೋಚರದಲ್ಲುಳಿದಿರುವ ತತ್ವಪದಗಳೇ ಹೇರಳ, ಅವು ರಾಶಿ ರಾಶಿಯಾಗುಳಿದಿವೆ. ಇದುವರೆಗಿನ ಸಮೀಕ್ಷೆಗಳು ಹೇಳುವಂತೆ ಎಲ್ಲ ತತ್ವಪದಕಾರರ ಸಮಗ್ರ ತತ್ವಪದಗಳು ದೊರಕಿಲ್ಲ. ಕಡಕೋಳ ಮಡಿವಾಳಪ್ಪನವರನ್ನೇ ಉದಾಹರಿಸುವುದಾದರೆ ಹದಿನೇಳು ನೂರು ಪದಗಳ ಪೈಕಿ ಪ್ರಾಪ್ತವಾಗಿರುವುದು ಕೇವಲ ಮುನ್ನೂರೈವತ್ತು ಮಾತ್ರ ಈ ಎಲ್ಲ ತತ್ವಪದಗಳ ಸಂಗ್ರಾಹದ ಕಾರ್ಯ ಈಗ್ಗೆ ನಾಕೈದು ವರ್ಷಗಳಿಂದ ಸರ್ಕಾರ ಗಂಭೀರವಾಗಿ ಶುರು ಮಾಡಿದೆ. ಆದರೆ ಆ ಕೆಲಸಕ್ಕೆ ರಭಸದ ಅಧ್ಯಯನ, ಹುಡುಕಾಟ, ಸಂಶೋಧನಾ ಕ್ರಿಯೆಗಳ ಕೊರತೆ.

ಶಿವಪಥವನರಿಯಲು ಗುರುಪಥವೇ ಮೊದಲೆಂಬ ಅಚಲ ನಂಬಿಕೆಯಿಟ್ಟವರು ತತ್ವಪದಕಾರರು. ಪದಗಳ ಒಟ್ಟು ಸೂಕ್ಷ್ಮತೆ, ಜೀವಸಂವೇದನೆ, ತಾತ್ವಿಕತೆ, ಇಹಪರದ ಸಂವಿಧಾನವು ಕೂಡ ಶಿವಪಥದ ಅರಿವು. ಅಲ್ಲಮನ ಶಿವಸ್ವರೂಪವನ್ನು, ನಿರ್ಮಲವೂ, ಪರಂಜ್ಯೋತಿಮಯವೂ ಆಗಿರುವ ಜಂಗಮ ಪ್ರಜ್ಞೆಯನ್ನು ಸಹಿತ ಗುರು ಮುಖೇನವೇ ಆಗು ಮಾಡಿಕೊಳ್ಳುವುದು. ಅಂತೆಯೇ...

"ಸಾಕ್ಷಾತ್ ಸದ್ಗುರು ಪ್ರತ್ಯಕ್ಷವಾಗಲು" "ಸ್ಥಿತಿಗತಿಗಳ ಅರಿಯುವದ್ಯಾಕೋ?

"ಆ ಕ್ಷಣವಾಗುವುದು ಅನಂತ ಸೌಖ್ಯವು"

"ಮೋಕ್ಷವ ಪಡಕೊಳ್ಳೋ ಕುದಿಯಾಕೋ"

ಹಾಗೆಯೇ ಮತ್ತೊಂದು ತತ್ವಪದದಲ್ಲಿ

ಗುರು ಕರುಣವಿಲ್ಲದವನ ಸ್ನೇಹ

ಸಾಯುವತನಕ ಬೇಡ

ಸಾಧು ಸತ್ಪುರುಷರ ಸೇವೆ

ಮಾಡುವುದೇ ಬಹುಪಾಡ

ಹೀಗೆ ಗುರುಪಥದ ಮಹತಿಯನ್ನು ಎಲ್ಲ ಪದಕಾರರ ತತ್ವಪದಗಳು ಎತ್ತಿಹಿಡಿಯುತ್ತವೆ. ಪದಗಳ ಗುರುಭಕ್ತಿ ಪರಂಪರೆ ಮಹತ್ತರವಾದುದು. ಶರಣಸತಿ ಭಾವವನ್ನು ಯಥೇಚ್ಛವಾಗಿ ತತ್ವಪದಗಳು ಪ್ರತಿಪಾದನೆ ಮಾಡುತ್ತವೆ. ಅದು ಗುರು ಶಿಷ್ಯ ಸಂಬಂಧ. ಗುರು ಅವರಿಗೆ ಏನೆಲ್ಲ. ಗುರುವಿಗಿಂತ ಅಧಿಕವಾದುದು ಜಗದೊಳು ಅವರಿಗಿನ್ನೊಂದು ಇಲ್ಲ.

ತತ್ವಪದಗಳ ಒಟ್ಟು ತಾತ್ವಿಕತೆ ಅದ್ವೈತ ಸಿದ್ಧಾಂತದ ಸಾಧನೆ. ಅರಿವು ಮತ್ತು ಅನುಭಾವ. ಬೆಂಕಿ ಸುಡುತ್ತದೆಂಬುದು ಅರಿವು. ಸುಟ್ಟಮೇಲೆಯೇ ಅದು ಅನುಭವ ಆಗಬಲ್ಲದು. ಹಾಗೇನೆ ಸಕ್ಕರೆ ಸಿಹಿಯಾಗಿರುತ್ತದೆಂಬುದು ಅರಿವು. ತಿಂದಾದ ಮೇಲೆಯೇ ಅದು ಅನುಭವ ಆಗಬಲ್ಲದು. ಅನುಭಾವ ಪರಂಪರೆಯ ಗಮ್ಯ, ಗುರಿ ಒಂದೇ ಆಗಿರಬಹುದು. ಆದರೆ ಅದನ್ನು ತಲುಪಲು ನಡೆದು ಬರುವ ಪಥ, ಪಂಥಗಳು ಹತ್ತು ಹಲವು. ಅದು ಶಾಕ್ತ, ಸಿದ್ಧ, ನಾಥ, ಅಘೋರಿ, ಅಚಲ, ಅವಧೂತ, ಆರೂಢ ಮುಂತಾದ ಈ ಎಲ್ಲ ಧಾರೆಗಳು ತತ್ವಪದಗಳ ಆಚನಿಕ ಅಂತಃಸತ್ವಗಳು. ಸೇರಬೇಕಾದ ಊರಿಗೆ ದಾರಿಗಳು ಹತ್ತಾರು. ಹಾಗೆ ಇವು ಬೇರೆ, ಬೇರೆ ದಾರಿಗಳಿದ್ದಂತೆ.

ಅದುವರೆಗೆ ವೇದಾಂತ, ಅಧ್ಯಾತ್ಮ ಎಂಬ ಪದಗಳು ಮೇಲ್ವರ್ಗ, ಮೇಲ್ಜಾತಿಯ ಪಂಡಿತೋತ್ತಮರಿಗೆ ಮೀಸಲಾಗಿದ್ದವು. ಇಂತಹ ಶುಷ್ಕ ವೇದಾಂತವನ್ನು, ಅಧ್ಯಾತ್ಮವನ್ನು ಗಂಡು ಹೆಣ್ಣೆನ್ನದೇ, ಜಾತಿ, ಕುಲ, ಮತ, ಧರ್ಮ ತಾರತಮ್ಯದ ಗೊಡವೆಗಳನ್ನು ಕೆಡವಿ ಸಾಮಾನ್ಯ ಜನರೆಲ್ಲರಿಗೂ ಸರಳಗೊಳಿಸಿ ತಿಳಿಸಿದ ಶ್ರೇಯಸ್ಸು ತತ್ವಪದ ಸಾಹಿತ್ಯಕ್ಕೆ ಮತ್ತು ತತ್ವಪದಕಾರರಿಗೆ ಸಲ್ಲಬೇಕು.

ಹಾಗೆ ನೋಡಿದರೆ ತತ್ವಪದಕಾರರು ನಮ್ಮ ನಿತ್ಯ ಬದುಕನ್ನು ಪ್ರತಿನಿಧಿಸುವ ಬದುಕಿನ ಪ್ರತಿನಿಧಿಗಳು, ಅನುಭವದ ಗಾಢತೆಯು ಅವರ ಅಂತರಂಗವನ್ನು ಸತಾಯಿಸಿದಾಗ ರೂಪಗೊಂಡ ಅಭಿವ್ಯಕ್ತಿಯ ತೀವ್ರತೆಗಳು ಈ ಪದಗಳು. ಮುಖ್ಯವಾಗಿ ಸಾಮಾಜಿಕ- ಸಾಂಸ್ಕೃತಿಕ ಅನುಸಂಧಾನ, ದ್ವಂದ್ವಗಳ ಮುಖಾಮುಖಿ, ಪ್ರಾದೇಶಿಕ ಭಾಷಿಕತೆಯ ಸಂವೇದನಾಶೀಲತೆ ಢಾಳಾಗಿ ಗುರುತಿಸಬಹುದು. ಹಳ್ಳಿಗಾಡಿನ ಜನಸಾಮಾನ್ಯರ ನಾಲಗೆ ಮೇಲೆ ನಲಿದಾಡಿದ ತತ್ವಪದಗಳು ಪಂಡಿತರ ಮಿದುಳಿಗೆ ಮುಟ್ಟಲಿಲ್ಲ. ಹೀಗಾಗಿ ತತ್ವಪದಗಳನ್ನು ಅಧೀನ ಸಂಸ್ಕೃತಿಯ ನಜರಿನಲ್ಲಿ ನೋಡುವಂತಾಯಿತು.

### "ಅಧೀನವಲ್ಲ ಪ್ರಧಾನ ಸಂಸ್ಕೃತಿ"

ತತ್ವಪದಗಳ ಪರಂಪರಾಗತ ಗಾಯನದ ಗುಂಗು ಹಚ್ಚಿಕೊಂಡು ಹಾಡುವವರು ಇವತ್ತಿಗೂ ನಮ್ಮ ಹಳ್ಳಿಗಳಲ್ಲಿದ್ದಾರೆ. ಹಾಗೆಯೇ ಆಧುನಿಕತೆಯ ಸ್ಪರ್ಶ ನೀಡಿ ಇವುಗಳನ್ನು ಸುಗಮ, ಶಾಸ್ತ್ರೀಯ, ಸಿನೆಮಾ, ಪಾಪ್ ಸಂಗೀತ ಶೈಲಿಯಲ್ಲಿ ಹಾಡುವ ಪ್ರಯೋಗ ಮಾದರಿಯ ಪ್ರಯತ್ನಗಳು ಜರುಗುತ್ತಲಿವೆ. ಆದರೆ ಇವೆಲ್ಲವುಗಳಿಗಿಂತ

ಏಕತಾರಿಯ ಏಕನಾದದ ನಾದಲೀಲೆಯೇ ಅನನ್ಯವಾದುದು. ಅದು ಎಂತಹ ಕಟುಕ ಹೃದಯದವರನ್ನು ಕರಗಿಸಿ, ಅಂತಃಕರಣ ಭರಿತ ಅಪರಿಚಿತ ಲೋಕದ ಪರಿಚಯ ಮಾಡಿಸಿಕೊಡುತ್ತದೆ.



ಅನುಭಾವ ಸಾಹಿತ್ಯ ಜಗತ್ತಿಗೆ ಅಂಥದೊಂದು ಅದ್ಭುತ ಶಕ್ತಿಯಿದೆ. ಅದು ಕಾಲಾತೀತ, ಜೀವಾತೀತ ಸಂವೇದನೆ. ಅಂತೆಯೇ ತತ್ವಪದಗಳು ಸಾರ್ವಕಾಲಿಕ ಜೀವಸಂಸ್ಕೃತಿಯ ಸರೋವರಗಳು.

"ಎಂಥಾ ಕಂಡಾಪಟ್ಟೆ" "ಸೂಳೆಮಕ್ಕಳಿವರೋ ಸಾಧು"

ಸಂತರನ ಕಂಡರೆ ನಿಂದೆನಾಡ್ತಿಹರೋ

ಅಂಥ ಇಂತ ಮಾತಿಗೆ ಹಾಯ್ ಹಾಯ್ ಎಂಬುವರೋ/ಇವರು

ಹಂತ ತಿಳಿಯದೇ ಸುಳ್ಳೇ ಸತ್ತು ಹೋಗುವರೋ

ಕಲ್ಲು ಮಣ್ಣು ದೇವರೆಂದು ಪೂಜೆ ಮಾಡುವರೋ/ಭಾಳ

ಬಲ್ಲಿದರನು ಕಂಡು ದೂರ ಹಾಯವರೋ

ಕಲ್ಲು-ಮಣ್ಣುಗಳ ಗುಡಿಯೊಳಗಣ ಇಲ್ಲದ ದೇವರ ಕುರಿತು ಇಪ್ಪತ್ತನೇ ಶತಮಾನದ ಕೊನೆಯಲ್ಲಿ ಬರುವ ಕವಿಯೊಬ್ಬರ ಕವಿತೆ ನಾಡಿನಾದ್ಯಂತ ಪ್ರಸಿದ್ಧಿ ಪಡೆದಿದೆ. ಅದು ಸಂತಸದ ಸಂಗತಿ. ಆದರೆ ಇಂಥದೇ ಕಾವ್ಯ ನುಡಿಗಳನ್ನು ಮಡಿವಂತಿಕೆ ಹೊಡೆದೋಡಿಸಿ ಹೆಚ್ಚು ತೀಕ್ಷ್ಣವಾಗಿ ಹದಿನೇಳನೇ ಶತಮಾನದಲ್ಲಿ ಹಸಿಗೋಡೆಗೆ ಹರಳು ಹೊಡೆದಂತೆ ಮೇಲಿರುವ ಹಾಗೆ ಹೇಳಿದ ತತ್ವಪದಕಾರರು ಮತ್ತು ಅವರ ಕಾವ್ಯ ಮೂರು ಶತಮಾನ ಕಾಲ ಅಜ್ಞಾತದಲ್ಲಿರಬೇಕಾಯಿತು. ಹೀಗೆ ನೂರಾರು ತತ್ವಪದಗಳು ಮತ್ತು ತತ್ವಪದಕಾರರು ಅನೇಕ ಅಗ್ನಿದಿವ್ಯಗಳನ್ನು ಬದುಕಿ ಬಂದವರು. ಈಗ್ಗೆ ನಾಕೈದು ವರ್ಷಗಳ ಹಿಂದೆ ಕನ್ನಡ ಸಂಸ್ಕೃತಿ ಇಲಾಖೆಯ ಕನಕ ಅಧ್ಯಯನ ಕೇಂದ್ರವು ಕೇಂದ್ರವು ತತ್ವಪದಗಳ ಸಮಗ್ರ ಸಂಗ್ರಹ ಕಾರ್ಯಯೋಜನೆಯೊಂದನ್ನು ರೂಪಿಸಿತು. ಐವತ್ತು ಸಂಪುಟಗಳಲ್ಲಿ ಸಧ್ಯಕ್ಕೆ ಮೂವತ್ತೆರಡು ಸಂಪುಟಗಳು ಪ್ರಕಟಗೊಂಡಿವೆ. ಪ್ರಾಯಶಃ ಇಷ್ಟು ಪ್ರಮಾಣದಲ್ಲಿ ತತ್ವಪದ ಸಾಹಿತ್ಯ ಪ್ರಕಟಗೊಳ್ಳುತ್ತಿರುವುದು ಇದೇ ಮೊದಲು. ಅಂತೆಯೇ ಇದು ಆರಂಭಕಾಲ. ಇನ್ನು ಮೇಲೆಯೇ ತತ್ವಪದಗಳ ಕುರಿತು ಖರೇ ಖರೇ ಕೆಲಸ ಶುರುವಾಗಬೇಕಿದೆ.

ಅಕ್ಷರಶಃ ಮಹಾಕಾವ್ಯಗಳಾಗಿರುವ ತತ್ವಪದಗಳು ಪ್ರಧಾನ ಸಾಹಿತ್ಯ ಸಂಸ್ಕೃತಿ ಧಾರೆಗೆ ಸೇರಬೇಕು. ಬಹುಪಾಲು ನಮ್ಮ ಗ್ರಾಮೀಣರೇ ಹಾಡುವ ಭಜನೆ ಪದಗಳನ್ನು ಜಾನಪದ ಪ್ರಕಾರಕ್ಕೋ, ಇಲ್ಲವೇ ಅಸ್ಪೃಶ್ಯವಾಗಿರಿಸಿದಂತೆ ಪರಿಶಿಷ್ಟ ಪ್ರಕಾರವಾಗಿ ನೋಡುವ ಸಾಹಿತ್ಯ ಚರಿತ್ರೆಗಳಿವೆ. ಹಾಗೆಂದು ತತ್ವಪದಗಳ ಅಸ್ಮಿತೆ ಪ್ರತಿಸಂಸ್ಕೃತಿಯ ಹುಡುಕಾಟವಲ್ಲ. ಅದು ಅಧೀನ ಸಂಸ್ಕೃತಿಗೆ ಸೇರಬೇಕಾದುದು ಅಲ್ಲ. ಅದು ಭಾರತೀಯ ಮತ್ತು ಕನ್ನಡ ಮನಸುಗಳ ಅಪ್ಪಟ ಜನಮುಖೀ ಸಂಸ್ಕೃತಿ. ಇದು ಕಾವ್ಯ ಮೀಮಾಂಸಕರಿಗೆ ತಡವಾಗಿ ಅರ್ಥವಾಗಿದೆ. ಆದರೆ ಲೋಕಮೀಮಾಂಸೆಗೆ ಅದು ತಿಳಿನೀರು ಕುಡಿದಷ್ಟು ಸರಳ, ಹೀಗಾಗಿ ತತ್ವಪದಗಳು ಶತಮಾನಗಳ ಕಾಲ ಪುಸ್ತಕ ರೂಪದಲ್ಲಿ ಬರದೇ ಜನಮಾನಸದ ಮಸ್ತಕದಲ್ಲಿ ನಿರಂತರವಾಗಿ ಉಳಿದಿವೆ. ತತ್ವಪದಗಳು ಪ್ರಜಾಸತ್ತಾತ್ಮಕ ಜೀವನಕ್ರಮದ ಪರಿಶೋಧಗಳು, ಅದು ಅಗ್ನಿದಿವ್ಯದ ಬಯಲು ಬಿತ್ತನೆ. ಇಂತಹ ಬಯಲು ಬಿತ್ತನೆಯ ಅನುಭಾವದ ಹರಿಕಾರರಲ್ಲಿ ಕಡಕೋಳ ಮಡಿವಾಳಪ್ಪಗೆ ಅಗ್ರಸ್ಥಾನ. ಅವರು ತತ್ವಪದಲೋಕದ ಸಾಂಸ್ಕೃತಿಕ ನಾಯಕ.



"ಹಿಂದೆ ಬಸವ ಬಂದು ತೋರಿದ ಲಿಂಗಮಹತಿಗೆ!

ಅಂದೇ ಆಯಿತು ವಿಘ್ನ ಪ್ರಮಥರಿಗೆ ತಾನೆ ||

ಅಂದಾದ ವಿಘ್ನಕ್ಕೆ ಪ್ರಮಥರು ತಾವೆಲ್ಲಾ

ಮುಂದಾಗುವುದು ಸೂಚಿಸಿದರು ತಾನೆ |

ಇದು ತತ್ವಪದಕಾರರ ತ್ರಿಕಾಲಜ್ಞಾನ ವಚನ, ವರ್ತಮಾನದ ವೀರಶೈವ- ಲಿಂಗಾಯತ ಹೋರಾಟಕ್ಕೆ ಮುನ್ನೂರು ವರ್ಷಗಳ ಹಿಂದೆಯೇ ಇದು ಮುನ್ನುಡಿ ಬರೆದಂತಿದೆ. ಸಮಕಾಲೀನ ಅನೇಕ ಬಿಕ್ಕಟ್ಟು ತಲ್ಲಣಗಳಿಗೆ ತತ್ವಪದಗಳಲ್ಲಿ ಹುಡುಕಿದರೆ ಉತ್ತರ ಸಿಗಬಲ್ಲವು. ಇವತ್ತಿನ ನಮ್ಮ ಅನೇಕ ಮಂದಿ ಭಾಷಣದ ಬುದ್ಧಿಜೀವಿಗಳಿಗೆ ಅವು ಚಿಮ್ಮುಹಲಗೆಗಳಾಗಿ ನೆರವಾಗುತ್ತಲಿವೆ.

"ಜ್ಯೋತಿ ಬೆಳಗುತಾದೋ ಜಗಜಗ

ತಾನೇ ಹೊಳೆಯುತಾದೋ ಥಳಥಳ

ಜ್ಯೋತಿಬೆಳಗುತಾದ ತಾನೆ ಹೊಳೆಯುತಾದ" ೧

"ಮಾನಸ ತುದಿಮೇಲೆ ಜ್ಞಾನಕೆ ನಿಲುಕದೆ

ತಾನೇ ಹೊಳೆಯುತಾದೋ ಥಳಥಳ

ಜ್ಯೋತಿ ಬೆಳಗುತ್ತಾದೋ ಜಗಜಗ" ೧ ||

"ಅಸ್ತಮಗಿರಿ ಚೆನ್ನ ಮಸ್ತಕದೊಳೆ ಚೆಲುವ

ವಸ್ತು ಹೊಳೆಯಿತಾದೋ ಥಳಥಳ

ತಾನೇ ಹೊಳೆಯುತಾದೋ ಥಳಥಳ" ||೨||

"ಕಂಗಳ ಮಧ್ಯದಿ ತುಂಗ ಗುಡ್ಡದಯೋಗಿ

ಅಂಗ ಹೊಳೆಯುತಾದೊ ಥಳಥಳ

ತಾನೇ ಹೊಳೆಯುತಾದೋ ಥಳಥಳ" ||೪||

ಕಡಕೋಳ ಮಡಿವಾಳಪ್ಪನವರ ಅರ್ಥಪೂರ್ಣವಾದ ಈ ಮಂಗಳಾರತಿ ಪದದೊಂದಿಗೆ ನನ್ನ ಮಾತುಗಳನ್ನು ಮುಗಿಸುವೆ. ನಮಸ್ಕಾರ.

## ಬೌದ್ಧ ಸಾಹಿತ್ಯ ಮತ್ತು ನೆಲೆಗಳು

**ಬುದ್ಧಘೋಷ್ ದೇವೇಂದ್ರ ಹೆಗ್ಗಡೆ**

ಅನಿರೋಧಂ ಅನುತ್ಪಾದಂ ಅನುಚ್ಛೇದಂ ಅಶಾಶ್ವತಮ್

ಅನೇಕಾರ್ಥಂ ಅನಾನಾರ್ಥಂ ಅನಾಗಮಂ ಅನಿರ್ಗಮಮ್

-ನಾಗಾರ್ಜುನ

ಬದುಕು ನಿರೋಧವು ಅಲ್ಲ ಉತ್ಪತ್ತಿಯೂ ಅಲ್ಲ, ಅನುಚ್ಛೇದವೂ ಅಲ್ಲ, ಶಾಶ್ವತವು ಅಲ್ಲ, ಅನೇಕ ಅರ್ಥವು ಅಲ್ಲ, ನಾನಾರ್ಥವು ಅಲ್ಲ, ಆಗಮನವು ಅಲ್ಲ, ನಿರ್ಗಮನವು ಅಲ್ಲ.

ಈ ಮಾತಿನಿಂದ ನಾನು ಶತಶತಮಾನಗಳ ಚಾರಿತ್ರಿಕ ಏರು-ಪೇರುಗಳ ಆಗು ಹೋಗುಗಳ ಮಹಾ ಪರಂಪರೆಯ ಬೌದ್ಧ ಸಾಹಿತ್ಯ ಮತ್ತು ನೆಲೆ ಎಂಬ ಪ್ರಬಂಧವನ್ನು ಮಂಡಿಸುತ್ತಿದ್ದೇನೆ.

ಶಿಸ್ತುಬದ್ಧ ಅದ್ಯಯನ ದೃಷ್ಟಿಯಿಂದ ಕಾಲಘಟ್ಟಕ್ಕನುಗುಣವಾಗಿ ಬೌದ್ಧ ಸಾಹಿತ್ಯ ಮತ್ತು ನೆಲೆಯ ವಿಷಯವನ್ನು ಈ ಕೆಳಗಿನಂತೆ ವಿಂಗಡಿಸಬಹುದಾಗಿದೆ.

**೧) ಸುವರ್ಣ ಕಾಲ**-ಆರಂಭಿಕ ಬೌದ್ಧ ಕಾಲಘಟ್ಟ -ಪಾಲಿ ಮತ್ತು ಸಂಸ್ಕೃತ ಸಾಹಿತ್ಯದ ಕಾಲ

**೨) ಕರಾಳ ಕಾಲ -** ಪ್ರಾಚೀನ ಮತ್ತು ಹಳೆಗನ್ನಡ ಸಾಹಿತ್ಯಕ ಕಾಲ, ಬೌದ್ಧಧರ್ಮದ ಅದೋಃಪಥನದ ಘಟ್ಟ

**೩) ಪುನಃಶ್ಚೇತನ ಕಾಲ -** ೨೦ನೇ ಶತಮಾನದ ನವ್ಯ, ನವೋತ್ತರ, ಪ್ರಗತಿಶೀಲ ಸಾಹಿತ್ಯ ಕಾಲ

**೪) ಜನಪ್ರಿಯ ಕಾಲ-** ಡಾ. ಅಂಬೇಡ್ಕರರವರ ದಮ್ಮಚಕ್ರ ಪ್ರವರ್ತನದಿಂದ ಉಂಟಾದ ಕ್ರಾಂತಿಯ ಕಾಲಘಟ್ಟ-ದಲಿತ ಬಂಡಾಯದ ಪ್ರೇರಣಾ ಸಾಹಿತ್ಯ ಕಾಲ.

### ೧) ಸುವರ್ಣ ಕಾಲ

**ಪಾಲಿ ಬೌದ್ಧ ಸಾಹಿತ್ಯ**

ಕ್ರಿ.ಪೂ.೫೩೫-೪೮೫ರ ವರೆಗೆ ಸುಮಾರು ಐದು ದಶಕಗಳ ಕಾಲ ಬದುಕಿ ಧಮ್ಮ ಬೋಧನೆ ಮಾಡಿದ ಬುದ್ಧ ಏನನ್ನೂ ಬರಹ ರೂಪದಲ್ಲಿ ಇಡಲಿಲ್ಲ. ಬುದ್ಧ ಕಾಲವಾದ ನಂತರ ಆತನ ಆಪ್ತ ಶಿಷ್ಯರು ಆತನ ಬೋಧನೆಗಳನ್ನು ವ್ಯವಸ್ಥಿತವಾಗಿ ದಾಖಲಿಸಲು ಪ್ರಾರಂಭಿಸಿದರು. ಬೌದ್ಧರ ಕೆಲವು ಸಾಂಪ್ರದಾಯಿಕ ನಂಬಿಕಸ್ಥರ ಪ್ರಕಾರ ಬುದ್ಧನ ನಿರ್ವಾಣದ ನಂತರ ಆತನ ಪ್ರೀತಿಯ ಶಿಷ್ಯ ಆನಂದನ ನೇತೃತ್ವದಲ್ಲಿ ರಾಜಗೃಹದಲ್ಲಿ “ಮಹಾಸಂಘಯಾನ”

ನಡೆಯಿತು, ಆಗ ದಮ್ಮ ಮತ್ತು ವಿನಯಗಳೆಂಬ ಧರ್ಮದ ಪ್ರಮಾಣ ಗ್ರಂಥಗಳ ರಚನೆಯಾಯಿತು. ಬುದ್ಧ ನಿರ್ಮಾಣವಾದ ನೂರು ವರ್ಷದ ನಂತರ ವೈಶಾಲಿ ನಗರದಲ್ಲಿ ೨ನೇ ಮಹಾಧರ್ಮ ಸಂಘಯಾನ ಪೂಜ್ಯ ಸಬ್ಬಕಾಮಿ ಮಹಾಥೇರರ ಅಧ್ಯಕ್ಷತೆಯಲ್ಲಿ ಜರುಗಿತು. ಆದಾಗಲೇ ಬಿಕ್ಕು ಸಂಘದಲ್ಲಿ



ಭಿನ್ನಮತ ಪ್ರಾರಂಭವಾಗಿತ್ತು. ಇದನ್ನು ಹದ್ದು ಬಸ್ತಿಗೆ ತರಲು ಧರ್ಮ ಗ್ರಂಥಗಳನ್ನು ಪುನರ್‌ರಚಿಸಬೇಕಾಯಿತು ಎಂದು ವರದಿ ಸೂಚಿಸುತ್ತದೆ. ಹೀಗೆ ರಚಿತವಾದ ಧಾರ್ಮಿಕ ಪ್ರಮಾಣ ಗ್ರಂಥಗಳು ವಂಗದ(ಬಿಹಾರ) ಮತ್ತು ಕೋಸಲ (ಅಯೋಧ್ಯೆ) ಪ್ರಾಂತಗಳ ಜನರ ಆಡು ಭಾಷೆಯಾದ ಪಾಲಿಯಲ್ಲೇ ಸುಧಾರಿಸಿ ಗ್ರಾಂಥಿಕವಾಗಿ ರಚನೆಯಾದವು, ೩ನೇ ಸಂಘಯಾನವು ಬುದ್ಧರು ನಿರ್ವಾಣವಾದ ೨೬೦ ವರ್ಷದ ನಂತರ ಪಾಟಲಿಪುತ್ರ ನಗರದಲ್ಲಿ ಜರುಗಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಅಶೋಕನ ಗುರುವಾದ ಮೊಗ್ಗಲಿಪುತ್ತತಿಸ್ಸರು ವಹಿಸಿದ್ದರು. ಈ ಸಂಘಯಾನದಲ್ಲಿ ಅರವತ್ತು ಸಾವಿರ ಕೃತಿ ಬಿಕ್ಕುಗಳನ್ನು ಸಂಘದಿಂದ ಹೊರಹಾಕಿ, ಧರ್ಮಪ್ರಸಾರಕ್ಕೆ ಧಮ್ಮ ದೂತರನ್ನು ವಿದೇಶಗಳಿಗೆ ಕಳುಹಿಸಿದರು. ೪ನೇ ಸಂಘಯಾನವು ಕಿ.ಪೂ. ೮೯-೮೮ರಲ್ಲಿ ಮಾತಲೆ ನಗರದ ಸಮೀಪ ಆಲುಲೇಣದಲ್ಲಿ ರಾಜಾ ಪಟ್ಟಗಾಮಿನಿ ಅಭಯನ ವ್ಯವಸ್ಥೆಯಲ್ಲಿ ಜರುಗಿತು. ಓಲೆ ಗರಿಯ ಅಧಿಕಾರಯುಕ್ತ ವ್ಯಾಖ್ಯಾನ ಗ್ರಂಥಗಳು ರಚನೆಯಾದವು. ಇವು ಇಂದಿನವರೆಗೆ ಕಾಪಾಡಿಕೊಂಡು ಬರಲಾಗಿದೆ. ನಂತರ ಭಾರತದಲ್ಲಿ ಬೌದ್ಧಧರ್ಮ ನಾಶವಾದಾಗ ಬೌದ್ಧ ಸಾಹಿತ್ಯವು ಸಿಲೋನ್, ಬರ್ಮಾ, ಸಯಾಮ್, ಟಿಬೆಟ್, ಚೀನಾ ಮತ್ತು ನೇಪಾಳ ದೇಶ ಸೇರಿ ಅಲ್ಲಿ ಸಂರಕ್ಷಿಸಲ್ಪಟ್ಟು ನಂತರ ಭಾರತ ಒಳಗೊಂಡು ಪ್ರಪಂಚದ ಎಲ್ಲಾ ಪ್ರಮುಖದ ಭಾಷೆಗಳಿಗೆ ವಿಸ್ತರಣೆಯಾಯಿತು. ೧೮೭೧ರಲ್ಲಿ ಬರ್ಮ ದೇಶದ ರಾಜ ಮಿಂಡೋನರವರ ಆಶ್ರಯದಲ್ಲಿ ೫ನೇ ಸಂಘಯಾನ ನಡೆದು ೨೯ ಅಮೃತಶಿಲಾ ಫಲಕಗಳಲ್ಲಿ ಬುದ್ಧಶಾಸನ ಕೆತ್ತಲಾಯಿತು.

ಇತ್ತೀಚಿಗೆ ೨೫೦೦ನೇ ಬುದ್ಧ ಜಯಂತಿಯ ಸ್ಮರಣಾರ್ಥ ವಿವಿಧ ಬೌದ್ಧ ದೇಶಗಳ ಸಹಕಾರದಿಂದ ಬರ್ಮಾದೇಶದರಂಗೂನ ನಗರದಲ್ಲಿ ೧೯೫೬ರ ಮೇ ತಿಂಗಳಲ್ಲಿ ಅಂತರರಾಷ್ಟ್ರೀಯ ೬ನೇಯ ಮಹಾ ಸಂಘಯಾನಜರುಗಿತು. ಬರ್ಮಾ ಸರಕಾರ ಪ್ರಧಾನ ಪಾತ್ರವಹಿಸಿದ ಈ ಸಮ್ಮೇಳನದಲ್ಲಿ ಭಾರತದಿಂದ ಡಾ. ಅಂಬೇಡ್ಕರ್‌ವರು ಭಾಗವಹಿಸಿದ್ದರು. ಈ ಸಮ್ಮೇಳನದ ನಂತರ ಡಾ.ಅಂಬೇಡ್ಕರರವರು ೧೯೫೬ ಅಕ್ಟೋಬರ್ ೧೪ರಂದು ೫ಲಕ್ಷ ಅನುಯಾಯಿಗಳೊಂದಿಗೆ ಬೌದ್ಧಧಮ್ಮ ದೀಕ್ಷಾ ಪಡೆದು ಭಾರತದಲ್ಲಿ ಧಮ್ಮಕ್ರಾಂತಿಯನ್ನೇ ಪ್ರಾರಂಭಿಸಿದರು.

ಪಾಲಿಯ ಮೂಲ ಬೌದ್ಧ ಸಾಹಿತ್ಯಕ್ಕೆ ತ್ರಿಪಿಟಕ ಎಂದು ಪ್ರತೀತಿ, ವಿನಯ ಪಿಟಕ, ಸುತ್ತಪಿಟಕ ಮತ್ತು ಅಭಿಧಮ್ಮ ಪಿಟಕ.

**ಬೌದ್ಧ ಶಾಖೆಗಳು ಮತ್ತು ಸಾಹಿತ್ಯ:**

ಬೌದ್ಧಧರ್ಮದ ಇತಿಹಾಸ ಅದರ ಪ್ರಸಾರ ಹಾಗೂ ಶಾಖೆ-ಉಪಶಾಖೆಗಳಾಗಿ ಪುನರ್ ನಿರೂಪಣೆ ಇವುಗಳ ಅಧ್ಯಯನ ವ್ಯಾಪಕವಾಗಿ ನಡೆದಿದೆ, ಈ ಅಧ್ಯಯನಕ್ಕೆ ಸಾಹಿತ್ಯಕ ದಾಖಲೆಗಳೆ ಮುಖ್ಯ ಆಕರಗಳಾದರೂ ಇತರ ಶಾಸನಗಳ ಹಾಗೂ ಪುರಾತತ್ವ ಶೋಧನೆಗಳ ವರದಿಗಳು ಆಕರಗಳಾಗುತ್ತವೆ.

ಬೌದ್ಧ ಶಾಖೆಗಳ ಬಗೆಗಿನ ಮೊದಲ ಲೇಖನ ಪ್ರಕಟವಾಗಿರುವುದು ಕ್ರಿ.ಶ ೧೮೫೯ರಲ್ಲಿ. ಜರ್ನಲ್ ಏಸಿಯಾಟಿಕ್‌ನಲ್ಲಿ, ಸೇಂಟ್ ಜುಲಿಯಮ್ ಬರೆದ ಲೇಖನ. ರಷ್ಯಾದ ವಿದ್ವಾಂಸರಿಂದ ಅನುವಾದಿತವಾಗಿ ಮೊದಲು ಪ್ರಕಟಿತವಾಗಿ, ನಂತರ ಇಂಗ್ಲಿಷ್ ಅನುವಾದವಾಗಿರುವ ತಾರಾನಾಥನ ಬೌದ್ಧ ಇತಿಹಾಸ ಈ ಸಾಲಿನ ಮುಖ್ಯ ಪ್ರಯತ್ನ, ಈ



ಕೃತಿಯಲ್ಲಿ ವಸುಮಿತ್ರ, ಭವ್ಯ ಮತ್ತು ವಿನೀತ ದೇವರಂತಹ ಪ್ರಾಚೀನ ಬೌದ್ಧಕೃತಿಕಾರರ ಅಭಿಪ್ರಾಯಗಳ ವಿವರ ಇದೆ. ಅಲ್ಲದೆ ಅವರ ಪ್ರಕಾರ ಬೌದ್ಧ ಶಾಖೆಗಳ ವಿವರಣೆಯು ಸಿಗುತ್ತದೆ,

೧೮೭೫ರಲ್ಲಿ ಎಸ್.ಬಿಲ್‌ವರು ಚೀನಿ ಭಾಷೆಯ ಅಭಿನಿಷ್ಕಮಣ ಸೂತ್ರವನ್ನು ಹಾಗೂ ೧೮೮೧ರಲ್ಲಿ ಚೀನಿ ಭಾಷೆಯಿಂದ ಧರ್ಮಗುಪ್ತಕವನ್ನು ಅನುವಾದಿಸಿದರು, ಅದೇ ವರ್ಷ ಓಲ್ಡನ್ ಬರ್ಗ ಮತ್ತು ರೈಸ್ ಡೆವೀಡ್‌ರವರು ಪಾಲಿ ಭಾಷೆಯ ವಿನಯಪೀಟಕವನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿ ಪ್ರಕಟಿಸಿದರು.

ಸೇನಾರ್ಥರು ಲೋಕೋತ್ತರವಾದಿಗಳ ಮಹಾವಸ್ತುವಿನ ಅನುವಾದ ಪ್ರಕಟಿಸಿದರು. ಮನ್‌ಯೇಷ್‌ರವರ ಪ್ರಯತ್ನದಿಂದಾಗಿ ಬೌದ್ಧ ಶಾಖೆಗಳ ಹೆಚ್ಚಿನ ಪರಿಚಯ ರಷ್ಯನ್ ಭಾಷೆಗೆ ಬಳಿಕ ಫ್ರೆಂಚ್ ಭಾಷೆಗೆ ಅನುವಾದವಾಯಿತು.

ಬೌದ್ಧ ಶಾಖೆಗಳ ಕುರಿತು ಜಿನ್ ಜೇ ಸ್ಕಿಯವರು ಅಶೋಕ ಅವಧಾನ ಕೃತಿಯ ಸಹಾಯದಿಂದ ಮೊದಲ ಎರಡು ಬೌದ್ಧ ಸಂಘಯಾನಗಳ ಮತ್ತು ಬೌದ್ಧ ಶಾಖೆಗಳ ಪ್ರಾದೇಶಿಕತೆಗಳ ಅಮೂಲ್ಯ ಮಾಹಿತಿ ಕೊಡುತ್ತಾರೆ. ಅವರು ಬೌದ್ಧಧರ್ಮದ ಬೆಳವಣಿಗೆಯಲ್ಲಿ ಮೂರು ಮುಖ್ಯ ಗತಿಗಳನ್ನು ಗುರುತಿಸುತ್ತಾರೆ ಈ ಗತಿಗಳ ಕೇಂದ್ರ ಮಗಧ, ಮಥುರಾ ಮತ್ತು ಕಾಶ್ಮೀರಗಳಾಗಿವೆ, ಅವರ ಪ್ರಕಾರ ಭಾರತದಲ್ಲಿ ಕೌಸಾಂಬಿ ಮತ್ತು ಇತರ ನೈರುತ್ಯ ಭಾಗದಲ್ಲಿ

ಥೇರವಾದ ಶಾಖೆ ಮಥುರಾ ಹಾಗೂ ಇತರ ಈಶಾನ್ಯ ಭಾಗದಲ್ಲಿ ಸರ್ವಸ್ತಿವಾದ ಶಾಖೆ ನೆಲಗೊಂಡಿತ್ತು, ಎರಡನೇ ಸಂಘಯಾನದ ಕಾಲಕ್ಕೆ ಈ ಭಿನ್ನಮತ ಸ್ಪಷ್ಟರೂಪ ತಾಳಿ ಮಹಾಸಾಂಘಿಕರ ಶಾಖೆ, ದಕ್ಷಿಣ ಆಂಧ್ರದಲ್ಲಿ ವಿಕಾಸವಾಯಿತು. ಆವಂತಿ ಕೌಸಾಂಬಿಗಳಿಂದ ದಕ್ಷಿಣದ ಮಹಿಸಾ ಮಂಡಲ ಬನವಾಸಿ ವರೆಗೆ, ಥೇರವಾದಿಗಳ ಮಹಿಶಾಸಕ ಶಾಖೆ ಹಬ್ಬಿಕೊಂಡಿತ್ತು, ಮುಂದೆ ಇದೇ ಸಿಂಹಳಕ್ಕೂ ಪ್ರಸಾರವಾಯಿತು ಎಂಬುದು ಜಿನ್ ಜೆಲೂಸ್ಕಿಯವರ ತೀರ್ಮಾನ.

**೧) ಥೇರವಾದ ಅಥವಾ ಹೀನಾಯಾನ :** ಥೇರವಾದವು ಬುದ್ಧನನ್ನು ಮನುಷ್ಯನಾಗಿಯೆ, ಮನುಷ್ಯ ಸಹಜದೋಷ ದೌರ್ಬಲ್ಯಗಳ ಸಹಿತ ಪರಿಗಣಿಸುತ್ತದೆ, ಈ ಶಾಖೆಗೆ ಸೇರಿದ ಪೂರ್ಣ ಸಾಹಿತ್ಯ ಪಾಲಿ ಭಾಷೆಯಲ್ಲಿ ತ್ರಿಪಿಟಕಗಳಲ್ಲಿ ಲಭ್ಯವಿದೆ. ಅಟ್ಟಕಥಾ ಹೆಸರಿನ ವ್ಯಾಖ್ಯಾನಗಳು ಟೀಕಾ ಹೆಸರಿನ ಉಪವ್ಯಾಖ್ಯಾನಗಳು ಸಿಗುತ್ತವೆ.

**೨) ಸರ್ವಾಸ್ಥಿವಾದ :** ಈ ಶಾಖೆಯ ಗ್ರಂಥಗಳೆಲ್ಲಾ ಸಂಸ್ಕೃತದಲ್ಲಿದ್ದು ಈಗ ಅವುಗಳ ಚೀನಿ ಮತ್ತು ಟಿಬೇಟ್ ಅನುವಾದಗಳು, ಮಧ್ಯ ಏಷ್ಯಾ (ಗಿಲ್ಗೈಟ್ ಮುಂತಾದೆಡೆ) ದೊರೆತಿರುವ ಗ್ರಂಥ ಭಾಗಗಳು, ಲಭ್ಯವಿರುವ ಭಾಗಗಳಿಂದ ಪುನಃ ರೂಪಿಸಬೇಕಾಗಿದೆ. ಈ ಕೆಲಸ ಜೆ ಮಸೂದ್ರರವರಿಂದ ತೃಪ್ತಿಕರವಾಗಿ ನಡೆದಿದೆ.

ಕಾಶ್ಮೀರದಲ್ಲೂ ಗಾಂಧಾರದಲ್ಲೂ ಹಬ್ಬಿ ಅಭಿವೃದ್ಧಿಗೊಂಡ ಸರ್ವಾಸ್ಥಿವಾದ ಪಂಥಕ್ಕೆ ಕಾನಿಷ್ಕನು ಪೋಷಕನಾಗಿದ್ದನು. ಕಾನಿಷ್ಕನ ಕಾಲದಲ್ಲಿ ಒಂದು ಬೌದ್ಧ ಪರಿಷತ್ತು ಸೇರಿಸುತ್ತ, ವಿನಯ ಮತ್ತು ಅಭಿದಮ್ಮಗಳ ಮೇಲೆ ಒಂದೊಂದಕ್ಕೂ ಲಕ್ಷಶ್ಲೋಕಗಳ ರಚಿತವಾದವು. ಭಾಷೆಗಳು ರಚಿತವಾದ ಮೇಲೆ ರಾಜನು ತಾಮ್ರ ಫಲಕಗಳನ್ನು ಕೆತ್ತಿಸಿ ಅವುಗಳನ್ನು ಪೆಟ್ಟಿಗೆಯಲ್ಲಿ ಇಟ್ಟನೆಂದು ಹೇಳಲಾಗಿದೆ. ಬೌದ್ಧ ಶಾಖೆಗಳ ಪಂಗಡಗಳ ಅಧ್ಯಯನಕ್ಕೆ ಮಹತ್ವದ ಪೂರಕ ಗ್ರಂಥವಾದ ಬೌದ್ಧಧರ್ಮದ ಇತಿಹಾಸ ೧೯೩೨ರಲ್ಲಿ

ಬೂಸ್ಟನ್‌ರಿಂದ ರಚನೆಯಾಯಿತು, ಇದೊಂದು ಟಿಬೆಟ್ ಕೃತಿಯ ಇಂಗ್ಲೀಷ್ ಅನುವಾದವಾಗಿದೆ. ಅವನ ಪ್ರಕಾರ ಕ್ರಿಶ ಮೊದಲನೆ ಶತಮಾನದ ಕಾಲದಲ್ಲಿ ಅಥವಾ ಅದಕ್ಕಿಂತ ಹಿಂದೆ ೧೮ ಬೌದ್ಧ ಶಾಖೆಗಳಿಗೆ ಸಂಬಂಧಿಸಿದ ಧರ್ಮದರ್ಶನ ಕೃತಿಗಳು ಬರಹರೂಪಕ್ಕೆ ಇಳಿದಿದ್ದವು. ಆದರೆ ಜೊತೆಜೊತೆಗೆ ಕಂಠಸ್ಥ ಸಂಪ್ರದಾಯವು ಮುಂದುವರೆಯಿತು. ಬರಹ ರೂಪದಲ್ಲಿ ಇಳಿದ ಕೃತಿಗಳಲ್ಲಿ ಸಹಜವಾಗಿ ವ್ಯಾಖ್ಯಾನಕ್ಕೆ ಟೀಕೆಗೆ ಪ್ರಾಧಾನ್ಯ ದೊರೆತು ಆ ಮೂಲಕ ಭಿನ್ನತೆ ಹೆಚ್ಚಾಯಿತು.

ಬೂಸ್ಟನ್‌ರ ಪ್ರಕಾರ ಸ್ಥವೀರವಾದಿಗಳ ಕೃತಿಗಳ ಭಾಷೆ ಪೈಶಾಚಿ, ಮಹಾಸಾಂಘೆರದ್ದು ಪ್ರಾಕೃತ ಸಮ್ಮಿಳಿತವಾದ್ದದ್ದು ಅಪಭ್ರಂಶ್ ಹಾಗೂ ಸರ್ವಾಸ್ತಿವಾದಿಗಳ ಭಾಷೆ ಸಂಸ್ಕೃತ.

ಬುದ್ಧನ ನಿರ್ವಾಣದ ನಂತರ ಸಂಘದಲ್ಲಿ ಬದ್ಧತೆ ಹಾಗೂ ಐಕ್ಯತೆಯ ಕೊರತೆಯಿಂದಾಗಿ ವಿಘಟನೆ ಪ್ರಾರಂಭವಾಯಿತು, ಮುಂದಿನ ೨ನೇ ಮತ್ತು ೩ನೇ ಶತಮಾನದಲ್ಲಿ ಉಪ ಪಂಗಡಗಳು ಕಾಣಿಸಿಕೊಂಡವು ಸ್ಥವಿರವಾದಿಗಳು ಮತ್ತು ಮಹಾ ಸಾಂಘಿಕರೆಂಬ ೨ ಮೂಲ ಪಂಗಡಗಳಿಂದ ಪ್ರಾರಂಭವಾಗಿ ೩ನೇ ಸಂಘಯಾನದ ವೇಳೆಗೆ ೧೮ ಉಪಪಂಗಡಗಳು ಹುಟ್ಟಿಕೊಂಡವು.

ನಳಿನಾಕ್ಷ ದತ್ತರು Buddist sects in India ಕೃತಿಯಲ್ಲಿ ಎಲ್ಲಾ ಮೂಲಗಳನ್ನು ಶೋಧಿಸಿದ್ದಾರೆ. ಹೂಯಾನ್ಸತ್ಸಾಂಗ್ ಮತ್ತು ಇಕ್ಸಿಂಗ್ ದಾಖಲೆಯಲ್ಲಿ ಸಹ ಬೌದ್ಧ ಶಾಖೆಗಳ ಉಲ್ಲೇಖವಿದೆ.

ಮಹಾಯಾನಕ್ಕೆ ಸಂಬಂಧಪಟ್ಟ ಮುಖ್ಯ ಮೂಲ ಕೃತಿಗಳೆಂದರೆ ೧) ಲಲಿತ ವಿಸ್ತಾರ, ೨) ಅಷ್ಟಾ ಸಾಹಾಸಿಕ ಪ್ರಜ್ಞಾ ಪಾರಮಿಗತ ೩) ಸದ್ಧಮ್ಮ ಪುಂಡರಿಕಾ ೪) ಲಂಕಾವತಾರ ಸೂತ್ರ ೫) ಸುವರ್ಣ ಪ್ರಭಾಸ್ ೬) ಗಂಡಾವ್ಯೂಹ ೭) ತಥಾಗತಾಗುಹ್ಯಾಕಾ (ಗುಡ್ಡ ಸಮಾಜ) ೮) ಸಮಾಧಿರಾಜ ೯) ದಶಭೂಮೇಶ್ವರ ೧೦)ಕಾರಾಂಡವ್ಯೂಹಾ ಇದಲ್ಲದೆ ಲೋಕೋತ್ತಾರವಾದಿ ಶಾಖೆಯವರ ಮಹಾವಸ್ತು ಬುದ್ಧನ ಅಲೌಕಿಕತೆಯನ್ನು ಹೇಳುವ ಕೃತಿ.

ಕಾಂಜ್ ಅವರ ಪ್ರಕಾರ ಇಲ್ಲಿಯವರೆಗೆ ಶೇಕಡ ೫ ಮಾತ್ರ ಮಹಾಯಾನ ಸಾಹಿತ್ಯದ ಶಾಸ್ತ್ರೀಯ ಸಂಪಾದನೆ, ಅಭ್ಯಾಸ ನಡೆದಿದೆ, ಅನುವಾದಗಳಂತು ಶೇ.೨% ಮಾತ್ರ. ಇದು ಅತಿಶಯೋಕ್ತಿ ಎನಿಸಿದರೂ ಕಳೆದ ೧೫೦ ವರ್ಷಗಳ ಅಧ್ಯಯನ ಫಲವನ್ನು ಕಡೆಗಣಿಸುವಂತಿಲ್ಲ, ಇನ್ನೂ ಮಾಡಬೇಕಾದ ಕೆಲಸ ಬೆಟ್ಟದಷ್ಟಿದೆ.

ಆಚಾರ್ಯ ನಾಗಾರ್ಜುನರು ಮಹಾಯಾನ ಪರಂಪರೆಯಲ್ಲಿ ಮರೆಯಲಾಗದ ದಿಗ್ಗಜರು. ಇವರು ಮಾಧ್ಯಮಿಕ ಶಾಖೆಯ ಪ್ರವರ್ತಕರೆಂದೇ ಪ್ರಸಿದ್ದಿ, ಈ ನಾಗಾರ್ಜುನ ಹೆಸರಿನವರು ಭಾರತೀಯ ಪರಂಪರೆಯಲ್ಲಿ ಕನಿಷ್ಠ ಮೂರು ಜನ ಪ್ರಸಿದ್ಧಿಯಾಗಿ ಹೋಗಿದ್ದಾರೆ. ಕ್ರಿ.ಶ ಆದಿಭಾಗದಲ್ಲಿ ಆಗಿ ಹೋದ ಬೌದ್ಧ ನಾಗಾರ್ಜುನ ನಮಗೆ ತುಂಬಾ. ಪ್ರಸ್ತುತನಾದವರು. ಈತನ ಕೃತಿ "ಸುದೃಲ್ಲೇಖ" ಪ್ರಕಟವಾಗಿದೆ. ಮಾಧ್ಯಮಿಕಕಾರಿಕೆ ಅವನ ಶ್ರೇಷ್ಠಕೃತಿ

ಶೂನ್ಯವಾದವನ್ನು ಅದರಲ್ಲಿ ಪ್ರತಿಪಾದಿಸಿದ್ದಾನೆ. ೧೯೦೩ ರಿಂದ ೧೯೧೩ರ ಕಾಲಾವಧಿಯಲ್ಲಿ ಇವುಗಳ ಸಂಪಾದನೆ ಪ್ರಕಟಣೆಯಾಗಿದೆ.



ಚಂದ್ರಕೀರ್ತಿಯ ಮಧ್ಯಮಿಕ ಅವತಾರ, ಆರ್ಯದೇವನ "ಚತುಶ್ಶತಕ" , ಬುದ್ಧ ಪಾಲಿತ ಎಂಬಾತನ ಮೂಲ ಮಾಧ್ಯಮಿಕ ವೃತ್ತಿ, ಭಾವವಿವೇಕನ ಪ್ರಜ್ಞಾಪ್ರದೀಪ, ಕಮಲಶೀಲನ ಭಾವನಾಕ್ರಮ, ದಿಜ್ಞಾಗನ ಪ್ರಮಾಣ ಸಮುಚ್ಚಾಯ, ಇವೆಲ್ಲಾ ದಾರ್ಶನಿಕ ಹಾಗೂ ಬೌದ್ಧ ಪರಂಪರೆಯ ಮಹತ್ವದ ತಾತ್ವಿಕ ಕೃತಿಗಳಾಗಿವೆ. ಇವುಗಳ ಅಭ್ಯಾಸವು ನಡೆದಿದೆ. ಮಹಾಯಾನ ಶಾಖೆಯ ಮೂಲಕವೇ ಬೌದ್ಧದರ್ಶನ ವ್ಯಾಪಕವಾಗಿರುವುದು ಸ್ಪಷ್ಟವಿದೆ. ಬೌದ್ಧಧರ್ಮದ ಅಧ್ಯಯನ ಶ್ರೇಯಸ್ಸು ದಾಸಗುಪ್ತ, ತಕಾಕೂಸು, ಹಾಗೂ ಎಬಿ ರೆತ್ ಅವರುಗಳಿಗೆ ಸಲ್ಲುತ್ತದೆ. ಕನ್ನಡದಲ್ಲಿ ಬೌದ್ಧ ಸಾಹಿತ್ಯದ ಪ್ರಸಾರದ ಶ್ರೇಯಸ್ಸು ಮಹಾಭೋದಿ ಸೊಸೈಟಿ ಬೆಂಗಳೂರ ರವರಿಗೆ ಸಲ್ಲುತ್ತದೆ.

**ತಾಂತ್ರಿಕ ಶಾಖೆ :** ಬೌದ್ಧ ಅಧ್ಯಯನದಲ್ಲಿ ತಾಂತ್ರಿಕ ಶಾಖೆ ಮಹತ್ವದ್ದು, ತಾಂತ್ರಿಕ ಅಂಶಗಳು ಭಾರತೀಯ ಪರಂಪರೆಯ ಮೂಲದ್ದು, ಇದರ ಪ್ರಭಾವ ಎಲ್ಲಾ ಮತ- ಧರ್ಮಗಳ ಮೇಲೆ ಆಗಿದೆ, ಬೌದ್ಧಧರ್ಮದ ಅನುಯಾಯಿಗಳಾಗಿ ಪರಿವರ್ತಿತರಾದವರಲ್ಲಿ. ಕೆಲವರಾದರೂ ತಮ್ಮ ಪೂರ್ವಾಶ್ರಮದಲ್ಲಿ ತಾಂತ್ರಿಕ ಮತದವರಿದ್ದಿರಬೇಕು. ಬೌದ್ದರಾದರೂ ಅವರು ತಮ್ಮ ಹಳೆಯ ಸಂಪ್ರದಾಯವನ್ನು ಬಿಡದೆ ಮುಂದುವರೆಸಿರಬಹುದು. ಅಷ್ಟೇ ಅಲ್ಲಾ ಪ್ರಾಯಶಃ ಸಂಗರಾಮಗಳಲ್ಲಿ ಇದನ್ನು ಅನುಸರಿಸುತ್ತಿರಬೇಕು. ಗುಡ್ಡ ಸಮಾಜ ಹೆಸರೇ ಸೂಚಿಸುವಂತೆ ಇವರದೊಂದು ಒಳಕೂಟ ಇದ್ದಿರಬಹುದು. ಅಂತವರಿಂದ ಇದು ವ್ಯಾಪಕವಾಗಿ ಬೆಳೆಯಿತು. ಮಹಾಯಾನಿಗಳಲ್ಲಿ ಪಾರಮಿತ ಮತ್ತು ಮಂತ್ರಗಳ ಉಪಾಸನೆ ಹೆಚ್ಚಾಗುತ್ತಾ ಹೋದಂತೆ ಇವರನ್ನು ೧) ವಜ್ರಯಾನ ೨) ಕಾಲಚಕ್ರಯಾನ ೩) ಸಹಜಯಾನ ಇತ್ಯಾದಿ ಹೆಸರುಗಳಿಂದ ಗುರುತಿಸತೊಡಗಿದರು.

ಬಿ.ಸಿ. ಭಟ್ಟಾಚಾರ್ಯ ವಜ್ರಯಾನ ಮತ್ತು ಮಂತ್ರಯಾನಕ್ಕೆ ಸಂಬಂಧಿಸಿದಂತೆ ವ್ಯಾಪಕ ಅಧ್ಯಯನ ಮಾಡಿದ್ದಾರೆ, ಅವರ ಪ್ರಕಾರ ಯೋಗಾಚಾರ ಶಾಖೆಗೂ ವಜ್ರಯಾನ ಉಗಮಕ್ಕೂ ಐತಿಹಾಸಿಕ ಸಂಬಂಧ ಇದೆ. ಈ ತಾಂತ್ರಿಕ ಶಾಖೆಯ ಪರಂಪರೆಯನ್ನು ಬೌದ್ಧ ತಾಂತ್ರಿಕ ಸಾಹಿತ್ಯ ಎನ್ನಬಹುದು.

ಬೌದ್ಧ ತಂತ್ರಗಳನ್ನು ೪ ವಿಭಾಗ ಮಾಡುತ್ತಾರೆ,

೧) ಕ್ರಿಯಾತಂತ್ರ:- ಇದರಲ್ಲಿ ವಿಗ್ರಹ ಸ್ಥಾಪನೆ ವಾಸ್ತು ವಿವರಗಳಿವೆ.

೨) ಚರ್ಯತಂತ್ರ :- ಇದರಲ್ಲಿ ಮತದ ಪ್ರಾಯೋಗಿಕ ವಿವರಗಳಿವೆ.

೩) ಯೋಗತಂತ್ರ :- ಇದರಲ್ಲಿ ಯೋಗಿಕ ಸಾಧನೆ ವಿವರಗಳಿವೆ.

೪) ಅನುತ್ತರ ಯೋಗತಂತ್ರ :- ಇದರಲ್ಲಿ ಉನ್ನತ ಅನುಭಾವಿಕ ಅಂಶಗಳಿವೆ.

"ಸಾಧನಾ ಮಾಲ" ಈ ತಾಂತ್ರಿಕ ಶಾಖೆಯ ಮುಖ್ಯ ಕೃತಿ ಇನ್ನೊಂದು ಮಂಜುಶ್ರೀ ಮೂಲಕಲ್ಪ. ಇದನ್ನು ೧೯೧೦-೧೧ರಲ್ಲಿ ಟಿ. ಗಣಪತಿ ಶಾಸ್ತ್ರಿಗಳು ಸಂಪಾದಿಸಿ ಪ್ರಕಟಿಸಿದ್ದಾರೆ.

ವಜ್ರಯಾನ ಶಾಖೆಯ ಇತರೆ ಮುಖ್ಯ ಕೃತಿಗಳೆಂದರೆ ಹೇ ವಜ್ರತಂತ್ರ, ಬೈಷಜ್ಯಗುರು, ಏಕದಶಮುಖ, ಹಯಗ್ರೀವ ವಿದ್ಯಾ, ಸರ್ವಾತಥಾಗತಾಧಿಷ್ಠಾನ ವ್ಯೂಹ, ಇತ್ಯಾದಿ



ಕಾಲಚಕ್ರ ತಂತ್ರದಲ್ಲಿ ಕಾಲಚಕ್ರ ಆರಾಧನ ವಿಧಿಯೇ ಮುಖ್ಯವಾದುದ್ದು, ಇದು ೧೦ನೇ ಶತಮಾನದಲ್ಲಿ ಆಚರಣೆಯಲ್ಲಿದ್ದು, ಟಿಬೇಟ್ ಮತ್ತು ಚೀನಾದಲ್ಲಿ ಪ್ರಚಾರದಲ್ಲಿ ಇದ್ದುದ್ದು ತಿಳಿಯುತ್ತದೆ

ಸಹಜಯಾನ ಇದರ ಪ್ರಕಾರ ಮಾನವನ ದೇಹವೇ ಎಲ್ಲಾ ಅನುಭವಗಳಿಗೆ ಕೇಂದ್ರ ಹಾಗೂ ಈ ದೇಹದ ಆಂತರಿಕ ಸಹಜ ಸ್ವಭಾವಕ್ಕೆ ಪ್ರಾಧಾನ್ಯತೆ, ಸಹಜ ಮಹಾಸುಖ ಎಂಬುದು ಶಾಶ್ವತ ಆನಂದಾನುಭಾವ. ಪೂರ್ವಭಾರತದಲ್ಲಿ ಇದರ ಪ್ರಭಾವ ಹೆಚ್ಚಾಗಿದ್ದು, ದೋಹ ಮತ್ತು ಹಾಡುಗಳು ಸಿಕ್ಕಿವೆ. ಮಹಾ ಮಹೋಪಾಧ್ಯಾಯ ಹರಪ್ರಸಾದ ಶಾಸ್ತ್ರಿ ಯವರು ೧೯೦೭ ರಲ್ಲಿ ಇಂತಹ ೫೦ಕ್ಕೂ ಹೆಚ್ಚು ದೋಹಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಬಿ.ಸಿ.ಭಟ್ಟಾಚಾರ್ಯರು Introduction to the Study of Buddhist Esotrism (೧೯೨೪-೧೯೩೨) ಕೃತಿಯಲ್ಲಿ ಹಿಂದೂಧರ್ಮದ ತಾಂತ್ರಿಕ ಶಾಖೆಗೂ ಬೌದ್ಧಧರ್ಮದ ತಾಂತ್ರಿಕ ಶಾಖೆಗೂ ಮೇಲ್ನೋಟಕ್ಕೆ ಹೋಲಿಕೆ ಕಂಡರೂ ನಿಜವಾಗಿ ಅವುಗಳ ಸಾಮ್ಯತೆ ತೀರಾಕಡಿಮೆ ಎಂದಿದ್ದಾರೆ. ಬೌದ್ಧರೆ ಧರ್ಮದ ಆಚರಣೆಯಲ್ಲಿ ತಾಂತ್ರಿಕ ಕಲ್ಪಿಸಿದವರಲ್ಲಿ ಮೊದಲಿಗರು ಹಿಂದೂಗಳು ಅನಂತರ ಬೌದ್ದರಿಂದ ಇದನ್ನು ಸ್ವೀಕರಿಸಿದರು ಎನ್ನುತ್ತಾರೆ, ಟಿಬೇಟಿಯನ್ ಮೂಲ ಪರಿಶೀಲಿಸಿ ಅವರು ಅಧ್ಯಯನ ನಡೆಸಿದ್ದಾರೆ.

ಎವಾನ್ಸ ವೆಂಜ್ ಅವರ Tibetian Yoga and Secret Doctrine ಕೃತಿ ಪಿ.ಸಿ ಬಾಗಚಿರವರ Studies in Tantras, ಜಿ.ತುಚ್ಚಿಯವರ ಸಂಪಾದನೆಯ ಹೇ ವಜ್ರತಂತ್ರ ಮತ್ತು Theory and Practice of Mandalas (೧೯೬೧) ಕೃತಿಗಳಲ್ಲಿ ತಂತ್ರಶಾಖೆ ಬೌದ್ಧ ಮಂಡಲಗಳ ಅಧ್ಯಾಯನವಿದ್ದು, ಮಂಜುಶ್ರೀ ಮೂಲಕಲ್ಪಗಳಲ್ಲಿ ಹೇಳಿದ ಮಂಡಲಗಳ ಬಗ್ಗೆಯೂ ಸಹ ಅಭ್ಯಾಸ ನಡೆದಿದೆ.

## ೧. ಕರಾಳ ಕಾಲ

**ಬೌದ್ಧಧರ್ಮ ಮತ್ತು ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯ**

ಪ್ರಾಚೀನ ಮತ್ತು ಮಧ್ಯಕಾಲಿನ ಕನ್ನಡ ಸಾಹಿತ್ಯದಲ್ಲಿ ಕಂಡು ಬರುವ ಕೆಲವು ಬೌದ್ಧಧರ್ಮ ಸಂಬಂಧಿತ ಉಲ್ಲೇಖಗಳನ್ನು ಒಗ್ಗೂಡಿಸಿ ಅವುಗಳನ್ನು ಸ್ವಲ್ಪಮಟ್ಟಿಗೆ ವಿಮರ್ಶಿಸಲಾಗಿದೆ. ಈ ಕಾಲಘಟ್ಟದಲ್ಲಿ ಅಲ್ಲಲ್ಲಿ ಬೌದ್ಧ ಧರ್ಮದ ಪರವಾದ ನಿಲವುಗಳಿದ್ದರೂ, ಹೆಚ್ಚಿಗೆ ಬೌದ್ಧ ವಿರೋಧಿ ಧೋರಣೆಗಳೆ ರಾರಾಜಿಸುತ್ತಿವೆ. ಆದ್ದರಿಂದ ಈ ಕಾಲವನ್ನು ಬೌದ್ದರ ಪಾಲಿನ ಕರಾಳ ಕಾಲವೆಂದು ಪರಿಗಣಿಸಬಹುದಾಗಿದೆ.

## ೨. ಪುನಃ ಶ್ಚೇತನ ಕಾಲ

**೨೦ ನೇ ಶತಮಾನದ ಕನ್ನಡ ಬೌದ್ಧ ಸಾಹಿತ್ಯ**

೨೦ನೆಯ ಶತಮಾನದಲ್ಲಿ ನಡೆದ ಧಾರ್ಮಿಕ ಪ್ರಚಾರದಿಂದಾಗಿ ಕರ್ನಾಟಕದಲ್ಲಿ ಕೆಲವಡೆ ಬೌದ್ಧಧರ್ಮದ ಅನುಯಾಯಿಗಳು ಅಲ್ಲಲ್ಲಿ ಅಲ್ಪಸಂಖ್ಯೆಯಲ್ಲಿ ಕಾಣಿಸಿಕೊಳ್ಳು ವುದುಂಟು, ಬೆಂಗಳೂರಿನಲ್ಲಿರುವ ಮಹಾಬೋಧಿ ಸೊಸೈಟಿ ಬೌದ್ಧ ಧಾರ್ಮಿಕ ಪ್ರಚಾರ



ಕಾರ್ಯದಲ್ಲಿ ನಿರತವಾಗಿದೆ. ಸ್ವಾತಂತ್ರೋತ್ತರ ಭಾರತದಲ್ಲಿ ಟಿಬೇಟ್‌ನಿಂದ ವಲಸೆ ಬಂದ ನಿರಾಶ್ರಿತರ ತಾಣಗಳು ಕರ್ನಾಟಕದಲ್ಲಿ ಕಾಣಸಿಗುತ್ತವೆ. ಮಹಾಭೋದಿ ಸೋಸೈಟಿ ಹಾಗೂ ಮಿಥಿಕ್ ಸೊಸೈಟಿಗಳಂತಹ ಸಂಘ ಸಂಸ್ಥೆಗಳು ಏರ್ಪಡಿಸಿದ ಉಪನ್ಯಾಸ ಹಾಗೂ ಸಂಶೋಧನಾ ಕಮ್ಮಟಗಳಲ್ಲಿ ಬೌದ್ಧ ಮತದ ಪರವಾದ ವಿಚಾರಗಳು ವಿಶೇಷವಾಗಿ ಚರ್ಚಿತವಾಗಿ ಆ ಮೂಲಕ ಜನ ಸಾಮಾನ್ಯರನ್ನು ತಲುಪಲು ಅನುಕೂಲವಾಯಿತು.

ಕನ್ನಡ ಬೌದ್ಧ ಸಾಹಿತ್ಯಕ್ಕೆ ಅಪೂರ್ವ ಕೊಡುಗೆ ಸಲ್ಲಿಸಿದ್ದವರಲ್ಲಿ ಜಿ.ಪಿ.ರಾಜರತ್ನಂ ರವರು ಅಗ್ರ ಸ್ಮರಣೀಯರು. ಪಾಲಿ ಕನ್ನಡ ಅನುವಾದ ಮಾಲೆ, ಶಾಕ್ಯ ಸಾಹಿತ್ಯ ಮಂಟಪ ಇವುಗಳನ್ನು ಸ್ಥಾಪಿಸಿ ಆ ಮೂಲಕ ಬೌದ್ಧ ಸಾಹಿತ್ಯವನ್ನು ಬಗೆ ಬಗೆಯಾಗಿ ಕನ್ನಡಕ್ಕೆ ತರುವ ಕಾರ್ಯ ಒಬ್ಬ ಬೌದ್ಧೇತರ ಸಾಹಿತಿಯಿಂದ ನಡೆದಿರುವುದು ಶ್ಲಾಘನೀಯ ಸಂಗತಿಯಾಗಿದೆ. ಬುದ್ದವಚನ ಪರಿಚಯ, ಮಿಲಿಂದ ಪ್ರಶ್ನೆ, ಮೂರು ಪಾಲಿಸೂತ್ರಗಳು, ಪಾಲಿ ವಜಪುಷ್ಪಾಂಜಲಿ, ಧ್ಯಾನವೀರ ವಿಶ್ವಾಂತರ, ಸುಗತ ಸಂದೇಶ, ದಮ್ಮಪದ, ಧಮ್ಮಪದ ಪ್ರವೇಶಿಕ, ಬುದ್ಧನ ಕಾಲದ

ತೀರ್ಥಂಕರು, ಬೋಧಿ ಕತೆಗಳು, ಬುದ್ದನು ಹೇಳಿದ ಕತೆಗಳು ಇಂತಹ ಅನೇಕ ಕೃತಿಗಳನ್ನು ಅವರು ಕನ್ನಡಕ್ಕೆ ನೀಡಿದ್ದಾರೆ.

ಕನ್ನಡ ಬೌದ್ಧ ಸಾಹಿತ್ಯ ಸೃಜಕರಲ್ಲಿ ಮೊದಲ ಹೆಸರು ಕೇಳಿ ಬರುವುದು ದಿವಂಗತ ಬಿದರೆ ಆಶ್ವತ್ಥ ನಾರಾಯಣ ಶಾಸ್ತ್ರಿಯವರದು. ೧೯೦೭ರ ಡಿಸೆಂಬರ ತಿಂಗಳಲ್ಲಿ ಪ್ರಕಟವಾದ ಅವರ ಬೌದ್ಧಾವತಾರ ಅವರ ಗಮನರ್ಹ ಕೃತಿ, ಕನ್ನಡ ಬಾಷೆಗೆ ಒಳ್ಳೆಯ ಅವಕಾಶಗಳು ಇರದಿದ್ದ ಕಾಲದಲ್ಲಿ ಈ ಕೃತಿ ಹೊರಬಂದಿರುವುದು ಒಂದು ವಿಶೇಷ. ಅನಂತರದಲ್ಲಿ ಬಂದ ಧಮ್ಮಪದವೆಂಬ ಬುದ್ಧಗೀತೆ, ವ್ಯಾಗಿಜಾತಕ, ಧರ್ಮ ಸಾಮ್ರಾಜ್ಯ ಗ್ರಂಥಗಳು, ಬಿದರೆಯವರಿಗೆ ಅಪಾರ ಯಶಸ್ಸನ್ನು ತಂದವು. ೧೯೧ಲ ರಲ್ಲಿ ಪ್ರಕಟವಾದ ಧಮ್ಮಪದವೆಂಬ ಬುದ್ಧಗೀತೆ ಭಾರತೀಯ ಯಾವ ಭಾಷೆಗಳಿಗೂ ಅನುವಾದ ಆಗುವ ಮೊದಲೆ ಕನ್ನಡಕ್ಕೆ ಅನುವಾದಗೊಂಡಿದೆ.

ಪ್ರಪಂಚದ ಶ್ರೇಷ್ಠ ಧಾರ್ಮಿಕ ಗ್ರಂಥಗಳ ಪೈಕಿ ದಮ್ಮಪದವು ಒಂದೆಂದು ಆಭಿಪ್ರಾಯವಿದೆ. ಇಂದು ಕೂಡ ಪ್ರಪಂಚದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಪ್ರಕಟವಾಗಿ ಪ್ರಸಾರವಾಗುತ್ತಿರುವ ಜಗತ್ತಿನ ನಂಬರ-೧ ಗ್ರಂಥವೆಂದರೆ ಧಮ್ಮಪದ, ಈ ಗ್ರಂಥವನ್ನು ಅನೇಕರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರುಗಳಲ್ಲಿ ಗೊವಿಂದಪ್ಪೈ, ಜಿ.ಪಿ.ರಾಜರತ್ನಂ, ಶ್ರೀ ರಂಗರಾಜು, ವೈ ಸುಬ್ಬರಾವ್, ಬಿ.ವಿ. ರಾಜರಾಂ, ಮುಂತಾದವರು ಮೊದಲಿಗರು.

ಬೌದ್ಧ ಸಾಹಿತ್ಯವನ್ನು ಕನ್ನಡಕ್ಕೆ ತರಲು ಶ್ರಮಿಸಿದ ಮುಖ್ಯರಲ್ಲಿ ಎಚ್.ವಿ ಶ್ರೀ ರಂಗರಾಜು, ಎಸ್.ಕೆ ರಾಮಚಂದ್ರರಾಯರು ಪ್ರಮುಖರು, ಬೆಂಗಳೂರಿನ ಬುದ್ದ ವಚನ ಟ್ರಷ್ಟನ ಆಚಾರ್ಯ ಬುದ್ಧರಕ್ಷಿತ ಬಂತೇಜಿರವರ ಸಹಕಾರದೊಂದಿಗೆ ಕನ್ನಡ ತ್ರಿಪಿಟಕ ಗ್ರಂಥಮಾಲೆಯಡಿ ಸಾಕಷ್ಟು ಸಂಪುಟಗಳನ್ನು ಹೊರತಂದಿದ್ದಾರೆ. ೫೦ ಬುದ್ಧಜಾತಕ ಕತೆಗಳನ್ನು ಸರಾಗವಾಗಿ ಅನುವಾದಿಸಿದ ಸಾಲಿ ರಾಮಚಂದ್ರರಾಯರ ಕೃತಿ ೧೯ಳಲರಲ್ಲಿ ಪ್ರಕಟವಾಗಿದೆ. ಶಿವರಾಮ ಕಾರಂತರ ಬುದ್ಧಜಾತಕ ಕತೆಗಳು, ಮಿರ್ಜಿ ಅಣ್ಣಾರಾಯರ ಬುದ್ಧನ ಕತೆಗಳು, ಗೊವಿಂದಪೈರವರ ಬುದ್ಧನ ಕತೆಗಳು ಇವೆ ಮೊದಲಾದ ಸಂಕಲನಗಳನ್ನು ಇಲ್ಲಿ ಹೆಸರಿಸಬಹುದು.

ಕನ್ನಡದ ಬುದ್ಧದೇವನ ಚರಿತ್ರೆಯಲ್ಲಿ ಎಮ್.ರಾಮರಾಯರ "ಬುದ್ಧದೇವ" , ಹರ್ಡೇಕರ್ ಮಂಜಪ್ಪನವರ "ಬುದ್ಧಚರಿತ್ರೆ" , ಎಮ್.ಎಸ್. ಶಿವರಾಮರಾಯರ "ಅನುಕಂಪಿ ಬುದ್ಧ" , ಎಸ್.ಕೆ. ರಾಮಚಂದ್ರರಾಯರ "ಬೋಧಿಯ ಬೆಳಕಲ್ಲಿ" , ಜಿ.ಪಿ ರಾಜರತ್ನಂ ರವರ "ಧರ್ಮದಾನಿ ಬುದ್ಧ" , "ಮಹಾಕಾರುಣಿಕ ಭಗವಾನ ಬುದ್ಧ" , ಬಿ ವೆಂಕಟಯ್ಯ ನವರ "ದಯಾಮೂರ್ತಿ ಬುದ್ಧ" , ಜಿ. ವೆಂಕಟಯ್ಯನವರ "ಬುದ್ಧದೇವ", ವಿ. ಸೀತಾರಾಮಯ್ಯನವರ "ಕುಮಾರಗೌತಮ" , ಎನ್ಎಸ್ ಶರ್ಮಾರವರ "ಗೌತಮ" ಇವುಗಳನ್ನು ಉಲ್ಲೇಖಿಸಬಹುದು.

ಧರ್ಮಾನಂದ ಕೊಸಂಬಿರವರು ಮರಾಠಿಯಲ್ಲಿ ಬರೆದ "ಭಗವಾನ್ ಬುದ್ಧ" ಎಂಬ ಪ್ರಸಿದ್ಧ ಕೃತಿಯನ್ನು ಆದ್ಯ ರಂಗಾಚಾರ್ಯರು ಅನುವಾದಿಸಿ ೧೯೫೭ ರಲ್ಲಿ ಪ್ರಕಟಿಸಿದ್ದಾರೆ. ಅಶ್ವಘೋಷನ ಬುದ್ಧಚರಿತ ಮಹಾಕಾವ್ಯವನ್ನು ಎಸ್.ವಿ ಪರಮೇಶ್ವರ ಭಟ್ಟರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅದೇ ರೀತಿಯಾಗಿ ಅಶ್ವಘೋಷನ ಬುದ್ಧಚರಿತೆ ಮತ್ತು ಸೌಂದರಾನಂದ ಕೃತಿಯನ್ನು ಎಲ್. ಬಸವರಾಜುರವರು ಈ ದಶಕದಲ್ಲಿ ಕನ್ನಡಕ್ಕೆ ತಂದಿದ್ದಾರೆ.

ನಾಟಕಗಳಲ್ಲಿ ಕುವೆಂಪುರವರ ಮಹಾರಾತ್ರಿ, ಬಿ ಪುಟ್ಟಸ್ವಾಮಿರವರ ಗೌತಮ ಬುದ್ಧ, ಶಿವರಾಂ ಕಾರಂತರವರ ಬುದ್ಧೋದಯ, ಕಿಸಾ ಗೋತಮಿ, ಮಾಸ್ತಿರವರ ಯಶೋಧರಾ, ಪ್ರಭುಶಂಕರವರ ಅಂಗುಲಿಮಾಲ, ಆಮ್ರಪಾಲಿ, ಮ ನ ಜವರಯ್ಯನವರ ಜಲ ಮುಖ್ಯವಾದವು.

ಕಾದಂಬರಿಗಳಲ್ಲಿ ಡಾ. ಪ್ರಭುಶಂಕರವರ ಕರುಣಾ ಗಂಗೆ, ನೀಲತ್ತಳ್ಳಿ ಕಸ್ತೂರಿ ಯವರ ಕರುಣಲಹರಿ, ಎಡ್ವರ್ಡ್ ಥಾಂಪ್ಸನ್‌ರವರ ಯಂಗೆ ಸ್ಟಡಿ ಸೈಪಲ್ ಕಾದಂಬರಿಯ ಭಾವಾನುವಾದವಾಗಿದೆ. ಹೆಮನ್ ಹೆಸ್ಸರವರ ಸಿದ್ಧಾರ್ಥ ಕಾದಂಬರಿಯನ್ನು ಬಿ. ರಾಮಸ್ವಾಮಿ ಅಯ್ಯಂಗಾರ ಅನುವಾದಿಸಿದ್ದಾರೆ.

೧೯೪೦ರಲ್ಲಿ ಜಿ.ಪಿ. ರಾಜರತ್ನಂ ಸಂಪಾದಿಸಿದ ವೈಶಾಖ ಶುಕ್ಲ ಪೂರ್ಣಿಮಾ ಕೃತಿಯಲ್ಲಿ ಈ ನಾಡಿನ ಹಿರಿಯ ಕವಿಗಳ ಕವಿತೆಗಳನ್ನು ಸಂಕಲನ ಮಾಡಿದ್ದಾರೆ. ಬುದ್ಧನನ್ನು ಕುರಿತು ಕವಿತೆ ರಚಿಸಿದವರಲ್ಲಿ ಗೋವಿಂದ ಪೈ, ದ.ರಾ. ಬೇಂದ್ರೆ, ಕುವೆಂಪು, ಮಾಸ್ತಿ ಶ್ರೀನಿವಾಸ ಅಯ್ಯಂಗಾರ್, ಶಿವರಾಂ ಕಾರಂತ, ವಿ.ಕೃ ಗೋಕಾಕ್, ಪು.ತಿ.ನ, ಕೆ.ಎಸ್.ನರಸಿಂಹಸ್ವಾಮಿ, ಜಿ.ಪಿ.ರಾಜರತ್ನಂ, ಜಿ. ಎಸ್. ಶಿವರುದ್ರಪ್ಪವಿ. ಸೀತಾರಾಮಯ್ಯ, ಎ.ಆರ್. ಶ್ರೀನಿವಾಸಮೂರ್ತಿ, ಸಾಲಿ ರಾಮಚಂದ್ರರವರು, ಮಜೇಂದ್ರ ಮಹಿಷವಾಡಿ, ಜಿ.ಎಸ್. ಸಿದ್ಧಲಿಂಗಯ್ಯ, ವೈ.ಎನ್.ಕೆ, ಬಿ.ಎ. ಸನದಿ, ಆರ್. ಅನಂತರಾಮು, ಬಿ. ಬೊಮ್ಮರಸೇಗೌಡ ಮೊದಲಾದವರನ್ನು ಹೆಸರಿಸಬಹುದು.

ಹೊಸಕೆರೆ ಚಿದಂಬರರ ಭರತಖಂಡದ ಜೀವಜ್ಯೋತಿಗಳು, ಡಾ. ಎಮ್.ಎಚ್. ಕೃಷ್ಣರವರ ಚರಿತ್ರೆಯ ಮಹಾಪುರುಷರು ಮೊದಲಾದವರ ಸಂಕಲನಗಳಲ್ಲಿ ಬುದ್ಧನ ಚರಿತೆ ದಾಖಲಾಗಿದೆ. ಪಿ. ಲಂಕೇಶರವರ ಮೋಕ್ಷ ಅರಸುತ್ತ ಪ್ರೀತಿಯ ಬಂಧನದಲ್ಲಿ ಎಂಬ ಲೇಖನ ಪ್ರಸ್ತುತ ಸಮಾಜಮುಖಿಯಾಗಿದೆ.

ಬುದ್ಧ ಹಾಗೂ ಬೌದ್ಧಧರ್ಮದ ಅನೇಕ ಲೇಖನಗಳು ಸುಬೋಧ, ಹಿತಬೋಧಿನಿ, ಸ್ವದೇಶಾಭಿಮಾನಿ, ವಿದ್ಯಾದಾಯಿನಿ, ಸ್ವಧರ್ಮ, ಜಯ ಕರ್ನಾಟಕ, ಪ್ರಬುದ್ಧ ಕರ್ನಾಟಕ, ಶರಣ ಸಾಹಿತ್ಯ ಮತ್ತು ಆತ್ಮ ಪ್ರಕಾಶ ಇತ್ಯಾದಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ನವ್ಯ, ನವೋದಯ, ಪ್ರಗತಿಶೀಲ ಕಾಲದ ಎಲ್ಲಾ ಪ್ರಮುಖ ಲೇಖಕರು/ ಬರಹಗಾರರು ಬುದ್ಧನನ್ನು ಕುರಿತು, ಕಥೆ ಕಾದಂಬರಿ ನಾಟಕ, ಲೇಖನ, ಕವಿತೆ, ಯಾವುದಾದರೊಂದು ಬಗೆಯಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾರೆ. ದಲಿತ ಬಂಡಾಯದ ಲೇಖಕರು ಸಹ ಈ ಜನಪ್ರಿಯ ಕಾರ್ಯದಲ್ಲಿ ಸರ್ವ ಸಾಮಾನ್ಯವಾಗಿ ಎಲ್ಲರೂ ಕೈಜೋಡಿಸಿದ್ದಾರೆ.

**ಕರ್ನಾಟಕದಲ್ಲಿ ಬೌದ್ಧ ನೆಲೆಗಳು**

ಪ್ರಾಚೀನ ಕರ್ನಾಟಕಕ್ಕೆ ಬೌದ್ಧ ಧರ್ಮದ ಪ್ರವೇಶವಾದ ಬಗ್ಗೆ ನಿಖರವಾದ ದಿನಾಂಕವುಳ್ಳ ದಾಖಲೆಗಳು ದೊರೆಯುತ್ತಿಲ್ಲ. ಆದರೆ ಕೆಲವು ಬೌದ್ಧ ಗ್ರಂಥಗಳು ಅಶೋಕನ ಶಿಲಾ ಶಾಸನಗಳು ಮತ್ತು ಇತರ ಆಧಾರದ ಮೂಲಕ ಬೌದ್ಧಧರ್ಮದ ಪ್ರವೇಶದ ಊಹೆಯನ್ನು ಮಾಡಬಹುದಾಗಿದೆ.

ಭಾರತದಲ್ಲಿ ಬೌದ್ಧಧರ್ಮ ಹೆಚ್ಚಿನ ಪ್ರಸಾರವಾದದ್ದು ಅಶೋಕನ ಕಾಲದಲ್ಲಿ, ಕ್ರಿ.ಪೂ ೩ನೇ ಶತಮಾನ ಆದರೂ ಈ ಮೊದಲೇ ದಕ್ಷಿಣ ಭಾರತದಲ್ಲಿ ಬೌದ್ಧಧರ್ಮ ಇದ್ದ ಬಗ್ಗೆ ಸಾಕ್ಷಾಧಾರಗಳಿವೆ. ಸುನಿಪಾತದಂತಹ ಅಶೋಕ ಪೂರ್ವಯುಗದ ದಕ್ಷಿಣಾಪಥದ ಉಲ್ಲೇಖವು ಇದೆ, ಬಾವರಿ ಮುಂತಾದ ಧರ್ಮಾನುಯಾಯಿಗಳ ಹೆಸರು ಇದೆ. ಕನಿಷ್ಠ ಪಕ್ಷ ಗೋದಾವರಿಯ ತೀರ ಪ್ರದೇಶದಲ್ಲಿ, ಆ ಕಾಲಕ್ಕಾಗಲೇ ಬೌದ್ಧ ಅನುಯಾಯಿಗಳು ಇದ್ದದ್ದು ಸ್ಪಷ್ಟ ಗೊಂಡಿದೆ.

ಬುದ್ಧನು ಪರಿನಿರ್ವಾಣ ಹೊಂದಿದ ನೂರು ವರ್ಷಗಳ ಬಳಿಗೆ ಕ್ರಿ.ಪೂ ೩೭೫ ರಲ್ಲಿ ವೈಶಾಲಿಯಲ್ಲಿ ನಡೆದ ೨ನೇ ದಮ್ಮ ಸಂಘಯಾನಯಲ್ಲಿ ದಕ್ಷಿಣದ ಬೌದ್ಧಭಿಕ್ಷುಗಳು ಭಾಗವಹಿಸಿದ ಬಗ್ಗೆ ವಿನಯ ಪಿಟಕದ ಚುಲ್ಲವಗ್ಗವು ಹೇಳುತ್ತದೆ. ಜಾತಕ ಕಥೆಗಳಲ್ಲಿ ಅವುಗಳ ಮೂಲ ರಚನಾಕಾಲ ಸುಮಾರು ಕ್ರಿ.ಪೂ.೪ನೇ ಶತಮಾನ. ಇದರಲ್ಲಿ ದಕ್ಷಿಣಪಥ ಉಲ್ಲೇಖಗೊಂಡಿದೆ. ಮುಂದೆ ಅಶೋಕನ ಕಾಲದಲ್ಲಿ ನಡೆದ ಮೂರನೆಯ ಬೌದ್ಧ ಸಂಘಯಾನದ ಬಳಿಕವಂತೂ ಬೌದ್ಧ ಥೇರರು ಧರ್ಮದ ವಿಶೇಷ ಪ್ರಸಾರಕ್ಕಾಗಿ ದೇಶದ ವಿವಿಧ ಭಾಗಗಳಿಗೆ ಹೋದ ಉಲ್ಲೇಖವಿದೆ. ಕರ್ನಾಟಕದ ಭಾಗಗಳಿಗೆ ಥೇರ ಮಹಾದೇವನೂ, ಥೇರರಕ್ಷಿತನೂ ಮಹಿಷಮಂಡಲ ಮತ್ತು ಬನವಾಸಿ ಪ್ರಾಂತ್ಯಗಳಿಗೆ ಬಂದುದಾಗಿ ಮಹಾವಂಶ ಕೃತಿ ಉಲ್ಲೇಖಿಸಿದೆ.

ಅಶೋಕನ ಶಾಸನಗಳಲ್ಲಿ ಲಘು ಶಿಲಾಲೇಖಗಳ ಪರಂಪರೆಯಿದೆ. ಕರ್ನಾಟಕದಲ್ಲಿ ಅಂಥ ಹತ್ತು ಶಿಲಾಶಾಸನಗಳು ಈವರೆಗೆ ದೊರೆತಿವೆ. ಆತನ ಶಾಸನಗಳಲ್ಲಿ ಬೇರೆ ಬೇರೆ ಪಾಠಗಳಿದ್ದು ಅವುಗಳ ಪೈಕಿ ಎರಡನೆಯ ಹಾಗೂ ಹದಿಮೂರನೆಯ ಪಾಠಗಳು ಆತನ ಸಾಮ್ರಾಜ್ಯದ ದಕ್ಷಿಣ ಪ್ರಾಂತ್ಯದ ರಾಜ್ಯಗಳನ್ನು ಹೆಸರಿಸುತ್ತವೆ.

ಅವುಗಳೆಂದರೆ ಚೋಳ, ಪಾಂಡ್ಯ, ಸತಿಯ ಪುತ್ರ ಮತ್ತು ಕೇರಳ ಪತ್ರಗಳು ಆದ್ದರಿಂದ ಸುಮಾರಾಗಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಹೊರತುಪಡಿಸಿದ (ಆ ಭಾಗವೇ ಸತಿಯಪುತ್ರ) ಇಂದಿನ ಕರ್ನಾಟಕದ ಬಹುಪಾಲು ಅಶೋಕನ ಸಾಮ್ರಾಜ್ಯದ ಭಾಗವೆ ಆಗಿತ್ತು, ಆ



ಕಾಲವಂತೂ ಬೌದ್ಧಧರ್ಮದ ವಿಶೇಷ ಉಚ್ಛ್ರಾಯದ ಕಾಲವಾಗಿ ಪರಿಗಣಿತವಾಗುತ್ತದೆ. ಆದ್ದರಿಂದ ಕರ್ನಾಟಕಕ್ಕೆ ಬೌದ್ಧ ಮತದ ಪ್ರವೇಶವು ಅಶೋಕ ಪೂರ್ವಯುಗದಲ್ಲಿ ಆಯಿತೆಂದೂ ಅದರ ವಿಶೇಷ ಪ್ರಸಾರ ಅಶೋಕನ ಕಾಲದಲ್ಲಿ ಆಯಿತೆಂದು ಸದ್ಯಕ್ಕೆ ಖಚಿತವಾಗಿ ಹೇಳಬಹುದು ಎಂದು ವಿದ್ವಾಂಸರಾದ ಡಾ. ವಸಂತಕುಮಾರ ತಾಳ್ತಜೆ ಅಭಿಪ್ರಾಯಪಟ್ಟಿದ್ದಾರೆ.

ಕ್ರಿ.ಶ. ಆದಿ ಭಾಗದಲ್ಲಿ ಸಿಂಹಳದಲ್ಲಿ ನಡೆದ ಬೌದ್ಧ ಸಮಾರಂಭವೊಂದರಲ್ಲಿ ಬಾರತದ ಬೇರೆಬೇರೆ ಕಡೆಗಳಿಂದ ಬಂದು ಭಾಗವಹಿಸಿದವರ ವಿವರಗಳು ಸಿಗುತ್ತವೆ. ಅದರಲ್ಲಿ ಬನವಾಸಿಯಿಂದ ಥೇರಚಂದ್ರಗುಪ್ತರ ನೇತೃತ್ವದಲ್ಲಿ ಎಂಬತ್ತು ಸಾವಿರ ಬಿಕ್ಕುಗಳು ಬಾಗವಹಿಸಿದ ಬಗ್ಗೆ ಉಲ್ಲೇಖವಿದೆ. ಇದರ ಸಂಖ್ಯಾಬಾಹುಳ್ಯದಲ್ಲಿ ಅತಿಶಯೋಕ್ತಿ ಇರಬಹುದಾದರೂ ಸಾಕಷ್ಟು ಪ್ರಭಾವಿಯಾದ ಬೌದ್ಧನೀತಿ ಇಲ್ಲಿ ಇದ್ದುದರ ಬಗ್ಗೆ ಅನುಮಾನವಿಲ್ಲ.

ಕರ್ನಾಟಕದಲ್ಲಿಯ ಬೌದ್ಧ ಪರಂಪರೆಯನ್ನು ಆ ಧರ್ಮದ ಹೀನಯಾನ ಮಹಾಯಾನ ಮತ್ತು ವಜ್ರಯಾನಗಳೆಂಬ ಮೂರು ಪ್ರಧಾನ ಶಾಖೆಗಳಿಗೆ ಅನುಗುಣ ಪರಿಗಣಿಸುವುದೇ ಹೆಚ್ಚು ಸಮಂಜಸವಾಗುತ್ತದೆ. ಹೀನಯಾನ ಪರಂಪರೆಯ ಮಹಿಶಾಸಕ ಶಾಖೆಯ ಬನವಾಸಿ ಕೇಂದ್ರವಾಗಿತ್ತು. ಪಶ್ಚಿಮ ಕರಾವಳಿ ಉದ್ದಕ್ಕೂ ಅಲ್ಲದೆ ಮಹಿಷಮಂಡಳ ಮತ್ತು ಬನವಾಸಿಗಳಲ್ಲಿ ಕ್ರಿ.ಶ ಹಿಂದು ಮುಂದಿನ ದಿವಸಗಳಲ್ಲಿ ಹೀನಯಾನ ಸಂಪ್ರದಾಯವೇ ಪ್ರಚಾರದಲ್ಲಿತ್ತು, ಪ್ರಾಚೀನ ಬೌದ್ಧ ಗ್ರಹಾಲಯಗಳ ಒಳವಿವರಗಳು ಇದಕ್ಕೆ ಸಾಕ್ಷಿಯೊದಗಿಸುತ್ತವೆ, ಬನವಾಸಿಯ ಶಾತವಾಹನ ಹಾಗೂ ಚಟು ರಾಜಮನೆತನದವರು ಮಹಿಶಾಸಕ ಶಾಖೆಗೆ ಪ್ರೋತ್ಸಾಹ ನೀಡುತ್ತಿದ್ದರು. ಅಲ್ಲಿಯ ಮಹಾರಾಣಿ ಸಿರಿಜಾತಮಲ ಎಂಬಾಕೆಯು ಮಹಿಶಾಸಕ ಆಚಾರ್ಯರುಗಳಿಗಾಗಿ ಆಂಧ್ರದ ನಾಗಾರ್ಜುನಕೊಂಡದಲ್ಲಿ ಸ್ಥಂಭ ಹಾಗೂ ವಿಹಾರಗಳನ್ನು ಕಟ್ಟಿಸಿದ ಉಲ್ಲೇಖಗಳಿವೆ. ರಾಜಮನೆತನವನ್ನಷ್ಟೆ ಅಲ್ಲದೆ ಆ ಕಾಲದ ಇತರ ಸಾಮಾಜಿಕರೂ (ಉಪಾಸಕರು) ಪ್ರೋತ್ಸಾಹ ಕೊಡುತ್ತಿದ್ದರು, ಬನವಾಸಿಯ ಬೂತಪಾಲನೆಂಬ ವರ್ತಕ ಕಾರ್ಲೆಯ ಮಹಾ ಚೈತ್ಯಾಲಯವನ್ನು ನಿರ್ಮಿಸಿದ್ದು, ಇದಕ್ಕೊಂದು ಉತ್ತಮ ಉದಾಹರಣೆಯಾಗಿದೆ.

ಆ ಕಾಲದಲ್ಲಿ ಬೌದ್ಧ ಮತದ ಬೇರೆ ಬೇರೆ ಶಾಖೆಗಳು ಒಂದೇ ವಿಹಾರದಲ್ಲಿ ವಾಸವಾಗಿರವುದು ಸಾಮಾನ್ಯವಾಗಿತ್ತು. ಹಾಗಾಗಿ ಬನವಾಸಿಯ ಅನಂತರ ಸರ್ವಸ್ತಿವಾದಿಗಳ ಮಹಾಸಂಘಕರ ನೆಲೆಯಾಗಿದ್ದಾಗಲೂ ಅಲ್ಲಿ ಜೊತೆಗೆ ಮಹಿಶಾಸಕ ಶಾಖೆಯವರೂ ಇದ್ದಿರುವ ಸಾಧ್ಯತೆಗಳಿವೆ. ಅಂತೂ ಅನಂತರದ ನಾಲ್ಕೈದು ಶತಮಾನಗಳ ಕಾಲ ಎಂದರೆ ಹೂಯೆನ್ ತ್ಸಾಂಗನ ಭೇಟಿಯ (ಕ್ರಿ.ಶ.ಸು ೬೪೦) ತನಕವೂ ಈ ಸ್ಥಿತಿ ಮುಂದುವರೆದಿತ್ತು.

ಶಾತವಾಹನರ ಹಾಗೂ ಅನಂತರ ಕಾಲದಲ್ಲಿ ಗೋದಾವರಿ ತೀರದ ಪೈಠಣವಲ್ಲದೆ ಕರ್ನಾಟಕದ ಮುಖ್ಯ ಬೌದ್ಧ ನೆಲೆಗಳೆಂದರೆ ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ, ಗುಲಬರ್ಗಾ ಸನ್ನತಿ, ಉತ್ತರಕನ್ನಡ ಜಿಲ್ಲೆಯ ಬನವಾಸಿ ಹಾಗೂ ಕೋಲಾರ ಜಿಲ್ಲೆಯ ಕೆಲವು ಭಾಗಗಳು.



ಚಂದ್ರವಳ್ಳಿಯಲ್ಲಿ ಉತ್ಖನನ ನಡೆಸಿದ ಎಂ.ಎಚ್. ಕೃಷ್ಣ ಅವರು ಅಲ್ಲಿ ಇತರ ಪೌರಾಣಿಕ ದೇವತೆಗಳಲ್ಲದೆ ಬುದ್ಧನ ಪೂಜೆಯೂ ನಡೆಯುತ್ತಿತ್ತು ಎನ್ನುತ್ತಾರೆ. ಅಲ್ಲಿ ಚೈತ್ಯದ ಚಿತ್ರ ಬೋಧಿವೃಕ್ಷದ ಚಿತ್ರಗಳಿರುವ ನಾಣ್ಯಗಳು ದೊರೆತಿವೆ. ಕ್ರಿ.ಶ ಪೂರ್ವಯುಗದ ಶಾತವಾಹನರ ಕಾಲದ ಬೌದ್ಧ ಕೇಂದ್ರವಾಗಿದ್ದ ಗುಲಬರ್ಗಾ ಜಿಲ್ಲೆಯ ಸನ್ನತಿಯ ಬಗೆಗೆ ಕೆಲವು ಬರವಣಿಗೆಗಳು ಬಂದಿವೆ. ಸನ್ನತಿ ಪ್ರಾಚೀನ ಕಾಲದ ಒಂದು ಬೌದ್ಧ ಕೇಂದ್ರವಾಗಿತ್ತು. ಮಹಾಯಾನ ಶಾಖೆಯ ಆರಾಧನಾ ಕೇಂದ್ರವಾಗಿದೆ. ಈ ಬಗ್ಗೆ ಕಪಟರಾಳ ಕೃಷ್ಣರಾಯರು ಮೊದಲ ಬಾರಿಗೆ ಗಮನಿಸಿದರು. ಅನಂತರ ಪಿ.ಬಿ. ದೇಸಾಯಿಯವರೂ ಅಭ್ಯಾಸ ನಡೆಸಿದ್ದಾರೆ.

ಚಂದ್ರವಳ್ಳಿ ಮತ್ತು ಸನ್ನತಿ ಇವೆರಡೂ ಊರುಗಳು ಶಾತವಾಹನರ ಕಾಲದ ಪ್ರಸಿದ್ಧ ಮಹಾಯಾನ ಬೌದ್ಧ ಕೇಂದ್ರಗಳು, ಶಾತವಾಹನರ ಕಾಲದ ಪ್ರಧಾನ ನಗರಗಳ ಪೈಕಿ ಬನವಾಸಿಯೂ ವೈಜಯಂತಿ ಒಂದಾಗಿತ್ತು, ಅವರ ಸಾಮಂತರಾಗಿದ್ದ ಮಹಾ ಭೋಜರು ಬನವಾಸಿಯನ್ನು ಕೇಂದ್ರವಾಗಿಸಿ ಆಳುತ್ತಿದ್ದರು. ಆಗಿನ ಶಾಸನವೊಂದು

ಬನವಾಸಿಯ ಮಹಾರಾಜ ಮಹಾಭೋಜಿಯ ಮಗಳು ಮಹಾರಥಿಯ ಹೆಂಡತಿಯೂ ಖಂದನಾಗಸತಕನ ತಾಯಿಯೂ ಮಹಾಭೋಜ ಅಜದೇನ ಸೇನನ ತಂಗಿಯೂ ಆದ ನಾಗಮೂಲನಿಕೆ ಕಣ್ಣೇರಿಯಲ್ಲಿ ಬೌದ್ಧ ಭಿಕ್ಷುಗಳಿಗಾಗಿ ಒಂದು ಗುಹಾಲಯವನ್ನು ನಿರ್ಮಿಸಿದ ವಿಚಾರವನ್ನು ಹೇಳುತ್ತದೆ.

ಕದಂಬ ಕಾಲದಲ್ಲಿ ಕರ್ನಾಟಕದಲ್ಲಿ ಬೌದ್ಧಧರ್ಮ ಇರುವುದಕ್ಕೆ ಅವರ ಶಾಸನಗಳಲ್ಲಿ ಆಧಾರಗಳಿವೆ. ಕದಂಬರ ಸಾಮಂತನಾಗಿದ್ದ ಕೇಕಯ ಚಿತ್ರಸೇನ ಮಹಾಚೆಲ್ಲನ ಕ್ರಿಶ ಸುಮಾರು ೪೮೫ರ ಹೊನ್ನಾವರ ತಾಮ್ರಪಟ,

"ಸಿದ್ಧಗೆ ಜಯತ್ಯಮಿತಗುಣಭೂದ್ ಬುದ್ಧಸ್ಸತ್ವ ಸಮಾಶ್ರಯಂ.

ಶುದ್ಧೋದನಕುಲೋದ್ಯೋತ ಪದ್ಮಪತ್ರ ನಿಭೇಕ್ಷಣ"

ಎಂದು ಪ್ರಾರಂಭವಾಗುತ್ತದೆ.

ಅಂತೆಯೇ ಕ್ರಿ.ಶ ೫೨೮ ಕದಂಬ ರವಿವರ್ಮನ ದಾವಣಗೆರೆ ತಾಮ್ರ ಪಟದಲ್ಲಿ ಸರ್ವಜ್ಞ ಮತ್ತು ಸರ್ವಲೋಕನಾಥ ಎಂಬ ಬುದ್ಧನ ವಿಶೇಷಣಗಳಿಂದಲೇ ಶಾಸನ ಪ್ರಾರಂಭಗೊಂಡು ಸಿದ್ಧಾಯತನದ ಪೂಜಾದಿಗಳಿಗೂ ಸಂಘದ ಅಭಿವೃದ್ಧಿಗಾಗಿಯೂ ಭೂದಾನ ಮಾಡಿದ ವಿವರಗಳಿವೆ. ಆ ಶಾಸನದ ದಿನವೂ "ಚೈತ್ರಮಾಸದ ಪುಣ್ಯತಿಥಿಯಂ ಪರ್ವದಿನ" ಪ್ರಾಯಶಃ ಪೂರ್ಣಿಮೆ ಇರಬೇಕು ಈ ಪೂರ್ಣಿಮೆ ಬೌದ್ಧರಿಗೆ ವಿಶೇಷವಾದುದು, ಹಾಗಾಗಿ ಕದಂಬರ ಕಾಲದಲ್ಲಿ ಅವರ ರಾಜ್ಯದಲ್ಲೂ ಬೌದ್ಧ ಸಹನಾ ಗುಣವಿದ್ದಿತು ಎನ್ನಬಹುದು.

ಹೆಚ್ಚು ಕಡಿಮೆ ಇದೆ ಅವಧಿಯಲ್ಲಿ ಕಾರವಾರದ ಸಮೀಪದ ದೀಪಕ ನಾಡಿನ ಸುಂದರಿಜಾ ಎಂಬ ಹೆಸರಿನ ಗ್ರಾಮವನ್ನು ವಿಹಾರ ಮತ್ತು ಸಂಘಗಳಿಗೆ ದಾನವಿತ್ತ ವಿವರಗಳುಳ್ಳ ತಾಮ್ರಪಟವೊಂದು ಸಿಕ್ಕಿದ್ದು, ಈ ದೀಪಕ ಎಂಬುದು ಕಾರವಾರದ ಬಳಿಯ ಅಂಜದೀಪ ಇದ್ದಿತೆಂದು ಉಹಿಸಲಾಗಿದೆ.



ಕರ್ನಾಟಕದ ಬೌದ್ಧಧರ್ಮದ ಬಗೆಗೆ ಪ್ರಾಚೀನಕಾಲದಲ್ಲಿ ಇಲ್ಲಿಗೆ (ಕ್ರಿ.ಶ. ೭ನೇ ಶತಮಾನ) ಭೇಟಿಯಿತ್ತ ಚೀನಿ ಪ್ರವಾಸಿ ಹುಯೆನ್‌ತ್ಸಾಂಗನ ವರದಿಯೂ ವಿಶೇಷವಾದ ಬೆಳಕು ಬೀರುತ್ತದೆ. ಆತ ಚೀನಾದಿಂದ ಭಾರತಕ್ಕೆ ಬಂದು ಇಲ್ಲಿಯ ವಿವಿಧ ಪ್ರಾಂತ್ಯಗಳಲ್ಲಿಯ ಬೌದ್ಧ ಕೇಂದ್ರಗಳನ್ನು ಸಂದರ್ಶಿಸಿ ಅವುಗಳ ವಿವರಗಳನ್ನೆಲ್ಲ ದಾಖಲಿಸಿದ್ದಾನೆ. ಕರ್ನಾಟಕಕ್ಕೆ ಆತ ಬಂದಿದ್ದು ತಮಿಳುನಾಡಿನ ಭಾಗದಿಂದ, ಆತನ ಪ್ರವಾಸಕಥನದಲ್ಲಿ ಕೊಂಕಣಪುರ (ಎಂದರೆ ಈಗಿನ ಬನವಾಸಿ) ಮತ್ತು ಬದಾಮಿ (ಚಾಲುಕ್ಯ ಇಮ್ಮಡಿ ಪುಲಿಕೇಶಿ ರಾಜಧಾನಿ)ಗಳ ವಿವರಗಳಿವೆ. ಬನವಾಸಿಯಲ್ಲಿ ನಾನೂರು ಸಂಘಾರಾಮಗಳು ಹತ್ತುಸಾವಿರಕ್ಕೂ ಮಿಕ್ಕಿದ ಬಿಕ್ಕುಗಳು ಇದ್ದ ಬಗೆಗೆ ಆತ ಹೇಳುತ್ತಾನೆ. ರಾಜಧಾನಿಗಳ ವಿವರಗಳಿವೆ. ರಾಜಧಾನಿಯಾದ ಬದಾಮಿಯಲ್ಲಿಯೂ ಬೌದ್ಧ ವಿಹಾರಗಳು ಭಿಕ್ಷುಗಳು ಇದ್ದ ಬಗೆಗೂ ಆತ ಬರೆಯುತ್ತಾನೆ.

ಬನವಾಸಿಯ ಸಮೀಪದ ಕಾಡಗೋಡು ಎಂಬಲ್ಲಿ ೧೯೭೧ರಲ್ಲಿ ಅಗತ ನಡೆಸಿದಾಗ ಬೌದ್ಧ ಸ್ತೂಪದ ಅವಶೇಷಗಳು ದೊರೆತಿವೆ. ಈ ಸ್ತೂಪದ ಇಟ್ಟಿಗೆಗಳ ರಚನೆಯ ಆಧಾರದಿಂದ ಇದರ ಕಾಲವನ್ನು ಕ್ರಿಶ ಎರಡು ಮೂರನೇ ಶತಮಾನಕ್ಕೆ ನಿಗದಿಸಿದ್ದಾರೆ.

ಬನವಾಸಿಯ ಮಧುಕೇಶ್ವರ ದೇವಾಲಯದ ಬಳಿಯೇ ಮೈತ್ರೇಯ ಬುದ್ಧನ ಒಂದು ವಿಗ್ರಹವೂ ದೊರಕಿದೆ. ವಿಗ್ರಹವು ಲಂಬೋದರವಾಗಿದ್ದು, ನಿರಲಂಕೃತವಾಗಿದೆ. ಎಡಗೈಯಲ್ಲಿ ಕಳಶ, ಧರ್ಮಚಕ್ರ ಮುದ್ರೆಯ ಬಲಗೈ, ಬಿಗಿದುಟ್ಟ ಧೋತ್ರಗಳಿದ್ದು, ಇದನ್ನು ಅಮರಾವತಿ ಶೈಲಿಯ ವಿಗ್ರಹವೆಂದು ಗುರುತಿಸಲಾಗಿದೆ. ಆ ಸುಂದರ ಬನವಾಸಿಯ ಪರಿಸರದಲ್ಲಿ ಕ್ರಿ.ಶ. ನೆರೆ ಹೊರೆಯ ದಿನಗಳಲ್ಲಿ ಬೌದ್ಧಧರ್ಮ ಉಚ್ಛಾಯ ಸ್ಥಿತಿಯಲ್ಲಿದ್ದುದರ ನೇರ ಆಧಾರಗಳಿವು.

ಮಂಗಳೂರಿನ ಕದ್ರಿ ಪ್ರಾಚೀನ ಬೌದ್ಧನೆಲೆ ಎಂಬುದಕ್ಕೆ ಆಧಾರಗಳಿವೆ, ಅಲ್ಲಿಯ ಮಂಜುನಾಥ ದೇವಾಲಯದ ಒಳ ಪ್ರಕಾರದ ಪೂರ್ವಕ್ಕೆ ಇರುವ ಶಿಥಿಲವಾದ ಒಂದು ಶಿಲಾಸ್ತಂಭ ಆಯಾ ಸ್ತಂಭಗಳನ್ನು ಹೋಲುತ್ತದೆ ಇದರ ತುದಿಯಲ್ಲಿ ನಾಲ್ಕು ಬದಿಗಳಲ್ಲಿ ಧ್ಯಾನಸ್ಥ ಬುದ್ಧನ ಕೆತ್ತನೆಯಿದೆ. ಇಂದು ಕದ್ರಿಯಲ್ಲಿ ಶಿವಾಲಯ ಇರುವುದಾದರೂ ಯಾವ ಶಿವಾಲಯದಲ್ಲಿ ಈ ರೀತಿ ಧ್ಯಾನಿಬುದ್ಧನ ಕೆತ್ತನೆ ಇರುವುದು ಅಸಂಭವವಾಗಿ ಪ್ರಾಚೀನ ಕಾಲದಲ್ಲಿ ಇದೊಂದು ಬೌದ್ಧ ನಲೆಯಿದ್ದಿರಬೇಕೆನಿಸುತ್ತದೆ. ಅಲ್ಲದೆ ಅನಂತರ ಮಂತ್ರಯಾನದ ಪ್ರಭಾವಕ್ಕೆ ಕದ್ರಿ ಒಳಗಾಗಿರಬೇಕು. ಅಲ್ಲಿಯ ದೇವಾಲಯದ ಹೊರ ಜಗಲಿಯಲ್ಲಿರುವ ಲೋಕೇಶ್ವರ ಮಂಜುಶ್ರೀ ಹಾಗೂ ಧ್ಯಾನಿಬುದ್ಧರ ಪ್ರತಿಮೆಗಳು ಈ ಮಾತಿಗೆ ಸಾಕ್ಷಿ. ಲೋಕೇಶ್ವರ ಪ್ರತಿಮೆಯ ಪಾದಪೀಠದ ಶಾಸನದಲ್ಲಂತೂ ಸ್ಪಷ್ಟವಾಗಿ ಕದ್ರಿಯನ್ನು ವಿಹಾರ ಎಂದೇ ಕರೆದಿದೆ. ಇತರೆ ಯಾವ ಧರ್ಮದ ನೆಲೆಗಳನ್ನೂ ವಿಹಾರ ಎನ್ನುವುದಿಲ್ಲ. ಇಲ್ಲಿಯ ಬೌದ್ಧ ಮೂಲಕ್ಕೆ ಇದೂ ಒಂದು ಸಮರ್ಥನೆಯಾಗುತ್ತದೆ. ಕಾಯಗುಡ್ಡದ ತುದಿಯಲ್ಲಿರುವ ಸ್ತೂಪದಂತಹ ರಚನೆಗಳು ಹಾಗೂ ಈಗ ಪಾಂಡವರ ಗುಹೆಗಳು ಎಂದು ಕರೆಯಿಸಿಕೊಳ್ಳುವ ಗುಹಾಲಯಗಳು ಇಲ್ಲಿಯ ಇತರೆ ಪ್ರಾಚೀನ ಬೌದ್ಧ ಅವಶೇಷಗಳು.



ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್ನೂ ಕೆಲವಡೆ ಬೌದ್ಧ ಕುರುಹುಗಳು ದೊರೆತಿವೆ. ಈಗ ಮಂಗಳೂರಿನ ಸರಕಾರಿ ವಸ್ತು ಸಂಗ್ರಹಾಲಯದಲ್ಲಿರುವ ಭೂದಿಸತ್ವ ಮಂಜು ಘೋಷನ ವಿಗ್ರಹ, ಉಡುಪಿ ಸಮೀಪದ ಕಾಡು-ಮೂರೂರಿನಲ್ಲಿ ದೊರೆತ ಭೂಸ್ಪರ್ಷ ಮುದ್ರೆಯ ಬುದ್ಧನ ವಿಗ್ರಹ, ಮೂಡಬಿದಿರೆಯ ಸಮೀಪ ದೊರೆತ ಭೋದಿಸತ್ವ ಅಕೋಭ್ಯ ವಿಗ್ರಹಗಳ ಸಾಕ್ಷ್ಯಗಳು, ಭಾಷಿಕವಾದ ಇನ್ನೊಂದು ಪುರಾವೆಯೆಂದರೆ ತುಳು ಹಾಗೂ ಹವ್ಯ ಕನ್ನಡದಲ್ಲಿ ದೂಪೆ ಎಂಬ ಪದಪ್ರಯೋಗವಿದ್ದು ಮೃತರನ್ನು ಹೂಳಿದ ಅಥವಾ ದಹನ ಮಾಡಿದ್ದಲ್ಲಿ ರಾಸಿಹಾಕಿದ ಮಣ್ಣಿಗೆ ಹೀಗೆ ಹೇಳಲಾಗುತ್ತದೆ, ಈ ಧೂಪ, ಇದು ಸ್ತೂಪದ, ತದ್ಭವ ಇರಬಹುದೇ ಎನ್ನಿಸುತ್ತದೆ. ಸ್ತೂಪವಾದರೆ ಲಾಕ್ಷಣಿಕವಾಗಿ ಬುದ್ಧನ ಚಿತಾಭಸ್ಮದ ಕರಂಡಕವನ್ನಿಟ್ಟ ಜಾಗೆಯೆಂದು ಪ್ರಯೋಗವಾಗುವುದಷ್ಟೆ? ಸ್ತೂಪಗಳು ದೂಪೆಯಾಗಿರುವ ಸಾಧ್ಯತೆಯಿದೆ ಎಂದು ಡಾ. ತಾಳ್ತಜೆಯವರು ತಮ್ಮ ವಾದ ಮಂಡಿಸಿದ್ದಾರೆ.

ಕೋಲಾರದ ಕೆಲವು ಭಾಗಗಳಲ್ಲಿ ಬೌದ್ಧಧರ್ಮವು ಪ್ರಚಾರದಲ್ಲಿತ್ತು ಎಂಬುದಕ್ಕೆ ಪುರಾತತ್ವ ಹಾಗೂ ಶಾಸನಗಳ ಆಧಾರಗಳಿವೆ. ಪರಿವಿ ಶಾಖೆಯವರ ಕಾರ್ಯಕ್ಷೇತ್ರವಾದರೂ ಇದೇ ಭಾಗವಾಗಿತ್ತು, ಕೋಲಾರದ ಕೆಲವು ಸ್ಥಳನಾಮಗಳು ಇದೆ ಮೂಲದವು. "ಸುಗತ್ತೂರು" ಮಂಜುಗುಳಿ, ಮಂಜಣಿ, ಇಂಥ ಗ್ರಾಮನಾಮಗಳು ಅಲ್ಲಿ ಲಭ್ಯ. ಅಲ್ಲದೆ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಹರಳಕೋಟೆಯಲ್ಲಿ ಸುಮಾರು ೧೨ಅಡಿ ಎತ್ತರ ೪೦ಅಡಿ ವ್ಯಾಸದ ದಿಬ್ಬವಿದ್ದು ಇದನ್ನು ಬೌದ್ಧಸ್ತೂಪವೆಂದು ಮೈಸೂರು ಪುರಾತತ್ವ ಇಲಾಖೆಯ ೧೯೩೦ ವರದಿಯಲ್ಲಿ ಗುರುತಿಸಲಾಗಿದೆ.

ಗೋಕರ್ಣದ ಸಮೀಪದ ತೊರ್ಕೆಯಲ್ಲಿ ಬೌದ್ಧ ಗುಹೆಗಳಿರುವ ಬಗೆಗೆ ಮೊದಲ ಬಾರಿಗೆ ಕೆ.ಜಿ. ಕುಂದಾಣಗಾರರು ಗಮನ ಸೆಳೆದರು. ಕರ್ನಾಟಕಕ್ಕೆ ತಾಂತ್ರಿಕ ಬೌದ್ಧಧರ್ಮದ ಪ್ರವೇಶದ ಬಗೆಗೂ ಖಚಿತ ದಾಖಲೆ ಸಿಗುವುದಿಲ್ಲ ಆದರೂ ಮಂಜುಶ್ರೀ ಮೂಲಕಲ್ಪದಂತಹ ತಾಂತ್ರಿಕ ಬೌದ್ಧ ಕೃತಿ (ಇದರ ಕಾಲ ಸುಮಾರು ೫ನೇ ಶತಮಾನ) ಕಾಲಕ್ಕೆ ಇತ್ತಕಡೆ ಮಂತ್ರಯಾನ ವಜ್ರಯಾನಗಳು ವ್ಯಾಪಿಸಿರಬೇಕು.

ಕರ್ನಾಟಕದಲ್ಲಿಯ ತಾಂತ್ರಿಕ ಬೌದ್ಧಧರ್ಮದ ಪ್ರಾಚೀನತೆಯ ಬಗ್ಗೆ ದಾಖಲೆಯೊಂದು ಲಭಿಸುತ್ತದೆ. ಜೈನಾಚಾರ್ಯನಾದ ಉಮಾಸ್ವಾತಿಯ ಶಿಷ್ಯನಾದ ಅಕಲಂಕ ರಾಷ್ಟ್ರಕೂಟ ದಂತಿದುರ್ಗ ಅಥವಾ ಒಂದನೆಯ ಕೃಷ್ಣನ ಸಮಕಾಲಿ ನನಾಗಿದ್ದು, (ಕ್ರಿ..ಶ ಸುಮಾರು ೭೪೨) ಈತ ಮಾನ್ಯಖೇಡದ ಆಸುಪಾಸಿನವ ಎಂಬ ಊಹೆಯಿದೆ.

"ವಿಕ್ರಮಾರ್ಕ ಶತಾಬಿಯ ಶತಸಪ್ತ ಪ್ರಮಾಜುಷಿ

ಕಾಲೆಕಲಂಕೆ ಯತಿನೋ ಬೌದ್ಧೈವಾರದೋ ಮಹಾನಬೂತ್"

ಈತ ನೆರೆಯ ಕಾಂಬೆಗೂ ಹೋಗಿ ಅಲ್ಲಿಯ ಬೌದ್ಧರನ್ನು ವಾದದಲ್ಲಿ ಸೋಲಿಸಿದ ವಿಚಾರದವನ್ನು ದೇವಚಂದ್ರನ ರಾಜಾವಳಿ ಕಥೆಯ ತಿಳಿಸುತ್ತದೆ. ಈ ಅಕಲಂಕನ ಬಗೆಗಿನ ಅಷ್ಟಕವೊಂದು ಎಸ್.ಶ್ರೀಕಂಠಶಾಸ್ತ್ರೀಯವರು ಸಂಗ್ರಹಿಸಿಕೊಟ್ಟಿದ್ದಾರೆ. ಅದರಲ್ಲಿ ಈತ ಬುದ್ಧದೇವತೆ ತಾರಾಭಗವತಿಯನ್ನು ನಿಷ್ಕ್ರಿಯಗೊಳಿಸಿದನೆಂದು ಹೇಳಿದೆ, ಇದನ್ನು ಪರಿಗಣಿಸಿದರೆ ಕ್ರಿ.ಶ ೭೦೦ ಕ್ಕೆ ಮೊದಲೆ ಕನ್ನಡನಾಡಿನಲ್ಲಿ ತಾಂತ್ರಿಕ ಬೌದ್ಧಧರ್ಮ ನೆಲೆಗೊಂಡಿತ್ತೆಂದು ಹೇಳಬಹುದು. ಬಳ್ಳಿಗಾವೆಯಲ್ಲಿ ದೊರೆತ ಕ್ರಿ.ಶ ೧೦೬೪ ಮತ್ತು ೧೮೬೭ಕ್ಕೆ ಸೇರಿದ ಎರಡು ಶಾಸನಗಳಲ್ಲಿ ಸ್ಪಷ್ಟವಾದ ತಾಂತ್ರಿಕ ಬೌದ್ಧ ದಾಖಲೆಗಳಿವೆ.

ಮೊದಲನೆಯದರ ಪ್ರಕಾರ ವಡ್ಡರಾವುಳ್ಳ ಹದಿನೆಂಟು ಅಗ್ರಹಾರಗಳನ್ನು ಪಾಲಿಸುವ ಮಹಾಪ್ರಧಾನ ರೂಪಭಟ್ಟಯ್ಯ ಎಂಬಾತ ಬಳಿಗಾವೆಯಲ್ಲಿ "ಜಯಂತಿ ಪ್ರಬೌದ್ಧ ವಿಹಾರವಂ ಮಾಡಿಸಿ ತನಗೆಯುಂತಮ್ಮ ಮೂಡಿಸಿದ ತಾರಭಗವತಿಯ ಶ್ರೀ ಕೇಶವದೇವರ ಲೋಕೇಶ್ವರದೇವರ ಬೌದ್ಧದೇವರ ಅಲ್ಲಿಯ ಸಮಸ್ಯೆ ಪರಿವಾರ ದೇವರ ಅರ್ಚನ-ಪೂಜನಾ ನಿಮಿತ್ತಕ್ಕಂ ಮೇಲೆ ಖಂದಸ್ಪುಟಿಕ ನವಕರ್ಮಕ್ಕಂಯೋಗಿನಿಯರ - ಕುಸುಳಿಯರ ಸನ್ಯಾಸಿಯರ ಆಹಾರದಾನಾಕ್ಕಂ 'ಭೂಧಾನಕೊಟ್ಟ ವಿವರಗಳಿವೆ. ಚಾಲುಕ್ಯ ಚಕ್ರವರ್ತಿಯ ಬೌದ್ಧ ಸಹಿಷ್ಣುಗಳಾಗಿದ್ದರು ಎಂಬುದು ತಾರಾಭಗವತಿ ಹಾಗೂ ಲೋಕೇಶ್ವರ ಈ ಉಲ್ಲೇಖಗಳಿರುವುದರಿಂದ ತಾಂತ್ರಿಕ ಬೌದ್ಧಕೇಂದ್ರವೆಂದು ಸ್ಪಷ್ಟವಾಗುತ್ತದೆ.

ಅದೇ ಸ್ಥಳದ ಇನ್ನೊಂದು ಶಾಸನ ಚಾಲುಕ್ಯ ಚಕ್ರಿತ್ರೈಲೋಕ್ಯಮಲ್ಲನ ಸಹವಾಸಿ ಯಾದ ಹಂಪಭಟ್ಟನ ಪತ್ನಿ ನಾಗಿಯಕ್ಕ ಎಂಬಾಕೆ ಬಳ್ಳಿಗಾವೆಯ ಬಳಿ ತಾರಾ ಭಗವತಿಯ ದೇಗುಲ ನಿರ್ಮಿಸಿ ಬೌದ್ಧ ಬಳರವ ಕಾಲಂ ಕರ್ಚಿಧಾರಾಪೂರ್ವಕವಾಗಿ ಭೂದಾನ ಮಾಡಿದ ಉಲ್ಲೇಖವಿದೆ. ಈ ಶಾಸನವಾದ ಕಾರಣ ಪ್ರಾಯಶಃ ಆ ಬಳ್ಳಿಕಾಡಪ್ಪನ ಗದ್ದೆಯೇ ಭೂದಾನದ ಕ್ಷೇತ್ರವಿದ್ದಿರಬೇಕು.

ಬಳ್ಳಿಗಾವೆಯಲ್ಲಿ ತಾರಾದೇವಿಯ ವಿಗ್ರಹವೂ ಸಿಕ್ಕಿದೆ ಪ್ರಾಯಶ: ಇದೇ ನಾಗಿಯಕ್ಕ ಸ್ಥಾಪಿಸಿದ ದೇಗುಲದ ಮುಖ್ಯದೇವತೆ ಇರಬೇಕು. ಅನಂತರ ವ್ಯತ್ಯಸ್ತಗೊಳ್ಳುವಿಕೆಗೆ ಇದೂ ಒಂದು ಕಾರಣವಾಗುತ್ತದೆ, ಇನ್ನೊಂದು ಮುಖ್ಯ ಅಂಶವೆಂದರೆ ಕೆಲವು ಕನ್ನಡ ಶಾಸನಗಳಲ್ಲಿ ಉಲ್ಲೇಖಗೊಂಡ ಬಳ್ಳಿಗಾವೆಯ ಸಮೀಪದ ಮಲ್ಲೆಯಬಯಲ್ ಇದು ಬೌದ್ಧರಿಗೆ ಪ್ರಿಯವಾದ ಮೃಗದಾವ ಆಗಿದ್ದಿತೆಂಬ ಊಹೆಯನ್ನು ಹಿಂದೆಯೆ ಸಿ.ಹಯವದನರಾಯರು ಮಾಡಿದ್ದಾರೆ ಎಂದು ತಾಳ್ತಜೆಯವರು ದಾಖಲಿಸಿದ್ದಾರೆ.

ಧಾರವಾಡ ಜಿಲ್ಲೆಯ ಡಂಬಳವೂ ಆ ಕಾಲದ ಪ್ರಸಿದ್ಧ ಬೌದ್ಧಕೇಂದ್ರವೇ ಆಗಿತ್ತು. ಇಲ್ಲಿಯ ಶಾಸನವೊಂದು (ಕ್ರಿ.ಶ. ೧೯೫೯-೯೭) ತಾರಾಸ್ತುತಿಯೊಂದಿಗೆ ಪ್ರಾರಂಭವಾಗಿ ಲೊಗುಂಡಿಯ ವಡ್ಡ ವ್ಯವಹಾರಿಯಾದ ಸಂಗವಯ್ಯಸೆಟ್ಟಿಯರು ಕಟ್ಟಿಸಿದ ಆಯಕತಾರಾದೇವಿಯ ವಿಹಾರಕ್ಕೂ ಅಲ್ಲಿಯ ಹದಿನಾರು ಸೆಟ್ಟಿಗಳು ಮಾಡಿಸಿದ ಬೌದ್ಧ ವಿಹಾರಕ್ಕೂ ಅಲ್ಲಿನ ಇತರ ಶಾಸನಗಳೂ ಬೌದ್ಧಲಯಗಳ ಪ್ರಸ್ತಾಪ ಮಾಡುತ್ತವೆ. ಕ್ರಿಶ ೧೧೯೭ ರ ಶಾಸನವೊಂದು ಬಿಜಾಪುರದ ಇಂಡಿಯಲ್ಲಿನ ವಿವಿಧ ಮತಧರ್ಮಗಳ ಬಗೆಗೆ- "ಹರಿಗೃಹದಿಂ ಹರಗೃಹದಿಂ ಬೌದ್ಧಲಯದಿಂಗೊರವರ ಸವಣರ ಬೌದ್ಧರ ನೆಲವಿಗಳಿಂದಿಂಡೆ ನಾಡ ಸೊಗಯಿಸಿ ತೊರ್ಕುಂ" ಎಂದು ಹೇಳುತ್ತಾ ಅಲ್ಲಿದ್ದ ಬೌದ್ಧಾಲಯ ಹಾಗೂ ಬೌದ್ಧರನ್ನು ಉಲ್ಲೇಖಿಸುತ್ತದೆ. (ಮೇವುಂಡಿ ಮಲ್ಲಾರಿ, ಕನ್ನಡನಾಡಿನ ಕೆಲವು ಶಾಸನ ಕವಿಗಳು ಪು ೯೯)

ಈ ಎಲ್ಲ ಆದಾರಗಳಿಂದಾಗಿ ಕ್ರಿಶ ೧೦-೧೧ನೇ ಶತಮಾನದಲ್ಲಿ ಬೌದ್ಧಧರ್ಮದ ತಾಂತ್ರಿಕ ಶಾಖೆಯು ಕರ್ನಾಟಕದಲ್ಲಿ ಉಚ್ಚಾಯ ಸ್ಥಿತಿಯಲ್ಲಿತ್ತೆನ್ನಬಹುದು. ಈ ಮಾತಿಗೆ ಅನೇಕ ಸಾಹಿತ್ಯ ಕೃತಿಗಳ ಆಧಾರವೂ ಸಿಗುತ್ತದೆ. ಒಟ್ಟಿನಲ್ಲಿ ಕರ್ನಾಟಕಕ್ಕೆ ಅಶೋಕ ಪೂರ್ವಯುಗದಲ್ಲೇ ಅವತರಿಸಿದ ಬೌದ್ಧಧರ್ಮ ಅಶೋಕನ ಕಾಲದಲ್ಲಿ ವಿಶೇಷ ಪ್ರಸಾರ ಹೊಂದಿ ಮುಂದೆ ಶಾತವಾಹನರ ಆಡಳಿತಾವಧಿಯಲ್ಲಿ ಇನ್ನಷ್ಟು ವಿಕಾಸಗೊಂಡು, ಆ



ಬಳಿಕ ರಾಜರುಗಳ ಸಹಿಷ್ಣತೆಯ ಪರಿಣಾಮವಾಗಿ ಅವನತಿಯ ಹಾದಿ ಹಿಡಿಯಿತು ಎನ್ನಬಹುದು. ಬಾಹ್ಯಶಕ್ತಿಗಳ ವಿರುದ್ಧದ ಹೋರಾಟದಲ್ಲಿ ಒದಗಿದ ಸೋಲು ಹಾಗೂ ಆಂತರಿಕ ವಿಘಟನೆ (ವಜ್ರಯಾನ ಪಂಥದ ಬಳಿಕ ಆದ ಅತಿಯಾದ ತಾಂತ್ರಿಕ ಆಚರಣೆಗಳು) ಇವೆರಡೂ ಕಾರಣಗಳಿಂದಾಗಿ ನಿಧಾನಕ್ಕೆ ಅದು ಭಾರತದ ಇತರ ಕಡೆ ಅಧಃಪತನ ಹೊಂದಿದಂತೆ ಕರ್ನಾಟಕದಲ್ಲಿ ಅವಸಾನಗೊಂಡಿತು. ಪ್ರಾಚೀನ ಕರ್ನಾಟಕದ ಮುಖ್ಯ ಬೌದ್ಧ ನೆಲೆಗಳಾಗಿ ಬನವಾಸಿ ಬಳ್ಳಿಗಾವೆ ಡಂಬಳ-ಕೋಳಿವಾಡ, ಕದ್ರಿ- ಮಂಗಳೂರು, ತೊರ್ಕೆ-ಗೋಕರ್ಣ, ಚಂದ್ರವಳ್ಳಿ-ಸಿದ್ದಾಪುರ-ಬ್ರಹ್ಮಗಿರಿ, ಮಸ್ಕಿ, ಸನ್ನತಿ, ಬಿಜಾಪುರ ಇಂಡಿಯ ಭಾಗ, ಕೋಲಾರದ ಕೆಲವು ಭಾಗಗಳು ಇವಿಷ್ಟನ್ನೂ ಹೇಳಬಹುದು.

ಭಾರತೀಯ ಸಂಸ್ಕೃತಿಯನ್ನು ಒಂದು ಸಾಂಸ್ಕೃತಿಕ ಸಮುಚ್ಚಯ ಎನ್ನಬಹುದು. ಅದರ ಪ್ರಧಾನ ಪ್ರವಾಹ ಅತ್ಯಂತ ಗತಿಶೀಲವೂ ಸಮೀಕರಣಯುಕ್ತವೂ ಆಗಿದೆ, ಆದರೆ ನಿರ್ಧಿಷ್ಟವಾಗಿ ಯಾವುದೇ ಒಂದು ಶಾಖೆಯನ್ನೂ ಇದು ಮಾತ್ರವೇ ಅಪ್ಪಟ ಭಾರತೀಯ ಎಂದು ಹೇಳುವುದು ಉಳಿದವಕ್ಕೆ ನ್ಯಾಯ ಸಲ್ಲಿಸಿದಂತಾಗದು. ಅದರಲ್ಲೂ ಪ್ರಾಚೀನ ಭಾರತದಲ್ಲಿ ಎದ್ದು ಕಾಣುವಂಥ ಎರಡು ಕಾವಲುಗಳು ಇದ್ದದ್ದು ಸ್ಪಷ್ಟವಿದೆ. ಒಂದು ವೈದಿಕ (ಬ್ರಾಹ್ಮಣ) ಪರಂಪರೆ ಇನ್ನೊಂದು ಶ್ರಮಣ (ಅಥವಾಮುನಿಗಳ) ಪರಂಪರೆ. ಗೌತಮಬುದ್ಧನ ಸಮಕಾಲೀನರಾದ ಅಜೀತಕೇಸಕಂಬಳಿ, ಪಾಕುಡಕಚ್ಚಾಯನ, ಮಕ್ಕರಿ ಗೋಸಾಲ ಮತ್ತಿತರ ಉಲ್ಲೇಖಗಳು ಹಾಗೂ ಬೌದ್ಧಸೂತ್ರಾದಿಗಳಲ್ಲಿ ಬರುವ "ಬ್ರಾಹ್ಮಣ" ಮತ್ತು ಶ್ರಮಣ ಹೀಗೆ ಪ್ರತ್ಯೇಕ ಉಲ್ಲೇಖಗಳು, ಇವನ್ನಾಧರಿಸಿ ವಿದ್ವಾಂಸರು ಹೀಗೆ ನಿರ್ಣಯಿಸುತ್ತಾರೆ. ಇದನ್ನು ಒಪ್ಪುವುದಾದರೆ ಬೌದ್ಧಧರ್ಮ ಮೂಲತ: ಶ್ರಮಣಧರ್ಮ ಅಥವಾ ವಿರಕ್ತಪಂಥವಾಗಿಯೇ ರೂಪತಾಳಿತೆನ್ನಬಹುದು, ಆದರೂ ಉಪಾಸಕರೆಂಬ ಉಲ್ಲೇಖವಿದ್ದು, ಇದು ಬಿಕ್ಷುಗಳಲ್ಲದ ಇತರ ಬೌದ್ಧಗೃಹಸ್ಥರನ್ನು ಉದ್ದೇಶಿಸಿದ ಪದ ಪ್ರಯೋಗವಾಗಿದೆ, ಬೌದ್ಧ ವಿಹಾರಗಳಿಗೆ ಉದಾರವಾಗಿ ದಾನನೀಡಿದ ಇಂಥ ಉಪಾಸಕ-ಉಪಾಸಕಿಯರ ಅನೇಕ ಹೆಸರುಗಳು ಸಿಗುತ್ತವೆ. ಕಾಲಾನಂತರ ಮಹಾಯಾನ ಪರಂಪರೆಯಲ್ಲಂತೂ ಬೌದ್ಧಧರ್ಮವು ಹೆಚ್ಚು ಸಾಮಾಜಿಕಗೊಂಡದ್ದು ಸ್ಪಷ್ಟವೇ ಇದೆ, ಹಾಗೆ ಸಾಮಾಜಿಕಗೊಳ್ಳುತ್ತ ಹೋದಾಗ ಎಂದರೆ ಹೆಚ್ಚಾಗಿ

ಜನಪರವಾದಾಗಲೇ ಅದು ತನ್ನ ಪ್ರಭಾವದ ಮುದ್ರೆಯನ್ನು ಒತ್ತುವುದು ಸಾಧ್ಯವಾಯಿತು, ಈ ಮಾತು ಇತರೆಡೆಗಳಿಗೆ ಅನ್ವಯಗೊಂಡಂತೆಯೇ ಕರ್ನಾಟಕಕ್ಕೂ ಅನ್ವಯ ಆಗಿದೆ.

**ಸಮಾರೋಪ:**

ಬೌದ್ಧ ಸಾಹಿತ್ಯ ಮತ್ತು ನೆಲೆಗಳು ವಿಷಯ ತುಂಬಾ ವ್ಯಾಪಕವಾಗಿದ್ದು, ಸಮುದ್ರದ ಆಳದಂತೆ ಕೈಗೆಟುಕಲು ಸಾಧ್ಯವಿರದ ಸ್ಥಿತಿಯಲ್ಲಿದೆ. ಅಂತಹ ಗಂಭೀರ ವಿಷಯವನ್ನು ನನ್ನ ನೋಟಕ್ಕೆ ಸಿಕ್ಕಷ್ಟು, ಕೈಗೆಟುಕಿದಷ್ಟು ಬಗೆದು ನಿಮ್ಮ ಮುಂದೆ ಮಂಡಿಸಿದ್ದೇನೆ. ಸಮುದ್ರದ ನೀರಿನ ರುಚಿಯನ್ನು ಅದರ ಹನಿಯಲ್ಲಿ ಗ್ರಹಿಸುವಂತೆ ತಾವು ಗ್ರಹಿಸಿ ಮುಂದಿನ ಬಹುಶಿಸ್ತೀಯ ಅಧ್ಯಯನ ಮತ್ತು ಸಂಶೋಧನೆಗೆ ತಮ್ಮ ಸಲಹೆ ಸೂಚನೆ ಮತ್ತು ಪಾಲ್ಗೊಳ್ಳುವಿಕೆ ಕಾರಣವಾದರೆ ಬಿಸಿಲನಾಡು ಕಲಬುರ್ಗಿಯಲ್ಲಿ ನಡೆದ ೮೫ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಿದ ಈ ಪ್ರಬಂಧವು ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ಕಲಾ ಸಂಗಮ

# ಸಂಗೀತ ಮತ್ತು ಗಮಕ

- ಡಾ. ಸರ್ವಮಂಗಳಾ ಶಂಕರ್

ಭವಿತವ್ಯ ಭಾರತ ದೇಶ ಕಲಾ ಸಂಸ್ಕೃತಿಯ ತಾಣವಾಗಿದೆ. ಕಲಾ ಸಂಸ್ಕೃತಿ ಪರಂಪರೆಯಲ್ಲಿ ಅಂತೆಯೇ ಲಲಿತಕಲೆಗಳ ವಲಯದಲ್ಲಿ ಸಂಗೀತ ಮತ್ತು ಸಾಹಿತ್ಯ ಕಲೆಗಳು ಅಗ್ರಮಾನ್ಯ ಸ್ಥಾನ ಪಡೆದ ಕಲೆಗಳಾಗಿ ಪರಿಗಣಿತಗೊಂಡಿವೆ.

**ಪೀಠಿಕೆ!**

"ಸಂಗೀತ ಮಪಿ ಸಾಹಿತ್ಯಂ ಸರಸ್ವತ್ಯಾ ಸ್ತನದ್ವಯಂ

ಏಕಮಾಪಾತ ಮಧುರಂ ಅನ್ಯಥಾಲೋಚನಾಮೃತಂ'

ಎಂಬ ಪ್ರಸಿದ್ಧ ಉಕ್ತಿಯಂತೆ ಸಂಗೀತ ಮತ್ತು ಸಾಹಿತ್ಯ ಕಲೆಗಳು ಕಲಾಧಿದೇವತೆ ಸರಸ್ವತೀ ಮಾತೆಯ ಸ್ತನದ್ವಯಗಳು, ಇವು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಸಂಗೀತ ಕಲೆಯು ಆಪಾತ ಮಧುರವಾದುದು ಅಂದರೆ ಕೇಳುಗರ ಹೃನ್ಮನಗಳನ್ನು, ಸಂಗೀತವನ್ನು ಕೇಳಲಾರಂಭಿಸಿದ ಕ್ಷಣದಿಂದಲೇ ಮುದ ನೀಡುವಂತಹುದು. ಇನ್ನು ಸಾಹಿತ್ಯವು ಆಲೋಚನಾಮೃತವಾದುದು ಅಂದರೆ ಕೇಳಿದ ಇಲ್ಲವೇ ಓದಿದ ಸಾಹಿತ್ಯವು ಮೆದುಳಿಗೆ ಗೋಚರಿಸಿ ಆಲೋಚನೆಯ ನಂತರ ಅರ್ಥ ಸ್ಫುರಣೆ ಸಾಧ್ಯವಾಗುವಂತಹುದು. ಸ್ವಾರಸ್ಯವೆಂದರೆ ಈ ಸಂಗೀತ-ಸಾಹಿತ್ಯವೆಂಬ ಎರಡು ಸ್ವತಂತ್ರ ಕಲೆಗಳು ಪರಸ್ಪರ ಅನ್ನೋನ್ಯಾಶ್ರಯಿಗಳಾಗಿದ್ದು, ಈ ಕಲೆಗಳ ಸಮ್ಮಿಲನದಿಂದ ಕಲಾ ಉತ್ಕೃಷ್ಟತೆಯು ಸಾಧ್ಯವಾಗುತ್ತದೆ ಹಾಗೂ ಕಲೆಯ ಔನ್ನತ್ಯಕ್ಕೆ ಕಾರಣೀಭೂತವಾಗುತ್ತದೆ.

ಸಂಗೀತ ಕಲೆಯ ವೈಶಿಷ್ಟತೆ: ಸಂಗೀತ ಕಲೆ ಮಾನವ ಕುಲಕೋಟಿಗೆ ಒಂದು ವರದಾನ. ಇದು ಹೃದಯದ ಭಾಷೆ ನಾನಾ ರಸಭಾವಗಳ ಅಭಿವ್ಯಕ್ತಿಗೆ ಸಭ್ಯತೆ ಇರುವ ಒಂದು ಅಪೂನರ್ವ ಕಲಾ ಮಾಧ್ಯಮ. ಭಾರತದೇಶ ಧಾರ್ಮಿಕ ವಿಧಿವಿಧಾನಗಳಲ್ಲಿ ನಂಬಿಕೆ ಹೊಂದಿರುವ ಕಾರಣದಿಂದಾಗಿ ಸಂಗೀತವನ್ನು ದೇವಾರಾಧನೆಗೆ, ಮನೋ ಆನಂದಕ್ಕೆ, ಭಾವನೆಗಳ ಅಭಿವ್ಯಕ್ತಿಗೆ, ಸಂಸ್ಕೃತಿ ಪರಂಪರೆಯ ಪ್ರೌಢತೆಗೆ, ಅಂತಃ ಸ್ವಾಸ್ಥ್ಯಕ್ಕೆ ಹೀಗೆ ನಾನಾ ವಿಧವಾಗಿ ಮಾನವ ಬಳಸಿಕೊಂಡಿದ್ದಾನೆ.

"ಶಿಶುರ್ವೇತ್ತಿ ಪಶುರ್ವೇರ್ಣತ್ತಿ ವೇತ್ತಿಗಾನರ ಸಂಫಣೀ" ಎಂಬ ಪ್ರಸಿದ್ಧ ಉಕ್ತಿಯಂತೆ ಸಂಗೀತವು ಶಿಶು-ಪಶು-ವಿಷಜಂತುವಾದ ಹಾವನ್ನೂ ಸಹ ಮಣಿಸುವ ಶಕ್ತಿಯನ್ನು ಹೊಂದಿದೆ, ಇನ್ನು ಬುದ್ಧಿ ಜೀವಿಯಾದ ಮಾನವನು ಸಂಗೀತ ಕಲೆಗೆ ಮಣಿಯದೆ

ಮಾರುಹೋಗದೆ ಇರಲು ಸಾಧ್ಯವೇ? ಈ ಕಾರಣಗಳಿಂದಾಗಿ ಮಾನವ ಸಂಗೀತ ಕಲೆಯನ್ನು ಜೀವನದ ಒಂದು ಭಾಗವಾಗಿ ಸ್ವೀಕರಿಸಿ ಮುನ್ನಡೆದಿದ್ದಾನೆ.

ಸಂಗೀತ ಎಂಬ ಪದದ ವ್ಯಾಪ್ತಿಯು ಗಾಯನ ವಾದನಗಳೆರಡನ್ನೂ, ಸೂಚಿಸುತ್ತದೆ ಹಾಗೂ ಎರಡನ್ನೂ ಒಳಗೊಂಡಿರುತ್ತದೆ. ಗಾಯನಕ್ಕೆ ಸಾಹಿತ್ಯದ ಅಗತ್ಯತೆ ಇದೆ. ಈ ಸಾಹಿತ್ಯದಿಂದ ನಾನಾ ವಿಷಯಗಳ ಅರ್ಥ ಸ್ಫುರಣೆ ಸಾಧ್ಯವಾಗುತ್ತದೆ. ಕೆಲವು ರಚನೆಗಳಲ್ಲಿ ಅರ್ಥವಿರದ ಲಲಲ, ತನನ, ಧಿರನ, ಧೀಂತ ಮುಂತಾದ ಪದಗಳ ಬಳಕೆ ಕಂಡುಬಂದರೂ ಇವು ಮನೋ ಆನಂದಕ್ಕೆ ಚೇತೋಹಾರಿಯಾಗಿ ಬಳಸಲ್ಪಡು ಸ್ಪಂದಿಸುತ್ತವೆ.

ಗಾಯನಕ್ಕೆ ಬಳಸುವ ಸಾಹಿತ್ಯವನ್ನು ಬಹಳ ಹಿಂದಿನಿಂದಲೂ 'ಗೀತ' ಎಂಬ ಹೆಸರಿನಿಂದ ಕರೆದಿದ್ದಾರೆ. ಶಾಸ್ತ್ರೀಯ ಪ್ರಸಕ್ತಿಯಲ್ಲಿ ಈ ಗೀತವು ಸ್ವರಪ್ರಧಾನವೂ, ಸಾಹಿತ್ಯ ಪ್ರಧಾನವೂ, ಲಯಪ್ರಧಾನವೂ ಆಗಿದೆ. ಇದು ಮಾನವನ ಬೌದ್ಧಿಕ ಕ್ರಿಯೆಯನ್ನು ಚುರುಕುಗೊಳಿಸುತ್ತದೆ. ಈ ಕಾರಣಗಳಿಂದಾಗಿಯೇ ಸಂಗೀತವು ಒಂದು ವಿಶಿಷ್ಟ ಕಲೆಯಾಗಿ, ಉತ್ಕೃಷ್ಟ ಕಲೆಯಾಗಿ ಪರಿಗಣಿತಗೊಂಡಿದೆ. ವಾದ್ಯ ಸಂಗೀತವು ರಂಜನೀಯವಾದ ನಾದಪ್ರಧಾನ ಪ್ರಸ್ತುತಿಯಾಗಿದೆ. ಸಂಗೀತದಲ್ಲಿ ನಾದ-ಶ್ರುತಿ-ಸಪ್ತಸ್ವರಗಳು-ತಾಳ-ರಾಗ- ರಚನೆ ಇವುಗಳು ಪ್ರಮುಖ ಪಾತ್ರವಹಿಸುತ್ತವೆ. ಸಂಗೀತ ಕಲೆಯ ಉಗಮ ವೇದಗಳ ಕಾಲದಿಂದಲೇ ಆರಂಭಗೊಂಡಿದ್ದರೂ ಸಹ ಕಾಲಾನುಕ್ರಮದಲ್ಲಿ ಈ ಕಲೆ ಶಾಸ್ತ್ರೀಯ ನೆಲೆಗಟ್ಟಿನ ಭದ್ರಬುನಾದಿಯನ್ನು ಆಗುಮಾಡಿಕೊಂಡು ಪ್ರಸ್ತುತ ಬೃಹತ್ ವೃಕ್ಷವಾಗಿ ಬೆಳೆದು ಕಂಗೊಳಿಸಿದೆ. ಸಂಗೀತದ ವಿಭಾಗಗಳಾದ ಸಂಗೀತ-ಪ್ರಾಯೋಗಿಕ, ಸಂಗೀತ-ಲಕ್ಷಣ ಈ ವಿಭಾಗಗಳು ಖ್ಯಾತಿಗಳಿಸಿವೆ. ಭಾರತೀಯ ಸಂಗೀತ ವಲಯವನ್ನು ಸ್ಥೂಲವಾಗಿ ಪರಿಗಣನೆಗೆ ತೆಗೆದುಕೊಂಡಲ್ಲಿ ನಮ್ಮಲ್ಲಿ ಜನಪದ ಸಂಗೀತ, ಕರ್ನಾಟಕ ಶಾಸ್ತ್ರೀಯ ಸಂಗೀತ, ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ, ಲಘುಶಾಸ್ತ್ರೀಯ ಸಂಗೀತ, ಕಾವ್ಯವಾಚನ ಅಥವಾ ಗಮಕವಾಚನ, ಸುಗಮ ಸಂಗೀತ, ಚಲನಚಿತ್ರ ಸಂಗೀತ, ಭಜನಾ ಪದ ಗಾಯನ, ತತ್ತ್ವಪದ ಗಾಯನ, ನೃತ್ಯ ಸಂಗೀತ ಹೀಗೆ ಅನೇಕ ಬಗೆಗಳನ್ನು ಕಾಣುತ್ತೇವೆ. ಇವುಗಳ ಸ್ಥೂಲ ಪರಿಚಯವನ್ನು ಹೀಗೆ ಹೇಳಲು ಸಾಧ್ಯ.

**ಜನಪದ ಸಂಗೀತ:** ಇದು ಜನಸಾಮಾನ್ಯನ ಮನೋಭೂಮಿಕೆಯಿಂದ ತಾನೇತಾನಾಗಿ ಹರಿದು ಬಂದ ಒಂದು ಸರಳ ಸುಂದರ ಕಲೆ. ಈ ಕಲಾಪ್ರಕಾರವನ್ನು ಜಗತ್ತಿನಾದ್ಯಂತ ಆಯಾ ದೇಶ-ಪ್ರಾಂತ್ಯ-ಹವಾಮಾನ-ಜೀವನ ಕ್ರಮಗಳಿಗೆ ಅನುಗುಣವಾಗಿ ಇದು ಪಸರಿಸಿದೆ. ಭಾರತವು ಕೃಷಿ ಪ್ರಧಾನವಾದ ದೇಶ. ಈ ಹಿನ್ನೆಲೆಯಲ್ಲಿ ರೈತ ದಿನವಿಡೀ ದುಡಿದು ಶ್ರಮಿಸುತ್ತಾನೆ. ತನ್ನ ಶ್ರಮದ ದಣಿವನ್ನು ನಿವಾರಿಸಿಕೊಳ್ಳಲು ತನ್ನದೇ ಆದ ದಾಟಿಯ ಗಾಯನ-ವಾದನ- ನರ್ತನಗಳನ್ನಾಡಿ ಹರ್ಷಿಸುತ್ತಾನೆ, ಇದಕ್ಕೆ ಸಂಗಡಿಗರನ್ನೂ ಬಳಸಿಕೊಳ್ಳುತ್ತಾನೆ. ಯಾವ ಕಲಿಕೆಯ ಗಂಧಗಾಳಿ ಇಲ್ಲದ ಸಾಮಾನ್ಯ ಆಶು ಕವಿತ್ವದ ಸಾಹಿತ್ಯದೊಂದಿಗೆ ತನ್ನದೇ ಆದ ರಾಗ, ತಾಳ, ವಾದ್ಯಗಳ

ಜೋಡಣೆಯೊಂದಿಗೆ ತನ್ನ ಸಂಗಡಿಗರನ್ನು ಕೂಡಿಸಿಕೊಂಡು, ಕೆಲವೊಮ್ಮೆ ಏಕವ್ಯಕ್ತಿ ಗಾಯನ ಮಾಡಿ ಹರ್ಷಿಸುತ್ತಾರೆ, ಇವರ ಕಲೋಪಾಸನೆ ಮೆಚ್ಚತಕ್ಕದ್ದು. ಒಟ್ಟಿನಲ್ಲಿ ಜನಪದ ಸಂಗೀತ ಎಲ್ಲ ಸಂಗೀತ ಕಲೆಗಳ ಮೂಲ, ತಾಯಿಬೇರು.



ಕರ್ನಾಟಕ ಸಂಗೀತ ಮತ್ತು ಹಿಂದುಸ್ತಾನಿ ಸಂಗೀತ: ಇವು ಭಾರತದ ಎರಡು ಶಾಸ್ತ್ರೀಯ ಸಂಗೀತ ಪದ್ಧತಿಗಳು, ಇವುಗಳ ಆಗಮನ ಕ್ರಿಶ. ಸುಮಾರು ೧೩-೧೪ನೇ ಶತಮಾನದಲ್ಲಾಗಿದೆ. ಈ ಪದ್ಧತಿಗಳ ಆಗಮನಕ್ಕೆ ಮೊದಲು ಭಾರತದಲ್ಲಿ ಅಸ್ತಿತ್ವದಲ್ಲಿದ್ದುದು ಭಾರತೀಯ ಸಂಗೀತ. ಅನಾದಿಕಾಲದಿಂದ ಬಂದ ವೈದಿಕ ಸಂಗೀತ ಸಂಪ್ರದಾಯವನ್ನು ಅದರ ಪರಂಪರೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದ ಸಂಗೀತವು ಮುಂದೆ ಕರ್ನಾಟಕ ಸಂಗೀತವಾಗಿ ಮಾರ್ಪಟ್ಟಿತ್ತು. ಈ ಹಿಂದೆ ಇದ್ದ ಸಂಗೀತವು ಪರ್ಶಿಯನ್ ಸಂಗೀತದ ಪ್ರಭಾವಕ್ಕೆ ಗುರಿಯಾಗಿ ಹೊಸ ಶೈಲಿಯನ್ನು ಸ್ವೀಕರಿಸಿ ಹಿಂದುಸ್ತಾನಿ ಸಂಗೀತವೆಂಬ ಅಭಿಧಾನವನ್ನು ಪಡೆದು ಮುಂದುವರೆದಿದೆ.

ಕರ್ನಾಟಕ ಸಂಗೀತ ಪದ್ಧತಿಯ ಕಲಿಕೆಯಲ್ಲಿ ಹಾಗೂ ಪ್ರಸ್ತುತಿಯಲ್ಲಿ ಸ್ವರಗಳ ಅಭ್ಯಾಸಗಾನ, (ಸರಳವರಸೆ, ಜಂಟಿವರಸೆ, ದಾಟುವರಸೆ, ಸಪ್ತತಾಳದ ಅಲಂಕಾರಗಳು) ಗೀತೆ, ಲಕ್ಷಣಗೀತೆ, ಸ್ವರಜತಿ, ಜತಿಸ್ವರ, ವರ್ಣ, ಕೃತಿ, ರಾಗಮಾಲಿಕಾಕೃತಿ, ದರು, ರಾಗ-ತಾನ- ಪಲ್ಲವಿ, ಕೀರ್ತನೆ, ಜಾವಳಿ, ತಿಲ್ಲಾನ, ದೇವರನಾಮ, ವಚನ, ಶ್ಲೋಕ, ಭಜನ್, ಅಭಂಗ್ ಮುಂತಾದ ರಚನಾ ವಿಶೇಷಗಳಿವೆ.

ಹಿಂದುಸ್ತಾನಿ ಸಂಗೀತ ಪದ್ಧತಿಯ ಕಲಿಕೆಯಲ್ಲಿ ಹಾಗೂ ಪ್ರಸ್ತುತಿಯಲ್ಲಿ ಸಗ ಅಂಗಳ ಅಭ್ಯಾಸ, ಲಕ್ಷಣಗೀತೆ, ಧ್ರುಪದ್ ಅಥವಾ ಧ್ರುವಪದ, ಖ್ಯಾಲ್ ಚೀಸ್, ರುಮ್ರಿ, ದಮಾರ್, ತರಾನ, ಭಜನ್, ಟಪ್ಪ, ಘಜಲ್, ಅಭಂಗ್, ಕೀರ್ತನ್, ಕವ್ವಾಲಿ, ರಾಗಮಾಲ್, ದಾದರಾ ಚತುರಂಗ ಮುಂತಾದ ರಚನಾ ವಿಶೇಷಗಳಿವೆ. ಮನೋಧರ್ಮ ಸಂಗೀತ ಈ ಎರಡೂ ಪದ್ಧತಿಗಳ ಪ್ರೌಢ ಪ್ರಸ್ತುತಿಯಾಗಿದೆ.

ಈ ಎರಡು ಸಂಗೀತ ಪದ್ಧತಿಗಳು ಬೃಹತ್ ವೃಕ್ಷದ ಎರಡು ರೆಂಬೆಗಳಿದ್ದಂತೆ, ಎರಡು ಪದ್ಧತಿಗಳನ್ನು ಗಮನಿಸಿದಾಗ ಅನೇಕ ಸಾದೃಶ್ಯಗಳೂ ಅಂತೆಯೇ ಭೇದವೂ ಕಂಡುಬರುತ್ತದೆ. ಎರಡು ಪದ್ಧತಿಗಳಲ್ಲಿಯೂ ಸ್ವರಗಳು, ಶ್ರುತಿ, ಲಯ, ರಾಗಗಳಿವೆ. ಗಮಕ ಎಂದರೆ ಸ್ವರಗಳ ಕಂಪನ ಇವುಗಳ ಪರಸ್ಪರ ಭಿನ್ನವಾಗಿವೆ. ಕರ್ನಾಟಕ ಸಂಗೀತ ೭೨ ಮೇಳ ಕರ್ತಲ್ಯಾಧಾದಿಂದ ಹಿಂದುಸ್ತಾನಿ ಸಂಗೀತ ೧೦ ಥಟ್‌ಗಳ ಆಧಾರದಿಂದ ಮುನ್ನಡೆದಿದೆ.

ಕರ್ನಾಟಕ ಸಂಗೀತ ಪಿತಾಮಹ ಶ್ರೀಪುರಂದರದಾಸರು, ಸಂಗೀತ ತ್ರಿಮೂರ್ತಿಗಳಾಗಿ ಶ್ರೀ ತ್ಯಾಗರಾಜರು ಶ್ರೀಮುತ್ತುಸ್ವಾಮಿ ದೀಕ್ಷಿತರು ಮತ್ತು ಶ್ರೀ ಶ್ಯಾಮಾಶಾಸ್ತ್ರಿಗಳು ಇವರೊಂದಿಗೆ ಅನೇಕ ಪ್ರಸಿದ್ಧ ರಚನೆಕಾರರು ಈ

ದಕ್ಷಿಣಭಾರತದ ಸಂಗೀತವನ್ನು ತಮ್ಮ ಉತ್ತಮ ರಚನೆಗಳ ಮೂಲಕ ಶ್ರೀಮಂತಗೊಳಿಸಿದ್ದಾರೆ. ಭಾರತ ಮುನಿ, ಮತಂಗ, ನಾರದ, ಸೋಮೇಶ್ವರ, ಪಾರ್ಶ್ವದೇವ, ಶಾರ್ಙ್ಗದೇವ, ರಾಮಾಮಾತ್ಯ, ವೆಂಕಟ ಮಖಿ, ಗೋವಿಂದಾಚಾರ್ಯ ಮುಂತಾದ ಲಕ್ಷಣೀಕರು ಈ ಸಂಗೀತದ ಶಾಸ್ತ್ರವನ್ನು ಗಟ್ಟಿ ಗೊಳಿಸಿದ್ದಾರೆ.

ಹಿಂದುಸ್ತಾನಿ ಸಂಗೀತ ಪದ್ಧತಿಯಲ್ಲಿ ತಾನ್‌ಸೇನ್, ಬೈಜೂ ಬಾವರ, ಬಾಲಕೃಷ್ಣಬುವಾ, ಅಬ್ದುಲ್ ಕರೀಂಖಾನ್, ಭಾತಖಂಡೇ, ವಿಷ್ಣು ದಿಗಂಬರ್ ಪಲೂಸ್ಕರ್,



ಅಲ್ಲಾದಿಯಾ ಖಾನ್, ಪಂಚಾಕ್ಷರೀ ಗವಾಯಿ, ನೀಲಕಂಠ, ಬುವಾ ಮುಂತಾದವರು ಈ ಪದ್ಧತಿಯ ಸಂಗೀತ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ.

ಲಘುಶಾಸ್ತ್ರೀಯ ಸಂಗೀತ: ಹರಿದಾಸರ ಕೀರ್ತನೆಗಳು, ಶಿವಶರಣರ ಸ್ವರವಚನಗಳು, ವಚನಕಾರರ ವಚನಗಳು, ಸಂತರ ಭಜನ್‌ಗಳು ಈ ಪರಿಮಿತಿಯಲ್ಲಿ ಬರುವ ರಚನೆಗಳಾಗಿವೆ. ಇವು ಗಾಢ ಸಂಗೀತದಿಂದ ಕೂಡಿರದೆ ಸಾಹಿತ್ಯಕ್ಕೆ ಒತ್ತು ಕೊಟ್ಟ ಮಾಧೂರ್ಯಭರಿತ ಪ್ರಸ್ತುತಿಯಾಗಿದೆ.

**ಗಮಕ ವಾಚನ:** ಕನ್ನಡ ಭಾಷೆಯ ಕಾವ್ಯಗಳನ್ನು ಕರ್ನಾಟಕ ಶಾಸ್ತ್ರೀಯ ಸಂಗೀತ ದಾಟಿಯಲಿ ತಾಳದ ಹಂಗಿಲ್ಲದೆ ಆದರೆ ಉತ್ತಮ ಕಂಠದಿಂದೊಡಗೂಡಿ, ಛಂದಸ್ಸು, ಗತಿ, ಪದಚ್ಛೇದ, ಸ್ಪಷ್ಟ ಉಚ್ಚಾರಣೆಗಳ ಅರಿವಿನೊಂದಿಗೆ ಶ್ರುತಿವಾದ್ಯದೊಂದಿಗೆ ಅರ್ಥ ಗರ್ಭಿತವಾಗಿ ಪ್ರಸ್ತುತಪಡಿಸುವ ಒಂದು ಸುಂದರ ವಾಚನ ಕಲೆ, ಒಂದು ಅದ್ಭುತ ಅನುಭವವನ್ನುಂಟು ಮಾಡುವ ಕಲೆ, (ವಿವರಣೆಯನ್ನು ಮುಂದೆ ನೀಡಲಾಗಿದೆ.)

**ಸುಗಮ ಸಂಗೀತ:** ನವ್ಯ ಕವಿಗಳ ಕನ್ನಡ ಕವನಗಳಿಗೆ ರಾಗ ಸಂಯೋಜಿಸಿ ವಾದ್ಯ ವೃಂದದೊಂದಿಗೆ ಕವನದ ಆಶಯವನ್ನು ಹಾಡುವ ಮೂಲಕ ಕಟ್ಟಿಕೊಡುವ ಒಂದು ಜನಪ್ರಿಯ ವಿಶೇಷಕಲೆ.

**ಚಲನಚಿತ್ರ ಸಂಗೀತ:** ಚಲನಚಿತ್ರದ ಕಥೆಗೆ ಅನುಗುಣವಾಗಿ ಶ್ರೋತೃಗಳನ್ನು ರಂಜಿಸುವ ಉದ್ದೇಶದಿಂದ ಸಂದರ್ಭಕ್ಕೆ ಹೊಂದುವ ಸಾಹಿತ್ಯ ರಚಿಸಿ, ರಾಗ ಸಂಯೋಜಿಸಿ ವಾದ್ಯ ವೃದದೊಂದಿಗೆ ಬಿತ್ತರಿಸುವ ಒಂದು ಕಲಾಪ್ರಕಾರ.

ಭಜನಾಪದ ಗಾಯನ: ಭಜನೆ ಹಾಡುವ ಪದ್ಧತಿಯು ಭಾರತೀಯ ಕಲಾ ಪರಂಪರೆಯಲ್ಲಿ ಬಹಳ ಹಿಂದಿನಿಂದಲೂ ರೂಡಿಯಲ್ಲಿ ಬಂದಿದೆ. ಭಗವನ್ನಾಮ ಸಂಕೀರ್ತನೆಯೇ ಇದರ ಪರಮ ಉದ್ದೇಶ. ಭಗವಂತನ

ನಾಮಾವಳಿಗಳನ್ನು ಸರಳ ಸಂಗೀತ ಮಟ್ಟಿನೊಂದಿಗೆ ಸಣ್ಣ ಊರುಗಳಲ್ಲಿ ಹಳ್ಳಿಗಳಲ್ಲಿ ವಾಸಮಾಡುವ ಜನಸಾಮಾನ್ಯರು ಊರಿನ ದೇವಾಲಯದಲ್ಲಿ ಶನಿವಾರವೋ ಸೋಮವಾರವೋ ಸೇರಿ ಪೇಟೆ (ಹಾರೋನಿಯಂ), ತಬಲ, ತಾಳಗಳೊಂದಿಗೆ ಹಾಡನ್ನು ಹೇಳಿ, ಕೊಡುವುದು ಉಳಿದವರು ಅದನ್ನು ಪುನರುಚ್ಛರಿಸುವುದು ಈ ಗಾಯನದ ಪ್ರತೀತಿ, ಭಜನೆ ಹಾಡಿನ ರಾಗ-ತಾಳಗಳು ಸರಳವಾಗಿರುತ್ತವೆ ಮತ್ತು ಹಾಡು ಸುಮಾರು ಒಂದೂವರೆ ಸ್ಥಾಯಿಯೊಳಗೆ ಇರುತ್ತದೆ.

**ತತ್ವಪದ ಗಾಯನ:** ಹರಿ-ಹರರನ್ನು ಸಮಾನವಾಗಿ ಪರಿಗಣಿಸಿದವರು ಈ ತತ್ವಪದಕಾರರು, ನಾಥರು, ಆರೂಢರು, ಸಿದ್ಧರು, ಸೂಫಿಪಂಥೀಯರು, ದಲಿತರು, ಮುಸ್ಲಿಂ ಧರ್ಮೀಯರು, ಭಾವೈಕ್ಯತೆ ಸಾರುವವರು, ಪಾರಮಾರ್ಥಿಕ ಚಿಂತನೆ ಇಚ್ಛಿಸುವವರು, ಜನತೆಗೆ ಜೀವನ ಪಾಠ ತಿಳಿಸುವ ಪ್ರವೃತ್ತಿಯುಳ್ಳವರು ಈ ತತ್ವಪದ ಗಾಯಕರು. ತತ್ವಪದವನ್ನು ಏಕವ್ಯಕ್ತಿ ಗಾಯನದಂತೆಯೂ, ಸಹಗಾಯಕರೊಂದಿಗೆಯೂ ವಾದ್ಯ ವೃಂದದೊಂದಿಗೆಯೂ ಹಾಡುತ್ತಾರೆ.

**ನೃತ್ಯ ಸಂಗೀತ:** ಸಂಗೀತವಿಲ್ಲದೆ ನೃತ್ಯವಿಲ್ಲ, ನೃತ್ಯಕಲೆ ಪುರಾತನವಾದುದು ಅಂತೆಯೇ



ನೃತ್ಯಸಂಗೀತವೂ ಪುರಾತನವಾದುದು. ಭಾರತದಲ್ಲಿ ಸುಮಾರು ೮ ಶಾಸ್ತ್ರೀಯ ನೃತ್ಯಪ್ರಕಾರಗಳಿವೆ. ಭರತನಾಟ್ಯ, ಕೂಚುಪುಡಿ, ಮೋಹಿನಿ ಆಟ್ಟಂ, ಕಥಕ್ಕಳಿ ನೃತ್ಯಗಳಲ್ಲಿ ಕರ್ನಾಟಕ ಸಂಗೀತವನ್ನೂ ಒಡಿಸ್ಸಿ ಕಥಕ್, ಮಣಿಪುರಿ, ಸತ್ತಾರಿಯೂ ನೃತ್ಯಗಳಲ್ಲಿ ಹಿಂದುಸ್ತಾನಿ ಸಂಗೀತವೂ ಬಳಕೆಯಾಗುತ್ತದೆ. ನೃತ್ಯಗಾರ್ತಿಯ ನೃತ್ಯಕ್ಕನುಗುಣವಾಗಿ ಗಾಯಕ ಅಥವಾ ಗಾಯಕಿ ತನ್ನ ಹಾಡಿಕೆಯನ್ನು ಹೆಚ್ಚು ಬಾರಿ ಪುನರಾವರ್ತಿಸುತ್ತಾರೆ. ಸನ್ನಿವೇಷಕ್ಕನುಗುಣವಾಗಿ ಗಾಯಕರು ತಮ್ಮ ಹಾಡಿಕೆಯನ್ನು ಭಾವಪೂರ್ಣ ರಸಪೂರ್ಣವಾಗಿಸಿ ಪ್ರಸ್ತುತಪಡಿಸುತ್ತಾರೆ. ಇದು ಪರಸ್ಪರ ತಾಲೀಮು ಮಾಡುತ್ತಾ ಹೋದಂತೆ ನಿಗಧಿಗೊಳ್ಳುತ್ತದೆ. ಇಲ್ಲಿ ಶಾಸ್ತ್ರೀಯ ಸಂಗೀತ ಗಾಯಕನಿಗಿರುವಷ್ಟು ಸಂಗೀತ ಸ್ವಾತಂತ್ರ್ಯ ನೃತ್ಯ ಸಂಗೀತ ಗಾಯಕನಿಗೆ ಸಾಧ್ಯವಾಗುವುದಿಲ್ಲ.

**ಸಂಗೀತ ಮತ್ತು ಗಮಕ ಕಲೆಗಳು ಅಪೂರ್ವ ಕಲೆಗಳು**

ಸಂಗೀತ ಮತ್ತು ಗಮಕ ಕಲೆಗಳು ಶತಶತಮಾನಗಳಿಂದ ಪರಸ್ಪರ ನಿರಂತರ ಸಾಮರಸ್ಯದಿಂದ ನಡೆದು ಬಂದಂತಹ ಅಪೂರ್ವ ಕಲೆಗಳು, ಕವಿಯ ಕಾವ್ಯವನ್ನು ಗಮಕಿಯು ಎಷ್ಟರಮಟ್ಟಿಗೆ ಅರಿತುಕೊಂಡಿದ್ದಾನೆ. ಕವಿಯ

ಅಂತರಾತ್ಮಕ್ಕೆ ಎಷ್ಟು ಹತ್ತಿರ ಹೋಗಿದ್ದಾನೆ ಎಂಬುದನ್ನು ಗಮಕ ಕಲಾವಿದ ಪ್ರದರ್ಶಿಸುವ ಗಮಕ ವಾಚನದ ಪ್ರೌಢಿಮೆ ನಿಗಧಿಗೊಳಿಸುತ್ತದೆ. ಗಮಕ ಕಲೆಯಾದರೋ ಸಂಗೀತ-ಸಾಹಿತ್ಯಗಳ ನಡುವೆ ನಿಂತು ಎರಡೂ ಕಲೆಗಳ ಧ್ವನಿಯಾಗಿ ಬೆಳಕಾಗಿ ಬೆಳಗುತ್ತದೆ. ಆದರೆ ಗಮಕದಲ್ಲಿ ಸಾಹಿತ್ಯಕ್ಕೆ ಅಥವಾ ಕಾವ್ಯಕ್ಕೆ ಮೊದಲ ಪ್ರಾಶಸ್ತ್ಯ ಸಂಗೀತ ಕಲೆಗೆ ನಂತರದ ಸ್ಥಾನ. ಒಟ್ಟಾರೆ ಇದೊಂದು ಅಪೂರ್ವ ಕಲೆಯೇ ಸರಿ ಗಮಕ ಕಲೆ ಮತ್ತು ಸಂಗೀತ ಕಲೆ ಪರಸ್ಪರ ಹಾಲು ಸಕ್ಕರೆ ಬೆರೆತಂತೆ ಗಮಕ ಸಾಹಿತ್ಯ ಭಾಗವನ್ನು ಪ್ರತಿನಿಧಿಸಿ ಹಾಲಿನಂತೆನಿಸಿದರೆ ಗಾಯನ ಮಧುರ ಸಂಗೀತವನ್ನು ಪ್ರತಿನಿಧಿಸಿ ಸಕ್ಕರೆಯಂತೆನಿಸುತ್ತದೆ. ಗಮಕ ಕಲೆಯಲ್ಲಿ ಗಮಕಿಯ ಜವಾಬ್ದಾರಿ ಹೆಚ್ಚು, ಕಾವ್ಯ ಕಥನ ಪ್ರಸಂಗವನ್ನು ಗಮಕಿಯು ಕಣ್ಣಿಗೆ ಕಟ್ಟುವಂತೆ ಶ್ರಾವ್ಯ ಕಾವ್ಯ ಗಾಯನದ ಮೂಲಕ ಕಟ್ಟಿಕೊಡಬೇಕಾಗುತ್ತದೆ.

**ಗಮಕ ಕಲೆ ಎಂದರೇನು?**

ಗಮಕ ಪದದ ವಿವರಣೆಯನ್ನು ಕಡಯಕ್ಷರದಿಂದ ಆರಂಭಿಸಿ ಹೀಗೆ ಹೇಳಲು ಸಾಧ್ಯ; ಕನ್ನಡ ಭಾಷಾಕಾವ್ಯಗಳ ಮನಮುಟ್ಟುವ ಗಾಯನವೇ 'ಗಮಕ' ಎನ್ನಲುಬಹುದು. ಸಾಹಿತ್ಯ ಸಂಗೀತಗಳ ಸುಂದರ ಸಮನ್ವಯದ ಒಂದು ವಿಶಿಷ್ಟ ಕಲೆಯೇ ಈ ಗಮಕಕಲೆ. ಕವಿಯು ತನ್ನ ಕಾವ್ಯವನ್ನು ರಚಿಸಿರುವ ಛಂದಸ್ಸಿನ ರೀತಿಗನುಗುಣವಾಗಿ ಆ ಕಥಾ ಭಾಗವನ್ನು ಆಕರ್ಷಕವಾಗಿ ಸಂಗೀತದೊಂದಿಗೆ ವಾಚಿಸುವ ಈ ಕಲೆ ಒಂದು ಶ್ರೇಷ್ಠ ಕಲೆ. ಇದಕ್ಕೆ ತಾಳದ ಹಂಗಿಲ್ಲ. ಇದು ಸಾಹಿತ್ಯ ಗತಿಯಂತೆ ಚಲಿಸುತ್ತದೆ.

**ಗಮಕ ಕಲೆಯ ಆಕರ್ಷಯತೆ:**

ಕ್ರಿಸ್ತಪೂರ್ವ ೧ನೇ ಶತಮಾನದಲ್ಲಿಯೇ ಬುದ್ಧನ 'ಲಲಿತ ವಿಸ್ತಾರ' ಎಂಬ ಗ್ರಂಥದಲ್ಲಿ ಉಲ್ಲೇಖಿತಗೊಂಡಿದೆ ಎನ್ನಲಾದ ೬೪ ಕಲೆಗಳು, ಅದರಲ್ಲಿ ೩೮ನೇಯ ಕಲೆ ಗಮಕ

ಕಲೆಯಾಗಿತ್ತೆಂಬುದು ತಿಳಿದುಬರುತ್ತದೆ. ೧ನೇ ಶತಮಾನದಲ್ಲಿ ವಾತ್ಸ್ಯಾಯನನಿಂದ ಬರೆಯಲ್ಪಟ್ಟ 'ಗೀತ ಪೀಠಿತಂ'ನಲ್ಲಿ ೬೪ ಕಲೆಗಳ ಪ್ರಸ್ತಾಪವಿದ್ದು ಇದರಲ್ಲಿ ೩೧ನೇಯ ಕಲೆಯಾಗಿ 'ಪುಸ್ತಕ ವಾಚನಂ' ಎಂಬುದಾಗಿ ಹೆಸರಿಸಲಾಗಿದೆ. ಈ ಪುಸ್ತಕ ವಾಚನವೇ ಗಮಕ ಕಲೆ ಎನ್ನಲಾಗಿದೆ. ಕುಶಲವರು ವಾಲ್ಮೀಕಿ ಮಹರ್ಷಿಗಳಿಂದ ಕಲಿತಂತಹ ಆದಿಕಾವ್ಯ ರಾಮಾಯಣವನ್ನು ಅದ್ಭುತವಾಗಿ ಗಾಯನ ಮಾಡಿ ತಮ್ಮ ಸಾಹಿತ್ಯ-ಸಂಗೀತ ಭಂಡಾರವನ್ನು ಪ್ರಸ್ತುತಿಪಡಿಸಿ ಆದಿ ಗಮಕಿಗಳೆಂದೆನಿಸಿದ್ದಾರೆ. ಜೈನರ, ವೀರಶೈವರ ಅಲ್ಲದೆ ತಮಿಳು ಸಾಹಿತ್ಯದಲ್ಲಿಯೂ ಕವಿ ಗಮಕಿ, ವಾದಿ, ವಾಗ್ದಗಳೆಂಬ ೪ ಪಂಡಿತ ವರ್ಗವನ್ನು ಸೂಚಿಸಲಾಗಿದೆ. ಗಮಕಿಗಳಿಗೆ ಪಂಡಿತರೆಂಬ ಮುದ್ರೆಯನ್ನು ನೀಡಿ ಅಂದೇ ಗೌರವಿಸಲಾಗಿದೆ. ರಾಜರೊಂದಿಗೆ ಕವಿಗಳು-ಗಮಕಿಗಳು ಸಾಮಾನ್ಯವಾಗಿ ಇದ್ದೇ ಇರುತ್ತಿದ್ದರೆಂದು ತನ್ಮೂಲಕ ಸಂಗೀತ-ಸಾಹಿತ್ಯಕಲಾ ಸಹಕಾರ ನಡೆಯುತ್ತಿದ್ದರೆಂದು ಇತಿಹಾಸ ತಿಳಿಸುತ್ತದೆ.

ಕ್ರಿ.ಶ. ೧೫೩೩ರಲ್ಲಿನ ಹಂಪೆಯ ಅಚ್ಚುತರಾಯನ ಕಾಲದ ಶಾಸನವೊಂದು ತಿರುಮಲಮ್ಮ ಎಂಬ ಮಹಿಳೆಯು ಸ್ವತಃ ಕವಿಯೂ, ಉತ್ತಮ ಗಮಕಿಯೂ ಆಗಿದ್ದಳೆಂಬುದನ್ನು ತಿಳಿಸುತ್ತದೆ. ಸುಕುಮಾರ ಚರಿತೆಯು ನಾಗಶ್ರೀ ಎಂಬ ಮಹಿಳೆ ಪ್ರಸಿದ್ಧ ಗಮಕಿಯಾಗಿದ್ದಾಳೆಂದೂ ಅವಳ ಈ ಕಲೆಗೆ ಎಲ್ಲರೂ ಮೆಚ್ಚುಗೆಯ ಉದ್ಗಾರವೆತ್ತುತ್ತಿದ್ದರೆಂದು ತಿಳಿಸುತ್ತದೆ. ಅಂತೆಯೇ ಗಮಕ ಕಲೆ ಒಂದು ಪುರಾತನ ಕರೆಯಾಗಿದೆ.

**ಗಮಕ ಕಲಾವಿದನಿಗಿರಬೇಕಾದ ಗುಣ ಸಾಮರ್ಥ್ಯ:**

ಗಮಕಕಲೆ ಒಂದು ಸಮಿಶ್ರ ಕಲೆ. ಇದರಲ್ಲಿ ಕಾವ್ಯ (ಸಾಹಿತ್ಯ) ವಾಚನ (ಸಂಗೀತ) ಎರಡೂ ಕಲೆಗಳು ಅಡಗಿವೆ. ಆದಕಾರಣ ಗಮಕಿಗೆ ಸಂಗೀತ-ಸಾಹಿತ್ಯಗಳ ವಿಶೇಷ ಜ್ಞಾನ, ಪರಿಶ್ರಮಗಳಿರಬೇಕು.

ಗಮಕ ಕಲೆಯಲ್ಲಿ ಬಳಸುವ ಸಂಗೀತ ಕರ್ನಾಟಕ ಸಂಗೀತ. ಈ ಸಂಗೀತ ಪರಿಣಿತಿ ಇರಬೇಕು. ಕಥಾ ಸನ್ನಿವೇಶದ ವಿವಿಧ ರಸಭಾವಕ್ಕೆ ಹೊಂದುವಂತೆ ಒಂದು ರಾಗದ ನಂತರ ಮತ್ತೊಂದು ಬೇರೆ ರಾಗ ಪಡೆಯುವ, ಹೀಗೆ ರಾಗ ಬದಲಾಯಿಸಿಕೊಂಡು ಕಾವ್ಯಗಳಿಗೆ ವಿವಿಧ ರಾಗಗಳನ್ನು ಹಾಕಿಕೊಂಡು ಹಾಡುವ ಪ್ರಬುದ್ಧತೆಬೇಕು. ರಾಗ ಲಕ್ಷಣಗಳನ್ನರಿತು ಅದರಂತೆ ಲೋಪವಿಲ್ಲದೆ ಹಾಡುವ ಪರಿಶ್ರಮ ಸಾಧನೆ ಇರಬೇಕು. ಕಂಠದಲ್ಲಿ ಮಾಧುರ್ಯವಿರಬೇಕು.

ಗಮಕಿಗೆ ಕಾವ್ಯಾಭಿವ್ಯಕ್ತಿಯ ರಸಗ್ರಹಣ ಶಕ್ತಿ ಇರಬೇಕು. ಕಾವ್ಯ ಪ್ರಸಂಗಗಳ ಸನ್ನಿವೇಶದ ತಿಳುವಳಿಕೆ ಅಗತ್ಯವಾದ ಶೃಂಗಾರ, ಹಾಸ್ಯ, ರೌದ್ರ, ವೀರ, ಕರುಣಾ, ಭೀಭತ್ಯ, ಅದ್ಭುತ, ಭಯಾನಕ, ಶಾಂತ ರಸಗಳೊಂದಿಗೆ ಸ್ಥಾಯೀ ಭಾವಗಳಿಂದ ರತಿ, ಹಾಸ, ಕ್ರೋಧ, ಉತ್ಸಾಹ, ಶೋಕ, ಜಿಗುಪ್ಸೆ, ವಿಸ್ಮಯ, ಭಯ, ಶ್ರಮ ಇವುಗಳ ಕಾಕುಗಳನ್ನು ಬಳಸಿಕೊಂಡು ವಾಚಿಸುವ ಜಾಣೆ, ಕಾವ್ಯದ ಗತಿಗನುಸಾರವಾಗಿ ಹಾಡುವ ಕ್ರಮ ತಿಳಿದಿರಬೇಕು.

ಕಥಾ ಪ್ರಸಂಗದ ಓಘದ (ಓಟ) ಔಚಿತ್ಯತೆಯನ್ನು ಅರಿತು ಸಮಯ ಪಾಲನೆ ಮಾಡುವ ನಿರ್ವಹಣಾಶಕ್ತಿ ಇರಬೇಕು.

ಕಾವ್ಯದ ಛಂದಸ್ಸು, ಪದಚ್ಛೇದ, ಸ್ಪಷ್ಟ ಉಚ್ಚಾರಣೆ, ಕಾವ್ಯ ಪದ- ವಾಕ್ಯಗಳಿಗನುಗುಣವಾದ ಉಚ್ಛ್ವಾಸ, ನಿಶ್ವಾಸ ಕ್ರಮ ತಿಳಿದಿರಬೇಕು. ಮಿಗಿಲಾಗಿ ಕಾವ್ಯನಿಷ್ಠೆ, ದೈವಭಕ್ತಿ, ಸದಾಚಾರ ಗುಣಸಂಪನ್ನ, ನಿಗರ್ವಿತನ, ವಿನಯವಂತಿಕೆ ವಿದೇಯತೆ ಇವುಗಳೊಂದಿಗೆ ಕಲಾಸಂಪನ್ನತೆ ಅತಿ ಮುಖ್ಯ ಬಹುಮುಖ್ಯಾವಗಿ ಗಮಕ ಕಲಾವಿದ ತನ್ನ ವಾಚನದಲ್ಲಿ ಕವಿಯು ತನ್ನ ಕಾವ್ಯದಲ್ಲಿ ಆಶಿಸುವ ವಿವಿಧ ರಸಭಾವಗಳನ್ನು ಕೊಂಚವೂ ರಸಭಾಸವಾಗದಂತೆ, ರಾಗ-ರಸ-ಭಾವಗಳ ಸಿಂಚನದೊಂದಿಗೆ ತುಂಬಿಕೊಡಬೇಕಾಗುತ್ತವೆ. ಗಮಕಿಯು ಏಕಕಾಲಕ್ಕೆ ಸಾಹಿತ್ಯ ಶುದ್ಧಿ-ಭಾವಶುದ್ಧಿ-ಸಂಗೀತ ರಾಗ ಶುದ್ಧಿಗಳ ಶುದ್ಧಿ ಈ ಎಲ್ಲವನ್ನು ಸಮಯೋಚಿತವಾಗಿ ಸರಿದೂಗಿಸಿಕೊಂಡು ಹೋಗಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಕಲೆಯು ಸಾಧನೆಯಿಂದ, ಪರಿಶ್ರಮದಿಂದ ಆರ್ಜಿಸುವ ಒಂದು ಕಷ್ಟ ಸಾಧ್ಯವಾದ ಅಪೂರ್ವ ಸಾಂಪ್ರದಾಯಿಕ ಕಲೆ ಎಂದರೆ ಅತಿಶಯೋಕ್ತಿಯಲ್ಲ.

ಸಂಗೀತ ಶಾಸ್ತ್ರಗ್ರಂಥಗಳಲ್ಲಿ ಸಂಗೀತ ಲಾಕ್ಷಣಿಕರು ತಿಳಿಸಿರುವ 'ಗಮಕ' ಪದ:

ಮತಂಗ ಮುನಿ ಮೊದಲ್ಗೊಂಡು ಅನೇಕ ಲಾಕ್ಷಣೀಕರು 'ಗಮಕ' ಪ್ರಸಕ್ತಿಯ ಬಗ್ಗೆ ಸವಿವರವಾಗಿ ತಿಳಿಸಿದ್ದಾರೆ. ಸ್ವರಗಳ ಕಂಪನಕ್ಕೆ ಗಮಕ ಎಂದು ಹೆಸರು “ಸ್ವರಸ್ಯ ಕಂಪೋ ಗಮಕಃ ಪ್ರೋತ್ರ್ಯ ಚಿತ್ತಸುಖಾವಹಃ” ಗಮಕವು ಕೇಳುಗರ ಚಿತ್ರಕ್ಕೆ ಸುಖವನ್ನು ನೀಡುವಂತಿರಬೇಕು. ಯಾವ ಸ್ವರವೇ ಆಗಲಿ ರಂಜಕವಾಗಬೇಕಾದರೆ ಸೂಕ್ತವಾದ ಗಮಕಗಳ ಪ್ರಯೋಗ ಅತ್ಯಗತ್ಯ. ಕರ್ನಾಟಕ ಸಂಗೀತ ಹಾಗೂ ಹಿಂದೂಸ್ತಾನೀ ಸಂಗೀತಗಳ ಗಮಕ ಪ್ರಕ್ರಿಯೆ ಭಿನ್ನವಾಗಿರುವ ಕಾರಣ ಕಿವಿಗಳಿಗೆ ಬೇರೆ ಬೇರೆ ರೀತಿಯಾಗಿ ಕೇಳಿಸುತ್ತವೆ. ಕರ್ನಾಟಕ ಸಂಗೀತದಲ್ಲಿ ದಶವಿಧ ಗಮಕಗಳು, ಪಂಚದಶ ಗಮಕಗಳು ಹೇಳಲ್ಪಟ್ಟಿವೆ ಹಾಗೂ ರೂಢಿಯಲ್ಲಿವೆ. ಗಮಕ ಕಲೆಯನ್ನು ಕರ್ನಾಟಕ ಸಂಗೀತ ಶೈಲಿಯಲ್ಲಿ ಹಾಡಲಾಗುತ್ತದೆ. ಈ ಮೇಲೆ ತಿಳಿಸಿದ ಗಮಕಕ್ಕೂ ಗಮಕಿ ಹಾಡುವ ಗಮಕಕ್ಕೂ ಸಂಬಂಧವಿಲ್ಲ. ಆದರೆ ಗಮಕಿಯ ಹಾಡುವ ವಿವಿಧ ರಾಗಗಳ ಪ್ರಸ್ತುತತೆಯಲ್ಲಿ ಈ ಸ್ವರಗಳ ಕಂಪನ ಸೇರ್ಪಡೆಯಾಗಿರುತ್ತದೆ.

**ಕಾವ್ಯ ವಾಚನ ವಸ್ತು:** ಕನ್ನಡ ಭಾಷಾ ಕಾವ್ಯ ಭಂಡಾರವೇ ಗಮಕ ವಾಚನದ ವಸ್ತು ಹರಿಹರ, ರಾಘವಾಂಕ, ಚಾಮರಸ, ಕುಮಾರವ್ಯಾಸ, ವಾಲ್ಮೀಕಿ, ಲಕ್ಷ್ಮೀಶ ಮುಂತಾದವರ ಕಾವ್ಯಗಳ ಆಕರ್ಷಕ ಹಾಗೂ ಉತ್ತಮ ಸನ್ನಿವೇಶಗಳ ಭಾಗವನ್ನು ಆಯ್ಕೆಮಾಡಿಕೊಂಡು ರಸವತ್ತಾಗಿ ಹಾಡುವ ಪ್ರತೀತಿ ಈ ಗಮಕ ಕಲೆಯದು. ಒಟ್ಟಾರೆ ಕನ್ನಡ ನೆಲದ ವಿಶಿಷ್ಟವಾಚನ ಕಲೆಯೇ ಈ ಗಮಕ ಕಲೆ.

**ಪ್ರಸಿದ್ಧ ಗಮಕಿಗಳು:** ಶ್ರೀಯುತರುಗಳಾದ ಬಸವಪ್ಪ ಶಾಸ್ತ್ರಿಗಳು, ಹಾಡಿನ ನಾಗಮ್ಮ, ಬಿಂದೂರಾಯರು, ಕೃಷ್ಣಗಿರಿ ಕೃಷ್ಣರಾಯರು, ರಾಮಕೃಷ್ಣರಾಯರು, ಕಳಲೆ ಸಂಪತ್ತುಮಾರಾಚಾರ್ಯ, ಅನಂತಪದ್ಮನಾಭರಾವ್, ರಾಮಾರಾಧ್ಯ, ಎಂ.



ರಾಘವೇಂದ್ರರಾವ್, ಬಿ.ಎಸ್.ಎಸ್. ಕೌಶಿಕ್, ಶಕುಂತಲಾಬಾಯಿ ಪಾಂಡುರಂಗರಾವ್, ಅನ್ನಪೂರ್ಣಮ್ಮ ರಘುಪತಿಶಾಸ್ತ್ರಿ, ಮುಂತಾದವರನ್ನು ಹೆಸರಿಸಬಹುದು.

**ಇತರ ವಿಚಾರಗಳು:** ಕರ್ನಾಟಕದ ಕಲೆ ಯಕ್ಷಗಾನದಲ್ಲಿಯೂ ಗಮಕ ಗಾಯನ ರೀತಿಯ ಕಲೆ ಬಳಕೆಯಲ್ಲಿದೆ. ಆದರೆ ಯಕ್ಷಗಾನಕ್ಕೆ ಹಾಡುವ ಕಲಾವಿದರನ್ನು ಗಮಕಿ ಎಂಬ ಹೆಸರಿನಿಂದ ಕರೆಯುವುದಿಲ್ಲ ಅವರನ್ನು ಭಾಗವತರು ಎಂಬ ಹೆಸರಿನಿಂದ ಕರೆಯುತ್ತಾರೆ. ಶ್ಲೋಕ, ವಚನಖಂಡ, ಉಗಾಭೋಗ ಈ ರಚನೆಗಳೂ ಸಹ ಲಯ/ತಾಳವಿಲ್ಲದ ಸಾಹಿತ್ಯ ಪ್ರಧಾನ ಗಾಯನ ಪ್ರಕಾರವಾಗಿದ್ದು ಇವು ಗಮಕ ವಾಚನ ಶೈಲಿಗೆ ಬಹಳವಾಗಿ ಹೋಲುತ್ತವೆ.

ಮಲೆಯಾಳಂ ಭಾಷೆಯಲ್ಲಿ ಕ್ರಿಶ. ೧೩ನೇ ಶತಮಾನದಿಂದಲೂ ಕಾವ್ಯವಾಚನದ ಮಾದರಿಯ ಗಾಯನ ಮಾಡುವ ಪರಂಪರೆ ಇದೆ. ಇದನ್ನು ಅವರು ಚಾಕ್ಯಾರಕೂತ್, ಪಾಠಕಂ ಎಂಬ ಹೆಸರಿನ ಕಲೆಗಳ ಸಾಲಿನಲ್ಲಿ ಈ ಕಾವ್ಯವಾಚನ ಮಾದರಿಯ ಕಲೆಯನ್ನು ಸೇರಿಸಿದ್ದಾರೆ.

ಮಹಾರಾಷ್ಟ್ರದಲ್ಲೂ ಗಮಕ ಕಲೆಯನ್ನು ಹೋಲುವ ಗಾಯನ ಪ್ರಸಕ್ತಿ ಇರುವುದಾಗಿ ತಿಳಿದುಬರುತ್ತದೆ.

**ಉಪಸಂಹಾರ:** ಒಟ್ಟಾರೆಯಾಗಿ ತಿಳಿಸುವುದಾದರೆ ಸಂಗೀತ ಮತ್ತು ಗಮಕಗಳ ಸಾಹಚರ್ಯೆಯಿಂದ ಮಾನವನಿಗೆ ನಮ್ಮ ಹಿಂದಿದ್ದ ಮಹನೀಯರ ಬದುಕು-ಕಲೆ- ಸಂಸ್ಕೃತಿ-ಪ್ರಬುದ್ಧತೆ-ಜೀವನ ಮೌಲ್ಯಗಳ ಅನಾವರಣವಾಗಿ ಮೌಲ್ಯಾಧಾರಿತ ಸುಂದರ ಸುಸಂಸ್ಕೃತ ಬದುಕು ಸಾಧ್ಯವಾಗುತ್ತದೆ. ನಾದಪ್ರಧಾನ ಸಂಗೀತದಿಂದ ರಂಜನೆ ಸಾಧ್ಯವಾಗುತ್ತದೆ. ಆದರೆ ಮಾನವನಿಗೆ ಚಿತ್ತಾಹ್ಲಾದದ ಜೊತೆಜೊತೆಗೇ ಬಿತ್ತವಿಕಾಸವೂ ಆಗಬೇಕಲ್ಲವೇ? ಇದರಿಂದ ಉತ್ತಮ ಸಮಾಜಸಾಧ್ಯ ಅಲ್ಲದೆ ಆತ್ಮಾನಂದ, ಸಂಸ್ಕೃತಿ ಪರಂಪರೆಗಳ ದಿವ್ಯದರ್ಶನ, ಪರಮಾರ್ಥಿಕ ಚಿಂತನೆ, ಹಿಂದಿನ ಕಾಳದ ನಡೆನುಡಿ- ಆಚರಣೆ-ಪರಂಪರೆಗಳ ಅರಿವು, ರಸಕಾವ್ಯಗಳ ಅನುಭೂತಿ, ಕಾಲದ ಸದ್ಬಳಕೆ, ಕಲೆಗಳ ಒಡನಾಟ ಸತ್ಕಾರ್ಯವೆಸಗುತ್ತಿರುವ ನೆಮ್ಮದಿ ಇವೆಲ್ಲವೂ ಗಮಕಿಗೆ, ಈ ಕಲೆಯನ್ನು ಆಲಿಸುವ ಶೋತೃನಿಗೆ ಪ್ರಾಪ್ತವಾಗುತ್ತದೆ.

ಇಂತಹ ಪಾರಂಪರಿಕ ಉತ್ಕೃಷ್ಟ ಕಲೆಯು ಚಿರಕಾಲವಿದ್ದು ನಮ್ಮ ಸಂಸ್ಕೃತಿಯನ್ನು ಮುಂದಿನ ಯುವ ಪೀಳಿಗೆಗೆ ನೀಡುತ್ತಲಿರಬೇಕು. ಸಿರಿಗನ್ನಡ ಕಾವ್ಯದ ಮೂಲಕ ಸಾಹಿತ್ಯ ಹಾಗೂ ಸಂಗೀತ ಸೌರಭವನ್ನು ಸದಾಕಾಲ ಹೊರಸೂಸುತ್ತಲಿರಬೇಕು.

ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

## ನೃತ್ಯ ಕಲೆ

**- ನಾಟ್ಯಾಚಾರ್ಯ ಎ. ಅಶೋಕ್‌ಕುಮಾರ್**

ಯಾವುದೇ ಕಲೆಯಾದರೂ ವೇದವೇ ಪ್ರಮಾಣ ಎಂಬುದನ್ನು ತಿಳಿಯ ಬೇಕಾಗುತ್ತದೆ. ಅಂದರೆ ವೇದದಲ್ಲಿ ಎರಡು ಭಾಗ ಒಂದು ಜ್ಞಾನ ಕಾಂಡ ಇನ್ನೊಂದು ಕರ್ಮಕಾಂಡ. ಯಾವುದೇ ಕ್ರಿಯಾ ರೂಪಕ ಎಂದು ತೆಗೆದುಕೊಳ್ಳುವುದಾದರೆ ಈ ಎರಡರ ಸಮತೋಲನ ವಾಗಿರುತ್ತದೆ.

**ಸರಳವಾಗಿ ಹೇಳಬೇಕೆಂದರೆ,**

* ಜ್ಞಾನ ಕಾಂಡ ನಾವು ಓದಿ ಅಥವಾ ನೋಡಿ ಅಥವಾ ಜಗತ್ತಿನ ಆಗು ಹೋಗುಗಳಿಂದ ತಿಳಿದುಕೊಳ್ಳುವಂಥಹ ವಿಷಯ.
* ಕರ್ಮ ಕಾಂಡ * ತಿಳಿದ ವಿಷಯಗಳನ್ನು ನಮ್ಮ ಜನ ಜೀವನದಲ್ಲಿ ನಾವು ಅದನ್ನು ಅಳವಡಿಸಿಕೊಂಡಾಗ ಅದು ಕರ್ಮ ಕಾಂಡ ಎಂದು ತಿಳಿಯಬಹುದು.

ಸರಳವಾಗಿ ಹೇಳಬೇಕೆಂದರೆ ಜ್ಞಾನ ಯಾವಾಗಲು ವಿದ್ಯೆ ಮತ್ತು ಬುದ್ಧಿವಂತಿಕೆಯ ಮೇಲೆ ಆದರವಾಗಿದ್ದರೆ, ಕರ್ಮವು ಯಾವಾಗಲು ನಾವು ಮಾಡುವ ಕ್ರಿಯೆಯ ಮೇಲೆ ಆಧಾರವಾಗಿರುತ್ತದೆ.

ನೃತ್ಯ ಕಲೆ, ನಾಟ್ಯ ಕಲೆ ತೆಗೆದುಕೊಳ್ಳುವುದಾದರೆ ಈದು ಒಂದು ಕ್ರಿಯಾ ರೂಪಕವಾದ ಪ್ರದರ್ಶನ. ಆದರೆ ಇದಕ್ಕೆ ಹಿನ್ನೆಲೆ ಜ್ಞಾನ ಸ್ವರೂಪ. ಆ ಜ್ಞಾನವನ್ನು ಪಡೆದುಕೊಂಡರೆ ಮಾತ್ರ ನೃತ್ಯವನ್ನು ಪ್ರದರ್ಶಿಸಲು ಸಾಧ್ಯ ಆದ್ದರಿಂದ ಸರಿಯಾದ ಮಾರ್ಗದರ್ಶನ ಇರಲೇಬೇಕು.

ಎಲ್ಲವೂ ಜ್ಞಾನಕಾಂಡದಿಂದ ಕರ್ಮ ಕಾಂಡದಲ್ಲಿಯೇ ಇರುವುದು ತಿಳಿಯುತ್ತದೆ. ಈ ನಿಟ್ಟಿನಲ್ಲಿ ನಾಟ್ಯ ನೃತ್ಯ ಅಥವಾ ನಾಟಕ ಇವೆಲ್ಲಕ್ಕೂ ಒಂದು ಶಾಸ್ತ್ರ ಅಥವಾ ವೇದದಿಂದ ಪ್ರಮಾಣಿಕರಿಸಲ್ಪಟ್ಟಿದ್ಯ ಎಂಬ ಪ್ರಶ್ನೆ ಬಂದಾಗ

ಉದ್ಭವಿಸಿದರೆ ಖಂಡಿತಾ ಅಹುದು! ಪ್ರಾಚೀನ ಕಾಲದಿಂದಲೂ ನಮಗೆ ಶಾಸ್ತ್ರ ಇದ್ದೇ ಇದೆ ಅಲ್ಲದೇ ವೇದಕ್ಕೆ ಪ್ರಮಾಣವು ಆಗಿರುತ್ತದೆ ಮತ್ತು ನೃತ್ಯ ಕಲೆಗೂ ಹಾಗೂ ಇನ್ನಿತರ ಕಲೆಗಳಿಗೂ ಇದು ಮುಖ್ಯ ಭುನಾದಿಯೂ ಕೂಡ. ನೃತ್ಯ ಕಲೆಯನ್ನು ಹೇಗೆ ವೇದಗಳಿಗೆ ಸಂಬಂಧಿಸಬಹುದು ಎಂದಾಗ,

* ಋಗ್ವದದಲ್ಲಿ ನಾಟ್ಯದ ಬಗ್ಗೆ ಹೇಳಲಾಗಿದೆ ಅಲ್ಲದೆ ವಿಷಯಗಳ ಜ್ಞಾನವನ್ನು ಪಡೆಯುತ್ತೇವೆ.

* ಯಜುರ್ವೇದದಿಂದ ಪಡೆದುಕೊಂಡ ಜ್ಞಾನದ ವಿಷಯಗಳನ್ನು ಅಭ್ಯಾಸ ಮಾಡಲು ಕ್ರಿಯಾ ರೂಪಕವಾಗಿ ಮಾಡುವುದು ತಿಳಿಯುತ್ತದೆ.

* ಸಾಮವೇದದಲ್ಲಿ ಗಾನದಲ್ಲಿ ಅಭ್ಯಾಸ ಮಾಡಿರುವ ವಿಷಯಗಳನ್ನು ಪ್ರದರ್ಶನ ಮಾಡುವುದು.



* ಅಥರ್ವಣ ವೇದದಲ್ಲಿ ಪ್ರದರ್ಶನದ ಫಲಿತಾಂಶವನ್ನು ಪಡೆಯುವ ಬಗ್ಗೆ ತಿಳಿಯುವುದು.

ಉದಾಹರಣೆ : ನಾನು ಈ ಕಾರ್ಯಕ್ರಮಕ್ಕೆ ಬರಲು ಕಾರಣ.

ಮುಂದೆ ವೈಜ್ಞಾನಿಕವಾಗಿ ಪರಿಶೀಲನೆ ಮಾಡಿ ನೋಡಿದಾಗ ಒಬ್ಬ ಮನುಷ್ಯನ ಗುಣಗಳನ್ನು ತಗೆದುಕೊಂಡಾಗ ಪ್ರತಿಯೊಂದು ವ್ಯಕ್ತಿಗೂ ಅವರದೇ ಅದಂತಹ ಭಾವನೆ ಚಲನೆ ಇರುತ್ತವೆ. ಇದನ್ನು human kinetics ಅಂಥ ವಿಜ್ಞಾನ ತಿಳಿಸುತ್ತದೆ. ಅಂದರೆ ಮನುಷ್ಯನ ಎಲ್ಲ ಚಲನ ವಲನಗಳನ್ನು ಒಟ್ಟು ಗುಡಿಸಿದಾಗ ಅದನ್ನು ನಾಟ್ಯ ಶಾಸ್ತ್ರ ಎಂದು ಕರೆಯಬಹುದು. ಇನ್ನು ಸರಳವಾಗಿ ಹೇಳಬೇಕಾದರೆ ಮನುಷ್ಯನ ಚಲನೆಗೆ ಸಂಬಂಧಿತ ಹಲವಾರು ಬೇರೆ ಬೇರೆ ವಿಷಯಗಳನ್ನು ಒಟ್ಟಾಗಿ ಒಂದು ವ್ಯವಸ್ಥಿತ ರೂಪದಲ್ಲಿ ತಿಳಿಸಿದಾಗ ನಾಟ್ಯ ಶಾಸ್ತ್ರ ಎಂದು ಹೇಳಬಹುದು. ನಾಟ್ಯದಲ್ಲಿ ಅದು ಇನ್ನಷ್ಟು ಶೈಲೀಕೃತ ಆಗಿ ಪರಿವರ್ತಿಸಿ ಪ್ರದರ್ಶಿಸುವುದು.

ಉದಾಹರಣೆ : ಒಬ್ಬ ವ್ಯಕ್ತಿ ಅಥವಾ ಯಾವುದೇ ಜೀವ ರಾಶಿಗಳು ಒಂದು ಕಡೆಯಿಂದ ಮತ್ತೊಂಡೆಗೆ ಚಲಿಸುವ ಕ್ರಮವನ್ನು ನೋಡಿದಾಗ ಅದರಲ್ಲಿ ಗತಿಯಾಗಲಿ, ಲಯವಾಗಲಿ ಇದ್ದೇ ಇರುತ್ತದೆ ಮತ್ತು ಒಂದು ಭಲ ಇರುತ್ತದೆ, ಮಾನಸಿಕ ತಯಾರಿ, ಎಲ್ಲವೂ ನಮ್ಮ ದೇಹಕ್ಕೆ ಸಂಬಂಧ ಪಟ್ಟಿರುವದೇ ಆಗಿರುತ್ತದೆ ಇವೆಲ್ಲವನ್ನು ಒಟ್ಟಾಗಿ ಸೇರಿಸಿದಾಗ ಮನುಷ್ಯನ ಇಟಿಜಣುಥಿ ಎಂದು ಹೇಳಬಹುದು. ಇದನ್ನು ಭರತನ ನಾಟ್ಯ ಶಾಸ್ತ್ರ ಆಧಾರ ಎನ್ನಬಹುದು. ಅಥವಾ ಇದನ್ನು ಅನುಸರಿಸಿ ಭರತನ ನಾಟ್ಯಶಾಸ್ತ್ರ ಬಂದಿರಬಹುದು ಮುಂದೆ ಇದರಲ್ಲಿ ಸುಕುಮಾರ, ಉದ್ಧಟ ಎಂದು ಹೇಳಲಾಗಿದೆ.

ಈ ರೀತಿ ಮನುಷ್ಯ ಅಥವಾ ಸಕಲ ಚರಾಚರಗಳು ಚಲನೆಲ್ಲಿದ್ದಾಗ ಇವೆಲ್ಲವು ನೃತ್ಯ ಹಾಗೂ ನಾಟ್ಯದ ಚೌಕಟ್ಟಿನಲ್ಲಿಯೇ ಇರುತ್ತದೆ.

ಈ ನಿಟ್ಟಿನಲ್ಲಿ ತತ್ವ ಶಾಸ್ತ್ರ ತೆಗೆದುಕೊಂಡಾಗ, ಉದಾಹರಣೆ:

ಸೌರ ಗ್ರಹಗಳ ಬಗ್ಗೆ ಸೂರ್ಯ ಸುತ್ತಲು ೯ ಗ್ರಹಗಳು ಚಲಿಸುತ್ತಿರುವುನ್ನು ಕೇಳಿದಾಗ ಅಥವಾ ನೋಡಿದಾಗ ಇದು ಸಹ ನಾಟ್ಯವೇ ಎಂದು ಹೇಳಬಹುದು. ಇವು ಕೂಡ ಒಂದಕ್ಕೆ ಒಂದು ಹೊಡೆದು ಕೊಳ್ಳಬಹುದಿತ್ತು ಅಲ್ಲದೆ ನಮಗೆ ಮಳೆಗಾಲ, ಚಳಿಗಾಲ ಹೇಗೆ ಆಯಾ ಸಮಯಕ್ಕೆ ಸರಿಯಾಗಿ ಬರುವುದೇ ಒಂದು ಯೂನಿವರ್ಸಲ್ ನಾಟ್ಯ ಎಂದು ಹೇಳಬಹುದು. ಎಲ್ಲದಕ್ಕೂ ತನ್ನದೇ ಆಗ ಗತಿ, ಚಲನವಲನೆ, ಲಯ ಇವುಗಳನ್ನು ಭಗವಂತ ಸೃಷ್ಟಿ ಮಾಡಿದ್ದಾನೆ ಇದನ್ನ ನಾವು ನೃತ್ಯ ಎಂದು ಹೇಳುತ್ತೇವೆ. ಒಟ್ಟಿನಲ್ಲಿ ಇಡೀ ಜಗತ್ ಸೃಷ್ಟಿಯೇ ನಾಟ್ಯವಾಡುತ್ತಿದೆ ಎಂದರೆ ತಪ್ಪಾಗಲಾರದು. ಉದಾಹರಣೆ: ಇರುವೆ ಯ ಸಾಳು, ಜಿಂಕೆಯ ಓಟ, ಹಕ್ಕಿಗಳ ಹಾರಾಟ, ಆನೆಗಳ ನಡೆಯುವಿಕೆ ಆದರೆ ಪ್ರತಿಯೊಂದು ಚಲನೆಗೂ ವ್ಯವಸ್ಥಿತವಾದ ಮಾರ್ಗ ಇದೆ ಎಂಬುದು ಅವುಗಳಿಗೆ ತಿಳಿದಿರುವುದಿಲ್ಲ. ಈ ವ್ಯವಸ್ಥಿತವಾದ ಮಾರ್ಗ stylized version ಭರತ ಮುನಿ ನಾಟ್ಯ ಶಸ್ತ್ರ ಅನ್ನುವ ಮಹಾನ್ ಗ್ರಂಥವನ್ನು ನಮಗೆ ನೀಡಿರುತ್ತಾರೆ. ಒಟ್ಟಿನಲ್ಲಿ ಮನುಷ್ಯನ ಯಾವುದೇ ಒಂದು ಚಲನೆ ವ್ಯವಸ್ಥಿತವಾಗಿ ಪ್ರದರ್ಶನ ಗೊಂಡಲ್ಲಿ ಹಾಗೂ ಶಾಸ್ತ್ರದ ಚೌಕಟ್ಟಿನಲ್ಲಿ ಇದ್ದಾಗ ಅದನ್ನು ನಾವು ನಾಟ್ಯ ಶಾಸ್ತ್ರ ಎಂದು ಹೇಳಬಹುದು.



ಇನ್ನು ಶಾಸ್ತ್ರ ಇದ್ದಾಗ ಶಾಸ್ತ್ರೀಯ ನೃತ್ಯ ಮಾಡಬೇಕಾದರೆ ಒಂದು ಪದ್ಧತಿ ಅಥವಾ ಕ್ರಮ ಅಥವಾ ನಿಯಮ ಅನುಸರಣೆ ಮತ್ತು ಪಾಲಿಸುವುದು ಬಹಳ ಮುಖ್ಯ. ಅದಕ್ಕಾಗಿ ಮೊದ ಮೊದಲು ಪರಶಿವನು ಈ ಕ್ರಮವನ್ನು ಭಾತಮುನಿಗೆ ನೀಡಿದನೆಂದು ಭರತನಿಂದ ತನ್ನ ನೂರು ಮಕ್ಕಳಿಗೆ ಅದನ್ನು ಬೋಧನೆ ಮಾಡಿದನೆಂದು ತಿಳಿಯಬಹುದು. ಅಂದರೆ ಬ್ರಹ್ಮನಿಂದ ಸೃಷ್ಟಿಯಾದ ಐದನೇ ನಾಟ್ಯ ವೇದ, ಶಿವನು ಬೋದಿಸಿದನೆಂದು ಅನದನು ಶಾಸ್ತ್ರ ರೂಪದಲ್ಲಿ ಭರತಮುನಿ ಬೆರೆದನು ಎಂದು ಅರ್ಥ ಮಾಡಿಕೊಳ್ಳಬಹುದು.

ಒಟ್ಟಿನಲ್ಲಿ ಜಗತ್ತಿನಲ್ಲಿ ನಾದ ಮತ್ತು ಲಯ ಎರಡು ಇದ್ದರೇನೇ ಜಗತ್ತು ನಮಗೆ ಸರಿಸಮಾನವಾಗಿ ಇರಲು ಸಾಧ್ಯ ನಾದ ಅನ್ನುವುದು ಶಬ್ದ ಲಯ ಅನ್ನುವುದು ಚಲನೆ. ಉದಾಹರಣೆ: ಮಗು ಕೈ ಕಾಲು ಆಡಿಸುವುದು ಅಥವಾ ಓಂ ಕರವೇ ನಾದವಾದರೆ ೯ ಗ್ರಹಗಳೇ ಲಯ.

ಜಗತ್ತಿನಲ್ಲಿ ಚಲನೆ ಇಲ್ಲದೆ ಯಾವುದು ಸಾಧ್ಯವಿಲ್ಲ ಏನೂ ಇಲ್ಲದಿದ್ದರೆ ಅದನ್ನು ಜಡತ್ವ, ಒಮದು ವಸ್ತು ಅದರ ಬಾಳುವಿಕೆ ಅದು ಭಿನ್ನ ಆಗುವವರೆಗೂ ಮಾತ್ರ ನಂತರ ಅದು ಹೊಡೆಯಬಹುದು ಅಥವಾ ಹಾಳಾಗಬಹುದು. ಅಂದರೆ ಇಲ್ಲಿಯ ಸಾರಾಂಶ ನಮ್ಮಲ್ಲಿ ಇರುವ ಜಡತ್ವವನ್ನು ತೆಗೆದು ಹಾಕಬೇಕು. ಇದನ್ನೇ ಭರತನು ಶಾಸ್ತ್ರ ರೂಪದಲ್ಲಿ ಕೊಡುಗೆಯಾಗಿ ನೀಡಿರುವುದು ಆದರೆ ಅದಕ್ಕೆ ನಾಟ್ಯಾಚಾರ್ಯ stylised version ತಂದಾಗ ನೃತ್ಯ ಶಾಸ್ತ್ರ ಎಂಬ ಹೆಸರು ಪಡೆಯಿತು.

**ಮುಂದೆ ಕಲೆ :** ಇದರ ಬಗ್ಗೆ ಹೇಳುವುದಾದರೆ ಕಲೆಗೆ ತನ್ನದೇ ಆದ qualitiesನಿಂದ ಒಳಗೊಂಡಿರುತ್ತದೆ. ಕಲೆ ಮನೋರಂಜಕ ವಾಗಿರಬೇಕು ನೋಡುವುದಕ್ಕೆ ಮುದ ನೀಡುವಂತಿರಬೇಕು. ವಿಷಯವನ್ನು ತಿಳಿಸುವಂಥದ್ದಾಗಿರಬೇಕು. ಆದರೆ ಕಲೆ ನೃತ್ಯಕ್ಕೆ ಸೀಮಿತವಾದುದಲ್ಲ ಯಾವುದೇ ಕಲೆಯನ್ನು ಅಂದರೆ ಲಲಿತ ಕಲೆ, ಚಿತ್ರಕಲೆ ಅಥವಾ ಶಿಲ್ಪಕಲೆ ಹೀಗೆ ಎಲ್ಲವೂ ತಿಳಿಸಿದ ಎಲ್ಲಾ ಅಂಶಗಳನ್ನು ಹೊಂದಿರಬೇಕು. ಒಟ್ಟಾರೆ ಉತ್ತಮ ಕಲೆ ಯಾವಾಗಲು ಮನುಷ್ಯನ mind ಒಂದುಽ ಕಡೆಯಿಂದ ಮತ್ತೊಂದು ಲೋಕಕ್ಕೆ ಅಥವಾ ಉತ್ಕೃಷ್ಟ ಮಟ್ಟಕ್ಕೆ ತೆಗೆದುಕೊಂಡು ಹೋಗುವಂಥಹುದು.

**ಲೋಕಧರ್ಮಿಯನ್ನು ನಾಟ್ಯಧರ್ಮಿಗೆ ಪರಿವರ್ತಿಸಿ ಪ್ರದರ್ಶಿಸುವುದು. ಉದಾಹರಣೆ:** ಯಾವುದೇ ಸತ್ಯಾ ಎಂದು ತಿಳಿದು ಅದನ್ನು ಹಾಗೆಯೇ ನಾಟ್ಯಧರ್ಮಿಗೆ ಪರಿವರ್ತಿಸಿ ಪ್ರದರ್ಶಿಸುವುದು ಆದರೂ ಅದು ಸತ್ಯವಾಗಿರುವುದಿಲ್ಲ.

ಉದಾಹರಣೆ : ರಾಮ ಅಥವಾ ಒಂದು ಕುದುರೆಯ ಚಿತ್ರ ತುರಗ ನ್ಯಾಯ ಸಂಗೀತಕ್ಕೂ ಇದು ಅನ್ವಯಿಸುತ್ತದೆ ಒಂದು ಆಡು ಭಾಷೆಯಲ್ಲಿ ಇದ್ದಂತಹ ಹಳೆಯ ಪದ್ಯವನ್ನು ಅದಕ್ಕೆ ಹೊಸ ರೂಪ ಅಥವಾ ರಾಗ ಅಳವಡಿಸಿ ಪ್ರದರ್ಶಿಸುವುದು.

ಹೇಳುವುದಾದರೆ ನಮ್ಮ ಆಡು ಭಾಷೆ ಅನ್ನುವುದೇ ಲೋಕಧರ್ಮಿ. ಕಲಿಯುಗದಲ್ಲಿ ಇದನ್ನು ಧರ್ಮಿ ಎಂದು ಹೇಳುತ್ತೇವೆ. ಕಲಿಯುಗದಲ್ಲಿ ಹರಿನಾಮ ನೆನೆದರೆ ಅಥವಾ ಹಾಡಿ ಭಜಿಸಿದರೆ ಇದು ನಾಟ್ಯ ಧರ್ಮಿಗೆ ಅನ್ವಯವಾಗುತ್ತದೆ.

ಉದಾಹರಣೆ: ಜಗದೋದ್ಧಾರನ ಆಡಿಸಿದಳು ಯಶೋಧಾ ಅಂಥಾ ಬರಿ ಓದಿದರೆ ಅದು ಮನಸ್ಸಿಗೆ ಮುಟ್ಟುವುದಿಲ್ಲ ಅದೇ ಕೃತಿಯನ್ನು ರಾಗದಲ್ಲಿ ಮಧುರವಾಗಿ ಹಾಡಿದಾಗ

ಅದು ಎಲ್ಲರ ಮನ ಮುಟ್ಟುವುದು ಖಂಡಿತ. ಅದಕ್ಕೆ ಇದನ್ನು ಜುಟಿಜ ಕಲೆ ಅಂತ ನಾವು ಕರೆಯುತ್ತೇವೆ.

Finest elements of human nature are put together to exhibit them- selves, to the supreme level is called fine art form.

ಉದಾಹರಣೆ : ಒಂದು ವಿಗ್ರಹ ಇದೆ. ಅದನ್ನು ನೋಡಿದಾಗ ವಿಗ್ರಹವನ್ನು ನೇರವಾಗಿ ನೋಡಿದಕ್ಕಿಂತ ಆ ಕನ್ನಡಿಯಲ್ಲಿ ನೋಡಿದ ಪ್ರತಿ ಬಿಂಬವನ್ನು ನೋಡಿ ಎರಡರಷ್ಟು ಸಂತೋಷ ಪಡುತ್ತೇವೆ.

**ಕಲೆ**

ಯಾವುದೇ ಒಂದು ವಿಚಾರ ಅಥವಾ ಪ್ರಸಂಗವನ್ನು ಓದಿದರೆ, ಓದುಗರ ಮನಸ್ಸಿನ ಚಿತ್ರಪಟದಲ್ಲಿ ಮುಡುವ ಚಿತ್ರಣ ಸ್ವಲ್ಪ ಮಟ್ಟಿಗೆ ಲಿಮಿಟೇಷನ್ಸ್ ಕಮ್ಮಿ ಆಗಿರುತ್ತದೆ, ಆದರೆ ಇದೆ ಪ್ರಸಂಗವನ್ನು ಓದುವ ಬದಲು ಯಾರಿಂದಾದರೂ ಕೇಳಿದರೆ, ಮತ್ತಷ್ಟು ವಿಚಾರ ಲಹರಿಯೊಂದಿಗೆ ಕೇಳುಗರ ಚಿತ್ರಣ ಇನ್ನಷ್ಟು ವಿಸ್ತಾರಗೊಳ್ಳಲು ಉಪಯುಕ್ತವಾಗಿರುತ್ತದೆ. ಈ ಕೇಳಿದ ಸಂಗತಿಗಳನ್ನು ನಾಟ್ಯ ರೂಪದಲ್ಲಿ ಅಭಿನಯಿಸಿ ಪ್ರದರ್ಶಿಸಿದರೆ, ನೋಡುವ ಮಾಧ್ಯಮಕ್ಕೆ ಅತ್ಯಂತ ಬಲವಿದ್ದು ಬಹಳ ಸ್ಪಷ್ಟತೆಯಿಂದ ನೋಡುಗರ ಮನಸ್ಸಿನ ಮೇಲೆ ಪರಿಣಾಮಕಾರಿಯಾಗಿ ಅವರ ಚಿತ್ರಪಟವೆಂಬ ಊಹೆ ಜಗತ್ತಿಗಿಂತ ವಿಸ್ತರವಾಗಿ ಬೆಳೆದು ಕಲೆಯಲ್ಲಿ ತಮ್ಮನ್ನು ತಮಗರಿವಿಲ್ಲದೆ ತೊಡಗಿಸಿಕೊಳ್ಳಲು ನೆರವಾಗುತ್ತದೆ. ಈ ರೀತಿ ಹಂತ ಹಂತವಾಗಿ ವಿಕಾಸನಗೊಳ್ಳುವ ವಿಚಾರಗಳನ್ನು ಕಲೆ ಎಂದು ಕರೆಯಲ್ಪಡುತ್ತದೆ. ಇದು ಎಲ್ಲಾ ಲಲಿತ ಕಲೆಗಳಾದ ಚಿತ್ರಕಲೆ, ನೃತ್ಯ ಕಲೆ, ಸಂಗೀತ ಕಲೆ, ಶಿಲ್ಪ ಕಲೆ ಇತ್ಯಾದಿಗಳಿಗೂ ಅನ್ವಯಿಸುತ್ತದೆ.

ಭರತ ಖಂಡದ ಉದ್ದಗಲಕ್ಕೂ ಕಲಾ ಸಂಸ್ಕೃತಿಯು ಅತ್ಯಂತ ಸಮೃದ್ಧವಾಗಿ ಅಲಲ್ಲಿ ತನ್ನದೇ ಆದ ರೂಪುರೇಷೆಗಳಲ್ಲಿ ಪ್ರಾಕೃತಿಕ ಅವಲಂಬನೆಗಳಿಂದ ಹಲವಾರು ವಿವಿಧ ವರ್ಣ ರಂಜಿತ ಕಲೆಗಳಾಗಿ ಸಾಕಾರಗೊಂಡಿದೆ.

ಉದಾಹರಣೆ : ಚಿತ್ರಕಲೆ ಎಂದು ತೆಗೆದುಕೊಂಡರೆ ಮೈಸೂರು ಶೈಲಿ, ತಂಜಾವೂರು ಚಿತ್ರ, ಸುರಪುರ ಶೈಲಿ, ಡಂಕನಿ ಕೋಟೆ ಶೈಲಿ, ಒರಿಯಾ ಚಿತ್ರ ಶೈಲಿ ಇತ್ಯಾದಿ.

ಶಿಲ್ಪ ಎಂದರೆ : ಚೋಳರ ಶತಮನದ ಕಟ್ಟಡ, ಹೈಯ್ಸಳ, ಪಾಂಡಿಯ, ಗಂಗಾ, ಕದಂಬ, ಕದಂಬ ನಾಗರ, ವಿಜಯನಗರ ಹೀಗೆ ಇನ್ನು ಹಲವು ವಿಭಿನ್ನ ಶೈಲಿಗಳನ್ನು ನೋಡಬಹುದು.

ಇನ್ನು ನಾಟ್ಯವನ್ನು ತೆಗೆದುಕೊಂಡಾಗ ಕಲಾಕ್ಷೇತ್ರ ಮೈಸೂರು, ನಂಜನಗೂಡು, ತಂಜಾವೂರು, ಪಂದನಲ್ಲೂರು, ಹೀಗೆ ಹಲವಾರು ಪ್ರಾಣಿಗಳನ್ನು ಗುರುತಿಸಬಹುದು.

ಯಾವುದೇ ಮಾಧ್ಯಮದ ಕಲೆಯು ಹಲವಾರು ವಿಭಿನ್ನತೆಗಳಿಂದ ಹರಿಯುವ ಒಂದು ಮಹಾನದಿಯ ಉಪನದಿಗಳಾಗಿ ಬೇರ್ಪಟ್ಟು ಕಲೆಯನ್ನು ಕೇವಲ ಮನೋರಂಜನೆಗೆ ಅಥವಾ ಜ್ಞಾನಾರ್ಜನೆಗೆ ಅಥವಾ ಸಾಂಪ್ರದಾಯಿಕ ಬದ್ಧತೆಗಳಿಗೆ ಮಾತ್ರ ಒಳಪಡದೆ ಆತ್ಮೋನ್ನತಿಗೂ ಮೋಕ್ಷಸಾಧನೆಗೂ ಮಾರ್ಗವಾಗುತ್ತದೆಯೊ ಅಂಥಹ ಕಲೆಯು



ಸತ್ಫಲವನ್ನು ಕೊಡುತ್ತದೆ ಈ ರೀತಿಯಾದ ಲಲಿತಾಕಲೆಗಳನ್ನು ಕೆಳವರ್ಗದ ಮನೋ ರಂಜನೆಯಿಂದಿಡು ಮೇಲ್ಮಟ್ಟದ ಮೋಕ್ಷ ಸಾಧನೆಯವರೆಗೂ ಹಂತ ಹಂತವಾಗಿ ಕೇವಲ ಭರತ ಖಂಡದಲ್ಲಿ ಮಾತ್ರ ವಿಭಜಿಸಲ್ಪಟ್ಟು ಅವರವರ ಶಕ್ತಿಗೆ ಅನುಸಾರವಾಗಿ ಕಲಿಕೆಗೆ ಉನ್ನತ ಶಿಕ್ಷಣಕ್ಕೆ ಮೇಲೂ ಜೀವನ ಶೈಲಿಗೆ ಮತ್ತು ಆತ್ಮ ಉನ್ನತಿಗೆ ಕೊಡಲ್ಪಟ್ಟಿದೆ. ಹೀಗಾಗಿ ಭಾರತ ದೇಶದ ಕಲೆಗಳನ್ನು ಲಲಿತ ಮತ್ತು ಶಾಸ್ತ್ರೀಯ ಕಲೆಗಳೆಂದು ಕರೆಯುತ್ತಾರೆ ಕಲೆಗಾರರಾಗಲಿ, ಕಲೆಯಾಗಲಿ ಯಾವ ಜಾತಿ, ಮತ, ಧರ್ಮ, ಭಾಷೆ, ಮಣ್ಣು ಸಂಸ್ಕೃತಿ, ವಿಚಾರ, ಆಚಾರ, ಯಾವ ಚೌಕಟ್ಟಿಗೂ ಬದ್ಧವಾಗಿರುವುದಿಲ್ಲ, ಹಾಗೆ ಬದ್ಧವಾದಲ್ಲಿ ಅದು ಕಲೆಯೆನಿಸುವುದಿಲ್ಲ. ಕಲೆಯಿಂದ ಆಗುವ ಪ್ರಯೋಜನಗಳು.

ಪ್ರಾಯ್ ವ್ಯಕ್ತಿಯು ಕಲೆಯನ್ನು ಆದರಿಸಿ ಜೀವನವನ್ನು ಸಾಗಿಸುತ್ತಾನೋ ಆತನು ಎಂದಿಗೂ ಒಬ್ಬಂಟಿಗನಲ್ಲ. ತನ್ನ ಕಲೆಯು ಅವನಿಗೆ ಯಾವಾಗಲು ಯಡಬಿಡದೆ ತನ್ನ ಜೀವನದುದ್ದಕ್ಕೂ ಸಹಪಾಠಿಯಾಗಿರುತ್ತದೆ. ಬೇರೆ ಬೇರೆ ಕಲೆಗಳನ್ನು ವಿಂಗಡಿಸಿದರೂ ಕಲೆಗಾರನು ತನಗರಿವಿಲ್ಲದೆ ಶಾಸ್ತ್ರ, ಗ್ರಂಥ, ಕಲಾಚಾರ, ನೀತಿ, ಧರ್ಮ, ಸಂಶೋಧನಾತ್ಮಕವಾಗಿ ತಿಳಿದುಕೊಳ್ಳಲು ಮುಂದಾಗುತ್ತಾನೆ. ಸ್ವಲ್ಪ ಮಟ್ಟಿಗೆ ಅವುಗಳ ಜ್ಞಾನವು ಕಲೆಗಾರನಲ್ಲಿ ಬೇರೂರುತ್ತದೆ. ಸಂಗೀತ, ಶಿಲ್ಪ, ಚಿತ್ರ ಕಲೆಗಳಿಗೆ ಅದರದರ ಜಗತ್ತೆ ಸಾಕಷ್ಟು ವಿಸ್ತಾರವಾಗಿ ಅರಿಯುವ ವಿಚಾರಗಳಿದ್ದರೂ ನೃತ್ಯಕಲೆಗೆ ಮಾತ್ರ ತನ್ನ ವಿಚಾರವಷ್ಟೇ ಅಲ್ಲದೆ ಚಿತ್ರ ಶಿಲ್ಪ, ಸಂಗೀತ ಇತ್ಯಾದಿ ಕಲೆಗಳ ವಿಚಾರವೂ ಅರಿವಿನಲ್ಲಿ ಬಂದು ಹೋಗುತ್ತದೆ. ಹೀಗಾಗಿ ನೃತ್ಯ ಕಲೆಯಲ್ಲಿ ಎಲ್ಲವೂ ಅಡಗಿರುವುದರಿಂದ ಸಮಗ್ರ ಕಲೆ ಅಥವಾ ಕಲೆಗೆ ಸಮಗ್ರ ಉದಾಹರಣೆ ನೃತ್ಯ ಎನಿಸಿಕೊಂಡು ನೃತ್ಯ ಕಲೆ ಒಂದು ಪರಿಪೂರ್ಣ ಕಲೆ ಎನ್ನುವುದರಲ್ಲಿ ಸಂಶಯವಿಲ್ಲ.

ಆದರೆ ಬರಿಯ dhihika ಮಾನಸಿಕ ಚಿಂತನೆಗಳಿಗೆ ಮಾತ್ರ ಕಲೆಯು ಸೀಮಿತವಾಗದೆ 'ವ್ಯಕ್ತಿಗತ ತೂರ್ಯಾತೀತದಿಂದ ಅವ್ಯಕ್ತಿರೇಕ ತೂರ್ಯಾತೀತದತ್ತ ಉನ್ನತ ಸ್ಥಿತಿಗೆ ಕೊಂಡೊಯ್ಯುವ ಉಪಾಸನಾ ಮಾರ್ಗವಾಗಿ ಕೇವಲ ಮಾಧ್ಯಮವಲ್ಲದೆ ಅಥವಾ ಮಾಧ್ಯಮಕ್ಕೆ ಸೀಮಿತವಾಗದೆ ಅವ್ಯಕ್ತ ಗತವಾಗಿ ಕಲೆಯು ಬೆಳೆಯುತ್ತದೆ. ಈ ಮಟ್ಟದಲ್ಲಿ 'ಸತ್ವವು' ಬಹಳ ಪರಿಣಾಮ ಕಾರಿಯಾಗಿರುತ್ತದೆ. ತಾಮಸ ಮಟ್ಟದ ಕಲೆಯನ್ನು ರಜಸ್ಸು ಅಳಿದರೆ, ರಾಜಸಿಕ ಮಟ್ಟದ ಕಲೆಯನ್ನು ಸತ್ವವು ಪರಿಪೂರ್ಣವಾಗಿ ನಿಯಂತ್ರಿಸಿ ಅದಕ್ಕೂ ಮಿಗಿಲಾಗಿ ಸತ್ವದಲ್ಲೇ

ಕಲೆಯ ಸಾಕ್ಷತ್ಕಾರವಾದಲ್ಲಿ ಸತ್ವದ ಮೆಲ್ ಹೊದಿಕೆಯಾಗಿ ಕಲೆಯು ಮೂಡಿಬಂದಲ್ಲಿ, ಕೇವಲ ಕಲೆಗಾರಿನಿಗಷ್ಟೇ ಅಲ್ಲದೆ ನೋಡಿಗರಿಗೂ ದಿವ್ಯ ಅನುಭವ ಮೂಡಿ ವಿಚಾರವಿನಿಮಯಕ್ಕೂ ಸಿಗದ, ಸಿಲುಕಿದಷ್ಟು ಬ್ರಹ್ಮಾನಂದವು ಕಲೆಯಿಂದ ಸಿಗುವಲ್ಲಿ ಯಶಸ್ವಿಯಾಗುತ್ತದೆ. ಭರತನಿಂದ ಹಿಡಿದು ಭಟ್ಟ ಲೋಲಟ ಭಟ್ಟ ನಾಯಕ, ಶ್ರೀ ಶಂಕುಕ, ಭಾಮಾ, ವಾಮನ, ದಂಡಿನ್, ಆನಂದವರ್ಧನ, ಅಭಿನವ ಗುಪ್ತನವರೆಗೂ ಈ ಸತ್ವಮಯ ಸ್ವರೂಪವಾದ ಕಲೆಯನ್ನು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿ ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ.

ಲಾಸ್ಯರಂಜನಿ, ಸಂಗೀತ ಗಂಗಾಧರ, ಲೋಚನ, ಧ್ವನ್ಯಾ ಲೋಕ, ರಸ ಸೂತ್ರ ಅಭಿನವ ಭಾರತೀ, ಸಂಗೀತ ರತ್ನಾಕರ, ಸಂಕಲ್ಪ ಪಯೋದಯ, ನೃತ್ಯ ಚಂಪೂ, ಸಂಗೀತ ನಾರಾಯಣ ಇತ್ಯಾದಿ ಮಹೋನ್ನತ ಗ್ರಂಥಗಳು ಹೊರಹೊಮ್ಮಿವೆ.

**ಅಧ್ಯಕ್ಷ ಭಾಷಣ:**

**"ಕಲ್ಯಾಣ ಕರ್ನಾಟಕದ ಚಿತ್ರ-ಶಿಲ್ಪ-ವಾಸ್ತುಶಿಲ್ಪ ಪರಂಪರೆ"**

**ಡಾ. ಅಂದಾನಿ ವಿ.ಜ.**

ಕಲ್ಯಾಣ ಕರ್ನಾಟಕದ ಇತಿಹಾಸ ಕಳೆದ ಸಾವಿರಾರು ವರ್ಷಗಳಿಂದ ತನ್ನ ಸಿರಿವಂತಿಕೆ ಹಾಗೂ ಸಂಪ್ರದಾಯಗಳೊಂದಿಗೆ ಎಲ್ಲಾ ಸಮೂದಾಯವನ್ನು ತನ್ನ ಮೂಲಕ ತೆಗೆದುಕೊಂಡು ಚಿತ್ರ, ಶಿಲ್ಪ ವಾಸ್ತುಶಿಲ್ಪಗಳು ನಾಡನ್ನು ಸಾಂಸ್ಕೃತಿ ಕಟ್ಟಿಕೊಂಡು ಬಂದಿದೆ. ರಾಷ್ಟ್ರಕೂಟ, ಚಾಲುಕ್ಯರ, ಚೋಳ, ಪಾಂಡ್ಯ, ಮೌರ್ಯರೊಂದಿಗೆ, ಬಂದ ಶಾಹಿ ಬಹುಮನಿ, ಹಿಂದು, ಮುಸ್ಲಿಂ, ಸೂಫಿ, ಶರಣರ ವಚನಕಾರರ ಸಂಬಂಧಗಳೊಂದಿಗೆ ಅವರ ಆಶ್ರಯದಲ್ಲಿ ಚಿತ್ರ ಶಿಲ್ಪ, ವಾಸ್ತು ಶಿಲ್ಪಗಳು ವಿಕಾಸಗೊಂಡು ಇಂದಿಗೂ ಶ್ರೇಷ್ಠತೆಯ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿರುತ್ತದೆ. ವಾಸ್ತುಶಿಲ್ಪಗಳಿಂದ ನಾಡನ್ನು ನಾಗರ, ವೇಷರ ದ್ರಾವಿಡ, ಶೈಲಿಗಳೊಂದಿಗೆ ಈ ಭಾಗದ ಅನೇಕ ಸ್ಥಳಗಳಿಗೆ ಮಾನ್ಯತೆ ತಂದು ಕೊಟ್ಟಿರುತ್ತಾರೆ. ಐಹೊಳೆ, ಪಟ್ಟದಕಲ್ಲು, ಲಕ್ಕೊಂಡಿ ಗದಗ, ಇಟ್ಟಿಗೆ, ಶಿರವಾಳ, ಜಲಸಂಗಿ, ಸನ್ನತಿ, ಕಾಳಗಿ, ಸೇಡಂ, ಹರಸೂರ, ಕೀರಣಗಿ-ಹುಣಸಗಿ ಕೇಂದ್ರಗಳು ತನ್ನ ಶಿಲ್ಪ ಪರಂಪರೆಗೆ ಸ್ಥಾನವನ್ನು ತಂದುಕೊಟ್ಟಿವೆ. ಈ ಎಲ್ಲಾ ಶಿಲ್ಪಗಳು ರಚನೆಗೊಂಡಿದ್ದು, ನದಿಯ ದಡದಲ್ಲಿ ಏಕೆಂದರೆ ಶಿಲೆಗಳನ್ನು ಸಾಗಿಸಲು ಅನುಕೂಲಕರವಾಗುತ್ತದೆ. ಕಾರಣ ನೀರಿನ ತೆಪ್ಪಗಳನ್ನು ನೀರಿನಲ್ಲಿ ಎಳೆದುಕೊಂಡು ಬರುತ್ತಿದ್ದರು. ಹೀಗಾಗಿ ಕಲ್ಲು ಶಿಲೆಗಳ ಸಾಗಣೆ ಹಗುರವಾಗುತ್ತಿತ್ತು.

ಹೀಗಾಗಿ ದೇಗುಲಗಳು ನದಿಯ ಸಮೀಪದ ಸ್ಥಳದಲ್ಲಿ ನಿರ್ಮಾಣಗೊಂಡಿವೆ ಮತ್ತು ಇತಿಹಾಸ ಸಂಸ್ಕೃತಿಯಿಂದ ಗುರುತಿಸಿಕೊಂಡು ಬಂದಿದೆ. ನಾವು ವಾಸ್ತುಶಿಲ್ಪ ಎಂದಾಗ ಗುಡಿ, ಗುಂಡಾರ, ದೇಗುಲ, ಖಿಲ್ಲಾ ಗೋಪುರ ಪ್ರತಿಮೆಗಳನ್ನು ಮಾತ್ರ ವಿವರಿಸುತ್ತೇವೆ. ಇಂದಿನ ದಿನಗಳಲ್ಲಿ ವಾಸ್ತುಶಿಲ್ಪ ಬದುಕಿನ ಜೊತೆಯಾಗಿ ಕಟ್ಟಿಕೊಂಡು ವಾಸಿಸುವ ಮನೆಗಳು (Ver- nacular Houses) ಅಷ್ಟೇ ಸುಂದರ ವಿನ್ಯಾಸದಿಂದ ಜಾನಪದ ಸೊಗಡಿನ ದೇಶಿ ಸಂಸ್ಕೃತಿಯೊಂದಿಗೆ ಪ್ರಾದೇಶಿಕ ಪದ್ಧತಿಗಳನ್ನು ಅಳವಡಿಸಿಕೊಂಡು ಬಂದಿರುತ್ತಾರೆ. ಕಟ್ಟಡಗಳ ಶೈಲಿಗಳಲ್ಲಿ ಎರಡು ಭಾಗಗಳಿಂದ ವಿಂಗಡಿಸುತ್ತೇವೆ.

೧) ಪರಂಪರಾಗತ ಶೈಲಿ ಕಟ್ಟಡಗಳು ೨) ಆರ್ಥಿಕವಾಗಿ ನಿರ್ಮಿತ ಗೊಳ್ಳುತ್ತಿರುವ ಮನೆಗಳು, ಆರ್ಥಿಕವಾಗಿ ಸಧೃಡ ಹೊಂದಿದವರು ಸುಂದರವಾದ ಮನೆ ಕಟ್ಟಿಕೊಂಡು ಅದರ ವಿನ್ಯಾಸ ಪಡಸಾಲೆ, ಅಂಗಳ, ಒಳಾಂಗಳ, ಮಾಳಿಗೆ, ಕೆತ್ತನೆಯ ಕೆಲಸಗಳೊಂದಿಗೆ ಸುಂದರವಾಗಿ ತನ್ನ ಸಂಪನ್ಮೂಲಗಳಿಂದ ಕಟ್ಟಿಸಿರುತ್ತಾರೆ. ಇಂಥ ಮನೆಗಳು ಚಿಟಗುಪ್ಪಾ,



ರಾಯಚೂರ, ವಡಗೇರಾ, ಬೆಂಡೆಗುಂಬಳ, ಕೀರಣಗಿ, ಗೋಗಿ ಹುಮನಾಬಾದ, ಕಮಲಾಪೂರ, ಡೋರನಲ್ಲಿ ಶಿರವಾಳ, ಮರತೂರ, ಹುಣಸಗಿ, ರೇವೂರ ಸೇಡಂಗಳಲ್ಲಿ ಹೀಗೆ ಅನೇಕ ಕಡೆ ಪ್ರಾದೇಶಿಕ ವಸ್ತುಗಳನ್ನು ಬಳಸಿಕೊಂಡು ಮನೆಗಳನ್ನು ಸುಂದರ ವಿನ್ಯಾಸದಿಂದ ಕಟ್ಟಿಕೊಂಡಿದ್ದಾನೆ.

ಬೀದರ, ಗುಲಬರ್ಗಾ, ವಿಜಯಪೂರ, ರಾಯಚೂರುಗಳಲ್ಲಿ ಹಿಂದು-ಮುಸ್ಲಿಂ ಸಾಂಸ್ಕೃತಿಕ ಕಟ್ಟಡಗಳು ಇತಿಹಾಸವಾಗಿ ಇಂದಿಗೂ ಧಾರ್ಮಿಕ ಆಧ್ಯಾತ್ಮಿಕ ಜನಸಮೂಹದ ಪ್ರವಾಸಿ ಕೇಂದ್ರಗಳಾಗಿ ಕಂಗೊಳಿಸುತ್ತವೆ. ಅಜಂತಾ, ಎಲ್ಲೋರಾ, ಶ್ರವಣಬೆಳಗೊಳ, ಹಂಪಿ, ಶಿರವಾಳ, ಸನ್ನತಿ, ಕಾಳಗಿ ಹೀಗೆ ಅನೇಕ ಪಟ್ಟಣಗಳಲ್ಲಿ ಶಿಲ್ಪ ವಾಸ್ತು ಶಿಲ್ಪ, ಚಿತ್ರ ರಚನೆಗೊಂಡಿವೆ. ಸುಂದರ ವಿಗ್ರಗಳು, ಮಂದಿರಗಳು, ದೇಗುಲಗಳು, ಶಿಲಾಶಾಸನಗಳು ನಮಗೆಲ್ಲ ಇತಿಹಾಸದ ಗತವೈಭವದ ಕಾಲದ ಕಲ್ಪನೆ ನೀಡುತ್ತವೆ.

ಭಿತ್ತಿ ಚಿತ್ರಗಳು/ಕಿರು ಚಿತ್ರಗಳು/ಭಾವಚಿತ್ರ/ಉದ್ಧರಣಿ ಇತರ ಧಾರ್ಮಿಕ ಚಿತ್ರಗಳು, ಸುರಪುರ, ಶಹಾಪುರ, ಬಸವಕಲ್ಯಾಣ, ಬಿದರ ಗುಲಬರ್ಗಾ, ರಾಯಚೂರು, ಯಾದಗೀರಗಳಲ್ಲಿ ವೀಕ್ಷಿಸಬಹುದು. ಜೊತೆಗೆ ಜನಪದೀಯ ಸಂಸ್ಕೃತಿಯೊಂದಿಗೆ ಕಲಾತ್ಮಕ ಶಿಲ್ಪಗಳು ಹಾಗು ದಖನಿ ಸುಲ್ತಾನರ ಕಾಲದಲ್ಲಿ ಧಾರ್ಮಿಕ ಸಂಘಟನೆಗಳನ್ನು ಕಲ್ಪಿಸಿಕೊಂಡು ಚಿತ್ರದಲ್ಲಿ ಭಿತ್ತಿ ಚಿತ್ರಗಳು ಪ್ರಮುಖವಾಗಿ ರಚಿಸಿರುತ್ತಾರೆ. ಇದರೊಂದಿಗೆ ವಾಸ್ತುಶಿಲ್ಪದ ಕೋಟೆ

ಕೊತ್ತಲುಗಳಲ್ಲಿ, ಫಿರೋಜಾಬಾದ ನಗರ, ಮುದ್ದಲ್, ಸೊಲ್ಲಾಪುರ, ನಳದುರ್ಗ, ಫಜಿಂದಾ, ಬಹಮನಿ, ಗುಲಬರ್ಗಾ, ಬೀದರ, ರಾಯಚೂರು, ದೇವದುರ್ಗ, ಯಾದಗೀರ, ಬಸವಕಲ್ಯಾಣ ಮಾನವಿಗಳಲಿ ಅವಶೇಷಗಳೊಂದಿಗೆ ಮ್ಯೂರಲಗಳು ಚಿತ್ರಗೊಂಡಿವೆ. ಬೀದರಿನ ಮಹಡಿಗಳಲ್ಲಿನ ಭಿತ್ತಿ ಚಿತ್ರಗಳು ರಾಯಚೂರಿನ ಗಾಜಿನಗೌಡರ ಮನೆಯಲ್ಲಿನ ಭಿತ್ತಿ ಚಿತ್ರಗಳು ಹಾಗೂ ಹಂಪಿಯಲ್ಲಿನ ವೀರೂಪಾಕ್ಷ ದೇವಾಲಯದ ಭಿತ್ತಿ ಚಿತ್ರಗಳು ಸುರಪೂರದ ಗರುಡಾದ್ರಿ ಕಲಾವಿದ ರಚಿಸಿದ ಕಿರುಚಿತ್ರಗಳು, ಭಿತ್ತಿ ಚಿತ್ರಗಳು ಇಂದಿಗೂ ಆಂಧ್ರಪ್ರದೇಶದ ಅಂಚಿನಲ್ಲಿ ಹಾಗೂ ಕರ್ನಾಟಕ ಗುಲಬರ್ಗಾ ವಿಭಾಗದಲ್ಲಿ ನೋಡಲು ದೊರೆಯುತ್ತವೆ. ಗುಲಬರ್ಗಾ ಸಾತಗುಂಬಜನಲ್ಲಿನ ಭಿತ್ತಿ ಚಿತ್ರಗಳು ರೋಜಾದಲ್ಲಿನ ಭಾವಣಿಯ ಭಿತ್ತಿ ಚಿತ್ರಗಳು ಇದೇ ರೀತಿಯಾಗಿ ಕಟ್ಟಿಗೆ ಕೆತ್ತನೆಯ ಕೆಲಸ ಪ್ರಕೃತಿ ಚಿತ್ರಗಳು, ಭಾವಚಿತ್ತಗಳು ಬೆಳಕಿಗೆ ಬಂದಿವೆ ೧೯೮೦ರಿಂದ ವಿಕಾಸಗೊಂಡು ಜೆ.ಜೆ. ಕಲಾಶಾಲೆಯ ಮೂಲಕ ರಾಜಾ ರವಿವರ್ಮಾ ಪ್ರಭಾವದೊಂದಿಗೆ ಶಾಂತಲಿಂಗಪ್ಪ ಪಾಟೀಲ ನಿಂಬಾಳ, ಶಂಕರಾವ ಆಳಂದಕರ ಎಸ್.ವಿ. ಸೊಸೈಟಿ ಕಲಬುರಗಿ, ಎಂ.ಟಿ. ಬೋಪಲೆ, ಶೇಖ ರೋಜಾ ಕಲಬುರಗಿ, ಡಾ. ಎಸ್.ಎಂ. ಪಂಡಿತ ಗುಲಬರ್ಗಾ, ಕುಮಾರ ಚಂದ್ರಶೇಖರ, ಆಳಂದಕರ, ವಿ.ಎಸ್. ಬಂಕರಕರ, ಫಕಿರಯ್ಯ ಸ್ವಾಮಿ National Photo ಸ್ಟುಡಿಯೋ/ಶಿರವಾಳಕರ ಸ್ಟುಡಿಯೋ/ಸರೋದೆ ಮೋಹನ ಥಗೆ/ಬಸವಂತರಾವ ಕಡುನ, ಇವರೆಲ್ಲಾ ನಾಡಿಗೆ ಶ್ರೇಯಸ್ಸನ್ನು ತಂದಿರುತ್ತಾರೆ.

ಅನಂತ ರೀತಿಯಲ್ಲಿ ಗುಲಬರ್ಗಾ ವಿಭಾಗವು ಕಲೆಯಾಗಿ ಕಲಾವಿದರಿಂದ ಶಿಲ್ಪ ವಾಸ್ತುಶಿಲ್ಪಗಳಿಂದ ವಿಜೃಂಭಣೆಗೊಂಡು ತನ್ನ ಪರಂಪರೆಯನ್ನು ಕಾಪಾಡಿಕೊಂಡು



ಬಂದಿರುತ್ತದೆ. ಮಾನವಿ ಜಿಲ್ಲೆಯ ಕಿನ್ನಾಳ ಕಲೆಯು ಕಟ್ಟಿಗೆಯ ವಿಗ್ರಹಗಳ ಮೂಲಕ ಕಳೆದ ಹಲವಾರು ದಶಕಗಳಿಂದ ರಚನೆಗೊಳ್ಳುತ್ತಾ ಜನಪದೀಯ ಸಾಂಸ್ಕೃತಿಕವಾಗಿ ಜನಮನದಲ್ಲಿ ಬೆಳೆದುಬಂದಿದೆ. ನಾಡಿನಾದ್ಯಂತ ತನ್ನ ಕೃತಿ ಶೈಲಿ ವರ್ಣಗಳ ವಿನ್ಯಾಸಗಳಿಂದ ದೇವದೇವತೆಯರ ವಿಗ್ರಹಗಳು ಹನುಮಂತ, ಮರಗಮ್ಮಾ, ದುರ್ಗಮ್ಮಾ, ಚಾಡಿಕಾಂಬೆ, ಚಾಮರಗಿತ್ತಿಯರು ಮಂಟಪಗಳು, ಸತಿಯರು ಮೋಹಕ ಗೊಂಬೆಗಳು, ಹನುಮಂತ, ಸೀಗಿ ಗೌರಿ, ಕುದುರೆಗಳು ಎತ್ತುಗಳು ಜೋಡಿ ಮಂಟಪ, ಹೀಗೆ ಅನಂತ ರೀತಿಯಲ್ಲಿ ಕಲಾವಿದರು ತಮ್ಮ ಕೃತಿಗಳ ಮೂಲಕ ಕಿನ್ನಾಳ ಶೈಲಿಯನ್ನು ಪ್ರಸಿದ್ಧಗೊಳಿಸಿದ್ದಾರೆ. ಇಂದಿಗೂ ಅನೇಕ ಕಲಾವಿದರು ಜನಪದೀಯ ಸಂಸ್ಕೃತಿಯೊಂದಿಗೆ ಜನಮುಖಿಯಾಗಿ ಕಲಾಕೃತಿಗಳನ್ನು ತಯ್ಯಾರಿಸುವಲ್ಲಿ ತೊಡಗಿದ್ದಾರೆ. ಅವರಲ್ಲಿ ಪ್ರಮುಖರಾಗಿ, ಅಣ್ಣಪ್ಪ ಸಿ. ಮತ್ತು ಇತರರು ಇದರಂತೆ ಬೀದರಿನ ಬಿದರಿ ಕಲೆ ಬ್ರಿಟಿಷರ ಅವಧಿಯಿಂದ ಹೊಸ ರೂಪ, ಶೈಲಿ, ಆಕಾರಗಳೊಂದಿಗೆ ವಿಶ್ವದ ಅನೇಕ ಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡು ಕಾಲದ ಇತಿಹಾಸದ ಅರಿವು ಕಲಾವಿದರ ಕೂಸುರಿನ ಕೆಲಸಗಳಲ್ಲಿನ ಮಣ್ಣು, ಬೆಳ್ಳಿ, ಜಿಗುಟು, ಪದಾರ್ಥದಿಂದ ವಿಶೇಷವಾದ ಮಣ್ಣಿನಿಂದ ತಯ್ಯಾರಿಸಿಕೊಂಡು ಇಂದಿಗೂ

ಜನಸಂಪರ್ಕದೊಂದಿಗೆ ಕಲಾಕೃತಿಯ ಬೇಡಿಕೆಗಳೊಂದಿಗೆ ಮಾರುಕಟ್ಟೆಯನ್ನು ಜೀವಂತವಾಗಿಸಿದ್ದಾರೆ. ಜಾನಪದ ಕಲೆಯಲ್ಲಿ ವಿಶಿಷ್ಟತೆಯನ್ನು ತಂದುಕೊಟ್ಟು "ತೊಗಲು ಗೊಂಬೆಯ" ಚಿತ್ರಗಳ ತರಬೇತಿಯನ್ನು ಬಳ್ಳಾರಿಯ ಮಾನ್ಯ ಶ್ರೀ ಘೋರ್ಪಡೆಯವರು ಪ್ರಾರಂಭಿಸಿ ಅವರ ಪರಂಪರೆಯನ್ನು ಕಾಪಾಡಿಕೊಂಡು ಬಂದಿರುತ್ತಾರೆ. ರಾಮಾಯಣ ಮಹಾಭಾರತ ಅನೇಕ ಕಥಾ ಸನ್ನಿವೇಶಗಳನ್ನು ವಸ್ತುವಾಗಿ ಬಳಸಿಕೊಂಡು ಇಡೀ ರಾತ್ರಿ ಜನರ ಮನಸ್ಸನ್ನು ಗೆದ್ದು ಕಿಳ್ಳೆ ಖ್ಯಾತರು ಜನಾಂಗ ವಂಶಜರು ರಚಿಸಿದ ತೊಗಲು ಗೊಂಬೆಯ ಆಟಗಾರರು ರಂಗಭೂಮಿಯ ಮೂಲಕ ಯಶಸ್ವಿಯನ್ನು ಕಂಡಿದ್ದಾರೆ. ೧೯ನೇ ಶತಮಾನದಲ್ಲಿ ತೊಗಲುಗೊಂಬೆಗಳ ಆಟಿಕೆಯಿಂದ ನಿರ್ಮಿತಗೊಂಡು ರಂಗಭೂಮಿ ವಿಶಿಷ್ಟತೆಗಳಿಂದ ಬೆಳೆದಿದೆ. ಸಾವಿರಾರು ಪ್ರೇಕ್ಷಕರ ಮನ್ನಣೆ ಪಡೆದು ದೀಪ, ಜನಪದ ಹಾಡುಗಾರಿಕೆ, ವರ್ಣ, ರೇಖೆಗಳಿಂದ ಚರ್ಮದಿಂದ ತಯ್ಯಾರಿಸಿದ ತೊಗಲು ಗೊಂಬೆಗಳು ಚಲನ ಶೀಲವಾಗಿ ಪಾರದರ್ಶಕವಾಗಿ ಕಲಾಕೃತಿ ವಿಚಾರಗಳಿಂದ ಅನೇಕ ನಂಬಿಕೆ ಸಂತೋಷ ವಿಜೃಂಭಣೆ ಜನರ ಪ್ರೋತ್ಸಾಹಗಳೊಂದಿಗೆ ದೇವ ದೇವತೆಯರ ಚಿತ್ರಗಳ ಮೂಲಕ ಪ್ರದರ್ಶಿಸಿದ್ದಾರೆ. ಮೇಕೆ ಹಸು, ಜಿಂಕೆ, ಎಮ್ಮೆಯ ತೊಗಲಿನಿಂದ ಚರ್ಮ ಹದ ಮಾಡಿಬೇಕಾದ ಆಕಾರಗಳಲ್ಲಿ ದೇವರ ಚಿತ್ರಗಳು ರಾಮಾಯಣ, ಮಹಾಭಾರತ ಚಿತ್ರ ಪರಂಪರೆಯೊಂದಿಗೆ ೫, ೬ ಅಡಿಯವರೆಗೆ ಚಿತ್ರಗಳನ್ನು ರಚಿಸಿ ಬೀದರಿ ಕಟ್ಟೆಯ ರಂಗಭೂಮಿಯ ಸಹಾಯದಿಂದ ಪ್ರಕಾರ ವರ್ಣಗಳಿಂದ ಮೆರಗನ್ನು ತಂದುಕೊಟ್ಟಿರುತ್ತಾರೆ. ಉತ್ತರ ಕರ್ನಾಟಕದ ಆಂಧ್ರಪ್ರದೇಶದ ಕೇರಳ ರಾಜ್ಯಗಳಲ್ಲಿ ಬೆಳೆದು ವಿಶ್ವದ ಕಲಾಪ್ರಕಾರಗಳಲ್ಲಿ ಜಿವಂತಿಕೆಯನ್ನು ತಂದುಕೊಟ್ಟಿದೆ. ತೊಗಲು ಗೊಂಬೆಯ ಕಲಾಕೃತಿಗಳು ವಿಶ್ವದ ಅನೇಕ ಸಂಗ್ರಹಾಲಯಗಳಲ್ಲಿ, ಅಕಾಡೆಮಿಗಳಲ್ಲಿ, ಜನಪದ ಸಂಗ್ರಹಾಲಯ, ಕಲಾ ಸಂಸ್ಥೆಗಳಲ್ಲಿ ವಿಶ್ವವಿದ್ಯಾಲಯಗಳಲ್ಲಿ ಸಂಗ್ರಹಿಸಲ್ಪಟ್ಟಿವೆ.

ವಿಜಯ ಹಾಗರಗುಂಡಗಿಯವರು, ಸಾಂಪ್ರದಾಯಕ ಕಲೆಯಲ್ಲಿ ತಮ್ಮದೆಯಾದ

ವಿಶೇಷ ಶೈಲಿ, ಪ್ರಕಾರಗಳ ಮೂಲಕ ಗಮನ ಸೆಳೆದಿದ್ದಾರೆ ಮತ್ತು ಅವರ ಸಂಗ್ರಹ ಕರ್ನಾಟಕ ಕಲಾ ಸಂಶೋಧಕರಿಗೆ ಮಾದರಿಯ ಸಂಗ್ರಹವಾಗಿದೆ. ರಾಷ್ಟ್ರದ ಆಸ್ತಿಯಾಗಿದೆ ಕಲಾಕೃತಿಗಳ ಸಂಗ್ರಹದಿಂದ ಗೊಂಬೆ, ಕಟ್ಟಿಗೆ, ಶಿಲೆ, ಮಂಟಪ ಮುಖವಾಡಗಳು, ಪೆಂಟಿಂಗಗಳು ಹೀಗೆ ಅನೇಕ ಕಲಾತ್ಮಕ ಸಂಗ್ರಹದಿಂದ ನಾಡನ್ನು ಪ್ರೀತಿಸಿದ್ದಾರೆ. ಅವರ ಪಾರಂಪರಿಕೆಯ ಚಿತ್ರಗಳಲ್ಲಿನ ವರ್ಣವಿನ್ಯಾಸ, ಸೌಂದರ್ಯಪ್ರಜ್ಞೆ ರೇಖೆಗಳಲ್ಲಿ ಸ್ವಭಾವ, ಜಲವರ್ಣ ಹಾಗೂ ಟೆಂಪರಾವರ್ಣಗಳ ಚಿತ್ರಗಳು ಅತ್ಯಂತ ಆಕರ್ಷಣೆ ನೀಡುವ ಸಂಯೋಜನೆಗಳಾಗಿವೆ, ಮುನ್ನೋಟಕ್ಕೆ ಒಮ್ಮೊಮ್ಮೆ ಇಂಕಪ್ರಿಂಟ ರೇಖೆಗಳು ಕಲ್ಪನೆ ಮೂಡಿಸುತ್ತದೆ.

ಆದರೆ, ಅವರ ಕಿರುಚಿತ್ರದ ಸಂಪ್ರದಾಯಿಕೆಯಲ್ಲಿನ ಪ್ರತಿಯೊಂದು ಭಾಗವು ಸಹ ಚೆಲುವಿನ ಆಕಾರಗಳಿಂದ, ಕಣ್ಣು, ಮೂಗು, ಕಪಾಳ, ಕೂದಲುಗಳ ಜೊತೆಗಿರುವ ಮೈಕಟ್ಟು, ಪಾದ, ತೊಳುಗಳು, ಬೆರಳುಗಳಲ್ಲಿ ವಿಶೇಷತೆಯಾಗಿ ಕಾಣುತ್ತೇವೆ. ಅವರ ಮನಸ್ಸು ಮತ್ತು ಏಕಾಗ್ರತೆಯ ಗುಣದಿಂದಾಗಿ ಹೊರಹೊಮ್ಮುವ ಚಿತ್ರಗಳು ವಿಶೇಷತೆಯಿಂದ ಕೂಡಿದ್ದಾಗಲೇ ಅವರ ಚಿತ್ರಗಳ ಕುರಿತು ಸಾಹಿತಿ ಶಾಂತರಸ ಹಾಗೂ ಕರ್ನಾಟಕದ ಮುತ್ಸದಿ ಕಲಾವಿಮರ್ಶಕ ಬಿ.ವಿ.ಕೆ. ಶಾಸ್ತ್ರೀಯವರು ಹೇಳಿಕೆಯಂತೆ ವಿಜಯ ಹಾಗರಗುಂಡಗಿ ಕಲ್ಯಾಣ ಕರ್ನಾಟಕದ ಮತ್ತು ಭಾರತದ ಶ್ರದ್ಧಾವಂತ ಕಲಾವಿದನಾಗಿ, ನಾಡಿನ ಇತಿಹಾಸಕ್ಕೆ ತನ್ನ ಕೃತಿಗಳ ಮೂಲಕ, ಸಂಗ್ರಹದ ಮೂಲಕ ಇತಿಹಾಸಕ್ಕೆ ಇತಿಹಾಸ ಕಟ್ಟಿಕೊಡುತ್ತಾರೆ. ಮುಂದಿನ ಯುವಕರಿಗೆ ತನ್ನ ಕೃತಿಗಳ ಸಂಗ್ರಹದೊಂದಿಗೆ, ವಿಶ್ವದ ಗಮನ ಸೆಳೆಯುತ್ತಾರೆ. ಪ್ರತಿಯೊಂದು ಕಲಾಕೃತಿಗಳಲ್ಲಿನ ಸೊಬಗು, ಲಕ್ಷಣ, ವರ್ಣ ವಿನ್ಯಾಸ, ತಾಳ್ಮೆ, ರೇಖಗಳಲ್ಲಿನ ಹರಿತವಾದ ಗುಣ, ಆಳದ ಅರಿವು, ಆಕಾರಗಳಲ್ಲಿನ ವೈವಿದ್ಯತೆಯ ಕ್ಷಣಗಳು ವಿಡಂಬವಾಗಿ, ರೂಪುಗೊಳ್ಳುತ್ತವೆ. ಅವರ ಪ್ರತಿಯೊಂದು ಚಿತ್ರದಲ್ಲಿನ ಕವಿತಾಗುಣ ಮನುಷ್ಯನನ್ನು ಬದುಕಲು ಹೆಚ್ಚುತ್ತವೆ.

ಜಗದೇವಪ್ಪ  ಖಂಡೇರಾವ ಅವರು ನೂತನ ಕಲಾ ಮಂದಿರ ಬಾಂಬೆ, ಹಾಗೂ ಜೆ.ಜೆ. ಕಲಾ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಯಾಗಿ ಕಲಾವಿದರಾಗಿ ರೂಪುಗೊಂಡಿದ್ದಾರೆ. ಅವರ ಜಲವರ್ಣ ಹಾಗೂ ತೈಲವರ್ಣದ ಚಿತ್ರಗಳಲ್ಲಿನ ಮೆದುವಾದ ಹೇಳಿಕೆ ವರ್ಣವಿನ್ಯಾಸದೊಂದಿಗೆ ತೊಡಗಿರುವ ಸಾಧ್ಯತೆಗಳಲ್ಲಿನ ಅನ್ವೇಷಣೆಯಲ್ಲಿನ ಗುಣ ಸಹನೆಯಿಂದ ಚಲಿಸಿಕೊಂಡು ಹೋಗುವ ವರ್ಣಗಳಲ್ಲಿನ ನಡೆ ಎಂಥವರಿಗೂ ಸಹ ಮುಗ್ಧತೆಗೆ ಒಳ ಮಾಡುತ್ತದೆ. ಆಧ್ಯಾತ್ಮಕತೆಯ ಗುಣಗಳು ಶರಣರ ವಚನಗಳು ಮೈಗೂಡಿಸಿಕೊಂಡ ಖಂಡೇರಾವ ಖಂಡೇರಾವ ಜಗದೇವಪ್ಪನವರ ಕೃತಿಗಳಲ್ಲಿ ಕಾಣುತ್ತೇವೆ. ಭಾವಚಿತ್ರಗಳಲ್ಲಿನ, ಮೂರು ವರ್ಣಗಳ ಆಕಾರ ಸೃಷ್ಟಿ, ಲಕ್ಷಣಗಳಲ್ಲಿನ ಬಯಕೆಗಳಿಂದ ಆಳವಾದ ಅರಿವಿನ, ಹರಿತವಾದ, ವಿಶ್ಲೇಷಣೆ, ಅಭಿವ್ಯಕ್ತಿಯಲ್ಲಿನ ಮನಸ್ಸು, ತಾಳ್ಮೆಗಳು ಗೋಚರವಾಗುತ್ತವೆ. ಪ್ರಕೃತಿ ಚಿತ್ರಗಳಲ್ಲಿನ ಜಲವರ್ಣದ ಒಡನಾಟ, ಆಕಾರಗಳ ವೀಕ್ಷಣೆಯೊಂದಿಗೆ ಮನಸ್ಸಿನ ಬಯಕೆಗಳೊಂದಿಗೆ ಶೃಂಗಾರದ ಸೊಬಗು ನೆಲ, ಜಲ, ಪ್ರಕೃತಿಯ ಗುಣ ಪ್ರತಿಯೊಂದರಲ್ಲಿನ ಸಂಯೋಜನೆಗಳ ಅರಿವು ನಿಜದ ಸ್ಥಿತಿಗೆ ತೆಗೆದುಕೊಂಡು ಹೋಗುತ್ತ ಮನಸ್ಸಿಗೆ, ನೋಡುಗರಿಗೆ ನೆಮ್ಮದಿ ನೀಡುತ್ತದೆ. ಈ ಮೂಲಕ ಸಂಶೋಧನಾ ಪ್ರವೃತ್ತಿಯಿಂದ ಅವರ

ಅಮೂರ್ತ ಚಿತ್ರಗಳಲ್ಲಿನ ಒಳಮನಸ್ಸು, ಬಯಕೆಗಳ ಚಲನಶೀಲತೆಯ ಗುಣಗಳ ಅರಿವಾಗುತ್ತದೆ. ಮನಸ್ಸಿನ ಭ್ರಮೆಗಳಿಗೆ ಅರ್ಥ ನೀಡುತ್ತವೆ. ಸುಖ



ದುಃಖಗಳೊಂದಿಗೆ, ದೈವತ್ವದ ಮನಸ್ಸುಗಳಿಗೆ ವರ್ಣಗಳ ಅಭಿಪ್ರಾಯ ಸಾಧ್ಯ ಅಸಾಧ್ಯತೆಗಳೊಂದಿಗೆ ಬೆಳಕಿನ ಭಾವನಾತ್ಮಕ ಪ್ರಪಂಚಕ್ಕೆ ತೆಗೆದುಕೊಂಡು ಹೋಗುತ್ತದೆ. ಚಿತ್ರ ಯಾವಾಗಲು ತನ್ನ ಭಾಷೆಯ ಮೂಲಕ ಮನಸ್ಸನ್ನು ತಟ್ಟುತ್ತದೆ. ಆಗುಹೋಗುಗಳಿಂದ ವೈಜ್ಞಾನಿಕವಾದ ಅರಿವುಗಳಿಂದ ಮನಸ್ಸನ್ನು ತೆರೆಸುತ್ತದೆ. ನೋಡಲು ಹಚ್ಚುತ್ತದೆ. ಇಲ್ಲಿ ಚಿತ್ರ ಭಾಷೆ ಅರ್ಥವಾಗದಿರಬಹುದು ಆದರೆ ಮನಸ್ಸುಗಳಿಗೆ ನೆಮ್ಮದಿ ನೀಡುವ ವಿಚಾರ ಸಂಕಲ್ಪಗಳಿಗೆ ಅನಂತತೆ ತಂದು ಕೊಡುತ್ತದೆ. ಅವರ ಪ್ರಕೃತಿ ಚಿತ್ರಗಳಲ್ಲಿ ಪ್ರಕೃತಿಯ ವೇಳೆಯ ವ್ಯತ್ಯಾಸವನ್ನು ತಿಳಿಹೇಳುತ್ತದೆ. ಅವರ ಪ್ರತಿಯೊಂದು ಚಿತ್ರಗಳ ಕುರಿತು ಕರ್ನಾಟಕದ ಕಲಾವಿಮರ್ಶಕ ಎಚ್.ಎ. ಅನಿಲಕುಮಾರ ಅವರು ತಮ್ಮ ಲೇಖನದಲ್ಲಿ ಅವರ ಶೈಲಿ, ಗುಣ, ವರ್ಣ, ಆಕಾರಗಳ ಕುರಿತು ವಿವರಿಸಿದ್ದಾರೆ. “ಸುಧಾ” ಪತ್ರಿಕೆಯಲ್ಲಿನ ದಿನಾಂಕ: ೧೯-೧೧- ೨೦೧೧ರ ಬಗ್ಗೆ ಅವರ ಕೃತಿಗಳ ಭಾಷೆಯ ಬಗ್ಗೆ ವಿವರಣೆ ನೀಡಿಕೊಂಡು ಅವರ ಪ್ರತಿಭೆ, ಚಿಂತನೆಗಳ ಕುರಿತು, ಅವರ ನೆಲಗಟ್ಟಿನ ಇತಿಹಾಸದ ಗಟ್ಟಿತನದ ಬಗ್ಗೆ ಹೇಳಿರುತ್ತಾರೆ. ಅವರೊಬ್ಬ ಮನಸ್ಸಿಗೆ ಸಾಂತ್ವನ ನೀಡುವ ಬಯಕೆಗಳನ್ನು ಬಯಲಿಗೆಳೆಯುವ ಕಲಾವಿದ ಚಿಂತಕರಾಗಿ, ತಮ್ಮ ಶೈಲಿ ವಿಶಿಷ್ಟತೆಗಳಿಂದ ಪರಿಚಯಿಸಿಕೊಂಡಿರುತ್ತಾರೆ. ಇವರ ಚಿತ್ರಗಳು ದೂರದಿಂದ ನೋಡಿದಾಗ ಚಿತ್ರಗಳಲ್ಲಿ ವೈವಿಧ್ಯತೆ ಮತ್ತು ಅಮೂರ್ತಗಳಲ್ಲಿನ ಸೂಕ್ಷ್ಮ ಬೆಳಕಿನ ಕಲ್ಪನೆಯೊಂದಿಗೆ ರೇಖೆ, ಆಕಾರ, ವರ್ಣಗಳಲ್ಲಿನ ಪ್ರಖರತೆಯ ಗುಣಗಳ ರೀತಿ ಬೃಹತ್ತಾಕಾರದ ಅವಶೇಷಗಳು ಗೋಚರಿಸುತ್ತವೆ. ಇಲ್ಲಿ ಅವರ ನೈಪುಣ್ಯತೆಯ ಗುಣಗಳೊಂದಿಗೆ ವರ್ಣದಲ್ಲಿನ ತಂಪು, ಬಿಸಿ ವರ್ಣಗಳಲ್ಲಿನ ಭಾವನೆ ನಿಯಂತ್ರಣಕ್ಕೆ ತರುತ್ತದೆ. ಅವರ ಪ್ರತಿಭೆಯಲ್ಲಿನ ರಚನಾತ್ಮಕ ಬದ್ಧತೆ ಪ್ರಚೋದನೆಯಲ್ಲಿನ ಗುಣಗಳಿಂದ ನೋಡುಗರಿಗೆ ಚಕಿತಗೊಳಿಸುತ್ತದೆ.

ಇದೇ ರೀತಿಯಾಗಿ ಕಲಾವಿದ ಡಾ. ಅಂದಾನಿ, ವೀರಣ್ಣ ಅವರು ತಮ್ಮ ಗ್ರಹಿಕೆಗಳಿಂದ ಆಡಳಿತದ ಅನುಭವಗಳಿಂದ ಕ್ರಿಯಾಶೀಲತೆ, ಮುಂದಾಲೋಚನೆಗಳಿಂದ ಸಮಾಜವನ್ನು ಸುಂದರಗೊಳಿಸಿದ್ದಾರೆ. ಅವರ ಕ್ರಾಂತಿಯ ವಿಚಾರಗಳು, ಚಿತ್ರಕಲೆಯಲ್ಲಿನ “ಬಯಲು ಸೀಮೆಯ” ತೊಡಕುಗಳು, ಶಿಲೆಗಳು ಕಟ್ಟಡ, ಭಾಷೆಯಲ್ಲಿನ ವಿಡಂಬನೆ ಖಿಲ್ಲಾ ಹೊಡೆಗಳ ಅವಶೇಷಗಳೊಂದಿಗೆ, ಕ್ರಿಯಾಶೀಲತೆಯ ಸಂಶೋಧನೆ ಗುಣಗಳಿಂದ ಇಂದು ಸಾವಿರಾರು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುತ್ತಿದೆ. ತಮ್ಮ ಬಯಕೆಗಳೊಂದಿಗೆ ಮನಸ್ಸುಗಳನ್ನು ಕಟ್ಟಿಕೊಂಡು ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಿಕೊಂಡು ನಿರಂತರಾಗಿದ್ದಾರೆ. ಅಂದಾನಿಯವರ ಸಾಹಿತ್ಯಕ ಮನಸ್ಸು ಅಕ್ಷರ

ಜೋಡಣೆಯಿಂದ (ಮುದ್ರಣ) ಆಕಾರಗಳ ರಚನೆಯೊಂದಿಗೆ, ಕಪ್ಪು ಬಿಳುಪಿನ ಹರಿತವಾದ ಗುಣಗಳಿಂದ ವಿವಿಧ ಆಕಾರಗಳಿಂದ ಪ್ರದರ್ಶನಗಳನ್ನು ಮಾಡಿರುತ್ತಾರೆ. ದಿಲ್ಲಿ, ಬಾಂಬೆ, ಬೆಂಗಳೂರಿನಂತಹ ಗ್ಯಾಲರಿಗಳಲ್ಲಿ ಕೃತಿಗಳ ಮೂಲಕ ಖ್ಯಾತಿಯನ್ನು ಪಡೆದಿರುತ್ತಾರೆ. ಅವರ ಆಡಳಿತದ ವೈಖರಿಯಲ್ಲಿ ಕಲಾ ಶಿಕ್ಷಣದೊಂದಿಗೆ ದಿ ಐಡಿಯಲ್ ಫೈನ್ ಆರ್ಟ ಸಂಸ್ಥೆ ಸುಂದರವಾದ ವಿನ್ಯಾಸ ಕಲ್ಲು ಕಟ್ಟಡದ ಉತ್ತಮವಾದ ಸಂದೇಶಗಳೊಂದಿಗೆ ಕಲಾವಿದನ ಆಶೆಗಳಿಗೆ ಪೂರಕವಾದ ಕಲಾತ್ಮಕ ವಾತಾವರಣ ಮೂಡಿಸಿದ್ದಾರೆ. ಕಲೆ, ಕಲಾಶಿಕ್ಷಣ ಸಂಸ್ಕೃತಿಯ ವಿಕಾಸಗಳೊಂದಿಗೆ ಸಂಘರ್ಷಮಯ ಬದುಕನ್ನು ರೂಢಿಸಿಕೊಂಡು ಕಲಾವಿದರಾಗಿ ಅನೇಕ ಕೃತಿಗಳಿಂದ



ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಕರ್ನಾಟಕದ ವಿಮರ್ಶಕ, ಚಿಂತಕರಾದ ಕೆ.ವಿ. ಸುಬ್ರಮಣ್ಯಂ ಹೇಳಿಕೆಯಂತೆ, ಆದಾನಿಯವರ ಹಲವು ಅನುಭವಗಳು ನೂರಾರು ಗ್ರಹಿಕೆಗಳಿಂದ ವಿಕೃತ ಸೌಂದರ್ಯದ ಮೀಮಾಂಸೆಯನ್ನು ಅರಗಿಸಿಕೊಂಡಿವೆ. ರೇಖೆಗಳಲ್ಲಿನ ಅನುಭವ ಮಿಶ್ರ ಮಾಧ್ಯಮದ ಗುಣ, ಕಲಾವಿದನ ಸಮಕಾಲೀನ ಆಕೃತಿಗಳ ನಿರ್ವಹಣೆಯಲ್ಲಿನ ಭರಾಟೆಗಳನ್ನು ಕಾಣುತ್ತೇವೆ. ಅವರು ಪ್ರಮುಖವಾಗಿ ತೈಲವರ್ಣ, ಜಲವರ್ಣ, ಇಂಕ, ಅಕ್ರಾಲಿಕ, ಪೇಸ್ಟಲ್ ವರ್ಣಗಳನ್ನು ಮಾಧ್ಯಮವಾಗಿಟ್ಟುಕೊಂಡು ಶೈಲಿಗೆ ಬೆನ್ನು ಹತ್ತದೆ, ನೀರಿನೊಂದಿಗೆ ಪ್ರತಿಭಾವಂತಿಕೆ ಸಂಶೋಧನೆ, ಪ್ರಾಯೋಗಿಕ ಗುಣಗಳನ್ನು ವಿಸ್ತರಿಸಿಕೊಂಡು ಕಾಗದದಲ್ಲಿನ ಬಿಳುಪು ಗಮನಾರ್ಹವಾಗಿ, ಸ್ತಬ್ಧವಾಗಿ ಛಾಯಾಂತರಗೊಳಿಸುತ್ತಾರೆ. ಅವರ ಸಂವೇಧನಾಶೀಲ ಮನಸ್ಸು ರೇಖೆಗಳಲ್ಲಿನ ವೈವಿಧ್ಯತೆ, ಅಗಲ ಸೂಕ್ಷ್ಮತೆ, ಹರಿವು, ದಪ್ಪ ಸಣ್ಣ ರೇಖೆಗಳನ್ನು ಬಹು ಚಾಣಾಕ್ಷ ಮನಸ್ಸಿನಿಂದ ದುಡಿಸಿಕೊಂಡಿರುತ್ತಾರೆ. ವೃತ್ತಿಯಿಂದ ಕಲಾವಿದರಾಗಿ, ಕಟ್ಟುವ ಕೆಲಸದೊಂದಿಗೆ ಕಲಾ ಶಿಕ್ಷಣಕ್ಕೆ ಒತ್ತುಕೊಟ್ಟು, ವೈವಿಧ್ಯಮಯವಾಗಿ ಶಿಕ್ಷಣದ ಅರಿವು ಮೂಡಿಸಿದ್ದಾರೆ. ಅವರ ಸ್ವಚಂದ್ರ ಮನಸ್ಸಿನ ರೇಖೆಗಳು ಕಾವ್ಯಮಯವಾಗಿ, ಮನಸ್ಸಿನ ಬಯಕೆಗಳಿಗೆ ಸ್ಥಿತಿ-ಗತಿಯನ್ನು ಸೃಷ್ಟಿಸಿಕೊಂಡು ಬರುತ್ತವೆ. ಫ್ಯಾಟ್ ಉಮನ್, ವೈಭವ ಸರಣಿ, ಗೂಳಿ ಅವರ ಚಿತ್ರಗಳಲ್ಲಿನ ನೆರಳು-ಬೆಳಕಿನ ಆಲೋಚನೆಗಳು, ತಗ್ಗು ದಿನ್ನೆಗಳಲ್ಲಿನ ಪ್ರಕೃತಿಯ ನೋಟ-ಪಲ್ಲಟಗಳ ಮನಸ್ಥಿತಿ "ಹೇಗಾದರೂ ಸರಿ" ಎಂಬಂತೆ ದೃಶ್ಯ ವ್ಯಾಕರಣದಲ್ಲಿನ ಗುಣಗಳನ್ನು ರೂಪಾಂತರಿಸಿಕೊಂಡು ನೋಡುಗರ ಮನಸ್ಸಿನ ಕನಸುಗಳಿಗೆ ಇಮ್ಮಡಿಯಾಗಿಸಿದ್ದಾರೆ. ರೂಪಾಂತರಗೊಳಿಸಿ ಅವರ ಬಯಕೆಗಳಿಗೆ ವಿಸ್ತರಿಸಿಕೊಂಡು ಹೋಗುತ್ತಾರೆ. ಭೂಮಿಯ, ಮಣ್ಣಿನ, ವಾಸನೆ, ಬಿಸಿಲಿನ ವಾಸನೆಯಲ್ಲಿನ ಗುಣಗಳ ಮೂಲಕ ಸಾಂಸ್ಕೃತಿಕ ನಡುವಳಿಕೆಗಳಿಂದ ದೃಶ್ಯಕಲೆಯನ್ನು ಹತ್ತಿರವಾಗಿಸಿದ್ದಾರೆ. ಬದಲಾಗುತ್ತಿರುವ ಜಗತ್ತಿನ ವಿಚಾರಗಳಿಗೆ ಸಮಕಾಲಿನ ಅರಿವುಗಳಿಂದ ಮಾಧ್ಯಮದ ಪರಿಚಯಗಳೊಂದಿಗೆ ಇತಿಹಾಸ ಸೃಷ್ಟಿಸಿದ್ದಾರೆ. ಇನ್ನೊಬ್ಬ ಕಲಾವಿಮರ್ಶಕ ಕೆ.ಎಸ್. ಶ್ರೀನಿವಾಸ ಮೂರ್ತಿಯವರು ಹೇಳಿರುವಂತೆ, ರೇಖೆ ಚಿತ್ರಗಳು ರಾಮಕಿಂಕರ ಬೈಜನಿಂದ ಕಲಾವಿದ ವಿ.ಜಿ.

ಅಂದಾನಿಯವರ ರೇಖಾ ಚಿತ್ರಗಳವರೆಗೆ ದೃಶ್ಯ ಭಾಷೆಯ ಹಲವಾರು ಉದಾಹರಣೆಗಳು ಗಿಚಾಟಗಳಲ್ಲಿನ ಆತ್ಮೀಯತೆಯ ರೇಖೆಗಳನ್ನು ರೂಪಿಸಿಕೊಂಡದ್ದು ಕಾಣುತ್ತೇವೆ. ರೇಖೆಗಳು ಮಾತಾಡುತ್ತವೆ, ಪ್ರೇರಣೆ ನೀಡುತ್ತವೆ.

ನನ್ನ ಭಾವನೆಗಳೊಂದಿಗೆ ಹೇಳುವುದಾದರೆ ಜನರು ವೈವಿಧ್ಯಮಯವಾಗಿ ವರ್ತಿಸುತ್ತಾರೆ ಮತ್ತು ಕಲಾವಿದ ತನ್ನತನವನ್ನು ತಾನೇ ಹುಟ್ಟಿಸಿಕೊಂಡು ಕ್ಯಾನವಾಸ ಮೇಲಾಗಲಿ ಪೇಪರ ಮೇಲಾಗಲಿ ಪ್ರತಿಪಾದಿಸುತ್ತಾನೆ. ಅದು ಅವನ ವಯಕ್ತಿಕ ವಿಚಾರವಾಗಿ ಮುಂದೆ ಬರುವ ಚಿತ್ರಗಳಲ್ಲಿನ ಲಕ್ಷಣಗಳು ಪ್ರಾದೇಶಿಕವಾದ ಗುಣ ರೇಖೆಗಳ ಪಾತ್ರ ಪ್ರಭಾವ, ಪ್ರಕೃತಿಯ ಒಳನೋಟ ಗಿಡಮರಳಲ್ಲಿನ ವಿಡಂಬನೆ ಕಲ್ಲು ದಿನ್ನೆಗಳ ವರ್ಣನೆಯೊಂದಿಗೆ ಚಿತ್ರಗಳ ಅರಿವು ಮೂಡಿಸುತ್ತವೆ.

ಗುಲಬರ್ಗಾ ವಿಭಾಗದಲ್ಲಿ ಕಲಾವಿದರು ಹೆಚ್ಚಿನ ರೀತಿಯಲ್ಲಿ ಪ್ರಯೋಗಶೀಲರಾಗಿ ಪ್ರತಿಭಾವಂತಿಕೆ ಶಿಸ್ತುಗಳಿಂದ ತಮ್ಮ ಕರ್ತವ್ಯಗಳಿಗೆ ಹೆಸರಾಗಿರುತ್ತಾರೆ. ಬೇರೆ ಬೇರೆ



ಇಲಾಖೆಗಳಲ್ಲಿ ಕಾರ್ಯನಿರ್ವಹಿಸಿಕೊಂಡು ದೃಶ್ಯಕಲಾ ಕ್ಷೇತ್ರಕ್ಕೆ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅದರಲ್ಲಿನ ಭಾವನೆಗಳು ದೃಶ್ಯಮಾಧ್ಯಮದ ಮೂಕ ವಿವಿಧ ಶೈಲಿ ಪ್ರಕಾರ ಆಯಾಮ ವರ್ಣ ವಿನ್ಯಾಸಗಳೊಂದಿಗೆ ಮೂಡಿಬಂದಿವೆ. ದೃಶ್ಯಕಲೆ ಇಂದು ಛಾಯಾಚಿತ್ರದೊಂದಿಗೆ ತನ್ನ ಕ್ರಿಯಾಶೀಲತೆಯೊಂದಿಗೆ ಮನೋವಿಜ್ಞಾನದ ಮನಸ್ಸಿನಿಂದ ಸಂಶೋಧನೆ ಪ್ರವೃತ್ತಿಗಳಿಂದ ಅನೇಕ ವೈಜ್ಞಾನಿಕ ಕಲಾ ಸಾಮಾಗ್ರಿಗಳ ಸಲಕರಣೆಗಳೊಂದಿಗೆ ತಮ್ಮನ್ನು ತೊಡಗಿಸಿಕೊಂಡು ಬದುಕನ್ನು ಸೃಷ್ಟಿಸಿಕೊಂಡಿರುತ್ತಾರೆ. ಎನಿಮೇಷನ್, ಚಲನಚಿತ್ರ, ಇನ್‌ಸ್ಟಾಲೇಷನ್, ಡಾಕುಮೆಂಟೇಷನ್, ವಿಡಿಯೋಗ್ರಾಫಿ, ಛಾಯಾಚಿತ್ರಗಳಲ್ಲಿ ವೈವಿಧ್ಯಮಯವಾದ ರಚನಾ ಪ್ರವೃತ್ತಿಯಿಂದ ಸೃಜನಾತ್ಮಕ ವಿಚಾರಗಳು ಚಿಂತನೆಗಳಿಂದ ಪ್ರಾಯೋಗಿಕ ಗುಣಗಳೊಂದಿಗೆ ವೃತ್ತಿ ಜೀವನದಲ್ಲಿ ವಿಶೇಷತೆಗಳನ್ನು ಕಪ್ಪು-ಬಿಳುಪಿನಿಂದ ವರ್ಣನಾತ್ಮಕ ಅರ್ಥ ವೃತ್ತಿಯಲ್ಲಿ ಅನೇಕ ಬದಲಾವಣೆ ಕಾಣುತ್ತೇವೆ.

ದೃಶ್ಯಕಲೆ ವಿಶಾಲವಾಗಿ ಬೆಳೆದು ತಂತ್ರಜ್ಞಾನದೊಂದಿಗೆ ಮಾನಸಿಕವಾಗಿ, ಸಾಮಾಜಿಕವಾಗಿ ವಿಸ್ತರಣೆಗೊಂಡು ಅನಂತ ವಿಚಾರಗಳಿಂದ ಮಾಧ್ಯಮವನ್ನು ಪಂಚೇಂದ್ರಿಯ ೬೩% ದೃಶ್ಯ ಮಾಧ್ಯಮ ಹರಡಿಕೊಂಡು ವಿಶಾಲತೆ ತಂದುಕೊಂಡಿದೆ. ಇತರ ವಿಷಯಗಳ ಜೊತೆ ತನ್ನ ಅಂತರ ಸಂಬಂಧಗಳಿಂದ ದೃಶ್ಯಕಲೆ ಅಭಿವ್ಯಕ್ತಿ ವಿಚಾರಗಳು ಪ್ರಯೋಗಶೀಲತೆಯಿಂದ ಕ್ಯಾನವಾಸ ದಾಟಿ, ಕಟ್ಟುನಿಟ್ಟಿನ ಚೌಕಟ್ಟುಗಳಿಂದ ಹೊರ ಬಂದಿದ್ದು ವಸ್ತುವಿನ ವರ್ಣನೆಯ ವ್ಯಾಖ್ಯಾನುದಲ್ಲಿ ಅನಂತ ಬದಲಾವಣೆಗಳ ಅನುಭವಿಸುತ್ತಿದ್ದೇವೆ. ಪ್ರಚಾರ ಮಾಧ್ಯಮವಾಗಿ ಪತ್ರಿಕೆ,

ದೂರದರ್ಶನಗಳೊಂದಿಗೆ ಸಾಧ್ಯತೆಗಳ ವಿವಿಧತೆಯಿಂದ ಕೂಡಿದೆ. ಪ್ರತಿಭಾವಂತ ಯುವಕರಲ್ಲಿನ ದೃಷ್ಟಿ, ವೀಕ್ಷಣಾ ಮನೋವೃತ್ತಿಯೊಂದಿಗೆ ಪ್ರವೃತ್ತಿಯಲ್ಲಿನ ತಿಳುವಳಿಕೆಗಳು ಅಘಾದಕರವಾಗಿ ಮಾರುಕಟ್ಟೆಯೊಂದಿಗೆ ದೈಹಿಕ, ಮಾನಸಿಕ ವಿಚಾರಗಳೊಂದಿಗೆ ಕಲಾವಿದನು ತೊಡಗಿಸಿಕೊಂಡು ಶೈಕ್ಷಣಿಕ ಸಂಬಂಧಗಳೊಂದಿಗೆ ವಿಕಾಸಗೊಳ್ಳುತ್ತಿದ್ದಾನೆ. ವೈಜ್ಞಾನಿಕವಾಗಿ ವಿವಿಧ ಕ್ಷೇತ್ರಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದ್ದಾನೆ. ತನ್ನನ್ನು ತೊಡಗಿಸಿಕೊಂಡಿರುತ್ತಾನೆ.

ಕ್ರಿಯಾಶೀಲ ಕಲಾವಿದರಲ್ಲಿ ಪ್ರಭು ಹರಸೂರ, ಶೇಷರಾವ ಬಿರಾದಾರ, ಮಲ್ಲಿಕಾರ್ಜುನ ಶೆಟ್ಟಿ, ಚಂದ್ರಹಾಸ ಜಾಲಿಹಾಳ, ಅಮೃತಸಾಹು, ಅವರೊಂದಿಗೆ ಅನೇಕ ಯುವಕರು ಹೊಸ ಆಲೋಚನೆಗಳೊಂದಿಗೆ ತಮ್ಮನ್ನು ಪ್ರಾಯೋಗಿಕ ಮನಸ್ಸಿನಿಂದ ಹೊಸ ಆಕಾರಗಳ ಸೃಷ್ಟಿಯಿಂದ, ಬಸವರಾಜ ಮುಸಾವಳಗಿ, ಛಾಯಾಚಿತ್ರದೊಂದಿಗೆ ಮಿಶ್ರ ಮಾಧ್ಯಮ ಇದೇ ರೀತಿಯಾಗಿ ಅಳವಡಿಸಿಕೊಂಡು ಪ್ರಯೋಗಶೀಲವಾಗಿ ಅನೇಕ ಕೃತಿಗಳ ಅನ್ವೇಷಣೆಯ ದಾರಿಯಲ್ಲಿ ಕಾಣುತ್ತೇವೆ. ಬಸವರಾಜ ಜಾನೆ, ರಾಜಶೇಖರ, ಶಶಿಕಾಂತ ಮಾಶಾಳಕರ ಅವರಲ್ಲಿನ ವಿಕೃತ ಬಿಸುಗಳೊಂದಿಗೆ ಜಾನಪದಿಯ ಸಂಬಂಧಗಳಿಂದ ಆಕಾರಗಳ ಸೃಷ್ಟಿಯಲ್ಲಿ ನಿಜತನದೊಂದಿಗೆ ವ್ಯತ್ಯಾಸಗಳನ್ನು ಕಾಣುತ್ತೇವೆ. ಸ್ವತಂತ್ರವಾದ, ಸಿದ್ಧಾಂತ, ಮೌಲ್ಯಗಳಲ್ಲಿನ ಗಡುಸತನ ಸರಳತೆಯ ಗುಣ, ಪರಿಸರ, ಅಲಂಕಾರಿಕೆಯಲ್ಲಿನ ವಿಶಿಷ್ಟತೆಗಳು ಅಳವಡಿಸಿದ್ದು ಕಾಣುತ್ತೇವೆ. ಕಲಾವಿದರರಾದ ಎ.ಎಸ್. ಪಾಟೀಲ, ಗೌತಮ ಅಂದಾನಿ, ಬಸವರಾಜ ಉಪ್ಪಿನ, ಜೆ.ಜೆ. ಕಲಾ ಶಾಲೆ ಪ್ರಭಾವಗಳೊಂದಿಗೆ ಚಿತ್ರ ನಿರ್ಮಿಸಿ



ಖ್ಯಾತರಾಗಿದ್ದಾರೆ. ಸಮುದಾಯದೊಂದಿಗೆ ಅನೇಕ ಪ್ರದರ್ಶನಗಳ ಮೂಲಕ ಕ್ರಿಯಾಶೀಲರಾಗಿ ಕೃತಿಗಳನ್ನು ರಚಿಸಿರುತ್ತಾರೆ. ಎ.ಎಸ್. ಪಾಟೀಲರು ಪ್ರತಿ ವರ್ಷ ಚಿತ್ರಸಂತೆ ಆಯೋಜಿಸುವ ಮೂಲಕ ಯುವಕರ ಪ್ರತಿಭೆಗಳಿಗೆ ಸಹಾಯಕರಾಗಿ ಪ್ರೋತ್ಸಾಹಿಸಿದ್ದಾರೆ. ಜನ ಸಮೂಹಗಳೊಂದಿಗೆ ಗುರುತಿಸಿಕೊಂಡಿರುತ್ತಾರೆ. ಯುವಕರಿಗೆ ಆರ್ಥಿಕವಾಗಿ ಬೆಳೆಯಲು ಸ್ಥಿತಿ ಗತಿಗಳಿಂದ ಕಲಾವಿದರಿಗೆ ಅವಕಾಶ ತಂದು ಕೊಟ್ಟಿರುತ್ತಾರೆ.

ಯುವಕರು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಕಲೆಯೊಂದಿಗೆ ಪ್ರಯೋಗಶೀಲರಾಗಿ ಗುರುತರ ಶೈಲಿ ವಿಚಾರಗಳಿಂದ ವ್ಯಕ್ತಿತ್ವದೊಂದಿಗೆ ಗುರುತಿಸಿಕೊಂಡವರಲ್ಲಿ ಗಿರೀಶ ಕುಲಕರ್ಣಿ, ಅಮಿತಕುಮಾರ, ದಿನೇಶ ಪಿಂಪಳೆ, ಸಂತೋಷ ಅಂದಾನಿ, ಅಣ್ಣಾರಾಯ ಹಾಗರಗಿ, ಅವಿನಾಶ ಬಿ., ಸಂತೋಷ ರಾಠೋಡ, ದೇವೇಂದ್ರ ಟಿ. ಮರಗೋಳ, ಲಕ್ಷ್ಮಿ ಮೊದ್ದಾರ, ಕಾಶಿನಾಥ ವಡ್ಡರ್, ಜಲಜಾಕ್ಷಿ ಕುಲಕರ್ಣಿ, ನೀಲಮ್ಮ ಹೊಸಮನಿ, ಪ್ರಶಾಂತ ತಂಬಾಕೆ, ರಂಗನಾಥ, ರದ್ದೆವಾಡಿ, ವಿ. ಅನುಷಾ ಕಾಂತಾ, ಶಶಿಕುಮಾರ ಗೊಬ್ಬುರ, ಸುಜಾತಾ ಆವಂಟಿ, ಕವಿತಾ ಕಟ್ಟಿ

ಅನೇಕರು ಪ್ರಾಯೋಗಿಕವಾಗಿ ಕ್ರಿಯಾಶೀಲ ಮನಸ್ಸನ್ನು ಹೊಂದಿರುತ್ತಾರೆ. ಚಿತ್ರಗಳು ಕೊಡುಗೆಯಾಗಿದೆ, ನರಸಿಂಹ, ಅಬ್ದುಲಭಾಷಾ, ಅಮೀನರೆಡ್ಡಿ, ಬಾಲಾಜಿ ಗಾಯಕವಾಡ, ಶಫಿ ಮಾಶಾಳಕರ, ಬಿ.ಜೆ. ಬಿರಾದಾರ ಸ್ವಾವಲಂಬಿಗಳಾಗಿ, ದೃಶ್ಯಕಲೆಯಲ್ಲಿ ಹೊಸತನಗಳಿಂದ ಸ್ವತಂತ್ರ ವಿಚಾರಗಳಿಂದ ಮುದ್ರಣ ಪೆಂಟರಗಳಾಗಿ ಇನ್‌ಸ್ಟಾಲೇಷನ್, ಇನ್‌ಸ್ಟಾಲೇಷನ್, ರೇಖೆಗಳಲ್ಲಿನ ಭ್ರಮೆಗಳೊಂದಿಗೆ ಪರಿಣಿತಿಯೊಂದಿಗೆ ಗುರುತಿಸಿಕೊಂಡು ಮಾರ್ಗದರ್ಶಕರಾಗಿ ಗ್ಯಾಲರಿಗಳೊಂದಿಗೆ ಸಂಪರ್ಕ ಹೊಂದಿಕೊಂಡು ಕಲಾವಿದರಾಗಿ ಬೆಳೆದಿದ್ದಾರೆ. ಸುಡುವ ಬಿಸಿಲಿನಲ್ಲಿ ತಮ್ಮ ಮನೆಯ ವಾತಾವರ್ಣ ನಿರ್ಮಿಸಿಕೊಂಡು ತನ್ನ ಸಂಪನ್ಮೂಲತೆಯೊಂದಿಗೆ, ಸೃಜನಾತ್ಮಕ ವೈಶಿಷ್ಟತೆಗಳಿಂದ ಮಾಧ್ಯಮ ಬಳಸಿಕೊಂಡು ಅಭಿವ್ಯಕ್ತಿಯಲ್ಲಿನ ಆಕಾರಗಳನ್ನು ಸೃಷ್ಟಿಸಿದ್ದಾರೆ. ಜಾಗೃತ ಮನಸ್ಸು ಕನಸುಗಳಿಂದ ಮನಸ್ಸಿನ ಬಯಕೆಗಳಿಂದ ಸುಂದರ ಸಮಾಜ ಕಟ್ಟಿಕೊಂಡಿರುತ್ತಾರೆ. ವರ್ಣ, ರೇಖೆಗಳಲ್ಲಿನ ಅಧ್ಯಯನ ಶೀಲತೆಗಳಲ್ಲಿ ಅನೇಕ ತೊಡಕುಗಳೊಂದಿಗೆ ಕೃತಿಗಳನ್ನು ರಚಿಸಿ ಸಂತೋಷ ಪಟ್ಟಿದ್ದಾರೆ. ಇಂದಿನ ಕಲಾಪರಂಪರೆಯಲ್ಲಿ ಮಟೆರಿಯಲ್ ಹಾಗೂ ಆರ್ಥಿಕ ವ್ಯವಸ್ಥೆ ಆಕಾಷ ಕುಸುಮವಾಗಿ, ಅನೇಕರು ಪಿ.ಎಚ್‌ಡಿ ಮಾಡಿಕೊಂಡಿರುತ್ತಾರೆ. ದೃಶ್ಯಕಲೆ ಜೀವನ ಸಾಧನೆಯಾಗಿದ್ದು, ಛಾಯಾಚಿತ್ರ ಹಾಗೂ ಸಂಪ್ರದಾಯ ಚಿತ್ರ ಅಯಾಜುದ್ದೀನ ಪಟೇಲ, ಸಾಂಗವಿಕರ, ಸತೀಶ ವಲ್ಲಾಪುರೆ, ರೆಹಮಾನ ಪಟೆಲ, ಕಿಶೋರಕುಮಾರ ಶಹಾಬಾದ, ಜಗದೀಶ ಕಾಂಬಳೆ ವೀರೇಂದ್ರ ಶಾಹಾ, ಮೀನಾಕ್ಷಿ ರಾಠೋಡ, ಅನೇಕರು ಜನಸಮೂಹದೊಂದಿಗೆ ಜನಮುಖಿಯಾಗಿ ಛಾಯಾಚಿತ್ರಗಳಿಂದ ಸಂಪ್ರದಾಯಿಕ ಚಿತ್ರಗಳಿಂದ ಐತಿಹಾಸಿಕ ಸ್ಥಳಗಳ ಸಂಶೋಧನೆಗಳೊಂದಿಗೆ, ತೊಡಗಿಸಿಕೊಂಡು ಗುಲಬರ್ಗಾದ ವಿಭಾಗದ ವಾಸ್ತುಶಿಲ್ಪ, ಶಿಲ್ಪಗಳ ಪರಿಚಯಿಸಿದ್ದಾರೆ. ಕಲೆಯು ಹಳೆಯದನ್ನು ತೆಗೆದುಕೊಂಡು ಲೇಔಟ್‌ನಲ್ಲಿ ಹೊಸ ರೇಖೆ, ಆಕಾರಗಳೊಂದಿಗೆ ಹೊಸ ದಿಶೆ, ಸಂಶೋಧನೆಗಳಿಗೆ ಪೂರಕವಾಗಿ ಕಟ್ಟುವ ಕಾರ್ಯದಲ್ಲಿ ತೊಡಗಿಸಿಕೊಂಡು ಅಭಿವ್ಯಕ್ತಿ, ಸ್ವಾತಂತ್ರ ಸಮಾಜಕ್ಕೆ ಹೊಸತನದ ಅರಿವುಗಳ ಕಲ್ಪನೆ ಸಾಹಸಗಳೊಂದಿಗೆ ಪ್ರಾಯೋಗಿಕ ಮನಸ್ಸು, ಅಂತರಾವಲೋಕದಿಂದ ಅನಂತತೆಗೆ

ಕರೆದೊಯ್ಯುತ್ತಾನೆ. ವಿಮರ್ಶಕನಾಗಿ, ಪ್ರತಿಪಾದಕನಾಗಿ ಇದುಬೇಕು ಇದುಬೇಡವೆಂದು ಸಮಾಜವಾಗಿ ಮನೋವಿಜ್ಞಾನಿಯಾಗಿ ನಿರಂತರತೆ ತಂದುಕೊಳ್ಳುತ್ತಾನೆ. ಭವಿಷ್ಯ ನಿರ್ಮಿಸುತ್ತಾನೆ. ಕಾಲದ ಕಲ್ಪನೆಯೊಂದಿಗೆ ವೈಜ್ಞಾನಿಕವಾಗಿ, ಸ್ವಚ್ಛತೆ, ಆರಾಧನೆಗಳ ಮೂಲಕ, ಮೂಢನಂಬಿಕೆಗಳಿಂದ ದೂರವಿದ್ದು, ಪ್ರೀತಿಯ ಫಲವನ್ನು ಬಯಸಿಕೊಂಡು ಸತ್ಯಂ ಶಿವಂ ಸುಂದರಗಳಿಗೆ ಕೈಹಾಕಿಕೊಂಡು ವಿಚಾರವಾದಿಯಾಗಿ ಪ್ರತಿಪಾದಿಸುತ್ತಾರೆ. ನಕ್ಷೆ ಹೊಸ ಆಕಾರಗಳಿಂದ ಮಾಧ್ಯಮಗಳಿಗೆ ನೀತಿಯನ್ನು ಸೃಷ್ಟಿಸಿಕೊಂಡು ಸಮಾಜದ ನಾಗರಿಕತೆಯ ನಡುವಳಿಕೆಗಳಲ್ಲಿ ಪರಿಣಾಮಕಾರಿಯಾಗಿ ಚಿತ್ರ, ಶಿಲ್ಪ, ವಾಸ್ತು ಶಿಲ್ಪಗಳ ಅಭಿವ್ಯಕ್ತಿಯಿಂದ ಹೊಸತನ ತಂದುಕೊಡುತ್ತ ಸಮಾಜದ ಸಿರಿವಂತಿಕೆಯೊಂದಿಗೆ ನಂಬಿಕೆಯ ಕನಸುಗಳಿಂದ ವೃತ್ತಿಯಲ್ಲಿ ಬೇಡಿಕೆ ಭಾವನಾತ್ಮಕ ಸಂಬಂಧಗಳಿಂದ ಮನಸ್ಸನ್ನು ಕಟ್ಟಿಕೊಡುತ್ತಾರೆ.

ಸಮಾಜದ ಸ್ಥಿತಿಗತಿಗಳೊಂದಿಗೆ ಹಳೆಯ ಹೊಸ ಸಂಪ್ರದಾಯಗಳ ಮೂಲಕ ಶಾರೀರಿಕ ಲಕ್ಷಣಗಳಿಗೆ ಅದರ ಭಾಷೆಗೆ ವಿಭಿನ್ನತೆಯಿಂದ ವಿವರಿಸುತ್ತಾನೆ. ದಿನ ನಿತ್ಯದ ಬಳಕೆಯ ಸಾಮಾನುಗಳ ಮಾಟ, ವಿನ್ಯಾಸ, ರಚನೆ, ರೂಪ ಸ್ವರೂಪಗಳಿಂದ ನಿರ್ಮಿಸಿಕೊಂಡು ನಾಗರಿಕತೆಗೆ ಸಿರಿವಂತಿಕೆಯನ್ನಾಗಿಸುತ್ತಾನೆ. ಇಂದಿನ ಮುದ್ರಣ ಕಲೆಗೆ ಹೊಸ ವಿನ್ಯಾಸಗಳಿಂದ ಸೊಬಗನ್ನು ತಂದುಕೊಟ್ಟು ಆರ್ಥಿಕವಾಗಿ ಸಮಾಜವನ್ನು ಪ್ರಬಲಗೊಳಿಸುತ್ತಾರೆ. ಹೀಗಾಗಿ ಸಿನೆಮಾ, ನಾಟಕ, ಬಯಲಾಟ, ಪತ್ರಿಕೆ, ದೂರದರ್ಶನಗಳಿಗೆ ಕಲಾವಿದನಾಗಿ, ವಿನ್ಯಾಸಕರಾಗಿ, ವಿಶ್ಲೇಷಣೆ ಕೊಡುತ್ತಾರೆ. ಪ್ರತಿಭೆಯ ಮೂಲಕ ಹೊಸ ಹೊಸ ವಿನ್ಯಾಸಗಳಿಂದ ಕಲ್ಪನಾತೀಥನಾಗಿ ನಕ್ಷೆಗಳನ್ನು ನೀಡುತ್ತಾನೆ.

**ಶಿಲ್ಪಕಲೆ**

ಸಮಕಾಲಿನ ಶಿಲ್ಪಕಲೆ ಪ್ರಕಾರಗಳಲ್ಲಿ ಧನಂಜಯಶಿಲ್ಪಿಯುವರ ಕಾಣಿಕೆ, ಅಪಾರವಾದದ್ದಾಗಿದೆ, ಅವರ ಪತಿ ಶಿಲ್ಪಗಳಲ್ಲಿನ ಸೂಕ್ಷ್ಮ ಅಂಶಗಳ ಪ್ರಾಯೋಗಿಕ ಮನಸ್ಸು, ಶಿಸ್ತು, ರಚಿಸುವ ವಿಧಾನಗಳಲ್ಲಿನ ತಾಂತ್ರಿಕತೆಯ ಗುಣ ಮತ್ತು ಶಿಲೆಯನ್ನು ಬಳಸಿಕೊಳ್ಳುವ ರೀತಿಯಲ್ಲಿ ಮಾರಬಲ್‌ನ ಶಿಲ್ಪಗಳು ಅವರ ಸ್ವಭಾವದ ವಿಶೇಷತೆಯ ಅರಿವಾಗುತ್ತದೆ, ಅವರು ರಚಿಸಿದ ದೊಡ್ಡಪ್ಪ ಅಪ್ಪ ಭಾವ ಚಿತ್ರದ ಶಿಲ್ಪ ಇಂದಿಗೂ ನೋಡುಗರಿಗೆ ಮನ ತಣಿಸುತ್ತದೆ. ಇನ್ನು ಅವರು ನೂರಾರು ಕೃತಿಗಳು ಶಿಲೆಯಲ್ಲಿನ ಶಿಲ್ಪಗಳು ಪ್ಲಾಸ್ಟರ, ಬೊಂಜ ಮಣ್ಣು, ಮಾರಬಲ್ ಶಿಲ್ಪ ಕೃತಿಗಳಲ್ಲಿನ ಮೋಹಕತೆ ಗರಿ ಮೂಡಿಸುತ್ತವೆ.

ಹಿರಿಯ ಶಿಲ್ಪ ನಾಡೋಜ ನಾಗಣ್ಣ ಬಡಿಗೇರ ಶಿರವಾಳದಲ್ಲಿ ಹಳೆಯ ಸಂಪ್ರದಾಯದೊಂದಿಗೆ ಹೊಸ ವಿಚಾರಗಳು ಅವರು ಬಳಸುವ ಸಾಮಾಗ್ರಿಗಳಲ್ಲಿನ ವೈವಿಧ್ಯತೆ, ಕೆತ್ತನೆಯ ಕೆಲಸದಲ್ಲಿನ ಚಾಕುಚಕ್ಕತೆ ಪ್ರಭಾವಗಳು, ಶಿಲೆಯ ಕೆತ್ತನೆಯಲ್ಲಿನ ಸಂಸ್ಕಾರ ಬಾಗಿಲಗಳಲ್ಲಿನ ಹೊಸತನ ಕುದುರೆ ಮಂಟಪಗಳ ವಿವರಣೆಯಲ್ಲಿನ ಐತಿಹಾಸಿಕ ಘಟನೆಗಳು ನೆನಪಿನ ಸಂಸ್ಕೃತಿದೊಂದಿಗೆ ಪರಂಪರೆಯಾದ ಯುವಕರಿಗೆ ಪ್ರೇರಣೆ ನೀಡುತ್ತವೆ.

ಹಿರಿಯ ಶಿಲ್ಪಿಗಳಾದ ಚಂದ್ರಶೇಖರ ಶಿಲ್ಪಿಗಳು, ಮಹಾದೇವಪ್ಪಾ ಶಿಲ್ಪ, ಮಾನಯ್ಯ



ಬಡಿಗೇರ ಅವರ ಮಿಶ್ರಮಾಧ್ಯಮಗಳಲ್ಲಿನ ಶಿಲ್ಪಗಳು ಐತಿಹಾಸಿಕ ಹೊಸ ಸಮಕಾಲಿನ ವಿವರಣೆ ನೀಡುತ್ತ ಕಟ್ಟಿಗೆಯ ಜೊತೆ ಬೊಂಜ ವಿಗ್ರಹಗಳನ್ನು ಜೋಡಿಸಿ ರಚಿಸಿದ ಶಿಲ್ಪ ಸಂಯೋಜನೆಗಳು ಪ್ರಾದೇಶಿಕ ವಿವರಣೆ, ರಚನಾ ಪ್ರವೃತ್ತಿಯಲ್ಲಿನ ಶಿಲ್ಪಗಳ ಮನೋಭಾವದೊಂದಿಗೆ ತಾಳ್ಮೆ ಹೊಸತನದ ಸೂಕ್ಷ್ಮತೆಗಳ ಅರಿವಾಗುತ್ತದೆ. ಬಾಗಿಲು, ಮಂಟಪ, ವಿಗ್ರಹಗಳ ರಚನೆಯಲ್ಲಿನ ಸ್ವಭಾವಿಕ, ತರ್ಕಮಯವಾದ, ಶೈಲಿಯ ಕಲ್ಪನೆ ಮಾಡುತ್ತದೆ, ಈರಣ್ಣ ಕಂಬಾರ ಅವರ ಪ್ರತಿಮೆಗಳಲ್ಲಿನ ಕುಶಲತೆ ಅವರ ಆಧುನಿಕತೆಯ ಜ್ಞಾನದ ದರ್ಶನವಾಗುತ್ತ ಹೊಸ ಆಯಾಮಗಳ ಸೃಷ್ಠಿ ರಚನಾ ಪ್ರವೃತ್ತಿನಲ್ಲಿನ ತಲ್ಲಿನತೆ ಆಕಾರಗಳ ವಿವರಣೆ ಬಾಗಿಲು, ಕುದುರೆಗಳಲ್ಲಿನ ಸೊಗಡುತನ ಭಿನ್ನವಾಗಿ ಸ್ಪರ್ಶ ಜ್ಞಾನ ನೀಡುತ್ತದೆ. ಆಧುನಿಕ ವಿಚಾರಗಳಲ್ಲಿನ ಪ್ರವೃತ್ತಿಯ ಗುಣ ವಿನೂತನವಾಗಿ ಪ್ರಾಯೋಗಿಕವಾಗಿ ಪ್ರತಿ ಶಿಲ್ಪದಲ್ಲಿ ಕಾಣುತ್ತವೆ. ಆಧುನಿಕ ಸಲಕರಣೆಗಳೊಂದಿಗೆ ರಚಿಸುವ ಶಿಲ್ಪಗಳಲ್ಲಿ ಹೊಸತನದ ಅರಿವು ಮೂಡುತ್ತದೆ. ಇದೇ ರೀತಿಯಾಗಿ ನಾಡನ್ನು ಸಿರಿವಂತಗೊಳಿಸಿದ ವಿವಿಧ ಮಾಧ್ಯಮಗಳ ಮೂಲಕ ತೊಡಗಿಸಿಕೊಂಡ ಕಲಾವಿದರಲ್ಲಿ ದಾನಯ್ಯ ಹಿರೆಮಠ, ನಿಂಗಣ್ಣಾ ಕೋರಿ, ನಟರಾಜ ಶಿಲ್ಪಿ, ಮಹೇಶ ತಳವಾರ, ಗೌರಿಶಂಕರ ಅವರ ಸಿಮೆಂಟಿನ ವಿಗ್ರಹಗಳು ಮೋಹಕವಾಗಿ ಕಾಣುತ್ತವೆ. ಶಿಲ್ಪಿಗಳು ಅನೇಕ ಮಾಧ್ಯಮಗಳೊಂದಿಗೆ ಪ್ರತಿಪಾದಿಸುವುದು ಸಂಪ್ರದಾಯವನ್ನು ಉಳಿಸಿಕೊಂಡು ಆಧುನಿಕವಾಗಿ ಕಲ್ಪನೆಗಳಿಗೆ ಹಾದಿ ಮಾಡಿಕೊಡುವುದು. ಧಾರ್ಮಿಕ ಆಧುನಿಕ, ಸಮಕಾಲಿನ ಅನೇಕ ಶಿಲ್ಪಗಳಲ್ಲಿನ ಶಿಲ್ಪ ಕಲಾವಿದರು ತಮ್ಮನ್ನು ತೊಡಗಿಸಿಕೊಂಡು ಈ ಭಾಗದ ಸಿರಿವಂತಿಕೆಗೆ ಸಾಕ್ಷಿಯಾಗಿದೆ. ಅಮೂಲ್ಯವಾದ ಲೇಖಕರಿಂದ, ವಿಮರ್ಶಕರಿಂದ ವಿವಿಧ ಮಾಧರಿ, ಶೈಲಿ ಪರಂಪರೆ, ಲಕ್ಷಣ ಕಾಲದ ಕುರಿತಾದ ಗ್ರಂಥಗಳು ಬಂದಿರುವುದು, ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಪ್ರಕಾಶನಗಳು ಅಮೂಲ್ಯದಾಯಕವಾಗಿದೆ.

ಪರಂಪರೆಯ ರೀತಿಗಳಾಗಿ ಚಿತ್ರ, ಶಿಲ್ಪ, ವಾಸ್ತು ಶಿಲ್ಪಗಳು ಪ್ರಕೃತಿಯ ದೃಶ್ಯಗಳೊಂದಿಗೆ ಅರಸರ ಸಾಮ್ರಾಜ್ಯಗಳು ಇತಿಹಾಸದ ಭೇದವಿಲ್ಲದ ಪ್ರೋತ್ಸಾಹ, ಪ್ರಾಣಿ, ಪಕ್ಷಿಗಳ, ಹೂ- ಬಳ್ಳಿಗಳ ವರ್ತನೆ, ಪ್ರಕೃತಿಯೊಂದಿಗೆ ಕಲಾ ಪ್ರಕಾರಗಳೊಂದಿಗೆ ಕಲಾವಿದನ ಒಡನಾಟದ ಅರಿವಾಗುತ್ತದೆ.

ಧಾರ್ಮಿಕ ಆಧ್ಯಾತ್ಮಿಕ ವಿಚಾರಗಳಿಂದ ಜಾತಿ ಮತ ಪಂಥಗಳನ್ನು ಮೀರಿ ಸೃಷ್ಟಿಸಿದ ಚಿತ್ರ ಶಿಲ್ಪಿ, ವಾಸ್ತುಶಿಲ್ಪಗಳು ದೇಶದ ಪರಂಪರೆಗೆ ವೈಜ್ಞಾನಿಕ ಯುಗಕ್ಕೆ ತನ್ನ ಮಹತ್ವತೆಯ ಅರಿವು ನೀಡುತ್ತವೆ. ಮಾನವನ ಸಮಾಜದ ನಾಗರಿಕತೆಯಲ್ಲಿನ ಬದಲಾವಣೆಗಳನ್ನು ವಿವಿಧ ರೂಪದಲ್ಲಿ ಶಿಕ್ಷಣವಾಗಿ ವಿಜ್ಞಾನವಾಗಿ ಜ್ಞಾನ ನೀಡುತ್ತವೆ.

ನಾಗರಿಕತೆಯ ವಿಕಾಸಸ ಅರಿವು ಮೂಡಿಸುತ್ತವೆ. ವಿವಿಧ ವಿಷಯಗಳ ಜೊತೆ ತನ್ನ ಅಂತರ ಸಂಬಂಧಗಳ ಅರಿವು ಮೂಡಿಸುತ್ತದೆ. ಮಾನವನ ವಿಕಾಸದಲ್ಲಿ ಭಾಗಿಯಾಗಿ ಪ್ರತಿ ಹಂತದ ಕ್ರಿಯಾಶೀಲತೆಗಳಿಗೆ ಜ್ಞಾನದ ಆಡಳಿತದ ಕಾಯಕದ, ಅಪೂರ್ವ ದಾರಿದೀಪವಾಗಿ ಪ್ರತಿ ನಡವಳಿಕೆಗಳಿಗೆ ಸಹಾಯಕವಾಗಿ, ಸಂಶೋಧನೆಯಾಗಿ ಪ್ರೇರಣೆ ನೀಡುತ್ತ ಬಂದಿರುತ್ತದೆ.

## ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

### ಕಾರ್ಯಕಾರಿ ಸಮಿತಿ


ನಾಡೋಜ ಡಾ. ಮನು ಬಳಿಗಾರ್, ಅಧ್ಯಕ್ಷರು

ಡಾ. ಪದ್ಮರಾಜ ದಂಡಾವತಿ, ಗೌರವ ಕಾರ್ಯದರ್ಶಿ

ಶ್ರೀ ಕೆ. ರಾಜಕುಮಾರ, ಗೌರವ ಕಾರ್ಯದರ್ಶಿ

ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕೋಶಾಧ್ಯಕ್ಷರು

ಶ್ರೀ ಮಾಯಣ್ಣ, ಬೆಂಗಳೂರು ನಗರ

ಶ್ರೀ ಚಿ.ಮಾ.ಸುಧಾಕರ, ಬೆಂ. ಗ್ರಾಮಾಂತರ

ಶ್ರೀ ಸಿಂ.ಲಿಂ. ನಾಗರಾಜ್, ರಾಮನಗರ

ಶ್ರೀ ನಾಗಾನಂದ ಕೆಂಪರಾಜ್, ಕೋಲಾರ

ಡಾ. ಕೈವಾರ ಎನ್. ಶ್ರೀನಿವಾಸ, ಚಿಕ್ಕಬಳ್ಳಾಪುರ

ಶ್ರೀಮತಿ ಬಾ.ಹ. ರಮಾಕುಮಾರಿ, ತುಮಕೂರು

ಡಾ. ದೊಡ್ಡಮಲ್ಲಯ್ಯ, ಚಿತ್ರದುರ್ಗ

ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ದಾವಣಗೆರೆ

ಶ್ರೀ ಡಿ.ಬಿ. ಶಂಕರಪ್ಪ, ಶಿವಮೊಗ್ಗ

ಡಾ. ವೈ.ಡಿ. ರಾಜಣ್ಣ, ಮೈಸೂರು

ಶ್ರೀ ಬಿ.ಎಸ್. ವಿನಯ್, ಚಾಮರಾಜನಗರ

ಶ್ರೀ ಸುರೇಶ ಚನಶೆಟ್ಟಿ, ಬೀದರ್

ಡಾ.ಬಸವಪ್ರಭು ಪಾಟೀಲ ಬೆಟ್ಟದೂರು,ರಾಯಚೂರು

ಶ್ರೀ ರಾಜಶೇಖರ ಗು. ಅಂಗಡಿ, ಕೊಪ್ಪಳ

ಶ್ರೀ ಸಿದ್ಧರಾಮ ಕಲ್ಮಠ, ಬಳ್ಳಾರಿ

ಶ್ರೀ ಬಸವರಾಜ ಸಿದ್ರಾಮಪ್ಪ ಮಸೂತಿ, ಮಹಾರಾಷ್ಟ್ರ

ಪ್ರೊ ಎಚ್.ಬಿ. ಶಿವಕುಮಾರ್, ಆಂಧ್ರ ಪ್ರದೇಶ

ಡಾ. ತಮಿಳ್ ಸೆಲ್ವಿ, ತಮಿಳುನಾಡು

ಶ್ರೀ ಸುಬ್ರಹ್ಮಣ್ಯ ವಿ.ಭಟ್, ಕೇರಳ

ಶ್ರೀ ಮಲ್ಲಿಕಾರ್ಜುನ ಬದಾಮಿ, ಗೋವಾ

ಲಜಿನೆಯಅ.ಭಾ.ಕನ್ನಡಸಾಹಿತ್ಯ ಮ್ಮೇಳನಾಧ್ಯಕ್ಷರು

ಡಾ. ಎಚ್.ಎಸ್. ವೆಂಕಟೇಶಮೂರ್ತಿ

ಶ್ರೀ ಸಿ.ಕೆ. ರವಿಕುಮಾರ ಚಾಮಲಾಪುರ, ಮಂಡ್ಯ

ಶ್ರೀ ನಾಯಕರಹಳ್ಳಿ ಮಂಜೇಗೌಡ, ಹಾಸನ

ಶ್ರೀ ಬಿ.ಎಸ್. ಲೋಕೇಶ ಸಾಗರ್, ಕೊಡಗು

ಶ್ರೀ ಕುಂದೂರು ಅಶೋಕ, ಚಿಕ್ಕಮಗಳೂರು

ಶ್ರೀ ನೀಲಾವರ ಸುರೇಂದ್ರ ಅಡಿಗ, ಉಡುಪಿ

ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ, ದಕ್ಷಿಣ

ಶ್ರೀಮತಿ ಮಂಗಲಾ ಶ್ರೀಶೈಲ್ ಮೆಟಗುಡ್ಡ, ಬೆಳಗಾವಿ

ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ, ವಿಜಯಪುರ

ಶ್ರೀ ಶ್ರೀಶೈಲ ಈರಪ್ಪ ಕರಿಶಂಕರಿ, ಬಾಗಲಕೋಟೆ

ಡಾ. ಲಿಂಗರಾಜ ರು. ಅಂಗಡಿ, ಧಾರವಾಡ

ಶ್ರೀ ಲಿಂಗಯ್ಯ ಬಿ. ಹಿರೇಮಠ, ಹಾವೇರಿ

ಡಾ. ಶರಣು ಗೋಗೇರಿ, ಗದಗ

ಶ್ರೀ ಅರವಿಂದ ಕರ್ಕಿಕೋಡಿ, ಉತ್ತರ ಕನ್ನಡ

ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ

ಶ್ರೀ ಸಿದ್ಧಪ್ಪ ಎಸ್. ಹೊಟ್ಟಿ, ಯಾದಗಿರಿ

ವಿಶ್ವವಿದ್ಯಾಲಯ ಪ್ರತಿನಿಧಿ, ತುಮಕೂರು ವಿ.ವಿ. :

ಡಾ. ಗೀತಾ ವಸಂತ

ವಿಶ್ವವಿದ್ಯಾಲಯ ಪ್ರತಿನಿಧಿ, ಕಲಬುರಗಿ ವಿ.ವಿ. :

ಡಾ. ರಮೇಶ ಲಂಡನಕರ

ಸರ್ಕಾರದ ಪ್ರತಿನಿಧಿ :

ಕನ್ನಡ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮಹಿಳಾ ಪ್ರತಿನಿಧಿಗಳು :

ಡಾ. ವಸುಂಧರಾ ಭೂಪತಿ ಮತ್ತು

ಡಾ. ಎಸ್.ಪಿ. ಉಮಾದೇವಿ

ಪರಿಶಿಷ್ಟ ಜಾತಿ ಪ್ರತಿನಿಧಿಗಳು :

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಮತ್ತು

ಡಾ. ಸುಬ್ರಾವ ಎಂಟೆತ್ತಿನವರ

ಪರಿಶಿಷ್ಟ ಪಂಗಡ ಪ್ರತಿನಿಧಿ :

ಡಾ. ನೀಲಗಿರಿ ತಳವಾರ

ಸಂಘಸಂಸ್ಥೆಗಳ ಪ್ರತಿನಿಧಿ :

ಪ್ರೊ. ಸಿದ್ರಾಮಪ್ಪ ಮಾಸಿಮಾಡೆ

ಕಲಬುರಗಿಯಲ್ಲಿ ನಡೆದ ೮೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಯಶಸ್ಸು ಅಪೂರ್ವ ಎನ್ನುವಂಥದು. ಅತ್ಯಂತ ಅಚ್ಚುಕಟ್ಟಾಗಿ, ಯಾವ ಕುಂದೂ ಇಲ್ಲದೆ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕಲ್ಯಾಣ ಕರ್ನಾಟಕದ ಜನರ ಆಶಯಗಳಿಗೆ ಅನುಸಾರವಾಗಿ ವಿಶೇಷ ಒತ್ತು ಕೊಟ್ಟು ಒಟ್ಟು ಸಮಗ್ರ ಕರ್ನಾಟಕದ ಹಾಗೂ ಕನ್ನಡಿಗರ ಆಶೋತ್ತರಗಳನ್ನು ಬಿಂಬಿಸುವಂತೆ ಗೋಷ್ಠಿಗಳನ್ನು ಆಯೋಜಿಸಲಾಗಿತ್ತು. ಅವುಗಳಿಗೆ ಸಭಿಕರು ಸ್ಪಂದಿಸಿದ ರೀತಿ ಅಮೋಘ ಎನ್ನುವಂತೆ ಇತ್ತು. ಮೂರು ದಿನಗಳ ಕಾಲ ನಡೆದ ಸಮ್ಮೇಳನದಲ್ಲಿ ಮೂರು ಕಡೆಗಳಲ್ಲಿ ೨೨ ಗೋಷ್ಠಿಗಳು ನಡೆದುವು. ಅಲ್ಲಿ ಅನೇಕ ವಿದ್ವಾಂಸರು ಮಾಡಿದ ಉಪನ್ಯಾಸಗಳು ದಾಖಲೀಕರಣ ಆಗುವ ಅಗತ್ಯ ಇತ್ತು. ಅದನ್ನು "ಕಲ್ಯಾಣ ಕಿರಣ" ಸಂಪುಟ ಯಶಸ್ವಿಯಾಗಿ ಮಾಡಿದೆ. ಕನ್ನಡ ಮತ್ತು ಕರ್ನಾಟಕ ಕುರಿತು ಆಯಾ ಕಾಲಘಟ್ಟದಲ್ಲಿ ಏನೆಲ್ಲ ಚರ್ಚೆ ನಡೆಯಿತು ಎನ್ನುವುದಕ್ಕೆ ಈ ಸಂಪುಟಗಳು ದಾಖಲೆಯಾಗಿ ನಿಲ್ಲುತ್ತವೆ ಎಂಬ ನಂಬಿಕೆ ನನ್ನದು.

ನಾಡೋಜ ಡಾ.ಮನು ಬಳಿಗಾರ್

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.

